ಕರ್ನಾಟಕದ ವೀರಗಲ್ಲುಗಳು

ಡಾ. ಆರ್. ಶೇಷಶಾಸ್ತ್ರಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಕರ್ನಾಟಕದ ವೀರಗಲ್ಲುಗಳು

ಡಾ॥ ಆರ್. ಶೇಷಶಾಸ್ತ್ರಿ ಎಂ.ಎ., ಪಿಎಚ್.ಡಿ.

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮

೨

KARNATAKADA VIIRAGALLUGALU by : Dr. R. Sesha Sastry, Published by : Kannada Sahitya Parishat Pampa Mahakavi Road, Chamarajapet, Banglore - 560 018.
Pages : 552 + xviii Price : 200 =00, 2004

ಮುದ್ರಣದ ವರ್ಷ	:	೨೦೦೪
ಪ್ರತಿಗಳು	:	೧೦೦೦
ಬೆಲೆ ರೂ.	:	ರೂ. ೨೦೦/-

ಅಧ್ಯಕ್ಷರು
ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

3

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಸಂಸ್ಕೃತಿ ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆಯಾಗಿದೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸವನ್ನು ಪಡೆದಿರುವ ಪರಿಷತ್ತು ತನ್ನ ಕಾರ್ಯಕ್ಷೇತ್ರವನ್ನು ಅನೇಕ ರೀತಿಯಲ್ಲಿ ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಕನ್ನಡದ ಶ್ರೇಷ್ಠ ಸಾಹಿತ್ಯ ಗ್ರಂಥಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಒಂದು ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಪರಿಷತ್ತು ಹೊರತಂದಿದೆ. ಈ ಗ್ರಂಥಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸೇರಿವೆ. ಕನ್ನಡ ಜನತೆಗೆ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ನೀಡುವುದಕ್ಕೋಸ್ಕರ ಸುಲಭ ಬೆಲೆ ಇರಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮುಖಾಂತರ ಜ್ಞಾನ ಪ್ರಸಾರ ಮಾಡುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

'ಕರ್ನಾಟಕದ ವೀರಗಲ್ಲುಗಳು' ಎಂಬ ಈ ಗ್ರಂಥವು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ವೈಶಿಷ್ಟ್ಯಪೂರ್ಣವಾದ ಅತ್ಯುಪಯುಕ್ತ ಕೃತಿಯಾಗಿದೆ. ಈ ಗ್ರಂಥವನ್ನು ಅತ್ಯಂತ ಶ್ರಮವಹಿಸಿ ಸಿದ್ಧಪಡಿಸಿರುವ ಡಾ. ಆರ್.ಶೇಷಶಾಸ್ತ್ರಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಇದು ಸಂಶೋಧಕರಿಗೆ, ವಿದ್ವಾಂಸರಿಗೆ, ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಯುಳ್ಳ ಆಕರ ಗ್ರಂಥವಾಗಿದೆ.

ಪುಸ್ತಕಗಳ ಪ್ರಕಟಣೆಗಾಗಿ ಕರ್ನಾಟಕ ಸರ್ಕಾರವು ವಿಶೇಷ ಅನುದಾನ ನೀಡಿ ಉಪಕರಿಸಿದೆ. [ಸರ್ಕಾರದ ಆದೇಶ ಸಂಖ್ಯೆ ಸಂಕಇ ೧೬೨ ಕಸಧ ೨೦೦೩ ದಿನಾಂಕ ೧೬-೩-೨೦೦೪] ಈ ಸಹಾಯಕ್ಕಾಗಿ ಪರಿಷತ್ತು ಸರ್ಕಾರಕ್ಕೆ ಕೃತಜ್ಞವಾಗಿದೆ.

ಈ ಕೃತಿಯನ್ನು ಸುಂದರವಾಗಿ ಮುದ್ರಿಸಿದ ಬಿ.ಎಂ.ಶ್ರೀ ಅಚ್ಚುಕೂಟಕ್ಕೆ ಅಭಿನಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

6

ಅರಿಕೆ

ಈ ಪುಸ್ತಕ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ನಾನು ಒಪ್ಪಿಸಿದ 'ಕರ್ನಾಟಕದ ವೀರಗಲ್ಲುಗಳು' ಎಂಬ ನನ್ನ ನಿಬಂಧದ ಪರಿಷ್ಕೃತ ಹಾಗೂ ವಿಸ್ತೃತರೂಪ. ಅಂದು ನನ್ನ ಗಮನಕ್ಕೆ ಬಾರದ, ಸೇರಿಸಲಾಗದ, ನಂತರದ ಕಾಲದಲ್ಲಿ ಬೆಳಕಿಗೆ ಬಂದ ಹಲವಾರು ಅಂಶಗಳನ್ನು ಸೇರಿಸಿದ್ದೇನೆ. ಅನವಶ್ಯಕ, ತಪ್ಪು ಎಂದೆನ್ನಿಸಿದ ಭಾಗಗಳನ್ನು ತೆಗೆದು ಹಾಕಿದ್ದೇನೆ, ತಿದ್ದಿದ್ದೇನೆ.

ನಿಬಂಧವನ್ನು ಸಿದ್ಧಪಡಿಸುವಲ್ಲಿ ನನಗಿಂತಲೂ ಹೆಚ್ಚಿನ ಆಸಕ್ತಿಯನ್ನು ತೋರಿಸಿದವರು ನನ್ನ ಮಾರ್ಗದರ್ಶಕರಾದ ಡಾ॥ ಎಂ. ಚಿದಾನಂದಮೂರ್ತಿ ಅವರು. ವಿಷಯ ಸಂಗ್ರಹಣೆಯಲ್ಲಿ, ಕ್ಷೇತ್ರ ಪರಿವೀಕ್ಷಣಾಕಾರ್ಯದಲ್ಲಿ ಮತ್ತು ವಿಷಯ ನಿರೂಪಣಾ ವಿಧಾನದಲ್ಲಿ ಅವರು ತಮ್ಮ ಆಲೋಚನೆಗಳನ್ನು ನನ್ನೊಂದಿಗೆ ಬೆಸೆದಿದ್ದಾರೆ. ಯಾವುದೇ ಅಂತಿಮ ತೀರ್ಮಾನಕ್ಕೆ ಬರಲು ನನಗೆ ಸ್ವಾತಂತ್ರ್ಯ ನೀಡಿದ್ದಾರೆ. ಅಂತಿಮ ತೀರ್ಮಾನಕ್ಕೆ ನನಗೆ ಬಿಡುವ ಮುನ್ನ ತಮ್ಮ ಹಲವಾರು ಅನುಮಾನಗಳನ್ನು ನನ್ನ ಮುಂದೆ ಇಟ್ಟಿದ್ದಾರೆ. ಐದು ವರ್ಷಗಳ ಕಾಲ ಹುಡುಗು ಬುದ್ಧಿಯ ನನ್ನನ್ನೂ ನನ್ನ ನಿಬಂಧವನ್ನೂ ಅವರು ಅಕ್ಷರಶಃ ಕೈಹಿಡಿದು ನಡೆಸಿದ್ದಾರೆ. ಈ ಕೃತಿಯ ಬಹುಪಾಲು ಯಶಸ್ಸಿಗೆ ಅವರೇ ಕಾರಣರು ಎಂಬುದನ್ನು ಹೇಳಬಯಸುತ್ತೇನೆ. ಅವರ ಈ ಉಪಕಾರಕ್ಕೆ ನಾನು ಚಿರಋಣಿ. ಅವರಿಗೆ ನನ್ನ ಕೃತಜ್ಞತೆಗಳನ್ನು ಹೇಗೆ ವ್ಯಕ್ತಪಡಿಸಬೇಕೋ ತಿಳಿಯದಾಗಿದೆ.

ಯು.ಜಿ.ಸಿ. ವಿದ್ಯಾರ್ಥಿ ವೇತನವನ್ನು ದೊರಕಿಸಿ ಕೊಟ್ಟು ಸಂಶೋಧನೆ ಮಾಡಲು ನನಗೆ ಅನುವು ಮಾಡಿಕೊಟ್ಟವರು ನನ್ನ ಗುರುಗಳಾದ ಡಾ॥ ಜಿ.ಎಸ್. ಶಿವರುದ್ರಪ್ಪ ಅವರು. ವಿಭಾಗದ ಮುಖ್ಯಸ್ಥರಾಗಿ ನನಗೆ ನೀಡಬಹುದಾದ ಎಲ್ಲಾ ಸವಲತ್ತುಗಳನ್ನು ಮೂರು ವರ್ಷಗಳ ಕಾಲ ನೀಡಿ ಪ್ರೋತ್ಸಾಹಿಸಿದ್ದಾರೆ. ಅವರ ಹಿರಿತನಕ್ಕೆ ನಾನು ತಲೆ ಬಾಗಿದ್ದೇನೆ.

ನನ್ನ ಅಧ್ಯಯನಕ್ಕೆ ಮೂರು ವರ್ಷಗಳ ಕಾಲ ಆರ್ಥಿಕ ನೆರವನ್ನು ನೀಡಿದ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ, ಆಶ್ರಯವಿತ್ತ ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ನಾನು ಚಿರಋಣಿಯಾಗಿದ್ದೇನೆ.

ನನ್ನ ನಿಬಂಧವನ್ನು ಪರಿಶೀಲಿಸಿ, ಕೆಲವಾರು ಕುಂದು ಕೊರತೆಗಳನ್ನು ತೋರಿಸಿ ಪ್ರೋತ್ಸಾಹದ ಮಾತುಗಳನ್ನಾಡಿರುವ ಹಿರಿಯ ವಿದ್ವಾಂಸರುಗಳಾದ ಡಾ|| ಎಂ. ಎಂ. ಕಲಬುರ್ಗಿ ಅವರಿಗೂ, ಶ್ರೀ ಮಾಧವ. ನಾ. ಕಟ್ಟಿ ಅವರಿಗೂ ನನ್ನ ಹೃದಯಪೂರ್ವಕ ಪ್ರಣಾಮಗಳು. ಇದೇ ಸಂದರ್ಭದಲ್ಲಿ ನನಗೆ ಪಿಎಚ್.ಡಿ., ಪದವಿಯನ್ನು ದಯಪಾಲಿಸಿದ ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರ ವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಆತ್ಮೀಯತೆಯಿಂದ ಸಲ್ಲಿಸುತ್ತೇನೆ.

ಅಂತಿಮ ಎಂ.ಎ., ತರಗತಿಯಲ್ಲಿದ್ದಾಗ ಸಂಶೋಧನಾ ಕಾರ್ಯ ಕೈಗೊಳ್ಳುವಂತೆ ಪ್ರೇರೇಪಿಸಿದ ನನ್ನ ಗುರುಗಳಾದ ಶ್ರೀ ಎಚ್. ಕೆ. ಜಯದೇವ್, ಡಾ|| ಚಂದ್ರ ಶೇಖರ. ಬಿ. ಕಂಬಾರ, ಡಾ|| ಟಿ.ವಿ. ಸುಬ್ಬಾರಾವ್ ಅವರುಗಳ ಶಿಷ್ಯ ವಾತ್ಸಲ್ಯವನ್ನು ತುಂಬು ಹೃದಯದಿಂದ ನೆನೆಯುತ್ತೇನೆ.

ಪಿಎಚ್.ಡಿ., ಪದವಿಗಾಗಿ ಒಪ್ಪಿಸಿದ ನನ್ನ ನಿಬಂಧಕ್ಕೂ ಈ ಪುಸ್ತಕಕ್ಕೂ ಬಹಳಷ್ಟು ವ್ಯತ್ಯಾಸವಿದೆಯೆಂದರೆ ತಪ್ಪಾಗಲಾರದೆಂದು ತಿಳಿದಿದ್ದೇನೆ. ಆ ಸಮಯದಲ್ಲಿ ನಾನು ಪ್ರವಾಸ ಮಾಡಲಾಗದ ಹಲವಾರು ಪ್ರದೇಶಗಳಿಗೆ ಆನಂತರದಲ್ಲಿ ಹೋಗಿ ವೀರಗಲ್ಲುಗಳನ್ನು ಅಧ್ಯಯನ ಮಾಡಿದ್ದೇನೆ. ಆ ನನ್ನ ಅಧ್ಯಯನದ ಫಲಿತವನ್ನು ಇಲ್ಲಿ ಸೇರಿಸಿದ್ದೇನೆ. ರಾಯಚೂರಿನ ನನ್ನ ಪ್ರವಾಸವಂತೂ ನನ್ನ ಹಿಂದಿನ ಅಭಿಪ್ರಾಯವನ್ನು ಬದಲಿಸಿದೆ. ಮಿತ್ರ, ನಾ.ಗೀತಾಚಾರ್ಯನ ಪೆಣ್ಬುಯ್ಯಲಿನ ಬಗೆಗಿನ ಲೇಖನ ಆ ಬಗ್ಗೆ ಇದ್ದ ಸಮಸ್ಯೆಯನ್ನು ಅಂತಿಮವಾಗಿ ಪರಿಹರಿಸಿದೆ. ಈ ಲೇಖನ ವೀರಗಲ್ಲುಗಳ ಶಿಲ್ಪದತ್ತ ನನ್ನ ಗಮನ ಸೆಳೆದು ಅದೇ ತೆರನ ಶಿಲ್ಪವನ್ನು ಹುಡುಕುವಂತೆ ಪ್ರೇರೇಪಿಸಿದೆ. ನಿಬಂಧದಲ್ಲಿ ನೀಡಿರುವ ಚಿತ್ರಗಳಿಗೂ ಇಲ್ಲಿನ ಚಿತ್ರಗಳಿಗೂ ಸಂಖ್ಯೆಯಲ್ಲಿ, ವೈವಿಧ್ಯತೆಯಲ್ಲಿ ಅಪಾರ ವ್ಯತ್ಯಾಸವಿದೆ. ನನ್ನ ಅಧ್ಯಯನಕ್ಕೆ ಪೋಷಕವಾಗಿ ಬಳಸಿಕೊಂಡ ವೀರಗಲ್ಲುಗಳ ಛಾಯಾಚಿತ್ರ ಸಂಖ್ಯೆಯನ್ನು ಅಡಿಟಿಪ್ಪಣಿಯಲ್ಲಿ ನೀಡಿದ್ದೆ. ಆದರೆ ಇಲ್ಲಿ ವೀರಗಲ್ಲುಗಳ ಚಿತ್ರದ ಸಂಖ್ಯೆಯನ್ನು ಮೂಲ ಪಾಠದಲ್ಲಿಯೇ ಕಂಸದಲ್ಲಿ ಸೂಚಿಸಿದ್ದೇನೆ. ಮಾನ್ಯ ಓದುಗರು ಆಯಾ ಸಂದರ್ಭದಲ್ಲಿ ನಾನು ಸೂಚಿಸಿರುವ ವೀರಗಲ್ಲುಗಳನ್ನು ದಯವಿಟ್ಟು

ಪರಿಶೀಲಿಸಬೇಕೆಂದು ಕೋರುತ್ತೇನೆ. ನಾನು ಮಾತುಗಳಲ್ಲಿ ಹೇಳಬಹುದಾದ ಅನೇಕ ಅಂಶಗಳನ್ನು ಅವು ಒಳಗೊಂಡಿವೆ. ರೇಖಾ ಚಿತ್ರ ಮತ್ತು ಛಾಯಾ ಚಿತ್ರಗಳನ್ನು ಸಾಕಷ್ಟು ನೀಡಿರುವುದರಿಂದ ಹೆಚ್ಚಿನ ವಿವರಣೆಯನ್ನು ನೀಡದೆ ಮೊಟಕುಗೊಳಿಸಿದ್ದೇನೆ. ಆದರೆ ಎಲ್ಲಿ ಶಿಲ್ಪಿಯ ಪ್ರತಿಭೆಯನ್ನು ವಿಮರ್ಶಾತ್ಮಕವಾಗಿ ವಿವರಿಸಬಹುದೋ ಅಲ್ಲೆಲ್ಲಾ ಸಾಕಷ್ಟು ದೀರ್ಘವಾಗಿಯೇ ಬರೆದಿದ್ದೇನೆ. ಪ್ರಾಚೀನ ಕರ್ನಾಟಕದ ಆಯುಧಗಳ ಬಗ್ಗೆ ವೀರಗಲ್ಲುಗಳ ಶಿಲ್ಪದ ಆಧಾರದ ಮೇಲೆ ರೇಖಾ ಚಿತ್ರಗಳನ್ನು ತಯಾರಿಸಿ ಸಂಶೋಧಕರ ಗಮನಕ್ಕೆ ತಂದಿದ್ದೇನೆ. ಹಾಗೆಯೇ ರೋಣ, ಸಾಕಮ್ಮನ ಹೊಸಹಳ್ಳಿ, ಬಾಗಳಿ, ರಾಯಚೂರು, ರಟ್ಟಿಹಳ್ಳಿ, ಹಾಡುವಳ್ಳಿ, ಶಿವಮೊಗ್ಗಾ, ಶ್ರವಣಬೆಳಗೊಳ ಮುಂತಾದ ಪ್ರದೇಶಗಳ ಅಪೂರ್ವ ವೀರಗಲ್ಲುಗಳ ಛಾಯಾ ಚಿತ್ರಗಳನ್ನು ನೀಡಿದ್ದೇನೆ.

ವೀರಗಲ್ಲುಗಳು ಇರುವ ಸ್ಥಳದ ವಿವರಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ. ವೀರಗಲ್ಲುಗಳ ಚಿತ್ರಗಳ ಕೆಳಗೆ ಸಂಖ್ಯೆಯನ್ನೂ ಮತ್ತು ಶೀರ್ಷಿಕೆಯನ್ನೂ ನೀಡಿದ್ದೇನೆ. ಶೀರ್ಷಿಕೆಯನ್ನು ನೀಡುವಲ್ಲಿ ವೀರಗಲ್ಲಿನ ಶಿಲ್ಪಿಯ ಉದ್ದೇಶಕ್ಕೆ ಪೂರಕವಾಗುವಂತಹ ಪ್ರಾಚೀನ ಮತ್ತು ಅರ್ವಾಚೀನ ವೀರಗಲ್ಲುಗಳ ಪಾಠದಲ್ಲಿ, ಕನ್ನಡ ಕಾವ್ಯಗಳಲ್ಲಿ ನಮ್ಮ ವೀರರ ಬಗ್ಗೆ ದೊರೆಯುವ ಉಕ್ತಿಗಳನ್ನು ಬಳಸಿಕೊಂಡಿದ್ದೇನೆ. ನನ್ನ ಈ ಪ್ರಯತ್ನ ಕಲಾಕೃತಿಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸ್ವಲ್ಪ ಮಟ್ಟಿಗಾದರೂ ನೆರವಾದರೆ ನನ್ನ ಶ್ರಮ ಸಾರ್ಥಕ.

ಕಳೆದ ವರ್ಷ ಮೇ ತಿಂಗಳಲ್ಲಿ ಭೂಗರ್ಭ ಶಾಸ್ತ್ರಜ್ಞ ಶ್ರೀ ವೈ. ಲಿಂಗರಾಜು ಮತ್ತು ಶ್ರೀ ಕೆ.ಎಚ್. ತಿಮ್ಮೇಗೌಡ, ಡಿವಿಜನಲ್ ಇಂಜಿನಿಯರ್, ವರಾಹಿ ಪ್ರಾಜೆಕ್ಟ್ ಇವರು, ವರಾಹಿ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಪ್ರದೇಶದಲ್ಲಿನ ವೀರಗಲ್ಲುಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಅವರು ನೀಡಿದ ಸಹಕಾರಕ್ಕೆ ಪ್ರತಿಯಾಗಿ ನಾನು ಏನನ್ನೂ ನೀಡಲಾರದವನಾಗಿದ್ದೇನೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಸುಮಾರು ಹದಿನೈದು ದಿನಗಳ ಈ ಪ್ರವಾಸದಲ್ಲಿ ಅನೇಕ ಉಪಯುಕ್ತ ಮಾಹಿತಿಗಳನ್ನು ಸಂಗ್ರಹ ಮಾಡಿದೆ. ನಿಬಂಧದಲ್ಲಿ ನಾನು ತೆಗೆದುಕೊಂಡ ತೀರ್ಮಾನಗಳನ್ನು ಬದಲಿಸುವಂಥ ಯಾವ ಮಾಹಿತಿಗಳೂ ದೊರೆಯಲಿಲ್ಲ. ಬದಲಾಗಿ ನಾನು ತೆಗೆದುಕೊಂಡ ತೀರ್ಮಾನ, ಊಹೆಗಳನ್ನೇ ಪೋಷಿಸುವಂಥ ಸಾಮಗ್ರಿಗಳು ದೊರೆತವು ಎಂಬುದನ್ನು ವಿನಮ್ರನಾಗಿ ಸೂಚಿಸುತ್ತೇನೆ.

ದಿ॥ ಆಲೂರು ವೆಂಕಟರಾಯರು ೧೯೩೧ರಲ್ಲಿ ಧಾರವಾಡದ ಕರ್ನಾಟಕ ಇತಿಹಾಸ ಮಂಡಲದ 'ಕರ್ನಾಟಕ ಹಿಸ್ಟಾರಿಕಲ್ ರಿವ್ಯೂ' ಪತ್ರಿಕೆಯ ಮೊದಲ ಸಂಚಿಕೆಯಲ್ಲಿ 'Hero

Stones and their Contribution to History and Literature' –ಎಂಬ ಅತ್ಯುತ್ತಮವಾದ ಲೇಖನವನ್ನು ಪ್ರಕಟಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಶಾಸನಶಾಸ್ತ್ರ ತರಗತಿಯ ವಿದ್ಯಾರ್ಥಿಯಾದ ಶ್ರೀ ವೇ. ಬು. ಸೋಮಶೇಖರ್ ಅವರು ಇತ್ತೀಚೆಗೆ ಕರ್ನಾಟಕದ ಗಡಿ ಪ್ರದೇಶದಲ್ಲಿರುವ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ, ಡೆಂಕಣಿಕೋಟೆ ತಾಲ್ಲೂಕಿನ ಗುಮ್ಮಳಾಪುರದಲ್ಲಿ ಕ್ರಿ.ಶ. ೧೯೧೦ರಲ್ಲಿ ಹಾಕಿಸಿದ ಕನ್ನಡ ಭಾಷೆಯ ವೀರಗಲ್ಲೊಂದನ್ನು ಪತ್ತೆ ಹಚ್ಚಿ ನನ್ನ ಗಮನಕ್ಕೆ ತಂದಿದ್ದಾರೆ.

ಮೇಲಿನ ಈ ಎರಡೂ ಸಂಗತಿಗಳು ನನಗೆ ತಡವಾಗಿ ತಿಳಿದ ಕಾರಣ ಪ್ರಸ್ತುತ ಮುದ್ರಣದಲ್ಲಿ ಅವುಗಳ ಬಗ್ಗೆ ಪ್ರಸ್ತಾಪಮಾಡಲು ಆಗಲಿಲ್ಲ. ಮರುಮುದ್ರಣದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳುತ್ತೇನೆ.

ವೀರಗಲ್ಲುಗಳ ಪರಿವೀಕ್ಷಣಾ ಕಾರ್ಯಕ್ಕೆ ಹೋದಾಗ ಕನ್ನಡ ನಾಡಿನ ಜನ ತುಂಬು ಹೃದಯದಿಂದ ನನ್ನನ್ನು ಆದರಿಸಿ ವಿಷಯ ಸಂಗ್ರಹಣೆಗೆ ಸಹಕರಿಸಿದ್ದಾರೆ. ಶಿರಾಳಕೊಪ್ಪದ ದಿ॥ ಎಸ್. ಭೀಮಪ್ಪನವರು, ಹಾನುಗಲ್ಲಿನ ಸುತ್ತಕಟ್ಟಿಮಠ, ಕೋನಸಾಗರದ ಶ್ರೀ ವಿಶ್ವನಾಥ, ಹಾವೇರಿಯ ಪ್ಲೀಡರ್ ಶ್ರೀ ಕುಲಕರ್ಣಿ, ಧಾರವಾಡದ ಜಿ.ಎಂ. ಹೆಗ್ಡೆ, ಕಾಮಲಾಪುರದ ಡಾ॥ ದಾಸೂರಾವ್, ಕೆಳದಿಯ ಶ್ರೀ ಗುಂಡಾಜೋಯಿಸ್, ಶ್ರೀ ಲಕ್ಷ್ಮೀಪತಿ ನಗರಗೆರೆ ಮತ್ತು ಡಾ॥ ಎಂ.ವಿ. ಶ್ರೀನಿವಾಸ್, ಶ್ರೀ ಎನ್.ಡಿ. ಬಜ್ಜಣ್ಣ ಮುಂತಾದ ಮಿತ್ರರ, ಹಿರಿಯರ ಸಹಕಾರವನ್ನು ಎಂದೆಂದಿಗೂ ನಾನು ಮರೆಯುವಂತಿಲ್ಲ.

ಸಂಶೋಧಕನ ಜೇಬಿನಲ್ಲಿ ಹಣ ಕಡಿಮೆ ಇದ್ದಾಗಲೂ ಅವನ ಆಸಕ್ತಿ ಅನೇಕ ಕಡೆಗಳಿಗೆ ಪ್ರವಾಸ ಹೋಗುವಂತೆ ಅವನನ್ನು ಪ್ರೇರೇಪಿಸುತ್ತದೆ. ಅಷ್ಟೇ ಬಿಗಿಯಾಗಿ ಅವನ ಆರ್ಥಿಕಸ್ಥಿತಿ ಅವನನ್ನು ಹಿಡಿದಿರುತ್ತದೆ. ಆದರೂ ತನಗೆ ಬೇಕಾದ ಮಾಹಿತಿಯನ್ನು ತಿಳಿಯುವ ಆಸಕ್ತಿ ಅವನ ಮನದಲ್ಲಿ ತುಡಿಯುತ್ತಿರುತ್ತದೆ. ಇಂಥ ಸಮಯಗಳಲ್ಲಿ ಅವನು ಪತ್ರಗಳ ಮೂಲಕ ತನ್ನ ಗೆಳೆಯರಿಗೆ ಕಿರಿಕಿರಿಯನ್ನುಂಟುಮಾಡುತ್ತಾನೆ. ಈ ರೀತಿಯ ನನ್ನ ಕಿರಿಕಿರಿಯನ್ನು ಆತ್ಮೀಯವಾಗಿ ಸ್ವೀಕರಿಸಿದ ರಾಯಚೂರಿನ ಶ್ರೀ ಚೆನ್ನಣ್ಣ ವಾಲೀಕಾರ, ಚಿಗಟೇರಿಯ ಶ್ರೀ ಸಂಗಣ್ಣ, ಹರಪನಹಳ್ಳಿಯ ಮಧೂಸ್ ಸ್ಟುಡಿಯೋದ ಮಾಲೀಕರಾದ ಶ್ರೀ ಮಧುಕರ್, ಸಂತೇಕಲ್ಲಹಳ್ಳಿಯ ನಲ್ಲಪ್ಪನ ಮಗ ಶ್ರೀ ರಂಗಣ್ಣ, ಅರೆಹಳ್ಳಿಯ ಶ್ರೀ ಎ. ವೇಣಪ್ಪ, ಇವರುಗಳ ಸಹಕಾರವನ್ನು ನೆನೆಯದೆ ಹೋದರೆ ಕರ್ತವ್ಯ ಲೋಪವಾದೀತು. ಈ ಮಿತ್ರರ ಸಹಕಾರ ನನ್ನ ಶ್ರಮ, ಸಮಯ ಮತ್ತು ಹಣವನ್ನು ಸಾಕಷ್ಟು ಉಳಿತಾಯ ಮಾಡಿದೆ.

8

ಹಿರಿಯರಾದ ಡಾ॥ ಜಿ.ಎಸ್ ಗಾಯಿ, ಡಾ॥ ಕೆ.ವಿ. ರಮೇಶ್ ಮತ್ತು ಶ್ರೀ ಮಾಧವ. ನಾ. ಕಟ್ಟಿಯವರು ಲಿಪಿಶಾಸ್ತ್ರವನ್ನು ಕಲಿಸಿಕೊಟ್ಟು ನನ್ನ ಈ ಅಧ್ಯಯನ ಹೆಚ್ಚು ಅಧಿಕೃತವಾಗುವಂತೆ ಮಾಡಿದ್ದಾರೆ. ಈ ಹಿರಿಯರಿಂದ ನಾನು ಕಲಿತ ಲಿಪಿಜ್ಞಾನ ಹೆಚ್ಚು ವ್ಯಾಪಕವಾಗುವಂತೆ ಶ್ರೀ ಎ.ಎಂ. ಅಣ್ಣಿಗೇರಿಯವರು ತಮ್ಮ ಅನೇಕ ವರ್ಷಗಳ ಅನುಭವವನ್ನು ಧಾರೆ ಎರೆದಿದ್ದಾರೆ. ಈ ನಾಲ್ವರು ಹಿರಿಯರ ಆಶೀರ್ವಾದ, ಪ್ರೋತ್ಸಾಹಗಳನ್ನು ಸ್ಮರಿಸಿ ಪುಣ್ಯಭಾವನೆಯಿಂದ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನೊಂದಿಗೆ ಅನೇಕ ಸ್ಥಳಗಳಿಗೆ ಬಂದ ಗೆಳೆಯ ಶ್ರೀ ಕೆ.ಪಿ. ಭಟ್ಟ ಅವರಿಗೆ ; ತಮ್ಮ ಸಂಗ್ರಹದ ಅನೇಕ ಅಪ್ರಕಟಿತ ಜಾನಪದ ವೀರಗೀತೆಗಳನ್ನು ನನ್ನ ಅಧ್ಯಯನಕ್ಕೆ ನೀಡಿದ ಹನೂರು ಶ್ರೀ ಎ. ಕೃಷ್ಣಮೂರ್ತಿಯವರಿಗೆ ; ನನ್ನ ಅನೇಕ ಕಷ್ಟಗಳಲ್ಲಿ ತಮ್ಮ ಶಕ್ತಿಮೀರಿ ನೆರವು ನೀಡುತ್ತಲೇ ಬಂದಿರುವ ಶ್ರೀಮತಿ ಅಂದನೂರು ಶೋಭಾ ಅವರಿಗೆ ; ಆಗಾಗ ಉಪಯುಕ್ತ ಸಲಹೆಗಳನ್ನೀಯುತ್ತಾ ಬಂದಿರುವ ಶ್ರೀ ಎಸ್.ಶಿವಣ್ಣ ಮತ್ತು ಶ್ರೀ ಸಿ.ಯು. ಮಂಜುನಾಥ ಅವರಿಗೆ ನಾನು ಋಣಿಯಾಗಿದ್ದೇನೆ.

ನಿಬಂಧದ ಮೊದಲ ಕರಡಚ್ಚನ್ನು ತಯಾರಿಸಲು ಮೂರು ತಿಂಗಳ ಕಾಲ ನನಗೆ ಆಶ್ರಯವಿತ್ತು ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಯವರು ಉಪಕರಿಸಿದ್ದಾರೆ. ಹಾಗೆಯೇ ಅಂತಿಮ ಪ್ರತಿ ಮಾಡುವಲ್ಲಿ ಗೆಳೆಯರಾದ ಶ್ರೀ ಎಚ್.ಎಸ್.ಗೋಪಾಲರಾಯ, ಶ್ರೀ ಸಿ. ಭೈರೇಗೌಡ ಅವರು ಅನೇಕ ರೀತಿಗಳಲ್ಲಿ ಆಶ್ರಯವಿತ್ತು ಬೆಂಬಲಿಸಿದ್ದಾರೆ. ಈ ಮೂವ್ವರೂ ನನ್ನ ಬಗ್ಗೆ ಇಟ್ಟಿರುವ ಅಭಿಮಾನವನ್ನು ನೆನೆದು ನನ್ನ ಹೃದಯ ಭಾರವಾಗಿದೆ.

ನನ್ನ ಗುರುಗಳು, 'ಬೆಳ್ಳಿ ಬಿಟ್ಟ ಬಳ್ಳಿ'ಯ ಪ್ರಧಾನ ಸಂಪಾದಕರೂ ಆದ ಶ್ರೀ ಹಂಪ. ನಾಗರಾಜಯ್ಯನವರು ಈ ಪುಸ್ತಕದ ಪ್ರಕಟಣೆಯ ಬಗ್ಗೆ ತುಂಬಾ ಉತ್ಸಾಹ ತೋರಿದ್ದಾರೆ. ಅವರು ನನ್ನ ಬಗ್ಗೆ ಇಟ್ಟಿರುವ ವಿಶ್ವಾಸ, ಅಭಿಮಾನಗಳ ದ್ಯೋತಕವೇ ಈ ಪುಸ್ತಕದ ಪ್ರಕಟಣೆ. ನನ್ನ ನಿಬಂಧವನ್ನು ತಿದ್ದಬೇಕು, ಪರಿಷ್ಕರಿಸಬೇಕು, ಮತ್ತೆ ಕೆಲವು ಕಡೆಗಳಿಗೆ ಹೋಗಿ ವೀರಗಲ್ಲುಗಳ ಛಾಯಾಚಿತ್ರಗಳನ್ನು ತೆಗೆದುಕೊಂಡು ಬರಬೇಕು –ಎಂಬ ನನ್ನ ಬೇಕುಗಳ ಸರಮಾಲೆಯನ್ನು ಅವರ ಮುಂದಿಟ್ಟಾಗ ಹಸನ್ಮುಖದಿಂದ ಸಂಪೂರ್ಣ ಸಹಕಾರವನ್ನಿತ್ತಿದ್ದಾರೆ. ರಾಯಚೂರು, ಶ್ರವಣಬೆಳಗೊಳ, ಸಾಕಮ್ಮನ ಹೊಸಹಳ್ಳಿ, ಮೇಲಾಗಾಣಿ ಮುಂತಾದ ಕಡೆಗಳಿಗೆ ಹೋಗಿಬರಲು ಸಹಾಯ ಮಾಡಿದ್ದಾರೆ. ಅವರ ಪ್ರೋತ್ಸಾಹ, ಸಹಕಾರಗಳನ್ನು ಸದುಪಯೋಗಪಡಿಸಿಕೊಂಡಿದ್ದೇನೆ. ಅದಕ್ಕಾಗಿ ಶ್ರೀ ಹಂಪನಾ ಅವರಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪರಿಷತ್ತಿನಂತಹ ಸಂಸ್ಥೆ

೧

ಈ ಪುಸ್ತಕವನ್ನು ಪ್ರಕಟಿಸುತ್ತಿರುವುದು ನನಗೆ ತುಂಬಾ ಹೆಮ್ಮೆಯ ವಿಷಯ. ಅಂತೆಯೇ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಋಣಿಯಾಗಿದ್ದೇನೆ.

ಮುದ್ರಣಕ್ಕೆ ಆರಂಭವಾಗುವ ಮುಂಚಿನಿಂದಲೇ ಪುಸ್ತಕ ವಿನ್ಯಾಸದ ಬಗ್ಗೆ ನನ್ನ ಗಮನ ಸೆಳೆದ ಶ್ರೀ ಲಕ್ಷ್ಮಣ ತೆಲಗಾವಿ ಅವರಿಗೆ ; ನಾನೂ ನನ್ನ ಮಿತ್ರರೂ ಛಾಯಾ ಚಿತ್ರಗಳ ವಿನ್ಯಾಸ ಮಾಡುತ್ತಿದ್ದಾಗ ಆಸಕ್ತಿಯಿಂದ ಪರಿಶೀಲಿಸಿ "ನಿಧಾನವಾದರೂ ಅಡ್ಡಿಯಿಲ್ಲ, ಎಚ್ಚರದಿಂದ ಮಾಡಿ" ಎಂದು ಬೆನ್ನುತಟ್ಟಿದ ಶ್ರೀ ಡಿ.ಲಿಂಗಯ್ಯನವರಿಗೆ ; ಪರಿಷತ್ತಿನ ಕೋಶಾಧಿಕಾರಿಗಳಾದ ಶ್ರೀ ದೇವರಾಜ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಮಿತ್ರ ಶ್ರೀ ಬಸವರಾಜವಾಲಿ ಯಾವುದೇ ಸಿನಿಮಾ ಛಾಯಾಗ್ರಹಣಕ್ಕೆ ಹೊರಗೆ ಹೋದಾಗಲೂ ನಮ್ಮ ಶಾಸ್ತ್ರಿಗಳಿಗೆ ಬೇಕಾದೀತೆಂದು ಹಲವಾರು ವೀರಗಲ್ಲುಗಳ ಛಾಯಾ ಚಿತ್ರಗಳನ್ನು ತರುತ್ತಾ ನನ್ನ ಭಂಡಾರವನ್ನು ತುಂಬುತ್ತಾ ಬಂದಿದ್ದಾರೆ. ರಟ್ಟಿಹಳ್ಳಿಯ ಅಪೂರ್ವ ವೀರಗಲ್ಲುಗಳ ಛಾಯಾಚಿತ್ರಗಳನ್ನು ನನಗೆ ನೀಡಿ ನಾನು ಆನಂದಪಟ್ಟದ್ದನ್ನು ಕಂಡು ಅವರು ಹಿಗ್ಗಿದ್ದಾರೆ. ನನ್ನ ಅಸಹಾಯಕ ಸ್ಥಿತಿಯನ್ನು ಮನದಂದು ಬಾಗಳಿಯ ವೀರಗಲ್ಲಿನ ಛಾಯಾಚಿತ್ರವನ್ನು ನನಗೆ ಒದಗಿಸುವಲ್ಲಿ ಹಿರಿಯ ಮಿತ್ರರಾದ ಶ್ರೀ ಮುದೇನೂರು ಸಂಗಣ್ಣ, ಹರಪನಹಳ್ಳಿಯ ಮಧುಕರ್ ಅವರು ನೆರವಾಗಿದ್ದಾರೆ. ಡಾ॥ ಎಸ್.ಎಸ್. ಶೆಟ್ಟರ್ ಅವರು ಬೆಟಗೇರಿಯ ವೀರಗಲ್ಲುಗಳ ಛಾಯಾಚಿತ್ರಗಳನ್ನು ಒದಗಿಸಿ ಉಪಕರಿಸಿದ್ದಾರೆ. ಶ್ರೀ ಪಿ.ಎಸ್. ಚಂದ್ರಶೇಖರ್ ಅವರು ಕೆಲವು ಛಾಯಾಚಿತ್ರಗಳನ್ನು ನೀಡಿದ್ದಾರೆ. – ಈ ಎಲ್ಲಾ ಹಿರಿಯರ, ಮಿತ್ರರ ಸಹಕಾರಕ್ಕೆ ನಾನು ಋಣಿ.

ಶ್ರೀ ಎಸ್. ಆರ್. ರಾವ್ ಅವರು ಕರ್ನಾಟಕವೃತ್ತ ಪ್ರಾಚ್ಯ ಇಲಾಖೆಯ ಮುಖ್ಯಸ್ಥರಾಗಿದ್ದ ಕಾಲದಲ್ಲಿ, ಅವರ ಆಡಳಿತಕ್ಕೆ ಸೇರಿದ್ದ ರಕ್ಷಿತಸ್ಮಾರಕಗಳ, ವೀರಗಲ್ಲುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವಲ್ಲಿ ನನಗೆ ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದರು. ನನ್ನ ಬಗ್ಗೆ ವಿಶೇಷವಾದ ಅಭಿಮಾನವನ್ನು ಹೊಂದಿರುವ ಕರ್ನಾಟಕ ಸರಕಾರದ ಪ್ರಾಚ್ಯ ಇಲಾಖೆಯ ನಿರ್ದೇಶಕರಾದ ಡಾ॥ ಎಂ.ಎಸ್. ನಾಗರಾಜಾರಾವ್ ಅವರು ನನ್ನ ಸಂಶೋಧನಾ ಆರಂಭದ ದಿಸೆಯಿಂದಲೂ ಪ್ರೋತ್ಸಾಹ, ಬೆಂಬಲವನ್ನಿತ್ತಿದ್ದಾರೆ. ವಸ್ತು ಸಂಗ್ರಹಾಲಯ ಗಳಲ್ಲಿನ ವೀರಗಲ್ಲುಗಳ ಛಾಯಾಚಿತ್ರಗಳನ್ನು ತೆಗೆಯಲು ಅವರು ಹೊರಡಿಸಿರುವ ಆಜ್ಞೆ ಸಂಶೋಧಕ ವಿದ್ಯಾರ್ಥಿಗಳಿಗೆ ಒಂದು ವರ. ಡಾ॥ಎಂ.ಎಸ್. ನಾಗರಾಜಾರಾಯರಿಂದ ಮತ್ತು ಇಲಾಖೆಯಿಂದ ನಾನು ಬಹುವಾಗಿ ಉಪಕೃತನಾಗಿದ್ದೇನೆ.

ಡಾ॥ ಕೃಷ್ಣಾನಂದ ಕಾಮತರ ನೆರವು ಈ ರೀತಿಯದು ಎಂದು ವಿವರಿಸಲಿಕ್ಕೆ ಸಾಧ್ಯವಿಲ್ಲ. ಇಂತಹ ಸಹೃದಯ ಮಿತ್ರರು ಸಂಶೋಧನಾ ಆರಂಭದ ಕಾಲದಲ್ಲಿಯೇ ದೊರೆತಿದ್ದರೆ ಎಷ್ಟು ಚೆನ್ನಾಗಿತ್ತು. ನನ್ನೊಡನೆ ತಿಂಡಿನೀರು ಇಲ್ಲದೆ ಅಲೆದು ಛಾಯಾಗ್ರಹಣ ಕಲೆಯನ್ನು ನನಗೆ ಕಲಿಸಲು ಪ್ರಯತ್ನಿಸಿ ವಿಫಲರಾಗಿದ್ದಾರೆ. ಇದುವರೆಗೆ ನಾನು ತೆಗೆದ ವೀರಗಲ್ಲುಗಳ ಛಾಯಾಚಿತ್ರಗಳನ್ನು ಸಂರಕ್ಷಿಸಿಟ್ಟು ಮಹದುಪಕಾರ ಮಾಡಿದ್ದಾರೆ. ನನ್ನ ನಿಬಂಧವನ್ನು ಓದಿದ ಅವರು, ನನಗೆ ಬೇಕಾದ ವೀರಗಲ್ಲುಗಳ ಛಾಯಾಚಿತ್ರಗಳನ್ನು, ರೇಖಾಚಿತ್ರಗಳನ್ನು ತಯಾರಿಸಿಕೊಟ್ಟಿದ್ದಾರೆ. ಮಧ್ಯಪ್ರದೇಶದ ತಮ್ಮ ಅಧ್ಯಯನದ ಫಲಿತಾಂಶಗಳನ್ನು ನನಗೆ ಧಾರೆ ಎರೆದಿದ್ದಾರೆ. ಹಾಗೆಯೇ ವೀರಗಲ್ಲುಗಳ ಶಿಲ್ಪದ ಬಗ್ಗೆ, ಇನ್ನೂ ಮಾಡಬೇಕಾದ ಕೆಲಸದ ಬಗ್ಗೆ ನನ್ನ ಗಮನಸೆಳೆದಿದ್ದಾರೆ. ಇವರ ಶ್ರೀಮತಿಯವರಾದ ಡಾ॥ಜ್ಯೋತ್ಸ್ನಾ ಕಾಮತರು ನನ್ನ ಜೀವನದ ದುರ್ಭರ ದಿನಗಳಲ್ಲಿ ನೀಡಿದ ಪ್ರೋತ್ಸಾಹ, ಬೆಂಬಲವನ್ನು ಮರೆಯಲಾರೆ. ಮಿಗಿಲಾಗಿ ಕಾಮತರಂತಹ ಮಿತ್ರರನ್ನು ನನಗೆ ದೊರಕಿಸಿ ಕೊಟ್ಟಿದ್ದಾರೆ. ಈ ದಂಪತಿಗಳಿಬ್ಬರು ನನ್ನಲ್ಲಿ ಇಟ್ಟಿರುವ ಪುತ್ರವಾತ್ಸಲ್ಯ ನನ್ನನ್ನು ಮೂಕನನ್ನಾಗಿ ಮಾಡಿದೆ.

ನಿಬಂಧದ ಪರಿಷ್ಕರಣ ಅಗತ್ಯವೆಂದು ಈಗ್ಗೆ ಮೂರು ವರ್ಷಗಳ ಹಿಂದೆಯೇ ಸೂಚಿಸಿದ ಸೋದರ ಸು. ರುದ್ರಮೂರ್ತಿ ಶಾಸ್ತ್ರಿಗೆ ; ಪರಿಷ್ಕರಣ ಮಾಡಿಕೊಟ್ಟ ಸೋದರ ಕಣಗಾಲ ರಾಧಾಕೃಷ್ಣನಿಗೆ ನನ್ನ ಸಸ್ನೇಹ ವಂದನೆಗಳು.

ಪ್ರಿಯ ಮಿತ್ರ ಅ. ಲ. ನರಸಿಂಹನ್ ವೀರಗಲ್ಲುಗಳ ಶಿಲ್ಪವನ್ನು ಕಲಾತ್ಮಕ ದೃಷ್ಟಿಯಿಂದ ನೋಡಿ ವಿಶ್ಲೇಷಿಸುವಲ್ಲಿ ನನ್ನ ನೆರವಿಗೆ ಬಂದಿದ್ದಾನೆ. ಸ್ವತಃ ಕಲಾವಿದನಾದ ಆತ ಅನೇಕ ವೀರಗಲ್ಲುಗಳ ಶಿಲ್ಪವಿನ್ಯಾಸಕ್ರಮದ ಬಗ್ಗೆ ನನ್ನ ಗಮನ ಸೆಳೆದಿದ್ದಾನೆ. ಈ ಪುಸ್ತಕಕ್ಕೆ ಅಗತ್ಯವಿರುವ ಎಲ್ಲಾ ರೇಖಾ ಚಿತ್ರಗಳನ್ನು ಬರೆದುಕೊಡುವಲ್ಲಿ ಆತನು ತೋರಿದ ಶ್ರದ್ಧಾಸಕ್ತಿಗಳಿಗೆ ಮಾರು ಹೋಗಿದ್ದೇನೆ. ಮಿತ್ರರಾದ ಶ್ರೀ ಕೆ.ಆರ್. ಗಣೇಶ್ ಅವರು ಈ ಪುಸ್ತಕದ ಪ್ರತಿಯನ್ನು ಅಚ್ಚಿನ ಮನೆಗೆ ತಯಾರು ಮಾಡುವಲ್ಲಿ ನನ್ನ ಸಹಾಯಕ್ಕೆ ಬಂದಿದ್ದಾರೆ. ಅಷ್ಟೇ ಅಲ್ಲ ನಾನು ಮಾಡಿದ ಸಣ್ಣ ತಪ್ಪುಗಳನ್ನು ನನ್ನ ಗಮನಕ್ಕೆ ತಂದು ತಿದ್ದಿದ್ದಾರೆ.

ಈ ಪುಸ್ತಕ ಪ್ರಕಟವಾಗಲಿದೆ ಎಂಬುದನ್ನು ತಿಳಿದಾಗಿನಿಂದ ಇಂದಿನವರೆಗೆ ಪ್ರತಿ ಹಂತದಲ್ಲಿಯೂ ನೆರವಾಗಿರುವ ಗೆಳೆಯ ಪಿ.ವಿ. ಕೃಷ್ಣಮೂರ್ತಿಯವರ ಸ್ನೇಹ ನನ್ನ ಪಾಲಿಗೆ ಒಂದು ವರ. ಈ ಪುಸ್ತಕದಲ್ಲಿ ಉಲ್ಲೇಖ ಮಾಡಿರುವ ವೀರಗಲ್ಲುಗಳ ಪಾಠದ ಮೂಲವನ್ನು ಮತ್ತೊಮ್ಮೆ ಹೋಲಿಸಿ ನೋಡಿ ತಿದ್ದಿದ್ದಾರೆ. ಆಕರಗಳ ವಿವರಗಳನ್ನು

ಪರೀಕ್ಷಿಸಿದ್ದಾರೆ. ಪ್ರತಿಯೊಂದು ಹೆಜ್ಜೆಯಲ್ಲಿಯೂ ನನ್ನೊಡನೆ ಟೊಂಕ ಕಟ್ಟಿ ಹೋರಾಡಿ ಆಗಬಹುದಾಗಿದ್ದ ಪ್ರಮಾದಗಳನ್ನು ನಿವಾರಿಸಿದ್ದಾರೆ. ಶ್ರಮವಹಿಸಿ ಶಬ್ದಸೂಚಿಯನ್ನು ತಯಾರು ಮಾಡಿಕೊಟ್ಟಿದ್ದಾರೆ. ಅವರು ನನ್ನ ನೆರವಿಗೆ ಬಾರದೇ ಹೋಗಿದ್ದರೆ ಈ ಕೃತಿ ಇಷ್ಟು ಮಟ್ಟಿಗೆ ಅಚ್ಚುಕಟ್ಟಾಗಿ ಹೊರ ಬರುತ್ತಿರಲಿಲ್ಲ. ನನ್ನ ಅನೇಕ ಸುಖದುಃಖಗಳಲ್ಲಿ ಭಾಗಿಯಾಗಿರುವ, ಜೀವನದಲ್ಲಿ ನಾನು ದುಡುಕಿದ ಅನೇಕ ಸಂದರ್ಭಗಳಲ್ಲಿ ನನ್ನನ್ನು ತಡೆದ, ಗುಣಮಧುರನಾದ ಶ್ರೀ ದೇವರಕೊಂಡಾರೆಡ್ಡಿ ಈ ಪುಸ್ತಕದ ಕರಡಚ್ಚನ್ನು ತಿದ್ದುವ ಶ್ರಮದ ಕೆಲಸವನ್ನು ಎಚ್ಚರಿಕೆಯಿಂದ ಮಾಡಿದ್ದಾರೆ. ಶಾಸನಗಳ ಬಗ್ಗೆ ವಿಶೇಷ ಪರಿಶ್ರಮವುಳ್ಳ ಈತ ಕರಡಚ್ಚನ್ನು ತಿದ್ದಿರುವುದರಿಂದ ಅಧಿಕೃತ ಮಾಹಿತಿಗಳಾವುವು ತಪ್ಪಾಗಿ ಮುದ್ರಿತವಾಗಿಲ್ಲ ಎಂದು ಭರವಸೆ ಇದೆ. ಕೆಲವು ತಪ್ಪುಗಳು ಅನನುಭವದಿಂದಾಗಿ ಆಗಿವೆಯೇ ಹೊರತು ಬೇಜವಾಬ್ದಾರಿಯಿಂದಲ್ಲ– ಎಂಬುದನ್ನು ವಿನಮ್ರನಾಗಿ ಹೇಳಬಯಸುತ್ತೇನೆ.

ಪುಸ್ತಕದ ರಕ್ಷಾಪುಟ ಸೊಗಸಾಗಿ ಬರಬೇಕೆಂದು ಉತ್ತಮ ಕಲಾವಿದರನ್ನು ತೋರಿಸಿದ ಮಿತ್ರನಾದ ಬಾಲಕ ಜಯಪ್ರಕಾಶ ಬರಗೂರು ; ಸುಂದರವಾದ ರಕ್ಷಾಪುಟದ ಕಲೆಯನ್ನು ಸಿದ್ಧಮಾಡಿ ಕೊಟ್ಟ ಕಲಾವಿದ ಶ್ರೀ ಪ.ಸ.ಕುಮಾರ್ ಅವರಿಗೆ ; ಈ ಪುಸ್ತಕ ತುಂಬಾ ಸುಂದರವಾಗಿ ಬರಬೇಕೆಂಬ ಹಂಬಲವನ್ನು ಹೊತ್ತು ಪರಿಷತ್ತಿನ ಸಿಬ್ಬಂದಿ ವರ್ಗದ ಗೌರಿಬಿದನೂರು ಶ್ರೀ ವಿ.ಎಲ್. ಶ್ರೀನಿವಾಸಲು ಅವರು ನನ್ನನ್ನೂ, ಪ್ರೆಸ್ಸಿನವರನ್ನೂ, ಪಡಿಯಚ್ಚು ಮಾಡುವವರನ್ನೂ ಗಳಿಗೆಗಳಿಗೆಯಲ್ಲಿಯೂ ಎಚ್ಚರಿಸಿದ್ದಾರೆ. ಈ ಮೂವ್ವರು ಮಿತ್ರರಿಗೆ ನಾನು ಆಭಾರಿಯಾಗಿದೇನೆ.

ಸ್ವತಃ ಶಿಲ್ಪಕಲಾವಿದರ ಮನೆತನದವರಾದ ಶ್ರೀ ಡಂಕಣ ಬ್ಲಾಕ್ ಮೇಕರ್ಸ್ ಅಂಡ್ ಡಿಸ್ಯೆನರ್ಸ್ ಅವರು ವೀರಗಲ್ಲುಗಳ ಬಗೆಗಿನ ಅಭಿಮಾನದಿಂದ ಪಡಿಯಚ್ಚುಗಳನ್ನು ಚೊಕ್ಕಟವಾಗಿ ಮಾಡಿಕೊಟ್ಟಿದ್ದಾರೆ.

ಮುದ್ರಣ ಕಲೆಯ ಅ. ಆ ತಿಳಿಯದ ನನ್ನ ದೌರ್ಬಲ್ಯವನ್ನು ಅರಿತ ಅಶ್ವಥ್ ಪ್ರಿಂಟರ್ಸ್ ಮಾಲಿಕರಾದ ಶ್ರೀ ಮಿಣಕನಗುರಿಕಿ ಎಂ. ದಿವಾಕರ ಅವರು ವಿಶೇಷವಾದ ಶ್ರದ್ಧಾಸಕ್ತಿಗಳಿಂದ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ್ದಾರೆ. ವೀರಗಲ್ಲುಗಳ ಛಾಯಾಚಿತ್ರಗಳನ್ನು ಮುದ್ರಿಸುವಲ್ಲಿ ಅವರು ವಿಶೇಷವಾದ ಶ್ರಮವನ್ನು ತೋರಿದ್ದಾರೆ. ಮಿತ್ರ ಎಂ. ದಿವಾಕರ್ ಅವರಿಗೂ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

12

ಈ ಪುಸ್ತಕವನ್ನು ಡಾ॥ ಬಿ.ಜಿ.ಎಲ್. ಸ್ವಾಮಿಯವರ ಮಧುರಸ್ಮೃತಿಗಾಗಿ ಅರ್ಪಿಸುತ್ತಿದ್ದೇನೆ. ಆ ಹಿರಿಯರು ನನ್ನಲ್ಲಿಟ್ಟಿದ್ದ ಪುತ್ರವಾತ್ಸಲ್ಯಕ್ಕೆ ನಾನು ಇನ್ನೇನು ತಾನೇ ಅವರಿಗೆ ಮಾಡಿಯೇನು ?

ಈ ಪುಸ್ತಕದ ಮುದ್ರಣದಲ್ಲಿ ಹಲವಾರು ಅಚ್ಚಿನ ಲೋಪದೋಷಗಳು ಇಣುಕಿವೆ. ಅವುಗಳನ್ನು ಮಾನ್ಯ ಓದುಗರು ಮನ್ನಿಸಬೇಕು. ಆಗಿರುವ ತಪ್ಪುಗಳಿಗೆ ನಾನು ಬಾಧ್ಯನೆ ಹೊರತು ಬೇರೆ ಯಾರೂ ಕಾರಣರಲ್ಲ. ತಪ್ಪುಗಳು ಸಣ್ಣವೇ ಇರಲಿ, ದೊಡ್ಡವೇ ಇರಲಿ ತಪ್ಪು ತಪ್ಪೇ, ಆ ಬಗ್ಗೆ ಎರಡು ಮಾತಿಲ್ಲ. ಸಹೃದಯರು ಆಗಿರುವ ತಪ್ಪುಗಳನ್ನು ನನ್ನ ಗಮನಕ್ಕೆ ತಂದಲ್ಲಿ, ಅವುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸುತ್ತೇನೆ.

ನನಗೆ ಮಾಹಿತಿ ಒದಗಿಸಿದ ಕೃತಿಗಳ, ಕೃತಿಕಾರರ, ವ್ಯಕ್ತಿಗಳ ಶ್ರಮವನ್ನು ಅದರ/ಅವರ ಹೆಸರನ್ನು ಸೂಚಿಸದೇ ಎಲ್ಲಿಯೂ ನಾನು ಬಳಸಿಕೊಂಡಿಲ್ಲ. ನನ್ನದೇ ಆಲೋಚನೆಗಳೆಂಬ ಭ್ರಮೆಯನ್ನು ಓದುಗರಲ್ಲಿ ಮೂಡಿಸುವ ಪ್ರಯತ್ನವನ್ನು ಮರೆತೂ ಮಾಡಿಲ್ಲ. ಅವರಿಗೆ ಸಲ್ಲಬೇಕಾದ ಗೌರವಾದರ ಗಳೊಡನೆ ಅವರ ಶ್ರಮವನ್ನು ಸಂಶೋಧಕ ವಿದ್ಯಾರ್ಥಿಯಾಗಿ ಬಳಸಿಕೊಂಡಿದ್ದೇನೆ.

ನನ್ನ ಸಂಶೋಧನಾ ಕಾರ್ಯಗಳಿಗೆ ಆರ್ಥಿಕವಾಗಿ ನೆರವು ನೀಡುತ್ತಲೇ ಬಂದಿರುವ ನನ್ನ ಪೂಜ್ಯ ತಂದೆಯವರ, ಆತ್ಮೀಯ ಸೋದರರ ಅಂತಃಕರಣ ನನ್ನ ಸಂಶೋಧನಾ ಪ್ರವೃತ್ತಿಗೆ ಇಂಬು ನೀಡಿದೆ.

ತಿಳಿದೋ, ತಿಳಿಯದೆಯೋ ಹಲವಾರು ವ್ಯಕ್ತಿಗಳನ್ನು, ಸಂಸ್ಥೆಗಳನ್ನು ಸ್ಮರಿಸದೇ ಹೋಗಿರಬಹುದು. ಆದರೆ ನನ್ನ ಅಧ್ಯಯನದ ಸಮಯದಲ್ಲಿ, ಈ ಪುಸ್ತಕದ ಮುದ್ರಣ ಸಮಯದಲ್ಲಿ ನೆರವಾದ ಎಲ್ಲಾ ಮಹನೀಯರುಗಳಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅವರೆಲ್ಲರ ಸಹಕಾರಕ್ಕೆ, ಸ್ನೇಹಕ್ಕೆ , ವಿಶ್ವಾಸಕ್ಕೆ, ಪ್ರತಿಯಾಗಿ ಏನನ್ನೂ ನೀಡಲಾರದವನಾಗಿದ್ದೇನೆ. ಆ ಎಲ್ಲಾ ಮಹನೀಯರ ಸಹಕಾರ ಈ ನಿಬಂಧವನ್ನು ಸಿದ್ಧಪಡಿಸಿದೆ ಎಂಬ ವಾಸ್ತವ ಸಂಗತಿಯನ್ನು ನಾನು ಬಲ್ಲವನಾಗಿದ್ದೇನೆ.

ಅಹಂಕರೋಮಿ ಇತಿ ವೃಥಾಭಿಮಾನಃ

ಆರ್. ಶೇಷಶಾಸ್ತ್ರಿ

ಎರಡು ಮಾತು

ಕಳೆದ ವರ್ಷಗಳಲ್ಲಿ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಪ್ರವಾಸ ಮಾಡಿದ ಸಂದರ್ಭಗಳಲ್ಲಿ ಹಲವಾರು ವೀರಗಲ್ಲುಗಳನ್ನು ಗಮನಿಸಿದ್ದೇನೆ. ಅಧ್ಯಯನ ಮಾಡಿದ್ದೇನೆ. ವೀರಗಲ್ಲುಗಳ ಬಗೆಗಿನ ನನ್ನ ಅಭಿಪ್ರಾಯಗಳು ಏನೂ ಬದಲಾಗದೇ ಉಳಿದಿವೆ. ಬದಲಾಗಿ ನನ್ನ ಅಂದಿನ ಹಲವಾರು ಅಭಿಪ್ರಾಯಗಳನ್ನು ದೃಢಪಡಿಸುವ ಹೆಚ್ಚಿನ ಮಾಹಿತಿಗಳು ದೊರೆತಿವೆ.

ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಪುಟಗಳಲ್ಲಿ, ಹಲವಾರು ಅಭಿನಂದನಾ ಗ್ರಂಥಗಳಲ್ಲಿ ಸಂಸ್ಮರಣ ಸಂಪುಟಗಳಲ್ಲಿ ಬಂದಿರುವ ವೀರಗಲ್ಲುಗಳ ಬಗೆಗಿನ ಅಥವಾ ಅದಕ್ಕೆ ಪರೋಕ್ಷವಾಗಿ ಸಂಬಂಧಿಸಿದ ಬಹುಪಾಲು ಲೇಖನಗಳನ್ನು ಶ್ರದ್ಧೆಯಿಂದ ಗಮನಿಸುತ್ತಾ ಬಂದಿದ್ದೇನೆ. ಅವು ಕೆಲವು ಸಂದರ್ಭಗಳಲ್ಲಿ ನನ್ನ ಅಭಿಪ್ರಾಯಗಳನ್ನು ಸಮರ್ಥನೆ ಮಾಡುತ್ತವೆ. ಅಥವಾ ಅದಕ್ಕೆ ಮತ್ತಷ್ಟು ಪೋಷಕ ಸಾಮಗ್ರಿಯನ್ನು ನೀಡುತ್ತವೆ. ನನ್ನ ತಿಳಿವಳಿಕೆಗೆ ಬಂದಂತೆ, ನನ್ನ ಈ ಸಂಶೋಧನಾ ಗ್ರಂಥದಲ್ಲಿನ ಅಭಿಪ್ರಾಯಗಳನ್ನು, ತಪ್ಪು, ಸರಿಯಲ್ಲ ಎಂದು ಸಾಬೀತು ಪಡಿಸುವ ಅಭಿಪ್ರಾಯಗಳು ಹೊರಬಂದಿಲ್ಲ.

ಆರ್. ಶೇಷಶಾಸ್ತ್ರಿ

ಸಂಕ್ಷೇಪಗಳು

ಪತ್ರಿಕೆಗಳು ಮತ್ತು ಪುಸ್ತಕಗಳು

B.K.I.	-	Bombay Karnataka Inscriptions
E.C	-	Epigraphia Carnatica
E. I	-	Epigraphia Indica
J.I.H.	-	Journal of Indian History
J.K.U.S.S	-	Journal of Karanataka University, Social Science
K.I.	-	Karnataka Inscriptions
M.A.R	-	Mysore Archaeological Report
Q.J.M.S	-	Quarterly Journal of the Mythic Society
S.I.H.C	-	Studies in Indian History and culture
S.I.I	-	South Indian Inscriptions

ತಾಲ್ಲೂಕಿನ ಹೆಸರುಗಳು

Ag- ಅರಕಲಗೂಡು

Ak- ಅರಸಿಕೆರೆ

An- ಆನೇಕಲ್

Bg- ಬಾಗೇಪಲ್ಲಿ

Bi- ಬೇಲೂರು

Bn- ಬೆಂಗಳೂರು

Bp- ಬೌರಿಂಗ್ ಪೇಟೆ

CB- ಚಿಕ್ಕಬಳ್ಳಾಪುರ

Cd- ಚಿತ್ರದುರ್ಗ

Cg- ಕೊಡಗು

Ch- ಚಾಮರಾಜನಗರ

Ci- ಚನ್ನಗಿರಿ

Ck- ಚಿಕ್ಕನಾಯಕನಹಳ್ಳಿ

CI- ಚಳ್ಳಕೆರೆ

Cm- ಚಿಕ್ಕಮಗಳೂರು

Cn- ಚನ್ನರಾಯಪಟ್ಟಣ

Cp- ಚನ್ನಪಟ್ಟಣ

Ct- ಚಿಂತಾಮಣಿ

DB- ದೊಡ್ಡಬಳ್ಳಾಪುರ

Dg- ದಾವಣಗೆರೆ

Dv- ದೇವನಹಳ್ಳಿ

Gb- ಗುಬ್ಬಿ

15

Gd- ಗೌರಿಬಿದನೂರು
Gu- ಗುಂಡ್ಲುಪೇಟೆ
Hg- ಹೆಗ್ಗಡದೇವನಕೋಟೆ
Hk- ಹೊಳಲ್ಕೆರೆ
Hl- ಹೊನ್ನಾಳಿ
HN- ಹೊಳೆಯನರಸಿಪುರ
Hn- ಹಾಸನ
Hr- ಹಿರಿಯೂರು
Hs- ಹುಣಸೂರು
Jl- ಜಗಳೂರು
Kd- ಕಡೂರು
Kg- ಕುಣಿಗಲ್
Kl- ಕೋಲಾರ
Kn- ಕನಕಪುರ
Kp- ಕೊಪ್ಪ
Kr- ಕೃಷ್ಣರಾಜಪೇಟೆ
Ma- ಮಾಗಡಿ
Mb- ಮುಳುಬಾಗಿಲು
Md- ಮಂಡ್ಯ
Mg- ಮೂಡಿಗೆರೆ
Mi- ಮಧುಗಿರಿ
Mj- ಮಂಜರಾಬಾದ್
Mk- ಮೊಳಕಾಲ್ಮೂರು
Ml- ಮಳವಳ್ಳಿ
Mr- ಮಾಲೂರು
My- ಮೈಸೂರು
Ng- ನಾಗಮಂಗಲ
Nj- ನಂಜನಗೂಡು
Nl- ನೆಲಮಂಗಲ
Nr- ನಗರ
Pg- ಪಾವಗಡ
Pr- ಪಿರಿಯಾಪಟ್ಟಣ
Sa- ಸಾಗರ
Sb- ಸೊರಬ
SB- ಶ್ರವಣಬೆಳ್ಗೊಳ
Sd- ಶಿಡ್ಲಘಟ್ಟ
Sg- ಶೃಂಗೇರಿ
Sh- ಶಿವಮೊಗ್ಗ
Si- ಶಿರಾ
Sk- ಶಿಕಾರಿಪುರ
Sp- ಶ್ರೀನಿವಾಸಪುರ
Sr- ಶ್ರೀರಂಗಪಟ್ಟಣ
Tk- ತರೀಕೆರೆ
Tl- ತೀರ್ಥಹಳ್ಳಿ
Tm- ತುಮಕೂರು
Tn- ಟಿ. ನರಸೀಪುರ
Tp- ತಿಪಟೂರು
Yd- ಯಡತೊರೆ
Yl- ಯಳಂದೂರು

ಪರಿವಿಡಿ

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಶಾಸನಗಳ ಅಧ್ಯಯನವನ್ನು

೧) ಶಾಸನ ಪರಿವೀಕ್ಷಣೆ : (ಶಾಸನ ಪಾಠ ಸಂಪಾದನೆ ಮತ್ತು ಪ್ರಕಟಣೆ

೨) ಶಾಸನಗಳ ವಿಶ್ಲೇಷಣೆ ; ಎಂಬುದಾಗಿ ಎರಡು ಸ್ತರಗಳಲ್ಲಿ ಗುರುತಿಸಬಹುದು.

ಶಾಸನಗಳ ಪರಿವೀಕ್ಷಣಾಕಾರ್ಯ ಸಂಪೂರ್ಣವಾಗಿ ಮತ್ತು ಸಮರ್ಪಕವಾಗಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ನಡೆದಿದೆ ಎಂಬುದಾಗಿ ಹೇಳಬರುವುದಿಲ್ಲ. ಆದರೂ ಗಮನಾರ್ಹವಾದ ಮಟ್ಟಿಗೆ ನಡೆದಿದೆ. ಎರಡನೆಯ ಸ್ತರದ ಬಗ್ಗೆ ಹೇಳುವುದಾದರೆ ಕರ್ನಾಟಕದ ರಾಜಕೀಯ ಇತಿಹಾಸವನ್ನು ಬರೆಯುವಲ್ಲಿ, ಶಾಸನಗಳಿಂದ ದೊರೆಯಬಹುದಾದ ಬಹುಪಾಲು ಮಾಹಿತಿಯನ್ನು ವಿದ್ವಾಂಸರು ಈಗಾಗಲೇ ಉಪಯೋಗಿಸಿಕೊಂಡಿದ್ದಾರೆ. ಶಾಸನಗಳನ್ನು ಆಧರಿಸಿ ಬಂದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ ಕೃತಿಗಳು ಕಡಿಮೆಯಾದರೂ ಮಹತ್ವದ್ದಾಗಿವೆ. ನಮ್ಮ ನಾಡಿನ ಜನರ ಇತಿಹಾಸವನ್ನು ವಿವಿಧ ಮುಖಗಳಿಂದ ಅಧ್ಯಯನ ಮಾಡುವ ಪ್ರತಿಯೊಬ್ಬ ಸಂಶೋಧಕನಿಗೂ ಶಾಸನಗಳು ಇನ್ನೂ ಅಕ್ಷಯವಾದ ಸಾಮಗ್ರಿಗಳನ್ನು ಒದಗಿಸುತ್ತವೆ.

ಸಹಜವಾಗಿ ಇತಿಹಾಸದ ಕಲ್ಪನೆ ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತಾ ಬರುತ್ತದೆ. ಹಿಂದಿನ ತಲೆಮಾರಿನವರು ಬರೆದ ಇತಿಹಾಸಕ್ಕಿಂತಲೂ ವಿಭಿನ್ನವಾದ ದೃಷ್ಟಿಕೋನದಿಂದ ಚಾರಿತ್ರಿಕ ದಾಖಲೆಗಳನ್ನು ಮುಂದಿನ ತಲೆಮಾರು ವಿಶ್ಲೇಷಿಸತೊಡಗುತ್ತದೆ. ಈ ಮೂಲಕ ಇತಿಹಾಸದ ಪುನಾರಚನೆಯಾಗುತ್ತದೆ. ಇದು ಎಲ್ಲ ದೇಶಗಳ ಇತಿಹಾಸದ ಪುನಾರಚನೆಯ ಬಗ್ಗೆಯೂ ಹೇಳಬಹುದಾದ ಮಾತೇ ಆಗಿದೆ.

ಹಿಂದಿನ ತಲೆಮಾರಿನವರಿಗಿಂತಲೂ ವಿಭಿನ್ನವಾದ ದೃಷ್ಟಿಯಿಂದ ಕರ್ನಾಟಕ ಶಾಸನಗಳಲ್ಲಿ ದೊರೆಯುವ ಮೂಲಸಾಮಗ್ರಿಗಳನ್ನು ವಿಶ್ಲೇಷಿಸಿದ ಯಶಸ್ಸು ಡಾ. ಎಂ. ಚಿದಾನಂದಮೂರ್ತಿ ಅವರದು. ಶ್ರೀಯುತರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯ ಮೊದಲಿಗೆ

ಹೇಳುವ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಔಚಿತ್ಯಪೂರ್ಣವೆಂದನ್ನಿಸುತ್ತದೆ. "ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೇ ಪ್ರಧಾನವಾಗಿದ್ದು, ಗ್ರಂಥದ ಕೊನೆಯಲ್ಲಿ ಆ ನಾಡಿನ ಕಲೆ, ಧರ್ಮ ಇತ್ಯಾದಿಗಳನ್ನು ಕುರಿತ ವಿಷಯಗಳು ಅನುಬಂಧದ ರೂಪದಲ್ಲಿರುವುದುಂಟು. ಅಥವಾ ಅವುಗಳನ್ನು ನಿರೂಪಿಸುವ ಕೆಲವು ಅಧ್ಯಾಯಗಳು ಬಂದಿರುವುದುಂಟು. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನ, ಹೀಗೆ ಬದುಕಿದ ಜನರ ಒಂದು ಗಣನೀಯ ಭಾಗ ಆ ನಾಡನ್ನಾಳಿದ ರಾಜ ಸಮೂಹ, ಒಂದು ದೇಶದ ನಿಜವಾದ ಇತಿಹಾಸವೇಂದರೆ ಆ ಜನತೆಯ ಇತಿಹಾಸ. ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅದರ ಜೀವನ ಸಮಸ್ಯೆಗಳು, ಅದರ ಜೀವನ ಮೌಲ್ಯಗಳು – ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ"[೧] ಎಂಬ ಚಿದಾನಂದ ಮೂರ್ತಿಯವರ ಅಭಿಪ್ರಾಯವನ್ನೇ ನಮ್ಮ ಈ ಅಧ್ಯಯನದ ಬಗ್ಗೆಯೂ ಹೊಂದಿದ್ದೇವೆ.

ಈವರೆಗೆ ಶಾಸನಗಳನ್ನು ಮೂಲಸಾಮಗ್ರಿಯಾಗಿಟ್ಟುಕೊಂಡು ಹೊರಬಂದಿರುವ ಇತಿಹಾಸ ಗ್ರಂಥಗಳನ್ನು ಗಮನಿಸಿದಾಗ, ಅವರೆಲ್ಲರೂ ವೀರಗಲ್ಲುಗಳ ಪಾಠವನ್ನು ತಮ್ಮ ಉದ್ದೇಶದ ಚೌಕಟ್ಟಿನ ಪರಿಮಿತಿಯಲ್ಲಿ ಬಳಸಿಕೊಂಡಿರುವ ಅಂಶ ತಿಳಿದುಬರುತ್ತದೆ. ಯುದ್ಧಗಳ ಬಗ್ಗೆ ಪ್ರಸ್ತಾಪ ಮಾಡುವಾಗ; ಕೆಲವೊಮ್ಮೆ ಉಡುಪುಗಳ ಬಗ್ಗೆ ಪ್ರಸ್ತಾಪ ಮಾಡುವಾಗ, ಕ್ವಚಿತ್ತಾಗಿ ವೀರಗಲ್ಲುಗಳ ಪಾಠ ಮತ್ತು ಶಿಲ್ಪವನ್ನು ಮೂಲ ಸಾಮಗ್ರಿಗಳನ್ನಾಗಿ ಅವರು ಬಳಸಿಕೊಂಡಿರುವುದನ್ನು ಗಮನಿಸಬಹುದು. ರಾಜಕೀಯ ದೃಷ್ಟಿಯಿಂದ ಮಹತ್ವದ್ದಾಗಿರುವ ವೀರಗಲ್ಲುಗಳ ಪಾಠವನ್ನು ಇತಿಹಾಸಕಾರರು ಯಥೇಚ್ಛವಾಗಿ ಬಳಸಿಕೊಂಡಿರುವುದುಂಟು.

ವೀರಗಲ್ಲುಗಳ ಪಾಠ ಮತ್ತು ಶಿಲ್ಪಗಳ ಮಹತ್ವವನ್ನು ಗುರುತಿಸಿ ಆ ಬಗ್ಗೆ ಕೆಲವಾರು ಮಹತ್ವದ ಅಂಶಗಳನ್ನು ಹೊರಗೆಳೆದ ಮೊದಲ ಪ್ರಯತ್ನ ಡಾ. ಎಂ. ಚಿದಾನಂದ ಮೂರ್ತಿಯವರ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ"ದ "ಯುದ್ಧಕಲೆ" ಎಂಬ ಅಧ್ಯಾಯದಲ್ಲಿ ನಡೆದಿದೆ. ತಮ್ಮ ಅಧ್ಯಯನದ ಉದ್ದೇಶ ಮತ್ತು ಪರಿಮಿತಿಯಲ್ಲಿ ಅವರು ವೀರಗಲ್ಲುಗಳ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ಅವರ ಕೊಡುಗೆ ಎಂದರೆ – ವೀರಗಲ್ಲುಗಳ ಪಾಠ ಮತ್ತು ಶಿಲ್ಪವನ್ನು ಮುಂಬರುವ ಸಂಶೋಧಕರು ಹೇಗೆ ಗುರುತಿಸಬೇಕೆಂಬ ದಾರಿಯನ್ನು ತೋರಿಸಿರುವುದು.

ಇದೇ ಸಂದರ್ಭದಲ್ಲಿ ಡಾ. ಎಂ. ಚಿದಾನಂದ ಮೂರ್ತಿಯವರು ಎಳೆಯರಿಗಾಗಿ ಬರೆದಿರುವ 'ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು' ಎಂಬ ಪುಸ್ತಕ ಪರಿಶೀಲನೆಗೆ ಯೋಗ್ಯವಾದು

---

೧. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧

ದಾಗಿದೆ. ಆ ಪುಸ್ತಕ ಎಳೆಯರಿಗಾಗಿಯೇ ಬರೆಯಲಾಗಿದ್ದರೂ ಹಲವಾರು ದೃಷ್ಟಿಗಳಿಂದ ಮಹತ್ವದ್ದೆನ್ನಿಸಿಕೊಂಡಿದೆ. ಅಲ್ಲಿ ಮೊದಲಬಾರಿಗೆ ವೀರಗಲ್ಲುಗಳ ವಿಂಗಡಣೆ ಮತ್ತು ವೀರಗಲ್ಲುಗಳ ಶಿಲ್ಪದ ಬಗ್ಗೆ ಪ್ರಸ್ತಾಪವಾಗಿದೆ. ಹಲವಾರು ಅಪ್ರಕಟಿತ ವೀರಗಲ್ಲುಗಳ ಛಾಯಾಚಿತ್ರಗಳನ್ನು ನೀಡಿ ಅವುಗಳಿಗೆ ವಿವರಣೆಗಳನ್ನು ನೀಡಲಾಗಿದೆ.[೨]

ಶ್ರೀ ಆರ್. ನರಸಿಂಹಾಚಾರ್ಯರು ಪ್ರಕಟಿಸಿದ ಮೈಸೂರು ಸರಕಾರದ ಪ್ರಾಕ್ತನ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಶಾಸನ ಪಾಠವಿರುವ ಮತ್ತು ಶಾಸನ ಪಾಠವಿಲ್ಲದ ವೀರಗಲ್ಲುಗಳ ಬಗ್ಗೆ ಉಪಯುಕ್ತವಾದ ಮಾಹಿತಿಯ ದೊರೆಯುತ್ತದೆ. ಶಾಸನರಹಿತ ವೀರಗಲ್ಲುಗಳ ಶಿಲ್ಪದ ಬಗ್ಗೆ ಗಮನಹರಿಸಿದವರಲ್ಲಿ ಶ್ರೀ ಆರ್. ನರಸಿಂಹಾಚಾರ್ಯರು ಮುಖ್ಯರು.

ಕರ್ನಾಟಕದ ಸ್ಮಾರಕ ಶಿಲೆಗಳ ಶಿಲ್ಪದ ಮಹತ್ವವನ್ನು ಗಮನಿಸಿ ವಿಶ್ಲೇಷಣೆ ಮಾಡಿದವರು ಎಚ್. ಕಜಿನ್ಸ್. ತಮ್ಮ 'Chalukyan Architecture' ಎಂಬ ವಿದ್ಯುತ್ ಪೂರ್ಣಗ್ರಂಥದಲ್ಲಿ ಶಾಸನಗಳ ಶಿಲ್ಪ ಮತ್ತು ವೀರಗಲ್ಲುಗಳ ಶಿಲ್ಪದ ಬಗ್ಗೆ ಸ್ಥೂಲವಾಗಿ ವಿವೇಚನೆ ಮಾಡಿದ್ದಾರೆ. ವೀರಗಲ್ಲುಗಳ ಶಿಲ್ಪದ ಮೂಲ ಅಂಶಗಳನ್ನು ಗಮನಿಸುವಲ್ಲಿ ಅವರು ಯಶಸ್ವಿ ಪ್ರಯತ್ನವನ್ನು ಮಾಡಿದ್ದಾರೆ.[೩] ೧೯೪೧ರಲ್ಲಿ ಪ್ರಕಟವಾದ ಬಿ.ಎಂ.ಶ್ರೀಯವರ ಸಂಭಾವನಾ ಗ್ರಂಥವಾದ 'ಸಂಭಾವನೆ'ಯಲ್ಲಿ "ವೀರಗಲ್ಲು–ಮಾಸ್ತಿಗಲ್ಲು" ಎಂಬ ಲೇಖನವನ್ನು ಶ್ರೀ. ತೀ. ತಾ. ಶರ್ಮ ಅವರು ಬರೆದಿದ್ದಾರೆ.[೪] ೧೯೪೬ರಲ್ಲಿ ಪ್ರಕಟವಾದ ಡಾ. ರಂ. ಶ್ರೀ ಮುಗಳಿ ಅವರ 'Heritage of Karnataka'ಎಂಬ ಕೃತಿಯಲ್ಲಿ ಪ್ರಾಚೀನ ಕರ್ನಾಟಕದ ಸೈನಿಕ ಜೀವನವನ್ನು ಮತ್ತು ಸಂಘಟನೆಯನ್ನು ಕುರಿತಂತೆ ಮೂರು ಅಧ್ಯಾಯಗಳು ಇವೆ. ಈ ಅಧ್ಯಾಯಗಳಲ್ಲಿ ಡಾ. ರಂ. ಶ್ರೀ ಮುಗಳಿಯವರು ವೀರಗಲ್ಲುಗಳು ಮತ್ತು ಇತರ ಮೂಲ ಸಾಮಗ್ರಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಚೀನ ಕರ್ನಾಟಕದ ಸೈನಿಕ ಜೀವನದ ಸ್ಥೂಲ ಚಿತ್ರವನ್ನು ತಮ್ಮ ಮಿತಿಯಲ್ಲಿ ಕೊಡುವ ಸ್ತುತ್ಯ ಪ್ರಯತ್ನ ಮಾಡಿದ್ದಾರೆ.[೫]

೧೯೭೫ರ ಜನವರಿ ೩ರಿಂದ ೫ನೇ ತಾರೀಖಿನವರೆಗೆ ಪ್ರಾಕ್ತನಶಾಸ್ತ್ರ ಮತ್ತು ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇಲ್ಲಿ ನಡೆದ 'ಅಂತರಾಷ್ಟ್ರೀಯ ಸ್ಮಾರಕ ಶಿಲೆಗಳ ವಿಚಾರ ಸಂಕಿರಣ' ಗಮನಾರ್ಹವಾದುದು. ಸ್ಮಾರಕ ಶಿಲೆಗಳ ಬಗ್ಗೆ ಅಧ್ಯಯನ ಮಾಡಿದ ಭಾರತದ ಬಹುಪಾಲು ಎಲ್ಲಾ ಪ್ರಾಂತ್ಯಗಳ ವಿದ್ವಾಂಸರೂ ಈ ವಿಚಾರ ಸಂಕಿರಣದಲ್ಲಿ ಲೇಖನಗಳನ್ನು

೨. ಎಂ. ಚಿದಾನಂದಮೂರ್ತಿ : ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು
೩. H. Cousens : Chalukyan Architecture of the Kanarese District. A.S.I New impl-xlii, 1931
೪. ತಿ.ತಾ. ಶರ್ಮ : 'ವೀರಗಲ್ಲು –ಮಾಸ್ತಿಗಲ್ಲು' (ಸಂಭಾವನೆ) ಪು. ೧೫೪–೧೬೪
೫. R.S. Mugali : The Heritage of Karnataka

ಮಂಡಿಸಿದರು. ಸ್ಮಾರಕ ಶಿಲೆಯ ವಿವಿಧ ಪ್ರಕಾರಗಳು, ಅವುಗಳ ವಿಶ್ಲೇಷಣೆ, ಅವುಗಳ ಸಾಮಾಜಿಕ ಮಹತ್ವ ಮುಂತದ ವಿವಿಧ ದೃಷ್ಟಿಗಳಿಂದ ಆ ಲೇಖನಗಳು ಕೂಡಿದ್ದವೆಂದು ಹೇಳಬಹುದು. ಆ ಸಂಕಿರಣದಲ್ಲಿ ಮಂಡಿಸಲಾದ ಎಲ್ಲಾ ಲೇಖನಗಳೂ ಅಚ್ಚಾಗಿ ಹೊರಬಂದಾಗ ಅದೊಂದು ಸ್ಮಾರಕ ಶಿಲೆಗಳ ಅಧ್ಯಯನಕ್ಕೆ ಆಕರ ಗ್ರಂಥವಾಗುತ್ತದೆ.

ತಮಿಳು ನಾಡು ಸರಕಾರದ ಪ್ರಾಚ್ಯ ಇಲಾಖೆಯವರು ೧೯೭೪ರಲ್ಲಿ ಇದೇ ರೀತಿಯ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ಆ ಸಂಕಿರಣದಲ್ಲಿ ಮಂಡಿಸಲಾದ ಎಲ್ಲ ಲೇಖನಗಳು ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾದ ಶ್ರೀ ನಾಗಾಸ್ವಾಮಿಯವರ ಸಂಪಾದಕತ್ವದಲ್ಲಿ ಹೊರಬಂದಿದೆ. ಅವುಗಳಲ್ಲಿ ಬಹುಪಾಲು ಲೇಖನಗಳು ತಮಿಳು ಭಾಷೆಯಲ್ಲಿವೆ. ಆದ್ದರಿಂದ ಅವುಗಳ ಸಂಪೂರ್ಣ ಉಪಯೋಗವನ್ನು ಪಡೆಯಲಾಗಲಿಲ್ಲವೆಂದು ಹೇಳಬೇಕು.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದಿಂದ ಪ್ರಕಟವಾಗಿರುವ ಬಿ.ಆರ್. ಹಿರೇಮಠ ಅವರ 'ವೀರಗಲ್ಲುಗಳು' ಎಂಬ ಪುಸ್ತಕವನ್ನು ಇಲ್ಲಿ ಸ್ಮರಿಸಬಹುದು. ಈ ಪುಸ್ತಕ ಅಂತಹ ಮಹತ್ವದ ಅಂಶವನ್ನು ಹೊಂದಿಲ್ಲ. ಇದು ವ್ಯಾಸಂಗ ವಿಸ್ತರಣ ವಿಭಾಗದವರು ನಡೆಸಿದ ಪ್ರಚಾರ ಭಾಷಣದ ಪುಸ್ತಿಕೆ.[೬] ಡಾ. ಎಂ. ಎಂ. ಕಲುಬುರ್ಗಿಯವರು, ತಾವು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ನೀಡಿದ ಉಪನ್ಯಾಸಗಳನ್ನು 'ಸಮಾಧಿ –ಬಲಿದಾನ–ವೀರಮರಣ ಸ್ಮಾರಕಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ವೀರಗಲ್ಲುಗಳ ಬಗ್ಗೆ ಉಪಯುಕ್ತವಾದ ಮಾಹಿತಿಗಳು ದೊರೆಯುತ್ತವೆ. ಗತಕಾಲದ ಬದುಕಿನ ವಿವರಗಳನ್ನು ತಿಳಿಯುವಲ್ಲಿ ನೆರವಾಗುವ ಎಲ್ಲಾ ಮೂಲಸಾಮಗ್ರಿಗಳನ್ನು ತಮ್ಮ ಇತಿಮಿತಿಗಳಲ್ಲಿ ಸಂಗ್ರಹಿಸಿ ಅಧ್ಯಯನ ಮಾಡಿ ಹಲವಾರು ಅನುಮಾನಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮೊದಲ ಬಾರಿಗೆ ಹಲವಾರು ಉತ್ತಮ ವೀರಗಲ್ಲುಗಳ ಛಾಯಾಚಿತ್ರಗಳು ಈ ಕೃತಿಯಲ್ಲಿ ಬೆಳಕು ಕಂಡಿರುವುದು ಈ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿವೆ.[೭]

ಇದುವರೆಗೆ ಕರ್ನಾಟಕದ ವೀರಗಲ್ಲುಗಳನ್ನೇ ಮೂಲ ಸಾಮಗ್ರಿಗಳನ್ನಾಗಿ ಸ್ವೀಕರಿಸಿ ವೀರಗಲ್ಲುಗಳ ಸಾಂಸ್ಕೃತಿಕ ಅಧ್ಯಯನ ನಡೆದಿಲ್ಲ. ವೀರಗಲ್ಲುಗಳ ಯಾವ ವಿಷಯವನ್ನು ವಾಚ್ಯವಾಗಿ ಹೇಳುತ್ತವೆಯೋ ಅದಕ್ಕೂ ಮಿಗಿಲಾಗಿ ಧ್ವನಿಪೂರ್ಣವಾಗಿ ಅವು ಹೇಳುವ ಅಥವಾ ಅವುಗಳಿಂದ ಧ್ವನಿತವಾಗುವ ಜೀವನ ಮೌಲ್ಯಗಳು ಮಹತ್ವದ್ದಾಗಿವೆ. "ಇತಿಹಾಸ ಎನ್ನುವುದು ಕೇವಲ ರಾಜ ಮಹಾರಾಜರ ಚೇಷ್ಟೆ ಕುಚೇಷ್ಟೆ ಅವರಿಗೂ ಇವರಿಗೂ ನಡುವೆ ನಡೆದು ಹೋದ ಹೋರಾಟಗಳ,

೬. ಬಿ.ಆರ್. ಹಿರೇಮಠ : ವೀರಗಲ್ಲುಗಳು

೭. ಎಂ.ಎಂ. ಕಲಬುರ್ಗಿ : ಸಮಾಧಿ –ಬಲಿದಾನ–ವೀರಮರಣ ಸ್ಮಾರಕಗಳು

ಅವುಗಳಿಂದ ಪರಿಣಮಿಸಿದ ಜಯಾಪಜಯ ಕ್ರಮಪಟ್ಟಿ ಮಾತ್ರವಲ್ಲ ; ಅದು ನಮ್ಮ ಪೂರ್ವಜರ, ಅಂದರೆ ನಮ್ಮಂತಹ ಆದರೆ ನಮಗೂ ಹಿಂದೆ ಬಾಳಿ ಬದುಕಿದ ಜನಸಾಮಾನ್ಯರ ಒಪ್ಪುತಪ್ಪುಗಳ ಪಟ್ಟಿ, ಒಂದು ಅಮೂಲ್ಯ ಪಠ್ಯಪುಸ್ತಕ, ಶತಮಾನಗಳ ಅವಧಿಯಲ್ಲಿ ನಮ್ಮ ಪೂರ್ವಜರು ಕಟ್ಟಿ ಬೆಳೆಸಿದ ಸಂಪ್ರದಾಯಗಳೂ, ಕಟ್ಟು ಕಟ್ಟಳೆಗಳೂ ನಮ್ಮ ಇಂದಿನ ಜನಾಂಗದ ಹುಟ್ಟು ಗುಣಗಳ ಬುನಾದಿಗಳು ; ನಮ್ಮ ಆಸೆ ಆಕಾಂಕ್ಷೆಗಳ, ಶಕ್ತಿ ಸಾಮರ್ಥ್ಯಗಳ ಉದ್ಭವ ಸ್ಥಾನಗಳು. ಹೀಗಾಗಿ ಯಾವುದೇ ಒಂದು ರಾಷ್ಟ್ರದ ಇತಿಹಾಸವು ಆ ನಾಡಿನ ಪರಂಪರಾನುಗತ ಸಾಂಪ್ರದಾಯಿಕತೆಯನ್ನು, ಅದರ ಒಳಿತು ಕೆಡುಕುಗಳನ್ನು ಜನಸಾಮಾನ್ಯರಿಗೆ ತಿಳಿಯಗೊಡುವ ಅಮೂಲ್ಯವಾದೊಂದು ಸಾಧನವೆಂದು ತಿಳಿಯಬೇಕು"[೮] ಈ ಒಂದು ವಿಚಾರದ ಹಿನ್ನೆಲೆಯಲ್ಲಿ ವೀರಗಲ್ಲುಗಳಿಂದ ತಿಳಿದು ಬರುವ ಮಾಹಿತಿಯನ್ನು ವಿಶ್ಲೇಷಿದಾಗ ನಮ್ಮ ನಾಡಿನ ಜನರ ಕೆಲವಾರು ಮನೋಧರ್ಮಗಳ ಪರಿಚಯ ನಮಗಾಗುತ್ತದೆ. ವೀರಗಲ್ಲು ಪ್ರತಿನಿಧಿಸುವ ವೀರನ ಸಾವಿಗೆ ಕಾರಣವಾದ ಹೋರಾಟವನ್ನು ಪರಿಚಯಿಸಿ ಕೊಡುತ್ತದೆ. ಮಡಿದವನ ಜೀವನ ಮೌಲ್ಯವನ್ನು ತಿಳಿಯುವಲ್ಲಿ ನೆರವಾಗುತ್ತದೆ. ವೀರಗಲ್ಲುಗಳ ವೀರರು ತಮ್ಮ ಅರಸರ ಪರವಾಗಿ ಹೋರಾಡಿ ಮಡಿದವರು ಮತ್ತು ಸಂಘ ಜೀವಿಯಾದ ಮಾನವನ ಕರ್ತವ್ಯಗಳನ್ನು ಸಹಜವೆಂಬಂತೆ ಭಾವಿಸಿ ಪಾಲಿಸಿದ ಮಾನವ ಶ್ರೇಷ್ಠರಾಗಿದ್ದಾರೆ. ಅವರು ಮಾಡಿದ ಹೋರಾಟ ಇಂದಿನ ನಮ್ಮ ದೃಷ್ಟಿಯಲ್ಲಿ ಏನಾದರೂ ಆಗಿರಲಿ ಸಮಾಜದ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವುದರಲ್ಲಿ ಸ್ವಾರ್ಥವನ್ನು ಬಗೆಯದೆ, ಜೀವನದ ಹಂಗನ್ನು ತೊರೆದ ಅವರ ಧೀಮಂತಿಕೆ ಮೆಚ್ಚತಕ್ಕದ್ದಾಗಿದೆ. ಅವರ ಪರಾಕ್ರಮ ಕೇವಲ ಪಶುಬಲವಾಗಿರದೆ ಸಾಮಾಜಿಕನಿಷ್ಠೆ, ಸ್ವಾಮಿಭಕ್ತಿ, ಸ್ವಾಭಿಮಾನಗಳಿಂದ ಕೂಡಿದುದಾಗಿದೆ. ಇಲ್ಲಿ ಸಮಾಜದ ಮತ್ತೊಂದು ಮುಖವನ್ನು ಗಮನಿಸಬೇಕಾದುದು ಅನಿವಾರ್ಯ. ಸಣ್ಣ ಪುಟ್ಟ ಕಾರಣಗಳಿಗಾದರೂ ಹೊಡೆದಾಡುವ ಜನರ ಪ್ರವೃತ್ತಿ, ಅಧಿಕಾರದ ಮದದಿಂದ ಕಿರುಕುಳ ಕೊಡುವ ಅಧಿಕಾರಶಾಹಿ ಮನೋಧರ್ಮ, ಅವಕಾಶ ದೊರೆಯಿತೆಂದು ಅಬಲೆಯರ ಮೇಲೆರಗುವ ಕಾಮುಕರ ಕಾಮುಕತೆ ಮುಂತಾದ ಸಮಾಜ ವಿರೋಧಿ ಚಟುವಟಿಕೆಗಳ ಪರಿಚಯವೂ ಈ ವೀರಗಲ್ಲುಗಳಿಮದ ಆಗುತ್ತದೆ. ಇಂಥವರನ್ನು ಎದುರಿಸಿ ಮಡಿದವರು ವೀರಗಲ್ಲುಗಳ ವೀರರು.

ಈ ಎಲ್ಲ ದೃಷ್ಟಿಗಳಿಂದ ನಮ್ಮ ಜನರನ್ನು ಅರಿತುಕೊಳ್ಳುವಲ್ಲಿ ವೀರಗಲ್ಲುಗಳ ಪಾಠ ಮತ್ತು ಶಿಲ್ಪ ಇವೆರಡೂ ನೆರವಾಗುತ್ತವೆ. ಈ ರೀತಿ ನಮ್ಮ ಜನರನ್ನು ಅರಿಯುವ ಪ್ರಯತ್ನ ಈವರೆಗೆ ಕರ್ನಾಟಕದ ವೀರಗಲ್ಲುಗಳನ್ನು ಆಧರಿಸಿ ಯಾರು ಮಾಡಿಲ್ಲದ ಕಾರಣ ಈ ರೀತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಅವಶ್ಯಕತೆ ಕಂಡು ಬಂದಿತು. ಏಕೆಂದರೆ "ಮಾನವನ ಜೀವನ ಕಥೆಯು ಪರಸ್ಪರ ಸಂಬಂಧವಿಲ್ಲದ ಬಿಡಿ ಬಿಡಿ ತಲೆಮಾರುಗಳ ಚಾರಿತ್ರಿಕ ಅಧ್ಯಾಯಗಳ

೮. ಕೆ.ವಿ. ರಮೇಶ್ : ಕರ್ನಾಟಕ ಶಾಸನ ಸಮೀಕ್ಷೆ. ಪು. ೭೩–೭೪

ಸಂಕಲನವಲ್ಲ ; ಅದೊಂದು ಧಾರಾವಾಹಿ ಕಥಾನಕ. ಅದರ ಆದಿಯು ಇತಿಹಾಸದ ಬೆಳಕಿನಿಂದಾಚೆಗಿನ ಅಜ್ಞಾನದ ಕತ್ತಲಲ್ಲಿ ಅವಿತುಕೊಂಡಿದೆ ; ಅದಕ್ಕೆ ಕೊನೆಯಿರುವುದೋ ಇಲ್ಲವೋ ಹೇಳುವುದು ಸಾಧ್ಯವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಗತಕಾಲದ ಅರಿವು ವರ್ತಮಾನಕ್ಕೆ ದಾರಿದೀವಿಗೆಯಂತೆ ; ಆ ಅರಿವು ಇದ್ದರೆ ಮಾತ್ರ ನಾವು ಮುಂದಿನ ಪೀಳಿಗೆಯವರಿಗೆ ಸರಿಯಾದ ಮಾರ್ಗ ತೋರಿಸ ಬಲ್ಲೆವು."[೯]

ವೀರಗಲ್ಲುಗಳ ಪಾಠ ಮತ್ತು ಶಿಲ್ಪವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಅವುಗಳಿಂದ ತಿಳಿದು ಬರುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಗುರುತಿಸಿ ವಿಶ್ಲೇಷಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಇತರ ಶಾಸನಗಳು, ಕಾವ್ಯಗಳು, ಜಾನಪದ ವಾಙ್ಮಯ ಮತ್ತು ಪ್ರವಾಸಿಗಳ ಪ್ರವಾಸಕಥನಗಳನ್ನು, ಅವುಗಳ ಮಿತಿಯರಿತು ಬಳಸಿಕೊಂಡಿದ್ದೇವೆ. ತಮಿಳು ಸಂಗಮ್ ಸಾಹಿತ್ಯದಲ್ಲಿ ದೊರೆಯುವ ವೀರಗಲ್ಲುಗಳ ಮಾಹಿತಿಯನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಂಡಿಲ್ಲ ವಾದರೂ ಅನುವಾದಗಳನ್ನು ಬಳಸಿಕೊಂಡಿದ್ದೇವೆ. ವೀರರಿಗೆ ಸಂಬಂಧಪಟ್ಟಂತೆ ಕನ್ನಡ ಕಾವ್ಯ ಗಳಿಂದ ಸಾಕಷ್ಟು ಮಾಹಿತಿಯನ್ನು ಉಪಯೋಗಿಸಿಕೊಂಡಿದ್ದೇವೆ.

ಈ ಅಧ್ಯಯನವನ್ನು ಐದು ಅಧ್ಯಾಯಗಳಲ್ಲಿ ವಿವರವಾಗಿ ಮಂಡಿಸಿದ್ದೇವೆ. ಮೊದಲ ಅಧ್ಯಾಯದಲ್ಲಿ ಸ್ಮಾರಕಗಳ ಉಗಮ ಮತ್ತು ವಿಕಾಸವನ್ನು ಸಾಕಷ್ಟು ದೀರ್ಘವಾಗಿಯೇ ಚರ್ಚಿಸಿದ್ದೇವೆ. ಏಕೆಂದರೆ ವೀರಗಲ್ಲಿನ ಉಗಮ ಮಾನವನಿಗೆ ಮೂಲಭೂತವಾಗಿದ್ದ, ಇರುವ, ಸಾವಿನ ಕಲ್ಪನೆಯಲ್ಲಿ ಮೂಡಿಬಂದದ್ದು, ಅಂತ್ಯ ಸಂಸ್ಕಾರಗಳ ವಿಧಿಗಳಲ್ಲಿ ಕಾಲಾನುಕ್ರಮದಲ್ಲಿ ಈ ಸಂಪ್ರದಾಯ ಬೇರೆ ಬೇರೆ ಪ್ರದೇಶಗಳಲ್ಲಿ ಹೇಗೆ ಬೆಳೆಯಿತು, ಈ ಬೆಳವಣಿಗೆಯಲ್ಲಿ 'ವೀರತನ', 'ವೀರಗಲ್ಲು' ಹೇಗೆ ಪ್ರತ್ಯೇಕವಾಯಿತು ಎಂಬ ಅಂಶವನ್ನು ಗುರುತಿಸುವ ಪ್ರಯತ್ನ ಮಾಡಿದ್ದೇವೆ.

ಎರಡನೆಯ ಅಧ್ಯಾಯದಲ್ಲಿ ವೀರಗಲ್ಲುಗಳನ್ನು ಏಕೆ, ಯಾರು, ಯಾವಾಗ ಹಾಕಿಸುತ್ತಿದ್ದರು. ಹಾಗೆ ನಿಲ್ಲಿಸುವಲ್ಲಿ ನಡೆಸುತ್ತಿದ್ದ ಆಚರನೆಗಳು, 'ವೀರಗಲ್ಲಿನ' ಪರ್ಯಾಯಪದಗಳು ಮುಂತಾದ ಸಮಸ್ಯೆಗಳನ್ನು ಚರ್ಚಿಸಿದ್ದೇವೆ. ಮೂರನೆಯ ಅಧ್ಯಾಯದಲ್ಲಿ ಹೋರಾಟವನ್ನು ಗಮನದಲ್ಲಿಟ್ಟು ಕೊಂಡು ವೀರಗಲ್ಲುಗಳನ್ನು ವಿಂಗಡಿಸುವ ಪ್ರಯತ್ನ ಮಾಡಿದ್ದೇವೆ. ಇದೇ ವಿಂಗಡನೆಯ ಹಿನ್ನೆಲೆ ಯಲ್ಲಿ ಆ ಹೋರಾಟಗಳ ಚಿತ್ರಣ ನೀಡುವ ಕಾರ್ಯವನ್ನು ಮಾಡಿದ್ದೇವೆ. ಇದೇ ಅಧ್ಯಾಯದ ಎರಡನೆಯ ಭಾಗದಲ್ಲಿ 'ಯುದ್ಧ'ದ ಬಗ್ಗೆ ಒಂದು ಚಿತ್ರಣವನ್ನು ನೀಡುವ ಪ್ರಯತ್ನವನ್ನು ಮಾಡಿದ್ದೇವೆ. ಯುದ್ಧಕ್ಕೆ ಸಂಬಂಧ ಪಟ್ಟಂತೆ ವೀರಗಲ್ಲುಗಳ ಪಾಠ ಮತ್ತು ಶಿಲ್ಪದಿಂದ ದೊರೆಯಬಹುದಾದ ಎಲ್ಲ ಅಂಶಗಳನ್ನು ಸಾಕಷ್ಟು ಬಳಸಿಕೊಂಡಿದ್ದೇವೆ. ಹಾಗೆಯೇ ಹೋರಾಟಗಳಲ್ಲಿ ಬಳಸಲಾಗುತ್ತಿದ್ದ ಆಯುಧಗಳು, ವೀರರ ಉಡುಪುಗಳನ್ನು ಪರಿಶೀಲಿಸುವ ಪ್ರಯತ್ನ ಮಾಡಿದ್ದೇವೆ.

೯. ಅದೇ : ಪು. ೭೪

ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ವೀರಗಲ್ಲುಗಳ ಪಾಠ ಮತ್ತು ಶಿಲ್ಪಗಳನ್ನು ಕ್ರಮವಾಗಿ ವಿಶ್ಲೇಷಿಸಿದ್ದೇವೆ. ವೀರಗಲ್ಲುಗಳ ಪಾಠದ ಸ್ವರೂಪ, ಅವುಗಳ ಬೆಳವಣಿಗೆ, ಸಾಹಿತ್ಯದ ಪ್ರಭಾವ, ಇತರೇ ವೀರ ಕಾವ್ಯಗಳಲ್ಲಿ ಕಂಡು ಬರುವ ವೀರನ ಚಿತ್ರಣಕ್ಕೂ ವೀರಗಲ್ಲುಗಳಲ್ಲಿನ ವೀರನ ಚಿತ್ರಣಕ್ಕೂ ಇರುವ ವ್ಯತ್ಯಾಸ, ವ್ಯತ್ಯಾಸಕ್ಕೆ ಕಾರಣಗಳು ಮುಂತಾದ ಅಂಶಗಳನ್ನು ಪರಿಶೀಲಿಸಿದ್ದೇವೆ. ಐದನೆಯ ಅಧ್ಯಾಯದಲ್ಲಿ ವೀರಗಲ್ಲುಗಳ ಶಿಲ್ಪದ ಮಹತ್ವ ಅವುಗಳ ಬೆಳೆದುಬಂದ ರೀತಿ, ಅವುಗಳ ಶೈಲಿ, ಪ್ರಾದೇಶಿಕ ವೈಶಿಷ್ಟ್ಯ ಮುಂತಾದ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದೇವೆ. ವೀರಗಲ್ಲುಗಳ ನಿರ್ಮಾಣಕ್ಕೆ ಕಾರಣರಾದ ಶಾಸನಕಾರ ಮತ್ತು ಶಿಲ್ಪಿಗಳ ಬಗ್ಗೆ ದೊರೆಯಬಹುದಾದ ಮಾಹಿತಿಯನ್ನು ನೀಡಿದ್ದೇವೆ.

ಈ ಅಧ್ಯಯನಕ್ಕೆ ಪೋಷಕವಾಗುವಂಥ 'ಕರ್ನಾಟಕದ ವೀರಗೀತೆಗಳು' ಮತ್ತು 'ಸ್ವರ್ಗದ ಕಲ್ಪನೆ' ಎಂಬ ಎರಡು ಅಧ್ಯಾಯಗಳನ್ನು ಅನುಬಂಧದಲ್ಲಿ ನೀಡಿದ್ದೇವೆ. ವೀರಗಲ್ಲುಗಳು ನಮ್ಮ ನಾಡಿನ ವೀರರ ಒಂದು ಮುಖದ ಚಿತ್ರಣವನ್ನು ನೀಡಿದರೆ, ವೀರಗೀತೆಗಳು ಮತ್ತೊಂದು ಮುಖದ ಪರಿಚಯ ಮಾಡಿಕೊಡುತ್ತವೆ. ಈ ಎರಡೂ ಮುಖಗಳ ಪರಿಚಯ ನಮಗಾದಾಗ ಕರ್ನಾಟಕದ ವೀರರ ನಿಜವಾದ ಚಿತ್ರ ನಮಗೆ ದೊರೆಯುತ್ತದೆ ಎಂಬುದು ನಮ್ಮ ಅನ್ನಿಸಿಕೆ. ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ವರ್ಣಿತವಾಗುವ ಸ್ವರ್ಗದ ಬಗ್ಗೆ ಸಾಕಷ್ಟು ಹಿನ್ನೆಲೆ ನೀಡುವುದು ಅಗತ್ಯವೆಂದು ತೋರಿತು. ಆ ರೀತಿಯ ವಿವರವಾದ ಚರ್ಚೆ ಮುಖ್ಯ ವಿಷಯದಿಂದ ಹೊರಗುಳಿಯುತ್ತದೆ ಎಂದು ಈ ಭಾಗಗಳನ್ನು ಅನುಬಂಧದಲ್ಲಿ ನೀಡಿದ್ದೇವೆ.

ಒಂದು ರೀತಿಯಲ್ಲಿ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಅವಿಭಾಜ್ಯವೆಂದೇ ಭಾವಿಸಬೇಕಾಗುತ್ತದೆ. ಆದರೆ ಕೆಲವು ಮಾಸ್ತಿಗಲ್ಲುಗಳು ವೀರಗಲ್ಲುಗಳಿಂದ ಪ್ರತ್ಯೇಕವಾಗಿ ಉಳಿಯುತ್ತವೆ ಎಂಬುದು ವಾಸ್ತವ ಸಂಗತಿ. ವೀರಗಲ್ಲುಗಳ ಪಾಠ ಮತ್ತು ಶಿಲ್ಪದಿಂದ ತಿಳಿದು ಬರುವ ಸಹಗಮನದ ಪ್ರಸ್ತಾಪವನ್ನು ಮಾತ್ರ ಚರ್ಚಿಸಿದ್ದೇವೆ.

ಆತ್ಮಹತ್ಯೆಯನ್ನು ಧಾರ್ಮಿಕ ವಿಧಿಗಾಗಿಯೋ ಅಥವಾ ಸಾಮಾಜಿಕ ಕಾರಣಕ್ಕಾಗಿಯೋ ಹಿಂಸಾತ್ಮಕ ರೂಪದಲ್ಲಿ ಮಾಡಿಕೊಂಡ ವೀರರ ಸ್ಮಾರಕಗಳನ್ನು ಕರ್ನಾಟಕದ ಜನ ವೀರಗಲ್ಲುಗಳು ಎಂಬುದಾಗಿಯೇ ಪರಿಭಾವಿಸುತ್ತಾರೆ. ಆದರೆ ಆ ರೀತಿಯ ವೀರರ ವೀರಗಲ್ಲುಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಂಡಿಲ್ಲ. ಇದಕ್ಕೆ ಕಾರಣ ಇಷ್ಟೇ : 'ವೀರ' ಎಂಬ ಪದ ವಿಶಾಲಾರ್ಥವನ್ನು ಪಡೆದಿದೆ, ನಿಜ. ಆದರೆ ನಾವು ಯಾವುದೇ ಹೋರಾಟದಲ್ಲಿ ಮಡಿದ ವೀರರ ಸ್ಮಾರಕಗಳನ್ನು ಮಾತ್ರ ವೀರಗಲ್ಲುಗಳು ಎಂಬುದಾಗಿ ಭಾವಿಸಿಕೊಂಡಿದ್ದೇವೆ. ಈ ಮೇಲೆ ಹೇಳಿದ ವೀರರು ಹೋರಾಟದಿಂದ ಹೊರಗೆ ಉಳಿದಿರುವುದರಿಂದ ಅವರ ಸ್ಮಾರಕಗಳನ್ನು ಅಧ್ಯಯನದ

ವ್ಯಾಪ್ತಿಗೆ ಸೇರಿಸಿಕೊಂಡಿಲ್ಲ. ಆದರೂ ಆ ಬಗ್ಗೆ ಮುಂದೆ ಬರುವ ಸಂಶೋಧಕರ ಗಮನ ಸೆಳೆಯುವ ಸಲುವಾಗಿ ಅಲ್ಲಲ್ಲಿ ವಿಶ್ಲೇಷಿಸಿದ್ದೇವೆ.

ಈ ಅಧ್ಯಯನದ ವಿಧಾನವನ್ನು ಒಂದೆರಡು ಮಾತುಗಳಲ್ಲಿ ವಿವರಿಸುವುದು ಸೂಕ್ತ. ಶಾಸನ ಸಂಪುಟಗಳಿಂದ ನಾವು ಶಾಸನದ ಪಾಠವನ್ನು ಸಂಗ್ರಹಿಸುವುದಕ್ಕಾಗಿ ನಿರ್ದಿಷ್ಟವಾದ ಅಳತೆಯ ರಟ್ಟಿನ ಪಟ್ಟಿಗಳನ್ನು ಆಯ್ಕೆ ಮಾಡಿಕೊಂಡೆವು. ಅವುಗಳಲ್ಲಿ ಈ ರೀತಿ ಮಾಹಿತಿ ಸಂಗ್ರಹ ಮಾಡಿದೆವು : ಗ್ರಾಮ : ತಾಲ್ಲೂಕ್ : ಜಿಲ್ಲೆ : ರಾಜ : ರಾಜಮನೆತನ : ಕಾಲ : ಮತ್ತು ಶಾಸನ ದೊರೆತ ಸ್ಥಳ ಮುಂತಾದ ವಿವರ. ಮಾಹಿತಿ ಸಂಗ್ರಹಿಸುವಲ್ಲಿ ನಾವು ಅನುಸರಿಸಿದ ಕ್ರಮ ಹೀಗಿದೆ : ಕಾಲ, ಭಾಷೆ, ಅರಸುಮನೆತನ, ಪ್ರದೇಶ ಮತ್ತು ವಿಷಯದ ದೃಷ್ಟಿಯಿಂದ ಮಹತ್ವದ್ದು ಎಂದೆನ್ನಿಸುವ ಎಲ್ಲಾ ವೀರಗಲ್ಲುಗಳ ಪಾಠವನ್ನು ಬರೆದುಕೊಂಡೆವು. ಪಾಠ ಅಸ್ಪಷ್ಟವಿರುವ, ಅರ್ಥ ಮತ್ತು ವಿಷಯದ ದೃಷ್ಟಿಯಿಂದ ಮಹತ್ತ್ವದೆಂದು ತೋರದ ವೀರಗಲ್ಲುಗಳ ಪಾಠವನ್ನು ಸಂಗ್ರಹ ಮಾಡುವ ಕಾರ್ಯವನ್ನು ಮಾಡಲಿಲ್ಲ.[೧೦]

ಕಾವ್ಯ, ಪ್ರವಾಸಿಗಳ ಕಥನ, ಇತಿಹಾಸ ಗ್ರಂಥಗಳು ಮತ್ತು ಲೇಖನಗಳಿಂದ ಮಾಹಿತಿಯನ್ನು ಬೇರೆಯ ಅಳತೆಯ ಕಾಗದಗಳಲ್ಲಿ ತೆಗೆದುಕೊಂಡೆವು. ಆ ನಂತರ ಈ ಎಲ್ಲಾ ಮಾಹಿತಿಗಳನ್ನು ವರ್ಗೀಕರಣ ಮಾಡಿ ಅವುಗಳಿಗೆ ಒಮದು ಸ್ಪಷ್ಟರೂಪವನ್ನು ಕೊಡುವ ಪ್ರಯತ್ನ ಮಾಡಿದೆವು.

ಈ ಅಧ್ಯಯನಕ್ಕೆ ಈ ಹಿಂದೆ ತಿಳಿಸಿದಂತೆ ಪ್ರಕಟವಾದ ಎಲ್ಲಾ ಶಾಸನ ಸಂಪುಟಗಳೂ, ವರದಿಗಳಿಂದಲೂ ಮಾಹಿತಿಯನ್ನು ಸಂಗ್ರಹ ಮಾಡಿದ್ದೇವೆ. ವೀರಗಲ್ಲುಗಳ ಛಾಯಾಚಿತ್ರಗಳು ಈ ಮೇಲೆ ತಿಳಿಸಿದ ಗ್ರಂಥಗಳಲ್ಲಿ ಕ್ವಚಿತ್ತಾಗಿ ಪ್ರಕಟವಾಗಿರುವುದರಿಂದ ವೀರಗಲ್ಲುಗಳ ಶಿಲ್ಪಗಳ ಛಾಯಾಚಿತ್ರಗಳನ್ನು ಪಡೆಯಲು ಪ್ರವಾಸ ಅನಿವಾರ್ಯವಾಯಿತು. ಮಹತ್ವದ ವೀರಗಲ್ಲುಗಳು ಇರುವ ಸ್ಥಳಗಳಿಗೆ ಹೋಗಿ ವೀರಗಲ್ಲುಗಳ ಛಾಯಾಚಿತ್ರಗಳನ್ನು ತೆಗೆದು ಮತ್ತು ಅಲ್ಲಿಯೇ ವಿವರಗಳನ್ನು ಟಿಪ್ಪಣಿ ಮಾಡಿಕೊಂಡು ಬಂದೆವು.[೧೧] ಕ್ಷೇತ್ರ ಪರಿವೀಕ್ಷಣೆಯ ಕಾರ್ಯವನ್ನು ಮಾಡುವಲ್ಲಿ ಮೇಲಿನ

೧೦. ಈ ರೀತಿ ಮಾಡಿದ್ದು ತಪ್ಪು ಎಂದು ಈಗ ಅನ್ನಿಸುತ್ತಿದೆ. ಪ್ರಕಟವಾದ ಎಲ್ಲಾ ವೀರಗಲ್ಲುಗಳ ಪಾಠವನ್ನು ದಾಖಲಿಸಿಕೊಂಡಿದ್ದರೆ, ಪ್ರಕಟವಾದ ವೀರಗಲ್ಲುಗಳ ಸಂಖ್ಯೆಯನ್ನು ಮತ್ತು ಯಾವ ಪ್ರದೇಶದಲ್ಲಿ ವೀರಗಲ್ಲುಗಳು ವಿಶೇಷವಾಗಿವೆ ಎಂಬುದನ್ನು ಮತ್ತು ಯಾವ ಪ್ರದೇಶದಲ್ಲಿ ವೀರಗಲ್ಲುಗಳು ವಿಶೇಷವಾಗಿ ಬೆಳೆದವು ಎಂಬುದನ್ನು ಇನ್ನೂ ಖಚಿತವಾಗಿ ಹೇಳಬಹುದಿತ್ತು ; ಆದರೂ ಈ ಬಗ್ಗೆ ನಾವು ಪ್ರವಾಸ ಮತ್ತು ಅಧ್ಯಯನದ ಅನುಭವದ ಮೇಲೆ ಅಲ್ಲಲ್ಲಿ ನಮ್ಮ ಅಭಿಪ್ರಾಯವನ್ನು ತಿಳಿಸಿದ್ದೇವೆ. ಈ ರೀತಿ ಅಭಿಪ್ರಾಯ ನೀಡುವಲ್ಲಿ ಆಯಾ ಪ್ರದೇಶದ ಶಾಸನ ರಹಿತ ವೀರಗಲ್ಲುಗಳೂ ನಮ್ಮ ಮನಸ್ಸಿನಲ್ಲಿವೆ ಎಂಬುದು ಗಮನಿಸಬೇಕಾದ ಅಂಶ.

೧೧. ಈ ತೆರನ ಅಧ್ಯಯನ ಮಾಡಬಯಸುವವರು ಪ್ರಾಚೀನ ಕನ್ನಡ ಲಿಪಿಯನ್ನು ಕಲಿಯಬೇಕಾದ ಅವಶ್ಯಕತೆ ಇದೆ. ನಾವು ಗಮನಿಸಿರುವ ಶಾಸನದ ಪಾಠ ಯಾವ ಕಲ್ಲಿನ ಮೇಲೆ ಇದೆ ಎಂಬುದನ್ನು ತಿಳಿಯುವಲ್ಲಿ ಈ ಜ್ಞಾನ ನಮಗೆ ಸಹಾಯವಾಗುತ್ತದೆ. ಯಾವಾಗ ನಾವು

ದೃಷ್ಟಿಯೊಂದನ್ನೇ ಅಲ್ಲದೆ ಪ್ರತಿಯೊಂದು ಜಿಲ್ಲೆಯನ್ನು ಪ್ರವಾಸಮಾಡುವ ಉದ್ದೇಶವನ್ನು ಹೊಂದಿದ್ದೆವು. ಅದೇ ರೀತಿ ಪ್ರವಾಸಮಾಡಿ ನೂರಾರು ವೀರಗಲ್ಲುಗಳ ಛಾಯಾಚಿತ್ರಗಳನ್ನು ತೆಗೆದುಕೊಂಡೆವು.[೧೨] ಎಲ್ಲಾ ಜಿಲ್ಲೆಗಳನ್ನು ಪ್ರವಾಸಮಾಡಿದ್ದೇವೆ ಎಂದು ಹೇಳಬರುವುದಿಲ್ಲ. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಾಗಲಿಲ್ಲ. ಈ ಕ್ಷೇತ್ರ ಪರಿವೀಕ್ಷಣಾ ಕಾರ್ಯ ಸಮರ್ಪಕವಾಗಿ, ತೃಪ್ತಿಕರವಾದ ರೀತಿಯಲ್ಲಿ ನಡೆದಿಲ್ಲ ಎಂಬುದು ವಾಸ್ತವ ಸಂಗತಿ. ಆದರೂ ಒಬ್ಬ ವ್ಯಕ್ತಿಯ ಪರಿಶ್ರಮದ ಪರಿಮಿತಿಯಲ್ಲಿ ನಡೆಯಬಹುದಾದಷ್ಟು ನಡೆದಿದೆ ಎಂಬುದಾಗಿ ಹೇಳಬಹುದು.

ಪ್ರವಾಸದ ಸಮಯದಲ್ಲಿ ಗಮನಿಸಿದ, ಶಾಸನ ಪಾಠವಿಲ್ಲದ ವೀರಗಲ್ಲುಗಳ ಛಾಯಾ ಚಿತ್ರಗಳನ್ನು ತೆಗೆದುಕೊಂಡು ಅವುಗಳನ್ನು ಉಪಯೋಗಿಸಿಕೊಂಡಿದ್ದೇವೆ. ಈ ದೃಷ್ಟಿಯಿಂದ ನೋಡಿದಾಗ ಕೇವಲ ಶಿಲ್ಪದ ವಿವರಗಳನ್ನು ಹೊಂದಿರುವ ವೀರಗಲ್ಲುಗಳೂ ತುಂಬಾ ಮಹತ್ವದ ವಿಷಯಗಳನ್ನು ತಿಳಿಸುವಂಥವಾಗಿವೆ. ಅಂಥ ಹಲವಾರು ವೀರಗಲ್ಲುಗಳ ವಿಶ್ಲೇಷಣೆ ಮೊದಲಬಾರಿಗೆ ಇಲ್ಲಿ ನಡೆದಿದೆ ಎಂಬುದು ನಮಗೆ ಹೆಮ್ಮೆಯ ವಿಷಯ. ಪ್ರವಾಸದ ಸಮಯದಲ್ಲಿಯೇ ವೀರಗಲ್ಲುಗಳ ಬಗ್ಗೆ ಜನಸಾಮಾನ್ಯರು ಹೊಂದಿರುವ ನಂಬಿಕೆ. ನಡೆಯಿಸುವ ಆಚರಣೆಗಳು ಮತ್ತು ಅವುಗಳ ವಿವರಗಳನ್ನು ಸ್ವಲ್ಪಮಟ್ಟಿಗೆ ಸಂಗ್ರಹಿಸಿದ್ದೇವೆ. ವೀರಗಲ್ಲುಗಳ ಆರಾಧನೆ ನಡೆಯುವ ಸ್ಥಳಗಳಿಗೆ ಈ ಉದ್ದೇಶದಿಂದಲೇ ಹೋಗಿ ಮಾಹಿತಿಯನ್ನು ಸಂಗ್ರಹಮಾಡಿ ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿನ ವೀರರ ಆರಾಧನಾ ಸಂಪ್ರದಾಯಗಳನ್ನು ವಿಶ್ಲೇಷಣೆ ಮಾಡಿದ್ದೇವೆ.

ಈ ಎಲ್ಲ ಪರಿಮಿತಿ ಮತ್ತು ವ್ಯಾಪ್ತಿಗಳಲ್ಲಿ ಪ್ರಕಟವಾದ ಶಾಸನ ಸಂಪುಟಗಳಲ್ಲಿನ ಶಾಸನ ಪಾಠವನ್ನೂ ನಾವು ಕ್ಷೇತ್ರ ಪರಿವೀಕ್ಷಣೆ ಮಾಡಿ ಸಂಗ್ರಹಿಸಿದ ವೀರಗಲ್ಲುಗಳ ಛಾಯಾಚಿತ್ರಗಳನ್ನೂ ಆಧರಿಸಿ ಈ ನಿಬಂಧವು ಸಿದ್ಧವಾಗಿದೆ.

ಬಯಸುವ ಶಾಸನವಿರುವ ವೀರಗಲ್ಲು ದೊರೆಯಿತೋ ಆಗ ಅದರ ಶಿಲ್ಪವನ್ನು ಅದರ ಪಾಠದ ಸಹಾಯದಿಂದ ವಿಶ್ಲೇಷಿಸುವುದು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ ಹೆಚ್ಚು ಸೂಕ್ತವೂ ಆಗುತ್ತದೆ. ಈ ಮಾರ್ಗದಲ್ಲಿಯೇ ನಾವು ಅಧ್ಯಯನ ನಡೆಸಿರುವುದರಿಂದ ನಾವು ವ್ಯಾಖ್ಯಾನ ಮಾಡಿರುವ ಶಿಲ್ಪಕ್ಕೆ ಅದರ ಪಾಠವನ್ನು ಗಮನಿಸಿದ್ದೇವೆ ಎಂಬುದನ್ನು ಖಚಿತಪಡಿಸುತ್ತೇವೆ. ಈ ರೀತಿಯ ಅಧ್ಯಯನದ ವಿಧಾನವನ್ನು ನಮಗೆ ತಿಳಿಯಪಡಿಸಿದವರು ಡಾ. ಕೆ.ವಿ. ರಮೇಶ್ ಅವರು.

೧೨. ಈ ತೆರನಾದ ವಿಷಯಗಳ ಬಗ್ಗೆ ಸಂಶೋಧನೆ ಮಾಡುವವರು ಛಾಯಾಗ್ರಹಣ ಕಲೆಯಲ್ಲಿ ಸ್ವಲ್ಪಮಟ್ಟಿನ ಪರಿಶ್ರಮವನ್ನು ಹೊಂದಬೇಕಾದ ಅವಶ್ಯಕತೆ ಇದೆ. ಈ ಪರಿಶ್ರಮ ಆರಂಭ ಕಾಲದಲ್ಲಿ ನಮಗೆ ಇಲ್ಲದ ಕಾರಣ ಮತ್ತು ಇನ್ನಿತರ ಕಾರಣದಿಂದಾಗಿ ವೀರಗಲ್ಲುಗಳ ಛಾಯಾಚಿತ್ರಗಳು ಚೆನ್ನಾಗಿ ಬರಲಿಲ್ಲ. ಅಂತಹ ಕಡೆಗಳಲ್ಲಿ ನಾವು ವೀರಗಲ್ಲುಗಳ ರೇಖಾಚಿತ್ರಗಳನ್ನು ನೀಡಿದ್ದೇವೆ.

ಆರಂಭಕಾಲದ ಅಂದರೆ ಕ್ರಿಶ. ಸು. ೫೦೦ ತಮಟಕಲ್ಲು ಎಂಬ ಗ್ರಾಮದಲ್ಲಿ ದೊರೆಯುವ ವೀರಗಲ್ಲಿನಿಂದ ಹಿಡಿದು ಈಗ್ಗೆ ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಹಾಕಿಸಲಾಗಿರುವ ಕೋನಸಾಗರದ ವೀರಗಲ್ಲಿನವರೆಗೆ. ಎಲ್ಲ ಕಾಲದ, ಇಂದಿನ ಕರ್ನಾಟಕದ ಬಹುಪಾಲು ಎಲ್ಲಾ ಭಾಗಗಳ ಪ್ರಕಟಿತ ಮತ್ತು ಅಪ್ರಕಟಿತ ವೀರಗಲ್ಲುಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇವೆ. ಕರ್ನಾಟಕದ ಹೊರಗಿನ ಕನ್ನಡ ಪಾಠವಿರುವ ವೀರಗಲ್ಲುಗಳನ್ನು ಕ್ವಚಿತ್ತಾಗಿ ಮಾತ್ರ ಬಳಸಿಕೊಂಡಿದ್ದೇವೆ. ಕಾಲ ಮತ್ತು ಪ್ರಾದೇಶಿಕ ಪರಿಮಿತಿಯನ್ನು ಹೊಂದಿರದ ಈ ಅಧ್ಯಯನ ಒಂದು ದೃಷ್ಟಿಯಿಂದ ಅಸಮರ್ಪಕ ಎಂದೆನ್ನಿಸಬಹುದು. ಆದರೆ, ವೀರಗಲ್ಲುಗಳ ಸಂಪ್ರದಾಯ ಮತ್ತು ಅದರ ಹಿನ್ನೆಲೆಯನ್ನು ಗುರುತಿಸಿ ಒಂದು ಚಿತ್ರಣ ನೀಡಬೇಕಾದರೆ ಇದೇ ಮಾರ್ಗ ಅನಿವಾರ್ಯವೆಂದು ತೋರಿತು. ಏಕೆಂದರೆ, ವೀರಗಲ್ಲುಗಳ ಪಾಠದಿಂದ ಮತ್ತು ಶಿಲ್ಪದಿಂದ ದೊರೆಯುವ ಸಾಮಗ್ರಿ ಬಹಳ ಸ್ವಲ್ಪ. ಬಹಳಷ್ಟು ಸಂಗತಿಗಳು ಚದುರಿ ಹೋಗಿವೆ. ಅವುಗಳನ್ನು ಒಂದು ಸೂತ್ರದಲ್ಲಿಟ್ಟು ನೋಡಿದಾಗ ಮಾತ್ರ ಒಂದು ಚಿತ್ರಣವನ್ನು ಕೊಡುವುದು ಸಾಧ್ಯ.

ಕೊನೆಯದಾಗಿ ಒಂದು ಅನ್ನಿಸಿಕೆಯನ್ನು ಇಲ್ಲಿ ಮಂಡಿಸಿದರೆ ಅಪ್ರಸ್ತುತವಾಗಲಾರದೆಂದು ತೋರುತ್ತದೆ. ಶ್ರೀ ಶಿವರಾಮ ಕಾರಂತರು 'ಚರಿತ್ರೆ ಮತ್ತು ನಾವು' ಎಂಬ ತಮ್ಮದೊಂದು ಲೇಖನದಲ್ಲಿ "ಭಾರತದ ದೀರ್ಘ ಇತಿಹಾಸದಲ್ಲಿ ಹಲವು ಹೊಸ ಜನಾಂಗಗಳು ಸೇರಿಕೊಂಡುದು ಮಾತ್ರವಲ್ಲ, ಪ್ರತಿಯೊಂದು ರಾಜಮನೆತನ, ಸಣ್ಣ ಅರಸು ನಡೆಯಿಸಿದ ಯುದ್ಧಗಳ ಸಂಖ್ಯೆ ನೂರು, ಸಾವಿರಗಳ ಅಳತೆಯನ್ನು ಮೀರುತ್ತದೆ. ಇಂಥವು ನಡೆಯುತ್ತಿದ್ದ ಕಾಲದಲ್ಲಿ ಸೋತ ದೇಶಗಳ ಪಾಡೇನು ? ಸೇನೆ ಸಾಗಿದ ದೇಶಗಳ ಪಾಡೇನು ? ಜನಗಳ ಪಾಡೇನು ? ಎಂಬುದನ್ನು ನಮ್ಮ ಚರಿತ್ರಕಾರರು ತಿಳಿಸುವುದಕ್ಕೆ ಹೋಗಿಲ್ಲ"[೧೩] ಎಂಬ ಆಕ್ಷೇಪಣೆಯನ್ನು ಮಾಡಿದ್ದಾರೆ. ಶ್ರೀಯುತರ ಈ ಆಕ್ಷೇಪಣೆಯಿಂದ ಈ ನಿಬಂಧ ಸ್ವಲ್ಪಮಟ್ಟಿಗೆ ಹೊರಗುಳಿದಿದೆ ಎಂಬುದಾಗಿ ಹೇಳಬಹುದು. 'ಯುದ್ಧದ ಪರಿಣಾಮ'ಗಳ ಬಗ್ಗೆ ವೀರಗಲ್ಲುಗಳಲ್ಲಿ ದೊರೆಯಬಹುದಾದ ಅಲ್ಪ ಸ್ವಲ್ಪ ಮಾಹಿತಿಯನ್ನು, ಕಾವ್ಯ ಮತ್ತು ಜನಪದ ಕಾವ್ಯಗಳಿಂದ ದೊರೆಯುವ ಮಾಹಿತಿಯೊಂದಿಗೆ ಸೇರಿಸಿಕೊಂಡು ವಾಸ್ತವ ಚಿತ್ರವನ್ನು ನೀಡುವ ಪ್ರಾಮಾಣಿಕ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಿದ್ದೇವೆ.

೧೩. ಕೆ. ಶಿವರಾಮ ಕಾರಂತ : 'ಚರಿತ್ರೆ ಮತ್ತು ನಾವು' (ಶ್ರೀಕಂಠತೀರ್ಥ : ಸಂ. ಎಂ. ಚಿದಾನಂದ ಮೂರ್ತಿ ಮತ್ತು ಇತರರು) ಪು. ೬೩೦

೨. ಸ್ಮಾರಕಗಳು

ಉಗಮ ಮತ್ತು ವಿಕಾಸ

ಮಾನವನ ಹುಟ್ಟು ಅನಿವಾರ್ಯವಾಗದೇ ಇರಬಹುದು. ಆದರೆ ಹುಟ್ಟಿದ ಮೇಲೆ ಮರಣವೆಂಬುದು ಅವನಿಗೆ ಅನಿವಾರ್ಯವೂ, ಪ್ರಕೃತಿನಿಯಮವೂ ಹೌದು. ಮಾನವನ ಖಚಿತವಾದ ವ್ಯಾಖ್ಯಾನಕ್ಕೆ ಒಳಪಡದ ಅಥವಾ ಅವನ ವಿವಿಧ ರೀತಿಯ ವ್ಯಾಖ್ಯಾನಗಳಿಗೆ ಒಳಪಟ್ಟ ಒಂದು ರಹಸ್ಯವಾಗಿಯೇ ಉಳಿದಿದೆ. ಈ **'ಸಾವು'** – ಎಂಬುದು. ಈ ಸಾವಿನ ಅರ್ಥ, ಕಲ್ಪನೆ ಮುಂತಾದ ವ್ಯಾಖ್ಯಾನಗಳು ವ್ಯಕ್ತಿಯಿಂದ ವ್ಯಕ್ತಿಗೆ, ಸಂಸ್ಕೃತಿಯಿಂದ ಸಂಸ್ಕೃತಿಗೆ, ಕಾಲದಿಂದ ಕಾಲಕ್ಕೆ ಬದಲಾಗುತ್ತ ಹೋಗುತ್ತವೆ.

ಮಾನವನಿಗೆ ಒದಗುವ ಎಲ್ಲ ಸಂಕಷ್ಟಗಳಿಗಿಂತಲೂ ಸಾವಿನ ಭಯ ಎಂಬುದು ಅವನ ಜೀವನದಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡುವ ಒಂದು ಸ್ಥಿತಿ. ಸಾವಂತೂ ಅವನನ್ನು ಒಂದು ನಿಮಿಷದಲ್ಲಿ ಇಲ್ಲ ಗೈಯುವ ಇನ್ನೊಂದು ಭಯಂಕರ ಸ್ಥಿತಿ. ಇದು ಒಮ್ಮೆಲೆ ಅವನಲ್ಲಿ ಪ್ರೀತಿ – ಭಯ, ವಿಶ್ವಾಸ – ಕ್ರೋಧ, ಆಕರ್ಷಣೆ – ವಿಕರ್ಷನೆ, ಭೀತಿ – ಕುತೂಹಲಗಳನ್ನು ಹೊರ ಹೊಮ್ಮಿಸುವ ಸಂಕೀರ್ಣ ಘಟಕವಾಗಿದೆ. ಸತ್ತ ಆತ್ಮದ ಬಗ್ಗೆ ಪ್ರೀತಿ, ಆದರೆ ಕಳೇಬರದ ಬಗ್ಗೆ ಭೀತಿ ಅವನಲ್ಲುಂಟಾಗುತ್ತವೆ. ಪರಸ್ಪರ ವಿರುದ್ಧವಾದ ಅವನ ಈ ಭಾವನೆಗಳು ಅವನು ಶವಗಳನ್ನು ರಕ್ಷಿಸಿಟ್ಟ ವಿವಿಧ ರೀತಿಗಳು – ಸಮಾಧಿ ಮಾಡುವುದು. ಸುಡುವುದು – ಮುಂತಾದ ಸಂಪೂರ್ಣ ನಿರ್ನಾಮ ಮಾಡುವ ರೀತಿಗಳಲ್ಲಿ ಸುವ್ಯಕ್ತವಾಗಿದೆ.[೧] ಪ್ರಾಚೀನ ಪ್ರಪಂಚದಲ್ಲಿ ಪ್ರಚಲಿತವಿದ್ದ ಶವ ಸಂಸ್ಕಾರಗಳನ್ನು ಕಾಲಾನುಕ್ರಮದಲ್ಲಿ ಸಮೀಕ್ಷೆ ಮಾಡಿದಾಗ, ಶವ ಸಂಸ್ಕಾರ ಮಾಡುವ ವಿಧನ, ಸಮಾಧಿ ವಿಧಾನ, ಸಮಾಧಿಗಳ ಮುಂದೆ ನೀಡುವ ಬಲಿ, ಕಾಣಿಕೆಗಳು,

೧. Purushotam Sing : Burial Practeices of Ancient India, ಪು.೧

ಸತ್ತವರ ಗೌರವಾರ್ಥವಾಗಿ ನಿಲ್ಲಿಸಿರುವ ಸ್ಮಾರಕಗಳು – ಈ ಎಲ್ಲದರ ನಡುವೆ ಒಂದು ಐಕ್ಯತೆ, ಸಾಮ್ಯತೆ ಕಂಡು ಬರುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಸಾವು ಎಂಬುದು ಸಾರ್ವತ್ರಿಕವಾಗಿ ಪ್ರಪಂಚದ ಎಲ್ಲ ಸಮಾಜಗಳಲ್ಲಿಯೂ ತನ್ನ ಕಾರ್ಯರೂಪವನ್ನು ತೋರಿಸುತ್ತದೆ ಎಂಬುದು. ಸಾವಿನ ಬಗ್ಗೆ ಮಾನವನ ಮೂಲಭೂತ ಭಾವನೆಗಳು ಒಂದೇ ಆಗಿರುವುದರಿಂದ ಅವನು ಅದರ ಬಗ್ಗೆ ತನಗಿರುವ ಭೀತಿಯ ಅಭಿವ್ಯಕ್ತಿಯಲ್ಲಿಯೂ ಸಾಮ್ಯವನ್ನು ತೋರಿಸಿದ್ದಾನೆ.[೨]

ಮಾನವನ ನಾಗರಿಕತೆಯ, ಸಂಸ್ಕೃತಿಯ ಆರಂಭಕಾಲದಿಂದಲೂ ಅವುಗಳ ಬೆಳವಣಿಗೆಯ ಜೊತೆ ಜೊತೆಗೇ ಸಾವಿನ ಬಗ್ಗೆ, ಸಾವಿನ ನಂತರದ ಜೀವನದ ಬಗ್ಗೆ ಹಲವಾರು ನಂಬಿಕೆಗಳು, ಕಲ್ಪನೆಗಳು ಬೆಳೆದು ಬಂದಿವೆ. ಅವುಗಳನ್ನು ಸ್ಥೂಲವಾಗಿ ಹೀಗೆ ಪರಿಚಯ ಮಾಡಿಕೊಳ್ಳಬಹುದು.

೧) ಸಾವು ಎಂಬುದು ಭಯಂಕರವಾದುದು, ಸರ್ವ ವ್ಯಾಪಿಯಾದುದು.

೨) ಸತ್ತವರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಅಶಕ್ತರಾಗಿರುತ್ತಾರೆ. ಆದ್ದರಿಂದ ಅವರಿಗೆ ಅವಶ್ಯವಿರುವ ಅಗತ್ಯಗಳನ್ನು ಬದುಕಿರುವವರು ಪೂರೈಸಬೇಕು. ಸತ್ತವ್ಯಕ್ತಿ ತಮಗೆಪ್ರಿಯ ನಾದವನಾಗಿರಲಿ, ಅಪ್ರಿಯನಾದವನಾಗಲಿ ಈ ರೀತಿಯ ಅಗತ್ಯಗಳನ್ನು ಪೂರೈಸದಿದ್ದರೆ ಅವನು ತಮಗೆ ತೊಂದರೆಯನ್ನುಂಟು ಮಾಡಬಹುದು.

೩) ಜನಾಂಗದ ಮುಖ್ಯಸ್ಥರು, ಹಿರಿಯರು, ನಾಯಕರು, ವೀರರು ಮುಂತಾದ ಲೌಕಿಕ ಜೀವನದಲ್ಲಿ ಪ್ರಭಾವ ಶಾಲಿಗಳಾಗಿರುವ ವ್ಯಕ್ತಿಗಳು ಸತ್ತನಂತರವೂ ತಮ್ಮ ಪ್ರಭಾವವನ್ನು ಉಳಿಸಿಕೊಳ್ಳುತ್ತಾರೆ. ಅವರ ಭೌತಿಕ ದೇಹ ನಶಿಸಿ ಹೋಗಿದ್ದರೂ, ಅವರ ಆತ್ಮ ಬದುಕಿರುವ ತಮಗೆ ಒಳ್ಳೆಯದನ್ನೋ ಅಥವಾ ಕೆಟ್ಟದ್ದನ್ನೋ ಮಾಡುವ ಶಕ್ತಿಯನ್ನು ಪಡೆದಿದೆ ಎಂಬ ನಂಬಿಕೆ. ಸತ್ತ ಹಿರಿಯರನ್ನು ಮುಂದಿನ ಪೀಳಿಗೆಯವರು ಸ್ಮರಿಸಬೇಕು ಎಂಬ ಭಯಮಿಶ್ರಿತ ಕೃತಜ್ಞತಾಭಾವ ಸತ್ತ ಹಿರಿಯರು ಮತ್ತೆ ತಮ್ಮ ಮನೆಯಲ್ಲಿಯೇ ಪುನರ್ಜನ್ಮವೆತ್ತಿ ಬರುತ್ತಾರೆ ಎಂಬ ಭಾವನೆ.

–ಈ ನಂಬಿಕೆಗಳು, ಕಲ್ಪನೆಗಳು ಮಾನವನ ಸಂಸ್ಕೃತಿಯ ಮೂಲಭೂತ ಆಶಯಗಳಾಗಿ ಪರಿಸರ ಹಾಗೂ ಜನರ ಮನೋಧರ್ಮವನ್ನು ಅನುಸರಿಸಿ ಬೆಳೆದಿವೆ.[೩]

ಪೂರ್ವಜರ ಆರಾಧನಾ ಸಂಪ್ರದಾಯದ ವಿಶೇಷ ಗುಣವೆಂದರೆ : ಸತ್ತ ವ್ಯಕ್ತಿಗಳನ್ನು ಮನುಷ್ಯ ಮಾತ್ರದವರೆಂದು ಭಾವಿಸದೆ, ದೈವಾಂಶ ಸಂಭೂತರೆಂದೇ ಪರಿಗಣಿಸುವುದು. ಈ ರೀತಿಯ ಆರಾಧನಾ ಸಂಪ್ರದಾಯ ಕರ್ನಾಟಕದಲ್ಲಿಯೂ ಪ್ರಚಲಿತವಿರುವುದನ್ನು ನಾವು

೨. ಅದೇ, ಪು. ೧೭೮

೩. The Encyclopaedia Britannica Vol. I.ಪು. ೮೮೧

ಗಮನಿಸಬಹುದು. ಒಂದು ಕಾಲದಲ್ಲಿ ವೀರನಾಗಿ ಮೆರೆದು ಅಸಹಾಯ ಶೂರನೆನಿಸಿದ ಕುಮಾರರಾಮ, ತನ್ನ ಚಿಕ್ಕಮ್ಮನ ಕುಹಕಕ್ಕೆ ಬಲಿಯಾದರೂ, ತನ್ನ ಆದರ್ಶವನ್ನು ಬಿಡದೆ ಮಡಿದ. ಆ ಕುಮಾರರಾಮನ 'ಪರನಾರೀ ಸೋದರತ್ವ'ದ ಆದರ್ಶವನ್ನು ಕಂಡು ಆಕರ್ಷಿತರಾಗಿ ಅವನಿಗೊದಗಿದ ದುರ್ಮರಣಕ್ಕೆ ಮರುಗಿದ ಬೇಡರ ಕುಲದ ಜನತೆ ಅವನನ್ನು ತಮ್ಮ ಕುಲದೇವತೆಯನ್ನಾಗಿಯೇ ಸ್ವೀಕರಿಸಿತು. ಕುರುಬ ಜನಾಂಗದವರಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಬೀರೇ ದೇವರ ಆರಾಧನೆಯೂ ಸಹ ಇದೇ ರೀತಿಯ ವೀರನ ಆರಾಧನೆಯಲ್ಲಿಯೇ ಮೂಲವನ್ನು ಪಡೆದಿರಬೇಕು. ಕಳೆದ ಶತಮಾನದಲ್ಲಿ ಬ್ರಿಟಿಷರೊಂದಿಗೆ ಹೋರಾಡಿ, ತನ್ನ ಒಡನಾಡಿಗಳ ಕುಹಕ ತಂತ್ರದಿಂದ ಮರಣವನ್ನಪ್ಪಿದ ಸಂಗೊಳ್ಳಿರಯಣ್ಣ ಸತ್ತ ಕೆಲವೇ ದಿನಗಳಲ್ಲಿ ಮಕ್ಕಳಿಲ್ಲದವರಿಗೆ ಮಕ್ಕಳನ್ನು ದಯಪಾಲಿಸುವ ಸಂತಾನ ದೇವರಾದ ಎಂಬ ಅಂಶವನ್ನು ಗಮನಿಸಿದಾಗ, ಈ ರೀತಿಯ ಆರಾಧನೆಯ ಗಾಢ ಪ್ರಭಾವದ ಅರಿವಾಗುತ್ತದೆ.

ದಕ್ಷಿಣ ಭಾರತದಲ್ಲಿ ಗ್ರಾಮ ದೇವತೆಗಳೊಮದಿಗೆ ಕೆಲವಾರು ವಿಶಿಷ್ಟವಾದ ದೇವತೆಗಳ ಆರಾಧನೆಗಳೂ ಇರುವ ಅಂಶವನ್ನು ಗಮನಿಸಬಹುದು, ಇವು ಸಾಮಾನ್ಯವಾಗಿ ಪೂರ್ವಜರ ಆರಾಧನೆಗಳ ಸಂಪ್ರದಾಯವೇ ಆಗಿವೆ. ದ್ರಾವಿಡ ಸಂಸ್ಕೃತಿಯಲ್ಲಿ ಪೂರ್ವಜರ ಆರಾಧನೆಗೆ ಮಹತ್ವಪೂರ್ಣವಾದ ಸ್ಥಾನವಿದೆ. ಹಿಂಸಾತ್ಮಕವಾಗಿಯೋ, ಆಕಸ್ಮಿಕವಾಗಿಯೋ, ಆ ಕಾಲದಲ್ಲಿ ಗತಿಸಿದ ಗಂಡಸರು, ಹೆಂಗಸರು, ಹುಡುಗರು, ಹುಡುಗಿಯರು, ವೀರರು, ಕೆಲವೊಮ್ಮೆ ದುಷ್ಟರೂ ಈ ತೆರನ ಆರಾಧನೆಗೆ ಪಾತ್ರರಾಗುತ್ತಾರೆ. ಇಂಥ ಕೆಲವು ದೇವತೆಗಳಿಗೆ ಅನೇಕ ಶತಮಾನಗಳ ಇತಿಹಾಸವೇ ಇದೆ. ಹಾಗೆಯೇ ಹೊಸ ಹೊಸದಾಗಿ ಹುಟ್ಟಿಕೊಂಡ ದೇವತೆಗಳಿಗೂ ಕಡಿಮೆಯಿಲ್ಲ.

ಸ್ಮಾರಕಗಳ ನಿರ್ಮಿತಿ

ಗತಿಸಿ ಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೋ, ಮಡಿದವನ ಸ್ಮರಣೆ ಬರುವಂತೆಯೋ, ಕೆಲವಾರು ಸಂಕೇತಗಳನ್ನೋ, ಗುರುತುಗಳನ್ನೋ ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನ್ನನ್ನುಸರಿಸಿಯೇ ಬೆಳೆದಿದೆ. ಬೃಹದಾಕಾರದ ಪಿರಮಿಡ್ಡುಗಳಿಂದ ಹಿಡಿದು ಸಣ್ಣ ಪುಟ್ಟ ಕಲ್ಲುಗಳವರೆಗೂ ಇವುಗಳ ವ್ಯಾಪ್ತಿಯನ್ನು ಗುರುತಿಸಬಹುದು. ಹಾಗೆಯೇ ಪ್ರಾಗೈತಿಹಾಸಿಕ ಕಾಲದ ಕಲ್ಲಿನ ಮನೆಗಳಿಂದ ಹಿಡಿದು ಅಮೃತ ಶಿಲೆಗಳಿಂದ ನಿರ್ಮಿಸಿದ ಉನ್ನತ ನಾಗರಿಕತೆಯ ಶ್ರೇಷ್ಠ ವಾಸ್ತುವಿನವರೆಗೂ ಇದರ ವೈಭವವನ್ನು ಗುರುತಿಸಬಹುದು.[೪] ಈ ಕಾರಣದಿಂದ ಸ್ಮಾರಕಗಳು ಮಾನವನ ಜೀವನ ವಿಧಾನವನ್ನೂ, ಜೀವನದ

೪. R.S. Panchamukhi : Archaeology of Karnataka ಪು. ೭೦–೭೧

ಬಗ್ಗೆ ಅವನಿಗಿರುವ ಧೋರಣೆಯನ್ನೂ, ಅಂದಿನ ಅವನ ನಾಗರಿಕತೆ ಮತ್ತು ಸಂಸ್ಕೃತಿಯನ್ನೂ ತಿಳಿಸಿ ಕೊಡುವ ಪುರಾವೆಗಳಾಗಿವೆ.

ಎಲ್ಲಾ ಸ್ಮಾರಕಗಳು ಸತ್ತ ವ್ಯಕ್ತಿಯ ನೆನಪನ್ನುಂಟು ಮಾಡಲು ಇರುವ ಸಂಕೇತಗಳು ; ಸತ್ತ ವ್ಯಕ್ತಿಯ ನೆನಪನ್ನು ಘನೀಭವಿಸಿ ಅಭಿವ್ಯಕ್ತಿಗೊಳಿಸುವ ಸಾಧನಗಳು. ಇದಕ್ಕೆ ಕಾರಣವೆಂದರೆ ಈ ಎಲ್ಲ ಸಾಧನೆಗಳು ಆಯಾ ವರ್ಗಕ್ಕನುಗುಣವಾಗಿ ಮಾಡಿಕೊಂಡ ನಿರ್ದಿಷ್ಟವಾದ ಸಂಕೇತಗಳಾಗಿದ್ದು, ಅವು ಪರಂಪರಾಗತವಾಗಿ ಒಪ್ಪಿಕೊಂಡಂತವು ಎಂಬುದು. ಇವೆಲ್ಲವೂ ಮತ್ತೆ ಮತ್ತೆ ಅದೇ ಸಂದರ್ಭದಲ್ಲಿ, ಅದೇ ಸನ್ನಿವೇಶಗಳಲ್ಲಿ ಉಪಯೋಗಿಸಲ್ಪಡುವುವು. ಆಗಲೇ ಹೇಳಿದಂತೆ ಈ ಎಲ್ಲ ಸಂಕೇತಗಳು ಸಾರ್ವತ್ರಿಕ ಅಲ್ಲ ; ಆಯಾ ಸಂಸ್ಕೃತಿಗಳ, ಜನರ ನಂಬಿಕೆ ಮತ್ತು ಕಲ್ಪನೆ, ಪರಿಸರಗಳನ್ನು ಅವಲಂಬಿಸಿ ಇರುವಂಥವು.

ವೇದಗಳಲ್ಲಿ ಹೇಳಿರುವ 'ಪಿತೃ ಮೇಧ' ಎಂಬ ವಿಧಿಯಲ್ಲಿ ಸತ್ತವನನ್ನು ಸಂಸ್ಕರಿಸಿದ ಸ್ಥಳದಲ್ಲಿ ಸ್ಮಾರಕವನ್ನು ಎತ್ತಿಸುವ ಬಗ್ಗೆ ನಮಗೆ ಮಾಹಿತಿ ದೊರೆಯುತ್ತದೆ. ಇಲ್ಲಿ ಅಂತ್ಯ ಸಂಸ್ಕಾರವಾದ ಹಲವಾರು ತಿಂಗಳುಗಳು ಅಥವಾ ಕೆಲವಾರು ವರ್ಷಗಳ ನಂತರ ಈ ಸ್ಮಾರಕವನ್ನು ಮಾಡಬೇಕೆಂದು ಹೇಳಿದೆ.

ಶತಪಥ ಬ್ರಾಹ್ಮನದಲ್ಲಿ ಮೃತಾತ್ಮರಿಗೆ ಸ್ಮಾರಕವನ್ನು ನೆಡುವುದರ ಪ್ರಸ್ತಾಪ ಬರುತ್ತದೆದ. ಆಚರಣೆಗಳು, ಮತ –ಧರ್ಮಗಳು ಬೆಳೆದ ಹಾಗೆ ಈ ಸ್ಮಾರಕಗಳೂ ವಿಸ್ತಾರವಾಗ ತೊಡಗಿದವು. ರೌರವಾಗಮದಲ್ಲಿ ಇಡೀ ಒಂದು ಅಧ್ಯಾಯವೇ ಸ್ಮಾರಕ ಶಿಲೆಗಳ ಬಗ್ಗೆ ಇದೆ. ಅಲ್ಲಿ ಇದನ್ನು 'ಕ್ಷೇತ್ರ ಲಿಂಗ ಪ್ರತಿಷ್ಠೆ' ಎಂಬುದಾಗಿ ಕರೆಯಲಾಗಿದೆ. ಕಾಮಿಕ, ಕಾರಣ, ಕಿರಣ, ಚಿಂತ್ಯಾ, ದೀಪ್ತ ಮುಕುಟ, ಮಾತಂಗ – ಪರಮೇಶ್ವರ, ಯೋಗಜ ಮೊದಲಾದ ಆಗಮಗಳು ಸ್ಮಾರಕಗಳ ಬಗ್ಗೆ ಪ್ರಸ್ತಾಪ ಮಾಡುತ್ತವೆ. ಕೆಲವು ಕಡೆಗಳಲ್ಲಿ ಸ್ಮಾರಕವನ್ನು ಸಮಾಧಿ ಲಿಂಗ ಸ್ಥಾಪನ ಎಂಬುದಾಗಿ ಕರೆಯಲಾಗಿದೆ.[೫]

ಸ್ಮಾರಕ ಕಲ್ಲುಗಳನ್ನು ನೆಡುವುದೇ ಮುಖ್ಯವಾಗಿ ಆಚರಣೆಯಲ್ಲಿ ಇರುವ ಅಂತ್ಯ ಸಂಸ್ಕಾರದ ವಿಧಿಯು ಮಧ್ಯಭಾರತದ ಮಾರಿಯಾ ಜನಾಂಗದಲ್ಲಿ ಬೆಳೆದು ಬಂದಿರುವುದನ್ನು ಗಮನಿಸಬಹುದಾಗಿದೆ. (ಚಿತ್ರ ೧, ೨) ಇಲ್ಲಿ ಸತ್ತ ವ್ಯಕ್ತಿಯ ಸೋದರಿಯ ಮಗ ತನ್ನ ಸೋದರ ಮಾವನ ಅಂತ್ಯ ಸಂಸ್ಕಾರಗಳನ್ನು ಮಾಡುವ ಕರ್ತನಾಗುತ್ತಾನೆ. ಸತ್ತ ನಿರ್ದಿಷ್ಟ ಅವಧಿಯೊಳಗೆ ಅವನ ಸಂಬಂಧಿಕರು ಕರ್ತನನ್ನು ಮುಂದುಮಾಡಿಕೊಂಡು ಮೂರು ತಮಟೆಗಳನ್ನು ಬಾರಿಸುತ್ತ

೫. P. Narayana Babu : 'A Rare Passage Grave in North Karnataka', S.I.H.C, Ed. : Srinivasa Ritti and B.R. Gopal

ಬಂಡೆ ಇರುವ ಪ್ರದೇಶಕ್ಕೆ ಹೋಗುತ್ತಾರೆ. ಅಲ್ಲಿ ಬಂಡೆಯನ್ನು ತೆಗೆಯುತ್ತಾರೆ. ಆ ಕಲ್ಲನ್ನು ಕರ್ತನು ಮುಟ್ಟಿ "ನಿನ್ನ ಹೆಸರಿನಲ್ಲಿ ಈ ಕಲ್ಲನ್ನು ತೆಗೆದುಕೊಂಡು ಹೋಗುತ್ತೇವೆ. ಇದು ಹಗುರವಾಗಿರಲಿ. ಹೊರುವುದಕ್ಕೆ ಯಾವ ತೊಂದರೆಯೂ ಆಗದಿರಲಿ" ಎಂದು ಹೇಳುತ್ತಾನೆ. ಕಲ್ಲನ್ನು ಮರದ ತೊಲೆಗಳಿಗೆ ಕಟ್ಟಿ ಹೊತ್ತುಕೊಂಡು ಹೊರಡುತ್ತಾರೆ. ಕರ್ತನು ಒಂದು ತಮಟೆಯನ್ನು ಹಿಡಿದು ಆ ಕಲ್ಲಿನ ಮೇಲೆ ನಿಂತು ಬಡಿಯಲು ಪ್ರಾರಂಭ ಮಾಡಿದಾಗ ಹೊರುವವರು ಶಬ್ದ ಮಾಡುತ್ತ, ಶಿಲೆಯನ್ನು ಹೂಳಲು ನಿಗದಿ ಮಾಡಿರುವ ಸ್ಥಳಕ್ಕೆ ಬರುತ್ತಾರೆ. ಸ್ಮಾರಕವನ್ನು ನೆಡುವ ಸ್ಥಳವನ್ನು ತಲುಪಿದಾಗ, ಆಸರೆಯಾಗಿ ಇಟ್ಟುಕೊಂಡಿದ್ದ ಕೋಲುಗಳನ್ನು ಎಸೆದು, ಬೇರೆ ಕೋಲುಗಳನ್ನು ತೆಗೆದುಕೊಳ್ಳುತ್ತಾರೆ. ಆನಂತರ ಮೃತನನ್ನು ಉದ್ದೇಶಿಸಿ, "ನೀನು ಸತ್ತು ಹೋಗಿದ್ದೀಯೆ. ಇನ್ನು ನೀನು ನಿನ್ನ ತಂದೆ, ತಾಯಿ, ಸೋದರ, ಸೋದರಿಯರನ್ನು, ನಿನ್ನ ಸಂಸಾರವನ್ನು ಮರೆತು ಬಿಡಬೇಕು. ಈಗ ಇದು ನಿನ್ನ ಮನೆ. ಇಲ್ಲಿಯೇ ಇರು. ನೀನು ನಮ್ಮನ್ನಾಗಲೀ, ನಮ್ಮ ಹಂದಿಗಳನ್ನಾಗಲೀ, ನಮ್ಮ ದನಕರುಗಳನ್ನಾಗಲೀ ತೊಂದರೆಗೀಡು ಮಾಡಬೇಡ. ನಿನಗೆ ಬೇಕಾದ ಆಹಾರವನ್ನು ನೀನು ಬದುಕಿದ್ದಾಗ ಹೇಗೆ ಪಡೆಯುತ್ತಿದ್ದೆಯೋ ಹಾಗೆಯೇ ಕೊಟ್ಟು ನಿನ್ನನ್ನು ತೃಪ್ತಿ ಪಡಿಸುತ್ತೇವೆ" ಎಂದು ಹೇಳುತ್ತಾರೆ[೬].

ಸ್ಮಾರಕ ಶಿಲೆಗಳನ್ನು ನೆಡುವುದಕ್ಕಾಗಿ ಕರ್ತನಿಂದಲೇ ಅಗೆಯಲ್ಪಟ್ಟ ಸತ್ತವನ ಗುಣಿಯಲ್ಲಿ ಸಂಬಂಧಿಗಳು ಅನ್ನ, ಹಣ, ಉಂಗುರ ಮುಂತಾದವುಗಳನ್ನು ತಮ್ಮ ಶಕ್ತ್ಯಾನುಸಾರ ಹಾಕುತ್ತಾರೆ. ಆನಂತರ ಕಲ್ಲನ್ನು ಹೊತ್ತು ತಂದವರೇ ಅದನ್ನು ಗುಣಿಯಲ್ಲಿ ನಿಲ್ಲುವ ಹಾಗೆ ಮಾಡುತ್ತಾರೆ. ಇಲ್ಲಿಯೇ ಕರ್ತನು ಹಾಗೂ ಇತರ ಹೆಂಗಸರು ಅವನಿಗೆ ಆಹಾರವನ್ನು ಅರ್ಪಿಸುತ್ತಾರೆ. ಆನಂತರ ಈ ಜನರೆಲ್ಲ ಮನೆಗೆ ಬಂದು ಒಂದೆರಡು ಹಸುಗಳನ್ನು ಬಲಿ ಕೊಡುತ್ತಾರೆ. ತನಗೆ ಬಲಿ ಕೊಡಬೇಕಾದ ಹಸುಗಳನ್ನು ವ್ಯಕ್ತಿ ಸಾಯುವುದಕ್ಕಿಂತ ಮುನ್ನವೇ ಆಯ್ಕೆ ಮಾಡಿಕೊಂಡಿರುತ್ತಾನೆ. ಅವರು ಅದರ ಕರುಳನ್ನು ತೆಗೆದು ಅನ್ನದಲ್ಲಿ ಬೇಯಿಸಿ ನಾಲ್ಕು ಭಾಗಗಳನ್ನಾಗಿ ಮಾಡಿ ಸತ್ತವನಿಗೆ, ಭೂದೇವಿಗೆ ಹಾಗೂ ತಮಗಿಂತ ಹಿಂದೆ ಇತರರು ಹಾಕಿದ ಸ್ಮಾರಕ ಶಿಲೆಗಳ ಮುಂದೆ ಹಾಕುತ್ತಾರೆ.

ಇದೇ ರೀತಿಯ ಸಂಸ್ಕಾರ ವಿಧಿಯನ್ನು ಸಂಗಮ್ ಕಾಲದ ತಮಿಳು ಸಾಹಿತ್ಯ ಕೃತಿಗಳಲ್ಲಿ ಕಾಣಬಹುದಾಗಿದೆ. ಆದರೆ ಅವು ವೀರರಿಗೆ ಮತ್ತು ಮಹಾ ಸತಿಯರಿಗೆ, ಇತರ ಶ್ರೇಷ್ಠ ವ್ಯಕ್ತಿಗಳಿಗೆ ಹಾಕುವ ಸ್ಮಾರಕ ಶಿಲೆಗಳಾಗಿವೆ. ಆ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿಶದವಾಗಿ ಚರ್ಚಿಸಲಾಗಿದೆ.

ಈ ರೀತಿಯ ಸ್ಮಾರಕ ಶಿಲೆಗಳನ್ನು ಸಾಲುಸಾಲಾಗಿ, ದುಂಡಾಗಿ, ಲಾಳಾಕಾರವಾಗಿ ಮಣಿಪುರದ ನಾಗಾ ಜನಾಂಗದವರು ತಮ್ಮ ವಂಶದ ಹಿರಿಯರಿಗೆ ನೆಡುತ್ತಾರೆ. ಭಿಲ್ಲ ಜನಾಂಗದವರು

೬. Verrier Elwin : The Maria Murder and Suicide. ಪುಟ. ೩೦–೩೧

ತಮ್ಮಲ್ಲಿನ ಮುಖ್ಯಸ್ಥನಿಗೆ 'ದೇವಸ್ಥಾನ'ವನ್ನು ಅವನ ಸ್ಮಾರಕವಾಗಿ ಮಾಡುತ್ತಾರೆ (ಚಿತ್ರ ೩). ದೇವಾಲಯದಲ್ಲಿ ಸತ್ತ ವ್ಯಕ್ತಿ ಕುದುರೆಯ ಮೇಲೆ ಕುಳಿತಿರುವ ಹಾಗೆ ಅವನ ವಿಗ್ರಹವನ್ನು ಕಡೆದು ನಿರ್ಮಿಸುತ್ತಾರೆ. ಗೋಂಡ ಜನಾಂಗದವರು ಮೃತಾತ್ಮರ ಪ್ರೇತಗಳು ಶಾಶ್ವತವಾಗಿ ಇರಲು, ಅಲ್ಲಿ ರಕ್ಷಣೆ ಪಡೆಯಲು ಸ್ಮಾರಕ ಶಿಲೆಗಳನ್ನು ನಿರ್ಮಿಸುತ್ತಾರೆ. ನೀಲಗಿರಿಯ ಕುರುಬರು ಕಲ್ಲು ಚಪ್ಪಡಿಗಳಿಂದ 'ಸಾವು ಮನೆ'ಯನ್ನು ನಿರ್ಮಿಸುತ್ತಾರೆ. ಈ 'ಸಾವು ಮನೆ'ಗಳು ತಲೆತಲಾಂತರಗಳಿಂದ ಮಾಡಲ್ಪಟ್ಟಿವೆ ಎಂದು ಅವರ ಭಾವನೆ. ಈ ರೀತಿಯ ಸಾವು ಮನೆಗಳ ನಿರ್ಮಾಣ ಇಂದಿಗೂ ಆ ಜನಾಂಗಲದಲಿ ಮುಂದುವರೆದು ಬರುತ್ತಿರುವ ಅಂತ್ಯ ಸಂಸ್ಕಾರದ ಒಂದು ವಿಧಿಯಾಗಿದೆ. ಈ ಎಲ್ಲಾ ಸ್ಮಾರಕಗಳ ಹಿಂದೆ ಇರುವ ಮನೋಧರ್ಮ ಒಂದೇ ; ಸತ್ತ ವ್ಯಕ್ತಿ ತನ್ನ ಮಕ್ಕಳಿಗೆ ಕಷ್ಟಕಾಲದಲ್ಲಿ ಸಹಾಯ ಮಾಡುತ್ತಾನೆ ; ತಮಗೆ ಯಾವ ತೊಂದರೆಯೂ ಸತ್ತವನಿಂದ ಉಂಟಾಗದಿರಲಿ ; ಸ್ಮರಕ ನಿರ್ಮಿಸುವುದರಿಂದ ಕರ್ತನಾದ ತಾನು ಋಣಮುಕ್ತನಾಗುವುದಲ್ಲದೆ, ಸತ್ತವನಿಗೂ ಶಾಂತಿಯನ್ನು ಮತ್ತು ರಕ್ಷಣೆಯನ್ನು ಈ ಕಲ್ಲು ನೀಡುವುದು ಎಂಬ ಪ್ರಬಲವಾದ ನಂಬುಗೆ.

ಈ ರೀತಿ ಸ್ಮಾರಕಗಳನ್ನು ಹಾಕುವ ಪದ್ಧತಿ ಮತ್ತು ಶವ ಸಂಸ್ಕಾರದ ರೀತಿಗಳು ಕಾಲಾನುಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ, ಪ್ರಾಗೈತಿಹಾಸಿಕ ಕಾಲದಿಂದ ಆ ಜನಾಂಗದವರ ನಂಬಿಕೆ, ಧರ್ಮ ಮತ್ತು ಸನ್ನಿವೇಶಗಳೊಂದಿಗೆ ಬೆಳೆದು ಬಂದವು. ಆದರೆ ಮೂಲಭೂತವಾದ ಈ ಪದ್ಧತಿಗಳು ತಮ್ಮ ಆಶಯಗಳನ್ನೂ, ವಿಶಿಷ್ಟತೆಗಳನ್ನೂ ಉಳಿಸಿಕೊಂಡು ಹೆಚ್ಚಿನ ಅರ್ಥವ್ಯಾಪ್ತಿಯನ್ನು ಪಡೆದವು ಎಂಬುದು ಗಮನಿಸಬೇಕಾದ ಅಂಶ.

ಅಂದರೆ ಭೂತ, ಪ್ರೇತಗಳ ಬಗ್ಗೆ ಇದ್ದ ಭಯ ಪ್ರೇತಾತ್ಮನಿಗೆ ಅವಶ್ಯವಾದ ಅನುಕೂಲಗಳನ್ನು ಒದಗಿಸುವ ಮತ್ತು ಅವುಗಳು ಒಂದು ಕಡೆ ಇದ್ದು ರಕ್ಷಣೆಯನ್ನು ಪಡೆಯುವ ಸಾಧನವಾಗಿ ಈ ಶಿಲೆಗಳು ಹುಟ್ಟಿ ಕೊಂಡವು. ಆನಂತರದಲ್ಲಿ ಮೃತನ ಆತ್ಮವು ಆ ಶಿಲೆಯಲ್ಲಿ ನೆಲೆಸಿರುವುದೆಂಬ ನಂಬಿಕೆಯ ಮೇಲೆ ಅದನ್ನು ಆರಾಧಿಸಲು ಆರಂಭಿಸಿದರು. ಇದೇ ಶಿಲೆಗಳು ಕಾಲಾನುಕ್ರಮದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳ ಪ್ರಭಾವದಿಂದಾಗಿ ಸತ್ತ ವ್ಯಕ್ತಿಗಳ ಸ್ಮರಕಗಳಾಗಿಯೋ, ಅವನ ಸಾವನ್ನು ತಿಳಿಸುವ ದಾಖಲೆಗಳಾಗಿಯೋ ಪರಿಣಮಿಸಿದವು.

ಬಹುಪಾಲು ಸ್ಮಾರಕಗಳು ಕಲ್ಲುಗಳೇ ಆಗಿರುವುದನ್ನು ಗಮನಿಸಬಹುದು, ಈ ಹಿಂದೆ ನಾವು ಗಮನಿಸಿರುವಂತೆ ಕಲ್ಲುಗಳಲ್ಲಿ ಮೃತನ ಆತ್ಮ ರಕ್ಷಣೆ ಪಡೆಯುವುದೆಂಬ ನಂಬಿಕೆಯಿದ್ದಿತು. ಶಿಲೆಗಳ ಆರಾಧನೆ ವಿಶೇಷವಾದ ಮಹತ್ವವನ್ನು ಪಡೆಯುವುದಕ್ಕೆ ಕಾರಣ, ಇವು ಎಲ್ಲ ಪ್ರದೇಶಗಳಲ್ಲಿ ಸುಲಭವಾಗಿಯೂ ತಮ್ಮ ಸಹಜ ಆಕೃತಿಗಳಿಂದಲೇ ಜನರಲ್ಲಿ ಒಂದು ಭಾವನೆಯನ್ನು ಮೂಡಿಸುವಂತೆಯೂ ದೊರೆಯುತ್ತವೆ ಎಂಬುದು. ಸ್ಮಾರಕವಾಗಿ ನೆಡಬೇಕಾದ ಶಿಲೆ ಹೀಗೇ

ಇರಬೇಕೆಂಬ ನಿಯಮ ಆಯಾ ಜನಾಂಗ ಮತ್ತು ಆ ಜನಾಂಗದ ಸಂಸ್ಕೃತಿಯನ್ನು ಅನುಸರಿಸುತ್ತದೆಯೇ ವಿನಾ ಸಾರ್ವತ್ರಿಕವಲ್ಲ. ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿಯೂ ಪೂಜೆಗೊಳಗಾದ ಒಂದಲ್ಲ ಒಂದು ಕಲ್ಲು ಇದ್ದೇ ಇರುತ್ತದೆ. ಅದು ಇಂಥದ್ದನ್ನೇ ಪ್ರತಿನಿಧಿಸುತ್ತವೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಆ ಕಲ್ಲನ್ನು ಆರಾಧಿಸುವ ಜನ ಅದಕ್ಕೆ ಯಾವ ಐತಿಹ್ಯವನ್ನು ಆರೋಪಿಸುತ್ತಾರೆಯೋ ಅದೇ ಆ ಕಲ್ಲಿನ ಐತಿಹ್ಯವಾಗಿರುತ್ತದೆ. ಆ ಐತಿಹ್ಯಕ್ಕೆ ಕಲ್ಲು ಒಂದು ಸಂಕೇತ ಮಾತ್ರ. ಈ ತೆರನ ಸಂಕೇತಗಳು ದೇವತೆಗಳ, ಗ್ರಾಮ ದೇವತೆಗಳ, ಕ್ಷೇತ್ರ ಪಾಲಕ ಪೂರ್ವಜರ ಅಥವಾ ಕಾಲ ಗರ್ಭದಲ್ಲಿ ಅಡಗಿ ಹೋದ ಅನ್ಯಾಯದ ಮೂಕ ಸಾಕ್ಷಿಯೂ ಆಗಿರಬಹುದು.

ಮಧ್ಯ ಭಾರತದ ಮಾರಿಯಾ ಜನಾಂಗದವರು ವಾಸಿಸುವ ಕಡೆಗಳಲ್ಲಿ ಸಾಲುಸಾಲಾದ ಸ್ಮಾರಕ ಶಿಲೆಗಳು ಕಂಡು ಬರುತ್ತವೆ. ಇವು ಕೆಲವು ಕಡೆಗಳಲ್ಲಿ ಗಾತ್ರದಲ್ಲಿ ಬಹು ದೊಡ್ಡದಾಗಿಯೂ, ಮತ್ತೆ ಕೆಲವು ಕಡೆಗಳಲ್ಲಿ ಬಹಳ ಚಿಕ್ಕದಾಗಿಯೂ ಇರುತ್ತವೆ. ಸಣ್ಣಗಿರುವುದು ಕಾಲಾನುಕ್ರಮದಲ್ಲಿ ಬೆಳೆಯುತ್ತದೆ ಎಂಬುದು ಅಲ್ಲಿನ ಜನರ ನಂಬಿಕೆ. ಅವರಲ್ಲಿ ಬಹುಪಾಲು ಜನ ಕಲ್ಲಿನಿಂದ ಮಾಡಿದ ಕಂಬಗಳನ್ನು ನಿಲ್ಲಿಸುತ್ತಾರೆ. ಇವನ್ನು 'ಉರಸ್ ಕಲ್' ಎಂಬುದಾಗಿಯೂ ಕರೆಯುತ್ತಾರೆ. ಮತ್ತೆ ಕೆಲವರು ವಿಶಾಲವಾದ ಕಲ್ಲು ಚಪ್ಪಡಿಯನ್ನು ಕೆಲವು ಕಲ್ಲುಗಳ ಆಸರೆಯಿಂದ ನಿಲ್ಲಿಸುತ್ತಾರೆ. ಇದೇ ಪ್ರದೇಶದಲ್ಲಿರುವ ಕೊರಕು ಜನಾಂಗದವರೂ ಸ್ಮಾರಕ ಶಿಲೆ ನೆಡುತ್ತಾರೆ (ಚಿತ್ರ ೪).

ಕಾಥೆವಾಡದಲ್ಲಿನ ಪ್ರತಿಯೊಂದು ಹಳ್ಳಿಯ ಬಳಿಯೂ ನಮಗೆ ಈ ತೆರನ ಸ್ಮಾರಕ ಶಿಲೆಗಳು ಕಂಡು ಬರುತ್ತವೆ. ಅವು ತಮ್ಮ ವಂಶದ ಅಥವಾ ಊರಿನ ಯಾವುದೇ ವ್ಯಕ್ತಿಯ ಗೌರವಾರ್ಥವಾಗಿ ನೆಟ್ಟ ಕಲ್ಲುಗಳಾಗಿರುತ್ತವೆ. ಈ ನೆಟ್ಟ ಕಲ್ಲುಗಳು ಊರಿನ ದನಗಳನ್ನು ರಕ್ಷಿಸಲು ಹೋಗಿ ಸತ್ತ, ಯುದ್ಧದಲ್ಲಿ ಸತ್ತ, ಆಕಸ್ಮಿಕವಾಗಿ ಸತ್ತ ಮತ್ತು ತಮ್ಮ ಗಂಡನೊಂದಿಗೆ ಸಹಗಮನ ಮಾಡಿದ ಮಾಹಾ ಸತಿಯರ ಸ್ಮಾರಕ ಶಿಲೆಗಳಾಗಿರುತ್ತವೆ. ಈ ಕಲ್ಲುಗಳ ಮೇಲೆ ಸತ್ತ ವ್ಯಕ್ತಿಯ ಹೆಸರು, ಮಡಿದ ಕಾಲ ಮತ್ತು ಕಾರಣಗಳನ್ನು ಬರೆಯಲಾಗಿರುತ್ತದೆ. ಹಾಗೂ ಸತ್ತವರ ಚಿತ್ರಗಳನ್ನು ಬಿಡಿಸಲಾಗಿರುತ್ತದೆ[೭].

ಕುರುಬರು ಮತ್ತು ಬೇಡ ಜನಾಂಗದವರು ತಮ್ಮ ವಂಶದ ಪೂರ್ವಜರನ್ನು ಆರಾಧಿಸುವ ಸಂಪ್ರದಾಯವನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ತಮ್ಮ ಹಿರಿಯರ ಆತ್ಮಗಳ ವಾಸ ಸ್ಥಾನಕ್ಕಾಗಿ ಇವರು ಕಲ್ಲು ಚಪ್ಪಡಿಗಳಿಂದ ಗುಡಿಗಳನ್ನು ನಿರ್ಮಿಸಿ, ಆ ಗುಡಿಯ ಒಳಗಿನ ಕಲ್ಲೊಂದರಲ್ಲಿ ಸತ್ತ ವ್ಯಕ್ತಿಯ ಚಿತ್ರವನ್ನು ಬಿಡಿಸುತ್ತಾರೆ. ವರ್ಷಕ್ಕೊಮ್ಮೆ ಅಲ್ಲಿ ಜಾತ್ರೆಯನ್ನು ನಡೆಸುತ್ತಾರೆ. ಬೇಡರ

೭. Willam Crooke and Enthoven : Religion and Folklore of Northern India ಪು. ೩೨೦

ಗುಡಿಗಳಲ್ಲಿ ಸತ್ತ ವ್ಯಕ್ತಿಗಳನ್ನು ಸಂಕೇತಿಸಲು ಕೆಲವೊಮ್ಮೆ ಕೆಲವಾರು ಕಲ್ಲುಗಳನ್ನು ಇಟ್ಟು, ಅವುಗಳಿಗೆ ಎಣ್ಣೆಯನ್ನು ಬಳಿದು ಆರಾಧಿಸುತ್ತಾರೆ. ಇಂಥ ಗುಡಿಗಳನ್ನು ಜನ ಸಾಮಾನ್ಯವಾಗಿ 'ಪಾಂಡವರ ಗುಡಿ'ಗಳೆಂದು ಕರೆಯುತ್ತಾರೆ. ಇಂಥ ಗುಡಿಗಳು ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕುರುಬರು ಮತ್ತು ಬೇಡ ಜನಾಂಗದವರು ವಾಸವಾಗಿರುವ ಕಡೆಗಳಲ್ಲಿ ಇರುತ್ತವೆ. ಇಂಥ ಗುಡಿಗಳನ್ನು ಬಡಗರೂ ನಿರ್ಮಿಸುತ್ತಾರೆಂದು ಎಡ್ಗರ್ ಥರ್ಸ್ಟನ್ ಅವರು ತಿಳಿಸುತ್ತಾರೆ[೮]. ಈ ಜನಾಂಗದವರು ಗ್ರಾಮದ ಪಕ್ಕದಲ್ಲಿ ಸಾಲು ಸಾಲಾಗಿ ನಿರ್ಮಿಸಲ್ಪಟ್ಟಿರುವ ಪ್ರಾಗೈತಿಹಾಸಿಕ ಗುಡಿಗಳನ್ನು ಹೋಲುವ ಗುಡಿಗಳನ್ನೇ ನಿರ್ಮಿಸುತ್ತಾರೆ. ಇವುಗಳಲ್ಲಿನ ಒಂದು ಕಲ್ಲಿನ ಮೇಲೆ ಸೂರ್ಯ, ಚಂದ್ರ, ಮನುಷ್ಯರ, ಪ್ರಾಣಿಗಳ ಚಿತ್ರಗಳನ್ನೂ, ಕೆಲವೊಮ್ಮೆ ಬೊಂಬೆಗಳನ್ನೂ ಇಟ್ಟಿರುತ್ತಾರೆ. ಈ ಗುಡಿಯೊಳಗೆ ಶಂಖ, ಲಿಂಗ, ಗಂಟೆ ಮತ್ತು ಹೂಗಳು ಇರುತ್ತವೆ. ಅಂದರೆ ಈಗಲೂ ಅವುಗಳಿಗೆ ಪೂಜೆ ನಡೆಯುತ್ತದೆ ಎಂದು ಹೇಳುವ ಎಡ್ಗರ್ ಥರ್ಸ್ಟನ್ ತಾವು ಈ ತೆರದ ಗುಡಿಗಳನ್ನು ಶೋಲೂರು, ಮೇಲೂರು ಮುಂತಾದ ನೀಲಗಿರಿಯ ಪ್ರದೇಶಗಳಲ್ಲಿ ನೋಡಿರುವುದಾಗಿ ತಿಳಿಸುತ್ತಾರೆ.

ದಕ್ಷಿಣ ಭಾರತದ ಹಲವಾರು ಕಡೆಗಳಲ್ಲಿ ಸಹಗಮನ ಮಾಡಿದ ಸ್ತ್ರೀಯರ ಸ್ಮಾರಕವಾಗಿ ಒಂದು ಕಲ್ಲನ್ನು ನೆಟ್ಟಿರುತ್ತಾರೆ, ಅಥವಾ ಒಂದು ವೇದಿಕೆಯನ್ನು ನಿರ್ಮಿಸಿರುತ್ತಾರೆ. ಹಾಗೆಯೇ ವೀರನಿಗೂ ಅವನನ್ನು ಸಮಾಧಿ ಮಾಡಿದ ಕಡೆಯೇ ಅಥವಾ ಅವನಿಗೆ ದತ್ತಿಯಾಗಿ ಬಿಟ್ಟ ಜಮೀನಿನಲ್ಲಿಯೇ ಒಂದು ಶಿಲೆಯನ್ನು ಹಾಕಿರುತ್ತಾರೆ.

ಪಶ್ಚಿಮ ಭಾರತದಲ್ಲಿ 'ಪಾಲಿಯಾ' (ಕಾಪಾಡುವವರು) 'ಖಾಂಬಿಯಾ' (ಕಂಬ) ಅಥವಾ 'ಚರಾ' (ಸಮಾಧಿಕಲ್ಲು) ಎಂಬುದಾಗಿ ಕೆಲವೊಂದು ವಿಶಿಷ್ಟವಾದ ಸ್ಮಾರಕಗಳಿವೆ. ಇವು ಜಗಳಗಳಲ್ಲಿ ಮಡಿದವರಿಗೋ, ಹುತಾತ್ಮರಿಗೋ, ವಂಶದ ಶ್ರೇಷ್ಠಗುಣಗಳನ್ನುಳ್ಳ ವ್ಯಕ್ತಿಗೋ ಅಥವಾ ಕೆಲವೊಮ್ಮೆ ಭೂತಪೀಡಿತವಾದ ವ್ಯಕ್ತಿ ಸತ್ತಾಗಲೋ ನಿರ್ಮಿಸಿದ ಸ್ಮಾರಕಗಳು. ಇಂಥ ಆತ್ಮಗಳಿಗೆ ಸ್ಮಾರಕ ಶಿಲೆಗಳನ್ನಾಗಲೀ, ಮರದ ಕಂಬವನ್ನಾಗಲೀ ಅಥವಾ ಮರದಿಂದ ಮಾಡಿದ ಬೊಂಬೆಯನ್ನಾಗಲೀ ಹಾಕಿಸದಿದ್ದರೆ ಅವರು ತಮ್ಮ ಸಂಸಾರವನ್ನೂ, ತಮ್ಮ ದನಕರುಗಳನ್ನೂ, ತಮ್ಮನ್ನೂ ತೊಂದರೆಗೆ ಸಿಲುಕಿಸುತ್ತಾರೆಂದು ಅಲ್ಲಿನ ಜನ ನಂಬುತ್ತಾರೆ. ಇವುಗಳನ್ನು ಊರಿನ ಮೈದಾನದಲ್ಲಿ ಅರಳೀಮರದ, ಅಂಜೂರಮರದ ಕೆಳಗೋ ಅಥವಾ ಕೆರೆಯ ಬಳಿಯೋ, ವ್ಯಕ್ತಿ ಸತ್ತ ಸ್ಥಳದ ಬಳಿಯೋ ನೆಟ್ಟಿರುತ್ತಾರೆ. ಅದು ಊರಿನ ಹಿತರಕ್ಷಣೆಗಾಗಿ ಮಡಿದ ವ್ಯಕ್ತಿಗಳ ಸ್ಮಾರಕವಾಗಿದ್ದರೆ ಕಲ್ಲಿನ ಒಂದು ಮುಖದಲ್ಲಿ ವ್ಯಕ್ತಿಯೊಬ್ಬ ಕತ್ತಿಯನ್ನು ಮತ್ತು ಗುರಾಣಿಯನ್ನು ಹಿಡಿದು ನಿಂತಿರುವ ಹಾಗೆ, ಕೆಲವೊಮ್ಮೆ ಒಂಟೆ ಅಥವಾ ಕುದುರೆಯ ಮೇಲೆ ಕುಳಿತಿರುವ ಹಾಗೆ ಚಿತ್ರವನ್ನು ಬಿಡಿಸಿರುತ್ತಾರೆ. ಮತ್ತೆ ಕೆಲವೊಮ್ಮೆ ಒಬ್ಬ ಮನುಷ್ಯ ಮತ್ತು ಸ್ತ್ರೀ ಅಥವಾ ಹನುಮಂತನನ್ನು ಬಿಡಿಸಿರುತ್ತಾರೆ. ಇನ್ನೊಂದು ಮುಖದಲ್ಲಿ

೮. Edgar Thurston :Castes and Tribes of South India. Vol. I ಪು. ೨೦೮–೯

ಸೂರ್ಯ, ಚಂದ್ರರನ್ನು ಬಿಡಿಸಿರುತ್ತಾರೆ. ಇಲ್ಲಿಯೇ ಸತ್ತ ವ್ಯಕ್ತಿಯ ಸಾವಿಗೆ ಕಾರಣ ಮತ್ತು ಅವನು ಸತ್ತ ದಿನದ ವಿವರಗಳನ್ನು ನಮೂದಿಸಿರುತ್ತಾರೆ. ಈ ಕಲ್ಲಿಗೆ ಜನ ಪೂಜೆ – ಪುನಸ್ಕಾರಗಳನ್ನು ಮಾಡುತ್ತಾರೆ. ಹರಕೆಯನ್ನು ಹೊತ್ತು ಬೇಡಿಕೆಗಳನ್ನು ಸಲ್ಲಿಸುತ್ತಾರೆ.[೯]

ಮಾರಿಯಾ ಜನಾಂಗದಲ್ಲಿನ ಶ್ರೀಮಂತ ವ್ಯಕ್ತಿ ಸತ್ತರೆ ಅವನ ಸಂಬಂಧಿಗಳು ಅವನ ಸ್ಮಾರಕವಾಗಿ ಕಲ್ಲನ್ನು ನೆಡುವುದರ ಬದಲು ಮರದ ಕಂಬವನ್ನು ನಿಲ್ಲಿಸುತ್ತಾರೆ (ಚಿತ್ರ ೨). ಈ ತೆರನ ಕಂಬಗಳು ಬಹಳ ಸಂಖ್ಯೆಯಲ್ಲಿ ಇಲ್ಲ. ಏಕೆಂದರೆ ಅವುಗಳನ್ನು ಮಾಡುವುದಕ್ಕೆ ತಗಲುವ ವೆಚ್ಚ ಬಹಳ. ಈ ವೆಚ್ಚವನ್ನು ಬಡವರಾದವರು ಭರಿಸಲು ಕಷ್ಟಸಾಧ್ಯ. ಅದೂ ಅಲ್ಲದೆ, ಈ ಮರದ ಕಂಬವನ್ನು ಸ್ಮಾರಕವಾಗಿ ಪಡೆಯಲು ಕೆಲವರಿಗೆ ಮಾತ್ರ ಅರ್ಹತೆ ಇದೆ ಎಂಬ ನಂಬಿಕೆಯೂ ಅವರಲ್ಲಿದೆ. ಈ ಕಂಬಗಳನ್ನು ಸಾಮಾನ್ಯವಾಗಿ ರಸ್ತೆಯ ಅಂಚಿನಲ್ಲಿಯೇ ನೆಟ್ಟಿರುತ್ತಾರೆ. ಇದಕ್ಕೆ ಕಾರಣ ಸಾಮಾನ್ಯವಾಗಿ ಇವು ಜನ ಓಡಾಡುವ ಕಡೆ ಇದ್ದು, ಅವರ ಕಣ್ಣಿಗೆ ಬೀಳುತ್ತಿರಲಿ ಎಂಬುದಷ್ಟೆ. ಈ ಕಂಬಗಳು ಅಲ್ಲಿ ದೊರಲೆಯುವ 'ಸಾಜ' ಅಥವಾ 'ಸಾರಿಯಾ' ಎಂಬ ಮರಗಳದ್ದಾಗಿರುತ್ತದೆ. ಇದೇ ಜನಾಂಗದವರ ಸ್ಮಾರಕ ಶಿಲೆಗಳ ಪ್ರತಿಷ್ಠಾಪನೆಯ ಸಂಪ್ರದಾಯ ವಿಧಿಗಳನ್ನು ಈಗಾಗಲೇ ಗುರುತಿಸಿದ್ದೇವೆ. ಇವುಗಳನ್ನು ಸಂಪ್ರದಾಯ ವಿಧಿಗಳಿಗನುಸಾರವಾಗಿ ಅಂತ್ಯ ಸಂಸ್ಕಾರದ ಆಚರಣೆಯ ವಿಧಿಯಲ್ಲಿಯೇ ನೆಡುತ್ತಾರೆ.[೧೦]

ಈ ಕಂಬಗಳು ಸಂಖ್ಯೆಯಲ್ಲಿ ಕೆಲವೇ ಇದ್ದರೂ ಗಮನಾರ್ಹವಾಗಿವೆ. ಪ್ರತಿಯೊಂದು ಕಂಬವೂ ಸಹ ಸತ್ತ ವ್ಯಕ್ತಿಯ ಜೀವನಚರಿತ್ರೆಯನ್ನು ತಿಳಿಸಲು ಪ್ರಯತ್ನಿಸುತ್ತದೆ. ಸತ್ತ ವ್ಯಕ್ತಿಯ ಅಧಿಕಾರದ, ಶ್ರೀಮಂತಿಕೆಯ ಸಂಕೇತಗಳಾಗಿ ಅವನು ಕುದುರೆ, ಒಂಟೆ ಅಥವಾ ಆನೆಯ ಮೇಲೆ ಕುಳಿತಿರುವ ಹಾಗೆ ಚಿತ್ರಿಸಲಾಗುತ್ತದೆ. ಅವನಿಗೆ ಸಂತೋಷ ಒದಗಿಸುವ ನೃತ್ಯಗಾರ್ತಿಯರನ್ನು, ಅವನಿಗೆ ನಿರಂತರವಾಗಿ ಸುಖವನ್ನು ನೀಡುವ ಲಾಂಡ ಮಡಕೆಯನ್ನೂ ನಾವು ಕಾಣಬಹುದು. ಇದರ ಜೊತೆಯಲ್ಲೇ ಅವನು ಬಳಸಿದ ಆಯುಧಗಳನ್ನೂ ಅವನು ರಕ್ಷಿಸಿದ ಮತ್ತು ಬೇಟೆಯಾಡಿದ ಪ್ರಾಣಿಗಳನ್ನೂ ಬಿಡಿಸಿರುತ್ತಾರೆ.[೧೧]

ಕೆಲವೊಮ್ಮೆ ಸತ್ತವರ ಪ್ರತಿಮೆಗಳನ್ನೂ ಗೊಂಬೆಗಳನ್ನೂ ಹಲವಾರಿ ಕಡೆಗಳಲ್ಲಿ ಗಮನಿಸಬಹುದು. ಇವು ಮಣ್ಣಿನಿಂದ ಅಥವಾ ಮರದಿಂದ ಮಾಡಿದುದಾಗಿರುತ್ತವೆ. ನೀಲಗಿರಿಯ ಬಡಗರು ತಮ್ಮ ಹಿರಿಯರ ನೆನಪಿಗಾಗಿ ಮಾಡಿದ ಗುಡಿಗಳಲ್ಲಿ ಮಣ್ಣಿನಿಂದ ಮಾಡಿದ

೯. Willam Crooke and Enthoven : Religion and Folklore of Northern India ಪು. ೩೨೦

೧೦. Verrier Elwin : The Maria Murder and Suicide. ಪುಟ. ೩೦–೩೧

೧೧. ಅದೇ, ಪು. ೩೨–೩೩

ಬೊಂಬೆಗಳನ್ನೂ ಇಟ್ಟಿರುತ್ತಾರೆ. ಕೆಲವೊಮ್ಮೆ ಈ ಬೊಂಬೆಗಳು ಸಾಮಾನ್ಯವಾಗಿ ಹುಲಿ, ಮನುಷ್ಯ ಮತ್ತು ನಾಯಿಯದಾಗಿರುತ್ತದೆ. ಇಂಥ ಬೊಂಬೆಗಳು ಹುಲಿಯೊಡನೆ ಹೋರಾಡಿದ ವೀರರ ಸ್ಮಾರಕಗಳಾಗಿರಬಹುದು–ಎಂಬುದಾಗಿ ಊಹಿಸಬಹುದು. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಈ ಜಾತ್ರೆಗಳ ಸಮಯದಲ್ಲಿ ಹಳೆಯ ಬೊಂಬೆಗಳನ್ನು ತೆಗೆದು ಹೊಸ ಬೊಂಬೆಗಳನ್ನು ಇಟ್ಟು ಹರಕೆ ಮಾಡುತ್ತಾರೆ. ಆನಂತರ ಮೇಕೆಗಳನ್ನು ಬಲಿಯಾಗಿ ನೀಡುತ್ತಾರೆ.[೧೨]

ಈ ದೃಷ್ಟಿಯಿಂದ ಉತ್ತರ ಕನ್ನಡದ ಬೈಲೂರು ಮತ್ತು ಮುರುಡೇಶ್ವರದ ಬಳಿ ಇರುವ ವೀರರ ಮನೆ, ಮಾಸ್ತಿ ಮನೆಗಳು ಗಮನಾರ್ಹವಾಗಿವೆ. ಮುರುಡೇಶ್ವರದ ಮಾಸ್ತಿ ಮನೆಗಳಲ್ಲಿ ಅಂದರೆ ಮಹಾ ಸತಿಯರ ದೇವಾಲಯಗಳಲ್ಲಿರುವ ಸುಮಾರು ಹದಿನಾರು ಮರದ ಬೊಂಬೆಗಳನ್ನು ಬಹು ಪುರಾತನವಾದವುಗಳೆಂದು ಜನ ಭಾವಿಸುತ್ತಾರೆ. ಅವುಗಳಲ್ಲಿ ದೊಡ್ಡದು ನೇತ್ರಾಣಿ ಚೆಟ್ಟಿಗ. ಇದು ಬಹುಶಃ ನೇತ್ರಾಣಿ ಬೆಟ್ಟದ ಪಾಲಕ ದೇವತೆಯಾಗಿರಬೇಕು, 'ವೀರಮಾಸ್ತಿ', 'ಮಲ್ಲಮಾಸ್ತಿ', 'ಮಾಮಾಸ್ತಿ'ಯರು 'ನೇತ್ರಾಣಿ' ಸಂಬಂಧದ ದೈವಗಳು. ಐದನೆಯದು 'ಬಾಲಬಂಲ'. ಆರನೆಯದು ಕುದುರೆಯ ವೀರಪ್ಪ. ಈ ಪುರುಷ ವಿಗ್ರಹಗಳು ಕುದುರೆಯ ಮೇಲೆ ಕುಳಿತಿರುವ ಹಾಗೆ ಇವೆ. ಏಳನೆಯದು ಯಕ್ಷಿಯ ಕಂಬ. ಉಳಿದವುಗಳು ಭಕ್ತರು ಮಾಡಿಸಿದ ಹರಕೆಯ ಗೊಂಬೆಗಳು. ಇವು ಹಿಂದೆ ಯಾವಾಗಲೋ ಮಡಿದ ವೀರರ ಸ್ಮಾರಕಗಳಾಗಿರಬಹುದೆಂದು ಶ್ರೀ ಆರ್. ಎಸ್. ಪಂಚಮುಖಿಯವರು ಊಹಿಸುತ್ತಾರೆ.[೧೩] ಅವರ ಈ ಊಹೆ ಸರಿಯಾದುದೆಂದು ತೋರುತ್ತದೆ. ಇದೇ ರೀತಿ ವೀರರಾದ ಕೋಟಿ– ಚೆನ್ನಯ್ಯನವರ ಮರದ ವಿಗ್ರಹಗಳು ದಕ್ಷಿಣ ಕನ್ನಡದ ಹಲವಾರು ದೇವಾಲಯಗಳಲ್ಲಿ ಇರುವುದನ್ನು ಇಲ್ಲಿ ಸ್ಮರಿಸಬಹುದು.

ದಕ್ಷಿಣ ಆರ್ಕಾಟ್ ಜಿಲ್ಲೆಯ ಹಳ್ಳಿಗಳಲ್ಲಿನ ಊರಗೌಡನ ಬಳಿ ಒಂದು ಬಂಗಾರದ ವಿಗ್ರಹ ಇರುತ್ತದೆ. ಅದು ಅವರ ವಂಶದ ವೀರನದೇ ಆಗಿರುತ್ತದೆ. ಅದನ್ನು ಊರಗೌಡನು ತುಂಬಾ ಜೋಪಾನವಾಗಿ ಅರಿಶಿನ ಪುಡಿ ತುಂಬಿದ ಒಂದು ಪೆಟ್ಟಿಗೆಯಲ್ಲಿಟ್ಟಿರುತ್ತಾನೆ. ಇದಕ್ಕೆ ಸಂಬಂಧಿಸಿದ ಕೆಲವು ವಿಗ್ರಹಗಳನ್ನು ದೇವಾಲಯಗಳಲ್ಲಿ ಇಟ್ಟಿರುತ್ತಾರೆ. ವರ್ಷಕ್ಕೊಮ್ಮೆ ಸುತ್ತಮುತ್ತಲಿನ ವಂಶಸ್ಥರು ತಮ್ಮ ದೊಡ್ಡ ದೇವಾಲಯಗಳಲ್ಲಿ ಸೇರುತ್ತಾರೆ. ಅವರು ತಮ್ಮ ವೀರರ ವಿಗ್ರಹಗಳನ್ನು ಸಾಲಾಗಿಟ್ಟು, ಅವಕ್ಕೆ ತುಪ್ಪದ ದೀಪಗಳನ್ನು ಇಟ್ಟು ಪೂಜಿಸುತ್ತಾರೆ.[೧೪] ಇದೇ ರೀತಿಯ ವಿವರ ಇರುವ ವಿಗ್ರಹಗಳು ಧಾರವಾಡ ಜಿಲ್ಲೆಯಲ್ಲಿರುವ ಛತ್ರಿಯರೆಂಬ ಜನಾಂಗದವರ ಪ್ರತಿಯೊಂದು ಮನೆಯಲ್ಲಿಯೂ ಇರುತ್ತವೆ. ಇವು ಬೆಳ್ಳಿಯ ಸಾಮಾನ್ಯ ವಿಗ್ರಹಗಳಾಗಿರುತ್ತವೆ. ಇವುಗಳನ್ನು ವಿಶೇಷವಾಗಿ ಮದುವೆಯ ಸಂದರ್ಭಗಳಲ್ಲಿ ಪೂಜಿಸುತ್ತಾರೆ.[೧೫]

೧೨. Edgar Thurston :Castes and Tribes of South India Vol. I, ಪು.೭೦–೭೧

೧೩. R.S. Pancha Mukhi : Archaeological Report on Kannada Research in Bombay Proveince for the year 1939-40 ಪು. ೨೪

೧೪. Edgar Thurston:Castes and Tribes of South India.Vol. Iಪು.೧೫೨–೧೫೩

೧೫. ಈ ವಿಷಯವನ್ನು ತಿಳಿಸಿದವರು ಶ್ರೀ ಬೇಟಗೇರಿ ಕೃಷ್ಣಶರ್ಮ ಅವರು, ಧಾರವಾಡ.

ಶವಸಂಸ್ಕಾರದ ಆರಂಭದ ದಿಶೆಯಲ್ಲಿ ಸತ್ತವನ ಆಯುಧಗಳು, ಅವನ ಮರಣೋತ್ತರ ಜೀವನದಲ್ಲಿ ಉಪಯೋಗಕ್ಕೆ ಬರಲೆಂದು ಅವುಗಳನ್ನು ಅವನ ಸಮಾಧಿಯೊಡನೆ ಸೇರಿಸಿ ಬಿಡುತ್ತಿದ್ದರು. ಆದರೆ ಆಯುಧಗಳ ಬಗ್ಗೆ ಮಾನವನ ನಂಬಿಕೆ ಮತ್ತು ದೃಷ್ಟಿಕೋನ ಬೆಳೆದ ಹಾಗೆ ವೀರನ ಆಯುಧ ಅವನಿಗೆ ದೈವದತ್ತವಾದುದ್ದು, ಅದೇ ಅವನ ಎಲ್ಲ ವಿಜಯಗಳಿಗೆ ಕಾರಣವಾಯಿತೆಂದು ಭಾವಿಸಿ, ಅದನ್ನೂ ವೀರನ ಮರಣಾನಂತರ ವೀರನಷ್ಟೇ ಗೌರವದಿಂದ ಕಾಣಲಾರಂಬಿಸಿದರು.

ತಮಿಳುನಾಡಿನ ಹಳ್ಳಿಗಳಲ್ಲಿ ಕೆಲವು ಕಡೆ ಎರಡು ಮೂರು ಭರ್ಜಿಗಳನ್ನು ನೆಲದ ಮೇಲೆ ಹೂತಿರುವುದನ್ನು ಗಮನಿಸಬಹುದು. ಹಾಗೆಯೇ ಆಂಧ್ರಪ್ರದೇಶದಲ್ಲಿ ಪೋತುರಾಜವನ್ನು ಅವನ ಆಯುಧವಾದ ಭರ್ಜಿಯ ಮೂಲಕ ಆರಾಧಿಸುತ್ತಾರೆ.[೧೬] ಹನ್ನೆರಡನೆಯ ಶತಮಾನದ ಪಲನಾಡಿನ ವೀರರ ಆಯುಧಗಳನ್ನು ಕಾರೆಂಪೂಡಿಯಲ್ಲಿ ಇಂದಿಗೂ ಆರಾಧಿಸುವುದನ್ನು ಸ್ಮರಿಸಬಹುದು.[೧೭] ವೀರರ ಆಯುಧಗಳನ್ನು ಪೂಜಿಸುವ ಒಂದು ಸಂಪ್ರದಾಯ ಚಿತ್ರದುರ್ಗ ಜಿಲ್ಲೆಯ ಹಲವಾರು ಕಡೆಗಳಲ್ಲಿ ಪ್ರಚಲಿತವಿದೆ. ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಗ್ರಾಮದಲ್ಲಿ ವೀರಚಿಕ್ಕಣ್ಣನ ಅಲಗನ್ನು ಮತ್ತು ಅವನ ಕುದುರೆಯನ್ನು ಪೂಜಿಸುತ್ತಾರೆ. ಈ ಪೂಜೆಯ ಪ್ರಸ್ತಾಪ ಇದೇ ವೀರನ ಬಗ್ಗೆ ಇರುವ ಜಾನಪದ ವೀರಗೀತೆಯಲ್ಲಿಯೂ ಸಹ ಬರುತ್ತದೆ. ಹಾಗೆಯೇ ಇದೇ ಪ್ರದೇಶದ ಸುತ್ತುಮುತ್ತು 'ವೀರ ಸಿರಿಯಣ್ಣ', 'ಬಂಜಿಗೆರೆ ವೀರಣ್ಣ' ಎಂಬುವರ ಆಯುಧಗಳನ್ನು ಜನ ಇಂದಿಗೂ ಪೂಜಿಸುತ್ತಾರೆ.[೧೮]

ಗತಿಸಿದ ವ್ಯಕ್ತಿಯ ಪಾದಗಳ ಗುರುತುಗಳನ್ನೋ, ಆತನು ಮೆಟ್ಟಿದ ಪಾದರಕ್ಷೆಗಳನ್ನೊ ಜನ ಹಿಂದಿನಿಂದ ಇಂದಿನವರೆಗೂ ರಕ್ಷಿಸಿಕೊಂಡು ಬಂದು ಆರಾಧಿಸುವುದು ರೂಢಿಯಲ್ಲಿದೆ. ಪಾದುಕೆಗಳು ಅಥವಾ ಪಾದಗಳ ಗುರುತುಗಳು ಯಾವ ವ್ಯಕ್ತಿಯದಾಗಿರುತ್ತದೆಯೋ, ಅದು ಅವನನ್ನು ಸಂಕೇತಿಸುತ್ತದೆಂಬುದು ಇದರಿಂದ ತಿಳಿಯುತ್ತದೆ. ಇಂದಿಗೂ ಭಾರತದ ಅನೇಕ ಕಡೆಗಳಲ್ಲಿ ರಾಮನ ಪಾದ, ಸೀತೆಯ ಪಾದ, ಪಾರ್ವತಿ ಪಾದ, ಮುಂತಾದ ಪೌರಾಣಿಕ ವ್ಯಕ್ತಿಗಳ ಪಾದಗಳ ಗುರುತು ಇರುವುದನ್ನೂ ಜನ ಅವುಗಳನ್ನು ಆರಾಧಿಸುವುದನ್ನು ಗಮನಿಸಬಹುದು. ಮತ್ತೆ ಕೆಲವು ಕಡೆ ಜೈನ, ಬೌದ್ಧ ಮತ್ತು ವೈದಿಕ ಧರ್ಮ ಪ್ರವಾದಿಗಳ ಪಾದುಕೆಗಳನ್ನು, ಅವರ ಪಾದದ ಗುರುತುಗಳನ್ನೂ ಆರಾಧಿಸುವುದನ್ನು ಗಮನಿಸಬಹುದು.[೧೯]

---

೧೬. H. White Head : The Vilages Gods of South India ಪು.೨೬

೧೭. ಈ ವಿಷಯವನ್ನು ತಿಳಿಸಿದವರು ಡಾ. ಟಿ.ವಿ. ಸುಬ್ಬರಾವ್ ಅವರು

೧೮. ಈ ವಿಷಯವನ್ನು ತಿಳಿಸಿದವರು ಶ್ರೀ ಎ. ಕೃಷ್ಣಮೂರ್ತಿ ಅವರು

೧೯. Indian Antiquary Vol. XV (1886 A.D) ಪು. ೧೧೭

ಅಂದರೆ ಸತ್ತ ವ್ಯಕ್ತಿಯನ್ನು ಪ್ರತಿನಿಧಿಸಲು ಅವನ ಹೆಸರಿನಲ್ಲಿ ನಿಲ್ಲಿಸಿದ ಸ್ಮಾರಕ ಮಾತ್ರ ಸ್ಮಾರಕವಾಗಬೇಕೆಂದಿಲ್ಲ. ಅವನು ನಡೆದಾಡಿದ ಸ್ಥಳಗಳು, ಅವನು ಇದ್ದ ಜಾಗ, ಅವನು ಉಪಯೋಗಿಸುತ್ತಿದ್ದ ಆಯುಧಗಳು, ಅವನದೆಂದು ಭಾವಿಸಿದ ಅವನ ಪಳೆಯುಳಿಕೆಗಳೂ ಅವನ ಸ್ಮಾರಕಗಳಾಗಬಲ್ಲವು.

ಬ್ರಿಟಿಷರೊಂದಿಗೆ ಹೋರಾಡಿ ಮಡಿದ ವೀರ ಸಂಗೊಳ್ಳಿರಾಯಣ್ಣ ತನ್ನ ಗೆಳೆಯರ ಕುಯುಕ್ತಿಯಿಂದ ಬ್ರಿಟಿಷರಿಗೆ ಸೆರೆಯಾದನು. ಅವನನ್ನು ಕೊಂದೇ ತೀರಬೇಕೆಂದು ತೀರ್ಮಾನಿಸಿದ ಅಧಿಕಾರಿಗಳು ಕ್ಷಮಾಪತ್ರ ಬರುವುದಕ್ಕೂ ಕಾಯಲಿಲ್ಲ. ಕ್ಷಮಾಪತ್ತ ಬಂದರೆ ರಾಯಣ್ಣನು ಉಳಿದು, ಮೋಸಮಾಡಿದ ತಮ್ಮನ್ನು ಸದೆ ಬಡೆಯುತ್ತಾನೆಂದು ಯೋಚಿಸಿ ಅವರಯ ಅವನನ್ನು ಕೊಂದು ಹಾಕಿದರು. ರಾಯಣ್ಣನಿಗೆ ಒದಗಿದ ದುರ್ಮರನಕ್ಕೆ ನೇಣುಹಾಕಿ ಪ್ರಾಣ ತೆಗೆದರೋ ಅದನ್ನೇ ಅವನ ಸ್ಮಾರಕವಾಗಿ ಸ್ವೀಕರಿಸಿದರು. ಅದಕ್ಕೆ ಜನ ನಡೆದುಕೊಳ್ಳುವುದರ ಮೂಲಕ ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳತೊಡಗಿದರು. ಇದೇ ಶತಮಾನದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ವೀರರಲ್ಲಿ ಅಗ್ರಗಣ್ಯನಾದ ಚಂದ್ರಶೇಖರ್ ಅಜಾದನ ಸ್ಮಾರಕವೂ ಇದೇ ತೆರನಾಗಿದೆ. ಅಲಹಾಬಾದ್‌ನ ಇಂದಿನ ಆಜಾದ್ ಪಾರ್ಕ್‌ನಲ್ಲಿ ಚಂದ್ರಶೇಖರ್ ಒಂದು ನೇರಿಳೆ ಮರದ ಕೆಳಗೆ ಬ್ರಿಟಿಷರ ಗುಂಡಿಗೆ ಬಲಿಯಾದ. ಅವನ ಮರಣಾನಂತರ ಆ ಮರವನ್ನು ಜನ ಪೂಜಿಸಲು ಆರಂಭಿಸಿದರು. ಇದನ್ನು ಸಹಿಸದ ಬ್ರಿಟಿಷ್ ಸರಕಾರದವರು ಆ ಮರವನ್ನು ಕಡಿದು ಹಾಕಿದರು. ಆ ಮರ ಹೋದುದಕ್ಕೆ ಜನ ಚಿಂತಿಸಲಿಲ್ಲ. ಅದೇ ಸ್ಥಳದಲ್ಲಿ ಮತ್ತೊಂದು ನೇರಿಳೆ ಮರವನ್ನು ನೆಟ್ಟರು. ಅಂದರೆ ಸ್ಮಾರಕದ ಜೊತೆಗೆ ಜನ ವಿಶ್ವಾಸವೂ ಸೇರಿ ಸತ್ತವನಿಗೆ ಸಂಬಂಧಪಟ್ಟ ಯಾವುದೇ ವಸ್ತು ಸತ್ತವನ ಸ್ಮಾರಕವಾಗಬಲ್ಲುದು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಮಾನವ ಕೇವಲ ತನ್ನ ಒಡನಾಡಿಗೆ ಅಂದರೆ ಮನುಷ್ಯರಿಗೆ ಮಾತ್ರ ಈ ರೀತಿಯ ಸ್ಮಾರಕಗಳನ್ನು ನಿರ್ಮಿಸಿಲ್ಲ. ಯಾವ ಯಾವ ಪ್ರಾಣಿಗಳಿಂದ ಅವನು ತನ್ನ ಬದುಕಿನ ಹೋರಾಟದಲ್ಲಿ ಸಹಾಯವನ್ನು ಪಡೆದನೋ ಮತ್ತು ಯಾವ ಒಂದು ಪ್ರಾಣಿಯಲ್ಲಿ ದೈವಾಂಶವನ್ನು ಕಂಡನೋ ಅಂಥ ಪ್ರಾಣಿಗಳಿಗೂ ಸ್ಮಾರಕಗಳನ್ನು ನಿರ್ಮಿಸಿರುವುದನ್ನು ಗಮನಿಸಬಹುದು. ಮಾನವ ತನ್ನ ದಿನನಿತ್ಯದ ಬದುಕಿಗೆ ನೆರವಾಗುತ್ತಿದ್ದ ಪ್ರಾಣಿಗಳನ್ನು ವಿಶ್ವಾಸದಿಂದ ನೋಡಲು ತೊಡಗಿದ. ಇಂಥ ಪ್ರಾಣಿಗಳಲ್ಲಿ ದನಗಳು, ನಾಯಿ, ಕುದುರೆಗಳು ಅವನ ವಿಶ್ವಾಸಕ್ಕೆ ವಿಶೇಷವಾಗಿ ಪಾತ್ರವಾಗಿವೆ ಹಾಗೂ ಅವನಿಂದ ಸ್ಮಾರಕ ಶಿಲೆಗಳನ್ನೂ ಪಡೆದಿವೆ.

ಬೇಟೆಯಲ್ಲಿ ಮಾನವನಿಗೆ ಬಲಗೈಯಾಗಿ ನಿಂತ ಪ್ರಾಣಿ ಎಂದರೆ ನಾಯಿ. ಇದೇ ಬಹುಶಃ ಅವನು ಮೊದಲಿಗೆ ತನ್ನೊಂದಿಗೆ ಸಾಕಲು ಆರಂಭಿಸಿದ ಪ್ರಾಣಿ ಇರಬಹುದೆಂದು

ತೋರುತ್ತವೆ. ತನ್ನ ಜೀವನದಲ್ಲಿ ಅನೇಕ ರೀತಿಯಿಂದ ನೆರವಾಗುವ ನಾಯಿಯ ಬಗ್ಗೆ ಮಾನವನಿಗಿದ್ದ ಮತ್ತು ಇಂದಿಗೂ ಇರುವ ವಿಶ್ವಾಸ ಮತ್ತು ಆದರಗಳನ್ನು ಹೀಗೆಂದು ವಿವರಿಸಲು ಸಾಧ್ಯವಿಲ್ಲ. ಅದನ್ನು ತನ್ನ ಮಗನಂತೆ, ಸ್ನೇಹಿತನಂತೆ, ಆಳಿನಂತೆ, ಅನೇಕ ರೀತಿಗಳಲ್ಲಿ ನಡೆಸಿಕೊಂಡಿದ್ದಾನೆ. ಬೇಟೆಯಿಂದ ಯಶಸ್ವಿಯಾಗಿ ಬಂದನಂತರ ಬಂಗಾಳದ 'ಮಾಳರ್' ಎಂಬ ಜನಾಂಗದವರು ನಾಯಿಗೆ ಔತಣವನ್ನು ನೀಡುತ್ತಾರೆ. ಬೇಟೆಯ ನಾಯಿಯನ್ನು ಕೊಂದವನಿಗೆ ದಂಡವನ್ನು ಹಾಕುತ್ತಾರೆ. ನಾಯಿಯ ಬಗ್ಗೆ ಇಷ್ಟು ವಿಶ್ವಾಸ ತೋರಲು ಮುಖ್ಯ ಕಾರಣವೆಂದರೆ ನಾಯಿ ತನ್ನ ಒಡೆಯನ ಬಗ್ಗೆ ತೋರುವ ನಿಷ್ಠೆ. ಇದನ್ನು ಅರಿತ ರಾಕ್ಷಸರು ಮತ್ತು ದೆವ್ವಗಳು ಜನರನ್ನು ಮೋಸಮಾಡಲು ಅವರಿಗೆ ಪ್ರಿಯವಾದ ನಾಯಿಯ ರೂಪದಲ್ಲಿ ಬರುತ್ತಾರೆಂದು ಕೆಲವಾರು ಕಡೆ ನಂಬಿಕೆಯಿದೆ.[೨೦]

ಪಂಜಾಬ್ ರಾಜ್ಯದ ಲಾಹೋರಿನಲ್ಲಿ ಒಂದು ವೀರನಾಯಿಯ ಗೋರಿ ಇದೆ. ನಾಯಿ ಯಾವಸ್ಥಳದಲ್ಲಿ ಮೃತಪಟ್ಟಿತೋ ಅದೇ ಸ್ಥಳದಲ್ಲಿ ಅದರ ಸಮಾಧಿ ಇದೆ. ಈಗ ಅದು ಒಂದು ಪೂಜಾರ್ಹವಾದ ಸ್ಥಳವೇ ಆಗಿದೆ. ಬುಲನಚಷಾರ್‌ನಲ್ಲಿ ಮೂವರು ಸಂತರ ಸಮಾಧಿಗಳಿವೆ. ಅವುಗಳ ಬಳಿಯೇ ಅವರಿಗೆ ಪ್ರೀತಿಪಾತ್ರವಾಗಿದ್ದ ನಾಯಿಯೊಂದರ ಸಮಾಧಿಯೂ ಇದೆ. ಸಂತರ ಸಮಾಧಿಗಳನ್ನು ಕಂಡಷ್ಟೇ ಗೌರವದಿಂದ ನಾಯಿಯ ಸಮಾಧಿಯನ್ನೂ ಕಾಣುತ್ತಾರೆ. ಮಧ್ಯ ಭಾರತದ ಕೆಲವು ಹಳ್ಳಿಗಳಲ್ಲಿ ಮತ್ತು ಕಾಥೇವಾಡದಲ್ಲಿ ನಾಯಿಗಳಿಗಾಗಿಯೇ ಕಟ್ಟಿಸಿರುವ ದೇವಾಲಯಗಳಿವೆ.[೨೧] ಕರ್ನಾಟಕದಲ್ಲಿ ನಾಯಿಗಳಿಗಾಗಿ ಹಾಕಿಸಿರುವ ಸ್ಮಾರಕ ಶಿಲೆಗಳನ್ನು ಮಂಡ್ಯ ಜಿಲ್ಲೆಯ ಆತಕೂರು, ಬೆಂಗಳೂರು ಜಿಲ್ಲೆಯ ಯಲಹಂಕ, ಕೋಲಾರ ಜಿಲ್ಲೆಯ ಮೇಲಾಗಾಣಿ ಮತ್ತು ಮಡಕಶಿರಾ ತಾಲ್ಲೂಕಿನ ಗೊಲ್ಲರಹಟ್ಟಿ ಎಂಬ ಹಳ್ಳಿಗಳಲ್ಲಿ ಕಾಣಬಹುದಾಗಿದೆ. (ಚಿತ್ರ ೮, ೯, ೧೦)

ರಾಜಾಸ್ಥಾನದ ರಜಪೂತರು ತಮ್ಮ ವೀರರ ಕುದುರೆಗಳಿಗೆ ಸ್ಮಾರಕಗಳನ್ನು ನೆಟ್ಟಿದ್ದಾರೆ. ಮಣ್ಣಿನ ಕುದುರೆಯ ಬೊಂಬೆಗಳು ರಾಜಸ್ಥಾನದ ಹಳ್ಳಿಗಳ ಬಳಿ ಇರುವ ಗುಡಿಗಳಲ್ಲಿ ಸಾಮಾನ್ಯವಾಗಿ ಇರುತ್ತವೆ. ಜನ ಗೋರಿಯಮೇಲೆ ಹಿಂದೂಗಳು ಕುದುರೆಯ ಗೊಂಬೆಗಳನ್ನು ನೇತುಹಾಕುತ್ತಾರೆ.[೨೨] ಕುಮಾರ ರಾಮನ ದೇವಾಲಯ ಇರುವ ಕುಮ್ಮಟ ದುರ್ಗದಲ್ಲಿ ಆ ದೇವಾಲಯದ ಮುಂದೆ ಕುಮಾರ ರಾಮನ ಕುದುರೆಯಾದ ಬೊಲ್ಲನ ಚಿತ್ರವನ್ನು ಬಿಡಿಸಿರುವ ಕಲ್ಲು ಒಂದಿದೆ (ಚಿತ್ರ ೫).

---

೨೦ William Crooke and Enthoven : Religion and Folklore of Northern India ಪು. ೩೫೯–೬೦

೨೧ ಅದೇ, ಪು. ೩೬೦

೨೨ ಅದೇ, ಪು. ೩೫೦–೫೧

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕ್ ಬೆಳಗೆರೆ ಗ್ರಾಮದಲ್ಲಿ ವೀರ ಚಿಕ್ಕಣ್ಣನ ಕುದುರೆಯ ಕಂಚಿನ ಪ್ರತಿಮೆ ಇದೆ. ಹಾಗೆಯೇ ಕೋಲಾರ ಜಿಲ್ಲೆ ಗೋರಿಬಿದನೂರು ತಾಲ್ಲೂಕ್ ನಗರಗೆರೆ ಗ್ರಾಮದ ವೀರನ ಗುಡಿಯೊಂದರಲ್ಲಿ ಕಮಚಿನ ಕುದುರೆಯೊಂದಿದೆ. ವೀರನ ಚಿತ್ರವನ್ನು ಬಿಡಿಸುವಾಗಲೇ ಅವನನ್ನು ಕುದುರೆಯ ಮೇಲೆ ಕುಳಿತಿರುವಂತೆಯೇ ಶಿಲ್ಪವನ್ನು ಬಿಡಿಸುತ್ತಿದ್ದ ಕಾರಣದಿಂದ ಅವನ ವಾಹನಕ್ಕೆ ಪ್ರತ್ಯೇಕ ಸ್ಮಾರಕವನ್ನು ನಿಲ್ಲಿಸುವ ಸಂಪ್ರದಾಯ ಬೆಳೆಯಲಿಲ್ಲವೆಂದು ತೋರುತ್ತದೆ. ವೀರನ ಚಿತ್ರದಲ್ಲಿ ಅವನ ವಾಹನವೂ ಇರುವುದರಿಂದ ಅದೇ ಅದರ ಸ್ಮಾರಕವೂ ಆಗುತ್ತದೆ, ಎಂದು ಜನ ಭಾವಿಸಿದ್ದಿರಬೇಕು. ಆದ್ದರಿಂದಲೇ ವಿಶೇಷವಾಗಿ ಕುದುರೆಗಳಿಗಾಗಿಯೇ ಹಾಕಿಸಿದ ಸ್ಮಾರಕಗಳು ದೊರೆಯುವುದು ವಿರಳವೆಂದು ತೋರುತ್ತದೆ.

ಚಿತ್ರದುರ್ಗ ಬೆಟ್ಟದ ಮೇಲೆ 'ಗೊಂಬಿ ಮನೆ' – ಎಂಬ ಒಂದು ಮಂಟಪ ಇದೆ. ಇದರಲ್ಲಿ ಎರಡು ಕುದುರೆಗಳ ಮತ್ತು ಎರಡು ಆನೆಗಳ ಭಗ್ನ ವಿಗ್ರಹಗಳು ಇವೆ. ಇವು ಪಾಳೆಯಗಾರರ ಪಟ್ಟದ ಕುದುರೆ ಮತ್ತು ಆನೆಯ ಸ್ಮಾರಕಗಳಿರಬಹುದೆ ? ಎಂಬ ಸಂಶಯ ಬರುತ್ತದೆ. (ಚಿತ್ರ ೬) ಕುದುರೆಯ ಸ್ಮಾರಕವೆಂದು ಅನುಮಾನಕ್ಕೆ ಆಸ್ಪದ ನೀಡುವ ಕುದುರೆಯ ಶಿಲ್ಪವಿರುವ ಶಿಲೆಯೊಂದು ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕ್ ತಳಗವಾರ ಎಂಬ ಗ್ರಾಮದಲ್ಲಿ ನಮಗೆ ದೊರೆಯುತ್ತದೆ (ಚಿತ್ರ ೭).

ವೀರ

ಮೂಲತಃ ಸಂಸ್ಕೃತ ಭಾಷೆಯ ಪದವಾದ ಈ 'ವೀರ' ಎಂಬುದು ಅನೇಕ ಇಂಡೋ–ಆರ್ಯನ್ ಭಾಷೆಗಳಲ್ಲಿ ಬಳಕೆಯಲ್ಲಿರುವುದಾಗಿ ತಿಳಿದುಬರುತ್ತದೆ. ಈ ಪದವು ವ್ಯಕ್ತಿಯ ಪರಾಕ್ರಮ, ಶಕ್ತಿ ಮುಂತಾದ ಅವನ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ. ಎಲ್ಲೋ ಕೆಲವು ಭಾಷೆಗಳಲ್ಲಿ ಮಾತ್ರ ಆಡು, ಟಗರು, ಗಂಡು ಒಂಟೆ, ಸೋದರ ಮುಂತಾದ ಅರ್ಥಗಳಲ್ಲಿ ಬಳಕೆಯಾಗಿದೆ[೨೩]. ಇದೇ ಪದ ಸಂಸ್ಕೃತದಿಂದ ನೇರವಾಗಿ ದ್ರಾವಿಡ ಭಾಷೆಗಳಿಗೆ ತನ್ನ ಮೂಲಾರ್ಥವನ್ನು ಉಳಿಸಿಕೊಂಡು ಬಂದಿದೆ. ಕೆಲವು ಕಡೆ ಇದೇ ಪದ 'ಬೀರ' ಎಂಬುದಾಗಿ ತದ್ಭವ ರೂಪವನ್ನು ಪಡೆದು ಬಳಕೆಯಲ್ಲಿರುವುದೂ ಉಂಟು. ಆದರೆ ದ್ರಾವಿಡ ಭಾಷೆಗಳಲ್ಲಿ ಈ ಪದ ಸೇರಿ ಹೋಗಿದ್ದರೂ ಅದು ತನ್ನ ಮೂಲಾರ್ಥವನ್ನು ಕಳೆದುಕೊಂಡಿಲ್ಲ ಎಂಬುದು ಮುಖ್ಯ[೨೪]

---

೨೩. R.L. Turner (Ed) : A Comparative Dicrtionary of Indo-Aryan Languages

೨೪. ಕುರುಬ ಜನಾಂಗದವರು ಮದುವೆಯಾಗದೆ ಸತ್ತ ಯುವಕನನ್ನು 'ವೀರ'ನೆಂದು ಕರೆಯುತ್ತಾರೆ.

'ವೀರ' ಎಂಬ ಪದಕ್ಕೆ ಸಮಾನಾರ್ಥಕ ಪದವಾಗಿ ಇಂಗ್ಲಿಷ್ ಭಾಷೆಯ 'Hero' ಎಂಬ ಪದವನ್ನೂ, ಇಂಗ್ಲಿಷ್ ಭಾಷೆಯ 'Hero' ಎಂಬ ಪದಕ್ಕೆ ಸಮಾನಾರ್ಥಕವಾಗಿ 'ವೀರ' ಎಂಬ ಪದವನ್ನು ಬಳಸುವುದು ರೂಢಿಯಲ್ಲಿದೆ. ಆದ್ದರಿಂದ 'Hero'ಎಂಬ ಪದದ ಅರ್ಥವ್ಯಾಪ್ತಿಯನ್ನು ಸ್ವಲ್ಪ ಮಟ್ಟಿಗೆ ಗಮನಿಸುವುದು ಸೂಕ್ತವೆಂದು ತೋರುತ್ತದೆ. ಇದು ಮೂಲತಃ ಗ್ರೀಕ್ ಭಾಷೆಯಿಂದ ಇಂಗ್ಲಿಷ್ ಭಾಷೆಗೆ ಬಂದ ಪದ. ಇದು ಕಾಲದಿಂದ ಕಾಲಕ್ಕೆ ಹೆಚ್ಚು ಅರ್ಥವ್ಯಾಪ್ತಿಯನ್ನು ಪಡೆಯುತ್ತಾ ಬಂದಿರುವುದನ್ನು ಗಮನಿಸಬಹುದು.[೨೫]

(೧) ಹೋಮರ್ ಕವಿ ತನ್ನ ಇಲಿಯಡ್ ಎಂಬ ಮಹಾಕಾವ್ಯದಲ್ಲಿ ಈ ಪದವನ್ನು ದೈವೀಕ ಶಕ್ತಿಯುಳ್ಳ ಮನುಷ್ಯ, ದೇವತೆಗಳಿಂದ ದತ್ತವಾದ ಶೌರ್ಯ ಸಾಹಸ ಮತ್ತು ದಕ್ಷತೆ ಮುಮತಾದ ಗುಣಗಳನ್ನುಳ್ಳ ಮನುಷ್ಯ ಎಂಬ ಅರ್ಥದಲ್ಲಿ ಗುಣವಾಚಕವಾಗಿ ಬಳಸಿದ್ದಾನೆ. ಆನಂತರದ ಕಾಲದಲ್ಲಿ ಉತ್ತಮ ಕಾರ್ಯಗಳನ್ನು (Noble deeds) ಮಾಡಿದ ಮಾನವರನ್ನು 'Hero'ಎಂಬ ವಿಶೇಷಣದಿಂದಲೇ ಸಂಬೋಧಿಸಿದ ಹಾಗೆ ತೋರುತ್ತದೆ.

(೨) ವ್ಯಕ್ತಿ ವಿಶಿಷ್ಟವಾದ ಪರಾಕ್ರಮ, ಯುದ್ಧ ನೈಪುಣ್ಯವಿರುವ ; ಸಾಹಸ ಅಥವಾ ಉತ್ತಮ ಕೆಲಸಗಳನ್ನು ಮಾಡುವ ಯೋಧ, ಮುಂತಾದ ಅರ್ಥಗಳೊಂದಿಗೆ ಹಲವಾರು ಕಡೆ ಪ್ರಯೋಗವಾಗಿದೆ.

(೩) ಯಾವುದೇ ಕಾರ್ಯದಲ್ಲಿ ತನ್ನ ವಿಶಿಷ್ಟವಾದ ಶಕ್ತಿ ಸಾಹಸಗಳನ್ನು ತೋರುವ, ಯಾವುದೇ ವ್ಯಕ್ತಿ ಗಳಿಸಿದ ಯಶಸ್ಸಿಗೆ, ಅವನು ಮಾಡಿದ ಶ್ರೇಷ್ಠ ಕಾರ್ಯಗಳ ಗುಣಗಳನ್ನು ತಿಳಿಸುವ ವಿಶೇಷಣವಾಗಿ ಬಳಕೆಯಾಯಿತು.

(೪) ಮಹಾಕಾವ್ಯವೊಂದರ ನಾಯಕನು ಮೇಲೆ ಹೇಳಿದ ಎಲ್ಲ ಗುಣಗಳನ್ನು ಹೊಂದಿರಲೇಬೇಕೆಂಬ ಸಂಪ್ರದಾಯವಿದ್ದುದರಿಂದ ಮಹಾಕಾವ್ಯದ ನಾಯಕನನ್ನು ಒಂದು ನಾಟಕದ, ಕಥೆಯ ಮುಖ್ಯ ಗಂಡಸು ಪಾತ್ರವನ್ನು ಸೂಚಿಸುವ ಪದವಾಗಿ ಉಪಯೋಗಿಸಲ್ಪಡಲು ಆರಂಭವಾಯಿತು.

ಮೇಲಿನ ವಿವರಣೆಯಿಂದ ಪಾಶ್ಚಿಮಾತ್ಯ ದೇಶಗಳಲ್ಲಿ 'Hero' ಎಂಬ ಪದವು ಹೇಗೆ ಕಾಲದಿಂದ ಕಾಲಕ್ಕೆ ತನ್ನ ಮೂಲಾರ್ಥದ ವಿವಿಧ ಮುಖಗಳಲ್ಲಿ ಪ್ರಯೋಗವಾಗಿದೆ ಎಂಬುದು ತಿಳಿಯುತ್ತದೆ. ಇಂದು 'Hero' ಎಂಬ ಪದವನ್ನು ಯಾವುದೇ ಒಂದು ರಂಗದಲ್ಲಿ ತನ್ನದೇ

೨೫. The Oxford English Dictionary Vol. V

ಆದ ವಿಶಿಷ್ಟ ಸಾಧನೆಯನ್ನು ಮಾಡಿರುವ, ಸಾಮಾನ್ಯರಿಗಿಂತಲೂ ವಿಭಿನ್ನವಾದ ಸ್ಥಾನವನ್ನು ಗಳಿಸಿರುವ ವ್ಯಕ್ತಿಯನ್ನು ಸೂಚಿಸುವ ಸಲುವಾಗಿ ಬಳಸುತ್ತೇವೆ.

ಭಾರತ ದೇಶದಲ್ಲಿಯೂ 'ವೀರ' ಎಂಬ ಪದ ಹಲವಾರು ರೀತಿಯ ವ್ಯಾಖ್ಯಾನಕ್ಕೆ ಒಳಪಟ್ಟು, ತನ್ನ ಅರ್ಥವನ್ನು ವಿಶಾಲವಾಗಿಸಿಕೊಂಡಿರುವುದನ್ನು ಗಮನಿಸಬಹುದು. ಪರಾಕ್ರಮವನ್ನು ಸೂಚಿಸಲು ಮಾತ್ರ 'ವೀರ' ಎಂಬ ಪದವನ್ನು ಆರಂಭದ ದೆಶೆಯಲ್ಲಿ ಪ್ರಯೋಗಿಸುತ್ತಿದ್ದರು. ಆದರೆ ಆನಂತರದ ಕಾಲದಲ್ಲಿ ಈ ಗುಣವನ್ನು ಅಂದರೆ ವೀರತನವನ್ನು ತಾತ್ವಿಕ ಮಟ್ಟದಲ್ಲಿ, ಮತೀಯ ಪರಿಸರದಲ್ಲಿ, ಹಲವಾರು ಹಂತಗಳಲ್ಲಿ ಗುರುತಿಸಿರುವುದನ್ನು ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಮತ್ತು ಭಾರತೀಯ ಜನರ ಮನದಲ್ಲಿರುವ ನಂಬಿಕೆಗಳಿಂದ ತಿಳಿಯಬಹುದಾಗಿದೆ.

ಲಾಕ್ಷಣಿಕರು ವೀರ ರಸದ ಹಲವು ಮುಖಗಳನ್ನೂ ಗುರುತಿಸಿದ್ದಾರೆ. ಮುಖ್ಯವಾಗಿ ದಾನವೀರ, ಧರ್ಮವೀರ, ಯುದ್ಧವೀರ, ಮತ್ತು ದಯಾವೀರ ಎಂಬುದಾಗಿ. ಅಚ್ಯುತರಾಯನೆಂಬ ಶಾಸ್ತ್ರಕಾರ 'ಸಾಹಿತ್ಯ ಸಾರ' ಎಂಬ ತನ್ನ ಗ್ರಂಥದಲ್ಲಿ ಹನ್ನೆರಡು ವೀರರಸ ಪ್ರಭೇದಗಳನ್ನು ಉಲ್ಲೇಖಿಸಿದ್ದಾನೆ. ಆನಂತರದ ಕಾಲದಲ್ಲಿ ಸತ್ಯವೀರ, ಕ್ಷಮಾವೀರ, ವಿರಹವೀರ, ಸತ್ಯಾಗ್ರಹವೀರ ಎಂಬ ಭೇದಗಳನ್ನು ಕಲ್ಪಿಸಿದ್ದಾರೆ.[೨೬] ಡಾ. ಮ.ಸು. ಕೃಷ್ಣಮೂರ್ತಿ ಅವರು ಹೇಳುವಂತೆ "ವಸ್ತುತಃ ಉತ್ಸಾಹ ಅನಂತ ಅದ್ದರಿಮದ ಅದರ ಸ್ವರೂಪವೂ ಅನಂತ. ಈ ಎಲ್ಲ ಹೊಸ ಭೇದಗಳೂ ಉತ್ಸಾಹದ ಅನಂತತೆಯ ನಿದರ್ಶನಗಳು.[೨೭]" ವೀರ ರಸವನ್ನು ಪ್ರದರ್ಶಿಸುವ ಪಾತ್ರದ ಗುಣಾವಗುಣಗಳಿಗನುಸಾರವಾಗಿ ಪಟ್ಟಿಯನ್ನು ಹಿಗ್ಗಿಸಲೂಬಹುದು. ಕುಗ್ಗಿಸಲೂ ಬಹುದು. ಆದರೆ ರನ್ನನ ಭೀಮ 'ಉದ್ಧತ ವೀರ' ದುರ್ಯೋಧನ 'ಉದಾತ್ತ ವೀರ' ಹೀಗೆಲ್ಲ ವ್ಯಖ್ಯಾನಿಸುವುದು ಸರಿಯಾಗಲಾರದು. ರನ್ನನ ದುರ್ಯೋಧನನಲ್ಲಿ ಉದಾತ್ತತೆಯ ಅಂಶವನ್ನು ಹುಡುಕಬಹುದಾದರೂ ಭೀಮನಲ್ಲಿ ಔದ್ಧತ್ಯವನ್ನು ಕಾಣುವುದು ಆ ಪಾತ್ರಕ್ಕೆ ಅಪಚಾರ ಮಾಡಿದಂತಾಗುತ್ತದೆ.[೨೮]

ಈ ವೀರತನ ಎಂಬುದಕ್ಕೆ ಸಾಮಾಜಿಕವಾಗಿ ದೊರೆತಿರುವ ವಿವಿಧ ವ್ಯಾಖ್ಯಾನಗಳನ್ನು ಇನ್ನು ಗಮನಿಸೋಣ. 'ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ 'ಜಾಗ' (ತ್ಯಾಗ) ಮತ್ತು 'ಬೀರ' ಈ ಎರಡೂ ಬಹುಮುಖ್ಯವಾಗಿದ್ದುವು.[೨೯] ಈ ರೀತಿಯ ತ್ಯಾಗ ಮನೋಭಾವವನ್ನು

---

೨೬ ವಿವರಗಳಿಗೆ ನೋಡಿ : ಡಾ. ಮ. ಸು. ಕೃಷ್ಣಮೂರ್ತಿ : 'ವಚನ ಸಾಹಿತ್ಯದಲ್ಲಿ ವೀರರಸ', ಪ್ರಬುದ್ಧ ಕರ್ನಾಟಕ ಸಂ. ೫೪, ಸಂ. ೩, ಪು. ೧೩–೧೪

೨೭ ಅದೇ. ಪು. ೧೪

೨೮ ತ.ರಾ. ಸುಬ್ಬರಾಯ : 'ಕನ್ನಡದಲ್ಲಿ ವೀರರಸ ಪ್ರತಿಪಾದನೆ'. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂ. ೩೨, ಸಂ. ೩–೪, ಪು. ೫೦

೨೯ ನೋಡಿ : ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.ಪು.೨೪೫

ವೀರತ್ವದ ಮಟ್ಟಕ್ಕೇರಿಸಿ ಹೊಗಳಿರುವುದನ್ನು ಕಾಣಬಹುದು.[೩೦] "ಶ್ರೀಮಂತನಲ್ಲದ ಒಬ್ಬ ವ್ಯಕ್ತಿಗೆ ದೇವಸ್ಥಾನವನ್ನು ಕಟ್ಟಿಸಬೇಕೆಂಬ ಬಯಕೆ ಮೂಡಿದರೆ ಆಗ ಆತ ಬಹು ಸಹಜವಾಗಿಯೇ ವೀರ ಪ್ರತಿಜ್ಞೆಯನ್ನು ಕೈಗೊಂಡವನಂತೆ ಕಾರ್ಯಶೀಲನಾಗಬೇಕಾಗುತ್ತದೆ. ಇದಕ್ಕೆ ಕೆಲವು ನಿದರ್ಶನಗಳನ್ನು ಕೊಡಬಹುದು. ಕುಂಬಾರ ಜಾತಿಯ ಬಮ್ಮಣ ಎಂಬಾತನು ತಲೆಯನ್ನು ತೊಳೆಯದೆ ಅನ್ನವುಣ್ಣದೆ 'ವೀರ ವ್ರತ'ವನ್ನು ಕೈಗೊಂಡು ಕುಂಭೇಶ್ವರ ದೇವರನ್ನು ಪ್ರತಿಷ್ಠೆ ಮಾಡಿಸಿದ ವಿಷಯವನ್ನು ಶಾಸನವೊಂದು ತಿಳಿಸುತ್ತದೆ.[೩೧]

ವ್ಯವಸಾಯವೆಂಬ ನಾಗರಿಕ ಸ್ಥಿತಿಯನ್ನು ತಲುಪಿದ ಮೇಲೆಯೂ ಮಾನವ ಮೃಗಬೇಟೆಯಾಡುವುದನ್ನು ಬಿಡಲಿಲ್ಲ. ಆತ್ಮರಕ್ಷಣೆಗೆಂದು ಪ್ರಾರಂಭವಾದ ಮೃಗಬೇಟೆ ಹವ್ಯಾಸವಾಗಿ ಮುಂದುವರೆಯಿತು. ಆದುದರಿಂದ ಸಹಜವಾಗಿ ಕ್ರೂರಮೃಗಗಳನ್ನು ತನ್ನ ಶಕ್ತಿ ಸಾಹಸಗಳಿಂದ ಬೇಟೆಯಾಡುವುದೂ ವೀರತ್ವದ ಒಂದು ಮುಖವೆಂದೇ ಪರಿಗಣಿತವಾಯಿತು. ಕೊಡಗು ಜನಾಂಗದವರಲ್ಲಿ ಇಂದಿಗೂ ಬಳಕೆಯಲ್ಲಿರುವ ಒಂದು ಸಂಪ್ರದಾಯ ನಮ್ಮ ಈ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತದೆ. ಅವರಲ್ಲಿ ಬಳಕೆಯಲ್ಲಿರುವ ಒಂದು ಸಂಪ್ರದಾಯ ನಮ್ಮ ಈ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತದೆ. ಅವರಲ್ಲಿ ಬಳಕೆಯಲ್ಲಿರುವ ಒಂದು ಗಾದೆಯ ಮಾತು 'ಗಂಡಸು ಯುದ್ಧರಂಗದಲ್ಲಿಯೂ, ಬೇಟೆಯಲ್ಲಿಯೂ, ಹೆಂಗಸು ಹೆರಿಗೆಯಲ್ಲಿಯೂ ಸಾಯಬೇಕು' ಎಂಬುದು. ಹುಲಿಯನ್ನೋ ಚಿರತೆಯನ್ನೋ ಕೊಂದ ಗಂಡಸನ್ನೂ ಹತ್ತು ಮಕ್ಕಳನ್ನು ಹೆತ್ತ ಹೆಂಗಸನ್ನೂ ಕೊಡವರು ಗೌರವಿಸುವ 'ಮಂಗಲ' ಎಂಬ ಸಮಾರಂಭವನ್ನು ಮಾಡುತ್ತಾರೆ.[೩೨] ದೇವಗಿರಿಯ ರಾಮದೇವ ರಾಯನು ತನ್ನನ್ನು ಆಶ್ರಯಿಸಿದ್ದ ಸಿಂಗನೊಂದಿಗೆ ಬೇಟೆಗೆ ಹೋಗಿರುವಾಗ ಸಿಂಹವೊಂದು ಎದುರಾಗಲು ಸಿಂಗನು ಅದನ್ನು ಕೊಂದ. ರಾಜನು ಅವನ ಪರಾಕ್ರಮಕ್ಕೆ ಮೆಚ್ಚಿ 'ಮುಮ್ಮಡಿ' ಎಂಬ ಬಿರುದನ್ನು ಕೊಟ್ಟನು. ಈ ಮುಮ್ಮಡಿ ಸಿಂಗನ ಮಗನಾದ ಕಂಪಿಲ ಸೋಮೇಶ್ವರ ಎಂಬುವನು ಹೆಬ್ಬುಲಿಯನ್ನು ಕೊಂದನೆಂಬ ಕಾರಣಕ್ಕೆ ಇವನಿಗೆ ರಾಮದೇವರಾಯನು 'ಹೆಬ್ಬುಲಿ ಕಂಪಿಲರಾಯ ಸಹಸ್ರರಾಯರ ಗಂಡ' ಎಂಬ ಬಿರುದನ್ನು ಕೊಟ್ಟನು – ಎಂಬ ವಿಷಯ ಕೈಫಿಯತ್ತೊಂದರಿಂದ ತಿಳಿಯುತ್ತದೆ.[೩೩]

೩೦ ಪಂಪ : ವಿಕ್ರಮಾರ್ಜುನ ವಿಜಯಂ
ಕಲಿತನದ ನೆಗೆಟ್ದಿ ಕಸವರ । ಗಲಿತನದ ಪೊದಟ್ದಿ ಮರಪ ಕೋಟಿಗೆ ಪೆಜಿರಾರ್
ಸಲೆಕರ್ಣನಲ್ಲದೆನಿಸುವ । ಕಲಿತನಮಂ ಕವಚಮಿತ್ತುದೆ ಪೇಟ್ಬುಂ ೧೨–೯
೩೧ ಎಂ. ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೧೭೬
೩೨ M.N. Srinivas : Religion and Society Among the Coorgs of South India ಪು. ೧೪೬
೩೩ ಜಿ. ವರದರಾಜಾ ರಾವ್ : ಕುಮಾರರಾಮನ ಸಾಂಗತ್ಯಗಳು ಪು. ೨೯೪

ವಿಶೇಷ ಆಟಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿದ ವ್ಯಕ್ತಿಗಳನ್ನೂ ವೀರರೆಂದೇ ಪರಿಗಣಿಸುವ ಒಂದು ಪರಿಪಾಠ ನಮ್ಮಲ್ಲಿತ್ತು ಎಂಬುದು ಕರ್ನಾಟಕದ ಜನಪದ ಗೀತೆಗಳನ್ನು ಅವಲೋಕಿಸಿದಾಗ ತಿಳಿದು ಬರುತ್ತದೆ. ಬೆಳಗಾವಿ ಪಣಂಜ ಎಂಬುವನು ಭಾರತದ ಪರವಾಗಿ 'ಒಲಂಪಿಕ್ಸ್' ಕ್ರೀಡಾ ಸಮಾರಂಭದಲ್ಲಿ ಸ್ಪರ್ಧಿಸಿದ್ದ. ಅವನ ಓಟದ ಪರಾಕ್ರಮವನ್ನು ವೀರಗೀತೆಯೊಂದು ಹೊಗಳುತ್ತದೆ. ಅಲ್ಲಿ ಅವನನ್ನು ವೀರನೆಂದೇ ಕರೆಯಲಾಗಿದೆ.೩೪

ಮಹಿಳೆಯ ಪಾತಿವ್ರತ್ಯ ಗುಣವನ್ನು ನಮ್ಮ ಜನತೆ ಇತಿಹಾಸದ ಉದ್ದಕ್ಕೂ ಮೆಚ್ಚಿಕೊಂಡು 'ವೀರ ಮಾಸ್ತಿ' ಎಂದು ಗುರುತಿಸಿರುವ ರೀತಿಯೇ ಗಂಡಸಿನ ಏಕಪತ್ನಿ ವ್ರತವನ್ನೂ ಮೆಚ್ಚಿಕೊಮಡು ಬಂದಿರುವುದನ್ನು ನಾವು ಗಮನಿಸಬಹುದು. ಈ ವ್ರತಕ್ಕೂ ಮಿಗಿಲಾದುದು ಬ್ರಹ್ಮಚರ್ಯ ಆದುದರಿಮದಲೇ ನಮ್ಮ ನಾಡಿನ ಅನೇಕ ಶಾಸನಗಳು ವ್ಯಕ್ತಿಗಳ ಶೌಚ ಗುಣಗಳನ್ನು ಹೊಗಲೂತ್ತವೆ. ಹಾಗೆ ಹೊಗಳುವಾಗ ಪುರಾಣ ಪ್ರಸಿದ್ಧ ವ್ಯಕ್ತಿಗಳನ್ನೂ ಉಪಮೆಯಾಗಿ ಬಳಸಿರುವುದನ್ನು ಗಮನಿಸಬಹುದು.[೩೫]

ನಮ್ಮ ನಾಡಿನ ಅನೇಕ ಶಾಸನಗಳು ರಾಜರನ್ನು ಹೊಗಳುವಾಗ 'ಪರನಾರೀಸೋದರ' ಎಂಬುದಾಗಿ ತಿಳಿಸುತ್ತವೆ.[೩೬] ಅವರು ವಾಸ್ತವವಾಗಿ ಪರನಾರೀಸೋದರರಾಗಿದ್ದರೋ ಇಲ್ಲವೋ ಅದು ಮುಖ್ಯವಲ್ಲ. 'ಪರನಾರೀಸೋದರನಾಗಿ ಒಬ್ಬ ವ್ಯಕ್ತಿ ಇರಬೇಕು ಎಂಬುದನ್ನು ತಾತ್ವಿಕವಾಗಿ ಯಾದರೂ ನಮ್ಮ ಸಮಾಜ ಒಪ್ಪಿಕೊಂಡಿತ್ತು ಎಂಬುದು ಮುಖ್ಯ. ಪರನಾರೀ ಸೋದರನಾಗಿಯೇ ಅಜೀವಪರ್ಯಂತ ಉಳಿಯಬೇಕು ಎಂಬುದಾಗಿ ವೀರವ್ರತವನ್ನು ತೊಟ್ಟು, ಅದರಿಂದ ತನ್ನ ಸರ್ವನಾಶವಾದರೂ ಬಿಡದೆ, ತನ್ನ ಆದರ್ಶವನ್ನು ಎತ್ತಿ ಹಿಡಿದ ವ್ಯಕ್ತಿಗಳಲ್ಲಿ ಕುಮಾರರಾಮನ ಹೆಸರು ಕನ್ನಡ ನಾಡಿನ ಜನರ ಮನದಲಲಿ ನೆಲೆಯಾಗಿ ನಿಂತಿದೆ. "ಕುಮಾರ ರಾಮನ ಮಹಾತ್ಮ್ಯೆಗೆ ಆತನ ಕಲಿತನ ಎಷ್ಟರ ಮಟ್ಟಿಗೆ ಕಾರಣವೋ ಆತನ ಪರದಾರ ಸೋದರತ್ವವೂ ಅಷ್ಟೇ ಕಾರಣವಾಗಿದೆ.[೩೭]" ನಂಜುಂಡ, ಪಾಂಚಾಂಳಗಂಗ, ಮಹಲಿಂಗಸ್ವಾಮಿ ಈ ಮೂವರೂ ಕುಮಾರರಾಮನ ಬಗ್ಗೆ ಬರೆದಿರುವ ಕಾವ್ಯಗಳಲ್ಲಿ ಕುಮಾರರಾಮನಶೌಚಗುಣ ಅವನ ವೀರತ್ವದ

೩೪ ಬಿ.ಬಿ. ಮಹೀಶವಾಡಿ : ಜನಪದ ವೀರ ಕಾವ್ಯಗಳು ಪು. ೧೨–೧೩

೩೫ ವಿವರಗಳಿಗೆ ನೋಡಿ : ಎಂ. ಚಿದಾನಂದ ಮೂರ್ತಿ : ಸಂಶೋಧನಾ ತರಂಗ ಪು.೧–೪

೩೬ (ಅ) E.I. XIX ಪು. ೨೮೯–೯೦ 'ಪರಾಂಗನಾ ಪುತ್ರ'
(ಆ) BKI. I. 52 'ಪರನಾರೀದೂರ'
(ಇ) E.C. VII Sk 102 'ಪರನಾರೀ ಸಹೋದರಂ'
(ಈ) K.I. IV ಪು. ೧–೧೨. 'ಪರ ವಧೂವಿಮುಖಂ'

೩೭ ಜಿ. ವರದರಾಜಾ ರಾವ್ : ಕುಮಾರ ರಾಮನ ಸಾಂಗತ್ಯಗಳು. ಪು. ೩೨೯

ಒಂದು ಮುಖವಾಗಿಯೇ ಚಿತ್ರಿತವಾಗಿದೆ. ಈ ತೆರನ ಆದರ್ಶ ಮನೋಧರ್ಮವನ್ನುಳ್ಳ ವೀರನಿಗೆ ದೇವರೂ ಸಾಟಿಯಿಲ್ಲವೆಂದೇ ನಂಜುಂಡ ಕವಿಯ ಭಾವನೆ.[೩೮]

ಹಿಂದೂ ವರ್ಣಾಶ್ರಮ ಧರ್ಮದ ಪ್ರಕಾರ ಕ್ಷತ್ರಿಯರೇ ವೀರರು ಎಂಬ ವಿವರಣೆಯಿದ್ದರೂ, ಇತರೆ ವರ್ಣದವರು ಆ ಪಟ್ಟಕ್ಕೆ ಅರ್ಹರಲ್ಲ ಎಂದು ಭಾವಿಸಬೇಕಿಲ್ಲ. ಕ್ಷತ್ರಿಯರು ಸಾಮಾನ್ಯವಾಗಿ ಆಳುವ, ರಾಜ್ಯವನ್ನು ನಡೆಯಿಸುವ ಗುಂಪಿನವರು ಎಂಬ ಅರ್ಥದಲ್ಲಿ ಮಾತ್ರ ವೀರರು ಎಂಬ ಕಲ್ಪನೆಯನ್ನು ಸ್ವೀಕರಿಸಬೇಕಾಗುತ್ತದೆ. ಆದರೆ ಇವರಿಗೆ ಸಹಾಯವಾಗಿ ನಿಂತು ಹೋರಾಡುತ್ತಿದ್ದವರು ಎಲ್ಲ ವರ್ಣಗಳ, ಜಾತಿಗಳ ಜನರು, ಸಾಮಾನ್ಯವಾಗಿ ಶೂದ್ರರು ಸೈನಿಕರಾಗಿದ್ದರು ಎಂಬುದನ್ನು ಗುರುತಿಸಬಹುದು. ವ್ಯಕ್ತಿ ಯಾವುದೇ ಕುಲದವನಾಗಿರಲಿ ಅವನಿಗೆ ಮನ್ನಣೆ ಇತ್ತು. ಆದರೆ ಕ್ಷತ್ರಿಯರು ಹೀನಕುಲದ ವೀರರೊಮದಿಗೆ ಹೋರಾಡುವುದಕ್ಕಾಗಲಿ ಅವರಿಗೆ ಉನ್ನತ ಸ್ಥಾನವನ್ನು ಕೊಡುವುದಕ್ಕಾಗಲೀ ಆರಂಭದ ದಿಶೆಯಲ್ಲಿ ಹಿಂಜರಿಯುತ್ತಿದ್ದರೆಂದು ತೋರುತ್ತದೆ. ಈ ಅಂಶ ಮಹಾಭಾರತದ ಕರ್ಣನ ಪ್ರಸಂಗವನ್ನು ಸ್ಮರಿಸಿಕೊಮಡರೆ ಹೆಚ್ಚು ಸ್ಪಷ್ಟವಾಗುತ್ತದೆ. ಈ ಭಾವನೆ ಇತಿಹಾಸದಲ್ಲಿಯೂ ಇತ್ತೆಂದು ನ್ಯೂನಿಜ್‌ನ ಪ್ರವಾಸ ಕಥನದಿಮದ ತಿಳಿದು ಬರುತ್ತದೆ. ಇದರ ಪ್ರಕಾರ ಕೃಷ್ಣದೇವರಾಯನ ಖೈದಿಯಾಗಿದ್ದ ಒರಿಸ್ಸಾ ದೇಶದ ರಾಜನ ಮಗನನ್ನು ಕರೆದು ತನ್ನ ಕಡೆಯ – ಒಬ್ಬ ವೀರನೊಂದಿಗೆ ಖಡ್ಗಯುದ್ಧ ಮಾಡಬೇಕೆಂದು ಕೃಷ್ಣದೇವರಾಯ ಕೇಳುತ್ತಾನೆ. ಆಗ ಆ ರಾಜಕುಮಾರನು ರಾಜ ಮನೆತನದಲ್ಲಿ ಹುಟ್ಟದೇ ಇರುವವನೊಡನೆ ತಾನು ಯುದ್ಧ ಮಾಡುವುದು ತನ್ನ ಗೌರವಕ್ಕೆ ಕುಂದು ಎಂದು ಭಾವಿಸಿ ಆತ್ಮಹತ್ಯೆ ಮಾಡಿಕೊಂಡನು, ಎಂಬುದಾಗಿ ನ್ಯೂನಿಜ್ ತಿಳಿಸುತ್ತಾನೆ.[೩೯]

"ವರ್ಣದ ಮೊದಲಲ್ಲಿ ಉಚ್ಚನಾಗಿ ಬ್ರಾಹ್ಮಣನಿದ್ದರೂ ಅವನ ವೀರತ್ವದ, ಪೌರುಷದ ಬಗ್ಗೆ ಒಂದು ರೀತಿಯ ತಿರಸ್ಕಾರ ಭಾವ ಅಂದಿನ ಜನತೆಗೆ ಇದ್ದಂತೆ ತೋರುತ್ತದೆ.[೪೦] ಅಂದ ಮಾತ್ರಕ್ಕೆ ಬ್ರಾಹ್ಮಣರು ಯಾರೂ ಯುದ್ಧ ಮಾಡುತ್ತಿರಲಿಲ್ಲ ಎಂಬ ಅರ್ಥವಲ್ಲ, "ಬ್ರಾಹ್ಮಣರು

೩೮ ನಂಜುಂಡ : ರಾಮನಾಥ ಚರಿತೆ (ಸಂ. ಎಚ್. ದೇವೀರಪ್ಪ, ಭಾಗ ೨) ಪು. ೧೫ ಪ.೯೪
ಆವ ಕುಲದಲ್ಲಿ ಪಟ್ಟಲಿ ಪರವೆಣ್ಗಳ ಭಾವಿಸನಾವನವನಿಗ
ದೇವರು ಸರಿಯಿಲ್ಲ ನರ ಪಶುಗಳ ಬಲು ದಾವಣಿಯವನೆ ಕೇಳುವನು

೩೯ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ, ಭಾಗ ೨, ಪು. ೩೯೪

೪೦ (ಅ) ಪಂಪ : ವಿಕ್ರಮಾರ್ಜುನ ವಿಜಯಂ
ಎನಿತಳ ವುಳ್ಳೊಡಂ ದ್ವಿಜನ ಗಂಡ ಗುಣಕ್ಕಗಿವನ್ನ ರಾರೊ ನೆ
ಟ್ಟನೆ ವಿಷಿಮೊಳ್ಳೆ ಗುಳ್ದೊಡ ಮದೊಳ್ಳೆಯೆ ಕಾಳಿಯನಾಗ ನಾಗದ
ಣ್ಣೆನ ಪಡೆ ಮಾಡೆದೊಂದೆ ನೆವಮಾಗಿರೆ ಕೆಯ್ದುವನಿಕ್ಕಿ ಸತ್ತ ಸಾ
ವಿನ ಪಡಿ ಚೆಂದ ಮಾಗಿಯುಮಿದೇಂ ನಿಮೆಗಟ್ಟುಯೆ ಗಂಡುವಾತುಗಳ್ ೧೨–೪೧

ಕೈಯಲ್ಲಿ ಕತ್ತಿಗಳನ್ನು ಹಿಡಿಯುತ್ತಿದ್ದರು. ದಾನಕ್ಕೆ, ಯುದ್ಧಕ್ಕೆ ಕ್ಷತ್ರಿಯರೇ ಸಮರ್ಥರು, "ಅಬ್ರಹ್ಮಣ್ಯಂ ಬೋಃ' ಎನ್ನಲು 'ಅವಿಧಾ' ಎಂದು ಕೂಗಿಕೊಳ್ಳಲು ಮಾತ್ರ ಬ್ರಾಹ್ಮಣರು ಸಮರ್ಥರು ಎಂಬ ರನ್ನನ ದುರ್ಯೋಧನನ ಹೇಳಿಕೆ ಎಲ್ಲ ಕಾಲಕ್ಕೆ ಅನ್ವಯಿಸುವುದಿಲ್ಲ.[೪೧]

ಇತಿಹಾಸ ಕಾಲದ ವೀರರನ್ನೂ, ಅರಸರನ್ನೂ ಗಮನಿಸಿದಾಗ ವೀರತ್ವ ಯಾವುದೇ ಒಂದು ಜಾತಿಯವರಲ್ಲಿ ಮಾತ್ರ ಪ್ರಕಟವಾಗದೆ, ವ್ಯಕ್ತಿಯ ಸ್ವಾಭಿಮಾನ, ಮಹತ್ವಾಕಾಂಕ್ಷೆ, ಶೌರ್ಯ, ಪರಾಕ್ರಮವನ್ನು ಲಂಬಿಸಿ ತನ್ನದೇ ರೀತಿಯಲ್ಲಿ ಎಲ್ಲ ಜಾತಿಯ ವ್ಯಕ್ತಿಗಳಲ್ಲಿಯೂ ಪ್ರಕಟವಾಗಿದೆ ಎನ್ನುವುದರ ಅರಿವಾಗುತ್ತದೆ. ಇಂಥ ಜಾತಿಯವರೇ ವೀರರು ಎಂಬುದಾಗಿ ಕರೆಯುವುದಕ್ಕಿಂತ ವೀರರೆಲ್ಲರೂ ವೀರ ಕುಲದವರೆ ಎಂಬ ಧ್ವನಿ ನಮಗೆ ಪಂಪನಲ್ಲಿ ಕೇಳಿಬರುತ್ತದೆ.[೪೨] ಹೀನ ಜಾತಿಗಳೆಂದು ಪರಿಗಣಿತವಾಗಿದ್ದ ಜನಾಂಗಗಳಿಂದಲೇ ಬಂದವರು ನಾಯಕರು, ಅರಸರು, ಸಾಮಂತರು ಮತ್ತು ಪಾಳೆಯಗಾರರು. ಇಂಥವರು ತಮ್ಮ ಪರಾಕ್ರಮದಿಂದ ಪ್ರತಿಷ್ಠಿತರಾದ ಮೇಲೆ ತಮ್ಮ ವೀರತ್ವದ ಪ್ರತಿಷ್ಠೆಯ ಜೊತೆಗೆ 'ಜಾತಿ'ಯ ಪ್ರತಿಷ್ಠೆಯನ್ನೂ ಸೇರಿಸಿಕೊಳ್ಳುವ ಸಲುವಾಗಿ ತಮ್ಮ ವಂಶಾವಳಿಗಳನ್ನು ಹೇಳಿಕೊಳ್ಳುವಲ್ಲಿ ಪುರಾಣಕಾಲದ ಸೂರ್ಯ, ಚಂದ್ರ ವಂಶದುವರಿಮದ ತಮ್ಮ ವಂಶ ಉತ್ಪನ್ನವಾಯಿತೆಂದು ಹೇಳಿಕೊಳ್ಳುತ್ತಾರೆ.

ಒಂದು ರಾಜ್ಯದ ಗೆಲುವು ಸೋಲುಗಳು ಸೈನ್ಯದಲ್ಲಿನ ಸೈನಿಕ ಬಲವನ್ನೇ ಮುಖ್ಯವಾಗಿ ಅವಲಂಬಿಸಿದೆ ಎಂಬುದು ನಿರ್ವಿವಾದ. ಇವರಿಗೆ ಹೆಚ್ಚಿನ ಅಧಿಕಾರ ಮತ್ತು ಬುದ್ಧಿಬಲ ಇಲ್ಲವೆಂಬುದಾಗಿ ಭಾವಿಸದ್ದರೂ, ಅವರಲ್ಲಿನ ಶಿಸ್ತು, ಸಂಯಮ, ತಮ್ಮ ಒಡೆಯನಿಗೆ ಅವನಿಂದ ಉಮಡ ಅನ್ನದ ಋಣವನ್ನು ತೀರಿಸಲು ತಮ್ಮ ಪ್ರಾಣವನ್ನೂ ಲೆಕ್ಕಿಸದೇ ಹೋರಾಡುವ ಸ್ವಾಮಿನಿಷ್ಠೆ ಪ್ರಶಂಸನೀಯವಾದುದು. ಇವರು ತಾವು ಉಂಡ ಅನ್ನದ ಋಣ ಪೂರೈಕೆಗೆಂದೇ ಹೋರಾಡಿ

(ಆ) ರನ್ನ : ಸಾಹಸ ಭೀಮ ವಿಜಯಂ

ಈಯಲಿಱಿಯಲ್ ಶರಣ್ಬುಗೆ।
ಕಾಯಲ್ ಕ್ಷತ್ರಿಯರೆ ಬಲ್ಲರ ಬ್ರಹ್ಮಣ್ಯಂ
ಭೋಯೆನಲುಂ ಬ್ರಾಹ್ಮಣರ ವಿ।
ಧಾ ಯೆನಲುಂ ಬಲ್ಲರಿಱಿಯಲವ ರೆಂತಱುವರ್॥
ಚಾತುರ್ವರ್ಣ್ಯ ದೊಳಂ ದ್ವಿಜ।
ಜಾತಿ ದರ್ಭಾಧಿ ಕಾರ ಮಲ್ಲದೆ ವಂಶೋ
ದ್ಭೂತ ನೃಪೋ ಚಿತಮರಿಯುಂ।
ಘಾತಿಪ ಶಸ್ತ್ರಾ ಸ್ತ್ರಾಮ ವರ್ಗ ಜಾತಿ ವಿರುದ್ಧಂ ೨–೧೬, ೧೭

೪೧ ವಿವರಗಳಿಗೆ ನೋಡಿ : ಎಂ. ಚಿದಾನಂದ ಮೂರ್ತಿ :ಸಂಶೋಧನಾ ತರಂಗ ಪು.೧–೪

೪೨ ಪಂಪ : ವಿಕ್ರಮಾರ್ಜುನ ವಿಜಯಂ

ಕುಲ ಮೆಂಬುದುಂಟೆ ಬೀರಮೆ।

ಮಡಿದಿದ್ದರೂ ಇವರನ್ನು ನಮ್ಮ ಸಮಾಜ ವೀರರೆಂದೇ ಪರಿಗಣಿಸಿದೆ. ಪ್ರಸ್ತುತ ಸಂದರ್ಭದಲ್ಲಿ ಹೊಯ್ಸಳ ಎರಡನೆಯ ಬಲ್ಲಾಳನ ಕಾಲದ ಒಂದು ಶಾಸನದ ಪದ್ಯ ಗಮನಾರ್ಹವಾಗಿದೆ.

ಅರಸುಗಳೆಂಬವರ್ ಬವರದೊಳ್ ಸೆರಗಿಂಪೆಱಗಿರ್ಪ ಬುದ್ಧಿಯಿಂ
ದರ ನೆಲೆಯೆಂದು ಮಾಡಿ ಪೆಱರಂ ಪೆಱರಿಂದಮೆ ಗೆಲ್ವರಲ್ಲದಿಂ
ತಿರೆ ಪೆಱಗಾಗೆ ತನ್ನ ಬಲಮನ್ಯ ಬಲಂ ಬೆಱಗಾಗಲೊಂದೆ ಸಿಂ
ಧುರದೊಳೆ ಗೆಲ್ವರೇ ಪಗೆಯನಾರ್ ಸಮನಿಂತಸಹಾಯ ಶೂರನೊಳ್[೪೩]

ಇಲ್ಲಿ 'ಪೆಱರಂ ಪೆಱರಿಂದಮೆ ಗೆಲ್ವರಲ್ಲದೆ' ಎಂಬುದು ಮುಖ್ಯವಾದುದು. ಅಂದರೆ ಅರಸರಾದವರು ಸ್ವತಃ ತಾವು ಯುದ್ಧಮಾಡದೇ, ತಮ್ಮ ಕಡೆಯ ಸೈನಿಕರಿಂದ, ಶತ್ರುಪಕ್ಷದ ಬೇರೆಯ ಅರಸರನ್ನು ಗೆಲ್ಲುತ್ತಾರೆ. ಮಡಿದವರು ಜನ ; ಗೆದ್ದ ಮೇಲೆ ಸಿಂಹಾಸನಾರೋಹಣ ಮಾಡುವವರು ಅರಸರು. ಈ ಆಪಾದನೆಗೆ ತಾವು ಗುರಿಯಾಗಿಲ್ಲವೆಂಬುದನ್ನು ತೋರುವುದಕ್ಕಾಗಿಯೋ ಏನೋ, ತಾವೇ ಸ್ವತಃ ಶತ್ರುಪಕ್ಷದ ವೀರರಮೇಲೆ ಬೀಳುತ್ತಿದ್ದವರು ಎಂಬುದನ್ನು ಕೆಲವು ಅರಸರು ತಮ್ಮ ಬಿರುದುಗಳಲ್ಲಿ ತೋರಿಸಿಕೊಂಡಿದ್ದಾರೆ.[೪೪]

ವೀರತನ

ನಾಗರಿಕತೆಯ ಬೆಳವಣಿಗೆಯ ಒಂದು ಘಟ್ಟದಲ್ಲಿ ಮಾನವನಿಗೆ ತನ್ನ ಅನಾಗರಿಕ, ಅಮಾನುಷ ವರ್ತನೆಗಳ ಅರಿವಾಗುತ್ತಿದ್ದಂತೆಯೇ ಅವನು ಅವುಗಳಿಗೆ ಒಂದು ಮಿತಿಯನ್ನು ಹಾಕಲು ಪ್ರಯತ್ನಿಸಿದ. ಇದರಿಂದ ಸಂಘಜೀವಿಯಾಗುವುದರಿಂದ ಪ್ರತಿಯೊಬ್ಬನಿಗೂ ರಕ್ಷಣೆ ದೊರೆಯುವಂತಾಯಿತು. ತಾನೇ ಅರಿತ ತನ್ನ ಹಿಂದಿನ ಅಮಾನುಷ ಶಕ್ತಿ ಪರಾಕ್ರಮಗಳಿಗೆ ನೀತಿ ನಿಯಮಗಳನ್ನು ಹಾಕುತ್ತಾ ಬಂದಂತೆ ಅವುಗಳಿಗೆ ನೈತಿಕ ಬೆಂಬಲವೂ ದೊರೆಯಿತು. ಈ ರೀತಿಯಲ್ಲಿ ಅವನ ವರ್ಚಸ್ಸನ್ನು ಬೆಳೆಸಿದ ವೀರತನ ಒಂದು ಸಾಮಾಜಿಕ ಮೌಲ್ಯದ ವ್ಯಾಪ್ತಿಯನ್ನು ಪಡೆಯಿತು. ಇದು ಮಾನವನ ಇತಿಹಾಸಲ್ಲಿಯೇ ಗಮನಾರ್ಹ ಘಟ್ಟವಾಗಿದೆ. ವೀರತನ ಎನ್ನುವುದು ಕೇವಲ ಶಕ್ತಿಯ ಪ್ರಯೋಗವಲ್ಲ ಎಂಬುದನ್ನು ಅವನು ಗಮನಿಸಿದ ಅಂಶವನ್ನೂ ಮತ್ತು ಆ ಗುಣದ ವಿವಿಧ ಮುಖಗಳನ್ನೂ ಅವನು ಕಂಡುಕೊಂಡ ರೀತಿಯನ್ನು ಮುಂದೆ ಗಮನಿಸೋಣ.

ಕುಲಮಲ್ಲದೆ ಕುಲಮನಿಂತು ಪಿಕ್ಕದರಿಂ ನೀ
ಮೊಲಿದೆಲ್ಲಿ ಪುಟ್ಟಿ ಬೆಳೆದಿರೊ ।
ಕುಲಮಿ ದುರ್ಗದೆ ಕೊಡದೊಳಂ ಶರ ಸ್ತಂಭದೊಳಂ ॥ ೨–೮೩

೪೩ E. C. V Ak 216 ಸು. ೧೨೦೦

೪೪ E. C. IV. Ng. 3, 1135, "ಆಳಿಂಮುನ್ನಿಱಿವಂ"

ಮಾನವನು ತಾನು ಕಂಡ ಕೆಟ್ಟದನ್ನು ದೂರತಳ್ಳಿ, ಒಳ್ಳೆಯದನ್ನು ಸ್ಥಾಪಿಸಲು ಹಾಗೂ ತನ್ಮೂಲಕವಾಗಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಲು ಅನಂತಕಾಲದಿಂದ ಇಂದಿನವರೆಗೂ ಹೋರಾಟ ನಡೆಸುತ್ತಲೇ ಇದ್ದಾನೆ. ಹೋರಾಟ ಎಂಬುದು ಅವನ ಜೀವನದ ಒಂದು ಭಾಗವಾಗಿಯೇ ಉಳಿದಿದೆ. ಈ ರೀತಿಯ ಹೋರಾಟ ಅವನ ಜೀವಂತಿಕೆಯ ಸಂಕೇತವೂ ಹೌದು. ಆದರೆ ಆ ಹೋರಾಟ ಯಾವ ಬಗೆಯದು ಎಂಬುದು ಆ ಹೋರಾಟದಷ್ಟೇ ಮುಖ್ಯ. ಇಲ್ಲಿ ಹೋರಾಟ ಎಂಬ ಪದವನ್ನು ಮಾನವನ ಅಂತರಂಗಕ್ಕೆ ಸಂಬಂಧಿಸಿದ ಹಾಗೆ ನಾವು ಬಳಸುತ್ತಿಲ್ಲ. ಅವನ ಸಾಮಾಜಿಕ ವ್ಯವಹಾರಗಳಲ್ಲಿನ 'ಹೋರಾಟ' ಎಂಬ ಅರ್ಥದಲ್ಲಿಯೇ ಬಳಸುತ್ತಿದ್ದೇವೆ. ಸಾಮಾಜಿಕ ಜೀವನದ ಯಾವುದೇ ಹೋರಾಟವೂ ಹಿಂಸಾತ್ಮಕವಾಗಿಯೇ ಇರುತ್ತದೆ ಎಂಬುದನ್ನು ಇಂದಿನ ಕಾಲದಲ್ಲಿಯೂ ಒಪ್ಪಬೇಕಾಗುತ್ತದೆ.

ಇನ್ನು ಪ್ರಾಚೀನ ಮತ್ತು ಇತಿಹಾಸಕಾಲದ ಮಾನವನ ಹೋರಾಟವೆಂದರೆ ನಮಗೆ ನೆನಪಿಗೆ ಬರುವುದು ಯುದ್ಧ. ಯುದ್ಧವೆಂಬುದು ಒಮದು ಸಾಮೂಹಿಕ ಕ್ರಿಯೆಯಾಗದಾಗಲೇ ಅದಕ್ಕೆ ಯುದ್ಧದ ಗೌರವ ಮತ್ತು ಜಯಾಪಜಯಗಳು ದೊರೆಯುವುದು. ವ್ಯಕ್ತಿ ಯಾರೇ ಇರಲಿ ಎಂಥ ಬಲಶಾಲಿಯೇ ಇರಲಿ ಅವನ ಶಕ್ತಿ ಸಾಮೂಹಿಕವಾಗಿ ಕೆಲಸ ಮಾಡದಿದ್ದರೆ ಅದು ವ್ಯರ್ಥ ಆಯಾಸದಲ್ಲಿ ಅಂತ್ಯವಾಗುತ್ತದೆ. ಈ ರೀತಿ ಜನರನ್ನು ಸಂಘಟಿಸಲು ಜನರಲ್ಲಿಯೇ ಮೂಡಿಬಂದ ಮೌಲ್ಯವೇ 'ವೀರತನ'. ಧರ್ಮವೆಂಬುದೂ ಒಂದು ಜನಾಂಗದ ಅಥವಾ ದೇಶದ ಜನರ ಅವಿಭಾಜ್ಯ ಭಾಗವೆಂದು ಅಂದು ಪರಿಗಣಿತವಾಗಿದ್ದುದರಿಂದ ತನ್ನ ಅಸ್ತಿತ್ವ ರಕ್ಷಣೆಗಾಗಿ ಧರ್ಮವೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಈ ವೀರತನಕ್ಕೆ, ಯುದ್ಧಕ್ಕೆ ಪ್ರೇರಣೆಯನ್ನೋ ಅಥವಾ ಬೆಂಬಲವನ್ನೋ ನೀಡಿತು.

ವೇದಗಳು ನಮ್ಮ ಇತಿಹಾಸವನ್ನು ಬರೆಯಲು ದೊರಕುವ ಮೊದಲ ಮೂಲಸಾಮಗ್ರಿಗಳು. ಆರ್ಯರು ಯೋಧ ಪ್ರವೃತ್ತಿಯುಳ್ಳ ಜನಾಂಗ ಎಂಬುದು ಸರ್ವವಿದಿತ. ಇವರಲ್ಲಿ ಸಾಮಾಜಿಕ ನಿಲುವಿನಲ್ಲಿ ವ್ಯಕ್ತಿ ಪರಾಕ್ರಮಕ್ಕೆ ಇಹ– ಪರಗಳೆರಡರಲ್ಲೂ ಉತ್ತಮ ಸ್ಥಾನ ಇತ್ತು. "ಯಾರು ಯುದ್ಧಗಳಲ್ಲಿ ಪರಾಕ್ರಮದಿಂದ ಕಾದಾಡಿ ಮೃತರಾಗಿ (ವೀರ) ಸ್ವರ್ಗದಲ್ಲಿ ವಾಸಿಸುತ್ತಿರುವರೋ, ಯಾರು ಸಹಸ್ರ ಸಂಖ್ಯೆಯಲ್ಲಿ ದಕ್ಷಿಣ ದಾನಮಾಡಿ, ಯಜ್ಞಾನುಷ್ಠಾನ ಕರ್ಮಮಾಡಿ, ಉತ್ತಮ ಲೋಕಗಳಲ್ಲಿ ವಾಸಿಸುತ್ತಿರುವರೋ ಅಂಥ ಪಿತೃಗಳ ಬಳಿಗೆ ಹೋಗು ಆತ್ಮವೇ" ಎಂಬ ಒಂದು ಸೂಕ್ತವಿದೆ.[೪೫] ಅಂದರೆ ಯುದ್ಧದಲ್ಲಿ ಮಡಿದವರು ಮತ್ತು 'ದಕ್ಷಿಣದಾನ' 'ಯಜ್ಞಾನುಷ್ಠಾನ' ಮಾಡಿದವರು ಇಬ್ಬರೂ ಸಾಮಾಜಿಕ ಗೌರವಕ್ಕೆ ಏಕರೀತಿಯಲ್ಲಿ ಪಾತ್ರರು ಎಂದಾಯಿತು. ದಕ್ಷಿಣದಾನ

೪೫ ಋಗ್ವೇದ ಸಂಹಿತೆ ಭಾಗ ೩೦ (ಸಂ. ಎಚ್. ವಿ. ವೆಂಕಟರಾವ್) ಪು. ೧೦೩೮. ಈ ಬಗ್ಗೆ ನನ್ನ ಗಮನಸೆಳೆದವರು ಶ್ರೀ. ಆಲ್ಲ ಚಿರಂಜೀವಿ

ಮತ್ತು ಯಜ್ಞಾನುಷ್ಠಾನ ಕರ್ಮದ ಫಲಗಳು ಯುದ್ಧದಲ್ಲಿ ಮಡಿಯುವುದರಿಂದ ಪ್ರಾಪ್ತವಾಗುತ್ತದೆ ಎಂಬುದು ಮತಿತಾರ್ಥ. ಈ ಒಂದು ಆದರ್ಶಧ್ಯೇಯ ಭಾರತದಲ್ಲಿ ವೈದಿಕ ಪರಂಪರೆ ಬೆಳೆದಹಾಗೆ ತನ್ನ ಅರ್ಥವ್ಯಾಪ್ತಿಯನ್ನು ಪಡೆದು ಬಂದಿದೆ. ಅಂದರೆ ದ್ರಾವಿಡ ದೇಶದ ಮೂಲ ಜನಾಂಗಗಳಲ್ಲಿ 'ವೀರತ್ವ'ಕ್ಕೆ ಪ್ರಾಧಾನ್ಯತೆ ಇರಲಿಲ್ಲವೆಂದಾಗಲೀ, ಅದಕ್ಕೆ ಸಾಮಾಜಿಕಮೌಲ್ಯದ ಬೆಲೆ ಇರಲಿಲ್ಲವೆಂದಾಗಲೀ ನಮ್ಮ ಅರ್ಥವಲ್ಲ. ದ್ರಾವಿಡ ದೇಶದ ಜನರೂ ಸಹ ವೀರತ್ವದ ಮೌಲ್ಯಗಳನ್ನು, ಅದರ ಧ್ಯೇಯ ಮತ್ತು ಫಲಪ್ರಾಪ್ತಿಯ ಕಲ್ಪನೆಯನ್ನೂ ಆರ್ಯರಂತೆಯೇ ಬೆಳೆಸಿಕೊಂಡರು. ವೈದಿಕ ಧರ್ಮದ ವಿರುದ್ಧವಾಗಿ ಅಹಿಂಸಾತ್ಮಕಧ್ಯೇಯಗಳನ್ನುಳ್ಳ ಜೈನ ಮತ್ತು ಬೌದ್ಧ ಧರ್ಮಗಳೂ ಮೇಲಿನ ಆದರ್ಶ ಧ್ಯೇಯಗಳನ್ನೇ ನೇರವಾಗಿ ಎತ್ತಿ ಹೇಳದಿದ್ದರೂ ತಮ್ಮ ಬೆಂಬಲವನ್ನು ಹಲವಾರು ರೀತಿಗಳಲ್ಲಿ ಸೂಚಿಸಿವೆ.

ಭಾರತೀಯ ಸಮಾಜದಲ್ಲಿದ್ದ ವರ್ಣಾಶ್ರಮ ವ್ಯವಸ್ಥೆಯು ಧರ್ಮಯುದ್ಧಗಳಿಗೆ ಪ್ರಾಮುಖ್ಯವನ್ನು ನೀಡಿತ್ತು. ಕ್ಷತ್ರಿಯರ ಧರ್ಮವೆಂದರೆ ಸಮಾಜದ ರಕ್ಷಣೆ ಮತ್ತು ಪರಿಪಾಲನೆ, ಈ ಪರಿಪಾಲನೆಗೆ ಅಡಚಣೆಯನ್ನುಂಟುಮಾಡುವ ಶಕ್ತಿಯ ವಿರುದ್ಧವಾಗಲಿ ಅಥವಾ ತನ್ನ ಸಮಾಜವನ್ನು ಉಚ್ಚಸ್ಥಿತಿಗೆ ತರುವಲ್ಲಿನ ಕ್ಷತ್ರಿಯರ ಯುದ್ಧವಾಗಲಿ ಅರ್ಥಪೂರ್ಣವಾದದ್ದೆಂದು ಅಂದಿನ ಜನರ ನಂಬಿಕೆ. ಈ ಕಾರಣಗಳಿಗೆ ಯುದ್ಧ ಭೂಮಿಯಲ್ಲಿ ಮಡಿಯುವುದರಿಂದ ತಮ್ಮ ಧರ್ಮಪರಿಪಾಲನೆಯಲ್ಲಿ ಶ್ರೇಷ್ಠಸಿದ್ಧಿಯನ್ನು ಸಾಧಿಸಿದಂತೆ ಎಂದೂ ಮತ್ತು ಆ ಸಿದ್ಧಿ ಹಲವಾರು ವರ್ಷಗಳು ಕಠೋರತಪಸ್ಸು ಮಾಡಿದ ಮುನಿಗಳಿಗೆ ದೊರೆಯಬಹುದಾದ ಶ್ರೇಯಸ್ಸಿಗೆ ಸಮಾನವಾದುದೆಂದೂ ಅವರು ಪರಿಗಣಿಸಿದ್ದರು. ಮಹಾಭಾರತದ ಉದ್ಯೋಗಪರ್ವದಲ್ಲಿ 'ಶಸ್ತ್ರಯಜ್ಞ' ಎಂಬ ಯಜ್ಞದ ಉಲ್ಲೇಖವಿದೆ. ಈ ಯಜ್ಞವನ್ನು ಮಾಡುವುದರಿಂದ ಧಾರ್ಮಿಕ ಯಜ್ಞದಿಂದ ಉಂಟಾಗುವ ಫಲವೇ ಲಭ್ಯವಾಗುತ್ತದೆ ಎಂದು ಹೇಳಿದೆ. ಅಶ್ವಮೇಧಯಾಗವನ್ನು ಮಾಡುವ ಅರಸನನ್ನು ಧರ್ಮಗಳು ಎತ್ತಿ ಹಿಡಿದಿವೆ.[೪೬]

ವೈದಿಕ ಧರ್ಮದ ಉತ್ಕೃಷ್ಟಗ್ರಂಥವಾದ ಭಗವದ್ಗೀತೆಯ ಪಾರಮಾರ್ಥಿಕ ಆಶಯಗಳೇನೇ ಇರಲಿ ಅದು ಯುದ್ಧ ಪ್ರವೃತ್ತಿಗೆ ಪ್ರೇರಣೆಯನ್ನು ನೀಡಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅದರಲ್ಲಿನ ಕೆಲವು ಶ್ಲೋಕಗಳು ಅನೇಕ ಜನ ವೀರರಿಗೆ ಉತ್ತೇಜನವನ್ನು ನೀಡಿವೆ. ಎರಡನೆಯ ಅಧ್ಯಾಯದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಹೇಳುವ

---

೪೬ ವಿವರಗಳಿಗೆ ನೋಡಿ : B. P. Sinha : 'The Art of war in Ancient India' Studies in Culture and History ಪು. ೧೧೭

"ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾವಾಭೋಕ್ಷ್ಯಸೇ ಮಹೀಮ್
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ"

ಎಂಬ ಶ್ಲೋಕ[೪೭] ಬೇರೆಯ ರೂಪವನ್ನು ತಾಳಿ

"ಜಿತೇನ ಲಭ್ಯತೇ ಲಕ್ಷ್ಮೀಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿ ನೀಕಾಯೇ ಕಾಚಿಂತಾ ಮರಣೇರಣೇ"

ಎಂಬುದಾಗಿ ಕರ್ನಾಟಕದ ವೀರಗಲ್ಲುಗಳಪಾಠದ ನಾಂದಿಶ್ಲೋಕವಾಗಿದೆ.

ಅದೇ ಅಧ್ಯಾಯದಲ್ಲಿ ಮುಂದುವರಿದು ಕೃಷ್ಣನು ಹೇಳುವ

"ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯನ್ತಿ ತೇ ऽ ವ್ಯಯಾಮ್
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ" – ಎಂಬ ಶ್ಲೋಕವೂ[೪೮] ವೀರಗಲ್ಲುಗಳ ಪಾಠಗಳಲ್ಲಿ ಮತ್ತು ಕನ್ನಡ ಕಾವ್ಯಗಳಲ್ಲಿನ ವೀರರ ಬಾಯಲ್ಲಿ ಮರುಧ್ವನಿಯನ್ನು ಪಡೆದಿದೆ. ಸುಮಾರು ಏಳನೆಯ ಶತಮಾನದ ಕಪ್ಪೆ ಅರಭಟ್ಟನ ವ್ಯಕ್ತಿ ಚಿತ್ರವನ್ನು ನೀಡುವ ಶಾಸನದ ಆರಂಭದಲ್ಲಿ ಅವನ ಜೀವನದ ಧ್ಯೇಯವನ್ನು ಎತ್ತಿ ಸಾರುವ ಈ ಶ್ಲೋಕವಿದೆ.

"ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಣ್ಡನಮ್
ಮೃತ್ಯುಸ್ತತ್ ಕ್ಷಣಿಕೋ ದುಃಖಮ್ಮಾನಭಂಗಂ ದಿನೇ ದಿನೇ

ಕ್ರಿ.ಶ. ೧೧೪೦ರ ಮತ್ತೊಂದು ಶಾಸನದಲ್ಲಿ[೪೯]

"ಅನಿತ್ಯಮಧ್ರುವಂ ಪ್ರಾಣಂ ಮಾನಮಾಚಂದ್ರತಾರಕಂ
ಪ್ರಾಣಮೇವ ಪರಿತ್ಯಾಗೇ ಮಾನಮೇವ ಸುರಕ್ಷಿತಂ"

–ಎಂಬ ಈ ಶ್ಲೋಕದಲ್ಲಿ ವೀರತ್ವದ ಪಾರಮಾರ್ಥಿಕ ಫಲವೂ ವ್ಯಕ್ತವಾಗಿದೆ. ಇವೆರಡೇ ಉದಾಹರಣೆಗಳಲ್ಲಿ ಈ ಧ್ಯೇಯವನ್ನೇ ಜೀವನದ ಒಂದು ಭಾಗವಾಗಿ ಪರಿಗಣಿಸಿ ಅದಕ್ಕಾಗಿ ತಮ್ಮ ತನುವನ್ನು ನೀಗಿದ ಅನೇಕ ವೀರ ಪುರುಷರ ಉದಾಹರಣೆಗಳೇ ದೊರೆಯುತ್ತವೆ. ವೀರರ ಈ ಭಾವನೆಗಳು ಕನ್ನಡಕಾವ್ಯಗಳಲ್ಲಿ ಇನ್ನೂ ವಿಸ್ತಾರವಾಗಿ, ಪರಿಣಾಮಕಾರಿಯಾಗಿ ಮೂಡಿಬಂದಿವೆ ಇವೆಲ್ಲದಕ್ಕೂ ಕಾರಣ ಅಂದಿನ ಜನರ ಜೀವನ ಮೌಲ್ಯವೇ ಎಂದು ಹೇಳಬಹುದು. ಇಲ್ಲಿಯೂ

---

೪೭ ಭಗವದ್ಗೀತೆ ೨–೩

೪೮ ಅದೇ ೨–೩೮

೪೯ E. C. V Cm 122 1140

ಸಹ ಮೇಲೆ ಹೇಳಿದ ಭಗವದ್ಗೀತೆಯ ತಾತ್ವಿಕತೆಯು ಪ್ರತಿಧ್ವನಿಸಿದೆ.

ಒಡಲುಂ ಪ್ರಾಣಮುಮೆಂಬಿವು
ಕಿಡಲಾದವು ಜಸಮದೊಂದೆ ಕಿಡದದನಾಂ ಬ
ಲ್ವಿಡಿವಿಡಿದು ನೆಗಟ್ದೆನಟಿದಟಿ
ವಡೆ ಮಾತಂ ಮಾಡಿ ನೀನೆ ಕೆಮ್ಮನೆ ನುಡಿವೈ

ಬಿದಿವಸದಿಂದೆ ಪುಟ್ಟುವುದು ಪುಟ್ಟಿಸುವಂ ಬಿದಿ ಪುಟ್ಟಿದಂದಿವಂ
ಗಿದು ಬಿಯಮೊಳ್ಪಿವಂಗಿದು ವಿನೋದಮಿವಂಗಿದು ಸಾವಪಾಂತಿವಂ
ಗಿದು ಪಡೆಮಾತಿಂಗಿದು ಪರಾಕ್ರಮಮೆಂಬುದನೆಲ್ಲ ಮಾಟ್ಕೆಯಿಂ
ಬಿದಿ ಸಮಕಟ್ಟಿಕೊಟ್ಟೊಡೆಡೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್[೫೦]

–ಎಂಬ ಪಂಪ ಭಾರತದ ಕರ್ಣನ ಮಾತುಗಳಲ್ಲಿ,

ಗೆಲಲಾರ್ಪೊಡಿಱಿದು ಗೆಲ್ವುದು
ಗೆಲಲಾಱದೊಡಣ್ಮಿ ಸಱವುದಾಳ್ಗಿನಿತೆ ಗುಣಂ
ಗೆಲಲುಂ ಸಱಯಲುಮಾಱದೆ
ತೊಲಗಿದೊಡೆ ನೆಗಟ್ತೆ ತೊಲಗದಿರ್ಕುಮೆ ಮೆಯ್ಯಂ[೫೧]

–ಎಂಬ ರನ್ನನ ಸಾಹಸಭೀಮವಿಜಯದ ದುರ್ಯೋಧನನ ಮಾತುಗಳಲ್ಲಿ,

ಸಾಯಬಹುದು ಸಾವಿಗೇತಕೆಣಿಕೆ ಈ । ಕಾಯವಿಹುದೆ ಹಲಕಾಲ
ಸಾಯದರಿಲ್ಲಿಳೆಯೊಳಗಿಂದು ಬಂದಿದೆ । ಸಾಯಬಾರದ ಸಾವೆನಗೆ
ಹುಟ್ಟಿದರಿಗೆ ಸಾವುತಪ್ಪದು ಬೊಮ್ಮನ । ಕಟ್ಟಲೆ ಇದಕಂಜಲೇಕೆ
ಕಟ್ಟಿಕೊಂಡಕೀರ್ತಿಯ ಸಾಯಬಾರದು । ಕೆಟ್ಟಾಳದ ಮನುಜರು[೫೨]

–ಎಂದು ಕುಮಾರರಾಮನು ಕಾಟಣ್ಣನಿಗೆ ಹೇಳುವ ಮಾತುಗಳಲ್ಲಿ ಇದನ್ನು ಗಮನಿಸಬಹುದು.

ಈ ಮಾತುಗಳ ತಾತ್ಪರ್ಯ ; ಸಾವು ಎಂಬುದು ಮನುಷ್ಯನಾದವನಿಗೆ ಒಂದಲ್ಲ ಒಂದುಬಾರಿ ಬಂದೇ ತೀರುತ್ತದೆ ; ಸಾಯುವುದು ಅಥವಾ ಹುಟ್ಟುವುದು ವಿಧಿಯವಶ, ಆದರೆ

೫೦ ಪಂಪ : ವಿಕ್ರಮಾರ್ಜುನ ವಿಜಯಂ, ೧೨–೧೮೧, ೧೮೨
೫೧ ರನ್ನ : ಸಾಹಸಭೀಮ ವಿಜಯಂ, ೨–೨೧
೫೨ ನಂಜುಂಡ : ರಾಮನಾಥ ಚರಿತೆ ಭಾಗ –೩ ಆ. ೯ ಸಂ. ೧

ಸಾಯುವಾಗ ಅಪಕೀರ್ತಿಯಿಂದಾಗಲೀ ಹೇಡಿತನದಿಂದಾಗಲೀ ಸಾಯುವುದು ವೀರನ ಲಕ್ಷಣವಲ್ಲ; ಆದ್ದರಿಂದ ವೀರನಾದವನು ಯುದ್ಧರಂಗದಲ್ಲಿ ಸಾಯುವುದರಲ್ಲಿ ಸಾರ್ಥಕತೆ ಇದೆ –ಎಂಬ ಸಂದೇಶವನ್ನು ಸಾರುವ ಭಗವದ್‌ಗೀತೆಯ ಪ್ರಭಾವ ವೀರಪರಂಪರೆಯ ಮೇಲೆ ಆಗಿದೆ ಎಂಬುದು ವಾಸ್ತವ ಸಂಗತಿ.

ಪ್ರಸ್ತುತ ಸಂದರ್ಭದಲ್ಲಿ ಚೀನಾದೇಶದ ಬೌದ್ಧಪ್ರವಾಸಿ ಹುಯೆನ್‌ತ್ಸಾಂಗ್ ತನ್ನ ಪ್ರವಾಸಕಥನದಲ್ಲಿ ನೀಡಿರುವ ಒಂದು ವಿವರಣೆ ನಮ್ಮ ಗಮನವನ್ನು ಸೆಳೆಯುತ್ತದೆ. ಕುರುಕ್ಷೇತ್ರಕ್ಕೆ ಆ ಹೆಸರುಬರಲು ಇದ್ದ ಕಾರಣವನ್ನು ಅವನು ಈ ರೀತಿ ತಿಳಿಸುತ್ತಾನೆ. “ಇಂಡಿಯಾದೇಶ ಇಬ್ಬರು ರಾಜರುಗಳಿಗೆ ಸೇರಿತ್ತು. ಒಬ್ಬನ ದೇಶವನ್ನು ಮತ್ತೊಬ್ಬನು ಕಬಳಿಸಬೇಕೆಂಬ ಆಸೆಯಿಂದ ಪರಸ್ಪರ ಕಲಹಗಳು ಒಂದೇ ಸಮನೆ ನಡೆಯುತ್ತಿದ್ದವು ಕೊನೆಯದಾಗಿ ಒಂದು ಯುದ್ಧವನ್ನು ಮಾಡಿ ತಮ್ಮ ಬಲಾಬಲವನ್ನು ತೀರ್ಮಾನಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಆದರೆ ಜನಗಳು ಅಸಮಾಧಾನ ಹೊಂದಿ ರಾಜರ ಈ ತೀರ್ಮಾನಕ್ಕೆ ಒಪ್ಪಲಿಲ್ಲ. ಈ ಕಾರಣ ಸ್ಥಾಣೇಶ್ವರವನ್ನೊಳಗೊಂಡಿದ್ದ ದೇಶದ ರಾಜನು ಒಂದು ಉಪಾಯವನ್ನು ಹೂಡಿದನು. ಜನಗಳಿಗೆ ಅಲೌಕಿಕವಾದ ವಿಚಾರಗಳಲ್ಲಿ ಹೆಚ್ಚು ನಂಬಿಕೆ ಎಂಬುದನ್ನು ಅರಿತು, ಒಬ್ಬ ಬ್ರಾಹ್ಮಣನನ್ನು ಗುಟ್ಟಾಗಿ ತನ್ನ ಅರಮನೆಗೆ ಕರೆಸಿ, ಒಂದು ಕೋಣೆಯಲ್ಲಿ ಕೂಡಿ ಹಾಕಿ ಧರ್ಮಸೂತ್ರವನ್ನು ಬರೆಯುವಂತೆ ಅಪ್ಪಣೆ ಮಾಡಿದನು. ಅವನು ಬರೆದ ನಂತರ ಆ ಪುಸ್ತಕವನ್ನು ಒಂದು ಕಲ್ಲುಗುಹೆಯೊಳಗೆ ಬಚ್ಚಿಟ್ಟನು. ಅಲ್ಲಿ ಅದು ಹಲವಾರು ವರ್ಷಗಳಿತ್ತು. ಅದರ ಮೇಲೆ ಗಿಡ ಗಂಟೆಗಳು ಬೆಳೆದುಕೊಂಡವು. ಒಂದುದಿನ ರಾಜನು ತನ್ನ ಮಂತ್ರಿಗಳನ್ನು ಕರೆಸಿ ತನಗೊಂದು ಕನಸಾಯಿತೆಂದೂ ಆ ಕನಸಿನಲ್ಲಿ ಇಂದ್ರನು ಬಂದು ಬೆಟ್ಟದ ಗುಹೆಯಲ್ಲಿ ಒಂದು ಪುಸ್ತಕ ಅಡಗಿರುವ ವಿಚಾರ ಹೇಳಿದನೆಂತಲೂ ತಿಳಿಸಿದನು. ಇದನ್ನು ಕೇಳಿದ ಮಂತ್ರಿಗಳೂ, ಜನಗಳೂ ಸೇರಿ, ಆ ಪುಸ್ತಕ ಇದ್ದ ಸ್ಥಳಕ್ಕೆ ಹೋಗಿ ಅದನ್ನು ಹೊರಕ್ಕೆ ತೆಗೆದು ಓದಿಸಿ ಕೇಳಿದರು. ಅದರ ಸಾರಾಂಶ ಈ ರೀತಿ ಇತ್ತು. ‘ಜನನ ಮರಣವೆಂಬ ಉಬ್ಬರವಿಳಿತಗಳುಳ್ಳ ಅನಂತ ಸಾಗರ. ಅದರ ಸುಳಿಗಳಿಗೆ ಸಿಕ್ಕಿದರೆ ಬುದ್ಧಿವಂತರೂ ಅವುಗಳಿಂದ ತಪ್ಪಿಸಿಕೊಳ್ಳಲಾರರು. ಅವರನ್ನು ಕಷ್ಟದಿಂದ ಪಾರು ಮಾಡುವುದಕ್ಕೆ ಒಂದು ಉಪಾಯವಿದೆ. ಯಾರು ಯುದ್ಧಕ್ಕೆ ಹೋಗಿ ಹೋರಾಡಿ ಸಾಯುತ್ತಾರೋ ಅವರಿಗೆ ಪುನಃ ಮನುಷ್ಯಜನ್ಮ ಪ್ರಾಪ್ತವಾಗುತ್ತದೆ, ಇದರಿಂದ ದೇವರು ತೃಪ್ತಿಗೊಂಡು ಆಶೀರ್ವಾದ ಮಾಡುತ್ತಾನೆ. ಸ್ವಲ್ಪ ಕೆಲಸದಿಂದ ಹೆಚ್ಚು ಅನುಕೂಲ ಪಡೆಯಬಹುದಾದ್ದ ಅಂಥ ಅವಕಾಶವನ್ನು ಏಕೆ ಕಳೆದುಕೊಳ್ಳಬೇಕು ? ಈ ಮನುಷ್ಯ ಶರೀರರಾದ ಮೇಲೆ ಮರವೆಯ ಅಂಧಕಾರ ಪ್ರಾಪ್ತವಾಗುತ್ತದೆ. ಆದುದರಿಂದ ಒಳ್ಳೆಯಕರ್ಮ ಮಾಡುವುದರಲ್ಲಿ ಪ್ರತಿಯೊಬ್ಬನೂ ನಿರತನಾಗಬೇಕು. ಆದುದರಿಂದ ರಣರಂಗದಲ್ಲಿ ಸತ್ತರೆ ಮನೆಗೆ ಹಿಂದಿರುಗಿ ಬಂದಂತೆ–” ಈ ಮಾತುಗಳ ಅರ್ಥವನ್ನು ಜನರಲ್ಲಿ ತುಂಬಿ ಅವರನ್ನು

ಹರಿದುಂಬಿಸಿ ಸಿದ್ಧತೆ ಮಾಡಿದನು. ಇದೇ ಸ್ಥಳದಲ್ಲಿ ಘೋರ ಯುದ್ಧವಾಯಿತು." ಎಂಬುದಾಗಿದೆ ಆ ಪ್ರವಾಸಿಯ ವಿವರಣೆ.[೫೩] ಹ್ಯುಯನ್‌ತ್ಸಾಂಗ್ ನಿರೂಪಿಸಿರುವ ಈ ಪ್ರಸಂಗ ವಾಸ್ತವ ಸಂಗತಿಯಾಗಿದ್ದಿರಬಹುದು ಅಥವಾ ಅವನು ಕೇಳಿದ ಕಟ್ಟುಕತೆಯಾಗಿದ್ದಿರಬಹುದು. ಈ ಪ್ರಸಂಗವನ್ನು ಗಮನಿಸಿದಾಗ ನಮಗೆ ತಿಳಿದು ಬರುವ ಅಂಶಗಳೆಂದರೆ : ಜನರಲ್ಲಿನ ಧರ್ಮಶ್ರದ್ಧೆಯನ್ನು ಉಪಯೋಗಿಸಿಕೊಂಡು ಸಾಮ್ರಾಜ್ಯಶಾಹಿ ಪಕ್ಷದವರು ತಮ್ಮ ವಿಜಯಕ್ಕಾಗಿ ಅವರನ್ನು ಧರ್ಮದ ಹೆಸರಿನಲ್ಲಿಯೇ ಪ್ರಚೋದನೆ ಮಾಡುತ್ತಿದ್ದರು ; ಧಾರ್ಮಿಕ ಗ್ರಂಥದಲ್ಲಿ ನಿರೂಪಿತವಾಗಿರುವ ಈ ತೆರನ ಮೌಲ್ಯಗಳನ್ನು ಜನ ನಂಬಿದ್ದುದ್ದು ಮಾತ್ರವಲ್ಲದೆ ಅನುಸರಿಸುತ್ತಿದ್ದರೂ ಕೂಡ ; ಅಂದರೆ ಧರ್ಮವೂ ಸಹ ಒಂದಲ್ಲ ಒಂದು ರೀತಿಯಿಂದ ಯುದ್ಧ ಪ್ರವೃತ್ತಿಗೆ ಪ್ರೇರಣೆಯನ್ನು ನೀಡಿ ವೀರತನವನ್ನು ಎತ್ತಿ ಹಿಡಿಯಿತು –ಎಂಬುವು.

ಅಹಿಂಸೆಯನ್ನೇ ಪ್ರಧಾನವಾಗಿ ಎತ್ತಿಹಿಡಿಯುವ ಜೈನ ಧರ್ಮವೂ "ಸಾಮಾನ್ಯ ಮನುಷ್ಯನನ್ನು ಗಮನದಲ್ಲಿಟ್ಟುಕೊಂಡು ನಾಲ್ಕುವಿಧವಾದ ಹಿಂಸೆಗೆ ಅವಕಾಶವನ್ನು ಕೊಟ್ಟಿದೆ. ಸಂಕಲ್ಪೀ, ವಿರೋಧೀ, ಆರಂಭೀ, ಉದ್ಯೋಗೀ, ವಿರೋಧೀಹಿಂಸಾ ಎಂದರೆ ಒಬ್ಬ ವ್ಯಕ್ತಿ ತನ್ನ ಅಥವಾ ಇತರರ ರಕ್ಷಣೆಗಾಗಿ ಹೋರಾಡುವಾಗಿನ ಹಿಂಸೆ. ಒಬ್ಬನು ತನ್ನ ರಾಜ್ಯವನ್ನೋ ಧರ್ಮವನ್ನೋ ರಕ್ಷಣೆ ಮಾಡುವುದಕ್ಕಾಗಿ ಯುದ್ಧ ಮಾಡಬಹುದು. ಕಳ್ಳರನ್ನು ಶಿಕ್ಷಿಸುವುದಕ್ಕಾಗಿ ಅವರನ್ನು ಕೊಲ್ಲಬಹುದು. ಈ ಮೂಲಕ ಜೈನಧರ್ಮವೂ ಹಿಂಸೆಯ ಬಗ್ಗೆ ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.[೫೪] ವೈದಿಕ ಧರ್ಮವು ಅಶ್ವಮೇಧಯಾಗವನ್ನು ಎತ್ತಿ ಹಿಡಿದಂತೆ ಜೈನಧರ್ಮವೂ ಸಹ ಅರಸರ ದಿಗ್ವಿಜಯಗಳನ್ನು ಎತ್ತಿ ಹಿಡಿದಿದೆ ಮತ್ತು ಇತರೆಡೆಗಳಲ್ಲಿ ವೀರತನವನ್ನು ವೈದಿಕ ಧರ್ಮದ ಹಾಗಯೇ ಗೌರವಿಸಿದೆ.[೫೫]

ಮೇಲೆ ಭಾರೀಯಧರ್ಮಗಳು ಯಾವ ರೀತಿ ಯುದ್ಧಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದೆ ಎಂಬುದನ್ನು ಗಮನಿಸಿದೆವು. ಆದರೆ ಅವು 'ವೀರತನ'ವನ್ನು ಸ್ವೇಚ್ಛಾಚಾರವೆಮದು ಬಗೆಯಲಿಲ್ಲ. ಅದಕ್ಕೆ ಕೆಲವಾರು ನೀತಿ–ನಿಯಮಗಳನ್ನು ಹಾಕಿತು. ಶಕ್ತಿವಂತನಾದ ವ್ಯಕ್ತಿ ತನ್ನ ಧೂರ್ತತನದಿಂದ ಮಾಡಿದ ಯಾವುದೇ ಕೃತ್ಯವೂ ಸಹ ವೀರತನವೆಂದು ಎಲ್ಲಿಯೂ ಪರಿಗಣಿತವಾಗಿಲ್ಲ. ಅಸಹಾಯಕರ

೫೩ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ, ಭಾಗ –೧ ಪು. ೨೧೮–೧೯

೫೪ M. Chidananda Murthy : "The Concept of War and Ahimsa in Jainism in Karnataka". Indian Philosophical Quarterly Vol. III No.I ಪು. ೨೦

೫೫ ವಿವರಗಳಿಗೆ ನೋಡಿ. ಅದೇ, ಪು. ೨೦–೨೧

ಮೇಲೆ, ಅಬಲೆಯರ ಮೇಲೆ, ನಿರಾಯುಧರ ಮೇಲೆ ಅಕಾರಣವಾಗಿ ಕೈ ಮಾಡುವುದನ್ನು ವೀರತನವೆಂದು ಕರೆದಿಲ್ಲ. ಬದಲಾಗಿ ಆ ಕೃತ್ಯ ಹೇಡಿಯ ಪರಮಲಕ್ಷಣವೆಂದು ಪರಿಗಣಿತವಾಗಿದೆ. ವೀರತನ ಮತ್ತು ಧೂರ್ತತನ ಈ ಎರಡರಲ್ಲೂ ವ್ಯಕ್ತಿಗಳು ಸಾಯುವುದೇ ಅಥವಾ ತಮ್ಮ ಬಲ–ಪರಾಕ್ರಮಗಳನ್ನು ತೋರಿಸುವುದೇ ಮುಖ್ಯವಾದರೂ, ಅವುಗಳ ಪ್ರಯೋಗ ಯಾವ ಉದ್ದೇಶದಿಂದ ಕೂಡಿದೆ ಎಂಬುದರ ಮೇಲೆ ಅದು ವೀರತನವೋ, ಧೂರ್ತತನವೋ ಎಂಬುದು ನಿರ್ಣಯವಾಗುತ್ತದೆ. ಈ ಸಂದರ್ಭದಲ್ಲಿ ಕುಮಾರರಾಮನಸಾಂಗತ್ಯದಲ್ಲಿ ಕುಮಾರರಾಮನಿಗೂ, ಅವನ ಗೆಳೆಯನಾದ ಕಾಟಣ್ಣನಿಗೂ ನಡೆಯುವ ಸಂವಾದದ ಪದ್ಯವೊಂದು ಗಮನಾರ್ಹವಾಗಿದೆ.

> ಸಾಯಬಹುದು ಕರ್ಣ ಕಳಶಸಂಭವ ಗಾಂ
> ಗೇಯರಂತಾಜಿರಂಗದೊಳು ।
> ಸಾಯ ಬಾರದು ರಾವಣ ಕೀಚಕ ಕುರು
> ರಾಯರಂತಪಕೀರ್ತಿಯಿಂದ ॥[೫೬]

ಸಾಯುವುದಕ್ಕೆ ವೀರನಾದವನಿಗೆ ಭಯವಿರಲಿಲ್ಲ. ಬದಲಾಗಿ ತಾನು ಯಾವ ಉದ್ದೇಶಕ್ಕಾಗಿ ಸಾಯುತ್ತಿದ್ದೇನೆ ಎನ್ನುವುದು ಮುಖ್ಯವಾಗಿತ್ತೆಂದು ಅಂದಿನ ವೀರರು ಭಾವಿಸಿದ್ದಂತೆ ತೋರುತ್ತದೆ. ರಾವಣ, ಕೀಚಕ ಮತ್ತು ದುರ್ಯೋಧನರು ವೀರರೇ ನಿಜ. ಆದರೆ ಅವರ ಸಾವಿಗೆ ಕಾರಣ ? ನಿಜವಾದ ವೀರನ ಸಾವಿಗೆ ಒದಗಬಹುದಾದ ಕಾರಣವೆ ? ಎಂಬ ಪ್ರಶ್ನೆಯನ್ನು ಅವರು ಹಾಕಿಕೊಂಡಂತೆ ತೋರುತ್ತದೆ.

ರಣರಂಗದಲ್ಲಿ ಸತ್ತು ಬಿದ್ದಿದ್ದ ಅಭಿಮನ್ಯುವನ್ನು ಕಂಡ ದುರ್ಯೋಧನ ಅಭಿಮನ್ಯುವನ್ನು ಹೊಗಳುವ ರೀತಿ ಹೀಗಿದೆ.

> ಪಸಿವಿನೊಳನ್ನ ಮಂ ಪಸಿದುಬಂದವರ್ಗಿಕ್ಕುವ ಯುದ್ಧರಂಗದೊಳ್
> ಕುಸಿಯದೆ ಸೂಜೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ ಮಾ
> ನಸಿಕೆಯ ನಾಲ್ವರುಂ ನಮಗೆ ವಂದ್ಯರವಮದಿರೋಳೀತನಲ್ತೆ ಸಾ
> ಹಸ ಧನನೆಂದು ಕೆಯ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ.[೫೭]

---

೫೬ ನಂಜುಂಡ : ರಾಮನಾಥ ಚರಿತೆ ಭಾಗ –೩ ಆ. ೯ ಸಂ. ೧–೧೦೩

೫೭ ರನ್ನ : ಸಾಹಸಭೀಮ ವಿಜಯಂ, ೪–೧೬

ಇಲ್ಲಿ 'ರಣಕ್ಕೆ ಶುಚಿತ್ವ' ಎಂಬು ಮಾತು ಮುಖ್ಯ. ತನ್ನ ಪಕ್ಷದವರು ವೀರನಾದ ಅಭಿಮನ್ಯುವನ್ನು ಮೋಸದಿಂದ ಕೊಂದರೆಂಬ ಅಳುಕು ದುರ್ಯೋಧನನಿಗೆ ಇದೆ. ತಮ್ಮ ಹಾಗೆ ಮೋಸ ಮಾಡದೆ ವೀರತ್ವದಿಂದ ('ರಣಕ್ಕೆ ಶುಚಿತ್ವ'ದಿಂದ) ಹೋರಾಡಿ ಮಡಿದ ಅಭಿಮನ್ಯುವನ್ನು ಕಂಡು ತನ್ನ ತಪ್ಪಿನ ಅರಿವಾಗಿ, ತನಗಿಂತ ಕಿರಿಯನಾದ, ಮಗನ ವಾವೆಯ ಅಭಿಮನ್ಯುವಿಗೆ ಕಯ್ಮುಗಿಯುತ್ತಾನೆ.

"ಕನ್ನಡ ಶಾಸನಗಳು ಧರ್ಮಯುದ್ಧವನ್ನು ಮೆಚ್ಚಿವೆ".[೫೮] "ಆ ಕಾಲಕ್ಕೆ ಕೆಟ್ಟ ಕಾಳಗಗಳೂ ನಡೆಯುತ್ತಿದ್ದುವೆಂಬುದನ್ನು ದನಗಳನ್ನು ಕದಿಯುವುದು, ಸ್ತ್ರೀಯರನ್ನು ಅಪಹರಿಸುವುದು, ಊರುಗಳನ್ನು ಬೆಂಕಿಹತ್ತಿಸಿ ನಾಶಮಾಸುವುದು –ಇವೇ ಮುಂತಾದ ಅಧಾರ್ಮಿಕಕೃತ್ಯಗಳನ್ನು ಶಾಸನಗಳು ನಿರೂಪಿಸುತ್ತವೆ."[೫೯] ಈ ಎರಡೂ ಪರಸ್ಪರ ವಿರುದ್ಧವಾದ ಸಂಗತಿಗಳಿಂದ ತಿಳಿದುಬರುವ ಅಂಶವೆಂದರೆ ; ತಾತ್ವಿಕವಾಗಿ ಧರ್ಮಯುದ್ದವನ್ನು ಒಪ್ಪಿಕೊಮಡು ಹಲವಾರುಜನ ಅದರಂತೆ ಅನುಸರಿಸುವ ವೀರರು ಇದ್ದರು ಎನ್ನುವುದು. ಯುದ್ಧವೆಂಬುದು ಸಾಮೂಹಿಕ ಕ್ರಿಯೆಯಾದ ಕಾರಣ ವಿವಿಧ ರೀತಿಯ ಮನೋಧರ್ಮದ ಜನರಿದ್ದುರು ಶತ್ರುಗಳು ಬಗ್ಗೆ ಹಿಂಸೆಗೆ ಬಹಳವಾಗಿ ಪ್ರೇರಣೆಯನ್ನು ನೀಡುತ್ತಿದ್ದುದರಿಂದ ಕೆಟ್ಟ ಕಾಳಗಗಳು ನಡೆಯುತ್ತಿದ್ದವು. ಇಂಥ ಹಿಂಸಾತ್ಮಕ ಕೃತ್ಯಗಳು ನಡೆಯುತ್ತಿದ್ದಾಗ, 'ಧರ್ಮಗಹಳೆ'ಯನ್ನು ಊದಿ ತಮ್ಮ ಕಡೆಯ ಸೈನಿಕರಿಂದ ಆ ತೆರನ ಹಿಂಸಾತ್ಮಕ ಕೃತ್ಯಗಳು ನಡೆಯದಂತೆ ಸೂಚನೆಯನ್ನು ನೀಡುತ್ತಿದ್ದರೆಮದು ಹಲವಾರು ಕಾವ್ಯ ಮತ್ತು ಜಾನಪದ ವೀರಗೀತೆಗಳಿಂದ ತಿಳಿದು ಬರುತ್ತದೆ.[೬೦]

ವೀರನಾದವನು ಪ್ರರಾಕ್ರಮವನ್ನು ಯುದ್ಧದಲ್ಲಿ ಪ್ರದರ್ಶಿಸುವುದರಿಂದ ಅಥವಾ ಸಾಯುವುದರಿಂದ ಮಾತ್ರ 'ವೀರ'ನೆಂಬ ಗೌರವಕ್ಕೆ ಪಾತ್ರನಾಗುತ್ತಿರಲಿಲ್ಲ. ತನ್ನ ಸ್ವಂತರಕ್ಷಣೆಗಾಗಲೀ, ಇತರರಿಗೆ ಧಕ್ಕೆಯುಂಟಾದಾಗಾಗಲೀ, ತನ್ನ ಊರು, ನೆಂಟರು ತೊಂದರೆಯಲ್ಲಿ ಸಿಕ್ಕಿದಾಗಾಗಲೀ, ಅವರನ್ನು ಆ ತೊಂದರೆಗಳಿಂದ ಬಿಡಿಸುವಲ್ಲಿ ವ್ಯಕ್ತಿಯೊಬ್ಬನು ಮಾಡುವ ಹೋರಾಟವನ್ನು ವೀರತನವೆಂದು ಪರಿಗಣಿಸಲಾಗಿತ್ತು. ಹಾಗೆ ಹೋರಾಡದೆ ತಟಸ್ಥನಾಗಿರುವವನನ್ನು ಷಂಡನೆಂದು ಅಂದಿನಸಮಾಜ ಪರಿಗಣಿಸುತ್ತಿತ್ತೆಂದು ತಿಳಿಯುತ್ತದೆ.[೬೧]

೫೮ ಎಂ. ಚಿದಾನಂದ ಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೦

೫೯ ಅದೇ

೬೦ ಈ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಬರುತ್ತದೆ.

೬೧ ರನ್ನ : ಸಾಹಸಭೀಮವಿಜಯಂ
ತುಱುಗೋಳೊಳ್ ಪೆಣ್ಬುಯ್ಯಲೊ । ಳೆಱವೆಸದೊಳ್ ನಂಟನೆಡಱೊಳೂರಳಿವಿನೊಳಂ
ತಱಿಸಂದು ಗಂಡುತನಮನೆ । ನೆಱಪದವಂ ಗಂಡನಲ್ಲನೆಂತುಂ ಷಂಡಂ. ೨-೨೪

ಒಂದು ದೇಶ ಪರಕೀಯರ ಆಳ್ವಿಕೆಗೆ, ಆಕ್ರಮಣಕ್ಕೆ ಒಳಪಟ್ಟಾಗ, ಆ ದೇಶದ ಪ್ರತಿಯೊಬ್ಬ ನಿಜವಾದ ಪ್ರಜೆಯೂ ವೀರನಾಗುವ ಉತ್ಸಾಹವನ್ನು ಪ್ರಾಮಾಣಿಕವಾಗಿ ತಳೆಯುತ್ತಾನೆ. ದೇಶಪ್ರೇಮ ಎಂಬುದು ಪ್ರತಿಯೊಬ್ಬ ಸ್ವಾಭಿಮನಿಯಲ್ಲಿಯೂ ಇರುತ್ತದೆ. ಆತನ ಈ ಗುಣವನ್ನು ಯಾರಾದರೂ ಕೆಣಕಿದರೆ ಅದು ಕೆರಳುತ್ತದೆ. ಈ ರೀತಿ ಪ್ರತಿಯೊಬ್ಬ ಪ್ರಜೆಯೂ ಅಭಿಮಾನಪಡುವ ವಿಷಯದಲ್ಲಿ ಧರ್ಮಕ್ಕಿಂತ ದೇಶವೇ ಹೆಚ್ಚು ಪ್ರಾಮುಖ್ಯವಾಗುತ್ತದೆ. ತಮ್ಮ ಮಾತೃಭೂಮಿಗಾಗಿ ಮಡಿದ ಅನೇಕ ವೀರರ ಹೆಸರುಗಳನ್ನು ಪ್ರತಿಯೊಂದು ದೇಶದ ಇತಿಹಾಸದಲ್ಲಿಯೂ ನಾವು ಕಾಣಬಹುದಾಗಿದೆ. ತಮ್ಮ ಪ್ರಾಣಕ್ಕಿಂತ ತಮ್ಮ ದೇಶದ ಅಭಿಮಾನ. ಮುಂದಿನ ಜನಾಂಗದ ಅಭಿವೃದ್ಧಿ ಇವುಗಳನ್ನು ಮಹತ್ವದವೆಂದು ಪರಿಗಣಿಸಿ ಮಡಿದ ವೀರರು ನಿಜವಾಗಿಯೂ ಧ್ಯೇಯವಾದಿಗಳೇ ಸರಿ.

ವೃತ್ತಿಯಿಂದ ಸೈನಿಕರಲ್ಲದಿದ್ದರೂ ತಮ್ಮ ಮೇಲೆರಗಿ ಬಂದ ಕಳ್ಳರಿಂದ ತಮ್ಮ ರಕ್ಷಣೆ ಮಾಡಿಕೊಳ್ಳಲು ಸಮರ್ಥರಿದ್ದ ವರ್ತಕವರ್ಗದವರನ್ನು ಕನ್ನಡ ನಾಡಿನಶಾಸನಗಳು 'ವೀರಬಣಂಜು' ಗಳೆಂದು ಕರೆದು ಅವರ ಪರಾಕ್ರಮವನ್ನು ಹೊಗಳಿವೆ. ಇಲ್ಲಿ ಅವರಿಗೆ ಸ್ವರಕ್ಷಣೆಯೇ ಪ್ರಮುಖವಾದುದು. ಕೇವಲ ಪರಾಕ್ರಮದ ಪ್ರದರ್ಶನವಲ್ಲ.[೬೨]

ಇದೇ ಸಂದರ್ಭದಲ್ಲಿ ಕವಿರಾಜಮಾರ್ಗಕಾರನು ವರ್ಣಿಸುವ ಕರ್ನಾಟಕದ ಜನರ ವರ್ಣನೆಯು ತುಂಬಾ ಮಹತ್ವಾದ್ದಾಗಿದೆ. ಆ ನಾಡವರು ಸುಭಟರೂ, ಗುಣವಂತರೂ, ಕಲಾರಸಿಕರೂ, ವಿವೇಕಿಗಳೂ, ಮೇಲಾಗಿ ಅಷ್ಟೇ ಸ್ವಾಭಿಮಾನಿಗಳು, ಉಗ್ರಸ್ವರೂಪಿಗಳೂ ಆಗಿದ್ದರು ಎಂಬ ಮಾತು ಪ್ರಾಚೀನಕರ್ನಾಟಕಜನತೆಯ ಜೀವನ ಮೌಲ್ಯವನ್ನು ಎತ್ತಿ ತೋರಿಸುತ್ತದೆ.[೬೩]

ಹೀಗೆಯೇ ಕವಿರಾಜಮಾರ್ಗಕ್ಕಿಂತಲೂ ಹಿಂದಿನ ಶಾಸನಗಳಾದ ತಮಟುಕಲ್ಲು ಮತ್ತು ಬಾದಾಮಿಯ ಶಾಸನಗಳೂ ಇದೇ ಮೌಲ್ಯವನ್ನು ಎತ್ತಿಹಿಡಿಯುತ್ತವೆ. ತಮಟುಕಲ್ಲಿನ ಶಾಸನವಾದರೋ ಗುಣಮಧುರನನ್ನು ಯುದ್ಧಭೂಮಿಯಲ್ಲಿ ಯಮಸ್ವರೂಪಿಯೆಂದೂ, ಅವನ ಗುಣವನ್ನು ಅವನ ಶತ್ರುಗಳೂ ಮೆಚ್ಚುತ್ತಿದ್ದರು ಎಂಬ ಅಂಶವನ್ನು ತಿಳಿಸುತ್ತದೆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನವು ನಮ್ಮ ಜನ ಯಾರನ್ನು ವೀರನೆಂಬುದಾಗಿ ಭಾವಿಸಿದ್ದರೋ ಅಂಥ ವೀರನೊಬ್ಬನ ಸ್ಪಷ್ಟ ಚಿತ್ರವನ್ನು ನೀಡುತ್ತದೆ. ವೀರನಾದವನಿಗಿರಬೇಕಾದ ಸಂಯಮ, ಉದಾತ್ತತೆ ಮತ್ತು ಪರಾಕ್ರಮ ಗುಣಗಳನ್ನು ಕಪ್ಪೆ ಅರಭಟ್ಟನಲ್ಲಿ ಕಂಡು ಆ ಶಾಸನ ಹೊಗಳಿದೆ. ಕಪ್ಪೆಅರಭಟ್ಟನನ್ನು

---

೬೨ ವಿವರಗಳಿಗೆ ನೋಡಿ : ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೫೫ ಮತ್ತು ೨೬೭–೬೮

೬೩ ಕವಿರಾಜಮಾರ್ಗ : ೨–೨೮

ಹೊಗಳುವ ಈ ಪದ್ಯಗಳು ಕೇವಲ ಕಪ್ಪೆ ಅರಭಟ್ಟನ ಪ್ರಶಸ್ತಿಯಾಗದೆ ನಿಜವಾದ ವೀರನ ವೀರತನಕ್ಕೆ ಬರೆದ ಭಾಷ್ಯವಾಗಿದೆ.

ವೀರನಾದವನನ್ನು ಮೆಚ್ಚುವುದರಲ್ಲಿ ಅವನ ಗುಣಗಳನ್ನು ಗೌರವಿಸುವುದರಲ್ಲಿ ವೀರತನವನ್ನು ಎತ್ತಿ ಹಿಡಿದ ಸಮಾಜ, ವೀರರಲ್ಲದವರನ್ನೂ ಹೇಡಿಗಳನ್ನೂ ತಿರಸ್ಕಾರದಿಂದ ನೋಡುವುದರ ಮೂಲಕವೂ ವೀರತನವನ್ನು ಎತ್ತಿ ಹಿಡಿದಿದೆ ಎಂಬುದನ್ನು ಗಮನಿಸಬೇಕು. ಪ್ರಪಂಚದ ಯಾವ ಧರ್ಮವೂ ಸಂಯಮ, ಕ್ಷಮಾಶೀಲ ಗುಣಗಳ ಸೋಗನ್ನು ಹಾಕಿಕೊಂಡಿರುವ ಹೇಡಿತನವನ್ನು ಮೆಚ್ಚುವುದಿಲ್ಲ, ಇಲ್ಲಿ ಹೇಡಿತನವೆಂಬುದನ್ನು ಯುದ್ಧದ ಜಯಾಪಜಯಗಳಿಂದ ನಿಷ್ಕರ್ಷಿಸುವಂತಿಲ್ಲ. ಏಕೆಂದರೆ ಹೋರಾಡಿ ಸೋತು ಮಡಿದವರನ್ನು ಎಂದೂ ಎಲ್ಲಿಯೂ ಹೇಡಿಗಳೆಂದು ಪರಿಗಣಿಸಿರುವುದು ಕಂಡುಬರುವುದಿಲ್ಲ. ವ್ಯಕ್ತಿಯಾದವನು ತನ್ನ ಹೋರಾಟದಲ್ಲಿ ಸೋತರೂ, ಅವನು ಶತ್ರುಪಕ್ಷದವರೊಂದಿಗೆ ಮಾಡಿದ ಹೋರಾಟ ಎಂಥದು ಎಂಬುದನ್ನು ಗಮನಿಸಬೇಕಾಗುತ್ತದೆ. "ಕದಂಬರು ಪಲ್ಲವರೊಡನೆ ಮಾಡಿದ ಯುದ್ಧವೊಂದರಲ್ಲಿ ಸಂಪೂರ್ಣವಾಗಿ ನಿರ್ನಾಮವಾದರು. ಈ ಯುದ್ಧವನ್ನು ಹೂಡಿದ ಶಿವಾನಂದವರ್ಮನು ತಾನು ಸಂಪೂರ್ಣವಾಗಿ ಸೋತಮೇಲೆ, ಅದು ತುಂಬಾ ಅವಮಾನವೆಂದು ಬಗೆದು, ಚಿರಕಾಲ ನಿಲ್ಲುವಂತಹ ಕೀರ್ತಿಯನ್ನು ಬಯಸಿ ಸಾಯುತ್ತಾನೆ.[೬೪] ಇವನು ಈ ರೀತಿ ಸೋತು, ಸತ್ತಿದ್ದರೂ ಕೂಡ ಈ ವಿಷಯವನ್ನು ತಿಳಿಸುವ ಶಾಸನವು ಅವನ ಪರಾಕ್ರಮವನ್ನು ಹೊಗಳಿದೆ. ವೀರಗಲ್ಲುಗಳ ವೀರರೆಲ್ಲರೂ ಹೋರಾಟದಲ್ಲಿ ಮಡಿದ ವೀರರೇ ಎಂಬ ಅಂಶವನ್ನು ಗಮನಿಸಬೇಕು. ಇದರಿಂದ ವೀರತನವನ್ನು ಗುರುತಿಸುವುದರಲ್ಲಿ ಸೋಲುಗೆಲುವುಗಳಿಗಿಂತ, ವೀರನು ಶತ್ರುಪಕ್ಷದವರನ್ನು ಹೇಗೆ ಎದುರಿಸಿದ ಎಂಬುದನ್ನು ಪರಿಗಣಿಸಿದಂತೆ ತೋರುತ್ತದೆ.

ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಕ್ರಿ.ಶ. ೧೧೮೬ ರ ಸಿರಸಿಂಗಯ ಶಾಸನವು ಪರಿಶೀಲನೆಗೆ ಅರ್ಹವಾಗಿದೆ. ಆ ಶಾಸನವು ಹಬ್ಬೆಯ ನಾಯಕನು "ತಾನಸಹಾಯಶೂರನಪ್ಪುದಱಿಂ ಪುರಾತನರಪ್ಪ ಸಹಾಯ ಶೂರರ ಕಥಾಪ್ರಪಂಚಗಳುಮನವರಂ ಕುಱಿತ್ತು ಪೇಳ್ದ ಸುಭಾಷಿತಂಗಳುಮಂ ಕೇಳುತ್ತಿರ್ದ್ದನದೆಂತೆಂದೊಡೆ" ಎಂದು ಅವನ ಒಡ್ಡೋಲಗದಲ್ಲಿ ಹೇಳಲಾಗುತ್ತಿದ್ದ ಶ್ಲೋಕಗಳನ್ನೇ ಶಾಸನಕಾರ ಉಲ್ಲೇಖಿಸುತ್ತಾನೆ. ಅವುಗಳ ಅರ್ಥ ಈ ರೀತಿ ಇದೆ. 'ಲಕ್ಷ್ಮೀ ವಂಶಪಾರಂಪರೆಯಾಗಿ ಅಥವಾ ಶಾಸನ ಬರೆದಿಟ್ಟಿದೆಯೆಂದು ಬರುವವಳಲ್ಲ ; ಆಕೆ ಖಡ್ಗವನ್ನು ಆಶ್ರಯಿಸಿರುತ್ತಾಳೆ. ಪೃಥ್ವೀಹೇಡಿಯನ್ನು ತೊರೆದು ಕಲಿಯನ್ನು ವರಿಸುತ್ತಾಳೆ. ಆಕೆಗೆ

---

೬೪ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೫೦

ಮರ್ಯಾದೆಯಿಲ್ಲ ವೀರಭೋಜ್ಯಳಾಕೆ – ಎಂಬುದಾಗಿ (ನ ಶ್ರೀ ಕುಲಕ್ರಮಂ ಯಾತಿ ಶಾಸನಸೇ ಲಿಖಿತ್ಯಾಪಿವಾ । ಖಡ್ಗಮಾಶ್ರೀಯತೇ ಲಕ್ಷ್ಮೀ ವೀರಭೋಜ್ಯಾ ವಸುಂಧರಾ ॥ ಅಸಮರ್ತ್ಥಂ ಪರಿತ್ಯಜ್ಯ ಸಮರ್ತ್ಥಂ ಪ್ರತಿಯಾತಿ ಸಾ । ಪೃಥಿವ್ಯಾ ನಾಸ್ತಿ ಮರ್ಯಾದಾ ವೀರಭೋಜ್ಯಾ ವಸುಂಧರಾ ॥) ಮುಂದುವರಿದು ಶಾಸನಕಾರ "ಇವು ಮೊದಲಾಗೆ ನಿಜಪ್ರತಾಪಾನುಸಾರಿಗಳಪ್ಪ ಪಲವು ಸುಭಾಷಿತಂಗಳಂ ಬಲ್ಲವರ್ಕ್ಕೆಳಿಸೆ" ಎಂಬುದಾಗಿ ತಿಳಿಸುತ್ತಾನೆ. ಈ ನಿದರ್ಶನವು ರಾಜರ ಆಸ್ಥಾನಗಳಲ್ಲಿ ಹೇಗೆ ವೀರತನದ ಮೌಲ್ಯವು ಎತ್ತಿ ಹಿಡಿಯಲಪಡುತ್ತಿತ್ತು ಎಂಬುದನ್ನು ತಿಳಿಸುತ್ತದೆ.[೬೫]

ಸಾವು ಎಂಬುದು ಎಂದಾದರೂ ಬರುವಂಥದೇ. ಸಾವಿಗೆ ಅಂಜಿ ಓಡಿಹೋಗುವುದರಿಂದ 'ಹೇಡಿ' ಎಂಬ ಅಪಮಾನವನ್ನು ಪಡೆಯುವುದರ ಜೊತೆಗೆ, 'ಬ್ರಹ್ಮಘಾತಪಾತಕ' ಎಂಬ ಪಾಪ ಬರುವುದೆಂಬ ನಂಬಿಕೆ ಜನರದ್ದಾಗಿತ್ತು.[೬೬] ಯುದ್ಧದಲ್ಲಿ ಸ್ವಾಮಿಗೆ ತಪ್ಪಿದ ಭೃತ್ಯನು ರೌರವನರಕಕ್ಕೆ ಹೋಗುತ್ತಾನೆಂದೂ,[೬೭] ಯುದ್ಧದಲ್ಲಿ ಹೆದರಿ ಹಿಂದೆಸರಿದರೆ ಅವನಿಗೆ ಸ್ವರ್ಗ ಲಭಿಸುವುದಿಲ್ಲವೆಂದೂ[೬೮] ಆ ಕಾಲದ ನಂಬಿಕೆಯಾಗಿತ್ತೆಂದು ಕನ್ನಡಕಾವ್ಯಗಳಿಂದ ತಿಳಿದುಬರುತ್ತದೆ.

ಹೋರಾಟಕ್ಕೆ ಅಸಮರ್ಥರಾದವರ ಮಾತು ಬೇರೆ. ಹೋರಾಡಲು ಸಮರ್ಥರಿದ್ದೂ ಪ್ರಾಣದ ಆಸೆಗಾಗಿ ಓಡಿಹೋಗುವ ಹುಂಬರ ಮಾತು ಬೇರೆ. ವೀರನಾದವನು ಬ್ರಾಹ್ಮಣರು, ಸ್ತ್ರೀಯರು, ನಿರಾಯುಧರು, ಬಾಲಕರು, ಶಿಖಂಡಿಗಳು, ಅಂಗವಿಕಲರು ಮುಂತಾದವರ ಮೇಲೆ ತನ್ನ ಶಸ್ತ್ರಾಸ್ತ್ರಗಳನ್ನು ಪ್ರಯೋಗ ಮಾಡಬಾರದು. ಆದುದರಿಂದ ವೀರರು ಶತ್ರುಪಕ್ಷದ ರಾಜ್ಯ ಊರುಗಳಮೇಲೆ ಶಸ್ತ್ರಪ್ರಯೋಗ ಮಾಡುವಾಗ ಮೇಲೆ ಹೇಳಿದ ಜನರೆಲ್ಲರಿಗೆ ಎಚ್ಚರಿಕೆಯನ್ನು ಕೊಟ್ಟು ತಮ್ಮ ಶಸ್ತ್ರಾಸ್ತ್ರಗಳನ್ನು ಪ್ರಯೋಗ ಮಾಡುತ್ತಿದ್ದರು.[೬೯]

---

೬೫ ಎ. ಎಂ. ಅಣ್ಣಿಗೇರಿ ಮತ್ತು ಮೇವುಮಡಿ ಮಲ್ಲಾರಿ (ಸಂ.) ಶಾಸನಸಾಹಿತ್ಯ ಸಂಚಯ. ಪು. ೧೩೪

೬೬ E. C. VII Sk 248 ಸು. ೧೧೨೪

೬೭ ಮಲ್ಲಿಕಾರ್ಜುನ : ಸೂಕ್ತಿಸುಧಾರ್ಣವಂ

ಸ್ವಾಮಿಗೆ ತಪ್ಪಿದ ಭೃತ್ಯನ । ಧೋಮಾರ್ಗಂ ರೌರವಕ್ಕೆ ಗಟಿಗಟಿನಿಟಿಗುಂ
ಸ್ವಾಮಿ ಸುಭೃಉತ್ಯಗೆ ತ । ಪ್ಪಿ ದೊಡಾಮಟೆಯೆವು ದೇವರಟೆವರಾಳ್ದನಗತಿಯಂ
ಮಂತ್ರವರ್ಣನಂ – ೬೮

೬೮ ಗೋವಿಂದ ವೈದ್ಯ : ಕಂಠೀರವನರಸರಾಜವಿಜಯಂ

ಹಿಂದಕ್ಕೆ ಹೆಜ್ಜೆಯ ತೆಗೆದವರಿಗೆ ಸ್ವರ್ಗ । ವೆಂದೆಂದಗಿಲ್ಲ ವೆಂದೆನುತ
ಕುಂದದೆ ಭಾಷೆಗಳನು ಮಾಡಿ ಪಟುಭಟ । ಬೃಂದ ಮುಸುಕಿತೇವೇಳ್ವೆ ೧೭–೩೧

೬೯ N. Subramani : Sangam Polity. ಪು. ೧೩೬

ಯುದ್ಧರಂಗದಲ್ಲಿ ತಾವು ಹೇಡಿಗಳೆಂದು ನೀರನ್ನು ಹೊಕ್ಕೋ, ಶಿವಲಿಂಗವನ್ನು ಅಪ್ಪಿಯೋ, ಹುಲ್ಲನ್ನು ಬಾಯಲ್ಲಿ ಕಚ್ಚಿಕೊಂಡೋ, ಹುತ್ತವನ್ನೇರಿಯೋ ಘೋಷಿಸಿಕೊಂಡವರನ್ನು ವೀರರಾದವರು ರಕ್ಷಿಸಬೇಕೆಂದು ನಿಯಮವಿತ್ತು.[೨೦] ಹಾಗೆಯೇ ಜಟಾಧಾರಿಗಳಾಗಿರುವ ಸನ್ಯಾಸಿಗಳನ್ನೂ, ತಪಸ್ವಿಗಳನ್ನೂ, ಗಾಯಕರನ್ನೂ, ನರ್ತಕರನ್ನೂ, ಧರ್ಮಪ್ರಚಾರಕರನ್ನೂ ಅವರು ಯುದ್ಧರಂಗದಲ್ಲಿಯೇ ಇದ್ದರೂ ಕೊಲ್ಲಬಾರದೆಂಬ ನಿಯಮವಿತ್ತು ಎಂಬುದಾಗಿ ಸಂಗಮ್ ಸಾಹಿತ್ಯದಿಂದ ತಿಳಿದುಬರುತ್ತದೆ.[೨೧]

ವೀರನ ಬಗ್ಗೆ ಸಮಾಜಕ್ಕೆ ಇರುವ ಗೌರವ

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ
ಪರಿವ್ರಾಡ್ಯೋಗ ಯುಕ್ತಾಶ್ಚರಣೇ ಚಾಭಿಮುಖೇ ಹತಃ

ಸೂರ್ಯಮಂಡಲವನ್ನು ಇಬ್ಬರುಮಾತ್ರ ಭೇದಿಸಬಲ್ಲರು. ಒಬ್ಬ, ಯೋಗಸಾಧನೆ ಮಾಡಿದ ಪರವ್ರಾಜಕ. ಮತ್ತೊಬ್ಬ, ರಣರಂಗದ ಮೂಲಕ ಸಾಧನೆ ಮಾಡಿದ ಯೋಧ. ಈ ಶ್ಲೋಕ ಕರ್ನಾಟಕದ ಹಲವಾರು ವೀರಗಲ್ಲುಗಳ ಪಾಠದಲ್ಲಿ ಪದೇಪದೇ ಉದ್ಧೃತವಾಗಿದೆ. ಜನ ಯಾವುದನ್ನು ಪರಮಾರ್ಥಿಕದೃಷ್ಟಿಯಿಂದ ಶ್ರೇಷ್ಠವಾದುದೆಂದು ಭಾವಿಸಿದ್ದರೋ ಅದಕ್ಕೆ ಸಮಾನವಾದುದು ಈ ಯುದ್ಧದಲ್ಲಿ ಮಡಿಯುವುದು, ಎಂಬುದಾಗಿ ನಮ್ಮ ಜನ ನಂಬಿದ್ದರೆಂದು ಇದರಿಂದ ತಿಳಿಯಬಹುದಾಗಿದೆ. ಈ ಕಾರಣದಿಂದಲೇ ವೀರಸ್ವರ್ಗದ ಕಲ್ಪನೆ ಹುಟ್ಟಿಕೊಂಡದ್ದು. ವೀರಮರಣವನ್ನು ಪಡೆಯುವುದು ವೀರನಿಗೆ ಮಾತ್ರವಲ್ಲ ; ಆತನ ತಾಯಿಗೂ ಹೆಮ್ಮೆಯ ಸಂಗತಿಯಾಗಿತ್ತು.[೨೨] ಈ ತೆರನ ಅನೇಕ ವೀರಜನನಿಯರನ್ನು ತಮಿಳಿನ ಸಂಗಮ್ ಸಾಹಿತ್ಯದಿಂದ ಪರಿಚಯ ಮಾಡಿಕೊಳ್ಳಬಹುದು. ಅಲ್ಲಿನ ವೀರಜನನಿಯ ಚಿತ್ರವೊಂದು ಈ ರೀತಿ ಇದೆ. ಒಬ್ಬ ತಾಯಿಗೆ ಆಕೆಯ ಮಗನು ಯುದ್ಧರಂಗದಿಂದ ಹೇಡಿಯಂತೆ ಓಡಿಹೋದನೆಂಬುದಾಗಿ ಜನ ತಿಳಿಸುತ್ತಾರೆ. ಆ ವಾರ್ತೆ ನಿಜವೇ ಆಗಿದ್ದ ಪಕ್ಷದಲ್ಲಿ, ಅಂಥ ಹೇಡಿಯಾದ ಮಗನಿಗೆ ಹಾಲನ್ನು

---

೨೦ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೦

೨೧ N. Subramani : Sangam Polity. ಪು. ೧೩೬

೨೨ ರನ್ನ : ಸಾಹಸಭೀಮ ವಿಜಯಂ,
ಪಲರಿರ್ದು ಕಾದಿದರ್ ಮೆ । ಯ್ಗಲಿಗಳ್ ನಿನ್ನೊಂದೆ ಮೆಯ್ಯೊಳಂ ತವೆ ಕೊಂದೆಯ್
ಪಲರಂ ನಿನ್ನಂ ಪೆತ್ತಳ್ । ಮೊಲೆವೆತ್ತಳೆ ವೀರಜನನಿ ವೆಸರಂ ಪೆತ್ತಳ್ ೪–೫೬

ಉಣಿಸಿದ ತನ್ನ ಮೊಲೆಗಳನ್ನೇ ಕತ್ತರಿಸಿಕೊಳ್ಳುವುದಾಗಿ ಆಕೆ ಪ್ರತಿಜ್ಞೆ ಮಾಡುತ್ತಾಳೆ. ಯುದ್ಧರಂಗದಲ್ಲಿ ತನ್ನ ಮಗನ ಶವವನ್ನು ಹುಡುಕುತ್ತಾ ಹೋದ ಅವಳಿಗೆ ಮಡಿದು ಬಿದ್ದಿರುವ ಮಗನ ದೇಹವು ಕಣ್ಣಿಗೆ ಬೀಳುತ್ತದೆ. ಆಗ ಆಕೆ ತಾನು ಅವನನ್ನು ಹೆತ್ತಾಗ ಪಟ್ಟ ಸಂತೋಷಕ್ಕಿಂತ ಮಿಗಿಲಾದ ಸಂತೋಷವನ್ನು ಪಡೆದೆನೆಮದು ಹೇಳುತ್ತಾಳೆ.[೨೩]

ವೀರನು ಹೋರಾಟದಲ್ಲಿ ಸತ್ತನಂತರ ಇಪ್ಪತ್ತು ತಲೆಮಾರುಗಳವರೆಗೂ ಆತನ ಪರಾಕ್ರಮದ ಕೀರ್ತಿ ಶಾಶ್ವತವಾಗಿ ನಿಲ್ಲುವುದೆಂಬ ಒಂದು ನಂಬಿಕೆಯಿತ್ತು[೨೪]. "ಆ ಕಾಲದಲ್ಲಿ ಒಬ್ಬ ದೊಡ್ಡ ವಿದ್ವಾಂಸನ ಹೆಸರು ಅಥವಾ ಒಬ್ಬ ಮಹಾವಾದಿಯ ಹೆಸರು ನಾಡಿನಲ್ಲಿ ಪ್ರಸಾರವಾಗುತ್ತಿತ್ತೋ ಇಲ್ಲವೋ ತಿಳಿಯದು. ಆದರೆ ಯುದ್ಧದಲ್ಲಿ ಪ್ರಾಣತ್ಯಾಗವನ್ನು ಮಾಡಿದ ವೀರರ ಹೆಸರು ಈ ಲೋಕದಲ್ಲಿ ಮಾತ್ರವಲ್ಲ ಪರಲೋಕದಲ್ಲಿಯೂ ಪಡೆ ಮಾತಾಗುತ್ತಿತ್ತು. ಅವನನ್ನು ಎಲ್ಲರೂ ಪ್ರಶಂಸಿಸುವರೆ ! ಅವನ ಮೇಲೆ ಕತೆಗಳು ಹುಟ್ಟಿಕೊಳ್ಳುತ್ತಿದ್ದುವು."[೨೫] ಈ ಒಂದು ಕಾರಣದಿಂದಲೇ ಪ್ರಪಂಚಲ್ಲಿ ವೀರಕಾವ್ಯಗಳೆಂಬ ಶಿಷ್ಟ ಮತ್ತು ಜಾನಪದ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡಿರುವುದು.

ಪ್ರಸ್ತುತ ಸಂದರ್ಭದಲ್ಲಿ ಪ್ರಾಚೀನ ಕರ್ನಾಟಕದಲ್ಲಿ ತುರುಗಾಳಗದಲ್ಲಿ ಮಡಿದ ವೀರನ ರಕ್ತದಿಂದ ಜನ ಬೊಟ್ಟು ಇಟ್ಟುಕೊಂಡು, ಅವನ ದೇಹಕ್ಕೆ ನಮಸ್ಕರಿಸುತ್ತಿದ್ದರೆಂದು ಬ್ರಹ್ಮಶಿವನು ಹೇಳುವ ವಿಷಯವನ್ನು ನೆನೆಯಬಹುದು.[೨೬]

ಕೊಡಗುಜನಾಂಗದವರಲ್ಲಿ ವೀರನಾದವನಿಗೆ ಸಮಾಜದಲ್ಲಿ ವಿಶಿಷ್ಟವಾದ ಸ್ಥಾನವುಂಟು. ಇದು ಅವನ ಪರಾಕ್ರಮಕ್ಕೆ, ವೀರತನಕ್ಕೆ ಸಲ್ಲಿಸುವ ವಿಶೇಷಗೌರವ. ಈ ಹಿಂದೆಯೇ ಗಮನಿಸಿರುವ ಅಪ್ಪಯ್ಯ ಎಂಬ ಬಾಲಕನು ಚಂದು ಎಂಬ ಜಟ್ಟಿಯನ್ನು ಗೆದ್ದು ತನ್ನ ನಾಡಿಗೆ, ಹಳ್ಳಿಗೆ, ಜನಾಂಗಕ್ಕೆ ಗೌರವವನ್ನು ತಂದನು. ಆ ಬಾಲಕನಿಗೆ 'ಮಂಗಳ'ವೆಂಬ ವಿಶೇಷ ಗೌರವವನ್ನು ಮಾಡುತ್ತಾರೆ. ನಾಡಿನಲ್ಲಿ ಎಲ್ಲರಿಗಿಂತ ಹಿರಿಯ ಸ್ಥಾನವನ್ನು ಅವನಿಗೆ ನೀಡುತ್ತಾರೆ. ನಾಡಿನ ಯಾರೊಬ್ಬರೂ ಅವನನ್ನು ಹೆಸರು ಹಿಡಿದು ಕರೆಯಬಾರದೆಮದು ಆಜ್ಞೆಮಾಡಿ 'ಪಿರಿಯ ಮೊಲಿ' (ಹಿರಿಯ ವ್ಯಕ್ತಿ) ಎಂದು ಸಂಬೋಧಿಸುತ್ತಾರೆ. ಅವನು ಹಿರಿಯರ ಪಾದಗಳನ್ನು ಮುಟ್ಟಿ ನಮಸ್ಕರಿಸಬೇಕಾಗಿಲ್ಲ.

---

೨೩ J.M.Somasudram : A History of Tamil Literature. ಪು. ೧೯೦

೨೪ E. C. VIII Sk. 220,1015

೨೫ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.ಪು. ೨೪೮ – ೪೯

೨೬ ಈ ಬಗ್ಗೆ ಇನ್ನೂ ವಿವರವಾಗಿ ಮುಂದಿನ ಅಧ್ಯಾಯಗಳಲ್ಲಿ ಪ್ರಸ್ತಾಪ ಮಾಡಲಾಗುತ್ತದೆ.

ಅವನಿಗೆ ಕೆಲವಾರು ದೇವಾಲಯಗಳಲ್ಲಿ ವಿಶೇಷಸವಲತ್ತುಗಳನ್ನು ನೀಡುತ್ತಾರೆ. ಹೊಲೆಯಾದಾಗಲೂ ಸಹ ಅವನು ದೇವಾಲಯವನ್ನು ಪ್ರವೇಶಿಸಬಹುದು. (ಇತರರು ಹೊಲೆಯಾದಾಗ ದೇವಾಲಯವನ್ನು ಪ್ರವೇಶಿಸುವ ಹಾಗಿಲ್ಲ). ಅವನು ದೇವರ ಉತ್ಸವಕ್ಕೆ ಪಲ್ಲಕ್ಕಿಯಲ್ಲಿ ಕುಳಿತು ಹೋಗಿ ದರ್ಶನವನ್ನು ಪಡೆಯಬಹುದು. ಅವನು ಸತ್ತನಂತರವೂ ಅವನ ವಂಶಸ್ಥರಿಗೂ ಈ ಗೌರವವು ವಂಶಪಾರಂಪರ್ಯವಾಗಿ ನಡೆಯುತ್ತಾ ಬಂತು.[೨೨]

ಆತ್ಮಬಲಿ – ವೀರತನ

ಹಲವಾರು ಕಾರಣಗಳಿಗಾಗಿ ಆತ್ಮಬಲಿಯನ್ನು ಮಾಡಿಕೊಂಡ ವ್ಯಕ್ತಿಗಳನ್ನೂ ಸಹಾ ವೀರರೆಂದೇ ಪರಿಗಣಿಸಿರುವುದುಂಟು. ಇದಕ್ಕೆ ಅವರು ಸ್ವತಃ ಯೋಧರಾಗಿದ್ದುದು ಒಂದು ಕಾರಣವಾದರೆ, ಈ ರೀತಿ ಆತ್ಮಬಲಿಯನ್ನು ಮಾಡಿಕೊಳ್ಳುತ್ತಿದ್ದ ರೀತಿ ಮತ್ತು ಉದ್ದೇಶವೂ ಇದಕ್ಕೆ ಮತ್ತೊಂದು ಕಾರಣವಾಗಿತ್ತು – ಎಂಬುದಾಗಿ ಊಹಿಸಬಹುದು. ವೀರತನವೆಂದು ಬಗೆದಿರುವ ಈ ಆತ್ಮಬಲಿಯನ್ನು ಎರಡು ಹಂತಗಳಲ್ಲಿ ಗುರುತಿಸುವುದು ಉತ್ತಮ.[೨೮]

(೧) ಧಾರ್ಮಿಕ ಕಾರಣಗಳಿಗಾಗಿ ಆತ್ಮಬಲಿ ಮಾಡಿಕೊಂಡವರು

(೨) ಸಾಮಾಜಿಕ ಕಾರಣಗಳಿಗಾಗಿ ಆತ್ಮಬಲಿ ಮಾಡಿಕೊಂಡವರು

೧. ಧಾರ್ಮಿಕ ಕಾರಣಗಳಿಗಾಗಿ ಆತ್ಮಬಲಿ ಮಾಡಿಕೊಂಡವರು

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ, ಇವರು ಯಾವುದೇ ಹೋರಾಟದಲ್ಲಿ ಮಡಿದವರಲ್ಲ. ಆದರೆ ಇವರು ಹೋರಾಟದಲ್ಲಿ ಮಡಿದ ವೀರರಿಗಿಂತ ಕಡಿಮೆ

---

೨೨ M. N. Srinivasa : Religion and Society Among the Coorg of South India ಪು. ೬೬– ೬೯

೨೮ ಆತ್ಮಹತ್ಯ ಬೇರೆ, ಆತ್ಮಬಲಿ ಬೇರೆ. ಜೀವನದಲ್ಲಿ ಜಿಗುಪ್ಸೆಗೊಂಡು ಜೀವನದಿಂದ ವಿಮುಖರಾಗುವ ಪಲಾಯನ ವಾದಿಗಳು ಅಥವಾ ಬೇರೆ ಮಾರ್ಗವಿಲ್ಲದವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆತ್ಮಬಲಿ ಮಾಡಿಕೊಮಡವರು ಜೀವನದಲ್ಲಿ ಜಿಗುಪ್ಸೆಗೊಂಡವರಲ್ಲ, ಪಲಾಯನ ವಾದಿಗಳಲ್ಲ. ನಿರ್ದಿಷ್ಟ ಉದ್ದೇಶಕ್ಕೆ, ನಿರ್ದಿಷ್ಟ ಸ್ಥಳ ಮತ್ತು ಕಾಲದಲ್ಲಿ ತಮ್ಮನ್ನು ತಾವೇ, ಕೆಲವೊಮ್ಮೆ ಬೇರೆಯವರಿಂದಲೂ ದೇಹವನ್ನು ಬಲಿಗೊಟ್ಟವರು. ಈ ರೀತಿ ಆತ್ಮ ಬಲಿ ಮಾಡಿಕೊಂಡವರ ಬಗ್ಗೆ ಸಮಾಜದಲ್ಲಿ ಗೌರವ ಭಾವವಿತ್ತು.

ಎಂಬುದಾಗಿ ಜನ ಭಾವಿಸಿರಲಿಲ್ಲ ಎನ್ನುವುದು. ಯಾವುದೇ ಉದ್ದೇಶವಿರಲಿ ಅದು ವೈಯಕ್ತಿಕವಾದುದಾಗಿರಬಹುದು, ಸಮಾಜದ ಹಿತರಕ್ಷಣೆಯ ದೃಷ್ಟಿಯನ್ನು ಹೊಂದಿರಬಹುದು. ಪ್ರಾಣವನ್ನು ತೃಣಸಮಾನವಾಗಿ ಬಗೆದು ತಮ್ಮ ಪ್ರಾಣವನ್ನು ತಮ್ಮ ಕೈಯಾರೆ ತೆಗೆದುಕೊಂಡು, ತಮ್ಮನ್ನು ತಾವೇ ದೇವರಿಗೆ ನೈವೇದ್ಯ ಮಾಡಿಕೊಂಡವರು ಇವರು. ಈ ರೀತಿ ಆತ್ಮಾರ್ಪಣೆ ಮಾಡುವುದರ ಮೂಲಕ ತಮಗೂ, ತಮ್ಮ ರಾಜನಿಗೂ, ದೇಶಕ್ಕೂ ಶ್ರೇಯಸ್ಸು ಉಂಟಾಗುತ್ತದೆ ಎಂಬ ನಂಬಿಕೆ ಅವರದಾಗಿತ್ತು. ಈ ನಂಬಿಕೆಯು ಸಂಪೂರ್ಣವಾಗಿ ಧಾರ್ಮಿಕವಾದುದಾಗಿತ್ತು.

ಭಾರತದಲ್ಲಿ ಪ್ರಚಲಿತವಿದ್ದ ಅನೇಕ ಮತಗಳಲ್ಲಿ ಶೈವಮತವು ಬಹುತೇಕ 'ವೀರಮತ'ವೇ ಆಗಿತ್ತು. ಶಾಕ್ತೇಯರೂ ಬಹುಮಟ್ಟಿಗೆ ವಾಮಾಚಾರವನ್ನು ಧರ್ಮದಲ್ಲಿ ಅಳವಡಿಸಿಕೊಂಡಿದ್ದರು. ಮಧ್ಯ ಯುಗದಲ್ಲಿ ಶೈವಧರ್ಮ ತನ್ನ ತಾಂತ್ರಿಕ ಸಂಪ್ರದಾಯದ ಪ್ರಭಾವದಿಂದಾಗಿ ಇಮ್ಮಡಿಯಾಗಿ ವ್ಯಾಪಸಿತ್ತು. ಈ ತೆರನ ಆಚಾರ ದಕ್ಷಿಣಭಾರತದಲ್ಲಿ, ಅದರಲ್ಲಿಯೂ ಆಂಧ್ರಪ್ರದೇಶದಲ್ಲಿ ವಿಶೇಷವಾಗಿತ್ತು. "ಅಷ್ಟದಿಕ್ಕುಗಳಲ್ಲಿರುವ ಅಷ್ಟಭೈರವ ದೇವತೆಗಳಿಗೆ ಅಷ್ಟಾಂಗ ರುಧಿರದಿಂದ ಅರ್ಚನೆಮಾಡಿ, ರಕ್ತಸಿಕ್ತಕಂಠವನ್ನು ಬಲಿಕೊಡುವುದರ ಮೂಲಕ ಜನರು ತಮ್ಮ ಅಭೀಪ್ಸೆಗಳನ್ನು ಈಡೇರಿಸಿಕೊಳ್ಳಬಹುದು ಎಂದು ಭಾವಿಸಿದ್ದ ಕಾಲ ಅದು. ಭಕ್ತ ಅತ್ಯಂತ ಭಕ್ತಿಯ ಭಾವಾವೇಶದಿಂದ ತನ್ನ ಇಷ್ಟದೇವತೆಗೆ ತನ್ನನ್ನು ತಾನೇ ಬಲಿಕೊಟ್ಟುಕೊಳ್ಳುವುದಕ್ಕಿಂತ ಉತ್ತಮೋತ್ತಮವಾದ ಯಾವ ಸಮರ್ಪಣೆಯೂ ಇಲ್ಲವೆಂಬುದು ಅವರ ದೃಢ ವಿಶ್ವಾಸವಾಗಿತ್ತು. ಈ ವಿಶ್ವಾಸ ಪ್ರಬಲವಾದಂತೆ ಅದನ್ನು ಮೂಡಿಸಿದ ಆಚಾರವೂ ಪ್ರಬಲವಾಗುತ್ತಾ ಬಂತು. ಈ ಕಾರಣದಿಂದ ದೇವತೆಗೆ ತಮ್ಮ ತಲೆಗಳನ್ನು ಕೊಟ್ಟವರು ವೀರರು – ವೀರರಷ್ಟೇ ಅಲ್ಲ, ವೀರಾಧಿ – ವೀರರು,"[೭೯] – ಎಂಬುದಾಗಿ ಪರಿಗಣಿಸಲ್ಪಟ್ಟರು. ಈ ರೀತಿ ವ್ಯಕ್ತಿ ಆತ್ಮಬಲಿದಾನ ಮಾಡಿಕೊಳ್ಳುವುದಕ್ಕೆ ಕಾರಣಗಳೆಂದರೆ : ದೇವಿಯ ಆಗ್ರಹದಿಮದ ಅನಿಷ್ಟಗಳು, ಅಂಟುವ್ಯಾಧಿಗಳು ಮುಂತಾದ ತೊಂದರೆಗಳು ಬರಬಾರದೆಂಬುದು ಮತ್ತು ತಮ್ಮ ಅಭೀಪ್ಸೆಗಳು ಈಡೇರಿದಾಗ ತಲೆ ಕೊಡುವುದಾಗಿ ಹರಕೆ ಹೊತ್ತಿರುವುದು.[೮೦] ಇಂಥವರು ಮಹಾಶಿವರಾತ್ರಿಯಂದು ತಮ್ಮ ತಲೆಯನ್ನು ಬಲಿಯಾಗಿ ನೀಡುತ್ತಿದ್ದರು. ಜಾತಿಮತ ಭೇದವಿಲ್ಲದ ಶೈವಧರ್ಮದ ಅನುಯಾಯಿಗಳೆಲ್ಲರೂ ವ್ರತದೀಕ್ಷಾ ನಿರ್ವಹಣೆಗಾಗಿ ಬರುತ್ತಿದ್ದರು. ದೀಕ್ಷಾಬದ್ಧರು ತಮ್ಮ ಕುಕ್ಷಿ, ಶಿರಸ್ಸು, ಬೀಜಗಳನ್ನು ಕತ್ತರಿಸಿ ದೇವರಿಗೆ ಅರ್ಪಿಸುತ್ತಿದ್ದರು. ಇಂಥವರ ಆತ್ಮಬಲಿದಾನಕ್ಕೆಂದೇ 'ಚಂಪು ಗುಡಿಲು' ಅಥವಾ 'ವೀರಶಿರೋಮಂಡನ ಮಂಟಪ'ಗಳು ಇರುತ್ತಿದ್ದವು. ಈ ರೀತಿಯಲ್ಲಿ ಸತ್ತವರ ಸ್ಮರಣಾರ್ಥವಾಗಿ 'ವೀರಗಲ್ಲು'ಗಳನ್ನು ಸ್ಥಾಪಿಸಿದರು. ಆ

---

೭೯ ಆಂಧ್ರ ವಿಜ್ಞಾನ ಸರ್ವಸ್ವಮು ; ತೆಲುಗು ಸಂಸ್ಕೃತಿ, ೨ ಸಂಪುಟ ೪ ಪು. ೧೧೯೦

ವೀರರ ಬಗ್ಗೆ ಅಭಿಮಾನವಿದ್ದವರು ಅವುಗಳಿಗೆ ಗುಡಿಗಳನ್ನು ನಿರ್ಮಿಸಿದ್ದರು. ಇವುಗಳನ್ನು 'ವೀರ ಗುಡ್ಡಮುಲು' ಎಂಬುದಾಗಿ ಕರೆಯುತ್ತಾರೆ. ಇವುಗಳಲ್ಲಿ ಇಂದಿಗೂ ಕೆಲವು ಕಡೆ ಪೂಜೆ ನಡೆಯುತ್ತದೆ.[೮೧]

ತಮ್ಮ ದೇಹವನ್ನು ಕತ್ತರಿಸಿ ದೇವಿಗೆ ಅರ್ಪಿಸಿದ ವೀರಭಕ್ತರ ವಿವರಣೆಯನ್ನು ಭಾರತಕ್ಕೆ ಬಂದ ಇಬ್ಬರು ಪ್ರವಾಸಿಗು ನೀಡುತ್ತಾರೆ. "ಕಾಂಬೈತಾ (ಕ್ಯಾಂಬೆ) ನಗರದಲ್ಲಿ ಪುರೋಹಿತರು ದೇವರ ವಿಗ್ರಹಗಳ ಮುಂದೆ ನಿಂತು ತಮ್ಮ ಧರ್ಮದಲ್ಲಿ ವಿಧಿಸಿರುವ ಕರ್ಮಗಳನ್ನು ಮಾಡಬೇಕೆಂದೂ, ದೇವರುಗಳಿಗೋಸ್ಕರ ಬಲಿದಾನ ಮಾಡಿ ಪ್ರಾಣತ್ಯಾಗ ಮಾಡಿದರೆ ದೇವರುಗಳಿಗೆ ಮೆಚ್ಚುಗೆಯಾಗುವುದೆಂದೂ ಬೋಧನೆ ಮಾಡುತ್ತಾರೆ. ದೇವರುಗಳಿಗೋಸ್ಕರ ಪ್ರಾಣತ್ಯಾಗ ಮಾಡಲು ಅನೇಕರು ಸಿದ್ಧರಾಗಿ ಮುಂದೆ ಬರುತ್ತಾರೆ", ಎಂಬುದಾಗಿ ನಿಕೋಲೋ ಕಾಂಟಿ ತಿಳಿಸುತ್ತಾನೆ[೮೨]. ಬಾರ್ಬೋಸಾ ಎಂಬ ಮತ್ತೊಬ್ಬ ಪ್ರವಾಸಿ ತಮಿಳುನಾಡಿನಲ್ಲಿ ತಾನು ಕಂಡ ಒಂದು ಆತ್ಮಹತ್ಯೆಯನ್ನು ಈ ರೀತಿ ವರ್ಣಿಸುತ್ತಾನೆ. "ರಥೋತ್ಸವದ ದಿನ ರಾಜನು ಸ್ನಾನ ಮಾಡಿ, ದೇವರ ಪೂಜೆಯನ್ನು ನೆರವೇರಿಸಿ ಸಾರುವೆ ಕಟ್ಟಿ ರೇಷ್ಮೆ ಬಟ್ಟೆಗಳಿಂದ ಅಲಂಕರಿಸಿದ ರಥದ ಮೇಲೆ ಬಂದು ನಿಲ್ಲುತ್ತಾನೆ. ನೆರೆದ ಜನರ ಸಮ್ಮುಖದಲ್ಲಿ ಹರಿತವಾದ ಚಾಕುವಿನಿಂದ ತನ್ನ ಕಿವಿ, ಮೂಗು, ತುಟಿ ಇತರ ಅಂಗಗಳನ್ನು ಚಕಚಕ ಕೊಯ್ದು ಬಿಸಾಡುತ್ತಾನೆ. ತನ್ನ ಕೈಯಿಂದ ಕೊಯ್ಯಬಹುದಾದ ಅಂಗಗಳನ್ನು ಕೊಯ್ದುಕೊಳ್ಳುತ್ತಾನೆ. ರಕ್ತಸ್ರಾವದಿಂದ ಪ್ರಜ್ಞೆತಪ್ಪಿ ಬೀಳುವಷ್ಟರಲ್ಲಿ ತನ್ನ ಕುತ್ತಿಗೆಯನ್ನು ಕೊಯ್ದುಕೊಳ್ಳುತ್ತಾನೆ. ಈ ರೀತಿ ಅವನು ದೇವರಿಗೆ ಬಲಿಯಾಗುತ್ತಾನೆ. ಅವನ ನಂತರ ರಾಜನಾಗುವವನು ಅಲ್ಲಿದ್ದು ಇದನ್ನೆಲ್ಲಾ ನೋಡಬೇಕು. ಆಗಲೇ ಅವನನ್ನು ಮುಂದಿನ ರಾಜನನ್ನಾಗಿ ಮಾಡುವುದು."[೮೩]

ತಲೆಯನ್ನು ಬಲಿಕೊಡುವ ಪದ್ಧತಿ ಪ್ರಾಚೀನ ತಮಿಳುನಾಡಿನಲ್ಲಿಯೂ ಇತ್ತು. ಇದಕ್ಕೆ ಅವರು 'ತಲೈ ಬಲಿ' ಎಂಬುದಾಗಿ ಕರೆಯುತ್ತಾರೆ. ತಮಿಳು ಕಾವ್ಯವಾದ ಶಿಲಪ್ಪದಿಕಾರಂನಲ್ಲಿ ಒಬ್ಬ ಅರಸನ ಪಕ್ಷದ ವೀರರು ತಮ್ಮ ಗ್ರಾಮದೇವತೆಗಳ ಮುಂದೆ ತಮ್ಮ ಶತ್ರುಪಕ್ಷದ ರಾಜನಿಗೆ ಯುದ್ಧದಲ್ಲಿ ಗೆಲುವು ದೊರೆಯದಿರಲೆಂದೂ, ತಮ್ಮ ಅರಸನಿಗೆ ಗೆಲುವಾಗಲೆಂದೂ ಹರಕೆ ಹೊತ್ತುಕೊಂಡು

---

೮೦ ಅದೇ, ಪು. ೧೦೮೧

೮೧ ಸುರವರಮು ಪ್ರತಾಪರೆಡ್ಡಿ : ಆಂಧ್ರುಲ ಸಾಂಘಿಕ ಚರಿತ್ರ. ಪು. ೧೧೧

೮೨ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ. ಭಾಗ –೨, ಪು. ೧೩೯–೧೪೦

೮೩ ಅದೇ, ಪು. ೩೪೫

ತಮ್ಮ ತಲೆಗಳನ್ನು ಕಡಿದು ಕೊಳ್ಳುತ್ತಿದ ವಿವರಣೆಗಳು ದೊರೆಯುತ್ತವೆ.[೮೪] ಈ ರೀತಿಯ ಆಚರಣೆಗಳನ್ನು ನಿರೂಪಿಸುವ ಶಿಲ್ಪಗಳೂ ಸಹ ನಮಗೆ ಮಹಾಬಲಿಪುರ, ತಿರುಚಿನಾಪಳ್ಳಿ, ತಂಜಾವೂರಿನ ಬಳಿ ಇರುವ ಪುಲ್ಲಮಂಗೈ ಮುಂತಾದ ಊರುಗಳಲ್ಲಿ ದೊರೆಯುತ್ತವೆ[೮೫].

"ಪ್ರಾಚೀನಕರ್ನಾಟಕದಲ್ಲಿ ವ್ಯಕ್ತಿಗಳು ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳುವ ಪದ್ಧತಿಗಳಿದ್ದುವು. ಇವುಗಳನ್ನು ನಾವು 'ಆತ್ಮಬಲಿ' (Self Immolation) ಎಂದು ಕರೆದಿದ್ದೇವೆ. (ಕೆಲವೆಡೆ (Self Immolation) ಎಂಬರ್ಥದಲ್ಲಿ 'ದೇಹತ್ಯಾಗ' ಎಂಬ ಪದವನ್ನು ಬಳಸಿದ್ದೇವೆ). ಇಲ್ಲಿಯೂ ಅವರ ಉತ್ಕಟವಾದ ಮೋಕ್ಷಾಪೇಕ್ಷೆಯನ್ನು, ಅಸೀಮವಾದ ಧ್ಯೇಯ, ನಿಷ್ಠೆ, ಸ್ವಾಮಿಭಕ್ತಿಗಳನ್ನು ಕಾಣಬಹುದು. ಈ ಆತ್ಮಬಲಿಗಳಲ್ಲಿ ಕೆಲವು ಪೂರ್ಣವಾಗಿ ಧಾರ್ಮಿಕವಾದುವು. ಇನ್ನು ಕೆಲವು ಉದಾತ್ತವಾದ ಪತಿಪ್ರೇಮವನ್ನೂ, ಸ್ವಾಮಿಭಕ್ತಿಯನ್ನೂ ಎತ್ತಿ ತೋರಿಸತಕ್ಕವು. ಆಧುನಿಕ ಯುಗದ ನಮಗೆ ಈ ಪದ್ಧತಿಗಳು ಬಹು ವಿಚಿತ್ರವಾಗಿಯೂ, ಅನಾಗರಿಕವಾಗಿಯೂ ತೋರಬಹುದು. ಮನುಷ್ಯರಿಗೆ ಪ್ರಾಣದ ಮೇಲಿನ ಮೋಹ ಎಷ್ಟು ಮಹತ್ತರವಾಗಿದೆ ಎಂಬುದನ್ನು, ಅವರು ಬದುಕುವ ಆಸೆಯನ್ನು ತೊರೆದು ತಾವು ಆದರ್ಶವೆಂದು ಭಾವಿಸಿದ ಒಂದು ಭಾವನೆಗಾಗಿ ತಮ್ಮನ್ನು ತಾವು ಕೊಂದುಕೊಂಡದ್ದನ್ನು ನೆನಪಿಗೆ ತಂದುಕೊಂಡರೆ ಅವರ ವಿಷಯದಲ್ಲಿ ಅಗಾಧವಾದ ಗೌರವವೂ, ಭಕ್ತಿಯೂ, ಹೆಮ್ಮೆಯೂ ಮೂಡುತ್ತವೆ –" ಎಂಬ ಡಾ. ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯ ಸರ್ವಸಮ್ಮತವಾದದ್ದು.[೮೬]

ಈ ಹಿಂದೆ ಗಮನಿಸಿರುವ ಹಾಗೆ ಧಾರ್ಮಿಕ ಉದ್ದೇಶಗಳಿಗಾಗಿ ಆತ್ಮಬಲಿಯಾದವರು ಸ್ಮಾರಕಶಿಲೆಗಳು ಕರ್ನಾಟಕದಲ್ಲಿ ದೊರೆಯುತ್ತವೆ (ಚಿತ್ರ ೧೬, ೧೭, ೧೮). ತನ್ನ ಅರಸನಿಗೆ ಮಗನಾಗಬೇಕೆಂದು ಹರಸಿಕೊಂಡ ಅಕಟೆ ಎಂಬುವವನು, ಅರಸನಿಗೆ ಗಂಡುಮಗುವಾದ ನಂತರ ತನ್ನನ್ನು ತಾನು ದೇವರಿಗೆ ಅರ್ಪಿಸಿಕೊಂಡನು.[೮೭] ಇದೇ ರೀತಿ ಯುದ್ಧಕ್ಕೆ ಹೊರಡುವ ಮುನ್ನ ವೀರನೊಬ್ಬನು ತನ್ನ ತಲೆಯನ್ನು ಕತ್ತರಿಸಿಕೊಂಡ ವಿಷಯ ಗೌರಿಬಿದನೂರು ತಾಲ್ಲೂಕಿನ ವೀರ ಗಲ್ಲೊಂದರಿಂದ ತಿಳಿದುಬರುತ್ತದೆ. ಇದು "ತನ್ನ ಪಕ್ಷಕ್ಕೆ ಜಯವು ದೊರೆಯಲೆಂಬ ಉದ್ದೇಶದಿಮದಲೋ, ತನ್ನ ಆತ್ಮಬಲಿಯಿಂದ ಸೈನಿಕರಲ್ಲಿ ವೀರೋತ್ಸಾಹವು ತುಂಬಿ ಬರಲೆಂಬ

---

೮೪ V.R. Ramachandra Dikshitar : Silappadi Karm

೮೫ J. Ph. Vogel : 'The Head offering to the Godess in the Pallva Sculptures' Bulltin the School of Oriental Studies Vol. VI, 539 ff

೮೬ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು.೨೧೯

೮೭ E. C. VIII. Sb.479, ಸು. ೯೯೧

ಉದ್ದೇಶದಿಂದಲೋ ಸೈನಿಕನೊಬ್ಬನು ತನ್ನ ತಲೆಯನ್ನು ಕತ್ತರಿಸಿಕೊಳ್ಳುವ ಪದ್ಧತಿಯ ಸೂಚನೆ” ಎಂಬುದಾಗಿ ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ.[೮೮] ಹಿಂದೆ ಗಮನಿಸಿದ ಹಾಗೆ ತಮಿಳುನಾಡಿನಲ್ಲಿ ಅರಸರು ಯುದ್ಧಕ್ಕೆ ಹೊರಡುವ ಮುನ್ನ, ಅವರ ಕಡೆಯ ಸೈನಿಕರು ತಮ್ಮ ಅರಸನಿಗೆ ಜಯವು ದೊರೆಯಲೆಂದು ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು ಎಂಬುದನ್ನು ಇಲ್ಲ ಸ್ಮರಿಸಬಹುದು. ಮತ್ತು ಕಾಳಿಕಾ ಪುರಾಣದಲ್ಲಿ “ಬಲಿದಾನದಿಂದ ರಾಜನು ಶತ್ರುರಾಜರನ್ನು ಜಯಿಸಲು ಶಕ್ತನಾಗುವನು” ಎಂಬ ಅಭಿಪ್ರಾಯವನ್ನು ಇಲ್ಲಿ ಗಮನಿಸಬೇಕು.[೮೯] ಈ ಎಲ್ಲ ಹಿನ್ನೆಲೆಯಲ್ಲಿ ಗೌರೀಬಿದನೂರು ಶಾಸನವನ್ನು ಗಮನಿಸಿದರೆ ಡಾ. ಎಂ. ಚಿದಾನಂದಮೂರ್ತಿ ಅವರ ಅಭಿಪ್ರಾಯವು ಒಪ್ಪತಕ್ಕದಾಗಿದೆ.

ಈ ರೀತಿ ಸಮಾಜದ ಒಳಿತಿಗಾಗಿ, ಅರಸರ ಒಳಿತಿಗಾಗಿ ಮಾಡಿಕೊಕಮಡ ಧರ್ಮ ಮೂಲವಾದ ಆತ್ಮಬಲಿಗಳಲ್ಲದೆ, ಕೇವಲ ತಮ್ಮ ವೈಯಕ್ತಿಕ ಮೋಕ್ಷಸಾಧನೆಗಾಗಿ ಆತ್ಮಹತ್ಯೆಗಳನ್ನು ಹಿಂಸಾತ್ಮಕವಾದ ರೀತಿಯಲ್ಲಿ ಮಾಡಿಕೊಂಡ ಶೈವಧರ್ಮದವರ, ಶಾಕ್ತಸಂಪ್ರದಾಯದವರ ನಿದರ್ಶನಗಳು ದೊರೆಯುತ್ತವೆ. ಈ ರೀತಿ ಆತ್ಮಬಲಿ ಮಾಡಿಕೊಂಡ ವೀರಸ್ಮಾರಕ ಶಿಲೆಗಳ (ಶಾಸನ ರಹಿತವಾದ) ಕೋಲಾರ ಜಿಲ್ಲೆಯಲ್ಲಿ ಅನೇಕ ಕಡೆ ದೊರೆಯುತ್ತವೆ. (ಚಿತ್ರ ೧೨, ೧೩, ೧೪, ೧೫)

ಇಲ್ಲಿ ಒಂದು ಅಂಶವನ್ನು ಮುಖ್ಯವಾಗಿ ಗಮನಿಸಬೇಕು. ಜೈನಧರ್ಮ ಕರ್ನಾಟಕದಲ್ಲಿ ಪ್ರಬಲವಾಗಿದ್ದಾಗ ಆ ಧರ್ಮದ ಮೇರೆಗೆ ಧಾರ್ಮಿಕ ಆತ್ಮಬಲಿ ಮಾಡಿಕೊಂಡ ಜೈನಯತಿಗಳನ್ನು ನಮ್ಮ ಜನ ಎಂದೂ ‘ವೀರ’ರೆಂದಾಗಲೀ ಅಥವಾ ಅವರ ಆ ಕೃತ್ಯ ವೀರತನದ ಕಾರ್ಯವೆಂದಾಗಲೀ ಭಾವಿಸಿರುವಂತೆ ಕಾಣುವುದಿಲ್ಲ. ಇದಕ್ಕೆ ಕಾರಣವೆಂದರೆ ಅವರು ಸಾಯುವ ಗತಿಯು ನಿಧಾನವಾದುದು ; ಉಗ್ರವಾದ ಹಿಂಸೆಯಿಂದಾಗಲೀ ರಕ್ತಪಾತದಿಂದ ಕೂಡಿದುದಾಗಲೀ ಆಗದಿರುವುದು – ಎಂದು ತೋರುತ್ತದೆ. ಈಗಾಗಲೇ ಗಮನಿಸಿರುವ ಆತ್ಮಬಲಿಗಳು ಯುದ್ಧದಲ್ಲಿ ಹೋರಾಡಿ ಮಡಿದ ಯಾವುದೇ ವೀರರ ಹಿಂಸಾತ್ಮಕ ಮರಣಕ್ಕಿಂತಲೂ ಕಡಿಮೆಯಿಲ್ಲವೆಂದೇ ಹೇಳಬಹುದು. ಬಹುಶಃ ಈ ಕಾರಣದಿಂದಲೇ ಈ ರೀತಿಯಲ್ಲಿ ಸತ್ತ ವ್ಯಕ್ತಿಗಳನ್ನು ನಮ್ಮ ಜನ ವೀರ ಎಂದು ಪರಿಗಣಿಸಿದರು. ಇದಕ್ಕೆ ಪೋಷಕವಾಗಿ ತಮ್ಮ ಗಂಡಂದಿರೊಂದಿಗೆ ಸಹಗಮನಮಾಡಿ

---

೮೮ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೫೬

೮೯ ಕಾಳಿಕಾ ಪುರಾಣ (ಅನು : ಹಾಸನದ ವೆಂಕಟರಾವ್) ೭೧ –೫

ಸತ್ತ ಮಹಿಳೆಯರನ್ನು ನಮ್ಮ ಜನ 'ಮಹಾಸತಿ ; 'ವೀರಮಾಸ್ತಿ' ಎಂಬುದಾಗಿ ಕರೆದಿರುವುದನ್ನು ಉದಾಹರಣೆಯಾಗಿ ನೀಡಬಹುದು.

೨. ಸಾಮಾಜಿಕ ಕಾರಣಗಳಿಗಾಗಿ ಆತ್ಮಬಲಿ ಮಾಡಿಕೊಂಡವರು

ಇವರು ತಮಗೆ ಆಶ್ರಯ ನೀಡಿದ ಅರಸರು, ವ್ಯಕ್ತಿಗಳು ಯಾವುದೇ ಕಾರಣಕ್ಕಾಗಿ ದಿವಂಗತರಾದರೂ ಅವರೊಂದಿಗೆ ಸತ್ತವರು. ಸತ್ತ ವ್ಯಕ್ತಿಯ ಪರಲೋಕಕ್ಕೆ ಹೋದಾಗ ಅವನಿಗೆ ಇಹಲೋಕದಲ್ಲಿದ್ದಂತೆ ಪರದಲ್ಲಿಯೂ ಹೆಂಡತಿಯರು, ಸೇವಕರು ಮುಂತಾದ ಸಕಲ ಸೌಲಭ್ಯವೂ ದೊರೆಯಬೇಕು ಎಂಬ ನಂಬುಗೆಯಿಂದ ಸತ್ತ ವ್ಯಕ್ತಿಯೊಂದಿಗೆ ಇವರೆಲ್ಲರೂ ಪ್ರಾಣತ್ಯಾಗ ಮಾಡಿಕೊಳ್ಳುತ್ತಿದ್ದರು. ಎಷ್ಟು ಮಂದಿ ಪರಿವಾರದವರು ಸ್ವಇಚ್ಛೆಯಿಂದ ಮಡಿಯುತ್ತಿದ್ದರು, ಒತ್ತಾಯಕ್ಕೆ ಮಣಿದು, ಬದುಕಬೇಕೆಂಬ ತಮ್ಮ ಅದಮ್ಯ ಆಸೆಯನ್ನು ಅದುಮಿ ಮಡಿಯುತ್ತಿದ್ದರು ಎಂಬುದು ಚಿದಂಬರ ರಹಸ್ಯವೇ ಆಗಿದೆ.

ಈ ಒಂದು ಪದ್ಧತಿಯನ್ನು ಪ್ರಪಂಚದ ಎಲ್ಲಾ ದೇಶಗಳ ಪ್ರಾಚೀನ ನಾಗರಿಕತೆಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಗುರುತಿಸಬಹುದಾಗಿದೆ. ಕನ್ನೋಜ್‌ನ ಅರಸನಾದ ಶ್ರೀ ಹರ್ಷನ ತಂದೆ ಸತ್ತಾಗ ಅವನ ಸೇವಕರೂ ತಮ್ಮನ್ನು ತಾವೇ ಹತ್ಯೆ ಮಾಡಿಕೊಂಡರೆಂದು ಬಾಣನ ಹರ್ಷ ಚರಿತೆಯಿಂದ ತಿಳಿದು ಬರುತ್ತದೆ.[೯೦] ಇದೇ ರೀತಿಯ ಅನೇಕ ಉದಾಹರಣೆಗಳು ಉತ್ತರ ಭಾರತದಲ್ಲಿ ದೊರೆಯುತ್ತದೆ.[೯೧]

ಕರ್ನಾಟಕದ ಬಗ್ಗೆ ಹೇಳುವುದಾದರೆ ತಮ್ಮ ಆಶ್ರಯದಾತನು ಸತ್ತಾಗ ಅವನ ಸೇವಕರಾದವರೂ ಆತ್ಮಬಲಿ ಮಾಡಿಕೊಳ್ಳುವುದರ ಮೂಲಕ ಸಾಯುತ್ತಿದ್ದರೆಂಬುದಾಗಿ ಶಾಸನಗಳು ತಿಳಿಸುತ್ತವೆ. ಈ ರೀತಿ ಸಾಯುವವರನ್ನು ಶಾಸನಗಳು ಲೆಂಕರು, ವೇಳೆವಾಟಿಗಳು, ಕೀಟ್ಗಿಂಟಿ, ಗರುಡರು ಮುಂತಾದ ಹೆಸರುಗಳಿಂದ ಕರೆದಿವೆ.

ಸಾಮಾಜಿಕ ಆತ್ಮ ಬಲಿಯ ಹಿಂದೆ ಬೆಳೆದುಬಂದ ತಾತ್ವಿಕ ಹಿನ್ನೆಲೆಯನ್ನು ಗುರುತಿಸುವುದು ಅನಿವಾರ್ಯವೆಂದು ಅನ್ನಿಸುತ್ತದೆ. ಈ ಪದ್ಧತಿಯ ಆರಂಭ ಕಾಲದಲ್ಲಿ ತಮ್ಮ ಆಶ್ರಯದಾತನಿಗೆ ಪರಲೋಕದಲ್ಲಿಯೂ ಇಹ ಲೋಕದಂತೆಯೇ ಪರಿವಾರವಾಗಿರಲು ತಮಗೆ ಇಚ್ಛೆಯಿದ್ದೋ, ಇಲ್ಲದೆಯೋ ಮಡಿಯುತ್ತಿದ್ದರು. ಆ ನಂತರ ಆ ರೀತಿ ಸಾಯುವುದು ತಮಗೆ ತಮ್ಮ ಆಶ್ರಿತರ

೯೦ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೩೦೪–೫

೯೧ Enthove and William Crooke : Religion and Floklore of Northern India ಪು. ೧೫೬ – ೭

ಬಗ್ಗೆ ಇರುವ ಗೌರವ, ಋಣದ ಕೃತಜ್ಞತೆಯ ಅಭಿವ್ಯಕ್ತಿ ಎಂದೂ ಭಾವಿಸಿದರು. ಈ ಸಂಪ್ರದಾಯ ಎಲ್ಲಿಯವರಿಗೆ ಮುಂದುವರಿಯಿತೆಂದರೆ ತಮ್ಮ ಆಶ್ರಯದಾತನಿಗೆ ಯಾವುದೇ ಕಾರಣದಿಂದ ಮನಸ್ಸಿಗಾಗಲೀ, ದೇಹಕ್ಕಾಗಲೀ ವೇದನೆಯುಂಟಾದಾಗ ಈ ಸೇವಕರೂ ಸಹ ಆ ವೇದನೆಯನ್ನು ಅನುಭವಿಸುತ್ತಿದ್ದರು. ರೆಟ್ಟಿಯಣ್ಣ ಎಂಬುವವನು ತನ್ನ ಅರಸನಿಗೆ ದೇಹದಲ್ಲಿ ಆರೋಗ್ಯ ಇಲ್ಲವೆಂದು ತಿಳಿದು, ಅರಸನ ನೋವನ್ನು ತಾನೇ ಅನುಭವಿಸಲು, ಊಟವನ್ನು ಬಿಟ್ಟು ಮೂವತ್ತುಗಾವುದ ಒಂದೇ ದಿನದಲ್ಲಿ ಸುತ್ತಿ ಬರುತ್ತಾನೆ. ಹಿಂದಕ್ಕೆ ಬಂದಾಗ ತನ್ನ ಅರಸನು ತೀರಿಕೊಂಡು ಅವನನ್ನು ಸುಡುತ್ತಿರುವ ಚಿತೆ ಕಾಣುತ್ತದೆ. ಆಗ ಅವನು ತನ್ನ ಕತ್ತಿಯಿಂದ ತನ್ನನ್ನು ತಾನೇ ಹತ್ಯೆ ಮಾಡಿಕೊಳ್ಳುತ್ತಾನೆ[೨]. ಇದು ರೆಟ್ಟಿಯಣ್ಣನಿಗೆ ತನ್ನ ಒಡೆಯನ ಬಗ್ಗೆ ಇದ್ದ ವಾತ್ಸಲ್ಯವನ್ನು ಎತ್ತಿ ತೋರುತ್ತದೆ.

ಆತ್ಮಬಲಿ ಮಾಡಿಕೊಂಡವರನ್ನು ಶಾಸನಗಳು ಬಹುವಾಗಿ ಪ್ರಶಂಸಿರುವುದನ್ನು ನಾವು ಕಾಣಬಹುದು. ಸುಮಾರು ಕ್ರಿ.ಶ. ೯೦೦ರಲ್ಲಿ ಚಾಳುಕ್ಯರಾಜನಿಗೆ ವೇಳೆಗೊಂಡ ಶಂಭು ಎನ್ನುವವನ ಪ್ರಶಂಸೆಯ ಶಾಸನವೊಂದರಲ್ಲಿದೆ. ನಗುಮೊಗದಿಮದ ಬೆಂಕಿಯನ್ನು ಪ್ರವೇಶಿಸಿದ ಅವನು ಅಸಮಾನನು ಎಂದೂ, ಹಿಂದೆ ಪ್ರಸಿದ್ಧರಾದ. ಈಗ ಪ್ರಸಿದ್ಧರಾಗಿರುವ, ಮುಂದೆ ಬರಲಿರುವ ವೇಳೆ ವಡಿಚರು ನಿನಗೆ ಸಮ ಅಲ್ಲ, ನಿನಗೆ ನೀನೇ ಸಮ ಎಂದು ಶಾಸನವು ಶಂಭುವನ್ನು ಹೊಗಳುತ್ತದೆ".[೩] ಹೊಯ್ಸಳರ ಕಾಲದಲ್ಲಿ ಈ ರೀತಿ ಆತ್ಮಬಲಿ ಮಾಡಿಕೊಳ್ಳುತ್ತಿದ್ದವರನ್ನು ಗರುಡರು ಎಂಬುದಾಗಿ ಗುರುತಿಸಿದ್ದಾರೆ. ಅಂದರೆ ವಿಷ್ಣುವಿಗೆ ಗರುಡನಿದ್ದಂತೆ ತಮ್ಮ ಆಶ್ರಿತರಿಗೆ ಈ ಸೇವಕರು –ಎಂಬ ಮನೋಭಾವ ಗರುಡರನ್ನು ಕುರಿತ ಶಾಸನಗಳಿಂದ ವ್ಯಕ್ತವಾಗುತ್ತದೆ.[೪] ಇಂಥವರು ಅನೇಕ ಮಂದಿ ಗರುಡರಿದ್ದರೆಮದು ಶಾಸನಗಳಿಂದ ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿ ಆಗಿ ಹೋದ ಗರುಡರಲ್ಲಿ 'ಕುವರ ಲಕ್ಷ್ಮ'ನು ಪ್ರಸಿದ್ಧನಾದವನು.

ಅರಸರು ಅಥವಾ ಆಶ್ರಯದಾತರು ಸತ್ತಾಗ, ಅವರೊಂದಿಗೆ ತಾವು ಸಾಯುವುದು ಅಥವಾ ಅವನು ಯುದ್ಧದಲ್ಲಿ ಸೋತು ಸತ್ತು ಹೋದರೆ ಅವನೊಂದಿಗೆ ಸಾಯುವುದೂ ಸಹ 'ವೀರತನದ' ಸಂಕೇತವೆಂದೇ ಪರಿಗಣಿಸಲ್ಪಟ್ಟಿತ್ತು. ಸಾಮಾನ್ಯವಾಗಿ ವೇಳೆವಾಟಿಗಳೂ, ಲೆಂಕರೂ,

---

೯೨ BKI. Vol. I. Pt, I. No. 11. 865

೯೩ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೩೧೬

೯೪ E. C. IV. Ng. 28, ಸು. ೧೧೨೫

ಕೀಲ್ಗುಂಟೆಯಾದವರೂ, ಗರುಡರೂ ಅರಸರ ಆಪ್ತ ರಕ್ಷಕ ದಳದವ್ರೂ ಆಗಿದ್ದ ಕಾರಣ ಅವರು ಸ್ವತಃ ಪರಾಕ್ರಮಶಾಲಿಗಳೂ ಆಗಿದ್ದರು ಎಂಬುದು ಮುಖ್ಯ.

ಜನ ಕಾಲಾನುಕ್ರಮದಲ್ಲಿ ವೀರತನವನ್ನು ವಿವಿಧ ಕ್ಷೇತ್ರಗಳಲ್ಲಿ ಗುರುತಿಸುತ್ತಾ ಬಂದರು. ಈ ಬಗ್ಗೆ ಇನ್ನೂ ಸ್ವಲ್ಪ ವಿವರವಾಗಿ ಪ್ರಸ್ತಾಪ ಮಾಡುವುದು ಉಚಿತ. ಭಕ್ತನಾದವನು ತನ್ನ ಆರಾಧ್ಯದೈವದ ಬಗ್ಗೆ ತೀವ್ರವಾದ ಉತ್ಕಟವಾದ, ಭಕ್ತಿಭಾವವನ್ನು ಪ್ರದರ್ಶಿಸಿದರೆ ಅವನನ್ನು ವೀರಭಕ್ತ ಎಂಬುದಾಗಿ ಗುರುತಿಸುತ್ತಾ ಬಂದರು. ಶಿವಗಣಗಳಲ್ಲಿ ಒಬ್ಬನಾದ ದೀಪಕಲಿವೀರನು ತನ್ನ ತಲೆ ಕೂದಲಿನಿಂದಲೇ ದೀಪ ಹಿಡಿಯುತ್ತಾನೆ. ಸುಮಾರು ಹನ್ನೆರಡನೆಯ ಶತಮಾನದ ಅಂತ್ಯಭಾಗದಲ್ಲಿ ಇದ್ದಿರಬಹುದೆಂದು ವಿದ್ವಾಂಸರು ಊಹಿಸುವ ಏಕಾಂತದ ರಾಮಯ್ಯನು ತನ್ನ ಶಿವಭಕ್ತಿಯನ್ನು ನಿರೂಪಿಸುವುದಕ್ಕಾಗಿ ತಲೆಯನ್ನು ಕತ್ತರಿಸಿಕೊಂಡು ಮತ್ತೆ ಪ್ರಾಣವನ್ನು ಗಳಿಸಿದ ವೀರಭಕ್ತ. ಹೀಗೆ ಜೀವನದ ಅನೇಕ ರಂಗಗಳಲ್ಲಿ ತಮ್ಮದೇ ಆದ ವಿಶಿಷ್ಟಸ್ಥಾನವನ್ನು ಗಳಿಸಿದ ವ್ಯಕ್ತಿಗಳ ನಡವಳಿಕೆಯನ್ನು ಗುರುತಿಸಿದ ಸಮಾಜ ಆಯಾ ಕ್ಷೇತ್ರಗಳ ವೀರತನಕ್ಕೆ ಭಾಷ್ಯವನ್ನು ನಿರ್ಮಿಸುತ್ತಾ ಬಂತು.

ವೀರಗಲ್ಲುಗಳ ವೀರರು

ಈ ವಿಶಾಲವಾದ ಹಿನ್ನೆಲೆಯಲ್ಲಿ ಕರ್ನಾಟಕದ ವೀರಗಲ್ಲುಗಳನ್ನು ಎರಡು ರೀತಿಯಲ್ಲಿ ವಿಂಗಡಿಸುವುದು ಅಧ್ಯಯನದ ದೃಷ್ಟಿಯಿಂದ ಉತ್ತಮವೆಂದು ತೋರುತ್ತದೆ.

(೧) ಹೋರಾಟದಲ್ಲಿ ಅರಸನ ಪರವಾಗಿಯೋ, ಊರಿನ ಹಿತರಕ್ಷಣೆಗಾಗಿಯೋ ಶತ್ರುವಿನಿಂದ ಮಡಿದ ವೀರರ ಸ್ಮಾರಕ ಶಿಲೆಗಳು.

(೨) ಅರಸನ ಪರವಾಗಿಯೋ, ಊರಿನ ಹಿತದೃಷ್ಟಿಯಿಂದಲೋ, ವೈಯಕ್ತಿಕ ಮೋಕ್ಷಾಪೇಕ್ಷೆಯ ದೃಷ್ಟಿಯಿಂದಲೋ ಹಿಂಸಾತ್ಮಕವಾದ ರೀತಿಯಲ್ಲಿ ಆತ್ಮಬಲಿಯನ್ನು ಮಾಡಿಕೊಂಡು ಮಡಿದ ವೀರರ ಸ್ಮಾರಕ ಶಿಲೆಗಳು.

ಮೊದಲನೆಯ ಗುಂಪಿಗೆ ಸೇರಿದ ವೀರಗಲ್ಲುಗಳು ತಮ್ಮ ಆಶ್ರಯದಾತನ ಪರವಾಗಿ ಹೋರಾಡಿ ಮಡಿದ ಯೋಧರನ್ನು ಪರಿಚಯ ಮಾಡಿಕೊಳ್ಳುತ್ತವೆ. ಇವರು ಸಾಮಾನ್ಯಜನರು. ಕೆಲವೊಮ್ಮೆ ಪ್ರತಿಷ್ಠಿತ ವ್ಯಕ್ತಿಗಳಿಗೂ ವೀರಗಲ್ಲುಗಳು ಇರಬಹುದು. ಆದರೆ ಅವುಗಳ ಸಂಖ್ಯೆ ಕಡಿಮೆ. ಮತ್ತೆ ತಮ್ಮ ಊರಿನ ಹಿತಕ್ಕೆ ಧಕ್ಕೆ ಯುಂಟಾದಾಗ ಅದು ತಮಗಾದ ಧಕ್ಕೆ ಎಂದು ಭಾವಿಸಿ

ಮಡಿದ ವೀರರನ್ನು ಪರಿಚಯಮಾಡಿಕೊಡುತ್ತವೆ. ಕೆಲವು ಸ್ವರಕ್ಷಣೆಗಾಗಿ ದಾರಿಯ ಕಳ್ಳರೊಂದಿಗೆ ಹೋರಾಡಿ ಮಡಿದ ವೀರರನ್ನು ಪರಿಚಯಮಾಡಿಕೊಡುತ್ತವೆ. ಹೀಗೆ ಇವು ಯಾವುದೇ ಹೋರಾಟದಲ್ಲಿ ಪರಾಕ್ರಮದಿಂದ ಹೋರಾಡಿ ಮಡಿದವರ ಪರಿಚಯ ಮಾಡಿಕೊಡುತ್ತವೆ. ಇವರಲ್ಲಿ ಅನೇಕರು ವೃತ್ತಿಯಿಂದಲೇ ಯೋಧರು. ಮತ್ತೆ ಕೆಲವರು ಶಸ್ತ್ರಪ್ರಯೋಗ ಕುಶಲಿಗಳು. ಮತ್ತೆ ಕೆಲವರು ಅನ್ಯಾಯವನ್ನು ಕಂಡು ಸ್ವಯಂಪ್ರೇರಿತರಾಗಿ ಸಿಡಿದೆದ್ದ ವೀರರು.

ಎರಡನೆಯ ಗುಂಪಿಗೆ ಸೇರಿದವರು ತಮ್ಮ ಅರಸರ ಹಿತರಕ್ಷಣೆಗಾಗಿಯೋ, ತಾವು ಮಾಡಿದ ಪ್ರತಿಜ್ಞೆಗಾಗಿಯೋ, ತಮ್ಮ ಊರಿನ ಅನಿಷ್ಟಗಳ ನಿವಾರಣೆಗಾಗಿಯೋ ತಮ್ಮನ್ನು ತಾವು ಹತ್ಯೆಮಾಡಿಕೊಂಡು ಸತ್ತ ವ್ಯಕ್ತಿಗಳು. ಇಂಥವರನ್ನು ವೀರರೆಂದು ಪರಿಗಣಿಸುವುದು ಸಾಧುವೇ ? ಎಂಬ ಸಮಸ್ಯೆ ಎದುರಾಗುತ್ತದೆ.

ಇಂಥ ಕಡೆಗಳಲ್ಲಿ ಸೂಕ್ಷ್ಮವಾಗಿ ಸತ್ತ ವ್ಯಕ್ತಿಗಳ ಸಾವಿನ ಹಿಂದೆ ಇರುವ ಮನೋ ಧರ್ಮವನ್ನೂ, ಅವನ ಸಾವಿನಿಂದ ಅವನ ಬಗ್ಗೆ ಜನರಿಗೆ ಮೂಡಿದ ಗೌರವ ಭಾವವನ್ನು ಗುರುತಿಸಬೇಕಾಗುತ್ತದೆ. ಹೀಗೆ ಮಾಡದಿದ್ದಲ್ಲಿ ಅದು ಇತಿಹಾಸಕ್ಕೆ ಅನ್ಯಾಯವನ್ನು ಮಾಡಿದಂತೆ ಆಗುತ್ತದೆ ಎಂಬುದು ನಮ್ಮ ಅಭಿಪ್ರಾಯ.

ಯುದ್ಧದಲ್ಲಿ ಒಬ್ಬ ವ್ಯಕ್ತಿ ಹೋರಾಡಿ ಮಡಿಯುವಷ್ಟೇ ಸಾರ್ಥಕತೆಯನ್ನು ಈ ರೀತಿಯ ಧಾರ್ಮಿಕ, ಸಾಮಾಜಿಕ ಆತ್ಮಬಲಿಗಳೂ ತಂದು ಕೊಡುತ್ತವೆ ಎಂದು ಅಂದಿನ ಜನ ಮತ್ತು ಬಲಿದಾನ ಮಾಡುವವರೂ ನಂಬಿದ್ದರು. ಈ ರೀತಿ ಮಡಿದವರಿಗೆ ಆಶ್ರಯದಾತನ ಬಗ್ಗೆ ದೇಶದ ಬಗ್ಗೆ ಉತ್ಕಟವಾದ ವಿಶ್ವಾಸ, ಅಭಿಮಾನವಿದ್ದುದರಲ್ಲಿ ಸಂಶಯವಿಲ್ಲ. ತುಂಬು ಉತ್ಸಾಯದಿಮದ ವೀರೋಚಿತವಾಗಿ ತಮ್ಮ ಪ್ರಾಣವನ್ನು ತಾವೇ ತೆಗೆದುಕೊಂಡ ಅವರ ಪಾಲಿಗೆ ಸಾವು ಎಂಬುದು ಪಲಾಯನವಾದವಲ್ಲ. ವೈಯಕ್ತಿಕ ಮೋಕ್ಷಾಪೇಕ್ಷೆ ಅಲ್ಲ ; ಸಾವು ಎಂಬುದನ್ನು ಯುದ್ಧದಲ್ಲಿಯೇ ಆಗಲಿ ಇನ್ನಿತರ ಯಾವುದೇ ಹಿಂಸಾತ್ಮಕ ಕೃತ್ಯಗಳಲ್ಲಿಯೇ ಆಗಲಿ ಎದುರಿಸುವುದಕ್ಕೆ ವ್ಯಕ್ತಿಗೆ ಮನಸ್ಥೈರ್ಯ ತುಂಬ ಅವಶ್ಯಕ. ಏಕೆಂದರೆ ಯುದ್ಧದಲ್ಲಿ ಹೋರಾಡುವ ವೀರು ಸಾವನ್ನು ಬಗೆದೇ ಯುದ್ಧಕ್ಕೆ ಹೋದರೂ, ತನ್ನ ಪರಾಕ್ರಮದಿಂದ ತನ್ನ ರಕ್ಷಣೆ ಮಾಡಿಕೊಂಡು ಶತ್ರುಗಳನ್ನು ಜಯಿಸಿ ಬರಬಹುದೆಂಬ ಆಸೆ ಅವನಲ್ಲಿರುತ್ತದೆ. ತಮಗೆ ಸಾವು ಸಂಭವಿಸುವುದು ಆಕಸ್ಮಿಕ ಎಂದೇ ವೀರರು ಬಗೆಯುತ್ತಾರೆ.

ಯುದ್ಧದಲ್ಲಿಯೇ ಆಗಲಿ ಇನ್ನಿತರ ಯಾವುದೇ ಹೋರಾಟದಲ್ಲಿಯೇ ಆಗಲಿ ಹೋರಾಡುವವನಿಗೆ ಸ್ಥೈರ್ಯ ಬಹಳ ಮುಖ್ಯವಾದುದು. ಇದು ಎರಡು ರೀತಿಯದು. ಒಂದು

ದೈಹಿಕವಾದದ್ದು – ಅಂದರೆ ಆಪತ್ತಿನಲ್ಲಿ ವ್ಯಕ್ತಿ ಎದುರಿಸಬಹುದಾದ ಹೋರಾಟಕ್ಕೆ ಬೇಕಾದ ದಾರ್ಢ್ಯ ; ಎರಡನೆಯದು ನೈತಿಕವಾದ ಮನೋಸ್ಥೈರ್ಯ – ಅಂದರೆ ತನ್ನನ್ನು ಅವಲಂಬಿಸಿರುವ ಜವಾಬ್ದಾರಿಯ ಬಗ್ಗೆ ವ್ಯಕ್ತಿಗೆ ಇರುವ ನಂಬಿಕೆ, ಈ ನಂಬಿಕೆಯಿಂದ ಅವನಲ್ಲಿ ಮೂಡುವ ದಿಟ್ಟತನ.

ಆಪತ್ತಿನಲ್ಲಿರುವ ವ್ಯಕ್ತಿಯ ದಿಟ್ಟತನವು ಮತ್ತೆ ಎರಡು ಹಂತಗಳಲ್ಲಿ ಕೆಲಸ ಮಾಡುವುದನ್ನು ಗುರುತಿಸಬಹುದು. ಒಂದು –ವಿಪತ್ತಿಗೆ ಹೆದರದೆ ಸಾವನ್ನು ನಿರ್ಲಕ್ಷಿಸಿ, ಅದನ್ನು ಎದುರಿಸುವ ಅಚಲವಾದ ನಿರ್ಧಾರವನ್ನು ತಳೆಯುವುದು. ಎರಡು – ಒದಗಿದ ಆಪತ್ತನ್ನು ದೇಶಭಕ್ತಿ, ಉತ್ಸಾಹ, ವೈಯಕ್ತಿಕ ಅಭಿಮಾನ, ಛಲ ಮುಂತಾದ ಭಾವೋದ್ರೇಕದಿಂದ ಎದುರಿಸುವುದು.[೯೫]

ದಿಟ್ಟತನವನ್ನು ಧಾರ್ಮಿಕ ಅಥವಾ ಸಾಮಾಜಿಕ ಕಾರಣಗಳಿಗಾಗಿ ತಮ್ಮ ಆತ್ಮ ಬಲಿದಾನವನ್ನು ಮಾಡಿದ ವೀರರಲ್ಲಿಯೂ ಗುರುತಿಸಬಹುದು ಆದ್ದರಿಂದ ಇವರನ್ನು ವೀರರು ಎಂಬುದಾಗಿ ಪರಿಗಣಿಸಬಹುದು.

ಯುದ್ಧ, ತುರುಗಾಳಗ ಮುಂತಾದ ಹೋರಾಟಗಳಲ್ಲಿ ಮಡಿದ ವೀರರಿಗೆ ನಿರ್ಮಿಸಿರುವ ಹಾಗೆ ಈ ರೀತಿ ಮಡಿದ ವೀರರಿಗೂ ವೀರಗಲ್ಲುಗಳನ್ನು ಹಾಕಿ, ಗುಡಿಗಳನ್ನು ನಿರ್ಮಿಸಿದ್ದಾರೆ. ಅವುಗಳನ್ನು 'ವೀರರ ಗುಡಿಗಳು', 'ವೀರ ಗುಡ್ಡಮುಲು' ಎಂಬುದಾಗಿ ಕರೆಯುತ್ತಾರೆ. ವೀರರ ಗುಡಿಯಲ್ಲಿ ಸ್ಮಾರಕವನ್ನು ಪಡೆದಿರುವ ವ್ಯಕ್ತಿಯನ್ನು ಜನ ಇಂದಿಗೂ 'ವೀರಗಾರರು', 'ಈರಗಾರರು' ಎಂದು ಕರೆಯುವುದನ್ನು ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಕಾಣಬಹುದಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಮೊದಲನೆಯ ವಿಭಾಗಕ್ಕೆ ಸೇರಿದ ವೀರಗಲ್ಲುಗಳನ್ನು ಮಾತ್ರ ತೆಗೆದುಕೊಂಡಿದ್ದೇವೆ. ಎರಡನೆಯ ವಿಭಾಗಕ್ಕೆ ಸೇರಿದ ವೀರಗಲ್ಲುಗಳನ್ನು ನಮ್ಮ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಆತ್ಮ ಬಲಿದಾನ ಮಾಡಿದ ವೀರರ ಹಿಂದೆ ಇರುವ ಮನೋಧರ್ಮ, ಧಾರ್ಮಿಕ ಹಾಗೂ ಸಾಮಾಜಿಕವಾದ ನಂಬಿಕೆ ಮತ್ತು ಕಲ್ಪನೆಗಳು ಹೋರಾಟದಲ್ಲಿ ಮಡಿದ ವೀರರಿಗಿಂತಲೂ ವಿಭಿನ್ನವಾದದ್ದು. ಇವರಿಬ್ಬರೂ 'ವೀರರೇ' ಎಂಬ ಒಂದೇ ಕಾರಣಕ್ಕಾಗಿ ಅವರ ಸ್ಮಾರಕ ಶಿಲೆಗಳ ಅಧ್ಯಯನವನ್ನು ಇಲ್ಲಿ ತರುವುದು ಸೂಕ್ತವಲ್ಲ. ಧಾರ್ಮಿಕ, ಸಾಮಾಜಿಕ ಕಾರಣಗಳಿಗಾಗಿಯೇ ಆತ್ಮಬಲಿದಾನವನ್ನು ಮಾಡಿದವರಿಗೆ ಇರುವ ಹಿನ್ನೆಲೆ, ಆ ಸಂಪ್ರದಾಯ ಇಂಬು ನೀಡಿದ ಪ್ರೇರಣೆಗಳು, ಅವರು ಆಚರಿಸುತ್ತಿದ್ದ ಆಚರಣೆಗಳು

---

೯೫ General Caral Von Caluseluity : On War (English Tr by Colonol J. J. Graham) ಪು. ೪೮

ಮುಂತಾದವುಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡುವಷ್ಟು ಮೂಲ ಸಾಮಗ್ರಿಗಳು ದೊರೆಯುತ್ತವೆ. ಮೊದಲ ವಿಭಾಗಕ್ಕೆ ಸೇರಿದ ವೀರರ ಬಗ್ಗೆ ಮತ್ತು ಆ ಸಂಪ್ರದಾಯದ ಬಗ್ಗೆ ಹೆಚ್ಚು ಗಮನ ನೀಡಬೇಕೆಂಬ ಉದ್ದೇಶದಿಂದ ಎರಡನೆಯ ವಿಭಾಗದ ವೀರರ ಅಧ್ಯಯನವನ್ನು ಇಲ್ಲಿ ಉದ್ದೇಶಪೂರ್ವಕವಾಗಿಯೇ ಬಿಡಲಾಗಿದೆ.

ವೀರರ ಆರಾಧನೆ

ಯುದ್ಧದಲ್ಲಿಯಾಗಲೀ, ಹಿಂಸಾತ್ಮಕವಾದ ರೀತಿಯಲ್ಲಿಹಾಗಲೀ, ಆಕಸ್ಮಿಕದಿಂದಾಗಲೀ, ಅಕಾಲ ಮರಣವನ್ನಪ್ಪಿದರೆ ಅಂಥವರು ಭೂತವೋ, ಕ್ಷೇತ್ರಪಾಲಕನೋ, ಕ್ಷುದ್ರದೇವತೆಯೋ, ಆಗುತ್ತಾನೆ ಎಂಬ ನಂಬಿಕೆ ಇಡೀ ಭರತಖಂಡದಲ್ಲಿಯೇ ಪ್ರಚಲಿತವಾಗಿರುವುದನ್ನು ಗಮನಿಸಬಹುದಾಗಿದೆ. ಇಂಥವರು ಪೂರ್ವಜರಿಗಿಂತಲೂ ವಿಶೇಷವಾದ ಗೌರವಕ್ಕೆ ಮತ್ತು ಆರಾಧನೆಗೆ ಪಾತ್ರರಾಗುತ್ತಾರೆ ಎಂಬ ಅಂಶವನ್ನು ಮುಂದೆ ಗಮನಿಸುತ್ತೇವೆ.

ಈ ತೆರನ ವೀರರನ್ನು ಆರಾಧನೆ ಮಾಡದಿದ್ದರೆ ಕ್ಷಾಮ, ರೋಗ ಬಾಧೆಗಳು ಮತ್ತು ಅನಿಷ್ಟಗಳೂ ಸಂಭವಿಸುತ್ತವೆ ; ಆದರೆ ಆರಾಧನೆ ಮಾಡುವುದರಿಂದ ತೃಪ್ತಿಗೊಂಡ ಭೂತವು "ಬರಗಾಲವನ್ನು ಹೋಗಲಾಡಿಸಿ ಕಾಲ ಕಾಲಕ್ಕೆ ಮಳೆ ಬೆಳೆಗಳನ್ನು ಕೊಡುತ್ತದೆ ; ಮೈಲಿಗೆ, ವಾಂತಿಭೇದಿ ಮೊದಲಾದ ಮಾರಿ ರೋಗಗಳನ್ನು ನಿವಾರಿಸುತ್ತದೆ. ದನಕರುಗಳನ್ನು ಕಾಡುಮೃಗಗಳ ಹಾವಳಿಯಿಂದ ತಪ್ಪಿಸುತ್ತದೆ. ಕಳ್ಳರನ್ನು ಪತ್ತೆಮಾಡಿ ಕೊಡುತ್ತದೆ. ಮಾನವ ಸಂಕಷ್ಟಗಳನ್ನು ಪರಿಹರಿಸುತ್ತದೆ" ಎಂಬುದಾಗಿ ನುಂಬಿದ್ದರು.[೯೬] ಈ ಒಂದು ನಂಬಿಕೆ ವೀರರ ಆರಾಧನೆ ಬೆಳೆಯಲು ಮುಖ್ಯ ಪ್ರೇರಣೆಯನ್ನು ನೀಡಿತು. ಆರಾಧನೆಯನ್ನು ಅಲಕ್ಷ್ಯ ಮಾಡುವುದಿರಲಿ, ವೀರನ ಸಂಕೇತವೆಂದು ಜನ ಭಾವಿಸಿದ ಸ್ಮಾರಕವನ್ನು ನಿರ್ಲಕ್ಷ ಮಾಡಿದರೆ ಅಥವಾ ಅಗೌರವದಿಂದ ಕಂಡರೆ ಅದರಿಂದ ತೊಂದರೆಯಾಗುತ್ತದೆ ಎಂಬ ನಂಬಿಕೆ ಅನೇಕ ಕಡೆಗಳಲ್ಲಿ ಐತಿಹ್ಯಗಳ ಮೂಲಕ ವ್ಯಕ್ತವಾಗಿದೆ.[೯೭] ಈ ತೆರನ ಐತಿಹ್ಯಗಳನ್ನು ಭಾರತದ ಅನೇಕ ಕಡೆಗಳಲ್ಲಿ ಗಮನಿಸಬಹುದು.

೯೬ ಶ್ರೀ. ಎನ್. ಎಸ್. ಕಿಲ್ಲೆ ಮತ್ತು ಎಸ್. ವಿ. ಶೀನಪ್ಪ ಹೆಗ್ಡೆ : ಪ್ರಾಚೀನ ತುಳುನಾಡು. ಪು. ೩೧ –೩೨

೯೭ ಪಲನಾಡು ವೀರರ ವೀರಗುಡಿ ಕಾರೆಂಪೂಡಿಯಲ್ಲಿದೆ. ಇಲ್ಲಿ ಪಲನಾಡಿನ ಅರವತ್ತಾರು ವೀರರ ವೀರಲಿಂಗಗಳು ಇವೆ. ಈ ವೀರಲಿಂಗಗಳನ್ನು ಅಸಡ್ಡೆಯಿಂದ ಗಮನಿಸಿದವರಿಗೆ ಆಗುವ ತೊಂದರೆಗಳನ್ನು ತಿಳಿಸುವ ಒಂದು ಕಥೆಯೂ ಇದೆ ವಿವರಗಳಿಗೆ ನೋಡಿ : ಟಿ. ವಿ. ಸುಬ್ಬಾರಾವ್: 'ಕಾರೆಂಪೂಡಿರಣಕ್ಷೇತ್ರಮು' ಆಂಧ್ರಪ್ರಭಾ (ವಾರ ಪತ್ರಿಕೆ) ಸಂ. ೧೮–೨೬ (೧೯೭೦) ಪು. ೪೭

ಸ್ಮಾರಕಗಳ ಮತ್ತು ವೀರರ ಬಗ್ಗೆ ಇರುವ ಗೌರವವನ್ನು ಕಾಪಾಡಿಕೊಂಡು ಬರುವ ಸಲುವಾಗಿಯೇ ಹುಟ್ಟಿಕೊಂಡ ಇಂಥ ಐತಿಹ್ಯಗಳು ಅನೇಕ ಕಡೆಗಳಲ್ಲಿ ಸ್ಥಳ ಪುರಾನದಪವಾಡ ವಿಶೇಷ ಪಡೆದು ಆರಾಧನಾ ಸಂಪ್ರದಾಯಕ್ಕೆ ತಮ್ಮ ವಿಶಿಷ್ಟವಾದ ಪ್ರೇರಣೆಯನ್ನು ನೀಡಿವೆ ಎಂದು ಹೇಳಬಹುದು.

ವಿವಿಧ ದೇಶಗಳಲ್ಲಿ ಪ್ರಚಲಿತವಿರುವ ವೀರರ ಆರಾಧನೆಯನ್ನು ಗಮನಿಸಿದಾಗ, ಅಲ್ಲಿನ ಜನ ಯಾವ ಆದರ್ಶ ಮೌಲ್ಯಗಳನ್ನು ವೀರ ಎಂಬುವನಿಗೆ ಆರೋಪಿಸುತ್ತಾರೆಯೋ, ಅಂಥ ಮೌಲ್ಯಗಳನ್ನು ತನ್ನ ಜೀವನದಲ್ಲಿ ಅನುಸರಿಸಿದ ವ್ಯಕ್ತಿಯನ್ನು ಮಾತ್ರ ಅವರು ಆರಾಧಿಸುತ್ತಾರೆ ಎನ್ನುವುದರ ಅರಿವಾಗುತ್ತದೆ. ಇಂಥ ವೀರರು ಅರಸರಾಗಿರಬಹುದು, ಸಾಮಾನ್ಯವರ್ಗದ ಜನರಾಗಿರಬಹುದು. ಕೆಲವೊಮ್ಮೆ ಕಾಲ್ಪನಿಕ ವೀರರೂ ಆಗಿರಬಹುದು. ಚಾರಿತ್ರಿಕ ವ್ಯಕ್ತಿಗಳೂ ಇರಬಹುದು. ಒಟ್ಟಿನಲ್ಲಿ ವ್ಯಕ್ತಿ ಸಮಾಜದಲ್ಲಿ ಪ್ರತಿಷ್ಠಿತನಾಗಿದ್ದ, ಪರಾಕ್ರಮಶಾಲಿಯಾಗಿದ್ದ ಎಂಬ ಕಾರಣಗಳಂತೆಯೇ ಅವನ ವೈಯಕ್ತಿಕ ನಡವಳಿಕೆಯತ್ತಲೂ ಜನ ತಮ್ಮ ಗಮನ ನೀಡುತ್ತಿದ್ದರೆಂದು ಹೇಳಬಹುದು.[೯೮]

ಕೆಲವು ಜನಾಂಗದವರು ಸತ್ತವ್ಯಕ್ತಿ ಉತ್ತಮನೇ ಆಗಿರಲಿ. ನೀಚನೇ ಆಗಿರಲಿ, ಅವನು ಅಸಾಧಾರಣ ವ್ಯಕ್ತಿ ಎಂದು ತಮಗೆ ಅನಿಸಿದರೆ ಅವನ್ನು ಆರಾಧಿಸುವುದುಂಟು. ಉತ್ತಮಗುಣಗಳ ವ್ಯಕ್ತಿ ಮಡಿದಾಗ ಆತನನ್ನು ಆರಾಧಿಸುವುದು ತಮ್ಮ ಶ್ರೇಯಸ್ಸಿಗೆ ಕಾರಣವೆಂದು ಭಾವಿಸುತ್ತಿದ್ದರು. ಹಾಗೆಯೇ ಸತ್ತ ವ್ಯಕ್ತಿ ಕ್ರೂರಿಯಾಗಿದ್ದು ಅಂಥವನನ್ನು ಆರಾಧಿಸದಿದ್ದರೆ ಅವನು ತಮಗೆ ಯಾವುದೇ ರೀತಿಯ ತೊಂದರೆಯನ್ನು ಕೊಡಬಹುದು ಎಂದು ಭಾವಿಸಿದ್ದರು. ಆತನು ತಮಗೆ ತೊಂದರೆಯನ್ನು ಕೊಡದಿರುವಂತೆ ಆತನನ್ನು ಆರಾಧಿಸುವುದರ ಮೂಲಕ ತೃಪ್ತಿ ಪಡಿಸಬೇಕು ಎಂಬುದು ಉದ್ದೇಶ. ಮೊದಲನೆಯ ರೀತಿಯ ಆರಾಧನೆಯಲ್ಲಿ ಜನರಿಗೆ ಮಡಿದ ವೀರನನ್ನು ಆರಾಧಿಸುವಲ್ಲಿ ಪ್ರೀತಿ, ವಿಶ್ವಾಸಗಳು ಇದ್ದರೆ ಎರಡನೆಯ ರೀತಿಯ ಆರಾಧನೆಯಲ್ಲಿ ಭಯ ಮುಖ್ಯವಾಗಿರುವುದನ್ನು ಗಮನಿಸಬಹುದು.

ಜನರ ಆರಾಧನೆಗೆ ಒಳಗಾಗಿರುವ ವೀರನ ಆಯ್ಕೆ ಅವನನ್ನು ಆರಾಧಿಸುವ, ಜನ ಸಮೂಹದ್ದು. ರೋಮನರಲ್ಲಿ ವೀರನನ್ನು ಆರಾಧಿಸುವುದು ಪ್ರತಿಯೊಬ್ಬ ಪ್ರಜೆಯ ಪೌರನೀತಿಯೇ ಆಗಿತ್ತು. ಏಕೆಂದರೆ ಅಲ್ಲಿ ಆಳುವ ಅರಸರು ವೀರರ ಪರಂಪರೆಯಲ್ಲಿ ಬಂದವರೇ ಆಗಿದ್ದರು. ಆದ್ದರಿಂದ ವೀರರ ಬಗ್ಗೆ ಅಭಿಪ್ರಾಯಗಳನ್ನೂ, ಅವರ ನಡವಳಿಕೆಯನ್ನೂ ಮುಂದಿನ ತಲೆಮಾರಿನವರು ವ್ಯಾಖ್ಯಾನಿಸುತ್ತಾ ಬಂದರು. ಹೀಗೆ ವ್ಯಾಖ್ಯಾನಕ್ಕೆ ಒಳಪಟ್ಟು ಒಂದು ಸ್ಪಷ್ಟವಾದ

೯೮ The Encyclopaedia of the Social Sciences. Vol. 7 ಪು. ೩೩೭

ರೂಪವನ್ನು ಪಡೆದ ವೀರರ ಚಿತ್ರಗಳು ಸಾಹಿತ್ಯದಲ್ಲಿಯೂ ಮತ್ತು ಆರಾಧನಾ ಸಂಪ್ರದಾಯದಲ್ಲಿಯೂ ಉಳಿದುಬಂದಿವೆ.[೯೯] ಈ ಅಭಿಪ್ರಾಯ ಕೇವಲ ರೋಮನ ವೀರರ ಆರಾಧನೆಗೆ ಮಾತ್ರ ಅನ್ವಯವಾಗುವುದಿಲ್ಲ. ಪ್ರಪಂಚದ ಬಹುಪಾಲು ಎಲ್ಲ ಕಡೆಯಲ್ಲಿಯೂ ಪ್ರಚಲಿತವಿರುವ ವೀರರ ಆರಾಧನೆಗೂ ಅನ್ವಯವಾಗುತ್ತದೆ. ಅಂದರೆ ವೀರರ ಆರಾಧನಾ ಸಂಪ್ರದಾಯದ ಹಿಂದೆ, ಅವನ ಆದರ್ಶಗಳು ತಮ್ಮ ಪರಂಪರೆಯಲ್ಲಿ ಉಳಿದುಕೊಂಡು ಬರಬೇಕು ಎಂಬ ಒಂದು ವಿಶೇಷ ಕಾಳಜಿ ಇರಬೇಕು. ಬಹುಶಃ ಈ ಕಾರಣದಿಂದಲೇ ವೀರರ ಆರಾಧನೆಗೆ ಒಂದು ವಿಶೇಷವಾದ ಸ್ಥಾನದ ದೊರೆತಿದೆ.

'ಬೀರ', 'ವೀರ' ಇವರುಗಳು ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಕ್ರೂರ ಭೂತಗಳಾಗಿ ವಿವಿಧ ಹೆಸರುಗಳಿಂದ ಆರಾಧನೆಗೆ ಪಾತ್ರರಾಗಿರುವುದನ್ನು ಗಮನಿಸಬಹುದು. ಇವರೆಲ್ಲರೂ ಐತಿಹಾಸಿಕ ಪುರುಷರೇ ಆದರೂ ಕಾಲಾನುಕ್ರಮದಲ್ಲಿ ಜನರು ಇವರಿಗೆ ಪವಾಡ ಶಕ್ತಿ ಮತ್ತು ಮಹಿಮೆಗಳನ್ನು ಆರೋಪಿಸುತ್ತಾ ಬಂದಿದ್ದಾರೆ. ಈ ಪವಾಡಗಳು ಮತ್ತು ಮಹಿಮೆಗಳನ್ನು ಗಮನಿಸಿದಾಗ ಅವರು ಕಾಲ್ಪನಿಕವೀರರು ಇರಬೇಕೆಂದು ಸಂಶಯ ಬರುತ್ತದೆ.

ಉತ್ತರ ಭಾರತದ ಮಿರ್ಜಾಪುರದಲ್ಲಿ 'ಖಾರ್ –ಹರ್ ಬೀರ್' ಎನ್ನುವ ವೀರದೇವರೆ ಇದ್ದಾನೆ. ಅವನು ಇಂದಿಗೂ ಆಗಾಗ ಕಾಣಿಸಿಕೊಳ್ಳುತ್ತಾನೆ. ಕೋಪಗೊಂಡಾಗ ರೋಗರುಜಿನಗಳನ್ನು ತರಬಲ್ಲ. ಹೀಗೆ ಗಲಭೆ, ದೊಂಬಿ, ರಾವಡಿಗಳನ್ನು ಮಾಡುವುದರ ಮೂಲಕ ತನ್ನ ಅಸ್ತಿತ್ವವನ್ನು ತೋರಿಸುತ್ತಾನೆ ಎಂಬುದಾಗಿ ಜನ ನಂಬುತ್ತಾರೆ. ಇವರು ಅದೇ ಪ್ರದೇಶದ ವೀರ. ಶ್ರೀರಾಮನೊಂದಿಗೆ ಯುದ್ಧಮಾಡಿ ಸೋತು ಮಡಿದವನು. ಆಗ ಅವನ ರುಂಡ ಮತ್ತು ಕೈಕಾಲುಗಳು ಸ್ವರ್ಗದ ನಾಲ್ಕು ಕಡೆಗೆ ಹಾರಿಹೋದವು. ಆದರೆ ಅವನ ರುಂಡ ಮಾತ್ರ ಈಗ ಆಕಾರವಿಲ್ಲದೆ ಕಲ್ಲಾಗಿದೆ ಎಂಬುದಾಗಿ ತೋರಿಸುತ್ತಾರೆ. ಇವನ ಆರಾಧಕರ ಸಂಖ್ಯೆ ಮೂವತ್ತೊಂದು ಸಾವಿರಕ್ಕೂ ಮಿಕ್ಕಿದೆ ಎಂಬುದಾಗಿ ತಿಳಿದು ಬರುತ್ತದೆ.[೧೦೦]

ಪಂಜಾಬಿನ ಚಂಬಾ ಎಂಬ ಊರಿನ ಬಳಿ 'ರಣಬೀರ್' ಎಂಬ ವೀರರ ಸಮೂಹವೊಂದನ್ನು ಅಲ್ಲಿನ ಜನ ಆರಾಧಿಸುತ್ತಾರೆ. ಅವರು ಹಿಂದೆ ಗತಿಸಿ ಹೋದ

---

೯೯ William Crooke : The Popular Religion and Foloklore of Northern India. Vol. I ಪು. ೨೫೪

೧೦೦ William Crooke and Enthoven : The Religion and Foloklore of Northern India. ಪು. ೨೦೦

ಮಹಾವೀರರೆಮದು ಅಲ್ಲಿಯ ಜನರ ನಂಬಿಕೆ. ಅವರ ಆತ್ಮಗಳು ಇಂದಿಗೂ ಕಾಡಿನ ಮರಗಳಲ್ಲಿ ವಾಸವಾಗಿವೆ. ರಾತ್ರಿಯ ವೇಳೆಯಲ್ಲಿ ಅವು ಬೇಟೆಯಾಡುತ್ತವೆ ಎಂಬುದಾಗಿ ನಂಬುವ ಅವರು ಕಾಡಿನ ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಜನರನ್ನು ಅದರಲ್ಲಿಯೂ ಹೆಂಗಸರನ್ನು ಹೋಗಲು ಬಿಡುವುದಿಲ್ಲ. ಆ ವೀರರ ಗುಂಪಿನ ವೀರರ ಹೆಸರುಗಳು ಹೀಗಿವೆ. ನರಸಿಂಹ, ಕಾಲ್ ಬೀರ್ ಇತ್ಯಾದಿ. ಇವರು ಪತಿಯಿಂದ ಕಾಲದೇಶ ದೂರದಲ್ಲಿರುವ ಹೆಂಡಿರನ್ನು ಮಾನವ ರೂಪದಲ್ಲಿ ಬಂದು ಭೇಟಿ ಮಾಡುತ್ತಾರೆಂದು ನಂಬುತ್ತಾರೆ. ತನ್ನ ಪತ್ನಿಯನ್ನು ಹೀಗೆ ಭೇಟಿ ಮಾಡಿದ್ದಾರಿವರು ಎಂದು ಅನುಮಾನ ಬಂದರೆ ಗಂಡನಾದವನ್ನು ಆ ವೀರರ ಗುಂಪಿಗೆ ಯಾವುದಾದರೂ ಆಹುತಿಯನ್ನು ನೀಡಬೇಕು. ಇಲ್ಲದಿದ್ದರೆ ಅವನಿಗೆ ಮರಣ ಪ್ರಾಪ್ತವಾಗುವುದೆಂದು ಜನ ನಂಬುತ್ತಾರೆ.[೧೧೧]

ರಜಪೂತರು ಮೊದಲಿನಿಂದಲೂ ಕ್ಷಾತ್ರ ತೇಜವನ್ನು ಗೌರವಿಸಿ, ಉಳಿಸಿಕೊಂಡು ಬಂದವರು. ರಜಪೂತರೆಲ್ಲರ ಮನೆಯಲ್ಲಿಯೂ ಕನಿಷ್ಠ ಒಬ್ಬನಾದರೂ ಯುದ್ಧದಲ್ಲಿಯಾಗಲಿ, ಇನ್ನಿತರ ಯಾವುದೇ ಹೋರಾಟದಲ್ಲಿಯಾಗಲಿ ಮಡಿದ ವೀರ ನಮಗೆ ದೊರೆಯುತ್ತಾನೆ. ಗತಿಸಿದ ವೀರನ ಸ್ಮರಣೆಗೆಂದೋ, ಅವನ ಗೌರವಾರ್ಥವಾಗಿಯೋ ಅಥವಾ ಅವನ ಸಮಾಧಿಯನ್ನು ಗುರುತಿಸಲೆಂದೋ ಅವರು ಎತ್ತಿಸಿದ 'ಛತ್ರಿ' ಅಥವಾ 'ವಿತಾನ'ಗಳನ್ನು ಮುಂದಿನ ತಲೆಮಾರಿನ ಜನ ಆರಾಧಿಸುತ್ತಾ ಬಂದರು. ಇಂಥ ಒಂದು ಸ್ಮಾರಕಭವನ ರಾಜಾಸ್ಥಾನದ ಮಂಡೂರ್ ಎಂಬಲ್ಲಿದೆ.

ರಜಪೂತರ ವೀರರಲ್ಲಿ ಇಬ್ಬರು ವೀರರು ಗಮನಾರ್ಹರಾಗಿದ್ದಾರೆ. ಮುಸಲ್ಮಾನ್ ದಾಳಿಕೋರರು ಅಜ್ಮೀರ್ ಮೇಲೆ ದಾಳಿ ಮಾಡಿದಾಗ ಅವರನ್ನು ಮಾಣಿಕ್ ರಾಜನು ಎದುರಿಸಿದ. ಆಗ ನಡೆದ ಯುದ್ಧದಲ್ಲಿ ರಾಜನ ಅಪ್ರಾಪ್ತ ವಯಸ್ಸಿನ ಮಗನು ಮೃತನಾದನು. ಅಂದಿನಿಂದ ಇಂದಿನವರೆಗೂ ರಜಪೂತರಲ್ಲಿ 'ಚಾಯ್ರ್ದ' ಎಂಬ ಒಂದು ಪಂಗಡದ ಜನ ಈ ಹುಡುಗನನ್ನು ತಮ್ಮ ಮನೆ ದೇವತೆಯಾಗಿ ಒಪ್ಪಿಕೊಂಡು 'ಪುತ್ರ' ಎಂಬ ಹೆಸರಿನಿಂದ ಆರಾಧಿಸುತ್ತಾರೆ.

ರಾಜಾಸ್ಥಾನದಲ್ಲಿ ಆರಾಧನೆಗೆ ಪಾತ್ರನಾದ ಮತ್ತೊಬ್ಬ ವೀರನೆಮದರೆ 'ತೇಜಾಜಿ'. ಇವನು 'ಜಾಟ್' ಎಂಬ ಒಂದು ಪಂಗಡಕ್ಕೆ ಸೇರಿದವನು. ವೃತ್ತಿಯಿಂದ ತೇಜಾಜಿ ದನ ಕಾಯುವವನು. ದನಗಳನ್ನು ಕಾಯುವಾಗ ಒಮ್ಮೆ ತನ್ನ ಊರಿನ ಬ್ರಾಹ್ಮಣನಿಗೆ ಸೇರಿದ ಹಸುವೊಂದು ಪ್ರತಿದಿನ ಕಾಡಿಗೆ ಹೋಗಿ ಒಂದು ಹುತ್ತದಲ್ಲಿನ ಹಾವಿಗೆ ಹಾಲು ಕೊಡುತ್ತಿದ್ದುದನ್ನು ಕಂಡ. ಇದರಿಂದ ಆ

೧೧೧ ಅದೇ,

ಬ್ರಾಹ್ಮಣನಿಗೆ ಆಗುತ್ತಿದ್ದ ನಷ್ಟವನ್ನು ತಪ್ಪಿಸುವ ಸಲುವಾಗಿ ತೇಜಾಜಿ, ಆ ಹಾವಿಗೆ ತಾನು ಪ್ರತಿ ದಿನ ಹಾಲನ್ನು ತಂದು ಕೊಡುವುದಾಗಿ ಪ್ರಮಾಣ ಕೊಟ್ಟು, ಈ ರೀತಿ ಹಸುವಿಗೆ ತೊಂದರೆ ಕೊಡಬಾರದೆಂದು ಕೇಳಿಕೊಂಡ. ಅದಕ್ಕೆ ಆ ಹಾವೂ ಸಮ್ಮತಿಸಿತು. ಅದರಂತೆಯೇ ಪ್ರತಿದಿನ ಹಾವಿಗೆ ಹಾಲನ್ನು ತಂದು ಕೊಡುತ್ತಿದ್ದ. ಪ್ರತಿದಿನವೂ ಹಾಲನ್ನು ತಂದು ಕೊಡುತ್ತೇನೆಂಬ ತನ್ನ ಪ್ರಮಾಣವನ್ನು ಅನಿವಾರ್ಯ ಕಾರಣದಿಂದಾಗಿ ಮುರಿಯಬೇಕಾಯಿತು. ಅವನು ಮತ್ತೆ ಹಿಂದಿರುಗಿ ಬಂದಾಗ, ಆ ಹಾವು ಈ ಕಾರಣಕ್ಕಾಗಿಯೇ ತೇಜಾಜಿಯನ್ನು ಕಡಿಯುತ್ತೇನೆಂದು ತಿಳಿಸಿತು. ತಕ್ಷಣವೇ ತನ್ನ ತಪ್ಪನ್ನು ಅರಿತ ತೇಜಾಜಿ ತನ್ನನ್ನು ಕಡಿಯಲು ಇರುವ ಅಧಿಕಾರವನ್ನು ಒಪ್ಪಿಕೊಂಡು ಅದರಂತೆ ಆಗಲಿ ಎಂದು ಉತ್ತರಿಸಿದ. ಆದರೆ ಅದಕ್ಕೆ ಮುನ್ನ ತನ್ನದೊಂದು ಪ್ರಾರ್ಥನೆ ಇದೆಯೆಂದು ಕೇಳಿಕೊಂಡ. ತನ್ನ ಮನೆಗೆ ಹೋಗಿ ಹೆಂಡತಿಯನ್ನು ಕೊನೆಯ ಬಾರಿಗೆ ನೋಡಿಕೊಂಡು ಬರಬೇಕು ಎಂಬುದೇ ಆತನ ಅಪೇಕ್ಷೆಯಾಗಿತ್ತು. ಇದಕ್ಕೆ ಹಾವು ಅವಕಾಶವನ್ನು ನೀಡಿತು. ಅವನು ಹೆಂಡತಿಯನ್ನು ಮಾತನಾಡಿಸಿಕೊಂಡು ಹಾವಿನ ಬಳಿಗೆ ಬರುತ್ತಿದ್ದಾಗ, ದಾರಿಯಲ್ಲಿ ಪಕ್ಕದ ಹಳ್ಳಿಯೊಂದರ ದನಗಳನ್ನು ಕಳ್ಳರು ಅಪಹರಿಸಿಕೊಂಡು ಹೋಗುತ್ತಿದ್ದುದನ್ನು ಕಂಡ. ತಕ್ಷಣವೇ ಆ ಕಳ್ಳರ ಮೇಲೆ ಬಿದ್ದು ಅವರಿಂದ ದನಗಳನ್ನು ಕಸಿದುಕೊಂಡು, ಹಳ್ಳಿಗೆ ತಲುಪಿಸಿ ತನ್ನ ಅವಧಿ ಮುಗಿಯುವುದರೊಳಗೆ ಹಾವಿನ ಬಳಿಗೆ ಬಂದ. ಕಳ್ಳರೊಡನೆ ಹೊಡೆದಾಡುವಾಗ ಅವನ ಮೈಯೆಲ್ಲಾ ಗಾಯಗಳಾಗಿದ್ದವು. ಹಾವಿಗೆ ಕಡಿಯಲು ಸ್ಥಳವೇ ಇರಲಿಲ್ಲ. ಆಗ ತೇಜಾಜಿ ತನ್ನ ನಾಲಿಗೆಯನ್ನು ಚಾಚಿ, ಅಲ್ಲಿ ಕಡಿಯುವಂತೆ ತೋರಿಸಿದ. ಆಗ ಆ ಹಾವು ಅವನನ್ನು ಕಡಿಯಿತು.[೧೦೨]

ತೇಜಾಜಿಯನ್ನು ಜನ ಇಂದಿಗೂ ಆರಾಧಿಸುತ್ತಾರೆ. ಕುದುರೆಯ ಮೇಲೆ ಕುಳಿತು ಕತ್ತಿ ಬೀಸುತ್ತಿರುವ ಹಾಗೆ ಈ ತೇಜಾಜಿಯ ವಿಗ್ರಹ ಇದೆ. ಹಾವು ತೇಜಾಜಿಯ ನಾಲಿಗೆಯನ್ನು ಕಡಿಯುತ್ತಿರುವ ಹಾಗೆ ಚಿತ್ರಿತವಾಗಿದೆ. ಇದೇ ರೀತಿಯ ಚಿತ್ರವಿರುವ ಬೆಳ್ಳಿಯ ಮುದ್ರಿಕೆಯನ್ನು ಪ್ರತಿಯೊಬ್ಬ ಜಟ್ಟನೂ ಕೊರಳಲ್ಲಿ ಹಾಕಿಕೊಂಡಿರುತ್ತಾನೆ. ಹಾವು ಕಡಿದಿರುವ ಯಾವ ವ್ಯಕ್ತಿಯೇ ಆಗಲಿ ತೇಜಾಜಿಯ ಹೆಸರನ್ನು ಜಪಿಸುತ್ತಿದ್ದರೆ ಅವನಿಗೆ ವಿಷ ಇಳಿದು ಹೋಗುವುದಾಗಿ ಅಲ್ಲಿನ ಜನ ನಂಬುತ್ತಾರೆ.

ವಿಂಧ್ಯ ಮತ್ತು ಕೈಮೂರ್ ಪರ್ವತ ಶ್ರೇಣಿಗಳಲ್ಲಿ ವಾಸಿಸುವ ಗುಡ್ಡಗಾಡು ಜನ ಆರಾಧಿಸುವ ವೀರರು ಬೇರೆಯ ಕಡೆಯಿಂದ ಬಂದ, ಬೇರೆಯ ಜನಾಂಗದವರಾಗಿದ್ದಾರೆ. ಈ ವೀರರಲ್ಲಿ

---

೧೦೨ ಅದೇ, ಪು. ೧೬೫

ರಾಜಾಲಖಿಮ್ ಎಂಬುವನ ಪ್ರಮುಖ. ಇವನನ್ನು ವಿದ್ವಾಂಸರು ಕನ್ನೋಜ್‌ನ ದೊರೆಯಾದ ರಾಜಾ ಜಯಚಂದ್ರನ ಮಗನಾದ ಲಖ್ನದೇವನೆಂದು ಗುರುತಿಸುತ್ತಾರೆ. ಕ್ರಿ. ಶ. ೧೧೯೪ರಲ್ಲಿ ಮಹಮದ್ ಗೋರಿಯೊಂದಿಗೆ ಮಾಡಿದ ಯುದ್ಧದಲ್ಲಿ ಈತನು ಸತ್ತನೆಂದು ತಿಳಿಯುತ್ತದೆ. ಇವನು ಮಡಿದಾಗ ಇವನ ಸ್ಮಾರಕವಾಗಿ ನೆಟ್ಟಕಂಬವೊಂದು ಮಿರ್ಜಾಪುರ ಜಿಲ್ಲೆಯ ಭೂಲಿ ಎಂಬಲ್ಲಿದೆ. ಇವನ ಸಂಬಂಧಿಕರು ಅಂದರೆ, ಇವನು ಯಾವ ಗುಂಪಿನಿಂದ ಬಂದನೋ ಆ ಜನರು ಕಾಣುವುದಕ್ಕಿಂತ ಹೆಚ್ಚಿನ ಗೌರವದಿಂದ ಈ ಗುಡ್ಡಗಾಡಿನ ಜನ ಇವನನ್ನು ಕಾಣುವುದು ಗಮನಾರ್ಹವಾಗಿದೆ.[೧೦೩]

ಬೊಂಬಾಯಿಯಲ್ಲಿ ಬಿರುಗಾಳಿಯನ್ನು 'ಸಾತ್ ವೀರ್' ಎಂಬ ಹೆಸರಿನಿಂದ ಆರಾಧಿಸುತ್ತಾರೆ. ಇವು ರಾತ್ರಿ ವೇಳೆಯಲ್ಲಿ ಬಯಲುಗಳಲ್ಲಿ ಮತ್ತು ತೋಟಗಳಲ್ಲಿ ಇರುತ್ತವೆ ಎಂಬುದಾಗಿ ಅವರು ಭಾವಿಸುತ್ತಾರೆ. ಹಳ್ಳಿಯ ಯಜಮಾನನು ಬಾವುಟವಿರುವ ಬೊಂಬನ್ನೋ, ಹಾಯಿಯಿರುವ ದೋಣಿಯನ್ನೋ ಅಥವಾ ಕೋಣವನ್ನೋ ಕಡಿಯುವುದರ ಮೂಲಕ ಪೂಜೆ ಮಾಡುತ್ತಾನೆ. ಆಗ ಆರಾಧನೆ ಮಾಡಲು ಬಂದವರಲ್ಲಿ ಒಬ್ಬನ ಮೇಲೆ ವೀರನು ಆವೇಶವಾಗಿ ಬರುತ್ತಾನೆ. ಈ ರೀತಿಯ ವೀರರ ಆರಾಧನೆ ತುಂಬಾ ವಿಚಿತ್ರವಾಗಿ ತೋರುತ್ತದೆ. ಬಿರುಗಾಳಿಯನ್ನು ವೀರನೆಂದು ಪರಿಗಣಿಸಿ ಅದನ್ನು ಆರಾಧಿಸುವ ಸಂಪ್ರದಾಯಕ್ಕೆ ಮುಖ್ಯ ಕಾರಣವೆಂದರೆ, ಈ ಸಾತ್ ವೀರರನ್ನು ಆರಾಧಿಸುವ ಜನ ಸಾಮಾನ್ಯವಾಗಿ ಅಂಬಿಗರು ಅಥವಾ ಬೆಸ್ತರು. ಇವರು ಸದಾ ನೀರಿನ ಮೇಲೆಯೇ ತಮ್ಮ ಜೀವನ ನಿರ್ವಹಣೆ ಮಾಡುತ್ತಿರುವುದರಿಂದ ಇವರು ಎದುರಿಸಬೇಕಾದ ತೊಂದರೆ ಬಿರುಗಾಳಿಯಿಂದ ಬರುವಂಥದ್ದು. ಅದು ಯಾವುದೋ ಶಕ್ತಿಯೆಂದು ಭಾವಿಸಿದ ಜನ, ಅವುಗಳಿಗೆ ಒಂದು ಮೂರ್ತ ರೂಪವನ್ನು ಕೊಟ್ಟು ಆರಾಧಿಸಲು ಆರಂಭಿಸಿದರು. ಇದಲ್ಲದೆ ಸಮುದ್ರದಲ್ಲಿ ಆಕಸ್ಮಿಕವಾಗಿ ಮಡಿದ ವೀರರ ಹೆಸರಿನಲ್ಲಿ ಅವರ ವಿಗ್ರಹಗಳನ್ನು ಮಾಡಿ, ಆರಾಧಿಸುವುದೂ ಉಂಟು. ಇಂಥ ವೀರರನ್ನು ಆರಾಧಿಸುವುದರಿಂದ ಸಮುದ್ರಯಾನದಲ್ಲಿ ತಮಗೆ ಒದಗಬಹುದಾದ ಕಷ್ಟಗಳು ಪರಿಹಾರವಾಗುವುದೆಂದೇ ಅವರ ನಂಬಿಕೆ.[೧೦೪]

ಮಹಾರಾಷ್ಟ್ರದಲ್ಲಿರುವ ಕುರುಬರು ವೀರನನ್ನು ಕಲ್ಲು ಇಟ್ಟೋ ಕಂಬವನ್ನು ಇಟ್ಟೋ ಪೂಜಿಸುತ್ತಾರೆ. ಕೆಲವೊಮ್ಮೆ ವೀರನ ವಿಗ್ರಹ ಅಥವಾ ಚಿತ್ರ ಇರುವ ತಾಮ್ರಪಟವನ್ನು ಅವರು

---

೧೦೩ ಅದೇ, ಪು. ೧೬೨ –೬೩

೧೦೪ ಅದೇ, ಪು. ೨೦೧

ವೀರನೆಂದು ಪೂಜಿಸುವುದುಂಟು. ಇವೆಲ್ಲವುಗಳನ್ನೂ ಅವರು 'ವೀರ್', 'ಬೀರ್' ಎಂಬುದಾಗಿ ಕರೆಯುತ್ತಾರೆ.[೧೦೫] ತಮಿಳು ನಾಡಿನ ಮಧುರೈ ಜಿಲ್ಲೆಯಲ್ಲಿನ ಕುರುಬ ಜನಾಂಗದವರು ವೀರನ ಜೊತೆಗೆ ವೀರಲಕ್ಷ್ಮ ಎಂಬ ಸ್ತ್ರೀ ದೇವತೆಯನ್ನೂ ಆರಾಧಿಸುತ್ತಾರೆ.[೧೦೬] ಈ ರೀತಿ ವೀರಸ್ತ್ರೀಯರನ್ನು ಆರಾಧಿಸುವ ಸಂಪ್ರದಾಯ ಭಾರತದ ಅನೇಕ ಕಡೆಗಳಲ್ಲಿದೆ. ಅಲ್ಲಿ ಆಕೆಯನ್ನು 'ಮಾಸ್ತಿ', 'ಮಹಾಸತಿ', ಎಂಬುದಾಗಿ ಆರಾಧಿಸುತ್ತಾರೆ. ಆದರೆ ವೀರಲಕ್ಷ್ಮನನ್ನು ವೀರನ ಹಾಗೆಯೇ ಆರಾಧಿಸುವುದು ಮಹತ್ವದ ಅಂಶ.

ಕರ್ನಾಟಕ ಹಲವಾರು ಪ್ರಾಂತಗಳಲ್ಲಿ ಕುರುಬರ ದೇವತೆಯಾದ ಬೀರಪ್ಪನ ಗುಡಿಗಳನ್ನು ಕಾಣಬಹುದು. ಬೆಂಗಳೂರು, ತುಮಕೂರು, ಮೈಸೂರು, ಕೋಲಾರ, ಮಂಡ್ಯ ಮುಂತಾದ ಜಿಲ್ಲೆಗಳ ಹಳ್ಳಿಗಳಲ್ಲಿ ಇವನ್ನು ವಿಶೇಷವಾಗಿ ಗುರುತಿಸಬಹುದು. (ಚಿತ್ರ ೧೯, ೨೦).

ಈ ಎಲ್ಲಾ ಕಡೆಗಳಲ್ಲಿ ಇರುವ ವೀರಗಾರರ ಗುಡಿಗಳ ವೈಲಕ್ಷಣ್ಯಗಳು ಒಂದೇ ಆಗಿರುತ್ತೆ ಇವು ಪ್ರಾಗೈತಿಹಾಸಿಕ ಕಾಲದ ಡಾಲ್ಮನ್‌ಗಳನ್ನು ಹೋಲುತ್ತವೆ, ಇವು ಊರ ಹೊರಗೆ ಬಯಲಿನಲ್ಲಿರುತ್ತವೆ. ಒಂದು ಕಡೆ ಒಂದೇ ಗುಡಿಯಿರಬಹುದು ಅಥವಾ ಹಲವಾರು ಗುಡಿಗಳು ಲಾಳಾಕಾರದಲ್ಲಿ, ಸಾಲು ಸಾಲು ಇರಬಹುದು. ಹೀಗೆ ಹಲವಾರು ಗುಡಿಗಳು ಇರುವ ಕಡೆ ಒಂದು ಪ್ರಧಾನವಾದ ಗುಡಿ ಇರುತ್ತದೆ. ಇದನ್ನು ಇತರೆ ಸಾಮಾನ್ಯ ದೇವಾಲಯಗಳಂತೆ ಕಟ್ಟಿರುತ್ತಾರೆ. ಇಲ್ಲಿ ವೀರಗಲ್ಲು ಇರದೆ ವೀರನ ವಿಗ್ರಹ ಇರುತ್ತದೆ. ಈ ವಿಗ್ರಹ ಸಾಮಾನ್ಯವಾಗಿ ವೀರನು ತನ್ನ ಎಡಕೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡೋ ಅಥವಾ ಅದರ ಮೇಲೆ ತನ್ನ ಕೈಯನ್ನು ಊರಿಕೊಂಡಂತೆಯೂ, ತನ್ನ ಬಲಕೈಯಲ್ಲಿ ಕತ್ತಿಯನ್ನು ಹಿಡಿದಿರುವಂತೆಯೂ ಇದ್ದು ವೀರನನ್ನು ಸಾಮಾನ್ಯವಾಗಿ ಆಲೀಢ ಭಂಗಿಯಲ್ಲಿ ಕೆತ್ತಿರುತ್ತಾರೆ. ಇದು ಆ ಎಲ್ಲಾ ಗುಡಿಗಳ ಪ್ರಧಾನ ದೈವ ಇದಕ್ಕೆ ಪೂಜೆ – ಪುನಸ್ಕಾರಗಳು ನಡೆಯುವುದು. ಈ ವಿಗ್ರಹ ಯಾವ ಊರಿನ ಬಳಿ

---

೧೦೫ ಅದೇ, ಪು. ೩೧೯

೧೦೬ Edger Thurston (Ed) : Castes and Tribes of South India, Vol. IV. ಪು. ೧೫೧

ಇರುತ್ತದೆಯೋ, ಆ ಊರಿನ ಹೆಸರಿನ ಜೊತೆಗೆ ಅಪ್ಪ ಎಂಬುದು ಸೇರಿ ವೀರನ ಹೆಸರಾಗಿರುತ್ತದೆ. ಉದಾಹರಣೆಗೆ ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿನಲ್ಲಿರುವ ದೊಡ್ಡ ಹುಲ್ಲೂರಿನ ವೀರನ ಗುಡಿಯ ಹೆಸರು ಹುಲ್ಲೂರಪ್ಪನ ಗುಡಿ. ಇದೇ ಜಿಲ್ಲೆ ದೇವನಹಳ್ಳಿ ತಾಲ್ಲೂಕ್ ನಲ್ಲೂರಿನಲ್ಲಿ ಇರುವ ವೀರನ ಗುಡಿಯ ಹೆಸರು ನಲ್ಲೂರಪ್ಪನ ದೇವಾಲಯ ಎಂದು (ಚಿತ್ರ ೨೦)

ಈ ಗುಡಿಗಳೆಲ್ಲವೂ ವೀರರ ಸ್ಮಾರಕಗಳೆಂದೇ ಭಾವಿಸುವುದು ತಪ್ಪಾಗುತ್ತದೆ. ಕುರುಬ ಜನಾಂಗದವರಲ್ಲಿ ಮದುವೆಯಾಗದೆ ಸತ್ತ ಯುವಕರನ್ನು 'ವೀರಗಾರ', 'ಈರಗಾರ' ಎಂಬುದಗಿ ಕರೆಯುತ್ತಾರೆ, ಈ ರೀತಿಯಲ್ಲಿ ಮಡಿದ ಕುರುಬ ಜನಾಂಗದ ಯುವಕರಿಗೆ ಇಂದಿಗೂ ಇಂತಹ ಗುಡಿಗಳನ್ನು ನಿರ್ಮಿಸುವುದುಂಟು. ನಾವು ಕಂಡ ಹಾಗೆ ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಸುಮಾರು ಐವತ್ತು ವರ್ಷಗಳ ಹಿಂದೆ ಮದುವೆಯಿಲ್ಲದೆ ಸತ್ತ ಕುರುಬರ ಯುವಕನಿಗೆ ವೀರರ ಗುಡಿಯನ್ನು ನಿರ್ಮಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. (ಚಿತ್ರ ೨೬) ಈ ಯುವಕ ಯಾವುದೇ ಹೋರಾಟದಲ್ಲಿ ಮಡಿದವನಲ್ಲ.

ಈ ಹಿಂದೆ ತಿಳಿಸಿದಂತೆ ಈ ವೀರರ ಗುಡಿಗಳು ನೋಡುವುದಕ್ಕೆ ಪ್ರಾಗೈತಿಹಾಸಿಕ ಕಾಲದ ಡಾಲ್ಮನ್‌ಗಳನ್ನು ಹೋಲುತ್ತವೆ. ಆದುದರಿಂದ ಇದನ್ನು ಬಹುಬೇಗ ಪ್ರಾಗೈತಿಹಾಸಿಕ ಕಾಲದ ಗುಡಿ ಎಂಬುದಾಗಿ ತಪ್ಪಾಗಿ ತಿಳಿಯುವ ಸಾಧ್ಯತೆ ಇದೆ. ಮೇಲೆ ಹೇಳಿದ ಅಂದರೆ ಸುಮಾರು ಐವತ್ತು ವರ್ಷಗಳ ಹಿಂದೆ ಸತ್ತ ಕುರುಬರ ಯುವಕನಿಗೆ ನಿರ್ಮಿಸಿದ ಗುಡಿಯೂ ಇದೇ ರೀತಿ ಇದೆ. ಆದುದರಿಂದ ಜನಕ್ಕೆ ಸುಲಭವಾಗಿ ನಿರ್ಮಿಸಲು ಸಾಧ್ಯವಾಗಿದ್ದು, ಅದು ತಮ್ಮ ಉದ್ದೇಶವನ್ನು ಈಡೇರಿಸಿದರೆ ಸಾಕು ಎಂಬ ಮನೋಭಾವದಿಂದ ಐತಿಹಾಸಿಕ ಕಾಲದಲ್ಲಿ ನಿರ್ಮಿತವಾದ ಗುಡಿಗಳು ಇವು ಎಂಬುದರಲ್ಲಿ ಸಂಶಯವಿಲ್ಲ.

ಇದೇ ಸಂದರ್ಭದಲ್ಲಿ ಬೇಡ ಜನಾಂಗದವರಲ್ಲಿಯೂ ಇರುವ ಈ ರೀತಿಯ ಗುಡಿಗಳನ್ನು ನಿರ್ಮಿಸುವ ಪದ್ಧತಿಯ ಬಗ್ಗೆ ಪ್ರಸ್ತಾಪ ಮಾಡುವುದು ಸೂಕ್ತ ಎಂದು ತೋರುತ್ತದೆ. ಇಲ್ಲಿ ಕಾಣುವ ಒಂದು ವಿಶಿಷ್ಟ ಗುಣ ಎಂದರೆ ವೀರನ ವಿಗ್ರಹವನ್ನು ಕಲ್ಲಿನ ಮೇಲೆ ಬಿಡಿಸದೆ, ವೀರನನ್ನು ಪ್ರತಿನಿಧಿಸುವ, ಸಂಕೇತಿಸುವ ರೂಕ್ಷವಾದ ಕಲ್ಲುಗಳನ್ನು ಗುಡಿಗಳಲ್ಲಿ ಇಟ್ಟಿರುತ್ತಾರೆ ಎನ್ನುವದು. ಇವರಲ್ಲಿ ಈ ರೀತಿಯ ಗುಡಿಗಳನ್ನು ನಿರ್ಮಿಸುವ ಒಂದು ಪದ್ಧತಿ ಇತ್ತೀಚಿನವರೆಗೂ ಇತ್ತು ಎಂಬುದು ಒಂದು ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಸುಮಾರು ಬೇಡರ ಪೈಕಿ ಒಬ್ಬಾತನು

ತನ್ನ ಕುರಿಗಳನ್ನು ತಿನ್ನುತ್ತಿದ್ದ ಹುಲಿಯನ್ನೋ, ಚಿರತೆಯನ್ನೋ ಕೊಂದು, ಅನಂತರ ಅದರೊಡನೆ ಹೋರಾಡುವಾಗ ಆದ ಗಾಯಗಳಿಂದ ಕೆಲವು ದಿನಗಳನಂತರ ಸತ್ತನು. ಆತನ ನೆನಪಿಗಾಗಿ ಒಂದು ಕಲ್ಲಿನ ಗುಡಿಯನ್ನೇ ನಿರ್ಮಿಸಿ, ಅವನು ಆ ದುಷ್ಟಮೃಗದೊಡನೆ ಹೋರಾಡುತ್ತಿರುವಂತೆ ಚಿತ್ರವನ್ನು ಕೆತ್ತಿದ್ದಾರೆ. ಈ ರೀತಿ ಚಿತ್ರವನ್ನು ಕೆತ್ತುವುದು ಬೇಡರಲ್ಲಿ ಬಹಳ ವಿರಳ.[೧೦೭] (ಚಿತ್ರ ೨೬)

ಬೇಡರನ್ನು ನಾಯಕರು ಎಂಬುದಾಗಿಯೂ ಕರೆಯುತ್ತಾರೆ " ಇವರು ಮೊದಲಿನಿಂದಲೂ ದಂಡಿನ ಊಳಿಗಕ್ಕಾಗಿ ಮೀಸಲಾಗಿದ್ದ ಕ್ಷಾತ್ರವೃತ್ತಿಯ ವೀರಜನಾಂಗ. ಈ ಜನಾಂಗದವರು ಕರ್ನಾಟಕದ ವಿಶಾಲವಾದ ಪ್ರದೇಶಗಳಲ್ಲಿಯೂ, ಆಂಧ್ರ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿಯೂ ನೆಲಸಿದವರು. ಇವರ ಇತಿಹಾಸದ ಪ್ರಾಚೀನ ಚರಿತ್ರೆ ಕನಿಷ್ಠ ಪಕ್ಷ ೧೨ – ೧೩ನೆಯ ಶತಮಾನದ ಹಿಂದಿನ ಕಲದವರೆಗೆ ಹೋಗುವುದು. ಬೇಡರೆಂದರೆ ಕರ್ನಾಟಕದ ರಜಪೂತರು. ರಜಪೂತರು, ತಾವು ರಾಜಪುತ್ರರು ಎಂದರೆ ಅರಸನ ಮಕ್ಕಳು ಎಂದು ಹೇಳಿಕೊಳ್ಳುವಂತೆ ಈ ಬೇಡರು ತಾವು ದೊರೆಯ ಮಕ್ಕಳು, ನಾಯಕರ ಮಕ್ಕಳು ಇಲ್ಲವೆ ಕನ್ನಯ್ಯನವರು ಎಂದರೆ ಶ್ರೀ ಕೃಷ್ಣನ ಪರಿವಾರದವರು ಎಂಬುದಾಗಿ ಗೌರವದಿಂದ ಕರೆಯಿಸಿಕೊಳ್ಳುವರು."[೧೦೮] ಇಂಥವರು ವೀರರ ಆರಾಧಕರು ಎಂಬುದಾಗಿ ಬೇರೆ ಹೇಳಬೇಕಾಗಿಲ್ಲ. ಇವರು ಆರಾಧಿಸುವ ವೀರರಲ್ಲಿ ಕುಮಾರರಾಮ ಪ್ರಮುಖ. ಈ ಕುಮಾರರಾಮನು ತಮ್ಮ ಕುಲದೈವ ಎಂಬುದಾಗಿ ಅವನನ್ನು ಆರಾಧಿಸುತ್ತಾರೆ. ಕುಮಾರರಾಮನ ದೇವಾಲಯಗಳು ಕರ್ನಾಟಕದಲ್ಲಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ದೊಡ್ಡಪಾಲನಹಳ್ಳಿ, ಉತ್ತರ ಕನ್ನಡ ಜಿಲ್ಲೆ ಬೇಡ್ಕಣಿ, ಬಳ್ಳಾರಿ ಜಿಲ್ಲೆ ಗಂಗಾವತಿ ತಾಲ್ಲೂಕ್ ರಾಮದುರ್ಗದಲ್ಲಿಯೂ ಇವೆ.[೧೦೯]

ವೀರರನ್ನು ಆರಾಧಿಸುವ ಮತ್ತೊಂದು ಜನಾಂಗವೆಂದರೆ ಗೊಲ್ಲರು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ತುರುಗಳನ್ನು ರಕ್ಷಿಸಲು ಹೋಗಿ ಮಡಿದ ವೀರರ ಗುಡಿಗಳು ಇವೆ. ಈ ವೀರರ ಬಗ್ಗೆ ಹಾಡುಗಳೂ ಉಂಟು. ಈ ವೀರರ ಗುಡಿಗಳಲ್ಲಿ ಜಾತ್ರೆ ಪೂಜೆ ಮುಂತಾದ ಆರಾಧನಾ ಸಂಪ್ರದಾಯಗಳು ನಡೆಯುವುದುಂಟು.[೧೧೦]

---

೧೦೭ ಈ ವಿಷಯದ ಕಡೆಗೆ ನನ್ನ ಗಮನ ಸೆಳೆದವರು ಗೆಳೆಯ ಕೋನಸಾಗರದ ವಿಶ್ವನಾಥ ಅವರು.

೧೦೮ ಪಿ. ಬಿ. ದೇಸಾಯಿ : ಮದಗಜಮಲ್ಲ, ಪು. ೧

೧೦೯ ಜಿ. ವರದರಾಜಾರಾವ್ : ಕುಮಾರರಾಮನ ಸಾಂಗತ್ಯಗಳು. ಪು. ೨೮೫

೧೧೦ ಈ ಬಗ್ಗೆ ಅಪ್ರಕಟಿತವಾದ ಹಾಡುಗಳು ಮತ್ತು ಮಾಹಿತಿಗಳು ಎ. ಕೃಷ್ಣಮೂರ್ತಿಯವರ ಬಳಿ ಇವೆ.

ಆಂಧ್ರ ಪ್ರದೇಶದ ಗೊಲ್ಲರು ವೀರರ ಆರಾಧನೆ ಮಾಡುತ್ತಾರೆ. ಅವರನ್ನು 'ವೀರುಲು' ಎಂಬುದಾಗಿ ಕರೆಯುತ್ತಾರೆ. ಈ ವೀರರಿಗೆ ಊರಿನ ಗ್ರಾಮದೇವತೆಗೆ ದೊರೆಯುವಷ್ಟೆ ಗೌರವ ಮತ್ತು ಪುರಸ್ಕಾರ ಸಲ್ಲುತ್ತವೆ. ಆಂಧ್ರದ ಗೊಲ್ಲ ಜನಾಂಗ ಆರಾಧಿಸುವ ಈ ವೀರರು ಗೊಲ್ಲರಾಗಿರದೆ ಹರಿಜನರಾಗಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಈ ವೀರರ ಆರಾಧನೆಯ ಬಗ್ಗೆ ಒಂದು ಕಥೆ ಅವರಲ್ಲಿ ಪ್ರಚಲಿತವಿದೆ. ಕಾಟಮರಾಜುವಿನ ತಮ್ಮನಾದ ಚೆನ್ನಬಾಲುಡು ಕಾರಂಪೂಡಿಯ ಮೇಲೆ ಯುದ್ಧವನ್ನು ಘೋಷಿಸಿದ. ಆಗ ಅವನು ತನ್ನ ಅಣ್ಣನಾದ ಕಾಟಮ ರಾಜುವನ್ನು ಸಹಾಯಕ್ಕೆ ಕರೆದ. ಆದರೆ ಅವನು ಮತ್ತೊಂದು ಯುದ್ಧದಲ್ಲಿ ಆಗ ನಿರತನಾಇದ್ದ ಕಾರಣ ತಮ್ಮನ ನೆರವಿಗೆ ಬರಲು ಆಗಲಿಲ್ಲ. ಆಗ ಚೆನ್ನಯ್ಯ ಬಾಲುಡು ಮಾದಿಗರನ್ನು ತನ್ನ ಸಹಾಯಕ್ಕೆ ಬರುವಂತೆ ಕೇಳಿಕೊಂಡ. ಆ ಮೇರೆಗೆ ಅವರು ಸಹಾಯಕ್ಕೆ ಬಂದರು ; ಅಂದಿನ ಜಯವನ್ನು ಗಳಿಸಿದರು. ಆ ದಿನ ರಾತ್ರಿ ಎಲ್ಲ ಸೈನಕರೂ ಮಲಗಿದರು. ಮಾರನೆಯ ದಿನ ಬೆಳಿಗ್ಗೆ ಚೆನ್ನಯ್ಯಬಾಲುಡು ಮಾದಿಗರನ್ನು ಊಟಕ್ಕೆ ಕರೆಯಲು ತನ್ನ ಪ್ರಧಾನ ಮಂತ್ರಿಯನ್ನು ಕಳುಹಿಸಿದ. ಆ ಊಟದ ವ್ಯವಸ್ಥೆಯಲ್ಲಿ ಚೆನ್ನಯ್ಯ ಬಾಲುಡು ತಾರತ್ಮ್ಯ ಅಥವಾ ಪಂಕ್ತಿ ಭೇದ ಮಾಡಲಿಲ್ಲ. ಈ ರೀತಿ ಚೆನ್ನಯ್ಯಬಾಲುಡು ಜಾತಿಹೀನರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅವರೊಡನೆ ಊಟಮಾಡುವುದು ಮಂತ್ರಿಗೆ ಸರಿಬೀಳಲಿಲ್ಲ. ಆದ್ದರಿಂದ ಅವನು ಸ್ವಲ್ಪ ಹೊತ್ತು ಹೊರಗಿದ್ದು ಅನಂತರ ಚೆನ್ನಯ್ಯಬಾಲುಡುವಿನ ಬಳಿಗೆ ಬಂದು ಮಾದಿಗರು ಸ್ನಾನ ಮಾಡುತ್ತಿದ್ದಾರೆ ಎಂಬುದಾಗಿ ತಿಳಿಸಿದ. ಚೆನ್ನಯ್ಯಬಾಲುಡು ಮತ್ತೆ ಅವರನ್ನು ಕರೆತಲು ಮಂತ್ರಿಯನ್ನು ಕಳುಹಿಸಿದ. ಮಂತ್ರಿಯು ಮತ್ತೆ ಸ್ವಲ್ಪ ಹೊತ್ತು ಹೊರಗಿದ್ದು ರಾಜನ ಬಳಿಗೆ ಹಿಂತಿರುಗಿ ಬಂದು, ಅವರು ತಮ್ಮ ಹಣೆಗೆ ನಾಮವನ್ನು ಹಚ್ಚಿಕೊಳ್ಳುತ್ತಿದ್ದಾರೆ ಎಂಬುದಾಗಿ ತಿಳಿಸಿದ. ಬಹಳ ಹೊತ್ತಿನವರೆಗೆ ಚೆನ್ನಯ್ಯಬಾಲುಡುವಿಗೆ, ವಾಸ್ತವ ಸಂಗತಿ ತಿಳಿಯದೆ, ಮಾದಿಗರ ಮೇಲೆ ಸಿಟ್ಟಾಗಿ ಊಟಕ್ಕೆ ಹೊತ್ತಾಯಿತೆಂದು, ಅವರ ಪಾಲಿನ ಊಟವನ್ನು ಒಂದು ಕಡೆಗೆ ತೆಗೆದಿರಿಸಿ ತನ್ನ ಜನರೊಂದಿಗೆ ಊಟಮಾಡಿದ.

ಚೆನ್ನಯ್ಯ ಬಾಲುಡು ಮತ್ತು ಅವನ ಸಂಗಡಿಗರು ಊಟಮಾಡುತ್ತಿರುವಾಗ, ಆ ವಿಷಯವನ್ನು ಯಾರೋ ಬಂದು ನಿದ್ದೆ ಮಾಡುತ್ತಿರುವ ಮಾದಿಗರಿಗೆ ತಿಳಿಸುತ್ತಾರೆ ಮತ್ತು ಅವರ ಸೋಮಾರಿತನದ ಬಗ್ಗೆ ರೇಗಾಡುತ್ತಾರೆ. ಅವರು ಎದ್ದವರೇ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ಊಟದ ಮನೆಗೆ ಬರುತ್ತಾರೆ. ಅವರನ್ನು ಕಂಡ ಚೆನ್ನಯ್ಯ ಬಾಲುಡು ತನಗೆ ಬಂದ ಸುದ್ದಿ ಸುಳ್ಳೆಂದು ಬಹುಬೇಗ ತಿಳಿದುಕೊಳ್ಳುತ್ತಾನೆ. ಅದರಿಂದಾಗಿ ಅವನು ಅವರಲ್ಲಿ ಕ್ಷಮೆ ಯಾಚಿಸುತ್ತಾನೆ.

ತಮ್ಮನ್ನು ಸಂತೈಸಬಂದ ಅವನ ಯಾವ ಮಾತನ್ನೂ ಅವರು ಕೇಳದೆ, ಅವರು ಆ ರೀತಿ ತಮ್ಮನ್ನು ಬಿಟ್ಟು ಊಟಮಾಡಿದುದು ತಮಗೆ ಮಾಡಿದ ಅನ್ಯಾಯ ಮತ್ತು ಅವಮಾನ ಎಂದು ಪರಿಗಣಿಸುತತಾರೆ. ತಮ್ಮನ್ನು ಜಾತಿಯ ದೃಷ್ಟಿಯಿಂದ ಕಂಡು ಅವಮಾನಪಡಿಸಿದುದರ ಸಲುವಾಗಿ ತಾವು ಅವನ ಅನ್ನವನ್ನು ಉಣ್ಣದೆಯೇ ಯುದ್ಧ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಚೆನ್ನಯ್ಯ ಬಾಲುಡು ತನ್ನ ಅನ್ನವನ್ನು ಉಣ್ಣದಿದ್ದ ಪಕ್ಷದಲ್ಲಿ ಅವರು ತನಗಾಗಿ ಯುದ್ಧಮಾಡುವುದು ಬೇಕಿಲ್ಲವೆಂದು ತಿಳಿಸುತ್ತಾನೆ. ಈ ಕಾರಣಕ್ಕಾಗಿಯೇ ಅವರನ್ನು ಹಿಂದಕ್ಕೆ ಕಳುಹಿಸಿಬಿಡುತ್ತಾನೆ.

ಆ ನಂತರ ಅವರು ಕಾಟಮರಾಜುವಿನ ಬಳಿಗೆ ಹಿಂತಿರುಗುತ್ತಾರೆ. ಅವರು ಜಗಳಮಾಡಿಕೊಮಡು ಬಂದಿರುವುದನ್ನು ತಿಳಿದ ಕಾಟಮರಾಜು ಅವರೊಂದಿಗೆ ಯಾವ ಮಾತನ್ನೂ ಆಡುವುದಿಲ್ಲ. ಹಿಂದಕ್ಕೆ ಕಳುಹಿಸಿಬಿಡುತ್ತಾನೆ. ಇದರಿಂದ ಬೇಸರಗೊಂಡ ಆ ಮಾದಿಗರು, “ಚೆನ್ನಯ್ಯಬಾಲುಡು ನಮಗೆ ಆ ರೀತಿ ಅವಮಾನ ಮಾಡಿದ. ಅದರಿಂದ ಅವನು ಮಾಡುವ ಯುದ್ಧದಲ್ಲಿ ಭಾಗವಹಿಸಲಾಗಲಿಲ್ಲ. ಈ ಕಾಟಮರಾಜನ ಯುದ್ದದಲ್ಲಿಯೂ ಭಾಗವಹಿಸಲು ಆಗುತ್ತಿಲ್ಲ. ಆದಕಾರಣ ನಾವು ಇನ್ನು ಬದುಕಿರುವುದು ಉಪಯೋಗವಿಲ್ಲ” ಎಂದು ತಮ್ಮನ್ನು ತಾವೇ ಇರಿದುಕೊಂಡು ವೀರಸ್ವರ್ಗವನ್ನು ಪಡೆಯುತ್ತಾರೆ.[೧೧]

ಹೀಗೆ ಸತ್ತ ಅವರ ಆತ್ಮಗಳು ಮರವೊಂದರಲ್ಲಿ ಸ್ಥಳವನ್ನು ಪಡೆದುವೆಂದು ಜನ ಭಾವಿಸಿ, ಆ ಮರದ ಕೆಳಗೆ ಒಂದು ಕಲ್ಲನ್ನು ಹೂತು ಗುರುತು ಮಾಡಿದ್ದಾರೆ. ಆದರೆ ವೀರರ ಆತ್ಮಗಳು ಆ ಕಲ್ಲಿನಲ್ಲಿರದೆ, ಆ ಮರದಲ್ಲಿಯೇ ಇವೆ ಎಂಬುದಾಗಿ ಜನ ಭಾವಿಸುತ್ತಾರೆ. ಮದುವೆ ಮತ್ತು ಇತರ ವಿಶೇಷ ಸಂದರ್ಭಗಳಲ್ಲಿ ಗೊಲ್ಲರು ಇವರನ್ನು ಆರಾಧಿಸುತ್ತಾರೆ.

ಇಲ್ಲಿ ಆರಾಧನೆಗೆ ಪಾತ್ರರಾಗಿರುವ ವೀರರು ಪಂಚಮರೆಂದು ಪರಿಗಣಿತರಾಗಿರುವ ಮಾದಿಗರು. ಅವರನ್ನು ಆರಾಧಿಸುಗವ ಜನ ಅವರಿಗಿಂತಲೂ ಸ್ವಲ್ಪ ಮೇಲುಮಟ್ಟದವರೆಂದು ಭಾವಿಸಲಾಗಿರುವ ಗೊಲ್ಲ ಜನಾಂಗದವರು. ಈ ರೀತಿ ತಮಗಿಂತ ಕೀಳು ಜಾತಿಯವರನ್ನು ಮೇಲು ಜಾತಿಯವರು ಆರಾಧಿಸುವ ಇಲ್ಲಿನ ಪದ್ಧತಿ ವಿಶಿಷ್ಟವಾದುದು. ಭಾರತದ ಜಾತಿಯ ಪರಿಸರದಲ್ಲಿ ಮಾದಿಗರಂತಹ ಕೆಳಜಾತಿಯವರನ್ನು ಮೇಲು ವರ್ಗದವರು ಆರಾಧಿಸಲು ಇರುವ ಊಹ್ಯ ಕಾರಣಗಳೆಂದರೆ ಅವರಿಂದ ತಾವು ಉಪಕೃತರಾಗಿದ್ದೇವೆ ಎಂಬ ಕೃತಜ್ಞತಾ ಭಾವ ಮತ್ತು ಅಂತಹ ವೀರರಾದವರು ಮಡಿದಿರುವ ರೀತಿ. – ಈ ಎರಡೂ ಅವರ ಮನಸ್ಸಿನ ಮೇಲೆ ಪರಿಣಾಮ ಬೀರಿರಬೇಕು.

---

೧೧ W. T. Elmore : Dravidian Gods in Modern Hindusism, ಪು. ೧೧೦– ೧೨

ಈ ಸಂದರ್ಭದಲ್ಲಿ ಮತ್ತೊಂದು ಉದಾಹರಣೆಯನ್ನು ಗಮನಿಸುವುದು ಸೂಕ್ತ ಉತ್ತರ ಕರ್ನಾಟಕದಲ್ಲಿ ನಡೆಯುವ ಅನೇಕ ವೀರರ ಆರಾಧನೆಯಲ್ಲಿ ಬ್ರಾಹ್ಮಣರೂ ಸಹ ಪಾಲುಗೊಳ್ಳುವುದನ್ನು ಗಮನಿಸಬಹುದು. ಇಲ್ಲಿ ಬ್ರಾಹ್ಮಣರು ಭಾಗವಹಿಸುವುದು ಪೂಜಾರಿಗಳಾಗಿ ಮಾತ್ರ. ಇಂಥ ಕಡೆಗಳಲ್ಲಿಯೂ ಇವರು ತಾವು ಆರಾಧಿಸುವ ವೀರರನ್ನು ಹಿಂದೂ ದೇವತೆಗಳೊಂದಿಗೆ ಕೆಲಮಟ್ಟಿನ ಸಮೀಕರಣ ಮಾಡಿಯೇ ಆರಾಧಿಸುವುದು. ಇತರ ವರ್ಗದವರಂತೆಯೇ ಕೆಲವು ಬ್ರಾಹ್ಮಣರೂ ಇಂಥ ವೀರರಿಗೆ ಹರಕೆಗಳನ್ನು ಹೊತ್ತು ಪೂಜೆಗಳನ್ನು ನಡೆಯಿಸುತ್ತಾರೆ. ಆದರೆ ಇದು ಸಂಪೂರ್ಣವಾಗಿ ಪರಿಸರದಿಂದ ಪ್ರಭಾವಿತರಾಗಿ ಬಂದಿರುವ ನಂಬಿಕೆಯಾಗಿದೆ. ಆದರೆ ಯಾವ ಬ್ರಾಹ್ಮಣನೂ ತನ್ನ ವೈದಿಕ ಧರ್ಮದ ದೈವಗಳನ್ನು ನಂಬುವ ಹಾಗೆ ಈ ದೈವಗಳನ್ನು ಆರಾಧಿಸುವುದಿಲ್ಲ ಎಂಬುದು ಮುಖ್ಯ.

ಬೆಂಗಳೂರು ಜಿಲ್ಲೆ ಅನೇಕಲ್ಲು ತಾಲ್ಲೂಕಿನಲ್ಲಿರುವ ರೆಡ್ಡಿ ಜನಾಂಗದವರು ತಮ್ಮ ಗಂಡುಮಕ್ಕಳ ಮದುವೆಯ ಸಂದರ್ಭದಲ್ಲಿ ವೀರಗಾರರಿಗೆ ಎಡೆಯನ್ನು ನೀಡುತ್ತಾರೆ. ಮದುವೆಯ ಹಿಂದಿನ ದಿನ ಅರ್ಧರಾತ್ರಿಯಲ್ಲಿ ಬಿಳಿಯ ಸೀರೆಯನ್ನುಟ್ಟು ಮಹಿಳೆಯೊಬ್ಬಳು ನಡೆಯುತ್ತಾಳೆ. ಅವಳ ಹಿಂದೆ ಇತರರು ವೀರಗಾರರಿಗೆ ಎಡೆನೀಡಲು ಹೋಗುತ್ತಾರೆ. ಹಾಗೆ ಹೋಗುವಾಗ ಕೆಲವರು ಕತ್ತಿಗಳನ್ನು ಹಿಡಿದಿರುತ್ತಾರೆ. ಇವರೊಂದಿಗೆ ಮಂಗಳ ವಾದ್ಯದವರೂ ಹೋಗುತ್ತಾರೆ. ನಿರ್ದಿಷ್ಟವಾದ ಸ್ಥಳಕ್ಕೆ ಹೋಗಿ ವೀರಗಾರರಿಗೆ ಎಡೆಯನ್ನು ನೀಡುತ್ತಾರೆ. ಆನಂತರ ತಮ್ಮ ಹಿರಿಯರಿಗೆ ಹಿಂದೆ ಎಂದೋ ಸಹಾಯ ಮಾಡಿದ ಚಮ್ಮಾರನನ್ನು ನೆನೆದು ತಮ್ಮ ಊರಿನ ಚಮ್ಮಾರನನ್ನು ಕರೆಸಿ ಅವನಿಗೆ ಎಡೆಯಿತ್ತು ಅವರ ಕೆರವನ್ನು ಮದುವೆಯ ಗಂಡು ಮೆಟ್ಟುತ್ತಾನೆ. ಹಾಗೆಯೇ ತಮ್ಮ ಹಿರಿಯರು ಎಲ್ಲಿಂದಲೋ ಬರುವಾಗ ಹೊಳೆದಾಟಲು ಸಹಾಯ ಮಾಡಿದ ಅತ್ತಿ ಮರವನ್ನು ಸಹ ಪೂಜಿಸುತ್ತಾರೆ. ಈ ನಿದರ್ಶನವಂತೂ ಜನತೆಗೆ ತಮ್ಮ ಹಿರಿಯರ ಹಾಗೂ ತಮಗೆ ಸಹಾಯ ಮಾಡಿದ ವ್ಯಕ್ತಿಗಳನ್ನು ಸ್ಮರಿಸುವ ಕೃತಜ್ಞತಾ ಭಾವ ಹೇಗೆ ಆಚರಣೆಯಾಗಿ ಪರಿಣಮಿಸಿದೆ ಎಂಬುದನ್ನು ತಿಳಿಸುತ್ತದೆ.[೧೧೨]

ಪ್ರತಿ ವರ್ಷವೂ ಫೆಬ್ರುವರಿ ಅಥವಾ ಮಾರ್ಚ್ ತಿಂಗಳ ಮೊದಲ ವಾರಗಳಲ್ಲಿ ಕೋಲಾರ ಜಿಲ್ಲೆಯಲ್ಲಿರುವ ಹರಿಜನರು 'ಭಾರತಾಲ ಪುನ್ನಮ' ಅಂದರೆ, 'ಭಾರತದ ಹುಣ್ಣಿಮೆ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಅವರು ಆ ದಿನ ತಮ್ಮ ಮನೆಗೆ ಪ್ರತಿಯೊಂದೂ ಹೊಸ ವಸ್ತುವನ್ನು

---

೧೧೨ ಈ ವಿಷಯವನ್ನು ತಿಳಿಸಿದವರು ಶ್ರೀ ದೇವರಕೊಂಡಾರೆಡ್ಡಿಯವರು.

ತರುತ್ತಾರೆ. ಹಬ್ಬದ ಅಡಿಗೆ ಮಾಡುತ್ತಾರೆ. ಆ ದಿನ ಸಾಯಂಕಾಲ ಊರ ಮುಂದಿನ ಗಂಗಮ್ಮನ ಗುಡಿಯ ಮುಂದೆ ಒಂದು ಹೊಸ ಮಡಕೆಯ ತುಂಬಾ ನೀರು, ಹೊಸದಾರ ಮತ್ತು ಸೂಜಿಯೊಂದನ್ನು ಇಟ್ಟಿರುತ್ತಾರೆ. ಅವರ ಪ್ರಕಾರ ಮಹಾಭಾರತದ ಯುದ್ಧದಲ್ಲಿ ಭಾಗವಹಿಸಲು ಹೋದ ತಮ್ಮ ವೀರರು ಆ ದಿನ ಹಿಂತಿರುಗುತ್ತಾರೆ. ಅವರು ಯುದ್ಧದಲ್ಲಿ ದಣಿದು ಬಂದಿರುತ್ತಾರೆ. ಅದಕ್ಕಾಗಿ ಅವರಿಗೆ ಕುಡಿಯಲು ಮಡಕೆಯಲ್ಲಿ ನೀರು ; ಯುದ್ಧದಲ್ಲಿ ಅವರ ದೇಹ ಶಸ್ತ್ರಗಳಿಂದ ಹರಿದು ಹೋಗಿರುತ್ತದೆ. ಹರಿದು ಹೋದ ದೇಹದ ಭಾಗಗಳನ್ನು ಹೊಲಿದುಕೊಳ್ಳಲು ಈ ಸೂಜಿ ಮತ್ತು ದಾರ ಆ ದಿನ ರಾತ್ರಿಯೆಲ್ಲಾ ಹಾಡುಗಳನ್ನು ಹೇಳುತ್ತಾ ಕುಳಿತಿರುತ್ತಾರೆ. ಅವರ ಪ್ರಕಾರ ಆ ದಿನ ರಾತ್ರಿ ಮೂರು ನಕ್ಷತ್ರಗಳು ಒಂದರೊಡನೆ ಒಂದು ಸ್ಪರ್ಧಿಸುತ್ತಾ ಹೋಗುತ್ತವೆ. ಯಾವ ನಕ್ಷತ್ರ ಮುಂದೆ ಹೋಗುತ್ತದೆ ಎಂಬುದನ್ನು ಗುರುತಿಸಿ ಅವರು ಆ ವರ್ಷದ ಫಲಾಫಲಗಳನ್ನು ತಿಳಿಯುತ್ತಾರಂತೆ.[೧೧೩] ಇದು ತಮ್ಮ ಪೂರ್ವಜವೀರರನ್ನು ಸ್ಮರಿಸುವ ಒಂದು ಹಬ್ಬವೇ ಎಂಬುದರಲ್ಲಿ ಸಂಶಯವಿಲ್ಲ.

ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕ್ ನೆಲವಾಗಿಲು ಗ್ರಾಮದಲ್ಲಿ ವೀರನೊಬ್ಬನು ತನ್ನ ನಾಯಿಗಳ ಸಹಾಯದಿಂದ ಕಾಡು ಹಂದಿಯನ್ನು ಬೇಟೆಯಾಡುತ್ತಿರುವಂತೆ ಶಿಲ್ಪವಿರುವ ವೀರಗಲ್ಲು ಇದೆ. ಇದರ ಮೇಲೆ ಯಾವುದೇ ಲಿಪಿಯೂ ಇಲ್ಲ. (ಚಿತ್ರ. ೪೦) ಇದರ ಶಿಲ್ಪದ ಆಧಾರದ ಮೇಲೆ ಹೇಳಬಹುದಾದರೆ ಇದು ನೊಳಂಬರ ಕಾಲಕ್ಕೆ ಸೇರಿದ ವೀರಗಲ್ಲು ಆದ್ದರಿಂದ ಸುಮಾರು ಒಂಬತ್ತು – ಹತ್ತನೆಯ ಶತಮಾನಕ್ಕೆ ಸೇರಿದ್ದೆಂದು ಊಹಿಸಬಹುದು. ಈ ವೀರಗಲ್ಲನ್ನು ಆ ಊರಿನ ಜನರು ಇಂದಿಗೂ ವಿಶೇಷ ಸಂದರ್ಭಗಳಲ್ಲಿ ಆರಾಧಿಸುತ್ತಾರೆ. ಈ ವೀರಗಲ್ಲಿನ ಬಗ್ಗೆ ಆ ಊರಿನ ಜನರಲ್ಲಿ ಪ್ರಚಲಿತವಿರುವ ಕಥೆ ಈ ರೀತಿ ಇದೆ. ಸುತ್ತಮುತ್ತಲಿನ ಬೆಳೆಗಳನ್ನು ನಾಶ ಮಾಡುತ್ತಿದ್ದ ಕಾಡು ಹಂದಿಯನ್ನು ಬೇಟೆಯಾಡಲು, ಆ ಊರಿನ ಬೇಡರ ಕುಟುಂಬಕ್ಕೆ ಸೇರಿದ ಒಬ್ಬ ವ್ಯಕ್ತಿ ಯುಗಾದಿಯ ದಿನ ಹೋದನಂತೆ. ಆ ದಿನವೇ ಅದನ್ನು ಕೊಂದು ಅದರೊಂದಿಗೆ ಹೋರಾಡುವಾಗ ಅವನೂ ಸತ್ತನಂತೆ. ಅಂದಿನಿಂದ ಇಂದಿನವರೆಗೆ ಈ ಕಾರಣಕ್ಕಾಗಿ ಅಲ್ಲಿಯ ಬೇಡ ಜನಾಂಗ ಯುಗಾದಿಯ ಹಬ್ಬವನ್ನು ಆಚರಿಸುವುದಿಲ್ಲ. ಯುಗಾದಿಯಾದ ಮೂರುದಿನಗಳ ನಂತರ ಆ ಕಲ್ಲನ್ನು ಪೂಜೆಮಾಡಿ ಅನಂತರ ಯುಗಾದಿ ಹಬ್ಬವನ್ನು ಮಾಡುತಾರೆ.[೧೧೪] ಇದೇ

---

೧೧೩ ಈ ವಿಷಯವನ್ನು ತಿಳಿಸಿದವರು ಸಂತೇಕಲ್ಲ ಹಳ್ಳಿಯ ಹರಿಜನರ ಶನಿಗಿಪ್ಪಿಲ್ಲಪ ಅವರು

೧೧೪ ಈ ವಿಷಯವನ್ನು ತಿಳಿಸಿದವರು ನೆಲವಾಗಲು ಗ್ರಾಮದ ಎನ್. ಡಿ. ಬಜ್ಜಣ್ಣನವರು

ರೀತಿ ಯುಗಾದಿಯನ್ನು ಹಲವಾರು ಕಾರಣಗಳಿಗಾಗಿ ಆಚರಿಸದಿರುವ ಹರಿಜನರ ಕುಟುಂಬಗಳು ಕೋಲಾರ ಜಿಲ್ಲೆಯಲ್ಲಿವೆ. ಮುಳುಬಾಗಿಲು ತಾಲ್ಲೂಕ್ ಕುರುಡಮಲೆ ಗ್ರಾಮದ ಹರಿಜನರು ಯುಗಾದಿಯ ದಿನ ತಮ್ಮ ಹೆಣ್ಣು ಮಗಳೊಬ್ಬಳು ಒಂದು ಗೂಳಿಯಿಂದ ದುರ್ಮರಣವನ್ನು ಪಡೆದುದಕ್ಕಾಗಿ ಇಂದಿಗೂ ಯುಗಾದಿಯನ್ನು ಆಚರಿಸುವುದಿಲ್ಲ.[೧೧೫]

ದಕ್ಷಿಣ ಕರ್ನಾಟಕದ ಕರಾವಳಿಯಲ್ಲಿ ಮತ್ತು ಕೊಡಗು ಜಿಲ್ಲೆಗಳಲ್ಲಿ ಭೂತಾರಾಧನೆ ನಡಯುತ್ತದೆ ಭೂತ ಅಥವಾ ದೈವಗಳಾಗಿರುವ ವ್ಯಕ್ತಿಗಳಾಗಿರುವ ವ್ಯಕ್ತಿಗಳು ಬಹುಪಾಲು ವೀರರೆ ಆಗಿರುವುದನ್ನು ಸ್ಮರಿಸಿದರೆ, ಭೂತಾರಾಧನೆಯೂ ವೀರರ ಆರಾಧನೆಯೆಂದೇ ತೋರುತ್ತದೆ. ಈ ಸಂದರ್ಭಗಳಲ್ಲಿ ಜನ ವೀರನ್ನು ತಮ್ಮ ಜೀವನದ ಆಗುಹೋಗುಗಳ ಬಗ್ಗೆ ಕೇಳಿ ತಿಳಿದುಕೊಳ್ಳುತ್ತಾರೆ. ಕಾಂತಾಬಾರೆ, ಬೂದಾಬಾರೆ, ಕೋಟಿ – ಚೆನ್ನಯ್ಯ ಮುಂತಾದವರು ಈ ಭೂತ ಪ್ರಮುಖರು. ಇವಲ್ಲದೆ "ಸ್ಥಳೀಯ ದೆವ್ವಗಳೂ. ಭೂತಗಳೂ ಇವೆ. ಅವಕ್ಕೆ ವರ್ಷಕ್ಕೊಮ್ಮೆಯಾದರೂ ಪೂಜೆ ಸಲ್ಲಿಸಬೇಕು. ಈ ಆರಾಧನೆಯನ್ನು ಕೈಗೊಳ್ಳುವ ವಿಶಿಷ್ಟಪೂಜಾರಿ ವರ್ಗದವರೂ ಇದ್ದಾರೆ. ಅಂಥ ದೆವ್ವ ಭೂತಗಳಿಗೆ ಕೋಲ, ನೇಮ, ತುಂಬಲ ಮೊದಲಾದ ಹೆಸರುಗಳಿಂದ ನೃತ್ಯಪೂಜೆ ಸಲ್ಲುತ್ತದೆ"[೧೧೬] ಕಾಲಮಾನದ ದೃಷ್ಟಿಯಿಮದ ಇಂಥ ದೆವ್ವಗಳಲ್ಲಿ ಕೆಲವು ಸಾವಿರಾರು ವರುಷಗಳಿಂದಲೂ ಬಂದವು. ಇನ್ನು ಕೆಲವು ಈಚಿನವು. ಕೋಟಿ – ಚೆನ್ನಯ್ಯರೆಂಬ ಇಬ್ಬರು ವೀರ ಸೋದರರಿಗೆ ಇಂದು ದೈವಾರಾಧನೆಯ ಮನ್ನಣೆ ಸಲ್ಲುತ್ತದೆ. ಅವರದು ನಾಲ್ಕೈದು ಶತಮಾನಗಳ ಈಚಿನ ಕಥೆಯಿರಬಹುದು. ಊರ ಜನರು ಗೃಹ ಕೃತ್ಯಗಳಲ್ಲಿ ಬಂದ ಸಾವು, ನೋವು, ಸಂಕಷ್ಟಗಳಿಗೆ ಇಂಥ ಭೂತಗಲಿಗೆ ಹರಕೆ ಸಲ್ಲಿಸುತ್ತಾರೆ. ಹಾಗೆ ಅವನ್ನು ಸಲ್ಲಿಸುವ ಸಮಯ ನೃತ್ಯಾರಾಧನೆಯ ದಿವಸ."[೧೧೭]

ಕೋಟಿ ಚೆನ್ನಯ್ಯರ ಜನ್ಮಸ್ಥಳವಾಧ ಯನ್ಮೂರಿನಲ್ಲಿ ಈ ವೀರರಿಗೆ ಆರಾಧನೆ ನಡೆಯುತ್ತದೆ. ಕೋಟಿ ಚೆನ್ನಯ್ಯರ ಜಾತಿಗೆ ಸೇರಿದ ಜನರೇ ಇವರನ್ನು ಆರಾಧಿಸುಗುವುದ. ಈ ಆರಾಧನೆಯನ್ನು

---

೧೧೫ ಈ ವಿಷಯವನ್ನು ತಿಳಿಸಿದವರು ಕೆ. ಆರ್. ನರಸಿಂಹ, ಕುರುಡಮಲೆ ಇವರು.

೧೧೬ ಶಿವರಾಮ ಕಾರಂತ : 'ಮತಧರ್ಮಗಳಲ್ಲಿ ನೃತ್ಯಗಳು', ಬಿಡಿ ಬರಹಗಳು. ಸಂ. ಶೇಖರ ಇಡ್ಯ. ಪು. ೨೨೨

೧೧೭ ಅದೇ, ಪು. ೨೨೧

ಅವರು 'ಬೈದಾರ್ಲೆ' ಎಂಬುದಾಗಿ ಕರೆಯುತ್ತಾರೆ. ಇಲ್ಲಿ 'ಬೈದ್ಯ' ಎಂಬುದು 'ವೈದ್ಯ' ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ ಅಂದರೆ ಹಳೆಯ ಕಾಲದ ವೈದ್ಯ ಎಂದರ್ಥ. ಈ ಆರಾಧನೆಯನ್ನು ನಡೆಯಿಸುವ ಸಲುವಾಗಿಯೇ ಕೆಲವಾರು ವಿಶಿಷ್ಟ ಜಾತಿಯ, ವಿಶಿಷ್ಟ ವ್ಯಕ್ತಿಗಳೂ ಇರುತ್ತಾರೆ. ವೇಷಧಾರಿಗಳು ಮತ್ತು ಪೂಜಾರ ರಾತ್ರಿಯೆಲ್ಲಾ ವಿಶೇಷವಾದ ರೀತಿಯಲ್ಲಿ ನೃತ್ಯ ಮಾಡುತ್ತಾ ವೀರರನ್ನು ಆರಾಧಿಸುತ್ತಾರೆ. ನಿರ್ದಿಷ್ಟವಾದ ಸ್ಥಳದಲ್ಲಿ ಕತ್ತಿಯನ್ನು ಹಿಡಿದು ಅವರು ಬೆಳಕು ಹರಿಯುವ ತನಕ ನೃತ್ಯ ಮಾಡುವುದು ಕಣ್ಣಿಗೆ ತುಂಬ ಆಕರ್ಷಕವಾದ ನೋಟ.[೧೧೮]

ಈ ಆರಾಧನೆಯ ಮೂಲ ಉದ್ದೇಶವನ್ನಾಗಲೀ, ಸ್ವರೂಪವನ್ನಾಗಲೀ ನಾವು ಸಂಪೂರ್ಣವಾಗಿ ಗ್ರಹಿಸಬೇಕಾದರೆ, ಈ ಜಿಲ್ಲೆಗೆ ತುಂಬಾ ಹತ್ತಿರವಿದ್ದು, ಹಲವಾರು ವಿಷಯಗಳಲ್ಲಿ ಪರಸ್ಪರ ಕೊಡು – ಕೊಳೆಯನ್ನು ಮಾಡಿಕೊಂಡಿರುವ ಕೇರಳ ಪ್ರಾಂತದಲ್ಲಿ ಪ್ರಚಲಿತವಿರುವ, 'ತೈಯಂ', 'ದೈವಂ' ಎಂಬ ನೃತ್ಯರೂಪದ ವೀರರ ಆರಾಧನಾ ಸಂಪ್ರದಾಯವನ್ನು ಪರಿಚಯ ಮಾಡಿಕೊಳ್ಳುವುದು ಸೂಕ್ತವೆಂದು ತೋರುತ್ತದೆ.

ವೀರರನ್ನು ದೈವಗಳೆಂದು ಪರಿಗಣಿಸಿ ಕೆಲವು ಕಲ್ಪಿತ ವೀರರನ್ನು ಕೆಲವೊಮ್ಮೆ ಐತಿಹಾಸಿಕ ವೀರರನ್ನು ನೃತ್ಯದ ಮೂಲಕ ಆರಾಧನೆ ಮಾಡುವ ಈ ಜನಪದ ನೃತ್ಯವನ್ನು ತೈಯಂ ನೃತ್ಯ ಸಂಪ್ರದಾಯವೆಂದು ಗುರುತಿಸುತ್ತಾರೆ. ಈ ಒಂದು ನೃತ್ಯ ಸಂಪ್ರದಾಯವನ್ನು ತಮಿಳಿನ ಸಂಗಮ್ ಸಾಹಿತ್ಯದ ಕಾಲದಲ್ಲಿ ಪ್ರಚಲಿತವಿದ್ದ ವೇಲನ್ ಮತ್ತು ವಕೀರರ ಆರಾಧನೆಯ ಸಂಪ್ರದಾಯ ಗಳೊಂದಿಗೆ ಗುರುತಿಸಬಹುದಾಗಿದೆ. ಈ ರೀತಿ ನೃತ್ಯದ ಮೂಲಕ ಆರಾಧನೆಯನ್ನು ಪಡೆಯುವ ವೀರರ ಸಂಖ್ಯೆ ಅಪಾರ. ಇವರಲ್ಲಿ ಕಾಟಿವನೂರು ವೀರಪಯ್ಯಂ ಪಲ್ಲಿ ಚೆಂಡು, ತಚೋಲಿ ಒತೆನನ್ ಮುಂತಾದವರು ಮಲಬಾರ್ ಪ್ರಾಂತ್ಯದಲ್ಲಿ ಪ್ರಚಲಿತವಿರುವ ವೀರರು. ಇವರೆಲ್ಲರೂ ಕಾಲ್ಪನಿಕ ವೀರರು. ಇವರಿಗೆ ವರ್ಷಕ್ಕೊಮ್ಮೆ ಜಾತ್ರೆ ಮಾಡುವುದರ ಮೂಲಕ ಆರಾಧನೆ ಸಲ್ಲುತ್ತದೆ. ಆಗ ವೀರನು ವೇಷಧಾರಿಯ ಮೇಲೆ ಅವಾಹನೆಯಾಗಿ ಜನರ ಮುಂದಿನ ಆಗು – ಹೋಗುಗಳನ್ನು ತಿಳಿಸುತ್ತಾನೆ.

---

೧೧೮ K. Shivaram Karantha : 'Dance Rituals of South Kanara', Q.J.M.S XLVII, ಪು. ೮೪

ಮೂಲ ಭೂತವಾಗಿ ಈ ತೈಯ್ಯಂ – ದೈಯ್ಯಂ ಎಂಬ ನೃತ್ಯವು ವೇಲಂ ವೆರಿಯಾಟಲ್ ಎಂಬ ನೃತ್ಯದ ಕೆಲವಾರು ಮಾರ್ಪಾಟುಗಳ ಫಲವಾಗಿರುವಂತೆ ತೋರುತ್ತದೆ. ಈ ರೀತಿ ಮಾರ್ಪಟ್ಟ ನೃತ್ಯ ವೀರರ ಆರಾಧನೆಗೆ ಬಹು ಉತ್ತಮವಾದ ಮಾದರಿಯಾಯಿತು.[೧೧೯]

ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ 'ವೀರ' – 'ಬೀರ'ರ ಆರಾಧನೆ ಹಲವಾರು ದೃಷ್ಟಿಗಳಿಂದ ಗಮನಾರ್ಹವಾಗಿದೆ. ಇಲ್ಲಿ ಅನೇಕ ಹೆಸರಿನ ಬೀರೇದೇವರ ಸ್ಮಾರಕಗಳೂ, ಗುಡಿಗಳೂ ಇವೆ. ಕೆಲವೊಂದು ಬೀರೇ ದೇವರುಗಳಿಗೆ ಗುಡಿಗಳಿಲ್ಲದಿರುವುದೂ ಉಂಟು. ಒಂದೆಡೆ ಇಂಥ ಬೀರ ಕ್ಷೇತ್ರವಿದ್ದು ಅಲ್ಲಿ ಅನೇಕ ಹೆಸರಿನ ಹಲವಾರು ಬೀರೇ ದೇವರುಗಳು ಇವೆ. ಉದಾಹರಣೆಗೆ ತಾರೀಬೀರ, ರಣಗೋಳಿ ಬೀರ, ಕೆಂಡದ ಬೀರ ಹೀಗೆ ಈ ವೀರರ ಮೂರ್ತಿಗಳು ಬಿಲ್ಲು, ಬಾಣ, ಖಡ್ಗ ಮುಂತಾದ ಆಯುಧಗಳನ್ನು ಹಿಡಿದಿರುವಂತೆ ಚಿತ್ರಿತವಾಗಿವೆ. ಈ ಬೀರ ದೇವರುಗಳಿಗೆ ಜಾತಿಮತ ಭೇದವಿಲ್ಲದೆ ಎಲ್ಲಾ ಜಾತಿಯ ಜನರೂ, ವರ್ಷಕ್ಕೊಮ್ಮೆಯಾದರೂ (ಕೆಲವೊಮ್ಮೆ ಎರಡು ಸಲವೋ, ಮೂರು ಸಲವೋ) ಪೂಜಿಸುವ ಸಂಪ್ರದಾಯವಿದೆ. ತಮ್ಮ ತಮ್ಮ ವೈಯಕ್ತಿಕ ಸಂಕಷ್ಟಗಳನ್ನು ಪರಿಹಾರ ಮಾಡಬೇಕೆಂದು ಬೇಡಿ ಹರಕೆ ಹೊತ್ತವರು ಪ್ರತ್ಯೇಕವಾಗಿ ಪೂಜಿಸುವುದೂ ಉಂಟು. ಈ ಬೀರೇದೇವರ ಪೂಜಾರಿಗಳು ಸಾಮಾನ್ಯವಾಗಿ ಮೊಗವೀರ, ಕುಂಬಾರರ ಜಾತಿಯವರು. ಇಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಎಲ್ಲ ಜಾತಿಯ, ಎಲ್ಲ ಪಂಗಡದವರೂ ನಿಗದಿ ಮಾಡಿರುವ ವರ್ಗಣಿಯ ದೇಣಿಗೆ ಸಲ್ಲಿಸುತ್ತಾರೆ. ಹಬ್ಬಕ್ಕೆ ಮೂರು ನಾಲ್ಕು ದಿನಗಳ ಮೊದಲೇ ದೇವರ ಸಂಕೇತಗಳಾದ ಕಲಶ ಮುಖವಾಡವನ್ನು ಹೊತ್ತ ಪಾತ್ರಿಗಳ ಗುಂಪು ಊರಿನ ಗುಡಿಯವರೆಗೂ ಮೆರವಣಿಗೆ ಹೊರಡುತ್ತದೆ. ಕೆಂಡದಬೀರೇದೇವರ ಎದುರು ಹಾಕಿರುವ ದೊಡ್ಡ ಕೆಂಡದ ರಾಶಿಯ ಮೇಲೆ ಈ ಮುಖವಾಡವನ್ನು ಹೊತ್ತ ಪಾತ್ರಿಗಳು ನಡೆದಾಡುವುದು ಮತ್ತು ಕೆಂಡಗಳನ್ನು ಮೈಮೇಲೆ ಸುರುವಿಕೊಳ್ಳುವುದೇ ಮುಂತಾದ ಆಚರಣೆಗಳು ಇವೆ. (ಚಿತ್ರ ೨೨). ಪ್ರತಿ ದೇವರಿಗೂ ಈ ಸಂದರ್ಭದಲ್ಲಿ ಕುರಿ – ಕೋಳಿಗಳನ್ನು ಬಲಿಕೊಡುವ ಪದ್ಧತಿಯುಂಟು.[೧೨೦]

---

೧೧೯ K. N. N. Kurup : 'Hero stones and heroworship in Kerala', Paper presented at Seminar on Memorial Stones, held at Dharwar. (Jan. 1975)

೧೨೦ ಈ ಬಗ್ಗೆ ವಿವರವಾದ ಮಾಹಿತಿ ನೀಡಿದವರು ಎಸ್. ಎಸ್. ಜೋಶಿ, ಬೆತ್ತಗೇರಿ. ಕುಮುಟ ತಾಲ್ಲೂಕ್ ಅವರು

ದೈವತ್ವದ ಮಟ್ಟಕ್ಕೇರಿದ ವೀರರು

ವೀರನ ಪರಾಕ್ರಮ, ಸಚ್ಚಾರಿತ್ರ್ಯ, ಸಂಯಮ ಶೀಲತೆ, ಅವನಿಗೆ ಒದಗಿದ ಕಷ್ಟಗಳ ಪರಂಪರೆ, ಅವನ ಜೀವನದ ದುರಂತ ಇವುಗಳಿಂದ ಆಕರ್ಷಿತರಾದ ಸಮಾಜ ಅವನನ್ನು ಆರಾಧಿಸಲು ಮೊದಲಿಡುತ್ತದೆ. ಮೇಲೆ ಹೇಳಿದ ಅಂಶಗಳೇ ಪ್ರಮುಖವಾಗಿ ಅವನ ಕೆಲವಾರು ದೌರ್ಬಲ್ಯಗಳನ್ನು ಮರೆತು ಅವನನ್ನು ತಮ್ಮ ನಾಯಕನನ್ನಾಗಿಯೋ, ಕುಲದೇವತೆಯನ್ನಾಗಿಯೋ ಸ್ವೀಕರಿಸುವುದು ಪ್ರಾರಂಭವಾಗುತ್ತದೆ. ಒಬ್ಬ ವ್ಯಕ್ತಿ ಹೋರಾಟದಲ್ಲಿ ಸೋತು ಸತ್ತ ಎಂಬ ಕಾರಣಕ್ಕಾಗಲಿ, ಅವನು ಹೇಗೋ ಗೆದ್ದು ಮಡಿದನೆಂಬ ಕಾರಣಕ್ಕಾಗಲೀ ಅವನಿಗೆ ಆರಾಧನೆಯ ಗೌರವ ದೊರೆಯುವುದಿಲ್ಲ. ಅವನು ವೈಯಕ್ತಿಕ ಜೀವನದಲ್ಲಿ ಜನ ಬಯಸುವ ಕೆಲವು ಸದ್ಗುಣಗಳು, ಜೀವನದಲ್ಲಿ ಬಂದ ಕಷ್ಟ ಪರಂಪರೆಯನ್ನೂ, ಅವನು ತೋರುವ ಆದರ್ಶ ಗುಣಗಳು ಮತ್ತು ಅವನು ಅನುಭವಿಸಿದ ಹಾಗೂ ಅದರ ಬಗ್ಗೆ ಜನರಿಗಿರುವ ಅನುಕಂಪ – ಇವುಗಳನ್ನು ವೀರನ ಆರಾಧನೆಗೆ ಮೂಲ ಪ್ರೇರಣೆಗಳಾದವು. ಈ ಹಿನ್ನೆಲೆಯಲ್ಲಿಯೇ ಜನ ಅವನಿಗೆ ವೀರ ಸ್ವರ್ಗವನ್ನು ಕೊಟ್ಟು ಅವನನ್ನು ತಮ್ಮ ಆದರ್ಶ ಪುರುಷನನ್ನಾಗಿ ಸ್ವೀಕರಿಸಿ ಕುಲದೇವತೆಯನ್ನಾಗಿ ಮಾಡಿಕೊಳ್ಳುವುದು.

ಈ ಮೇಲಿನ ಅಭಿಪ್ರಾಯ ವೀರರ ಆರಾಧನೆಯ ಆರಂಭ ಕಾಲಕ್ಕಾಗಲೀ ಪರಿಸರಕ್ಕಾಗಲೀ ಖಂಡಿತ ಅನ್ವಯವಾಗುವುದಿಲ್ಲ. ಮಾನವ ತನ್ನ ನಾಗರಿಕತೆ, ಸಂಸ್ಕೃತಿಗಳನ್ನು ಬೆಳೆಸಿಕೊಂಡಂತೆ ನಿರ್ಮಿಸಿದ ಜೀವನ ಮೌಲ್ಯಗಳಿಗನುಗುಣವಾಗಿ 'ವೀರ' ಎಂಬುವನಿಂದ ಕೆಲವಾರು ವಿಶಿಷ್ಟ ಗುಣಗಳನ್ನು ಅಪೇಕ್ಷಿಸಲು ಪ್ರಾರಂಭಿಸಿದ. ಅಂಥ ಒಂದು ಸ್ಥಿತಿಯಲ್ಲಿ ವೀರನನ್ನು ತಮ್ಮ ಆರಾಧನೆಯ ಪುರುಷನನ್ನಾಗಿ ಆರಿಸುವುದಕ್ಕೆ ಇದ್ದ ಹಿನ್ನೆಲೆಯೇ ಬೇರೆ ಇತ್ತು. ಅಂಥ ಹಿನ್ನೆಲೆಯನ್ನು ಕುರಿತು ಅನ್ವಯಿಸಬಹುದಾದ ಅಭಿಪ್ರಾಯವಾಗಿದೆ.

ಹೆಸರಿಸುವಂತಹ ರಾಜವಂಶದಲ್ಲಿ ಹುಟ್ಟದಿದ್ದರೂ, ಗಮನಾರ್ಹವಾದ ರಾಜ್ಯವನ್ನು ನಿರ್ಮಾಣ ಮಾಡದಿದ್ದರೂ, ಜನರ ಗೌರವಕ್ಕೆ ಪಾತ್ರನಾದವನು, ಒಂದು ಜನಾಂಗದವರ ಕುಲದೈವವಾದವನು ಎಂದರೆ ಕುಮಾರರಾಮ. ಇವನೊಡನೆ ಹೋಲಿಕೆಗೆ ಪಾತ್ರರಾಗುವವರು ಬೇರೆ ಯಾರೂ ಸಿಗುವುದಿಲ್ಲ. ತನ್ನ ಪರಾಕ್ರಮ, ಸಂಯಮ, ಸಚ್ಚಾರಿತ್ರ್ಯ ಮತ್ತು ಪರನಾರೀಸೋದರತ್ವ ಮುಂತಾದ ಗುಣ ವಿಶೇಷಗಳಿಂದ ಹೆಸರು ಪಡೆದವನು. ತನ್ನ ಚಿಕ್ಕಮ್ಮನ ಕುಹಕದಿಂದ ಉಂಟಾದ ಕಷ್ಟ ಪರಂಪರೆಯಿಂದ ಜನರ ಅನುಕಂಪೆಗೆ ಪಾತ್ರನಾದವನು.

ಅವನ ಬಗ್ಗೆ ಸಾಹಿತ್ಯಕೃತಿಗಳನ್ನು ರಚನೆ ಮಾಡಿದವರು, ಅವನ ಆಸ್ಥಾನ ಕವಿಗಳಲ್ಲ ; ಕುಮಾರ ರಾಮನ ಆದರ್ಶ ಗುಣಗಳು ಐತಿಹ್ಯಗಳಾಗಿ, ಕಥೆಗಳಾಗಿ ಒಂದೊಂದು ರೀತಿಯಲ್ಲಿ ಬಾಯಿಂದ ಬಾಯಿಗೆ ಬಂದವು. ಜನಮನದ ಈ ಕಥೆಗಳನ್ನು ಕವಿಗಳು ಜೋಡಿಸಿ ಕಾವ್ಯ ಬರೆದರು. ಅವನ ಬಗ್ಗೆ ಕಾವ್ಯ ಬರೆದವರೆಲ್ಲ ಅವನನ್ನು ಅವತಾರ ಪುರುಷನೆಂದೇ ಭಾವಿಸಿದ್ದಾರೆ. "ಈ ಕಲ್ಪನೆ ನಂಜುಂಡನಲ್ಲಿ ಖಚಿತವಾಗಿಯೂ, ಪಾಂಚಾಳ ಗಂಗನಲ್ಲಿ ಸ್ಥೂಲವಾಗಿಯೂ, ಮಹಾಲಿಂಗಸ್ವಾಮಿಯಲ್ಲಿ ಹಲಕೆಲವು ಬದಲಾವಣೆಗಳ ಮೂಲಕವೂ ಪ್ರತಿಪಾದಿತವಾಗಿದೆ.[೧೨೧]

ಕುಮಾರರಾಮನನ್ನು ಆರಾಧಿಸುವ ಸಂಪ್ರದಾಯ ಅವನು ಸತ್ತ ಕೂಡಲೇ ಆರಂಭವಾದಂತೆ ತೋರುತ್ತದೆ. "ಕುಮ್ಮಟದ ಕಾಳಗವನ್ನು ವರ್ಣಿಸುವ ನ್ಯೂನಿಜ್ಞನು ಆ ಯುದ್ಧದಲ್ಲಿ ಸತ್ತರಾಜನನ್ನು (ಕಂಪಿಲ) ಜನಗಳು ಇಂದಿಗೂ ದೇವತೆಯೆಂದು ಪೂಜಿಸುತ್ತಾರೆಂದು ಹೇಳಿರುತ್ತಾನೆ. ಕುಮಾರರಾಮನಿಗೆ ಇಂದಿಗೂ ಸಲ್ಲಿಸುತ್ತಿರುವ ಪೂಜೆ ಪ್ರಶಸ್ತಿಗಳನ್ನು ನೋಡಿದರೆ ನ್ಯೂನಿಜ್ಞನ ಈ ಮಾತು ಕಂಪಿಲನಿಗಿಂತಲೂ ಕುಮಾರ ರಾಮನಿಗೇ ಅನ್ವಯಿಸುವಂತಿದೆ." ಎಂಬ ಜಿ. ವರದರಾಜಾರಾಯರ ಅಭಿಪ್ರಾಯವು ಸಮಂಜಸವಾಗಿದೆ.[೧೨೨]

ಕುಮಾರರಾಮನು ಬೇಡರ ಕುಲಕ್ಕೆ ಹೇಗೆ ದೇವರಾದ ಎಂಬ ಅಂಶದ ವರ್ಣನೆ ಬಾಲರಾಮನ ಸಾಂಗತ್ಯದಲ್ಲಿ ಬರುತ್ತದೆ. ದೆಹಲಿಯಿಂದ ಮರಳಿ ಬಂದ ರಾಮನ ತಲೆಯನ್ನು ಅವನ ಸಂಬಂಧಿಗಳು ಸಂಸ್ಕಾರ ಮಾಡುತ್ತಾರೆ. ಆಗ ಅಲ್ಲಿಗೆ ಇಡೀ ಕುಮ್ಮಟ ನಗರವೇ ಬಂದಿರುತ್ತದೆ. ಆಗ ಹರಿಹರದೇವಿ "ಕುಲಕ್ಕೆಲ್ಲ ದೇವರಾಗು" ಎಂದು ಹರಿಸಿದಳು. ಕಂಪಿಲ, ಬೈಚಪ್ಪ ಮೊದಲಾದವರು ತಲೆಬಾಗಿ ನಮಸ್ಕರಿಸಿದರು. ಹುಟ್ಟು ಬಂಜೆಯರಿಗೆ ಸಂತಾನವನ್ನು ಕರುಣಿಸುವವನೆಂದೂ, ಬೇಡರ ಕುಲದವರು ಜಾತ್ರೆಯನ್ನು ನಡೆಸಬೇಕೆಂದೂ, ರಾಮಯ್ಯನು ದೇವರಾದನೆಂದೂ ಅವರು ಸಾರಿ ಹೇಳಿದರು.

ಕುಮ್ಮಟದುರ್ಗದ ಬಳಿಯಲ್ಲಿಯೇ ಹೊಸಮಲೆಯ ದುರ್ಗವೆಂಬ ಬೆಟ್ಟವಿದೆ. "ಇಲ್ಲಿ ಪಾದ್ರಿ ಬಂಗಲೆ ಎಂದು ಕರೆಯುವ ಕಟ್ಟಡದ ಉತ್ತರಕ್ಕೆ ಸುಮಾರು ಐನೂರು ಗಜ ದೂರದಲ್ಲಿರುವ ನೆಲಗಲ್ಲಿನಲ್ಲಿ ಹರಿಯಾಲಚ್ಚಮ್ಮನ ಬಚ್ಚಲೆಂಬ ಒಂದು ತೊಟ್ಟಿಲು ಇರುತ್ತದೆ. ಇದರ ಚದರ ಸುಮಾರು ಮೂರು ಅಡಿ, ಆಳ ಎರಡಡಿ. ಇದರ ಬಳಿಯಲ್ಲಿ ಇದಕ್ಕಿಂತಲೂ ವಿಸ್ತಾರವಾದ

---

೧೨೧ ಜಿ. ವರದರಾಜರಾವ್ : ಕುಮಾರರಾಮನ ಸಾಂಗತ್ಯಗಳು. ಪು. ೧೮೩

೧೨೨ ಅದೇ, ಪು. ೨೮೪ –೮೫

ಆದರೂ ಆಳವಿಲ್ಲದ ತೊಟ್ಟಿ ಇರುತ್ತದೆ. ಇದರ ಪಕ್ಕದಲ್ಲಿ ಹಸಿರುಕಲ್ಲಿನ ಒಂದು ಚಪ್ಪಡಿ ಇದೆ. ಇದರಲ್ಲಿ ಪದ್ಮಾಸನ ಹಾಕಿಕೊಂಡಿರುವ ಒಂದು ಜೈನ ವಿಗ್ರಹವಿದೆ. ಆದರೆ ಕೆಳಗೆ ಕಾಳಗದ ದೃಶ್ಯವನ್ನು ತೋರಿಸುವ ಒಂದು ಕೆತ್ತನೆ ಇದೆ. ಜಾತ್ರೆಯ ಸಮಯದಲ್ಲಿ ಒಬ್ಬ ಬೇಡರ ಹೆಂಗಸು ಕಾಟಣ್ಣ ಮತ್ತು ರಾಮನಾಥನ ಶಿರಸ್ಸುಗಳನ್ನು ಹೋಲುವ ಎರಡು ಕೃತಕ ರುಂಡಗಳನ್ನು ತನ್ನ ತೊಡೆಯಮೇಲೆ ಇಟ್ಟುಕೊಂಡು, ಈ ತೊಟ್ಟಿಯಲ್ಲಿ ಕುಳಿತು ಅಭಿಷೇಕವಾದ ಮೇಲೆ ಹಿಂತಿರುಗುತ್ತಾಳೆ. ಇದು ರಣದಲ್ಲಿ ತಮ್ಮ ತಲೆಗಳನ್ನು ತೆತ್ತ ಕಾಟಣ್ಣ ಮತ್ತು ರಾಮಣ್ಣ ಇವರ ಸ್ಮರಣಸೂಚಕವಾದ ಆಚರಣೆಯೇ ಸರಿ."[೧೨೩]

ಕುಮಾರರಾಮನಷ್ಟು ಆರಾಧಕರ ಸಂಖ್ಯೆಯನ್ನು ಪಡೆಯದಿದ್ದರೂ ಇಡೀ ಒಂದು ಊರಿನ ಜನರ ಆರಾಧನೆಗೆ ಪಾತ್ರನಾಗಿರುವ ಮತ್ತೊಬ್ಬ ವೀರ ಕೋಡೀರ್ಲಪ್ಪ ಈತನ ಆರಾಧನೆ ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕ್ ನಗರಗೆರೆ ಎಂಬ ಗ್ರಾಮದಲ್ಲಿ ಇಂದಿಗೂ ನಡೆಯುತ್ತದೆ. ಈತನ ಆರಾಧನಾ ಸಂಪ್ರದಾಯದ ಅಧ್ಯಯನ ಹಲವಾರು ದೃಷ್ಟಿಗಳಿಂದ ಕುತೂಹಲವೂ, ಗಮನಾರ್ಹವೂ ಆಗಿದೆ. (ಚಿತ್ರ ೨೪)

ನಗರಗೆರೆಯ ಪೂರ್ವಕ್ಕೆ ರಾಮೇಶ್ವರಸ್ವಾಮಿ ದೇವಾಲಯವಿದೆ. ಇದರ ಪಕ್ಕದಲ್ಲಿ ಸುಮಾರು ಮೂವತ್ತು, ಐವತ್ತು ಅಡಿ ಉದ್ದ ಅಗಲದ ಪ್ರಾಕಾರದಲ್ಲಿ ಹಲವಾರು ವೀರಗಲ್ಲುಗಳು ಇವೆ. ಇವುಗಳನ್ನು ಅಲ್ಲಿನ ಜನ ವೀರಗಾರರು ಎಂದು ಕರೆಯುತ್ತಾರೆ. ಈ ಪ್ರಾಕಾರದ ಒಳಗೆ ಮತ್ತೊಂದು ಸಣ್ಣ ಪ್ರಾಕಾರವಿದೆ. ಇಲ್ಲಿ ಮೂರು ವೀರಗಲ್ಲುಗಳು ಇವೆ. ಇವುಗಳಲ್ಲಿ ಬಲಗಡೆಗೆ ಇರುವ ವೀರಗಲ್ಲೊಂದನ್ನು ಕೋಡೀರ್ಲಪ್ಪ ಕೋಡಿಲಿಂಗೇಶ್ವರ ಎಂಬುದಾಗಿ ಕರೆಯುತ್ತಾರೆ. ಈ ವೀರಗಲ್ಲು ಹನ್ನೆರಡು ಅಡಿ ಎತ್ತರ, ಐದು ಅಡಿ ಅಗಲವಿದೆ. ವೀರಗಲ್ಲಿನ ಮೇಲೆ ಇರುವ ಶಿಲ್ಪದ ವಿವರಗಳು ಈ ರೀತಿ ಇದೆ : ವೀರನೊಬ್ಬನು ಎಡಗೈಯಲ್ಲಿ ಗುರಾಣಿಯನ್ನೂ ಬಲಕೈಯಲ್ಲಿ ಕತ್ತಿಯನ್ನೂ ಹಿಡಿದು ಆಲೀಢ ಭಂಗಿಯಲ್ಲಿ ನಿಂತಿದ್ದಾನೆ. ಅವನು ರಾಜಪ್ರಮುಖ ಎಂಬುದನ್ನು ವ್ಯಕ್ತಪಡಿಸುವುದರ ಸಲುವಾಗಿ ರಾಜಸೇವಕನೊಬ್ಬ ರಾಜಛತ್ರಿಯನ್ನು ಹಿಡಿದಿರುವಂತೆಯೂ, ಅವನ ಪಕ್ಕದಲ್ಲಿ ಪಟ್ಟದ ಕುದುರೆ ನಿಂತಿರುವಂತೆಯೂ ಚಿತ್ರ ಬಿಡಿಸಲಾಗಿದೆ. ಉಳಿದ ಯುದ್ಧದ ವಿವರಗಳನ್ನು

---

೧೨೩ ಮೈ. ಹ. ರಾಮಶರ್ಮ : ರಣಧೀರರಾಮನಾಥ. ಪು. ೮೬

ಸಹ ಬಿಡಿಸಲಾಗಿದೆ. ಇಲ್ಲಿಯೇ ಇರುವ ಇನ್ನೆರಡು ವೀರಗಲ್ಲುಗಳು ಆ ಶಿಲ್ಪದ ವ್ಯಕ್ತಿಗಳು ಆತ್ಮಬಲಿಯನ್ನು ಮಾಡಿಕೊಳ್ಳುತ್ತಿರುವಂತೆ ಶಿಲ್ಪವನ್ನು ಹೊಂದಿವೆ.

ಈ ಗುಡಿಯ ಹೊರಗಡೆ ಇರುವ ವೀರಗಲ್ಲುಗಳು ಬಹುಪಾಲು ಆತ್ಮಬಲಿಯ ಶಿಲ್ಪದ ವಿವರಣೆಗಳನ್ನು ಹೊಂದಿವೆ. ಎಲ್ಲೋ ಕೆಲವು ತುರುಗಾಳಗದಲ್ಲಿ ಮಡಿದ ವೀರರ ವಿವರಣೆಗಳನ್ನು ಹೊಂದಿವೆ.

ಇಲ್ಲಿನ ಆರೇಳು ವೀರಗಲ್ಲುಗಳ ಮೇಲೆ ಮಾತ್ರ ಶಾಸನಗಳು ದೊರೆಯುತ್ತವೆ. ಉಳಿದ ವೀರಗಲ್ಲುಗಳ ಮೇಲೆ ಲಿಪಿಯು ಇದ್ದಂತೆ ಕಂಡು ಬರುವುದಿಲ್ಲ. ಜನ ಕೋಡೀರ್ಲಪ್ಪನೆಂದು ಭಾವಿಸುವ ವೀರಗಲ್ಲಿನ ಮೇಲೆ ಶಾಸನವಿದೆ. ಇದು ಪ್ರಕಟವಾಗಿದೆ.[೧೨೪] ಇಲ್ಲಿನ ವೀರಗಲ್ಲುಗಳ ಪಾಠ ಅಸ್ಪಷ್ಟವಾಗಿರುವುದರಿಂದ ಲಿಪಿಯ ಆಧಾರದ ಮೇಲೆ ಇವುಗಳ ಕಾಲವನ್ನು ಕ್ರಿಶ. ಸುಮಾರು ೯೦೦ ಎಂಬುದಾಗಿ ಶ್ರೀ ರೈಸ್ ಅವರು ನಿರ್ಧರಿಸಿದ್ದಾರೆ.[೧೨೫] ಇವು ತಮ್ಮನ್ನು ಚೋಳರೆಂದು ಕರೆದುಕೊಂಡ ಯಾವುದೋ ಸಣ್ಣ ರಾಜವಂಶದ ಅರಸರ ಶಾಸನಗಳಿರಬೇಕೆಂದು ಶ್ರೀ ರೈಸ್ ಅವರು ಅಭಿಪ್ರಾಯಪಡುತ್ತಾರೆ. ಇಲ್ಲಿ ಚೋಳ ಮುತ್ತರಸನು ರಾಜವಾಡಿ ಆರುನೂರು ಮತ್ತು ಇದಕ್ಕೆ ಸೇರಿದಂತೆ ರಾಮಡಿ ಮೂರುನೂರನ್ನು ಆಳುತ್ತಿದ್ದನೆಂದು ಇಲ್ಲಿನ ಶಾಸನಗಳು ಹೇಳುತ್ತವೆ. ಇಲ್ಲಿನ ಒಂದು ಶಾಸನ ಮೆಯಿಂದಚೋಳ ಮಹಾರಾಜನ ಹೆಸರನ್ನು ಉಲ್ಲೇಖಿಸುತ್ತದೆ.

ಕೋಡೀರ್ಲಪ್ಪನನ್ನು ಲಿಂಗಬಲಿಜಿಗರು ಎಂಬ ವೀರಶೈವ ಪಂಗಡದವರು ಪರಂಪರಾನು ಗತವಾಗಿ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಇದಕ್ಕಾಗಿ ಇವರಿಗೆ ಮಾನ್ಯದ ಜಮೀನು ಇದೆ. ಈ ವೀರಗಲ್ಲನ್ನು ಅವರು ಕೋಡಿಲಿಂಗೇಶ್ವರಸ್ವಾಮಿ ಎಂಬುದಾಗಿ ಕರೆಯುತ್ತಾರೆ. ಈ ದೇವಾಲಯಕ್ಕೆ ಪ್ರಾಕಾರವಿದೆ. ಹೊದಿಕೆ ಇಲ್ಲದಿರುವುದಕ್ಕೆ ಅವರು ನೀಡುವ ಕಾರಣವಿದು ; ಮೊದಲಿಗೆ ಯಾರೋ ಈ ಗುಡಿಗೆ ಹೊದಿಕೆ ಹಾಕಲು ಪ್ರಯತ್ನಿಸಿದರಂತೆ ; ಆಗ ಕೋಡೀರ್ಲಪ್ಪನೇ ಕನಸ್ಸಿನಲ್ಲಿ ಬಂದು ತನ್ನ ದೇವಾಲಯಕ್ಕೆ ಯಾವುದೇ ರೀತಿಯ ಹೊದಿಕೆ ಇರಬಾರದೆಂದು ಹೇಳಿದನಂತೆ. ಆ ಮಾತನ್ನೂ ಮೀರಿ ಕೆಲವರು ಹಾಕಿದ್ದ ಹೊದಿಕೆಯು ನಿಲ್ಲಲಿಲ್ಲವಂತೆ. ಆದ್ದರಿಂದ ಹೊದಿಕೆಯಾಗಿ ತರಗೆಲೆಗಳನ್ನು ಮಾತ್ರ ಹಾಕುತ್ತಾರೆ.

ಕೋಡೀರ್ಲಪ್ಪನಿಗೆ ಸೋಮವಾರದ ದಿನ ವಿಶೇಷ ಪೂಜೆ ನಡೆಯುತ್ತದೆ. ಪ್ರತಿ ವರ್ಷ ವೈಶಾಖ ಮಾಸದಲ್ಲಿ ಐದುದಿನಗಳ ಕಾಲ ಭಾರಿ ಪ್ರಮಾಣದಲ್ಲಿ ಜಾತ್ರೆ ನಡೆಯುತ್ತದೆ. ಇದು

---

೧೨೪ E. C. X Gd 76

೧೨೫ ಅದೇ, ಪ್ರಸ್ತಾವನೆ, ಪು. XXIV

ಸುತ್ತುಮುತ್ತು ನಡೆಯುವ ಜಾತ್ರೆಗಳಂತೆ ಜಾನುವಾರಗಳ ವ್ಯಾಪಾರವನ್ನು ನಿಮಿತ್ತ ಮಾಡಿಕೊಂಡಿಲ್ಲ. ಇದು ಸಂಪೂರ್ಣವಾಗಿ ಕೋಡೀರ್ಲಪ್ಪನ ಆರಾಧನೆಯ ಜಾತ್ರೆಯಾಗಿದೆ. ಇದೇ ಊರಿನಲ್ಲಿ ಸಲ್ಲಾಪುರಮ್ಮ ಎಂಬ ಗ್ರಾಮದೇವತೆ ಇದ್ದಾಳೆ. ಆದರೆ ಆಕೆಗಿಂತಲೂ ಹೆಚ್ಚು ಮಹತ್ವ ಈ ಕೋಡೀರ್ಲಪ್ಪನಿಗೆ. ಮಳೆಬೆಳೆಗಳು ಆಗದಿದ್ದಾಗ, ಜನಗಳಿಗೆ, ದನಗಳಿಗೆ ರೋಗರುಜಿನಗಳು ಬಂದಾಗ ಊರ ಜನ ಈ ಕೋಡೀರ್ಲಪ್ಪನಿಗೆ ಹರಕೆ ಹೊತ್ತು ದೀಪಗಳನ್ನು ಹೊರುವ ಸಂಪ್ರದಾಯವಿದೆ.

ಕೋಡೀರ್ಲಪ್ಪನ ಭಕ್ತರಲ್ಲಿ ಎಲ್ಲಾ ಜಾತಿಯವರೂ ಇದ್ದಾರೆ. ಮುಖ್ಯವಾಗಿ ರೆಡ್ಡಿಗರು, ಒಕ್ಕಲಿಗರು, ಮ್ಯಾಸನಾಯಕರು ವಿಶೇಷವಾದ ಭಕ್ತರು. ಈ ದೇವರ ಭಕ್ತರು ತುಮಕೂರು ಜಿಲ್ಲೆಯ ಮಧುಗಿರಿ ಮತ್ತು ಕೊರಟಗೆರೆ ತಾಲ್ಲುಕುಗಳಲ್ಲಿಯೂ ಇದ್ದಾರೆ. ತಮಗೆ ಅನುಕೂಲವಾದಾಗ ಬಂದು, ಇಲ್ಲಿನ ದೇವಾಲಯದಲ್ಲಿ ತಮ್ಮ ಮಕ್ಕಳಿಗೆ ಚೌಲ ಮಾಡಿಸಿಕೊಂಡು ಹೋಗುತ್ತಾರೆ. ಈ ಕೋಡೀರ್ಲಪ್ಪನ ದೇವಾಲಯ ಕೊರಟಗೆರೆ ತಾಲ್ಲೂಕ್ ಶಂಭೇನಹಳ್ಳಿಯಲ್ಲಿಯೂ ಇದೆ. ಇಲ್ಲಿ ವಿಗ್ರಹವೇನೂ ಇಲ್ಲ. ಆದರೆ ರಥಗಾಲಿಗಳೆರಡನ್ನು ಇಟ್ಟುಕೊಂಡು ಅದನ್ನೇ ಕೋಡೀರ್ಲಪ್ಪ ಎಂದು ಆರಾಧನೆ ಮಾಡುತ್ತಾರೆ.

ಈ ಕೋಡೀರ್ಲಪ್ಪನಿಗೆ ಸಂಬಂಧಿಸಿದ ಹಾಗೆ ಜನರಲ್ಲಿ ಕತೆಗಳು ಐತಿಹ್ಯಗಳು ಪ್ರಚಲಿತವಿವೆ. ಆತನೊಂದಿಗೆ ಸಂಬಂಧವನ್ನು ಹೊಂದಿದ್ದ ಒಂದು ಮನೆತನದವರು ಇಂದಿಗೂ ಇದ್ದಾರೆ.

ಈತನು ಮೊದಲಿಗೆ 'ರಾಜಲ ದ್ಯಾವರಕೊಂಡ' ಎಂಬ ರಾಜ್ಯದ ಅರಸನ ಅರಮನೆಯಲ್ಲಿ ಸೈನಿಕನಾಗಿದ್ದ. ರಾಜನ ಮಗಳನ್ನು ಅಪಹರಿಸಿಕೊಂಡು ಬಂದು ಬೆಟ್ಟವೊಂದರಲ್ಲಿ ಅಡಗಿಕೊಂಡ. ಹೆಣ್ಣಿನ ಕಡೆಯವರು ಇವನನ್ನು ಓಡಿಸಿಕೊಂಡು ಬಂದರು. ಅವರಿಂದ ಪಾರಾಗಲು ಅಲ್ಲಿಂದ ನಗರಗೆರೆಯ ಬೆಟ್ಟದ ಬಂಡೆಗಳಲ್ಲಿ ತೂರಿ ಊರಿನ ಬಳಿ ಇದ್ದ ಮರದ ಪೊದರುಗಳಲ್ಲಿ ಸೇರಿಕೊಂಡ. ಆ ನಂತರ ತನ್ನ ಹೆಂಡತಿಯೊಡನೆ ನಗರಗೆರೆಯಲ್ಲಿಯೇ ನೆಲಸಿದ. [ಇಲ್ಲಿಂದ ಮುಂದೆ 'ರಾಜಲು ದ್ಯಾವರಕೊಂಡ'ದ ರಾಜನ ಮಗಳ ಪ್ರಸ್ತಾಪ ಬರುವುದಿಲ್ಲ.] ಇವನು ಇಲ್ಲಿ ನೆಲಸಿದ ಕೆಲವು ವರ್ಷಗಳನಂತರ, ಒಮ್ಮೆ ನಗರಗೆರೆಯ ಮಾರ್ಗವಾಗಿ ಒಕ್ಕಲಿಗ ಜನಾಂಗದವರು ಸಂಸಾರ ಸಮೇತ ಎಲ್ಲಿಗೋ ಪ್ರಯಾಣ ಮಾಡುತ್ತಿದ್ದರು. ಅವರು ನಗರಗೆರೆಯ ಬಳಿ ಬಂದಾಗ ಅವರು ಪ್ರಯಾಣ ಮಾಡುತ್ತಿದ್ದ ಬಂಡಿಯ ಅಚ್ಚು ಮುರಿದು ಅವರ ಪ್ರಯಾಣ ನಿಂತಿತು. ಅದನ್ನು ಸರಿಪಡಿಸಿಕೊಂಡು ಮಾರನೆಯ ದಿನ ಹೊರಡುವ ಪ್ರಯತ್ನ ಮಾಡಿದರು. ಆಗ ಮತ್ತೊಂದು ಬಂಡಿಯ ಅಚ್ಚು ಮುರಿಯಿತು. ಹೀಗೆಯೇ ಸುಮಾರು ಎಂಟು ದಿನಗಳವರೆಗೂ ಅವರ ಪ್ರಯಾಣ ಒಂದಲ್ಲ ಒಂದು ಕಾರಣಕ್ಕಾಗಿ ನಿಲ್ಲುತ್ತಿತ್ತು. ಈ ಸಂಸಾರಿಗಳಿಗೆ ತುಂಬಾ ಲಕ್ಷಣವಾದ ಮಗಳೊಬ್ಬಳಿದ್ದಳು.

ಆಕೆಗೂ ಕೋಡೀರ್ಲಪ್ಪನಿಗೂ ಆ ಎಂಟು ದಿನಗಳ ಅವಧಿಯಲ್ಲಿಯೇ ಹೇಗೋ ಅನೈತಿಕ ಸಂಬಂಧ ಬೆಳೆಯಿತು. ಆಕೆಯ ತಂದೆ ತಾಯಿಗಳಿಗೆ ಈ ವಿಷಯದ ಸುಳಿವು ಸಿಕ್ಕಿರಲಿಲ್ಲ. ಅವರಿಗೆ ವಿಶೇಷವಾದ ಸಹಾಯ ಮಾಡುವವನ ಹಾಗೆ ಬಂದ ಕೋಡೀರ್ಲಪ್ಪ "ನೀವು ಇಲ್ಲಿಯೇ ನೆಲಸಿ, ನಿಮಗೆ ಬೇಕಾದ ಅನುಕೂಲಗಳನ್ನು ಮಾಡುತ್ತೇನೆ" ಎಂಬುದಾಗಿ ಆಶ್ವಾಸನೆ ಇತ್ತ. ಅವನ ಆ ಮಾತುಗಳನ್ನು ನಂಬಿ ಅವರು ಅಲ್ಲಿಯೇ ಸ್ಥಳವಂದಿಗರಾದರು. ಈ ನಡುವೆ ಬೆಳೆದ ಇವರ ಅನೈತಿಕ ಸಂಬಂಧದ ಸುಳಿವು ಅವರಿಗೆ ಸಿಕ್ಕಿತು. ತಮ್ಮ ಹೆಣ್ಣು ಮಗಳನ್ನು ಎಷ್ಟೇ ಭದ್ರಪಡಿಸಿದರೂ ಈ ಅನೈತಿಕ ಸಂಬಂಧ ನಿಲ್ಲಲಿಲ್ಲ. ಕೋಡೀರ್ಲಪ್ಪನಿಂದ ಉಪಕೃತರಾದ ಈ ಸಂಸಾರಿಗಳು ಅವನ ಮೇಲೆ ಕೈ ಎತ್ತುವ ಸಾಹಸವನ್ನೂ ಮಾಡಲಿಲ್ಲ – ಇದಿಷ್ಟು ಮಾತ್ರ ನಮಗೆ ತಿಳಿದು ಬರುವ ಕಥೆ.

ಈ ವೀರನ ಬಗ್ಗೆ ಹರಿಜನ ಮಹಿಳೆಯರು ಹಾಡುಗಳನ್ನು ಹೇಳುತ್ತಾರೆ. ಆದರೆ ಇವು ಆತನ ಜೀವನದ ಬಗ್ಗೆ ಬೆಳಕು ಬೀರುವುದಿಲ್ಲ. ಈ ಹಾಡುಗಳು ಅವನು ದೈವತ್ವಕ್ಕೇರಿದನಂತರ ಅವನಿಗೆ ತೇರು ಮಾಡಿದ ವಿಧಾನ, ಅದಕ್ಕಾಗಿ ಶ್ರಮಿಸಿದ ವ್ಯಕ್ತಿಗಳ ಹೊಗಳಿಕೆ, ಆತನಿಗೆ ಆಭರಣಗಳನ್ನು ಮಾಡಿಸಿದ ವಿವರಗಳು ಮುಂತಾದವು ಆ ಹಾಡುಗಳಲ್ಲಿ ಅಡಕವಾಗಿರುವ ಅಂಶಗಳು. ಒಂದು ಹಾಡು ಈ ಕೋಡಿರ್ಲಪ್ಪನ ಜಾತ್ರೆಯ ವೈಭವವನ್ನು ವೀರರಿಗೆ ವರ್ಣಿಸಿ ಹೇಳಿದಂತೆ ಇದೆ. ಈ ಎಲ್ಲಾ ಹಾಡುಗಳು ತೆಲುಗಿನಲ್ಲಿವೆ.

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕ್ ಶಂಭೇನಹಳ್ಳಿಯಲ್ಲಿ ಈ ವೀರನ ವಂಶಸ್ಥರು ಮತ್ತು ಆತನ ದೇವಾಲಯ ಇರುವುದಾಗಿ ತಿಳಿಯುತ್ತದೆ. ಅಲ್ಲಿ ಕೋಡೀರ್ಲಪ್ಪನ ಗುಡಿ ಎಂಬ ಒಂದು ಮನೆ ಇದೆ. ಅಲ್ಲಿ ವೀರನ ಯಾವೊಂದು ವಿಗ್ರಹವೂ ಇಲ್ಲ. ಆದರೆ ರಥದ ಎರಡು ಚಕ್ರಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಕೋಡೀರ್ಲಪ್ಪನು ನಗರಗೆರೆಯಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಯಾವುದೋ ವಿಪತ್ತು ಬಂದು ಆತನ ರಥದಗಾಲಿ ಅಲ್ಲಿಂದ ಉರುಳಿಕೊಂಡು ಬಂದು ತುಮಕೂರಿನ ಬಳಿ ಬಂದು ನಿಂತಿತು. ಅಲ್ಲಿಂದ ಈ ಊರಿನ ಹಿರಿಯರು ಇಲ್ಲಿಗೆ ಅದನ್ನು ಸಾಗಿಸಿಕೊಂಡು ಬಂದರು. ಆ ದಿನದಿಂದ ಅಲ್ಲಿನವರು ಅದನ್ನು ಪೂಜೆ ಮಾಡಿಕೊಂಡು ಬರುತ್ತಿದ್ದಾರಂತೆ. ಈ ರಥದ ಗಾಲಿಗಳು ಇರುವ ದೇವಾಲಯದಲ್ಲಿ ಒಂದು ದೊಡ್ಡ ಹುತ್ತವಿದೆ. ಇದಕ್ಕೂ ಕೋಡೀರ್ಲಪ್ಪನಿಗೂ ಸಂಬಂಧವಿದ್ದ ಕಥೆಯನ್ನು ತಮ್ಮ ಹಿರಿಯರಿಂದ ಕೇಳಿದ್ದುದಾಗಿ ತಿಳಿಸಿದರು.

ಮೇಲಿನ ಈ ಅಧ್ಯಯನದಿಂದ ಕೋಡೀರ್ಲಪ್ಪನ ಗುಡಿಯನ್ನು ಎರಡುರೀತಿ ವಿಶ್ಲೇಷಿಸಬೇಕಾಗುತ್ತದೆ. (೧) ಶೈವ ಸಂಪ್ರದಾಯದ ಕೇಂದ್ರವಾಗಿ ಮತ್ತು (೨) ಪಾಳೆಯಗಾರನೊಬ್ಬನ ಸ್ಮಾರಕವಾಗಿ.

ಸುಮಾರು ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಶೈವಧರ್ಮದ ತಾಂತ್ರಿಕ ಶಾಖೆಯಾದ ಶಾಕ್ತಸಂಪ್ರದಾಯವು ಈ ಜಿಲ್ಲೆಯಲ್ಲಿ ಮುಖ್ಯವಾಗಿ ಕೋಲಾರದ ಕೋಲಾರಮ್ಮನ ದೇವಾಲಯದಂಥ ಸ್ಥಳಗಳಲ್ಲಿ ಪ್ರಬಲವಾಗಿತ್ತು. ಅವರು ಭೈರವನ ಮತ್ತು ಶಕ್ತಿಯ ಆರಾಧಕರಾಗಿದ್ದರು. ಶಕ್ತಿಯ ಆರಾಧನೆಗಾಗಿ ವೀರಭಕ್ತರು ತಮ್ಮ ತಲೆಗಳನ್ನು ಕತ್ತರಿಸಿಕೊಂಡು ಬಲಿದಾನ ಮಾಡಿಕೊಳ್ಳುತ್ತಿದ್ದರು. ಈ ರೀತಿಯ ಧಾರ್ಮಿಕ ಹತ್ಯೆಗಳನ್ನು ನಿರೂಪಿಸುವ ವೀರಗಲ್ಲುಗಳ ಕೋಲಾರದ ಕೋಲಾರಮ್ಮನ ದೇವಾಲಯದ ಮುಂದೆ (ಚಿತ್ರ ೧೩.), ಮುಳುಬಾಗಿಲು ತಾಲ್ಲೂಕ್ ಬಲ್ಲ ಗ್ರಾಮದ ಸಪ್ತಮಾತೃಕೆಯರ ವಿಗ್ರಹಗಳ ಮುಂದೆ (ಚಿತ್ರ ೧೨), ಕೋಲಾರ ಜಿಲ್ಲೆ ರಾಜಕಲ್ಲಹಳ್ಳಿಯ ಪಟಾಲಮ್ಮ ಎಂಬ ಕಪಾಲಭೈರವಿಯ ದೇವಾಲಯದ ಮುಂದೆ ಹೀಗೇ ಹಲವಾರು ಕಡೆ ಇವೆ. ಈ ಹಿಂದೆಯೇ ಗಮನಿಸಿರುವ ಇಂಥ ವೀರರಿಗೆ ತಮ್ಮ ತಲೆಯನ್ನು ಕತ್ತರಿಸಿಕೊಳ್ಳಲು 'ಚಂಪುಗುಡಿ', 'ವೀರ ಶಿರೋಮಂಡನ ಮಂಟಪ' ಎಂಬ ಮಂಟಪಗಳನ್ನು ಕಾಕತೀಯ ಅರಸರು ನಿರ್ಮಿಸಿದ ವಿಷಯವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಈ ಕೋಡೀರ್ಲಪ್ಪನ ಗುಡಿಯ ಬಳಿ ರಾಮೇಶ್ವರ ದೇವಾಲಯ ಇರುವುದನ್ನು ಮತ್ತು ಇಲ್ಲಿ ಇರುವ ಬಹುಪಾಲು ವೀರಗಲ್ಲುಗಳು ಧಾರ್ಮಿಕ ಆತ್ಮಬಲಿಯನ್ನು ನಿರೂಪಿಸುವ ವೀರಗಲ್ಲುಗಳೇ ಆಗಿರುವುದನ್ನು ಗಮನಿಸಿದಾಗ ಇದು ಶೈವ ಸಂಪ್ರದಾಯದ ಕೇಂದ್ರವಾಗಿದ್ದಿರಬಹುದೇ ಎಂಬ ಸಂಶಯ ಬರುತ್ತದೆ. ಈ ಕೋಡೀರ್ಲಪ್ಪನ ಗುಡಿಯನ್ನು 'ವೀರಶಿರೋಮಂಡನಮಂಟಪ' ಎಂದಾಗಲೀ 'ಚಂಪುಗುಡಿ' ಎಂದಾಗಲೀ ಕರೆಯಲು ಖಚಿತವಾದ ಆಧಾರಗಳಿಲ್ಲ. ಆದರೂ ಇದು ಶೈವ ಸಂಪ್ರದಾಯದ ಅನುಸಾರವಾಗಿ ಆತ್ಮಾರ್ಪಣೆ ಮಾಡಿಕೊಂಡ ವೀರರ, ರಾಜಪ್ರಮುಖರ ನೆನಪಿಗಾಗಿ ಸ್ಮಾರಕ ಶಿಲೆಗಳನ್ನು ನೆಡುತ್ತಿದ್ದ ಒಂದು ಕೇಂದ್ರ ಎಂಬುದಾಗಿ ಗುರುತಿಸಬಹುದು. ಈ ರೀತಿಯ ಧಾರ್ಮಿಕ ಆತ್ಮಬಲಿಯ ಬಗ್ಗೆ ತಿಳಿಸುವ ಸ್ಮಾರಕಗಳನ್ನು ಆಂಧ್ರ ಪ್ರದೇಶದ ಪ್ರಸಿದ್ಧ ಶೈವಕ್ಷೇತ್ರಗಳಾದ ತ್ರಿಪುರಾಂತಕ, ಕಪಡ ಜಿಲ್ಲೆಯ ಮೋಪೂರು, ಗುಂಟೂರು, ಕಾರೆಂಪೂಡಿ, ಮಾಚೇರ್ಲ ಮುಂತಾದೆಡೆಗಳಲ್ಲಿ ಕಾಣಬಹುದಾಗಿದೆ.[೨೬]

೨೬ ಆಂಧ್ರ ವಿಜ್ಞಾನ ಸರ್ವಸ್ವಮು. ಪು. ೧೮೮೦

ಈಗ ನಮ್ಮ ಮುಂದಿರುವ ಪ್ರಶ್ನೆಗಳು ಎಂದರೆ – ಈ ಕೋಡೀರ್ಲಪ್ಪ ಯಾರು ? ಈಗ ಆರಾಧನೆಯಾಗುತ್ತಿರುವ ಸ್ಮಾರಕ ಶಿಲೆ ಆತನದೆ ಅಥವಾ ಬೇರೆಯವರದೆ ? ಬೇರೆಯವರದಾಗಿದ್ದ ಪಕ್ಷದಲ್ಲಿ ಈ ವೀರಗಲ್ಲಿಗೂ ಆತನಿಗೂ ಹೇಗೆ ಸಂಬಂಧ ಉಂಟಾಯಿತು – ಎಂಬುವು.

ಕೋಡೀರ್ಲಪ್ಪನ ಚರಿತ್ರೆಯನ್ನು ಪುನಾರಚಿಸಬೇಕಾದರೆ ಇರುವ ಆಧಾರಗಳು ಕೆಲವು. ಅವುಗಳನ್ನು ಈ ಹಿಂದೆಯೇ ಗಮನಿಸಿದ್ದೇವೆ. ಈ ಆಧಾರಗಳ ಮೇರೆಗೆ ಹೇಳುವುದಾದರೆ ಈತನ ಈಚಿನವನೆಂದೇ ಅನ್ನಿಸುತ್ತದೆ. ಅಂದರೆ ಹದಿನೈದು ಅಥವಾ ಹದಿನಾರನೆಯ ಶತಮಾನದಲ್ಲಿದ್ದಿರಬೇಕು. ಇವನು ಮೊದಲಿಗೆ ಯಾರದೋ ರಾಜಾಶ್ರಯದಲ್ಲಿ ಪ್ರಮುಖನಾಗಿ ಸೇವೆ ಸಲ್ಲಿಸುತ್ತಿದ್ದಿರಬೇಕು. ಅರಮನೆಯ ಹೆಂಗಸಿನ ಸಹವಾಸದ ವೈಮನಸ್ಯದಿಂದ ಅವರಿಗೂ ಇವನಿಗೂ ಕಲಹವಾಗಿ ಇವನು ಬೇರೆ ಬಂದಿರಬೇಕು. ಇವನ ಹುಟ್ಟಡಗಿಸಬೇಕೆಂಬ ಆ ಅರಸರ ಕೈಗೆ ಸಿಕ್ಕದ ಇವನು ನಗರಗೆರೆಗಯಲ್ಲಿ ನಿಂತು ಪಾಳೆಯಪಟ್ಟನ್ನು ನಿರ್ಮಿಸುವ ಪ್ರಯತ್ನ ಮಾಡಿದ. ಹಿಂದಿನ ವೈಷಮ್ಯದ ಮೇಲೆ ಪದೇ ಪದೇ ಇವನ ಮೇಲೆ ದಾಳಿ ಮಾಡುತ್ತಿದ್ದ ಬಲಿಷ್ಠರಾದ ರಾಜಲ ದ್ಯಾವರಕೊಂಡದವರೊಂದಿಗೆ ಹೋರಾಡಲು ಆಗದ ಕಾರಣ ಇವನು ನಗರಗೆರೆಯನ್ನು ಬಿಟ್ಟು ಓಡಿಹೋಗಿರಬೇಕು.

ತಮ್ಮ ಪಾಳೆಯಗಾರ ತಮ್ಮಿಂದ ದೂರವಾದಾಗ ಜನರು ಅವನು ಬಹುಶಃ ಯುದ್ಧದಲ್ಲಿ ಮಡಿದಿರಬೇಕೆಂದು ಭಾವಿಸಿ ಆನಂತರದ ಕಾಲದಲ್ಲಿ ಅವನ ಆರಾಧನೆಯನ್ನು ಆರಂಭಮಾಡಿರಬೇಕು. ವಾಸ್ತವವಾಗಿ ಇವನು ಯುದ್ಧದಲ್ಲಿ ಮಡಿದಿರುವ ಸಾಧ್ಯತೆಯೇ ಇಲ್ಲವೆಂದು ತೋರುತ್ತದೆ.

ಕೋಡೀರ್ಲಪ್ಪನಿಗೂ ಈ ಕಲ್ಲಿಗೂ ಸಂಬಂಧವಿಲ್ಲವೆಂದು ಹೇಳಲು ಇರುವ ಮುಖ್ಯ ಆಧಾರವೆಂದರೆ, ಈ ವೀರಗಲ್ಲಿನ ಮೇಲೆ ಸಿಗುವ ಶಾಸನದ ಪಾಠ. ಇದು ಒಂಬತ್ತನೆಯ ಶತಮಾನದ್ದೆಂದು ಮತ್ತು ಮೆಯಿಂದ ಚೋಲರಸರಿಗೆ ಸೇರಿದುದೆಂದು ಖಚಿತವಾಗಿದೆ. ಶಾಸನದ ಶಿಲ್ಪವನ್ನು ವೀರಗಲ್ಲಿನ ಮೇಲಿರುವ ರಾಜಲಾಂಛನಗಳನ್ನು ಗಮನಿಸಿದಾಗ ಪಾಳೆಯಗಾರನ ಅದರಲ್ಲೂ ಕೆಲವೇ ವರ್ಷಗಳು ಆಳಿದ ವ್ಯಕ್ತಿಯ ವೀರಗಲ್ಲಿನ ಮೇಲೆ ಶಿಲ್ಪದಲ್ಲಿ ಈ ರೀತಿ ಬಿಡಿಸಿದ್ದಾರೆನ್ನುವುದು ಸಂಶಯಾಸ್ಪದ. ಪಾಳೆಯಗಾರನೊಬ್ಬನ ವೀರಗಲ್ಲಿನ ಮೇಲೆ ರಾಜ ಲಾಂಛನಗಳು ಅಪರೂಪ. ಇಲ್ಲವೇ ಇಲ್ಲ ಎಂದರೂ ತಪ್ಪಾಗಲಾರದು. ಈತನ ಸಹವಾಸ ತೀರಾ ಈಚಿನವನು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಇವನು ಬಹಳ ಹಿಂದಿನವನೇ ಆಗಿದ್ದರೆ ಅವನ ವಂಶಜರಿಗೆ ಕೋಡೀರ್ಲಪ್ಪನ ಜೊತೆ ತಮ್ಮ ಸಂಬಂಧ ಕಲ್ಪಿಸಿಕೊಳ್ಳುವುದು ಅಸಾಧ್ಯದ ಮಾತು.

ಇದು ಯಾವನೋ ಮೆಯಿಂದ ಚೋಳರಸನ ಸ್ಮಾರಕ. ಇಲ್ಲಿ ಶೈವಧರ್ಮದ ತಾಂತ್ರಿಕ ಶಾಖೆ ಬೆಳೆದು, ಆ ಧರ್ಮದ ಮೇರೆಗೆ ಆತ್ಮಬಲಿಯನ್ನು ಮಾಡಿಕೊಂಡ ವೀರರ ಸ್ಮಾರಕಶಿಲೆಗಳೂ ನಿಲ್ಲತೊಡಗಿದವು. ಅನಂತರದಲ್ಲಿ ಈ ಕೋಡೀರ್ಲಪ್ಪನದೆಂದು ಹೇಳುವ ವೀರಗಲ್ಲಿನ ಮೇಲ್ಭಾಗದಲ್ಲಿ ಲಿಂಗ ಬಿಡಿಸಿರುವುದನ್ನು ಮತ್ತು ವೀರನ ಚಿತ್ರವನ್ನು ಕಂಡ ಜನ, ಅದು ಕೋಡೀರ್ಲಪ್ಪನೇ ಎಂದು ಭಾವಿಸುತ್ತಾ ಬಂದಿರಬೇಕು. ಒಂದು ಹಳೆಯ ಸಂಪ್ರದಾಯ ನಶಿಸಿಹೋದಾಗ ಜನ ಅವುಗಳಿಗೆ ತಮ್ಮ ಸಮೀಕರಣ ಬುದ್ಧಿಯಿಂದ ತಮಗಿಂತ ಹಿಂದಿನ ಅಥವಾ ಪುರಾಣಕಾಲದ ಕಥೆಗಳೊಡನೆ ಸಂಬಂಧ ಕಲ್ಪಿಸಿ ಐತಿಹ್ಯಗಳನ್ನು ನಿರ್ಮಿಸುವುದುಂಟು. ಈ ಒಂದು ಕಲ್ಪನಾತ್ಮಕ ಐತಿಹ್ಯವನ್ನೇ ನಂಬಿದ ಮುಂದಿನ ತಲೆಮಾರಿನ ಜನ ಅದು ಕೋಡೀರ್ಲಪ್ಪನ ವೀರಗಲ್ಲು, ವಿಗ್ರಹ ಎಂದೇ ಆರಾಧಿಸತೊಡಗಿರಬೇಕು. ಶಂಭೇನಹಳ್ಳಿಯಲ್ಲಿನ ಅವನ ವಂಶಸ್ಥರು ಗಾಲಿಯನ್ನು ಅವನ ರಥದ ಗಾಲಿಗಳು ಎಂದು ಅವಕ್ಕೆ ಪೂಜೆಮಾಡುತ್ತಾ ಬಂದಿರಬೇಕು.

ಕುಮಾರರಾಮ ಮತ್ತು ಕೋಡೀರ್ಲಪ್ಪ ಇವರುಗಳ ಆರಾಧನಾ ಸಂಪ್ರದಾಯದ ಹಿಂದೆ ಇರುವ ಮನೋಧರ್ಮಗಳನ್ನು ತುಲನೆ ಮಾಡಿ ನೋಡಿದಾಗ ಕರ್ನಾಟಕದಲ್ಲಿನ ವೀರರ ಆರಾಧನೆಯ ಬಗ್ಗೆ ಕೆಲವಾರು ತೀರ್ಮಾನಗಳನ್ನು ಮಾಡಬಹುದು.

ದ್ರಾವಿಡ ದೇಶಗಳಲ್ಲಿ ಪ್ರಚಲಿತವಿರುವ ಗ್ರಾಮ ದೇವತೆಗಳ ಬಗ್ಗೆ ಶ್ರೀ ವೈಟ್‌ಹೆಡ್ ಅವರು ಬರೆಯುತ್ತಾ, "ಇಲ್ಲಿಯವರೆಗೆ ದಕ್ಷಿಣ ಭಾರತದಲ್ಲಿ ಪುರುಷ ದೇವತೆಯ ಆರಾಧನೆಯನ್ನು ನಾನು ಗಮನಿಸಿಲ್ಲ. ಅಂತಹ ದೇವರುಗಳು ಗ್ರಾಮ ದೇವಿಯ ಆಳುಗಳಾಗಿಯೋ ಅಥವಾ ಆಕೆಯ ಸೋದರ ವರ್ಗದವರೆಂದೋ ಪರಿಗಣಿಸಲ್ಪಡುತ್ತಾರೆ. ಆದರೆ ಅವರಿಗೆ ಸ್ವತಂತ್ರ ವ್ಯಕ್ತಿತ್ವದ ಆರಾಧನೆಗಳಿಲ್ಲ" ಎಂಬುದಾಗಿ ಅಭಿಪ್ರಾಯ ಪಡುತ್ತಾರೆ[೧೨೭]. ಅವರ ಮೇಲಿನ ಅಭಿಪ್ರಾಯ ಆಂಧ್ರದೇಶದ ಪೋತುರಾಜು. ತಮಿಳುನಾಡಿನ ಅಯ್ಯನಾರ್, ಕರ್ನಾಟಕದಲ್ಲಿನ ಜಟ್ಟಿಗ, ಇವರ ಮಟ್ಟಿಗೆ ಸರಿ ಎಂದು ತೋರಿದರೂ ಕೋಡೀರ್ಲಪ್ಪ ಮತ್ತು ಕುಮಾರರಾಮರಿಗೆ ಅನ್ವಯಿಸುವುದಿಲ್ಲ.

ಇವರಿಬ್ಬರೂ ಚಾರಿತ್ರಿಕ ವ್ಯಕ್ತಿಗಳಾಗಿದ್ದು ತಮ್ಮ ಪರಿಮಿತಿಗೆ ಒಳಪಟ್ಟ ಪ್ರದೇಶವನ್ನು ಆಳಿದ ವ್ಯಕ್ತಿಗಳು. ಕುಮಾರರಾಮ ತನ್ನ ಹಿರಿಯರು ನಿರ್ಮಿಸಿದ್ದ ರಾಜ್ಯವನ್ನು ಕಾಪಾಡಲು, ವಿಸ್ತಾರ ಮಾಡಲು ತನ್ನ ಪ್ರಾಬಲ್ಯವನ್ನು ಮೆರೆದ ವೀರ. ತನ್ನ ಚಿಕ್ಕಮ್ಮನ ಕುಟಿಲತೆಯಿಂದಾಗಿ ತೊಂದರೆ

---

೧೨೭ White Head : The Village Gods of South India. ಪು. ೨೬

ಅನುಭವಿಸಿದರೂ, ಎಂಥ ಆಮಿಷವನ್ನು ಒಡ್ಡಿದರೂ ಪ್ರಲೋಭನೆಗೆ ಸಿಗದೆ ತನ್ನ ಶೌಚವನ್ನು ಮೆರೆದ ಪರನಾರೀ ಸೋದರ. ಕೋಡೀರ್ಲಪ್ಪ ತನ್ನ ಆಶ್ರಯದಾತನೊಂದಿಗೆ ವೈಷಮ್ಯವನ್ನು ಕಟ್ಟಿಕೊಂಡು ತಾನೇ ಸ್ವತಃ ಒಂದು ಪಾಳೆಯ ಪಟ್ಟನ್ನು ಕಟ್ಟಲು ಹೋಗಿ ವಿಫಲನಾದ ವೀರ. ಇವನು ಕುಮಾರರಾಮನ ಹಾಗೆ ತನ್ನ ಚಾರಿತ್ರ್ಯದ ಜ್ವಲಂತಿಕೆಯಿಂದ ಜನಮನದಲ್ಲಿ ನಿಲ್ಲದೆ ತನ್ನ ಪರಾಕ್ರಮದಿಂದ ಜನರ ಮನವನ್ನು ಗೆದ್ದು ಆರಾಧನೆಗೆ ಪಾತ್ರನಾದ ವೀರ. ಇವರಿಬ್ಬರೂ ತಮ್ಮ ಮರಣಾನಂತರದಲ್ಲಿ ತಮ್ಮ ಜನ ಮತ್ತು ಊರಿನವರ ಮೂಲಕ ದೈವತ್ವದ ಮಟ್ಟಕ್ಕೇರಿದರು. ಈ ಇಬ್ಬರೂ ಆಯಾ ಕ್ಷೇತ್ರಗಳಲ್ಲಿ ಗ್ರಾಮ ದೇವತೆಗಳಿಗಿಂತಲೂ ಮಿಗಿಲಾದ ಸ್ಥಾನವನ್ನು ಪಡೆದವರು. ಕುಮಾರರಾಮನು ಬೇಡರ ಕುಲಕ್ಕೆ ದೇವರೇ ಆಗಿದ್ದಾನೆ. ಈ ಕಾರಣದಿಂದಲೇ ಕುಮಾರರಾಮನ ದೇವಾಲಯಗಳು ಕರ್ನಾಟಕದ ಹಲವಾರು ಪ್ರಾಂತ್ಯಗಳಲ್ಲಿರುವುದು. ಕೋಡೀರ್ಲಪ್ಪನನ್ನು ಇಡೀ ನಗರಗೆರೆಯ ಜನರು ಆರಾಧಿಸುತ್ತಾರೆ. ಈ ಕೋಡೀರ್ಲಪ್ಪನನ್ನು ಮೊದಲಿಗೆ ಆರಾಧನೆ ಮಾಡುತ್ತಿದ್ದವರು ಅವನ ವಂಶಸ್ಥರು, ಅವನ ಅನುಯಾಯಿಗಳು ಮತ್ತು ಅವನಿಂದ ಒಂದಲ್ಲ ಒಂದು ರೀತಿಯಿಂದ ಉಪಕೃತರಾದವರು. ಇವರ ಮುಖಾಂತರ ಹರಡಿದ ಪವಾಡ. ಹರಕೆಗಳ ಈಡೇರಿಕೆ, ದೈವೀಶಕ್ತಿ, ಐತಿಹ್ಯಗಳಿಂದ ಆಕರ್ಷಿತರಾದ ಇತರ ಜನ ಈ ವೀರನನ್ನು ಆರಾಧಿಸಲು ಆರಂಭ ಮಾಡಿರಬೇಕು.

'ವೀರ' ಎಂದರೆ ಅವನಿಂದ ಉಪಕೃತರಾದವರಂತೆ, ನೋವನ್ನೋ, ತೊಂದರೆಯನ್ನೋ ಅನುಭವಿಸಿದ ಒಂದು ಸಮೂಹವೂ ಇರುತ್ತದೆ ಎಂಬುದು ವಾಸ್ತವಾಂಶ. ಈ ದೃಷ್ಟಿಯಿಂದ ಕೋಡೀರ್ಲಪ್ಪನಿಗೆ ಮೊದಲು ದೀಪ ಹೋರುವವರ ಮನೋಧರ್ಮವನ್ನು ವಿಶ್ಲೇಷಿಸುವುದು ಹೆಚ್ಚು ಸೂಕ್ತವೆಂದು ತೋರುತ್ತದೆ. ಕೋಡೀರ್ಲಪ್ಪನು ಇಂಥವರ ಮನೆಯ ಹೆಣ್ಣು ಮಗಳೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ಎಂದು ಇಂದಿಗೂ ಒಂದು ಮನೆಯವರನ್ನು ಜನ ತೋರಿಸುತ್ತಾರೆ. ಹಾಗೆ ತೋರಿದ ಮನೆಯವರೇ ಕೋಡೀರ್ಲಪ್ಪನಿಗೆ ಮೊದಲು ದೀಪ ಹೊರುವುದು. ಇದಕ್ಕೆ ಆ ಮನೆತನದವರು ನೀಡುವ ಕಾರಣ ಇದು ; ಕೋಡೀರ್ಲಪ್ಪನು ಶಿಲೆ ಆಗಿ ನಿಂತ ಮೇಲೆ ಅವರ ಹಿರಿಯರ ಕನಸಿನಲ್ಲಿ ಬಂದು ತಾನು ಅವರ ಮನೆಯ ಹೆಣ್ಣುಮಗಳ ಸಹವಾಸ ಮಾಡಿದ್ದ ಕಾರಣ "ನಿಮಗೇನು ವರ ಬೇಕೋ ಕೇಳಿಕೊಳ್ಳಿ" ಎಂದನು, ಇದಕ್ಕೆ ಅವರು "ನಿನ್ನ ವರವೇನೂ ನಮಗೆ ಬೇಡ ಊರಿನ ಜನರೆಲ್ಲ ಉಪವಾಸದಿಮದ ಇದ್ದು ನೇಮವಾಗಿ ನಿನಗೆ ದೀಪ ಹೊತ್ತರೆ, ನಮ್ಮ ವಂಶಸ್ಥರು ಮಾತ್ರ ವಂಶಪಾರಂಪರ್ಯವಾಗಿ, ಊಟಮಾಡಿ ತಿಂದು ತೇಗಿ ಮೂರು ಸಲ ಎಲೆ ಅಡಿಕೆ ಹಾಕಿಕೊಂಡು ಮೊದಲದೀಪ ಹೊರುವುದಕ್ಕೆ ಅವಕಾಶ ಕೊಡು" ಎಂದು ಕೇಳಿದರು. ಆಗಲೆನ್ನುವಂತೆ ಅವನು ಸಮ್ಮತಿಸಿದನಂತೆ. ಅಂದಿನಿಂದ ಇಂದಿನವರೆಗೆ ಜಾತ್ರೆಯಲ್ಲಿ ಆ ವಂಶಸ್ಥರೇ ಇದೇ ರೀತಿ ಮೊದರದೀಪ ಹೋರುತ್ತಾರೆ.

ಕೋಡೀರ್ಲಪ್ಪನನ್ನು ನಗರಗೆರೆಯ ಇಡೀ ಜನರೇ ದೈವತ್ವದ ಮಟ್ಟಕ್ಕೇರಿಸಿ ಆರಾಧಿಸುತ್ತಿದ್ದರೂ ಈ ಒಂದು ಮನೆಯವರು ಅದನ್ನು ಒಪ್ಪಿದಂತೆ ತೋರುವುದಿಲ್ಲ. ಬದುಕಿದ್ದಾಗ ತಮಗಿಂತಲೂ ಹೆಚ್ಚು ಬಲಿಷ್ಟನಾಗಿದ್ದ ಎಂಬ ಕಾರಣಕ್ಕಾಗಿ ಕೋಡೀರ್ಲಪ್ಪ ತಮ್ಮ ಮನೆಯ ಹೆಣ್ಣು ಮಗಳೊಂದಿಗೆ ಇಟ್ಟುಕೊಂಡಿದ್ದ ಅನೈತಿಕ ಸಂಬಂಧವನ್ನು ಹೇಗೋ ನುಂಗಿಕೊಂಡಿದ್ದರು. ಅವನು ಸತ್ತ ನಂತರ ಅವನು ವಂಶದವರ ಅಥವಾ ಅವನ ಭಯ ಇಲ್ಲದವರು, ಅನಂತರ ಊರಿನ ಜನ ಅವನನ್ನು ಆರಾಧಿಸುವುದಕ್ಕೆ ಮೊದಲು ಮಾಡಿದಾಗ, ಅದನ್ನು ಧಿಕ್ಕರಿಸುವ ಧೈರ್ಯವನ್ನು ಪಡೆದರು. ಆದರೂ ಅವನು ದೈವವಾದಾಗ, ಆರಾಧಿಸ ತೊಡಗಿದಾಗ, ಜನರ ಮಾತಿಗೆ, ನಂಬಿಕೆಗೆ ಕಟ್ಟುಬಿದ್ದು ಊರಿನ ಹಿತದೃಷ್ಟಿಯಿಂದ ಮನಃಪೂರ್ವಕವಾಗಿಯಲ್ಲದಿದ್ದರೂ ತೋರಿಕೆಗಾಗಿ ಅವನ ದೈವತ್ವವನ್ನು ಒಪ್ಪಿಕೊಂಡರು. ಹಾಗೆ ಒಪ್ಪಿಕೊಂಡಾಗಲೂ ನೇಮದ ವಿಷಯದಲ್ಲಿ ಅವರು ಅನುಸರಿಸಿರುವ ರೀತಿಯನ್ನು ಗಮನಿಸಿದರೆ, ಇದು ನಿಜವಾಗಿ ಕೋಡೀರ್ಲಪ್ಪನ ದೈವತ್ವದ ನಂಬಿಕೆಯ ಬಗ್ಗೆ ತೋರುವ ಪ್ರತಿಭಟನೆಯ ಸೂಚನೆ ಎಂದು ತೋರುತ್ತದೆ.[೧೨೮]

ಕಾಲಕ್ರಮದಲ್ಲಿ ವೀರರ ಆರಾಧನೆಯ ಸಂಪ್ರದಾಯದಲ್ಲಾದ ಮತ್ತೊಂದು ಗಮನಾರ್ಹ ಬೆಳವಣಿಗೆ ಎಂದರೆ ಕುಪ್ರಸಿದ್ಧ ದರೋಡೆಕೋರರನ್ನು ದೈವತ್ವದ ಮಟ್ಟಕ್ಕೇರಿಸಿ ಆರಾಧಿಸುವುದು. ಈ ರೀತಿಯ ಒಂದು ಸಂಪ್ರದಾಯವನ್ನು ನಾವು ಅಲೆಮಾರಿ ಮತ್ತು ಅಪರಾಧಿ ಜನಾಂಗಗಳಲ್ಲಿ ಕಾಣುತ್ತೇವೆ. ಬಿಹಾರದ ಡ್ಯೂಮ ಎಂಬ ಜನಾಂಗದವರು ಇಬ್ಬರು ಕುಪ್ರಸಿದ್ಧ ದರೋಡೆಕಾರರನ್ನು ಆರಾಧಿಸುತ್ತಾರೆ. ಅವರ ಹೆಸರುಗಳು ಗಂಧ ಮತ್ತು ಶ್ಯಾಮಸಿಂಗ್. ಇವರಿಬ್ಬರೂ ಹಲವಾರು ವರ್ಷಗಳ ಹಿಂದೆ ಪೋಲೀಸರಿಂದ ಅಪಮೃತ್ಯುವಿಗೆ ಒಳಗಾದವರು. ಹಾಗೆಯೇ ಮಧ್ಯಪ್ರದೇಶದ ಸಾಗರದಲ್ಲಿ 'ಮಧುಕರ್ ಷಾ' ಎಂಬ ಡಕಾಯಿತನನ್ನು ಆರಾಧಿಸುತ್ತಾರೆ. ಅವನನ್ನು ಸಂಸ್ಕಾರ ಮಾಡಿದ ಸ್ಥಳದಲ್ಲಿ ಒಂದು ಗುಡಿಯನ್ನು ನಿರ್ಮಿಸಿದ್ದಾರೆ, ಅದಕ್ಕೆ ಇಂದಿಗೂ ಆರಾಧನೆ ನಡೆಯುತ್ತದೆ. ಅವರ ಪಾಲಿಗೆ ಈ ಡಕಾಯಿತ ದೇವರೇ ಆಗಿದ್ದಾನೆ.[೧೨೯] ಇದೇ ಮಧ್ಯಪ್ರದೇಶದಲ್ಲಿನ ಚಂಬಲ್ ಕಣಿವೆಯ ಕುಪ್ರಸಿದ್ಧ ಡಕಾಯಿತ ಮಾನಸಿಂಗನನ್ನು ಅಲ್ಲಿಯ ಜನತೆ ಇಂದಿಗೂ ಆರಾಧಿಸುತ್ತಾರೆ. ಬಡವರಂತೂ ಅವನು ಸತ್ತು ಹಲವಾರು ವರ್ಷಗಳೇ ಕಳೆದು ಹೋಗಿದ್ದರೂ ತಮ್ಮ ಕಷ್ಟಗಳನ್ನು

---

೧೨೮ ಈ ಬಗ್ಗೆ ನನಗೆ ಮಾಹಿತಿ ಸಂಗ್ರಹಿಸಲು ನೆರವಾದವರು ನಗರಗೆರೆಯ ಲಕ್ಷ್ಮೀಪತಿ, ಶೇಷಶಾಸ್ತ್ರಿ ಇವರುಗಳು

೧೨೯ William Crooke and Enthoven : Religion and Foloklore of Northern India. ಪು. ೧೭೯–೮೦

ಅವನ ಗೋರಿಯ ಮುಂದೆ ತೋಡಿಕೊಂಡಾಗ ಅವನು ಸಹಾಯ ಮಾಡುತ್ತಾನೆ ; ಈಗಾಗಲೇ ಅನೇಕ ಜನರಿಗೆ ಸಹಾಯ ಮಾಡಿದ್ದಾನೆ ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆ[೧೩೦].

ವೀರರ ಗುಡಿಗಳು

ವೀರರ ಗುಡಿಗಳ ಬಗ್ಗೆ ಅಧ್ಯಯನ ಮಾಡುವ ಮುಂಚೆ 'ಗುಡಿ' ಎಂಬ ಪದವನ್ನು ಯಾವ ಅರ್ಥದಲ್ಲಿ ಬಳಸುತ್ತಿದ್ದೇವೆ ಎಂಬುದನ್ನು ಖಚಿತ ಪಡಿಸುವುದು ಸೂಕ್ತವೆಂದು ತೋರುತ್ತದೆ. ಕರ್ನಾಟಕದಲ್ಲಿ ದೇವಾಲಯ, ದೇವಸ್ಥಾನ, ಗುಡಿ ಎಂಬ ಪದಗಳನ್ನು ದೈವ ಅಥವಾ ದೇವರುಗಳು ಇರುವ ಕಟ್ಟಡವನ್ನು ನಿರ್ದೇಶಿಸುವಲ್ಲಿ ಪ್ರಯೋಗಿಸುತ್ತೇವೆ. ಇಲ್ಲಿ ಗುಡಿ ಎಂಬ ಪದವನ್ನು ಮೂರು ಚಪ್ಪಡಿಗಳಿಂದ ನಿರ್ಮಿಸಿದ, ಅಂತಹುದೆ ಮತ್ತೊಂದು ಚಪ್ಪಡಿಯ ಮೇಲೆ ವೀರನ ಶಿಲ್ಪವನ್ನು ಬಿಡಿಸಿರುವ ಒಂದು ಸಣ್ಣ ಹಾಗೂ ಸರಳವಾದ ಕಟ್ಟಡ ಎಂಬ ಅರ್ಥದಲ್ಲೂ ಅಂಥ ಕಟ್ಟಡವನ್ನು ನಿರ್ದೇಶಿಸುವುದಕ್ಕೂ ಪ್ರಯೋಗಿಸುತ್ತೇವೆ. ಇದು ದೇವಾಲಯಗಳ ಹಾಗೆ ಕಟ್ಟಡವನ್ನು ಹೊಂದಿರುವುದಿಲ್ಲ (ಚಿತ್ರ ೧೯, ೨೦).

ಈ ರೀತಿಯ ವೀರರ ಗುಡಿಗಳು ಕೋಲಾರ, ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಹಾಸನ ಮುಂತಾದ ಕಡೆಗಳಲ್ಲಿ ಬಹುಸಂಖ್ಯೆಯಲ್ಲಿರುವುದನ್ನು ಗಮನಿಸಬಹುದು. ಕೋಲಾರ ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ, ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕ್ ದೊಡ್ಡ ಹುಲ್ಲೂರು, ಮುಗುಬಾಳ, ದೇವನಹಳ್ಳಿ ತಾಲ್ಲೂಕ್ ನಲ್ಲೂರು, ಮೈಸೂರಿನ ಈರನಗೆರೆ ಮುಂತಾದ ಕಡೆಗಳಲ್ಲಿ ಈ ವೀರರ ಗುಡಿಗಳು ಒಂದೇ ಸ್ಥಳದಲ್ಲಿ ಅಸಂಖ್ಯಾತ ವಾಗಿರುವುದನ್ನು ಗಮನಿಸಬಹುದಾಗಿದೆ. ಈ ರೀತಿಯಲ್ಲಿ ವೀರಗಾರರ ಗುಡಿಗಳು ಅನೇಕ ಸಂಖ್ಯೆಯಲ್ಲಿ ಒಂದೇ ಸ್ಥಳದಲ್ಲಿ ಇದ್ದರೆ ಅದನ್ನು ಕೋಲಾರ ಜಿಲ್ಲೆಯಲ್ಲಿ 'ವೀರಗಾರರ ನೆತ್ತು' ಎಂಬುದಾಗಿ ಕರೆಯುತ್ತಾರೆ. ಈ ತೆರನ ವೀರಗಾರರನೆತ್ತು ಮುಳಬಾಗಿಲು ತಾಲ್ಲೂಕ್ ಆವಣಿ ಹೋಬಳಿ ಶೃಂಗೇರಿ ಸದುಮನಹಳ್ಳಿಗೆ ಪಶ್ಚಿಮಕ್ಕೆ ಇದೆ.[೧೩೧] ದಕ್ಷಿಣಕನ್ನಡ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 'ಮಾಸ್ತಿ ಹಕ್ಕಲು'ಗಳು ಇರುವಂತೆ ಈ ಪ್ರದೇಶದಲ್ಲಿ 'ವೀರಗಾರರ ಗುಡಿಗಳು',

---

೧೩೦ ಕೆನ್ನೆತ್ ಆಂಡರಸನ್ : ಮಾನಸಿಂಗ್ (ಕನ್ನಡ ಅನುವಾದ : ಎಸ್. ಕೆ. ರಾಮಣ್ಣ)
೧೩೧ M.A.R. 1927

'ವೀರಗಾರರ ನೆತ್ತು' ಇರುತ್ತವೆ. ಈ ವೀರಗಾರರ ಗುಡಿಗಳನ್ನು ವಿಶೇಷವಾಗಿ ಕುರುಬ, ನಾಯಕ ಅಥವಾ ಬೇಡ ಜನಾಂಗದವರು ಇಂದಿಗೂ ಪೂಜಿಸುತ್ತಾರೆ.

ಸಾಮಾನ್ಯವಾಗಿ ಇವು ಊರಿನ ಹೊರಭಾಗದಲ್ಲಿ ಕೆರೆಯ ಬಳಿಯೋ, ಹೊಲಗಳಲ್ಲಿಯೋ ಇರುತ್ತವೆ. ಆದರೆ ಇಂತಹ ಕಡೆಯೇ ಇರುತ್ತವೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಹಾಗೂ ವೀರಗಲ್ಲಿನ ಮೇಲೆ ಶಾಸನವಿರಬೇಕೆಂಬ ನಿಯಮವೂ ಇಲ್ಲ. ಆದರೆ ಎಲ್ಲದರಲ್ಲೂ ಸಾಮಾನ್ಯವಾಗಿ ಕಂಡು ಬರುವ ಒಂದು ಅಂಶವೆಂದರೆ, ವೀರನ ಚಿತ್ರವನ್ನು ಒಂದೇ ಕಲ್ಲಿನ ಮೇಲೆ ಬಿಡಿಸಲಾಗಿರುತ್ತದೆ, ಎನ್ನುವುದು.

ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಗ್ರಾಮದ ಪಶ್ಚಿಮಕ್ಕೆ ಇರುವ ವೀರಗಾರರ ಗುಡಿಯ ಪ್ರಸ್ತಾಪ ಮಾಡುವುದು ಉಚಿತ (ಚಿತ್ರ ೨೫). ಈ ಗುಡಿಯಲ್ಲಿ ಇತರ ಗುಡಿಗಳಲ್ಲಿರುವಂತೆ ಗುಡಿಗೆ ಸೇರಿರುವ ಕಲ್ಲುಚಪ್ಪಡಿಯ ಮೇಲೇ ವೀರನ ವಿಗ್ರಹವನ್ನು ಬಿಡಿಸಿಲ್ಲ. ವೀರನ ವಿಗ್ರಹವನ್ನೇ ಪ್ರತ್ಯೇಕವಾಗಿ ಕಡೆದು ನಿಲ್ಲಿಸಿದ್ದಾರೆ. ಸುಮಾರು ಎರಡೂವರೆ ಅಡಿ ಎತ್ತರವಿರುವ ಈ ವೀರನ ವಿಗ್ರಹ ಕರಿಯ ಬಳಪದ ಕಲ್ಲಿನಿಂದ ಮಾಡಿದ್ದಾಗಿದೆ. ಕತ್ತಿ ಮತ್ತು ಗುರಾಣಿಯನ್ನು ಹಿಡಿದು ನಿಂತಿರುವಂತೆ ವೀರನ ವಿಗ್ರಹವನ್ನು ಸುಂದರವಾಗಿ ಕೆತ್ತಲಾಗಿದೆ. ಈ ವಿಗ್ರಹವನ್ನು ಗುಡಿಯ ಒಳಗೆ ಇಟ್ಟಿದ್ದಾರೆ. ಅದಕ್ಕೆ ಒಮದು ಪಾಣಿಪೀಠವಾಗಲೀ, ಅದನ್ನು ಸರಿಯಾಗಿ ನಿಲ್ಲಿಸಲು ಒಂದು ಜಾಗವಾಗಲೀ ಇಲ್ಲ. ಆದ್ದರಿಂದ ಎಲ್ಲೋ ಇದ್ದ ಈ ವಿಗ್ರಹವನ್ನು ಅನಂತರದ ಕಾಲದಲ್ಲಿ ತಂದಿಟ್ಟರೋ ಅಥವಾ ಗುಡಿಯನ್ನು ನಿರ್ಮಿಸುವ ಕಾಲಕ್ಕೆ ನಿರ್ಮಿಸಿದರೋ ಹೇಳುವುದು ಕಷ್ಟ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕ್ ಬೆಳಗೆರೆ, ನಾರಾಯಣಪುರ ಮುಂತಾದ ಕಡೆಗಳಲ್ಲಿ ವೀರರ ದೇವಾಲಯಗಳಿರುವುದನ್ನು ಗುರುತಿಸಬಹುದು.

ವೀರಗಾರರ ಗುಡಿಗಳ ಇತಿಹಾಸವನ್ನು ಗುರುತಿಸಬೇಕಾದರೆ ಶಾಸನಗಳು ಮತ್ತು ಶಾಸನಸ್ಥ ವೀರಗಲ್ಲುಗಳ ಪಾಠವನ್ನು ಗಮನಿಸಬೇಕಾಗುತ್ತದೆ. ಹೀಗೆ ಮಾಡುವಲ್ಲಿ ಎರಡು ಸಮಸ್ಯೆಗಳು ಎದುರಾಗುತ್ತವೆ.

(೧) ಕರ್ನಾಟಕದ ಎಲ್ಲ ವೀರರ ಗುಡಿಗಳ ವೀರಗಲ್ಲುಗಳ ಮೇಲಿನ ಶಾಸನಗಳು ಪ್ರಕಟವಾಗಿಲ್ಲ. ಹಾಗೆ ಪ್ರಕಟವಾಗಿದ್ದರೂ ಅನೇಕ ಕಡೆ 'ವೀರರ ಗುಡಿಯಲ್ಲಿ ವೀರಗಲ್ಲು' ಎಂಬುದಾಗಿ ನಿರ್ದೇಶನ ಮಾಡಿದಂತೆ ತೋರುವುದಿಲ್ಲ. ಮತ್ತು ಸಾಮಾನ್ಯವಾಗಿ ಈ ವೀರರ ಗುಡಿಗಳಲ್ಲಿರುವ ವೀರಗಲ್ಲುಗಳ ಮೇಲೆ ಶಾಸನವೂ ಇರುವುದಿಲ್ಲ.

(೨) ಹೀಗೆ ವೀರಗಲ್ಲಿನ ಮೇಲಿನ ಶಾಸನ ಆಧಾರದ ಮೇಲೆಯೇ ಆ ವೀರರ ಗುಡಿಯ ಇತಿಹಾಸವನ್ನು ಗುರುತಿಸುವುದು ಸಾಧ್ಯವಾಗದ ಸಂಗತಿ. ಏಕೆಂದರೆ, ವೀರಗಲ್ಲನ್ನು ನಿರ್ಮಿಸಿದ ನಂತರ ಮುಂದೆ ಎಂದೋ ವೀರಗಲ್ಲಿಗೆ ಗುಡಿಯನ್ನು ನಿರ್ಮಿಸಿರ ಬಹುದೆಂಬ ಸಂಶಯ ತಲೆದೋರುತ್ತದೆ.[೧೨] ವೀರಗಲ್ಲನ್ನು ನೆಡುವಾಗಲೇ ಗುಡಿಯನ್ನು ನಿರ್ಮಿಸಿರುವ ಸಾಧ್ಯತೆ ಇಲ್ಲವೆಂಬುದು ನಮ್ಮ ಮಾತಿನ ಅರ್ಥವಲ್ಲ. ಆದರೆ ವೀರಗಲ್ಲಿನ ಕಾಲದ ಆಧಾರದಮೇಲೆ ವೀರಗಾರರ ಗುಡಿಗಳ ಇತಿಹಾಸವನ್ನು ಪುನಾರಚಿಸುವಲ್ಲಿ ದೊರೆಯುವ ಆಧಾರದ ಬಗ್ಗೆ ಸಂಶಯವನ್ನು ವ್ಯಕ್ತಪಡಿಸುವುದು ಉಚಿತವೆಂದು ತೋರುತ್ತದೆ.

ಆದ್ದರಿಂದ ಈ ವೀರಗಾರರ ಗುಡಿಗಳ ಇತಿಹಾಸವನ್ನು ಎರಡು ದೃಷ್ಟಿಗಳಿಂದ ಪರಿಶೀಲಿಸುವುದು ಸೂಕ್ತವೆಂದು ತೋರುತ್ತದೆ.

(೧) ಶಾಸನಗಳ ಪಾಠಲಬ್ಧವಿರುವ ವೀರರ ಗುಡಿಗಳು ಮತ್ತು ಶಾಸನಗಳಲ್ಲಿ ವೀರಗಾರರ ಗುಡಿಗಳ ಉಲ್ಲೇಖ ಮತ್ತು ಪ್ರಸ್ತಾಪ.

(೨) ಇತರ ದ್ರಾವಿಡ ದೇಶಗಳಲ್ಲಿ ಪ್ರಚಲಿತವಿರುವ ವೀರರ ಗುಡಿಗಳು.

ಈ ವೀರರ ಗುಡಿಗಳಲ್ಲಿ ದೊರೆಯುವ ಶಾಸನಗಳಪಾಠ ಅರ್ಥದೃಷ್ಟಿಯಿಂದ, ಈಗ ಅವು ಪ್ರಕಟವಾಗಿರುವ ಹಾಗೆ ಸ್ಪಷ್ಟವಿಲ್ಲ. ಮತ್ತು ಅವುಗಳ ಮೇಲೆ ಕಾಲ ನಿರ್ದೇಶನವೂ ಇರುವುದಿಲ್ಲ. ಕೆಲವೊಮ್ಮೆ ಲಿಪಿಯ ಆಧಾರದ ಮೇಲೆಯೋ ಅಥವಾ ಶಾಸನದಲ್ಲಿ ಉಕ್ತನಾಗಿರುವ ಅರಸನ ಹೆಸರಿನ ಆಧಾರದ ಮೇಲೆಯೋ ಕಾಲ ನಿಷ್ಕರ್ಷೆಯನ್ನು ಮಾಡಲಾಗಿರುತ್ತದೆ.

ಪ್ರಾಚೀನ ವೀರರಗುಡಿಗಳ ವಿಷಯದಲ್ಲಿ ನಮ್ಮ ಅನುಭವ ಮತ್ತು ಪ್ರವಾಸ ಕೋಲಾರ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಈ ಜಿಲ್ಲೆಯಲ್ಲಿನ ವೀರರಗುಡಿಗಳಲ್ಲಿ ನೊಳಂಬ, ಗಂಗ, ಚೋಳ, ವಿಜಯನಗರದ ಕಾಲದ ವೀರಗಲ್ಲುಗಳು ದೊರೆಯುತ್ತವೆ.

---

೧೨ ನಮ್ಮ ಈ ಅನುಮಾನಕ್ಕೆ ಕಾರಣವನ್ನು ದೈವತ್ವದ ಮಟ್ಟಕ್ಕೇರಿದ ವೀರರು ಎಂಬ ಶೀರ್ಷಿಕೆಯ ಅಡಿಯಲ್ಲಿ ಬರುವ ಕೋಡೀರ್ಲಪ್ಪನ ದೇವಾಲಯದ ಬಗೆಗಿನ ನಮ್ಮ ಅಭಿಪ್ರಾಯವನ್ನು ಗಮನಿಸಿರಿ.

ಪ್ರಕಟವಾಗಿರುವ ಶಾಸನಗಳ ಆಧಾರದ ಪ್ರಕಾರ ಪ್ರಾಚೀನ ಶಾಸನ ಇರುವ ವೀರರ ಗುಡಿ ಕೋಲಾರ ಜಿಲ್ಲೆ, ಮುಳುಬಾಗಿಲು ತಾಲ್ಲೂಕ್ ಯುಲ್ಲೂದುರು ಎಂಬಲ್ಲಿ ದೊರೆಯುತ್ತದೆ.[೧೩೩] ಎರಡಿಯೂರಿನ ತುರುಗಾಳಗದಲ್ಲಿ ತಿರುವೆಙ್ಗಡಯ್ಯನೆಂಬುವನು ಮಡಿದನೆಂದು ಆ ಶಾಸನ ತಿಳಿಸುತ್ತದೆ. ಇದರ ಕಾಲ ಸುಮಾರು ಕ್ರಿ.ಶ. ೯೫೦. ಆನಂತರ ಶಾಸನವಿರುವ ವೀರಗಲ್ಲುಗಳ ವೀರರ ಗುಡಿಗಳು ದೊರೆಯುವ ವಿವರಗಳು ಈ ರೀತಿ ಇವೆ :

೧೧೬೯ – ಬೆಂಗಳೂರು ಜಿಲ್ಲೆ, ಮಾಗಡಿ ತಾಲ್ಲೂಕ್, ಕರ್ಲಮಂಗಲ.[೧೩೪]

೧೨೮೯ " ಕಾನಕಾಹಳ್ಳಿ ತಾಲ್ಲೂಕ್, ಹೊಸಹಳ್ಳಿ.[೧೩೫]

೧೨೯೧ " ಕಾನಕಾಹಳ್ಳಿ ತಾಲ್ಲೂಕ್, ಕಬ್ಬಾಳ.[೧೩೬]

೧೨೯೩ " ಕಾನಕಾಹಳ್ಳಿ ತಾಲ್ಲೂಕ್, ಪುರುಸಗೊಂಡಹಳ್ಳಿ.[೧೩೭]

೧೨೯೪ " ಚೆನ್ನಪಟ್ಟಣ ತಾಲ್ಲೂಕ್, ದೊಡ್ಡಗಂಗವಾಡಿ.[೧೩೮]

೧೩೧೯ – ಮೈಸೂರು ಜಿಲ್ಲೆ, ಮಂಡ್ಯ ತಾಲ್ಲೂಕ್, ಪುರ.[೧೩೯]

೧೩೩೫ – ಬೆಂಗಳೂರು ಜಿಲ್ಲೆ, ಚೆನ್ನಪಟ್ಟಣ ತಾಲ್ಲೂಕ್, ವಡವಟ್ಟಿ.[೧೪೦]

೧೩೩೮ " ಚೆನ್ನಪಟ್ಟಣ ತಾಲ್ಲೂಕ್, ಚಂನಮಾನಹಳ್ಳಿ.[೧೪೧]

೧೩೪೦ " ಮಾಗಡಿ ತಾಲ್ಲೂಕ್, ಮಾಡಬಾಳು.[೧೪೨]

---

೧೩೩ E. C. X. Mb. 108
೧೩೪ E. C. IX. Ma. 14
೧೩೫ E. C. IX. Kn. 71
೧೩೬ ಅದೇ, ಪು. ೭೪
೧೩೭ ಅದೇ, ಪು. ೪೬
೧೩೮ ಅದೇ, IX. Cp. ೧೮೩
೧೩೯ E. C. III Md. 102
೧೪೦ E. C. IX. Cp. 178
೧೪೧ ಅದೇ, ೧೩
೧೪೨ ಅದೇ, ೧೩

೧೩೫೧	”	ಕಾನಕಾಹಳ್ಳಿ ತಾಲ್ಲೂಕ್, ಎಡಮಾರನಹಳ್ಳಿ.[೧೪೩]
೧೩೬೯	”	ಚೆನ್ನಪಟ್ಟಣ ತಾಲ್ಲೂಕ್, ಮಳೂರು.[೧೪೪]
೧೪೧೭	”	ಕಾನಕಾನಹಳ್ಳಿ ತಾಲ್ಲೂಕ್, ಹರಿಹರ.[೧೪೫]
೧೪೩೯	”	ಚೆನ್ನಪಟ್ಟಣ ತಾಲ್ಲೂಕ್, ಮಳೂರು.[೧೪೬]
೧೪೪೮	”	ಚೆನ್ನಪಟ್ಟಣ ತಾಲ್ಲೂಕ್, ಮಳೂರು.[೧೪೭]

ಇನ್ನೂ ಅನೇಕ ಕಡೆಗಳಲ್ಲಿ ವೀರಗಲ್ಲುಗಳು ಇರುವುದಾಗಿ ನಮಗೆ ತಿಳಿದು ಬರುತ್ತದೆಯಾದರೂ ಖಚಿತವಾದ ಕಾಲನಿರ್ದೇಶನ ಇಲ್ಲದಿರುವುದರಿಂದ ಅವುಗಳನ್ನು ಇಲ್ಲಿ ಕೈಬಿಡಲಾಗಿದೆ.

ಮೇಲಿನ ಪಟ್ಟಿಯನ್ನು ಗಮನಿಸಿದಾಗ ಈ ವೀರರ ಗುಡಿಗಳು ಸುಮಾರು ಹತ್ತನೆಯ ಶತಮಾನದಿಂದ ಹದಿನೈದನೆಯ ಶತಮಾನದವರೆಗೆ ಕರ್ನಾಟಕ ಕೆಲವು ಕಡೆಗಳಲ್ಲಿ ಬೆಳೆದಂತೆ ನಮಗೆ ತೋರುತ್ತದೆ. ತಮಿಳುನಾಡಿನಲ್ಲಿ ಹತ್ತನೆಯ ಶತಮಾನಕ್ಕಿಂತ ಹಿಂದಿನ ವೀರಗಲ್ಲುಗಳು ಇರುವ ವೀರರ ಗುಡಿಗಳು ಇವೆ.[೧೪೮]

ಇನ್ನು ಶಾಸನೋಕ್ತ ವೀರರ ಗುಡಿಗಳ ಬಗ್ಗೆ ಹೇಳಬೇಕೆಂದರೆ ಶಾಸನಗಳಲ್ಲಿ ವೀರಗುಡಿಗಳ ಉಲ್ಲೇಖ ದೊರೆಯುವುದು ತೀರಾ ವಿರಳ. ವೀರಗಲ್ಲುಗಳು ಆರಾಧನೆಯ ವಿಷಯವೇನೋ ವೀರಗಲ್ಲುಗಳ ಪಾಠದಿಂದ ದೊರೆಯುತ್ತದೆ.

---

೧೪೩ ಅದೇ, Kn. ೪೦

೧೪೪ ಅದೇ, Cp. ೧೫೦

೧೪೫ ಅದೇ, Kn. ೧೭೦

೧೪೬ ಅದೇ, Cp. ೧೭೦

೧೪೭ ಅದೇ, ೧೪೮

೧೪೮ ಈ ಬಗ್ಗೆ ಮಾಹಿತಿ ನೀಡಿದವರು ಆರ್. ನಾಗಾಸ್ವಾಮಿ ಅವರು. ನಿರ್ದೇಶಕರು, ಪುರಾತತ್ವ ಇಲಾಖೆ, ತಮಿಳುನಾಡು

ಕೋಲಾರ ಜಿಲ್ಲೆ, ಗೋರಿಬಿದನೂರು ತಾಲ್ಲೂಕ್ ಹಾಲುಗಾನಹಳ್ಳಿ ಎಂಬಲ್ಲಿನ ಒಂದು ಶಾಸನದಲ್ಲಿ "ಹಿರಿತಿಮ್ಮಪ್ಪನು ವೀರಕಲ್ಲಗುಡಿ ಕಟ್ಟಿಸ್ತುಗುಡಿ" – ಎಂಬ ಪ್ರಸ್ತಾಪವಿದೆ.[೧೪೯] ಉಳಿದ ವಿವರಗಳು ದೊರೆಯುವುದಿಲ್ಲ. ಇದೇ ಜಿಲ್ಲೆಯ ಮಾಲೂರು ತಾಲ್ಲೂಕ್ ಮಾಲೂರು ಗ್ರಾಮದ ಶಾಸನವೊಂದು "ಸಾರ್ವರಿ ಸಂವತ್ಸರದ ಶ್ರಾವಣ ಸುದ್ಧ ೧ರಲ್ಲು ಶ್ರೀ ಮಾಲೂರು ಶ್ರೀ ತಮ್ಮ ರಾಜ ರಾಜ ಹಂಪರಾಯ ವಾರು.......... ಕಾವಲ ವೀರಕಲ್ಲ ಗವಿ." ಎಂಬುದಾಗಿ ತಿಳಿಸುತ್ತದೆ.[೧೫೦] ಇದರ ಅರ್ಥ ರಾಜಹಂಪರಾಯ ಎಂಬುವನು ಕಟ್ಟಿಸಿದ 'ವೀರಗಲ್ಲುವಿ' – ಎಂಬುದಾಗಿರಬೇಕು. ಬಹುಶಃ ಇಲ್ಲಿ 'ವೀರಕಲ್ಲುಗವಿ' ಎಂಬುದು 'ವೀರರ ಗುಡಿ' ಎಂಬುದಕ್ಕೆ ಬಳಸಿದ ಪರ್ಯಾಯವಾದ ಪ್ರಾದೇಶಿಕ ಪದವಿರಬಹುದು.

ಕ್ರಿ. ಶ. ೧೭೧೨ರ ಚಿತ್ರದುರ್ಗ ಜಿಲ್ಲೆ ಶಾಸನವೊಂದು ಎಂಣಿಗೆರೆಯ ಲಿಂಗಯ್ಯಗೌಡ ಎಂಬುವವನು ವೀರಗಾರರಿಗೆ ಕಲ್ಲುಗುಡಿ ನಿರ್ಮಿಸಿದವರಿಗೆ ಹೊಲವೊಂದನ್ನು ದತ್ತಿಯಾಗಿ ಬಿಟ್ಟ ವಿಷಯವನ್ನು ತಿಳಿಸುತ್ತದೆ.[೧೫೧] ಸುಮಾರು ಹದಿನಾಲ್ಕು ಹದಿನೈದನೆಯ ಶತಮಾನಕ್ಕೆ ಸೇರಿದ ಶಾಸನವೊಂದು ವೀರಗುಡಿಯ ಪ್ರಸ್ತಾಪವನ್ನು ಮಾಡುತ್ತದೆ. ಆದರೆ ಶಾಸನ ಪಾಠ ತ್ರುಟಿತವಾಗಿದೆ ಆದುದರಿಂದ ಏನೂ ಹೇಳುವುದು ಸಾಧ್ಯವಿಲ್ಲ.[೧೫೨]

ಇಂಥ ವೀರರ ಗುಡಿಗಳಿಗೆ ಪೂಜೆ ನಡೆಯುತ್ತಿದ್ದ ವಿಷಯ ಮತ್ತು ಆ ಗುಡಿಯ ಪೂಜಾರಿಗಳಿಗೆ ಸಲ್ಲಿತ್ತಿದ್ದ ಕಾಣಿಕೆಯ ವಿಷಯ ತಾಮ್ರಶಾಸನವೊಂದರಿಂದ ಸ್ಪಷ್ಟವಾಗುತ್ತದೆ. ಜಿರ್ಲೆ ಮಲ್ಲಮ್ಮ ಎಂಬಾಕೆಯು ತನ್ನ ಅಭಿಪ್ರಾಯವನ್ನು ತಿಳಿಸುತ್ತಾ "ಗೋಪಾಲ ಕೃಷ್ಣಸ್ವಾಮಿಗೆ ಯೆಂಗಟಪುರದ ವೈಯಿಷ್ಣುಮನೆ ಪೂಜಾರ್‍ರಿ ವಂನೇಗೌಡನ ತಂಮನೇ ಯಿರಗಾರರ ಪೂಜಾರಿ" ಎಂಬುದಾಗಿ ಆ ಶಾಸನದಲ್ಲಿ ತಿಳಿಸುತ್ತಾಳೆ.[೧೫೩] ಈ ಶಾಸನದಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಈ ವೀರಗಾರರ ಗುಡಿಗಳಿಗೆ ಹಿಂದಿನಿಂದಲೂ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದವು ಮತ್ತು ಇವುಗಳನ್ನು ಪೂಜೆ ಮಾಡುವವರು ಬ್ರಾಹ್ಮಣೇತರರೇ ಆಗಿರುತ್ತಿದ್ದರು. ಇದಕ್ಕೆ ಪೋಷಕವಾಗಿ ಈ ಹಿಂದೆ ಗಮನಿಸಿದ ವೀರರ ಗುಡಿಗಳಲ್ಲಿನ ಪೂಜಾರಿಗಳ ಜಾತಿಯನ್ನು ಸ್ಮರಿಸಬಹುದು.

---

೧೪೯ E. C. X. Gd. 18, 1546

೧೫೦ ಅದೇ, Mr. 90. 1720

೧೫೧ E. C. XI. Dg. 48, 1712

೧೫೨ E. C. VII. Md. 4,

೧೫೩ M. A. R.1929. No. 97. 1464

ಆಂಧ್ರಪ್ರದೇಶದಲ್ಲಿ 'ವೀರ ಗುಡ್ಡಮುಲು' ಎಂಬುದು ಕರ್ನಾಟಕದಲ್ಲಿನ ವೀರರ ಗುಡಿಗಳನ್ನು ಹೋಲುವಂತಹ ವೀರರ ಸ್ಮಾರಕ ಶಿಲೆಗಳು ಇರುವ ಕಟ್ಟಡಗಳೇ ಆಗಿವೆ. ಇವುಗಳು ಸಾಮಾನ್ಯವಾಗಿ ಊರ ಹೊರಗೆ ಹೊಲಗಳಲ್ಲಿರುವುದನ್ನು ಗಮನಿಸಬಹುದು.[೧೫೪]

ವೀರಗಾರರ ಗುಡಿಗಳನ್ನು ನಿರ್ಮಿಸುವುದರ ಹಿಂದೆ ಇರುವ ಮನೋಧರ್ಮವೆಂದರೆ ; ಮಡಿದ ವೀರನ ಆತ್ಮ ರಕ್ಷಣೆಗೆ ಆಶ್ರಯವನ್ನು ಪಡೆಯಲು ಒಂದು ಸ್ಥಳಬೇಕೆಂಬುದೇ ಆಗಿದೆ.

ಒಟ್ಟಿನಲ್ಲಿ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಕರ್ನಾಟಕದ ಕೆಲವು ಪ್ರಾಂತಗಳಲ್ಲಿ ವೀರಗಲ್ಲನ್ನು ಹಾಗೆಯೇ ನಿಲ್ಲಿಸದೆ ಅವುಗಳಿಗೆ ಸರಳವಾದ ಗುಡಿಯನ್ನು ನಿರ್ಮಿಸಿ ಆರಾಧಿಸುವ ಸಂಪ್ರದಾಯ ಸುಮಾರು ಹತ್ತನೆಯ ಶತಮಾನದಿಂದ ಸುಮಾರು ಹದಿನೈದನೆಯ ಶತಮಾನದವರೆಗೂ ಇತ್ತು. ಇವುಗಳನ್ನು ಪೂಜಿಸುವ ಪೂಜಾರಿಗಳಿಗೆ ದತ್ತಿಯನ್ನು ಬಿಡುತ್ತಿದ್ದರು.

ವೀರ ಲಿಂಗಗಳು

ವೀರರ ಗುಡಿಗಳಲ್ಲಿ ವೀರರನ್ನು ಪ್ರತಿನಿಧಿಸುವ ಸಂಕೇತಗಳಾಗಿ ಯಾವುದೇ ವಸ್ತುವನ್ನು ಜನ ಸ್ವೀಕರಿಸಬಹುದು. ಕೆಲವು ಕಡೆ ಕೇವಲ ಒಂದು ಕಲ್ಲು, ಮತ್ತೆ ಕೆಲವು ಕಡೆ ವೀರನ ಆಯುಧಗಳು –ಹೀಗೆ ಯಾವುದೇ ಇರಬಹುದು. ವೀರರ ಆರಾಧನಾ ಸಂಪ್ರದಾಯದ ಆಚರಣೆಯ ಮೇಲೆ ಸಮಕಾಲೀನ ಧರ್ಮಗಳ ಪ್ರಭಾವವಾಗಿದೆ. ಸಾಮಾನ್ಯವಾಗಿ ಯುದ್ಧದಲ್ಲಿಯೋ ಅಥವಾ ಇನ್ನಿತರ ಯಾವುದೇ ವಿರೋಚಿತವಾದ ಹೋರಾಟದಲ್ಲಿ ವೀರನು ಮಡಿದರೆ ಅವನು ಯಾವ ಮತ, ಧರ್ಮ, ದೈವದ ಆರಾಧಕನಾಗಿರುತ್ತಾನೆಯೋ ಆ ಮತದ, ಧರ್ಮದ, ದೈವದ ಉನ್ನತ ಮಟ್ಟಕ್ಕೆ ಏರುತ್ತಾನೆ. – ಎಂಬ ನಂಬಿಕೆಯಲ್ಲಿ ದಟ್ಟವಾಗಿರುವ ಈ ಪ್ರಭಾವವನ್ನು ಗಮನಿಸಬಹುದು. ಮಡಿದ ವೀರನು ವೈಷ್ಣವ ಧರ್ಮದ ಅನುಯಾಯಿಯಾಗಿದ್ದರೆ ವೈಕುಂಠವನ್ನೂ, ಶೈವ ಧರ್ಮದ ಅವಲಂಬಿಯಾಗಿದ್ದರೆ ಕೈಲಾಸವನ್ನು ಸೇರುತ್ತಾನೆ ಎಂಬ ನಂಬಿಕೆಗಳು ಹುಟ್ಟಿಕೊಂಡವು. ಈ ವೀರಲಿಂಗಗಳ ಕಲ್ಪನೆ ಈ ರೀತಿಯ ಮನೋಧರ್ಮ ಮೂಲವಾದದ್ದು. ಶೈವ ಧರ್ಮದ ಪ್ರೇರಣೆಯಿಂದ ಮೂಡಿಬಂದದ್ದು.

---

೧೫೪ ಸುರವರಮು ಪ್ರತಾಪರೆಡ್ಡಿ : ಆಂಧ್ರುಲ ಸಾಂಘಿಕ ಚರಿತ್ರ. ಪು. ೧೧೧

ಮಡಿದ ವೀರನು ಶಿವಲೋಕವನ್ನು ಸೇರುತ್ತಾನೆ. ಅವನ ದೇಹವು ಭೂಲೋಕದಲ್ಲಿ ಲಿಂಗವಾಗಿ ನಿಲ್ಲುತ್ತದೆ ಎಂಬ ಕಲ್ಪನೆ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವುದನ್ನು ಗಮನಿಸಬಹುದು. ಕುಮಾರರಾಮನ ತಲೆಯನ್ನು ಮಾತಂಗಿ ತೆಗೆದುಕೊಂಡು ಹೋದ ಮೇಲೆ, ಆ ಪಂದಲೆ ಕಂದದೆ, ಕಳೆಯಳಿಯದೆ ಹೊತ್ತು ಹೊತ್ತಿಗೆ ಅಂದವೇರುತ್ತಾ ಸುರತಾಳನ ದುಃಖವನ್ನು ಕೆರಳಿಸುತ್ತದೆ. ಅದನ್ನು ನೋಡಿದ ಸುರತಾಳ ಸುತೆ ಮಾತಂಗಿ ಪ್ರಾಣತೆತ್ತಳು. ಹೊತ್ತು ಹೊತ್ತಿಗೆ ಪುಟವಿಕ್ಕಿದ ಚಿನ್ನದಂತೆ ಚೆಲುವು ತಲೆಯಿಂದ ಮುಕ್ಕಳಿಸುತ್ತಿರುವುದರಿಂದ ಪಟ್ಟಣ ಹಾಳಾಗುತ್ತದೆಯೆಂದು ಆಸ್ಥಾನದ ಪಂಡಿತರು ಭವಿಷ್ಯವನ್ನು ನುಡಿಯುತ್ತಾರೆ. ಆಗ ಆ ತಲೆಯನ್ನು ಸುರತಾಳ ಡಿಲ್ಲಿಯಿಂದ ಕುಮ್ಮಟ ದುರ್ಗಕ್ಕೆ ಕಳುಹಿಸುತ್ತಾನೆ. ಆ ತಲೆ ಕುಮ್ಮಟ ಕ್ಷೇತ್ರದಲ್ಲಿಳಿದ ಕೂಡಲೇ ಲಿಂಗಾಕೃತಿಯಾಯಿತು – ಎಂದು ನಂಜುಂಡನ ಕುಮಾರರಾಮನ ಸಾಂಗತ್ಯದಿಂದ ತಿಳಿದು ಬರುತ್ತದೆ.

ಈ ಸಂದರ್ಭದಲ್ಲಿಯೇ ಕುಮಾರರಾಮನ ದೇವಾಲಯದ ಬಗ್ಗೆ ಪ್ರಸ್ತಾಪ ಮಾಡುವುದು ಉಚಿತವೆಂದು ತೋರುತ್ತದೆ. ಕುಮ್ಮಟದ ಬಗ್ಗೆ ಈಗಾಗಲೇ ಉಪಯುಕ್ತ ಲೇಖನಗಳನ್ನು ಬರೆದಿರುವ ಶ್ರೀ ಮೈ. ಹ, ರಾಮಶರ್ಮರು, ಶ್ರೀ ಹುಲ್ಲೂರು ಶ್ರೀನಿವಾಸಜೋಯಿಸರು ಮತ್ತು ಡಾ. ಜಿ. ವರದರಾಜಾರಾಯರು ರಾಮನಾಥನ ಕುಲದೈವವಾದ ಜಟ್ಟಂತಿ ರಾಮೇಶ್ವರ ದೇವಾಲಯ ಕುಮ್ಮಟದುರ್ಗದಲ್ಲಿದೆ ಎಂಬುದಾಗಿ ತಿಳಿಸುತ್ತಾರೆ. ಈ ಬಗ್ಗೆ ಶ್ರೀ ಮೈ. ಹ. ರಾಮಶರ್ಮರು ಈ ರೀತಿ ಬರೆಯುತ್ತಾರೆ : "ಮುಂದೆ ಹೋದರೆ ಅದೇ ಗುಡ್ಡದ ಕುಂಭಿ. ಅಲ್ಲಿ ಮೊದಲು ಕಣ್ಣಿಗೆ ಬೀಳುವುದು ಒಂದು ಗುಡಿ. ಇದು ರಾಮನಾಥನ ಕುಲ ದೈವವಾದ ಜಟ್ಟಂಗಿ ರಾಮೇಶ್ವರನದು. ಇದರಲ್ಲಿ ಹೆಚ್ಚಿನ ಶಿಲ್ಪಕಲೆಯೇನೂ ಇಲ್ಲ. ಗರ್ಭ ಗೃಹ, ಅದರ ಮುಂದೆ ನಾಲ್ಕು ಕಂಬಗಳ ಸಭಾಮಂಟಪ, ಇಷ್ಟೆ; ಮೇಲಿರುವ ಗೋಪುರ ಮಹಾರಾಷ್ಟ್ರದ ಹೇಮಾಡಪಂತಿ ಮಾದರಿಯನ್ನು ಹೋಲುತ್ತದೆ. ಈ ದೃಷ್ಟಿಯಿಂದ ಇದನ್ನು ಹೊಸ ಕಟ್ಟಡವೆಂದು ಭಾವಿಸಬೇಕಾಗುವುದು. ಗರ್ಭಗೃಹದಲ್ಲಿ ವಿಗ್ರಹವೂ ಇಲ್ಲ ; ಲಿಂಗವೂ ಇಲ್ಲ ; ಲಿಂಗದಂತೆ ಕಾಣುವ ಒಂದು ಒರಟು ಕಲ್ಲು ಮಾತ್ರ ಇದೆ. ಇದಕ್ಕೆ ಪೂಜೆ ನಡೆಯುತ್ತಿರುವಂತೆ ಕಂಡುಬರಲಿಲ್ಲ. ವರ್ಷಕ್ಕೆ ಒಂದಾವರ್ತಿ ವೈಶಾಖ ಶುದ್ಧ ಪೂರ್ಣಿಮೆಯ ದಿವಸ ಮಾತ್ರ ಸುತ್ತಮುತ್ತಲಿನ ಗ್ರಾಮಸ್ಥರು ಇಲ್ಲಿ ಜಾತ್ರೆ ನಡೆಸುತ್ತಾರೆ. ಆಗ ಎರಡು ಕೃತಕ ರುಂಡಗಳನ್ನು ಪೂಜಿಸುವರು......... ಜಾತ್ರೆಗಾಗಿ ಬಂದವರು ಕುರಿಗಳನ್ನು ಕಡಿದು ಜೋಳದೊಂದಿಗೆ ಬೇಯಿಸಿ ಊಟ ಮಾಡುವರಂತೆ. ಇದಕ್ಕೆ ವೀರಕೂಳೆಂದು ಹೆಸರು. ನಿಸ್ಸಂದೇಹವಾಗಿ ಇದು ವೀರರಾಮನಾಥನ ಆತ್ಮಯಜ್ಞಸ್ಮರನೆಗೆಂದೇ ಹೇಳಬೇಕು." ಎಂಬುದಾಗಿ

ತಿಳಿಸುತ್ತಾರೆ. ಇದೇ ಲೇಖನದಲ್ಲಿ ಮತ್ತೊಂದು ಕಡೆ "ಇವರ ಕುಲದೇವರು ಪಕ್ಕದ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಿದ್ಧಾಪುರದ ಬಳಿ ಇರುವ ಜಟ್ಟಂಗಿ ರಾಮೇಶ್ವರ" ಎಂಬುದಾಗಿ ಅವನ ವಂಶಸ್ಥರ ಬಗ್ಗೆ ಬರೆಯುವಾಗ ಹೇಳುತ್ತಾರೆ.[೧೫೫]

ಇಲ್ಲಿ ನಮಗೆ ಬರುವ ಸಮಸ್ಯೆ ಎಂದರೆ ಕುಮ್ಮಟದುರ್ಗದಲ್ಲಿರುವ ಗುಡಿ ಕುಮಾರರಾಮನಾಥನ ಕುಲದೈವವಾದ ಜಟ್ಟಂಗಿ ರಾಮೇಶ್ವರನದೇ ? ಹಾಗಿದ್ದಲ್ಲಿ ಇದರ ಉಗಮ ಯಾವಾಗ ? ಇದು ಜಟ್ಟಂಗಿ ರಾಮೇಶ್ವರನ ದೇವಾಲಯವಾಗಿದ್ದ ಪಕ್ಷದಲ್ಲಿ ಕುಮಾರರಾಮನಿಗೆ ಸಂಬಂಧಪಟ್ಟ ಜಾತ್ರೆ ಇಲ್ಲಿ ನಡೆಯುವ ಉದ್ದೇಶವಾದರೂ ಏನು ಎಂಬುದು.

ಕುಮ್ಮಟ ದುರ್ಗದಲ್ಲಿನ ಆ ದೇವಾಲಯದ ಬಗ್ಗೆ ಶ್ರೀರಾಮಶರ್ಮರು ವಿವರವಾಗಿ ಹೇಳಿದ್ದರೂ, ಆ ದೇವಾಲಯದ ಪರಿಸರವನ್ನು ವಿವರಿಸುವುದು ಅಗತ್ಯವೆಂದು ತೋರುತ್ತದೆ.

(೧) ಅಲ್ಲಿಯ ಜನ ಈ ದೇವಾಲಯವನ್ನು ಜಟ್ಟಂಗಿ ರಾಮೇಶ್ವರ ದೇವಾಲಯವೆಂದು ಕರೆಯುವುದಿಲ್ಲ. ಬದಲಾಗಿ ರಾಮಸ್ವಾಮಿಗುಡಿ ಎಂದು ಕರೆಯುತ್ತಾರೆ.

(೨) ಈ ರಾಮಸ್ವಾಮಿ ದೇವಾಲಯದ ಗರ್ಭಗುಡಿಯಲ್ಲಿ ಎಂಟು ಹತ್ತು ಲಿಂಗಾಕೃತಿಯ ಒರಟು ಕಲ್ಲುಗಳನ್ನು ಹೂತು ಅವಕ್ಕೆ ಪೂಜೆ ಮಾಡುತ್ತಾರೆ. ಅವುಗಳಲ್ಲಿನ ಮಧ್ಯದ ಒಂದು ಕಲ್ಲನ್ನು ನಿರ್ದೇಶಿಸಿ ಅದು ರಾಮಸ್ವಾಮಿ ಎಂಬುದಾಗಿ ಹೇಳುತ್ತಾರೆ. ಇದೇ ದೇವಾಲಯದ ಹೊರ ಭಾಗದಲ್ಲಿ ಸುಮಾರು ಮೂರು ಅಡಿ ಎತ್ತರ, ಎರಡು ಅಡಿ ಅಗಲದ ಬಿಳಿಯ ಕಲ್ಲಿನ ಚಪ್ಪಡಿಯ ಮೇಲೆ ಕುದುರೆಯ ವಿಗ್ರಹೊಂದನ್ನು ಬಿಡಿಸಿದ್ದಾರೆ. ಇದು ಕುಮಾರರಾಮನ ಕುದುರೆಯಾದ ಬೊಲ್ಲನದು ಎಂಬುದರಲ್ಲಿ ಸಂಶಯವಿಲ್ಲ. (ಚಿತ್ರ ೫)

ಬೇಡ ಜನಾಂಗದವರಲ್ಲಿ ಮನೆತನದ ಹಿರಿಯರನ್ನು ಪ್ರತಿನಿಧಿಸಲು ಮತ್ತು ಮದುವೆಯಾಗದೆ ಸತ್ತ ಗಂಡಸನ್ನು ಪ್ರತಿನಿಧಿಸಲು ಒರಟು ಕಲ್ಲುಗಳನ್ನು ಇಡುತ್ತಾರೆ. ಕೆಲವೊಮ್ಮೆ ಶಿಲಾಯುಗದ ಶಿಲಾಯುಧಗಳನ್ನಿಡುವುದೂ ಉಂಟು. ಇದೇ ಸಂಪ್ರದಾಯದಂತೆ ಕುಮ್ಮಟದುರ್ಗದಲ್ಲಿರುವ ಬೇಡ ಜನಾಂಗದವರು ಕುಮ್ಮಟದುರ್ಗದ ಪತನವಾದನಂತರ ಕುಮಾರರಾಮನನ್ನು ಆರಾಧಿಸುವ ಸಲುವಾಗಿ ನಿರ್ಮಿಸಿಕೊಂಡಿರುವ ದೇವಾಲಯ ಇದಾಗಿರಬೇಕು.

---

೧೫೫ ಮೈ. ಹ. ರಾಮಶರ್ಮ : ರಣಧೀರ ರಾಮನಾಥ. 'ಅನುಬಂಧ'

ಈ ಸ್ಮಾರಕ ಶಿಲೆಗಳು ಲಿಂಗಾಕೃತಿಯಲ್ಲಿರುವುದರಿಂದಲೂ ಮತ್ತು ಶೈವಧರ್ಮದ ಪ್ರಭಾವದಿಂದಾಗಿ ಬೆಳೆದುಬಂದ 'ವೀರನು ಸತ್ತಮೇಲೆ ಲಿಂಗವಾಗುತ್ತಾನೆ' ಎಂಬ ಕಲ್ಪನೆ ಒಂದೆಡೆಗೆ ಬೆಳೆದುಬಂದುದರಿಂದಲೂ ಅದು 'ರಾಮೇಶ್ವರಸ್ವಾಮಿ ದೇವಾಲಯ', 'ರಾಮಸ್ವಾಮಿ ದೇವಾಲಯ' ಎಂದು ಕರೆಯಲ್ಪಟ್ಟಿರಬೇಕು. ಇಲ್ಲಿಯೇ ದೇವಾಲಯದ ಹೊರಗೆ ಇರುವ ಬೊಲ್ಲನ ಸ್ಮಾರಕವನ್ನು ಗಮನಿಸಿದಾಗ ಮತ್ತು ಕುಮಾರರಾಮನಿಗೆ ಸಂಬಂಧಪಟ್ಟ ಜಾತ್ರೆಯೂ ಇಲ್ಲಿಯೇ ನಡೆಯುವ ಔಚಿತ್ಯವನ್ನು ಮನಗಂಡಾಗ ನಮ್ಮ ಅಭಿಪ್ರಾಯ ಸ್ಪಷ್ಟವಾಗುತ್ತದೆ.

ಒಬ್ಬ ವ್ಯಕ್ತಿ ತನ್ನ ಹೆಸರಿನಲ್ಲಿ ದೇವಾಲಯವನ್ನು ನಿರ್ಮಿಸಿ ತನ್ನ ಹೆಸರಿಗೆ ಈಶ್ವರ ಎಂಬ ಪದವನ್ನು ಸೇರಿಸಿ ತನ್ನ ಮೂರ್ತಿಯನ್ನು ಲಿಂಗಾಕೃತಿಯಲ್ಲಿ ದೇವಾಲಯದ ಒಳಾವರಣದಲ್ಲಿ ಸ್ಥಾಪಿಸುವುದು, ಲಿಂಗವನ್ನು ದೈವಿಕ ಭಾವನೆಯಿಂದ ಪ್ರತಿಷ್ಠಾಪಿಸುವ ಸಂಪ್ರದಾಯಕ್ಕಿಂತಲೂ ಭಿನ್ನವಾದದ್ದು. ಇಲ್ಲಿ ವ್ಯಕ್ತಿಯ ಹೆಸರಿನಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿ ಆ ವ್ಯಕ್ತಿಗೆ ಪುಣ್ಯ ದೊರೆಯುವಂತಾಗಲಿ ಎಂಬುದು ಉದ್ದೇಶವಲ್ಲ. ಬದಲಾಗಿ ವ್ಯಕ್ತಿ ಲಿಂಗವಾಗಿ ನಿಂತಿದ್ದಾನೆ, ಎಂದು ಸತ್ತ ವ್ಯಕ್ತಿಯನ್ನು ಗೌರವಪೂರ್ವಕವಾಗಿ ಕರೆಯುವುದರ ಮೂಲಕ ಆ ವ್ಯಕ್ತಿಯನ್ನು ಅಲೌಕಿಕ ವ್ಯಕ್ತಿಯನ್ನಾಗಿ ಮಾಡಿ ಆರಾಧಿಸುವ ಸಂಪ್ರದಾಯ. ಈ ಉದ್ದೇಶದಿಂದ ನಿರ್ಮಿತ ಅಥವಾ ಸ್ಥಾಪಿತವಾಗಿರುವ ಲಿಂಗಗಳಿಗೆ ಒಂದು ಖಚಿತವಾದ ಆಕಾರ ಇರುವುದಿಲ್ಲ ಮತ್ತು ಈ ತೆರನ ದೇವಾಲಯಗಳ ಮುಂದೆ ಸಾಮಾನ್ಯವಾಗಿ ಶಿವದೇವಾಲಯಗಳ ಮುಂದೆ ಇರುವ ನಂದಿ ಇರುವುದಿಲ್ಲ. ಇವುಗಳನ್ನು ಆರಾಧಿಸುವ ಜನ ಬಹುಪಾಲು ಬ್ರಾಹ್ಮಣೇತರರೇ ಆಗಿರುತ್ತಾರೆ. ಅದರಲ್ಲಿಯೂ ಒಂದು ಜನಾಂಗದ, ಕೋಮಿನ ವ್ಯಕ್ತಿಗಳು ಮಾತ್ರ ಈ ತೆರನ ಲಿಂಗಗಳಿಗೆ ನಡೆದುಕೊಳ್ಳುತ್ತಾರೆ.

೩. ವೀರಗಲ್ಲುಗಳನ್ನು ಹಾಕಿಸುತ್ತಿದ್ದ ಉದ್ದೇಶ

ವೀರಗಲ್ಲನನು ನಿಲ್ಲಿಸುವಲ್ಲಿ, ಅದನ್ನು ನಿಲ್ಲಿಸಿದವರು ಯಾವ ಉದ್ದೇಶಕ್ಕಾಗಿ ನಿಲ್ಲಿಸಿದರು ಎಂಬುದು ಬಹು ಮುಖ್ಯವಾದ ಸಂಗತಿಯಾಗುತ್ತದೆ. ವೀರಗಲ್ಲುಗಳ ಪಾಠದಲ್ಲಿ, ತಾವು ಯಾವ ಉದ್ದೇಶಕ್ಕಾಗಿ ವೀರಗಲ್ಲನ್ನು ನಿಲ್ಲಿಸಿದ್ದೇವೆ ಎಂಬ ಅಂಶವನ್ನು ಅದನ್ನು ನಿಲಲಿಸಿದವರಲ್ಲಿ ಕೆಲವರಾದರು ಹೇಳಿಕೊಂಡಿದ್ದಾರೆ. ಈ ಮಾಹಿತಿಯ ಹಿನ್ನೆಲೆಯಲ್ಲಿ ವೀರಗಲ್ಲನ್ನು ನಿಲ್ಲಿಸುವಾಗ ಅಂದಿನ ಜನಕ್ಕೆ ಸಾಮಾನ್ಯವಗಿ ಯಾವ ಉದ್ದೇಶವಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ವೀರಗಲ್ಲನ್ನು ನಿಲ್ಲಿಸುವಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದೃಷ್ಟಿಗಳೆರಡೂ ಇತ್ತೆಂದು ತೋರುತ್ತದೆ. ವೀರನ ಪರಾಕ್ರಮವನ್ನು ಮೆಚ್ಚಿ ವೀರಗಲ್ಲನ್ನು ನೆಡುವುದು ; ಅವನ ಪರಾಕ್ರಮ ಲೋಕಕ್ಕೂ ತಿಳಿಯಲೆಂದು ನೆಡುವುದು. ಇವು ಲೌಕಿಕ ಉದ್ದೇಶಗಳು. ಮಡಿದ ವೀರನಿಗೆ ವೀರಗಲ್ಲನ್ನು ನಿಲ್ಲಿಸುವುದು ತಮ್ಮ ಕರ್ತವ್ಯ ಎಂದು ಭಾವಿಸಿ, ಹಾಗೆ ವೀರಗಲ್ಲು ನಿಲ್ಲಿಸುವುದರ ಮೂಲಕ ಅವನಿಗೆ ಸ್ವರ್ಗವೋ, ಕೈಲಾಸವೋ, ವೈಕುಂಠವೋ ಪ್ರಾಪ್ತವಾಗುತ್ತದೆಯೆಂದು ನಂಬಿ ವೀರಗಲ್ಲುಗಳನ್ನು ನೆಡುವುದು. ಇವು ಪಾರಮಾರ್ಥಿಕ ಉದ್ದೇಶಗಳು.

ಬಮ್ಮಯ್ಯನೆಂಬ ವೀರನೊಬ್ಬನು ಯುದ್ಧವೊಂದರಲ್ಲಿ "ತನಗಿದಿರಾಂತ ವೈರಿಗಳನುಗ್ರ ಪರಾಕ್ರಮದಿಂದ ಕೊನ್ದು ಭೂವನಿತೆಗಧಿಶನೊಪ್ಪ ಚಲಂದಕನ ಮೆಚ್ಚಿಸಿ ಅಟ್ಟಹಳ್ಳಿಯೊಳು ಕನಕವಿಮಾನ ಮೇಱಿ ಸುರಲೋಕ – ಮನೆಯ್ದಿದ ಮಾರ್ಗಮಂ ಜಗಜ್ಜನಮಱಿಯಲ್ ಮಾಡಿದುದು ಬಮ್ಮನ ಸಾಸನ ವೀರಸಾಸನ", ಎಂಬುದಾಗಿ ಒಂದು ವೀರಗಲ್ಲಿನ ಪಾಠದಿಂದ ತಿಳಿದು ಬರುತ್ತದೆ.[೧] ತನ್ನ ತಮ್ಮನಾದ ಸೋಮೆಯನೆಂಬುವನು ಹೆಣ್ಣುಮಕ್ಕಳ ಮಾನವನ್ನು

---

೧ S. I. I. XX. 169. 1183

ಕಾಪಾಡಲು ಹೋಗಿ ಮಡಿದಾಗ, ಅವನ ಅಣ್ಣ, ತನ್ನ ತಮ್ಮ ಸೋಮೆಯನಿಗೆ ವೀರಗಲ್ಲನ್ನು ನಿಲ್ಲಿಸುವುದರ ಮೂಲಕ ಅವನ 'ವೀರವಸ್ತುವಂ' ನಿಲ್ಲಿಸುತ್ತಾನೆ, – ಈ ವಿಷಯ ಕ್ರಿ. ಶ. ೧೧೯೦ರ ವೀರಗಲ್ಲೊಂದರಿಂದ ತಿಳಿಯುತ್ತದೆ.[೨] ಜಕ್ಕನೆಂಬುವನು ಯುದ್ಧವೊಂದರಲ್ಲಿ ಸತ್ತಾಗ, ಆತನ ಅಳಿಯನು ತನ್ನ ಮಾವನ "ವೀರಮನುಂನತ ಗುಣನಿಳಯ ಮೆಚ್ಚಿಗಂ ನೆಜೆಕೇಳ್ದಾ ಮಂನಣೆಯ ವೀರಶಾಸನದುಂನತಿಯಂ ಮಾಡಿ ನಿಜೆಸಿದ" ವಿಷಯ ಕ್ರಿ.ಶ. ೧೨೯೨ರ ವೀರಗಲ್ಲೊಂದರಿಮದ ತಿಳಿದು ಬರುತ್ತದೆ.[೩]

ಈ ದಿಶೆಯಲ್ಲಿ ಬೇಲೂರಿನ ಕುವರಲಕ್ಷ್ಮನಶಾಸನ ಇನ್ನೂ ಹೆಚ್ಚಿನ ಬೆಳಕನ್ನು ಬೀರುತ್ತದೆ. ವೀರನಿಗೆ ಇಲ್ಲದ ಪರಾಕ್ರಮ ಗುಣಗಳನ್ನು ಆರೋಪಿಸಿ ಹೊಗಳುವುದರ ಮೇಲೆ ವೀರಶಾಸನದ ಉನ್ನತಿ ನಿಂತಿಲ್ಲ. ವೀರನು ಬದುಕಿದ ವೀರೋಚಿತ ಜೀವನವನ್ನು ಯಥಾವತ್ತಾಗಿ ವರ್ಣಿಸುವುದರಿಂದ ಅದು ಸಹಜವಾಗಿ ವೀರಶಾಸನ ಆಗುತ್ತದೆ. ಎಂಬ ಅಂಶ ಆ ಶಾಸನದಿಂದ ವ್ಯಕ್ತವಾಗುತ್ತದೆ. ಕುವರಲಕ್ಷ್ಮನನ್ನು ಹೊಗಳುತ್ತಾ ಆ ಶಾಸನ "ವೀರದಶಾಸನಮಂ ಮುಂನಾರುಂ ನಿಱಿಸಿದವರಿಲ್ಲ ಬಲ್ಲಾಳ ಧರಿತ್ರೀರಮಣನ ಮಂತ್ರೀವರಂ ವೀರಭಟಂ ಕುವರಲಕ್ಷ್ಮದಂಡೇಶನವೋಲ್" ಎಂಬುದಾಗಿ ತನ್ನನ್ನೇ ಹೊಗಳಿಕೊಂಡು "ಇಲ್ಲದ ಸಲ್ಲದ ಭಾಷೆಗೆ ಕಲ್ಲನಿಜೆಸುವರನುಜಿದೆ ನಗುವವೋಲಿರ್ಕ್ಕುಂ ಪಲ್ಲವಿಸಿ ಕುವರಲಕ್ಷ್ಮನ ಕಲ್ಲಕವಲ್ತೆಸೆವ ಕಾಂತಿ ದಿಗ್ಭಿತ್ತಿಯೊಳ್" ಎಂಬುದಾಗಿ ತನ್ನ ಶ್ರೇಷ್ಠತೆಯನ್ನು ಹೇಳಿಕೊಳ್ಳುತ್ತದೆ.[೪]

ಈ ಎಲ್ಲ ಮಾಹಿತಿಗಳ ಆಧಾರದ ಮೇಲೆ ಹೇಳುವುದಾದರೆ ವೀರಗಲ್ಲನ್ನು ನಿಲ್ಲಿಸುವಲ್ಲಿನ ಪ್ರಮುಖ ಉದ್ದೇಶ ವೀರನ ಪರಾಕ್ರಮ ಲೋಕಕ್ಕೆ ತಿಳಿಯುವಂತೆ, ಅದರಿಂದ ಮುಂದಿನ ತಲೆಮಾರಿನ ವೀರರು ಉತ್ತೇಜನಗೊಳ್ಳುವಂತೆ, ಆ ವೀರನನ್ನು ತಮ್ಮ ಆದರ್ಶ ಪುರುಷನನ್ನಾಗಿ ಮಾಡಿಕೊಳ್ಳುವಂತೆ ಮಾಡುವುದೇ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ರೀತಿ ವೀರಗಲ್ಲನ್ನು ವೀರನ ಪರಾಕ್ರಮದ ಪ್ರಕಟಣೆಗಾಗಿ ನಿಲ್ಲಿಸುವ ಪರಿಪಾಠ ಹೊಸದೇನೂ ಅಲ್ಲ. ತಮಿಳಿನ ಸಂಗಮ್ ಸಾಹಿತ್ಯದ 'ಮಾಲೈಪಡು ಕಡಮ್' ಎಂಬ ಕೃತಿಯಿಂದ "ವೀರನ ಪರಾಕ್ರಮದ ಔನ್ನತ್ಯವನ್ನು ಪ್ರಪಂಚಕ್ಕೆ ತಿಳಿಸುವ ಸಲುವಾಗಿಯೇ ವೀರಗಲ್ಲನ್ನು ಜನ ಹಾಕಿಸುತ್ತಿದ್ದರು" ಎಂದು ತಿಳಿದುಬರುತ್ತದೆ. ಈ ಕಾರಣಕ್ಕಾಗಿ ವೀರನ ಶಿಲ್ಪವಿರುವ ವೀರಗಲ್ಲಿನ

೨ M. A. R.1926. 40 1190

೩ E. C. III. Sa. 110. 1292

೪ E. C. V. BI. 112

ಮೇಲೆ ಅವನ ಪರಾಕ್ರಮವನ್ನು ಸಾರುವ ಪಾಠವನ್ನು ಉತ್ಕೀರ್ಣ ಮಾಡುತ್ತಿದ್ದರು ಎಂಬ ಅಂಶವು ಅದರಿಂದಲೇ ತಿಳಿಯುತ್ತದೆ.[೫] ಈ ಎಲ್ಲ ಹಿನ್ನೆಲೆಯಲ್ಲಿ ಕರ್ನಾಟಕದ ವೀರಗಲ್ಲುಗಳ ಶಿಲ್ಪ ಮತ್ತು ಪಾಠವನ್ನೂ, ಅವುಗಳಲ್ಲಿನ ವೀರನ ಪ್ರಶಂಸೆ, ವರ್ಣನಾ ರೀತಿ, ಶೈಲಿ ಮುಂತಾದವುಗಳನ್ನು ಗಮನಿಸಿದಾಗ ಕರ್ನಾಟಕದ ಬಹುಪಾಲು ವೀರಗಲ್ಲುಗಳನ್ನು ಹಾಕಿಸುವಲ್ಲಿನ ಜನರ ಉದ್ದೇಶ ವೀರನ ಪರಾಕ್ರಮ ಲೋಕಕ್ಕೆ ತಿಳಿಸುವುದೇ ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಮೇಲೆ ಹೇಳಿದ ಉದ್ದೇಶಕ್ಕಿಂತಲೂ ಭಿನ್ನವಲ್ಲದ, ಬೇರೊಂದು ಕಾರಣಕ್ಕೆ ವೀರಗಲ್ಲನ್ನು ನಿಲ್ಲಿಸಿರುವ ಮನೋಧರ್ಮವನ್ನು ಕಾಣಬಹುದು. ಇದು ವ್ಯಕ್ತವಾಗಿರುವುದು ತನ್ನ ಪರವಾಗಿ ಹೋರಾಡಿ ಸತ್ತ ವೀರನ ಪರಾಕ್ರಮವನ್ನು ಮೆಚ್ಚಿದ ಅವನು ಆಶ್ರಯದಾತ ಅಥವಾ ಅವನ ಊರಿನವರು ಹಾಕಿಸುವ ವೀರಗಲ್ಲುಗಳಲ್ಲಿ. ಇಂಥ ವೀರಗಲ್ಲುಗಳಲ್ಲಿ ವೀರನ ಮತ್ತು ಆಶ್ರಯದಾತನ ನಡುವಿನ ಸಂಬಂಧ, ತನ್ನ ಪರವಾಗಿ ಹೋರಾಡಿ ಮಡಿದ ವೀರನ ಬಗ್ಗೆ ಆಶ್ರಯದಾತನಿಗಿದ್ದ ಹೆಮ್ಮೆ, ತನ್ನ ಸೇವಕನ ಅನ್ನದ ಋಣ, ಉಪ್ಪಿನ ಋಣ ಸಂದಿದೆ ಎಂಬ ತೃಪ್ತಿ ವ್ಯಕ್ತವಾಗಿರುತ್ತದೆ.

ವಿಜತ್ತನ್ ಎಂಬುವನು ತನ್ನ ಪರವಾಗಿ ಹೋರಾಡಿ ಸತ್ತ ಕಾರಣದಿಂದಾಗಿ ಬಾಣರಸ ವಿಜತ್ತನೆ ಪರಾಕ್ರಮವನ್ನು ಮೆಚ್ಚಿ ವೀರಗಲ್ಲನ್ನು ನಿಲ್ಲಿಸಿ ಗಂಗವಾಡಿಯನ್ನು ಅವನ ಸಂತತಿಯವರಿಗೆ ಕೊಡುತ್ತಾನೆ.[೬] ರಾಯಮುರಾರಿ ಸೋಮೆಯ'ನು ತನ್ನ ಪರವಾಗಿ ಹೋರಾಡಿ ಮಡಿದ ವೀರನೊಬ್ಬನ 'ಅರಸಾಳು ತನಕೆ' ಮೆಚ್ಚಿ ವೀರಗಲ್ಲನ್ನು ನಿಲ್ಲಿಸುತ್ತಾನೆ.[೭] ವೀರತನಕ್ಕೆ ಆಗರವಾದ ಬೊಪ್ಪಣ ಎಂಬ ವೀರನು ಯುದ್ಧದಲ್ಲಿ ಮಡಿದಾಗ ಅವನ ಪರಾಕ್ರಮವನ್ನು ಕಂಡು ಮೆಚ್ಚಿದ ಅವನ "ಸ್ವಾಮಿ ಸಂತೋಷಂ ಬಡೆದ" ವೀರಶಾಸನವನ್ನು ನಿಲ್ಲಿಸುತ್ತಾನೆ.[೮]

ಈ ಅಂಶ ಇನ್ನೂ ಸ್ಪಷ್ಟವಾಗಬೇಕಾದರೆ ತಮ್ಮ ಪ್ರೀತಿಪಾತ್ರವಾದ ಪ್ರಾಣಿಗಳಿಗೆ ಅವುಗಳ ಒಡೆಯರು ಹಾಕಿಸಿರುವ ವೀರಗಲ್ಲುಗಳನ್ನು ಗಮನಿಸುವುದು ಉಚಿತ. ಇವುಗಳನ್ನು ವೀರಗಲ್ಲುಗಳು ಎಂದು ಪರಿಗಣಿಸುವುದರಲ್ಲಿ ತಪ್ಪಿಲ್ಲವೆಂದೇ ನಮ್ಮ ಭಾವನೆ. ಬೇಟೆಯಲ್ಲಿ

---

೫ N. Subramani : Sangam Polity. ಪು. ೩೧

೬ E. C. X. Mb. 228, ಸು. ೮೯೦ ?

೭ E. C. VII. Sk. 245, 1183

೮ S. I. I. XX. 125, 1185

ತಮಗೆ ಅನೇಕ ರೀತಿಗಳಿಂದ ನೆರವನ್ನು ನೀಡಿ, ತಮ್ಮೊಂದಿಗೆ ವೀರೋಚಿತವಾದ ರೀತಿಯಲ್ಲಿ ಹೋರಾಡಿ, ಆ ಹೋರಾಟದಲ್ಲಿ ಮಡಿದ ಪ್ರಾಣಿಗಳ ಒಡೆಯರು ಅವುಗಳ ಪರಾಕ್ರಮವು ಲೋಕಕ್ಕೆ ತಿಳಿಯುವಂತೆ ವೀರಗಲ್ಲುಗಳನ್ನು ಹಾಕಿಸುವುದರ ಮೂಲಕ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಈ ದಿಶೆಯಲ್ಲಿ ಆತಕೂರಿನ ಶಾಸನ ಮಹತ್ವದ್ದಾಗಿದೆ. ಮಣಾಲರ ಎಂಬುವನು ತನ್ನೊಡನೆ ಹಂದಿಯ ಬೇಟೆಗಾಗಿ ಬಂದು, ಆ ಬೇಟೆಯಲ್ಲಿ ಮಡಿದ 'ಕಾಳಿ' ಎಂಬ ನಾಯಿಯ ಸ್ಮಾರಕವಾಗಿ ವೀರಗಲ್ಲನ್ನು ನಿಲ್ಲಿಸಿದ್ದಾನೆ (ಚಿತ್ರ ೮). ಅಷ್ಟೇ ಅಲ್ಲ ಆ ನಾಯಿಯ ಹೆಸರಿನಲ್ಲಿ ಪೂಜೆ ನಡೆಯುವಂತೆ ನಿಯಮ ಮಾಡಿದ್ದಾನೆ. ತಾನು ಆ ನಾಯಿಯನ್ನು ಪಡೆದ ಬಗೆಗೆ ಸುದೀರ್ಘ ವಿವರವನ್ನು ನೀಡಿದ್ದಾನೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮಣಾಲರನಿಗೆ ಆ ನಾಯಿಯು ಬಗ್ಗೆ ಇದ್ದ ಅಪಾರವಾದ ಪ್ರೇಮವೇ ಅದಕ್ಕಾಗಿ ಕಲ್ಲನ್ನು ನಿಲ್ಲಿಸುವಂತೆ ಮಾಡಿತು ಎಂಬುದು ವ್ಯಕ್ತವಾಗುತ್ತೆ.[೯] ಇಷ್ಟು ಸುದೀರ್ಘ ವಿವರಗಳು ದೊರೆಯದಿದ್ದರೂ ನಾಯಿಗಾಗಿ ಹಾಕಿಸಿರುವ ಹಲವಾರು ವೀರಗಲ್ಲುಗಳು ದೊರೆಯುತ್ತವೆ. ಹಂದಿಯ ಬೇಟೆಯಲ್ಲಿ ಸತ್ತ 'ಪೂಣಿಗ' ಎಂಬ ನಾಯಿಯ ಸ್ಮಾರಕವನ್ನು ತಣ್ಣೂರು ಮತ್ತು ಚೋರಗಿರಿಯನ್ನು ಆಳುತ್ತಿದ್ದ ಅರಸನು ನಿಲ್ಲಿಸಿದ ವಿಷಯ ತಿಳಿಯುತ್ತದೆ.[೧೦] ಹಾಗೆಯೇ ಹಂದಿಯೊಡನೆ ಹೋರಾಡಿ ಸತ್ತ ವೀರನಾಯಿಯ ವೀರಗಲ್ಲು ಯಲಹಂಕದಲ್ಲಿ ದೊರೆಯುತ್ತದೆ (ಚಿತ್ರ ೯). ಶಾಸನವಿಲ್ಲದ ನಾಯಿಯ ಸ್ಮಾರಕಗಳು ಹೊಸ ಕೋಟೆ ತಾಲ್ಲೂಕ್ ಕೋಡಿಹಳ್ಳಿ ಮತ್ತು ಕಟ್ಟಿಗೇನ ಹಳ್ಳಿ ಎಂಬ ಗ್ರಾಮಗಳಲ್ಲಿ ದೊರೆಯುತ್ತವೆ. (ಚಿತ್ರ ೪೨) ಅಲ್ಲದೆ ಬೆಂಗಳುರು ಜಿಲ್ಲೆ ಅನೇಕಲ್ ತಾಲ್ಲೂಕ್ ವಣಕನಹಳ್ಳಿ ಗ್ರಾಮದಲ್ಲಿಯೂ ಹಂದಿಯ ಬೇಟೆಯ ವೀರಗಲ್ಲು ಇದೆ. ಇಲ್ಲಿ ಹಂದಿಯೊಂದನ್ನು ಎರಡು ನಾಯಿಗಳು ಹಿಂದು ಮತ್ತು ಮುಂದುಗಡೆಯಿಂದ ಆಕ್ರಮಣ ಮಾಡುತ್ತಿರುವಂತೆ ಶಿಲ್ಪವನ್ನು ಬಿಡಿಸಲಾಗಿದೆ.

ಈ ರೀತಿಯಲ್ಲಿ ಆಶ್ರಯದಾತರು ತಮ್ಮ ಪರವಾಗಿ ಹೋರಾಡಿ ಸತ್ತ ವೀರನೊಬ್ಬನಿಗೆ ವೀರಗಲ್ಲನ್ನು ಹಾಕಿಸುವುದರ ಮೂಲಕ, ಆತನ ಸೇವೆಯನ್ನು ಲೋಕವರಿಯುವಂತೆ ಗುರುತಿಸುತ್ತಿದ್ದರು. ಇದನು ಗಮನಿಸಿದಾಗ ಅರಸನು ತನ್ನ ಕಡೆಯ ವೀರನು ಹೋರಾಟದಲ್ಲಿ ಮಡಿದರೂ, ಮಡಿದ ವೀರನ ಪರಾಕ್ರಮವನ್ನು ಈ ರೀತಿ ಗುರುತಿಸುವುದರಿಂದ ಉಳಿದ ಜನರಿಗೆ ಅವನ ಕೃತಜ್ಞತೆಯ ಬಗ್ಗೆ ನಂಬುಗೆ ಉಂಟಾಗುತ್ತಿತ್ತು.

---

೯ E. C. III. Md. 41, 950

೧೦ S. I. I. IX. pt 1. No. 37

ಇನ್ನೂ ವೀರನ ಮರಣೋತ್ತರ ಜೀವನಕ್ಕೆ ಶ್ರೇಯಸ್ಸು ದೊರೆಯಲಿ ಎಂದು ಹಾಕಿಸಿದ ವೀರಗಲ್ಲುಗಳನ್ನು ನೋಡಬಹುದು.

ಸೋಮೆಯ ಎಂಬುವನು ಹೋರಾಟದಲ್ಲಿ ಸತ್ತಾಗ, ಸೋಮೆಯಗೌಡನ ಮಗನೂ ಮತ್ತು ಸೋದರನೂ, ಇಬ್ಬರೂ ಸೇರಿ "ಸೋಮೆಯನು ದೇವಲೋಕಕ್ಕೆ ಸಲ್ಲಬೇಕೆಂದು" ವೀರಗಲ್ಲನ್ನು 'ಪ್ರತಿಷ್ಠೆ' ಮಾಡಿಸಿದರೆಂದು ಕ್ರಿ.ಶ. ೧೨೫೪ರ ವೀರಗಲ್ಲೊಂದರ ಪಾಠದಿಂದ ತಿಳಿಯುತ್ತದೆ.[೧೧] ಕ್ರಿ.ಶ. ೧೧೧೦ರ ಮತ್ತೊಂದು ವೀರಗಲ್ಲಿನ ಪಾಠದಿಂದ ವೀರನಿಗೆ, "ವೀರಶಾಸನದಿಂ ಸ್ವರ್ಗಮೆಯ್ದಿಪನ್ತು" ವೀರಗಲ್ಲನ್ನು ನೆಡಿಸಿದ ವಿಷಯ ತಿಳಿಯುತ್ತದೆ.[೧೨] ತಮ್ಮ ನಾಯಕನಿಗೆ, ಅವನ ಸಂಬಂಧಿಗಳು ಮೂರು ಜನ "ವೀರಗಲ್ಲನಿಕ್ಕಿ" ಸ್ವರ್ಗಕ್ಕೆ ಸಲ್ಲಿಸುತ್ತಾರೆ.[೧೩] ಹಾಗೆಯೇ ವೀರಗಲ್ಲೆನ್ನುವುದು ವೀರನ ಧರ್ಮದ ಅಥವಾ ಜನರ ನಂಬುಗೆಯ ಉನ್ನತ ಸ್ಥಾನವನ್ನು ಸೇರಿದರು ಎಂಬುದಾಗಿ ಸಾರುವ ಸಾಧನವೂ ಆಗಿರುವುದನ್ನು ವೀರಗಲ್ಲುಗಳ ಪಾಠದ ಮೂಲಕ ತಿಳಿಯಬಹುದು. "ಸುಗಣಿಕೆಯೊಡನೆ ಯಿರ್ದ್ದ ವೀರಕಲ್ಲು".[೧೪] "ರಾಮಗವುಡ ಬೊಮ್ಮಕ್ಕನೂ ಸ್ವರ್ಗವ ಸೂಱೆಗೊಂಡರು ಎಂದು ಬರೆದ ಶಿಲಾಶಾಸನ"[೧೫] "ಕಾದಿ ವಿಜಯಲಕ್ಷ್ಮಿಯ ಕೂಡಿ ಹರಿಯಚರಣಕೆ ಸಂದ ವೀರಗಲಿಂಗೆ"[೧೬] "ವಯಿಕುಂಠ ಪ್ರಾಪ್ತನಾದ ಯೀ ವೀರಗಲ್ಲು"[೧೭], ಈ ಎಲ್ಲಾ ವರ್ಣನೆಗಳನ್ನು ಗಮನಿಸಿದರೆ ವೀರಗಲ್ಲನ್ನು ಹಾಕಿಸುವುದರ ಮೂಲಕ ವೀರನಾದವನು ಸ್ವರ್ಗವನ್ನೋ, ಕೈಲಾಸವನ್ನೋ, ವೈಕುಂಠವನ್ನೋ ಸೇರುತ್ತಾನೆಂಬುದಾಗಿ ಜನ ಭಾವಿಸಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ. ಈ ನಂಬಿಕೆ ಕಾಲಾನುಕ್ರಮದಲ್ಲಿ ವೀರಗಲ್ಲುಗಳ ಶಿಲ್ಪದಲ್ಲಿಯೂ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಈ ಬಗ್ಗೆ ವಿವರವಾಗಿ ವೀರಗಲ್ಲುಗಳಶಿಲ್ಪ ಎಂಬ ಅಧ್ಯಾಯದಲ್ಲಿ ಚರ್ಚಿಸಿದ್ದೇವೆ.

---

೧೧ E. C. V. Ag. 38, 1254

೧೨ E. C. IV. Yd. 30, 1110

೧೩ K. I. No. 42, 1423

೧೪ E. C. VIII. Sb. 519

೧೫ E. C. VII. Sk. 37, 1417

೧೬ E. C. IV. Hs. 17, 1506

೧೭ E. C. XV. Bl. 190

ವೀರಗಲ್ಲನ್ನು ಹಾಕಿಸುವುದರಿಂದ ವೀರನಿಗೆ ಅವನ ಮರಣೋತ್ತರ ಜೀವನದಲ್ಲಿ ಶ್ರೇಯಸ್ಸು ದೊರೆಯುತ್ತದೆ. ವೀರನಿಗೆ ಶ್ರೇಯಸ್ಸು ದೊರಯುವುದಕ್ಕಾಗಿಯೇ ವೀರಗಲ್ಲು ನಿಲ್ಲಿಸುವುದು ತಮ್ಮ ಕರ್ತವ್ಯವೆಂದು ಜನ ಭಾವಿಸಿದಂತೆ ತೋರುತ್ತದೆ. ಮತ್ತೆ ಕೆಲವು ಕಡೆಗಳಲ್ಲಿ ವ್ಯಕ್ತವಾಗಿರುವ ಹಾಗೆ ಅದು ಕರ್ತವ್ಯ ಮಾತ್ರವಲ್ಲ ; ಹಾಗೆ ವೀರಗಲ್ಲನ್ನು ನಿಲ್ಲಿಸಿ ಅವನಿಗೆ ಅಪರಕರ್ಮಗಳನ್ನು ಮಾಡುವುದರ ಮೂಲಕ ತಾವು ಕೃತಾರ್ಥರಾಗುತ್ತೇವೆಂಬುದಾಗಿ ಅವರು ನಂಬಿದ್ದರು ಎಂದು ತಿಳಿಯುತ್ತದೆ. "ಕಂನ್ನಡಿಯ ಕಾವೆ ನಾಯಕ" ಎಂಬುವನು ಹೋರಟವೊಂದರಲ್ಲಿ ಸತ್ತಾಗ, ಆತನ ತಮ್ಮನಾದ ಕೇತಯನಾಯಕನು, "ವೀರಭಟಗ್ಗ್ ಬೀರಗೂಳೆತ್ತಿ ಕಲ್ಲನಿರಿಸಿ ಕೃತಾರ್ಥನಾದ"ನೆಂದು ವೀರಗಲ್ಲಿನ ಪಾಠದಿಂದ ತಿಳಿಯುತ್ತದೆ.[೧೮]

ಮತ್ತೆ ಕೆಲವು ವೀರಗಲ್ಲುಗಳ ಪಾಠದಿಂದ ವೀರಗಲ್ಲುಗಳನ್ನು 'ಪರೋಕ್ಷವಿನಯ'ಕ್ಕಾಗಿ ಹಾಕಿಸಿರುವುದು ತಿಳಿದು ಬರತ್ತುದೆ.[೧೯] ಮತ್ತೆ ಕೆಲವು ವೀರಗಲ್ಲುಗಳ ಪಾಠದಿಂದ ಪರೋಕ್ಷವಿನಯವನ್ನು ಮಾಡಿದನಂತರ ವೀರಗಲ್ಲನ್ನು ನಿಲ್ಲಿಸಿದ ವಿಷಯ ತಿಳಿಯುತ್ತದೆ.[೨೦]

---

೧೮ E. C. VIII. Sb. 25, 1152

೧೯ (ಅ) E. C. VII. Sk. 76, 1146 "ಅತಂಗೆ ಪರೋಕ್ಷ ವಿನಯವೆಂದು ಹೆಕ್ಕಯ ರಾಜಣ್ಣ ಕಲ್ಲನಿಱಿಸಿದ".

(ಆ) E. C. IV. Pr. 12, 1172 (ಪರಿಷ್ಕೃತ ಆವೃತ್ತಿ) "ಮಹಾದೇವ ಪರೋಕ್ಷ ವಿನಯಕೆ ಕಲ್ಲನಿಱಿಸಿದ".

(ಇ) E. C. VI. Cm. 87, 1180 "ಪರೋಕ್ಷವಿಯಮೆಂದೀ ಕಲ್ಲ ನಿಲಿಸಿದರು"

(ಈ) E. C. XI. Hk. 130, 1236 "ಮಾದಿಗುಡನ ಪರೋಕ್ಷವನಿಯಕೆ ಪೇಜಿ ಬೀರಲಿಂಗೋಸುಗುಂ".

(ಉ) E. C. V. Ak. 125, ಸು. ೧೩ನೇ. ಶ. "ಬಾಬೆಯ ನಾಯನಮಗ ಬೊಮ್ಮೆಯ ನಾಯ ಒಡೆಯನ ಆಳಿಯ ಬಮ್ಮೆಯ ನಾಯಕ ಮಾಡಿದ ಪರೋಕ್ಷವಿನಯ",

೨೦ (ಅ) E. C. VIII. Sb. 468, 1112 "ಪರೋಕ್ಷ ವಿನಯಂಗಳಂ ಮಾಡಿ ಬೀರಗೂಳೆತ್ತಿ ಕಲ್ಲನಿಱಿಸಿದಳು".

(ಆ) E. C. III. Ch. 20, 1142 "ಪರೋಕ್ಷಕ್ರಿಯಂಗೆಯ್ದು ಕಲ್ಲನಡಸಿದ".

(ಇ) E. C. VIII. Sb. 175, 1156 "ಅಣ್ಣಂದಿರ ಸಂಸ್ಕರಿಸಿ ಜಳದಾನ ಕ್ರಿಯೆಯಂ ಪರೋಕ್ಷವಿಯಮಂ ಮಾಡಿ ಯೀರ್ಬ್ಬಗ್ಗಂ ಕಲ್ಲನಿಱಿಸಿದಲ್ಲಿ"

(ಈ) E. C. HN. 170, 1172 "ಸೂರೆಯ ನಾಯಕರು ಪರೋಕ್ಷ ವಿನಯವ ಮಾಡಿ ಕಲ್ಲಂ ನಿಲಿಸಿದರು."

'ಪರೋಕ್ಷವಿನಯ' ಎಂಬ ಪಾರಿಭಾಷಿಕಪದದ ಅರ್ಥವ್ಯಾಪ್ತಿಯನ್ನು ತಿಳಿಯುವುದು ಸೂಕ್ತ. ಇದನ್ನು ತಿಳಿಯಲು ಇರುವ ಮೂಲ ಸಾಮಾಗ್ರಿಗಳೆಂದರೆ ಕಾವ್ಯಗಳು ಮತ್ತು ಶಾಸನಗಳು. ಇಲ್ಲಿ ಈ ಪದ ಯಾವ ಪರಿಸರದಲ್ಲಿ ಯಾವ ಅರ್ಥದಲ್ಲಿ ಪ್ರಯೋಗವಾಗಿದೆ ಎಂಬುದನ್ನು ಗುರುತಿಸಬೇಕು. ಹಾಗೂ ಈ 'ಪರೋಕ್ಷವಿನಯ' ಎಂಬ ಪಾರಿಭಾಷಿಕ ಪದದ ಪರ್ಯಾಯಪದಗಳನ್ನೂ, ಈ ಪದ ಪ್ರಯೋಗದ ಹಿನ್ನೆಲೆಯಲ್ಲಿ ಅಡಕವಾಗಿರುವ ಆಚರಣೆಗಳನ್ನು ಗುರುತಿಸಬೇಕು.

ಪಂಪನ ವಿಕ್ರಮಾರ್ಜುನವಿಜಯ[೨೧], ರನ್ನನ ಸಾಹಸಭೀಮವಿಜಯಗಳಲ್ಲಿ,[೨೨] 'ಅಂತ್ಯ ಸಂಸ್ಕಾರಗಳನ್ನು ಮಾಡಿದ' ಎಂಬ ಅರ್ಥಬರುವಂತೆ 'ಪರಲೋಕಕ್ರಿಯೆ ; ಪರೋಕ್ಷಕ್ರಿಯೆ' ಎಂಬ ಪದ ಪ್ರಯೋಗಗಳು ಸಿಗುತ್ತವೆ. ಇವು ಬಹುಶಃ ಅಲ್ಪ ಸ್ವಲ್ಪ ವ್ಯತ್ಯಾಸಗೊಂಡು ಮತ್ತು ತಮ್ಮ ಅರ್ಥವ್ಯಾಪ್ತಿಯನ್ನು ಹೆಚ್ಚಿಸಿಕೊಂಡು, ಅಂತ್ಯಸಂಸ್ಕಾರಗಳಲ್ಲಿ ಸತ್ತ ವ್ಯಕ್ತಿಯ ಮರಣೋತ್ತರ ಜೀವನದ ಶ್ರೇಯಸ್ಸಿಗಾಗಿ ಮಾಡುವ ಕರ್ತವ್ಯಗಳು – ಆಚರಣೆಗಳು ಎಂಬ ಅರ್ಥದೊಡನೆ 'ಪರೋಕ್ಷವಿನಯ' ಎಂಬ ಪದ ಶಾಸನಗಳಲ್ಲಿ ಪ್ರಯೋಗವಾಗಿರಬೇಕೆಂದು ತೋರುತ್ತದೆ.

ಈ 'ಪರೋಕ್ಷವಿನಯ' ಎಂಬ ಪದ ವೀರಗಲ್ಲುಗಳಲ್ಲಿ ಮಾತ್ರವಲ್ಲದೆ, ಒಬ್ಬ ವ್ಯಕ್ತಿ ಸತ್ತ ನಂತರ ಅವನ ಹೆಸರಿನಲ್ಲಿ ಅವನಿಗೆ ಪುಣ್ಯ ಪ್ರಾಪ್ತವಾಗಬೇಕೆಂದು ಮಾಡುವ ದಾನ ಧರ್ಮಗಳ ವಿಧಿಯಾಚರಣೆಗಳನ್ನು ತಿಳಿಸುವ ದಾನ ಶಾಸನಗಳಲ್ಲಿಯೂ ದೊರೆಯುತ್ತದೆ. ಸತ್ತ ವ್ಯಕ್ತಿಯ ಪರೋಕ್ಷವಿನಯಕ್ಕಾಗಿ ದಾನ ಧರ್ಮಗಳನ್ನು ಮಾಡಿರುವುದು ಎಂಬುದಾಗಿ ಆ ಶಾಸನಗಳಿಂದಲೇ ತಿಳಿದು ಬರುತ್ತದೆ. ಹೊನ್ನವೆ ನಾಯಕಿತಿ ಎಂಬುವಳು ಸತ್ತಾಗ ಆಕೆಗೆ, "ಪರೋಕ್ಷವಿಯದಿ ಸಿವಶಕ್ತಿದೇವರ ಕಾಲಂಕರ್ಚಿ ಧಾರಾಪೂರ್ವಕ"ವಾಗಿ ಗದ್ದೆಯನ್ನು ಆಕೆಯ ಸಂಬಂಧಿಗಳು ದಾನಮಾಡಿದ ವಿಷಯ ಶಾಸನ ವೊಂದರಲ್ಲಿದೆ.[೨೩] ಉದಿಯಾದಿತ, ಎಂಬುವನು ಸತ್ತಾಗ ಹೊಯ್ಸಳ ವಿಷ್ಣುವರ್ಧನನು "ಉತ್ತಾರಾಯಣಸಂಕ್ರಾಂತಿಯಂದು ಕಾವೇರಿದೇವಿಯ ತಡಿಯಲ್ಲಿರ್ದ್ದು" ಉದಯಾದಿತ್ಯನಿಗೆ ಪರೋಕ್ಷವಿನಯವಾಗಿ "ಆತನ

೨೧ ಪಂಪ : ವಿಕ್ರಮಾರ್ಜುನವಿಜಯಂ ೧–೭೩ ವ ; ೧–೮ ವ

೨೨ ರನ್ನ : ಸಾಹಸಭೀಮವಿಜಯಂ ೧೦, ೧೨ ವ

೨೩ E. C. XI. Hk. 30, 1490

ಆಶ್ರಿತ ಬ್ರಾಹ್ಮಣರ್ಗ್ಗೆ” ಅಗ್ರಹಾರವನ್ನು ಸ್ವಹಸ್ತದಿಂದ ಧಾರಾಪೂರ್ವಕವಾಗಿ ಬಿಟ್ಟ ವಿಷಯವನ್ನು ಒಂದು ದಾನಶಾಸನ ತಿಳಿಸುತ್ತದೆ.[೨೪] ಪಾರಿಸಯ್ಯ ಎಂಬುವನು ಹೊಯ್ಸಳ ವೀರನಾರಸಿಂಹನ ಪರವಾಗಿ ಯುದ್ಧವೊಂದರಲ್ಲಿ ಹೋರಾಡಿ ಸತ್ತಾಗ, “ಪಾರಿಸಣ್ಣಂಗೆಪರೋಕ್ಷವಿನಯವಾಗಿ ಆತನ ಪುತ್ರ ಶಾಂತಿಯ ದಂಡನಾಯಕಂ ಬಸದಿಯಂ ಮಾಡಿಸಿ. ಆ ಬಸದಿಗೆ ಬಿಟ್ಟವ್ರಿತ್ತಿ” ಎಂಬುದಾಗಿ ಮತ್ತೊಂದು ಶಾಸನ ತಿಳಿಸುತ್ತದೆ[೨೫] ಕೈದಾಳದ ಒಂದು ಶಾಸನದಿಂದ ಬಾಚಿ ದೇವನು ತನ್ನ ಮುತ್ತಯ ಸಾಮಂತ ಚಳುವಜೆವನಿಗೆ ಮತ್ತು ತನ್ನ ಮಗಳು ಚೆಂನವೆನಾಯಕಿಗೆ ಪರೋಕ್ಷ ವಿನಯವಾಗಿ ಚಲವವೇಶ್ವರ ಮತ್ತು ರಾಮೇಶ್ವರ ದೇವಾಲಯಗಳನ್ನು ಕಟ್ಟಿಸಿದಂತೆ ತಿಳಿದು ಬರುತ್ತದೆ.[೨೬] ಚಲದಂಕರಾಮ ಹೊಯ್ಸಳಸೆಟ್ಟಿ ಎಂಬ ಬಿರುದನ್ನು ಪಡೆದಿದ್ದ ಮಲ್ಲಸೆಟ್ಟಿಯು ತನ್ನ ಸಾವನ್ನು ಅರಿತು ಸನ್ಯಾಸ ವಿಧಿಯಿಂದ ಮುಡುಪಿದಾಗ ಆತನ ಹೆಂಡತಿಯಾದ ಚಟ್ಟಿಕಬ್ಬೆ ತನ್ನ ಗಂಡನಿಗೆ ಪರೋಕ್ಷವಿನಯವಾಗಿ ‘ನಿಸಿಧಿಗೆ’ ಮಾಡಿಸಿದ ವಿಷಯ ಇನ್ನೊಂದು ಶಾಸನದಿಂದ ತಿಳಿಯುತ್ತದೆ.[೨೭] ಹಾಗೆಯೇ ಮತ್ತೊಂದು ಶಾಸನದಲ್ಲಿ ‘ಪರೋಕ್ಷವಿನಯ’ವಾಗಿ ‘ನಿಸಿಧಿಗೆ’ ಮಾಡಿದ ವಿಷಯ ತಿಳಿಯುತ್ತದೆ.[೨೮]

ಈ ಎಲ್ಲ ವಿವರಣೆಗಳಿಂದ ‘ಪರೋಕ್ಷವಿನಯ’ ಎಂದರೆ ವ್ಯಕ್ತಿಯೊಬ್ಬನು ಯಾವುದೇ ಕಾರಣಕ್ಕಾಗಿ ಮಡಿದಿರಲಿ, ಅವನು ತಮ್ಮ ಎದುರಿಗಿಲ್ಲವೆಂದು ಅಲಕ್ಷ್ಯದಿಮದ ಕಾಣದೆ, ಆತನ ‘ಪರೋಕ್ಷ’ದಲ್ಲಿ ಆತನ ಮರಣೋತ್ತರ ಜೀವನದ ಶ್ರೇಯಸ್ಸಿಗೆ, ಆತನಿಂದ ಉಪಕೃತರಾದವರು ಮಾಡುವ ಕೃತಜ್ಞತಾಪೂರ್ವಕ ಕ್ರಿಯೆಗಳು ಎಂಬುದಾಗಿ ಅರ್ಥಮಾಡಬಹುದೆಂದು ತೋರುತ್ತದೆ. ವೀರಗಲ್ಲುಗಳಲ್ಲಿಯೂ, ಇತರ ಶಾಸನಗಳಲ್ಲಿಯೂ ಈ ಪದವನ್ನು ಇದೇ ಅರ್ಥದಲ್ಲಿ ಪ್ರಯೋಗ ಮಾಡಲಾಗಿದೆ.[೨೯]

---

೨೪ E. C. V. Hn. 102

೨೫ E. C. V. Ak. 141

೨೬ E. C. XII. Tm. 9

೨೭ E. C. II. SB. 159

೨೮ E. C. II. SB. 163

೨೯ ‘ವಿನಯ’ ಎಂಬ ಸಂಸ್ಕೃತ ಪದಕ್ಕೆ ನಿಘಂಟುಕಾರರು ‘takeing away’, ‘separating’, ‘Removal’, ‘Leading away’ ಎಂಬ ಅರ್ಥವನ್ನು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ‘ಪರೋಕ್ಷವಿನಯ’ವನ್ನು ವಿಶ್ಲೇಷಿಸಿದಾಗ ವೀರನನ್ನು ಈ ಲೋಕದಿಂದ ಇನ್ನೊಂದು ಉತ್ತಮ ಲೋಕಕ್ಕೆ ಮುಟ್ಟಿಸುವ ವಿಧಿಗಳು ಎಂಬುದಾಗಿ ಹೇಳಬಹುದು.

ವ್ಯಕ್ತಿಯೊಬ್ಬನು ಸತ್ತಾಗ ಅವನಿಗೆ ಅಂತ್ಯಸಂಸ್ಕಾರವಿಧಿಗಳನ್ನು ಮಾಡುವುದು ತಮ್ಮ ಕರ್ತವ್ಯ ಎಂಬುದಾಗಿ ಆತನ ಸಂಬಂಧಿಗಳು ಏಕೆ ಭಾವಿಸಿದ್ದರು. ಅದು ನಮ್ಮ ಸಂಸ್ಕೃತಿಯಲ್ಲಿ ಹೇಗೆ ಬೆಸೆದುಕೊಂಡು ಧರ್ಮದ ಅಂಗವಾಗಿ ಬೆಳೆದು ಬಂದಿದೆ ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ. ವ್ಯಕ್ತಿಯೊಬ್ಬನು ಸತ್ತಾಗ ಅವನ ಕಳೇಬರಕ್ಕೆ ಸಂಸ್ಕಾರಗಳನ್ನು ಗೌರವ ರೀತಿಯಲ್ಲಿ ಮಾಡುವುದೂ ಕೂಡ ಒಂದು ರೀತಿಯ ಪರೋಕ್ಷವಿನಯವೇ ಆಗಿದೆ. ಈ ಅಂತ್ಯಸಂಸ್ಕಾರಗಳನ್ನು ಸತ್ತ ವ್ಯಕ್ತಿಯು ಪಡೆಯದಿದ್ದರೆ ಅವನಿಗೆ ದೇವಲೋಕದಲ್ಲಿ ಸ್ಥಾನವೇ ಇಲ್ಲ ಎಂಬುದಾಗಿ ಜನ ಭಾವಿಸಿದ್ದರು. ಈ ಅಂಶವು ಕೋಟಿ ಚೆನ್ನಯ್ಯರ ಬಗ್ಗೆ ಇರುವ ತುಳು ಪಾಡ್ದನವೊಂದರಲ್ಲಿ ಬಹಳ ಸೊಗಸಾಗಿ ವ್ಯಕ್ತವಾಗಿದೆ. ಕೋಟಿ ಮತ್ತು ಚೆನ್ನಯ್ಯರು ಸತ್ತನಂತರ ಸ್ವರ್ಗಕ್ಕೆ ಹೋಗುತ್ತಾರೆ. ಆಗ ಅವರನ್ನು ಕುರಿತು ಬ್ರಹ್ಮನು, "ನೀವು ಶುಚಿರ್ಭೂತರಾಗುವವರೆಗೂ ಇಲ್ಲಿಗೆ ಬರಬೇಡಿ", ಎಂದು ಹೇಳುತ್ತಾನೆ. ಆಗ ಅವರು ತಮ್ಮ ದೊರೆಯಾದ ಬಲ್ಲಾಳನಲ್ಲಿಗೆ ಬಂದು ತಮ್ಮನ್ನು ಸಂಸ್ಕರಿಸುವಂತೆ ಕೇಳಿ ಕೊಳ್ಳುತ್ತಾರೆ. ಅದರಂತೆ ಬಲ್ಲಾಳನು ಅವರ ಅಸ್ಥಿಗಳನ್ನು ಸಂಗ್ರಹಿಸಿ, ಹತ್ತನೆಯದಿನ 'ಶಾಲ್ಯ' ಎಂಬ ವಿಧಿಯನ್ನು ಆಚರಿಸುತ್ತಾನೆ. ಆನಂತರ ಬಲ್ಲಾಳನು ಮೂರು ಮರದ ಕೊಂಬೆಗಳನ್ನು ಸ್ಮಶಾನದಲ್ಲಿ ಹೂತು, ಅವುಗಳಿಗೆ ವಿವಿಧ ಬಣ್ಣಗಳ ವಸ್ತ್ರಗಳನ್ನು ತೊಡಿಸುತ್ತಾನೆ. ಈ ಎಲ್ಲ ವಿಧಿಗಳನ್ನೂ ಅವನು ರಾಜೋಚಿತವಾದ ರೀತಿಯಲ್ಲಿಯೇ ಮಾಡುತ್ತಾನೆ. ಎಲ್ಲ ವಿಧಿಗಳೂ ಮುಗಿದ ನಂತರ ಕೋಟಿ ಮತ್ತು ಚೆನ್ನಯ್ಯ ಇಬ್ಬರೂ ಬ್ರಹ್ಮನ ಬಳಿಗೆ ಬರುತ್ತಾರೆ. ಆಗ ಮತ್ತೆ ಬ್ರಹ್ಮನು, "ಗಂಗಾ ನದಿಯಲ್ಲಿ ಮಿಂದು ಪವಿತ್ರರಾಗುವವರೆಗೂ ಬರಬೇಡಿ" ಎಂಬುದಾಗಿ ತಿಳಿಸುತ್ತಾನೆ. ಆನಂತರ ಅವರು ಅದೇ ರೀತಿಯಲ್ಲಿ ಗಂಗಾನದಿಯಲ್ಲಿ ಮಿಂದು ಪವಿತ್ರರಾಗಿ ಬಂದು ಬ್ರಹ್ಮನ ಗುಡಿಯನ್ನು ಪ್ರವೇಶಿಸಿ ಬ್ರಹ್ಮನ ಪಾರ್ಶ್ವಗಳಲ್ಲಿ ನಿಲ್ಲುತ್ತಾರೆ.[೩೦]

ವೀರಗಲ್ಲನ್ನು ನಿಲ್ಲಿಸುವುದು ಒಂದು ಆಚರಣೆಯ ಅಂಗವಾಗಿತ್ತು. ಈ ಆಚರಣೆಗಳು ತಾನು ತನ್ನ ತಂದೆಯ ಬಗ್ಗೆ ಮಾಡುವ ಸುಕಾರ್ಯ ಎಂದು ಮಡಿದ ವ್ಯಕ್ತಿಯ ಮಗ ಭಾವಿಸಿದ್ದ. ಈ ರೀತಿಯ ಒಳ್ಳೆಯ ಕೆಲಸಗಳನ್ನು ಮಾಡುವುದು 'ಕುಲದೀಪಕ'ನ ಕರ್ತವ್ಯ. ಈ ಕಾರಣದಿಂದಲೇ ಇಂತಹ ಉತ್ತಮ ಕೆಲಸ ಮಾಡಿದವನನ್ನು ಕುಲದೀಪಕನೆಂದು ಕರೆಯುತ್ತಿದ್ದರು. ಮಾಚಿಗಾವುಂಡ ಎಂಬುವನು ಸತ್ತಾಗ ಅವನ ಮಗ ಬೊಪ್ಪಗಾವುಂಡನು, "ಸುಪತ್ರ ಕುಲದೀಪಕ ಎಂಬ ಧ್ಯಾನ್ಯಾದಿಂ ಪರೋಕ್ಷಕ್ರಿಯೆಗಳನ್ನು ಮಾಡಿ" ತನ್ನ ತಂದೆಗೆ ವೀರಗಲ್ಲನ್ನು ನಿಲ್ಲಿಸುತ್ತಾನೆ.[೩೧]

---

೩೦ B. A. Salotore : Ancient Karnataka. Vol. I.ಪು. ೫೬೪–೬೫

೩೧ K.I.V. 54, 1148

ವೀರನಾದವನು ಯಾವುದೇ ಪಂಗಡದವನಾಗಿರಲಿ, ಯಾವುದೇ ಜಾತಿಯವನಾಗಿರಲಿ, ಅವನ ಮತಧರ್ಮದ ನಿಯಮದಂತೆ ಉಚಿತವಾದ ರೀತಿಯಲ್ಲಿ ಅವನ ಅಂತ್ಯಸಂಸ್ಕಾರಗಳನ್ನು ನೆರವೇರಿಸುತ್ತಿದ್ದರು. ಈ ವಿಧಿಪಾಲನೆಯಲ್ಲಿ ವೈದಿಕಧರ್ಮದಲ್ಲಿನ ಆಚರಣೆಗಳೇ ಹೆಚ್ಚಾಗಿ ಬಳಕೆಯಲ್ಲಿದ್ದವೆಂದು ತೋರುತ್ತದೆ.

ಬಾಚಪ್ಪ ಎಂಬುವನು ಸತ್ತಾಗ ಆತನ ಹಿರಿಯ ಮಗ "ಬುಕ್ಕಂಣನು ವಿರೂಪಾಕ್ಷಲ್ಲಿ ಪ್ರಾಯಶ್ಚಿತ್ತವ ವಿಧಿಸಿ ಆಸ್ಥಿಯನು ವಾರಣಾಶಿಗೆ ಕಳುಹಿ" ವೀರಗಲ್ಲನ್ನು ನೆಡುತ್ತಾನೆ.[೩೨] ವೀರನ ಹೆಸರಿನಲ್ಲಿ ಆತನ ಶ್ರೇಯಸ್ಸಿಗಾಗಿ ದೇವಾಲಯಕ್ಕೆ,[೩೩] ಬ್ರಾಹ್ಮಣರಿಗೆ ದಾನದತ್ತಿಗಳನ್ನು ಬಿಟ್ಟ ವಿಷಯ ವೀರಗಲ್ಲುಗಳ ಪಾಠದಿಂದ ತಿಳಿದು ಬರುತ್ತದೆ.[೩೪] ಈ ರೀತಿಯ ದಾನಗಳನ್ನಲ್ಲದೆ, 'ಗರುಡ ಪುರಾಣ' ಮುಂತಾದ ಪುರಾಣಗ್ರಂಥಗಳಲ್ಲಿ ಹೇಳಿರುವ ಹಾಗೆ ಗೋದಾನ, ದಕ್ಷಿಣದಾನಗಳನ್ನು ಸತ್ತವೀರನ ಹೆಸರಿನಲ್ಲಿ ಮಾಡುತ್ತಿದ್ದುದಾಗಿಯೂ ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ.[೩೫]

---

೩೨ E. C. III. MI. 21, 1382

೩೩ (ಅ) E. C. VII. Sh. 61, 62, 1287. ಬಮ್ಮೆಯನಾಯಕ ಎಂಬುವನು ಸತ್ತಾಗ ಅವನ ಹೆಂಡತಿಯು ಸಹಗಮನ ಮಾಡಿ ಸಾಯುತ್ತಾಳೆ. ಆಗ "ಅವರ ಮಗ ಪಿಳ್ಳೆಯನಾಯ್ಯನು ಅವರ ವೂರ್ದ್ಧ ಕ್ರಿಯೆಯ ಮಾಡಿ ಶ್ರೀ ಹೊನ್ನೇಶ್ವರ ದೇವರ ಸನ್ನಿಧಿಯಲ್ಲು ಬೀರಗಲ್ಲನ್ನು ನಿಲ್ಲಿಸಿ ಆ ಹೊಂನ್ನೇಶ್ವರ ಅಮ್ರಿತ ಪಡಿಗೆ" ದತ್ತಿಯನ್ನು ಬಿಡುತ್ತಾನೆ.

(ಆ) E. C. VIII. Sb. 184, 1033. ವೀರನೊಬ್ಬನು ಯುದ್ಧರಂಗದಲ್ಲಿ ಸತ್ತಾಗ, ಅವನ ಮಗನು ತನ್ನ ತಂದೆಗೆ "ಪರೋಕ್ಷ ವಿನಯಮಾಗಲಗ್ರಹಾರಂ ಕಪ್ಪೆಗುಡ್ಡೆಯೊಳಾಲೇಶ್ವರಮಂ ಮಾಡಿಸಿ ದೇವರ್ಗೆ ನಿವೇದ್ಯಕ್ಕಂ ಸೊಡರ್ಗ್ಗಂ ಪೂಜೆಗಂ ಬಿಲ್ವ ತೋಟಂ" ಬಿಡುತ್ತಾನೆ.

೩೪ E. C. VII. Sk. 88, 1058. ಮಾಚಿಗಾವುಮಡನನೆಂಬುವನು ತುರುಗಾಗಳದಲ್ಲಿ ಹೋರಾಡಿ ಸತ್ತಾಗ, "ಅವನ ಅಣ್ಣ ಚಿಟ್ಟಗಾವುಂಡನು ಮಾಚಗಾವುಂಡನ ಹೆಂಡತಿ ಚಾಗಿಯಬ್ಬೆಯು ಅವರ ಮಗ ನಾಲಯ್ಯನುಮಿಟ್ಟು ಮತ್ತಿಗಟ್ಟದ ಬಯಲೊಳ್ ಬ್ರಾಹ್ಮಣಂ ಮದುವಯ್ಯಂಗೆ ಕಾಲಂಕರ್ಚ್ಚಿ ಗದ್ದೆಯನ್ನು" ಧಾರೆಯರೆಯುತ್ತಾನೆ.

E. C. VII. Sk. 40, 1430. "ಈ ಕಲ್ಲ ನಡುವಲ್ಲಿ ಆ ಕೆಂಚೆಗುಡನ ಗುರು ಶಿವರಾತ್ರ್ಯೆಯ ಒಡೆಯರಿಗೆ ಸಜ್ಯಗೊಡನೆಯಲ್ಲಿ ಖ. ೨ದ ಪೊಲನಧಾರೆಚೆದು ಆತನ ಸ್ವರ್ಗಕ್ಕೆ ಸಳಿಸಿ".

೩೫ (ಅ) E. C. V. Cn. 205, ೧೩ನೇ ಶತಮಾನ. ಕೇತಮಲ್ಲ ನಾಯಕನೆಂಬುವನು "ನೆರದಾ ಪರೋಕ್ಷಮಂ ಬಿನ್ನಣೆಯರ್ಗ್ಗಂ ಕೊಟ್ಟು ಕಲುಸಾಸನಮಂ ನಿಚೆಸಿತ್ತು ವಿತ್ತಮಂ ಮನ್ನಣೆಯಿಂದ ವಿಪ್ರಜನಕ್ಕೆ ನೆರದತ್ತ್ರಿಗೆ ಬೇಡಿದರ್ಗ್ಗೆ ಕೊಟ್ಟ."

ಈ ರೀತಿ ವೀರನೊಬ್ಬನ ಹೆಸರಿನಲ್ಲಿ ದಾನಧರ್ಮಗಳನ್ನು ಮಾಡುವುದಲ್ಲದೆ, ಕೆಲವೊಮ್ಮೆ ಯುದ್ಧದಲ್ಲಿ ಮಡಿದ ವೀರರೆಲ್ಲರಿಗೂ, ಅವರಿಗೆ ವೀರಸ್ವರ್ಗ ದೊರೆಯಲೆಂಬ ಕಾರಣದಿಮದ ಸಾಮೂಹಿಕ ದಾನಧರ್ಮಗಳನ್ನು ಮಾಡಿರುವುದೂ ಉಂಟು. ಈ ರೀತಿ ವೀರರಿಗೆ ವೀರಸ್ವರ್ಗ ದೊರೆಯಬೇಕೆಂಬ ಉದ್ದೇಶದಿಂದ ಪುಣ್ಯಕೆಲಸ ಮಾಡಿದ ವಿವರ ರಾಮಘಡದ ಶಾಸನವೊಂದರಿಂದ ತಿಳಿಯುತ್ತದೆ.[೩೬]

ಸತ್ತವ್ಯಕ್ತಿಯ ಹೆಸರಿನಲ್ಲಿ ದೇವಾಲಯ ನಿರ್ಮಾಣ ಅಥವಾ ಇತರ ಪುಣ್ಯಕೆಲಸಗಳನ್ನು ಮಾಡಿದಾಗ ಅವನ ಹೆಸರು ಉಳಿದು ಬರುವುದು ಸಹಜ. ಆದರೆ ಈ ವ್ಯಕ್ತಿಯ ಹೆಸರಿನಲ್ಲಿ ಆ ಪುಣ್ಯಕಾರ್ಯಗಳನ್ನು ಮಾಡಿದವರ ದೃಷ್ಟಿಯಲ್ಲಿ ಅದು ಗೌಣ ಅಥವಾ ಅದಕ್ಕೆ ಎರಡನೆಯ ಸ್ಥಾನ. ಪುಣ್ಯಕೆಲಸವನ್ನು ಮಾಡುವುದರ ಮೂಲಕವಾಗಿ ಸತ್ತ ವ್ಯಕ್ತಿಗೆ ಶ್ರೇಯಸ್ಸು ದೊರಕಲಿ ಎಂಬುದೇ ಅವರ ಮುಖ್ಯ ಉದ್ದೇಶ. ಸತ್ತ ವ್ಯಕ್ತಿಯ ಸಂತತಿಯವರು ಅಥವಾ ಸಂಬಂಧಿಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರತಿಷ್ಠಿತ ವ್ಯಕ್ತಿಗಳಾಗಿದ್ದರೆ ಸಹಜವಾಗಿ ಈ ರೀತಿಯ ಪುಣ್ಯದ ಕೆಲಸಗಳನ್ನು ಮಾಡುತ್ತಾರೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ : ಸತ್ತವೀರನ ಮರಣೋತ್ತರ ಜೀವನದ ಶ್ರೇಯಸ್ಸಿಗಾಗಿ ದಾನಧರ್ಮ ಮುಂತಾದ ಕಾರ್ಯಗಳನ್ನು ಮಾಡುವುದರಷ್ಟೆ ಮುಖ್ಯ, ವೀರನಾದವನು ಸತ್ತಾಗ ಅವನಿಗೆ ವೀರಗಲ್ಲನ್ನು ನೆಡುವುದು ಎಂದು ಜನ ಭಾವಿಸಿದ್ದರು. ಈ ಉದ್ದೇಶದಿಂದ ಪ್ರೇರಿತರಾಗಿ ವೀರಗಲ್ಲುಗಳನ್ನು ಹಾಕುತ್ತಿದ್ದರು.

ಈ ಉದ್ದೇಶದಿಂದ ವೀರಗಲ್ಲನ್ನು ಹಾಕುತ್ತಿದ್ದರೂ, ವೀರನ ಪರಾಕ್ರಮವು ವೀರಗಲ್ಲಿನ ಶಿಲ್ಪ ಮತ್ತು ಶಾಸನದ ಪಾಠದಲ್ಲಿ ವ್ಯಕ್ತವಾಗುತ್ತಿದ್ದುದರಿಂದ ಅದು ಸಹಜವಾಗಿ ಅವನ ಪರಾಕ್ರಮವನ್ನು ಲೋಕಕ್ಕೆ ಸಾರುವ ಸಾಧನವೂ ಆಗಿತ್ತು ಎಂಬುದನ್ನು ಮರೆಯಬಾರದು.

(ಆ) E. C. XI. Gb. 58, 1290. ವೀರನೊಬ್ಬನು ಮಡಿದಾಗ " ಹಲವು ದಾನವ ಮಾಡಿ ಪ್ರತಿಷ್ಠೆ ಮಾಡಿದ" ವಿಷಯ ವೀರಗಲ್ಲೊಂದರಲ್ಲಿದೆ.

(ಇ) E. C. VIII. Sa. 32, 1307. ಬೋಳೆಯ ನಾಯಕನೆಂಬ ವೀರನು ಯುದ್ಧದಲ್ಲಿ ಸತ್ತಾಗ" ಬೋಳೆಯ ನಾಯಕನ ವೀರಗಲ್ಲು ನಿಲುವಲಿ ನಾಯಕಿತಿಯು ನಾಗಯನು ಮಾಡಿದ ದಾನ ಗೋದಾನ, ಮಾಡಿಕೆಯ ರಾಮನಾಥ ದೇವರಿಗೆ ಕೊಟ್ಟರು."

೩೬ ಜಿ. ವರದರಾಜರಾವ್ : ಕುಮಾರರಾಮನ ಸಾಂಗತ್ಯಗಳು. ಪು. ೩೭೯. "ರಾಮನಾಥನ ಕಾಲದ ಪೂರ್ವದ ಛಪ್ಪನ್ನಸಮಂದಿ ವೀರರಿಗೆ ವೀರಸ್ವರ್ಗ ಆಗಬೇಕೆಂದು ಕಟ್ಟಿಸ್ತರು."

ವೀರಗಲ್ಲುಗಳನ್ನು ಹಾಕಿಸುತ್ತಿದ್ದವರು

ಸತ್ತ ವೀರನಿಗೆ ಅಥವಾ ವ್ಯಕ್ತಿಗೆ ಅಂತ್ಯ ಸಂಸ್ಕಾರಗಳನ್ನು ಮಾಡುತ್ತಿದ್ದವರು ಆ ವ್ಯಕ್ತಿಯ ಮಕ್ಕಳು. ಅವನಿಗೆ ಮಕ್ಕಳು ಇಲ್ಲದಾಗ ಅಥವಾ ಅವರು ಅಪ್ರಾಪ್ತ ವಯಸ್ಕರಾಗಿದ್ದಾಗ ಅವರ ಬದಲು ಸತ್ತ ವ್ಯಕ್ತಿಯ ಸಂಬಂಧಿಗಳು ಆತನ ಸಂಸ್ಕಾರಗಳನ್ನು ಮಾಡುತ್ತಿದ್ದರು. ಏಕೆಂದರೆ ಬದುಕಿರುವ ವ್ಯಕ್ತಿಗಳಿಗೂ ಸತ್ತ ವ್ಯಕ್ತಿಗೂ ಇರುವ ಸಂಬಂಧ ಇಂಥ ಸಂಸ್ಕಾರಗಳಲ್ಲಿ ಮುಖ್ಯವಾಗುತ್ತದೆ. ಸತ್ತವ್ಯಕ್ತಿಯ ಬಗ್ಗೆ ತಮಗಿರುವ ಪ್ರೀತಿ, ವಿಶ್ವಾಸ, ಕೃತಜ್ಞತೆಗಳನ್ನು ವ್ಯಕ್ತಪಡಿಸುವ, ಸಲ್ಲಿಸುವ ಸಂದರ್ಭವೂ ಇದರಿಂದ ಉಂಟಾಗುತ್ತದೆ. ವೀರಗಲ್ಲುಗಳ ಪಾಠದಲ್ಲಿ ವೀರನಿಗೆ ಯಾರು ವೀರಗಲ್ಲನ್ನು ನೆಡುತ್ತಿದ್ದರು ಎಂಬ ಅಂಶವೂ ಮತ್ತು ಸತ್ತವ್ಯಕ್ತಿಗೂ, ವೀರಗಲ್ಲನ್ನು ಹಾಕಿಸಿದ ವ್ಯಕ್ತಿಗಳಿಗೂ ಇದ್ದ ಸಂಬಂಧವೂ ತಿಳಿದುಬರುತ್ತದೆ. ಈ ವಿವರಣೆಗಳನ್ನು ಪರಿಶೀಲಿಸಿದಾಗ ವೀರಗಲ್ಲುಗಳನ್ನು ಹಾಕಿಸುತ್ತಿದ್ದವರಲ್ಲಿ ಎರಡು ರೀತಿಯ ಗುಂಪುಗಳನ್ನು ಗುರುತಿಸಬಹುದು.

೧ ಸತ್ತ ವ್ಯಕ್ತಿಯ ನೇರ ಸಂಬಂಧಿಗಳು

೨ ಸಂಬಂಧಿಗಳೊಡನೆ ಕೆಲವೊಮ್ಮೆ ಕೂಡಿಕೊಂಡು ಅಥವಾ ತಾವಾಗಿಯೇ ಸ್ವಇಚ್ಛೆಯಿಂದ ವೀರನ ಬಗ್ಗೆ ಇರುವ ವಿಶ್ವಾಸಕ್ಕೆ, ಕೃತಜ್ಞತೆಗೆ ವೀರಗಲ್ಲನ್ನು ಹಾಕಿಸುತ್ತಿದ್ದ ಸಾರ್ವಜನಿಕರು.

ಸತ್ತ ವ್ಯಕ್ತಿಯ ನೇರಸಂಬಂಧಿಗಳು ಎಂದರೆ, ವೀರನ ಅಣ್ಣಂದಿರು, ಮಕ್ಕಳು, ವೀರನ ತಂದೆ, ತಾಯಿ, ತಂಗಿ, ಮಗಳು, ತಮ್ಮಂದಿರು, ಹೆಂಡತಿ, ಅತ್ತಿಗೆ, ಚಿಕ್ಕಪ್ಪ, ಮಾವ, ಅಳಿಯ– ಇವರುಗಳು ವೀರಗಲ್ಲನ್ನು ಸಾಮಾನ್ಯವಾಗಿ ನೆಡುತ್ತಿದ್ದ ಅಂಶ ತಿಳಿಯುತ್ತದೆ.

ಯುದ್ಧದಲ್ಲಿ ಸತ್ತ ತಮ್ಮ ತಂದೆಗೆ ವೀರಗಲ್ಲನ್ನು ಆತನ ಮಕ್ಕಳು ಹಾಕಿಸಿರುವ ಅನೇಕ ನಿದರ್ಶನಗಳು ದೊರೆಯುತ್ತವೆ. ಹಿಂದೂ ಅಂತ್ಯಸಂಸ್ಕಾರ ವಿಧಿಗಳನ್ನು ಪರಿಶೀಲನೆ ಮಾಡಿದಾಗ, ಸತ್ತ ವ್ಯಕ್ತಿಯ ತುಂಬ ಹತ್ತಿರದ ಸಂಬಂಧಿಯಾದ ಆತನ ಮಗನು ಕರ್ಮಗಳನ್ನು ಮಾಡುವ ಅಧಿಕೃತ ಕರ್ತನು ಎಂಬ ಅಂಶ ವ್ಯಕ್ತವಾಗುತ್ತದೆ. ಇಂದಿಗೂ ಮಗನಾದವನು ತನ್ನ ತಂದೆಗೆ ಅಂತ್ಯಕ್ರಿಯೆಗಳನ್ನು ಸಾಂಗವಾಗಿ ಮಾಡುವುದು ಮಗನ ಕರ್ತವ್ಯವೆಂಬ ನಂಬಿಕೆ ಉಳಿದುಕೊಂಡು ಬಂದಿದೆ. ಈ ಭಾವನೆಯನ್ನು ವೀರಗಲ್ಲುಗಳ ಪಾಠದಿಂದಲೂ ಗಮನಿಸಬಹುದಾಗಿದೆ. ಮಾಚಿಗಾವುಂಡ ಎಂಬುವನು "ಸುರಲೋಕ ಪ್ರಾಪ್ತನಾದಾಗ" ಆತನ

ಮಗ ಬೊಪ್ಪಗಾವುಂಡ "ಸುಪುತ್ರ ಕುಲದೀಪಕ" ಎಂಬ ನ್ಯಾಯದಿಂದ ತನ್ನ ತಂದೆಗೆ ವೀರಗಲ್ಲನ್ನು ನಿಲ್ಲಿಸುತ್ತಾನೆ.[೩೭] ಚೀಲಯ ಎಂಬುವನು ತುರುಗಾಳಗದಲ್ಲಿ ಸತ್ತಾಗ, "ಸುಪುತ್ರ ಕುಲದೀಪಕನು ಗೋತ್ರಚಿನ್ತಾಮಣಿ"ಯೂ ಆದ ಮತ್ತಲದಾಸಯ್ಯನು ತನ್ನ ತಂದೆಗೆ ವೀರಗಲ್ಲನ್ನು ನಿಲ್ಲಿಸುತ್ತಾನೆ.[೩೮]

ಸತ್ತ ವ್ಯಕ್ತಿಗೆ ಅಂತ್ಯಸಂಸ್ಕಾರಗಳನ್ನು ಮಾಡುವಲ್ಲಿ ಸತ್ತವ್ಯಕ್ತಿಯ ಅಣ್ಣ ಅಥವಾ ಅವನ ಗಂಡು ಮಕ್ಕಳಿಗೂ ಅಧಿಕಾರವಿದೆ. ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನವರು ಸತ್ತಾಗ, "ಓಸನದ ಹರಿಯಗವುಡನ ತಂಮ ಬಯಚಗಉಡನ ಮಗ ಕೇತಗಉಡ ಕಲ್ಲನೆತ್ತಿಸಿ ಪ್ರತಿಷ್ಠೆ" ಮಾಡಿದ ವಿಷಯ ವೀರಗಲ್ಲೊಂದರ ಪಾಠದಿಂದ ತಿಳಿಯುತ್ತದೆ.[೩೯]

ಹೋರಾಟದಲ್ಲಿ ಮಡಿದ ತಮ್ಮ ಮಕ್ಕಳಿಗೆ ತಂದೆಯರು ವೀರಗಲ್ಲನ್ನು ಹಾಕಿಸಿರುವ ನಿದರ್ಶನಗಳೂ ದೊರೆಯುತ್ತವೆ. ಪುತ್ರನನ್ನು ಕಳೆದುಕೊಂಡ ತಂದೆಗಳು ತಮ್ಮ ಮಕ್ಕಳ ಪರಾಕ್ರಮದ ಬಗ್ಗೆ ಹೆಮ್ಮೆಯಿಮದ ವೀರಗಲ್ಲುಗಳನ್ನು ಹಾಕಿಸಿರಬಹುದು. ತಮ್ಮ ದುಃಖವನ್ನು ಕಡಿಮೆ ಮಾಡಕೊಳ್ಳಲು ಹಾಕಿಸಿರಬಹುದು. ಅಂತೂ ಹಾಕಿಸುವಾಗಿನ ಅವರ ಮನಸ್ಥಿತಿ ಹೇಗಿತ್ತು ಎನ್ನುವುದು ವೀರಗಲ್ಲುಗಳ ಪಾಠದಿಂದ ತಿಳಿಯುವುದಿಲ್ಲ. ಮಾರಯ್ಯ ಎಂಬುವನು ಊರಳಿವಿನಲ್ಲಿ ಸತ್ತಾಗ ಆತನ ತಂದೆ ದೋರಯ್ಯ ಎಂಬುವನು ಕುಡುಕೂರಲ್ಲಿ ವೀರಗಲ್ಲನ್ನು ನಿಲ್ಲಿಸುತ್ತಾನೆ.[೪೦] ಬಮ್ಮಿಗ ಎಂಬುವನು ಯುದ್ಧದಲ್ಲಿ ಸತ್ತಾಗ ಅವನ ತಂದೆಯಾದ ಬಮ್ಮಗೌಡನು "ಕೂಳಂ ಮಾಡಿ ಕಲ್ಲನಿಕ್ಕಿ"ಸುತ್ತಾನೆ.[೪೧] ತನ್ನ ಮಗನದ ಚೆನ್ನಪ್ಪನೆಂಬುವನು ಯುದ್ಧದಲ್ಲಿ ಸತ್ತಾಗ ಆತನ ತಂದೆಯು, "ತಂನ್ನ ಮಗ ಚೆಂನಪ್ಪನ ಹೆಸರಿನಲ್ಲಿ ವೀರಸ್ತಂಭವ"ನ್ನು ನಿಲ್ಲಿಸುತ್ತಾನೆ.[೪೨] ಹೀಗೆ ತಂದೆ ಮಗನಿಗೆ ವೀರಗಲ್ಲನ್ನು ನೆಟ್ಟ ಇನ್ನೂ ಅನೇಕ ನಿದರ್ಶನಗಳು ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ.[೪೩]

---

೩೭ K. I. V. 54, 1148

೩೮ E. C. VII. HI. 27, 1172

೩೯ E. C. XI. Dg. 116, 1397

೪೦ E. C. IV. Hs. 50, 997

೪೧ E. C. VI. Cm. 100, 1116

೪೨ E. C. XI. CI. 42, 1430

೪೩ E. C. V. Hn. 50. ೧೨ನೇ ಶತ. E. C. XI. Hk. 93 ಮತ್ತು E. C. IX. Kn. 46, 1293 ; K. I. 40, 1415

ತಮ್ಮ ಮಕ್ಕಳನ್ನು ಕಳೆದುಕೊಂಡ ತಾಯಂದಿರು ವೀರಗಲ್ಲುಗಳನ್ನು ನಿಲ್ಲಿಸಿರುವ ಎರಡು ಮೂರು ನಿದರ್ಶನಗಳು ದೊರೆಯುತ್ತವೆ. 'ತುರುಗ' ಎಂಬುವನು ಹೋರಾಟವೊಂದರಲ್ಲಿ ಸತ್ತಾಗ ಅವನ ತಾಯಿ 'ಲಚ್ಚಕ್ಕನ್' ಎಂಬುವಳು ತನ್ನ ಮಗನಿಗೆ ವೀರಗಲ್ಲನ್ನು ನಿಲ್ಲಿಸುತ್ತಾಳೆ.[೪೪] ಹಾಗೆಯೇ 'ಜಾಕವ' ಎಂಬ ವೀರನಿಗೆ 'ಅವನ ತಾಯ್ವೆಸ್ದ ಕಬ್ಬೆ' ವೀರಗಲ್ಲನ್ನು ನಿಲ್ಲಿಸುತ್ತಾಳೆ.[೪೫]

ಹೋರಾಟದಲ್ಲಿ ಮಡಿದ ತಮ್ಮಂದಿರುಗಳಿಗೆ ಅಣ್ಣಂದಿರು ವೀರಗಲ್ಲುಗಳನ್ನು ನಿಲ್ಲಿಸಿರುವ ಹಲವಾರು ನಿದರ್ಶನಗಳೂ ಉಂಟು. ಕೂಸರಾಮಯ್ಯ ಎಂಬುವನು ಹೋರಾಟವೊಂದರಲ್ಲಿ ಸತ್ತಾಗ, ಅವನ ಅಣ್ಣ 'ಲೇಂಕ ಸೋಮಯ' ಎಂಬುವನು ವೀರಗಲ್ಲನ್ನು ನಿಲ್ಲಿಸುತ್ತಾನೆ.[೪೬] ತನ್ನ ತಮ್ಮಂದಿರುಗಳು ಹೋರಾಟದಲ್ಲಿ ಸತ್ತಾಗ ಅವರ ಅಣ್ಣನಾದ ಪಿಳ್ಳೆಯನಾಯಕ ಎಂಬುವನು ತನ್ನ ತಮ್ಮಂದಿರುಗಳಿಗೆ "ವೂರ್ದ್ವ್ವ ಕ್ರಿಯೆಯಂ" ಮಾಡಿ "ಹೊನ್ನೇಸ್ವರ ದೇವರ ಸಂನಿಧಿಯಲ್ಲಿ" ವೀರಗಲ್ಲನ್ನು ನಿಲ್ಲಿಸುತ್ತಾನೆ.[೪೭] ಹೀಗೇ ಇನ್ನೂ ಹಲವಾರು ನಿದರ್ಶನಗಳನ್ನು ಕೊಡಬಹುದು.[೪೮]

ಹೋರಾಟದಲ್ಲಿ ಸತ್ತ ಅಣ್ಣಂದಿರುಗಳಿಗೆ ತಮ್ಮಂದಿರು ವೀರಗಲ್ಲನ್ನು ನಿಲಲಿಸಿದ್ದಾರೆ. ಕನ್ನಡಿಯ ಕಾವೆ ನಾಯಕನೆಂಬುವನು ಸತ್ತಾಗ ಆತನ "ತಮ್ಮ ಕಂನ್ನಡಿಯ ಕೇತನಾಯಕನು ವೀರಭಟರ್ಗ್ಗೆ ಬೀರಗೂಳೆತ್ತಿ ಕಲ್ಲನಿರಿಸಿ ಕ್ರಿತಾರ್ಥ"ನಾಗುತ್ತಾನೆ.[೪೯] ದೇವಗಾವುಂಡ, ಮಲ್ಲಗಾವುಂಡ ಎಂಬ ತನ್ನ ಅಣ್ಣಂದಿರು ತುರುಗಾಳಗದಲ್ಲಿ ಸತ್ತಾಗ, ಅವರ ಸಾವನ್ನು ಸಹಿಸದೆ, ಅವರ ತಮ್ಮನಾದ ಬೊಪ್ಪಗಾವುಂಡ ಎಂಬುವನು 'ಯುದ್ಧಮಾಡಿ ತುರುಗಳನ್ನು ಹಿಂದಿರುಗುಸುತ್ತೇನೆ, ಇಲ್ಲವಾದರೆ ನಿಮ್ಮನ್ನು ಹಿಂಬಾಲಿಸಿ ಬರುತ್ತೇನೆ.' ಎಂದು ಪ್ರತಿಜ್ಞೆಮಾಡಿ, ತನ್ನ ಅಣ್ಣಂದಿರ ಸಾವಿಗೆ ಕಾರಣರಾದವರ ಮೇಲೆ ಯುದ್ಧ ಮಾಡಿ ಗೆದ್ದು, ತುರುಗಳನ್ನು ಹಿಂದಕ್ಕೆ ತಂದು, "ತನ್ನ ಅಣ್ಣಂದಿರ ಕಳೇಬರಗಳಂ ಕಂಡು ಶೋಕಾಕ್ರಾಂತನಾಗಿ" ಅವರಿಬ್ಬರಿಗೂ

---

೪೪ E. I. XV. P. 75, ಸು. ೯೨೦
೪೫ E. C. V. Ag. 76, 1025
೪೬ M. A. R.1941.11, 1194
೪೭ E. C. VII. Sh. 62, 1289
೪೮ (ಅ) E. C. IX. Cp. 147, 1437. (ಆ) M. A. R.1940.15
(ಇ) E. C. IX. Kn. 64, 1291.
೪೯ E. C. VIII. Sb. 525, 1152

ಜಳದಾನಕ್ರಿಯೆಗಳನ್ನೂ ಪರೋಕ್ಷ ವಿನಯವನ್ನು ಮಾಡಿ ಇಬ್ಬರಿಗೂ ವೀರಗಲ್ಲನ್ನು ನಿಲ್ಲಿಸುತ್ತಾನೆ.[೫೦] ಈ ಒಂದು ಶಾಸನದಿಂದ ಅಪರೂಪಕ್ಕೊಂಬಂತೆ ವೀರಗಲ್ಲನ್ನು ಹಾಕಿಸುವಲ್ಲಿನ ದುಃಖ, ಪ್ರೀತಿ, ಅಗಲಿಕೆಯ ನೋವು, ಮಡಿದವರು ಯಾವ ಕಾರಣಕ್ಕಾಗಿ ಮಡಿದರು. ಆ ಕಾರಣವನ್ನು ಈಡೇರಿಸುವುದು ತಮ್ಮ ಕರ್ತವ್ಯ ಎಂಬ ಭಾವನೆ. ತಮ್ಮ ವೀರನ ಬಗ್ಗೆ ಇರುವ ಅಭಿಮಾನ ಮುಂತಾದ ವಿಷಯಗಳನ್ನು ತಿಳಿಯಲು ಸಹಾಯವಾಗುತ್ತದೆ.

ಸಹಗಮನ ಪದ್ಧತಿಯ ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದರೂ, ಕೆಲವಾರು ವೀರಗಲ್ಲುಗಳನ್ನು ಸತ್ತವೀರನ ಹೆಂಡತಿಯೇ ಹಾಕಿಸಿರುವ ನಿದರ್ಶನಗಳು ದೊರೆಯುತ್ತವೆ. ಇದರಿಮದ ಸಹಗಮನ ಪದ್ಧತಿಯು ಕಡ್ಡಾಯವಾದ ಸಂಪ್ರದಾಯವಾಗಿರಲಿಲ್ಲವೆಂದು ತೋರುತ್ತದೆ. ಗಂಡನು ಸತ್ತರೂ, ಬದುಕಬಯಸುವ ಅಥವಾ ತಮ್ಮ ಮಕ್ಕಳಿಗಾಗಿಯಾದರೂ ಬದುಕಲೇಬೇಕಾದ ಮಹಿಳೆಯರಿಗೆ ಸಹಗಮನದ ಒತ್ತಾಯ ಇರಲಿಲ್ಲವೆಂದು ತೋರುತ್ತದೆ. ಸಹಗಮನ ಮಾಡದೆ ಉಳಿದ ವೀರನ ಮಡದಿಯರು ತಮ್ಮ ಗಂಡನಿಗೆ ವೀರಗಲ್ಲನ್ನು ಹಾಕುವ ಪದ್ಧತಿಯನ್ನು ಕಾಣಬಹುದು. ಕನಕನಾಯಕ ಎಂಬುವವನು ಕೋಟೆಕಾಲಗದಲ್ಲಿ ಸತ್ತಾಗ ಆತನ ಹೆಂಡತಿಯಾದ ನಾಗವ್ವೆ ವೀರಗಲ್ಲನ್ನು ನಿಲ್ಲಿಸುತ್ತಾಳೆ.[೫೧] ಗೆಳೆಯರು ಮಾಡಿದ ಮೋಸದಿಂದ ಹತನಾದ ತನ್ನ ಗಂಡನಿಗೆ, "ಕಾಳಬ್ಬೆನಾಯಕಿತ್ತಿ ಕಲ್ಲುನಿಱಿಸಿ ಕೂಳಂ ಕಳಾದು," ಕೃತಾರ್ಥಳಾಗುತ್ತಾಳೆ.[೫೨] ಮಾಚಿಯಕ್ಕ ಎಂಬುವವಳು ತನ್ನ ಗಂಡನು ಯುದ್ಧವೊಂದರಲ್ಲಿ ಸತ್ತಾಗ ತನ್ನ ಗಂಡನ ವೀರಗಲ್ಲನ್ನು, "ಅನೇಕ ಮಣಿರತುನ ಖಚಿತಮಪ್ಪ ಮಣಿಮಯ [ಮಂ]ಟಪ"ದಲ್ಲಿ ನಿಲ್ಲಿಸುತ್ತಾಳೆ.[೫೩] ಇದೇ ರೀತಿಯಲ್ಲಿ ಹಲವಾರು ನಿದರ್ಶನಗಳು ದೊರೆಯುತ್ತವೆ.[೫೪]

ಹೋರಾಡಿ ಸತ್ತ ತಮ್ಮ ಮಾವಂದಿರಿಗೆ ಅಳಿಯಂದಿರು ವೀರಗಲ್ಲನ್ನು ಹಾಕಿಸಿರುವ ಹಲವಾರು ನಿದರ್ಶನಗಳು ದೊರೆಯುತ್ತವೆ. ತೊಣವತ್ತಿಯ ಮೇರೆಗಾಱ ಬಾಚೆಯ ನಾಯಕನು ಕಾದಿ ಸ್ವರ್ಗಸ್ಥನಾದಾಗ ಆತನ ಅಳಿಯ ಮದುಕೆಯನು ತನ್ನ ಮಾವನಿಗೆ

---

೫೦ E. C. VIII. Sb. 176, 1156

೫೧ E. C. IX. Cp. 46, 1155

೫೨ E. C. VIII. Sa. 71, 1173

೫೩ M. A. R.1937. 9, 1259

೫೪ (ಅ) M. A. R.1937. 12, 1282 (ಆ) M. A. R.1928. 14
(ಇ) M. A. R.1937. 31, 1310 (ಈ) E. C. VI.Cm. 28

ವೀರಗಲ್ಲನ್ನು ನಿಲ್ಲಿಸುತ್ತಾನೆ.[೫೫] ಚಿಕ್ಕಯ್ಯನೆಂಬ ವೀರನು ಯುದ್ಧವೊಂದರಲ್ಲಿ ಸತ್ತಾಗ, ಆತನ ಅಳಿಯನು, "ತಂನಯ ಮಾವನ ವೀರಮನುಂನತಗುಣನಿಳಿಯ ಮೆಚ್ಚಿಗಂನೆ ಜೆಕೇಳ್ವಾ ಮಂನಣೆಯವೀರಶಾಸನದುಂನತಿಯಂ ಮಾಡಿ ನಿಜೆಸಿದಂ ಧರೆಪೊಗಳಲು," ಎಂಬುದಾಗಿ ವೀರಗಲ್ಲೊಂದರಿಂದ ತಿಳಿಯುತ್ತದೆ.[೫೬]

ವೀರನಿಗೆ ಅವನ ಸಂಬಂಧಿಗಳು ವೀರಗಲ್ಲನ್ನು ಹಾಕಿಸಿದ ಪ್ರಸ್ತಾಪ ವೀರಗಲ್ಲುಗಳ ಪಾಠದಲ್ಲಿ ಬರುತ್ತದೆ. 'ಮಾದಿಗವುಡ' ಎಂಬುವನು ತನ್ನ ಅಣ್ಣನ ಮಗಳಾದ "ಹರಿಯಕ್ಕ" ಎಂಬುವಳು, ತನ್ನ ತಂದೆಯೊಂದಿಗೆ ತಾನೂ ಹೋರಾಡಿ ಸತ್ತಾಗ ಅವಳಿಗೆ ವೀರಗಲ್ಲನ್ನು ನಿಲ್ಲಿಸುತ್ತಾನೆ.[೫೭] ಊರಿಗೆ ಸಂಬಂಧಿಸಿದ ಜಗಳವೊಂದರಲ್ಲಿ ಅಸಬೆಯೋಜ ಎಂಬುವನು ಸತ್ತಾಗ ಅವನ ಮಾವನಾದ ಜಯಿಸೋಜ ಎಂಬುವನು ವೀರಗಲ್ಲನ್ನು ನಿಲ್ಲಿಸುತ್ತಾನೆ.[೫೮] ಹೋರಟವೊಂದರಲ್ಲಿ ಮಡಿದ ತನ್ನ ತಂದೆಗೆ ಮಗಳೊಬ್ಬಳು ವೀರಗಲ್ಲನ್ನು ಮಾಡಿಸಿ ನಿಲ್ಲಿಸುತ್ತಾಳೆ.[೫೯] ಬೊಪ್ಪನೆಂಬ ವೀರನು ಯುದ್ಧವೊಂದರಲ್ಲಿ ತನ್ನ ಜೋಳವಾಳಿತನವನ್ನು ಮೆರೆದು ಸತ್ತಾಗ, ಆತನ ತಂಗಿ ಮಾಯಕ್ಕ ಎರಡು ಹೊನ್ನಗಳನ್ನು ಕೊಟ್ಟು ವೀರಗಲ್ಲನ್ನು ಮಾಡಿಸಿದಳು.[೬೦] ಬೊಂಮ್ಮೆಯ ನಾಯಕನು ಹೋರಾಟದಲ್ಲಿ ಮಡಿದಾಗ, ಆತನ ತಂಗಿಯಾದ ಸಿರಿಯಬ್ಬೆ ಎಂಬುವಳು ತನ್ನ ಅಣ್ಣನಿಗೆ ವೀರಗಲ್ಲನ್ನು ನಿಲ್ಲಿಸುತ್ತಾಳೆ.[೬೧] ತುರುಗಾಳಗದಲ್ಲಿ ಸತ್ತ ತನ್ನ ಮಯದುನನಿಗೆ ಅತ್ತಿಗೆಯೊಬ್ಬಳು ವೀರಗಲ್ಲನ್ನು ಹಾಕಿಸುತ್ತಾಳೆ.[೬೨]

ವೀರಗಲ್ಲನ್ನು ಇಂಥವರೇ ನಿಲ್ಲಿಸಬೇಕೆಂಬ ನಿಯಮವೇನೂ ಇದ್ದಂತೆ ತೋರುವುದಿಲ್ಲ. ಮಡಿದ ವೀರನ ಹತ್ತಿರದ ಸಂಬಂಧಿಗಳು ಹಲವಾರು ಜನ ಒಟ್ಟಿಗೆ ಸೇರಿ ವೀರಗಲ್ಲನ್ನು ನಿಲ್ಲಿಸುತ್ತಿದ್ದುದು ಉಂಟು ಮಾಚಗಾವುಂಡ ಎಂಬುವನು ತುರುಗಾಳಗದಲ್ಲಿ

---

೫೫ E. C. VII. Sk. 139, 1160
೫೬ E. C. VIII. Sa. 110, 1292
೫೭ E. C. VII. Sk. 2, 1446
೫೮ E. C. III. ML. 18, 1381
೫೯ E. C. VI. Cm. 18
೬೦ ಆರ್. ಎನ್. ಗುರುವ : ಕಾರಾವಾರ ಜಿಲ್ಲೆಯ ಶಾಸನಗಳು. ಪು. ೬೦.
೬೧ E. C. VIII. Sa. 78, 1265
೬೨ E. C. XII. Tp. 32, ೧೧ನೇ ಶತ

ಸತ್ತಾಗ, ಚಟ್ಟಗಾವುಂಡ ಎಂಬುವನೂ, ಮಾಚಿಗಾವುಂಡನ ಹೆಂಡತಿ ಚಾಗಿಯಬ್ಬೆ, ಮತ್ತು ಇವರ ಮಗ ನಾಲಯ್ಯ ಎಂಬುವರು ಕೂಡಿ ಮಾಚಿಗಾವುಂಡನಿಗೆ ವೀರಗಲ್ಲನ್ನು ನಿಲ್ಲಿಸುತ್ತಾರೆ.[೬೩] ಸಾನ್ತಗೌಡನೆಂಬುವನು ಸತ್ತಾಗ 'ಸಾನ್ತಯ್ಯ'ನ ತಮ್ಮ ಚಿಕ್ಕಯ್ಯ ಗೌಣ್ಡನು ಮತ್ತು ಆತನ ಹಿರಿಯ ಮಗನು ವೀರಗಲ್ಲನ್ನು ನಿಲ್ಲಿಸುತ್ತಾರೆ.[೬೪] ವೀರನೊಬ್ಬನು ಸತ್ತಾಗ, "ಆತಂಗೆ ಪರೋಕ್ಷವಿನಯವನು ಅವರ ಭಾವ ಕಾಳೆಯ ನಾಯಕನು, ಮಗ ಮಹದೇವನಾಯಕನು, ಪದ್ಮವ್ವೆ ನಾಯಕಿತಿಯುಂ" ಮಾಡಿ, "ವೀರಸಾಸನ"ವನ್ನು ನಿಲ್ಲಿಸುತ್ತಾರೆ.[೬೫] ಇದೇ ರೀತಿ ಸಂಬಂಧಿಗಳು ಹಲವಾರು ಜನ ಸೇರಿಕೊಂಡು ವೀರಗಲ್ಲನ್ನು ನಿಲ್ಲಿಸಿದ ನಿದರ್ಶನಗಳು ಹಲವಾರು ದೊರೆಯುತ್ತವೆ.[೬೬]

ಈ ಎಲ್ಲಾ ಕಡೆಗಳಲ್ಲಿಯೂ ವೀರನ ಬಗ್ಗೆ ಆತನ ಸಂಬಂಧಿಗಳಿಗೆ ಇರುವ ಪ್ರೀತಿವಿಶ್ವಾಸಗಳೇ ವೀರಗಲ್ಲನ್ನು ಹಾಕುವುದಕ್ಕೆ ಮೂಲ ಪ್ರೇರಣೆಯನ್ನು ನೀಡಿವೆ. ಈ ಪ್ರೇರಣೆಯೊಂದಿಗೆ ಕೆಲವಾರು ನಂಬಿಕೆಗಳೂ ಸೇರಿಕೊಂಡಿವೆ ಎಂಬುದನ್ನು ಮರೆಯಲಾಗದು.

ವೀರನಿಂದ ತಮಗಾದ ಉಪಕಾರವನ್ನು ಸ್ಮರಿಸಿ, ಅವನ ಮನೆತನದವರಿಗೆ ದತ್ತಿಯನ್ನು ಬಿಡುವಾಗಲೇ ವೀರನಿಗೆ ವೀರಗಲ್ಲನ್ನು ಊರಿನ ಮುಖ್ಯಸ್ಥರೋ ಅಥವಾ ವೀರನ ಆಶ್ರಯದಾತರೋ ಹಾಕಿಸುತ್ತಿದ್ದರು.

ತೈಲಪ ದೇವನ ವೇಳೆವಾಳಿಯಾಗಿ ಸತ್ತ ಬೊಪ್ಪಣನೆಂಬುವನಿಗೆ ವಾಮದೇವ ಪಂಡಿತರು ಸಮಸ್ತ ಗೌವುಡುಗಳು ಇದ್ದು ಆತನಿಗೆ ಸ್ಮಾರಕವನ್ನು ನೆಡುತ್ತಾರೆ.[೬೭] ಜಕ್ಕಯ್ಯನೆಂಬ ವೀರನೊಬ್ಬನು ಸತ್ತಾಗ, "ಬಲ್ಮಾನಿಸ ಹೆಗ್ಗಡೆ ಕಲ್ಲಯ್ಯನು ಮುಂತಾಗಲೂರಯ್ವತ್ತೊಕ್ಕಲುಂ ಕನ್ನವೆಗ್ಗಡೆಯುಂ ಅವರ ಮಕ್ಕಳ್ಮಾರೆಯನುಂ ಮಾಳೆಯನುಂ ನಿಲ್ಸಿಯೀವೀರಸಾಸನವ" ಎಂಬುದಾಗಿ ವೀರಗಲ್ಲಿನ ಪಾಠದಿಂದ ತಿಳಿಯುತ್ತದೆ.[೬೮] ವೀರನೊಬ್ಬನು ಸತ್ತಾಗ ಊರಿನ "ಗವುಡ ಪ್ರಜೆಗಳು ಕೂಡಿ..... ಕೊಡಗಿಯ ಕೊಟ್ಟು" ವೀರಗಲ್ಲನ್ನು ನೆಡಿಸುತ್ತಾರೆ.[೬೯]

---

೬೩ E. C. VII. Sk. 83, 1058

೬೪ K. I. V.7, 1071

೬೫ E. C. VII. Sk. 144, 1181

೬೬ (ಅ) M. A. R.1926. 40, 1190 (ಆ) K.I.I. 35, 1398.
(ಇ) E. C. V. Ak. 184

೬೭ E. C. VII. HI. 47, 1130

೬೮ M. A. R.1941. 42. ೧೩ನೇ ಶತ

೬೯ E. C. XI. Hk. 31, 1371

ಕೋಟಿಸರನಾಯಕನೆಂಬುವನು ಸತ್ತಾಗ ಅವನ ತಮ್ಮನಾದ "ಅಂಣುನಾಯಕನು ನಗಿರು ಹಾಡುವಳ್ಳಿ ಕಾಯಕಿಣಿ ಮಂಕ ಬಟಕಾಳ ಸಿರಿಯಾಲಿಷ್ಟು ನಾಡು ನಖರವವನು ಕೂಡಿ ವೀರಗಲ್ಲನ್ನು ನಿಲ್ಲಿಸುತ್ತಾನೆ.[೨೦]

ನಾಗನೆಂಬುವನು ತನ್ನ ಆಜ್ಞೆಯ ಮೇರೆಗೆ ಯುದ್ಧ ಮಾಡಿ ಸತ್ತಾಗ, ಅವನ "ಅರಸಾಳುತನಕ್ಕೆ ಮೆಚ್ಚಿ ಮುರಾರಿ ಸೋಮೆಯ"ನು ವೀರಗಲ್ಲನ್ನು ನಿಲ್ಲಿಸುತ್ತಾನೆ.[೨೧] ಕ್ರಿ.ಶ. ೧೧೮೫ರ ಒಂದು ಶಾಸನದಿಮದ ವೀರನೊಬ್ಬನು ಸತ್ತಾಗ ಅವನ "ಸ್ವಾಮಿ" ವೀರಶಾಸನವನ್ನು ನಿಲ್ಲಿಸುತ್ತಾನೆ.[೨೨] ಮಾಳಯನೆಂಬ ವೀರನೊಬ್ಬನು ಸತ್ತಾಗ ಬೊಂರಸನು ವೀರಗಲ್ಲನ್ನು ನಿಲ್ಲಿಸುತ್ತಾನೆ.[೨೩] ತೆರಿಗೆನಾಯಕನ ಮಗನು ಹುಯ್ಯಲೊಂದರಲ್ಲಿ ಸತ್ತಾಗ, ಗಂಗೆಯ ದಂಡನಾಯಕರು ಅವನ ಪರಾಕ್ರಮವನ್ನು ಮೆಚ್ಚಿ ವೀರಗಲ್ಲನ್ನು ನಿಲ್ಲಿಸುತ್ತಾರೆ.[೨೪]

ವೀರಗಲ್ಲನ್ನು ಹಾಕಿಸುವ ಪದ್ಧತಿ ಕಡಿಮೆಯಾದ ಮೇಲೆಯೂ ಅರಸರು ತಮ್ಮ ಸೈನಿಕರ ಬಗ್ಗೆ ಇದ್ದ ವಿಶೇಷವಾದ ಮೆಚ್ಚುಗೆಯನ್ನು ಹಲವಾರು ರೀತಿಗಳಲ್ಲಿ ತೋರಿಸುತ್ತಿದ್ದರು. ಈ ದೃಷ್ಟಿಯಿಂದ ಮಡಕೇರಿಯ ಒಂದು ಶಾಸನ ಗಮನಾರ್ಹವಾಗಿದೆ. ಇದು ವೀರಗಲ್ಲು ಅಲ್ಲ. ವೀರರಾಜೇಂದ್ರರು ತಮ್ಮ ಅರಮನೆಯಲ್ಲಿ ಸೈನಿಕನಾಗಿದ್ದ 'ಬೋಪು' ಎಂಬುವನ ಸಮಾಧಿ ಕಲ್ಲಿನ ಮೇಲೆ ಈ ರೀತಿ ಶಾಸನವನ್ನು ಬರೆಸಿದ್ದಾರೆ. ಅವನು ಹತ್ತೊಂಬತ್ತು ವರ್ಷಗಳ ಕಾಲ ತಮ್ಮ ಯುದ್ಧಗಳಲ್ಲಿ, ಬೇಟೆಗಳಲ್ಲಿ. ಅರಮನೆಯ ಕೆಲಸಗಳಲ್ಲಿ "ಅಪ್ಪಣೆ ಆದ ಮೇರ್ರೆ ದಿವಾರಾತ್ರೆಯಲ್ಲೂ ಪ್ರಾಣ ಪ್ರಯತ್ನದಿಂದ ಅತಿಧೈರ್ಯದಿಂದ ಬಂಟತನ ಮಾಡಿ ಸ್ವಾಮಿ ಕಾರ್ಯ ಮುಖ್ಯವಾಗಿ ನಡಕೊಂಡಂತಾ ಸರಕಾರ್ರೆಕಾರ ಬೋಪು....... ಶಿವಾಧೀನ"ವಾದುದರಿಂದ ಅವನ ತ್ರಿಕರಣ ಶುದ್ಧ ಸೇವೆಯನ್ನು ಮೆಚ್ಚಿ, "ಕಾವಂದರು ಶಿಲೆಯಲ್ಲು ಬರಶಿ ಸಮಸ್ತರು ತಿಳಿಯುವ ಬಗ್ಗೆ" ಅವನ ಸಮಾಧಿಯ ಮುಂದೆ ಶಾಸನವನ್ನು ಸ್ಥಾಪನೆ ಮಾಡುತ್ತಾರೆ.[೨೫] ಈ ಶಾಸನದಿಂದ ಅರಸರಾದವರು ತಮ್ಮ ವೀರರಿಗೆ

---

೨೦ K. I. XI. Hk. 31, 1371

೨೦ K. I. 48, 1427

೨೧ E. C. VII. Sk. 245, 1185

೨೨ S.I.I XX. 125, 1185, "ಸ್ವಾಮಿ ಸಂತೋಷಂ ಬಡೆದು ನಿಲಿಸಿ ನಿರಿಸಿದ ವೀರಶಾಸನ".

೨೩ M. A. R.1937.11, 1282

೨೪ E. C. III. Nj. 140

೨೫ E. C. I. Cg. 13, 1807.

ವೀರಗಲ್ಲುಗಳನ್ನು ಏಕೆ ಹಾಕಿಸುತ್ತಿದ್ದರು, ಅವರ ಮತ್ತು ಸೈನಿಕರ ನಡುವಿನ ಸಂಬಂಧ ಯಾವ ರೀತಿಯದಿತ್ತು ಎಂಬ ಅಂಶಗಳು ಸ್ಪಷ್ಟವಾಗುತ್ತವೆ. ಈ ರೀತಿ ತಮ್ಮ ಪರವಾಗಿ ಹೋರಾಡಿ ಮಡಿದ ವೀರನ ಪರಾಕ್ರಮವನ್ನು ಮೆಚ್ಚಿ ಅರಸನೇ ಅವನಿಗೆ ವೀರಗಲ್ಲನ್ನು ಹಾಕಿಸಿದನೆಂದರೆ ಅದು ಸತ್ತ ವೀರನಿಗೆ ಸಂದ ಗೌರವವವಾಗಿ ಅವನು ಆದರ್ಶಸೇವಕನಾಗಿ ಜನರ ಮನಸ್ಸಿನಲ್ಲಿ ನಿಲ್ಲುತ್ತಾನೆ.[೭೬] ಇದೇ ಸಂದರ್ಭದಲ್ಲಿ ಮಣಾಲರನು ತನ್ನ 'ಕಾಳಿ'ಯೆಂಬ ನಾಯಿಗೆ ಹಾಕಿಸಿದ ವೀರಗಲ್ಲನ್ನು ಸ್ಮರಿಸಬಹುದು.[೭೭]

ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದ ಸ್ಥಳ

ವೀರಗಲ್ಲುಗಳನ್ನು ಎಲ್ಲಿ ನಿಲ್ಲಿಸುತ್ತಿದ್ದರು ಎಂಬುದನ್ನು ತಿಳಿಯಬೇಕಾದರೆ, ಅವು ಸಾಮಾನ್ಯವಾಗಿ ಇಂದಿಗೂ ಇರುವ ಪ್ರದೇಶಗಳನ್ನೂ ಮತ್ತು ವೀರಗಲ್ಲುಗಳ ಪಾಠದಿಂದಲೇ ತಿಳಿದು ಬರುವ ಮಾಹಿತಿಗಳನ್ನು ಗಮನಿಸಬೇಕು. ಈ ರೀತಿಯ ಮಾಹಿತಿ ದೊರೆಯುವ ವೀರಗಲ್ಲುಗಳ ಪಾಠ ಬಹಳ ಕಡಿಮೆ ಎಂದೇ ಹೇಳಬೇಕಾಗುವುದು.

ಕರ್ನಾಟಕದ ಬಹುಪಾಲು ವೀರಗಲ್ಲುಗಳು ಇಂದು ದೊರೆಯುವುದು ದೇವಾಲಯಗಳ ಬಳಿ ಶಿವ ದೇವಾಲಯಗಳ ಬಳಿಯಂತೂ ವೀರಗಲ್ಲುಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ ಎಂದರೆ ತಪ್ಪಾಗಲಾರದು. ಹಾಗೆಯೇ ಆಂಜನೇಯ, ಗಣಪತಿ, ವೀರಭದ್ರ ದೇವಾಲಯಗಳ ಮುಂದೆಯೂ ವಿರಳವಾಗಿರುವುದನ್ನು ಗಮನಿಸಬಹುದು. ಶಿವದೇವಾಲಯಗಳ ಬಳಿ ದೊರೆಯುವ ವೀರಗಲ್ಲುಗಳ ಸಂಖ್ಯೆಯೊಡನೆ, ಹೋಲಿಸಿ ನೋಡಿದಾಗ ವೈಷ್ಣವ ದೇವಾಲಯಗಳ ಬಳಿ ದೊರೆಯುವ ವೀರಗಲ್ಲುಗಳ ಸಂಖ್ಯೆಯೊಡನೆ, ಜೈನ ಬಸದಿಗಳ ಬಳಿಯಲ್ಲಿಯೂ ವೀರಗಲ್ಲುಗಳು ದೊರೆಯುತ್ತವೆ. ಯಾವ ದೇವಾಲಯದ ಮುಂದೆ ವೀರಗಲ್ಲು ಇರುತ್ತದೆಯೋ ಅದು ಸಾಮಾನ್ಯವಾಗಿ ಆ ಮತದ, ಧರ್ಮದ ಶಿಲ್ಪದ ವಿವರವನ್ನು ಹೊಂದಿರುತ್ತದೆ. ಕೆಲವೊಮ್ಮೆ ಹಾಗೆ ಇಲ್ಲದಿರುವ ಸಾಧ್ಯತೆಯೂ ಉಂಟು.

ಪ್ರಸ್ತುತ ದೇವಾಲಯಗಳ ಮುಂದೆ ಇರುವ ಎಲ್ಲಾ ವೀರಗಲ್ಲುಗಳನ್ನೂ ಅದೇ ದೇವಾಲಯಗಳ ಮುಂದೆ ಮೊದಲಿಗೇ ನೆಟ್ಟಿದ್ದರು ಎಂಬುದಾಗಿ ಹೇಳಲು ಬರುವುದಿಲ್ಲ.

---

೭೬ ಈ ಬಗ್ಗೆ 'ಕಲ್ನಾಡು' ಎಂಬ ಶೀರ್ಷಿಕೆಯಡಿಯಲ್ಲಿ ವಿವರವಾಗಿ ಚರ್ಚೆ ಮಾಡಲಾಗಿದೆ

೭೭ E. C. III. Md. 41, 950

ಏಕೆಂದರೆ ಕಾಲಾನಂತರದಲ್ಲಿ ಎಲ್ಲಿಯೋ ಬಿದ್ದಿರುವ ವೀರಗಲ್ಲುಗಳನ್ನು ದೇವರುಗಳೆಂದೂ ಅವುಗಳನ್ನು ಸಂರಕ್ಷಿಸಬೇಕು ಎಂಬ ದೃಷ್ಟಿಯಿಂದಲೋ ಜನ ದೇವಾಲಯಗಳ ಬಳಿ ತಂದು ನಿಲ್ಲಿಸಿರಬಹುದಾದ ಸಾಧ್ಯತೆಗಳೂ ಇವೆ. ಆದರೆ ಕೆಲವಾರು ವೀರಗಲ್ಲುಗಳ ಪಾಠದಿಂದ ವೀರಗಲ್ಲನ್ನು ನಿಲ್ಲಿಸುವಾಗಲೇ ಅಂದಿನ ಜನತೆ ವೀರಗಲ್ಲುಗಳನ್ನು ದೇವಾಲಯದ ಮುಂದೆ ನಿಲ್ಲಿಸುತ್ತಿದ್ದರೆಂಬ ಅಂಶ ತಿಳಿಯುತ್ತದೆ.

ಮಣಾಲಯ ತನ್ನ ಪ್ರೀತಪಾತ್ರವಾದ ನಾಯಿಯ ವೀರಗಲ್ಲನ್ನು ಆತಕೂರಿನ ಚೆಲ್ಲೇಶ್ವರ ದೇವಾಲಯದ ಮುಂದೆ ನೆಡಿಸಿದುದಾಗಿ ಅದೇ ಶಾಸನದಿಂದ ತಿಳಿಯುತ್ತದೆ.[೭೮] ಕ್ರಿ.ಶ. ೧೨೨೬ ಒಂದು ವೀರಗಲ್ಲಿನಿಂದ ವೀರಗಲ್ಲನ್ನು ಕಲಿದೇವರ ಮುಂದೆ ನೆಡಿಸಿದ ವಿಷಯ ತಿಳಿಯುತ್ತದೆ.[೭೯] ಹೀಗೆ ಇನ್ನೂ ಹಲವಾರು ವೀರಗಲ್ಲುಗಳಿಂದ ವೀರಗಲ್ಲುಗಳನ್ನು ದೇವಾಲಯದ ಮುಂದೆ ನೆಟ್ಟ ವಿಷಯ ತಿಳಿಯುತ್ತದೆ.[೮೦]

ಈ ರೀತಿ ಶಾಸನದ ಪಾಠದಲ್ಲಿ ಖಚಿತವಾಗಿ ಹೇಳದಿದ್ದರೂ, ಪಾಠದ ಕೊನೆಯಲ್ಲಿ, ಈಗ ವೀರಗಲ್ಲು ಯಾವ ದೇವಾಲಯದ ಮುಂದೆ ಇದೆಯೋ ಆ ದೇವಾಲಯದ ದೇವರನ್ನು ಸ್ಮರಣೆ ಮಾಡಿವೆ. ಈ ಕಾರಣದಿಂದ ಬಹುಶಃ ಆ ವೀರಗಲ್ಲುಗಳು ಮೊದಲಿನಿಂದಲೂ ಅದೇ ಸ್ಥಳದಲ್ಲಿದ್ದಿರಬೇಕೆಂದು ಊಹಿಸಬಹುದು.

ಬೆಳಗುತ್ತಿಯ ಸಿದ್ಧೇಶ್ವರ ದೇವಾಲಯದ ಮುಂದುಗಡೆ ಇರುವ ವೀರಗಲ್ಲಿನ ಕೊನೆಯಲ್ಲಿ, "ಶಿವಾಯ ನಮಃ । ಸಿದ್ಧೇಶ್ವರಾಯ ನಮಃ" ಎಂಬುದಾಗಿದೆ.[೮೧] ಗಂಗ ಸಮುದ್ರದ ರಾಮೇಶ್ವರ ದೇವಾಲಯದ ಹಿಂದುಗಡೆ ಇರುವ ವೀರಗಲ್ಲಿನಲ್ಲಿ, "ದೇವಲೋಕಕ್ಕೆ ಸಂದು ಸ್ವರ್ಗವ ಸೂಱೆಗೊಂಡನು ರಾಮನಾಥ" ಎಂಬುದಾಗಿದೆ.[೮೨] ಕೆಂಬಾಳಿನ ಶಿವ

---

೭೮ ಅದೇ,

೭೯ E. C. XI. Hk. 130, 1226.

೮೦ (ಅ) E. C. VI. Cm. 84. ಸು. ೧೩ನೇ ಶತ. "ಬಿರಗಲ್ಲು ಶಾಸನವ ಬರೆಸಿ ದೇವರ ಮುಂದೆ ನಿಲ್ಲಸಿದರು.
(ಆ) E. C. XI. Dg. 87, 1264 "ಅರಸಿಕೆಱೆಯ ಸ್ವಯಂಭು ಕಲಿದೇವರಾಸನದೊಲು ನಿಲ್ಸಿ".
(ಇ) E. C. VII. Sh. 61 - 62, 1287. "ಶ್ರೀ ಹೊನ್ನೆಸ್ವರ ದೇವರ ಸಂನ್ನಿಧಿಯಲು ಬೀರಗಲ್ಲ ನಿಲ್ಸಿ".

೮೧ E. C. VII. Hl. 38, 1196.

೮೨ E. C. XI. Hk. 83.

ದೇವಾಲಯದ ಮುಂದೆ ಇರುವ ವೀರಗಲ್ಲಿನ ಪಾಠದಲ್ಲಿ "ಹೊಂನಯನು ಕಾದಿ ದೇವ ಲೋಕಕ್ಕೆ ಸಂದಣು ॥ ಶ್ರೀ ಕಲಿನಾಥ ॥" ಎಂದಿದೆ.[೮೩]

ವೀರಗಲ್ಲುಗಳನ್ನು ದೇವಾಲಯಗಳ ಮುಂದೆ ಏಕೆ ನೆಡುತ್ತಿದ್ದರು ಎಂಬುದು ವಿಚಾರ ಮಾಡಬೇಕಾದ ಸಂಗತಿ. ವೀರಗಲ್ಲುಗಳನ್ನು ದೇವಾಲಯಗಳ ಮುಂದೆ ನಿಲ್ಲಿಸುವಲ್ಲಿ ಅವರ ಮುಖ್ಯ ಉದ್ದೇಶ, ವೀರನು ದೇವರ ಸನ್ನಿಧಿಯಲ್ಲಿರುತ್ತಾನೆ ಎಂಬ ನಂಬಿಕೆ. ವೀರಗಲ್ಲಿನ ಆರಾಧನೆ ಒಂದು ನಿಯತಕಾಲದಲ್ಲಿ ನಡೆಯಬೇಕಾದ ಆಚರಣೆಯೆಂದು ಭಾವಿಸಿದ್ದ ಕಾಲದಲ್ಲಿ, ದೇವಾಲಯ ಮತ್ತು ವೀರನ ಸ್ಮಾರಕ ಒಂದೆಡೆಗೆ ಇರುವುದರ ಅನುಕೂಲತೆಯೂ ಅವರಿಗೆ ಕಂಡಿರಬೇಕು. ದೇವಾಲಯಗಳಿಗೆ ಸಹಜವಾಗಿ ಜನರು ಹೋಗುತ್ತಿದ್ದ ಕಾರಣದಿಂದಾಗಿ ಅವರಿಗೆ ಅನಾಯಾಸವಾಗಿ ವೀರನ ಪರಾಕ್ರಮದ ಪರಿಚಯವೂ ಆಗುತ್ತದೆ ಎಂಬುದಾಗಿ ಅವರು ಭಾವಿಸಿದ್ದಿರಬೇಕು. ಆದರೆ ವೀರಗಲ್ಲುಗಳನ್ನು ದೇವಾಲಯಗಳ ಮುಂದೆ ನಿಲ್ಲಿಸುವಲ್ಲಿ ಮುಖ್ಯವಾಗಿ ಧಾರ್ಮಿಕತೆಯೇ ಪ್ರಧಾನ ಅಂಶವಾಗಿತ್ತೆಂದು ತೋರುತ್ತದೆ. ಇದೇ ಅಭಿಪ್ರಾಯವನ್ನು ಬಸದಿಗಳ ಮುಂದೆ ಇರುವ ವೀರಗಲ್ಲುಗಳ ಬಗ್ಗೆಯೂ ಹೇಳಬಹುದು.

ದೇವಾಲಯಗಳ ಬಳಿಯಲ್ಲಿ ಮಾತ್ರವಲ್ಲದೆ ವೀರಗಲ್ಲುಗಳನ್ನು ಇತರ ಕಡೆಗಳಲ್ಲಿಯೂ ಸಾಮಾನವಾಗಿ ಇರುವುದುನ್ನು ಗಮನಿಸಬಹುದು. ಊರ ಬಾಗಿಲ ಮುಂದೆ, ಚಾವಡಿಗಳಲ್ಲಿ, ಹೊಂಡಗಳ ಬಳಿ, ಹೊಲ, ಗದ್ದೆ, ತೋಪು, ಮೈದಾನಗಳಲ್ಲಿ ವೀರಗಲ್ಲುಗಳನ್ನು ಗಮನಿಸಬಹುದು. ಇಂಥ ಕಡೆಗಳಲ್ಲಿ ನೆಡುವುದರ, ಉದ್ದೇಶ – ಅವು ನಿರಾಯಾಸವಾಗಿ ಜನರ ಕಣ್ಣಿಗೆ ಬೀಳಬೇಕೆನ್ನುವುದು.

ಗಂಗ ಮತ್ತು ನೊಳಂಬರ ಕಾಲದ ಬಹುಪಾಲು ವೀರಗಲ್ಲುಗಳು ಸಾಮಾನ್ಯವಾಗಿ ಕೆರೆಯಬಳಿ ಇರತ್ತವೆ. ಈ ರೀತಿ ಕೆರೆಯ ಬಳಿಯಿರುವ ವೀರಗಲ್ಲುಗಳನ್ನು ಸಾಮಾನ್ಯವಾಗಿ ಕೋಲಾರ, ಬೆಂಗಳೂರು, ತುಮಕೂರು, ಮೈಸೂರು ಜಿಲ್ಲೆಗಳಲ್ಲಿ ಗಮನಿಸಬಹುದಾಗಿದೆ. ಇದೇ ಸಂದರ್ಭದಲ್ಲಿ ವೀರಗಲ್ಲುಗಳಿಗೆ ಸಂಬಂಧಿಸಿದ ಹಾಗೆ ಕೋಲಾರ ಜಿಲ್ಲೆಯ ಕೆಲವು ಪ್ರದೇಶಗಳನ್ನು ಪರಿಚಯ ಮಾಡಿಕೊಂಡು ವಿಶ್ಲೇಷಿಸುವುದು ಉಚಿತ.

ಕೋಲಾರ ಜಿಲ್ಲೆಯಲ್ಲಿ ವೀರಗಲ್ಲುಗಳು ಇರುವ ಸ್ಥಳವನ್ನು 'ವೀರಗಾರರನೆತ್ತು' ಎಂಬುದಾಗಿ ಕರೆಯುತ್ತಾರೆ. ಈ ವೀರಗಾರನೆತ್ತುಗಳಲ್ಲಿ ಸಾಮಾನ್ಯವಾಗಿ ಗಂಗರ ಮತ್ತು

೮೩. E. C. V. Cn. 206

ನೊಳಂಬರ ಕಾಲದ ವೀರಗಲ್ಲುಗಳು ಇವೆ. ಈ 'ವೀರಗಾರರನೆತ್ತು' ಎಂಬ ಪ್ರದೇಶವನ್ನು ಕೆಲವೆಡೆಗಳಲ್ಲಿ 'ಬೂದಿನೆತ್ತು' ಎಂಬುದಾಗಿಯೂ ಕರೆಯುತ್ತಾರೆ. (ನೆತ್ತು = ನಿರ್ದಿಷ್ಟವಾದ ಸ್ಥಳ) ಬೂದಿನೆತ್ತು ಎಂದರೆ ಊರಿನ ಹೊರಗಡೆ ಹೊಲಗಳಲ್ಲಿ ಸುಮಾರು ಎರಡು ಮೂರು ಎಕರೆಗಳ ಪ್ರದೇಶದಲ್ಲಿ ಬೂದಿಯ ಮಣ್ಣು ಇರುತ್ತದೆ. ಈ ಬೂದಿಯನ್ನು ತೆಗೆದು ಬೇರೆಯ ಹೊಲಗಳಿಗೆ ಹಾಕುತ್ತಾರೆ. ಇಂತಹ ಬೂದಿನೆತ್ತು ಹೊಲಗಳಲ್ಲಿ ವೀರಗಲ್ಲುಗಳು ಇರುತ್ತವೆ. ನಾವು ಅಧ್ಯಯನ ಮಾಡಿರುವ ಇಂಥ ಬೂದಿನೆತ್ತುಗಳಲ್ಲಿ ಇದೇ ಜಿಲ್ಲೆಯ, ಚಿಂತಾಮಣಿ ತಾಲ್ಲೂಕಿನ ಸಂತೆಕಲ್ಲಹಳ್ಳಿ ಎಂಬ ಗ್ರಾಮದ ಬೂದಿನೆತ್ತು ಹಲವಾರು ರೀತಿಗಳಿಂದ ಗಮನಾರ್ಹವಾದುದಾಗಿದೆ.

ಸಂತೆಕಲ್ಲಹಳ್ಳಿಯ ಪೂರ್ವಕ್ಕೆ ಸುಮಾರು ಐದು–ಆರು ಎಕರೆ ಪ್ರದೇಶದಲ್ಲಿ ಈ ಬೂದಿನೆತ್ತು ವ್ಯಾಪ್ತವಾಗಿದೆ. ಇಲ್ಲಿಯ ಜನ ತಮ್ಮ ಜಮೀನುಗಳ ಆಬಾದಿಗಾಗಿ ಇಲ್ಲಿಂದ ಬೂದಿಯನ್ನು ತೆಗೆಯುತ್ತಾರೆ. ಇದೇ ಪ್ರದೇಶದಲ್ಲಿ ನಡುವೆ ಸಾಲಾಗಿ ನೊಳಂಬರ ಕಾಲದ ಸುಮಾರು ಎಂಟು ವೀರಗಲ್ಲುಗಳ ಇವೆ. ಅವುಗಳಲ್ಲಿ ಕೆಲವು ಒಡೆದು ಹೋಗಿವೆ. ಇಲ್ಲಿ ಅಗೆಯುವಾಗ ಹೆಂಚಿನ ಚೂರುಗಳು, ಗಂಗ ಶ್ರೀ ಪುರುಷನ ತಾಮ್ರ ಶಾಸನವೂ ದೊರೆತಿದೆ. ಇವುಗಳಿಗಿಂತ ಮಹತ್ವದ ಒಂದು ವಸ್ತು ಎಂದರೆ ಮಡಕೆಚೂರಿನ ಮೇಲೆ ದೊರೆತಿರುವ ಒಂದು ಶಾಸನ. ಈ ಶಾಸನವಿರುವ ಮಡಿಕೆಯಚೂರು ವೀರಗಲ್ಲಿನ ತಳಭಾಗದಲ್ಲಿ ದೊರೆತಿರುವುದು ಹಲವು ರೀತಿಗಳಿಂದ ಕುತೂಹಲಕರವಾದ ಸಂಗತಿಯಾಗಿದೆ.

ತಮಿಳಿಯ ಪುರಪೊರುಲ್ ಮತ್ತು ವೆನ್ಬಮಾಲೈ ಎಂಬ ಸಂಗಮ್ ಸಾಹಿತ್ಯದ ಎರಡು ಕೃತಿಗಳು, ಯುದ್ಧದಲ್ಲಿ ಮಡಿದ ವೀರರನ್ನು ಸುಟ್ಟು ಅವರ ಅಸ್ಥಿಗಳನ್ನು ಮಡಿಕೆಗಳಲ್ಲಿ ಸಂಗ್ರಹಿಸಿ, ಅವುಗಳ ಮೇಲೆ ವೀರಗಲ್ಲುಗಳನನು ನೆಡತ್ತಿದ್ದರೆಂದು ತಿಳಿಸುತ್ತದೆ.[೮೫] ಆ ರೀತಿಯ ಒಂದು ಸಂಪ್ರದಾಯ ಇಲ್ಲಿಯೂ ಇದ್ದಿರಬಹುದೇ ಎಂಬ ಅನುಮಾನ ಬರುತ್ತದೆ. ಆದರೆ ವೈಜ್ಞಾನಿಕವಾದ ಉತ್ಖನನವಾಗದ ಹೊರತೂ ಆ ಬಗ್ಗೆ ಏನನ್ನೂ ಹೇಳುವುದು ಸಾಧುವಲ್ಲ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ ಕವಿಲೆದುರ್ಗದ ಕೆರೆಯ ಅಂಚಿನಲ್ಲಿ ಹಲವಾರು ಸಮಾಧಿಗಳು ಇವೆ. (ಚಿತ್ರ ೩೦, ೩೧, ೩೨) ಇವುಗಳ ಮುಂದೆ (ಇಂದು ಸಮಾಧಿಗಳ ಮುಂಭಾಗದಲ್ಲಿ ಕಲ್ಲು ನಿಲ್ಲಿಸುವಂತೆ) ವೀರಗಲ್ಲುಗಳನ್ನು ನಿಲ್ಲಿಸಿದ್ದಾರೆ. ಈ

೮೫ Nagaswamy : Hero Stones of Tamilnad J.I.H. Vol. LI. pt.II. 1973. ಪು. ೨೬೬

ವೀರಗಲ್ಲುಗಳಲ್ಲಿ ವೀರ ಮತ್ತು ಆತನೊಡನೆ ಸಹಗಮನ ಮಾಡಿದ ಆತನ ಸತಿಯನ್ನೂ ಬಿಡಿಸಿದ್ದಾರೆ. ಇವು ಕೆಳದಿಯ ನಾಯಕರು, ವೀರರು, ಹೋರಾಟದಲ್ಲಿ ಸತ್ತಾಗ ಅವರನ್ನು ಯುದ್ಧ ಭೂಮಿಯಿಂದ ತಂದು ಇಲ್ಲಿ ಸಮಾಧಿ ಮಾಡಲಾಯಿತಂತೆ (ಇದು ಅಲ್ಲಿಯ ಜನರ ಅಭಿಪ್ರಾಯ) ವೀರಗಲ್ಲಿನ ಶಿಲ್ಪದಲ್ಲಿ ಬಿಡಿಸಲಾಗಿರುವ ಮಹಿಳೆಯರು ಯುದ್ಧದಲ್ಲಿ ಮಡಿದ ತಮ್ಮ ಗಂಡಂದಿರೊಡನೆ ಸಮಾಧಿಯಲ್ಲಿ ಹುಗಿಸಿಕೊಳ್ಳುವುದರ ಮೂಲಕ ಸಹಗಮನ ಮಾಡಿರಬೇಕು. ವೀರಗಲ್ಲಿನ ಶಿಲ್ಪವೊಂದರಲ್ಲಿ ಮಡಿದ ವೀರನೊಂದಿಗೆ ಆತನ ಹೆಂಡತಿಯೂ ಸಮಾಧಿಯಲ್ಲಿ ಮಲಗಿರುವಂತೆ ವಿವರಗಳನ್ನು ಬಿಡಿಸಲಾಗಿರುವುದನ್ನು ಇಲ್ಲಿ ನೆನೆಯಬಹುದು. (ಚಿತ್ರ ೩೩) ಈ ಸಮಾಧಿಗಳನ್ನು ಅವರ ವಂಶದವರು ವರ್ಷಕ್ಕೆ ಒಮ್ಮೆ ಬಂದು ಪೂಜಿಸುತ್ತಾರಂತೆ. ಈ ತೆರನ ಸಮಾಧಿಗಳು ಅಲ್ಲಿ ಸುಮಾರು ಇಪ್ಪತ್ತು – ಮುವತ್ತು ಇವೆ. ಇವುಗಳ ಸಮರ್ಪಕವಾದ ಉತ್ಖನನ ಕಾರ್ಯವು ನಡೆದಾಗ ಹಲವಾರು ಹೊಸ ವಿಷಯಗಳು ಖಂಡಿತಾ ಹೊರ ಬರುತ್ತವೆ. ಮೇಲಿನ ಎಲ್ಲಾ ನಿದರ್ಶನಗಳ ಆಧಾರದ ಮೇಲೆ ವೀರಗಲ್ಲುಗಳನ್ನು ವೀರರಾದವರ ಸಮಾಧಿಗಳ ಮೇಲೆಯೂ ನೆಡುತ್ತಿದ್ದರು ಎಂಬುದಾಗಿ ಊಹಿಸಬಹುದು.[೮೫]

ವೀರನಾದವನು ಎಲ್ಲೇ ಸಾಯಲಿ ಅವನಿಗೆ ಅವನ ಸ್ವಂತ ಊರಿನಲ್ಲೇ ವೀರಗಲ್ಲನ್ನು ಹಾಕುತ್ತಿದ್ದರೆಂಬ ಅಂಶ ವೀರಗಲ್ಲುಗಳ ಪಾಠದಿಂದ ತಿಳಿದು ಬರುತ್ತದೆ. ವೀರರಾದವರು ತಮ್ಮ ಆಶ್ರಯದಾತರ ಪರವಾಗಿ ಯುದ್ಧ ಮಾಡಲು ಹೋಗಿ ಬೇರೆಯ ಕಡೆಯಲ್ಲಿ ಸತ್ತಿರಬಹುದು. ಬೇಟೆಗಾಗಿ ಹೋಗಿ ಕಾಡಿನಲ್ಲಿ ಸತ್ತಿರಬಹುದು ಅಥವಾ ತನ್ನ ಕೆಲಸ ಕಾರ್ಯನಿಮಿತ್ತವಾಗಿ ಬೇರೆ ಸ್ಥಳಕ್ಕೆ ಹೋಗಿದ್ದಾಗ, ಹೋಗಿ ಬರುತ್ತಿದ್ದಾಗ ದಾರಿಯಲ್ಲಿ ಕಳ್ಳರೊಡನೆ ಹೋರಾಡಿ ಸತ್ತಿರಬಹುದು. ಇಂತಹವರ ವೀರಗಲ್ಲುಗಳನ್ನು ಅವರು ಹೋರಾಡಿ ಮಡಿದ ಸ್ಥಳಗಳಲ್ಲಿ ನೆಡದೆ ಸಾಮಾನ್ಯವಾಗಿ ವೀರರ ಸ್ವಂತ ಗ್ರಾಮಗಳಲ್ಲಿ ನೆಡುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ.

ಕುಡುಕೂರಿನ ದೊರೆಯ್ಯನ ಮಗ ಮಾರಯ್ಯ ಎಂಬುವವನು 'ಪೆಳ್ತಿಯೂರಟಿವಿ' ನಲ್ಲಿ ಸತ್ತಾಗ ಅವನ ತಂದೆ ದೊರಯ್ಯ ಕುಡುಕೂರಿನಲ್ಲಿ ವೀರಗಲ್ಲನ್ನು ನಿಲ್ಲಿಸುತ್ತಾನೆ.[೮೬]

---

೮೫ ಈ ಬಗೆ ಮಾಹಿತಿ ನೀಡಿ ಕೌಲೆದುರ್ಗಕ್ಕೆ ಹೋಗಿ ನೋಡಿಕೊಂಡು ಬರಲು ಪ್ರೇರೇಪಿಸಿದವರು ಡಾ. ಎಂ. ಚಿದಾನಂದಮೂರ್ತಿ ಅವರು.

೮೬ E. C. IV. Hs. 50, 997

ಕೋಣಂಗೇರಿಯ ಹಾರುವ ಬಂಮಿ ಸೆಟ್ಟಿಯ ಮಗ ಸೋವಿಸೆಟ್ಟಿ ಎಂಬುವನು 'ಬಡಗಲು ಬ್ಯವಹಾರ'ಕ್ಕಾಗಿ ಹೋದಾಗ ಅಂಣ್ಣಿಗೇರಿಯ ಹೊಲದಲ್ಲಿ ಕಳ್ಳರೊಡನೆ ಹೋರಾಡುವಾಗ ಸಾಯುತ್ತಾನೆ. ಅವನ ವೀರಗಲ್ಲು ಕೋಣಂಗೇರಿಯಲ್ಲಿದೆ.[೮೭] ದುಗ್ಗಣ ಎಂಬುವನು ಹರಿಹರಕ್ಕೆ ಹೋಗಿ ಬರುತ್ತಿದ್ದಾಗ ದಾರಿಯಲ್ಲಿ ಕಳ್ಳರೊಡನೆ ಹೋರಾಡಿ ಸಾಯುತ್ತಾನೆ.[೮೮] ಬೋಲಿಯ ನಾಯಕ ಲಿಂಗನಹಳ್ಳಿಯಘಟ್ಟದಲ್ಲಿ ಮದುವೆಯಾಗಿ ಬರುತ್ತಿರಬೇಕಾದರೆ ದಾರಿ ಕಳ್ಳರೊಡನೆ ಹೋರಾಡಿ ಸಾಯುತ್ತಾನೆ.[೮೯] ಕಬ್ಬಹಾಳದ ಸೋಮಗೌಡನ ಮಗ ಶಾಉರಣ್ಣನು ಬೇರೆಯ ಗ್ರಾಮದ ಸಂತೆಗೆ ಹೋಗಿ ಬರುತ್ತಿರುವಾಗ ಕಳ್ಳರೊಡನೆ ಹೋರಾಡಿ ಮಡಿದಾಗ, ಅವನ ತಂದೆ ಮತ್ತು ಅಣ್ಣಂದಿರು ಕಬ್ಬಳ್ಳಿಯಲ್ಲಿ ವೀರಗಲ್ಲು ನಿಲ್ಲಿಸುತ್ತಾರೆ.[೯೦] ರಾಮಗೌಡ ಎಂಬುವನು ಚಂದ್ರಗುತ್ತಿಯಲ್ಲಿ ಸತ್ತಾಗ, ಅವನ ಶವವನ್ನು ಅವನ ಸ್ವಂತ ಗ್ರಾಮವಾದ ಹಾರಿಕೆಗೆ ಕಳುಹಿಸುತ್ತಾರೆ. ಆಗ ರಾಮಗೌಡನ ಹೆಂಡತಿ ಆತನೊಂದಿಗೆ ಸಹಗಮನ ಮಾಡುತ್ತಾಳೆ.[೯೧]

ತಮಿಳುನಾಡಿನ ವೀರಗಲ್ಲುಗಳ ಬಗ್ಗೆ ಬರೆಯುತ್ತಾ ಶ್ರೀ ನಾಗಾಸ್ವಾಮಿಯವರು. "ವಿರ ಮಡಿದ ಸ್ಥಳದಲ್ಲಿಯೇ ವೀರಗಲ್ಲುಗಳನ್ನು ನಿಲ್ಲಿಸಿರುವ ಸಾಧ್ಯತೆ ಇದೆ". ಎಂಬುದಾಗಿ ಹೇಳುತ್ತಾರೆ.[೯೨] ತಮ್ಮವಾದಕ್ಕೆ ಪೋಷಕವಾಗಿ, ಒಂದೇ ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು ಬೇರೆ ಬೇರೆ ಊರುಗಳಲ್ಲಿ ಇವೆಯೆಂಬುದನ್ನೂ ಮತ್ತು ಬೇಟೆಯ ವೀರಗಲ್ಲು ಕಾಡಿನಲ್ಲಿರುವುದನ್ನೂ ಕಾರಣವಾಗಿ ನೀಡುತ್ತಾರೆ. ನಾಗಾಸ್ವಾಮಿಯವರು ಈ ಅಭಿಪ್ರಾಯವನ್ನು ಒಪ್ಪುವುದು ಕರ್ನಾಟಕದ ಮಟ್ಟಿಗಂತೂ ಸಾಧುವಲ್ಲವೆಂದೇ ತೋರುತ್ತದೆ. ಒಂದೇ ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು ವೀರರ ಸ್ವಂತ ಊರುಗಳಲ್ಲಿರುವ ಹಲವಾರು ನಿದರ್ಶನಗಳೂ ಇವೆ. ಇನ್ನು ಬೇಟೆಯಲ್ಲಿ ಸತ್ತ ವೀರರ ವೀರಗಲ್ಲುಗಳ ಬಗ್ಗೆ ಹೇಳುವುದಾದರೆ, ಅವು ದೊರೆತಿರುವ ಸ್ಥಳಗಳಲ್ಲಿ ಇಂದು ಜನ ವಾಸ ಇಲ್ಲದಿರಬಹುದು. ಅಲ್ಲಿ ಜನರು ವಾಸಿಸುತ್ತಿದ್ದ ಕುರುಹುಗಳು ಇವೆಯೇ ಎಂಬುದನ್ನು ಪರಿಶೀಲಿಸಿ ಹೇಳಬೇಕಾಗುತ್ತದೆ. ಕರ್ನಾಟಕದ ಬೇಟೆಯ

---

೮೭ KI. IV. No. 18, 1176

೮೮ E. C. VII. HI. 85, 1189

೮೯ M. A. R.1940. No. 23. 1277

೯೦ E. C. IX. Kn. 64, 1291

೯೧ E. C. VII. Sk. 37, 1417

೯೨ Nagaswamy : Hero Stones of Tamilnad J.I.H. Vol. LI. pt.II. 1973. ಪು. ೨೬೭

ವೀರಗಲ್ಲುಗಳ ಬಗ್ಗೆ ಹೇಳುವುದಾದರೆ ಸಾಮಾನ್ಯವಾಗಿ ಹಿಂದೆ ವಾಸವಿದ್ದ, ಕೆಲವು ಕಡೆ ಇಂದಿಗೂ ವಾಸವಿರುವ, ಜನರು ಸಾಮಾನ್ಯವಾಗಿ ಓಡಾಡುವ ಪ್ರದೇಶಗಳು ಆಜುಬಾಜುಗಳಲ್ಲಿಯೇ ವೀರಗಲ್ಲುಗಳು ಇವೆ.

ಚಳ್ಳಕೆರೆ ತಾಲ್ಲೂಕು ಎರಬಳ್ಳಿ ಎಂಬ ಊರಿನ ಬಳಿ ಇರುವ ಒಂದು ಹೊಲದಲ್ಲಿ ಸಹಗಮನ ಮಾಡಿದ ಕೊಂಡಗಳನ್ನು ತೋರಿಸುತ್ತಾರೆ. ಈ ಕೊಂಡಗಳ ಬಳಿ ನೂರಾರು ಸಣ್ಣ ಸಣ್ಣ ಕಲ್ಲುಗಳನ್ನು ಸಾಲಾಗಿ ನಿಲ್ಲಿಸಿದ್ದಾರೆ. ಇವುಗಳನ್ನು ಅಲ್ಲಿಯ ಜನ 'ಯಜಮಾನ್ರ ಗುಡ್ಡ' ಅಥವಾ 'ಬೆನವ'ಗಳು ಎಂಬುದಾಗಿ ಕರೆಯುತ್ತಾರೆ. ಇವು ಗೊಲ್ಲಜನಾಂಗದಲ್ಲಿ ಸತ್ತ ವ್ಯಕ್ತಿಗಳ ಸ್ಮಾರಕಶಿಲೆಗಳು. ಅವರಲ್ಲಿ ಸತ್ತ ವ್ಯಕ್ತಿಯನ್ನು ಎಲ್ಲಿಯೇ ಸಮಾಧಿ ಮಾಡಲಿ, ಅವನು ಸತ್ತ ಒಂದು ತಿಂಗಳ ನಂತರ ಸತ್ತ ವ್ಯಕ್ತಿಯ ಹೆಸರಿನಲ್ಲಿ ಒಂದು ಕಲ್ಲನ್ನು ಈ ಸಾಲಿನಲ್ಲಿ ನಿಲ್ಲಿಸುತ್ತಾರೆ. ಈ ಕಲ್ಲನ್ನು ಇಡುವುದರ ಮೂಲಕ ಸತ್ತವನನ್ನು ಹಿಂದಿನ ಹಿರಿಯರ ಗುಂಪಿಗೆ ಸೇರಿಸಿದೆವು ಎಂಬುದಾಗಿ ಅವರು ಭಾವಿಸುತ್ತಾರೆ. ಈ ಪ್ರದೇಶವನ್ನು ಯಾವವ್ಯಕ್ತಿಯ ಸಮಾಧಿಯೂ ಇಲ್ಲ ಮತ್ತು ಈ ಪ್ರದೇಶವನ್ನು ಅವರು ಸ್ಮಶಾನ ಎಂಬುದಾಗಿಯೂ ಕರೆಯುವುದಿಲ್ಲ. ಆ ಊರಿನಲ್ಲಿ ಸತ್ತ ಇಡೀ ಗೊಲ್ಲ ಜನಾಂಗದವರ ವ್ಯಕ್ತಿಗಳ ಹೆಸರಿನ ಶಿಲೆಗಳು ಅಲ್ಲಿವೆ. ಪ್ರತಿ ಶಿವರಾತ್ರಿಯಲಲಿಯೂ ಇಡೀ ಗೊಲ್ಲ ಜನಾಂಗದವರು ಸೇರಿ ಹಿರಿಯರ ಸಂಕೇತಗಳಾದ ಈ ಬೆನವಗಳ ಮುಂದೆ ಪೂಜೆ ಮಾಡುತ್ತಾರೆ.[೯೩]

ಇಲ್ಲಿಯೇ ಕುರುಬ ಜನಾಂಗದವರು ವಿಶೇಷವಾಗಿ ವಾಸಿಸುವ ಹಳೆಯ ಮೈಸೂರಿನ ಭಾಗಗಳಲ್ಲಿ ಒಂದೇ ಕಡೆ ಅಸಂಖ್ಯಾತ ವೀರಗಲ್ಲುಗಳು ದೊರೆಯುವುದನ್ನು ಸ್ಮರಿಸಬಹುದು. (ಚಿತ್ರ : ೧೯, ೨೦)

ಒಟ್ಟಾರೆ ವೀರಗಲ್ಲುಗಳನ್ನು ಸಾಮಾನ್ಯವಾಗಿ ವೀರನ ಸ್ವಂತ ಗ್ರಾಮದಲ್ಲಿ ಹಾಕಿಸುತ್ತಿದ್ದರು. ಹೀಗೆ ಹಾಕಿಸಿರುವ ವೀರಗಲ್ಲುಗಳು ದೇವಾಲಯದ ಮುಂದೆ ಇರಬಹುದು: ನಿರ್ದಿಷ್ಟ ಸ್ಥಳದಲ್ಲಿರಬಹುದು ಅಥವಾ ಜನರ ಕಣ್ಣಿಗೆ ಪದೇ ಪದೇ ಬೀಳುವಂತಹ ಕಡೆಗಳಲ್ಲಿರಬಹುದು.

ಹಲವಾರು ವೀರಗಲ್ಲುಗಳು ಹೊಲ, ಗದ್ದೆಗಳಲ್ಲಿ ದೊರೆಯುವುದರಿಂದ ಬಹುಶಃ ವೀರನಿಗೆ ಬಿಟ್ಟ ದತ್ತಿಯ ಬಳಿಯೇ ಆ ವೀರಗಲ್ಲನ್ನು ಹಾಕಿಸುತ್ತಿದ್ದಿರಬೇಕೆಂದು ತೋರುತ್ತದೆ.

---

೯೩ ಈ ಬಗ್ಗೆ ಮಾಹಿತಿ ಸಂಗ್ರಹಿಸುವಲ್ಲಿ, ಎರಬಳ್ಳಿಗೆ ನನ್ನನ್ನು ಕರೆದೊಯ್ಯುವಲ್ಲಿ ಅನೇಕ ರೀತಿಯ ನೆರವನ್ನು ನೀಡಿದ ಶ್ರೀ ಎ. ಕೃಷ್ಣಮೂರ್ತಿಯವರಿಗೆ ನಾನು ಕೃತಜ್ಞ.

ಸತ್ತ ವ್ಯಕ್ತಿಯ ಆತ್ಮ ಆಶ್ರಯವೊಂದನ್ನು ಪಡೆಯುವ ಸಲುವಾಗಿ ಕಲ್ಲನ್ನು ನಿಲ್ಲಿಸುವುದು ಆರಂಭದ ಹಂತವಾದರೆ, ವೀರರಾದವರ ಸ್ಮಾರಕಗಳನ್ನು ವಿಶಿಷ್ಟ ರೀತಿಯಿಂದ ನಿರ್ಮಿಸುವುದು ಎರಡನೆಯ ಹಂತ ವೀರನ ಪರಾಕ್ರಮವನ್ನೂ ಅದರ ಮೇಲೆಯೇ ಉತ್ಕೀರ್ಣ ಮಾಡಲಾಗುತ್ತಿತ್ತು ಎಂಬ ಅಂಶವನ್ನು ಈ ಹಿಂದೆಯೇ ಗಮನಿಸಿದ್ದೇವೆ. ಸತ್ತ ವೀರನಿಗೆ ಅಥವಾ ಅವನ ಮನೆಯವರಿಗೆ ಜೀವನ ನಿರ್ವಹಣೆಯ ಸಲುವಾಗಿ ಅರಸನೋ, ಊರಿನ ಹಿರಿಯರೋ ದತ್ತಿಯನ್ನು ಕೊಟ್ಟಾಗ ಅದನ್ನು ಸಹ ವೀರಗಲ್ಲಿನ ಮೇಲೆಯೇ ಬರೆಯುತ್ತಿದ್ದರು. ವೀರನು ಯಾವ ಹಳ್ಳಿಯವನೊ ಅದೇ ಹಳ್ಳಿಯಲ್ಲಿ ಜಮೀನನ್ನು ಕೊಡುತ್ತಿದ್ದರು. ಈಗಾಗಲೇ ವಾಸವಾಗಿದ್ದು, ಅಲ್ಲಿನ ವಾತಾವರಣಕ್ಕೆ ಅವರ ಮನೆಯವರು ಹೊಂದಿಕೊಂಡಿದ್ದ ಕಾರಣ ವೀರನ ಊರಲ್ಲಿಯೇ ಸಾಮಾನ್ಯವಾಗಿ ದತ್ತಿಯನ್ನು ಬಿಡುತ್ತಿದ್ದರೆಂದು ಹಲವಾರು ವೀರಗಲ್ಲುಗಳ ಪಾಠದಿಂದ ಸ್ಪಷ್ಟವಾಗುತ್ತದೆ. ಹೀಗೆ ದತ್ತಿಯನ್ನು ಕೊಟ್ಟ ಹೊಲ, ಗದ್ದೆಗಳಲ್ಲಿ ವೀರನ ವೀರಗಲ್ಲನ್ನು ನೆಡುತ್ತಿದ್ದುದು ಉಂಟೆಂದು ಊಹಿಸಬಹುದು. ಈ ರೀತಿ ಮಾಡುವುದರಿಂದ ವೀರನಿಗೆ ಸ್ಮಾರಕ ನಿಲ್ಲಿಸಿದಂತೆಯೂ ಆಗುತ್ತದೆ. ಅದೇ ಕಾರಣಕ್ಕಾಗಿ ಜಮೀನನ್ನು ಪಡೆದದ್ದು ಎಂದು ತಿಳಿಸುವ ಮತ್ತೊಂದು ಶಾಸನಕಲ್ಲನ್ನು ನಿರ್ಮಿಸುವುದಕ್ಕಿಂತ ವೀರಗಲ್ಲಿನ ಮೇಲೆಯೇ ದತ್ತಿಯ ವಿವರಗಳನ್ನು ಬಿಡಿಸುವುದು ಅನುಕೂಲವೆಂದು ಅವರು ಭಾವಿಸಿರಲಿಕ್ಕೂ ಸಾಕು.

ವೀರಗಲ್ಲುಗಳ ಪ್ರತಿಷ್ಠಾಪನೆ ಮತ್ತು ಆಚರಣೆಗಳು

ಕೆಲವಾರು ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ, 'ವೀರಕುಲನಿಲಿಸಿದರು', 'ವೀರಕಲ್ಲು ಎತ್ತಿಸಿದರು', 'ವೀರಕಲ್ಲು ಮಾಡಿಸಿದರು' ಎಂಬ ಸಾಮಾನ್ಯ ಪ್ರಯೋಗಗಳಲ್ಲದೆ, 'ವೀರಕಲ್ಲನ್ನು ಪ್ರತಿಷ್ಠಾಪಿಸಿದರು' ಎಂಬ ಪದಪ್ರಯೋಗವೋ ವಿಶೇಷವಾಗಿ ದೊರೆಯುತ್ತದೆ.[೯೩]

---

೯೩ (ಅ) E. C. VIII. Sa. 97, 1292. "ಇ ವೀರಗಲ್ಲ ಪ್ರತಿಷ್ಟಿಸಿದಾತನು ಆಮಜುವಿನ ಮಗ ಕಾಮ ಚೀಲನು."

(ಆ) E. C. V. BI.166. "ಬೀರಗಲ್ಲನು ಸವಿಸ್ತರದಿಂ ಪ್ರತಿಷ್ಟೆಯಂ ಮಾಡ್ಸಿ."

(ಇ) E. C. V. Ag. 39. "ಪ್ರತಿಷ್ಟೆಯ ಮಾಡಿ ನಿಲಿಸಿದ ವೀರಗಲ್ಲು"

(ಈ) E. C. XI. Dg.116. 1397. "ಕೇತಗಲುಡ ಕಲ್ಲನೆತ್ತಿಸಿ ಪ್ರತಿಷ್ಟೆಯ ಮಾಡಿದರು."

ಈ ರೀತಿಯ ಪ್ರಯೋಗಗಳಿಂದ ವೀರಗಲ್ಲನ್ನು ನಿಲ್ಲಿಸುವಲ್ಲಿ ಅಂದಿನ ಜನರಿಗಿದ್ದ ಮನೋಭಾವ ಎಂಥದ್ದು ಎಂಬುದು ತಿಳಿಯುತ್ತದೆ. ಹಾಗೂ ವೀರಗಲ್ಲುಗಳ ಆರಾಧನೆಯನ್ನು, ಅವುಗಳನ್ನು ನೆಡುತ್ತಿದ್ದ ಸ್ಥಳಗಳನ್ನು ಗುರ್ತಿಸುವಲ್ಲಿ ಈ ಪದ ಪ್ರಯೋಗಗಳು ನೆರವಾಗುತ್ತವೆ.

ವೀರಗಲ್ಲನ್ನು ನಿಲ್ಲಿಸುವುದರ ಮೂಲಕ ವೀರನ ಆತ್ಮಕ್ಕೊಂದು ಸ್ಥಳಾವಕಾಶ ಮಾಡಿಕೊಡುತ್ತೇವೆ. ಈ ಶಿಲೆಯಲ್ಲಿ ವೀರನ ಆತ್ಮ ನೆಲಸಿರುತ್ತದೆ. ಅದರಲ್ಲಿ ಪ್ರತಿಷ್ಠಾಪಿತವಾಗಿರುವ ವೀರ ತಮಗೆ ಕಷ್ಟದಲ್ಲಿ ನೆರವಾಗುತ್ತಾನೆ ಎಂಬ ಮನೋಧರ್ಮ ಅತಿಪ್ರಾಚೀನವಾದುದು. ಈ ಬಗ್ಗೆ ಸಾಕಷ್ಟು ವಿವರವಾಗಿ ಹಿಂದಿನ ಅಧ್ಯಾಯದಲ್ಲಿ ಚರ್ಚೆ ಮಾಡಿದ್ದೇವೆ. ವೀರನಾದವನು ಬದುಕಿದ್ದಾಗ ಹೇಗೆ ತನ್ನ ನೆರವನ್ನು ಕೇಳಿಬಂದವರಿಗೆ, ಶರಣಾಗತರಾದವರಿಗೆ ಆಶ್ರಯವನ್ನೂ, ರಕ್ಷಣೆಯನ್ನೂ ನೀಡುತ್ತಿದ್ದನೋ ಅದೇ ರೀತಿಯಲ್ಲಿ ಅವನು ಸತ್ತ ಮೇಲೆಯೂ ಸಹ, ವೀರಗಲ್ಲಿನಲ್ಲಿ ನೆಲಸಿದ್ದು ತನ್ನನ್ನು ಆಶ್ರಯಿಸಿ ಬಂದವರಿಗೆ ನೆರವನ್ನು ನೀಡುತ್ತಾನೆ ಎಂಬುದಾಗಿ ಜನ ಭಾವಿಸಿದ್ದರು. ಈ ಅಂಶ ತಮಿಳಿಯ ಸಂಗಮ್ ಸಾಹಿತ್ಯದ 'ಪುರಂ' ಕಾವ್ಯಗಳಿಂದ ತಿಳಿದು ಬರುತ್ತದೆ.[೯೫]

ಈ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕ್, ಸಾಕಮ್ಮನ ಹೊಸಹಳ್ಳಿಗೆ ಪಶ್ಚಿಮದಲ್ಲಿರುವ ವೀರಗಲ್ಲನ್ನು ಅಧ್ಯಯನ ಮಾಡುವುದು ಉಚಿತವೆಂದು ತೋರುತ್ತದೆ.[೯೬] ಶಾಸನದ ಬಗ್ಗೆ ಆ ಶಾಸನವನ್ನು ಸಂಗ್ರಹಿಸಿದವರು ನೀಡಿರುವ ಮಾಹಿತಿಯ ಆಧಾರದ ಮೇಲೆ ಡಾ. ಎಂ. ಚಿದಾನಂದಮೂರ್ತಿಯವರು ಈ ರೀತಿ ವ್ಯಾಖ್ಯಾನ ಮಾಡುತ್ತಾರೆ. "ಈ ಶಾಸನದ ಮೇಲಿರುವ ಚಿತ್ರ ಗಮನಾರ್ಹವಾದುದು ಧ್ಯಾನಸ್ಥನಾಗಿರುವ ತಪಸ್ವಿಯೊಬ್ಬನನ ತಲೆಯನ್ನು ಕತ್ತಿ ಹಿಡಿದಿರುವ ಸೈನಿಕನೊಬ್ಬನು ಕತ್ತರಿಸಿದ್ದಾನೆ. ಆ ಸನ್ಯಾಸಿಯ

(ಉ) E. C. XI. CI. 42. 1403. "ತನ್ನ ಮಗ ಚಂನಪ್ಪನ ಹೆಸರಿನಲಿ ವೀರಸ್ತಂಭವ ಪ್ರತಿಷ್ಠೆ ನಿಲಿಸಿ."

(ಊ) E. C. VII. Sk.30. "ಯಿಾ ಶಿಲಾ ಪ್ರತಿಷ್ಠೆಯನು ಆ ಕೆಂಪೆಯನಾಯ್ಕನ ಹಿರ್ಯ್ಯಮಗ ಕಾಟೆಯ ನಾಯ್ಕನು ಮಾಡಿಸಿದನೂ ಯಿೂ ಪ್ರತಿಷ್ಠೆಯನು ಕೋಟಿಯೋಜ ನಾಗೋಜ ಮಾಡಿದ ಪ್ರತಿಷ್ಠೆ"

೯೫ K. S. Vaidyanathan : Herostones. Q.J.M.S. XXXVIII. No.3. ಪು. ೧೩೩– ೩೪

೯೬ M. A. R.1928. No. 33. ಪು. ೯೦೦.

ಬಲ ಪಾರ್ಶ್ವದಲ್ಲಿ ಚಾಮರ ಹಿಡಿದಿರುವ ಸ್ತ್ರೀಯೊಬ್ಬಳಿದ್ದಾಳೆ. ಈ ಚಿತ್ರವು ನಮ್ಮ ಕಲ್ಪನೆಯನ್ನು ಕೆರಳಿಸುತ್ತದೆ. ಯಾವರಾಜನು – ಅವನು ಚೋರಯ್ಯನೇ ಇರಬಹುದು –ಆ ಸನ್ಯಾಸಿಯನ್ನು ಅರ್ಥ ಮಾಡಿಕೊಳ್ಳದೆ ಕೊಂದನೋ ? ಅಥವಾ ಯಾವನೋ ನಿರಪರಾಧಿಯನ್ನು ಆ ರಾಜನು ಶಿಕ್ಷಸಲು ಹೊರಟಾಗ, ಅವನ ನಿರಪರಾಧಿತ್ವವನ್ನು ಸ್ಥಾಪಿಸಲು ಆ ಸನ್ಯಾಸಿ ಬಲಿಯಾದನೋ ಏನೋ ! ಎರಡನೆಯ ಊಹೆ ನಿಜವಿದ್ದರೂ ಇರಬಹುದು. ಅಂತೂ ಆ ಸನ್ಯಾಸಿಯ ಸಾವಿನ ನಂತರ, ಅವನದು ಬಲಿದಾನವೆಂದು ಗುರುತಿಸಿದ ರಾಜನು ತನ್ನ ತಪ್ಪನ್ನು ತಿದ್ದಿಕೊಳ್ಳಲು ಆ ಶಾಸನವಿರುವ ಕಲ್ಲನ್ನು ಪವಿತ್ರವೆಂದೂ, ಅದನ್ನು ಮೊರೆ ಹೊಕ್ಕವರನ್ನು ಯಾರೂ ಕೊಲ್ಲ ಬಾರದೆಮದೂ ಆಜ್ಞೆ ಹೊರಡಿಸಿರಬೇಕು. ಅಮೃತಸರದ ಸಿಕ್ಖ್ ಜನಾಂಗದ ಸುಪ್ರಸಿದ್ಧ ದೇವಾಲಯದಲ್ಲಿ ಆಶ್ರಯ ಪಡೆದವನನ್ನು ಬಂದಿಸಕೂಡದೆಂಬ ಈಗಿನ ಪದ್ಧತಿಯನ್ನು ಮೇಲಿನ ಶಾಸನವು ನೆನಪಿಗೆ ತರುತ್ತದೆ".[೯೭] ಈ ವೀರಗಲ್ಲಿನ ಮೇಲೆ ಇರುವ ವ್ಯಕ್ತಿಯ ಚಿತ್ರವನ್ನು ಏಕೆ ತಪಸ್ವಿಯದು ಎಂದು ಭಾವಿಸಿದರೋ ತಿಳಿಯದು. (ಚಿತ್ರ. ೨೫೭) ಕರ್ನಾಟಕದಲ್ಲಿ ದೊರೆಯುವ ಇತರ ವೀರಗಲ್ಲುಗಳಲ್ಲಿನ ಹಾಗೆ ಇಲ್ಲಿಯೂ ವೀರನ ಶಿಲ್ಪವನ್ನು ಬಿಡಿಸಲಾಗಿದೆ. ವೀರನು ಸ್ವರ್ಗವಾಸಿಯಾದ ಎಂಬ ಕಾರಣಕ್ಕಾಗಿ ಅಪ್ಸರೆಯರು ಚಾಮರವನ್ನು ಬೀಸುತ್ತಿರುವಂತೆ ಶಿಲ್ಪವಿದೆ. ವ್ಯಕ್ತಿಯು ಸತ್ತ ರೀತಿಯನ್ನೂ ಶಿಲ್ಪದಲ್ಲಿ ಬಿಡಿಸಲಾಗಿದೆ. ಸಾಯುವದಕ್ಕೆ ಸಿದ್ಧನಿರುವ ವ್ಯಕ್ತಿ ಏಕಾಗ್ರ ಚಿತ್ತನಾಗಿ ಕುಳಿತಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಿರುವುದರಿಂದ ತಪಸ್ವಿ ಎಂಬುದಾಗಿ ಡಾ. ಎಂ. ಚಿದಾನಂದ ಮೂರ್ತಿಯುವರು ಭಾವಿಸಿರಬೇಕೆಂದು ತೋರುತ್ತದೆ. ಈ ವೀರಗಲ್ಲಿನ ಶಿಲ್ಪದಲ್ಲಿ ಸಿಡಿದಲೆ ಕೊಡುತ್ತಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿರುವುದರಿಂದ ಮಡದಿರುವ ವ್ಯಕ್ತಿ ಸ್ವಿಚ್ಛೆಯಿಂದಲೇ ಈ ರೀತಿಯ ಬಲಿಗೆ ಸಿದ್ಧವೆಂಬುದು ಸ್ಪಷ್ಟ ಆದ್ದರಿಂದ ಇದು ವಾಸ್ತವವಾಗಿ ಬೇರೆ ಯಾವುದೋ ಕಾರಣಕ್ಕಾಗಿ ಅಂದರೆ ಅರಸನ ವೇಳೆವಾಟಿಯಾಗಿಯೋ, ಕೀಲ್ಗುಂಟೆ ಯಾಗಿಯೋ ಮಡಿದ ವೀರಲೆಂಕನ ಸ್ಮಾರಕವಿರಬಹುದು. ಅಥವಾ ಧಾರ್ಮಿಕ ಕಾರಣಕ್ಕಾಗಿ ತನ್ನ ದೇಶಕ್ಕೆ ಒಳ್ಳೆಯದಾಗಲೆಂಬ ಉದ್ದೇಶದಿಂದ ಆತ್ಮಬಲಿದಾನವನ್ನು ಮಾಡಿಕೊಂಡ ವೀರನ ವೀರಗಲ್ಲಿಗಿರಬಹುದು. ಒಬ್ಬ ವ್ಯಕ್ತಿ, ಧ್ಯಾನಾಸಕ್ತವಾದ ಇನ್ನೊಬ್ಬ ವ್ಯಕ್ತಿಯ ತಲೆಯನ್ನು ಕತ್ತರಿಸಲು ನಿಂತಿರುವಂತೆ ಬಿಡಿಸಿರುವ ಶಿಲ್ಪದ ಆಧಾರದ ಮೇಲೆ ಅವನು ತಪಸ್ವಿಯೆಂದು ಊಹೆ ಮಾಡುವುದು ಸರಿಯಾಗಲಾರದು. ಕರ್ನಾಟಕದ ಇತರೆಡೆಗಳಲ್ಲಿ ದೊರೆಯುವ 'ಸಿಡಿ ತಲೆ' ಕೊಟ್ಟವರ ಸ್ಮಾರಕಶಿಲೆಗಳ ಶಿಲ್ಪದಲ್ಲಿ ನಿರೂಪಿಸುವ ಚಿತ್ರಗಳೆಲ್ಲವೂ ಸಾಮಾನ್ಯವಾಗಿ ಈ ವೀರಗಲ್ಲಿನ ಶಿಲ್ಪದ ವಿವರಗಳಂತೆಯೇ ಇದೆ ಎಂಬುದನ್ನು ಗಮನಿಸಬೇಕು.

---

೯೭ ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೩೪೬–೪೭

ಇಲ್ಲಿ ಮುಖ್ಯವಾದುದು ಈ ಶಾಸನದ ಮೇಲಿರುವ "ಈ ಕಲ್ಲಾ ಮಱೆವೊಕ್ಕರ ಕೊಲಲಾಗದು" ಎಂಬ ಅದರ ಪಾಠ.[೮೮] ವೀರಗಲ್ಲು ವೀರನಾದವನ ಆತ್ಮ ಇರುವ ಬಂದು ಸ್ಥಳ ; ಅದನ್ನು ಮರೆಹೊಕ್ಕರೆ ಆ ವೀರಗಲ್ಲಿನ ವೀರನು ಮರೆಹೊಕ್ಕವರನ್ನು ಕಾಪಾಡುತ್ತಾನೆ ಎಂಬ ನಂಬಿಕೆ ಇತ್ತು. ಈ ರೀತಿ ವೀರಗಲ್ಲುಗಳ ಮೊರೆಹೊಕ್ಕವರನನು ಕೊಲ್ಲುತ್ತಿರಲಿಲ್ಲವೆಂದು ತೋರುತ್ತದೆ. ಹೇಡಿಯಾದವನು ನೀರಲ್ಲಿ ಹೊಕ್ಕೋ, ಹುತ್ತವನ್ನೇರಿಯೋ, ಹುಲ್ಲನ್ನು ಕಚ್ಚಿಯೋ ನಿಂತಾಗ ಅವನನ್ನು ಕೊಲ್ಲಬಾರದೆಂಬ ನಿಯಮವಿದ್ದಂತೆಯೇ ವೀರಗಲ್ಲಿನ ಮರೆಹೊಕ್ಕವರನ್ನು ಕೊಲ್ಲಬಾರದೆಂಬ ನಿಯಮ ವ್ಯಾಪಕವಾಗಿ ಎಂದು ಹೇಳಲಾಗದಿದ್ದರೂ, ವಿರಳವಾಗಿಯಾದರೂ ಇದ್ದಿರಬೇಕೆಂದು ತೋರುತ್ತದೆ. ಈ ರೀತಿ ಶರಣಾಗತನಿಗೆ ರಕ್ಷಣೆ ನೀಡುವುದು ಹಿಂದಿನ ವೀರನಿಗೆ ತೋರಿಸುವ ಗೌರವ ಎಂಬುದಾಗಿ ಅಂದಿನ ಜನ ಭಾವಿಸಿದ್ದರಬೇಕು. ಕ್ರಿ.ಶ ೧೦ನೇ ಶತಮಾನದ ಜಯಸಿಂಹನ ತಳಂಗೆರೆಯ ಶಾಸನವು ಈ ಬಗ್ಗೆ ನಮಗೆ ಕುತೂಹಲದ ಸಂಗತಿಯನ್ನು ತಿಳಿಸುತ್ತದೆ. ಆ ಶಾಸನದಲ್ಲಿ ಅವನು ಅರಸನೇ ಆಗಿರಲಿ, ಆಳೇ ಆಗಿರಲಿ, ಅವನು ಎಂಥ ಅಪರಾಧವನ್ನೆ ಮಾಡಿರಲಿ ಅವನು ಬಂದು ಆ ಊರಲ್ಲಿ ಶರಣಾಗತನಾದರೆ ಅವನಿಗೆ ಮೂರು ದಿನಗಳ ಕಾಲ ರಕ್ಷಣೆಯನ್ನು ನೀಡಬೇಕೆಂದು ತಿಳಿಸುತ್ತದೆ. ("ಕೊಲೆಗೆ ಸಾಲ್ತರೆನ್ತಪ್ಪ ದ್ರೋಹಂಗೆಯ್ದು ಬಂದೂರಂ ಪೊಕ್ಕೊಡವನಂ ಮೂಱು ದಿವಸಂ ಸರ್ವಪರಿಹಾರಂ ಕಾದು ಕಟೆಪುವುದು." E.I. XXIX ಪು. ೨೦೩–೯)

ಈ ದಿಶೆಯಲ್ಲಿ ಜಗಳೂರು ತಾಲ್ಲೂಕಿನ ಒಂದು ಶಾಸನ ಕುತೂಹಲಕಾರಿಯಾಗಿದೆ. "ರಾಷ್ಟ್ರಕೂಟರ ಶಾಸನವೊಂದರಲ್ಲಿ ಯುದ್ಧದಲ್ಲಿ ಮಡಿದ ಇಬ್ಬರು ಶೂರರ ಸ್ಮಾರಕವಾಗಿ ನೆಟ್ಟ ವೀರಗಲ್ಲನ್ನು ನೊಳಂಬರು ಸುಟ್ಟರು ಎಂಬ ವಿಷಯ ಬರುತ್ತದೆ. (ಊರಿನ ಜನರು ಸೇರಿ ಆ ವೀರಗಲ್ಲನ್ನು ಮತ್ತೆ ಪ್ರತಿಷ್ಠಿಸುತ್ತಾರೆ.) ಇದರಿಂದ ಒಂದು ವಿಷಯವು ಸೂಚಿತವಾಗುತ್ತದೆ. ವೀರನ ಸಾವನ್ನು ಹೇಳುವ ವೀರಗಲ್ಲು ಅವನ ಹೆಸರನ್ನು ಶಾಶ್ವತ ಮಾಡುತ್ತಿತ್ತಲ್ಲದೆ, ಅವನ ಕಡೆಯವರಿಗೆ ಧೈರ್ಯ, ಶಕ್ತಿ, ಉತ್ಸಾಹಗಳನ್ನು ತುಂಬುತ್ತಿತ್ತು. ಇದನ್ನು ತಪ್ಪಿಸುವ ಸಲುವಾಗಿ ನೊಳಂಬರು ಆ ವೀರಗಲ್ಲನ್ನು ಸುಟ್ಟಿರಬಹುದು ಎಂಬ ಶಂಕೆಯೂ ಮೂಡುತ್ತದೆ."[೮೯] ಎಂದು ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ವಿರಗಲ್ಲುಗಳು ವೀರರಿಗೆ ಪ್ರಚೋದನೆ ನೀಡುತ್ತಿದ್ದುವೇ, ಇಲ್ಲವೇ ಎಂಬುದನ್ನು

---

೮೮ M. A. R.1928. ಪು. ೪೫ ಸು. ೯೦೦ ಮತ್ತು ಟಿಪ್ಪಣಿ ನೋಡಿ.

೮೯ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೫೦

ಖಚಿತವಾಗಿ ಹೇಳುವುದು ಕಷ್ಟವಾದುದರಿಂದ ಇಂಥದೇ ಕಾರಣಕ್ಕಾಗಿ ವೀರಗಲ್ಲನ್ನು ಸುಟ್ಟರು ಎಂಬುದಾಗಿ ಹೇಳುವುದು ಅಷ್ಟು ಸಮಂಜಸವಾದ ಅಭಿಪ್ರಾಯವಾಗಲಾರದೆಮದು ತೋರುತ್ತದೆ. ಆದ್ದರಿಂದ ವೀರಗಲ್ಲನ್ನು ಸುಟ್ಟ ಪ್ರಸಂಗವನ್ನು ಈ ರೀತಿ ವಿವರಸಬಹುದೆಂದು ತೋರುತ್ತದೆ :

ವೀರಗಲ್ಲನ್ನು ನಿಲ್ಲಿಸುವುದೆಂದರೆ, ವೀರನ ಆತ್ಮವನ್ನು ಅದರಲ್ಲಿ ಆವಾಹನೆ ಮಾಡಿ ಪ್ರತಿಷ್ಠಾಪಿಸುವುದು. ವೀರನ ಆತ್ಮ ವೀರಗಲ್ಲಿನಲ್ಲಿರುತ್ತದೆ ಎಂದು ನಂಬಿ ಅದನ್ನು ಆರಾಧಿಸುತ್ತಿದ್ದ ಸಂಪ್ರದಾಯವೂ ನಮ್ಮಲ್ಲಿದೆ. ಈ ಉದ್ದೇಶದಿಂದ ವೀರಗಲ್ಲುಗಳನ್ನು ಪ್ರತಿಷ್ಠೆ ಮಾಡಿ, ಅವುಗಳನ್ನು ತಮ್ಮ ದೈವ ಎಂದು ಭಾವಿಸಿದ ಜನಗಳಿಗೆ ಅವಮಾನ ಮಾಡಬೇಕೆಂದು ಆ ಜನ ತಮ್ಮ ವೀರರ ಸ್ಮಾರಕಗಳನ್ನು ರಕ್ಷಣೆಮಾಡಿಕೊಳ್ಳಲಾಗದ ಹೇಡಿಗಳು ಎಂದು ಹೀನಾಯ ಮಾಡಬೇಕಾದರೆ ಮತ್ತು ಆ ಜನ ತಮ್ಮ ಮೇಲೆ ಬಿದ್ದು ಯುದ್ಧಮಾಡಲಿ ಎಂಬ ಅಪೇಕ್ಷೆ ಇರುವವರು, ಇದನ್ನು ಒಂದು ಸವಾಲಾಗಿ, ಯುದ್ಧಕ್ಕೆ ಆಹ್ವಾನ ನೀಡುವ ಘಟನೆಯೊಂದನ್ನಾಗಿ ಮಾಡಿರಬೇಕು. ಪ್ರಸ್ತುತ ಸಂದರ್ಭದಲ್ಲಿ ಯುದ್ಧ ಮಾಡುವ ಮುನ್ನ ಶತ್ರುರಾಜರ ಹಸುಗಳನ್ನು ಅಪಹರಿಸಿ ಅವಮಾನ ಮಾಡುವ ಒಂದು ಸಂಪ್ರದಾಯ ಪ್ರಾಚೀನ ಕರ್ನಾಟಕದಲ್ಲಿತ್ತು ಎಂಬುದನ್ನು ಸ್ಮರಿಸಬೇಕು. ಈ ಅಂಶವನ್ನು ಕೊಡಗಿನಲ್ಲಿ ಇಂದಿಗೂ ಪ್ರಚಲಿತವಿರುವ ಕಥೆಗಳ ಮೂಲಕ ಹೆಚ್ಚು ಸ್ಪಷ್ಟಪಡಿಸಬಹುದೆಂದು ತೋರುತ್ತದೆ. ವೀರನಾದವನು ತನ್ನ ಪರಾಕ್ರಮವನ್ನು ಮೆರೆಯುವ ಕಾರಣಕ್ಕಾಗಿ ತನ್ನ ಶಕ್ತಿಪ್ರದರ್ಶನ ಮಾಡುತ್ತಾ ದೇಶಪರ್ಯಟನೆ ಮಾಡುತ್ತಿದ್ದ. ಇಂತಹ ಸಂದರ್ಭಗಳಲ್ಲಿ ಅವನು ಕೆಲವೊಮ್ಮೆ ನೇರವಾಗಿಯೇ ಸವಾಲನ್ನು ಬೇರೆಯ ನಾಡಿನವರ ಮೇಲೆ, ಜನರ ಮೇಲೆ ಹಾಕುತ್ತಿದ್ದ. ಮತ್ತೆ ಕೆಲವೊಮ್ಮೆ ನೇರವಾಗಿಯೇ ಸವಾಲನ್ನು ಬೇರೆಯ ನಾಡಿನವರ ಮೇಲೆ, ಜನರ ಮೇಲೆ ಹಾಕುತ್ತಿದ್ದ. ಮತ್ತೆ ಕೆಲವೊಮ್ಮೆ ಯಾವ ಊರಿನ ಮೇಲೆ ತಾನು ಹೋರಾಡಬೇಕೆಂದಿರುವನೋ ಆ ಊರಿಗೆ ಹೋಗಿ, ಆ ಊರಿನ ದೇವಾಲಯವನ್ನು ಪ್ರವೇಶಿಸಿ ದೇವರಪೂಜೆಯನ್ನು ಮಾಡದಂತೆ ಅಡ್ಡಿಮಾಡುತ್ತಿದ್ದ. ತನಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಸೋಲನ್ನು ಒಪ್ಪಿಕೊಳ್ಳಬೇಕು, ಇಲ್ಲವೆ ತನ್ನೊಂದಿಗೆ ಹೋರಾಡಿ ಮಡಿಯಬೇಕು. ಅಲ್ಲಿಯವರೆಗೆ ಪೂಜೆಗೆ ಅವಕಾಶವನ್ನು ನೀಡುವುದಿಲ್ಲ ಎಂದು ಸವಾಲು ಹಾಕುತ್ತಿದ್ದ. ಈ ರೀತಿ ಯಾವನೋ ವೀರ ಬಂದು ತಮ್ಮ ದೇವಾಲಯದ ಪೂಜೆಗೆ ಮೇಲಿನ ಪ್ರಸಂಗವನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಣೆಮಾಡಿ ನೋಡಿದಾಗ ; ಒಂದು ಪಕ್ಷದವರು ಇನ್ನೊಂದು ಪಕ್ಷದವರನ್ನು ತಮ್ಮ ಮೇಲೆ ಯುದ್ಧಕ್ಕೆ ಬರುವಂತೆ ಮಾಡಲು, ಅವರು ಗೌರವದಿಂದ ಕಾಣುತ್ತಿದ್ದ ವೀರಗಲ್ಲುಗಳನ್ನು ಸುಟ್ಟರು ಎನ್ನಿಸುತ್ತದೆ. ಇದನ್ನು ಸವಾಲನ್ನಾಗಿ ಸ್ವೀಕರಿಸಿದ

ಮತ್ತೊಂದು ಪಕ್ಷದವರು, ತಮ್ಮ ಗೌರವವನ್ನು ಉಳಿಸಿಕೊಳ್ಳಲು, ವೀರಗಲ್ಲನ್ನು ಸುಟ್ಟವರೊಂದಿಗೆ ಪರಾಕ್ರಮದಿಮದ ಹೋರಾಡಿ ಗೆದ್ದು ಮತ್ತೆ ವೀರಗಲ್ಲನ್ನು ಪ್ರತಿಷ್ಠಾಪಿಸಿದರು. ಆದ್ದರಿಂದ ಇಲ್ಲಿ ಒಂದು ಪಕ್ಷದವರು ವೀರಗಲ್ಲನ್ನು ಸುಟ್ಟಿರುವುದು, ಮತ್ತೊಂದು ಪಕ್ಷದವರು ಅದನ್ನು ಪ್ರತಿಷ್ಠಾಪಿಸಿರುವುದೂ ಕೇವಲ ಸವಾಲು, 'ಆಹ್ವಾನ' ಎನ್ನುವ ಅರ್ಥದಲ್ಲಿ ಮಾತ್ರ ಎಂದು ನಮ್ಮ ಅಭಿಪ್ರಾಯ. ವೀರಗಲ್ಲುಗಳ ಬಗ್ಗೆ ಇದ್ದ ಧಾರ್ಮಿಕವಾದ ನಂಬಿಕೆಯೂ ಈ ಪ್ರಸಂಗದಿಂದ ಮತ್ತಷ್ಟು ಸ್ಪಷ್ಟವಾಗುತ್ತದೆ.

ಶಿವಮೊಗ್ಗ ಜಿಲ್ಲೆ, ಚೆನ್ನಗಿರಿ ತಾಲ್ಲೂಕು ಹಿರೇಕೋಗಿಲೂರು ಎಂಬ ಗ್ರಾಮದ ದೇವಾಲಯವೊಂದರ ಬಳಿಯಿರುವ ವೀರಗಲ್ಲು ಕೆಲವು ದೃಷ್ಟಿಗಳಿಂದ ಗಮನಾರ್ಹವಾಗಿದೆ. ವೀರಗಲ್ಲನ್ನು ನೆಲದಲ್ಲಿ ಹೂತಿರದೆ ಅಥವಾ ನಿಲ್ಲಿಸದೆ, ಒಂದು ಪಾಣಿ ಪೀಠದಮೇಲೆ ನಿಲ್ಲಿಸಲಾಗಿದೆ. ಪ್ರಸ್ತುತ ಪಾಣಿ ಪೀಠ ಸ್ವಲ್ಪ ಮುಂದಕ್ಕೆ ಸರಿದಿರುವುದರಿಂದ ವೀರಗಲ್ಲು ಗೋಡೆಗೆ ಆತುಕೊಂಡಿದೆ. ಯಾವುದೋ ಪಾಣಿ ಪೀಠದ ಮೇಲೆ ವೀರಗಲ್ಲನ್ನು ನಿಲ್ಲಿಸಿರದೆ ವೀರಗಲ್ಲನ್ನು ನಿಲ್ಲಿಸುವುದಕ್ಕಾಗಿಯೇ ಪಾಣಿ ಪೀಠವನ್ನು ಮಾಡಿದಂತಿದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 'ವೀರಗಲ್ಲು ಪ್ರತಿಷ್ಠಾಪಿಸು' ಎಂಬ ಪದ ಸಮುಚ್ಚಯವನ್ನು ಹೀಗೆ ವಿವರಸಬಹುದೆಂದು ತೋರುತ್ತದೆ : ವೀರಗಲ್ಲನ್ನು ನಿಲ್ಲಿಸುವುದೆಂದರೆ, ಸ್ಮಾರಕ ಶಿಲೆಯಲ್ಲಿ ವೀರನ ಆತ್ಮ ನೆಲಸುವಂತೆ ಮಾಡುವುದು. ವೈದಿಕ ಧರ್ಮದ ಪ್ರಭಾವದಿಂದಾಗಿ ವೀರಗಲ್ಲನ್ನು ನಿಲ್ಲಿಸುವುದು ಒಂದು ಕ್ರಮಬದ್ಧವಾದ 'ಪ್ರತಿಷ್ಠಾಪನೆ' ಎಂಬ ಭಾವನೆ ಜನರಲ್ಲಿ ಬಂದಿರಬೇಕು. ಹೀಗೆ ಪ್ರತಿಷ್ಠಾಪಿತವಾದ ವೀರಗಲ್ಲುಗಳ ಮುಂದೆ ಪ್ರಾರ್ಥಿಸಿದಾಗ, ವೀರರ ಆತ್ಮಗಳು ಬರುತ್ತವೆ ಎಂಬ ಕಾರಣಕ್ಕಾಗಿ ಅವುಗಳನ್ನು ಆರಾಧಿಸಲು ತೊಡಗಿದರು. ಅವುಗಳ ಬಗ್ಗೆ ಒಂದು ರೀತಿಯ ಗೌರವಭಾವ ಮೂಡಿದಾಗ, ಅದನ್ನು ಅಗೌರವದಿಂದ ಕಂಡವರ ವರ್ತನೆಯನ್ನು ಜನ ಸಹಿಸದಾದರು. ವೀರನ ಆತ್ಮ ವೀರಗಲ್ಲಿನ ಮೇಲೆ ಆವಾಹನೆಯಾಗುತ್ತದೆ – ಎಂದು ಭಾವಿಸಿದ ಜನ, ಅದಕ್ಕೆ ಹಲವಾರು ರೀತಿಗಳಲ್ಲಿ ಪೂಜೆ ಸಲ್ಲಿಸತೊಡಗಿದರು. ಹಾಗೆ ಮಾಡುವುದರಿಂದ ತಮಗೆ ಶ್ರೇಯಸ್ಸು ಲಭಿಸುವುದೆಂದೂ ನಂಬಿದರು.

ವೀರನು ದೇವಲೋಕವನ್ನು ಸೇರಿದ ಪುರುಷನಾದುದರಿಂದ ಅವನ ವೀರಗಲ್ಲಿಗೆ ಕಳಶ, ಕನ್ನಡಿ, ಹೂವು, ತಾಂಬೂಲ, ಕೊಡೆಯ ಮರ್ಯಾದೆಗಳನ್ನು ಆ ಊರಿನ ಜನ ಸಲ್ಲಿಸುತ್ತಿದ್ದರು.[೧೦೦] ಮಾತ್ರವಲ್ಲ "ಯಿಂತೀ ಮರ‍್ಯಾದೆಯಂ ಆಚಂದ್ರಾರ್ಕತಾರಂಬರಂ

---

೧೦೦ ಅದೇ, ಪು. ೨೫೦,

ಸಲ್ಲಿಸುವರು" ಎಂಬುದಾಗಿ ತಮ್ಮ ಮುಂದಿನ ತಲೆಮಾರಿನವರೂ ವೀರಗಲ್ಲಿಗೆ ಈ ಮರ್ಯಾದೆ ನಡೆಸಿಕೊಡಬೇಕೆಂದು ಅವುಗಳನ್ನು ಪ್ರತಿಷ್ಠಾಪಿಸಿದವರು ಅಪೇಕ್ಷೆಪಟ್ಟಿದ್ದಾರೆ.[೧೧೧]

ಕರ್ನಾಟಕಲದಲ್ಲಿ ಸಹಗಮನ ಮಾತ್ರವಲ್ಲದೆ ಅನುಗಮನ ಪದ್ಧತಿಯೂ ಇತ್ತು. ವೀರನಿಗೆ ವೀರಗಲ್ಲನನು ನಿಲ್ಲಿಸುವ ಸಂದರ್ಭದಲ್ಲಿ ಅನುಗಮನ ಮಾಡುತ್ತಿದ್ದಂತೆ ವೀರಗಲ್ಲಿನ ಪಾಠವೊಂದರಿಂದ ತಿಳಿದುಬರುತ್ತದೆ.[೧೧೨] ಯುದ್ಧವೊಂದರಲ್ಲಿ ಸತ್ತ ತನ್ನ ಗಂಡನಿಗೆ "ವೀರಗಲ್ಲನಿಱಿಸುವಲ್ಲಿ" ಬಯವ್ವೆ ಎಂಬುವಳು "ಕೂಡೆ ಸತ್ತು ಸ್ವರ್ಗವಂ ಸೂಱೆಗೊಂಡಳು" ಎಂಬುದಾಗಿ ಆ ವೀರಗಲ್ಲಿನ ಪಾಠ ತಿಳಿಸುತ್ತದೆ.

ಬೀರಕೂಳ್ / ಬೀರಗೂಳ್

ವೀರಗಲ್ಲನ್ನು ಪ್ರತಿಷ್ಠಾಪಿಸುವ ಸಮಯದಲ್ಲಿ ಆಚರಿಸುತ್ತಿದ್ದ ಅನೇಕ ಆಚರಣೆಗಳಲ್ಲಿ 'ಬೀರಗೂಳ್' ಎಂಬುದೂ ಒಂದು. ಈ ಆಚರಣೆಯ ಪ್ರಸ್ತಾಪ ಹನ್ನೆರಡನೆಯ ಶತಮಾನದ ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ. ಈ 'ಬೀರಗೂಳ್' ಎಂಬ ಪದವನ್ನು ಅನುವಾದದಲ್ಲಿ 'ವೀರಗಲ್ಲು' ಎಂಬುದಕ್ಕೆ ಪರ್ಯಾಯ ಪದವೆಂದು ಭಾವಿಸಿ 'ಬೀರಗೂಳೆತ್ತಿ' ಎಂಬುದನ್ನು "ಬೀರಗೂಳ್ ಎಂಬುದನ್ನು ನಿಲ್ಲಿಸಿ" ಎಂಬುದಾಗಿ ಶ್ರೀ ರೈಸ್ ಅವರು ಅರ್ಥೈಸಿದ್ದಾರೆ.[೧೧೩] ಡಾ. ಚಿದಾನಂದಮೂರ್ತಿಯವರು ಈ ಪದವನ್ನು ವಿವರಿಸದಿದ್ದರೂ, ಇದೂ ಸಹ 'ಬಾಳ್ಗಚ್ಚು', 'ನೆತ್ತರು ಕೊಡುಗೆ'ಗಳ ಹಾಗೆ ವೀರರಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಪಾರಿಭಾಷಿಕಪದ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.[೧೧೪]

ಬೀರಗೂಳಿನ ಪ್ರಸ್ತಾಪ ವೀರಗಲ್ಲುಗಳು ಪಾಠದಲ್ಲಿ ಈ ರೀತಿ ಬಂದಿದೆ : ವೇಮಣ್ಣ ಎಂಬುವನು ಯುದ್ಧವೊಂದರಲ್ಲಿ ಸತ್ತಾಗ, ಆಗನ ಭಾವನಾದ ಕೀರ್ತಿಯಣ್ಣನ ಹೆಂಡತಿ ಮತ್ತು ಮಗಳು "ಒಡೆದ ಕೆಱೆಯಂ ಕಟ್ಟಿಸಿ ಪರೋಕ್ಷ ವಿನಯಂಗಳಂ ಮಾಡಿ ಬೀರಗೂಳೆತ್ತಿ

---

೧೧೧ E. C. XI. Dg. 115, 1148

೧೧೨ E. C. VII. Sk. 38, 1191

೧೧೩ E. C. VIII. Sb. 468, 1112 (ಇಂಗ್ಲಿಷ್ ಅನುವಾದ)

೧೧೪ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೨ – ೯೩

ಕಲ್ಲ" ನಿಲ್ಲಿಸುತ್ತಾರೆ ಎಂಬುದಾಗಿ ಕ್ರಿ.ಶ ೧೧೧೨ ರ ವೀರಗಲ್ಲಿನಿಂದ ತಿಳಿದು ಬರುತ್ತದೆ.[೧೦೫] ಕ್ರಿ.ಶ. ೧೧೧೬ ರ ಮತ್ತೊಂದು ವೀರಗಲ್ಲಿನಿಂದ ತಂದೆಯೊಬ್ಬನು "ತನ್ನ ಮಗಂ ಮೊನೆಯಾಳು ಬಮ್ಮಿಗಂ ಸುರಲೋಕ ಪ್ರಾಪ್ತನಾದೊಡೆ ಕೂಳಂ ಮಾಡಿ ಕಲ್ಲ" ನಿಲ್ಲಿಸಿದ ವಿಷಯ ತಿಳಿಯುತ್ತದೆ.೧೦೬ ಕನ್ನಡಿಯ ಕಾವೆಯನಾಯಕ ಎಂಬುವನು ಹೋರಾಟವೊಂದರಲ್ಲಿ ಸತ್ತಾಗ, ಆತನ ತಮ್ಮನಾದ, "ಕನ್ನಡಿ ಕೇತಯನಾಯಕ ವೀರಭಟುರ್ಗ್ಗೆ ಬೀರಗೂಳೆತ್ತಿ ಕಲ್ಲನಿರಿಸಿ ಕೃತಾರ್ಥನಾದ" ವಿಷಯವನ್ನು ಕ್ರಿ.ಶ. ೧೧೫೨ ರ ವೀರಗಲ್ಲೊಂದು ಹೇಳುತ್ತದೆ.[೧೦೭] ಕ್ರಿ.ಶ. ೧೧೭೩ ರ ಮತ್ತೊಂದು ವೀರಗಲ್ಲು ಕಾಳಬ್ಬೆ ನಾಯಕಿತ್ತಿ ಎಂಬುವಳು ತನ್ನ ಗಂಡನು ಸತ್ತಾಗ, "ಕಲ್ಲನಿಱಿಶಿ ಕೂಳಂ ಕಳಾದು" ಕೃತಾರ್ಥಳಾದಳೆಂದು ಹೇಳುತ್ತದೆ.[೧೦೮]

ಈ 'ಬೀರಗೂಳ್' ಎಂಬ ಪದದ ಅರ್ಥವ್ಯಾಪ್ತಿಯನ್ನು ತಿಳಿಯಬೇಕಾದರೆ ಮೊದಲಿಗೆ ವೀರರ ಆರಾಧನೆಯಲ್ಲಿ ಪ್ರಚಲಿತವಿದ್ದ ಹಾಗೂ ಇಂದಿಗೂ ಇರುವ ಹಲವಾರು ಸಂಪ್ರದಾಯಗಳನ್ನು ಗಮನಿಸುವುದು ಸೂಕ್ತವೆನ್ನಿಸುತ್ತದೆ.

ಶ್ರೀ ಮೈ. ಹ. ರಾಮಶರ್ಮರು ಕುಮ್ಮಟದುರ್ಗದಲ್ಲಿ ನಡೆಯುವ ಕುಮಾರಾಮನ ಜಾತ್ರೆಯ ಬಗ್ಗೆ ಕೆಲವಾರು ವಿವರಣೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಒಂದು ಈ ರೀತಿ ಇದೆ : "ವರ್ಷಕ್ಕೊಂದಾವರ್ತಿ ವೈಶಾಖ ಶುದ್ಧ ಪೂರ್ಣಿಮೆಯ ದಿವಸ ಮಾತ್ರ ಸುತ್ತಮುತ್ತಲಿನ ಗ್ರಾಮಸ್ಥರು ಸುಮಾರು ಸಾವಿರ ಜನ ಇಲ್ಲಿ ಜಾತ್ರೆ ನಡೆಸುತ್ತಾರೆ. ಆಗ ಎರಡು ಕೃತಕರುಂಡಗಳನ್ನು ಪೂಜಿಸುತ್ತಾರೆ. ಅವುಗಳಲ್ಲಿ ಒಂದು ಸುಮಾರು ಆರು ಮೈಲಿ ದೂರದಲ್ಲಿನ 'ಇಂದಿರಿಗಿ' ಎಂಬ ಹಳ್ಳಿಯಿಂದಲೂ, ಇನ್ನೊಂದು ಆನೆಗೊಂದಿಯ ಬಳಿ ಇರುವ ಮಲ್ಲಾಪುರದಿಂದಲೂ ಬರುವುದೆಂದು ಹೇಳುವರು. ಜಾತ್ರೆಗಾಗಿ ಬಂದವರು ಕುರಿಗಳನ್ನು ಕಡಿದು ಜೋಳದೊಂದಿಗೆ ಬೇಯಿಸಿ ಊಟ ಮಾಡುತ್ತಾರಂತೆ. ಇದಕ್ಕೆ 'ವೀರಕೂಳ್' ಎಂದು ಹೆಸರು. ನಿಸ್ಸಂದೇಹವಾಗಿ ಇದು ವೀರರಾಮನಾಥನ ಆತ್ಮಯಜ್ಞದ ಸ್ಮರಣೆಗೆಂದೇ ಹೇಳಬೇಕು. ಹೀಗೆಯೇ ಹೊಸಪೇಟೆಗೆ ಪಶ್ಚಿಮ ಹೈದರಾಬಾದ್ ಸಂಸ್ಥಾನದಲ್ಲಿರುವ ಹುಲಿಗಿ ಅಥವಾ ಮುನಿರಾಬಾದ್ ಎಂಬ ಊರಿನಲ್ಲಿ ವೈಶಾಖ

೧೦೫ E. C. VIII. Sb. 468, 1112

೧೦೬ E. C. VI. Cm. 100, 1116

೧೦೭ E. C. VIII. Sb. 525, 1152

೧೦೮ E. C. VII. Sa. 71, 1173. ಇಲ್ಲಿ ಮಾತ್ರ ರೈಸ್ ಅವರು 'ಅನ್ನವನ್ನು ಹಂಚಿ' ಎಂದು ಅರ್ಥೈಸಿದ್ದಾರೆ.

ನವಮಿಯ ದಿವಸ ಒಂದು ಜಾತ್ರೆಯಾಗುತ್ತದೆ. ಆಗಲೂ ಇದೇ ರೀತಿ ನಡೆಯುವುದೆಮದು ಹೇಳುತ್ತಾರೆ. ಅಲ್ಲಿ ಊಟ ಮಾಡುವ ಪದಾರ್ಥಕ್ಕೆ ಕುಮಾರ ಊಟವೆಂದು ಹೆಸರಂತೆ. ಅವರು ಹೇಳುವ 'ಕುಮಾರ' ಎಂಬ ಪದವು ಕುಮಾರರಾಮನ ಹೆಸರನ್ನೇ ಸೂಚಿಸುವುದೆಂದು ತಿಳಿಯಬೇಕು."[೧೦೯]

ತಮಿಳಿನ ಸಂಗಮ್ ಸಾಹಿತ್ಯ ಕೃತಿಗಳಿಂದ ತಿಳಿದು ಬರುವ ಮಾಹಿತಿಯ ಮೇರೆಗೆ ವೀರಗಲ್ಲನ್ನು ಸ್ಥಾಪನೆ ಮಾಡಿದ ಮೇಲೆ, ಸಾಮಾನ್ಯವಾಗಿ ಬೆಳಗಿನ ಹೊತ್ತು ವೀರನ ಆತ್ಮತೃಪ್ತಿಗಾಗಿಯೋ, ಯುದ್ಧಕ್ಕೆ ಹೊರಡುವ ಮುನ್ನ ಜಯಾಪೇಕ್ಷೆಯಿಂದಲೋ ವೀರಗಲ್ಲುಗಳ ಮುಂದೆ ಅನ್ನವನ್ನು ಹಾಕುತ್ತಿದ್ದರು, ಈ ಅನ್ನವನ್ನು ಅವರು 'ನಾಟ್ಟುಬಲಿ' ಎಂಬುದಾಗಿ ಕರೆಯುತ್ತಿದ್ದರು.[೧೧೦]

ಚಾಮರಾಜನಗರ ತಾಲ್ಲೂಕಿನ ಒಂದು ಶಾಸನ ಈ ಬಗ್ಗೆ ಕುತೂಹಲವಾದ ವಿಷಯವನ್ನು ತಿಳಿಸುತ್ತದೆ. ಇದು ರಾಜಾಧಿರಾಜ ಚತುರ್ವೇದಿ ಮಂಗಲವೆಂಬ ಹೆಸರಿದ್ದ ವೇಲೂರನ್ನು "ಎಱಿವೀರಪಟ್ಟ"ವನ್ನಾಗಿ "ಅಯ್ಯಾ ಪೊಳಲ್‌ನ ವೈಶ್ಯ ಆಯಿರತ್ತೈನೂರ್ವರವಣಿಕ್ ಸಂಘ"ವು ಮಾರ್ಪಡಿಸಿದ ಸಂಗತಿಯನ್ನು ತಿಳಿಸುತ್ತದೆ. ಊರಿಂದೂರಿಗೆ ಸಂಚರಿಸುವ ವಣಿಕಸಮೂಹಗಳಿಗೆ ಇಲ್ಲಿ ಒದಗಿಸಬೇಕಾದ ಸಾಮಾನು ಸರಂಜಾವುಗಳ ವಿವರಣೆಯನ್ನು ನೀಡುತ್ತಾ ಆ ಶಾಸನ, 'ವಣಿಶೈಮಕ್ಕಳಿಗೆ ಎಂದರೆ ವ್ಯಾಪಾರಿಗಳ ಅಂಗರಕ್ಷಕರಿಗೆ ಇಲ್ಲಿ ತಂಗಿದ್ದಾಗ ಊಟ ಹಾಕುವುದು, ಸತ್ತ ವೀರನ ನೆನಪಿಗಾಗಿ ಹಾಕುವ ಊಟಕ್ಕಾಗಿ ಹಂದಿಯೊಂದನ್ನು ಕೊಡುವುದು' ಮುಂತಾದ ವಿವರಗಳನ್ನು ನೀಡುತ್ತದೆ.[೧೧೧] ಇಲ್ಲಿ ವೀರನ ನೆನಪಿಗಾಗಿ ಹಾಕುವ ಊಟ ಎಂಬುದು ಮುಖ್ಯವಾದ ಅಂಶ.

ಪ್ರಸ್ತುತ ಸಂದರ್ಭದಲ್ಲಿ ಆಂಧ್ರದ ರೆಡ್ಡಿರಾಜವಂಶದವರ ಕಾಲದಲ್ಲಿ (ಕ್ರಿ.ಶ. ೧೩೨೫ ರಿಂದ ೧೪೪೮) ಪ್ರಚಲಿತವಿದ್ದ ಆಚರಣೆಯೊಂದನ್ನು ಗಮನಿಸುವುದು ಸೂಕ್ತ. ಶತ್ರುರಾಜರ ರಕ್ತ, ಮಾಂಸ, ಮೂಳೆಗಳೊಂದಿಗೆ ಬೇಯಿಸಿದ ಅನ್ನವನ್ನು ಭೂತಗಳನ್ನು ತೃಪ್ತಿಪಡಿಸುವುದರ ಸಲುವಾಗಿ ಹಾಕುತ್ತಿದ್ದರು. ಈ ಸಂಪ್ರದಾಯವನ್ನೇ ಯುದ್ಧದಲ್ಲಿ ವಿಜೇತರಾದ ಅರಸುಗಳು ಯುದ್ಧಾನಂತರದಲ್ಲಿ ಆಚರಿಸುತ್ತಿದ್ದರು. ಇದನ್ನು 'ರಣಮು ಕುಡುಪು' (ಯುದ್ಧದ ಊಟ)

---

೧೦೯ ಮೈ. ಹ. ರಮಶರ್ಮ : ರಣಧೀರರಾಮನಾಥ ಪು. ೭೯– ೮೦

೧೧೦ N. Subramani : Sangam Polity. ಪು. ೧೩೧

೧೧೧ E. C. VI. (1975) ಮುನ್ನುಡಿ

ಎಂಬುದಾಗಿ ಅವರು ಕರೆಯುತ್ತಿದ್ದರು.[೧೧೨] 'ವೆಲಗೋಟಿವಾರಿ ವಂಶಾವಳಿ' ಎಂಬ ತೆಲುಗು ಕೃತಿ ಈ ಬಗ್ಗೆ ವಿಶೇಷವಾದ ಮಾಹಿತಿಯನ್ನು ಒದಗಿಸುತ್ತದೆ. ಶತ್ರು ರಾಜರನ್ನು ಗೆದ್ದ ಪ್ರತಿಯೊಬ್ಬ ರೇಚೇಳ್ಲಿ ವಂಶದ ದೊರೆಯು ಯುದ್ಧಾನಂತರ ಈ ಸಂಪ್ರದಾಯವನ್ನು ಆಚರಿಸುತ್ತಿದ್ದುದಾಗಿ ಈ ಕೃತಿಯಿಂದ ತಿಳಿದುಬರುತ್ತದೆ. ಅರಸರನ್ನು ಯುದ್ಧದಲ್ಲಿ ಕೊಂದು ಅವರ ತಲೆಗಳನ್ನು ಕತ್ತರಿಸಿ ಸೆರೆ ಸಿಕ್ಕಿದವರನ್ನು ಗಾಣಕ್ಕೆ ಹಾಕಿ ರಕ್ತ ತೆಗೆದು ಅದರಿಂದ ಅನ್ನವನ್ನು ಬಲಿಗಾಗಿ ಸಿದ್ಧಮಾಡುತ್ತಿದ್ದರು.[೧೧೩] ಅವರ ಪ್ರಕಾರ ಇದು ಒಂದು ಆಗಮಿಕ ವಿಧಿ. ಇದನ್ನು ಅರ್ಧರಾತ್ರಿಯ ವೇಳೆಯಲ್ಲಿ, ಯುದ್ಧಭೂಮಿಯಲ್ಲಿ ಆಚರಿಸತಕ್ಕದ್ದು. ಈ ಬಲಿಯನ್ನು ತೆಗೆದುಕೊಂಡು ಹೋಗುವವನು ನಗ್ನನಾಗಿ, ವಿಭೂತಿಯನ್ನು ಮೈಗೆಲ್ಲಾ ಬಳಿದುಕೊಂಡು ಏಕಾಂಗಿಯಾಗಿ ಶತ್ರು ರಾಜರ ರಕ್ತಮಾಂಸಗಳಿಂದ ಮಾಡಿದ ಅನ್ನವನ್ನು ಅವರ ಕಪಾಲಗಳಲ್ಲಿ ತುಂಬಿಕೊಂಡು ಹೋಗಬೇಕು. ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಮಂತ್ರಗಳನ್ನು ಪಠಿಸುತ್ತಾ ಶಾಕಿನೀ, ಡಾಕಿನೀ, ಕಾಳಿ, ಮಹಾಕಾಳಿ, ದಿಗಂಬರೀ, ಬಾಯಾಳಾ, ಕಾಯಾನಿ, ಭೈರವ, ವೀರಭದ್ರ, ರಣಪೋತು ರಾಜು ಮುಂತಾದ ಕಲಹಾದಿಷ್ಟದೇವತೆಗಳನ್ನು ಆವಾಹನೆ ಮಾಡಿದ ನಂತರ ಅವರಿಗೆ ಅರ್ಪಿಸಬೇಕು.[೧೧೪]

ಕೆಲವೊಮ್ಮೆ ಯುದ್ಧದಲ್ಲಿ ಗೆದ್ದು ಅರಸರು ಶತ್ರು ರಾಜರುಗಳ ರಕ್ತದಿಂದ ತಮ್ಮ ತಂದೆ– ತಾಯಿಯವರಿಗೆ ತಿಲೋದಕ ಪಿತೃತರ್ಪಣವನ್ನೂ ಮಾಡುತ್ತಿದ್ದರು.[೧೧೫]

ವಿಜಯನಗರದ ಅರಸರ ಕಾಲದಲ್ಲಿ ಕ್ಷುದ್ರದೇವತೆಗಳಿಗೆ ನೀಡುತ್ತಿದ್ದ ಬಲಿಯನ್ನು 'ರಣಮು ಕುಡುಪು' ಎಂದು ಆಂಧ್ರ ದೇಶದಲ್ಲಿ ಕರೆಯುತ್ತಿದ್ದರು.[೧೧೬] ಆಂಧ್ರದ ಸರಹದ್ದಿನಲ್ಲಿರುವ ಕೋಲಾರ ಜಿಲ್ಲೆಯ ಕೆಲವಾರು ಹಳ್ಳಿಗಳಲ್ಲಿ ಕ್ಷುದ್ರದೇವತೆ ಮತ್ತು ಗ್ರಾಮದೇವತೆಗೆ ನೀಡುವ ಬಲಿಯನ್ನು 'ರಣಬಲಿ' ಎಂಬುದಾಗಿ ಇಂದಿಗೂ ಕರೆಯುತ್ತಾರೆ.

---

೧೧೨ M. Somasekara Sarma : The History of Reddy Kingdom. ಪು. ೧೯೧

೧೧೩ ಸುರವರಮು ಪ್ರತಾಪರೆಡ್ಡಿ : ಆಂಧ್ರುಲ ಸಾಂಘಿಕ ಚರಿತ್ರ ಪು. ೩೭೮

೧೧೪ M. Somasekara Sarma : The History of Reddy Kingdom. ಪು. ೨೫೦

೧೧೫ ಸುರವರಮು ಪ್ರತಾಪರೆಡ್ಡಿ : ಆಂಧ್ರುಲ ಸಾಂಘಿಕ ಚರಿತ್ರ ಪು. ೩೭೮

೧೧೬ ಅದೇ. ಪು. ೩೭೬

ಮೇಲೆ ವಿವರಿಸಿದ ವಿಚಾರಗಳ ಹಿನ್ನೆಲೆಯಲ್ಲಿ ಪ್ರಸ್ತುತ ಶಾಸನಗಳಲ್ಲಿ ಉಕ್ತವಾಗಿರುವ 'ಬೀರಗೂಳ್', 'ಕೂಳ್' ಎಂಬುದನ್ನು ವಿವರಿಸಬೇಕಾಗುತ್ತದೆ. ವ್ಯಕ್ತಿಯ ಸ್ಮಾರಕವಾಗಿ ವೀರಗಲ್ಲನ್ನು ಹಾಕುವ ಮುನ್ನ ಅಥವಾ ಹಾಕಿದ ನಂತರ, ಹೋರಾಟದಲ್ಲಿ ಅವನೊಡನೆ ಸತ್ತ ಇತರ ವೀರರಿಗೂ 'ಶಾಂತಿ'ಯ ಆಚರಣೆಗಾಗಿ ಈ ಅನ್ನವನ್ನು ಹಾಕಿರಬಹುದು. ಆನಂತರ ತಮ್ಮ ಸಂಬಂಧಿಗೆ ವೀರಗಲ್ಲನ್ನು ನಿಲ್ಲಿಸಿರಬಹುದು. ನಾವು ಮೇಲೆ ಹೇಳಿದ ಶಾಸನಗಳಿಗಿಂತ ಮುಂಚೆ ಈ ಬೀರಗೂಳಿನ ಪ್ರಸ್ತಾಪ ಯಾವ ವೀರಗಲ್ಲಿನಲ್ಲಿಯೂ ಬಂದಿಲ್ಲವೆಂದೇ ಹೇಳಬಹುದು. ಅಂದ ಮಾತ್ರಕ್ಕೆ ಈ ಸಂಪ್ರದಾಯ ಪ್ರಚಲಿತವಾಗಿರಲಿಲ್ಲವೆಂಬ ಅರ್ಥವಲ್ಲ ; ಪ್ರಸ್ತಾಪ ಇಲ್ಲ ಎಂದಷ್ಟೇ ಗ್ರಹಿಸಬೇಕು.

ಈ 'ಬೀರಗೂಳ್' ಅನ್ನು ವೀರಭಟರಿಗೆ ಸಾಮೂಹಿಕವಾಗಿಯೂ ಕೆಲವೊಮ್ಮೆ ಸತ್ತ ವೀರನೊಬ್ಬನಿಗೆ ಮಾತ್ರ ಹಾಕುತ್ತಿದ್ದಿರಬಹುದೆಂಬ ಸಂಶಯ ಬರುತ್ತದೆ. ಏಕೆಂದರೆ ಒಂದು ಶಾಸನದಲ್ಲಿ ಮಾತ್ರ 'ವೀರ ಭಟರ್ಗ್ಗೆ ಬೀರಗೂಳೆತ್ತಿ' ಎಂದಿದೆ. ಉಳಿದ ಮೂರು ಶಾಸನಗಳಲ್ಲಿ ಈ ತೆರನ ಯಾವ ವಿವರಣಾತ್ಮಕ ಪದ ಪ್ರಯೋಗವೂ ಇಲ್ಲ. ಅಂತೂ ಇಷ್ಟನ್ನು ಖಚಿತವಾಗಿ ಹೇಳಬಹುದು. 'ಬೀರಗೂಳ್' ಎಂದರೆ ವೀರಗಲ್ಲನ್ನು ನಿಲ್ಲಿಸುವ ಮುಂಚೆ, ವೀರರಿಗೆ ಅಥವಾ ವೀರನಿಗೆ ಹಾಕುತ್ತಿದ್ದ ಅನ್ನ. ಈ ಬಗ್ಗೆ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿಯ ಷಷ್ಠಮ ಪರಿಚ್ಛೇಧದಲ್ಲಿ ದೊರೆಯುವ ವಿವರಣೆ ತುಂಬಾ ಸಹಾಯಕಾರಿಯಾಗಿದೆ. ಊರ್ಧ್ವಲೋಕಗಳನ್ನು ವರ್ಣಿಸುತ್ತಾ "ವಜ್ರಾಂಗ ಎಂಬ ಮೂರನೆಯ ಪಟ್ಟಣದಲ್ಲಿ ಕೋಟ್ಯಾನುಕೋಟಿ ವೀರರಿದ್ದಾರೆ. ಇವರು ಸುಡುಗಾಡಿನಲ್ಲಿ ವೀರಗಲ್ಲು ರೂಪಿನಲ್ಲಿ ಬಲಿಯನ್ನು ಪಡೆಯುತ್ತಿದ್ದಾರೆ." ಎಂಬುದಾಗಿ ವಿವರಣೆಯಿದೆ. ಇದು ಅಂದಿನ ಜನರಿಗಿದ್ದ ನಂಬಿಕೆಯನ್ನು ಪ್ರತಿನಿಧಿಸುತ್ತದೆ. ಈ ನಂಬಿಕೆಯ ಆಧಾರದಿಂದಲೇ ಮಡಿದ ವೀರರಿಗೆ ಅನ್ನವನ್ನು ಹಾಕುತ್ತಿದ್ದರೆಂದು ತೋರುತ್ತದೆ.[೧೧೭]

ಈ ಸಂಪ್ರದಾಯ ಮಾನವನಿಗೆ ಮರಣೋತ್ತರ ಜೀವನದ ಬಗ್ಗೆ ಇರುವ ಕಲ್ಪನೆಯಿಂದ ಪ್ರೇರಣೆಯನ್ನು ಪಡೆದಿರಬಹುದು. ಗೆದ್ದ ಅರಸನು ತನ್ನ ಪಕ್ಷದ ಸತ್ತ ವೀರರಿಗಾಗಿ ಅನ್ನಹಾಕುವ ಸಂಪ್ರದಾಯವಾಗಿ ಇದರ ಬೆಳವಣಿಗೆ ಆರಂಭವಾಯಿತು ಕಾಲಾನುಕ್ರಮದಲ್ಲಿ ತಮ್ಮ ಪರವಾಗಿ ಹೋರಾಡಿ ಸತ್ತ ವೀರರ ಆತ್ಮಗಳಿಗೆ, ಶತ್ರುರಾಜರ ಮತ್ತು ಶತ್ರುಪಕ್ಷದ ವೀರರ ರಕ್ತಮಾಂಸಗಳಿಂದ ಕೂಡಿದ ಅನ್ನ ತುಂಬಾ ಪ್ರಿಯವೆಂದು ಭಾವಿಸಿದ ಜನತೆ, ಈ ಒಂದು ಸಂಪ್ರದಾಯವನ್ನು ನಿರ್ಮಿಸಿತು. ಇದರ ಇನ್ನೊಂದು ಮುಖವೇ 'ರಣಮು ಕುಡುಪು'.

---

೧೧೭ ಈ ಬಗ್ಗೆ ನನ್ನ ಗಮನ ಸೆಳೆದವರು. ಡಾ. ಎಂ. ಎಂ. ಕಲುಬುರ್ಗಿ ಅವರು

ಯುದ್ಧದ ಅಧಿದೇವತೆಗಳು, ದುಷ್ಟಶಕ್ತಿಗಳು, ಭೂತಗಳು, ಇವುಗಳ ಕಲ್ಪನೆ ಮಾನವನಿಗೆ ಬೆಳೆದ ಹಾಗೆ, ಅವು ಮಾನವರ ರಕ್ತಮಾಂಸಗಳಿಂದ ತೃಪ್ತಿ ಹೊಂದುವುದೆಂಬುದಾಗಿ ನಂಬತೊಡಗಿದರು ಅಷ್ಟೇ ಅಲ್ಲದೆ ಹಾಗೆ ಅವುಗಳನ್ನು ತೃಪ್ತಿ ಪಡಿಸುವುದರಿಂದ ತಮಗೆ ಲಾಭವೂ, ಶತ್ರು ಪಕ್ಷದವರಿಗೆ ವಿನಾಶವೂ ಉಂಟಾಗುತ್ತದೆ ಎಂಬುದಾಗಿ ಭಾವಿಸಿ ಈ ರಣಕೂಳಿಯ ಸಂಪ್ರದಾಯಕ್ಕೆ ಮೊದಲು ಮಾಡಿರಬಹುದು.

ಬಹುಶಃ ಯುದ್ಧದಲ್ಲಿ ಸತ್ತವೀರನಿಗೆ ಅನ್ನ ಹಾಕುತ್ತಿದ್ದ ಸಂಪ್ರದಾಯ, 'ವೀರಭಟರ್ಗ್ಗೆ ಬೀರಗೂಳೆತ್ತಿ' ಎಂಬಲ್ಲಿ ಸೂಚಿತವಾಗಿರಬಹುದು. ಉಳಿದ ವೀರಗಲ್ಲುಗಳ ಪಾಠದಲ್ಲಿ 'ವೀರಭಟರ್ಗ್ಗೆ' ಎಂಬ ವಿವರನೆ ಇಲ್ಲದಿದ್ದರೂ ಈ ಎಲ್ಲಾ ಶಾಸನಗಳೂ ಒಂದೇ ಶತಮಾನದಲ್ಲಿ ಮತ್ತು ಪ್ರದೇಶದಲ್ಲಿ ದೊರೆಯುವುದರಿಂದ ಅಲ್ಲಿಯೂ ಸಹ ಇದೇ ಅರ್ಥದಲ್ಲಿ 'ಬೀರಗೂಳ್', 'ಕೂಳ್' ಹಾಕುವ ಸಂಪ್ರದಾಯ ಪ್ರಚಲಿತವಿದ್ದಿರಬೇಕೆಂದು ಊಹಿಸಿದರೆ ತಪ್ಪಾಗಲಾರದು.

ಇನ್ನು ಕುಮಾರರಾಮನಿಗೆ ಸಂಬಂಧಪಟ್ಟ ಜಾತ್ರೆಗಳಲ್ಲಿ ನಡೆಯುವ 'ವೀರಗೂಳ್' ಅಥವಾ 'ಕುಮಾರ ಊಟದ' ಬಗ್ಗೆ ಹೇಳುವುದಾದರೆ ; ಇದು ಮೂಲಸಂಪ್ರದಾಯದ ಆಚರಣೆಯೇ ಆಗಿದೆ. ಸಂಗಮ್ ಸಾಹಿತ್ಯದಲ್ಲಿ ನಿರೂಪಿತವಾಗಿರುವಂತೆ ಇದು ವೀರನ ಮುಂದೆ ಅಥವಾ ವೀರಗಲ್ಲಿನ ಮುಂದೆ ಹಾಕುವ ಬಲಿಯಾಗಿದೆ, ಕುಮಾರರಾಮನನ್ನು ತಮ್ಮ ಕುಲದೈವವೆಂದು ಭಾವಿಸಿರುವ 'ಬೇಡ' ಜನಾಂಗದವರು, ಅವನ ವಿಗ್ರಹದ ಮುಂದೆ ವರ್ಷಕ್ಕೊಮ್ಮೆ ಅವನಿಗೆ ವೀರಗೂಳನ್ನು ಅರ್ಪಿಸಿ, ತಾವು ಅದನ್ನು ಪ್ರಸಾದವೆಂದು ಸ್ವೀಕರಿಸುವ ಆಚರಣೆಯಾಗಿದೆ. ಇದೂ ಮೂಲತಃ ಮೇಲೆ ಹೇಳಿದ ಸಂಗಮ್ ಸಾಹಿತ್ಯದಲ್ಲಿನ ಅನ್ನಹಾಕುವ ಆಚರಣೆಯ ಮತ್ತೊಂದು ರೂಪವಾಗಿದೆ. ಈ ದೃಷ್ಟಿಯಿಂದ ಶ್ರೀ. ಮೈ. ಹ. ರಾಮಶರ್ಮರು ಹೇಳಿರುವ "ನಿಸ್ಸಂದೇಹವಾಗಿ ಇದು ವೀರ ರಾಮನಾಥನ ಆತ್ಮಯಜ್ಞದ ಸ್ಮರಣೆಗೆಂದೇ ಹೇಳಬೇಕು" ಎಂಬ ಮಾತುಗಳು ತುಂಬ ಸಮಂಜಸವಾಗಿವೆ.[೧೧೮]

ಮಾನವನಲ್ಲಿ ದ್ವೇಷ, ಕ್ರೋಧ, ಮತ್ಸರ ಮುಂತಾದ ಭಾವಗಳು ಸುಪ್ತವಾಗಿರುತ್ತವೆ. ಅವಕಾಶ ಬಂದಾಗ ಕೆರಳುತ್ತವೆ. ಇವು ತನ್ನ ಶತ್ರುವಿನ ಅವನತಿಯನ್ನು ಕಂಡಷ್ಟರಿಂದಲೇ ತೃಪ್ತಿಹೊಂದುವುದಿಲ್ಲ. ಶತ್ರುವಿನ ಅವನತಿಯ ಪರಾಕಾಷ್ಠೆಯನ್ನು ಕಾಣಬಯಸುತ್ತವೆ. ಗೆದ್ದ ಅರಸನು ತನ್ನ ಶತ್ರುರಾಜರ ಮತ್ತು ಅವರ ಕಡೆಯ ಸೈನಿಕರ ರಕ್ತಮಾಂಸಗಳಿಂದ ಬೇಯಿಸಿದ ಅನ್ನವನ್ನು ತನ್ನ ಪಕ್ಷದ ಸತ್ತವೀರನಿಗೆ ಆಹುತಿಯಾಗಿ ನೀಡುವುದು, ಬದುಕಿರುವ ವೀರನಿಗೆ

೧೧೮ ಮೈ. ಹ. ರಮಶರ್ಮ : ರಣಧೀರರಾಮನಾಥ ಪು. ೭೯– ೮೦

ಶತ್ರುಪಕ್ಷದವರ ಬಗ್ಗೆ ಇರುವ ಕ್ರೋಧವನ್ನು ಮತ್ತುಷ್ಟು ಹೆಚ್ಚಿಸಲು ಸಹಾಯಕವಾಗುತ್ತದೆ. ತಮ್ಮ ಕಡೆಯ ಸತ್ತವೀರರಿಗೆ ಉಚಿತವಾದ ರೀತಿಯಲ್ಲಿ ಸಂತೃಪ್ತಿ ದೊರೆತಿದೆ ಎಂಬ ಸಂತೋಷವೂ ಆಗುತ್ತದೆ. ಈ ಮೂಲಕ ಬದುಕಿರುವ ವೀರರನ್ನು, ಬೇರೊಂದು ರೀತಿಯಲ್ಲಿ ಆಲೋಚನೆ ಮಾಡಲು ಅವಕಾಶವೀಯದಂತೆ ಪ್ರೋತ್ಸಾಹವನ್ನೂ ಇದು ತಂದುಕೊಡುತ್ತದೆ ಎಂಬುದನ್ನು ಗಮನಿಸಬೇಕು. ಈ ರೀತಿ ಶತ್ರು ರಾಜರ ಕಡೆಯ ವೀರರನ್ನು ತಮ್ಮ ಕಡೆಯ ಸತ್ತ ವೀರರಿಗೆ ಅಹುತಿ ಕೊಡುವ ಸಂಪ್ರದಾಯವನ್ನು ಪ್ರಾಚೀನ ಗ್ರೀಸ್ ದೇಶದಲ್ಲಿಯೂ ಕಾಣಬಹುದಾಗಿದೆ. 'ಇಲಿಯಡ್' ಮಹಾಕಾವ್ಯದಿಂದ ಪ್ರಾಚೀನ ಗ್ರೀಸರು ಸೆರೆಹಿಡಿದ ಶತ್ರುರಾಜರ ಯೋಧರನ್ನು ಕತ್ತರಿಸಿ ಬೆಂಕಿಗೆ ಹಾಕುವುದರ ಮೂಲಕ ಅವರ ಮಾಂಸ ತಮ್ಮ ವೀರರಿಗೆ ಅರ್ಪಿತವಾಗಿ, ಅವರು ಅದರಿಂದ ಸಂತೃಪ್ತರಾಗುತ್ತಾರೆಂಬ ಅಂಶ ವ್ಯಕ್ತವಾಗುತ್ತದೆ.

ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದ ಸಮಯ

ಕರ್ನಾಟಕದ ಹಲವಾರು ವೀರಗಲ್ಲುಗಳಲ್ಲಿ ವೀರನು ಯುದ್ಧದಲ್ಲಿ ಮಡಿದ ತಿಥಿ, ವಾರ, ನಕ್ಷತ್ರಗಳ ವಿವರಗಳು ದೊರೆಯುವುದಲ್ಲದೆ, ವೀರಗಲ್ಲನನು ಯಾವಾಗ ಪ್ರತಿಷ್ಟಾಪಿಸಿದರು ಎಂಬುದರ ವಿವರಣೆಯೂ ದೊರೆಯುತ್ತದೆ. ಕ್ರಿ.ಶ. ೧೧೭೩ರ ಒಂದು ವೀರಗಲ್ಲಿನಿಂದ ಆ ವೀರಗಲ್ಲನ್ನು "ತ್ರಯೋದಶಿ ಬುಧವಾರ ಸ್ವಾತಿ ನಕ್ಷತ್ರದಲ್ಲಿ" ನಿಲ್ಲಿಸಿದುದಾಗಿ ತಿಳಿದು ಬರುತ್ತದೆ.[೧೧೯] ಕ್ರಿ.ಶ. ೧೩೮೩ರ ಮತ್ತೊಂದು ವೀರಗಲ್ಲು ದ್ವಾದಶೀ ಆದಿತ್ಯವಾರದ ದಿನ "ಸೂರ್ಯ ವುದಯದಿಂದ ಘಳಿಗೆ ೯॥ ವೊಂಭತ್ತುವರೆ ಘಳಿಗೆಯಲ್ಲಿ ಪ್ರದಿಸ್ಥೆ" – ಯಾಯಿತೆಂದು ಆ ವೀರಗಲ್ಲಿನ ಪಾಠದಿಂದ ತಿಳಿದುಬರುತ್ತದೆ.[೧೨೦] ಅನೇಕ ವೀರಗಲ್ಲುಗಳಲ್ಲಿ ಇಷ್ಟು ವಿವರ ದೊರೆಯದಿದ್ದರೂ ಸಾಮಾನ್ಯವಾಗಿ ವೀರಗಲ್ಲುಗಳನ್ನು ನಿಲ್ಲಿಸಲು ಒಂದು ಶುಭಮುಹೂರ್ತವನ್ನು ನಿಷ್ಕರ್ಷೆ ಮಾಡುತ್ತಿದ್ದರೆಂದು ತೋರುತ್ತದೆ. ಇದೇ ರೀತಿ ಕ್ರಿ.ಶ. ೧೪೭೪ರ ವೀರಗಲ್ಲೊಂದರ ಪಾಠದಿಂದಲೂ ತಿಳಿಯುತ್ತದೆ. ಶಾಲಿವಾಹನ ಶಕ ೧೩೪೮ನೆಯ ಪರಾಭವ ಸಂವತ್ಸರ ಮಾರ್ಗ್ಗಶಿರ ಶುದ್ಧ ಸಪ್ತಮಿ ಬುಧವಾರ ಕಲಗೌಡನ ಮಗ ಬಯಿಚ ಎಂಬುವನು ಜಗಳವೊಂದರಲ್ಲಿ ಆದ ಶಸ್ತ್ರಾಘಾಯದಿಂದ ಸಾಯುತ್ತಾನೆ. ಅವನ ಸ್ಮಾರಕವಾಗಿ

---

೧೧೯ E. C. VIII. Sa. 71, 1173

೧೨೦ E. C. XI. Dg. 117, 1383

"ಶಾಲಿವಾಹನ ಶಕ ೧೩೫೦ನೇ ಕೀಲಕ ಸಂವತ್ಸರ ಮಾರ್ಗಶಿರ ಶುದ್ಧ ತದಿಗೆ ಸೋಮವಾರದ ದಿನ ಪೂರ್ವಾಹ್ನ ಕಾಲದಲ್ಲಿ ಸತ್ರಗೀತವಾದ್ಯ ಪ್ರಜಾಸಮೂಹದಲ್ಲಿ ಧರ್ಮ ಪುರಸ್ಸರ ವಾಗಿಯಿಂದ್ರಲೋಕ ಶಿಲಾ" ಸ್ಥಾಪನೆಯಾಯಿತೆಂದು ಆ ವೀರಗಲ್ಲಿನ ಪಾಠ ತಿಳಿಸುತ್ತದೆ.[೨೧]

ವೀರನು ಸತ್ತ ಎಷ್ಟು ದಿನಗಳಿಗೆ ಅಥವಾ ಅವಧಿಯೊಳಗೆ ವೀರಗಲ್ಲನ್ನು ನಿಲ್ಲಿಸುತ್ತಿದ್ದರು ಎಂಬುದರ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ. ಇದಕ್ಕೆ ಕಾರಣವೆಂದರೆ ವೀರಗಲ್ಲುಗಳ ಪಾಠದಲ್ಲಿ ಸಾಮಾನ್ಯವಾಗಿ ವೀರನು ಮಡಿದ ತೇದಿಯ ವಿವರಗಳನ್ನು ನೀಡಿರುತ್ತಾರೆ. ವೀರಗಲ್ಲನ್ನು ನಿಲ್ಲಿಸಿದ ತೇದಿಯ ವಿವರಗಳನ್ನು ನೀಡಿರುವುದಿಲ್ಲ. ವೀರಗಲ್ಲನ್ನು ನಿಲ್ಲಿಸಿರುವ ತೇದಿಯ ವಿವರಗಳು ಇರುವ ವೀರಗಲ್ಲುಗಳ ಪಾಠ ದೊರೆತಿಲ್ಲ. ಅಪರೂಪಕ್ಕೆ ಈ ಎರಡೂ ವಿವರಗಳನ್ನು ಒಳಗೊಂಡಿರುವ ಎರಡು ವೀರಗಲ್ಲುಗಳೂ ಮಾತ್ರ ಇವೆ. ಆದರೂ ಅವುಗಳಿಂದ ಯಾವುದೇ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ.

ಕ್ರಿ.ಶ. ೧೪೭೭ರ ಒಂದು ವೀರಗಲ್ಲಿನ ಪಾಠದಿಂದ, ಬೊಂಮಿಗವುಡ ಎಂಬುವನು ಸತ್ತಾಗ, ಆತನ ಹೆಂಡತಿ "ಮಹಾಸತಿ ಲಖಮಾಯಿ ಅಗ್ನಿಪ್ರವೇಶಮಾಡಿ ಸುರಲೋಕಪ್ರಾಪ್ತೆಯಾದರು." ಇದಾದ "ದಿನ ೧೧ಕ್ಕೆ ಓಸನದ ಹಿರಿಯುಗವುಡನ ತಮ್ಮ ಬಯಿಚಗೌಡ ಮಗ ಕೇತಗವುಡ ಕಲ್ಲನೆಡಸಿ ಪ್ರತಿಷ್ಠೆಯ ಮಾಡಿದರು." ಎಂಬುದಾಗಿ ತಿಳಿದುಬರುತ್ತದೆ.[೨೨]

ಸಾಗರ ತಾಲ್ಲೂಕಿನ ಒಂದು ವೀರಗಲ್ಲಿನಿಂದ ವೀರನು ಸತ್ತ ತೇದಿಗೂ ಮತ್ತು ವೀರಗಲ್ಲನ್ನು ನಿಲ್ಲಿಸಿದ ತೇದಿಗು ಸುಮಾರು ನಾಲ್ಕು ವರ್ಷಗಳ ಅಂತರವಿದೆ. ಬೊಂಮ್ಮಯನಾಯಕ ಎಂಬುವನು ಹೋರಾಟವೊಂದರಲ್ಲಿ "ಕ್ರೋಧನ ಸಂವತ್ಸರ ಚಯಿತ್ರಸುಧ ಯಕಾದಸಿ ಸೋಮಾವಾರ ಪೂರ್ವಭಾದ್ರ ನಕ್ಷತ್ರದಂದು" ಮಡಿಯುತ್ತಾನೆ. ಅಂದರೆ ಈ ತೇದಿಯ ವಿವರ ಕ್ರಿ.ಶ. ೧೨೬೫ಕ್ಕೆ ಸರಿಹೊಂದುತ್ತದೆ. ಶಾಸನ ಮುಂದುವರಿದು "ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮನು ಮಹಾಮಂಡಳೇಶ್ವರಂ ಮಂಡಳಿಕಗಳಗಂಡಗತ್ತರಿ ವೀರ ಬೊಂಮರ್ಸ್ರ ವಿಜಯರಾಜ್ಯೋದಯದ ಹನ್ನೆರಡನೆಯ ಸುಕುಲಸಂವತ್ಸರದ ಕಾರ್ತ್ತಿಕ ಸುದ್ಧ ತ್ರಯೋದಸೆ ಸುಕ್ರವಾರದಂದು ಆ ಬೊಂಮ್ಮೆಯ್ಯನಾಯಕನ ತಂಗೆ ಪತಿಯರ ಬಯಿಚನ ಹೆಂಡತಿ ಸಿರಿಯಬ್ಬೆ ವೀರಗಲ್ಲನ್ನು ಮಾಡಿಸುತ್ತಾಳೆ.[೨೩] ಅಂದರೆ ಈ ತೇದಿಯ

೨೧ E. C. V. Cn. 162, 1426

೨೨ E. C. XI. Dg. 116, 1397

೨೩ E. C. VIII. Sa. 78

ವಿವರ ಕ್ರಿ.ಶ. ೧೨೯೯ಕ್ಕೆ ಸರಿಹೊಂದುತ್ತದೆ. ವೀರನು ಸತ್ತ ನಾಲ್ಕು ವರುಷಗಳ ನಂತರ ವೀರಗಲ್ಲನ್ನು ಹಾಕಿದರೆ ? ಅದೇಕೆ ಅಷ್ಟು ಅವಧಿ ಹಿಡಿಯಿತು ? ಮುಂತಾದ ಪ್ರಶ್ನೆಗಳು ಏಳುತ್ತವೆ. ಇದಕ್ಕೆ ಸಮಂಜಸವಾದ ಉತ್ತರ ದೊರೆಯುವುದು ಕಷ್ಟ ಒಟ್ಟಿನ ಮೇಲೆ ಬಹುಶಃ ಹೀಗೆ ತೀರ್ಮಾನಕ್ಕೆ ಬರಬಹುದೆಂದು ತೋರುತ್ತದೆ. ಅನುಕೂಲವಿದ್ದವರು ಸಾಮಾನ್ಯವಾಗಿ ಆದಷ್ಟು ಬೇಗ ವೀರಗಲ್ಲನ್ನು ಹಾಕಿಸುತ್ತಿದ್ದರು. ತಮಗೆ ಅನುಕೂಲವಿಲ್ಲದವರು ನಿಧಾನವಾಗಿಯಾದರೂ ಹಾಕಿಸುತ್ತಿದ್ದರು.

ತಮಿಳಿನ ಸಂಗಮ್ ಸಾಹಿತ್ಯದಿಂದ ವೀರಗಲ್ಲುಗಳ ಬಗ್ಗೆ, ವೀರಗಲ್ಲುಗಳನ್ನು ನೆಡುವ, ಆರಾಧಿಸುವ ಸಂಪ್ರದಾಯಗಳ ಬಗ್ಗೆ ಉಪಯುಕ್ತ ಮಾಹಿತಿ ದೊರೆಯುತ್ತದೆ. ಅಲ್ಲಿ ದೊರೆಯುವ ವಿವರಗಳ ಬಗ್ಗೆ ಸ್ಥೂಲವಾದ ಪರಿಚಯ ಮಾಡಿಕೊಳ್ಳುವುದು ಉಚಿತ. ವೀರಗಲ್ಲನ್ನು ನೆಡುವ ವಿಧಾನವನ್ನು ಪ್ರಾಚೀನ ತಮಿಳರು ಆರುಹಂತಗಳಲ್ಲಿ ಗುರುತಿಸುತ್ತಾರೆ.[೧೨೪]

೧. ಸ್ಮಾರಕವಾಗಿ ನೆಡುವ ಕಲ್ಲನ್ನು ಆಯ್ಕೆ ಮಾಡುವುದು.

೨. ವೀರಗಲ್ಲನ್ನು ನಿಲ್ಲಿಸುವ ಶುಭ ಮುಹೂರ್ತವನ್ನು ನಿಷ್ಕರ್ಷೆ ಮಾಡುವುದು.

೩. ಸ್ಮಾರಕಶಿಲೆಯನ್ನು ಪವಿತ್ರವಾದ ತೀರ್ಥದಲ್ಲಿ ತೊಳೆಯುವುದು.

೪. ವೀರನ ಪರಾಕ್ರಮ, ಔದಾರ್ಯ ಗುಣಗಳನ್ನು ವೀರಗಲ್ಲಿನ ಮೇಲೆ ಕೆತ್ತುವುದು.

೫. ವೀರಗಲ್ಲನ್ನು ನಿಲ್ಲಿಸಿದ ಸಮಯದಲ್ಲಿ ಮಾಡುವ ಕೆಲವಾರು ಆಚರಣೆಗಳು.

೬. ವೀರನನ್ನು ಹೊಗಳಿ ಆರಾಧಿಸುವುದು.

ಈ ರೀತಿಯ ಕ್ರಮಬದ್ಧವಾದ ಸಂಪ್ರದಾಯವನ್ನು ತಮಿಳಿನ ಜನತೆ ಪೋಷಿಸಿಕೊಂಡು ಬಂದಿದ್ದ ಅಂಶ ಸಂಗಮ್ ವೀರಕಾವ್ಯಗಳಿಂದ ತಿಳಿಯುತ್ತದೆ.

ಶಿಲೆಗಳನ್ನು ಸಂಗ್ರಹಿಸಿ ಅವುಗಳಿಂದ ವೇದಿಕೆಯನ್ನು ನಿರ್ಮಿಸಿ ವೇದಿಕೆಯ ಮಧ್ಯಭಾಗದಲ್ಲಿ ವೀರಗಲ್ಲನ್ನು ನೆಡುತ್ತಿದ್ದರು.[೧೨೫] ಈ ವೀರಗಲ್ಲುಗಳನ್ನು ನವಿಲ್ಲುಗರಿಗಳಿಂದ

---

೧೨೪ Kailasapathy : Tamil Heroic Poetry. ಪು. ೨೩೫–೩೬

೧೨೫ ಈ ಪದ್ಧತಿ ಕರ್ನಾಟಕದಲ್ಲಿ ಕೆಲವು ಕಡೆ ಪ್ರಚಲಿತದಲ್ಲಿತ್ತು.
ಚಿತ್ರದುರ್ಗದ "ಪಾಳೆಯಗಾರರು ಜಾತಿಯಲ್ಲಿ ವಿಶೇಷವಾಗಿ
ಬೇಡರೇ ಆಗಿರುತ್ತಿದ್ದರೂ ಹೂಳುತ್ತಿರಲಿಲ್ಲ. ರಾಜಮನೆತನದ
ವರನ್ನು ಸುಟ್ಟಕಡೆಯಲ್ಲೆಲ್ಲಾ ಕಲ್ಲುಗುಡ್ಡೆ ಹಾಕಿಸುತ್ತಿದ್ದರು.
ಶವವನ್ನು ದಹನ ಮಾಡಿದರು ಎನ್ನುವುದಕ್ಕೆ ಬದಲಾಗಿ ಇಂಥ
ವರನ್ನು ಇಂಥಕಡೆ "ಗುಡ್ಡೆ ಮಾಡಿದರು" ಎಂಬುದಾಗಿ

ಅಲಂಕರಿಸಿ ಪೂಜೆಮಾಡುತ್ತಿದ್ದರು ಮತ್ತು ವೀರಗಲ್ಲುಗಳ ಮುಂದೆ ವೀರನಿಗಾಗಿ ಮದ್ಯವನ್ನಿಡುತ್ತಿದ್ದರು.[೧೨೬]

ವೀರಗಲ್ಲುಗಳ ಆರಾಧನೆ

ತಮ್ಮ ವೀರನ ಹೆಸರು ಚಿರಸ್ಥಯಿಯಾಗಿರಬೇಕು ಎಂದೋ ಅಥವಾ ತಮ್ಮ ವೀರನಿಗೆ ಆರಾಧನೆ ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದಂಥ ವೀರನ ಸಂಬಂಧಿಗಳು ವೀರಗಲ್ಲಿನ ಪೂಜೆಪುನಸ್ಕಾರಗಳು ಸಾರೋದ್ದಾರವಾಗಿ ನಡೆಯಬೇಕೆಂಬ ಉದ್ದೇಶದಿಂದ ದತ್ತಿಯನ್ನು ಬಿಡುತ್ತಿದ್ದರು. ಸಾಮಾನ್ಯವಾಗಿ ವೀರಗಲ್ಲಿನ ಪೂಜೆಗಾಗಿ ದತ್ತಿ ಬಿಟ್ಟ ವಿಷಯ ವೀರಗಲ್ಲುಗಳಪಾಠದ ಕಡೆಯ ಭಾಗವಾಗಿ ಬರುವುದುಂಟು.

ಮನಾಲರನು ತನ್ನ ಪ್ರೀತಿಪಾತ್ರವಾದ ನಾಯಿಯ ಹೆಸರಿನಲ್ಲಿ ವೀರಗಲ್ಲನ್ನು ನಿಲ್ಲಿಸಿ ಗೊರವನೊಬ್ಬನನ್ನು ಆ ಕಲ್ಲಿಗೆ ಪೂಜೆಮಾಡಲು ನಿಯಮಿಸುತ್ತಾನೆ. ಆ ಕಲ್ಲನ್ನು ಗೊರವನು ಪೂಜೆಮಾಡದೆ ಊಟಮಾಡಿದ್ದೇ ಆದರೆ ಆ ನಾಯಿಯು ಮಾಡಿದ ಪಾಪವು ಬರುತ್ತದೆ ಎಂದು ಎಚ್ಚರಿಸುತ್ತಾನೆ.[೧೨೭] ಸೋಮೆಯನೆಂಬುವನು ಹೋರಾಟವೊಂದರಲ್ಲಿ ಸತ್ತಾಗ, ಅವನ ಅಣ್ಣತಮ್ಮಂದಿರು ಮತ್ತು ಚಿಕ್ಕಪ್ಪನವರು ಸೋಮೆಯನ ಹೆಸರಿನಲ್ಲಿ ವೀರಗಲ್ಲನ್ನು ನಿಲ್ಲಿಸಿ, ಅದರ ಮೇಲೆ ಆತನ 'ವೀರವಸ್ತುವನ್ನು' ಬರೆಯಿಸಿ, ಕೆರೆಯ ಕೆಳಗೆ ಸ್ವಲ್ಪ ಭೂಮಿಯನ್ನು "ವೀರಗಲ್ಲಿಂಗೆ ನಿವೇದ್ಯಕ್ಕಂ ಹೂಪತ್ರೆಗಂ ಧಾರಾಪೂರ್ವಕವಾಗಿ" ಸೋಮಜೀಯನೆಂಬುವನ "ಕಾಲಂಕರ್ಚ್ಚೆ" ದತ್ತಿಯಾಗಿ ಬಿಡುತ್ತಾರೆ.[೧೨೮] ವೀರಬಲ್ಲಾಳನ

ಶವವನ್ನು ದಹನ ಮಾಡಿದರು ಎನ್ನುವುದಕ್ಕೆ ಬದಲಾಗಿ ಇಂಥ ವರನ್ನು ಇಂಥಕಡೆ "ಗುಡ್ಡೆ ಮಾಡಿದರು" ಎಂಬುದಾಗಿ

ಪಾಳೆಯಗಾರರು – ಐದು ಉಪನ್ಯಾಸಗಳು. ಪು. ೭

ಈ ರೀತಿ ಗುಡ್ಡೆಹಾಕಿ ವೇದಿಕೆಯನ್ನು ನಿರ್ಮಿಸಿ ಅದರ ಮೇಲೆ ವೀರಗಲ್ಲನ್ನು ನಿಲ್ಲಿಸಿರುವುದನ್ನು ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕ್ ಗೌರಸಮುದ್ರದಲ್ಲಿ ಕಾಣಬಬಹುದು. ಚಿತ್ರ ನೋಡಿ. ೨೩

೧೨೬ K.S. Vaidyanthan : Hero Stones. Q.J.M.S. XXXVIII No. 3. ಪು. ೧೩೪–೧೩೮

೧೨೭ E. C. III. Md. 41, 950

೧೨೮ M. A. R.1926. No. 40. 1190

ನಾಳ್ಪ್ರಭುವಿನ ಮರಣವನ್ನು ತಿಳಿಸುವ ವೀರಗಲ್ಲಿನಿಂದ ಅವನ ಮಕ್ಕಳು ಆರಾಧನೆಗಾಗಿ ದತ್ತಿ ಬಿಟ್ಟ ವಿಷಯವನ್ನು ತಿಳಿಯಬಹುದು.[೧೨೯] ಪಿಳ್ಳೆಯನಾಯಕ ಎಂಬುವನು ಹೋರಾಟದಲ್ಲಿ ಸತ್ತ ತನ್ನ ತಮ್ಮ ಮತ್ತು ತಂದೆಯ ಹೆಸರಿನಲ್ಲಿ ಪ್ರತ್ಯೇಕವಾಗಿ ವೀರಗಲ್ಲುಗಳನ್ನು ನಿಲ್ಲಿಸಿ ಆಂಜನೇಯ ಗುರುಗಳ ಕಾಲವನ್ನು ತೊಳೆದು ಆ ವೀರಗಲ್ಲುಗಳ ಪೂಜೆಗಾಗಿ ಸ್ವಲ್ಪ ಭೂಮಿಯನ್ನು ದತ್ತಿಯನ್ನಾಗಿ ಬಿಡುತ್ತಾನೆ.[೧೩೦] ಇದೇ ರೀತಿ ಇನ್ನೂ ಹಲವಾರು ವೀರಗಲ್ಲುಗಳ ಪಾಠದಿಂದ ಅವುಗಳ ಪೂಜೆ ಮಾಡುವುದಕ್ಕಾಗಿ ದತ್ತಿ ಬಿಟ್ಟ ವಿಷಯ ತಿಳಿಯುತ್ತದೆ.[೧೩೧]

ಮೇಲಿನ ನಿದರ್ಶನಗಳನ್ನು ಗಮನಿಸಿದಾಗ, ಆರಾಧನೆಗಾಗಿ ದತ್ತಿಯನ್ನು ಬಿಟ್ಟಿರುವ ವೀರಗಲ್ಲಿನ ವೀರ ಮತ್ತು ಅವನ ಮನೆತನದವರು ಸಾಮಾಜಿಕವಾಗಿ ಪ್ರತಿಷ್ಠಿತರಾದ ವ್ಯಕ್ತಿಗಳೆಂದು ಅನ್ನಿಸುತ್ತದೆ. ಆದ್ದರಿಂದಲೇ ತಮ್ಮ ಸಂಬಂಧಿಯ ಹೆಸರು ಚಿರಸ್ಥಾಯಿಯಾಗಿರಬೇಕು. ಅವನ ಸ್ಮಾರಕಕ್ಕೆ ನಿಷ್ಠೆಯಿಂದ ಪೂಜೆ ನಡೆಯಬೇಕು ಎಂದು ದತ್ತಿಯನ್ನು ಬಿಟ್ಟಿರಬೇಕು. ವೀರಗಲ್ಲುಗಳನ್ನು ಪೂಜಿಸುವ ಸಲುವಾಗಿಯೇ ದೇವಾಲಯಗಳ ಅರ್ಚಕರನ್ನೋ ಮತ್ತೆ ಇತರರನ್ನೋ ನಿಯಮಿಸುತ್ತಿದ್ದಿರಬೇಕು.

ವೀರಗಲ್ಲುಗಳನ್ನು ಪೂಜೆ ಮಾಡುವುದಕ್ಕಾಗಿ ಜಮೀನನ್ನು ಪಡೆದಿರುವ ವೀರರಗುಡಿಗಳ ಪೂಜಾರಿಗಳನ್ನು ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲಿ ಗುರುತಿಸಬಹುದು. ಇದೇ ಪ್ರದೇಶದಲ್ಲಿನ ಕುರುಬರಲ್ಲಿನ ವೀರಗಲ್ಲುಗಳನ್ನು ಪೂಜಿಸುವ ಒಂದು ಪ್ರತ್ಯೇಕ ಗುಂಪಿನವರೇ ಇದ್ದಾರೆ ಎಂಬುದನ್ನು ಇಲ್ಲಿ ವಿಶೇಷವಾಗಿ ಸ್ಮರಿಸಬಹುದು.

‘ವೀರಗಲ್ಲು ಎಂಬುದರ ಪರ್ಯಾಯ ಪದಗಳು

ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ವೀರಗಲ್ಲನ್ನು ಅನೇಕ ಪರ್ಯಾಯ ಪದಗಳಿಂದ ಕರೆದಿರುವುದು ಕಂಡುಬರುತ್ತದೆ.

---

೧೨೯ E. C. VI. Kd. 131, 1210

೧೩೦ E. C. VII. Sh. 61-62, 1287.

೧೩೧ (ಅ) E. C. XVI. Tp. 52, (ಆ) E. C. XI. Hk. 130, 1226
(ಇ) E. C. XI. Dg 87, 1264, (ಈ) E. C. VI. Cm. 118,1284
(ಉ) E. C. VI. Cm.36,1292 (ಊ) E.C.VII. Hl.117, 1319
(ಋ) M. A. R.1929. No. 97. 1464 (ೠ)E.C.V. Cn. 249

ಆರಂಭ ಕಾಲದಿಂದ ಸುಮಾರು ಹದಿನೆಂಟನೆಯ ಶತಮಾನದವರೆಗೆ ಉಪಲಬ್ಧವಿರುವ ವೀರಗಲ್ಲುಗಳ ಪಾಠದಿಂದ ವೀರಗಲ್ಲುಗಳನ್ನು 'ಕಲ್ಲು' ಎಂಬುದಾಗಿ ಕರೆದಿರುವುದನ್ನು ಗಮನಿಸಬಹುದು. "ಕಲ್ಲು" ಎಂಬುದಾಗಿ ಅವರು ಯಾವುದನ್ನು ಕರೆಯುತ್ತಿದ್ದರೋ, ನಿರ್ದೇಶಿಸುತ್ತಿದ್ದರೋ ಅದನ್ನು ಅದರ ಪ್ರಯೋಗದ ಸಂದರ್ಭವನ್ನು ಗುರುತಿಸಿ ನೋಡಿದಾಗ 'ವೀರಗಲ್ಲು' ಎಂಬ ಅರ್ಥವೇ ಅದಕ್ಕೆ ಇದ್ದಂತೆ ಕಂಡುಬರುತ್ತದೆ.[೧೩೨]

ವೀರಗಲ್ಲನ್ನು ಹಾಕಿಸುತ್ತಿದ್ದ ಜನ ಆ ಕಲ್ಲಿನ ಶಿಲ್ಪವನ್ನು ಮತ್ತು ಪಾಠವನ್ನು ತಾವು ಕಣ್ಣಾರೆ ಕಾಣುತ್ತಿದ್ದುದರಿಮದ ಬಹುಶಃ 'ವೀರಗಲ್ಲು' ಎಂಬುದಾಗಿ ಕರೆಯುವುದು ಅನಾವಶ್ಯಕ ಎಂಬು ಭಾವಿಸಿರಬಹುದು. ಅಂದರೆ 'ವೀರಗಲ್ಲು' ಎಂಬ ಪದ ಪ್ರಚಲಿತದಲ್ಲಿರಲಿಲ್ಲವೆಂದು ಅಭಿಪ್ರಾಯವಲ್ಲ. ವೀರಗಲ್ಲು ಎಂಬುದನ್ನು 'ಕಲ್ಲು' ಎಂಬುದಾಗಿ ನಿರ್ದೇಶಿಸಿರುವ ವೀರಗಲ್ಲುಗಳ ಕಾಲದಲ್ಲಿಯೇ, ಅದೇ ಪ್ರದೇಶದಲ್ಲಿನ ಇತರ ವೀರಗಲ್ಲುಗಳ ಪಾಠದಿಂದ ವೀರಗಲ್ಲು ಎಂಬ ಪದದ ಪ್ರಯೋಗ ದೊರೆಯುತ್ತವೆ. ವೀರಗಲ್ಲು ಎಂಬುದನ್ನು 'ಕಲ್ಲು' ಎಂಬುದಾಗಿ ಕರೆಯುತ್ತಿದ್ದರೂ ಅದು ತನ್ನ ಪ್ರಯೋಗದ ಪರಿಸರದ ಹಿನ್ನೆಲೆಯಲ್ಲಿ 'ವೀರಗಲ್ಲು' ಎಂಬ ಅರ್ಥವನ್ನು ಹೊಂದಿರುತ್ತಿತ್ತು ಎಂಬುದು ನಮ್ಮ ಅಭಿಪ್ರಯ.೧೩೩

ಹತ್ತನೆಯ ಶತಮಾನದ ನಂತರದ ವೀರಗಲ್ಲುಗಳ ಪಾಠದಲ್ಲಿ ವೀರಗಲ್ಲುಗಳನ್ನು ಸಾಮಾನ್ಯವಾಗಿ 'ವೀರಕಲ್ಲು',[೧೩೪] 'ವೀರಗಲ್ಲು',[೧೩೫] 'ಬೀರಕಲ್ಲು',[೧೩೬] 'ಬೀರಗಲು'[೧೩೭] ಎಂದು ಕರೆಯಲಾಗಿದೆ. ಈ ಪ್ರಯೋಗಗಲೂ ಹೊಯ್ಸಳರ ಕಾಲದ ವೀರಗಲ್ಲುಗಳಲ್ಲಿ

---

೧೩೨ (ಅ) E. C. VIII. Sb. 542, 800 "ಪೋಗಿನಲ್ಲಿ ನಿಜೆಸಿದನೀ ಕಲ್ಲ".
(ಆ) M. A. R.1926. No. 63 ಸು. ೮೮೬ "ಬೆನವಯ್ಯ ಸಗ್ಗಿಯಾದಮ್ ಪುಣ್ಯಪವಿತ್ರಙ್ಗೆ ಕಲ್ಲಾನಿಕ್ಕಿದೊನ್ ಮಾರನ್."
(ಇ) E. C. Md. 41, 950 "ಯಾತಕೂರೊಳ್ ಚಲ್ಲೇಶ್ವರದ ಮುಂದೆ ಕಲ್ಲನ್ನಡಿಸಿ."
(ಈ) "ಮಾರಸಿಂಗಯ್ಯನ ಹೆಣ್ಡತಿ ಹೆಲಬ್ಬೆಯೊಡೆದ ಕೆಜೆಯಂ ಕಟ್ಟಸಿ ಪರೋಕ್ಷ ವಿನಯಂಗಳಂ ಮಾಡಿ ಬೀರಗೂಳೆತ್ತಿ ಕಲ್ಲನಿಜೆಸಿದರು."
ಇದೇ ರೀತಿ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು.

೧೩೩ 'ಕಲ್ಲು' ಎಂಬುದಾಗಿ ದಾನ ಶಾಸನಗಳಲ್ಲಿಯೂ ಉಕ್ತವಾಗಿರುತ್ತದೆ. ಅಲ್ಲಿ ದಾನಶಾಸನವೆಂದು ಸಾಂದರ್ಭಿಕವಾಗಿ ಅರ್ಥೈಸಬೇಕು.

೧೩೪ E. C. VIII. Sb. 519, 1138. "ಸುರಗಣಿಕೆಯರೊಡನೆಯಿರ್ದ್ದ –ವೀರಕಲ್ಲು."

೧೩೫ E. C. VIII. Nr. 70, 1068. "ವೀರಗಲ್ಲ ನಿಲಿಸಿದ."

೧೩೬ E. C. IV. Hg. 73, 1007. "ತಮ್ಮ ಗಾವುಣ್ಣ ಸುವಿಲರ್ ಬೀರಕಲ್ಲ ನಿಜ್ಸಿದ."

೧೩೭ E. C. III. Md. 22, 1144. "ಆ ಇರುಗಕಾಜಿ ಮಾಡಿಸಿದ ಬೀರಗಲ್ಲ."

ಬಹಳವಾಗಿವೆ. ಈ ಪದ ಪ್ರಯೋಗಗಳು ಸುಮಾರು ಹದಿನೈದನೆಯ ಶತಮಾನದವರೆಗೆ ಕಂಡುಬರುತ್ತವೆ.[೧೩೮] ಅಪರೂಪಕ್ಕೆಂಬಂತೆ ಕೆಲವು ವೀರಗಲ್ಲುಗಳಲ್ಲಿ 'ವೀರಕಲ್ಲು ಶಾಸನ',[೧೩೯] 'ಸಿಲಾಲೇಖಾ'[೧೪೦] ಎಂಬ ಪದ ಪ್ರಯೋಗಗಳೂ ದೊರೆಯುತ್ತವೆ. ಹೊಯ್ಸಳರ ಕಾಲದ ಸಂಸ್ಕೃತ ಪಾಠವಿರುವ ಒಂದು ವೀರಗಲ್ಲಿನಲ್ಲಿ ವೀರಗಲ್ಲನ್ನು 'ವೀರಸಿಲಾ' ಎಂಬುದಾಗಿ ಕರೆಯಲಾಗಿದೆ.[೧೪೧]

ವೀರಶಾಸನ

ಕೆಲವು ವೀರಗಲ್ಲುಗಳಲ್ಲಿ ಅವುಗಳನ್ನು 'ವೀರ ಶಾಸನ' ಎಂಬುದಾಗಿ ಕರೆದಿರುವುದನ್ನೂ ಗಮನಿಸಬಹುದು. ಈ ರೀತಿ ವೀರ ಶಾಸನ ಎಂಬುದಾಗಿ ಕರೆದಿರುವ ಉಲ್ಲೇಖಗಳು ಸುಮಾರು ಹನ್ನೊಂದನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗೂ ದೊರೆಯುತ್ತವೆ.[೧೪೨] ವೀರಶಾಸನದ ಬಗ್ಗೆ ವಿವರನೆಯನ್ನು ನೀಡುತ್ತಾ

---

೧೩೮ (ಅ) E. C. VIII. Sb. 473,1448 "ವೀರಕಲ್ಲಿಗೆ ಮಂಗಳ ಮಹಾ ಶ್ರೀ ಶ್ರೀ"
(ಆ) E. C. VII. Sk. 1446. "ಚೆಂನನು ನಿಲ್ಸಿದ ಬೀರಗಲು."

೧೩೯ (ಅ) E. C. V. Cn. 162. "ವೀರಕಲ್ಲ ಸಾಸನವ ನಿಲಿಸಿದರು."
(ಆ) M. A. R. 1932. No. 12. 1190 "ವೀರಗಲ್ಲನಿಂದವರದ ಯೂಜೊಕ್ಕಲುಂ... ನಿಲ್ಲಿಸಿದ ಕಲ್ಲು."
(ಇ) E. C. V. Cn. 205. "ಕಲು ಸಾಸನಮಂ ನಿಜೆಸಿತ್ತು."

೧೪೦ (ಅ) M.A.R.1926.No.40.1190"ಆತನ ವೀರವಸ್ತುವಂ ನಿಲಿಸಿದ ಸಿಲಾ ಲೇಖೆ."
(ಆ) E. C. III. MI. 21,1382 "ಶಿಲಾಶಾಸನವನು ಸುಪ್ರತಿಷ್ಠೆ ಮಾಡಿದರು."

೧೪೧ E. C. V. Hn. 17. "ವೀರಸಿಲಾ ಪ್ರತಿಷ್ಟಂ ಕೃತವಾನ್."

೧೪೨ (ಅ) E. C. I. Cg. 62,1095 "ಪರೋಕ್ಷ ವಿನಯಂಗೆಯ್ದು ವೀರಸಾಸನ ಬರೆಯಿಸಿದಂ"
(ಆ) E. C. V. Yd. 30, 1110 "ಇನ್ತೀ ಮೂವರುಂ ವೀರಸಾಸನದಿಂ ಸ್ವರ್ಗಮೆಯ್ದಿಪಂತು"
(ಇ) E. C. VIII. Sk. 144, 1183. "ಪದ್ಮವ್ವೆ ನಾಯಕಿತಿಯುಂ ನಿಲಿಸಿದ ವೀರ ಶಾಸನ ಮಂಗಳ"
(ಈ) S. I.I. XX. 169, 1183. "ಜಗಜ್ಜನಮಜೆಯಲ್ಲ ಮಾಡಿದುದು ಬಮ್ಮ ಸಾಸನ ವೀರಸಾಸನ"

ಡಾ. ಡಿ. ಸಿ. ಸರ್ಕಾರ್ ಅವರು, ಇದನ್ನು ವೀರಗಲ್ಲಿನ ಪರ್ಯಾಯ ಪದವಾಗಿ ಪರಿಗಣಿಸುತ್ತಾರೆ.[೧೪೩] ಆದರೆ ವೀರಶಾಸನಗಳು ಎಂಬುದಾಗಿ ಕರೆದುಕೊಂಡಿರುವ ಶಾಸನಗಳನ್ನು ಗಮನಿಸಿದಾಗ ಮತ್ತು ಕಾವ್ಯಗಳಲ್ಲಿ ಈ ವೀರಶಾಸನ ಎಂಬ ಪದಪ್ರಯೋಗಗಳ ಅರ್ಥವನ್ನು ಗಮನಿಸಿದಾಗ 'ವೀರಶಾಸನ' ಎಂಬುದನ್ನು ಕೇವಲ 'ವೀರಗಲ್ಲು' 'ವೀರನ ಸ್ಮಾರಕ ಶಿಲೆ' ಎಂಬುದಾಗಿ ವಿವರಿಸಿದರೆ ಅವ್ಯಾಪ್ತಿ ದೋಷ ಉಂಟಾಗುವಂತೆ ತೋರುತ್ತದೆ.

ಯುದ್ಧದಲ್ಲಿ ಸತ್ತ ವೀರರ ಪರಾಕ್ರಮವನ್ನು ವೀರಗಲ್ಲುಗಳಲ್ಲಿ ಕೀರ್ತಿಸಿರುವ ಹಾಗೆಯೇ, ಸಹಜ ಮರಣವನ್ನು ವೀರನೊಬ್ಬನು ಪಡೆದಾಗಲೂ, ಅವನು ಬದುಕಿದ್ದಾಗ ಮಾಡಿದ ಪರಾಕ್ರಮಗಳನ್ನು ಹೊಗಳಿ, ಕೀರ್ತಿಸಿ ಹಾಕಿಸಿರುವ ಶಾಸನವೂ ಸಹ ವೀರಶಾಸನವಾಗಬಹುದು. ಇದಕ್ಕೆ ಉದಾಹರಣೆಯಾಗಿ ದುದ್ದರಸನ ವೀರ ಶಾಸನವನ್ನು ಕೊಡಬಹುದು. ದುದ್ದರಸ ಎಂಬುವವನು, "ಪದಿನಯ್ದು ಕುದುರೆ ಅಯ್ವತ್ತು ಲೆಂಕರುಂ ಎನ್ನೂಱಯ್ವತ್ತು ಎಕ್ಕಟಿಗರುಂ ನಾಲುವತ್ತಯ್ದು ಕುಳ ಪುಟ್ಟಿಗೆ ಗಾಯದಾಳುಮನೇಕ ಪ್ರಜೆ ಪರಿವಾರ ಬಂಧುವರ್ಗ ಕುಲಸ್ತ್ರೀಯರೊಡನೆ ಬೆರೆತ ಸುಖದಿಂದಾರಭ್ಯವಾಗಿ ಧರ್ಮವನ್ನು ಬೆಳಗಿ ಶಿವಲೋಕ ಪ್ರಾಪ್ತನಾಗಲು," ಅವನ ಸಹೋದರನಾದ ಜೂಜರಸನು ದುದ್ದರಸನಿಗೆ ಸ್ನೇಹದಿಂದ ಪರೋಕ್ಷವಿನಯ ಕ್ರಿಯೆಗಳನ್ನು ಮಾಡಿ 'ವೀರಸಾಸನ'ವನ್ನು ಬರೆಯುಸುತ್ತಾನೆ.[೧೪೪] ಇದೇ ಸಂದರ್ಭದಲ್ಲಿ ಹೊಯ್ಸಳ ವೀರಬಲ್ಲಾಳನ ಗರುಡನಾಗಿ ಆತ್ಮಬಲಿಯಾದ ಕುವರ ಲಕ್ಷ್ಮನ ಶಾಸನವನ್ನು ಪರಿಗಣಿಸುವುದು ಸೂಕ್ತವೆಂದು ತೋರುತ್ತದೆ.[೧೪೫] ಕುವರ –ಲಕ್ಷ್ಮ ಯುದ್ಧದಲ್ಲಿ

(ಉ) E. C. VIII. Sa. 110, 1292. "ಮನ್ನಣೆಯ ವೀರಶಾಸನ ದುಂನತಿಯಂ ಮಾಡಿ ನಿಱಿಸಿದಂ"

(ಊ) S. I.I. XX. 125, 1183 "ಸ್ವಾಮಿ ಸಂತೋಷಂ ಬಡೆದು ನಿಱಿಸಿದ ವೀರಶಾಸನಂ"

(ಋ) M. A. R.1937. 13. 1310 "ವೀರ ಶಾಸನವನಾ ಚಂದ್ರಾರ್ಕ್ಕತಾರಂಬರಂ"

(ೠ) M. A. R.1937. 13. 1311 "ಬೊಕ್ಕಿ ಕಬ್ಬೆಯ ಮಗಳ್ ಮಹಾದೇವಿ ನಿಲಿಸಿದ ವೀರಸಾಸನ ಮಂಗಳ"

(ಎ) M. A. R.1941. 42. ಸು. ೧೩ನೇ ಶತ. "ಯೀ ವೀರಸಾಸನವ ಪೂಜಿಸುವ ಪಂಡಿತಜೀಯನವರಿಗೆ ಬಿಟ್ಟ"

೧೪೩ D.C. Sircar : Epigraphical Glossary -p. 377

೧೪೪ E. C. I. Cg. 62, 1095

೧೪೫ E. C. V. Bl. 112

ಮಡಿದವನಲ್ಲ ತನ್ನ ಸ್ವಾಮಿಯು ಸತ್ತಾಗ, ತಾನು ಹಿಂದೆ ಅವನಿಗೆ ಕೊಟ್ಟ ಭಾಷೆಯನ್ನು ಸಲ್ಲಿಸಲು, ಗರುಡರ ಸಮೂಹಕ್ಕೆ ವಿಶೇಷವಾದ ಗೌರವವನ್ನು ತರಲು ಆತ್ಮಹತ್ಯೆಯನ್ನು ಮಾಡಿಕೊಂಡವನು. ಈತನು ಬದುಕಿದ್ದಾಗ ಪರಾಕ್ರಮಿಯೂ ಆಗಿದ್ದ ಎಂಬ ಅಂಶವನ್ನು ಮರೆಯಬಾರದು. ಇದೇ ಶಾಸನದಲ್ಲಿ ವೀರಶಾಸನದ ಬಗ್ಗೆ ಇರುವ ಉಕ್ತಿಗಳು ವೀರ ಶಾಸನವನ್ನು ವಿವರಿಸುವಲ್ಲಿ ಅನೇಕ ವಿಧವಾಗಿ ನೆವಾಗುತ್ತವೆ. ಕುವರ ಲಕ್ಷ್ಮನ ವೀರತನವನ್ನು ಹೇಳುವ ಆ ಶಾಸನ, ಕೇವಲ ಶಾಸನವಲ್ಲ ;

> "ನಿಱಿಸಿದ ವೀರ ಶಾಸನದ ಕಲ್ ದೊರೆವೆತ್ತಯ ಶೋಂ ನತಿಯಕ್ಕೆಯಂ
> ನಿಱಿಸಿದು ದಷ್ಟದಿಗ್‌ವಳಯದೊಳ್ ದೊರೆಯಾವನೋ ಪೂಣ್ಯಪೂಣ್ಕೆಯಂ
> ನೆಱಪುವ ಬಲ್ಪಿನೊಳ್ ಕುವರಲಕ್ಷ್ಮ ಚಮೂಪತಿಯಂ ನೆನೆದು ತಂ
> ನೆಱಕದೆ ಬಂಣಿಕುಂ ಧರಣಿ ಹೊಯ್ಸಳರಾಯನ ಗಂಧಹಸ್ತಿಯಂ"

ಅದು ಕುವರ ಲಕ್ಷ್ಮನು ಆಡಿದ ಮಾತನ್ನು ಉಳಿಸಿಕೊಳ್ಳಲು ಮಡಿದ ವೀರನೆನ್ನು ವುದನ್ನು ಸಾರಿ ಹೇಳುವ ಜೀವಂತ ಸಾಕ್ಷಿ. ಅಷ್ಟೇ ಅಲ್ಲ, ಭಾಷೆಯನ್ನು ಕೊಟ್ಟು ಅದಕ್ಕೆ ತಪ್ಪಿ ನಡೆಯುವ, ಬದುಕಲು ಪ್ರಯತ್ನಿಸುವ ಹೇಡಿಗಳನ್ನು ಕಂಡು ನಗುವ ಧೀರೋದಾತ್ತ ಸಾಕ್ಷಿ. "ಇಲ್ಲದ ಸಲ್ಲದ ಭಾಷೆಗೆ ಕಲ್ಲನಿಱಿಸುವರುನುಱದೆ ನಗುವ ವೋಲಿರ್ಕ್ಕುಂ ಪಲ್ಲವಿಸಿ ಕುವರ ಲಕ್ಷ್ಮನ ಕಲ್ಲ ಕವಲ್ತೆಸೆವ ಕಾಂತಿ ದಿಗ್ಭಿತ್ತಿಯೊಳ್" –ಹೀಗೆ ತನ್ನ ಪ್ರತಾಪವನ್ನು ಮೆರೆಯುತ್ತಿರುವ ಈ ತರದ ಶಾಸನವನ್ನು "ಮುಂನಾರುಂ ನಿಱಿಸಿದವರಿಲ್ಲ ಬಲ್ಲಾಳ ಧರಿತ್ರೀ ರಮಣನ ಮಂತ್ರಿವರಂ ವೀರಭಟಂ ಕುವರ ಲಕ್ಷ್ಮ ದಂಡೇಶನವೋಲ್." ಎಂದು ತನ್ನ ವಿಶಿಷ್ಠತೆಯನ್ನೂ ಸಾರುವ ಶಾಸನವದು.

ಈ ಮೇಲಿನ ಉದ್ಧೃತಗಳಿಂದ ಸ್ಪಷ್ಟವಾಗುವಂತೆ ವೀರ ಶಾಸನಗಳನ್ನು ವಿಶೇಷವಾದ ವ್ಯಕ್ತಿಗಳನ್ನು ಅಥವಾ ಅಸಾಮಾನ್ಯವಾದ ರೀತಿಯಲ್ಲಿ ಹೋರಾಡಿ ಮಡಿದ ವೀರರ ಪರಾಕ್ರಮಗಳನ್ನು ಕೀರ್ತಿಸುವ ಪ್ರಶಸ್ತಿರೂಪದ ಶಾಸನಗಳು ಎಂಬುದಾಗಿ ಕರೆಯಬಹುದು. ಇವು ಸ್ಮಾರಕ ಶಿಲೆಗಳೇ ಆಗಿರಬೇಕೆಂಬ ನಿಯಮವಿಲ್ಲ. ಇವು ವೀರನೊಬ್ಬನ ಪರಾಕ್ರಮವನ್ನು ವೈಭವೀಕರಿಸಿ ಹೇಳುವಂಥವು. ವೀರನ ಹೊಗಳಿಕೆಯ ಅಂಶ ಶಾಸನದಲ್ಲಿ ಪ್ರಾಸಂಗಿಕವಾಗಿ ಬಂದ ಮಾತ್ರಕ್ಕೆ ಅದನ್ನು ವೀರಶಾಸನ ಎಮದು ಕರೆಯಲಾಗದು. ಅದು ಕೇವಲ ವ್ಯಕ್ತಿಯೊಬ್ಬನ ಪರಾಕ್ರಮ ಗುಣಗಳನ್ನು ಕೀರ್ತಿಸುವ ಉದ್ದೇಶದಿಂದಲೇ ಬರೆದದ್ದಾಗಿರಬೇಕು. ಈ ಅಂಶ ಪಂಪನಲ್ಲಿ ಬರುವ 'ವೀರ ಶಾಸನ' ಪದ ಪ್ರಯೋಗದ ಪರಿಸರವನ್ನು ವಿಶ್ಲೇಷಣೆ

ಮಾಡುವುದರಿಂದ ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಪಂಪ ಕವಿ ಅರಿಕೇಸರಿಯನ್ನು ಹೊಗಳುತ್ತಾ ಈ ರೀತಿಯಲ್ಲಿ ಬರೆಯುತ್ತಾನೆ :

> ಚಾಗದ ಕಂಬಮಂ ನಿಱಿಸಿ ಬೀರದ ಶಾಸನಮಂ ನೆಗಟ್ಚಿ ಕೋ
> ಳ್ಬೋಗದ ಮಂಡಲಂಗಳನೆ ಕೊಂಡು ಜಗತ್ರಿತಯಂಗಳೊಳ್ ಜಸ
> ಕ್ಕಾಗರಮಾದ ಬದ್ದೆಗ ನಿನಾ ನರಸಿಂಹನಿನತ್ತ ನಾಲ್ವೆರಲ್
> ಮೇಗು ಪೊದಟ್ದಿ ಚಾಗದೊಳಮೊಂದಿದ ಬೀರದೊಳಂ ಗುಣಾರ್ಣವಂ ॥[೧೫೬]

ತ್ಯಾಗ ಸ್ತಂಭವನ್ನು ಸ್ಥಾಪಿಸಿ ತನ್ನ ದಾನ ಗುಣವನ್ನು ಸಾರುವಂತೆ ಮಾಡಿ, ತನ್ನ ಪರಾಕ್ರಮವನ್ನು ಜಗತ್ತಿಗೆ ಸಾರುವ 'ಬೀರದ ಶಾಸನ'ವನ್ನು ನಿಲ್ಲಿಸಿ, ವಶವಾಗದ ರಾಜ್ಯಗಳನ್ನು ವಶಮಾಡಿಕೊಂಡು ಮೂರೂ ಲೋಕಗಳಲ್ಲಿ ಕೀರ್ತಿಗೆ ಹೆಸರಾದ ಭದ್ರದೇವನಿಗಿಂತಲೂ, ನರಸಿಂಹನಿಗಿಂತಲೂ ಆಚೆಗೂ ಅರಿಕೇಸರಿಯ ಪರಾಕ್ರಮವಿತ್ತು –ಎಂಬುದಾಗಿ ಹೊಗಳುತ್ತಾನೆ. ಪ್ರಸ್ತುತ ನಮಗೆ ಮುಖ್ಯವಾದುದು ಅವನು ತನ್ನ "ಬೀರದಶಾಸನಮಂ ನೆಗಟ್ಚಿದುದು".

ಗೋಗ್ರಹಣದಲ್ಲಿನ ಅರ್ಜುನನ ಯುದ್ಧದ ವೈಖರಿಯನ್ನು ವರ್ಣಿಸುತ್ತಾ, ಪಂಪ ಹೀಗೆ ಹೇಳುತ್ತಾನೆ :

> ಮನದೊಳ್ ಕರುಣಿಸಿ ಸಂಮೋಹನಾಸ್ತ್ರದಿಂದೆಚ್ಚು ಬೀರರಂ ಬೀರದಶಾ
> ಸನಮನೆ ನಿಱಿಸುವಬಗೆಯಿಂದನಿಬರ ಪಟಿವಿಗೆಯ ನೆಟಿದುಕೊಂಡಂ ಹರಿಗಂ[೧೫೭]

ಶತ್ರುಗಳನ್ನು ಹೊಡೆಯಲಿಚ್ಛಿಸದ ಮನಸ್ಸಿನಲ್ಲಿ ಕರುಣೆಯಿಂದ, ಅರ್ಜುನ ತನ್ನ ಸಂಮೋಹನಾಸ್ತ್ರದಿಂದ ಹೊಡೆದು, ವೀರರನ್ನು ತನ್ನ ವೀರತನವನ್ನು ಸಾರಿ ಹೇಳುವ ವೀರಶಾಸನಗಳಂತೆ ಅವರನ್ನು ನಿಲ್ಲಿಸಿ, ಅವರ ಧ್ವಜಗಳನ್ನು ಕಿತ್ತುಕೊಂಡ.

ಈ ವೀರಶಾಸನದ ವಿವರವಾದ ವರ್ಣನೆಯನ್ನು ಪಂಪ ಭೀಷ್ಮರು ಶರಶಯ್ಯೆಯಲ್ಲಿ ಮಲಗಿದ್ದ ಚಿತ್ರವನ್ನು ವರ್ಣಿಸುವಲ್ಲಿ ಕೊಟ್ಟಿದ್ದಾನೆ. ಬಾಣಗಳ ಮೇಲೆ ನೆಲ ಮುಟ್ಟದೆ ಮಲಗಿದ್ದ

---

೧೫೬ ಪಂಪ : ವಿಕ್ರಮಾರ್ಜುನ ವಿಜಯಂ. ೧, ೩೦

೧೫೭ ಅದೇ. ೮ –೧೦೯

ತಮಿಳುಕಾವ್ಯವೊಂದರಲ್ಲಿ ವೀರನ ಪರಾಕ್ರಮವನ್ನು ವರ್ಣಿಸುತ್ತಾ ಆ ಕವಿ " ಆ ವೀರನೆದುರಿಗೆ ಬಂದ ವೀರರ ಇವನ ಶಸ್ತ್ರಗಳಿಂದ ಘಾತರಾಗಿ ವೀರಗಲ್ಲುಗಳಂತೆ ನಿಂತರು". ಎಂಬುದಾಗಿ ಕವಿ ವರ್ಣಿಸಿರುವ ಅಂಶವನ್ನು ಇಲ್ಲಿ ನೆನೆಯಬಹುದು (ನೋಡಿ – N. Subramani : Sangam Polity. p. 130)

ಭೀಷ್ಮರ ದೇಹವು ವ್ಯಾಸಪೀಠದ ಮೇಲೆ ಇರುವ 'ವೀರಸಿದ್ಧಾಂತಶಸನಂ ಬರೆದ ಪೊತ್ತಗೆ'ಯ ಹಾಗೆ ಇರುತ್ತದೆ. ಭೀಷ್ಮರು ಯುದ್ಧ ಮಾಡುವಾಗ ಆದ ಗಾಯಗಳೇ ಆ ವೀರಸಿದ್ಧಾಂತವನ್ನು ಸಾರುವ ಲಿಪಿಗಳು. ಈ ಲಿಪಿಗಳು ವೀರರಾದವರನ್ನು ಕುರಿತು "ನೀವು ಭೀಷ್ಮರಿಂದ ವೀರತನವನ್ನು ನೋಡಿ ಕಲಿಯಿರಿ" ಎಂಬುದಾಗಿ ಹೇಳುತ್ತಿದ್ದುವಂತೆ.[೧೫೮]

ಜನ್ನನ ಅನಂತನಾಥ ಪುರಾಣದಲ್ಲಿಯೂ ವೀರಶಾಸನದ ಪ್ರಸ್ತಾಪ ಬರುತ್ತದೆ. ವಸುಷೇಣನ ಹೆಂಡತಿಯಾದ ಸುನಂದೆಯನ್ನು ಚಂಡಶಾಸನನು ಅಪಹರಿಸಿಕೊಂಡು ಹೋಗುವಾಗ ವಸುಷೇಣನ ಮಿತ್ರನಾದ ಸಿಂಹಚೂಡನು ಚಂಡಶಾಸನನ್ನು ಎದುರಿಸಿ ಸಾಯುತ್ತಾನೆ. ತರಿದು ಬಿದ್ದ ತಲೆಯನ್ನು ವಸುಷೇಣನ ಬಳಿಗೆ ತರುವ ಸಂದರ್ಭದಲ್ಲಿ ಆ ತಲೆಯನ್ನು ಜನ್ನ ಈ ರೀತಿ ವರ್ಣಿಸುತ್ತಾನೆ ; "ನಿಜಾಂತಃಕರಣಕ್ಕಂ ವೀರಶಾಸನ ಪ್ರಾವಾದಕ್ಕಂ ಮೂದಲೆಯಂತಿರ್ದ ತಲೆಯಂ"[೧೫೯]

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ವ್ಯಕ್ತಿಯೊಬ್ಬನ ಪರಾಕ್ರಮವನ್ನು (ಅವನು ಯಾವುದೇ ಹೋರಾಟದಲ್ಲಿ ಸತ್ತಿರಲಿ, ಗೆದ್ದು ಬಂದಿರಲಿ ಅಥವಾ ಸಹಜವಾದ ಮರಣವನ್ನು ಪಡೆದಿರಲಿ) ವೀರತನವನ್ನು ವೈಭವೀಕರಿಸಿ ಹೊಗಳುವ ಸಲುವಾಗಿ ಹಾಕಿಸಿದ ಶಾಸನವನ್ನು ವೀರಶಾಸನ ಎಂಬುದಾಗಿ ಪರಿಗಣಿಸಬಹುದು.

ಈ ಹಿನ್ನೆಲೆಯಲ್ಲಿ ವೀರಗಲ್ಲುಗಳು ತಮ್ಮನ್ನು ವೀರಶಾಸನಗಳು ಎಂಬುದಾಗಿ ಕರೆದುಕೊಂಡಿರುವ ಔಚಿತ್ಯವನ್ನು ಇಲ್ಲಿ ಗಮನಿಸಬಹುದು. ತಮ್ಮ ಸಮಕಾಲೀನದಲ್ಲಿಯೇ ಇತರರಿಗೆ ಹಾಕಿಸುತ್ತಿದ್ದ ವೀರಗಲ್ಲುಗಳಿಗಿಂತ. ತಮ್ಮ ವೀರನ ವೀರಗಲ್ಲು ಪ್ರತ್ಯೇಕವಾದುವೆಂದು ಸಾರಲು ಈ ಪದದ ಪ್ರಯೋಗವನ್ನು ಮಾಡಲಾಗಿದೆ. ವೀರಶಾಸನಗಳೆಂದು ಕರೆದುಕೊಂಡಿರುವ ವೀರಗಲ್ಲುಗಳು ಸಾಮಾನ್ಯವಾಗಿ ವೀರನಿಗೆ ಬಿಟ್ಟ ದತ್ತಿಯ ವಿಷಯ ಮುಂತಾದವುಗಳ ಪ್ರಸ್ತಾಪವನ್ನು ಹೊಂದಿರುವುದಿಲ್ಲ. ಮತ್ತು ಅವು ಸಾಮಾನ್ಯವಾಗಿ ಪ್ರತಿಷ್ಠಿತ

---

೧೫೮ "ತಿಂತಿಣಿಯಾಗೆ ನೆಟ್ಟ ಕಣೆಯೊಳ್ ನೆಲಮುಟ್ಟದೆ ಮಯ್ಯೊಳತ್ತುಮಿ
ತ್ತ ತೆಱೆದಿರ್ದ ಪುಣ್ಗಳೆಸವಕ್ಕರದಂತಿರೆ ನೋಡಿ ಕಲ್ಲಿಮೆಂ
ಬಂತೆವೊಲಿರ್ದ ನಟ್ಟವಣೆ ಕೋಲ್ಗಳ ಮೇಲೆಸೆದಿರ್ದ ವೀರಸಿ
ದ್ಧಾಂತದ ಶಾಸನಂ ಬರೆದ ಪೊತ್ತಗೆಯಂತಮರಾಪಗಾತ್ಮಜಂ" ಪಂಪ :
ವಿಕ್ರಮಾರ್ಜುನ ವಿಜಯಂ ೧೧–೪೬

೧೫೯ ಜನ್ನ. ಅನಂತನಾತ ಪುರಣಂ ೧೧–೭೮ನೇ ಪದ್ಯದ ನಂತರದ ಗದ್ಯ ಭಾಗ.

ವ್ಯಕ್ತಿಗಳದ್ದೇ ಆಗಿರುತ್ತವೆ. ಮತ್ತೊಂದು ಗಮನಾರ್ಹ ಅಂಶವೆಂದರೆ ಇತರ ವೀರಗಲ್ಲುಗಳಿಗಿಂತ ಹೆಚ್ಚಿನ ಕವಿತಾಶೈಲಿ ನೈಪುಣ್ಯಗಳನ್ನು ಇವು ಹೊಂದಿರುತ್ತವೆ.[೧೩೦] ಆದರೆ ಈ ಮಾತು ಹದಿನಾಲ್ಕನೆಯ ಶತಮಾನದಲ್ಲಿ ತಮ್ಮನ್ನು ವೀರಶಾಸನಗಳು ಎಂದು ಕರೆದುಕೊಂಡಿರವು ವೀರಗಲ್ಲುಗಳಿಗೆ ಅನ್ವಯಿಸುವುದಿಲ್ಲ.

ಕಲ್ನಾಟು

ತಮಿಳು ಸಂಗಮ್ ಸಾಹಿತ್ಯದಲ್ಲಿನ ಕೆಲವು ಕೃತಿಗಳಿಂದ ವೀರಗಲ್ಲುಗಳ ಬಗ್ಗೆ ಅನೇಕ ರೀತಿಯ ಮಾಹಿತಿಗಳು ದೊರೆಯುತ್ತವೆ. ವೀರಗಲ್ಲನ್ನು ನೆಡುವ ಸಂಪ್ರದಾಯವನ್ನು ತಮಿಳುನಾಡಿನ ಜನ ಹೇಗೆ ಬೆಳೆಸಿಕೊಂಡರು ಎಂಬುದು ಈ ಮಾಹಿತಿಗಳಿಂದ ಸ್ಪಷ್ಟವಾಗುತ್ತದೆ. ಹೋರಾಟದಲ್ಲಿ ಸತ್ತವೀರರ ಸ್ಮಾರಕವಾಗಿ ನೆಡುವ ಶಿಲೆಯನ್ನು ಅವರು 'ನಾಟ್ಟುಕಲ್' ಎಂಬುದಾಗಿ ಕರೆಯುತ್ತಾರೆ. ಇಲ್ಲಿ 'ನಾಟ್ಟು' ಎಂಬುದು 'ನೆಟ್ಟ' (planted) ಎಂಬ ಅರ್ಥವನ್ನೂ 'ಕಲ್' ಎಂಬುದು 'ವೀರ್ಕಲು', 'ವೀರಸ್ಮಾರಕ' ಎಂಬ ಅರ್ಥವನ್ನೂ ಹೊಂದಿದೆ. ಅಂದರೆ ವೀರನ 'ಸ್ಮಾರಕವಾಗಿ ನಟ್ಟ ಕಲ್ಲು' = 'ವೀರಗಲ್ಲು' ಎಂಬುದಾಗಿ ಈ ಪದದ ಬಳಕೆಯ ಸನ್ನಿವೇಶದ ಆಧಾರದ ಮೇಲೆ ಅರ್ಥೈಸಬಹುದು. 'ಕಲ್ಲು' ಎಂಬುದು ಹೇಗೆ ವೀರಗಲ್ಲು ಎಂಬ ಅರ್ಥವನ್ನು ತನ್ನ ಬಳಕೆಯ ಪರಿಸರದ ಹಿನ್ನೆಲೆಯಲ್ಲಿ ಪಡೆದಿದೆ ಎಂಬುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ವೀರರ ಸ್ಮಾರಕ ಶಿಲೆಗಳನ್ನು ತಮಿಳುಕಾವ್ಯಗಳು 'ನಾಟ್ಟುಕಲ್' ಎಂಬುದಾಗಿಯೇ ಕರೆದಿವೆ. ಇದಕ್ಕೆ ಮತ್ತೊಂದು ಪರ್ಯಾಯ ಪದವನ್ನಾಗಲೀ, ಗುಣವಾಚಕವನ್ನಾಗಲೀ ಪ್ರಯೋಗಿಸಿಲ್ಲ. 'ತೊಲ್‌ಕಾಪ್ಪಿಯಂ' 'ಪುರ–ನಾನೂಱು' ಮತ್ತು 'ಪುರಪೋಱುಲ್' 'ವೆನ್ಬೆಮಾಲೈ' ಇವು ನಾಟ್ಟುಕಲ್ಲುಗಳ ಬಗ್ಗೆ ಬಹು ಮುಖ್ಯವಾದ ವಿಷಯಗಳನ್ನು ತಿಳಿಸುವ ಸಾಹಿತ್ಯ ಕೃತಿಗಳಾಗಿವೆ.[೧೩೧]

---

೧೩೦ (ಅ) E. C. I. Cg. 62, 1095
(ಆ) E. C. V. BI. 112
(ಇ) E. C. VIII. Sa. 110, 1292
(ಈ) S. I. I XX. 169, 1183
(ಉ) ಅದೇ. ೧೨೪, ೧೨೫, ೧೧೮೫

೧೩೧ Nagaswamy : Hero Stones of Tamil Nadu. J.I.H. Vol. LI. pt II ಪು. ೨೬೫

ಈ ಒಂದು ಹಿನ್ನೆಲೆಯಲ್ಲಿ ಕರ್ನಾಟಕದ ವೀರಗಲ್ಲುಗಳ ಶಾಸನಗಳಲ್ಲಿ ಉಲ್ಲೇಕವಾಗಿರುವ 'ಕಲ್ನಾಟು' ಎಂಬುದು ತಮಿಳಿನ 'ನಾಟ್ಟುಕಲ್' ಎಂಬ ಪದದ ಅರ್ಥವನ್ನು ಹೊಂದಿದೆಯೇ ಎಂಬುದನ್ನು ಪರಿಶೀಲಿಸಬೇಕು. ಈ ಹಿಂದೆ ಕಲ್ನಾಟುವಿನ ಬಗ್ಗೆ ವಾಖ್ಯಾನಮಾಡಿರುವ ವಿದ್ವಾಂಸರು 'ಕಲ್ನಾಟ್ಟು', 'ಕಲ್ನಾಡು' ಎಂಬುದನ್ನು ವೀರರಿಗೆ ಬಿಟ್ಟದತ್ತಿ ಎಂಬುದಾಗಿ ಅರ್ಥೈಸಿದ್ದಾರೆ. ಈ ದಿಶೆಯಲ್ಲಿ ವ್ಯಾಖ್ಯಾನಗಳಲ್ಲಿ ಡಾ ಎಂ. ಚಿದಾನಂದ ಮೂರ್ತಿ ಮತ್ತು ಡಾ. ಕೆ. ವಿ. ರಮೇಶ್ ಅವರ ವ್ಯಾಖ್ಯಾನಗಳನ್ನು ಪರಿಶೀಲಿಸುವುದು ಉಚಿತ. "ಸತ್ತ ವೀರನ ಮನೆಯವರಿಗೆ ಕೊಟ್ಟ ದತ್ತಿಯ ಮೇರೆಗಳನ್ನು ಸೂಚಿಸಲು ಕಲ್ಲುಗಳನ್ನು ನೆಡುತ್ತಿದ್ದರು. ಅದರಿಂದ ಆ ದತ್ತಿಯನ್ನು 'ಕಲ್ನಾಡು', 'ಕಲ್ನಾಟು', 'ಕಲ್ನಟ್ಟು' ಎಂದೇ ಕರೆಯುತ್ತಿದರು." "ಕಲ್ನಾಡು ಎಂಬಲ್ಲಿ ನಾಡು ಎಂಬುದು ಪ್ರದೇಶವನ್ನೂ, ಕಲ್ಲು ಎಂಬುದು ವೀರಗಲ್ಲನ್ನೂ ಸೂಚಿಸುವುದಿಲ್ಲವೆಂದು ಭಾವಿಸಬಹುದಾದ ಅದ ಗಡಿಯ ಕಲ್ಲುಗಳನ್ನೂ, ಗಡಿಗಲ್ಲುಗಳ ಒಳಗಿನ ಭೂಮಿಯನ್ನೂ, ದಾನವನ್ನೂ ಸೂಚಿಸುತ್ತದೆ. 'ನಾಡು' ಅಥವಾ 'ನಾಟ್ಟು' ಎಂಬುದು ನಡು (to errect, to plant) ಧಾತುವಿನ ಭಾವನಾಮ ತಮಿಳಿಯಲ್ಲಿ 'ನಾಟ್ಟ' ಎಂದರೂ 'ನಡು' ಎಂದರೂ ಒಂದೇ ಅರ್ಥ". ಎಂಬುದಾಗಿ ಡಾ. ಎಂ. ಚಿದಾನಂದ ಮೂರ್ತಿಯವರು ಅಬಿಪ್ರಾಯ ಪಡುತ್ತಾರೆ.[೧೫೨] ಡಾ. ಕೆ.ವಿ. ರಮೇಶ್ ಅವರು "ಹಲ್ಮಿಡಿ ಶಾಸನದ 'ಸಟ್ಬಜ್ಗದರ್' ಮತ್ತು ಬಾಳ್ಗಟ್ಟು" ಎಂಬ ಲೇಖನದ ಕೊನೆಯ ಭಗದಲ್ಲಿ, "ಕಾಲ ಕಳೆದಂತೆ 'ಬಾಳ್ಗ ಬಾಳ್ಗಟು' ಎಂಬೀ ಪದವು ಬಳಕೆ ತಪ್ಪಿ ಕಲ್ನಡು ಅಥವಾ ಕಲ್ನಾಡು ಅಥವಾ ಕಲ್ನಾಟ್ಟು, ರುಧಿರಮಾನ್ಯ, ರಕ್ತಮಾನ್ಯ, ನೆತ್ತರುಗೈ, ನೆತ್ತರುಕೊಡುಗೆ ಮುಂತಾದ ಪ್ರಯೋಗಗಳು ಕನ್ನಡ ಶಾಸನಗಳಲ್ಲಿ ಬಳಕೆಗೆ ಬಂದವು." ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.[೧೫೩]

ಮೇರೆಯನ್ನು ಸೂಚಿಸುವ ಕಲ್ಲುಗಳ ಪರಿಧಿಯೊಳಗಿನ ಭೂಮಿಯನ್ನು (ದತ್ತಿಯನ್ನು) 'ಕಲ್ನಾಡು' ಎಂದು ಕರೆಯುತ್ತಿದ್ದರು ಎಂಬ ಊಹೆ ಸಮಂಜಸವಲ್ಲದೆಂದು ತೋರುತ್ತದೆ ಏಕೆಂದರೆ, ವೀರರಿಗೆ ಬಿಟ್ಟ ದತ್ತಿಯ ವಿಷಯ ನಿರೂಪಣೆಯಲ್ಲಿ ಮಾತ್ರ ಈ 'ಕಲ್ನಾಟು'ವಿನ ಪ್ರಸ್ತಾಪ ಬರುತ್ತದೆ ; ಮುಖ್ಯವಾಗಿ ಸತ್ತ ವೀರನ ಮನೆಯವರಿಗೆ ಬಿಟ್ಟ ದತ್ತಿಯನ್ನು ಹೇಳುವಲ್ಲಿ ಮಾತ್ರ ಇದರ ಪ್ರಸ್ತಾಪ ಬರುತ್ತದೆ. ಯುದ್ಧದಲ್ಲಿ ಅಥವಾ ಇನ್ನಿತರ ಯಾವುದೇ

---

೧೫೨ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೩ – ೯೪

೧೫೩ ಕೆ. ವಿ. ರಮೇಶ : ಪ್ರಬುದ್ಧ ಕರ್ನಾಟಕ. ಸಂ. ೫೧–೩. ಪು. ೨೭

ಹೋರಾಟದಲ್ಲಿ ಗೆದ್ದು ಬಂದವರಿಗೆ ಬಿಟ್ಟ ದತ್ತಿಯನ್ನು ಹೇಳುವಲ್ಲಿ ಈ ಕಲ್ನಾಟುವಿನ ಪ್ರಸ್ತಾಪ ಆಕಸ್ಮಿಕವಾಗಿಯೂ ಬರುವುದಿಲ್ಲ ಎಂಬುದನ್ನು ಗಮನಿಸಬೇಕು. ವೀರರಿಗೆ ಬಿಡುತ್ತಿದ್ದ ದತ್ತಿಯನ್ನು ತಿಳಿಸುವ, ಸೂಚಿಸುವ ಪಾರಭಾಷಿಕಪದವಾಗಿ ಇದು ಬಳಕೆಯಲ್ಲಿದ್ದಿದ್ದರೆ ಗೆದ್ದು ಬಂದ ವೀರರಿಗೆ ಬಿಟ್ಟ ದತ್ತಿಯನ್ನು ಹೇಳುವಲ್ಲಿಯೂ ಇದರ ಪ್ರಸ್ತಾಪ ಬರಬೇಕಿತ್ತು. ಉದಾಹರಣೆಗೆ ದತ್ತಿಯನ್ನು ತಿಳಿಸುವ 'ನೆತ್ತರುಗ್ಗೈ' ಎಂಬ ಪಾರಿಭಾಷಿಕಪದ ಸತ್ತ ವೀರರಿಗೆ, ಗೆದ್ದುಬಂದ ವೀರರಿಗೆ ಬಿಡುತ್ತಿದ್ದ ದತ್ತಿಯನ್ನು ತಿಳಿಸುವ ಪಾರಿಭಾಷಿಕಪದವಾಗಿ ಬಳಕೆಯಲ್ಲಿದ್ದುದನ್ನು ಸ್ಮರಿಸಬೇಕು. ಇಲ್ಲಿ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ. ಬಿಟ್ಟ ದತ್ತಿಯನ್ನು ಸೂಚಿಸುವ ಸಲುವಾಗಿ ಹಾಕುತ್ತಿದ್ದ ಕಲ್ಲುಗಳ ನಡುವಿನ ಪ್ರದೇಶವನ್ನು 'ಕಲ್ನಟ' ಎಂದು ಕರೆದಿರುವ ಸಂಭ ಇದ್ದಿದ್ದರೆ, ಇತರೆಯವರಿಗೆ (ಉದಾಹರಣೆಗೆ ಬ್ರಾಹ್ಮಣರಿಗೆ) ದೇವಾಲಯಗಳಿಗೆ ಬಿಡುತ್ತಿದ್ದ ದತ್ತಿಗಳಿಗೂ ಮೇರೆಯ ಕಲ್ಲುಗಳನ್ನು ಹಾಕುತ್ತಿದ್ದರಲ್ಲವೆ ? ಹಾಗಾದರೆ ಅದನ್ನು ಏಕೆ 'ಕಲ್ನಟು' ಎಂಬುದಾಗಿ ಕರೆದಿಲ್ಲ ?

ಡಾ. ಕೆ. ವಿ. ರಮೇಶ್ ಅವರು ಭಾವಿಸುವಂತೆ 'ಕಲ್ನಾಟು' ಎಂಬುದು 'ಬಾಳ್ಗಟ್ಟು' ಎಂಬ ಪದ ಕೇವಲ ಯುದ್ಧದಲ್ಲಿ ಹೋರಾಡಿ ಗೆದ್ದ ಅಥವಾ ಸತ್ತ ವ್ಯಕ್ತಿಗಳಿಗೆ ಬಿಟ್ಟ ದತ್ತಿಯ ವಿಷಯವನ್ನು ಹೇಳುವಲ್ಲಿ ಮಾತ್ರ ಪ್ರಯೋಗವಾಗಿದೆ. ಶಾಸನಕಾರರು ಮರೆತೂ ಸಹ ಈ ಪದವನ್ನು ಇತರ ಹೋರಾಟಗಳಾದ ತುಱುಗೋಳ್, ಊರಳಿವು, ಬೇಟೆ, ಇಂಥ ಹೋರಾಟಗಳ ಮತ್ತು ದಾರಿಗಳ್ಳರೊಡನೆ ಹೋರಾಡಿ ಸತ್ತ ವೀರರ, ಧಾರ್ಮಿಕ ಅಥವಾ ರಾಜಕೀಯ ಸಂಬಂಧವಾಗಿ ಆತ್ಮಹತ್ಯೆ ಮಾಡಿಕೊಂಡ ವೀರರ ಪ್ರಸ್ತಾಪ ಮಾಡುವಾಗ ಪ್ರಯೋಗಿಸುವುದಿಲ್ಲ. ಆದರೆ ಒಂದು ಶಾಸನದಲ್ಲಿ ಈ ಎರಡೂ ಪದಗಳ ಬಳಕೆಯಾಗಿರುವುದು ಕುತೂಹಲಕಾರಿಯಾಗಿದೆ. ಪಿಟ್ಟುವೆಯ್ಯ ಬಾಳ್ಗಟ್ಟು ಕಲ್ನಾಟು' ಪಡೆದ ಎಂಬುದಾಗಿ ತಿಳಿಸುತ್ತದೆ.[೧೫೪] ಈ ಎರಡೂ ಪದಗಳ ಪ್ರಯೋಗದ ಸಂಭಾವ್ಯತೆಯನ್ನು ಈ ರೀತಿ ಸಮರ್ಥಿಸಬಹುದೆಂದು ತೋರುತ್ತದೆ. ಈ ಶಾಸನವನ್ನು ಬರೆದವನಿಗೆ ಈ ಎರಡೂ ಪದಗಳ ಅರ್ಥವ್ಯತ್ಯಾಸ ತಿಳಿಯದೆಯೂ ಇರಬಹುದು ಅಥವಾ ಈ ತುರುಗಾಳಗವು ಯಾವುದೋ ಯುದ್ಧದ ಆರಂಭದ ಆಕ್ರಮಣವಿದ್ದರೂ ಇರಬಹುದು.

'ಕಲ್ನಾಟು', 'ಕಲ್ನಾಡು' ಎಂಬ ಪಾರಿಭಾಷಿಕಪದ ಯಾವುದೇ ಹೋರಾಟವೊಂದರಲ್ಲಿ ಮಡಿದ ವೀರರ, ಆತ್ಮಹತ್ಯೆಗಳನ್ನು ವಿಶಿಷ್ಟಕಾರಣಗಳಿಗಾಗಿ ಮಾಡಿಕೊಂಡ ವ್ಯಕ್ತಿಗಳ

---

೧೫೪ E. C. XI. Hk. 85, 977. "ಅರಬಲ ಪೆರ್ವಳ್ಳಿಯ ಪಿಟ್ಟುವೆಯ್ಯ...... –ಜ್ಯವುಳ್ಳ ಬಾಳ್ಗಟ್ಟು ಕಲ್ನಾಟುಗೊಟ್ಟ."

ವೀರಗಲ್ಲುಗಳಲ್ಲಿ ಮಾತ್ರ ಪ್ರಯೋಗವಾಗಿದೆ ಎಂಬುದನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು.

ಕೆಲವಾರು ವೀರಗಲ್ಲುಗಳ ಪಾಠವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ 'ಕಲ್ನಾಟು' ಎಂಬ ಪದವನ್ನು 'ವೀರಗಲ್ಲು' ಎಂಬ ಅರ್ಥದಲ್ಲಿಯೇ ಪ್ರಯೋಗಿಸಿರುವ ಪ್ರಯೋಗಗಳು ದೊರೆಯುತ್ತವೆ.

"ಬಯ್ದಕೂರ ಮಾರೆಮ್ಮಗನಿಪರಾಮ ತುಱುವನಿಕ್ಕಿಸಿ ಅಟ್ಕಿ –
ಸತ್ತನವಂಗೆ ಕಲ್ನಾಟು"[೧೫೫]

ಶಿವಯ್ಯ, ತದ್ದಯ್ಯ ಎಂಬುವರು ಯುದ್ಧದಲ್ಲಿ ಸತ್ತಾಗ
"ಅವರ ಮಕ್ಕಳ್ ಕಲ್ನಾಟುಗೊಟ್ಟರ್"[೧೫೬]

ಎಂಬ ಶಾಸನೋಕ್ತ ಪ್ರಯೋಗಗಳು ಉಲ್ಲೇಖನೀಯ

ಎಱೆಯಂಗನೆಂಬುವನು ಸತ್ತಾಗ, ಗಂಗ ಅರಸ ಪೆರ್ಮಾಡಿ ಎಱೆಯಂಗನ ಮಗನಿಗೆ ಪೆರ್ಮಾಡಿಪಟ್ಟವನ್ನು ಕಟ್ಟಿ, ದತ್ತಿಯನ್ನು ಬಿಟ್ಟು, ಎಱೆಯಂಗನಿಗೆ ಕಲ್ನಾಟನ್ನು ನಿಲ್ಲಿಸುತ್ತಾನೆ ಎಂಬ ವಿಷಯವನ್ನು ತಿಳಿಸುವ ವೀರಗಲ್ಲಿನ ಪಾಠದ ಕೊನೆಯಲ್ಲಿ "ಎಱೆಯಂಗಂಗೆ ಕಲ್ನಾಡು ಮಹಾಶ್ರೀ" ಎಂಬುದಾಗಿದೆ.[೧೫೭] ಇಲ್ಲಿ ಕಲ್ನಾಡು ಎಂಬುದು ವೀರಗಲ್ಲು ಎಂಬ ಅರ್ಥದಲ್ಲಿ ಪ್ರಯೋಗವಾಗಿರುವುದು ಸ್ಪಷ್ಟವಾಗಿಯೇ ಇದೆ.

ಈ ಎಱೆಯಂಗನು ಮಡಿದನಂತರ ಅವನ ಪಟ್ಟವನ್ನು ಮಗನಿಗೆ ಕಟ್ಟಿರಬಹುದು. ನಾಗತ್ತರನು ಯುದ್ಧದಲ್ಲಿ ಸತ್ತಾಗ ಎಱೆಯಪ್ಪನು ನಾಗತ್ತರನ ಮಗನಾದ ಇರುಗನಿಗೆ ನಾಗತ್ತರಪಟ್ಟವನ್ನು ಕಟ್ಟಿ, "ಬೆಂಪೂರ್ಪ್ಪನ್ನೆರಡುಮಂ ಸಾಸನಬದ್ಧಂ ಕಲ್ನಾಡಿತ್ತ" ವಿಷಯವನ್ನು ಇಲ್ಲಿ ಸ್ಮರಿಸಬಹುದು.[೧೫೮] ಸಲಿಗಮಯನೆಂಬುವನು ಚೆಂಗಾಳ್ವನ ಮೇಲೆ ಯುದ್ಧಮಾಡಿ ಸಾಯುತ್ತಾನೆ. ಆಗ "ಅಯಂಗಳು" ಅವನ ಮನೆಯವರಿಗೆ ಗದ್ದೆಯನ್ನು ಬಿಟ್ಟು, 'ಕಲ್ಲುನಾಟ್ಟು ಸೋಬೆ' ಮಾಡುತ್ತಾರೆ.[೧೫೯]

---

೧೫೫ E. C. X. Mb. 203, 934

೧೫೬ E. C. V. Ag. 26, ಸು. ೧೦ ನೇ ಶತ.

೧೫೭ E. C. I. Cg. 97 ಸು. ೯ ನೇ ಶತ.

೧೫೮ E. C. IX. Bn. 83, 890

೧೫೯ E. C. XIV. YI. 98

ವೀರಗಲ್ಲುಗಳ ಪಾಠದ ಕೊನೆಯಲ್ಲಿ ವೀರಗಲ್ಲನ್ನು ಮಾಡಿದ ಶಿಲ್ಪಿಯ ಹೆಸರು ಅನೇಕ ವೀರಗಲ್ಲುಗಳ ಪಾಠದಿಂದ ತಿಳಿದು ಬರುತ್ತದೆ. ಇಂತಹ ಒಂದು ಶಾಸನದ ಪಾಠದಿಂದ "ಬಿನ್ನಾಚಾರಿ ಮಾಡಿದ ಕಲ್ನಾಡು" ಎಂಬ ಅಂಶ ತಿಳಿಯುತ್ತದೆ.[೧೬೦]

ಡಾ. ಎಂ. ಚಿದಾನಂದ ಮೂರ್ತಿಯವರು "ಇಂತಹ ದತ್ತಿಯನ್ನು ಹೇಳುವ ಶಾಸನವೊಂದರೆ ಆರಂಭದಲ್ಲಿ 'ಮೀನಂಗೆಱೆಯ ಕಲ್ನಟ ಮಂಗಳಂ' ಎಂದಿದೆ" – ಎಂಬುದಾಗಿ ತಿಳಿಸುತ್ತಾರೆ. ಅವರ ಅಭಿಪ್ರಯದಂತೆ ಮೀನಂಗೆಱೆಯ ದತ್ತಿಗೆ ಮಂಗಳವಾಗಲಿ ಎಂಬುದು ಅರ್ಥ. ಆದರೆ ಈ ಹಿಂದೆ ಗಮನಿಸಿರುವಂತೆ (ಎಱೆಯಂ ಗಂಗೆ ಕಲ್ನಾಡು ಮಹಾಶ್ರೀ) 'ವೀರಕಲ್ಲಿಗೆ ಮಂಗಳ' ಎಂಬುದು ಇದರ ಅರ್ಥವಿರಬಹುದು. ಅಂದರೆ ಮೀನಂಗೆಱೆಯಲ್ಲಿ ನೆಟ್ಟ ಈ ವೀರಕಲ್ಲಿಗೆ ಮಂಗಳ – ಎಂಬ ಶುಭವಾಚಕ ವಾಗಿರಬಹುದು.

ಮೇಲಿನ ಎಲ್ಲಾ ಉದ್ಧೃತಗಳನ್ನು ಗಮನಿಸಿದಾಗ ಎಲ್ಲಾ ಕಡೆಗಳಲ್ಲಿಯೂ ಕಲ್ನಾಡು ಎಂಬುದು 'ವೀರಗಲ್ಲು' ಎಂಬ ಅರ್ಥದಲ್ಲಿಯೇ ಪ್ರಯೋಗವಾಗಿರುವಂತೆ ಇದೆ. ಮೇಲೆ ಗಮನಿಸಿದ ತದ್ದಯ್ಯ ಮತ್ತು ಶಿವಯ್ಯ ಎಂಬುವರು ಸತ್ತಾಗ 'ಅವರ ಮಕ್ಕಳ್ ಕಲ್ನಾಟು ಗೊಟ್ಟರ್' ಎಂಬಲ್ಲಿಯೂ 'ಬಿನ್ನಚಾರಿ ಮಾಡಿದ ಕಲ್ನಾಡು' ಎಂಬಲ್ಲಿಯೂ ಅದು ವೀರಗಲ್ಲೇ ಎಂಬ ಅರ್ಥ ಮೂಡುತ್ತದೆ. ಇಲ್ಲಿ 'ಕಲ್ನಾಡು' ಎಂಬುದನ್ನು ದತ್ತಿ ಎಂಬುದಾಗಿ ಅರ್ಥೈಸಿದರೆ ಸತ್ತ ವ್ಯಕ್ತಿಗಳ ಮಕ್ಕಳು ಯಾರಿಗೆ, ಏಕೆ ಕಲ್ನಾಟು ಕೊಟ್ಟರು ಎಂಬುದು ಪ್ರಶ್ನೆಯಾಗುತ್ತದೆ. ತಮಿಳು ಶಾಸನವೊಂದರಲ್ಲಿ 'ಕಲ್ಲುನಾಟ್ಟು' ಎಂಬುದು ವೀರಗಲ್ಲು ಎಂಬ ಅರ್ಥದಲ್ಲಿಯೇ ಪ್ರಯೋಗವಾಗಿರುವುದನ್ನು ಗಮನಿಸಬಹುದು. ಕೇತನ್‌ಮಾಣಿಕ್ಕಚೆಟ್ಟಿ ಎಂಬುವವನು ಬೇಟೆಗೆ ಹೋಗಿ ಹುಲಿಯೊಡನೆ ಹೋರಾಡಿ ಸತ್ತನು. ಇದಕ್ಕಾಗಿ ಕೇತನ್‌ಮಾನಿಕ್ಕಚೆಟ್ಟಿಯ ಮಗನಾದ ಕೇತನ್‌ಮಶಣನ್ ತಮ್ಮ ತಂದೆಗೆ 'ಕಲ್ಲನಾಟ್ಟು' ಮಾಡಿದನು.[೧೬೧] ಇಲ್ಲಿ 'ಕಲ್ಲುನಾಟ್ಟು' ಎಂಬುದು ವೀರಗಲ್ಲು ಎಂದು ಸ್ಪಷ್ಟವಾಗಿದೆ.

ಕರ್ನಾಟಕದಲ್ಲಿ ದೊರೆಯುವ ಸುಮಾರು ಎಂಟನೆಯ ಶತಮಾನದ ನಂತರದ ಕನ್ನಡ ಮತ್ತು ತಮಿಳು ವೀರಗಲ್ಲುಗಳ ಪಾಠದ ಆಧಾರದ ಮೇಲೆ ಹೇಳುವುದಾದರೆ 'ವೀರಕಲ್' ಎಂಬ ಪದಕ್ಕೂ, 'ಕಲ್ನಾಟು', 'ಕಲ್ಲುನಾಟ್ಟು' ಎಂಬ ಪದಗಳಿಗೂ ಅರ್ಥ

---

೧೬೦ M. A. R.1928. No. 31. 1056

೧೬೧ EC. IV. Ko. 69, ೧೧ನೇ ಶತ. (ಹೊಸ ಆವೃತ್ತಿ)

ವ್ಯತ್ಯಾಸವಿರುವಂತೆ ಪ್ರಯೋಗಿಸಿರುವ ಅಂಶ ಕಂಡು ಬರುವುದಿಲ್ಲ. ಸತ್ತ ವ್ಯಕ್ತಿಗಳಿಗೆ 'ಕಲ್ನಾಡಿತ್ತರ್' ಎಂಬ ಪ್ರಯೋಗಗಳನ್ನು ಪಡೆದಿರುವ ಶಾಸನಗಳೆಲ್ಲ ಬಹುಪಾಲು ಶಿಲ್ಪವಿರುವ ವೀರಗಲ್ಲುಗಳೇ ಆಗಿವೆ ಎಂಬ ಅಂಶವನ್ನು ಮರೆಯಬಾರದು.

ತಮಿಳುಸಾಹಿತ್ಯ ಕೃತಿಗಳಲ್ಲಿ ಪದೇ ಪದೇ ಉಲ್ಲೇಖವಾಗುವ 'ನಾಟ್ಟುಕಲ್' ಎಂಬುದೇ ಕಾಲಾಂತರದಲ್ಲಿ ಕಲ್ಲುನಾಟ್ಟು, ಕಲ್ನಾಡು ಎಂದು ಆಗಿರಬಹುದು. ಈ ರೀತಿ ಪಲ್ಲಟವಾಗುವುದು ಒಂದು ಭಾಷೆಯ ಇತಿಹಾಸದಲ್ಲಿ ಸಾಮಾನ್ಯ ಅಂಶ.

ನಾಟ್ಟುಕಲ್ > ಕಲ್ಲುನಾಟ್ಟು > ಕಲ್ನಾಟ್ಟು > ಕಲ್ನಾಟು > ಕಲ್ನಾಡು

ಈ ಪದ ತಮಿಳಿನಿಂದಲೇ ಕನ್ನಡಕ್ಕೆ ಪಲ್ಲಟರೂಪವಾಗಿ ಬಂದಿರಬಹುದು ಅಥವಾ ಇದೇ ರೂಪದಲ್ಲಿ ಮೊದಲಿಂದಲೂ ಇರಬಹುದು. ಆದರೆ ಈ ಎರಡೂ ಪದಗಳ ಪ್ರಯೋಗಗಳನ್ನು ಗಮನಿಸಿದಾಗ ಇವುಗಳ ಅರ್ಥ ಒಂದೇ ಎಂಬುದು ಸ್ಪಷ್ಟವಾಗುತ್ತದೆ.

ಆರಂಭದ ಕೆಲವು ಶಾಸನಗಳಲ್ಲಿ 'ಕಲ್ನಾಡು' ಎಂಬುದು ವೀರಗಲ್ಲು ಎಂಬ ಅರ್ಥದಲ್ಲಿಯೇ ಬಳಕೆಯಾಗಿದ್ದು ಉಳಿದ ವೀರಗಲ್ಲುಗಳ ಪಾಠದಲ್ಲಿ 'ದತ್ತಿ' ಎಂಬ ಅರ್ಥ ಬರುವ ಹಾಗೆ ಪ್ರಯೋಗವಾಗಿರುವುದಕ್ಕೆ ಕಾರಣಗಳನ್ನು ಹೀಗೆ ನೀಡಬಹುದು. ಬ್ರಾಹ್ಮಣರಿಗೆ ಅಗ್ರಹಾರಗಳನ್ನು ದತ್ತಿಬಿಡುವಾಗ ತಾಮ್ರಶಾಸನದೊಂದಿಗೆ ದತ್ತಿಯನ್ನು ನೀಡುತ್ತಿದ್ದಂತೆಯೇ, ಯಾವುದೇ ಹೋರಾಟದಲ್ಲಿ ಮಡಿದವೀರನ ಮನೆಯವರಿಗೆ ದತ್ತಿಯನ್ನು ನೀಡುವಾಗ, ವೀರನ ಸ್ಮಾರಕಶಿಲೆಯ ಮೇಲೆಯೇ ದತ್ತಿಯವಿವರಗಳನ್ನು ಬರೆಯುತ್ತಿದ್ದರು. ಈ ಅಂಶ [ಬೇಗೂರಿನ ವೀರಗಲ್ಲಿನಿಂದ ಹೆಚ್ಚು ಸ್ಪಷ್ಟವಾಗುತ್ತದೆ. ನಾಗತ್ತರನಕಲ್ನಾಡು ನಿಲ್ಲಿಸುವ ಎಱೆಯಪ್ಪನು ನಾಗತ್ತರನ ಮಗನಾದ ಇರುಗನಿಗೆ 'ಶಾಸನಬದ್ಧಂ ಕಲ್ನಾಡಿತ್ತನ್' ಎಂಬುದಾಗಿ ತಿಳಿಯುತ್ತದೆ. ಈ ವಾಕ್ಯವನ್ನು ಎಱೆಯಪ್ಪನು ಇರುಗನಿಗೆ ಅವನ ತಂದೆಯ ವೀರಗಲ್ಲಿನಲ್ಲಿಯೇ (ಕಲ್ನಾಡಿನಲ್ಲಿಯೇ) ದತ್ತಿಯ ವಿವರಗಳನ್ನು ಬರೆಯಿಸಿ ಕೊಟ್ಟ ಎಂಬುದಾಗಿ ಅರ್ಥೈಸಬೇಕಾಗುತ್ತದೆ. ಸತ್ತವೀರರಿಗೆ ಬಿಡುತ್ತಿದ್ದ ದತ್ತಿಯ ವಿವರಗಳು, ಸತ್ತ ವ್ಯಕ್ತಿಯ ಮಕ್ಕಳು ಪಡೆದ ದತ್ತಿಯ ವಿವರಗಳನ್ನೇ ಹೊಂದಿರುವುದರಿಂದ ಅವುಗಳನ್ನು ಕಲ್ನಾಡುದತ್ತಿ ಎಂಬುದಾಗಿ ಕರೆದಿರುವುದೂ ಉಂಟು. ಚಾಗಿಪೆರ್ಮಾಡಿಕುಲಧಾರಿ ಎಂಬ ವೀರನಿಗೆ ಬಿಟ್ಟ 'ಕಲ್ನಾಡುದತ್ತಿ' ಎಂಬುದಾಗಿ ಒಂದು ಶಾಸನ ತಿಳಿಸುತ್ತದೆ.[೧೭] ಇಲ್ಲಿ

---

೧೭ M. A. R.1923. No. 38

ಒಂದು ಅಂಶ ಸ್ಪಷ್ಟವಾಗಬೇಕು. ಸತ್ತವೀರನ ಸ್ಮಾರಕವಾಗಿ ಕಲ್ಲನ್ನು ನೆಟ್ಟು, ಆನಂತರದಲ್ಲಿ ಸತ್ತ ವೀರನ ಮನೆಯವರಿಗೆ ದತ್ತಿಯನ್ನು ಬಿಡುತ್ತಿದ್ದರು. ಇದಕ್ಕೆ ಪೋಷಕವಾಗಿ ವೀರಗಲ್ಲುಗಳ ಪಾಠದಲ್ಲಿಯೇ 'ಕಲ್ನಾಡು' ಎಂಬ ಪದ ಬರುವುದನ್ನು ವಿಶೇಷವಾಗಿ ಗಮನಿಸಬೇಕು. ಆದ್ದರಿಂದ ಕಲ್ನಾಡು ಬಿಟ್ಟ ಎಂದರೆ ವೀರಗಲ್ಲಿನೊಂದಿಗೆ ದತ್ತಿಯನ್ನೂ ನೀಡಿದ ಎಂಬ ಅರ್ಥವನ್ನು ಅದು ಕಾಲಾನುಕ್ರಮದಲ್ಲಿ ಹೊಂದಿರಬೇಕು.

ಈ ಕಲ್ನಾಡು ಎಂಬ ಪದ ಪ್ರಯೋಗವಾಗಿರುವ ಪ್ರದೇಶಗಳನ್ನೂ, ಕಾಲವನ್ನೂ ಗುರುತು ಮಾಡುವುದು ತುಂಬ ಅವಶ್ಯಕವಾಗುತ್ತದೆ. ಈ ಪದದ ಬಳಕೆ ಸಾಮಾನ್ಯವಾಗಿ ಬಾಣರು, ಗಂಗರು, ನೊಳಂಬರು, ಚೋಳರು, ಕೆಲವೊಮ್ಮೆ ರಾಷ್ಟ್ರಕೂಟರ ಶಾಸನಗಳಲ್ಲಿ ಪ್ರಯೋಗವಾಗಿದೆ. ಈ ಅರಸುಮನೆತನಗಳ ವ್ಯಾಪ್ತಿಯಿದ್ದ ಕೋಲಾರ, ಬೆಂಗಳೂರು, ತುಮಕೂರು, ಕೊಡಗು, ಮೈಸೂರು, ಹಾಸನ ಮುಂತಾದ ಪ್ರದೇಶಗಳ ಶಾಸನಗಳಲ್ಲಿ ಈ ಪದದ ಬಳಕೆಯಿದೆ. ಸುಮಾರು ಹನ್ನೊಂದನೆಯ ಶತಮಾನದನಂತರ ಈ ಪದ ಬಳಕೆಯಲ್ಲಿಲ್ಲ.

ವೀರಸ್ತಂಭ – ಕಂಭ

ಕರ್ನಾಟಕದ ವೀರಗಲ್ಲುಗಳಲ್ಲಿ ಕಂಭ, ವೀರಸ್ತಂಭ ಮುಂತಾದ ಪ್ರಯೋಗಗಳು ದೊರೆಯುತ್ತವೆ.[೧೬೩]

ಇದು ಬಹುಶಃ ಛಾಯಾಸ್ತಂಭ ಎಂಬ ಪದದ ಅಪಭ್ರಂಶವಿರಬಹುದೆಂದು ತೋರುತ್ತದೆ. ಈ ಛಾಯಾಸ್ತಂಭಗಳ ಬಗ್ಗೆ ಸ್ವಲ್ಪ ವಿವರವಾಗಿ ಇಲ್ಲಿ ಪರಿಶೀಲಿಸಿದರೆ ಅಪ್ರಸ್ತುತವಾಗಲಾರದು.

ನಾಗಾರ್ಜುನಕೊಂಡದಲ್ಲಿ ಹಲವಾರು ಛಾಯಾಸ್ತಂಭಗಳು ದೊರೆತಿವೆ. ಸ್ಮಾರಕಶಿಲೆಗಳ ಇತಿಹಾಸವನ್ನು ಗುರುತಿಸುವಲ್ಲಿ ಇವುಗಳು ಮಹತ್ವದ ಸಂಗತಿಗಳನ್ನು ಒದಗಿಸುತ್ತವೆ. ಇವೇ ಭಾರತದಲ್ಲಿ ದೊರೆತಿರುವ ಅತಿಪ್ರಾಚೀನ ಸ್ಮಾರಕಶಿಲೆಗಳಾಗಿವೆ. ಇವುಗಳೆಲ್ಲವೂ ಬಿಳಿಯಕಲ್ಲಿನಿಂದ ಮಾಡಿದ ಕಂಬಗಳೇ. ಈ ಶಿಲೆಗಳನ್ನು ಅಭ್ಯಾಸ ಮಾಡಿರುವ ಶ್ರೀ ಹೆಚ್.

---

೧೬೩ M. A. R.1938. No. 8. ೧೩ನೇ ಶತ. E. C. XI. CI. 42. 1403

ಸರಕಾರ್ ಅವರು ಇವು ವಿಶಿಷ್ಟವಾದ ವ್ಯಕ್ತಿಗಳಿಗೆ ಸ್ಮಾರಕವಾಗಿ ನಿಲ್ಲಿಸಲ್ಪಟ್ಟಂಥವು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಈ ವಿಶಿಷ್ಟ ವ್ಯಕ್ತಿ ವೀರನೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಅರಸ, ರಾಣಿ, ದಂಡಾಧಿಪತಿ ಅಥವಾ ಯೋಧರು, ಧಾರ್ಮಿಕಗುರು, ಕಲಾವಿದ ಯಾರೇ ಆಗಿರಬಹುದು.[೧೬೪] ಸುಮಾರು ಕ್ರಿ.ಶ. ೫೫೦ರ ಒಂದು 'ಛಾಯಾಸ್ತಂಭ' ಗೋಗ್ರಹಣದಲ್ಲಿ ಶಿವದಾಸ ಎಂಬುವವನು ಮಾಡಿದ ಪ್ರಸ್ತಾಪ ಮಾಡುತ್ತದೆ.[೧೬೫] ಶಿವದಾಸನು ಸತ್ತಾಗ ಅವನ ತಂದೆಯಾದ ಆಚಾರ್ಯ ಎಂಬುವನು 'ಛಾಯಾಸ್ತಂಭ' ನಿಲ್ಲಿಸುತ್ತಾನೆ.

ಡಾ. ಕೆ. ವಿ. ರಮೇಶ್ ಅವರು ಸನ್ನತಿಯ ಬಿಳಿಯ ಬೆಳ್ವಾಡಿಗಿ ಎಂಬಲ್ಲಿ ಒಂದು ಬ್ರಾಹ್ಮೀಲಿಪಿಯ ಪ್ರಾಕೃತಶಾಸನವು ಆ ಕಲ್ಲಿನ ಮೇಲೆ ಕೆತ್ತಿರುವ ಚಿತ್ರವು ಕಲಕ ಎಂಬಾತನ 'ಛಾಯಾಪಡಿಮೆ' ಅಂದರೆ, 'ಛಾಯಾ ಪ್ರತಿಮೆ' ಎನ್ನುತ್ತದೆ ಎಂದು ತಿಳಿಸಿದ್ದಾರೆ.[೧೬೬]

ಮತ್ತೆ ಕೆಲವು ವೀರಗಲ್ಲುಗಳಲ್ಲಿ ವೀರಗಲ್ಲುಗಳನ್ನು 'ಬಾಟಿಸಾಸನದ ಕಲ್ಲು,' 'ಬೀರಲಿಂಗ,' 'ಸಾಂಗತ್ಯದ ಕಲ್ಲು' ಎಂಬುದಾಗಿ ಕರೆದಿರುವುದೂ ಕಂಡು ಬರುತ್ತದೆ.[೧೬೭]

ಕೊಡಗಿನಲ್ಲಿ ವೀರಗಲ್ಲುಗಳನ್ನು ಕೊಲೆಕಲ್ಲುಗಳೆಂದು ಕರೆಯುತ್ತಾರೆ.[೧೬೮] ಆದರೆ ಈ ಬಗ್ಗೆ ಲಿಖಿತ ಆಧಾರಗಳು ದೊರೆಯುವುದಿಲ್ಲ.

ನಿಷಿಧಿ ಕಲ್ಲುಗಳು ಎಂದರೆ ಜೈನಧರ್ಮದ ಪರವಾಗಿ ವ್ರತವನ್ನು ಕೈಕೊಂಡು, ಧಾರ್ಮಿಕ ಆತ್ಮಹತ್ಯೆಯನ್ನು ಮಾಡಿಕೊಂಡ ವ್ಯಕ್ತಿಗಳ ಸ್ಮಾರಕಶಿಲೆಗಳು ಎಂಬ ಅರ್ಥವಿತ್ತು. ಆದರೆ ಒಂದು ವೀರಗಲ್ಲಿನ ಪಾಠದಿಮದ ಅದನ್ನು 'ನಿಷಿಧಿಕಲ್ಲು' ಎಂಬುದಾಗಿ ಕರೆದಿರುವುದನ್ನು ಗುರುತಿಸಬಹುದು. ವ್ಯಕ್ತಿಯೊಬ್ಬನು ಹೋರಾಟದಲ್ಲಿ ಸತ್ತಾಗ ಆತನ ತಮ್ಮನು ಸತ್ತ ತನ್ನ ಅಣ್ಣನಿಗೆ ನಿಷಿಧಿಯನ್ನು ನಿಲ್ಲಿಸುತ್ತಾನೆ.[೧೬೯] ಇದು ಕುತೂಹಲದ ಸಂಗತಿ. ಈ ವೀರಗಲ್ಲಿನ ಶಿಲ್ಪದ ವಿವರಗಳು ಯಾವ ರೀತಿ ಇದೆಯೋ ತಿಳಿಯದು. ಆ ವಿವರಗಳನ್ನು

---

೧೬೪ H. Sarkar : 'Chaya Stambhas from Nagarjunakonda'. Seminor on Hero Stones : Ed. Nagaswamy. ಪು. ೯೩

೧೬೫ E. I. XXXVI. ಪು. ೨೦೭ –೨೦೮

೧೬೬ ಕೆ. ವಿ. ರಮೇಶ್ : ಕರ್ನಾಟಕ ಶಾಸನಸಮೀಕ್ಷೆ ಪು. ೩೮

೧೬೭ S. I. I. IX.pt. I. No. 29, 963. "ಬಾಟಿ ಶಾಸನದ ಕಲ್ಲು".
E.C.VII. Sk. 69, 1061 "ಯಿಾ ಬೀರಲಿಂಗಕ್ಕೆ ಹೊಲಭಾವಿ ಕಳೆ ಕೊಟ್ಟರು."
E.C.VIII. Sb. 167, 1454. .... 'ಸಾಂಗತ್ಯದ ವೀರಕಲ್ಲು'.

೧೬೮ ಡಿ. ಎನ್. ಕೃಷ್ಣಯ್ಯ : ಕೊಡಗಿನ ಇತಿಹಾಸ. ಪು. ೨೮ (೧೯೭೪)

೧೬೯ M. A. R.1928. No. 60

ಪರಿಶೀಲಿಸಿದ ಹೊರತು ಏನೊಂದನ್ನೂ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಈ ಪದಪ್ರಯೋಗವನ್ನು ಪಾಠವನ್ನು ಸಿದ್ಧಪಡಿಸಿದವನು ಗಮನಿಸದೆ ಅಥವಾ ತಿಳಿಯದೆ ಹೀಗೆ ತಪ್ಪು ಮಾಡಿರಬೇಕು ಅಥವಾ ಸತ್ತ ಕಾಮಗವುಡನು ಜೈನಧರ್ಮದ ಅನುಯಾಯಿ ಯಾಗಿದ್ದರೂ ಇರಬಹುದು. ಈ ಎರಡನೆಯ ಊಹೆಯೇ ಹೆಚ್ಚು ಸಂಭವನೀಯವೆಂದು ತೋರುತ್ತದೆ ಏಕೆಂದರೆ ವೀರಗಲ್ಲುಗಳ ಶಿಲ್ಪವನ್ನು ಗಮನಿಸಿದಾಗ ಜೈನಧರ್ಮೀಯ ನದಾಗಿದ್ದರೆ, ಅವನು ಜಿನನ ಬಳಿ ಕುಳಿತಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿರುತ್ತದೆ. ಬಹುಶಃ ಈ ಅರ್ಥದಲ್ಲಿ ನಿಷಿಧಿ ಎಂಬುದನ್ನು ಪ್ರಯೋಗಿಸಿರಬಹುದು.

ಇಲ್ಲಿಯವರೆಗೂ ವ್ಯಕ್ತಿಯೊಬ್ಬನ ಸ್ಮಾರಕವನ್ನು ಗಮನಿಸಿದೆವು. ವೀರನೊಬ್ಬನು ಸತ್ತಾಗ ಆತನ ಹೆಂಡತಿಯಾದವಳು ಸಹಗಮನ ಮಾಡುತ್ತಿದ್ದುದು ಸರ್ವವಿದಿತವಾದ ಸಂಗತಿ. ಇಂತಹ ಸಂದರ್ಭಗಳಲ್ಲಿ ವೀರನಿಗೆ ಮತ್ತು ಮಹಾಸತಿಯಾದ ಅವನ ಹೆಂಡತಿಗೆ ಸಾಮಾನ್ಯವಾಗಿ ಒಂದೇ ಶಿಲೆಯನ್ನು ಸ್ಮಾರಕವಾಗಿ ನೆಡುತ್ತಿದ್ದರು. ಈ ರೀತಿಯ ವೀರಗಲ್ಲುಗಳನ್ನು 'ಬೀರಗಲ್ಲು', 'ವೀರಗಲ್ಲು,' 'ಬೀರಗಲ್ಲುಮಾಸ್ತಿ' ಎಂಬುದಾಗಿ ಕರೆಯಲಾಗಿದೆ.[೧೭೦]

---

೧೭೦ (ಅ) E. C. VIII. Sa. 47, "ರಾಮಂಣನು ಅಯಿಸೂರ ಹುಯಲಿ ಬಿದನು ಆತನ ಮದವಳಿಗೆ ರಾಮಾಯಿ ವೀರಮಾಸ್ತಿ".

(ಆ) S. I. I.XX. No. 356. 13, ೧೪ನೇ ಶತ.

೪. ವೀರಗಲ್ಲುಗಳ ವಿಂಗಡಣೆ

ಅಭ್ಯಾಸದ ದೃಷ್ಟಿಯಿಂದ ವೀರಗಲ್ಲುಗಳ ವಿಂಗಡಣೆ ಮಾಡುವಲ್ಲಿ ಅರಸುಮನೆತನಗಳನ್ನು ಗಮನದಲ್ಲಿಟ್ಟುಕೊಳ್ಳುವುದಕ್ಕಿಂತಲೂ ಹೋರಾಟಗಳು ಪ್ರಭೇಧಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತವೆಂದು ತೋರುತ್ತದೆ. ವೀರನಾದವನು ಯಾವುದೇ ರೀತಿಯ ವೀರಕೃತ್ಯದಲ್ಲಿ ಮಡಿದಿರಬಹುದು. ಆ ಕೃತ್ಯದ ಘಟನೆಯ ಸಂಪೂರ್ಣ ಚಿತ್ರವನ್ನು ಪುನಾರಚಿಸಬೇಕಾದರೆ, ಕರ್ನಾಟಕದಲ್ಲಿ ಕಾಲದಿಂದ ಕಾಲಕ್ಕೆ ಆದ ಬದಲಾವಣೆಗಳನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಹೀಗೆ ಮಾಡುವಲ್ಲಿ ಸುಮಾರು ಆರನೆಯಶತಮಾನದಿಂದ ಈ ಶತಮಾನದವರೆಗೆ ದೊರೆಯುವ ಎಲ್ಲಾ ವೀರಗಲ್ಲುಗಳನ್ನೂ ಗಮನಿಸಿದ್ದೇವೆ. ನಮ್ಮ ಅಧ್ಯಯನಕ್ಕೆ ಯಾವ ಪ್ರದೇಶವನ್ನೂ ಸೀಮಿತಗೊಳಿಸಿಕೊಂಡಿಲ್ಲ. ಕನ್ನಡ ಭಾಷೆಯ ಶಾಸನಗಳು ಎಲ್ಲಾದರೂ ದೊರೆಯಲಿ – ಅವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ.

ವೀರರಸಾವಿಗೆ ಕಾರಣವಾದ ಅವರ ವೀರಕೃತ್ಯಗಳನ್ನು ಗಮನದಲ್ಲಿಟ್ಟುಕೊಂಡು ವೀರರಗುಂಪನ್ನು ಹೀಗೆ ವಿಭಾಗಿಸಬಹುದು.

೧. ಕಳ್ಳರೊಡನೆ ಹೋರಾಡಿ ಮಡಿದ ವೀರರು
೨. ಪೆಣ್ಬುಯ್ಯಲಿನಲ್ಲಿ ಮಡಿದ ವೀರರು
೩. ಸೀಮಾ ಸಂಬಂಧದ ಕಾಳಗದಲ್ಲಿ ಮಡಿದ ವೀರರ
೪. ಊರಳಿವು –ಊರಹುಯ್ಯಲಿನಲ್ಲಿ ಸತ್ತ ವೀರರು
೫. ನೀರಲ್ಲಿ ಸತ್ತ ವೀರರು
೬. ಬೇಟೆಯಲ್ಲಿ ಸತ್ತ ವೀರರು
೭. ತುರುಗಾಳದಲ್ಲಿ ಸತ್ತ ವೀರರು
೮. ಯುದ್ಧದಲ್ಲಿ ಸತ್ತ ವೀರರು.

ಇಲ್ಲಿ ಒಂದು ಘಟನೆಯ ಅಥವಾ ವೀರಕೃತ್ಯದ ಸಂಪೂರ್ಣ ಚಿತ್ರವನ್ನು ಪುನಾರಚಿಸುವುದು ಎಂಬದಾಗಿ ಹೇಳುವಾಗ, ವೀರರ ಮನೋಧರ್ಮವನ್ನೂ ಅವರ ಹೋರಾಟದ ರೀತಿ, ನೀತಿ, ನಿಯಮ, ಸಾಧನೆ, ಮಾರ್ಗ, ಮುಂತಾದ ಎಲ್ಲಾ ಅಂಶಗಳನ್ನೂ ಗುರುತಿಸುತ್ತೇವೆ ಎಂದರ್ಥ.

ಕಳ್ಳರೊಡನೆ ಹೋರಾಡಿ ಮಡಿದ ವೀರರು

ಈ ವೀರರ ಗುಂಪನ್ನು ಎರಡು ರೀತಿಗಳಲ್ಲಿ ವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡುವುದು ಸೂಕ್ತ.

೧. ದಾರಿಕಳ್ಳರೊಡನೆ ಹೋರಾಡಿ ಮಡಿದ ವೀರರು

೨. ಊರಿನ ಮೇಲೆ ಕಳ್ಳತನಕ್ಕಾಗಿ ಬಂದ ಕಳ್ಳರೊಡನೆ ಹೋರಾಡಿದ ವೀರರು

ಈ ರೀತಿ ವಿಭಾಗ ಮಾಡಿಕೊಳ್ಳುವಲ್ಲಿನ ಮುಖ್ಯ ಉದ್ದೇಶವೆಂದರೆ ಪ್ರಾಚೀನ ಕರ್ನಾಟಕದ ಸಮಾಜವನ್ನು ಅಧ್ಯಯನ ಮಾಡುವುದು. ಮೊದಲನೆಯ ವಿಭಾಗದಿಂದ, ಕರ್ನಾಟಕದ ಪಥಪದ್ಧತಿಯ ಒಂದು ಚಿತ್ರ ದೊರೆತರೆ, ಎರಡನೆಯ ವಿಭಾಗದಲ್ಲಿ ಅಂದಿನ ಗ್ರಾಮಗಳ ರಕ್ಷಣೆಯ ಒಂದು ಪರಿಚಯ, ಆಡಳಿತ ವ್ಯವಸ್ಥೆಯ ರೂಪ–ರೇಷೆಗಳು, ಜನರ ಸಾಮಾಜಿಕ ಪ್ರಜ್ಞೆಯೂ ಸ್ಪಷ್ಟವಾಗುತ್ತದೆ.

ದಾರಿಗಳ್ಳರೊಡನೆ ಹೋರಾಡಿ ಮಡಿದ ವೀರರು

ಪ್ರಾಚೀನಕರ್ನಾಟಕದ ಪಥಪದ್ಧತಿಯನ್ನು ವಿವರವಾಗಿ ಅಧ್ಯಯನ ಮಾಡುವುದು ನಮ್ಮ ಉದ್ಧೇಶವಲ್ಲ. ವೀರಗಲ್ಲುಗಳಿಂದ ಈ ಬಗ್ಗೆ ತಿಳಿದುಬರುವ ಮಾಹಿತಿಯ ಮೂಲಕ ಒಂದು ಚಿತ್ರವನ್ನು ರಚಿಸುವ ಪ್ರಯತ್ನ ನಮ್ಮದು.

ದಾರಿಕಳ್ಳರ ಹಾವಳಿಯು ಅನಾದಿಕಾಲದಿಂದಲೂ ಇದ್ದ ಒಂದು ಸಮಸ್ಯೆ ಎಂಬುದು ಭಾರತೀಯ ಸಾಹಿತ್ಯಕೃತಿಗಳನ್ನು ಅವಲೋಕಿಸಿದಾಗ ತಿಳಿಯುತ್ತದೆ. "ಬಹುಶಃ ಕ್ರಿಪೂ. ೫ನೆಯ ಶತಕದ ಬೌದ್ಧ ಸಾಹಿತ್ಯದಿಂದ ಪ್ರವಾಸಿಗಳ ಬಗ್ಗೆ ಬಹಳಷ್ಟು ಸಮಾಚಾರವು ದೊರೆಯುತ್ತದೆ. ಪ್ರಯಾಣಗಳಲ್ಲಿ ವರ್ತಕವರ್ಗವಲ್ಲದೆ ಸಾಧು–ಸನ್ಯಾಸಿಗಳು, ತೀರ್ಥಯಾತ್ರಿಗಳು, ಸಂಚಾರಿಗಳು,

ಕುದುರೆ ವ್ಯಾಪಾರಿಗಳು, ಆಟಗಾರರು, ಹಾಸ್ಯಗಾರರು, ಓದುವ ವಿದ್ಯಾರ್ಥಿಗಳೂ, ಓದಿಯಾದ ನಂತರ ದೇಶಪರ್ಯಟನಕ್ಕಾಗಿ ಹೊರಡುವ ಚಾರಕ ಎಂಬ ವಿದ್ವಾಂಸರು ಮೊದಲಾದ ಎಲ್ಲ ಬಗೆಯ ಜನರೂ ಇದ್ದರು. ಜನಮಾರ್ಗಗಳ ನಿರ್ಮಾಣ ಮತ್ತು ಸುರಕ್ಷಿತತೆಯ ವಿಷಯವಾಗಿಯೂ ಸಾಕಷ್ಟು ಲಕ್ಷ್ಯವನ್ನು ಕೊಡುತ್ತಿದ್ದರು. ಆದರೂ ಬಗೆಬಗೆಯ ಕಳ್ಳಕಾಕರು ಮಾರ್ಗಗಳಲ್ಲಿ ಅವರಿಗೆ ಗಂಟು ಬೀಳುತ್ತಿದ್ದರು. ಅಂಥ ಕಳ್ಳಕಾಕರರನ್ನು ಪಂಥಘಾತಕ ಅಥವಾ ಪರಿಪಾಥಿಗಳು ಎನ್ನುತ್ತಿದ್ದರು. (ಪಾಣಿನೀ ಸೂತ್ರ. ೪/೪/೩೬ ಪರಿಪಂಥಮ್ ಚಿತಿಷ್ಠತಿ) ಪಾಣಿನೀ ಸೂತ್ರ ೫/೨/೮೯ ರ ಟೀಕೆಯಲ್ಲಿರುವ ಪ್ರಾಚೀನ ವೈದಿಕ ಪ್ರಾರ್ಥನೆಯು ಉದಾಹರಣೆಯಾಗಿ ದೊರೆಯುತ್ತದೆ. 'ಮಾತಾs ಪಂಥನೋವಿದನ್' ಅಂದರೆ 'ದೇವರ ದಯೆಯಿಂದ ಮಾರ್ಗದಲ್ಲಿ ದಾರಿಗಳ್ಳರು ನಿನ್ನನ್ನು ಸಂದಿಸೆಇರಲಿ.' ಸಾರ್ಥಗಳ ರಕ್ಷಣೆಯ ಹೊಣೆಯು ಸಾರ್ಥವಾಹಗಳ ಮೇಲೆಯೂ ಇರುತ್ತಿತ್ತು – ಮತ್ತು ತಮ್ಮ ಪರವಾಗಿ ಅವರ ಕಾಪಿನವರ ಏರ್ಪಾಟನ್ನೂ ಇಟ್ಟಿರುತ್ತಿದ್ದರು. ಕಾಡಿನೊಳಗಿಂದ ಸಾಗುವಾಗ್ಗೆ ಅರಣ್ಯ ವಿಭಾಗದ ಪ್ರಮುಖರು ಕೂಡ ಸಂರಕ್ಷಣೆಯ ಭಾರವನ್ನು ತುಸು ಹಣವನ್ನು ಕೊಟ್ಟರೆ ವಹಿಸಿಕೊಳ್ಳುತ್ತಿದ್ದರಾದುದರಿಂದ, ಅವರಿಗೆ 'ಅಟವೀಪಾಲ' ಎನ್ನುತ್ತಿದ್ದರು."[೧]

ವೈದಿಕ, ಜೈನ, ಬೌದ್ಧ ಸಾಹಿತ್ಯಕೃತಿಗಳಿಂದ, ವ್ಯಾಪಾರಿಗಳನ್ನು ದಾರಿಗಳ್ಳರು ಅಡ್ಡಗಟ್ಟಿ ಅವರ ಸಂಪತ್ತನ್ನು ದೋಚಿ, ಅವರನ್ನು ಕೊಂದುಹಾಕುತ್ತಿದ್ದ ವಿವರಣೆಗಳು ದೊರೆಯುತ್ತವೆ.[೨] ಬೌದ್ಧಧರ್ಮದ ಅಧ್ಯಯನಕ್ಕಾಗಿ ಬಂದಿದ್ದ ಹ್ಯೂಯನ್‌ತ್ಸಾಂಗ್‌ನೂ ದಾರಿಗಳ್ಳರಿಂದ ತೊಂದರೆಯನ್ನು ಅನುಭವಿಸಿದಂತೆ ಅವನ ಪ್ರವಾಸಕಥನದಿಂದ ತಿಳಿದುಬರುತ್ತದೆ. "ಚೆಹ್–ಕಾ ದೇಶದ ಗಡಿಯನ್ನು ಮುಟ್ಟುವ ಮುನ್ನ ನಾವು ದರೋಡೆಕಾರರ ಕೈಗೆ ಸಿಕ್ಕಿಕೊಂಡೆವು. ಐವತ್ತುಜನ ದರೋಡೆಕಾರರು ನನ್ನ ಮತ್ತು ನನ್ನ ಸಂಗಡಿಗರ ಬಟ್ಟೆ ಬರೆಗಳನ್ನು ಕಿತ್ತುಕೊಂಡು, ನಮ್ಮನ್ನು ವಧೆಮಾಡಲು ಯತ್ನಿಸಿದರು. ಇದನ್ನು ನೋಡಿದ ಹೊಲ ಉಳುತ್ತಿದ್ದ ಬ್ರಾಹ್ಮಣನೊಬ್ಬ ಉಳುವುದನ್ನು ಬಿಟ್ಟು ಊರೊಳಕ್ಕೆ ಓಡಿಹೋಗಿ ಶಂಖ ಊದಿ ತಮಟೆ ಬಡಿದು ಜನಗಳನ್ನೆಲ್ಲಾ ಸೇರಿಸಿದನು. ಅವರು ದರೋಡೆಕಾರರ ಕಡೆ ನುಗ್ಗಿ ಅವರನ್ನು ಓಡಿಸಿ, ನಮ್ಮನ್ನು ಬಿಡುಗಡೆ ಮಾಡಿದರು. ನಮಗೆ ಅವರಲ್ಲಿದ್ದ ಬಟ್ಟೆಗಳನ್ನು ಕೊಟ್ಟು ಊರಿಗೆ ಕರೆದುಕೊಂಡು ಹೋದರು" ಎಂದು ತನ್ನ ಅನುಭವದ ಬಗ್ಗೆ ಬರೆಯುತ್ತಾನೆ – ಹ್ಯೂಯನ್‌ತ್ಸಾಂಗ್.[೩] ಇದು ಪ್ರಾಚೀನ ಭಾರತದಲ್ಲಿನ ದಾರಿಗಳ್ಳರ ಒಂದು ಸ್ಥೂಲ ಪರಿಚಯ.

---

೧ ಮೋತಿಚಂದ್ರ : ಸಾರ್ಥವಾಹ (ಹಿಂದಿ ಮೂಲ : ಕನ್ನಡ ಅನುವಾದ : ಎಚ್. ಎನ್. ಪಾಟೀಲ) ಪು. ix

೨ ಅದೇ. ಪು. ೫೭, ೭೨, ೨೨೭

೩ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ. ಭಾ.೧, ಪು. ೨೧೪

ಕರ್ನಾಟಕದ ಪಥಪದ್ಧತಿಯ ಬಗ್ಗೆ ಕಾವ್ಯಗಳಿಂದಲೂ ಸ್ವಲ್ಪ ಮಾಹಿತಿ ದೊರೆಯುತ್ತದೆ. ವಡ್ಡಾರಾಧನೆಯಲ್ಲಿನ ಭದ್ರಬಾಹು ಭಟ್ಟಾರರ ಕಥೆಯಲ್ಲಿ ದಾರಿಗಳ್ಳರ ಪ್ರಸ್ತಾಪ ಬರುತ್ತದೆ.[೪] ಹಾಗಯೇ ನಯಸೇನನ ಧರ್ಮಾಮೃತದಲ್ಲಿನ ವಸುಭೂತಿಯ ಕಥೆಯಲ್ಲಿಯೂ ದಾರಿಗಳ್ಳರ ಪ್ರಸ್ತಾಪ ಬರುತ್ತದೆ.[೫] ಆದರೆ ಅವುಗಳ ಎಷ್ಟರಮಟ್ಟಿಗೆ ಸಮಕಾಲೀನ ಅಂಶಗಳನ್ನೊಳಗೊಂಡಿವೆ ಎಂಬುದನ್ನು ವಿಮರ್ಶಿಸಬೇಕಾಗುತ್ತದೆ. ಆದ್ದರಿಂದ ಪ್ರಾಚೀನ ಕರ್ನಾಟಕದ ಪಥಪದ್ಧತಿಯ ಬಗ್ಗೆ ಮಾಹಿತಿ ಕೊಡುವುದರಲ್ಲಿ ವೀರಗಲ್ಲುಗಳ ಮಹತ್ವ ಗಮನಾರ್ಹವಾದುದು. ಈ ವೀರಗಲ್ಲುಗಳಲ್ಲಿನ ವೀರರು ದಾರಿಕಳ್ಳರೊಡನೆ ಹೋರಾಡಿ ಮಡಿದವರು. ಆದ್ದರಿಂದ ಪಥಪದ್ಧತಿಯ ಚಿತ್ರವನ್ನು ಪುನಾರಚಿಸುವಲ್ಲಿ ಇವು ನೈಜಸಂಗತಿಗಳನ್ನು ನೀಡುತ್ತವೆ. ಎಲ್ಲಾ ವೀರಗಲ್ಲುಗಳಲ್ಲಿಯೂ ಮಡಿದ ವ್ಯಕ್ತಿ ಏಕೆ ಪ್ರವಾಸ ಮಾಡುತ್ತಿದ್ದ ಎಂಬ ವಿವರಣೆಯನ್ನು ನೀಡಿಲ್ಲ. ಆದ್ದರಿಂದ ಇಲ್ಲಿ ದಾರಿಗಳ್ಳರೊಡನೆ ಹೋರಾಡಿ ಮಡಿದ ವೀರರನ್ನು ಅವರ ಪ್ರವಾಸದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ವಿವರವಾಗಿ ಅಧ್ಯಯನ ಮಾಡುವುದು ಉಚಿತವೆಂದು ನಮ್ಮ ಅಭಿಪ್ರಾಯ. ಏಕೆಂದರೆ ಯಾವುದೋ ನಿಮಿತ್ತವಾಗಿ ಪ್ರವಾಸ ಮಾಡುವವರು ದಾರಿಗಳ್ಳರ ಬಗ್ಗೆ ಎಚ್ಚರದಿಂದಿದ್ದರೂ, ಅವರೊಡನೆ ಹೋರಾಡಲು ಪೂರ್ವಸಿದ್ಧತೆಯನ್ನು ಹೊಂದಿರುವುದಿಲ್ಲ. ಆದರೆ ವ್ಯಾಪಾರವನ್ನೇ ತಮ್ಮ ಉದ್ದೇಶವನ್ನಾಗಿಟ್ಟು ಪ್ರವಾಸ ಮಾಡುತ್ತಿದ್ದವರು, ದಾರಿಗಳ್ಳರನ್ನು ಎದುರಿಸಲು ಪೂರ್ವಸಿದ್ಧತೆ ಮಾಡಿಕೊಂಡೇ ಹೋಗುತ್ತಿದ್ದರು.

ಯಾವುದೋ ಕಾರಣಕ್ಕಾಗಿ ಪ್ರವಾಸ ಹೋಗಿ ದಾರಿಗಳ್ಳರೊಡನೆ ಹೋರಾಡಿ ಸತ್ತವರು

ಕಾಳಗೌಡನ ಮಗ ಕಲ್ಲಣ್ಣ ಎಂಬುವನು ಮಾರ್ಗದಲ್ಲಿ ಹೋಗುತ್ತಿರುವಾಗ ಕಳ್ಳರು ಬಂದು ಅವನ ಮೇಲೆ ಎರಗುತ್ತರೆ. ಆಗ ಅವನು "ಪೊಗಳ್ತೆಗಂ ನೆಗರ್ತ್ತೆಗಂ ನೆಲೆಯಾಗಿ ಕಾದಿ" ಮಡಿಯುತ್ತಾನೆ.[೬] ಬಿದಿರೆಯ "ಗಲುಗವುಡ" ಎಂಬುವನು "ತಂಮ ಪೊಡೆಯ ನಲ್ಲಂಣಗಳ ಆಪಾದವ ಕಾಣಲೆಂದೂಜೆಂಗೆ ಹೋಹ ದಾರಿಯಲ್ಲಿ ಕಳ್ಳರು ತಾಗಿ" ಮಡಿದ ವಿಷಯವನ್ನು

---

೪ ಶಿವಕೋಟ್ಯಾಚಾರ್ಯ : ವಡ್ಡಾರಾಧನೆ. 'ಭದ್ರಬಾಹುಭಟ್ಟಾರರ ಕಥೆ'.

೫ ನಯಸೇನ : ಧರ್ಮಾಮೃತ. 'ವಸುಭೂತಿಯ ಕಥೆ'

೬ E. C. VIII. Sb. 445, 975 ?

ಕ್ರಿಶ. ೧೧೭೩ ವೀರಗಲ್ಲು ತಿಳಿಸುತ್ತದೆ.[೭] ಹೆಂಮಾಡಿಗೌಡ "ಕೊಡಗಿನ ನಾಡಿಗೆ ಹೋಗಿ ಬಹಲ್ಲಿ ಸೊಸೆವೂರ ಬಲ್ಲಹೆಗ್ಗಡೆ ಎಂಬುವನೊಂದಿಗೆ ಹೋರಾಡಿ ಮಡಿದ ವಿಷಯ ವೀರಗಲ್ಲೊಂದರಲ್ಲಿದೆ.[೮] ಬೋಲಿಯನಾಯಕ ಎಂಬುವನು ಲಿಂಗದಹಳ್ಳಿಯಘಟ್ಟದಲ್ಲಿ ಮದುವೆಯಾಗಿ ಬರುತ್ತಿರುವಲ್ಲಿ ಕಳ್ಳರೊಡನೆ ಹೋರಾಡಿ ಮಡಿದನೆಂದು ಕ್ರಿಶ. ೧೨೭೭ರ ವೀರಗಲ್ಲು ತಿಳಿಸುತ್ತದೆ.[೯] ಎರಗನಹಳ್ಳಿಯ ಚಿಕ್ಕತಮ್ಮ ಎಂಬುವನು ಬೆಟ್ಟದಲ್ಲಿ ಅಸಹಾಯಶೂರನಾಗಿ ಕೊಡಲಿಯಿಂದ ಕಳ್ಳರೊಡನೆ ಹೋರಾಡಿ ಅವರನ್ನು ಕೊಂದು ತಾನೂ ಸಾಯುತ್ತಾನೆ.[೧೦] ಬೊಮ್ಮರಸಗೌಡನು ಸೊರಬಕ್ಕೆ ಹೋಗಿ ಬರುವಾಗ ಕಳ್ಳರ ಕೂಡ ಹೋರಾಡಿ ಮಡಿಯುತ್ತಾನೆ.[೧೧] ಮಾದಣ್ಣನವರಮಗ ಮಾದಪ್ಪ ಮತ್ತು ಹಿರಿಯನಾಡಪ್ರಭು ತಲೆಮಲೆಗೆ ಹೋಗುತ್ತಿದ್ದರು. ಆಗ ಹಂದಿಗನಹಳ್ಳಿಯಘಟ್ಟದಲ್ಲಿ ನಲವತ್ತುಜನ ಕಳ್ಳರು ಬಂದು ಅವರನ್ನು ತಾಗಿದಾಗ, ತನ್ನೊಡೆಯನ ಪ್ರಾಣವನ್ನು ಕಾದು ತಾನು ವೀರಸ್ವರ್ಗವನ್ನು ಪಡೆದ ಮಾದಪ್ಪನ ವಿಷಯ ವೀರಗಲ್ಲೊಂದರಲ್ಲಿದೆ.[೧೨]

ಈ ಎಲ್ಲಾ ಶಾಸನಗಳಿಂದ ವ್ಯಕ್ತವಾಗುವ ಅಂಶವೆಂದರೆ, ಸಾಮಾನ್ಯವಾಗಿ ಅರಣ್ಯಮಾರ್ಗಗಳಲ್ಲಿ ದಾರಿಗಳ್ಳರು ಅವಿತುಕೊಂಡಿದ್ದು ಪ್ರಯಾಣಿಕರ ಮೇಲೆ ಧಾಳಿ ಮಾಡುತ್ತಿದ್ದರು ಎನ್ನುವುದು. ಕನಕದಾಸರ ಕೀರ್ತನೆಯೊಂದರಲ್ಲಿ ದಾರಿಗಳ್ಳರು ದಾರಿಯಲ್ಲಿ ಕಲ್ಲು, ದೊಣ್ಣೆಗಳನ್ನು ಹಿಡಿದುಕೊಂಡು ಅವಿತುಕೊಳ್ಳುತ್ತಿದ್ದರು ಎಂಬ ಅಂಶ ತಿಳಿಯುತ್ತದೆ.[೧೨a] ಇವರು ಕೆಲವೊಮ್ಮೆ ಗುಂಪುಗುಂಪುಗಳಾಗಿ ಇರುತ್ತಿದ್ದರೆಂದು ಹೇಳಬಹುದು. ಇದಕ್ಕಿಂತಲೂ ಹೆಚ್ಚಿಗೆ ಹೇಳುವುದು ಊಹೆಯಾಗುತ್ತದೆ. ಬಯಲುಸೀಮೆಗಿಂತ ಘಟ್ಟ ಮತ್ತು ಬೆಟ್ಟಗಳಿರುವ ಪ್ರದೇಶಗಳಲ್ಲಿ ದಾರಿಗಳ್ಳರೊಡನೆ ಹೋರಾಡಿ ಮಡಿದವರ ವೀರಗಲ್ಲುಗಳು ಹೆಚ್ಚು ದೊರಕಿವೆ. ಆದುದರಿಂದ ಈ ದಾರಿಗಳ್ಳರು ಆ ಪ್ರದೇಶಗಳಲ್ಲಿ ಹೆಚ್ಚಾಗಿ ಇರುತ್ತಿದ್ದರೆಂದು ಕಾಣುತ್ತದೆ.

---

೭ E. C. VI. Kd. 73, 1173

೮ E. C. VI. Cm. 4, 1184

೯ M. A. R.1940. 23, 1277

೧೦ S. I. I.IX. Pt. 1. 420, 1308

೧೧ E. C. VIII. Sb. 78, 1457

೧೨ M. A. R.1938. 60, ಸು. ೧೪ನೇ ಶತಮಾನ

೧೨a ಕನಕದಾಸರ ಕೀರ್ತನೆಗಳು. (ಸಂ.) ಬಿ. ಶಿವಮೂರ್ತಿಶಾಸ್ತ್ರೀ ; ಡಾ. ಕೆ.ಎಂ. ಕೃಷ್ಣರಾವ್. ಪು. ೪೯– ೫೦

ವ್ಯಾಪಾರಕ್ಕಾಗಿ ಹೋಗಿ ದಾರಿಗಳ್ಳರನ್ನು ಎದುರಿಸಿ ಮಡಿದವರು

ಕೊಣಂಗೇರಿಯ ಹಾರುವ ಬಮ್ಮಿ ಸೆಟ್ಟಿಯ ಮಗ ಸೋವಿಸೆಟ್ಟಿ ಎಂಬುವನು ಬಡಗಲು "ಬ್ಯವಹಾರಕ್ಕಾಗಿ ಬರುವಲ್ಲಿ ಅಂಣಿಗೇರಿಯ ಹೊಲದಲು ಕಾಕಳ್ಳರು" ತಾಗಿದಾಗ ಅವರೊಡನೆ ಹೋರಾಡಿ ಸಾಯುತ್ತಾನೆ.[೧೩] ಹನಿಯೂರಿನ ಸಂತೆಗೆ ಹೋಗಿ ಬರುತ್ತಿರಬೇಕಾದರೆ 'ಶಾಉರಂಣ' ಎಂಬುವನು ಕಳ್ಳರೊಡನೆ ಹೋರಾಡಿ ಸಾಯುತ್ತಾನೆ.[೧೪] 'ಸಿವಯ್ಯ' ಎಂಬುವನು ವ್ಯಾಪಾರಕ್ಕೆಂದು 'ಕಡಹದ ದಾರಿ'ಯಲ್ಲಿ ಹೋಗುತ್ತಿರಬೇಕಾದರೆ ಕಳ್ಳರು ಅವನ ಮೇಲೆ ಧಾಳಿಮಾಡುತ್ತಾರೆ. ಆಗ ಅವರನ್ನು ಎದುರಿಸಿ ಸಿವಯ್ಯನು ಸಾಯುತ್ತಾನೆ.[೧೫] ಈಸೋಗೆಯ ಮಲ್ಲಸೆಟ್ಟಿಯಮಗ ದೇವಂಣನು ಉಭಯಗಟ್ಟದ ಸಾಳಗೆ ಬರುವಾಗ ಕಳ್ಳರು ಅವನ ಮೇಲೆ ಬಿದ್ದಾಗ ಅವರಲ್ಲಿ ಕೆಲವರನ್ನು ಕೊಂದು ತಾನೂ ಸಾಯುತ್ತಾನೆ.[೧೬] 'ಶ್ರೀಮತ್ ರಾಜಸೆಟ್ಟಿಯಮಗ ದುಗ್ಗಣ ಎಂಬುವನು ಹರಿಹರಕ್ಕೆ ಹೋಗಿ ಬರುತ್ತಿದ್ದಾಗ 'ನಿಟ್ಟೂರ ಹಾರಿವಾಳಡೆದಯಣಗೊಡ್ಡಿಸಾಲದಲಿ 'ಬಟ್ಟೆಯ ಕಳ್ಳರನ್ನು ತಾಗಿ ಅವರೊಂದಿಗೆ ಹೋರಾಡಿ ಸಾಯುತ್ತಾನೆ.[೧೭] ಬಾಳದಂತಿ ಸೆಟ್ಟಿಯ ಮಗ ಆಲಪ್ಪ ಎಂಬುವನು ಸಾವಂದಿಯ ದಾರಿಯಲ್ಲಿ ಕಳ್ಳರೊಡನೆ ಹೋರಾಡಿ ಸತ್ತನು.[೧೮]

–ಇವು ವ್ಯಾಪಾರಕ್ಕಾಗಿ ಹೋದ ಸಂದರ್ಭದಲ್ಲಿ ಹೋರಾಡಿ ಮಡಿದ ವೀರರ ವೀರಗಲ್ಲುಗಳು. ಇವುಗಳ ಪಾಠದಿಂದ ಸಾಕಷ್ಟು ಮಾಹಿತಿ ದೊರೆಯುವುದಿಲ್ಲ. ವ್ಯಾಪಾರಕ್ಕಾಗಿ ಹೋದಾಗ ಇವನೊಬ್ಬನೇ ಹೋಗಿದ್ದನೇ ? ಜೊತೆಗೆ ಯಾರೂ ಹೋಗಿರಲಿಲ್ಲವೆ ? ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರೆಯುವುದಿಲ್ಲ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿರುವಂತಹ ಶ್ರೇಣಿ ಎಂಬುದು ಕರ್ನಾಟಕದಲ್ಲತ್ತೆ ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಡಾ. ಎಂ. ಚಿದಾನಂದಮೂರ್ತಿಯವರು ಆ ಬಗ್ಗೆ ಈ ರೀತಿ ಬರೆಯುತ್ತಾರೆ : "ಇಲ್ಲಿ ಅನೇಕ ವರ್ತಕಶ್ರೇಣಿ ಇದ್ದುದೇನೋ ನಿಜ. ಅವುಗಳ ವ್ಯಾಪಾರವು ಕರ್ನಾಟಕದಗಡಿ ವ್ಯಾಪಿಸಿತ್ತು. ಎನ್ನುವುದರಲ್ಲಿ ಸಂದೇಹವಿಲ್ಲ. ಕಳ್ಳರ ಭಯವಿದ್ದ ಆ ಕಾಲದಲ್ಲಿ

---

೧೩ K. I. V. 18, 1176
೧೪ E. C. IX. Kn. 64, 1281
೧೫ M. A. R.1928. No. 96
೧೬ E. C. VII. Sk. 215, 1158
೧೭ E. C. VII. HI. 85, 1189
೧೮ E. C. IX. Ma. 13, 1340

ವ್ಯಾಪಾರಿಗಳ ಜೊತೆಯಲ್ಲಿ ಸೈನಿಕರೂ ಇದ್ದಿರಬೇಕು. ಒಬ್ಬೊಬ್ಬ ವರ್ತಕನೂ ಪ್ರತ್ಯೇಕವಾಗಿ ಸೇನೆಯನ್ನು ನೇಮಿಸಿಕೊಂಡಿರುವುದು ಅಸಂಭವ. ಈ ಕೆಲಸವನ್ನು ವರ್ತಕಶ್ರೇಣಿಯು (Merchant guild) ಕೈಗೊಂಡಿರಬಹುದು. ಅಷ್ಟೇ ಅಲ್ಲ. ವರ್ತಕರೇ ಸ್ವತಃ ಶೂರರಾಗಿದ್ದರು. ಯುದ್ಧಶಿಕ್ಷಣವನ್ನು ಪಡೆದಿದ್ದ ಅವರೇ ಮುಂದೆ ನುಗ್ಗಿ ಕಳ್ಳರ ಕೈಯಲ್ಲಿ ಹೋರಾಡುವ ಸಾಮರ್ಥ್ಯವನ್ನು ಪಡೆದಿದ್ದರು. ಅನೇಕ ಶಾಸನಗಳು ಅವರ ವ್ಯಾಪಾರ ಕೌಶಲದ ಜೊತೆಗೆ ದೈಹಿಕಪರಾಕ್ರಮವನ್ನೂ ಹೊಗಳುತ್ತವೆ. ಅವರನ್ನು 'ವೀರಬಣಂಜು'ಗಳೆಂದೇ ಶಾಸನಗಳು ಕರೆಯುತ್ತವೆ. ಅವರಿಗೇ ಪ್ರತ್ಯೇಕವಾದ ಧ್ವಜಗಳು, ಲಾಂಛನಗಳು ಇದ್ದುವು. ಸರಿಯಾಗಿ ಅರ್ಥವಾಗದ ಶಾಸನವೊಂದರಲ್ಲಿ ವರ್ತಕ ಕುಲದ ಪಂದಿಮಿರಿಯನ್ ಎಂಬುವವನನ್ನು ಯುದ್ಧರಂಗದಲ್ಲಿ ಎದುರಿಸಿದವನು ತನ್ನ ತಲೆ ಕಳೆದುಕೊಳ್ಳುವನೆಂದು ಹೇಳಿದೆ. ನಯಸೇನನ ಧರ್ಮಾಮೃತದಲ್ಲಿ (೧–೨೦೭) ಬರುವ ಒಂದು ಕಥೆಯಲ್ಲಿ ವರ್ತಕರನ್ನು ಕಳ್ಳರು ಬಂದು ತಾಗಿದಾಗ ವರ್ತಕರ ಸೈನ್ಯವು ಕಳ್ಳರೊಡನೆ ಹೋರಾಟವನ್ನು ನಡೆಯಿಸಿದ ಅಂಶವು ಗಮನಾರ್ಹವಾದುದು. ವರ್ತಕರು ಕಳ್ಳರ ಧಾಳಿಗೆ ಸಿಕ್ಕಿದಂತೆ ಯಾವ ಶಾಸನದಲ್ಲಿಯೂ ಹೇಳಿಲ್ಲ. ಅವರ ವ್ಯಾಪಾರಕ್ಕೆ ಕಳ್ಳರಿಂದ ಧಕ್ಕೆಯೊದಗಿದಂತೆ ಎಲ್ಲಿಯೂ ಕಂಡುಬಂದಿಲ್ಲ. ಅವರು ಸೇನೆಯನ್ನು ಹೊಂದಿದ್ದರು ಎನ್ನುವುದು ಇದರಿಂದ ಸೂಚಿತ ವಾಗುತ್ತದೆಯೆ ? ಯುದ್ಧ ಸಮಯದಲ್ಲಿ ಅವರು ರಾಜನಿಗೆ ತಮ್ಮ ಸೇನೆಯನ್ನು ಒಪ್ಪಿಸುತ್ತಿದ್ದರೆಂದು ಭಾವಿಸಬಹುದೆ ? ಇಂತಹ ವರ್ತಕರ ಸೇನೆಯಲ್ಲಿ ಬರಿಯ ಪದಾತಿಗಳೇ ಇರಬೇಕಾಗಿಲ್ಲ."[೧೯] ಚಿದಾನಂದಮೂರ್ತಿಯವರು ಈ ಅಭಿಪ್ರಾಯವನ್ನು ಇಲ್ಲಿಯವರೆಗೆ ಪ್ರಕಟವಾಗಿರುವ ಕ್ರಿಶ. ೪೦೦ ರಿಂದ ೧೧೫೦ರವರೆಗಿನ ಶಾಸನಗಳನ್ನು ಅವಲಂಬಿಸಿ ಹೇಳಿದ್ದಾರೆ. ಕ್ರಿಶ. ೧೧೫೦ರ ನಂತರದ ಶಾಸನಗಳಲ್ಲಿ, ವಿಶೇಷವಾಗಿ ವೀರಗಲ್ಲುಗಳಿಂದ ವ್ಯಾಪಾರಕ್ಕಾಗಿ ಹೋಗಿ ದಾರಿಗಳ್ಳರನ್ನು ಎದುರಿಸಿ ಸತ್ತವರನ್ನು ಗುರುತಿಸಬಹುದು.

ಮೇಲೆ ಗುರುತಿಸಿದ ವೀರಗಲ್ಲುಗಳ ಪಾಠವನ್ನು ಹೋಲುವ ಈ ದಾರಿಗಳ್ಳರ ಪ್ರಸ್ತಾಪ ವಡ್ಡಾರಾಧನೆಯಲ್ಲಿ ಬರುತ್ತದೆ. ವ್ಯಾಪಾರಿಗಳು ತಮ್ಮ ವ್ಯಾಪಾರಸಾಮಗ್ರಿಗಳನ್ನು ಬಂಡಿಗಳ ಮೇಲೆ ಹೇರಿಕೊಂಡು ಪಟ್ಟಣಗಳಿಗೆ ಹೋಗಿ ಮಾರಾಟ ಮಾಡಬೇಕೆಂದು ಹೋಗುತ್ತಿರುವಾಗ ದಾರಿಗಟ್ಟಿದ ದಾರಿಕಳ್ಳರು ವ್ಯಾಪಾರಿಗಳ ಎತ್ತು, ವ್ಯಾಪಾರ ಸಾಮಗ್ರಿಗಳನ್ನು ಅಪಹರಿಸಿದರು. ಹೀಗೆ ಮಾಡುವಾಗಿ ಕೆಲವರು ವ್ಯಾಪಾರಿಗಳು ಸತ್ತರು ; ಮತ್ತೆ ಕೆಲವರು ಓಡಿಹೋದರು.[೨೦] ವಡ್ಡಾರಾಧನೆಯಲ್ಲಿ ಬರುವ

---

೧೯ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೮ – ೬೯

೨೦ ಶಿವಕೋಟ್ಯಾಚಾರ್ಯ : ವಡ್ಡಾರಾಧನೆ. ಪು. ೭೬

ಈ ಪ್ರಯಾಣಿಕರು ವರ್ತಕಶ್ರೇಣಿಯವರಾಗಿರದೆ, ಸಾಮಾನ್ಯ ರೀತಿಯ, ಎರಡನೆಯ ದರ್ಜೆಯ ವ್ಯಾಪಾರಿಗಳಾಗಿದ್ದರೆಂದು ತೋರುತ್ತದೆ. ಮೊದಲ ದರ್ಜೆಯ ಅಯ್ಯಾವೊಳೆಅಯ್ನೂರರಂತಹವರು ಸೈನಿಕರನ್ನು ಇಟ್ಟುಕೊಂಡಿರುತ್ತಿದ್ದರು. ಇಂಥ ರಕ್ಷಣಾ ವ್ಯವಸ್ಥೆಯನ್ನು ಪಡೆದಿದ್ದ ವರ್ತಕಶ್ರೇಣಿಗಳಿಗೆ ಕಳ್ಳಕಾಕರಿಂದ ಬಹುಶಃ ತೊಂದರೆಯಾಗುತ್ತಿರಲಿಲ್ಲವೆಂದು ತೋರುತ್ತದೆ. ಸಣ್ಣಪುಟ್ಟ ವ್ಯಾಪಾರಿಗಳಿಗೆ ಆಗಾಗ ಕಳ್ಳಕಾಕರಿಂದ ತೊಂದರೆಯುಂಟಾಗುತ್ತಿತ್ತೆಂದು ತೋರುತ್ತದೆ.

ಈ ಮೇಲೆ ಗಮನಿಸಿರುವ ದೇವಣ್ಣ – ದುಗ್ಗಣ, ಮತ್ತು ಆಲಪ್ಪನ ವೀರಗಲ್ಲುಗಳಲ್ಲಿ[೨೧] 'ಮಗ' ಎಂಬ ಪದ ಯಾವ ಅರ್ಥದಲ್ಲಿ ಪ್ರಯೋಗವಾಗಿದೆ ಎಂಬುದರ ಬಗ್ಗೆ ಸಂಶಯ ಬರುತ್ತದೆ. ಕರ್ನಾಟಕದ ಇತರೇ ಶಾಸನಗಳಲ್ಲಿ ಪ್ರಯೋಗವಾಗಿರುವ 'ಮನೆಮಗ' ಎಂಬ ಅರ್ಥದಲ್ಲಿಯೇ 'ಮಗ' ಪದವನ್ನು ಇಲ್ಲಿಯೂ ಪ್ರಯೋಗ ಮಾಡಿರಬಹುದು ಎಂದೆನ್ನಿಸುತ್ತದೆ.[೨೨] ಈ ಅಭಿಪ್ರಾಯಕ್ಕೆ ಮುಖ್ಯ ಕಾರಣವೆಂದರೆ ವ್ಯಕ್ತಿಗಳ ಹೆಸರುಗಳು. 'ಶ್ರೀಮತ್ ರಾಜಸೆಟ್ಟಿಯರಮಗ ದುಗ್ಗಣಂ', ಮತ್ತು 'ಬಾಲದಂತಿಸೆಟ್ಟಿಯಮಗ ಆಲಪ್ಪನು' ಎಂಬಲ್ಲಿನ 'ದುಗ್ಗಣ', 'ಆಲಪ್ಪ' ಎಂಬ ಹೆಸರುಗಳು ಅವರು ವರ್ತಕಲ್ಲವೆಂಬುದನ್ನು ಸೂಚಿಸುತ್ತಿರುವಂತಿದೆ. ಹಾಗೆಯೇ 'ರಾಜಸೆಟ್ಟಿ', 'ಬಾಳದಂತ ಸೆಟ್ಟಿ' ಎಂಬುವು ವ್ಯಾಪಾರಿಗಳ ಹೆಸರನ್ನು ಸೂಚಿಸುತ್ತವೆ ಎಂಬುದು ಇಲ್ಲಿ ಮುಖ್ಯ. ಈ ವಿಷಯದ ತೀರ್ಮಾನದಲ್ಲಿ ಕ್ರಿ.ಶ. ೧೧೮೦ರ ಒಂದು ವೀರಗಲ್ಲಿನ ಪಾಠ ನಮ್ಮ ನೆರವಿಗೆ ಬರುತ್ತದೆ. "ಸಾಯಿರದ ನಾಳ್ಪ್ರಭು, ವಡ್ಡ ವ್ಯವಹಾರಿಯಡವಿಗೊಡೆಯ, ಹೊಯ್ಸಳಗೋವಿಸೆಟ್ಟಿಯರ ಸುಪುತ್ರ ಕಲ್ಲಿಸೆಟ್ಟಿಯಕುವರ ಬಲ್ಲಗಾವುಂಡನಾವೂರ ತುಱುವ" ರಕ್ಷಿಸುವಲ್ಲಿ ಹೋರಾಡುವಾಗ ಮಡಿದನೆಂದು ಆ ಪಾಠ ಹೇಳುತ್ತದೆ.[೨೩] ಈ ಶಾಸನದ ಪಾಠದಲ್ಲಿ 'ಮಗ' ಎಂಬ ಅರ್ಥ ಬರುವ ಎರಡು ಪದ – 'ಸುಪುತ್ರ' ಮತ್ತು 'ಕುವರ' ಪ್ರಯೋಗವನ್ನೂ ಮತ್ತು ವ್ಯಕ್ತಿಗಳ ಹೆಸರನ್ನೂ ಗಮನಿಸಿದಾಗ 'ಸುಪುತ್ರ' ಎಂಬುದು ತನ್ನ ಸಹಜವಾದ ಅರ್ಥದಲ್ಲಿಯೂ 'ಕುವರ' ಎಂಬುದು ಪಾರಿಭಾಷಿಕಪದವಾಗಿಯೂ ಬಳಕೆಯಾಗಿರುವುದು ತಿಳಿಯುತ್ತದೆ.

ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಅರಸರಿಗೆ 'ಮನೆಮಕ್ಕಳು', 'ಕುವರರು' ಇದ್ದ ಹಾಗೆ ಸಾಮಾನ್ಯ ದರ್ಜೆಯ ವ್ಯಾಪಾರಿಗಳಿಗೆ 'ಮಗ' 'ಕುವರ'ರು ಇರುತ್ತಿದ್ದರೆಂದು ತೋರುತ್ತದೆ. ಪ್ರತಿಯೊಬ್ಬ ವ್ಯಾಪಾರಿಯೂ ಒಂದೊಂದು ಸೇನೆಯನ್ನು

---

೨೧ E. C. VII. Hn. 85, 1189 ಮತ್ತು E.C.IX, Ma. 13,1340

೨೨ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೩೦೬ – ೩೦೭

೨೩ E. C. VII. Sh. 36, 1180

ಇಟ್ಟುಕೊಳ್ಳುವುದು ವ್ಯಾವಹಾರಿಕವಾಗಿ ಕಷ್ಟಸಾಧ್ಯವಾದ ಕಾರ್ಯವಾದುದರಿಂದ ಈ ವ್ಯಾಪಾರಿಗಳು ತಮ್ಮ ಪ್ರವಾಸದ ಕಾಲದಲ್ಲಿ ತಮಗೆ ಅನೇಕರೀತಿಯಲ್ಲಿ ನೆರವಿಗೆ ಬರುವ ನಂಬಿಕಸ್ಥರಾದ ವೀರರನ್ನು ನಿಯಮಿಸಿಕೊಳ್ಳುತ್ತಿದ್ದರೆಂದು ಹೇಳಬಹುದು.

ಮೇಲಿನ ವಿವರಣೆಗೆ ಪುಷ್ಟಿಯಾಗಿ ಮತ್ತೊಂದು ಶಾಸನವನ್ನು ಉಲ್ಲೇಖ ಮಾಡಬಹುದು. 'ಮಳನಾಗಸೆಟ್ಟಿ' ಎಂಬ ವ್ಯಾಪಾರಿಯನ್ನು 'ಸಂಣನಾಯಕ' ಎಂಬುವನು ಪೂರ್ವದಿಕ್ಕಿನ ದಾರಿಯಲ್ಲಿ ('ಮೂಡಣ ಬಟ್ಟೆಯೊಳ್') ಕೊಲ್ಲುತ್ತಾನೆ. ಆಗ ನಾಚಿಸೆಟ್ಟಿಯ ಬೀಡಿನಲ್ಲಿ ನೆರೆದಿದ್ದ ವ್ಯಾಪಾರಿಸಮೂಹವನ್ನು ಉದ್ದೇಶಿಸಿ 'ಮಗ ರೇವಣ' ಎಂಬುವನು ಆ ಸಂಣನಾಯಕನನ್ನು ಕೊಲ್ಲಲು ತನಗೆ ಆಜ್ಞೆನೀಡುವಂತೆ ಬೇಡುತ್ತಾನೆ. ಅವರಿಂದ ಅಪ್ಪಣೆಯನ್ನು ಪಡೆದ ರೇವಣ, ಮಳನಾಗಸೆಟ್ಟಿಯನ್ನು ಕೊಂದ ಸಂಣನಾಯಕನ ಹಳ್ಳಿಗೆ ಸೂರ್ಯೋದಯಕ್ಕೆ ಮುನ್ನವೇ ಹೋಗಿ ಅವನೂ ಸೇರಿದಂತೆ ಏಳು ಜನರನ್ನು, ನಾಲ್ವರು ಎಳೆಯಮಕ್ಕಳನ್ನು, ತೊಟ್ಟಿಲಿನಲ್ಲಿದ್ದ ಇಬ್ಬರು ಮಕ್ಕಳನ್ನು ಕೊಂದು, ಸಂಣನಾಯಕನ ರಕ್ತವನ್ನು ಕುಡಿದು, ಅವನ ಕೈಯನ್ನು ಕೊಯ್ದು ತರುತ್ತಾನೆ. ಈ ಸಾಹಸವನ್ನು ಕಂಡು ಮೆಚ್ಚಿದ ವ್ಯಾಪಾರಿಸಂಸ್ಥೆಯು ರೇವಣನಿಗೆ 'ಪಗೆಯ ಬೆಂಕೊಳ್ವ' ಎಂಬ ಬಿರುದಿತ್ತು ಗೌರವಿಸುತ್ತದೆ. ತಮ್ಮ ಸಂಘದ ಯಾವುದೆ ವ್ಯಕ್ತಿಗೆ ಆಘಾತವುಂಟಾದರೂ ಇಡೀ ಸಂಘವು ಹೇಗೆ ಆ ಬಗ್ಗೆ ಗಮನಹರಿಸಿ ತಮ್ಮ ಹಗೆಯ ವಂಶದಕುಡಿಗಳನ್ನು ಚಿವುಟಿಹಾಕುವ ಪ್ರಯತ್ನವನ್ನು ಮಾಡುತ್ತಿತ್ತು ಎಂಬ ಘೋರ ಸತ್ಯವನ್ನು ಈ ಶಾಸನ ತಿಳಿಸುತ್ತದೆ. ಹಾಗೆಯೇ ವ್ಯಾಪಾರಿಸಂಸ್ಥೆಗಳು ಹೇಗೆ ತಮ್ಮ ರಕ್ಷಣೆಯ ವ್ಯವಸ್ಥೆಯನ್ನು ಮಾಡಿಕೊಂಡಿತ್ತು ಎಂಬುದು ತಿಳಿಯುತ್ತದೆ.[೨೪]

ಊರಿನಮೇಲೆ ಬಂದ ಕಳ್ಳರೊಡನೆ ಹೋರಾಡಿ ಮಡಿದ ವೀರರು

ಕಳ್ಳರು ಊರಿನ ಹೊರವಲಯಗಳಲ್ಲಿ ಮೇಯುತ್ತಿರುವ ತುರುಗಳನ್ನು ಅಪಹರಿಸುವುದು, ದಾರಿಯಲ್ಲಿನ ಪ್ರಯಾಣಿಕರನ್ನು ದೋಚುವುದು, ಇವುಗಳ ಜೊತೆಗೆ ಕೊಲವೊಮ್ಮೆ ಊರಿಗೂ

---

೨೪ "........ ಪಳ್ಳಿಗೆ ಪರಿದು ನೇಸರ್ಮೂಡುವಾಗಳ್ ಸಂಣನಾಯಕನೊಳುಗಾಗಿ ಏೞ್ವರುಮ ನಾಲ್ವರು ಕಿಱು ಮಕ್ಕಳ್ ಮನೆರಡು ತೊಟ್ಟಿಲಕೂಸುಗಳ್ ಮನಂತು ಪದಿಮೂವರುಮಾಂ ಕೊಂದು ಸಂಣನಾಯಕನ ನೆತ್ತರುಂ ಕುಡಿದು ಕಯ್ಯುಂ ಕಡಿದುಕೊಂಡು ಬರ್ಪ್ಪರಂನೆಗೆ ಬೞಿಯೆನೆ ಕೊಂ[ದು] ಬಂದು ಕೈಕೊಂಡವನ ಪೞಿಯಂ ಸೂಱೆಗೊಂಡವನ ಜೀವಧನಂಗಳಂ ಪಾಡುವರ್ಗ್ಗಂ ಭೂತುಗಳ್ಗಂ ಕೊಟ್ಟ"
- K. I. IV. No. 55, 1000

ನುಗ್ಗಿ ಕಳ್ಳತನ ಮಾಡುತ್ತಿದ್ದರು. ಮಹಾವಲಿಬಾಣರಸ ವಿಜಯಾದಿತ್ಯನ ಕಾಲದ ಒಂದು ಶಾಸನದಿಂದ, ಒಬ್ಬನು ತನ್ನ ಮನೆಗೆ ಕನ್ನ ಹಾಕಿ ಕಳ್ಳತನ ಮಾಡಲು ಯತ್ನಿಸಿದ ಕಳ್ಳರ ಮೇಲೆ ಬಿದ್ದು, ಅವರಲ್ಲಿ ನಾಲ್ಕೈದುಜನ ಕಳ್ಳರನ್ನು ಇರಿದು, ತಾನೂ ಮಡಿದ ವಿಷಯ ತಿಳಿಯುತ್ತದೆ.[೨೫] ದೇವಾಲಯಗಳಲ್ಲಿ ಕಳ್ಳತನ ಮಾಡುತ್ತಿದ್ದ ಕಳ್ಳರೊಡನೆ ಹೋರಾಡಿ ಮಡಿದ ವೀರರ ವಿಷಯವೂ ವೀರಗಲ್ಲುಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೪೩೯ ರ ಒಂದು ವೀರಗಲ್ಲಿನಿಂದ, ಶಿವರಾತ್ರಿಯ ದಿನ ಶಿವದೇವಾಲಯದಲ್ಲಿ ಪೂಜೆಮಾಡಿ ದೇವರಬನಲದಲ್ಲಿ ಜಾಗರಣೆಯನ್ನು ಆಚರಿಸುತ್ತಿದ್ದಾಗ ಕಳ್ಳರು ದೇವಾಲಯವನ್ನು ಮುತ್ತಿದರೆಂದು ತಿಳಿದ ವ್ಯಕ್ತಿಯೊಬ್ಬನು ಅವರ ಮೇಲೆ ಬಿದ್ದು ಗಾಯಗೊಳಿಸಿ ತಾನೂ ಗಾಯಗೊಂಡು ನಂತರ ಕೆಲವು ದಿನಗಳಲ್ಲಿ ಸಾಯುತ್ತಾನೆ ಎಂಬ ವಿಷಯ ತಿಳಿಯುತ್ತದೆ.[೨೬] ಕ್ರಿ.ಶ. ೧೭೪೬ರ ಶಾಸನದಿಂದ ಮಾರಂಡಹಳ್ಳಿಯನ್ನು ಆಲುಹಳ್ಳಿಯಬೇಡರು ಲೂಟಿಮಾಡಿಕೊಂಡು ಹೋಗುತ್ತಿರಬೇಕಾದರೆ ಅವರನ್ನು ಎದುರಿಸಿದ ಹನುಮ ಎಂಬುವನು ಸತ್ತ ವಿಷಯ ತಿಳಿಯುತ್ತದೆ.[೨೭] ಹೀಗೆಯೇ ಕಾಲನಿರ್ದೇಶನವಿಲ್ಲದ ಇನ್ನೆರಡು ಶಾಸನಗಳಲ್ಲಿ ಕಳ್ಳರನ್ನು ಎದುರಿಸಿ ಸತ್ತ ವೀರರ ಪ್ರಸ್ತಾಪ ಬರುತ್ತದೆ.[೨೮]

ಕಳ್ಳರಾದವರು ತಮ್ಮ ಊರಿನ ಮೇಲೆ ಕಳ್ಳತನಕ್ಕಾಗಿ ಬಂದಾಗ ಜನ ಸ್ವಯಂಪ್ರೇರಿತರಾಗಿ ಅವರನ್ನು ಎದುರಿಸುವಲ್ಲಿ ಕಾರ್ಯನಿರತರಾಗುತ್ತಿದ್ದರೆಂಬುದು ಈ ಎಲ್ಲಾ ಮಾಹಿತಿಗಳಿಂದ ಸ್ಪಷ್ಟವಾಗುತ್ತದೆ.

ಪೆಣ್ಬುಯ್ಯಲಿನಲ್ಲಿ ಸತ್ತ ವೀರರು

ಪೆಣ್ಬುಯ್ಯಲುಗಳು ಯಾವಾಗ ಆಗುತ್ತಿದ್ದುವು ಎಂಬುದನ್ನು ಹೇಳುವುದು ಕಷ್ಟ. ಯುದ್ಧಾನಂತರ ಸೋತ ಅರಸರ ಊರುಗಳನ್ನು ಗೆದ್ದವರು ಆಕ್ರಮಿಸಿದಾಗ ನಡೆದಿರಬಹುದು ಅಥವಾ ಹೆಣ್ಣುಮಕ್ಕಳು ಒಂಟಿಯಾಗಿದ್ದಾಗ ನಡೆದಿರಬಹುದು. "ಒಮ್ಮೊಮ್ಮೆ ಕೇವಲ ಸ್ತ್ರೀಯರನ್ನು ಅವಮಾನಗೊಳಿಸುವ ಉದ್ದೇಶದಿಂದಲೂ ದಾಳಿಕಾರರು ಬರುತ್ತಿದ್ದರು"[೨೯] ಈ ರೀತಿಯ

---

೨೫ S. I. I. IX. Pt 1. No.
೨೬ E. C. IX. Cp. 149, 1439
೨೭ M. A. R.1941. 15, 1746
೨೮ E. C. VIII. Sb. 196 ಮತ್ತು M. A. R.1925. 57
೨೯ ಎಂ.ಚಿದಾನಂದಮೂರ್ತಿ :ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೮೪

ಹುಯ್ಯಲುಗಳ ಪ್ರಸ್ತಾಪ ವೀರಗಲ್ಲುಗಳಲ್ಲಿ ಅಪರೂಪ. ಆದರೂ ಈ ಅಂಶ "ಪೆಂಡಿರುಡೆಯು ೞ್ಚುವಾಗಳು" ಎಂಬ ವಾಕ್ಯದಲ್ಲಿ ಸೂಚಿತವಾಗಿದ್ದಂತೆ ತೋರುತ್ತದೆ. ಆದರೆ ಪೆಣ್ಬುಯ್ಯಲಿನ ವಿವರಗಳು ಅವುಗಳಿಂದ ದೊರೆಯುವುದಿಲ್ಲ.

ಪೆಣ್ಬುಯ್ಯಲಿನ ಪ್ರಸಂಗವೊಂದು ಜನ್ನನ ಅನಂತನಾಥಪುರಾಣದಲ್ಲಿ ಬಂದಿದೆ.[೩೦] ಸುಷೇಣನ ಹೆಂಡಿತಿಯಾದ ಸುನಂದೆಯನ್ನು ಕಾಮಾತುರದಿಂದ ಚಂಡಶಾಸನು ಅಪಹರಿಸಿಕೊಂಡು ಹೋದಾಗ ಸುನಂದೆ,

ಇನನಂ ವಂಚಿಸಿ ಚಂಡಶಾಸನನಿವಂ ಕಳ್ದೊಯ್ದಪಂ ನಾಥನಂ
ಗನೆಯಿಂದೆನ್ನಸುನಂದೆಯಂ ಸುಭಟರಣ್ಮಿಂ ವೀರರಡ್ಡೈಸಿಮೆ
ನ್ನಿನೆಯಂಗೆಯ್ದಿಸಿ ಮೂರನಾಡ ಜನಮೀ ಪೆಣ್ಬುಯ್ಯಲಂ ಹಾ ಸುಷೇ
ಣನೃಪ ಹಾನೃಪ ನೀಜಿನೆಂದಬಲೆ ಬಾಯ್ಬಿಟ್ಟಳ್ತು ಪುಯ್ಯಲ್ಚಿದಳ್

–ಎಂದು ಹುಯ್ಯಲಿಟ್ಟಾಗ, ಈ ಹುಯ್ಯಲನ್ನು ಕೇಳಿದ ಸಿಂಹಚೂಡನೆಂಬುವನು.

ರಸೆಪೊೞುವುದೆ ಪರವೆಣ್ಣಾ
ಟಿಸಿ ದೊಡೆ ಕಳ್ದೊಯ್ದು ಕೂಡಿ ತಂದೈಪುಲ್ಮಾ
ನಸನಾದ ಚಂಡಶಾಸನ
ವೆಸರುಂ ಚಾಂಡಾಲ ನೀರೊಳಿಂತರ್ದುವರೇ

ಎಂದು ಚಂಡಶಾಸನನ್ನು ಮೂದಲಿಸಿ ಸುನಂದೆಗೆ ಈ ರೀತಿ ಆಶ್ವಾಸನೆಯನ್ನು ನೀಡುತ್ತಾನೆ.

ಅಂಜದೆ ನಿಂದವಧರಿಸೆಲೆ
ಕಂಜದಳಾಯತ ವಿಲೋಲ ವಿಲೋಚನೆ ಪಗೆಯಂ
ಮುಂ ಜವನಡೆಗೊಪ್ಪಿಸಿ ಬೞಿ
ಯಂ ಜನಪತಿಯೆಡೆಗೆ ನಿನ್ನನೊಯ್ದೊಪ್ಪಿಸುವೆ

ಇದು ಪ್ರಾಚೀನ ಕರ್ನಾಟಕದಲ್ಲಿನ ವೀರರ ಧ್ಯೇಯವನ್ನು ಪರಿಚಯಿಸುತ್ತದೆ. ತನ್ನ ಪ್ರಾಣವನ್ನೂ ಲೆಕ್ಕಿಸದೆ ಚಂಡಶಾಸನೊಂದಿಗೆ ಹೋರಾಡಿ ಸಿಂಹಚೂಡ ಮಡಿಯುತ್ತಾನೆ. ಈ ರೀತಿಯ ಪೆಣ್ಬುಯ್ಯಲಿನ ಸುದೀರ್ಘವಾದ ವಿವರಗಳನ್ನೊಳಗೊಂಡ ನಿದರ್ಶನ ಅಪರೂಪವಾದರೂ ಕ್ರಿ.ಶ. ೧೧೯೫ರ ಒಂದು ವೀರಗಲ್ಲಿನಿಮದ ಇಂಥ ಪೆಣ್ಬುಯ್ಯಲಿನ ಪರಿಚಯವಾಗುತ್ತದೆ.

---

೩೦ ಜನ್ನ : ಅನಂತನಾಥ ಪುರಾಣ : (ಸಂ. ಎನ್. ಅನಂತರಂಗಾಚಾರ್) ೧೧–೪೫, ೫೨, ೫೩

ಹಾರುವನಹಳ್ಳಿಯ ದಾರಿಯಲ್ಲಿ ಹೆಂಗಸರ ಮಾನಭಂಗದ ಪ್ರಯತ್ನವಾಗುತ್ತಿರುವಾಗ, ಚಟ್ಟಗೌಡರ ಮಾಳಯನ ಮಗನಾದ ಸೊಮೆಯನೂ, ಅವನ ಸಂಗಡದಲ್ಲಿದ್ದ ಬೆಚ್ಚಯ್ಯ ಎಂಬುವವನೂ ಹೋರಾಡಿ ಹೆಣ್ಣುಮಕ್ಕಳ ಮಾನ ಕಾದು, ಹಿಂದಕ್ಕೆ ಕಳುಹಿಸಿ, ಅವರನ್ನು ಅಪಹರಿಸಲು ಬಂದ ಕಳ್ಳರನ್ನು ಕೊಂದು ಹೋರಾಡುವಾಗ ಮಡಿಯುತ್ತಾರೆ.[೩೧] 'ಹೆಣ್ಡಿರುಡೆಯುರ್ಚ್ವವಲ್ಲ' ಮಾರೆಯನೆಂಬುವನು ಹೆಂಗಸರ ಮಾನಹಾನಿ ಮಾಡುತ್ತಿದ್ದ ಕೆಲವರನ್ನು ಕೊಂದು ಸತ್ತ ವಿಷಯ ತಿಳಿಯುತ್ತದೆ.[೩೨]

ಈ ಹಿಂದೆ ತಿಳಿಸಿರುವಂತೆ ಕೇವಲ ಸ್ತ್ರೀಯರನ್ನು ಅವಮಾನಗೊಳಿಸುವ ಉದ್ದೇಶದಿಂದ ನಡೆದ ಪೆಣ್ಬುಯ್ಯಲುಗಳ ಪ್ರಸ್ತಾಪ ವೀರಗಲ್ಲುಗಳಿಂದ ಇದುವರೆಗೆ ತಿಳಿದು ಬಂದಿಲ್ಲ. ಹೋರಾಟದ ಒಂದು ಅಂಶವಾಗಿ ಇದು ನಡೆಯುತ್ತಿತ್ತು. ಗೆದ್ದವರು / ಆಕ್ರಮಣಕಾರರು ಆಕ್ರಮಣ ಮಾಡಿದ ಪ್ರದೇಶವನ್ನು ಸೂರೆಗೊಂಡಂತೆ, ಅಲ್ಲಿಯ ಹೆಣ್ಣುಮಕ್ಕಳ ಮಾನವನ್ನೂ ಅಪಹರಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಎಂಥವನೂ ಸುಮ್ಮನೆ ನೋಡಿಕೊಂಡು ಇರಲಾಗುತ್ತಿರಲಿಲ್ಲ. ಹಾಗೇನಾದರೂ ಇದ್ದರೆ ಅವನು ಷಂಡನೇ ಇರಬೇಕು ಎಂದು ರನ್ನನು ಹೇಳಿದ ಮಾತು ಸಮರ್ಪಕವಾಗಿದೆ. ನಮ್ಮ ಈ ವಾದವನ್ನು ಸಮರ್ಥಿಸುವ ಅಬ್ಬಲೂರಿನ ಎರಡು ವೀರಗಲ್ಲುಗಳ ಶಿಲ್ಪವನ್ನು ಇಲ್ಲಿ ವಿವರವಾಗಿ ಪರಿಶೀಲಿಸುತ್ತೇವೆ. (ಚಿತ್ರ ೩೫, ೩೬)

ಧಾರವಾಡ ಜಿಲ್ಲೆ ಹಿರೆಕೆರೂರು ತಾಲ್ಲೂಕ್ ಅಬ್ಬಲೂರು ಗ್ರಾಮದ "ಬ್ರಹ್ಮೇಶ್ವರ (ಈಗಿನ ಬಸವೇಶ್ವರ) ದೇವಾಲಯದ ಎಡಕ್ಕೆ ಮೂರು ವೀರಗಲ್ಲುಗಳಿವೆ. ಅವುಗಳಲ್ಲಿ ಎರಡು ವೀರಗಲ್ಲುಗಳ ಶಿಲ್ಪ ಗಮನಾರ್ಹವಾಗಿದೆ. ಒಂದನೆಯ ವೀರಗಲ್ಲಿನ ಮೂರು ಭಾಗಗಳಿದ್ದು ಕೆಳಗಿನ ಯುದ್ಧ ಭಾಗ ಉಳಿದೆರಡು ಭಾಗಗಳಿಗಿಂತ ಸ್ವಲ್ಪ ದೊಡ್ಡದಾಗಿದೆ. ಈ ಯುದ್ಧಭಾಗದಲ್ಲಿ ಇಬ್ಬರು ವೀರರು (ಶಾಸನ ಪಾಠದ ಪ್ರಕಾರ ಸಹೋದರರು) ಯುದ್ಧ ಮಾಡುತ್ತಿರುವಂತೆ ಶಿಲ್ಪವನ್ನು ಬಿಡಿಸಲಾಗಿದೆ. ಅವರ ಸೊಂಟದಲ್ಲಿ ಕತ್ತಿ ಮತ್ತು ತಲೆಯ ಮೇಲೆ ಛತ್ರಿಯಿದೆ. ಈ ವೀರಗಲ್ಲಿನಲ್ಲಿ ಒಂದು ವಿಶೇಷತೆಯೆಂದರೆ ವೀರರು ತಮ್ಮ ತಲೆಗೂದಲನ್ನು ಕಟ್ಟದೆ ಹಿಂದೆ ಬಿಟ್ಟಿದ್ದಾರೆ. ಸಾಮಾನ್ಯವಾಗಿ ಎಲ್ಲಾ ವೀರಗಲ್ಲುಗಳಲ್ಲೂ ವೀರರು ಮುಡಿ (ಗಂಟು) ಕಟ್ಟಿರುತ್ತಾರೆ. ಒಬ್ಬೊಬ್ಬ ವೀರನ

೩೧ M. A. R.1926. 40, 1195. "........ ಸೊಮೆಯನು ಹಾರವುನಹಳ್ಳಿಯ ದಾರಿಯಲು ಹೆಮ್ಮಕ್ಕಳ ಉಡೆ ಉರ್ಚ್ವಲೀಯದೆ ತಾನುಂ ತನ್ನ ಸಂಗಡದ ಬೆಚ್ಚಿಯಮಾವನುಂ ವೀರಗಾಳೆಗಂ ಕಾದಿ ಹೆಮ್ಮಕ್ಕಳ ಕಾದು ಕಳಹಿ ಕಳ್ಳರು ಕೊಂದು ತಾವು ಸುರಲೋಕ ಪ್ರಾಪ್ತರಾಗಿ ದೇವರ್ಕನ್ನೆಯರುಯ್ದರು."

೩೨ M. A. R.1927. ಪು. ೨೪

ಹಿಂಬದಿಯಲ್ಲೂ ಕೆಳಗೆ ಮೂವರು ಸ್ತ್ರೀಯರನ್ನು ಮೇಲೆ ನಾಲ್ಕು ಹಸುಗಳನ್ನು (ಕೆಳಗಿನ ವೀರರ ಹಿಂಬದಿಯಲ್ಲಿರುವ ಹಸುಗಳು ಕುರುಗಳಂತೆ ಭಾಸವಾಗುತ್ತವೆ. ಕೊಂಬು ಮತ್ತು ಕಿವಿಗಳು ಸ್ಪಷ್ಟವಿಲ್ಲ) ಪ್ರತ್ಯೇಕವಾಗಿ ಕೆತ್ತಿದ್ದಾರೆ. ಈ ಸ್ತ್ರೀಯರಲ್ಲಿ ಮೇಲಿನವರು ಸಂಪೂರ್ಣ ಬೆತ್ತಲೆಯಾಗಿದ್ದಾರೆ. ಮತ್ತು ಕೆಳಗಿನವರು ಅರೆಬೆತ್ತಲಾಗಿದ್ದಾರೆ. (ಸೊಂಟದಕೆಳಗೆ ಉಡುಪಿದೆ) ಮತ್ತು ವೀರರ ಹಿಂದೆ ನಿಂತಿರುವ ಮೊದಲ ಸ್ತ್ರೀಯರು ಕಂಕುಳಲ್ಲಿ ಮಗುವನ್ನು ಹಿಡಿದಿದ್ದಾರೆ. ಶತ್ರುಗಳಲ್ಲಿ ಕೆಲವರು ಶರಣಾಗತರಾಗಿದ್ದಾರೆ. ಇನ್ನೂ ಕೆಲವಾರು ಸತ್ತಿದ್ದಾರೆ ; ಮತ್ತೆ ಕೆಲವರು ಯುದ್ಧ ಮಾಡುತ್ತಿರುವಂತಿದೆ. ತಮ್ಮ ಕೋಟೆಯೊಳಕ್ಕೆ ನುಗ್ಗಿದ ಶತ್ರುಗಳನ್ನು ವೀರರು ಹೊರಕ್ಕೆ ಓಡಿಸುತ್ತಿರುವಂತೆ ಕೋಟೆಯ ಬಾಗಿಲನ್ನು ಶಿಲ್ಪದಲ್ಲಿ ಬಿಡಿಸಲಾಗಿದೆ. ಒಟ್ಟಿನಲ್ಲಿ ಶತ್ರುಗಳು ವಿಶೇಷ ಹಾನಿಗೊಳಗಾಗಿ (ಶಿಲ್ಪದಲ್ಲಿ ಬಾಣಗಳು ನಾಟಿರುವುದನ್ನು ಗಾಯಗಳ ಗುರುತನ್ನೂ ಬಿಡಿಸಿದೆ) ಸೋತಿದ್ದಾರೆಂಬುದನ್ನು ಸೂಚಿಸುವ ಚಿತ್ರಣದಲ್ಲಿದೆ".

"ಎರಡನೆಯ ವೀರಗಲ್ಲಿನಲ್ಲಿ ಮೊದಲ ವೀರಗಲ್ಲಿನಲ್ಲಿರುವಂತೆ ಸ್ಪಷ್ಟವಾದ ಯುದ್ಧ ಚಿತ್ರಣವಿಲ್ಲ. ಮೇಲೆ ಕೆಳಗೆ ಇಬ್ಬಿಬ್ಬರು ಶತ್ರುವೀರರು ವೀರನ ಮುಂದೆ ಗುರಾಣಿ ಈಟಿಧಾರಿಗಳಾಗಿ ನಿಂತಿರುವ ಭಂಗಿಯಿದೆ. ವೀರನೂ ಸಹ ಅದೇ ಭಂಗಿಯಲ್ಲಿ ನಿಂತಿರುವಂತಿದೆ. ಇವನ ಹಿಂದೆ ಒಂದನೇ ವೀರಗಲ್ಲಿನಲ್ಲಿರುವಂತೆಯೇ ಮೂವರು ಸ್ತ್ರೀಯರು, ನಾಲ್ಕು ಹಸುಗಳನ್ನು ಕೆತ್ತಲಾಗಿದೆ. ಈ ವೀರಗಲ್ಲಿನ ಸ್ತ್ರೀಯರಲ್ಲಿ ಭಿನ್ನತೆಯಿದೆ. ತಮ್ಮ ಮಾನವನ್ನು ಕೈಗಳಿಂದ ರಕ್ಷಿಸಿಕೊಳ್ಳುವ ಭಂಗಿಯಲ್ಲಿ ಬಿಡಿಸಲಾಗಿದ್ದು ಒಂದನೇ ಶಿಲ್ಪಕ್ಕೆ ಸೊಂಟದಿಂದ ಕೆಳಕ್ಕೆ ಉಡುಪಿದ್ದರೆ. ಎರಡನೇ ಶಿಲ್ಪ ಪೂರ್ತಿ ನಗ್ನವಾಗಿದೆ. ಮೂರನೇ ಶಿಲ್ಪ ಭಿನ್ನವಾಗಿದ್ದರೂ ನಗ್ನತ್ವವನ್ನೇ ಧ್ವನಿಸುವಂತಿದೆ. ಮತ್ತು ಒಂದು ಮಗುವಿದೆ. (ಮಗುವಿನ ಶಿಲ್ಪ, ಸ್ತ್ರೀಯ ಶಿಲ್ಪದ ಪಕ್ಕದಲ್ಲಿ ಕೈಹಿಡಿದುಕೊಂಡು ನಿಂತಿರುವ ಭಂಗಿಯಲ್ಲಿ ಬಿಡಿಸಲಾಗಿದೆ)"[೩೩] ಮಡಿದ ವೀರನು 'ಗೋಗ್ರಹಣ' ಮತ್ತು ಮಾನ ಹಾನಿಯನ್ನು ತಡೆದು ಶತ್ರುಗಳನ್ನು ಹಿಮ್ಮೆಟ್ಟಿಸಿದ ಎಂಬ ಅಂಶವನ್ನು ಶಿಲ್ಪಿ, ತುರುಗಳನ್ನು, ಮಾನ ಹಾನಿಗೆ ಒಳಗಾದ ಮಹಿಳೆಯರನ್ನು ವೀರರ ಹಿಂಬಂದಿಯಲ್ಲಿಯೂ ಶತ್ರುಗಳ ಕಡೆಯವರನ್ನು ವೀರನ ಮುಂಭಾಗದಲ್ಲಿ ಬಿಡಿಸುವುದರ ಮೂಲಕ ಧ್ವನಿಸಿದ್ದಾನೆ. (ಚಿತ್ರ ೩೫, ೩೬) ವೀರಗಲ್ಲುಗಳ ಪಾಠದಲ್ಲಿ ಸಾಮಾನ್ಯವಾಗಿ ಬರುವ 'ತುಱುವಂ ಪಿಂತಿಕ್ಕಿ' – ಎಂಬ ಪದ ಬಳಕೆಯಾಗಿರುವುದೂ ಇದೇ ಅರ್ಥದಲ್ಲಿ.

ಮೇಲಿನ ಶಿಲ್ಪಗಳ ವಿವರಣೆಯಂತೆ ಮತ್ತು ಈ ಶಾಸನಗಳ ಪಾಠದ ಆಧಾರದ ಮೇಲೆ ಈ ಎರಡೂ ವೀರಗಲ್ಲುಗಳು ಹೋರಾಟವೊಂದನ್ನು ತಿಳಿಸುತ್ತದೆ. ಈ ಹೋರಾಟ ನಡೆದದ್ದು

---

೩೩ ನಾ. ಗೀತಾಚಾರ್ಯ : 'ಪೆಣ್ಬುಯ್ಯಲ್ – ಒಂದು ವಿಶ್ಲೇಷಣೆ'. ದಿನಾಂಕ ೭–೩–೧೯೮೦ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನಾ ವಿಭಾದಲ್ಲಿ ಮಂಡಿಸಿದ ಲೇಖನ. ಇದು ಸಾಧನೆ. ಸಂ.೯. ಸಂ. ೪ ಪು. ೭೪–೮೧ ರಲ್ಲಿ ಪ್ರಕಟವಾಗಿದೆ.

'ಗೋಗ್ರಹಣ' ಮತ್ತು 'ಪೆಣ್‌ಬುಯ್ಯಲ್'ಗಾಗಿ. ಇಲ್ಲಿ ಗೋವುಗಳನ್ನು ಕದಿಯಲು ಬಂದವರು ಸ್ತ್ರೀಯರ ಮಾನಹಾನಿಗೂ ಪ್ರಯತ್ನಿಸಿದರು. 'ಗೋಗ್ರಹಣ' ಹೇಗೆ ಒಂದು ಯುದ್ಧಕ್ಕೆ ಆಹ್ವಾನದ ಸವಾಲೋ ಹಾಗೆಯೇ ಮಹಿಳೆಯರನ್ನು ಮಾನ ಹಾನಿಗೊಳಿಸುವುದೂ ಯುದ್ಧಕ್ಕೆ ನೀಡುವ ಒಂದು ಸವಾಲು.

ಪಟ್ಟದಕಲ್ಲಿನಲ್ಲಿರುವ ಬಾದಾಮಿಚಾಲುಕ್ಯರ ಕಾಲದ ಶಾಸನವಿಲ್ಲದ ವೀರಗಲ್ಲು ಮುರಿದಿದ್ದು ಇದೀಗ ಅದನ್ನ ಅಲ್ಲಿ ರಕ್ಷಿಸಿಡಲಾಗಿದೆ. ಈ ವೀರಗಲ್ಲಿನ ಶಿಲ್ಪ ಪೆಣ್ಬುಯ್ಯಲಿನ ಬಗ್ಗೆ ಕುತೂಹಲದ ಸಂಗತಿಯನ್ನು ತಿಳಿಸುವಂತೆ ತೋರುತ್ತದೆ. ವೀರನೊಡನೆ ಇಬ್ಬರು ಬಾಣಪ್ರಯೋಗಮಾಡುತ್ತಾ ಯುದ್ಧಕ್ಕೆ ನಿಂತಿದ್ದಾರೆ. ವೀರ ಅವರನ್ನು ಎದುರಿಸಲು ಸಿದ್ಧನಿರುವಂತಿದೆ. ಮತ್ತು ಅವನ ಹಿಂದೆ ಸ್ತ್ರೀಯರು ನಿಂತಿರುವಂತೆಯೂ ಶಿಲ್ಪವನ್ನು ಬಿಡಿಸಲಾಗಿದೆ. ಎರಡನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ವಿವರಗಳನ್ನು ಬಿಡಿಸಲಾಗಿದೆ. ಇದು ಬಹುಶಃ ಪೆಣ್ಬುಯ್ಯಲಿನಲ್ಲಿ ಹೋರಾಡಿ ಮಡಿದ ವೀರನ ಸ್ಮಾರಕವೇ ಇರಬೇಕೆಂದು ತೋರುತ್ತದೆ. (ಚಿತ್ರ ೨೩೬)

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕ್ ದೊಡ್ಡ ಉಳ್ಳರ್ತಿಯಲ್ಲಿರುವ ಹತ್ತನೆಯ ಶತಮಾನದ ವೀರಗಲ್ಲಿನ ಶಿಲ್ಪ ನಮಗೆ ಮಹತ್ವದ ವಿಷಯವನ್ನು ತಿಳಿಸುತ್ತದೆ. ವಿವಸ್ತ್ರಳಾದ ಸ್ತ್ರೀಯ ಮಾನಹಾನಿಗೆ ಪ್ರಯತ್ನಿಸಿದವರನ್ನು ವೀರನು ಕೊಲ್ಲುತ್ತಿರುವಂತೆಯೂ, ಪುರುಷನೊಬ್ಬನು ಅಸಹಾಯಕ ಸ್ತ್ರೀಯಮೇಲೆ ಆಕ್ರಮಣ ಮಾಡುತ್ತಿರುವಂತೆಯೂ ಶಿಲ್ಪವನ್ನು ಬಿಡಿಸಲಾಗಿದೆ (ಚಿತ್ರ ೩೪) ಇಲ್ಲಿ ಮಾನಹಾನಿ ನಡೆಯುತ್ತಿರುವಾಗ ವೀರನು ನಡೆಸಿದ ಹೋರಾಟದ ಚಿತ್ರವನ್ನು ಶಿಲ್ಪಿ ಕಂಡರಿಸಿದ್ದಾನೆ. ಈ ಶಾಸನದ ಪಾಠದಲ್ಲಿ 'ಪೆಂಡಿ ರುಡೆಯುಬರ್ಚ್ಚ ಅಥವಾ ಪೆಣ್ಬುಯ್ಯಲ್' ಎಂಬ ಪದಗಳಾಗಲಿ ಎಲ್ಲದೆ ಊರಳಿವು ಎಂಬ ಪಾಠವಿರುವುದು ಗಮನಾರ್ಹ.[೩೩a]

ಸೀಮಾ ಸಂಬಂಧದ ಕಾಳಗಗಳಲ್ಲಿ ಮಡಿದವರು

ಒಂದು ಊರಿಗೂ ಮತ್ತು ಮತ್ತೊಂದು ಊರಿಗೂ ಗಡಿಗಳ ವಿಷಯವಾಗಿ ನಡೆಯುತ್ತಿದ್ದ ಘರ್ಷಣೆಗಳಲ್ಲಿ ಅನೇಕ ವೀರರು ಮಡಿದಿದ್ದಾರೆ. ಒಂದು ರಾಜ್ಯದ ಅರಸನು ತನ್ನ ಆಡಳಿತ ವಿಧಾನಕ್ಕನುಗುಣವಾಗಿ, ರಾಜ್ಯವನ್ನು ಹಲವಾರು ಭಾಗಗಳನ್ನಾಗಿ ವಿಂಗಡಿಸುತ್ತಿದ್ದುದು ಸ್ಪಷ್ಟವಾದ

೩೩a E. C. XI. Cl. 9,925. "....ಕೊನ್ದದ ಗೊಗ್ಗಿ ಊರಳಿನೊಳ್ ಸತ್ತಂ."

ಅಂಶ. ಈ ವಿಂಗಡಣೆಯಲ್ಲಿ ಹಳ್ಳಿಗಳ ಗಡಿಗಳೂ ನಿರ್ಣಯವಾಗಿರುತ್ತಿದ್ದವು. ಕಾರಣಾಂತರಗಳಿಂದ ಗಡಿಯ ಒತ್ತುವರಿಯಾದಾಗ ಘರ್ಷಣೆಗಳು ನಡೆಯುತ್ತಿದ್ದುವು. ಈ ರೀತಿಯ ಘರ್ಷಣೆಗಳಲ್ಲಿ ಮಡಿದ ವೀರರ ವೀರಗಲ್ಲುಗಳ ಸಂಖ್ಯೆ ಕಡಿಮೆಯೆಂದು ಹೇಳಬಹುದು. ಸೀಮಾ ಸಂಬಂಧದ ಕಾಳಗದಲ್ಲಿ ಮಡಿದ ವೀರಕಲ್ಲುಗಳ ಸಂಖ್ಯೆಯನ್ನು ಗಮನಿಸಿದರೆ ಇಂಥ ಭಿನ್ನಾಭಿಪ್ರಾಯಗಳು ಬಹುಪಾಲು ನ್ಯಾಯತೀರ್ಮಾನಗಳಲ್ಲಿಯೇ ಮುಕ್ತಾಯವಾಗುತ್ತಿದುವು ಎಂದು ತೋರುತ್ತದೆ. ಕೆಲವೊಮ್ಮೆ ಆವೇಶಕ್ಕೆ ಒಳಗಾಗಿ ಉದ್ವಿಗ್ನರಾದ ಜನ ಈ ರೀತಿಯ ಹೋರಾಟಗಳನ್ನು ನಡೆಸುತ್ತಿದ್ದರೆಂದು ಊಹಿಸಬಹುದು.

ಹೊಸಊರು ಮತ್ತು ಜಂಬೂರುಗಳ ಗಡಿಯ ಕಾಳಗ ನಡೆಯುವುದು ಎಂಬುದನ್ನು ಕೇಳಿದ ಈಸವೂರಿನ ಮಾಳ ಎಂಬುವನು ಹೊಸ ಊರಿಗೆ ಬಂದು ಅಲ್ಲಿನ "ಸಾಸಿರ್ವರಲ್ಲಿ ಬೆಸನಂ ಬೇಡಿಕೊಂಡು" ಜಗಳದಲ್ಲಿ ಭಾಗವಹಿಸಿ ಹಲವರನ್ನು ಕೊಂದು ತಾನೂ ಸಾಯುತ್ತಾನೆ.[೩೪] ಈ ಶಾಸನದಿಂದ ಎರಡು ಊರುಗಳ ನಡುವೆ ಸೀಮಾಸಂಬಂಧದ ವ್ಯಾಜ್ಯಗಳು ನಡೆದಾಗ, ಆ ಊರುಗಳೊಂದಿಗೆ ಮೈತ್ರಿಯನ್ನು ಪಡೆದಿದ್ದ ಹಳ್ಳಿಯವರು ಬೆಂಬಲವನ್ನು, ಸಹಕಾರವನ್ನೂ ನೀಡುತ್ತಿದ್ದರೆಂದು ತಿಳಿಯುತ್ತದೆ. ಕ್ರಿ.ಶ. ೧೧೩೬ ರ ಮತ್ತೊಂದು ವೀರಗಲ್ಲಿನಿಂದ ಐವರವಳ್ಳಿಯವರಿಗೂ ಅಗ್ಗಡಲಿನವರಿಗೂ ನಡೆದ ಸೀಮಾ ಸಂಬಂಧದ ಹೋರಾಟದ ವಿಷಯ ತಿಳಿಯುತ್ತದೆ. ಈ ವೀರಗಲ್ಲು ಅಗ್ಗಡಲಿನಲ್ಲಿದೆ.[೩೫] ಎರಡೂ ಊರಿನವರಿಗೆ ನಡೆದ ಗಡಿಯ ಕಾಳಗದಲ್ಲಿ ಬುಳ್ಳಗುಪ್ಪೆಯ ದಾಳಿಗಾವುಂಡನು "ತಮ್ಮ ಗಡಿಯ ಭೂಮಿಯಲಿ ಸಾಯುತ್ತಾನೆ. ಇದೇ ಶಾಸನದ ಬಗ್ಗೆ ಚಿದಾನಂದ ಮೂರ್ತಿಯವರು ಬರೆಯುತ್ತಾ "ಬುಳ್ಳಗುಪ್ಪೆಯ ದಾಳಿಗವುಡ ಎಂಬಾತನು ಎರಡುಹಳ್ಳಿಗಳ ಜೊತೆಯಲ್ಲಿ ಕಾದಾಡಿ ತಮ್ಮ ಗಡಿಯ ಭೂಮಿಯಲ್ಲಿ ಸಾಯುತ್ತಾನೆ."[೩೬] ಎಂಬುದಾಗಿ ಹೇಳುತ್ತಾರೆ. 'ಆದರೆ ವಾಸ್ತವವಾಗಿ 'ಬುಳ್ಳಗುಪ್ಪೆಯ ದಾಳಿಗವುಡ' ಎಂಬುವನು ಅಗ್ಗಡಲಿನವನೇ. ಇವನು ಅಗ್ಗಡಲಿನ ಪರವಾಗಿ ಆಯಿವರವಳ್ಳಿಯವರೊಮದಿಗೆ ಹೋರಾಡಿ ಮಡಿಯುತ್ತಾನೆ. ಈ ನಮ್ಮ ಅಭಿಪ್ರಾಯಕ್ಕೆ ಇಂದಿಗೂ ಈ ವೀರಗಲ್ಲು ಅಗ್ಗಡಲಿನ ಸೋಮೇಶ್ವರ ದೇವಾಲಯದ ಬಳಿ ಇರುವುದನ್ನು ಆಧಾರವಾಗಿ ನೀಡಬಹುದು. ಇದೇ ಗಡಿಕಾಳಗಕ್ಕೆ ಸಂಬಂಧಿಸಿದ ಹಾಗೆ ಮತ್ತೊಂದು ವೀರಗಲ್ಲು ದೊರೆಯುತ್ತದೆ. ಇದು ಇಂದಿನ ಅಯಿವರಹಳ್ಳಿಯಲಲಿದೆ. ಈ ಶಾಸನದಿಂದ ಅಗ್ಗಡಲು ಮತ್ತು ಅಯಿವರಹಳ್ಳಿಯ ಗಡಿಯ

---

೩೪ E. C. VII. Sk. 298, 1089

೩೫ E. C. V. BI. 206, 1138

೩೬ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೮೬

ಕಾಳಗದಲ್ಲಿ ಬಮ್ಮಗವುಡ ಎಂಬುವನು ಮತ್ತು ಬೇರೆ ಇಬ್ಬರು ಅಯಿರವಳ್ಳಿಯ ಪರವಾಗಿ ಅಗ್ಗಡಲಿನವರೊಂದಿಗೆ ಹೋರಾಡಿ ಮಡಿದ ವಿಷಯ ತಿಳಿಯುತ್ತದೆ.[೩೭] ಈ ವೀರಗಲ್ಲಿನಿಂದ ನಮ್ಮ ಅಭಿಪ್ರಾಯ ಹೆಚ್ಚು ಸ್ಪಷ್ಟವಾಗುತ್ತದೆ. ಅಗ್ಗಡಲಿನಲ್ಲಿದ್ದಿರಬಹುದಾದ ದಾಳಿಗಾವುಂಡನನ್ನು ಪ್ರತ್ಯೇಕವಾಗಿ ಗುರುತಿಸುವಲ್ಲಿ ಅವರ ಮನೆಯ ಬಗ್ಗೆ ಈ ರೀತಿಯ ವಿಶೇಷಣಾವನ್ನು ಬಳಸಿದ್ದಾರೆಯೇ ವಿನಾ 'ಬುಳುಗುಪ್ಪೆ'ಗೂ ಈ ಗಡಿಕಾಳಗಕ್ಕೂ ಯಾವ ಸಂಬಂಧವೂ ಇಲ್ಲ.

ಕ್ರಿ.ಶ. ೧೧೪೩ರ ವೀರಗಲ್ಲಿನ ಪಾಠದಿಂದ ಕುಪ್ಪಟೂರಿಗೂ ನೇಜೆಲಿಗೆಗೂ ಸೀಮಾ ಸಂಬಂಧವಾಗಿ ಯುದ್ಧವಾದಾಗ ಕುಪ್ಪಟೂರಿನ ಸಾಸಿರ್ವ್ವರ ಮಗನಾದ ಬಾಚಣನ ಮಗ ಕೀರ್ತ್ತಿಯಣ್ಣ ಎಂಬುವನು ಹೋರಾಡಿ ಸಾಯುತ್ತಾನೆ.[೩೮] ಊರಿನ ತುರುಗಳನ್ನು ಅಪಹರಿಸಿದಾಗಲೋ, ಇನ್ನಾವುದೋ ರೀತಿಯ ತೊಂದರೆ ಹಳ್ಳಿಗೆ ಒದಗಿದಾಗ 'ಸಾಸಿರ್ವ್ವರ', 'ಮಹಾಜನರ' ಮಕ್ಕಳು. ತಮ್ಮ ಊರಿನ ಪರವಾಗಿ ಹೋರಾಡುತ್ತಿದ್ದಂತೆಯೇ ತಮ್ಮ ಊರಿನ ಗಡಿಕಾಳಗದಲ್ಲಿಯೂ ಭಾಗವಹಿಸುತ್ತಿದ್ದುದನ್ನು ಗಮನಿಸಿದರೆ, ಹಾಗೆ ಮಾಡುವುದು ಅವರ ಕರ್ತವ್ಯಗಳಲ್ಲಿ ಒಂದಾಗಿತ್ತೆಂದು ತೋರುತ್ತದೆ. ಇಂಥ ಜಗಳಕ್ಕೆ, ಘರ್ಷಣೆಗೆ ಇಡೀ ಒಂದು ಗ್ರಾಮವೇ ಸಿದ್ಧವಾಗಿರುತ್ತಿತ್ತು ಅಥವಾ ಬೆಂಬಲ ನೀಡುತ್ತಿತ್ತು ಎಂಬ ಅಂಶವೂ ಸ್ಪಷ್ಟವಾಗುತ್ತದೆ.

ಕ್ರಿ. ಶ. ೧೧೯೦ರ ಎರಡು ವೀರಗಲ್ಲುಗಳಿಂದ ಸೀಮಾ ಸಂಬಂಧದ ಕಾಳಗವೊಂದರ ಸಂಪೂರ್ಣ ವಿವರಗಳು ದೊರೆಯುತ್ತವೆ.[೩೯] ಯಿಂದವೂರದವರು ಉಪ್ಪವಳ್ಳಿಯವರೊಡನೆ ಹೊಲಮೇರೆಗೆ ಕಾದಾಟ ಮಾಡುವಾಗ ಚಂಡಗಾವುಂಡ ಮತ್ತು ಇತರರು ಸಾಯುತ್ತಾರೆ. ಆಗ 'ತೊಂಭತ್ತುನಾಡೂರ ಕಣಿಗಿಲ ದೇಕಣ ಹೆಗ್ಗಡೆ'ಯರು ಎರಡು ಕಡೆಯಲ್ಲೂ ಅನ್ಯಾಯವಾಗಿ ರಕ್ತ ಪಾತಾವಾಗಬಾರದು ಎಂದು ಭಾವಿಸಿ ಎರಡೂ ಹಳ್ಳಿಯ ಹಿರಿಯರನ್ನು ಕರೆಸುತ್ತಾರೆ. ಹಳ್ಳಿಯ ಸೀಮೆಯನ್ನು ಗುರುತಿಸಿ ನ್ಯಾಯವಾಗಿ ತೀರ್ಮಾನ ಹೇಳುತ್ತಾರೆ. ಆಗ ತಮ್ಮ ಊರಿನ ಪರವಾಗಿ ಉಪ್ಪವಳ್ಳಿಯಲ್ಲಿ ಮಡಿದ ವೀರರ ಮನೆಯವರಿಗೆ ಯಿಂದವೂರಿನವರು ಪರಿಹಾರವನ್ನು ನೀಡಿ ಬಳಿಕ ವೀರಗಲ್ಲನ್ನು ನೆಡಿಸುತ್ತಾರೆ. ಈ ಶಾಸನದಿಂದ ಒಂದು ಹಳ್ಳಿಗೂ ಮತ್ತೊಂದು ಹಳ್ಳಿಗೂ ಸೀಮಾ ಸಂಬಂಧದ ಕಾಳಗಗಳು ನಡೆದಾಗ ಅಕ್ಕಪಕ್ಕದ ಹಳ್ಳಿಯವರು ಪ್ರವೇಶಮಾಡಿ ಹೊಲಮೇರೆಗಳ ನಿಷ್ಕರ್ಷೆ ಮಾಡುತ್ತಿದ್ದರು. ಮತ್ತು ಇದಕ್ಕೆ ಬಹುಶಃ ಎರಡೂ ಹಳ್ಳಿಯವರೂ

---

೩೭ M. A. R.1927. 13, 1136

೩೮ E. C. VIII. Sb. 252, 1143

೩೯ M. A. R.1932. 12 ಮತ್ತು E.C.VI. Cm, 30, 1190

ಒಪ್ಪುತ್ತಿದ್ದರೆಂದು ತಿಳಿಯುತ್ತದೆ. ಈ ರೀತಿಯ ತೀರ್ಮಾನಗಳು ಅನವಶ್ಯಕ, ಉದ್ವೇಗ ಪೂರ್ಣ ರಕ್ತಪಾತಗಳನ್ನು ನಿಲ್ಲಿಸಿವೆ ಎಂಬುದಾಗಿ ಹೇಳಬಹುದು.

ಗಡಿಕಾಳಗದಲ್ಲಿ ಮಡಿದ ವೀರರ ಪ್ರಸ್ತಾಪ ಇನ್ನೂ ಮೂರು ನಾಲ್ಕು ವೀರಗಲ್ಲುಗಳಲ್ಲಿ ಬರುವುದಾದರೂ ಅವುಗಳ ಪಾಠ ಯಾವ ರೀತಿಯಿಂದಲೂ ಗಮನಾರ್ಹವಾಗಿಲ್ಲ.೪೦

ಊರಳಿವು ಮತ್ತು ಊರಹುಯ್ಯಲಿನಲ್ಲಿ ಮಡಿದ ವೀರರು

'ಊರಟಿವು' ಎಂಬುದನ್ನು ಡಾ. ಎಂ. ಚಿದಾನಂದ ಮೂರ್ತಿಗಳು ಯುದ್ಧ ಪ್ರಭೇದವೆಂದು ರನ್ನನ 'ಗದಾಯುದ್ಧ'ದ ಪದ್ಯವೊಂದರ ಆಧಾರದ ಮೇಲೆ ಭಾವಿಸುತ್ತಾರೆ. ಈ ಬಗ್ಗೆ ಅವರು ಮುಂದುವರಿದು ಬರೆಯುತ್ತಾ "ಯುದ್ಧ ಪ್ರಭೇದಗಳಲ್ಲಿ ಒಂದೊಂದು ಇನ್ನೊಂದರಿಂದ ಸಂಪೂರ್ಣ ಭಿನ್ನವೆಂದೂ ಎಲ್ಲವನ್ನೂ ಗೆರೆ ಎಳೆದು ಬೇರ್ಪಡಿಸಬಹುದೆಂದೂ ಭಾವಿಸಬಾರದು. ಒಂದರ ಜೊತೆಯಲ್ಲಿ ಇನ್ನೊಂದು ಬೆರೆತಿರಬಹುದು"[೪೧] ಈ ಊರಟಿವು ಎಂಬ ಪದವನ್ನು ರನ್ನನು ಪ್ರಯೋಗಿಸಿರುವ ಒಂದು ಧೋರಣೆಯನ್ನೂ ಸಂದರ್ಭವನ್ನೂ ಗಮನಿಸಿದಾಗ ಊರಟಿವು ಎಂಬುದು ಯುದ್ಧ ಪ್ರಭೇದವೆಂಬ ಅರ್ಥದಲ್ಲಿ ಪ್ರಯೋಗವಾಗಿದೆಯೆಂದು ತೋರುತ್ತದೆ.

ಭಾರತೀಯ ಯುದ್ಧ ತಂತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಯುದ್ಧದಲ್ಲಿ ಗೆದ್ದ ಅರಸನು ತಾನು ಆಕ್ರಮಣ ಮಾಡಿ ಗೆದ್ದ ಅರಸನ ರಾಜ್ಯವನ್ನು ಲೂಟಿ ಮಾಡುತ್ತಿದ್ದ, ಕೆಲವೊಮ್ಮೆ ಗ್ರಾಮಗಳನ್ನು ಸುಡುತ್ತಿದ್ದ ಅಂಶ ತಿಳಿಯುತ್ತದೆ. ಎಱೆಯಂಗನು ಮಾಳವ ದೇಶದ ರಾಜಧಾನಿಯಾದ ಧಾರಾನಗರವನ್ನೂ, ಬಲ್ಲಾಳನು ಉಚ್ಚಂಗಿಯನ್ನೂ ಸುಟ್ಟ ವಿಷಯವನ್ನು ಇಲ್ಲಿ ಸ್ಮರಿಸಬಹುದು. ಉಚ್ಚಂಗಿಯನ್ನು ಗೆದ್ದನಂತರ ಬಲ್ಲಾಳನ ಪಕ್ಷದವರು ಅದನ್ನು ಲೂಟಿಮಾಡಿ ಅಪಾರವಾದ ಸಂಪತ್ತನ್ನು ದೋಚಿದ ವಿಷಯವನ್ನು ಇಲ್ಲಿ ಸ್ಮರಿಸಬೇಕು. ಈ ರೀತಿ ಶತ್ರುರಾಜರ ರಾಜ್ಯವನ್ನು ಲೂಟಿ ಮಾಡುವಾಗ ತುರುಗಳನ್ನು ಕದಿಯುತ್ತಿದ್ದರು. ಬೆಳೆಗಳನ್ನು ನಾಶಪಡಿಸುತ್ತಿದ್ದರು. ಹೆಂಗಸರ ಮಾನಭಂಗ ಮಾಡುತ್ತಿದ್ದರು. ಹೊಯ್ಸಳರ ವಿಷ್ಣುವರ್ಧನನು ಘಟ್ಟದ ಪ್ರದೇಶದಲ್ಲಿ ಧಾಳಿ ಮಾಡಿದಾಗ ಅಡಿಕೆ, ತೆಂಗು, ಮುಂತಾದ ಬೆಳೆಗಳನ್ನೂ, ತೇಗದ ಮರಗಳನ್ನೂ ಸುಟ್ಟ ವಿಷಯ ಒಂದು ಕಡೆ ತಿಳಿಯುತ್ತದೆ.[೪೨] ಬಹುಶಃ ಇಂತಹ ಕೃತ್ಯಗಳನ್ನು ನಮ್ಮ ಜನ ಊರಟಿವು ಎಂಬುದಾಗಿ ಗುರುತಿಸುತ್ತಿದ್ದರೆಂದು ತೋರುತ್ತದೆ. ಈ ಬಗ್ಗೆ 'ಯುದ್ಧ' ಎಂಬ ಅಧ್ಯಾಯದಲ್ಲಿ

---

೪೦ E. C. IV. Hn. 70, ೧೨ ನೇ ಶತ. ಮತ್ತು M.A.R.1926.22, ೧೨ನೇ ಶತ

೪೧ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೮೨

೪೨ William Colho : The Hoysala Vamsa. ಪು. ೨೫೯

ವಿವರವಾಗಿ ಪರಿಶೀಲಿಸಲಾಗುವುದು. ಈ ಒಂದು ಹಿನ್ನೆಲೆಯಲ್ಲಿ ರನ್ನನ ಆ ಪದ್ಯವನ್ನು ಹೀಗೆ ವ್ಯಾಖ್ಯಾನ ಮಾಡಬಹುದೆಂದು ತೋರುತ್ತದೆ.

ವ್ಯಕ್ತಿ ತನ್ನನ್ನು ಒಂದು ಸಮಾಜದ ಜೊತೆಯಲ್ಲಿ ಗುರುತಿಸಿಕೊಂಡಾಗ ಅದರಲ್ಲಿ ತಾನೂ ಒಂದು ಅಂಶ ಎಂಬುದಾಗಿ ಭಾವಿಸುತ್ತಾನೆ. ತನ್ನ ಸಮಾಜದ ವಿರುದ್ಧ ಬೇರೆಯವರು ಸವಾಲು ಎಸೆದಾಗ, ಅದನ್ನು ಎದುರಿಸುವುದು ತನ್ನ ವೈಯಕ್ತಿಕ ಕರ್ತವ್ಯವೆಂದೇ ಪರಿಗಣಿಸಿ, ಸ್ವೀಕರಿಸಿ ನಿರ್ವಹಿಸುವ ಬಾಧ್ಯತೆ ಅವನದಾಗುತ್ತದೆ. ಹಾಗೆ ಅವನು ತನ್ನ ಈ ಕರ್ತವ್ಯವನ್ನು ಮರೆತರೆ ಅಥವಾ ಮಾಡದಿದ್ದರೆ ಅವನು ಹೇಡಿ ಎಂಬುದಾಗಿ ಸಮಾಜ ಅವನನ್ನು ಪರಿಗಣಿಸುತ್ತಿತ್ತು. ತನಗೆ ತೊಂದರೆಯಾದೀತೆಂದು, ತನ್ನ ಸ್ವಾರ್ಥಕ್ಕಾಗಿ ಸಮಾಜದ ಬಗ್ಗೆ ತನ್ನ ಕರ್ತವ್ಯವನ್ನು ಮರೆಯುವವನು ಹೇಡಿಯೇ ಸರಿ. ಅಂತಹ ಸವಾಲುಗಳಲ್ಲಿ ತುರುಗಾಳಗವೂ ಒಂದು. ಸ್ತ್ರೀಯರು ಅಬಲೆಯರಾದ ಕಾರಣ. ಈ ಅಬಲೆಯರ ಮೇಲೆ ದುಷ್ಟರು ಆಕ್ರಮಣ ಮಾಡಿದಾಗ ಅವರನ್ನು ದುಷ್ಟರಿಂದ ಮುಕ್ತರನ್ನಾಗಿ ಮಾಡಿ ಅವರ ಮಾನವನ್ನು ಕಾಪಾಡುವುದು ವೀರತ್ವದ ಲಕ್ಷಣವೆಂದು ಭಾವಿಸಿದ್ದರು.

ಪ್ರಭುವಿನ ಆಳಾಗಿ ಅವನ ಮನೆಯ ಮಗನಾದ ಮೇಲೆ, ಅನ್ನದ ಋಣವನ್ನು ತೀರಿಸುವ ಸಲುವಾಗಿ ತನ್ನ ಪ್ರಾಣದ ಹಂಗನ್ನು ತೊರೆದು ಆತನಿಗಾಗಿ ಹೋರಾಡಬೇಕು. ಹಾಗೆಯೇ ತನ್ನ ನೆಂಟನಾದವನಿಗೆ ಆಪತ್ತು ಒದಗಿದಾಗ ತಾನ ಅವನ ನಿಜವಾದ ನೆಂಟ ಎಂಬುದನ್ನು ತೋರಿಸಬೇಕಾದರೆ ಅವನ ಕಷ್ಟಗಳಲ್ಲಿಯೂ ಭಾಗಿಯಾಗಬೇಕು. ತನ್ನ ಆಶ್ರಯದಾನ ಋಣವನ್ನು ತೀರಿಸುವಲ್ಲಿ ಹೋರಾಡುವುದು ಪ್ರತಿಯೊಬ್ಬ ಯೋಧನ ಧರ್ಮ. ಹೀಗೆ ಮಾಡುವಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿ, ಸಂಪೂರ್ಣ ಸೋಲನ್ನು ಅನುಭವಿಸಿ, ಶತ್ರು ರಾಜರು ಗ್ರಾಮಗಳನ್ನು ಆಕ್ರಮಿಸಿ ತಮ್ಮ ಕಡೆಯ ನಿರಪರಾಧಿಗಳನ್ನು, ನಿರಾಯುಧರನ್ನು, ಅಶಕ್ತರನ್ನು, ಅಬಲೆಯರನ್ನು ಹಿಂಸಿಸಿ ಊರಿನ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರಬೇಕಾದರೆ ಅದನ್ನ ಕಂಡೂ ಕಾಣದಂತೆ ಇರುವವನು ಷಂಡನೇ ಸರಿ ಎಂಬುದು ಅಂದಿನ ಜನರ ಮನೋಧರ್ಮವಾಗಿತ್ತು. ಆದ್ದರಿಂದ ರಕ್ಷಣೆಯ ಕಾರ್ಯಕ್ಕೆ ಜನ ಧಾವಿಸುತ್ತಿದ್ದರು. ಈ ರೀತಿ ಸ್ವಯಂಪ್ರೇರಿತರಾಗಿ ಮಡಿದ ವೀರರ ಹಲವಾರು ವೀರಗಲ್ಲುಗಳು ಕರ್ನಾಟಕದಲ್ಲಿ ದೊರೆಯುತ್ತವೆ.

ಈ ಎಲ್ಲಾ ವಿವರಣೆಯಿಂದ ಊರಟಿವು ಎಂದರೆ ಯುದ್ಧಾನಂತರ ಗೆದ್ದ ಪಕ್ಷದವರು ಸೋತ ಪಕ್ಷದವರ ಗ್ರಾಮಗಳ ಮೇಲೆ ದುರಾಕ್ರಮಣಮಾಡುವ ಒಂದು ವಿಷಮಪರಿಸ್ಥಿತಿ ಎಂಬುದು ಸ್ಪಷ್ಟವಾಗುತ್ತದೆ.

ಮೇಲಿನ ಅಭಿಪ್ರಾಯಕ್ಕೆ ವೀರಗಲ್ಲುಗಳ ಪಾಠದಿಂದಲೂ ಆಧಾರಗಳು ವಿರಳವಾಗಿಯಾದರೂ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪರಿಶೀಲಿಸುವುದು ಸೂಕ್ತ 'ಕಿರುತ್ತಿರು' ಎಂಬ ಗ್ರಾಮದ 'ಊರಳಿ'ವಿನಲ್ಲಿ ಶತ್ರು ಪಕ್ಷದವರು ಆ ಊರಿನ 'ಪನ್ದಿ, ಪೊಡಱ, ಎಮ್ಮೆ, ತುಱು'ಗಳನ್ನು ಅಪಹರಿಸಿದಾಗ ಸಾವುರ ಎಂಬುವನು ದಾಳಿಕಾರರ ಮೇಲೆ ಆನೆಯನ್ನು ಬಿಟ್ಟು ಹೋರಾಡಿ ಸಾಯುತ್ತಾನೆ.[೪೩] ಕ್ರಿ.ಶ. ೧೦೮೪ರ ಮತ್ತೊಂದು ವೀರಗಲ್ಲಿನ ಪಾಠದಿಂದ ಕದಂಬಕುಲದ ಶಾಖೆಯೊಂದರ ಅರಸನಪರವಾಗಿ ಬಂದು ಕೋಗೋಡನ್ನು ಆಕ್ರಮಣ ಮಾಡಿ 'ಮಾಚಿ ತಾಯಿ' ಎಂಬ ಹೆಂಗಸಿನ ಮಾನಾಪಹರಣವಾಗುತ್ತಿರಲು ಊರಿನ ತುರುಗಳನ್ನು ಹೊಡೆದುಕೊಂಡು ಹೋಗುತ್ತಿರಲು, ಮಾಚ ಎಂಬುವನು ಹೋರಾಡಿ ಸಾಯುತ್ತಾನೆ[೪೪] ಎಂಬುದಾಗಿ ತಿಳಿಯುತ್ತದೆ. ಇದೇ ಸಂದರ್ಭದಲ್ಲಿ ಈ ಹಿಂದೆ ಗಮನಿಸಿದ ದೊಡ್ಡ ಉಳ್ಳರ್ತಿಯ ಶಾಸನವನ್ನೆ ಇಲ್ಲಿ ಸ್ಮರಿಸಬಹುದು. ಕ್ರಿ.ಶ. ೧೨೫೯ರ ಮತ್ತೊಂದು ವೀರಗಲ್ಲು "ಊರಳಿವಿನ ಸೆಱೆ ತುರು ಹರಿವಲ್ಲಿ" ತಮ್ಮ ಭೂಮಿಗಾಗಿ ಆರುಜನ ವೀರರು ಸತ್ತ ವಿಷಯ ತಿಳಿಸುತ್ತದೆ.[೪೫]

ಮೇಲಿನ ಈ ಉದಾಹರಣೆಗಳನ್ನು ಗಮನಿಸಿ ಹೇಳುವುದಾದರೆ ಶತ್ರುಗಳು ಒಂದು ರಾಜ್ಯವನ್ನೋ ಪಟ್ಟಣವನ್ನೋ ಆಕ್ರಮಣಮಾಡಿ ಲೂಟಿ ಮಾಡುವ ಸಂದರ್ಭವನ್ನು ನಮ್ಮ ಜನ 'ಊರಳಿವು' ಎಂಬುದಾಗಿ ಪರಿಗಣಿಸಿದ್ದಂತೆ ತೋರುತ್ತದೆ. ಆ ಹೋರಾಟ ಯಾವುದೇ ಪ್ರಮಾಣದಲ್ಲಿಯೇ ಇರಲಿ ಅದನ್ನು ಅವರು 'ಊರಳಿವು' ಎಂಬುದಾಗಿ ಕರೆಯುತ್ತಿದ್ದರು.

ಊರಿನ ಹುಯ್ಯಲಿನಲ್ಲಿ ಸತ್ತವರು

ವೀರಗಲ್ಲುಗಳ ಪಾಠದಿಂದ ವಿರಳವಾಗಿ ಹುಯ್ಯಲುಗಳಲ್ಲಿ ಸತ್ತ ವೀರರ ಉಲ್ಲೇಖಗಳು ದೊರೆಯುತ್ತವೆ. ಆದರೆ ವೀರಗಲ್ಲುಗಳ ಪಾಠದಿಂದ ಈ ಹುಯ್ಯಲುಗಳು ಏಕೆ, ಯಾರುಯಾರಿಗೆ ಆಯಿತು ಎಂಬುದರ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಕೇವಲ ಜಗಳ ಇರಬೇಕೆಂದಷ್ಟೇ ಹೇಳಬಹುದು. ಕಲಿಯೂರಿನವರಿಗೂ ಮತ್ತು ಪಕ್ಕದ ಮಾಲಂಗಿಯವರಿಗೂ ನಡೆದ ಹುಯ್ಯಲಿನಲ್ಲಿ 'ಸುಬಲ್ಲಾಳ' ಮತ್ತು 'ಮಾರೋಜ' ಎಂಬುವರು ಸತ್ತ ವಿಷಯ ಎರಡು

---

೪೩ M. A. R.1923. 47,

೪೪ M. A. R.1939. 36. 1084

೪೫ E. C. IX. Kn. 71, 1259

ವೀರಗಲ್ಲುಗಳಿಂದ ತಿಳಿಯುತ್ತದೆ.[೪೬] ಹೀಗೆ ಇನ್ನೂ ಎರಡು ವೀರಗಲ್ಲುಗಳಲ್ಲಿ ಊರು ಹುಯ್ಯಲಿನಲ್ಲಿ ಮಡಿದ ವೀರರ ಪ್ರಸ್ತಾಪ ಬರುತ್ತದೆ.[೪೭] 'ಊರಟಿವು' ಎಂಬುದೇ 'ಊರ ಹುಯ್ಯಲು' ಎಂಬರ್ಥದಲ್ಲಿ ಪ್ರಯೋಗವಾಗಿರಬಹುದೆ ಎಂಬ ಸಂಶಯ ಬರುತ್ತದೆ. ಒಂದು ಊರಿನವರಿಗೂ ಮತ್ತೊಂದು ಊರಿನವರಿಗೂ ನಡೆದಿರಬಹುದಾದ ಜಗಳದ ಸಾಧ್ಯತೆಯೂ ಇರುವಂತೆ ಈ ಮೇಲೆ ಗಮನಿಸಿದ ಶಾಸನಗಳಿಂದ ಸೂಚಿತವಾಗುತ್ತದೆಯೆ ?

ನೀರಲ್ಲಿ ಸತ್ತವರು

ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿಸಿ, ನೀರಿನಲ್ಲಿ ಮಡಿದಿರಬಹುದಾದ ವೀರರ ಎರಡು ವೀರಗಲ್ಲುಗಳು ದೊರೆಯುತ್ತವೆ. ಆದರೆ ಅವುಗಳ ಮೇಲೆ ಶಾಸನ ಇಲ್ಲವಾದ್ದರಿಂದ ಆ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಈ ವೀರಗಲ್ಲುಗಳು ಹಂಪೆಯಿಂದ ತುಂಗಭದ್ರಾನದಿಯನ್ನು ದಾಟಿ ಆನೆಗೊಂದಿಗೆ ಹೋಗುವ ದಾರಿಯಲ್ಲಿ ಇವೆ. ಇಂದಿಗೂ ಅಂಬಿಗರು ಅವುಗಳನ್ನು ವಿಶೇಷ ಸಂದರ್ಭಗಳಲ್ಲಿ ಆರಾಧಿಸುತ್ತಾರೆ ಮತ್ತು ಅವುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ. ನಿಂತ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ರೀತಿಯ ವೀರಗಲ್ಲುಗಳು ಅಪರೂಪವೆಂದೇ ಹೇಳಬಹುದು (ಚಿತ್ರ ೩೭, ೩೮) ಪ್ರಸ್ತುತ ಸಂದರ್ಭದಲ್ಲಿ ನೌಕಾಯುದ್ಧದಲ್ಲಿ ಮಡಿದ ವೀರರ ಶಿಲ್ಪದ ವಿವರಗಳನ್ನೊಳಗೊಂಡ ಗೋವೆಯಲ್ಲಿನ ವೀರಗಲ್ಲುಗಳನ್ನು ಸ್ಮರಿಸಬಹುದು.

ಬೇಟೆಯಲ್ಲಿ ಮಡಿದ ವೀರರು

ಕರ್ನಾಟಕದಲ್ಲಿ ಪ್ರಚಲಿತವಿದ್ದ ಬೇಟೆಯ ವಿವರಗಳನ್ನು ತಿಳಿಯಲು ಇರುವ ಮೂಲ

---

೪೬ E. C. XIV. Tn. 227 ಮತ್ತು 229,1241

೪೭ (ಅ) E. C. XIV. Tp. 160, 1277. "ಬೊಂಮಯ ನಾಯ್ಕನು ಪೂರ ಹುಯ್ಯಲಿಕಾಗಿ ಕಾದಿಹೊಯ್ದು ಕಟಾಡಿ ಬಿದ್ದು ಸುರಲೋಕಕೆ ಸಂದ."
(ಆ) M. A. R.1928. 68. ? "ಕೂಡಲಿಯ ಶ್ರೀಮತು ಕೂಚಗೌಡನ ಮಗ ಕಾಮಗವುಡ ಪೂರ ಹುಯ್ಯಲಲಿ ಪಲರನಿಱಿದು ತಾನುಂ ಸುರಲೋಕಗತನಾದಂ"

ಸಾಮಗ್ರಿಗಳೆಂದರೆ ವೀರಗಲ್ಲುಗಳು. ಇವುಗಳನ್ನು ವಿವರಿಸುವಲ್ಲಿ ಕನ್ನಡಕಾವ್ಯಗಳಲ್ಲಿ ಬರುವ ಬೇಟೆಯ ವರ್ಣನೆಯನ್ನು ಉಪಯೋಗಿಸಿಕೊಳ್ಳಬೇಕಾಗುವುದು.

ಭಾರತದಲ್ಲಿ ಬೇಟೆ ಎರಡು ಸ್ತರಗಳಲ್ಲಿ ಬೆಳೆದಿರುವುದನ್ನು ಗಮನಿಸಬಹುದು. ಮೊದಲನೆಯದಾಗಿ ಜೀವನ ನಿರ್ವಹಣೆಯ ಸಲುವಾಗಿಯೋ ಅಥವಾ ಸ್ವರಕ್ಷಣೆಯ ಸಲುವಾಗಿಯೋ ಬೆಳೆದುಬಂದುದು. ಎರಡನೆಯದಾಗಿ ಅರಸು ಮನೆತನಗಳವರು ವಿಹಾರಾರ್ಥವಾಗಿ, ಮೋಜಿಗಾಗಿ ಆಡುತ್ತಿದ್ದ 'ಮೃಗಯಾ ವಿಹಾರ'. ಎರಡನೆಯದು ಒಂದು ಸುವ್ಯವಸ್ಥಿತ ರೀತಿಯಲ್ಲಿ ನಿಗದಿಯಾದ ಕಾಲದಲ್ಲಿ. ನಿಗದಿಯಾದ ಸ್ಥಳದಲ್ಲಿ ಆಡುತ್ತಿದ್ದ ಬೇಟೆ. ವೀರಗಲ್ಲುಗಳಿಂದ ಮೊದಲನೆಯ ಸ್ತರದ ಬೇಟೆಯ ಬಗ್ಗೆ ಮಾಹಿತಿ ದೊರೆತರೆ, ಕಾವ್ಯಗಳಿಂದ ಎರಡನೆಯ ಸ್ತರದ ಬೇಟೆಯ ವಿವರಗಳು ದೊರೆಯುತ್ತವೆ. ಭಾರತದಲ್ಲಿ ರಾಜ್ಯವಾಳಿದ ಅನೇಕಾನೇಕ ಅರಸುಗಳಿಗೆ ಬೇಟೆಯೆಂಬುದು ಬಹಳ ಪ್ರಿಯವಾದ ಮತ್ತು ತಮ್ಮ ಶಸ್ತ್ರಪ್ರಯೋಗ ಪರಿಣತಿಯ ಪ್ರೌಢಿಮೆಯನ್ನು ಪ್ರಕಾಶ ಪಡಿಸುವ ಕ್ರೀಡೆಯಾಗಿತ್ತು.[೪೮]

ಮೈಸೂರು ಅರಸು ಮುಮ್ಮಡಿ ಕೃಷ್ಣರಾಯರಿಂದ ಬರೆಯಲ್ಪಟ್ಟಿರುವುದೆಂದು ಹೇಳಲಾಗಿರುವ 'ಸೌಗಂಧಿಕಾ ಪರಿಣಯ' ಎಂಬ ಕೃತಿಯು ಕರ್ನಾಟಕದಲ್ಲಿ ಬೇಟೆಯನ್ನಾಡುತ್ತಿದ್ದ ಪದ್ಧತಿಯ ಬಗ್ಗೆ ಸ್ವಾರಸ್ಯವಾದ ಮಾಹಿತಿಯನ್ನು ಒದಗಿಸುತ್ತದೆ. ಸುಗಂಧ ರಾಜನು ಮೃಗಯಾ ವಿಹಾರಕ್ಕೆ ಹೊರಟ ವರ್ಣನೆಯನ್ನು ನೀಡುತ್ತಾ ಬೇಟೆಯಾಡುವುದರ ಸಹಜ ಚಿತ್ರವನ್ನು ಕವಿ ನೀಡಿದ್ದಾನೆ. ಅವುಗಳನ್ನು ಸಂಗ್ರಹವಾಗಿ ಪರಿಚಯ ಮಾಡಿಕೊಳ್ಳುವುದು ಸೂಕ್ತ. ಸಂಭ್ರಮ ಸಡಗರಗಳಿಂದ ಮೃಗಯಾ ವಿಹಾರಕ್ಕೆ ಹೊರಟ ಅರಸನು ಕಾಡನ್ನು ಪ್ರವೇಶಿಸುತ್ತಲೇ ತನ್ನ ಕಡೆಯವರಿಗೆ ತುಂಬಾ ನಿಶ್ಯಬ್ಧವಾಗಿ ಮುಂದುವರೆಯುವಂತೆ ತಿಳಿಸುತ್ತಾನೆ. ವಾದ್ಯಗಳ ಧ್ವನಿಯನ್ನು ಕೇಳಿ ಮೃಗಗಳು ಓಡಿಹೋಗಬಹುದೆಂದು, ಕುದುರೆಗಳು ಕೆನೆದರೂ ಅವುಗಳ ಧ್ವನಿಯನ್ನು ತಿಳಿದ ಮೃಗಗಳು ಓಡಿಹೋಗಬಹುದೆಂದು ಅರಸು ಅವುಗಳ ಬಾಯಿಗೆ ಕಟ್ಟುಗಳನ್ನು ಬಿಗಿಸುತ್ತಾನೆ. ಒಬ್ಬರಿಗೊಬ್ಬರು

---

೪೮ ಪಂಪ : ವಿಕ್ರಮಾರ್ಜುನ ವಿಜಯ. ೫–೪೭
"ಬಲ್ಮೆಗಂ ಬಸನಕ್ಕಂ ಸವಿಯಪ್ಪ ಕಿಱ : ವೆಂಟೆಯಂ ಪೇರ್ವೆಂಟೆಯುಂ ಅಲ್ಲದುಟಿದು
ಬೇಟೆಯಂ ಬೇಟೆಯೆನ್ನೆಂ –
ಪುಸಿವು ದೊರೆಕೊಳ್ಗಮುಣಿಸುಗಳಿನಿಕೆಯ್ಗು ಮಾವಂದದೊಳ್ ಕನಲ್ದಾದ ಮೆಯ್ಯು
ನಸಿಯನಾಗಿಪುದುಲೀಯದುವಪ್ಪುವು ಬಗೆಗೊಳಲಪ್ಪುದು ಮೃಗದ ಮಯ್ಯೊಳ್।
ನಿಸದಮೆಸೆವುದಂ ಬಲ್ಲಾಳ ಬಿಲ್ಬಲ್ಮೆ ತನ್ನೊಳಮಿಸುತೆ ಲೇಸಪ್ಪುದು ।
ಬಸನ ಮೆಂದಱೆಯದೇಳಿಸುವರ್ ಬೇಂಟೆಯಂ ಬೇಂಟೆಯೆ ಬಿನದಂಗಳರಸಲ್ತೇ ॥

ಮಾತಾಡಬೇಕಾದರೆ ಸಂಜ್ಞೆ ಸೂಚನೆಗಳಿಂದಲೇ ಮಾತಾಡುತ್ತಾರೆ. ಅವರು ಇಂಥ ಪ್ರಾಣಿ ಇಂಥ ಕಡೆಯೇ ಇರಬೇಕೆಂಬ, ಇರಬಹುದೆಂಬ ಊಹೆಯನ್ನು ಹಲವಾರು ಸೂಚನೆಗಳಿಂದ ತಿಳಿಯುತ್ತಾರೆ. ಉದಾಹರಣೆಗೆ ಹುಲಿಗಳನ್ನು –ಅವುಗಳು ಹಿಡಿದುಕೊಂಡು ಹೋದ ಕಡವೆಗಳ ರಕ್ತದಿಂದ ಅಂದರೆ ಹುಲಿ ಕಡವೆಗಳನ್ನು ಕೊಂದು ತನ್ನ ಗುಹೆಯತ್ತ ಎಳೆದೊಯ್ಯುವಾಗ ಸುರಿದ ರಕ್ತದಿಂದ, ಈ ರೀತಿ ಎಲೆದೊಯ್ಯುವಾಗ ಆ ಕಡವೆಯ ದೇಹವು ತರುಚಿಕೊಂಡ ಸೂಚನೆಗಳಿಂದ, ಕಂಡುಹಿಡಿಯುತ್ತಾರೆ. ಹಾಗೆಯೇ ಹಂದಿಗಳನ್ನು – ಅವು ತಮ್ಮ ಮುಸುಡಿಗಳಿಂದ ಗೆಡ್ಡೆಗೆಣಸುಗಳನ್ನು ಅಲ್ಲಲ್ಲಿ ಅಗೆದ ಸೂಚನೆಗಳಿಂದ, ಅರ್ಧ ತಿಂದು ಬಿಟ್ಟ ಗೆಡ್ಡೆ ಗೆಣಸುಗಳ ಅವಶೇಷಗಳಿಂದ ತಿಳಿಯುತ್ತಿದ್ದರು.

ಬೇಟೆಯನ್ನಾಡುವ ವಿಧಾನಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುವ ಅಥವಾ ವಿವರಿಸುವ ಯಾವ ಶಾಸ್ತ್ರಗ್ರಂಥಗಳೂ ಬಂದಿಲ್ಲ. ಗಿಡುಗ ಮುಂತಾದ ಹಕ್ಕಿಗಳಿಗೆ ಶಿಕ್ಷಣ ನೀಡಿ ಆ ಮೂಲಕ ಪಕ್ಷಿಗಳನ್ನು ಹಿಡಿಯುವ ವಿಧಾನವನ್ನು ಶಾಸ್ತ್ರಬದ್ಧ ರೀತಿಯಲ್ಲಿ ವಿವರಿಸುವ ಗ್ರಂಥವೊಂದರಲ್ಲಿ ಪ್ರಾಸಂಗಿಕವಾಗಿ ಇತರ ಬೇಟೆಯ ವಿವರಗಳನ್ನು ಗಮನಿಸಬಹುದು. ಇಲ್ಲಿ ದೊರೆಯುವ ಮಾಹಿತಿ ಬಹಳ ಕಡಿಮೆಯಾದರೂ[೪೯] ಒಂದು ಚಿತ್ರವನ್ನು ಕಲ್ಪಿಸಿಕೊಳ್ಳುವಲ್ಲಿ ಅದು ನೆರವಾಗುತ್ತದೆ ಎನ್ನುವುದು ಮುಖ್ಯ.

ಮೇಲೆ ಹೇಳಿದ ಶಾಸ್ತ್ರಗ್ರಂಥದಲ್ಲಿ ಬೇಟೆಯಾಡುವ ವಿಧಾನವನ್ನು ಗಮನದಲ್ಲಿಟ್ಟುಕೊಂಡು ಬೇಟೆಯನ್ನು ಈ ರೀತಿ ವಿಭಾಗ ಮಾಡುತ್ತಾರೆ.

ಅಶ್ವಿನಾ	–	ಕುದುರೆಯ ಮೇಲೆ ಕುಳಿತು ಬೇಟೆಯಾಡುವುದು.
ಸಜಾಲ	–	ಬಲೆಯ ಮೂಲಕ ಬೇಟೆಯಾಡುವುದು.
ಕಾಲ್ಯಾ	–	ತಂತ್ರಗಳನ್ನುಪಯೋಗಿಸಿ ಬೇಟೆಯಾಡುವುದು.
ಯಾವಶೀ	–	ಪ್ರಾಣಿಗಳ ಚಹರೆಯನ್ನು ಅನುಸರಿಸಿ ಬೇಟೆಯಾಡುವುದು ಅಥವಾ ಪ್ರಾಣಿಗಳ ಇರುವಿಕೆಯನ್ನೂ ಅದರ ಕುರುಹುಗಳನ್ನೂ ಅರಿತು ಬೇಟೆಯಾಡುವುದು.
ಸಾಪ್ರೇಕ್ಷ	–	ಪ್ರಾಣಿಯನ್ನು ಗುರಿ ನೋಡಿ, ಆ ಗುರಿಗೆ ಅಸ್ತ್ರಗಳನ್ನು ಒಗೆದು ಬೀಸಿ ಕೊಲ್ಲುವುದು.

೪೯ Suresh Chandra Banerji : The Asepects of Ancient Indian Life from Sanskrit Sources. ಪು. ೨೧

ಪಾದಪ್ರೇಕ್ಷ – ಪ್ರಾಣಿಯ ಕಾಲಿನ ಗುರುತುಗಳನ್ನು ಹಿಡಿದು ಬೇಟೆಯಾಡುವ ವಿಧಾನ.

ಶ್ವಾಣಿಕಾ – ನಾಯಿಗಳನ್ನು ಪ್ರಾಣಿಗಳ ಮೇಲೆ ಬಿಟ್ಟು, ಆ ಮೂಲಕ ಅವುಗಳನ್ನು ನಿಲ್ಲಿಸಿ, ಶಸ್ತ್ರಪ್ರಯೋಗ ಮಾಡಿ ಬೇಟೆಯಾಡುವುದು.

ಮೇಲೆ ಹೇಳಿದ ವಿಧಾನಗಳಲ್ಲಿ ಬೇಟೆಯಾಡುವುದರಿಂದ 'ಧರ್ಮಾರ್ಥ ಕಾಮಮೋಕ್ಷ'ಗಳು ಲಭಿಸುತ್ತವೆ ಎಂಬುದಾಗಿ ಆ ಶಾಸ್ತ್ರಕಾರ ಅಭಿಪ್ರಾಯಪಡುತ್ತಾನೆ.[೫೦]

ಪ್ರಾಚೀನ ಕರ್ನಾಟಕದ ಜನ ಬೇಟೆಯನ್ನು ಹಲವಾರು ರೀತಿಗಳಲ್ಲಿ ವಿಂಗಡಿಸಿರುವುದನ್ನು ಗಮನಿಸಬಹುದು. ಯಾವ ಪ್ರಾಣಿ ಎಂಬುದರ ಮೇಲೆ ಈ ವಿಭಾಗಕ್ಕೆ ಹೆಸರು ನೀಡಲಾಗಿದೆ. ಅಂದರೆ ಬೇಟೆಯನ್ನು 'ಮಿಗವೇಂಟೆ', 'ಪಕ್ಕಿವೇಂಟೆ', 'ನೀರ್ವೇಂಟೆ', 'ಕಿಱುವೇಂಟೆ' – ಎಂಬುದಾಗಿ ಗುರುತಿಸಬಹುದು. ಹಂದಿ, ಪುಲ್ಲೆ ಮಱಿಸಾರಂಗ ಮೊದಲಾದ ಮೃಗಗಳನ್ನು ಬೇಟೆಯಾಡುವುದು 'ಮಿಗವೇಂಟೆ' ; ಗವುಜ, ಗೀಜಗ, ಗೊರವ, ಪಾರಿವಾಳ, ಗುಬ್ಬಿ, ಕಬ್ಬಕ್ಕಿ, ಬೆಳ್ವಕ್ಕಿ ಮೊದಲಾದ ಪಕ್ಷಿಗಳನ್ನು ಬೇಟೆಯಾಡುವುದು 'ಪಕ್ಕಿವೇಂಟೆ' ; ಮೀನು, ಏಡಿ ಮೊದಲಾದ ಜಲಚರ ಪ್ರಾಣಿಗಳನ್ನು ಹಿಡಿಯುವುದು 'ನೀರ್ವೇಂಟೆ' ; ಇಲಿ, ಬೆಳ್ವಿಲಿ ಮೊದಲಾದ ಬಿಲಚರ ಪ್ರಾಣಿಗಳನ್ನು ಹಿಡಿಯುವುದು 'ಕಿಱುವೇಂಟೆ'.[೫೧]

ಪಂಪನು ವಿಕ್ರಮಾರ್ಜುನ ವಿಜಯದಲ್ಲಿ ಬೇಟೆಯ ವಿಧಾನಗಳನ್ನು ತಿಳಿಸಿದ್ದಾನೆ. ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪ ತಾನೂ ಬೇಟೆಯಲ್ಲಿ ಭಾಗವಹಿಸಿದ್ದನೇನೋ ಎನ್ನುವ ಮಟ್ಟಿಗೆ ಆ ವರ್ಣನೆ. ವಿವರಣೆ ಸಹಜವಾಗಿದೆ. ಅವನ ಕಾವ್ಯದಿಂದ ತಿಳಿದುಬರುವ ಮಾಹಿತಿಯಿಂದ ಪ್ರಾಚೀನ ಕರ್ನಾಟಕದ ಜನ ಬೇಟೆಯಾಡುವ ಸುವ್ಯವಸ್ಥಿತ ಕ್ರಮವನ್ನು ಅರಿತಿದ್ದರು; ಪ್ರಾಣಿಯನ್ನು ಆಕರ್ಷಿಸಲು ಚಿಗರೆಯನ್ನು ಕಟ್ಟುವ, ಯಾವ ಸ್ಥಳದಿಂದ ಯಾವ ಅಸ್ತ್ರಗಳನ್ನು ಪ್ರಯೋಗಿಸಬೇಕೆಂಬ ಔಚಿತ್ಯ. ಯಾವ ಪ್ರಾಣಿಯ ಮೇಲೆ ಯಾವ ಅಸ್ತ್ರವನ್ನು ಯಾವಾಗ ಪ್ರಯೋಗಿಸಬೇಕು, ಪ್ರಾಣಿಗಳು ಯಾವಾಗ ಎಲ್ಲಿಗೆ ನೀರು ಕುಡಿಯಲು ಬರುತ್ತವೆ ಎಂಬ

---

೫೦ ಅದೇ. ಪು. ೨೩–೨೪

೫೧ ತಿರುಮಲಾರ್ಯ : ರಾಜನೃಪಚರಿತಂ (ಸಂ. ರಾಮಾನುಜ ಅಯ್ಯಂಗಾರ್.೧೯೨೩) ಪು.೬

೫೨ ಪಂಪ : ವಿಕ್ರಮಾರ್ಜುನ ವಿಜಯಂ. ೫–೪೧
"ಆಡಳಾಡಸಲ್ ಪಾಟಿಯಂನಿಱಿಸಲುಂ ಪರಿಗೊಳಲ್ ತೊವಲಿಕ್ಕಲೊಳಗಂಬರಲ್
ಕಾಡಬೇಲಿಯಂ ಮಾರ್ಕಾಡನಱಿಯಲುಂ ಮೂಡಿಗೆ ಕಕ್ಕುಂಬಂ ಸುಱಿಸಿ ಜೊಂಪಂ
ಬೀಡು ಬಿಡುವಿಂಬು ಕದಳಿ ತೆಂಗಿನ ತಾಣಂ ಜಾಣಿಂ ನೀರ್ದಾಣಮೆಂದೆಡೆಯಱಿದುಂ
ಮಾಡಲ್ ಮಾಡಿಸಲ್ ಪಡಮೆಚ್ಚೆ ನೀಂ ಮೆಚ್ಚೆ ಹರಿಗ ಕೇಳಾನೆ ಬಲ್ಲೆಂ"

ಅಂಶಗಳನ್ನು ತಿಳಿದು ಅದರ ಮೇಲೆ ಎರಗಿ ಬೀಳುವ ತಂತ್ರವನ್ನು ಬಲ್ಲವರಾಗಿದ್ದರೆಮದು ತಿಳಿಯುತ್ತದೆ.[೫೨] ಅಷ್ಟೇ ಅಲ್ಲದೆ, ಗಾಳಿಯ ಮೂಲಕ ಪ್ರಾಣಿಯ ವಾಸನೆಯನ್ನು ಹಿಡಿದು, ತಮ್ಮ ವಾಸನೆ ಪ್ರಾಣಿಗೆ ತಿಳಿಯಬಾರದೆಂಬ ಉದ್ದೇಶದಿಂದ ಗಾಳಿಗೆ ವಿರುದ್ಧವಾಗಿ ಹೋಗುವ, ಸ್ವರ್ಷಣೆಯ ಚಾತುರ್ಯವನ್ನೂ, ಇಂಥ ಮೃಗಕ್ಕೆ ಇಂಥದ್ದೆ ವಿಶೇಷ ಸಂಜ್ಞೆ ಎಂಬುದನ್ನು ತಿಳಿದು ಬೇಟೆಯಾಡುವ, ಆ ಸಂಜ್ಞೆಗಳನ್ನು ಅರಿತು ಅವುಗಳ ಹಿಕ್ಕೆಯನ್ನರಿಯುವುದರ ಮೂಲಕ ಅವುಗಳ ವಾಸಿಸುವ, ಓಡಾಡುವ ಸ್ಥಳದ ಸಂಪೂರ್ಣ ಪರಿಚಯವನ್ನು ಮಾಡಿಕೊಳ್ಳುವ ಸೂಕ್ಷ್ಮಮತಿಗಳಾಗಿದ್ದರು ಎಂಬುದಾಗಿಯೂ ತಿಳಿಯುತ್ತದೆ.[೫೩] ಇವು ಪ್ರಾಚೀನ ಕರ್ನಾಟಕದ ಬೇಟೆಗಾರರಿಗಿದ್ದ ಪೂರ್ವಸಿದ್ಧತೆಯ ಕೆಲವು ತಂತ್ರಗಳು. ಇವುಗಳನ್ನು ಯಾವ ರೀತಿ ಅನುಸರಿಸುತ್ತಿದ್ದರು ಎಂಬುದನ್ನು ಆಯಾ ಬೇಟೆಯ ವಿಷಯ ಬಂದಾಗ ಸುದೀರ್ಘವಾಗಿ ವಿವರಿಸಲಾಗುತ್ತದೆ.

ಕರ್ನಾಟಕದ ವೀರಗಲ್ಲುಗಳನ್ನು ಪರಿಶೀಲಿಸಿದಾಗ ಮುಖ್ಯವಾಗಿ ಕಾಡುಹಂದಿ ಮತ್ತು ಹುಲಿಯೊಡನೆ ಹೋರಾಡಿ ಸತ್ತ ವೀರರ ವೀರಗಲ್ಲುಗಳು ದೊರೆಯುತ್ತವೆ. ಇವು ಸ್ವಸಂರಕ್ಷಣೆಗಾಗಿ ಮಾಡಿದ ಬೇಟೆಗಳು. ಆನೆಯ ಬೇಟೆಯ ಬಗ್ಗೆ ಶಾಸನಗಳಿಂದ ಸ್ವಲ್ಪಮಟ್ಟಿಗೆ ಮಾಹಿತಿ ದೊರೆಯುತ್ತದೆ. ಮುಂದೆ ಈ ಬೇಟೆಗಳನ್ನು ಆಡುತ್ತಿದ್ದ ಉದ್ದೇಶವನ್ನು, ಬೇಟೆಯಲ್ಲಿ ಅನುಸರಿಸುತ್ತಿದ್ದ ವಿಧಾನಗಳನ್ನು ವಿವರವಾಗಿ ಪರಿಶೀಲಿಸಬಹುದು.

ಹಂದಿಯ ಬೇಟೆಯ ವೀರಗಲ್ಲುಗಳು

ಹಂದಿಯ ಬೇಟೆ ಕರ್ನಾಟಕದ ಅರಸರಿಗೆ ಬಹು ಪ್ರಿಯವಾದ ಬೇಟೆಯಾಗಿತ್ತೆಮದು ತೋರುತ್ತದೆ. ರಾಷ್ಟ್ರಕೂಟರ ಅರಸನಾದ ಗೋವಿಂದನು ಬೇಟೆಯಾಡುವುದರ ಸಲುವಾಗಿ ಹಂದಿಗಳನ್ನು ಮೇಯಿಸಿದ್ದನೆಂದೂ, ಒಮ್ಮೆ ತಾನು ರಾಮತೀರ್ಥಕ್ಕೆ ಬೇಟೆಯಾಡಲು ಹೋದಾಗ ಅಲ್ಲಿನ ಶಿವಧಾರೆ ಎಂಬ ಗೊರವನಿಗೆ, ಹಿಂದೆ ಕೀರ್ತಿವರ್ಮನೆಂಬ ಅರಸನು ಕೊಟ್ಟ ದತ್ತಿಯನ್ನು ಪುನರುಜ್ಜೀವಿಸಿದನೆಂದು ಒಂದು ತಾಮ್ರಶಾಸನದಿಂದ ತಿಳಿಯುತ್ತದೆ.[೫೪] ಹಂದಿಯ ಬೇಟೆಯಲ್ಲಿ

---

೫೩ ಪಂಪ : ವಿಕ್ರಮಾರ್ಜುನ ವಿಜಯಂ. ೫–೪೩
"ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂಗಣಿದಮಂ ಕಂಡಿಯಂ ಮಾರ್ಕಂಡಿಯಂ
ಪುಗಿಲಂ ಪೋಗಂ ಬಾರಿಯಂ ಸನ್ನೆಯಂ ನೂಱುವಮುರ್ಚ್ಚುವ ನಿಲ್ವೆಡೆಯಂ
ಬಗೆಯಂ ತೆಗೆಯನಲ್ಲಾಟಮಂ ಕಾಟಮಂ ನೋವುದಂ ಸಾವುದನೆಲ್ಲಂದದಿಂ
ಬಗೆದಾಗಳರಸರೊಳೆಲ್ಲ ಕೇಳ್ ನೀಂ ಬಲ್ಲೆ ಬೇಂಟೆಕಾಱರೊಳೆಲ್ಲವಾನೆ ಬಲ್ಲೆಂ"

೫೪ E. I. XXXII. ಪು. ೩೩೧

ಮಡಿದ ವೀರರ ಬಗ್ಗೆ, ಬೇಟೆಯಾಡಿದ ವಿಧಾನದ ಬಗ್ಗೆ ವೀರಗಲ್ಲುಗಳ ಪಾಠದಿಂದ ದೊರೆಯುವ ಮಾಹಿತಿ ಬಹಳ ಕಡಿಮೆಯಾದರೂ, ಈ ಬಗ್ಗೆ ವೀರಗಲ್ಲುಗಳ ಶಿಲ್ಪ ಅನೇಕ ರೀತಿಗಳಲ್ಲಿ ನೆರವಾಗುತ್ತವೆ. ಇದಕ್ಕೆ ಪೋಷಕವಾಗಿ, ಈ ಹಿಂದೆ ತಿಳಿಸಿದಂತೆ ಕಾವ್ಯಗಳಲ್ಲಿನ ವರ್ಣನೆಯನ್ನೂ ಬಳಸಿಕೊಳ್ಳಬೇಕಾಗುತ್ತದೆ.

ಪಂಪಭಾರತದ ಒಂದು ಪದ್ಯದಿಂದ, ವೀರರಾದವರಿಗೆ, ಬೇಟೆಗಾರರಾದವರಿಗೆ ತಮಗೆ ಹಂದಿ ಬೇಟೆಯಾಡುವುದರಲ್ಲಿ ವಿಶೇಷವಾದ ಪ್ರಾವೀಣ್ಯವಿದೆ ಎಂಬುದಾಗಿ ಹೇಳಿಕೊಳ್ಳುವುದು ಹೆಮ್ಮೆಯ ವಿಷಯವಾಗಿತ್ತೆಂದು ತಿಳಿಯುತ್ತದೆ.[೫೫]

ವೀರಗಲ್ಲುಗಳ ಪಾಠವನ್ನು ಮತ್ತು ಶಿಲ್ಪವನ್ನು ಗಮನಿಸಿದರೆ ಇವರು ಈ ಹಿಂದೆ ಗಮನಿಸಿರುವ 'ಪಾದಪ್ರೇಕ್ಷ' ಮತ್ತು 'ಶ್ವಗಣಿಕಾ' ವಿಧಾನಗಳನ್ನು ಅನುಸರಿಸುತ್ತಿದ್ದಂತೆ ತೋರುತ್ತದೆ.

ಪಾದಪ್ರೇಕ್ಷ ಮಾರ್ಗ : ಇದರಲ್ಲಿಯೂ ಎರಡು ವಿಧಾನಗಳಿವೆ. ಒಂದು, ನಾಯಿಗಳ ಸಹಾಯದಿಂದ ಬೇಟೆಗಾರ ತಾನು ಬೇಟೆಯಾಡುವ ಪ್ರಾಣಿಯನ್ನು ಗುರುತಿಸುವುದು. ಮತ್ತೊಂದು, ಪ್ರಾಣಿಯ ಹೆಜ್ಜೆಯ ಗುರುತುಗಳನ್ನು ಅನುಸರಿಸಿ ಹೋಗಿ ಅದು ಎಲ್ಲಿದೆ ಎಂಬುದನ್ನು ಅರಿತು ಬೇಟೆಯಾಡುವುದು.

ಶ್ವಗಣಿಕಾ ಮಾರ್ಗ : ಇಲ್ಲಿ ಬೇಟೆಯಾಡಲಿರುವ ಪ್ರಾಣಿಯನ್ನು ಗುರುತಿಸಿದ ಬೇಟೆಗಾರ ಅವುಗಳ ಮೇಲೆ ನಾಯಿಗಳನ್ನು ಬಿಟ್ಟು ಹೋರಾಡುವಂತೆ ಮಾಡುವುದು. ತಾನು ದೂರದಲ್ಲಿ ನಿಂತಿದ್ದು, ತನ್ನ ನಾಯಿಗಳಿಗೆ ಏಟು ಬೀಳದಂತೆ, ಪ್ರಾಣಿಯನ್ನೇ ಗುರಿಯಿಟ್ಟು ಶಸ್ತ್ರಪ್ರಯೋಗ ಮಾಡುವುದು.[೫೬]

ಪಾದಪ್ರೇಕ್ಷ ವಿಧಾನದಲ್ಲಿ ಬೇಟೆಯಾಡುವುದು ಬೇಟೆಗಾರನಿಗೆ ಹಲವಾರು ರೀತಿಗಳಲ್ಲಿ ಕ್ಷೇಮ. ಈ ವಿಧಾನಕ್ಕೆ ಹಂದಿಯು ಮಡಿಯದೇ ಹೋದರೆ ಬೇಟೆಗಾರ ನೇರವಾಗಿ ಹೋಗಿ ಹಂದಿಯನ್ನು ಇರಿಯುವ ಪ್ರಯತ್ನ ಮಾಡುತ್ತಿದ್ದ. ಹಂದಿಯ ಬೇಟೆಯಲ್ಲಿ ಮಡಿದ ವೀರರೆಲ್ಲರೂ ಬಹುಶಃ ಇದೇ ವಿಧಾನವನ್ನು ಅನುಸರಿಸಿದ್ದಂತೆ ತೋರುತ್ತದೆ. ಕ್ರಿ.ಶ. ೧೧೪೪ರ ಒಂದು ವೀರಗಲ್ಲಿನಿಂದ ಅಸಗರ ಗೊರವನೆಂಬುವನು ಹಂದಿಯನ್ನು ಇಱಿದು ಸತ್ತನೆಂಬ ವಿಷಯ ತಿಳಿಯುತ್ತದೆ.[೫೭] ಕ್ರಿ.ಶ. ೧೧೮೩ರ ಮತ್ತೊಂದು ವೀರಗಲ್ಲಿನಿಂದ 'ಪೊಡಲೆಯ' ಎಂಬುವನು

೫೫ ಪಂಪ : ವಿಕ್ರಮಾರ್ಜುನ ವಿಜಯಂ. ೫–೪೬

೫೬ Suresh Chandra Banerji : The Asepects of Ancient Indian Life from Sanskrit Sources. ಪು. ೨೫

೫೭ E. C. III. Md. 22, 1144

ಹಂದಿಯ ಬೇಟೆಯಲ್ಲಿ 'ಕಲಿತನಂ ಬೆರಸಿ ತಳ್ತಿಱಿದು' ಸತ್ತನೆಂದು ತಿಳಿಯುತ್ತದೆ.[೫೮] ಈ ವೀರಗಲ್ಲಿನ ಶಿಲ್ಪವು ಶಾಸನದ ಪಾಠವನ್ನು ವಿವರಿಸುವಲ್ಲಿ ನಮಗೆ ನೆರವಾಗುತ್ತದೆ. ವೀರನಾದವನು ತನ್ನ ಆಯುಧದಿಂದ ಹಂದಿಯನ್ನು ತಿವಿಯುತ್ತಿದ್ದಾನೆ. ಹಂದಿಯು ತನ್ನ ಹಿಂಗಾಲುಗಳ ಮೇಲೆ ನಿಂತು ಮುಂಗಾಲಿನಿಂದ ಅವನನ್ನು ಎದುರಿಸುತ್ತಿದೆ. ನಾಯಿಗಳೂ ಹಂದಿಯನ್ನು ಮುತ್ತಿವೆ. (ಚಿತ್ರ ೩೯). ಕ್ರಿ.ಶ. ೧೨೪೯ರ ವೀರಗಲ್ಲೊಂದರಿಂದ ಬೋವೋಜನೆಂಬುವನು "ಬೇಟೆಗೆ ಹೋದಲಿ ಹಂದಿಮೇಲೆ ಹಾಯ್ದು" ಸತ್ತನೆಂಬ ವಿಷಯ ತಿಳಿಯುತ್ತದೆ.[೫೯] ಹಂದಿಯನ್ನು ಈ ರೀತಿ ಬೇಟೆಯಾಡುವಲ್ಲಿ ಬೇಟೆಗಾರರು ಸಾಮಾನ್ಯವಾಗಿ 'ಈಟಿ'ಯಂತಹ ಎಸೆಯುವ ಆಯುಧಗಳನ್ನು ಬಳಸುತ್ತಿದ್ದರೆಂದು ವೀರಗಲ್ಲುಗಳ ಶಿಲ್ಪದ ಆಧಾರದ ಮೇಲೆ ಹೇಳಬಹುದು (ಚಿತ್ರ ೩೯, ೪೦, ೪೧).

ಎರಡನೆಯ ಮಾರ್ಗವಾದ ಶ್ವಾಣಿಕಾ ಮಾರ್ಗದಲ್ಲಿ ಬೇಟೆಯನ್ನಾಡುತ್ತಿದ್ದರು ಎಂಬುದು ಬೇಟೆಯಲ್ಲಿ ಅದರಲ್ಲಿಯೂ ಹಂದಿಯ ಬೇಟೆಯಲ್ಲಿ, ಮಡಿದ ನಾಯಿಗಳಿಗೆ ಹಾಕಿಸಿರುವ ವೀರಗಲ್ಲುಗಳಿಂದ ತಿಳಿಯುತ್ತದೆ. ಇಲ್ಲಿ ಬೇಟೆಗಾರರು ಸತ್ತಿಲ್ಲ ಎಂಬ ಅಂಶವನ್ನು ವಿಶೇಷವಾಗಿ ಗಮನಿಸಬೇಕು. ಆತಕೂರಿನ ವೀರಗಲ್ಲಿನಿಂದ ಕಾಳಿ' ಎಂಬ ನಾಯಿಯನ್ನು ಮನಾಲರನೆಂಬುವನು ಬೇಟೆಗಾಗಿ ಕೊಂಡೊಯ್ದು "ಬೆಳತೂರು ಪಡುವಣದೆಸೆಯ ಮೊರಡಿಯೊಳ್ ಪಿರಿಯ ಪನ್ದಿಗೆವಿಟ್ಟೊಡೆ' ಎಂಬ ಮಾತನ್ನು ವಿಶೇಷವಾಗಿ ಗಮನಿಸಬೇಕು[೬೦] ಕ್ರಿ.ಶ. ಸು. ೧೦೧೨–೪೪ರ ವೀರಗಲ್ಲಿನಿಂದ ಕನ್ನಾಲ ಎಂಬ ಗ್ರಾಮದ ಪಲ್ಲವ ಗಾವುಂಡ ಎಂಬ ಬೇಟೆಗಾರನ ನಾಯಿ ಮಾದಕೇಸರಿ ಎಂಬುದು ಹಂದಿಯೊಡನೆ ಹೋರಾಡುವಲ್ಲಿ ಸತ್ತ ವಿಷಯ ತಿಳಿಯುತ್ತದೆ.[೬೧] ಮಡಕಶಿರಾ ತಾಲ್ಲೂಕಿನ ಒಂದು ಶಾಸನದಿಂದ ತಣ್ಣೂರು ಮತ್ತು ಚೋರ ಗಿರಿಯನ್ನಾಳುತ್ತಿದ್ದ ಅರಸನ ಪೊಣಿಗ ಎಂಬ ನಾಯಿ ಹಂದಿಯೊಡನೆ ಹೋರಾಡಿ ಸತ್ತ ವಿಷಯ ತಿಳಿಯುತ್ತದೆ.[೬೨] ಈ ರೀತಿಯ ವಿಧಾನದಲ್ಲಿ ಹಂದಿಯನ್ನು ಕೊಲ್ಲುವುದಕ್ಕೆ ನಾಯಿಗಳ ಸಹಾಯ ಎಷ್ಟರಮಟ್ಟಿಗೆ ಅವಶ್ಯವಿತ್ತು ಎಂಬುದು ಕ್ರಿ.ಶ. ೯೭೫ರ ವೀರಗಲ್ಲೊಂದರಿಂದ ತಿಳಿಯುತ್ತದೆ. ಈ ಶಾಸನದಲ್ಲಿ 'ಲೋಕ' ಮತ್ತು 'ಧಳಗ' ಎಂಬ ಎರಡು ನಾಯಿಗಳ ಪ್ರಸ್ತಾಪ ಬರುತ್ತದೆ. ಪಿರಸುದಿಯ ಮಗನು

---

೫೮ E. C. VII. Sk. 159, 1183

೫೯ E. C. VIII. Sb. 340, 1249

೬೦ E. C. III. Md. 41, 950

೬೧ ಎಂ. ಚಿದಾನಂದಮೂರ್ತಿ, "ಬೇಟೆಯ ವೀರಗಲ್ಲುಗಳು" ಉದಯವಾಣಿ– (ದೀಪಾವಳೀ ವಿಶೇಷ ಸಂಚಿಕೆ, ೧೯೭೩) ಪು. ೬೫

೬೨ SII. IX. Pt. 1, 37. ?

ಈ ಎರಡೂ ನಾಯಿಗಳ ಸಹಾಯದಿಂದ ಹಂದಿ ಬೇಟೆಯನ್ನು ಆಡಿದ. ಆ ಬೇಟೆಯಲ್ಲಿ ನಾಯಿಗಳು ಸತ್ತಿವೆ ಅವುಗಳಿಗೆ ಸ್ಮಾರಕವನ್ನು ಹಾಕಿಸುತ್ತಾ ಅವನು "ಲೋಕನೆಂಬುದು ಎಟ್ಟಿತ್ತೈದು ಪಂದಿಯಂ ಕೊಂದತ್ತು" ಎಂದೂ ಧಳಗ ಎಂಬ ನಾಯಿಯು ಇಪ್ಪತ್ತಾರು ಹಂದಿಗಳನ್ನು ಕೊಂದಿತ್ತುವೆಂಬುದಾಗಿ ತಿಳಿಸುತ್ತಾನೆ.[೬೩] ಈ ವೀರಗಲ್ಲಿನ ಶಿಲ್ಪ ಗಮನಾರ್ಹವಾಗಿದೆ. ಈ ಎರಡೂ ನಾಯಿಗಳು ಒಂದೇ ಬೇಟೆಯಲ್ಲಿ ಸತ್ತಿದ್ದರೂ ಅವುಗಳ ಒಡೆಯನಿಗೆ ಅವುಗಳ ಪರಾಕ್ರಮವನ್ನು ಬೇರೆಬೇರೆಯಾಗಿ ತಿಳಿಸಬೇಕೆಂಬ ಉದ್ದೇಶವಿದ್ದಿರಬೇಕು. ಈ ಕಾರನದಿಂದಲೇ ಒಂದೇ ಕಲ್ಲಿನಲ್ಲಿ ಎರಡು ಹಂತಗಳಿವೆ. ಒಂದು ಹಂತದಲ್ಲಿ 'ಲೋಗ' – ಎಂಬ ನಾಯಿ ಹಂದಿಯೊಡನೆ ಹೋರಾಡುತ್ತಿರುವಂತೆಯೂ, ಅದರ ತಳಗೆ ಇಪ್ಪತ್ತಾರು ಹಂದಿಗಳನ್ನು ಕೊಂದ ಧಳಗ ಹಂದಿಯೊಡನೆ ಹೋರಾಡುತ್ತಿರುವಂತೆಯೇ ಶಿಲ್ಪವನ್ನು ಬಿಡಿಸಲಾಗಿದೆ. ಈ ಶಾಸನದ ಶಿಲ್ಪ ಮತ್ತು ಪಾಠದಿಂದ ಹಂದಿಬೇಟೆಯಲ್ಲಿ ನಾಯಿಗಳದ್ದು ಎಂಥ ಮಹತ್ತ್ವದ ಪಾತ್ರವಿತ್ತು ಎಂಬುದು ವೇದ್ಯವಾಗುತ್ತದೆ. (ಚಿತ್ರ ೧೦)

ನಾಯಿಗಳು ಬೇಟೆಯಾಡುವಲ್ಲಿ ತಮ್ಮ ಒಡೆಯರಿಗೆ ನೆರವಾಗುತ್ತಿದ್ದ ರೀತಿ ವೀರಗಲ್ಲುಗಳ ಶಿಲ್ಪದಿಂದಲೂ ತಿಳಿಯುತ್ತದೆ. ಈ ದೃಷ್ಟಿಯಿಂದ ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕ್ ನೆಲವಾಗಿಲು ಗ್ರಾಮದಲ್ಲಿನ ವೀರಗಲ್ಲಿನ ಶಿಲ್ಪ ಗಮನಾರ್ಹವಾಗಿದೆ. ವೀರನು ಹಂದಿಯನ್ನು ಈಟಿಯಿಂದ ತಿವಿಯಲು ಮುನ್ನುಗ್ಗುತ್ತಿದ್ದಾನೆ. ಆ ವೇಳೆಗೆ ಎರಡು ಮೂರು ನಾಯಿಗಳು ಹಂದಿಯ ಮೇಲೆ ಎರಗಿ ಅದನ್ನು ಮುಂದುವರಿಯದಂತೆ ಮಾಡಿವೆ. ಒಂದು ನಾಯಿ ಹಂದಿಯ ಮೇಲೆ ಬಿದ್ದು ಅದರ ಚರ್ಮವನ್ನು ತನ್ನ ಬಾಯಿಂದ ಕೀಳುತ್ತಿದೆ. (ಚಿತ್ರ. ೪೦) ಆತಕೂರು ಮತ್ತು ಯಲಹಂಕದ ವೀರಗಲ್ಲುಗಳ ಶಿಲ್ಪವನ್ನು ನೋಡಿದರೆ ಹಂದಿ ಮತ್ತು ನಾಯಿಗಳು ಹೋರಾಡುತ್ತಿರುವ ವಿವರಗಳು ದೊರೆಯುತ್ತವೆ. (ಚಿತ್ರ ೮, ೯, ೧೦) ನಾಯಿಗಳು ಹೋರಾಡುತ್ತಿರುವಾಗ ಬೇಟೆಗಾರ ತನ್ನ ಈಟಿಯನ್ನು ಗುರಿಯಿಟ್ಟು ಹಂದಿಯೆಡೆಗೆ ಎಸೆಯುತ್ತಿದ್ದ. ಹೀಗೆ ಎಸೆಯುವಾಗ ಗುರಿ ತಪ್ಪಿಯೋ ಅಥವಾ ಸ್ಥಳ ಬದಲಾವಣೆಯಾಗಿಯೋ ನಾಯಿಗಳಿಗೆ ಏಟು ಬಿದ್ದಿರಬೇಕು. ಹೀಗಾಗಿ ಆ ನಾಯಿಗಳು ಸತ್ತಿರಬಹುದು, ಅಥವಾ ಹಂದಿಯೊಡನೆ ಹೋರಾಡುವಾಗ ಆದ ಗಾಯಗಳಿಂದಾಗಿಯೂ ಮಡಿದಿರಬಹುದು ಎಂದು ತೋರುತ್ತದೆ. ಇದೇ ರೀತಿ ಬೇಟೆಯಲ್ಲಿ ಮಡಿದಿರುವ ನಾಯಿಗಳ ಸ್ಮಾರಕಗಳು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ವಿಶೇಷವಾಗಿ ದೊರೆಯುತ್ತವೆ (ಚಿತ್ರ ೪೧, ೪೨)

---

೬೩ E. C. X. Mb. 85, 975

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪಂಪನು ನೀಡುವ ಹಂದಿಬೇಟೆಯಾಡುವ ನಾಯಿಯ ವರ್ಣನೆಯನ್ನು ಗಮನಿಸಿದರೆ, ಅದು ವಾಸ್ತವ ಚಿತ್ರಣವೆನ್ನುವುದರಲ್ಲಿ ಸಂಶಯ ಬರುವುದಿಲ್ಲ ಹಂದಿಬೇಟೆಯ ನಾಯಿಯ ಲಕ್ಷಣ ಮತ್ತು ಗುಣವಿಶೇಷಗಳನ್ನು ಪಂಪ ತಿಳಿಸುತ್ತಾನೆ.[೬೪]

ಈ ರೀತಿಯಲ್ಲಿ ನಾಯಿಗಳು ಬೇಟೆಗಾರರಿಗೆ ಬೇಟೆಯಲ್ಲಿ ಸಹಕರಿಸುತ್ತಿದ್ದುದರಿಂದಲೇ ಅವುಗಳ ಮೇಲಿನ ವಿಶ್ವಾಸಕ್ಕೆ ವೀರಗಲ್ಲುಗಳನ್ನು ಹಾಕಿಸಿರುವುದು. ಈ ಕಾರಣಕ್ಕಾಗಿಯೇ ಅರಸನು ತನ್ನನ್ನು ಮೆಚ್ಚಿ 'ಬೇಡಿಕೊಳ್ಳೆನ್ದಡೆ', 'ದಯೆಯ ಮೆಱೆವೊಳ್ಳೆಮ್ಬ ಕಾಳಿಯಂ ದಯೆಗೆಯ್ಯೆನ್ದ" ಕೇಳಿ ಕಾಳಿಯನ್ನು ಪಡೆದದ್ದು ಮನಾಲರ. ವೀರಗಲ್ಲುಗಳ ಶಿಲ್ಪದಲ್ಲಿನ ನಾಯಿಗಳ ಚಿತ್ರವನ್ನು ಗಮನಿಸಿದಾಗ ಮುಖ್ಯವಾಗಿ ಯಲಹಂಕ, ಆತಕೂರು, ನೆಲವಾಗಿಲು, ಬಳ್ಳಿಗಾವೆಯ ವೀರಗಲ್ಲುಗಳಲ್ಲಿ ನಾಯಿಗಳು ಪಂಪನು ವರ್ಣಿಸಿರುವಂತೆಯೇ ಇವೆ.

ಹುಲಿಯ ಬೇಟೆ

ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಹುಲಿಯ ಬೇಟೆ ಪ್ರಚಲಿತವಿತ್ತು. ಗುಪ್ತರ ಕಾಲದ ಕೆಲವಾರು ನಾಣ್ಯಗಳ ಮೇಲೆ ಹುಲಿಯೊಡನೆ ಹೋರಾಡುತ್ತಿರುವ ಚಿತ್ರಗಳನ್ನು ಗಮನಿಸಬಹುದು. ಒಂದನೆಯ ಕುಮಾರಗುಪ್ತನ ಕಾಲದ ನಾಣ್ಯಗಳ ಮೇಲೆ ಹುಲಿಯೊಡನೆ ಹೋರಾಡುತ್ತಿರುವ ಚಿತ್ರಗಳು ವಿಶೇಷವಾಗಿವೆ.[೬೫] ಇದಕ್ಕೆ ಮುಖ್ಯ ಕಾರಣವೆಂದರೆ, ಭಾರತದಲ್ಲಿ ಹುಲಿಗಳ ಸಂಖ್ಯೆ ವಿಶೇಷವಾಗಿದ್ದು, ಅವುಗಳಿಂದ ತೊಂದರೆಯನ್ನು ಅನುಭವಿಸುತ್ತಿದ್ದ ಜನತ,

---

೬೪ ಪಂಪ : ವಿಕ್ರಮಾರ್ಜುನ ವಿಜಯ. ೫–೪೬ ನಂತರದ ಗದ್ಯ.

(ಸಾರಾಂಶ : ಹಂದಿಬೇಟೆಯ ನಾಯಿ ಎಂತಹದೆಂದರೆ, ತೆಳುವಾದ ಸೊಂಟ ಅಗಲವಾದ ಎದೆ ನೆಟ್ಟಗೆ ನಿಂತಿರುವ ಕಿವಿಯೂ, ಬಾಗಿದ ಹುಬ್ಬು, ದಪ್ಪವಾಗಿ ಮಾಂಸವಿಲ್ಲದ ಕಾಲುಗಳು, ನೆಲವನ್ನು ಮುಟ್ಟದ ಉಗುರುಗಳಿಂದ ಕೂಡಿದ, ಜಾತಿಯ ಕುದುರೆಯಂತೆ ವೇಗವಾಗಿ ನಡೆದು, ಶಾಕ್ತೇಯ ಮತದ ವಂಚಕನಂತೆ ತನ್ನ ಮಾರ್ಗವನ್ನು ಹಿಡಿದು, ತೂಬಿನ ನೀರಿನ ಹಾಗೆ ಸಡಿಲವಾದ ತಕ್ಷಣವೇ ಅಡ್ಡವಾಗಿ ಹರಿದು, ಮಾನ್ಯರ ಸೇವಕನಂತೆ ಕಾದಲು ಆಲಸ್ಯ ಪಡೆಯದೆ, ಸೂಳೆಯಂತೆ ಸುಲಿಗೆಗೊಂಡು ಓಡಿಸದೆ, ಯೋಗ್ಯನಂತೆ ನಂಬಿಸಿ ಒತ್ತರದಂತೆ ಒತ್ತಿ, ಉರಿಯು ಹರಡುವಂತೆ ಹರಡಿಕೊಳ್ಳುವುದು. ಇದು ಹಂದಿಬೇಟೆಯಲ್ಲಿ ಉಪಯೋಗಿಸುವ ನಾಯಿಯ ಲಕ್ಷಣ.

೬೫ A.S. Altekar : The Coinage of the Gupta Empire. Plate No.12

ಹುಲಿಯನ್ನು ಕೊಂದ ವ್ಯಕ್ತಿಯ ಬಗ್ಗೆ ಅವನ ಪರಾಕ್ರಮದ ಬಗ್ಗೆ ಇಟ್ಟಿದ್ದ ಗೌರವ ಭಾವನೆ ಎಂದು ತೋರುತ್ತದೆ. ಹುಲಿಯನ್ನು ಬೇಟೆಯಾಡಿ ಬಂದವನಿಗೆ ಕೊಡವ ಸಮಾಜದಲ್ಲಿ ವಿಶೇಷವಾದ ಗೌರವವುಂಟು.[೬೬] ಭಾರತಕ್ಕೆ ಬಂದ ಪ್ರವಾಸಿಗಳಲ್ಲಿ 'ಪ್ರಾನ್ಸುವಾಪಿರಾರ್ಡ್ ದೆಲವಲ್' ಎಂಬುವನು, ಕೇರಳದ ಬಗ್ಗೆ ಬರೆಯುತ್ತಾ, "ಈ ದೇಶದಲ್ಲಿ ಹುಲಿಗಳು ಹೆಚ್ಚು ; ಇವನ್ನು ನಾಯರ್‌ಗಳು ಬೇಟೆಯಾಡುತ್ತರೆ ; ಯಾವ ಆಯುಧಗಳೂ ಇಲ್ಲದೆ ನಾಯರುಗಳು ಹುಲಿಗಳ ಮೇಲೆ ಬಿದ್ದು, ಅವನ್ನು ಕೊಂದದ್ದನ್ನು ನಾನು ನೋಡಿದ್ದೇನೆ ; ಕೆಲವರು ತಮ್ಮ ಮೈ ಪರಚಿಸಿಕೊಂಡು ರಕ್ತ ಸುರಿಸುತ್ತಾ ಕೊಂದ ಹುಲಿಯನ್ನು ರಾಜನ ಮುಂದೆ ಎಳೆದುಕೊಂಡು ಬಂದದ್ದನ್ನು ನೋಡಿದ್ದೇನೆ" ಎಂಬುದಾಗಿ ಹೇಳುತ್ತಾನೆ.[೬೭] ಹುಲಿಯನ್ನು ಕೊಂದ ವೀರನ ಬಗ್ಗೆ ಜನತೆಗೆ ಇದ್ದ ಗೌರವ ಮುಂತಾದುವನ್ನು ಈ ಹಿಂದೆ ಸಾಕಷ್ಟು ಸುದೀರ್ಘವಾಗಿಯೇ ವಿವರಿಸಿದ್ದರೂ ಒಂದು ಅಂಶವನ್ನು ಇಲ್ಲಿ ಹೇಳುವುದು ಉಚಿತವೆಂದು ತೋರುತ್ತದೆ. ಅದು, ಹುಲಿಯನ್ನು ಬೇಟೆಯಾಡುವ ಉದ್ದೇಶದಿಂದ ಹೋಗದೆ ಆಕಸ್ಮಿಕವಾಗಿ ಹುಲಿಯನ್ನು ಕೊಂದ ವ್ಯಕ್ತಿಗಳ ಬಗ್ಗೆಯೂ ಕರ್ನಾಟಕದ ಜನತೆ ತನ್ನ ಕೃತಜ್ಞತೆಯನ್ನು ತೋರಿಸಿದೆ ಎಂಬುದು. ಹಂದಿಯ ಬೇಟೆಯಾಡಲು ಹೋಗಿ ಅಕಸ್ಮಾತ್ ಹುಲಿಯನ್ನು ಕೊಂದ ವೀರರ ಬಗ್ಗೆ ಕೆನ್ನೆತ್ ಅಂಡರ್‌ಸನ್ ಈ ರೀತಿ ಬರೆಯುತ್ತಾರೆ : "ಹಂದಿಗಳಲ್ಲ. ಅದೊಂದು ಹುಲಿ ! ಕಳ್ಳ ಬೇಟೆಗಾರರು ಸದ್ದುಮಾಡದೆ ಭಯದಿಂದ ತಮ್ಮ ಗುಂಡಿನ ಪರಿಣಾಮವೇನಾಯಿತೆಂಬುದನ್ನು ಮಾರನೆಯ ಬೆಳಗ್ಗೆ ತಿಳಿದುಕೊಳ್ಳಬಹುದೆಂದು ಯೋಚಿಸಿ ಇನ್ನುಳಿದ ರಾತ್ರಿಯನ್ನು ಕಳೆಯಲು ತಮ್ಮ ಹಳ್ಳಿಗೆ ವೇಗವಾಗಿ ಪಲಾಯನ ಮಾಡಿದರು.

ಆದರೆ ಬೆಳಗಾದಾಗ ಎಲ್ಲವೂ ಸರಿಯಾಗಿದ್ದುವು. ಅವರ ಹಳೆಯ ಕಾಲದ ತುಪಾಕಿಯ ಆಕಸ್ಮಿಕವಾದ ಏಟು ಎದೆಗೆ ಸರಿಯಾಗಿ ಬಡಿದುದರಿಂದ ಪ್ರಾಯದ ಗಂಡು ಹುಲಿಯೊಂದು ಅಲ್ಲಿ ಸತ್ತು ಬಿದ್ದಿತ್ತು. ಆದ್ದರಿಂದ ಹಿಂದೆ ಆ ಹಳ್ಳಿಯ ಸಾಧಾರಣ ಜನರಾಗಿದ್ದ ಮುನಿಯಪ್ಪನೂ ಅವನ ಸ್ನೇಹಿತರೂ ಈಗ ಹಳ್ಳಿಯವರ ಕೊಂಡಾಟದ ವೀರರಾದರು."[೬೮]

ಹುಲಿಯ ಬೇಟೆಯ ಬಗ್ಗೆ ವೀರಗಲ್ಲುಗಳಿಂದ ಉಪಯುಕ್ತ ಮಾಹಿತಿ ದೊರೆಯುತ್ತದೆ.

ಕ್ರಿ.ಶ. ೭೫೧ರ ಒಂದು ವೀರಗಲ್ಲಿನಿಂದ ವ್ಯಕ್ತಿಯೊಬ್ಬನು ಹುಲಿಯನ್ನು ಇರಿದು ತಾನೂ ಸತ್ತನೆಂಬುದಾಗಿ ತಿಳಿದು ಬರುತ್ತದೆ.[೬೯] ಕ್ರಿ.ಶ. ೮೫೫ರ ಒಂದು ವೀರಗಲ್ಲಿನಿಂದ 'ತಮ್ಮಗಾವುಣ್ಡ'

---

೬೬ ಡಿ. ಎನ್. ಕೃಷ್ಣಯ್ಯ : ಕೊಡಗಿನ ಇತಿಹಾಸ. ಮೈಸೂರು. ೧೯೭೪

೬೭ ಎಚ್.ಎಲ್.ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ. ಭಾಗ ೩, ಪು. ೪೦೪

೬೮ ಕೆನ್ನೆತ್ ಅಂಡರ್‌ಸನ್ : ಒಂಬತ್ತು ನರಭಕ್ಷಕಗಳು ಮತ್ತು ಒಂದು ಪುಂಡುಆನೆ (ಅನು : ಕೆ.ಎಸ್. ರಾಮಣ್ಣ) ಪು. ೨

೬೯ E. C. X. Mb. 78, 751

ಎಂಬುವನು ಹುಲಿಯನ್ನು ಕೊಂದು ತಾನೂ ಸತ್ತಕಾರಣ ಗಂಗಪೆರ್ಮಾಡಿ ಅವನ ಪರಾಕ್ರಮವನ್ನು ಮೆಚ್ಚಿ ಐದುಕಟಿನಿ ಯಷ್ಟು ಭೂಮಿಯನ್ನು ದತ್ತಿಯಾಗಿ ಬಿಟ್ಟ ವಿಷಯ ತಿಳಿಯುತ್ತದೆ.[೨೦] ಇದೇ ರೀತಿಯ ವಿಷಯ ಕ್ರಿ.ಶ. ೯೪೬ರ ಮತ್ತೊಂದು ವೀರಗಲ್ಲಿನಿಂದಲೂ ತಿಳಿದು ಬರುತ್ತದೆ. 'ಗಾತಿಪುಲಿ' ಎಂಬುವನು ಹುಲಿಯನ್ನು ಕೊಂದು ಸತ್ತಕಾರಣ ಅವನ ಮನೆಯವರಿಗೆ ಭೂಮಿಯನ್ನು ದತ್ತಿಬಿಡುತ್ತಾರೆ.[೨೧] ಮುಳುಬಾಗಿಲು ತಾಲ್ಲೂಕ್ ಮಂಡಿಕಲ್ಲು ಮತ್ತು ತಾವರೆಕೆರೆಗಳ ನಡುವೆ ಇರುವ ವೀರಗಲ್ಲು ಹಲವಾರು ರೀತಿಗಳಿಂದ ಗಮನಾರ್ಹವಾಗಿದೆ. ಮಂಡಿಕಲ್ಲು ಗ್ರಾಮದ ಎಮ್ಮೆಯ ಕರುವನ್ನು ಹೆಬ್ಬುಲಿಯೊಂದು ಹೊತ್ತುಕೊಂಡು ಹೋದಾಗ ಕಮ್ಬಳದಾನ ಎಂಬುವನು "ಆ ಪುಲಿಯ ಕೊಲ್ವೆನೆನ್ದು ಪ್ರತಿಜ್ಞೆ ಕಡಿದು ಜಾಮದಿನ್ದೊಳಗೆ ಕೊನ್ದಂ ಪುಲಿಯು ನಾಯಮೊಡಸತ್ತ" ವಿಷಯವನ್ನು ಈ ವೀರಗಲ್ಲು ತಿಳಿಸುತ್ತದೆ.[೨೨] ವೀರಗಲ್ಲಿನ ಶಿಲ್ಪ ಇಲ್ಲಿನ ಪಾಠವನ್ನು ಅರ್ಥೈಸುವಲ್ಲಿ ನೆರವಾಗುತ್ತದೆ. (ಚಿತ್ರ ೪೭) ಬಿಳಿಯ ಬೆಣಚುಕಲ್ಲಿನ ಮೇಲೆ ಶಿಲ್ಪವನ್ನು ಬಿಡಿಸಲಾಗಿದೆ. ಅಲಲಿ ಹೆಬ್ಬುಲಿಯೊಂದಿಗೆ ಹೋರಾಡುತ್ತಿರುವ ನಾಯಿಯ ಚಿತ್ರವನ್ನು ಬಿಡಿಸಲಾಗಿದೆ. ಈ ವೀರಗಲ್ಲಿನ ಶಾಸನಪಾಠಕ್ಕೆ ಅರ್ಥವನ್ನು ಬರೆಯುತ್ತಾ ಕಮ್ಬಳದಾನನೂ ಸತ್ತನೆಂಬುದಾಗಿ ಶ್ರೀ ರೈಸ್ ಅವರು ಬರೆಯುತ್ತಾರೆ. ಈ ವೀರಗಲ್ಲಿನಲ್ಲಿ ವೀರನ ಚಿತ್ರವಿಲಲ್. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ಯಾವುದೇ ದುಷ್ಟಮೃಗದೊಡನೆ ಹೋರಾಡಿ ವ್ಯಕ್ತಿಯೊಬ್ಬನು ಸತ್ತಿದ್ದರೆ ಅವನ ಚಿತ್ರವನ್ನು ವೀರಗಲ್ಲಿನ ಮೇಲೆ ಬಿಡಿಸಿರುತ್ತಾರೆ. ವೀರನ ಚಿತ್ರವಿಲ್ಲದಿದ್ದರೂ ವೀರನು ಹೋರಾಡಿ ಮಡಿದು ವೀರಸ್ವರ್ಗವನ್ನು ಪಡೆದನೆಂಬುದನ್ನು ಸೂಚಿಸಲಾಗಿರುತ್ತದೆ. ಮಧುಗಿರಿ ತಾಲ್ಲೂಕು ಶ್ರವಣಗುಡಿಯ ಬಳಿ ಇರುವ ಶಾಸನರಹಿತವಾದ ವೀರಗಲ್ಲನ್ನು ಇಲ್ಲಿ ಗಮನಿಸಬೇಕು. (ಚಿತ್ರ ೪೮) ಅಲ್ಲಿ ಒಂದು ಹುಲಿಯು ಗೋವನ್ನು ತಿನ್ನುತ್ತಿರುವಂತೆ ಬಿಡಿಸಲಾಗಿದೆ. ಮೇಲ್ಭಾಗದಲ್ಲಿ ವೀರನು ಅಪ್ಸರೆಯರೊಂದಿಗೆ ಇರುವಂತೆ ಬಿಡಿಸಲಾಗಿದೆ. ಹಾಗೆಯೇ ಆತಕೂರು, ಯಲಹಂಕಗಳಲ್ಲಿರುವ ವೀರಗಲ್ಲುಗಳಿಂದ ವ್ಯಕ್ತಿಗಳು ಹೋರಾಟದಲ್ಲಿ ಮಡಿದಿಲ್ಲ ಎಂಬುದು ಖಚಿತವಾಗಿ ತಿಳಿಯುತ್ತದೆ. ಅಲ್ಲಿನ ಶಿಲ್ಪಗಳಲ್ಲಿ ವ್ಯಕ್ತಿಯನ್ನು ಬಿಡಿಸಿಲ್ಲ. ಕೇವಲ ಹಂದಿ ಮತ್ತು ನಾಯಿಗಳ ಹೋರಾಟ ಮಾತ್ರ ಇರುವುದನ್ನು ಗಮನಿಸಬೇಕು. ಆದ್ದರಿಂದ, ತಾವರೆಕೆರೆಯ ವೀರಗಲ್ಲನ್ನು ಕಮ್ಬಳದಾನನ ಸ್ಮಾರಕಶಿಲೆ ಎಂಬುದಾಗಿ ಕರೆಯಲು ಬರುವುದಿಲ್ಲ. ಬದಲಾಗಿ ತನ್ನ ಪ್ರತಿಜ್ಞೆಯನ್ನು ನೆರವೇರಿಸುವಲ್ಲಿ ತನಗೆ ನೆರವಾಗಿ ಮಡಿದ ವೀರ ನಾಯಿಗಳ ಸ್ಮಾರಕವಾಗಿ ಮತ್ತು ತನ್ನ ಪರಾಕ್ರಮವನ್ನು ಸಾರುವುದಕ್ಕಾಗಿ ಈ ಶಾಸನವನ್ನು ಅವನು ಹಾಕಿಸಿರಬಹುದು. (ಚಿತ್ರ ೪೭)

---

೨೦ M. A. R.1927. 44, 855

೨೧ E. C. XI. Cd. 26. ಸು. ೯೪೬

೨೨ E. C. X. Mb. 162, 950

ಬಾಗಳಿಯಲ್ಲಿರುವ ಕಲ್ಯಾಣದ ಚಾಲುಕ್ಯರ ಕಾಲದ ವೀರಗಲ್ಲೊಂದರ ಶಿಲ್ಪ ಹುಲಿಯನ್ನು ಬೇಟೆಯಾಡುತ್ತಿದ್ದ ಬಗ್ಗೆ ಸ್ವಾರಸ್ಯಕರವಾದ ಮಾಹಿತಿಯನ್ನು ಒದಗಿಸುತ್ತದೆ. ವೀರನೊಬ್ಬನು ಹುಲಿಯನ್ನು ನೇರವಾಗಿ ಎದುರಿಸುತ್ತಿದ್ದರೆ, ಅವನ ಹಿಂಬದಿಯಲ್ಲಿ ಮತ್ತೊಬ್ಬನು ಮರದ ಮೇಲಿಂದ ಬಾಣವನ್ನು ಹುಲಿಯತ್ತ ಗುರಿಯಿಟ್ಟು ಬಿಡುತ್ತಿರುವಂತೆ ಶಿಲ್ಪದ ವಿವರವನ್ನು ಬಿಡಿಸಲಾಗಿದೆ. ಹುಲಿಯನ್ನು ನೇರವಾಗಿ ಎದುರಿಸುವುದೇ ಅಲ್ಲದೆ ಅದನ್ನು ನೇರವಾಗಿ ಎದುರಿಸುವ ಮುನ್ನ ಈ ರೀತಿಯ ವಿಧಾನಗಳಿಂದ ಸಾಯಿಸಲು ಪ್ರಯತ್ನಿಸುತ್ತಿದ್ದರೆಂದು ತೋರುತ್ತದೆ (ಚಿತ್ರ ೪೯). ಬಹುಶಃ ಕಮ್ಮಳದಾನನು ಈ ಮೇಲೆ ಹೇಳಿದ ವಿಧಾನದಲ್ಲಿ ಹುಲಿಯ ಬೇಟೆಯನ್ನಾಡಿ ತಾನು ಉಳಿದಿರಬಹುದೆಂದು ತೋರುತ್ತದೆ.

ಆತ್ತಿಗನಹಾಳು ಎಂಬ ಗ್ರಾಮದೊಳಕ್ಕೆ ಬಂದ ಪಂಟ ಹುಲಿಯನ್ನು 'ನಾಯಗ ರಾಮ' ಎಂಬುವನು ಎದುರಿಸಿ ಅದನ್ನು ಕೊಂದು ತಾನೂ ಮಡಿದ ವಿಷಯವನ್ನು ವೀರಗಲ್ಲೊಂದು ತಿಳಿಸುತ್ತದೆ.[೭೩] ಕೊಳ್ಳೇಗಾಲ ತಾಲ್ಲೂಕಿನ ಒಂದು ತಮಿಳುಭಾಷೆಯ ವೀರಗಲ್ಲಿನಿಮದ 'ಮಾಣಿಕ ಚೆಟ್ಟಿ' ಎಂಬುವನು ಬೇಟೆಗೆ ಹೋಗಿ ಹುಲಿಯನ್ನು ಕೊಂದು ತಾನೂ ಸತ್ತನೆಂದು ತಿಳಿದುಬರುತ್ತದೆ.[೭೪] ಕ್ರಿ.ಶ. ೧೧೦೭ರ ಮತ್ತೊಂದು ಶಾಸನದಿಂದ ವೀರನೊಬ್ಬನು ಹುಲಿಯನ್ನು 'ಚೋಳಾಪುರದಲು ಚೋಳನ ಮುಂದೆ ಇಟೆದು' ಸತ್ತ ವಿಷಯ ತಿಳಿದು ಬರುತ್ತದೆ.[೭೫] 'ಕೇತಯ್' ಎಂಬುವನು ಹುಲಿಯೊಂದನ್ನು ಇರಿದು ಸತ್ತಾಗ ಅವನಿಗೆ ಒಂದು ಗ್ರಾಮದ ಸ್ಥಾನೀಕರು ಮತ್ತು ವ್ಯಾಪಾರಿಗಳು 'ನೇತ್ತಲ್‌ಕುಡುಜ್ಗ್ಯ' (ನೆತ್ತರು ಕೊಡುಗೆ)ಯನ್ನು ನೀಡುತ್ತಾರೆ.[೭೬] ಕ್ರಿ.ಶ. ೧೩೫೧ರ ಮತ್ತೊಂದು ಶಾಸನದಿಂದ ಸೋಮಾಜಿ ಎಂಬುವನು "ದನವ ಕಾಯ ಹೋದಲ್ಲಿ ಹೆಬ್ಬುಲಿಯ"ನ್ನು ಇರಿದು ತಾನೂ ಸ್ವರ್ಗಸ್ಥನಾದ ವಿಷಯ ತಿಳಿಯುತ್ತದೆ.[೭೭] ಇದೇ ರೀತಿ ಹುಲಿಯೊಂದಿಗೆ ಹೋರಾಡಿ ಸತ್ತ ವೀರರ ಸ್ಮಾರಕಗಳನ್ನು ಗುರುತಿಸುತ್ತಾ ಹೋಗಬಹುದು.

ಮೇಲಿನ ನಿದರ್ಶನಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದ ಹುಲಿಯ ಬೇಟೆಯ ಬಗ್ಗೆ ಹೇಳಬಹುದಾದ ಮಾತು ; ಬೇಟೆಗಾಗಿಯೇ ಹೋಗಿ ಹುಲಿಯನ್ನು ಕೊಂದು ತಾವೂ ಮಡಿದ ವೀರರ ನಿದರ್ಶನಗಳು ಕ್ವಚಿತ್ತಾಗಿ ದೊರೆಯುತ್ತವೆ ಎನ್ನುವುದು. ಆದರೆ ಒಂದು ಗಮನಾರ್ಹ

---

೭೩ E. C. VI. Tk. 16, 1193

೭೪ E. C. IV. KI. 69, ೧೦ನೇ ಶತ. (ಹೊಸ ಆವೃತ್ತಿ)

೭೫ E. C. VI. Cm. 25, 1197

೭೬ E. C. IV. YI. 9, 1266

೭೭ E. C. IX. Kn. 40, 1351

ಅಂಶವೆಂದರೆ ದುಷ್ಟಪ್ರಾಣಿಯು ಗ್ರಾಮದೊಳಕ್ಕೆ ನುಗ್ಗಿ ಜನಗಳನ್ನು ಮತ್ತು ದನಕರುಗಳನ್ನು ಹಿಂಸಿಸುತ್ತಿದ್ದಾಗ ಅದನ್ನು ಹೇಗಾದರೂ ಮಾಡಿ ಕೊಲ್ಲಬೇಕೆಂಬ ಉದ್ದೇಶದಿಂದ ಧೈರ್ಯವಾಗಿ ಮುನ್ನುಗ್ಗಿ ಅದರೊಂದಿಗೆ ಹೋರಾಡಿ ಕೊಲ್ಲುತ್ತಿದ್ದರು ಎನ್ನುವುದು. ಅಂಥ ವೀರನಿಂದ ಉಪಕೃತರಾದ ಊರಿನ ಜನ ಅವನ ಹೆಸರಿನಲ್ಲಿ ವೀರಗಲ್ಲನ್ನು ನೆಟ್ಟು ಅವನ ಪರಾಕ್ರಮವನ್ನು ಗೌರವಿಸುತ್ತಿದ್ದರು. ಅವನ ಮನೆಯವರಿಗೆ ಅವನ ಸಾವಿನಿಂದಾದ ಹಾನಿಯನನು ದತ್ತಿ ನೀಡುವುದರ ಮೂಲಕ ತುಂಬುತ್ತಿದ್ದರು. ಈ ರೀತಿ ಹುಲಿಯೊಡನೆ ಹೋರಾಡಿ ಮಡಿದವರು ಬೇಟೆಯಲ್ಲಿ ಪರಿಣಿತರು ಆಗಿದ್ದಿರಲೂಬಹುದು, ಅಥವಾ ಕೇವಲ ತಮ್ಮ ಪರೋಪಕಾರ ಬುದ್ಧಿ ಮತ್ತು ಧೈರ್ಯವನ್ನು ಅವಲಂಬಿಸಿ ಹೋರಾಡಿ ಮಡಿದಿರಬಹುದು. ಆ ಬಗ್ಗೆ ವೀರಗಲ್ಲುಗಳಿಂದ ಏನೂ ತಿಳಿದುಬರುವುದಿಲ್ಲ. ಕೇವಲ ಪರೋಪಕಾರ ಬುದ್ಧಿಯಿಂದಲೇ ಪ್ರೇರಿತರಾಗಿ ಬೇಟೆಯಲ್ಲಿ ಪರಿಶ್ರಮವಿಲ್ಲದಿದ್ದರೂ, ಚಿರತೆಯ ಬೇಟೆಗೆ ಹೋಗಿ ಸತ್ತ ವೀರರ ಬಗ್ಗೆ ಕೆನ್ನತ್ ಅಂಡರ್‌ಸನ್ ಅವರು ಬರೆಯುತ್ತಾ "ಮಾರನೆಯ ದಿನ ಬೆಳಗ್ಗೆ ಸೋಮವಾರ ಆ ಸಹೋದರರು, ಅದು ಬಹು ದಿಟ್ಟತನದ ಕೆಲಸವಾದರೂ, ಮೂರ್ಖತನದಿಂದ ತಾವಿಬ್ಬರೇ ಚಿರತೆಯನ್ನು ಹಿಂಬಾಲಿಸಿಕೊಂಡು ಹೋಗಲು ನಿಶ್ಚಯಿಸಿದರು" ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಕೆನ್ನತ್ ಅವರಿಗೆ ಈ ಸೋದರರ ಬೇಟೆಯ ವಿಧಾನ ಮೂರ್ಖತನವಾಗಿದ್ದರೂ ದಿಟ್ಟತನದಂತೆ ತೋರುತ್ತದೆ. ಆನಂತರ ಮುಂದುವರಿದು, ಮಡಿದ ಆ ಸೋದರರಿಗೆ ಸಹಾಯ ಮಾಡಿದ ವಿಷಯವನ್ನು ತಿಳಿಸುತ್ತಾರೆ.[೭೮]

ಶಾಸನವಿಲ್ಲದ ಆದರೆ ಹುಲಿಯೊಡನೆ ವೀರನು ಹೋರಾಡುತ್ತಿರುವಂತೆ ಶಿಲ್ಪವನ್ನು ಹೊಂದಿರುವ ಹಲವಾರು ವೀರಗಲ್ಲುಗಳು ಕರ್ನಾಟಕದಲ್ಲಿ ದೊರೆಯುತ್ತವೆ (ಚಿತ್ರ ೪೩, ೪೪, ೪೫, ೪೬).

ಹುಲಿಯೊಡನೆ ಹೋರಾಡಿ ಮಡಿದ ವೀರರ ಬಗ್ಗೆ ವೀರಗೀತೆಗಳು ದೊರೆಯುತ್ತವೆ. ಅವುಗಳು ಬಹುಪಾಲು ದನಕರುಗಳಿಗೆ ತೊಂದರೆಯನ್ನು ನೀಡುತ್ತಿದ್ದ ಹುಲಿಗಳನ್ನು ಕೊಂದು ಮಡಿದ ವೀರನನ್ನು ಹೊಗಳುತ್ತವೆ. ಅಂತಹ ಹೋರಾಟವೊಂದರಲ್ಲಿ ಮಡಿದ 'ಯರ್ರಪ್ಪ' ಎಂಬುವನ ಬಗ್ಗೆ ಒಂದು ಜಾನಪದ ಗೀತೆ ಹೀಗೆ ಹೇಳುತ್ತದೆ.[೭೯]

> ಬಿದ್ದನಲ್ಲ ಈರ ಬಿದ್ದನಲ್ಲ ಸೂರ
> ಬಿದ್ದ ಸಂದನೋರ ಮಗ ನೀರ। ವೀರಣ್ಣ

---

೭೮ ಕೆನ್ನೆತ್ ಅಂಡರ್‌ಸನ್ : ಒಂಬತ್ತು ನರಭಕ್ಷಗಳು ಮತ್ತು ಒಂದು ಪುಂಡಾನೆ (ಅನು : ಕೆ.ಎಸ್. ರಾಮಣ್ಣ) ಪು. ೧೮೩

೭೯ ಶ್ರೀ ಎ.ಕೃಷ್ಣಮೂರ್ತಿಯವರ ಅಪ್ರಕಟಿತ ಸಂಗ್ರಹದಿಂದ.

ಬಿದ್ದು ಕೀರುತಿಯ ಪಡೆದಾನೆ ॥
ಈರಣ್ಣ ಮಡುದ ತಾವಾs ಯ್ಯಾರ‍್ಯಾರು ಮಡುದವರೆ
ಕಾಳಿಂಗನೆಂಬೋ ಸಲಗೆತ್ತು । ಜೂಲನಾಯಿ
ಮೂವರೊಂದಾಗಿ ಮಡುದವರೆ ॥

ಹುಲಿಯೊಡನೆ ಹೋರಾಡಿ ಗೆದ್ದು ಬಂದ ನಿದರ್ಶನಗಳು ಬಹಳ ಕಡಿಮೆಯಾದರೂ, ಈ ಹಿಂದೆ ಗಮನಿಸಿದ ಮುಳುಬಾಗಿಲು ತಾಲ್ಲೂಕ್ ತಾವರೆಕೆರೆಯ ವೀರಗಲ್ಲಿನ ಕಮ್ಬಳದಾನನ್ನು ನೆನೆಯಬಹುದ.[೮೦]

ಕ್ರಿ.ಶ. ೧೬೭೧ರ ಒಮದು ತಾಮ್ರಶಾಸನದಿಂದ “ಬೇಲೂರು ವೆಂಕಟಾದ್ರಿ ನಾಯಕರ ಪೌತ್ರರಾದ ಕೃಷ್ಣಪ್ಪನಾಯಕರ ಪುತ್ರರಾದ ವೆಂಕಟಾದ್ರಿ ನಾಯಕರು ಕಣಿವೆ ಬಸವನಹಳ್ಳೀ ದಿಡ್ಡೆಯನ ಲಿಂಗೇಗೌಡ್ರುಗೆ ಪಾಲಿಶಿದ ಬಿರ್ದಾವಳಿಗಳು. ನೀವ್ರು ಅಡವಿ ಇಂದಾ ನಿಂದು ಬಾಹುಬಲಗಳಿಂದಾ ವ್ಯಾಘ್ರನಂನೂ ಮುಷ್ಟಿ ಯುದ್ಧದಿಂದಾ ಜೈಶಿ ನಂಮ ಮಂದಿರದಲ್ಲಿ ತಂದು ನಿಲ್ಲಿಶಿದ ಧೀರ ಶೂರತ್ವಕ್ಕೆ ಮೆಚ್ಚಿ ಛತ್ರಿ ಸೂರಿಪನಾ ಅಂದಲಾಹಿವೆ ಕುದುರೆ ವಂಟಿಕ ಬಹಳ..... ಈ ವೈಭೋಗವನ್ನು ನೀವಾದಿಯಾಗಿ ಅನುಭವಿಸುತ್ತಾ ಬಹುದು” ಎಂಬ ವಿಷಯ ತಿಳಿಯುತ್ತದೆ.[೮೧] ಮುಮ್ಮಡಿ ಸಿಂಗನ ಮಗನಾದ ಕಂಪಿಲರಯನೆಂಬುವನು ಹೆಬ್ಬುಲಿಯನ್ನು ಕೊಂದುದಕ್ಕೆ ಅವನಿಗೆ ದೇವಗಿರಿಯ ರಾಮದೇವರಾಯನು “ಹೆಬ್ಬುಲಿ ಕಂಪಿಲರಾಯ ಸಹಸ್ರಾಯರ ಗಂಡ” ಎಂಬ ಬಿರುದಾವಳಿಯನ್ನು ನೀಡಿದ ವಿಷಯ ಕೃತಿಯತ್ತುಗಳಿಂದ ತಿಳಿದುಬರುತ್ತದೆ.[೮೨]

ಆನೆಯ ಬೇಟೆ

“ಸೈನದಲ್ಲಿ ಆನೆಗಳಿಗೆ ಬಹುಮುಖ್ಯ ಸ್ಥಾನವಿದ್ದಿತು. ಆನೆ ಪ್ರಾಣಿಗಳಲ್ಲೆಲ್ಲ ಪ್ರತಿಷ್ಠಿತ ಪ್ರಾಣಿ. ಆನೆಗಳ ತವರೂರಾದ ಕನ್ನಡನಾಡಿನಲ್ಲಂತೂ ಅವುಗಳಿಗೆ ಹಿರಿಯ ಸ್ಥಾನವು ದೊರಕಿದ್ದುದರಲ್ಲಿ ಆಶ್ಚರ್ಯವಿಲ್ಲ.” “ಆನೆಗಳನ್ನು ಪಳಗಿಸಲು ಯಾವ ಕ್ರಮವನ್ನು ಅನುಸರಿಸುತ್ತಿದ್ದರೋ ತಿಳಿಯದು. ಆನೆಗಳು ಕಾಡಿನಿಂದ ಒಂಟೊಂಟಿಯಾಗಿ ಹೊರಬಂದು ಜನರನ್ನೂ ಬೆಳೆಗಳನ್ನೂ ನಾಶಪಡಿಸುತ್ತಿದ್ದ

---

೮೦ E. C. X. Mb. 162, 950
೮೧ E. C. V. Mj. 10, 1671
೮೨ ಜಿ. ವರದರಾಜಾರಾವ್ : ಕುಮಾರರಾಮನಸಾಂಗತ್ಯಗಳು. ಪು. ೨೬೪

ವಿಷಯ ಶಾಸನಗಳಲ್ಲಿವೆ."[೮೩] ಇಂತಹ ಮದಗಜಗಳೊಂದಿಗೆ ಹೋರಾಡಿ, ಯುದ್ಧ ಕಾಲದಲಿ ಅಲ್ಲದೆ ಇತರ ಸಮಯಗಳಲ್ಲಿಯೂ ಹೋರಾಡಿ ಮಡಿದ ವೀರರ ಬಗ್ಗೆ ಶಾಸನಗಳಲ್ಲಿ ವಿವರಗಳು ಕ್ವಚಿತ್ತಾಗಿ ದೊರೆಯುತ್ತವೆ. ಆನೆಯೊಂದು "ರಾಜ ಬೀದಿಯಲು ಹೊಕ್ಕು ಜನಂಗಳ ಕೊಲ್ಲುತ್ತಿದ್ದಾಗ" ಆ ಕೊಲೆಯನ್ನು ಸೈರಿಸಲಾಗದೆ ಅದನ್ನು ತಹಬಂದಿಗೆ ತರುವ ಪ್ರಯತ್ನ ಮಾಡಿದ ರಾಮಮಾವಂತನನ್ನು ಆ ಆನೆಯು ಕೊಲ್ಲುತ್ತದೆ. ಆತನನ್ನು ದೇವೇಂದ್ರ ಮೊದಲಾದ ದೇವತೆಗಳು "ಐರಾವತವನೇಱಿಸಿ ಕೊಂಡು ಹೋಗಿ ಸರ್ವ್ವೇಶ್ವರನಾದ ಶ್ರೀ ಮಹಾದೇವನ ಸಮೀಪದಲು ಯಿರ್ಸಿದರು" ಎಂಬುದಾಗಿ ಶಾಶನವೊಂದರಿಂದ ತಿಳಿದು ಬರುತ್ತದೆ.[೮೪] ಕ್ರಿಶ. ೧೪೦೭ರ ಮತ್ತೊಂದು ಶಾಸನದಿಂದ ಚೀಲಗೌರದರಸ ಎಂಬುವನ ಮೇಲೆ ಆನೆಯ ಬಂದಾಗ ಬೊಂಮಣ್ಣನೆಂಬುವನು ತನ್ನ ಪ್ರಾಣವ ಕಾಪಾಡಿದ ಕಾರಣ ಆತನಿಗೆ ಚೀಲಗೌರದರಸನು ಉಮ್ಬಳಿಯನ್ನು ಬಿಟ್ಟ ವಿಷಯ ತಿಳಿಯುತ್ತದೆ.[೮೫] ಕ್ರಿ.ಶ. ೧೮೦೧ರ ಒಂದು ಶಾಸನದಿಂದ ಕೊಡಗಿನ ಅರಸನಾದ ಲಿಂಗರಾಜೇಂದ್ರನು "ಕಾಡಿನ ಬೇಟೆಯಲ್ಲು ದೊಡ್ಡ [ಆನೆ] ಹೊಡೆದು ಸಂಣಮರಿ ೮ನ್ನು ಕೈ ಸೆರ್ರೆ ಹಿಡಿದು" ತಂದವನಿಗೆ ಬೆಳ್ಳಿಯ ಆನೆಯನ್ನು ಬಹುಮಾನವಾಗಿ ಕೊಡುತ್ತಾನೆ.[೮೬] ಮತ್ತೊಂದು ಶಾಸನ ಆನೆಗಳಿಂದ ಉಂಟಾಗುತ್ತಿದ್ದ ತೊಂದರೆಗಳನ್ನು ಸಹಿಸಲಾಗದೆ ಜನರು ವೀರರಾಜೇಂದ್ರನಲ್ಲಿ ಅರುಹಿದಾಗ, ಅವನು ಆನೆಗಳನ್ನು ಬೇಟೆಯಾಡಿ ಎರಡು ವರ್ಷ ಒಂದು ತಿಂಗಳ ಅವಧಿಯಲ್ಲಿ ೨೩೩ ಆನೆಗಳನ್ನು ಕೊಂದು ೧೮೧ ಆನೆಗಳನ್ನು ಜೀವಸಹಿತ ಸೆರೆಹಿಡಿದ ವಿಷಯ ಹೇಳುತ್ತದೆ. ಕ್ರಿ.ಶ. ೧೮೮೨ರ ಮತ್ತೊಂದು ಶಾಸನದಿಂದ, "ದಳವಾಯಿ ಕೆರೆಗೆ ಬಂದುಯಿದ್ದು ತಪ್ಪಿಸಕೊಂಡು ಅಡವಿಗೆ ಹೋದ ಆನೆಯನ್ನು ಅಪ್ಪಣೆ ಮೇರೆಗೆ ಗುಂಡಿನಿಂದ ಹೊಡಿಶಿ ಹುಜೂರಿಗೆ ದಪಿಸ್ತ ಬಗ್ಗೆ ಹೆಗ್ಗಡೆ ದೇವನಕೋಟೆ ಅಮಲುದಾರ ಶಾಂತ್ಯೆಯನ ಮಗ ದೇವಚಂದ್ರಯಂಗೆ" ಜಮೀನನು ಇನಾಮಾಗಿ ಕೊಟ್ಟ ವಿಷಯವು ದೊರೆಯುತ್ತದೆ.[೮೭]

ಮದೋನ್ಮತ್ತ ಗೂಳಿಗಳೂ ಸಹ ಜನರಿಗೆ ತೊಂದರೆಯುಂಟು ಮಾಡುತ್ತಿದ್ದವು. ಅಂಥ ಸಮಯಗಳಲ್ಲಿ ಅವುಗಳನ್ನು ಎದುರಿಸುವುದೂ ವೀರತನವೆಂದೇ ಪರಿಗಣಿತವಾಗುತ್ತಿತ್ತು. ಜನಗಳನ್ನು ತನ್ನ ಕೊಂಬಿನಿಂದ ಇರಿದು ಕೊಲ್ಲುತ್ತಿದ್ದ ಗೂಳಿಯೊಂದನ್ನು ಭೂಮಾದಸೆಟ್ಟಿ ಎಂಬುವನು

---

೮೩ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೧ – ೬೨

೮೪ E. C. XV. BI. 339, 1231

೮೫ M. A. R.1923. 63, 1407

೮೬ E. C. I. Cg. 26, 1801

೮೭ E. C. I. Cg. 25

ಮತ್ತು ಆತನ ಮಗ ನಾದಿಯಣ್ಣನೆಂಬುವನೂ ಇರಿಯುತ್ತಾರೆ. ಆ ಪ್ರಯತ್ನದಲ್ಲಿ ಅವರು ಸಾಯುತ್ತಾರೆ. ಅವರಿಗೆ ಬಂಮಯ್ಯ ಮತ್ತು ನಾಗಯ್ಯ ಎಂಬುವರು 'ವೀರಗಲ್ಲ'ನ್ನು ನಿಲ್ಲಿಸುತ್ತಾರೆ.[೮೮]

ತುರುಗಾಳಗ

ಮಾನವನು ತನ್ನ ಜೀವನ ನಿರ್ವಹಣೆಗಾಗಿ ವ್ಯವಸಾಯವನ್ನು ಅವಲಂಬಿಸಿದಾಗ, ಅವನಿಗೆ ಹಲವಾರು ರೀತಿಗಳಲ್ಲಿ ನೆರವಾದ ಪ್ರಾಣಿ ಎಂದರೆ ಗೋವುಗಳು. ಆದ್ದರಿಂದ ಒಂದು ಸಮಾಜದ ಆರ್ಥಿಕವ್ಯವಸ್ಥೆಯು ತನ್ನ ಉತ್ತಮ ಸ್ಥಿತಿಗೆ ಈ ಜೀವಧನಗಳನ್ನು ಅವಲಂಬಿಸಿತ್ತು. ತಮ್ಮಲ್ಲಿನ ಆರ್ಥಿಕ ಮುಗ್ಗಟ್ಟನ್ನು ಸರಿಪಡಿಸಿಕೊಳ್ಳಲು ಸುಲಭವಾದ ಮಾರ್ಗವನ್ನು ಹುಡುಕಿದ ಮಾನವನಲ್ಲಿನ ಸಹಜವಾದ ಅಸೂಯಾಪದ ಬುದ್ಧಿ ಬೇರೆಯವರ ಜೀವಧನಗಳನ್ನು ಅಪಹರಿಸುವ ಪ್ರಯತ್ನ ಮಾಡಿತು. ಈ ರೀತಿ ಆರಂಭವಧ 'ತುರುಗೋಳ್' ಅಥವಾ 'ಗೋಗ್ರಹಣ' ಕ್ರಮೇಣ ಒಂದು ಖಚಿತವಾದ ರೂಪವನ್ನು ಪಡೆಯುತ್ತಾ ಬಂದಿತು. ಅಂದರೆ ಒಂದು ಗುಂಪಿನ ಜೀವಧನಗಳನ್ನು ಮತ್ತೊಂದು ಗುಂಪಿನ ಜನ ಅಪಹರಿಸಿದಾಗ ಅವರನ್ನು ಎದುರಿಸಿ ದನಗಳನ್ನು ಹಿಂತಿರುಗಿಸುವುದು ವೀರತನದ ಒಂದು ಮೌಲ್ಯವೆಂದು ಈ ಅವಧಿಯಲ್ಲಿಯೇ ಪರಿಗಣಿತವಾಯಿತು. ಭಾರತೀಯ ತುರುಗಾಳಗಗಳನ್ನು ಗಮನಿಸಿದಾಗ ಅವುಗಳನ್ನು ನಡೆಯಿಸುತ್ತಿದ್ದವರ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು – ರಾಜಕೀಯ ಕಾರಣಗಳನ್ನು ಉದ್ದೇಶವಾಗಿಟ್ಟುಕೊಂಡು ಅಪಹರಿಸುತ್ತಿದ್ದುದು ಮತ್ತು ಕೇವಲ ಕಳ್ಳತನಕ್ಕಾಗಿಯೇ ಅಪಹರಿಸುತ್ತಿದ್ದುದು ಎಂಬುದಾಗಿ ಎರಡು ಸ್ತರಗಳಲ್ಲಿ ಗುರುತಿಸಿಬಹುದು. ಆದರೆ. ಉದ್ದೇಶವೇನೇ ಇರಲಿ ತುರುಗಳ ಅಪಹರಣ ಮಾಡಿದವರನ್ನು ಎದುರಿಸುವುದು ವೀರತನವೆಂದೇ ಬಗೆಯಲಾಗಿತ್ತು.

ಅಜ್ಞಾತವಾಸದಲ್ಲಿದ್ದ ಪಾಂಡವರನ್ನು ಪಾಂಡವರನ್ನು ಹಿಡಿಯುವ ಸಲುವಾಗಿ ದುರ್ಯೋಧನನು ವಿರಾಟನ ಗೋವುಗಳನ್ನು ಹಿಡಿದುದನ್ನು ನಿದರ್ಶನವಾಗಿ ನೀಡಬಹುದು. ಈ ಪ್ರಸಂಗ ಪಂಪನಲ್ಲಿ ಪ್ರಾದೇಶಿಕ ವೈಶಿಷ್ಟ್ಯವನ್ನು ಪಡೆದಿದೆ ಎಂದು ಹೇಳಬಹುದು. ಪಾಮಡವರು ವೀರರು ; ಎಂತಹ ಸಂದರ್ಭದಲ್ಲಿಯಾದರೂ 'ಗೋಗ್ರಹಣ'ವನ್ನು ಎದುರಿಸದೆ ಬಿಡುವವರಲ್ಲ ; ಆದಕಾರಣ ವಿರಾಟನ ಗೋವುಗಳನ್ನು ಅಪಹರಿಸಿದರೆ ಸಹಿಸಿಯಾರೇ ಎಂಬುದಾಗಿ ದುರ್ಯೋಧನನು ಹೇಳುತ್ತಾನೆ.[೮೯] ಇದೇ ಪ್ರಸಂಗ ಮೂಲಭಾರತದಲ್ಲಿಯೂ ಇದೆ. ಆದರೆ

---

೮೮ E. C. XI. Dg. 169, 1200

೮೯ ಪಂಪ : ವಿಕ್ರಮಾರ್ಜುನ ವಿಜಯ,೯–೮೯ "ತುಱುಗೊಂಡೊಡೆ ಪಾಂಡವರಿರ್ಪಗಂಡರೇ".

ತುರುಗೋಳ್‌ನ ಬಗ್ಗೆ ದುರ್ಯೋಧನನು ಆಡುವ ಮಾತುಗಳು ಮೂಲಭಾರತದಿಂದ ಮಾಡಿದ ಅನುವಾದವನ್ನು ವ್ರದಕ್ಕಿಂತಲೂ, ಪಂಪನ ಸಮಕಾಲೀನ ಸಮಾಜದ ವೀರರಿಗೆ ಇದ್ದ ಆದರ್ಶವನ್ನು ಎತ್ತಿ ಹಿಡಿಯುವಂಥವು ಎಂದು ತೋರುತ್ತದೆ. ಕೌರವನ ಈ ಕುತಂತ್ರವನ್ನು ಪಾಂಡವರು ಗ್ರಹಿಸದೆಯೂ ಇಲ್ಲ.[೯೦] ಹಾಗೆಂದು ಅವರು ಸ್ವರಕ್ಷಣೆಗಾಗಿ ತಮ್ಮ ವೀರತನವನ್ನು ಮರೆಯದ ಷಂಡರೂ ಅಲ್ಲ. ತಮ್ಮ ಅವಧಿಯು ಮುಗಿಯುವವರೆಗೆ ಅಜ್ಞಾತ ರೂಪದಲ್ಲಿಯೇ ಕೌರವರನ್ನು ಎದುರಿಸುತ್ತಾರೆ. ಈ ರೀತಿ ತಮ್ಮ ಕಷ್ಟವನ್ನು ಅರಿತೂ ಕೌರವರನ್ನು ಎದುರಿಸುವುದರಿಂದ ಪಾಂಡವರಿಗೆ ಯಾವುದೇ ರೀತಿಯ ಲಾಭವೂ ಇಲ್ಲ. ಬದಲಾಗಿ ತಮ್ಮ ನಿಜಸ್ವರೂಪಗಳು ಹೊರಬಿದ್ದರೆ ಮತ್ತೆ ಕಷ್ಟ ಪರಂಪರೆಗಳನ್ನು ಎದುರಿಸಬೇಕಾಗುತ್ತದೆ. ಈ ಎಲ್ಲವನ್ನೂ ಪಾಂಡವರು ಅರಿತವರಾಗಿದ್ದರು. ಇಂತಹ ಒಂದು ವಿಷಮ ಪರಿಸ್ಥಿತಿಯಲ್ಲಿಯೂ ಅವರು ತುರುಗಳ ಸೆರೆಯನ್ನು ಬಿಡಿಸಲು ಹೋರಾಡಿದರೆಂದರೆ, ಅಂದಿನ ವೀರರಿಗೆ ತಮ್ಮ ಮೌಲ್ಯಗಳನ್ನುಳಿಸಿಕೊಳುವಲ್ಲಿನ ಶ್ರದ್ಧೆ ಮತ್ತು ಧೀಶಕ್ತಿಯು ಎಂಥದು ಎಂಬುದರ ಪರಿಚಯ ನಮಗಾಗುತ್ತದೆ.

ಕ್ರಿ.ಶ. ೧೧೪೦ರ ಒಂದು ವೀರಗಲ್ಲಿನಿಂದ ವೀರನೊಬ್ಬನು ತನ್ನ ಊರಿನಿಂದ ವೈಯಕ್ತಿಕ ಕೆಲಸದ ಮೇರೆಗೆ ಬೇರೆಯ ಊರಿಗೆ ಹೋಗಿದ್ದಾಗ, "ಆ ಗ್ರಾಮದ ತುಱುವಂ ತೊಱಿಹರ ಕಾಳಿಯ ಆ ಪಯ್ಯಲಿಂಗೆಱಗಿ ಮೇಲಾಳಂ ನಿಱಿದು ಕುದುರೆಯಂ ಪಿಡಿದು ಆ ಮಾರ್ಬಲ"ವನ್ನು ಎದುರಿಸಿ ತುರುಗಳನ್ನು ಹಿಂತಿರುಗಿಸಿ ಆ ಹೋರಾಟದಲ್ಲಿ ಸಾಯುತ್ತಾನೆ[೯೧] ಇಲ್ಲಿ ವೀರನಾದವನು ತನ್ನ ಸ್ವಂತ ಗ್ರಾಮದ ಹಸುಗಳಿಗಾಗಿ ಹೋರಾಡಿ ಸತ್ತಿಲ್ಲ. ಹಾಗೆ ಅವನು ಹೋರಾಡುವುದರಿಂದ ತನಗೆ ಪ್ರತಿಫಲವಿದೆಯೆಂದು ಹೋರಾಡಿದವನಲ್ಲ. ಕೇವಲ ಸ್ವಯಂಪ್ರೇರಿತನಾಗಿ ಹೋರಾಡಿ ಸತ್ತವನು. ಈ ಸ್ವಯಂಪ್ರೇರಣೆಗೆ ಯಾವ ಮನೋಧರ್ಮ ಕಾರಣವಾಗಿತ್ತು ಎಂಬ ಪ್ರಶ್ನೆಗೆ ರನ್ನ ಮಹಾಕವಿಯ ಗದಾಯುದ್ಧದಲ್ಲಿ ಸಮರ್ಪಕವಾದ ಉತ್ತರ ದೊರೆಯುತ್ತದೆ.

"ತುಱುಗೋಳೊಳ್ ಪೆಣ್ಬುಯ್ಯಲೊ
ಳೆಱೆವೆಸದೊಳ್ ನಂಟನೆಡಱೊಳೂರಟಿವಿನೊಳಂ
ತಱಿಸಂದು ಗಂಡುತನಮನೆ
ನೆಱಪದವಂ ಗಂಡನಲ್ಲನೆಂತು ಷಂಡಂ"[೯೨]

---

೯೦ ಅದೇ, ೮–೯೦ಮ "ನಮ್ಮ ನಾರೆಯಲೆವ್ವೆರಿಯು ಮಾಡದಗೊಡ್ಡಮಿಲ್ಲಿ ಮಾಣ್ಡಿರಲಣಮಾಗೆ ಪೂಣ್ದರಲಣಮಾಗೆ ಪೂಣ್ದವಧಿಯಂ ನೆಱೆದಿತ್ತು ಕಡಂಗಿ ಕಾದುವಂ".

೯೧ E. C. VII. Sh. 37, 1140

೯೨ ರನ್ನ ; ಸಾಹಸಭೀಮ ವಿಜಯಂ ೩–೩೫

ರನ್ನ ಮಹಾಕವಿಯ ಈ ಮಾತು ಅಂದಿನ ವೀರರ ಜೀವನದ ಮುಖ್ಯ ಉದ್ದೇಶವಾಗಿರಬೇಕು. ಕ್ರಿಶ. ೧೨೦೪ ರ ಒಂದು ವೀರಗಲ್ಲಿನಿಂದ ಚೀಲಗೌಡನೆಂಬುವನು 'ಕಲ್ಲಕೆರೆ' ಎಂಬ ಗ್ರಾಮವನ್ನು "ಬೇಡರಿರಿದು ಹೋಹಲ್ಲಿ ಹುಯ್ಯಲ ಹರಿದು ಬೇಡರಾನೆ ತಾಗು ತುಱುವಂ ಮಗುಳ್ಚಿಯತುಳಬಳ ಪರಾಕ್ರಮನಾಗಿ ತಂನ ಸಾಹಸದಿಂ ಖರ್ಗ್ಗಖೇಠಕದೊಳು ಕಿರಾತ ಪಡೆಯಂ ಕೊಂದು ಆ ಗ್ರಾಮ ಸಂತೋಷಂ ಮಾಡಿ ಬಂದು ಜನ ಪೂಜಿತನುಮಪ್ಪ ಚೀಲಗಉಡನು ಬೀರಶ್ರೀಯಂ" ತಾಳಿದ ವಿಷಯ ತಿಳಿದು ಬರುತ್ತದೆ.[೬೩] ಈ ವೀರಗಲ್ಲು ಅವನನ್ನು ಹೊಗಳುತ್ತಾ ಮೇಲೆ ಉದ್ಧೃತಗೊಳಿಸಿದ ರನ್ನನ ಮಾತುಗಳನ್ನು ಪ್ರತಿಧ್ವನಿಸುವಂತೆ "ತುಱು ಗೋಳೂಟು ಪೆಣ್ಬುಯ್ಯಲೊಳೆಱೆವೆಸದೊಳು ನಂಟರೆಡೆಯೊಟಣದ್ಮೊ ತಟ ಚೀಲಗಉಡಂ ನೆಱೆಗಲಿ ತಱಿಸಂದು ತಾಗಿದಂ" ಎಂದು ಹೇಳುತ್ತದೆ.

ಕ್ರಿಶ. ೧೦೫೮ರ ಮತ್ತೊಂದು ವೀರಗಲ್ಲಿನಿಂದ ಮುಡಿಗೆರೆಯನ್ನು ಆಕ್ರಮಿಸಿ ತುರುಗಳನ್ನು ಹಿಡಿದು ಹೆಣ್ಣುಮಕ್ಕಳ ಮಾನಾಪಹರಣ ಮಾಡುತ್ತಿದ್ದಾರೆಂದು ಹುಯ್ಯಲಿಡುತ್ತಿದ್ದುದನ್ನು ಕೇಳಿದ ಮಾಚಗಾವುಣ್ಡ ಎಂಬುವನು, ಸ್ವಲ್ಪವೂ ತಡಮಾಡದೆ ಅಲ್ಲಿಗೆ ಹೋಗಿ "ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇರಣೇ ಯಂಬಾ ಶ್ಲೋಕಮನಾತ್ಮಗತಂ ಬಗೆದು ಸಂಗ್ರಾಮಯಂ ಪರಿಚ್ಛೇದಿಯಾಗಿ ಮಾರ್ಬ್ಬಲದಾಳಂ ಮೊದಲಿಸಿ" ಶತ್ರು ಪಕ್ಷದವರನ್ನು ಸದೆ ಬಡಿದು ತುರುಗಳನ್ನು ಹಿಂತಿರುಗಿಸಿದ ವಿಷಯ ತಿಳಿಯುತ್ತದೆ.[೬೪]

ಕ್ರಿಶ. ೧೧೮೭ರ ಒಂದು ವೀರಗಲ್ಲು, ಸೊರಬವನ್ನು ಶತ್ರುಗಳು ಮುತ್ತಿ ಆ ಊರಿನ ಹಸುಗಳನ್ನು ಹೊಡೆದುಕೊಂಡು ಹೋಗುತ್ತಿರುವಾಗ ಕಾಮಗೌಡ ಎಂಬುವನು "ಪರೋಪಕಾರಾರ್ತ್ಥಮಿದಂ ಶರೀರಮೆಂಬ ವಾಕ್ಯಾರ್ತ್ಥಮಂ ನೆನೆದು ಮೆಱೆವಾಳಿಯ ನೆಱಪುವೆನೆಂದು ಹೋಗಿ" ತುರುಗಳನ್ನು ಹಿಂತಿರುಗಿಸಿ ಸಾಯುತ್ತಾನೆಂಬ ವಿಷಯ ತಿಳಿಸುತ್ತದೆ.[೬೫]

ತಮ್ಮ ಊರಿನ ತುರುಗಳನ್ನು ಬೇರೆಯವರು ಸವಾಲು ಎಸೆದೋ ಅಥವಾ ಕಳ್ಳತನಕ್ಕಾಗಿಯೋ ಅಪಹರಿಸಿದಾಗ, ತುರುಗಳನ್ನು ಕಾಯುತ್ತಿದ್ದ ಗೋಪಾಲಕರಿಗೆ ಮತ್ತು ಆ ಸ್ಥಳದ ವೀರರಿಗೆ ಮನಸ್ಥಿತಿ ಹೇಗಿರುತ್ತಿತ್ತು, ಸ್ವಾಭಿಮಾನದ ಉತ್ಸಾಹ ಹೇಗೆ ವ್ಯಕ್ತವಾಗುತ್ತಿತ್ತು ಎಂಬುದರ ವಾಸ್ತವ ಚಿತ್ರನವನ್ನು ಪಂಪನು ಬಹುಸಮರ್ಥವಾಗಿ ನೀಡುತ್ತಾನೆ. ಕೌರವನ ಕಡೆಯವರು ವಿರಾಟನ ತುರುಗಳನ್ನು ಹಿಡಿದಾಗ ಆ ಗೋಪಾಲಕರು

---

೬೩ E. C. VI. Tk. 84, 1204
೬೪ E. C. VII. Sk. 83, 1058
೬೫ E. C. VIII. Sb. 47, 1187

"'ತುಱು ಪರಿವಾಗಳೆಮ್ಮ ಪೆಣನಂ ತುೞಿದುಂ ಪರಿಗುಂದಲೆಂದು ಚಿಃ
ತಱುಗೊಳೆ ಬಾೞೆಮೆಂದು ತುಱುಗೋಳೊಳೆ ಸಾವುದು ಸೈಪಿದೆಂದು ಪಾ
ಯ್ದಱೆಕೆಯ ಗೋವರಣ್ಮಿ ಬರೆ ಪಾಯಿಸಿ ಘೋಟಿಯಿಲರ್ ತಗುಳ್ದುತ
ತ್ತುಱು ತಱೆದಿಕ್ಕಿ ದೇಗುಲಕೆ ಪೆರ್ಮೆರನಂ ಕಡಿವಂತೆ ಮಾಡಿದರ್."[೬೬]

ಪಂಪನ ಈ ವರ್ಣನೆ ಅಕ್ಷರಶಃ ನಿಜ ತುರುಗಾಳಗಗಳಲ್ಲಿ ಹೋರಾಡಿ ಸತ್ತ ವೀರರನ್ನು ತುಳಿದು ತುರುಗಳು ಶತ್ರುಗಳತ್ತ ಹೊರಟಾಗ ಮತ್ತೆ ಇತರ ವೀರರು ಅವುಗಳನ್ನು ಹಿಂತಿರುಗಿಸಿದ ವಾಸ್ತವಿಕ ವರ್ಣನೆ ಕುರುಗೋಡು ಶಾಸನದಲ್ಲಿ ಬರುತ್ತದೆ. ಕಾಳರಸ ಎಂಬುವನು ತನ್ನ ಪ್ರಭುವಿನ ಆಜ್ಞೆಯ ಮೇರೆಗೆ ಕುರುಗೋಡನ್ನು ಆಕ್ರಮಣ ಮಾಡಿ ತುರುಗಳನ್ನು ಅಪಹರಿಸುವಾಗ, ಅದೇ ಊರಿನ ದೇವಗಾವುಂಡ ಮತ್ತು ಮಲ್ಲಗಾವುಂಡ ಎಂಬ ಇಬ್ಬರು ಅಣ್ಣತಮ್ಮಂದಿರು ಹೋರಾಡಿ ಸಾಯುತ್ತಾರೆ. "'ಇವರಿಬ್ಬರ ಪೆಣನಂ ಮೆಟ್ಟಿ ತುಱುಪರಿಯಲವರಿಬ್ಬರಿಂ ಕಿಱಿಯ ಬೊಪ್ಪಗಾವುಂಡ ತಮ್ಮಣ್ಣಂದಿರಿಬ್ಬರ ಕಳೇಬರವಂ ಕಂಡು ಸೈರಿಸಲಾಱದೆ ನಿಮ್ಮಾದುದನಪ್ಪೆನಲ್ಲದೊಡೇಂ ತಱುವಂ ಮಗುಳ್ಚಿ ಬಪ್ಪೆನ್" ಎಂಬುದಾಗಿ ಪ್ರತಿಜ್ಞೆಮಾಡಿ ತುರುಗಳನ್ನು ಹಿಂತಿರುಗಿಸುತ್ತಾನೆ.[೬೭] ಬನವಾಸಿಯ ಒಂದು ವಈರಗಲ್ಲಿನ ಶಿಲ್ಪದಲ್ಲಿ ತುರುಗಾಳಗದಲ್ಲಿ ಮಡಿದ ವೀರರ ಹೆಣಗಳನ್ನು ತುರುಗಳು ತುಳಿದುಕೊಂಡು ಹೋಗುತ್ತಿರುವಂತೆ ವಿವರಗಳನ್ನು ಬಿಡಿಸಲಾಗಿದೆ. (ಚಿತ್ರ ೫೨)

ತುರುಗಾಳದಲ್ಲಿ ಭಾಗವಹಿಸದೆ ಮೌನವಾಗಿದ್ದ ವೀರರಿಗೆ ಸಮಾಜ ಯಾವ ರೀತಿಯಲ್ಲಿ ತನ್ನ ಪ್ರತಿಕ್ರಿಯೆಯನ್ನು ತೋರಿಸುತ್ತಿತ್ತು ಎಂಬ ಅಂಶ ತೆಲುಗಿನ ಜಾನಪದಗೀತೆಯೊಂದರಲ್ಲಿ ಸೊಗಸಾಗಿ ಚಿತ್ರಿತವಾಗಿದೆ. ತನ್ನ ರಾಜ್ಯದ ತುರುಗಳನ್ನು ಶತ್ರುಗಳು ಹೊಡೆದುಕೊಂಡು ಹೋದಾಗ ಆ ರಾಜ್ಯದ ಮಂತ್ರಿ ಅದಕ್ಕೆ ಯಾವ ರೀತಿಯ ಪ್ರತಿಭಟನೆಯನ್ನು ತೋರಿಸುವುದಿಲ್ಲ. ಅವನು ಮನೆಗೆ ಬಂದಾಗ ಕೈಕಾಲುಗಳಿಗೆ ನೀರು ಕೊಡುವುದರ ಬದಲು ಅವನ ಹೆಂಡತಿ ಅರಿಶಿನ, ಕುಂಕುಮ, ಬಳೆಗಳನ್ನು ನೀಡುತ್ತಾಳೆ. ಊಟಕ್ಕೆ ಕುಳಿತಾಗ ಅವನ ತಾಯಿ ಒಡೆದ ಹಾಲನ್ನು ಬಡಿಸುತ್ತಲೆ. ಈ ರೀತಿಯ ವಿಚಿತ್ರ ವರ್ತನೆಗಳು ತನ್ನ ಷಂಡತನಕ್ಕೆ ಹಾಕಿದ ಪುರಸ್ಕರವೆಂದು ಬಗೆದ ಅವನು ತನ್ನ ಗಂಡಸುತನವನ್ನು ಮೆರೆಯಲು ನೇರವಾಗಿ ಹೋಗಿ ಶತ್ರುಗಳೊಡನೆ ಹೋರಾಡಿ ಹಸುಗಳನ್ನು ಹಿಂತಿರುಗಿಸುವ ಪ್ರಯತ್ನ ಮಾಡುತ್ತಾನೆ.[೬೮]

---

೬೬ ಪಂಪ : ವಿಕ್ರಮಾರ್ಜುನ ವಿಜಯಂ. ೮–೫೫

೬೭ E. C. VIII. Sb. 175, 1156

೬೮ ಈ ಬಗ್ಗೆ ನನಗೆ ಮಾಹಿತಿ ನೀಡಿದವರು ಡಾ. ಟಿ.ವಿ. ಸುಬ್ಬರಾವ್ ಅವರು.

ಹಸುಗಳನ್ನು ಯಾರೇ ಆಗಲಿ, ಯಾವ ಕಾರಣಕ್ಕಾಗಿಯೇ ಆಗಲಿ, ಅಪಹರಿಸಿದಾಗ ಅದನ್ನು ಹಿಂತಿರುಗಿ ಪಡೆಯುವುದರಿಂದ ತಮ್ಮ ಪರಾಕ್ರಮಕ್ಕೆ ಒಂದು ಅರ್ಥವಂತಿಕೆ ಬರುವುದಾಗಿ ಜನ ಭಾವಿಸಿದ್ದರು. ಈ ಅಂಶ ಇತ್ತೀಚಿನ ಕಾಲದಲ್ಲಿಯೂ ಜನರಲ್ಲಿ ಇತ್ತೆಂಬುದನ್ನು ಗಮನಿಸಬಹುದು. ಮುತ್ತೋಡು ಹಾಲಪ್ಪನಾಯಕನೆಂಬುವನು ತನ್ನ ಸೈನ್ಯ ಸಮೇತ ಮುಸುವನಕಣಿವೆಯ ಘಾಟಿಗೆ ಬಂದು ಅಲ್ಲಿ ಚಿತ್ರದುರ್ಗದವರ ದನಗಳನ್ನು ಹಿಡಿಯುತ್ತಾನೆ. ಆ ದನಗಳನ್ನು ಕಾಯುತ್ತಿದ್ದ ಗೊಲ್ಲನು ಈ ವಿಷಯವನ್ನು ಮದಕರಿನಾಯಕನಿಗೆ ತಿಳಿಸುತ್ತಾನೆ. '"ಕೂಡಲೇ ರಾಜಾ ಸಾಹೇಬರು ಕಾಲಭೈರವನಂತೆ ಜಾಜ್ವಲ್ಯವಾಗಿ ದರೋಬಸ್ತು ಪೌಜು ಪಿರ್ಡ್ಯಾ ಜನಗಳಿಗೆ ಹುಕುಂ ಆದದ್ದು ಸವಾರ್ ಕಛೇರಿ ಜನಗಳಿಗೆ ಹುಕುಂ ಆದದ್ದು : ಸರಕಾರದ ಕಾವಲಲ್ಲಿದ್ದ ದನಗಳು ಮೇಯುತ್ತಾ ಇರುವಲ್ಲಿ ನವಾಬ ಪೌಜು ಬಂದು ತಿರುಗಿಸಿಕೊಂಡು ಹೋಗುತ್ತಾರಂತೆ. ಪೂರ್ವದಿಂದ ಚಿತ್ರದುರ್ಗದ ಹತ್ತಿರ ಸರಕಾರ ದನಗಳಿಗೆ ತಿರುಗಿಸಿದ್ದು ಕೇಳಿಯಿರಲಿಲ್ಲ. ನೀವು ಪೀಡಿತರ ಪೀಡಿ ಸರಕಾರದ ಉಪ್ಪಿನಿಂದ ಸಂಸ್ಥಾನದಿಂದ ಸಂರಕ್ಷಣರಾಗಿದ್ದಲ್ಲಿ ಈ ಕ್ಷಣವೇ ನಾಲ್ಕು ಸಾವಿರ ಕುದುರೆ ನಿಶಿಹೋಗಿ ದಂಡು ಹೊಡೆದು ಬನ್ನಿ ಹಿಂದಕ್ಕೆ ತೆಗೆದುಕೊಂಡು ಬರುವುದಲ್ಲದೆ ದನಗಳನ್ನು ತಿರುಗಿಸಿಕೊಂಡು ಬರಬೇಕು. ಇಲ್ಲದಿದ್ದರೆ ನಿಮ್ಮ ಜನಗಳಿಗೆ ಶಿಪಾಯಿ ಎಂದು ಯಾರೂ ಕರೆಯಲಿಕ್ಕಿಲ್ಲ." ಎಂದು ತನ್ನ ಸೈನಿಕರಿಗೆ ಕರೆ ನೀಡುತ್ತಾನೆ.[೯೯] ಈ ಅಂಶವನ್ನು ಗಮನಿಸಿದರೆ ಗೋವುಗಳನ್ನು ಕಳ್ಳರು ಅಥವಾ ಅರಸರು ಹೊಡೆದುಕೊಂಡು ಹೋದಾಗ ತಮಗೆ ಆಗುವ ಆರ್ಥಿಕವಾದ ನಷ್ಟಕ್ಕಿಂತ ಮಿಗಿಲಾಗಿ ಮಾನಭಂಗವಾಗುತ್ತದೆ ಎಂದು ಅವರು ಭಾವಿಸಿದ್ದರು.

ತುರುಗಾಳವು ಯಾವುದೇ ಮುನ್ಸೂಚನೆಯೂ ಇಲ್ಲದೆ ಆಕಸ್ಮಿಕವಾಗಿ ನಡೆಯುತಿದ್ದ ಒಂದು ರೀತಿಯ 'ಗ್ರಹಣವೇ' ಸರಿ. ಇದನ್ನು ಎದುರಿಸುವ ಸಲುವಾಗಿ ಯಾವುದೇ ನಿಶ್ಚಿತವಾದ ಪಡೆಯೂ ಕರ್ನಾಟಕದಲ್ಲಿ ಇದ್ದಂತೆ ತೋರುವುದಿಲ್ಲ. ಈ ರೀತಿಯ ಕಾಳಗಗಳು ನಡೆದಾಗ, ಆ ಪ್ರದೇಶದ ವೀರರಾದವರು ಸ್ವಯಂ ಪ್ರೇರಿತರಾಗಿ, ಕೆಲವೊಮ್ಮೆ ಯಾರದೊ ಆಜ್ಞೆಯಂತೆ ಹೋರಾಟ ಮಾಡಿದವರೇ ಆಗಿರುತ್ತಾರೆ. ಇಂತಹ ಹೋರಾಟದಲ್ಲಿ ಸ್ವಯಂಪ್ರೇರಿತಳಾಗಿ ಹೋರಾಡಿ ಮಡಿದ ಹೆಣ್ಣುಮಗಳೊಬ್ಬಳ ವಿಷಯ ಕ್ರಿ.ಶ. ೧೦೪೧ರ ವೀರಗಲ್ಲೊಂದರಿಂದ ತಿಳಿಯುತ್ತದೆ.[೧೦೦] 'ಸರಕನೂಱು' ಎಂಬ ಗ್ರಾಮದ ತುರುಗಳನ್ನು ಯಾರೋ ಅಪಹರಿಸಿದಾಗ, ಶತ್ರುಗಳನ್ನು ಅಟ್ಟಿಸಿಕೊಂಡು ಹೋದ 'ಮಾಚ ಗಾವುಂಡ' ಎಂಬುವನ ಮಗಳು 'ಲಕ್ಷ್ಮಮ್ಮಗಾವುಣ್ಡಿ' ತುರುಗಳನ್ನು ಹಿಂತಿರುಗಿಸಿ ಆ ಹೋರಾಟದಲ್ಲಿ ಸಾಯುತ್ತಾಳೆ. ಈ ನಿದರ್ಶನ ಸಾರುವಂತೆ, ತನ್ನ ಎದುರಿಗೆ

---

೯೯ ಹಲ್ಲೂರು ಶ್ರೀನಿವಾಸ ಜೋಯಿಸ್ : ಚಿತ್ರದುರ್ಗದ ಬಖೈರು. ಪು. ೨೫

೧೦೦ E. C. IX. Ht. 11, 1041

ಆಗುತ್ತಿದ್ದ ಅನ್ಯಾಯವನ್ನು ಸಹಿಸದೆ ಹೆಣ್ಣುಮಗಳೊಬ್ಬಳು ಹೋರಾಡಿರಬೇಕಾದರೆ, ಸ್ವಾಭಿಮಾನಿಗಳಾಗಿದ್ದ ಗಂಡಸರು ಸ್ವಯಂಪ್ರೇರಿತರಾಗಿ, ಇಂಥ ಹೋರಾಟಗಳಲ್ಲಿ ಪಾಲುಗೊಂಡು ಹೊಡದಾಡಿ ನ್ಯಾಯವನ್ನು ದೊರಕಿಸುತ್ತಿದ್ದಿರಬೇಕು.

ಚಿತ್ರದುರ್ಗದ ಪಾಳೆಯಗಾರರನ್ನು ಕುರಿತಂತೆ ಇರುವ ಜಾನಪದಗೀತೆಯೊಂದು ಗಮನಾರ್ಹವಾಗಿದೆ. ರಾಜಾ ಮದಕರಿಯು "'ಪಟ್ಟವೇರಿದಾಗ ಇನ್ನೂ ಹನ್ನೆರಡು ವರ್ಷದವನು. ಅವನ ಅಜ್ಜಿ ಗಂಡುಗಲಿ ಓಬವ್ವನು ರಾಜ್ಯಧರಳಾಗಿ ಆಳಲಾರಂಭಿಸಿದಳು. ನೆರೆ ರಾಜ್ಯವಾದ ರಾಯದುರ್ಗದ ದಳಪತಿ ಕೃಷ್ಣಪ್ಪನಾಯಕನು ಚಿನ್ಮೂಲಾದ್ರಿಯು ಹೆಣ್ಣಿನ ಕೈಲಿದೆ, ಸಾಧಿಸಬಹುದು ಎಂದು ದಂಡೆತ್ತಿ ಬಂದು ಉತ್ತರದಿಕ್ಕಿನಲ್ಲಿ ಮೇಯುತ್ತಿದ್ದ ಗೋವೃಂದವನ್ನು ಅಪಹರಿಸಿದನು. ಇದನ್ನು ಕೇಳದಿ ಕೂಡಲೇ ಗಂಡುಗಲಿ ಓಬವ್ವನು ರೇಗಿ ಶತ್ರುವಿನ ಮೇಲೆರಗಿದಳು. ಹೆಣ್ಣಿನ ಗಂಡುತನವನ್ನು ಕಂಡು ಬೆಚ್ಚಿ ದನಗಳನ್ನು ಬಿಟ್ಟೋಡಿದನು." ಓಬ್ಬವ್ವನು ಅಷ್ಟಕ್ಕೇ ಬಿಡದೆ ಅವನನ್ನು ಹಿಂಬಾಲಿಸಿಕೊಂಡು ಹೋದಳು.[೧೧]

ಪ್ರಾಚೀನ ಕರ್ನಾಟಕದಲ್ಲಿ ತುರುಗಾಳಗದಲ್ಲಿ ಮಡಿದ ಮತ್ತು ಇತರ ವೀರರ ಬಗ್ಗೆ ತುಂಬಾ ಗೌರವದ ಭಾವನೆ ಇತ್ತೆಂಬ ವಿಷಯ ಬ್ರಹ್ಮಶಿವನ "ಸಮಯ ಪರೀಕ್ಷೆ' ಯಿಂದ ತಿಳಿಯುತ್ತದೆ. ಬ್ರಹ್ಮಶಿವನು ತುರುಗಾಳಗದಲ್ಲಿ ಮಡಿದ ವೀರರಿಗೆ ನಮಸ್ಕರಿಸುವ, ಅವನ ನೆತ್ತರನಿಂದ ಬೊಟ್ಟು ಇಟ್ಟುಕೊಳ್ಳವು ಜನರ ಆಚರಣೆಯನ್ನು ಈ ರೀತಿ ವಿಡಂಬಿಸುತ್ತಾನೆ.[೧೨]

"'ತುರುಗಳುಗುಳ್ದ ಪುಯ್ಯಲೊ
ಳೆರೆಯನ ಕಾರ್ಯದೊಳಮುಣ್ಮಿ ಸತ್ತವನಂ ಕಂ
ಡೆರಗಿ ಬಳಿಕವನ ನೆತ್ತರೊ
ಳರಿವಿದೆ ಬೊಟ್ಟುನಿಟ್ಟುಕೊಳುವಮೂರ್ಢರ್"

ಬ್ರಹ್ಮಶಿವನ ಪ್ರಕಾರ ಆ ರೀತಿ ವೀರರಿಗೆ ನಮಸ್ಕಾರ ಮಾಡುವುದು, ಅವರ ರಕ್ತದಿಂದ ತಿಲಕವನ್ನಿಟ್ಟುಕೊಳ್ಳುವುದು ಮೂರ್ಖತನದ ಪರಮಾವಧಿ. ಇಲ್ಲ ಮುಖ್ಯವಾಗಿ ಗಮನಿಸಬೇಕಾದುದು ಅಂದಿನ ಜನತೆಗೆ ಈ ರೀತಿಯ ಕಾಳಗಗಳಲ್ಲಿ ಮಡಿದ ವೀರರ ಬಗ್ಗೆ ಇದ್ದ ಗೌರವ. ಸ್ವಯಂ

---

೧೧ ಹುಲ್ಲೂರು ಶ್ರೀನಿವಾಸ ಜೋಯಿಸ್ : 'ಪಾಳೆಯಗಾರರ ಜನಪದಗೀತೆಗಳು' (ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸ್‌ರ ಐತಿಹಾಸಿಕ ಲೇಖನಗಳು : ಸಂ. ಲಕ್ಷಣ ತೆಲಗಾವಿ, ಡಾ. ಎಂ. ವಿ. ಶ್ರೀನಿವಾಸ)

೧೨ ಬ್ರಹ್ಮಶಿವ : ಸಮಯ ಪರೀಕ್ಷೆ ೧೨-೧೩

ಪ್ರೇರಿತರಾಗಿಯೋ ಜೋಳದ ಋಣ ತೀರಿಸುವ ಸಲುವಾಗಿಯೋ ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಡಿ ಮಡಿದ ವೀರರ ಬಗ್ಗೆ ಜನತೆಗೆ ಗೌರವ ಇರುವುದು ಸಹಜವೇ ಆಗಿದೆ.

ಇನ್ನು ಮುಂದೆ ತುರುಗಾಳಗದಲ್ಲಿ ಮಡಿದ ವೀರರ ನಿದರ್ಶನಗಳನ್ನು ಗಮನಿಸೋಣ. ಈ ತುರುಗಾಳಗಗಳು ಸಾಮಾನ್ಯವಾಗಿ ಕಳ್ಳತನ ಮತ್ತು ರಾಜಕೀಯ ಉದ್ದೇಶಗಳಿಂದ ನಡೆದಿರುವುದನ್ನು ಈ ಹಿಂದೆಯೇ ಹೇಳಲಾಗಿದೆ.

ಕಳ್ಳತನವನ್ನು ಉದ್ದೇಶವಾಗಿಟ್ಟುಕೊಂಡು ಬಂದು ತುರುಗಳನ್ನು ಅಪಹರಿಸಿದವರ ವಿರುದ್ಧ ಹೋರಾಡಿ ಮಡಿದ ವೀರರ ಅನೇಕ ನಿದರ್ಶನಗಳು ದೊರೆಯುತ್ತವೆ. ಪೊಲ್ಲೆಯೂರಿನ ತುರುಗಳನ್ನು ಕಳ್ಳರು ಅಪಹರಿಸಿಕೊಂಡು ಹೋದಾಗ ಚೋಳಾಚಾರಿ ಎಂಬುವನು ಕಳ್ಳರನ್ನು ಹಿಂಬಾಲಿಸಿ, ಆ ಕಳ್ಳರಲ್ಲಿ ಒಬ್ಬನನ್ನು ಕೊಂದು ತುರುಗಳನ್ನು ಹಿಂದಿರುಗಿಸುವಲ್ಲಿ ತಾನೂ ಸಾಯುತ್ತಾನೆ.[೧೦೩] ನೊಳಂಬಘಟ್ಟದ ದೇವನ ಆಜ್ಞೆಯಂತೆ ಏಚನಾಯಕ ಎಂಬುವನು "'ತುಱುವಂ ಕೊಂಡು ಪೋಪ ಕಳ್ಳರಂ ಪಲರಂ ಕೊಂದು ತುಱುವ ಮಗುಟ್ಚಿ ಸುರಲೋಕ ಪ್ರಾಪ್ತ" ನಾಗುತ್ತಾನೆ.[೧೦೪] ಕೆಂಕೆರೆಯ ಮಹಾಜನಗಳ ತುರುಗಳನ್ನು ಕಳ್ಳರು ಅಪಹರಿಸಿಕೊಂಡು ಹೋಗುವಾಗ ಆದ ಹುಯ್ಯಲನ್ನು ಕೇಳಿ ಅದೇ ಊರಿನ 'ಮರಿಯ' ಮತ್ತು 'ಮಾದಿಗೌಡ' ಎಂಬ ಇಬ್ಬರು ವೀರರು ಹೋರಾಡಿ ತುರುಗಳನ್ನು ಹಿಂತಿರುಗಿಸಿ ಸಾಯುತ್ತಾರೆ.[೧೦೫] ತಾಗರ್ತಿಯ ಹಸುಗಳನ್ನು ಕಳ್ಳರು ಕೊಂಡು ಹೋದಾಗ "'ಸರಿಯಮೋಜನು ಕಳ್ಳರ ಬೆಂಬೆತ್ತಿಯಿಱಿದು" ಸಾಯುತ್ತಾನೆ.[೧೦೬] 'ವೀರಯ' ಎಂಬುವನು "'ಬಂನಿಕುಪ್ಪೆಯ ದನವ ಕಳೆದು ಹೊಡೆದು ಹೋಹಲ್ಲಿ ಕಳ್ಳರ ಕೂಡಿ" ಹೋರಾಡಿ ಸಾಯುತ್ತಾನೆ.[೧೦೭] ತನ್ನ ಊರಿನ "'ತುಱುವಂ ಕಳ್ಳರು ಕೊಂಡು ಹೋದಲ್ಲಿ ಬೋವಗಉಡನ ಮಗ ಕೂಚಗವುಂಡ ಕಳ್ಳರನಿಱಿದು" ಸಾಯುತ್ತಾನೆ.[೧೦೮] ಹೀಗೆ ನಿದರ್ಶನಗಳನ್ನು ನೀಡುತ್ತಾ ಹೋಗಬಹುದು.

ಈ ರೀತಿ ತುರುಗಳನ್ನು ಅಪಹರಿಸಿಕೊಂಡು ಹೋದಾಗ ಕಳ್ಳರನ್ನು ಹಿಂಬಾಲಿಸಿ ತುರುಗಳನ್ನು ಹಿಂತಿರುಗಿಸಿದ ವೀರನಬಗ್ಗೆ ಇರುವ ವೀರಗೀತೆಯೊಂದು ದೊರೆಯುತ್ತದೆ.[೧೦೯] ಈ ವೀರಗೀತೆಯನ್ನು

೧೦೩ E. C. X. KI. 14, 1035
೧೦೪ S. I. I. IX. Pt. 1. 105, 1047
೧೦೫ E. C. VI. Cm. 158, 157, 1195
೧೦೬ E. C. VII. Sk. 57, 1376
೧೦೭ E. C. IX. Cp. 2, 1667
೧೦೮ M. A. R.1927. 31
೧೦೯ ಬಿ. ಆರ್. ಸುರಪುರ ; 'ಗ್ವಾಲಣ್ಣನ ವೀರಗಾಥಾ' (ಕರ್ನಾಟಕ ಭಾರತಿ. ಸಂ. ೬, ಸಂ. ೨, ಪು. ೭೪–೮೪)

ಪರಿಶೀಲಿಸುವುದು ಸೂಕ್ತವೆಂದು ತೋರುತ್ತದೆ. ತಮ್ಮ ದನಗಳು ಕಳೆದುಹೋದ ವಿಚಾರವನ್ನು ತನ್ನ ಮಗನಿಗೆ ತಿಳಿಸಲು ಗ್ವಾಲಣ್ಣನ ತಾಯಿ ಗ್ವಾಲಣ್ಣನನ್ನು ಹುಡುಕಿಕೊಂಡು ಹೋಗಿ ಅವನಿಗೆ

"'ದನ ಹೋಗಿ ಆರುದಿವಸ ಆರುಹೋಗಿ ಮೂರುದಿವಸ
ಅತಪ್ಪ ಗ್ವಾಲಣ್ಣ ಇಚಾರ ಇಲ್ಲಲ್ಲಕ
ಸ್ವಲ್ಪಾನ ಈಚಾರ ಇಲ್ಲಲ್ಲೊ ಗ್ವಾಲಣ್ಣ"

ಎಂಬುದಾಗಿ ತಿಳಿಸುತ್ತಾಳೆ. ಈ ವಿಚಾರವನ್ನು ಕೇಳಿದ ಕೂಡಲೇ ಗ್ವಾಲಣ್ಣ ಮನೆಗೆ ಹೋಗಿ ಬುತ್ತಿಯನ್ನು ಕಟ್ಟಿಕೊಂಡು ತನ್ನ ದನಗಳನ್ನು ಹುಡುಕುತ್ತಾ ಹೋಗುತ್ತಾನೆ. ಆಗ ಅವನಿಗೆ ದಾರಿಹೋಕರು.

"'ಅಲ್ಲಿಲ್ಲ ಇಲ್ಲಿಲ್ಲ ಕರಿಗುಡ್ಡದ ಬ್ಯಾಡರು
ಕರಿಗುಡ್ಡದ ಬ್ಯಾಡರು ಹೇಳ್ಕಿಟ್ಟಿ ಹಿಡಿಗ್ವಾಡಿ
ಹೇಳ್ಕಿಟ್ಟಿ ಹಿಡಿಗ್ವಾಡಿ ಹೋಗಿಸ್ಯಾರೋ ಗ್ವಾಲಣ್ಣ"

–ಎಂಬುದಾಗಿ ತಿಳಿಸುತ್ತಾರೆ. ಅವರಿಂದ ತಮ್ಮ ದನಗಳ ಸುಳಿವನ್ನು ತಿಳಿದ ಗ್ವಾಲಣ್ಣ ಬೇಡರ ಕೋಟೆಗೆ ಹೋಗುತ್ತಾನೆ.

"'ಹೋದವನೆ ಗ್ವಾಲಣ್ಣ ಪಕ್ಕಕನೆ ಒದ್ದಾನೆ
ಪಕ್ಕನ ಒದ್ದಾನೆ । ಬಾಗಿಲ ಮುರದಾನೆ
ಬಾಗಿಲು ಮುರದಾನ । ಒಳಿಯಾಕ ಹೋಗ್ಯಾನೆ
ದನಗಳು ನೋಡ್ತಾವ್ । ಸುತ್ತಾಲು ಮುತ್ತಾವ
ಅಲ್ಲಿಂದ ಗ್ವಾಲಣ್ಣ ದನಗಳನು ಹೊಡಕಂಡು
ದನಗಳ್ನ ಹೊಡಕಂಡು ಬರುತಾನೆ ಗ್ವಾಲಣ್ಣ" –

–ಹೀಗೆ ತನ್ನ ದನಗಳನ್ನು ಹಿಂತಿರುಗಿಸಿಕೊಂಡು ಬರುತ್ತಿರುವಾಗ ಅವನನ್ನು ಬೇಡರು ಹಿಂಬಾಲಿಸಿ ಬಮದು ಅವನೊಂದಿಗೆ ಹೋರಾಡುತ್ತಾರೆ. ಅವರನ್ನು ಕಂಡಕೂಡಲೇ ಗ್ವಾಲಣ್ಣ,

"'ನಿಂತಾನೆ ಹೋಗ್ಯಾನೆ । ಬ್ಯಾಡರನ್ನು ಹಿಡಿದಾನೆ
ಬ್ಯಾಡರ್ನ ಹಿಡಿದಾನೆ । ಕಾಲ್‌ಮ್ಯಾಲೆ ಕಾಲಿಟ್ಟು
ಕಾಲ್‌ಮ್ಯಾಲೆ ಕಾಲಿಟ್ಟು । ಸೀಳ್ಯಾನೋ ಬ್ಯಾಡರನ್ನ
ಸೀಳಿದ್ದ ಹೆಣಗಳನ । ಬೆನ್ನೀಗೆ ಕಟ್ಯಾನೆ
ಅಲ್ಲಿಂದ ಹೊಲದಾಗ । ಹೋಗ್ಯಾನೆ ಗ್ವಾಲಣ್ಣ

ಹೊಲದಾಗೆ ಹೋಗ್ಯಾನ। ಕಾಯ್‌ಕುಳ್ಳ ಆಯ್ದಾನೆ
ಕಾಯ್‌ಕುಳ್ಳ ಆಯ್ದಾನೆ। ಕಿಚನ್ನ ಕಾಣಿಸ್ಯಾನೆ"

ಹೀಗೆ ಗ್ಯಾಲಣ್ಣ ಬೇಡರನ್ನು ಸದೆ ಬಡಿದು ದನಗಳೊಡನೆ ತನ್ನ ಊರಿಗೆ ಹಿಂದಿರುಗುತ್ತಾನೆ. ಈ ಸಂತೋಷಕ್ಕಾಗಿ ತನ್ನ ಊರಿನವರನ್ನೆಲ್ಲಾ ಕರೆಯಿಸಿ ಅವರಿಗೆ ಔತಣವನ್ನು ಮಾಡುತ್ತಾನೆ. ಎಲ್ಲರದೂ ಊಟ ಆದಮೇಲೆ ಗಾಯಗೊಂಡ ಗ್ವಾಲಣ್ಣ ತನ್ನ ತಾಯಿಯ ತೊಡೆಯ ಮಲಗಿ ಅಸು ನೀಗುತ್ತಾನೆ.

ರಾಜಕೀಯ ಉದ್ದೇಶದಿಂದ ನಡೆದ ತುರುಗಾಳಗಗಳಲ್ಲಿ ಮಡಿದ ವೀರರು

ಕರ್ನಾಟಕದ ವೀರಗಲ್ಲುಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದಾಗ ರಾಜಕೀಯ ಉದ್ದೇಶದಿಂದ ಮಾಡಿದ ತುರುಗಾಳಗಗಳಲ್ಲಿ ಮಡಿದ ವೀರರ ವೀರಗಲ್ಲುಗಳೇ ಹೆಚ್ಚಿನ ಸಂಖ್ಯೆಯಲ್ಲಿರುವುದು ತಿಳಿದು ಬರುತ್ತದೆ. ಇದಕ್ಕೆ ಮುಖ್ಯಕಾರಣವೆಂದರೆ ಭಾರತೀಯ ಯುದ್ಧತಂತ್ರದಲ್ಲಿ ಈ ಗೋಗ್ರಹಣ, ಯುದ್ಧಾರಂಭದ ಪಾತ್ರವನ್ನು ವಹಿಸಿರುವುದೇ ಆಗಿದೆ. ವೀರಗಲ್ಲುಗಳ ಪಾಠದಿಂದ ತುರುಗಳನ್ನು ಅಪಹರಿಸಲು "ಧಾಳಿಮಾರ್ಗ'ವನ್ನು ಅನುಸರಿಸುತ್ತಿದ್ದರೆಮದು ತಿಳಿದು ಬರುತ್ತದೆ.[೧೧೦] ಆದ್ದರಿಂದ ಶತ್ರುರಾಜರ ತುರುಗಳನ್ನು ಅಪಹರಿಸುವುದರ ಮೂಲಕ ಅವರ ಮೇಲೆ ಸವಾಲು ಎಸೆದು ಅವರನ್ನು ಕೆಣಕಿ ಯುದ್ಧಕ್ಕೆ ಆಹ್ವಾನವನ್ನೀಯುವುದಕ್ಕಾಗಿ ಈ ತುರುಗಾಳಗಳನ್ನು ಆರಂಭಿಸುತ್ತಿದ್ದರು. ಆಗ ತಮ್ಮ ಗೌರವವನ್ನು ಉಳಿಸಿಕೊಂಡು ಸ್ವರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಅವರು ಹೋರಾಡುತ್ತಿದ್ದರು. ಅವರು ಬಹುಪಾಲು ಯೋಧರೆಂದೇ ತೋರುತ್ತದೆ.

ಮೇಲಿನ ಕಾರಣವಲ್ಲದೆ ಒಮ್ಮೊಮ್ಮೆ ರಾಜ್ಯವನ್ನಾಳುವ ವ್ಯಕ್ತಿಯು ಚಾಡಿಯ ಮಾತನ್ನು ಕೇಳಿ ಒಂದು ಊರಿನ ದನಗಳನ್ನು ಹಿಡಿಸುತ್ತಿದ್ದುದುಂಟು. ಚೋಳಮಹಾದೇವಿ ಎಂಬಾಕೆ "ದುಷ್ಟಕಷ್ಟರ ಮಾತಂ ಕೇಳಿ' ಬೇವೂರನ್ನು ದಾಳಿಮಾಡಲು ಹೇಳದಾಗ ಅವಳ ಸೇನೆಯು ಬೇವೂರನ್ನು ಮುತ್ತಿ ಜನರನ್ನು ಸೆರೆಹಿಡಿದು ತುರುಗಳನ್ನು ಕೊಂಡೊಯ್ಯುತ್ತಿರಲು ಕೇತಮಲ್ಲ

---

೧೧೦ (ಅ) E. C. VII. HI. 26, 27
(ಆ) ಅದೇ, 28, 1197
(ಇ) E. C. VIII. Sa. 140, 1265
(ಈ) E. C. VIII. Sb. 525

ಎನ್ನುವವನು ಅದನ್ನು ಪ್ರತಿಭಟಿಸಿ ತುರುಗಳನ್ನು ಹಿಂದಿರುಗಿಸಿ ಮಡಿಯುತ್ತಾನೆ. ವಾಸ್ತವಸ್ಥಿತಿ ತಿಳಿದ ಚೋಳಮಹಾದೇವಿ ""ಎಮ್ಮ ಮಕ್ಕಳ ನೋಯಿಸಿದೆವು" ಎಂದು ಪಶ್ಚಾತ್ತಾಪ ಪಟ್ಟು ಜನರಿಗೆ ಅಭಯದಾನವನ್ನು ನೀಡಿ ಸತ್ತವೀರನ ಮಗನಿಗೆ ದತ್ತಿಯನ್ನು ಬಿಡುತ್ತಾಳೆ. ""ಇಂತಹ ಕೆಲವು ಕಡೆಗಳಲ್ಲಾದರೂ ಊರಿನ ಜನರು ತೆರಿಗೆಗಳನ್ನು ತಪ್ಪಿಸಿಕೊಂಡದ್ದೋ ಅಥವಾ ಇನ್ನಾವುದೋ ಅಕೃತ್ಯವೋ ಗೋಗ್ರಹಣಕ್ಕೆ ಕಾರಣವಿರಬಹುದು."[೧೧೧] ಕ್ರಿಶ. ೧೨೦೫ರ ಮತ್ತೊಂದು ವೀರಗಲ್ಲಿನಲ್ಲಿ ಹೊಯ್ಸಳ ವೀರ ಬಲ್ಲಾಳನ ಅಧೀನದಲ್ಲಿದ್ದ ಲಕ್ಷ್ಮೀಧರ ದಂಡನಾಯಕನು ಹನ್ನೊಂದುನಾಡನ್ನು ಆಳುತ್ತಿರುವಾಗ ಅವನು ನೇಮಿಸಿದ್ದ ಲಕ್ಕಯ್ಯ ಎಂಬುವನ ನಾಯಕತ್ವವನ್ನು ಆ ಹನ್ನೊಂದು ನಾಡಿನ ಜನರು ""ಒಲ್ಲದಿರ್ದ್ದೊಡೆ", ಲಕ್ಕಯ್ಯನ ಆ ಹನ್ನೊಂದು ನಾಡಿನ ಅರವಳ್ಳಿಯ ತುರುಗಳನ್ನು ಸೆರೆ ಹಿಡಿದು ಆ ಊರಿನ ಬಲ್ಲಗವುಡನನ್ನು ಕೊಂದು, ""ದಂಡ ಮೂನ್ನೂಱು ಹೊನ್ನನ್ನು ಕೊಂಡು", ಸತ್ತ ಬಲ್ಲಗವುಡನ ಮನೆಯವರಿಗೆ ದತ್ತಿ ಬಿಟ್ಟ ವಿಷಯವಿದೆ.[೧೧೨] ಕ್ರಿ.ಶ. ೧೨೪೪ರ ಒಂದು ವೀರಗಲ್ಲಿನ ಪ್ರಕಾರ ಬೋಗೆಯದಂಣ್ಣಾಯಕ ಮತ್ತು ಸೋವಿ ದಂಣ್ಣಾಯಕಾರಿಗೆ ವಿವಾದವಾಗುತ್ತದೆ. ಆಗ ಸೋವಿದೇವನು ಚಿಕ್ಕ ಕೊಲೆ ಎಂಬ ಗ್ರಾಮವನ್ನು ಆಕ್ರಮಣ ಮಾಡಿ ತುರುಗಳನ್ನು ಹಿಡಿಯುತ್ತಾನೆ. ಆ ಸೋವಿದೇವನ್ನು ಎದುರಿಸಿ ಮಡಿದ ವೀರನ ವೀರಗಲ್ಲೊಂದು ದೊರೆಯುತ್ತದೆ.[೧೧೩] ಈ ಗ್ರಾಮದವರು ತನ್ನ ವಿರೋಧಿ ಬೋಗೆಯದಂಣ್ಣಾಯಕರ ಪರವಾಗಿದ್ದುದರಿಂದ ಸೋವಿದಂಣ್ಣಾಯಕ ಅವರಿಗೆ ಈ ರಈತಿಯ ತೊಂದರೆಯನ್ನು ನೀಡಿದ್ದಿರಬಹುದೆಂದು ತೋರುತ್ತದೆ.

ತುರುಗಳನ್ನು ಅಪಹರಿಸಲು ಹೋಗಿ ಮಡಿದವರ ವೀರಗಲ್ಲುಗಳು

ತುರುಗಾಳಗವು ಮುಖ್ಯವಾಗಿ ಸ್ವರಕ್ಷಣಾ ಯುದ್ಧ. ಆದ್ದರಿಂದ ಇಂತಹ ಹೋರಾಟದಲ್ಲಿ ತುರುಗಳನ್ನು ಹಿಂದಿರುಗಿಸುವಲ್ಲಿ ಹೋರಾಡುವ ವೀರರ ಬಗ್ಗೆ ಗೌರವ ಭಾವನೆ ಇತ್ತು. ಅಂದ ಮಾತ್ರಕ್ಕೆ ಗೋಗ್ರಹಣವನ್ನು ಮಾಡಿದವರ ಬಗ್ಗೆ ಗೌರವ ಭಾವನೆ ಇರಲಿಲ್ಲವೆಂದಲ್ಲ. ಯಾವ ಕಾರಣಕ್ಕಾಗಿ ತುರುಗಲನ್ನು ಅಪಹರಿಸಿದರು ಎಂಬುದು ಮುಖ್ಯವಾಗುತ್ತದೆ. ತುರುಗಳನ್ನು

---

೧೧೧ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೮೩ – ೪

೧೧೨ M. A. R.1939. 35, 1205

೧೧೩ E. C. V. BI. 307, 1244

ಕಳ್ಳತನದಿಂದ ಅಪಹರಿಸಿಕೊಂಡು ಹೋದವನನ್ನು ಎಲ್ಲಿಯೂ ಹೊಗಳಿರುವುದು ಕಂಡುಬರುವುದಿಲಲ. ಆದರೆ ಅರಸರ ಆಜ್ಞೆಯಂತೆ ಶತ್ರುಪಕ್ಷದ ರಾಜ್ಯದ ಮೇಲೆ ದಾಳಿ ಮಾಡಿ ಕೆಚ್ಚಿನಿಂದ ತುರುಗಳನ್ನು ಹಿಡಿದು, ಸವಾಲು ಎಸೆದು ಶತ್ರು ತಮ್ಮ ಮೇಲೆ ಬೀಳುವಂತೆ ಮಾಡಿ, ಆಗ ಅವರೊಡನೆ ಹೋರಾಡಿ ಸತ್ತ ವೀರರನ್ನು ಹೊಗಳಿರುವ ವೀರಗಲ್ಲುಗಳು ಅಪರೂಪವಾಗಿ ಯಾಗಿಯಾದರೂ ದೊರೆಯುತ್ತವೆ.

ತಮಿಳಿನ ಸಂಗಮ್ ಸಾಹಿತ್ಯ ಕೃತಿಗಳಿಂದ ತುರುಗಳನ್ನು ವೀರತನದಿಂದ ಅಪಹರಿಸುವ ವೀರರನ್ನು ಗೌರವಿಸುತ್ತಿದ್ದರೆನ್ನುವುದು ವ್ಯಕ್ತವಾಗುತ್ತದೆ. ಒಂದು ಗ್ರಾಮದ ವೀರ ಅಥವಾ ಒಂದು ರಾಜ್ಯದ ಅರಸನು ತನ್ನ ಶತ್ರುಪಕ್ಷದವರ ಮೇಲೆ ಬಿದ್ದು ಅವರ ತುರುಗಳನ್ನು ಅಪಹರಿಸುವಲ್ಲಿ ಜಯ ಪಡೆಯಬೇಕೆಂಬ ಉದ್ದೇಶದಿಂದ ತನ್ನ ಗ್ರಾಮದೇವತೆಯನ್ನು ಆರಾಧಿಸುತ್ತಿದ್ದ. ಅನಂತರ ಶುಭಶಕುನವೆಂದು ಪರಿಗಣಿಸಲಾಗಿದ್ದ ಕಾಡುಕೋಳಿ ಯಾವದಿಕ್ಕಿನಲ್ಲಿ ಕೂಗುತ್ತದೆ ಎಂದು ಕಾಯುತ್ತಿದ್ದ. ಕಾಡುಕೋಳಿ ಕೂಗಿದರೆ, ಅದು ಕೂಗುವ ದಿಕ್ಕಿನ ಗ್ರಾಮವನ್ನಾಳುವ ಅರಸನ ಅವನತಿ ಖಂಡಿತ ಎಂಬುದಕ್ಕೆ ಅದು ಶಕುನ. ಈ ಶಕುನವನ್ನು ನಂಬಿ ಕಾಡುಕೋಳಿ ಕೂಗಿದ ದಿಕ್ಕಿನಲ್ಲಿದ್ದ ಊರನ್ನು ಮುತ್ತುತ್ತಿದ್ದರು.[೧೧೪] ಇಂತಹ ಹೋರಾಟದಲ್ಲಿ ಜಯದ ಸಂಕೇತವಾಗಿ ಪ್ರತಿಯೊಂದು ಘಟ್ಟದಲ್ಲಿಯೂ ವಿಶಿಷ್ಟವಾದ ಹೂಮಾಲೆಯನ್ನು ಹೋರಾಟದ ನಾಯಕನು ಹಾಕಿಕೊಳ್ಳುತ್ತಿದ್ದನು. "ವೆಚ್ಚೆ' ಎಂಬ ಹೂಮಾಲೆಯನ್ನು ಧರಿಸಿದರೆ ಗೋಗ್ರಹಣದ ವಿಜಯವನ್ನು ಅದು ಸಂಕೇತಿಸುತ್ತದೆ. "ಕರನ್ತೈ' ಎಂಬು ಹೂವಿನಮಾಲೆಯನ್ನು ಧರಿಸಿದರೆ ಗೋಗ್ರಹಣದಲ್ಲಿ ತಮ್ಮ ಊರಿನ ಹಸುಗಲನ್ನು ಹಿಂದಕ್ಕೆ ಪಡೆದ ವಿಜಯದ ಸಂಕೇತವಾಗಿಯೂ ; "ವನ್ಜಿ' ಎಂಬ ಹೂಮಾಲೆಯನ್ನು ಧರಿಸಿದಾಗ ಗೋಗ್ರಹಣ ಮಾಡುವಲ್ಲಿ ಸಮರ್ಥವಾದ ಆಕ್ರಮಣ ನಡೆಸಿರುವುದರ ಸಂಕೇತವಾಗಿಯೂ ; "ನೊಚ್ಚಿ' ಎಂಬ ಹೂಮಾಲೆಯನ್ನು ಧರಿಸಿದರೆ ಅದು ಶತ್ರುಗಳನ್ನು ಸಮರ್ಥವಾಗಿ ಎದುರಿಸಿದ, ಸಂರಕ್ಷಣೆ ಮಾಡಿಕೊಂಡ ಸಂಕೇತವಾಗಿಯೂ, ಜನ ಭಾವಿಸುತ್ತಿದ್ದರು. ಪ್ರತಿಯೊಬ್ಬ ವೀರನೂ ಸಹ "ವೆಚ್ಚೆ' ಹೂಮಾಲೆಯನ್ನು ಧರಿಸಬೇಕೆಂದು ಅಪೇಕ್ಷೆ ಪಡುತ್ತಿದ್ದನೆಂಬ ಅಂಶ ಸಂಗಂಸಹಿತ್ಯ ಕೃತಿಗಳಲ್ಲಿ ವ್ಯಕ್ತವಾಗಿದೆ.[೧೧೫]

ತುರುಗಳನ್ನು ಶತ್ರುಗಳಿಂದ ಹಿಂದಿರುಗಿಸುವಲ್ಲಿ ಮಾಡಿದ ವೀರರ ಅಸಂಖ್ಯಾತ ವೀರಗಲ್ಲುಗಳು ದೊರೆಯುತ್ತವೆ. ಆದರೆ ತುರುಗಳನ್ನು ಹಿಡಿಯಲು ಹೋಗಿ ಮಡಿದ ವೀರರ ವೀರಗಲ್ಲುಗಳು ದೊರೆಯುವುದು ತೀರಾ ಅಪರೂಪವೆಂದೇ ಹೇಳಬೇಕು. ಕ್ರಿ.ಶ. ೧೧೫೨ರ

---

೧೧೪ Silappadikarm : (Tr. V.R. Ramachandra Dikshitar, Intd.ಪು.೧೮೭

೧೧೫ J.M. Somasundaram : A History of Tamil Literature.ಪು. ೬೧

ಒಂದು ವೀರಗಲ್ಲು ತುರುಗಳನ್ನು ಅಪಹರಿಸಲು ಹೋಗಿ ಮಡಿದ ವೀರನ ವಿಷಯವನ್ನು ತಿಳಿಸುತ್ತದೆ. ಕನ್ನಡಿಯಕಾವೆಯನಾಕನೆಂಬುವನು ತನ್ನ ಅರಸನ '"ಬೆಸದಿ ಧಾಳಿಮಾರ್ಗದಿ ಹರಿದು" ಹಲವು ತುರುಗಳನ್ನು ಕೊಂಡು ತನ್ನ ಅರಸನ ಬಳಿಗೆ ತುರುಗಳನ್ನು ಕಳುಹಿಸಿ ದಾರಿಯಲ್ಲಿ ತನ್ನನ್ನು ಎದುರಿಸಿದ ವೀರರೊಂದಿಗೆ ಹೋರಾಡಿ ಸಾಯುತ್ತಾನೆ. ಆಗ ಅವನ ತಮ್ಮನಾದ ಕೇತನಾಯಕನು ತನ್ನ ಅಣ್ಣನ ಹೆಸರಿನಲ್ಲಿ ವೀರಗಲ್ಲನ್ನು ನಿಲ್ಲಿಸಿದನೆಂದು ಅಲ್ಲಿ ತಿಳಿಯುತ್ತದೆ.[೧೧೬] ಕ್ರಿ.ಶ. ೧೨೦೫ರ ಮತ್ತೊಂದು ವೀರಗಲ್ಲಿನಿಂದ ಲಕ್ಕಯ್ಯ ಎಂಬುವನು ಅರವಳ್ಳಿಯನ್ನು ಮುತ್ತಿ ತುರುಗಳನ್ನು ಸೆರೆ ಹಿಡಿದ ವಿಷಯ ತಿಳಿಯುತ್ತದೆ.[೧೧೭] ಕ್ರಿ.ಶ. ೧೩೦೩ರ ಒಂದು ವೀರಗಲ್ಲಿನಿಂದ ತನ್ನ ಅರಸನ ಆಜ್ಞೆಯ ಮೇರೆಗೆ ಬೀರೆಯನಾಯ್ಕ ಎಂಬುವನು ಒಂದು ಗ್ರಾಮವನ್ನು ಮುತ್ತಿ ತುರುಗಳನ್ನು ಹಿಡಿದುಕೊಂಡು ಬರುತ್ತಿದ್ದ ಸಮಯದಲ್ಲಿ ಆ ಊರಿನವರು '"ಅಡ್ಡಹಾಯ್ದುದಲ್ಲಿ" ಅವರೊಡನೆ ವೀರತ್ವದಿಂದ ಹೋರಾಡಿ ಮಡಿದನೆಂದು ತಿಳಿಯುತ್ತದೆ.[೧೧೮]

ತುರುಗಳನ್ನು ಅಪಹರಿಸಲು ಹೋಗಿ ಮಡಿದ ವೀರರ ಬಗ್ಗೆ ವೀರಗಲ್ಲುಗಳಲ್ಲಿ ಮಾಹಿತಿ ದೊರೆಯುವುದಿಲ್ಲವೆಂಬ ಕಾರಣಕ್ಕಾಗಿ, ತುರುಗಳನ್ನು ಅಪಹರಿಸಲು ಹೋದವರು ಸಾಯುತ್ತಿರಲಿಲ್ಲವೆಂದು ಭಾವಿಸಬಾರದು. ತುರುಗಾಳಗದಲ್ಲಿ (ತುರುಗಳನ್ನು ಹಿಂದಿರುಗಿಸಲು ಹೋದ) ಸತ್ತ ವೀರನನ್ನು ಹೊಗಳುವಲ್ಲಿ ಅವನು ತನ್ನ ಊರಿನ ತುರುಗಲನ್ನು ಅಪಹರಿಸಲು ಬಂದವರನ್ನು ಕೊಂದು ತಾನೂ ಮಡಿದನೆಂದು ವೀರಗಲ್ಲುಗಳ ಪಾಠದಿಂದಲೇ ತಿಳಿಯುತ್ತದೆ. ಇವುಗಳಲ್ಲಿ ಸ್ವಲ್ಪಮಟ್ಟಿಗೆ ಉತ್ಪ್ರೇಕ್ಷೆಯ ಅಂಶವಿದ್ದರೂ. ಶತ್ರು ಪಕ್ಷದವರು ಮಡಿದರು ಎಂಬ ವಾಸ್ತವಾಂಶ ಇದ್ದೇ ಇರುತ್ತದೆ. ಈ ಹಿಂದೆ ಗಮನಿಸಿರುವಂತೆ ತುರುಗಾಳೆಗ ಎಂಬುದು ಅನಿಶ್ಚಿತವೂ ಆಕಸ್ಮಿಕವೂ ಆಗಿದ್ದುದರಿಂದ, ಈ ಯುದ್ಧವನ್ನು ಆರಂಭಿಸುವವರು ಸುಸಜ್ಜಿತರಾಗಿರುತ್ತಾರೆ. ಆದರೆ ಇವರನ್ನು ಎದುರಿಸುವವರು ಅಷ್ಟೇ ಸುಸಜ್ಜಿತರಾಗಿರುವುದಿಲ್ಲ. ಆದ ಕಾರಣ ಸಹಜವಾಗಿ, ಆಕ್ರಮಣವನ್ನು ಎದುರಿಸುವವರ ಕಡೆ ಸಾವುಗಳ ಸಂಖ್ಯೆ ವಿಪರೀತವಲ್ಲದಿದ್ದರೂ ಸಾಕಷ್ಟು ಸಂಖ್ಯೆಯಲ್ಲಿ ಆಗುತ್ತಿತ್ತು. ಆಕ್ರಮಣವನ್ನು ಮೊದಲಿಗೆ ಎದುರಿಸಿದ ವೀರನು ಮಾಡುವ ಹುಯ್ಯಲನ್ನು ಕೇಳಿ ಉಳಿದವರು ಸಹಾಯಕ್ಕಾಗಿ ಮುನ್ನುಗ್ಗುತ್ತಾರೆ ; ಶತ್ರುಗಳನ್ನು ಕಂಡು ಕೆಲವೊಮ್ಮೆ ಓಡಿ ಹೋಗುತ್ತಿರಬಹುದು ಅಥವಾ ಹೋರಾಡಿ ಸತ್ತಿರಬಹುದು. ಅರಸರ ಪರವಾಗಿಯೇ ಬಂದು ಆಕ್ರಮಣ ಮಾಡಿ ಹೋರಾಟದಲ್ಲಿ ಮಡಿದಿರಬಹುದಾದ ವೀರರ ಬಗ್ಗೆ ಹೆಚ್ಚು ವೀರಗಲ್ಲುಗಳು ಏಕೆ ದೊರೆಯುವುದಿಲ್ಲವೋ ಹೇಳುವುದು ಕಷ್ಟ.

---

೧೧೬ E. C. VII. Sb. 525, 1152

೧೧೭ M. A. R.1939. 35, 1205

೧೧೮ E. C. VIII. Sa. 101, 1303

ತುರುಗಾಳಗದಲ್ಲಿ ಮಡಿದ ವೀರರ ಪ್ರಸ್ತಾಪ ವೀರಗಲ್ಲುಗಳಲ್ಲಿ ಮಾತ್ರವಲ್ಲದೆ ಒಂದು ದಾನಶಾಸನದಲ್ಲಿಯೂ ಬಂದಿರುವುದು ಹಲವಾರು ರೀರಿಯಿಂದ ಕುತೂಹಲಕರವಾದ ಸಂಗತಿಯಾಗಿದೆ. ಮಾಚರಸನೆಂಬುವನ ವಂಶದ ಹಿರಿಯರನ್ನು ವರ್ಣಿಸುತ್ತಾ, ಆ ಶಾಸನ ದೇಕರಸನೆಂಬುವನ ಬಗ್ಗೆ ಈ ರೀತಿ ವರ್ಣನೆಯನ್ನು ನೀಡುತ್ತದೆ.[೧೯]

"ತುಱುಪರಿಗವೆಂಬ ಪುಯ್ಯಲ
ನೆಱೆಯಾಲಿಸಿ ಕೇಳ್ದು ದೇಕಭೂಪತಿ ಬೇಗಂ
ಪೊಱಮಟ್ಟು ಬನ್ದು ತಾಗಿದ
ನೆಱವಿನದೋರ್ವ್ವಳದಾಕಳರನಾಕ್ಷಣದಿಂದ

ಕಲಿಯುಗ ಪಾರ್ಥ ದೇಕಂ ಬಿಟ್ಟೊಯ್ದಿರೆ ಕೊಲದೊಗೆಯುಮಂಬಿನ ಕಲಿಯುಂ ಪಟಕಲಿ ಸಿದ್ಧರ್ವಯರಿ ಬಲಾನಿಳ ಪೊಲಗೆಟ್ಟುದು ಪೆಣದ ಬ್ರಣದ ರಣಗತ್ತಲೆಯೊಳು ॥ ಅಂತು ಕಾದಿ ತುಱುವಂ ಮುಗುರ್ಚ್ಚೆ ದೇಕರಸನು ಹೊತ್ತಗೆಯಟ್ಟವಣೆ ಕೋಲ್ಗಳ್ತಿತ್ತಿದ ಸೆಱದನ್ತೆ ಸರದ ತನ್ದಲು ತನುವಂ ತೆತ್ತಿಲ್ಕಮರ ಕಾಂತಾ ಜತ್ತಕಿಯ ರುಯ್ಯೆ ದೇಕಂ ನಾಕಕ್ಕೋದ" – ಎಂಬುದಾಗಿ ಈ ಶಾಸನವನ್ನು ಹಾಕಿಸಿದ ಮಾಚರಸನಿಗೆ ತನ್ನ ವಂಶದ ಹಿರಿಯರು ಇಂತಹ ಒಂದು ಉದಾತ್ತಧ್ಯೇಯಕ್ಕಾಗಿ ಮಡಿದುದರ ಬಗ್ಗೆ ಹೆಮ್ಮೆಯಿರಬೇಕು. ಆದ ಕಾರಣದಿಂದಲೇ ತನ್ನ ದಾನಶಾಸನದಲ್ಲಿ ದೇಕರಸನ ಪ್ರಸ್ತಾಪವನ್ನು ತಂದಿದ್ದಾನೆ.

ಒಟ್ಟಿನ ಮೇಲೆ ಹೇಳುವುದಾದರೆ, ತುರುಗಳು ಒಂದು ಸಮಾಜದ "ಜೀವಧನ'ವೂ ಧರ್ಮದ ಸಂಕೇತವೂ ಆಗಿದ್ದುದರಿಂದ ಅದನ್ನು ಅಪಹರಿಸಿದರೆ ಸುಮ್ಮನಿರುವುದು ಹೇಡಿತನವೆಂದು ಪರಿಗಣಿಸಲಾಗಿತ್ತು. ತುರುಗಳನ್ನು ಅಪಹರಿಸಿದಾಗ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಹೋರಾಡಿ ಮಡಿದ ವೀರರ ಬಗ್ಗೆ, ತುರುಗಳನ್ನು ಅಪಹರಿಸಲು ಹೋಗಿ ಗೆದ್ದ ವೀರರಿಗಿಂತಲೂ ಹೆಚ್ಚಿನದಾದ ಗೌರವ ಸ್ಥಾನವಿತ್ತು.

ತುರುಗಾಳಗದ ಸ್ವರೂಪ

ಕರ್ನಾಟಕದಲ್ಲಿ ನಡೆಯುತ್ತಿದ್ದ ತುರುಗಾಳಗಗಳ ಪರಿಚಯ ಮಾಡಿಕೊಳ್ಳುವಾಗ ಈ ಹಿಂದ ಗಮನಿಸಿರುವ ಹಾಗೆ ತುರುಗಾಳಗಗಳನ್ನು ಆರಂಭಿಸುತ್ತಿದ್ದವರ ಉದ್ದೇಶವನ್ನು ಗಮನದಲ್ಲಿಟ್ಟು

---

೧೯ E. C. XI. Ck. 18,

ಕೊಳ್ಳುವುದು ಉಚಿತವಾದುದು. ಏಕೆಂದರೆ, ಈ ರೀತಿಯ ತುರುಗಾಳಗಗಳನ್ನು ಆರಂಭಿಸುವವರು ತಮ್ಮ ಉದ್ದೇಶಕ್ಕನುಗುಣವಾಗಿ ಆಕ್ರಮಣ ವಿಧಾನಗಳನ್ನು ಅನುಸರಿಸುತ್ತಾರೆ ಎಂಬುದನ್ನು ಗಮನಿಸಬೇಕು. ಕಳ್ಳತನವನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡವರ ಆಕ್ರಮಣ ವಿಧಾನ ಬೇರೆ. ರಾಜಕೀಯ ದೃಷ್ಟಿಯಿಂದ ತುರುಗಾಳಗಗಳನ್ನು ಆರಂಭಿಸುವವರ ಆಕ್ರಮಣ ವಿಧಾನವೇ ಬೇರೆ. ಕಳ್ಳತನದಿಂದ ತುರುಗಲನ್ನು ಸೆರೆ ಹಿಡಿಯುವವರು ಬಹಳ ಎಚ್ಚರಿಕೆಯಿಂದ ತುರುಗಳ ಯಜಮಾನರಿಗೆ ಅಥವಾ ಅವನ್ನು ಕಾಯುವ ಗೋಪಾಲಕರಿಗೆ ಸುಳಿವು ಕೊಡದ ರೀತಿಯಲ್ಲಿ ಅಪಹಿರಿಸುತ್ತಾರೆ. ಈ ವಿಷಯ ತಿಳಿದು ತಮ್ಮ ಮೇಲೆ ಎರಗಿ ಬಂದ ಒಂದಿಬ್ಬರನ್ನು ಅವರು ಕೊಲ್ಲುವುದೂ ಉಂಟು. ಹಾಗು ಬಹಳ ಜನ ತಮ್ಮ ಮೇಲೆರಗಿ ಬಂದಾಗ ಜೀವದಾಸೆಯಿಂದ ಓಡಿ ಹೋಗುತ್ತಿದ್ದರೆಂಬುದು ಸ್ಪಷ್ಟ ಆದರೆ ರಾಜಕೀಯ ಉದ್ದೇಶದಿಂದ ತುರುಗಳನ್ನು ಸೆರೆ ಹಿಡಿಯುವವರು ತಮ್ಮ ವೈರಿಗೆ ತಿಳಿಯುವಂತೆಯೇ ಆ ಕಾರ್ಯವನ್ನು ಮಾಡುತ್ತಾರೆ. ಪೂರ್ವಸಿದ್ಧತೆಯಿಲ್ಲದ ತಮ್ಮ ವೈರಿಯನ್ನು, ಸಂಪೂರ್ಣವಾಗಿ ಪೂರ್ವ ಸಿದ್ಧತೆಯಿಂದ ಬಂದಿರುವ ತಾವು ಸದೆಬಡಿಯಬಹುದೆಂಬ ರಾಜಕೀಯ ಮುತ್ಸದ್ದಿತನ ಅವರಲ್ಲಿರುತ್ತದೆ. ಈ ಕಾರಣಕ್ಕಾಗಿಯೇ ಅವರು ತುರುಗಳನ್ನು ಹಿಡಿದು ಹೋಗದೆ ಹೋರಾಟವನ್ನು ಅಪೇಕ್ಷಿಸುತ್ತಾರೆ. ಆದ್ದರಿಂದ ಆಕ್ರಮಣಕಾರರು ತಮ್ಮ ಆಕ್ರಮಣದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಒಂದು ಹೋರಾಟದ ರೂಪವನ್ನು ಮೊದಲೇ ತಯಾರು ಮಾಡಿಕೊಂಡು ಬರುತ್ತಾರೆ. ಈ ದೃಷ್ಟಿಯಿಂದ ಮೊದಲಿಗೆ ರಾಜಕೀಯ ಉದ್ದೇಶಗಳಿಂದ ಆಕ್ರಮಣ ಮಾಡಿದವರ ವಿಧಾನಗಳನ್ನೂ ತಂತ್ರಗಳನ್ನೂ ಪರಿಶೀಲಿಸಿ, ಆನಂತರ ಕಳ್ಳತನದ ಉದ್ದೇಶದಿಂದ ಆಕ್ರಮಣ ಮಾಡುವವರ ವಿಧಾನಗಳನ್ನು ಪರಿಚಯ ಮಾಡಿಕೊಂಡು ಇವರ ಆಕ್ರಮಣ ವಿಧಾನಗಳು, ಸಂಚುಗಳು ಹೇಗೆ ಭಿನ್ನವಾಗಿರುತ್ತವೆ ಎಂಬುದನ್ನು ಗಮನಿಸೋಣ.

ತನ್ನ ವೈರಿಯು ಯುದ್ಧಕ್ಕೆ ಸಿದ್ಧನಿಲ್ಲವೆಂಬ ಭರವಸೆ ಆಕ್ರಮಣ ಮಾಡುವ ಅರಸನಿಗೆ ತಿಳಿದಿದ್ದರೆ, ಸುಲಭವಾಗಿ ತನ್ನ ಶತ್ರುವನ್ನು ಸೋಲಿಸಬಹುದು. ಈ ಕಾರಣಕ್ಕಾಗಿ, ಅರಸರು ಇದ್ದಕ್ಕಿದ್ದಂತೆ ಶತ್ರುವಿನ ಮೇಲೆ ಬಿದ್ದು ಯುದ್ಧ ಮಾಡುತ್ತಿದ್ದರು. ತಮ್ಮ ಶತ್ರುವು ತಮ್ಮ ಮೇಲೆ ಬೀಳಲಿ ಎಂಬ ಉದ್ದೇಶದಿಂದಲೇ ಗೋಗ್ರಹಣವನ್ನು ಯುದ್ಧಾರಂಭದ ಸೂಚನೆಯೆನ್ನುವಂತೆ ಕರ್ನಾಟಕದ ಅರಸರು ವಿಶೇಷವಾಗಿ ಉಪಯೋಗಿಸುತ್ತಿದ್ದರು. ಕ್ರಿ.ಶ. ೧೧೮೭ರ ಒಂದು ವೀರಗಲ್ಲಿನಿಂದ "ಚಟ್ಟನೃಪಾಳಕಂ ಬೆರಸು ಪಾಂಡ್ಯನು ಪೋವದೆ [ಬೆಳ]ವರ್ತ್ತಿಯಂ ತೊಟ್ಟನೆಪಾಯ್ದು ಜೀವಧನಮೆಲ್ಲಮನಾಗಳೆ ಕೊಂಡು ಪೋಗೆ" ಎಂಬುದಾಗಿ ತಿಳಿದು ಬರುತ್ತದೆ.[೧೨೦] ಅಂದರೆ ಇಂತಹ ಆಕ್ರಮಣವು

೧೨೦ E. C. VII. HI. 35, 1187

ಆಕ್ರಮಣಕಾರನಿಗೆ ಪೂರ್ವನಿಶ್ಚಿತವಾದುದು. ಎದುರಾಳಿಗೆ 'ತೊಟ್ಟನೆ' ಎನ್ನಿಸುವಂತಹುದು. ಈ ರೀತಿಯ ಆಕ್ರಮಣ ವಿಧಾನಗಳನ್ನು "ಧಾಳಿಮಾರ್ಗ' ಎಂಬುದಾಗಿ ಶಾಸನಗಳ ಪಾಠಗಳಲ್ಲಿ ಕರೆಯಲಾಗಿದೆ.[೧೨೧] ಹೀಗೆ ಧಾಳಿಮಾರ್ಗದಿಂದ ಬರುತ್ತಿದ್ದವರು ತಮ್ಮ ಪರಿವಾರ ಸಹಿತರಾಗಿ ಬರುತ್ತಿದ್ದರು.[೧೨೨] ಕೆಲವೊಮ್ಮೆ ಕೆಲವಾರು ನಾಡುಗಳೇ ಒಟ್ಟುಗೂಡಿ ಧಾಳಿ ಮಾಡುತ್ತಿದ್ದುದುಂಟು.[೧೨೩]

ಹೀಗೆ ಧಾಳಿಮಾರ್ಗದಲ್ಲಿ ಬಂದರೂ ಅವರು ತಮಗೆ ಅನುಕೂಲವಾದ ಸನ್ನಿವೇಶಗಳನ್ನು ಅನುಸರಿಸಿ ತುರುಗಳನ್ನು ಹಿಡಿಯುತ್ತಿದ್ದರೆಂದು ತೋರುತ್ತದೆ. ಶತ್ರುವಿನ ಗೋವುಗಳು ತಮಗೆ ಸುಲಭವಾಗಿ ದೊರೆಯುವ ಹಾಗಿದ್ದರೆ ಅವುಗಳನ್ನು ಹಿಡಿದು, ಆ ಮೂಲಕ ಶತ್ರುವಿಗೆ ಯುದ್ಧಕ್ಕೆ ಸವಾಲು ಹಾಕಿ ಅವನನ್ನು ಎದುರಿಸಲು, ಸಿದ್ಧರಿರುತ್ತಿದ್ದರು.[೧೨೪] ಈ ಸಂದರ್ಭದಲ್ಲಿ ಪಂಪಭಾರತದಲ್ಲಿನ ಗೋಗ್ರಹಣಪ್ರಸಂಗದ ವರ್ಣನೆ ನೆರವಾಗುತ್ತದೆ. ದುರ್ಯೋಧನ ವಿರಾಟನ ಗೋಶಾಲೆಯನ್ನು ಮುತ್ತಿದ ಸಂದರ್ಭವನ್ನು "'ಚಾರು ವೀರಭಟ ಕೋಟಿಗೆ ರಾಗರ ಸಂಪೊದಳ್ದು ತುಳ್ಳುತ್ತಿರೆ ಬಂದು ಮುತ್ತಿ ಮೊಗೆದಂ ವಿಭು ಗೋಕುಲಮಂ ವಿರಾಟನಾ"[೧೨೫] ಎಂದು ಪಂಪ ಕವಿ ಹೇಳುತ್ತಾನೆ.

ಕೆಲವೊಮ್ಮೆ ತಾವು ಇಂಥ ಊರಿನ ತುರುಗಳನ್ನು ಅಪಹರಿಸಬೇಕೆಂದು ನಿಶ್ಚಯಿಸಿ, ಆ ಊರನ್ನು ಮುತ್ತಿ, ಅಲ್ಲಿನ ದನಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. "ಬಯಲ್ನಾಡಿ' ನವನು ಬಂದು ಕೊತ್ತಮಂಗಲವನ್ನು "ಇಱಿದು' ತುರುಗಳನ್ನು ಅಪಹರಿಸಿಕೊಂಡು ಹೋದ

---

೧೨೧ (ಅ) E. C. VIII. Sb. 525, 1522. "ಕನ್ನಡಿ ಕಾವೆಯನಾಯಕ ಧಾಳಿಮಾರ್ಗದಿ ಹರಿದು".

(ಆ) E. C. V. Cn. 205, 1200. "ಚೋಳಮಹಾದೇವಿ ದುಷ್ಟಕಷ್ಟರ ಮಾತಂ ಕೇಳಿ ಧಾಳಿಯಂ ಪೇಳಿದಡಾ ಧಾಳಿ ಬೇವೂರಂ ಮುತ್ತಿ".

(ಇ) E. C. VII. Hl. 28, 1197 "ವುಂಮಾದೇವಿ ಕವುಡಿವೊಳೆಯಲ್ಲಿ ಬೀಡುಬಿಟ್ಟು ಧಾಳಿಮಾರ್ಗದಂ".

೧೨೨ (ಅ) E. C. V. Bl. 189, "ಬಲಕುಪ್ಪೆಡೆ ಮಾದಿವೆಗ್ಗಡೆ ತಂನ ಪರಿವಾರ ಸಹಿತಂ ಬಂದು ಪಡುಬಳಲ ಮುತ್ತಿ ಕಾದಿ ಕೆಡಿಸಿ".

(ಆ) E. C. VIII. Sa. 37, 1265 "ತಂನ ಪರಿವಾರಂ ಬೆರಸು".

೧೨೩ E. C. VIII. Sa. 47, 1187. "ಕೊಲೆ ಕೊಡಕಣಿ ಮುಖ್ಯವಾಗಿ ಸಮಸ್ತ ಜೇಡ್ವಳಿಗೆನಾಡು ಓಡಿ ಬಂದು ಸೊರಬವಂ ಹುಗಲು".

೧೨೪ (ಅ) E. C. VII. Hl. 73, 1215.

(ಆ) ಅದೇ. ೩೫, ೧೧೮೭

೧೨೫ ಪಂಪ : ವಿಕ್ರಮಾರ್ಜುನ ವಿಜಯಂ. ೮–೯೨

ವಿಷಯ ವೀರಗಲ್ಲೊಂದರಿಂದ ತಿಳಿದುಬರುತ್ತದೆ.[೧೨೬] "ಎಡೆತೊಱೆಯ ಪೆಮ್ಮಾಡಿ' ಬಂದು ಬನ್ನಾಳಿ ಎಂಬ ಗ್ರಾಮವನ್ನು "ಇಱಿದು' ತುರುಗಳನ್ನು ಅಪಹರಿಸುತ್ತಾನೆ ಎಂದು ಕ್ರಿ.ಶ. ೧೧೫೬ರ ಒಂದು ವೀರಗಲ್ಲಿನಿಂದ ತಿಳಿದು ಬರುತ್ತದೆ.[೧೨೭] ಈ ರೀತಿ ಮುತ್ತಿಗೆಯನ್ನು ಕ್ರಮಬದ್ಧವಾದ ರೀತಿಯಲ್ಲಿ ಹಾಕುತ್ತಿದ್ದರೆಂದು ಕ್ರಿ.ಶ. ೧೧೭೭ ರ ಒಂದು ವೀರಗಲ್ಲಿನಿಂದ ತಿಳಿದುಬರುತ್ತದೆ. "'ಧಾಳಿಯಂ ತಂದು ಗ್ರಾಮವಂ ಮೂವಳಸಾಗಿ ಮುತ್ತಿಯಿಱಿದು ಸೂಱೆಯುಂ ಕೊಂಡುಡೆಯುಚ್ಚಿ ಸೆಱೆಯಂ ಪಿಡಿಯೆ" ಎಂಬುದಾಗಿ ಧಾಳಿಕಾರರು ಇಡೀ ನಗರವನ್ನು ಗ್ರಾಮವನ್ನು ಮುತ್ತಿ ತುರುಗಳನ್ನು ಸೆರೆ ಹಿಡಿಯುತ್ತಿದ್ದ ರೀತಿಯನ್ನು ಈ ವೀರಗಲ್ಲಿನ ಪಾಠ ತಿಳಿಸುತ್ತದೆ.[೧೨೮]

"'ಕಳ್ಳರು ತುರುಗಳನ್ನು ಕದಿಯಲು ಬಂದಾಗ ಆ ಊರಿನ ಸ್ತ್ರೀಯರನ್ನೂ ಅವಮಾನ ಗೊಳಿಸುತ್ತಿದ್ದರು. ಕೆಲವು ಸಾರಿ ತುರುಗಳ ಜೊತೆಯಲ್ಲೇ ಅವರನ್ನು ಅಪಹರಿಸುತ್ತಿದ್ದರು. ಆಗ ಸ್ತ್ರೀಯರು ತಮ್ಮ ರಕ್ಷಣೆಗಾಗಿ ಪುಯ್ಯಲಿಡುತ್ತಿದ್ದರು ಅಥವಾ ಹುಯ್ಯಲಿಡುತ್ತಿದ್ದರು (ಆದ್ದರಿಂದಲೇ ಅದನ್ನು "ಪೆಣ್ಬುಯ್ಯಲ್' ಎಂದು ಕರೆದಿರುವುದು) ಸ್ತ್ರೀಯರ ವಸ್ತ್ರಗಳನ್ನು ಅಪಹರಿಸುವುದರ ಮೂಲಕ (ಪೆಣ್ಡುರುಡೆಯುಚ್ಚಿ) ಅವರ ಮಾನಭಂಗ ಮಾಡುತ್ತಿದ್ದರು."[೧೨೯]

ತುರುಗಳನ್ನು ಅಪಹರಿಸಲು ಬರುವ ಕಳ್ಳರ ಉದ್ದೇಶ ಮುಖ್ಯವಾಗಿ ಕಳ್ಳತನವಷ್ಟೇ. ಆದ್ದರಿಂದ ಈ ರೀತಿಯ ಅಕೃತ್ಯಗಳಲ್ಲಿ ತೊಡಗಿದಾಗ ತಮ್ಮ ಮುಖ್ಯ ಉದ್ದೇಶಕ್ಕೆ ತೊಂದರೆಯಾಗುತ್ತದೆಂಬ ಸಹಜವಾದ ಹೆದರಿಕೆಯಿಂದ ಅವರು ಈ ರೀತಿಯ ಅಕೃತ್ಯಗಳಿಗೆ ಬಹುಪಾಲು ಕೈಹಾಕುತ್ತಿರಲಿಲ್ಲ.[೧೩೦] ಈ ರೀತಿಯ ಅಕೃತ್ಯಗಳು ನಡೆಯುತ್ತಿದ್ದುದು ರಾಜಕೀಯ ಉದ್ದೇಶಗಳಿಂದ ನಡೆಯುತ್ತಿದ್ದ ತುರುಗಾಳಗಗಳಲ್ಲಿಯೇ ಎಂದು ತೋರುತ್ತದೆ. ಇಂತಹ ಅಕೃತ್ಯಗಳನ್ನು ನಡೆಸುವುದಕ್ಕೆ ಇತರರ ಬೆಂಬಲವೂ ಇರುತ್ತದೆ. ಮತ್ತು ತನ್ನ ಶತ್ರುಗಳಿಗೆ ಒದಗಿದ ಇಂತಹ ದುಃಸ್ಥಿತಿಯನ್ನು ಕಂಡು ಸಂತೋಷ ಪಡುವ ಪ್ರವೃತ್ತಿ ಆಕ್ರಮಣಕಾರರ ನಾಯಕರಲ್ಲಿ ಇರುತ್ತದೆ ಎಂಬುದನ್ನು ಗಮನಿಸಬೇಕು.

ಮಾರಗಯ್ಯನೆಂಬುವನು ಶತ್ರುಗಳು ಬಂದು ಹೆಂಗಸರ ವಸ್ತ್ರಗಳಿಗೆ ಕೈ ಹಾಕಿ, ದನಗಳನ್ನು ಕದಿಯುವಾಗ ಹೋರಾಡಿ ಸಾಯುತ್ತಾನೆ.[೧೩೧] ಎಡವಯ್ಯ ಎಂಬುವನು ಶತ್ರುಗಳು ಬಂದು

---

೧೨೬ E. C. V. Hg. 103, 910

೧೨೭ E. C. VII. Hl. 2, 3, 1064

೧೨೮ E. C. VIII. Sb. 251, 1177

೧೨೯ ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೮೪

೧೩೦ ಹರಿಹರ : ಬಸವರಾಜದೇವರ ರಗಳೆ ೯ನೇ ಸ್ಥಲ

೧೩೧ E. C. X. Mb. 950

ಮುತ್ತಿ, "ಪೆಣ್ಣಿರುಡೆ–ಯುಟ್ಚು ವಲ್ಲಿ' ಕಾದಿ ಸಾಯುತ್ತಾನೆ.[೧೨೨] ಆಗ ಅವನ ಮಗ ಜಕ್ಕ ಎಂಬುವನು ""ಪೆಣ್ಡಿರುಡೆಯುಟ್ಚುವ ಪುಯ್ಯಲಂ ತುಱುಯ್ಯಲು ಕೇಳ್ದು ತಾಗಿ ಕಾದಿ" ಮಡಿಯುತ್ತಾನೆ. "ಎಡೆತೊರೆಯ ಪೆರ್ಮ್ಮಾಡಿ' ಎಮುಬುವನು ಬನ್ನಾಳಿಯನ್ನಿರಿದು ತುರುಗಳನ್ನು ಅಪಹರಿಸಿ "ಪೆಣ್ಡಿರುಡೆಯುರ್ಚ್ಚುವಲ್ಲಿ' ಮಾಳಯ್ಯ ಎಂಬುವನು ಹೋರಾಡಿ ಸಾಯುತ್ತಾನೆ.[೧೨೩] ಕುಪ್ಪಟೂರಿನ ಸ್ತ್ರೀಯರನ್ನು ಮತ್ತು ಗೋವುಗಳನ್ನು "ಅನ್ತಗವುಡ' ಎಂಬುವನು ಸೆರೆ ಹಿಡಿಯುತ್ತಾನೆ. ಆಗ ಆ ಊರಿನ ಅಶೇಷ ಮಹಾಜನರಾದ ಕುಪ್ಪಟೂರಿನ ಸಾಸಿರ್ವ್ವರ ಆಜ್ಞೆಯಂತೆ ವೀರನೊಬ್ಬನು ಹೋರಾಡಿ ""ಸೆಱೆಯುಂ ಜೀವಧನಮುಮಂ ಮಗುಳ್ಚಿ ಸುರಲೋಕ ಪ್ರಾಪ್ತ"ನಾದ ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ.[೧೨೪] ಕ್ರಿ.ಶ. ೧೧೮೦ರ ಒಂದು ವೀರಗಲ್ಲಿನಿಂದ ಪಾಂಡ್ಯದೇವರಸ ಎಂಬುವನು ಗ್ರಾಮವೊಂದನ್ನು ಮುತ್ತಿ ಆ ಊರಿನ "ಉದುಬ್ಬೆ' ಎಂಬ ಸೂಳೆಯನ್ನು ಅಪಹರಿಸಿಕೊಂಡು ತುರುಗಳನ್ನೂ ಅಪಹರಿಸುತ್ತಾನೆಂಬ ವಿಷಯ ತಿಳಿದುಬರುತ್ತದೆ.[೧೨೫]

ಆಕ್ರಮಣಕಾರರು ಸೆರೆ ಹಿಡಿದ ತುರುಗಳನ್ನು ರಣರಂಗದಿಂದ ದೂರವಿಡುತ್ತಿದ್ದರು. ಅಥವಾ ಅವುಗಳನ್ನು ತಮ್ಮ ಊರುಗಳಿಗೆ ಕಳುಹಿಸಿ ಬಿಡುತ್ತಿದ್ದರೆಂದು ತೋರುತ್ತದೆ. ಎಕ್ಕಲದೇವನ ಆಜ್ಞೆಯಂತೆ ಒಂದು ಊರನ್ನು ಆಕ್ರಮಣ ಮಾಡಿ ತುರುಗಲನ್ನು ಸೆರೆಹಿಡಿದು ಅವುಗಳನ್ನು ""ಆಳ್ದಂಗೆ ತುಱುವ ಕಳುಹಿ"ದ ವಿಷಯ ವೀರಗಲ್ಲೊಂದರಲ್ಲಿದೆ[೧೨೬]. ದನಗಳು ಸಂಪತ್ತು ಎಂಬ ಭಾವನೆಗಿಂತ ಮಿಗಿಲಾಗಿ, ಅವುಗಳ ಬಗ್ಗೆ ಜನರಿಗೆ ಇದ್ದ ಧಾರ್ಮಿಕವಾದ ಭಾವನೆಯಿಂದ ಅವನ್ನು ಕದ್ದವರು ಅವಕ್ಕೆ ಯಾವುದೇ ರೀತಿಯ ತೊಂದರೆಯನ್ನಾಗಲೀ ಅಥವಾ ಅವುಗಳನ್ನು ಕೊಲ್ಲುವ ಪ್ರಯತ್ನವನ್ನಾಗಲೀ ಮಾಡುತ್ತಿರಲಿಲ್ಲ. ಕುದುರೆಗಳ ಬಗ್ಗೆ ಇಂಥ ಧಾರ್ಮಿಕ ಭಾವನೆ ಅಡ್ಡ ಬರುವುದಿಲ್ಲ. ಏಕೆಂದರೆ, ಕುದುರೆಗಳನ್ನು ಸೆರೆ ಹಿಡಿಯುವುದರ ಅಥವಾ ಹತ್ಯೆ ಮಾಡುವುದರ ಮೂಲಕ ಶತ್ರುವನ್ನು ಆದಷ್ಟು ದುರ್ಬಲನನ್ನಾಗಿ ಮಾಡಬಹುದು ಎಂಬ ಯುದ್ಧ ತಂತ್ರವನ್ನೇ ಅನುಸರಿಸಿ ಜನ ಅವುಗಳನ್ನು ಸೆರೆ ಹಿಡಿಯುತ್ತಿದ್ದರ. (ಗೋವುಗಳ ಬಗ್ಗೆ ಇದ್ದ ಒಂದು ಧಾರ್ಮಿಕ ಭಾವನೆಯು ಕುದುರೆಗಲ ಬಗ್ಗೆ ಇರಲಿಲ್ಲ ಎಂಬ ಅಂಶವು ಗಮನಾರ್ಹ)

ಇವು ಪೂರ್ವನಿಶ್ಚಿತವೂ ಕ್ರಮಬದ್ಧವೂ ಆದ ಆಕ್ರಮಣಗಳಾದುದರಿಂದ ಇಂತಹ ಕಾಳಗಗಳ ನಾಯಕತ್ವವನ್ನು ಕೆಲವೊಮ್ಮೆ ಅರಸರೋ ಅಥವಾ ಅವನ ಪರವಾದ ಹಿರಿಯ ಅಧಿಕಾರಿಗಳೋ

೧೨೨ E. C. XII. Si. 43, ಸು. ೧೦೦೦
೧೨೩ E. C. VII. HI. 4, 1064
೧೨೪ E. C. VIII. Sb. 251, 1177
೧೨೫ E. C. VII. Sk. 300, 1180
೧೨೬ E. C. VIII. Sb. 525, 1152

ವಹಿಸುತ್ತಿದ್ದರೆಂಬುದಾಗಿ ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೯೮ರ ಒಂದು ವೀರಗಲ್ಲಿನ ಪಾಠದಿಂದ ಮಹಾ ಮಂಡಳೇಶ್ವರನಾದ "ಚಟ್ಟರಸದೇವ' ನೆಂಬುವನು ಮಲ್ಲೆಯನಾಯಕನ ಹಳ್ಳಿಯನ್ನು ಮುತ್ತಿ ತುರುಗಳನ್ನು ಹೊಡೆದುಕೊಂಡು ಹೋಗಲು ಪ್ರಯತ್ನಿಸಿದ ವಿಷಯ ತಿಳಿಯುತ್ತದೆ.[೧೩೭] ಕೆಲವೊಮ್ಮೆ ಅರಸನ ಆಜ್ಞೆಯಂತೆ ಅಧಿಕಾರಿಗಳು ತುರುಗಾಳಗಗಳನ್ನು ಆರಂಭಿಸುತ್ತಿದ್ದರು. ಎಕ್ಕಲದೇವರಸನೆಂಬುವನ "'ಬೆಸದಿ ಕನ್ನಡಿಯ ಕಾವೆಯನಾಯಕ" ಎಂಬುವನು ತುರುಗಾಳಗವನ್ನು ಆರಂಭಿಸುತ್ತಾನೆ.[೧೩೮] ಚೋಳ ಮಹಾದೇವಿಯರು ದುಷ್ಟಕಷ್ಟರ ಮಾತುಗಳನ್ನು ಕೇಳಿ ಬೇವೂರನ್ನು ಮುತ್ತಲು "ಧಾಳಿಯನ್ನು ಪೇಳಿದ' ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ.೧೩೯ ""ಶ್ರೀ ಮನ್ಮಹಾ ಮಂಡಳೇಶ್ವರ ಶ್ರೀ ವಲ್ಲದೇವನನಾಯಕರುಯ" ಒಂದು ಒಂದು ಗ್ರಾಮವನ್ನು ಮುತ್ತಿದ ವಿಷಯ ವೀರಗಲ್ಲೊಂದರಿಂದ ತಿಳಿಯುತ್ತದೆ.[೧೪೦]

ಕಳ್ಳತನವನ್ನು ಮುಖ್ಯ ಉದ್ದೇಶವನ್ನಾಗಿಟ್ಟು ಕೊಂಡಿದ್ದ "ತುರುಗೋಳ್'

ಇಂತಹ "ತುರುಗೋಳ್' ಅನ್ನು "ಕಾಳಗ', "ಯುದ್ಧ' ಎಂಬುದಾಗಿ ಭಾವಿಸುವುದು ಎಷ್ಟರ ಮಟ್ಟಿಗೆ ಉಚಿತ ಎಂಬ ಸಂಶಯ ಬರುವುದರಿಂದ ಇವುಗಳನ್ನು "ಹುಯ್ಯಲು' ಎಂದಷ್ಟೇ ಕರೆಯಬಹುದೇನೋ. ಇಲ್ಲಿ ಕಳ್ಳರಿಗೂ ಮತ್ತು ಗ್ರಾಮಸ್ಥರಿಗೂ ಜಗಳಗಳಾಗುತ್ತಿತ್ತು. ಸಾವುಗಲು ಸಂಭವಿಸುತ್ತಿದ್ದುದು ನಿಜವಾದರೂ, ಅವುಗಳು ಎಷ್ಟರ ಮಟ್ಟಿಗೆ "ಕಾಳಗ'ಗಳಾಗಿರುತ್ತಿತ್ತು ಎಂಬುದು ಪ್ರಶ್ನಾರ್ಹ. ಏಕೆಂದರೆ ತಮ್ಮನ್ನು ಎದುರಿಸ ಬಂದ ಗ್ರಾಮಸ್ಥರ ಸಂಖ್ಯೆ ತಮಗಿಂತ ಕಡಿಮೆಯಿದ್ದಾಗ ಮಾತ್ರ ಕಳ್ಳರು ತಿರುಗಿ ಬೀಳುತ್ತಿದ್ದರು. ಇಲ್ಲದಿದ್ದಲ್ಲಿ ತಲೆಮರೆಸಿಕೊಂಡು ಓಡುವ ಪ್ರಯತ್ನವನ್ನು ಮಾಡುತ್ತಿದ್ದರು. ಈ ದೃಷ್ಟಿಯಿಂದ ಬಸವರಾಜದೇವರ ರಗಳೆಯಲ್ಲಿ ಬರುವ ದನಗಳನ್ನು ಕದಿಯುವ ಪ್ರಸಂಗ ಗಮನಾರ್ಹವಾಗಿದೆ. ಬಸವಣ್ಣನ ಮಹಾಮನೆಯ ತುರುಗಳನ್ನು ಶಿವಭಕ್ತರ ವೇಷದಲ್ಲಿ ಬಂದ ಕಳ್ಳರು ಅಪಹರಿಸಿಕೊಂಡು ಹೋಗುತ್ತಾರೆ. ಅವರು ಕಳ್ಳರು ಎಂಬುದನ್ನರಿಯದೆ ಶಿವಭಕ್ತರೆಂದೇ ಭಾವಿಸಿದ ಗೋಪಾಲಕರು ಮೋಸ ಹೋಗುತ್ತಾರೆ. ಆದರೆ ಅವರು ಕಳ್ಳರೆಂಬುದು ತಿಳಿದ ನಂತರ ಹುಯ್ಯಲೆಬ್ಬಿಸಿ ಬಸವಣ್ಣನಲ್ಲಿ ಬಂದು ನಡೆದ ಸಂಗತಿಯನ್ನು ತಿಳಿಸುತ್ತಾರೆ.[೧೪೧]

---

೧೩೭ E. C. VIII. Ng. 12

೧೩೮ E. C. VIII. Sb. 525, 1152

೧೩೯ E. C. V. Cn. 205, 1200

೧೪೦ E. C. VIII. Sb. 46, 1018

೧೪೧ ಹರಿಹರ : ಬಸವರಾಜದೇವರ ರಗಳೆ. ಪು. ೪೮

ತುರುಗಳನ್ನು ಕಳ್ಳರು ಬಹುಬೇಗ ಓಡಿಸಿಕೊಂಡು ಹೋಗುತ್ತಿದ್ದರು. ಆಗ ಗ್ರಾಮಸ್ಥರು ಕಳ್ಳರ ಬೆನ್ನುಹತ್ತಿಹೋಗಿ ಹೋರಾಡಿ ತುರುಗಳನ್ನು ಹಿಂದಕ್ಕೆ ತರುತ್ತಿದ್ದರು. ಏಚನಾಯಕ ಎಂಬುವನು ತನ್ನ ಊರಿನ ಹಿರಿಯರ ಆಜ್ಞೆಯಂತೆ "ತುಱುವಂ ಕೊಂಡು ಪೋಪ ಕಳ್ಳರಂ ಪಲರಂ ಕೊಂದು ತುಱುವ ಮಗುಟ್ಚಿ " ಸಾಯುತ್ತಾನೆ.[೧೫೨] ಕೆಂಕೆರೆಯ ಮಹಾಜನಗಳ ತುರುಗಳನ್ನು ""ಕಳ್ಳರು ಕೊಂಡು ಹೋಹಲ್ಲಿ ಹುಯ್ಯಲಂ ಕೇಳ್ದು ಎಯ್ದಿಕಾದಿ" ಹಲವರನ್ನು ಕೊಂದು ತುರುಗಳನ್ನು ಹಿಂತಿರುಗಿಸಿ ಇಬ್ಬರು ವೀರರು ಮಡಿದ ವಿಷಯ ವೀರಗಲ್ಲೊಂದರಿಂದ ತಿಳಿದುಬರುತ್ತದೆ.[೧೫೩] ಚೋಳಾಚಾರಿ ಎಂಬುವನು "ಪೊಲ್ಲೆಯೂರ ತುಱುವ ಕಳ್ಳರ್ ಕೊಂಡು ಪೋಗೆ ತುಱುವಪೊಟ್ಟಿ ಕಳ್ಳನೊರ್ಬ್ಬನಂ ಕೊನ್ದು ತುಱುವಮಗುಳ್ಚಿ" ಸಾಯುತ್ತಾನೆ.[೧೫೪] ಚೀಗಲವುಡ ಎಂಬುವನು ಒಂದು ಊರಿನ ಹಸುಗಳನ್ನು ಬೇಡರು ಹೊಡೆದುಕೊಂಡು ಹೋಗುವಾಗ ಅವರನ್ನು ಹಿಂಬಾಲಿಸಿ ಸದೆಬಡಿದು ತುರುಗಳನ್ನು ಹಿಂತಿರುಗಿಸಿ ಆ ಗ್ರಾಮವನ್ನು ಸಂತೋಷಪಡಿಸುತ್ತಾನೆ.[೧೫೫] ಹೀಗೆ ಹಲವಾರು ಉದಾಹರಣೆಗಲನ್ನು ನೀಡುತ್ತಾ ಹೋಗಬಹುದು.[೧೫೬]

ಮೇಲೆ ಗಮನಿಸಿದ ಯಾವ ವೀರಗಲ್ಲುಗಳ ಪಾಠದಲ್ಲಿಯೂ ಕಳ್ಳರು ಕಳ್ಳತನವಲ್ಲದೆ ಇತರ ಯಾವುದೇ ಅಕೃತ್ಯಗಳಿಗೆ ಕೈಹಾಕಿದರೆಂಬುದಕ್ಕೆ ಸೂಚನೆಗಳೇನೂ ದೊರೆಯುವುದಿಲ್ಲ. ಬದಲಾಗಿ ತುರುಗಳನ್ನು ಹೊಡೆದು ಕೊಂಡು ಹೋಗುತ್ತಿರುವಾಗ ಎಂಬ ಅರ್ಥ ಬರುವ ಪ್ರಯೋಗಗಳೇ ಬಹಳವಾಗಿವೆ. ಈ ಪ್ರಯೋಗಗಳು ನಮ್ಮ ಈ ಹಿಂದಿನ ಅಭಿಪ್ರಾಯವನ್ನು ಸಮರ್ಥಿಸುವಂತಿದೆ. ಅವರಿಂದ ನಡೆಯುತ್ತಿದ್ದ ಅಕೃತ್ಯಗಳೆಂದರೆ, ಗೋಪಾಲಕರು ಒಂಟಿಯಾಗಿ ಸಿಕ್ಕಾಗ ಅವರನ್ನು ಸದೆಬಡಿಯುವುದು, ತಮ್ಮ ಮೇಲೆ ತಿರುಗಿ ಬಿದ್ದ ಹಳ್ಳಿಯವರ ಸಂಖ್ಯೆ ತಮಗಿಂತ ಕಡಿಮೆ ಇದ್ದರೆ ಅವರೊಂದಿಗೆ ಹೋರಾಡುವುದು. ಇಲ್ಲಿಯೇ ಬಹುಮುಖ್ಯವಾದ ಅಂಶವೆಂದರೆ ತುರುಗಳನ್ನು ಹಿಡಿದ ಎಲ್ಲರನ್ನೂ ವೀರಗಲ್ಲುಗಳಲ್ಲಿ ಕಳ್ಳರು ಎಂಬುದಾಗಿ ಕರೆದಿಲ್ಲ – ಎನ್ನುವುದು. ರಾಜಕೀಯ ಉದ್ದೇಶಗಳಿಂದ ಅಥವಾ ಇನ್ನಿತರ ಮತ್ಸರಗಳಿಂದ ತುರುಗಳನ್ನು ಒಂದು ಸವಾಲಾಗಿ

---

೧೫೨ S. I.I. IX. ಭಾಗ 1. 105, 1047

೧೫೩ E.C.VI. Cm. 157 ಮತ್ತು 47, 1195

೧೫೪ E. C. X. KI. 14, 1035

೧೫೫ E. C. VI. Tk. 84, 1209

೧೫೬ (ಅ) E. C. VI. Tk. 48, 49, 1287
(ಆ) M. A. R.1927. 27. 1288
(ಇ) E. C. VI. Sk. 57, 1376
(ಈ) E. C. IX. Cp. 2, 1667
(ಉ) M. A. R.1927. 31, ?

ಹಿಡಿದಂಥವರ ಹೆಸರುಗಳನ್ನು ವೀರಗಲ್ಲುಗಳ ಪಾಟ ಹೆಸರಿಸುತ್ತವೆ. ಇವರನ್ನು ಎಲ್ಲಿಯೂ "ಕಳ್ಳರು' ಎಂಬುದಾಗಿ ಕರೆದಿಲ್ಲ. ತುರುಗೋಳನ್ನು ಕಳ್ಳತನದ ಉದ್ದೇಶದಿಂದ ಮಾಡಿದುದಾದರೆ ವೀರಗಲ್ಲುಗಳ ಪಾಠದಲ್ಲಿ ಹಾಗೆ ಮಾಡಿದವರನ್ನು ಸ್ಪಷ್ಟವಾಗಿ ಕಳ್ಳರು ಎಂಬುದಾಗಿಯೇ ಕರೆಯಲಾಗಿದೆ. ಇದರಿಂದ ಅಂದಿನವರು ಕಳ್ಳತನದ ಉದ್ದೇಶದಿಂದ ತುರುಗಳನ್ನು ಅಪಹರಿಸಿದ ತುರುಗೋಳ್‌ಗೂ ರಾಜಕೀಯ ಉದ್ದೇಶದಿಂದ ತುರುಗಳನ್ನು ಹಿಡಿಯುತ್ತಿದ್ದ ತುರುಗೋಳ್‌ಗೂ ವ್ಯತ್ಯಾಸವನ್ನು ಕಂಡುಕೊಂಡಿದ್ದರೆಂದು ತಿಳಿಯುತ್ತದೆ. ರಾಜಕೀಯ ಉದ್ದೇಶದಿಂದ ತುರುಗಳನ್ನು ಅಪಹರಿಸಿದವರನ್ನು "ಕಳ್ಳರು' ಎಂಬುದಾಗಿ ಕರೆಯಲು ಸಿದ್ಧರಿರದೆ, ಅದನ್ನು ರಾಜಕೀಯ ಸವಾಲು ಎಂಬುದಾಗಿ ಸ್ವೀಕರಿಸಿ ಎದುರಿಸುವ ಮನಃಪ್ರವೃತ್ತಿಯನ್ನು ಪಡೆದವರಾಗಿದ್ದರು ಎಂಬ ಅಂಶವೂ ಸುಸ್ಪಷ್ಟವಾಗುತ್ತದೆ.

ತುರುಗಳ ಸಂರಕ್ಷಣೆ

ಆಕ್ರಮಣಕಾರರಂತೆಯೇ ಒಂದು ವ್ಯವಸ್ಥಿತ ರೂಪದಲ್ಲಿ ತುರುಗಳನ್ನು ಹಿಂತಿರುಗಿಸುವವರು ಇರಲಿಲ್ಲವೆಂದು ಹೇಳಲು ಆಗುವುದಿಲ್ಲ. ಮೊದಲು ಹುಯ್ಯಲು ಮಾಡುವವರೇ ಅವರನ್ನು ತಡೆಯುತ್ತಿದ್ದರೂ, ಆ ಹುಯ್ಯಲನ್ನು ಕೇಳಿದ ಊರಿನ ಇತರೇ ಜನರೋ, ಮುಖ್ಯಸ್ಥರೋ, ಬಂಟರೋ ಇವರ ನೆರವಿಗೆ ಬಂದು ತುರುಗಳನ್ನು ಹಿಂತಿರುಗಿಸುತ್ತಿದ್ದರು. ಬಳ್ಳಿಗಾವೆಯ ತುರುಗಳನ್ನು ಶತ್ರುಗಳು ಬಂದು ಹಿಡಿದಾಗ ಬನವಾಸಿ ಹನ್ನೆರಡು ಸಾಸಿರವನ್ನು ಆಳುತ್ತಿದ್ದ ಗೋವಿಂದರಸನ ಆಜ್ಞೆಯಂತೆ ರೇವಯ್ಯನು ಹೋರಾಡಿ ಸಾಯುತ್ತಾನೆ.[೧೭೭] ತನ್ನ "ಆಳ್ದರಸಂ ಬೆಸಸಲು' ಬಮ್ಮಣನು ತುರುಗಾಳಗದಲ್ಲಿ ಭಾಗವಹಿಸಿ ಸಾಯುತ್ತಾನೆ.[೧೭೮] "ಮಲ್ಲನ್ರಿಪಾಳಂ ಬೆಸಸೆ' ಚಟ್ಟನಾಯಕನು ತನ್ನ ಊರಿನ ತುರುಗಳನ್ನು ಹಿಂತಿಗಿರುವಲ್ಲಿ ಸಾಯುತ್ತಾನೆ. ಆಗ ಅವನ ವೀರಗಲ್ಲನ್ನು ಇದೇ ಮಲ್ಲರಸದೇವನು ನಿಲ್ಲಿಸುತ್ತಾನೆ.[೧೭೯] ಇದ್ದಿಕ್ಕಿದ್ದಂತೆ ಉಮ್ಮಾಬಾಯಿಯು ಬಂದು ತುರುಗಳನ್ನು ಹಿಡಿದಾಗ, ಮಲ್ಲಿದೇವರಸನ ಆಜ್ಞೆಯಂತೆ ಗಟ್ಟೆಯನಾಯಕನು ವೈರಿಗಳೊಡನೆ ಹೋರಾಡಿ ""ತುರುವಂ ಮಗುಳ್ಚಿ ಸುರಲೋಕ ಪ್ರಾಪ್ತನಾದ."[೧೮೦] ಹೀಗೆ ವೀರರು ತಮ್ಮ ಅರಸರ ಆಜ್ಞೆಯಂತೆ ತುರುಗಳನ್ನು ಹಿಂತಿರುಗಿಸಲು ಸುಸಜ್ಜಿತರಾಗಿಯೇ ಹೋಗುತ್ತಿದ್ದರೆಂದು ತೋರುತ್ತದೆ.

---

೧೭೭ E. C. VII. Sk. 149, 1110
೧೭೮ E. C. VII. Sk. 238, 1128
೧೭೯ E. C. VII. HI. 35, 1187
೧೮೦ E. C. VII. HI. 37, 1215

ಒಂದು ಊರಿನ ಹಸುಗಳನ್ನು ಅಪಹರಿಸಿದಾಗ, ಆ ಊರಿನ ಹಿರಿಯ ಅಧಿಕಾರಿಗಳೂ ಮಹಾಜನರೂ ಬಂಟಸಾಸಿರ್ವ್ವರೂ ಅವರ ಕೈಕೆಳಗಿನ ಬಂಟರಿಗೆ ತುರುಗಳನ್ನು ಹಿಂತಿರುಗಿಸಿಕೊಂಡು ಬರುವಂತೆ ಆಜ್ಞಾಪಿಸುತ್ತಿದ್ದರು. ತಿಳ್ಳವಳ್ಳಿಯ ತುರುಗಳನ್ನು ಹಿಡಿದಾಗ "ಸಾಸಿರ್ವ್ವರ ಬೆಸದಿ', "ಸಾಸಿರ್ವ್ವರಬಣ್ಟ'ನೂ "ಮಾರ್ಕ್ಕೊಳವರಗಂಡ'ನೂ ಆದ ಬಂಮ ಎಂಬುವನು ತುರುಗಳನ್ನು ಹಿಂತಿರುಗಿಸಿ ಸಾಯುತ್ತಾನೆ.[೧೫೧] ಶತ್ರುಗಳು ಬಂದು ಕುಪ್ಪಟೂರಿನ ತುರುಗಳನ್ನು ಸೆರೆಹಿಡಿದಾಗ ಆ ಊರಿನ "ಸಾಸಿರ್ವ್ವರಾದ ಅಶೇಷ ಮಹಾ ಜನಂಗಳು' ಸೆರೆಯಾಗಿದ್ದ "ಸ್ತ್ರೀ ಗೋವ'ನ್ನು ಬಿಡಿಸು ಎಂದು ಹೇಳಿದಾಗ "ಹತಗವುಡ' ಎಂಬುವನು ಹೋರಾಡಿ ಸಾಯುತ್ತಾನೆ.[೧೫೨] ""ಸ್ತ್ರೀ ದ್ರೋಹಘರಟ್ಟ ಚತುರ್ವ್ವೇದಿ ಮಂಗಲದ ಮಹಾಜನಂಗಳ ಬೆಸದಿಂ ಮಡಿವಳ ಚಟ್ಟಕನ ಮಗ ಗಂಗಣಂ ತುಱುವಂ ಮಗುಳ್ಚಿ'' ಸುರಲೋಕ ಪ್ರಾಪ್ತನಾದನು.[೧೫೩]

ಇಂತಹ ತುರುಗಾಳಗಗಳಲ್ಲಿ ಊರಿನ ಹಿರಿಯರು ಭಾಗವಹಿಸುತ್ತಿದ್ದರು. ಸ್ವಪ್ರೇರಣೆ ಯಿಂದಲೋ ಅಥವಾ ಊರಿನ ಹಿರಿಯರಾಗಿ ತಾವು ಮಾಡಬೇಕಾದ ಕರ್ತವ್ಯವೆಂದೋ ಭಾವಿಸಿ, ಅವರೂ ಸಹ ಭಾಗವಹಿಸುತ್ತಿದ್ದ ವಿಷಯ ವೀರಗಲ್ಲುಗಳಿಂದ ತಿಳಿದುಬರುತ್ತದೆ. ಅಡಿಗಟ್ಟೆಯ ತುರುಗಳನ್ನು ಹಿಡಿದಾಗ ಅದೇ ಊರಿನ "ಊರ್ಗಾವುಣ್ಡ'ನಾದ ಮಾಚಿಗಾವುಣ್ಡ ಎಂಬುವನು ತುರುಗಳನ್ನು ಹಿಂತಿರುಗಿಸುವಲ್ಲಿ ಸಾಯುತ್ತಾನೆ.[೧೫೪] ಜಗದೇಕರಸನೆಂಬುವನು ತನ್ನ ಊರಿನ ತುರುಗಳನ್ನು ಹಿಡಿದನೆಂದು ಕೇಳಿದ "ದೇಕಭೂಪತಿ'ಯು ತಾನೇ ಯುದ್ಧಕ್ಕೆ ಹೊರಟು ತುರುಗಳನ್ನು ಹಿಂತಿರುಗಿಸುವಲ್ಲಿ ಸಾಯುತ್ತಾನೆ[೧೫೫] ವಿಷ್ಣುವರ್ಧನನ ಆಳ್ವಿಕೆಯಲ್ಲಿ ಸೆಟ್ಟಿಗಾವುಂಡನು ಅಳುವಖೇಡ ಆರುಸಾಸಿರದ ಮೇಲೆ ದಂಡೆತ್ತಿಹೋದಾಗ ಜಯಸಿಂಗ ಅಳುವರಸನೊಡನೆ ಸುರಿಗೆಗಾಳಗವನ್ನು ಕಾದಿ ಗೆದ್ದು ಬಂದನಂತರ ಕರುವಿಡಿಹಿರೂರು ಎಂಬಲ್ಲಿ ಗೌಡತನ ಮಾಡುತ್ತಿರಬೇಕಾದರೆ, ಸೀರೆನಾಡ ಹುಲಕಾಱನಾಯಕರು ಬಂದು ತುರುಗಳನ್ನು ಹಿಡಿಯಲು ಸೆಟ್ಟಿಗಾವುಂಡನು ""ತಾನೇ ಕಾದಿ ಪಲರನಿಱಿದು ತುಱುವ ಮಗುಳ್ಚಿಸುರಲೋಕಪ್ರಾಪ್ತ''ನಾದ ವಿಷಯ ವೀರಗಲ್ಲೊಂದರಿಂದ ತಿಳಿಯುತ್ತದೆ.[೧೫೬] ಇದೇ ರೀತಿ ಅನೇಕ ಉದಾಹರಣೆಗಳನ್ನು ನೀಡುತ್ತಾ ಹೋಗಬಹುದು.[೧೫೭]

---

೧೫೧ K. I. II. 17, 1126

೧೫೨ E. C. VIII. Sb. 251, 1117

೧೫೩ E. C. V. BI. 92, 1152

೧೫೪ E. C. VII. Sk. 83, 1058

೧೫೫ E. C. XII. Ck. 18

೧೫೬ ಕೆ.ವಿ. ರಮೇಶ್ : ಕರ್ನಾಟಕ ಶಾಸನ ಸಮೀಕ್ಷೆ ಪು. ೪೫

೧೫೭ (ಅ) E. C. VII. Sk. 137, 1198
(ಆ) E. C. V. Cn. 205, 1200
(ಇ) E. C. VI. Tk. 84, 1205

ತುರುಗಳನ್ನು ಯಾವುದೇ ಉದ್ದೇಶದಿಂದ ಹಿಡಿಯಲಿ, ಅವುಗಳಿಗೆ ಇವರು ಮಾಡುವ ಹುಯ್ಯಲುಗಳಿಂದ ಗಾಬರಿ, ಹಿಂಸೆಯಾಗುತ್ತಿದ್ದುದರ ಬಗ್ಗೆ ವೀರಗಲ್ಲುಗಳ ಪಾಠದಿಂದ ಯಾವುದೇ ರೀತಿಯ ವಿವರಣೆಯೂ ಸಿಗುವುದಿಲ್ಲ. ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ, ತಾನು ತನ್ನ ಸಮಕಾಲೀನ ಸಮಾಜದಲ್ಲಿ ಕಂಡಿರಬಹುದಾದ ತುರುಗಾಳಗದಲ್ಲಿನ ತುರುಗಳ ಆ ಸ್ಥಿತಿಯ ವಾಸ್ತವಿಕ ಚಿತ್ರಣವನ್ನು ಈ ರೀತಿ ನೀಡುತ್ತಾನೆ. :

ಅದಟರ ಚೆನ್ನ ಪೊಂಗರ ಸಬಂಗಳ ತೊಟ್ಟುಟಿಯೊಳ್ ತೊಡಂಕಿ ನಿ
ಲ್ಲದೆ ಪೊಱಮಟ್ಟ ತಮ್ಮ ಮನದೊಳ್ ಮಿಗೆ ಬೆಚ್ಚಿಸಿದಂತೆ ತೋಱುವ
ಗ್ಗದ ನಿಡುಗೋಡು ಮೇಡುಮಮರತ್ತು ಮಿಱುಂಕಿದ ಕೆಚ್ಚಲೆತ್ತಮೆ
ತ್ತಿದ ಕುಡಿವಾಲಮಂದೆಸೆಯೆ ಕರ್ಬಸುಗಳ್ ಪರಿಗೊಂಡುವಾಜಿಯೊಳ್[೧೫೮]

ಯುದ್ಧಭೂಮಿಯಲ್ಲಿ ಮಡಿದ ವೀರರ ಶವಗಳ ತುಳಿದಾಟದಲ್ಲಿ ಸಿಕ್ಕಿಕೊಂಡು ನಿಂತುಕೊಳ್ಳದೆ ತುರುಗಳು ಹೆದರಿ ಓಟಕಿತ್ತವಂತೆ. ಹೆದರಿದ ತುರುಗಳ ಸ್ಥಿತಿಯನ್ನು ಪಂಪ ಸೂಕ್ಷ್ಮವಾಗಿ ನೀಡುತ್ತಾನೆ. ಹೆದರಿಕೆಯಿಂದಾಗಿ ಆ ತುರುಗಳ ಕೆಚ್ಚಲುಗಳು ಬಿಗಿದು ಒಳಗೆ ಸೇರಿಕೊಂಡವಂತೆ. ಬಾಲಗಳು ಮೇಲಕ್ಕೆ ಎತ್ತಿಕೊಂಡು ಆ ತುರುಗಳು ದಿಕ್ಕಾಪಾಲಾಗಿ ಓಡಿದುವಂತೆ. ಇಷ್ಟು ವಾಸ್ತವವಾದ ಚಿತ್ರಣ ಇಡೀ ಕನ್ನಡಸಾಹಿತ್ಯ ಪ್ರಪಂಚಲ್ಲಿಯೇ ಅತಿವಿರಳವೆಂದು ಹೇಳಬಹುದು.

ಈ ತುರುಗಾಳಗದ ಮತ್ತೊಂದು ಮುಖ ಬಸವರಾಜದೇವರ ರಗಳೆಯಿಂದ ತಿಳಿದುಬರುತ್ತದೆ.

ತುರುಗಾಳಗದಲ್ಲಿ ತುರುಗಳನ್ನು ಅಪಹರಿಸಿದರೆಂದು ಬಸವಣ್ಣನವರಿಗೆ ತಿಳಿಸಿದಾಗ ಅವರ ಮಾನವೀಯ ಹೃದಯದಿಂದ ಈ ರೀತಿಯ ಮಾತುಗಲು ಬರುತ್ತವೆ.

"'ತಾಯ್ಗಳುಮ್ಮಳಿಸಲಾಗದು ಕಱುಗಳಂ ಬಿಡಿರೆ
ಬೇಗ ಮೊಲೆ ತೊರೆದು ಮರುಗುವವು ಕರುವಂ ಬಿಡಿರೆ
ಮಕ್ಕಳುಗಳವ್ವೆಗಳು ನೋಯಲಾಗದು ಬಿಡಿರೆ
ಮಿಕಕ ನೆನಹಿಲ ಮಲಮಲಂ ಮಱುಗುವುವು ಬಿಡಿರೆ
ಎಲೆಲೆ ತಾಯಿಕಱುಗೂಡಿರೇ ಬೇಗದೊಳು ಬಿಟ್ಟು
ಎಂದು ಕಱುಗಳನಲ್ಲಿ ಬಿಡಿಸುತೆ ದಯಾಪರಂ"[೧೫೯]

---

೧೫೮ ಪಂಪ: ವಿಕ್ರಮಾರ್ಜುನ ವಿಜಯಂ. ೮–೧೦೪

೧೫೯ ಹರಿಹರ : ಬಸವರಾಜದೇವರ ರಗಳೆ,

ತಮ್ಮ ಸಂಪತ್ತಾದ ದನಗಳು ಹೋಯಿತಲ್ಲ ಎಂಬ ವ್ಯಥೆ ಬಸವಣ್ಣನವರಿಗಿಲ್ಲ. ಆದರೆ ತಾಯಿಯೊಂದು ಕಡೆ ಮಗುವೊಂದು ಕಡೆ ಆಗಿ ಅವುಗಳು ತಬ್ಬಲಿಗಳಾಗುತ್ತವಲ್ಲಾ ಎಂಬುದೇ ಅವರಿಗೆ ಚಿಂತೆ.

ತುರುಗಲನ್ನು ಕಳ್ಳರೋ ಅರಸರೋ ಕದ್ದುಕೊಂಡು ಹೋದಾಗ, ಅದು ಊರಿನ ಜನರ ಮೇಲೆ ಯವ ರೀತಿಯ ಪರಿಣಾಮವನ್ನು ಬೀರುತ್ತಿತ್ತು ಎಂಬುದರ ವರ್ಣನೆ ಜಾನಪದ ವೀರಗೀತೆಯೊಂದರಲ್ಲಿ ಬಂದಿದೆ. ಒಂದು ಊರಿನ ತುರುಗಳನ್ನು ಅಪಹರಿಸಿಕೊಂಡು ಹೋದಾಗ ಊರಿನ ಹೆಂಗಸರು ತಮ್ಮತಮ್ಮಲ್ಲಿಯೇ ಹೀಗೆ ಮಾತನಾಡಿಕೊಳ್ಳುತ್ತಾರೆ :

ಎಂದಮ್ಮ ಆಯಿತವಾರ ಎಂದಮ್ಮ ಸ್ವಾಮಾರ
ಅಂಗಳ ಬಳಿಯಾಕ ಸಗಣಿಲ್ಲ । ಸಂದನೋರ
ಕಂದ ಕೊಂಡೋದಾ ತುರುಗಾಳ
ನಾಳ್ಯಮ್ಮ ಆಯಿತವಾರ ಮುಂದ್ಯಮ್ಮ ಸ್ವಾಮಾರ
ಬಾಗಲು ಬಳಿಯಾಕ ಸಗಣಿಲ್ಲ । ಸಂದನೋರ
ಬಾಲ ಕೊಂಡೋದ ತುರುಗಾಳ । [೧೬೦]

ಹಸುಗಳಿಲ್ಲದೆ ಅವರಿಗೆ ದಿನಗಳೂ ಗೊತ್ತಾಗುವುದಿಲ್ಲ. ಸೋಮವಾರ ಕರ್ನಾಟಕದ ಬಹುಭಾಗಗಳಲ್ಲಿ ದನಗಳನ್ನು ಪೂಜಿಸುತ್ತಾರೆ. ಆ ದಿನ ಅವುಗಳಿಂದ ಯಾವ ಕೆಲಸವನ್ನೂ ಮಾಡಿಸುವುದಿಲ್ಲ. ಮನೆಯ ಅಂಗಳ ಬಳಿಯುವುದಕ್ಕೂ ಸಹ ಸಗಣಿ ಇಲ್ಲ ಎಂದರೆ, ಇನ್ನು ಹಾಲಿನ ಗತಿ ? ಊರಿನ ಮಕ್ಕಳ ಗತಿ ? ಮುಂತಾದ ಪರಿಣಾಮಗಲನ್ನು ಜಾನಪದ ಕವಿ ನಮ್ಮ ಊಹೆಗೇ ಬಿಟ್ಟಿದ್ದಾನೆ.

ಇಂತಹ ಹೋರಾಟಗಳ ಮತ್ತೊಂದು ಮುಖ ಎಂದರೆ ಹೋರಾಡುತ್ತಿದ್ದವರ ನಡುವಿನ ಸ್ನೇಹ – ಬಾಂಧವ್ಯಗಳು ಹೇಗೆ ವ್ಯಕ್ತವಾಗುತ್ತವೆ ಎಂಬುದು. ಈ ರೀತಿಯ ಚಿತ್ರಗಳು ಅಪರೂಪವಾದರೂ ಕೆಲವಾರು ವೀರಗಲ್ಲುಗಳಿಂದ ದೊರೆಯುತ್ತದೆ. ಕ್ರಿಶ. ೧೧೦೭ರ ಹೂಲಿಯ ವೀರಗಲ್ಲಿನಿಂದ ಬೋಸಿಗ ಮತ್ತು ಮಲ್ಲಿಗ ಎಂಬ ಇಬ್ಬರು ಗೆಳೆಯರ ಸ್ನೇಹ – ವೀರತನಗಳ ಪರಿಚಯ ನಮಗಾಗುತ್ತದೆ. ತೊರಪರ ಭೂಪಯ್ಯ ಎಂಬುನು ಹೂಲಿಯ ತುರುಗಳನ್ನು ಹಿಡಿದಾಗ ಆ ಊರಿನ ತಳಾರ ನಾಯಕನಾದ ಬೋಸಿಗನೂ, ಆತನೊಡನುಂಡ ಗೆಳೆಯನಾದ ಮಲ್ಲಿಗ

೧೬೦ ಚಿತ್ರದುರ್ಗ ಜಿಲ್ಲೆಯ ಹರತಿ ಬಯಲಲ್ಲಿ ಪ್ರಚಲಿತವಿರುವ ಲಾವಣಿ. ಶ್ರೀ ಎ. ಕೃಷ್ಣಮೂರ್ತಿ ಅವರ ಪ್ರಕಟಿತ ಸಂಗ್ರಹದಿಂದ.

ಎಂಬುವನೂ ತುರುಗಳಿಗೆ ಅಡ್ಡಬಂದು ಮೇಲಾಳನ್ನು ಇರಿದು ಸಾಯುತ್ತಾರೆ. ಹೋರಾಟದಲ್ಲಿ ಮೊದಲಿಗೆ ಬೋಸಿಗನು ತನ್ನ 'ನಿಜವಿಕ್ರಮಪ್ರತಾಪೋನ್ನತಿ'ಯಿಂದ ಸಾಯುತ್ತಾನೆ. ಅವನ ಸಾವನ್ನು ಕಂಡ ಗೆಳೆಯನಾದ ಮಲ್ಲಗನು

ಒಡನುಂಡ ಕೆಳೆಯನಂ ಸಂ
ಗಡದಾಲಂ ಮೇಳದಾಳನನುವರದೆಡೆಯೊಳ್
ಬಿಡಲಾಗದೆಂದು ಬೋಸಿಗ
ನೋಡನಟಿದಂ ಮಲ್ಲಿಗಂ ಪ್ರತಾಪೋನ್ನತಿಯಿಂ

ಎಂಬುದಾಗಿ ಕವಿ ವರ್ಣಿಸುತ್ತಾನೆ.[೧೬೧]

ಕ್ರಿ.ಶ. ೧೧೫೬ರ ಕೆರಗೋಡು ಶಾಸನದಲ್ಲಿ ತಮ್ಮ ಊರಿನ ತುರುಗಳನ್ನು ಕಾಳರಸನು ಕೊಂಡಾಗ, ಆ ಊರಿನ ಬಾವಗಾವುಂಡನೆಂಬುವನ ಮಕ್ಕಳಾದ ದೇವಗಾವುಂಡ ಮತ್ತು ಮಲ್ಲಗಾವುಂಡ ಎಂಬುವರು '"ಬಿಲ್ಲುಮಂಬುಮಮಂ ಕೊಂಡೀರ್ವ್ವರು ಹೆಬ್ಬಾಗಿಲೊಳಡ್ಡನಿಂತು" ತುರುಗಳನ್ನು ಹೊಡದುಕೊಂಡು ಹೋಗುವವರಿಗೆ ಹೋರಾಟವನ್ನು ನೀಡುತ್ತಾರೆ. ಈ ಹೋರಾಟದಲ್ಲಿ ಅವರಿಬ್ಬರು ಸಾಯುತ್ತಾರೆ. ಅವರ ಹೆಣಗಳನ್ನು ತುಳುದಿಕೊಂಡೇ ತುರುಗಳನ್ನು ಓಡಿಸಿಕೊಂಡು ಹೋದಾಗ, ಅವರಿಬ್ಬರ ಕಿರಿಯ ತಮ್ಮನಾದ ಬೊಮ್ಮಗಾವುಂಡ ತನ್ನ "ಅಣ್ಣಂದಿರ ಕಳೇಬರಗಳನ್ನು ಕಂಡು ಸೈರಿಸಲಾಗದೆ,' ನೀವು ಸತ್ತಹಾಗೆ ನಾನು ಸಾಯುತ್ತೇನೆ ; ಇಲ್ಲವಾದರೆ ತುರುಗಳನ್ನಾದರೂ ಹಿಂತಿರುಗಿಸಿ ಶತ್ರುಗಳನ್ನು ಸದೆಬಡಿಯುತ್ತೇನೆ ಎಂದು ಪ್ರತಿಜ್ಞೆಮಾಡಿ ವೈರಿಗಳನ್ನು ಬೆನ್ನಟ್ಟಿ ತುರುಗಳನ್ನು ಹಿಂತಿರುಗಿಸಿಕೊಂಡು ಬಂದು ತನ್ನ ಅಣ್ಣಂದಿರನ್ನು ಸಂಸ್ಕರಿಸಿ ಅವರ ಹೆಸರಿನಲ್ಲಿ ವೀರಗಲ್ಲುಗಳನ್ನು ನಿಲ್ಲಿಸುತ್ತಾನೆ.[೧೬೨]

ಈ ಎಲ್ಲಾ ಅಂಶಗಳನ್ನು ಗಮನಿಸಿದರೆ, ಹೋರಾಟದಲ್ಲಿ, ತಮ್ಮ ಸಹೋದ್ಯೋಗಿಗಳು, ಸೋದರರು ಮಡಿದಾಗ ಅದರಿಂದ ಘಾಸಿಗೊಂಡವರು ಹಿಂತೆಗೆಯುತ್ತಿರಲಿಲ್ಲ. ಬದಲಾಗಿ ಅವರಿಂದ ಮತ್ತಷ್ಟು ಪ್ರಚೋದಿತರಾಗಿ ಯುದ್ಧನಿರತರಾಗುತ್ತಿದ್ದರೆಂಬುದು ತಿಳಿಯುತ್ತದೆ.

ರಾಜಕೀಯ ಉದ್ದೇಶದಿಂದ ಕೂಡಿದ ತುರುಗಾಳಗಗಳೂ ತಮ್ಮ ಸೀಮಿತ ಅರ್ಥದಲ್ಲಿ ಯುದ್ಧಗಳೇ ಆಗಿವೆ. ಈ ಯುದ್ಧದ ಪರಿಣಾಮ ಯಾರು ಈ ಕಾಳಗವನ್ನು ಆರಂಭಿಸುತ್ತಾರೆ

---

೧೬೧ Lionel. D. Barnett : 'Inscriptions at Huli -' E.I.XVII.ಪು. ೨೦೦, ೧೧೦೭

೧೬೨ E. C. VIII. Sb. 175, 1156

ಮತ್ತು ಎದುರಿಸುತ್ತಾರೆ ಎಂಬ ಅಂಶವನ್ನು ಅವಲಂಬಿಸಿದೆ. ಒಂದೇ ತುರುಗಾಳಗದಲ್ಲಿ ಅನೇಕ ಜನ ಸತ್ತಿರುವ ಸಾಧ್ಯತೆ ಇಲ್ಲದಿಲ್ಲ. ಆದರೆ ತುರುಗಾಳಗಗಳಲ್ಲಿ ಸತ್ತವರೆಲ್ಲರ ವೀರಗಲ್ಲುಗಳು ಇಂದು ಉಪಲಬ್ಧವಾಗಿಲ್ಲ ಅಥವಾ ಎಲ್ಲರಿಗೂ ವೀರಗಲ್ಲುಗಳನ್ನು ಹಾಕಿಸದೆಯೂ ಇರಬಹುದು. ಇದುವರೆಗೆ ದೊರೆತಿರುವ ವೀರಗಲ್ಲುಗಳಲ್ಲಿ ಕ್ರಿ.ಶ. ೧೨೫೯ರ ವೀರಗಲ್ಲೊಂದರಿಂದ ತುರುಗಾಳಗವೊಂದರಲ್ಲಿ ಆರುಜನ ವೀರರು ಸತ್ತಿರುವ ವಿಷಯ ತಿಳಿಯುತ್ತದೆ.೧೬೩ ಉಳಿದವುಗಳಲ್ಲಿ ಸಾಮಾನ್ಯವಾಗಿ ಒಂದೋ ಎರಡೋ ಸಾವುಗಳು ಸಂಭವಿಸಿರುವ ವಿಷಯ ತಿಳಿಯುತ್ತದೆ.

---

೧೬೩ E. C. IX. Kn. 71, 1259

೫. ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು

ಈ ವಿಷಯವನ್ನು ಪುನಾರಚಿಸುವಲ್ಲಿ ವೀರಗಲ್ಲುಗಳ ಪಾಠ ಮತ್ತು ಶಿಲ್ಪವನ್ನು ಅವಲಂಬಿಸಿದ್ದೇವೆ. ಹೀಗೆ ಮಾಡುವುದಕ್ಕೆ ಕಾರಣವನ್ನು ಸಂಕ್ಷಿಪ್ತವಾಗಿ ವಿವರಿಸಿ ಮುಂದುವರಿಯುವುದು ಉಚಿತ. ವೀರಗಲ್ಲುಗಳು ಸಾಮಾನ್ಯವಾಗಿ ಪಾಠವನ್ನು ಮತ್ತು ಶಿಲ್ಪವನ್ನು ಹೊಂದಿರುತ್ತವೆ. ಕೆಲವೊಮ್ಮೆ "ಪಾಠ' ಇಲ್ಲದಿರುವ ಸಾಧ್ಯತೆಯುಂಟು. ಪಾಠ ಇಲ್ಲದಿರುವ ವೀರಗಲ್ಲುಗಳು ಅನೇಕ ಸಂಖ್ಯೆಯಲ್ಲಿ ದೊರೆಯುತ್ತವೆ. ಆದರೆ ಶಿಲ್ಪವಿಲ್ಲದ ವೀರಗಲ್ಲುಗಳು ವಿರಳವೆಂದೇ ಹೇಳಬೇಕು. ವೀರನ ಪರಾಕ್ರಮವನ್ನು, ಅವನು ಮಾಡಿದ ತ್ಯಾಗವನ್ನು ಲೋಕಕ್ಕೆ ತಿಳಿಯುವಂತೆ ಮಾಡುವಲ್ಲಿ ಶಾಸನಕಾರ ಮತ್ತು ಶಿಲ್ಪಿ ಇವರಿಬ್ಬರ ಪಾತ್ರವೂ ಇರುತ್ತದೆ. ಇಂದು ಜನ ವೀರಗಲ್ಲಿನ ಶಿಲ್ಪದ ಆಧಾರದ ಮೇಲೆ ಎಂಥದೇ ಕಥೆಯನ್ನು ಹೇಳಲಿ, ಅವನ್ನು ನಿರ್ಮಾಣ ಮಾಡಿದ ಕಾಲಕ್ಕೆ ಜನತೆ ಆ ಶಿಲ್ಪದ ಅರ್ಥವಂತಿಕೆಯನ್ನು ಕಂಡುಕೊಂಡಿದ್ದರೆಂದು ತೋರುತ್ತದೆ. ವಿದ್ಯಾವಂತ ಜನರಿಗೆ ಶಾಸನದ ಪಾಠ ವೀರನ ಪರಾಕ್ರಮವನ್ನು ಅರ್ಥಮಾಡಿಕೊಳ್ಳಲು ನೆರವಾದರೆ, ಶಾಸನದ ಶಿಲ್ಪ ತನ್ನ ನಿರೂಪಣಾ ವಿಧಾನದಿಂದ ಅವಿದ್ಯಾವಂತರೂ ಅರ್ಥಮಾಡಿಕೊಳ್ಳಲು ಸಹಾಯಕವಾಗಿತ್ತು. ಏಕೆಮದರೆ ಶಿಲ್ಪದ ವಿವರಗಳನ್ನು ಚಿತ್ರದ ಹಾಗೆ ಬಿಡಿಸಿರುವುದರಿಂದ, ಜನಗಳ ಕುತೂಹಲ ಕೆರಳಿಸಿ, ಅವರಲ್ಲಿ ಸುಪ್ತವಾಗಿದ್ದ ಅರ್ಥ ಜ್ಞಾನವನ್ನರಳಿಸುತ್ತಿತ್ತು – ಬಹುಶಃ ಈ ಕಾರಣದಿಂದಾಗಿಯೇ ವೀರನ ಪರಾಕ್ರಮವನ್ನು ಶಿಲ್ಪದಲ್ಲಿ ಮೂಡಿಸಲು ಆರಂಭ ಮಾಡಿರಬೇಕು. ಹೀಗೆ ವೀರನ ಪರಾಕ್ರಮದ ನಿರೂಪಣೆ ಮಾಡುವಾಗ ಶಿಲ್ಪಿಯಾದವನು ವೀರನು ಮಾಡಿದ ಹೋರಾಟದ ಚಿತ್ರವನ್ನು, ತಾನು ತನ್ನ ಕಾಲದಲ್ಲಿ ಕಂಡಿರಬಹುದಾದ ಹೋರಾಟಗಳನ್ನೂ ಗಮನದಲ್ಲಿಟ್ಟುಕೊಂಡು ಚಿತ್ರಿಸಿರಬೇಕು. ಹೀಗೆ ಮಾಡುವಾಗ ಸಹಜವಾಗಿಯೆ ಶಿಲ್ಪಿಯಾದವನು ತನ್ನ ಸಮಕಾಲೀನ ಆಯುಧಗಳನ್ನು, ವೀರರ ಉಡುಪುಗಳನ್ನು ಅವರು ಬಳಸುತ್ತಿದ್ದ ವಾಹನಗಳನ್ನು ನಿರೂಪಿಸಿರುತ್ತಾನೆ. ಈ ಸೌಲಭ್ಯದ ಕಾರಣದಿಂದ ಶಿಲ್ಪವು ನಮಗೆ ಅಂದಿನ ಯುದ್ಧದ ಚಿತ್ರವನ್ನು ಪುನಾರಚಿಸುವಲ್ಲಿ ನೆರವಾಗುತ್ತದೆ.

ಯುದ್ಧಗಳ ವಿವರವಾದ ಸ್ವರೂಪವನ್ನು ತಿಳಿಯುವ ಮುನ್ನ, ಅವುಗಳ ಹಿನ್ನೆಲೆಯನ್ನು ಕುರಿತು ಸ್ವಲ್ಪಮಟ್ಟಿಗೆ ವಿಚಾರಮಾಡುವುದು ಸೂಕ್ತವೆಂದು ತೋರುತ್ತದೆ. ಈ ಯುದ್ಧಗಳು ಏಕೆ ಆದವು, ಅವುಗಳನ್ನು ನಡೆಸುತ್ತಿದ್ದವರ ಮನೋಧರ್ಮ ಎಂತಹುದಿತ್ತು ಎಂಬ ಅಂಶಗಳು ಪರಿಶೀಲನಾರ್ಹ.

ಯುದ್ಧ ಎಂಬುದು ಮನುಷ್ಯ ಸ್ವಭಾವಕ್ಕೆ ಅಂಟಿಬಮದ ಹುಟ್ಟುಗುಣ. ಭಾರತೀಯ ವೇದ, ಪುರಾಣ, ಸಾಹಿತ್ಯ ಕೃತಿಗಳಲ್ಲಿ ಯುದ್ಧದ ಪರಿಣಾಮಗಳು ; ಯುದ್ಧದಿಂದಾಗಿ ಒಬ್ಬ ಅರಸನ, ರಾಜ್ಯದ ಏಳಿಗೆ ಮತ್ತು ನಾಶ ಆಗಿರುವುದರ ಚಿತ್ರಗಳು ಕಂಡುಬರುತ್ತವೆ.[೧] ಯುದ್ಧದಿಂದಲೇ ತನ್ನ ಏಳಿಗೆ, ತನ್ನ ಶತ್ರುಗಳ ನಾಶ ಎಂಬುದಾಗಿ ಭಾರತದಲ್ಲಿ ಆಳಿದ ಎಲ್ಲ ಅರಸರೂ ಭಾವಿಸಿದ್ದಂತೆ ತೋರುತ್ತದೆ. ಈ ಅಂಶ ಅವರು ಮಾಡಿದ ಯುದ್ಧಗಳಿಂದಲೂ ಮತ್ತು ಅವರು ಹೊಂದಿದ್ದ ಬಿರುದು, ಪ್ರಶಸ್ತಿಗಳಿಂದಲೂ ವ್ಯಕ್ತವಾಗುತ್ತದೆ. ಭಾರತದ ಅರಸರ ಅತ್ಯುನ್ನತವಾದ ಒಂದು ಆಕಾಂಕ್ಷೆ ಎಂದರೆ "ರಾಜಾಧಿರಾಜ"ನಾಗುವುದು. "ಅಖಂಡ ಭೂಮಿತೆಗೆ ತಾನೊಬ್ಬನೇ ಒಡೆಯನಾಗುವುದು.[೨]

ಈ ಹಿನ್ನೆಲೆಯನ್ನು ಗಮನದಲ್ಲಿಟುಕೊಂಡು ಕರ್ನಾಟಕದಲ್ಲಿ ನಡೆದಿರುವ ಯುದ್ಧಗಲ ಹಿಂದೆ ಇದ್ದ ಕಾರಣಗಳನ್ನು ಈ ರೀತಿ ಗುರುತಿಸಬಹುದು.

೧. ರಾಜ ಮನೆತನಗಳ ನಡುವ ಬೆಳೆದು ಬಂದ ಮತ್ಸರ.

೨. ದಾಯಾದಿ ಅಥವಾ ತಂದೆ ಮಕ್ಕಳ ನಡುವಿನ ವೈಮನಸ್ಯ.

೩. ಅರಸನಾದವನಿಗೂ ಸಾಮಂತರಸನಿಗೂ ಉಂಟಾದ ವೈಯಕ್ತಿಕ ಘರ್ಷಣೆಗಳು ಮತ್ತು ಪರಸ್ಪರರಲ್ಲಿ ಉಂಟಾದ ತಪ್ಪುಗ್ರಹಿಕೆಗಳು.

೪. ಕೆಲವೊಮ್ಮೆ ಅರಸರ ಅಥವಾ ಅಧಿಕಾರಿಳ ದೌರ್ಜನ್ಯವನ್ನು ಪ್ರತಿಭಟಿಸಿ ಅವರ ಮೇಲೆ ಸಿಡಿದೆದ್ದಿರುವುದು. "ಯುದ್ಧ"ದ ಪ್ರಮಾಣದಲ್ಲಿ ಇದು ನಡೆಯದಿದ್ದರೂ ಇದು ಯುದ್ಧ ಎಂಬುದಾಗಿ ಗುರುತಿಸಲು ಅರ್ಹವಾಗಿದೆ.

ರಾಷ್ಟ್ರಕೂಟರಿಗೂ ಗಂಗರಿಗೂ ಹೊಯ್ಸಳರಿಗೂ ಸೇವುಣರಿಗೂ ನಡೆದ ಯುದ್ಧಗಳನ್ನು ಕರ್ನಾಟಕದ ಅರಸು ಮನೆತನಗಳಾದ ಚಾಲುಕ್ಯ, ರಾಷ್ಟ್ರಕೂಟ, ಗಂಗ, ಹೊಯ್ಸಳರಿಗೂ

---

೧ B.P. Sinha : The Art of Warfare in Ancient India. (S.I.C.H) ಪು. ೧೧೫

೨ Ajaya Mitra Shastri : Indian as seen in the Brhat Samihita of Varahamihira. ಪು. ೪೬೮

ತಮಿಳುನಾಡಿನ ಪಲ್ಲವ, ಚೋಳರಿಗೂ ನಡೆದ ಯುದ್ಧಗಳನ್ನೂ ಮೊದಲ ವಿಭಾಗಕ್ಕೆ ಸೇರಿದ ಯುದ್ಧಗಳನ್ನಾಗಿ ಉದಾಹರಣೆ ನೀಡಬಹುದು.

ಎರಡನೆಯ ವಿಭಾಗಕ್ಕೆ ಸೇರಿದ ಯುದ್ಧಗಲ ಸಂಖ್ಯೆ ಮೊದಲನೆಯದರೊಂದಿಗೆ ಹೋಲಸಿದಾಗ ಕಡಿಮೆಯೇ. ಇಂಥ ಯುದ್ಧಕ್ಕೆ ಉದಾಹರಣೆಯಾಗಿ ತನ್ನ ಚಿಕ್ಕಪ್ಪನಾದ ಮಂಗಲೀಶನೊಂದಿಗೆ ಎರಡನೆಯ ಪುಲಿಕೇಶಿ ಮಾಡಿದ ಹೋರಾಟವನ್ನು ಇಲ್ಲಿ ಸ್ಮರಿಸಬಹುದು. ಹೊಯ್ಸಳರ ಎರಡನೇ ಬಲ್ಲಾಳನು ತನ್ನ ತಂದೆಯ ವಿರುದ್ಧ ದಂಗೆ ಎದ್ದ ವಿಷಯ ವೀರಗಲ್ಲಿನ ಪಾಠವೊಂದರಿಂದ ತಿಳಿದು ಬರುತ್ತದೆ.[೩]

ಇನ್ನು ಮೂರನೆಯ ವಿಭಾಗಕ್ಕೆ ಸೇರಿದ ಯುದ್ಧಕ್ಕೆ ಕಾರಣಗಳನ್ನು ಕಲ್ಯಾಣದ ಚಾಲುಕ್ಯರಿಗೂ ಮತ್ತು ಅವರ ಸಾಮಂತರಾಗಿದ್ದ ಕಳಚೂರ್ಯರಿಗೂ ನಡೆದ ಯುದ್ಧಗಳಲ್ಲಿ ಗಮನಿಸಬಹುದಾಗಿದೆ. ಚೋಳಮಹಾದೇವಿ ಎಂಬುವಳು ಬೇವೂರಿನ ಬಗ್ಗೆ ಚಾಡಿಕೋರರು ಹೇಳಿದ ಮಾತುಗಳನ್ನು ನಿಜವೆಂದು ಗ್ರಹಿಸಿ ಬೇವೂರನ್ನು ದಾಳಿ ಮಾಡುವಂತೆ ಹೇಳುತ್ತಾಳೆ. ಅನಂತರ ತನ್ನ ಗ್ರಹಿಕೆ ತಪ್ಪು ಎಂದರಿತ ಆಕೆ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾಳೆ. ಈ ತೆರನ ತಪ್ಪುಗ್ರಹಿಕೆಗಳಿಂದ ಎಷ್ಟು ಯುದ್ಧಗಳಾಗಿವೆಯೋ ! ಎಷ್ಟು ಕೊಲೆಗಳಾಗಿವೆಯೋ ! ಚೋಳ ಮಹಾದೇವಿಯ ಹಾಗೆ ತನ್ನ ತಪ್ಪನ್ನು ಒಪ್ಪಿಕೊಂಡ ಉದಾತ್ತವ್ಯಕ್ತಿಗಳು ವಿರಳವೇ.[೪]

ನಾಲ್ಕನೆಯ ವಿಭಾಗಕ್ಕೆ ಸೇರಿದ ಯುದ್ಧಗಳನ್ನು ಇತಿಹಾಸದಲ್ಲಿ ಕ್ವಚಿತ್ತಾಗಿ ಗಮನಿಸಬಹುದಾಗಿದೆ. ಇಂತಹವು ಒಂದೆರಡೇ ಆದರೂ ಅವುಗಳನ್ನು ಗುರುತಿಸುವುದು ಬಹು ಮುಖ್ಯವೆನ್ನಿಸುತ್ತದೆ. ""ಅಗ್ರಹಾರಗಳ ಆದಾಯವು ಅಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಸಂದಾಯವಾಗುತ್ತಿತ್ತು ಇದನ್ನು ನಿರ್ಲಕ್ಷಿಸಿ ಮಹಾಮಾಂಡಳಿಕ ಬೂತಾರ್ಯನು ರೋಣಕ್ಕೆ ಬಂದು "ಭತಾಯ' ವನ್ನು (ಬಹುಶಃ ಭತ್ತಾಯ–ಭತ್ತದ ರೂಪವಾಗಿ ಕೊಡಬೇಕಾದ ತೆರಿಗೆ) ಕೊಡಬೇಕೆಂದು' ಹಿಂಸಿಸಿದಾಗ ರೋಣದ ಪಂಪಯ್ಯ ಎಂಬ ಕೌಂಡಿನ್ಯ ಗೋತ್ರದ ವೈದಿಕನು ಅಲ್ಲಿನ ಮಹಾಜನರ ಅಪ್ಪಣೆಯನ್ನು ಪಡೆದು "ನಾನೊಂದಕ್ಷತೆಯನಪ್ಪುದಮೀಯೆನೆಂದು' ನಿಶ್ಚಯಿಸಿ ಬೂತಾರ್ಯನು (ಬೂತುಗ II) ವಿರುದ್ಧ ಹೋರಾಡಿ ಮಡಿಯುತಾಎನ. ಹೀಗೆಯೇ ಇನ್ನೊಂದು ಶಾಸನಲದಲ್ಲಿ ಅಧಿಕಾರಿಯೊಬ್ಬನು ತೆರಿಗೆಯನ್ನು ಕೊಡುವಂತೆ ಹಿಂಸಿಸಿದಾಗ ಅದನ್ನು ಪ್ರತಿಭಟಿಸಿ ವೀರನೊಬ್ಬನು ಮಡಿದಂತೆ ಚಿತ್ರಿತವಾಗಿದೆ. ಎಂದರೆ ಆಡಳಿತವು ತಮ್ಮ ಹಕ್ಕುಗಳನ್ನು ತುಳಿದು ಅನ್ಯಾಯವೆಸಗಿದಾಗ

೩ M. A. R.1932. 34, ಸು. ೧೧೧೪ –೧೧೭೩

೪ E. C. V. Cn. 205, 1200

ಜನತೆಯು ಮೌನವಾಗಿ ಅದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಕೆಲವೊಮ್ಮೆ ಬಹಿರಂಗವಾಗಿ ಪ್ರತಿಭಟಿಸುತ್ತಿದ್ದರೆಂಬುದಕ್ಕೆ ಇವು ನಿದರ್ಶನಗಳು."[೫]

ಕ್ರಿ.ಶ. ೧೧೧೦೪ರ ಬಳ್ಳಾರಿ ಜಿಲ್ಲೆಯ ಕುರುವತ್ತಿಯ ಶಾಸನವು ಈ ದಿಸೆಯಲ್ಲಿ ತುಂಬಾ ಮಹತ್ವದ ಅಂಶವನ್ನು ತಿಳಿಸುತ್ತದೆ.[೬] ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ ಈ ಶಾಸನವು ಅವನ ದಂಡ ನೀತಿಯನ್ನು ಮತ್ತು ಅಧಿಕಾರಿಗಳ ಮದೋನ್ಮತ್ತ ಪ್ರವೃತ್ತಿಯನ್ನು ತಿಳಿಸುತ್ತದೆ. "ಮನ್ನೆಯ'ನಾದ 'ಬೊಪ್ಪಯ' ನೆಂಬುವನು "ಅಗ್ರಹಾರ ಗಮಡರಾದಿತ್ಯಹೊಟಲು' ಎಂಬ ಗ್ರಾಮದ ಮೇಲೆ ಆಕ್ರಮಣ ನಡೆಯಿಸಿ ಆ ಊರನ್ನು ಸೂರೆಗೊಂಡದಷ್ಟೇ ಅಲ್ಲ, ಬ್ರಾಹ್ಮಣರನ್ನೂ ಕೊಲ್ಲುತ್ತಾನೆ. ಈ ವಿಷಯವನ್ನು ಅಗ್ರಹಾರ ಗಂಡರಾದಿತ್ಯಹೊಟಲಿನ ಮಹಾಜನಂಗಳು ಚಾಲುಕ್ಯ ವಕ್ರಮಾದಿತ್ಯನಿಗೆ ಬಿನ್ನವಿಸುತ್ತಾರೆ. [ಚಾಳುಕ್ಯ ವಿಕ್ರವ ವರ್ಷದ ೨೯ನೆಯ ತಾರಣ ಸಂವತ್ಸರದ ವೈಶಾಖ ಶುದ್ಧ ತದಿಗೆ ಆದಿತ್ಯವಾರದಂದು ಅಗ್ರಹಾರಂ ಗಂಡರಾದಿತ್ಯನ ಹೊಟಲ ಮಹಾಜನಂಗಳು ಮನ್ನೆಯ ಬೊಪ್ಪಯಂ ಹೊಟಲನಿಱಿದು ಸರ್ವ್ವಸ್ವ ಹರಣಂ ಮಾಡಿ ಸೂರೆ ಗೊಂಡುದುಮಂ ಬ್ರಾಹ್ಮಣರಂ ಕೊಂದುದುಮಂ ಚಕ್ರವರ್ತ್ತಿಗೆ ಬಿನ್ನಪಂಗೆಯ್ಯಲು]. ಜನರ ಈ ಬಿನ್ನಹವನ್ನು ಕೇಳಿದ ವಿಕ್ರಮಾದಿತ್ಯ ಬೊಪ್ಪಯನನ್ನು ದಂಡಿಸಿ ಅವನ 'ಮನ್ನೆಯ' ಅಧಿಕಾರವನ್ನು ಕಸಿದುಕೊಳ್ಳುತ್ತಾನೆ. ಚಕ್ರವರ್ತ್ತಿಯ ಮಾತಿನಂತೆ ಅವನು ತಾನು ಮನ್ನೆಯತನವನ್ನು ಮಾಡುವುದಿಲ್ಲವೆಮದು ಆಣೆಪತ್ರ ಕೊಡುತ್ತಾನೆ. [ಬೊಪ್ಪನಂ ಕರೆದು ನೀನುಂ ನಿನ್ನ ವಂಶದವರುಂ ಹೊಟಲಮನ್ನೆಯಮಂ ಮಾಣ್ಬುದೆನ್ದು ಮಾಣಿಸಲಾತನು ಮನ್ನೆಗೆಯ್ವೆನೆಂದು ಆಣೆಪತ್ರಮಂ ಕೊಟ್ಟು.] ಅರಸನು ಬೊಪ್ಪನ ಈ ವಿಷಯವನ್ನು ಕುರಿತಂತೆ ಶಾಸನಗಳನ್ನು ಹಲವಾರು ಕಡೆ ಹಾಕಿದಂತೆ ಶಾಸನದ ಪಾಠದಿಂದ ತಿಳಿದುಬರುತ್ತದೆ. ಈ ನಿದರ್ಶನವು ಪ್ರಾಚೀನ ಕನ್ನಡ ಜನತೆ ತಮಗಾದ ಅನ್ಯಾಯಗಲನ್ನು ನುಂಗಿಕೊಂಡು ಇರುತ್ತಿರಲಿಲ್ಲ. ತಮಗಾದ ಅನ್ಯಾಯವನ್ನು ತಮ್ಮ ಪ್ರಭುವಿಗೆ ನಿವೇದಿಸುತ್ತಿದ್ದರು. ಜನರ ಕಷ್ಟ ಸುಖಗಳನ್ನು ಅರಸರಾದವರು ಗಮನಿಸುತ್ತಿದ್ದರು. ನಿರ್ವಾಹವಿಲ್ಲದಾಗ ಜನ ಸಿಡಿದೇಳುತ್ತಿದ್ದರು ಎಂಬ ಅಂಶವನ್ನು ತಿಳಿಸುತ್ತದೆ.

ಯುದ್ಧ ಎಂಬುದು ಮಾನವ ತನ್ನ ವೈಯಕ್ತಿಕ ಪ್ರತಿಷ್ಠೆ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲು ನಡೆಸಿದ ಪ್ರಯತ್ನಗಳ ಫಲ. ಇದು ಜನಾಂಗಗಳ ನಡುವೆ ಇದ್ದ, ಇರುವ ಬದ್ಧಮತ್ಸರದ ಫಲವಾಗಿ ಮಾನವ ಜನಾಂಗವೇ ತನ್ನ ಅಳಿವಿಗಾಗಿ ಮಾಡಿಕೊಂಡ ಒಂದು ಸ್ವಯಂಕೃತಾಪರಾಧ ಯುದ್ಧದ

---

೫ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೪೦೫

೬ ಶಾಸನ ಸಂಚಯ : (ಸಂ.) ಎ. ಎಂ. ಅಣ್ಣೀಗೇರಿ, ಮೇವುಂಡಿ ಮಲ್ಲಾರಿ

ಪ್ರಾಚೀನ ಸ್ವರೂಪವನ್ನು ಗಮನಿಸಿ ಹೇಳುವುದಾದರೆ, ಯುದ್ಧವೆಂಬುದು ಮನುಷ್ಯ ತನ್ನನ್ನು ಸೇವಿಸುವ ದಾಸರನ್ನು ಸೆರೆಹಿಡಿಯುವ ಸಲುವಾಗಿ ಮಾಡಿದ ಹೋರಾಟ. ಪ್ರಾಚೀನ ಗ್ರೀಕ್ ತತ್ವವಾದ ಅರಿಸ್ಟಾಟಲನ ಅಭಿಪ್ರಾಯದಲ್ಲಿ ಯುದ್ಧವೆಮಬುದು ದಾಸರನ್ನು ಅಡಿಯಾಳುಗಳನ್ನಗಿ ಪಡೆಯುವ ಒಂದು ಸಾಧನ. ಮಧ್ಯಯುಗದ ಪ್ರಪಂಚದ ಎಲ್ಲಾ ಅರಸರು ಮಾಡಿದ ಯುದ್ಧಗಳ, ಹೋರಾಟಗಳ ಮುಖ್ಯ ಉದ್ದೇಶವೆಂದರೆ ಭೂಮಿಯನ್ನು ತಮ್ಮ ವಶಪಡಿಸಿಕೊಂಡು ಅದರಿಂದ ಬರುವ ಲಾಭವನ್ನು ಅನುಭವಿಸುವುದು. ಬಂಡವಾಳಶಾಹಿ ಯುಗದಲ್ಲಿ ಯುದ್ಧವೆಂಬುದು ತಮ್ಮ ಮೂಲ ಬಂಡವಾಳವನ್ನು ಹೆಚ್ಚಿಸುವ ಒಂದು ತಂತ್ರ ಅಥವಾ ವಿಧಾನವಾಯಿತು. ಕೈಗಾರಿಕಾ ಬಂಡವಾಳಶಾಯಿ ಯುಗದಲ್ಲಿ, ಯುದ್ಧವೆನ್ನುವುದು ಬಂಡವಾಳ ಶಾಹಿಗಳು ತಮ್ಮ ಕೈಗಾರಿಕೆಗೆ ಕಚ್ಚಾ ಸಾಮಗ್ರಿಗಳನ್ನು ಪುಕ್ಕಟೆಯಾಗಿ ಪಡೆಯುವ ಉದ್ದೇಶದಿಂದ ಭೂಪ್ರದೇಶಗಳನ್ನು ಆಕ್ರಮಿಸುವ ಒಂದು ತಂತ್ರವಾಯಿತು.[೭]

ಈ ಎಲ್ಲಾ ಉದ್ಧೇಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಿದ ಲೆನಿನ್ ಹಾಗೂ ಇತರ ಮಾರ್ಕ್ಸ್ ಸಿದ್ಧಾಂತವಾದಿಗಳು ಯುದ್ಧಗಳನ್ನು ಮೂಲಭೂತವಾಗಿ ಎರಡು ವಿಭಾಗಗಳಲ್ಲಿ ಗುರುತಿಸುತ್ತಾರೆ.

೧. ಸಕಾರಣ ಯುದ್ಧಗಳು, ಪ್ರಗತಿಗಾಮಿ ಯುದ್ಧಗಳು (Just, Progressive Wars.)

೨. ವಿನಾಕಾರಣ ಯುದ್ದಗಳು, ಪ್ರತಿಗಾಮಿ ಯುದ್ಧಗಳು(Unjust, Reactionary wars)

ಪ್ರಗತಿಗಾಮಿ ಯುದ್ಧಗಳು ತಮ್ಮನ್ನು ಆಳುತ್ತಿರುವ, ಶೋಷಿಸುತ್ತಿರುವ ಇತರೆ ಶಕ್ತಿಗಳ ವಿರುದ್ಧ ಜನ ರೊಚ್ಚಿಗೆದ್ದು ತಮ್ಮ ಸ್ವಾತಂತ್ರ್ಯಕ್ಕಾಗಿ ಮಾಡುವ ಸಾಮೂಹಿಕ ಹೋರಾಟ. ಪ್ರತಿಗಾಮಿ ಯುದ್ಧಗಳು ಒಬ್ಬ ಸಾಮ್ರಾಜ್ಯಶಾಹಿ ಅರಸು ಮತ್ತೊಬ್ಬ ಸಾಮ್ರಾಜ್ಯಶಾಹಿಯ, ದೇಶದ ಭೂಮಿಯನ್ನೋ, ಸಂಪತ್ತನ್ನೋ ದೇಶದ ಹೆಸರಿನಲ್ಲಿ ತನ್ನ ಸ್ವಂತಕ್ಕಾಗಿ ಅಪಹರಿಸಲು ನಡೆಸುವ ಹೋರಾಟ.

ಯುದ್ಧವೆಂಬುದು ಎರಡುಪಕ್ಷಗಳಿಗೆ ನಡೆಯುವ ಘರ್ಷಣೆಯಾದ ಕಾರಣ. ಅದನ್ನು ಇಂತಹುದೇ ಉದ್ಧೇಶದಿಂದ ಮಾಡಲಾಗಿದೆ ಎಂದು ಹೇಳುವಲ್ಲಿ ಯಾವಪಕ್ಷದ ದೃಷ್ಟಿಯಿಂದ ಈ ಉದ್ದೇಶ ಸತ್ಯ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ. ಯಾವುದೇ ಯುದ್ಧವನ್ನು

---

೭ B. Uralanis : Wars and population. ಪು. ೫

ಗಮನಿಸಿದಾಗ ಅದು ಎರಡೂ ಕಡೆಯವರ ದೃಷ್ಟಿಯಲ್ಲಿ ಪ್ರತಿಗಾಮಿಯಾಗಿರಲೂ ಸಾಧ್ಯ ಅಥವಾ ಪ್ರತಿಗಾಮಿ ಶಕ್ತಿಯೊಡನೆ ಪ್ರಗತಿಗಾಮಿಗಲು ಮಾಡಿದ ಹೋರಾಟವಾಗಿರಲಿಕ್ಕೂ ಸಾಧ್ಯ[೮] ಆದರೆ ಯುದ್ಧವೊಂದು ಎರಡೂ ಕಡೆಯಿಂದಲೂ ಪ್ರಗತಿಗಾಮಿಯಾಗಿದೆ ಎಂಬುದಾಗಿ ತೀರ್ಮಾನಿಸುವುದು, ನಿರ್ಣಯಕ್ಕೆ ಬರುವುದು ಅಸಾಧ್ಯದ ಮಾತೇ ಆಗುತ್ತದೆ.

ಈ ದೃಷ್ಟಿಯಿಂದ ಕರ್ನಾಟಕದಲ್ಲಿ ನಡೆದ ಯುದ್ಧಗಳನ್ನು ಗಮನಿಸಿದಾಗ ಈ ಯುದ್ಧಗಳೆಲ್ಲವೂ ಸಾಮ್ರಾಜ್ಯಶಾಹಿಯ ಪರವಾಗಿ ನಡೆದ ಪ್ರತಿಗಾಮ ಯುದ್ಧಗಳೇ ಆಗಿವೆ ಎಂದು ಹೇಳಬೇಕಾಗುತ್ತದೆ. ಆದರೂ ಪ್ರಗತಿಗಾಮಿ ಯುದ್ಧಗಲು ತಮ್ಮ ಸೀಮಿತಮಿತಿಯಲ್ಲಿ ಆಗಿರುವುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ಪುರಾವೆಗಳೂ ದಾಖಲೆಗಳೂ ದೊರೆಯದ ಇನ್ನೂ ಅನೇಕ ಪ್ರಸಂಗಗಳು ಕಾಲಗರ್ಭದಲ್ಲಿ ಅಡಗಿರಲಿಕ್ಕೂ ಸಾಧ್ಯ. ಭಾರತದಲ್ಲಿ ನಡೆದ ಮೊದಲನೆಯ ಹಿರಿಯ ಪ್ರಗತಿಗಾಮಿ ಹೋರಾಟವೆಂದರೆ, ಇಲ್ಲಿ ನೆಲೆಯೂರಿದ್ದ ಬ್ರಿಟೀಷ್ ಸಾಮ್ರಾಜ್ಯದ ವಿರುದ್ಧ ಅಖಂಡಭಾರತದ ಜನ ನಡೆಸಿದ ಸ್ವಾತಂತ್ರ್ಯಹೋರಾಟ. ಇದೇ ಪ್ರಾಯಶಃ ಕೊನೆಯ ಹೋರಾಟವೆಂದು ಹೇಳಲಾಗದು. ಏಕೆಂದರೆ ಹೋರಾಟದ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವಾಗ ಮತ್ತು ಯಾವರೀತಿಯ ಸಮಾಜವ್ಯವಸ್ಥೆ ತನ್ನನ್ನು ಸುಖವಾಗಿಡಬಲ್ಲುದು ಎಂಬುದನ್ನು ಅರಸುತ್ತಾ ಹೋಗುವ ಸಮಾಜ ತನ್ನ ಪ್ರಗತಿಗಾಗಿ ಅಡ್ಡಲಾಗಿರುವ, ತಾನು ಪ್ರತಿಗಾಮಿ ಎಂದು ಭಾವಿಸುವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹೋರಾಡ ನಡೆಸೇ ನಡೆಸುತ್ತದೆ. ಈ ರೀತಿಯ ಹೋರಾಟ ಒಂದು ದೇಶದ ಜೀವಂತಿಕೆಯ ಲಕ್ಷಣಕೂಡ ಎಂಬುದನ್ನು ಮರೆಯಬಾರದು.

ವೀರರ ಪಂಥಗಳು

ಯುದ್ಧಕ್ಕೆ ಹೊರಡುವ ಮುನ್ನ ವೀರರಾದವರು, ಉತ್ಸಾಹದಿಂದ ತಮಗೆ ತಮ್ಮ ಸ್ವಾಮಿಯ ಬಗ್ಗೆ ಇರುವ ವಿಶೇಷ ಅಭಿಮಾನದಿಂದ, ತಮ್ಮ ವೀರತನದ ಬಗ್ಗೆ ಇದ್ದ ಸ್ವಾಭಿಮಾನದಿಂದ ಪಂಥಗಲನ್ನು ತೊಡುತ್ತಿದ್ದರು. ಹೀಗೆ ವೀರರು ಯುದ್ಧಕ್ಕೆ ಹೊರಡುವ ಮುನ್ನ ಪಂಥಗಳನ್ನು ತೋಡುತ್ತಿದ್ದರು ಎಂಬುದಕ್ಕೆ ಭಾರತೀಯ ಸಾಹಿತ್ಯದಲ್ಲಿ ವಿಪುಲವಾಗಿ ನಿದರ್ಶನಗಳು ದೊರೆಯುತ್ತವೆ. ಈ ಬಗ್ಗೆ ನಮಗೆ ಅತ್ಯಮೂಲ್ಯವಾದ ಮಾಹಿತಿ ದೊರೆಯುವುದು ತಮಿಳಿನ

---

೮ ಅದೇ, ಪು. ೭–೮

ಸಂಗಮ್ ಸಾಹಿತ್ಯದಲ್ಲಿ. ಅಂದಿನ ವೀರರು, ಅರಸರೂ ತೊಡುತ್ತಿದ್ದ ಪ್ರತಿಜ್ಞೆಗಳಲ್ಲಿ ಕೆಲವು ಹೀಗೆವೆ: ""ಯುದ್ಧದಲ್ಲಿ ಜಯಗಳಿಸುವವರೆಗೆ ನಾನು ಯಾವುದೇ ರೀತಿಯ ಆಹಾರವನ್ನು ಸ್ವೀಕರಿಸುವುದಿಲ್ಲ", ""ಎಂತಹ ದುಃಸ್ಥಿತಿ ಒದಗಿದರೂ ರಣರಂಗದಿಂದ ಓಡಿ ಹೋಗುವುದಿಲ್ಲ." ಈ ರೀತಿ ಪ್ರತಿಜ್ಞೆ ತೊಡುವುದೂ ಒಂದು ಯುದ್ಧ ಸಂಪ್ರದಾಯವಾಗಿತ್ತೆಂಬುದಾಗಿ ಸಂಗಮ್ ಸಾಹಿತ್ಯದಿಂದ ತಿಳಿದು ಬರುತ್ತದೆ.[೯]

ಕನ್ನಡ ನಾಡಿನ ಸಾಹಿತ್ಯ ಕೃತಿಗಳಿಂದಲೂ ಈ ರೀತಿಯ ಸಂಪ್ರದಾಯ ಕರ್ನಾಟಕ ದಲ್ಲಿಯೂ ಇತ್ತು ಎಂಬ ವಿಷಯ ತಿಳಿಯುತ್ತದೆ. ಪಂಪನು ವಿಕ್ರಮಾರ್ಜುನ ವಿಜಯದಲ್ಲಿ ಯುದ್ಧದ ಬಿಡಾರಗಳಲ್ಲಿನ ವೀರರು ತಮ್ಮ ಜೋಳದ ಋಣವನ್ನು ತೀರಿಸಲು ಮತ್ತು ತಮ್ಮ ಪರಾಕ್ರಮವನ್ನು ಯುದ್ಧರಂಗದಲ್ಲಿ ತೋರಿಸಲು ಉದ್ಯುಕ್ತರಾಗುವುದಕ್ಕೆ ಮುನ್ನ "ವೀರಾಲಾಪ"ಗಳನ್ನು ಹೇಗೆ ಮಾಡುತ್ತಿದ್ದರು ಎಂಬುದನ್ನು ಸವಿಸ್ತಾರವಾಗಿ ಹತ್ತನೆಯ ಆಶ್ವಾಸದಲ್ಲಿ ತಂದಿದ್ದಾನೆ. ಪಂಪನ ಈ ವರ್ಣನೆಯನ್ನು ಇಲ್ಲಿ ಸವಿಸ್ತಾರವಾಗಿ ಚರ್ಚಿಸುವುದು ಸಾಧ್ಯವಿಲ್ಲವಾದರೂ ಸ್ವಲ್ಪಮಟ್ಟಿಗೆ ಗಮನಿಸಿ ಮುಂದುವರಿಯುವುದು ಸೂಕ್ತವೆಂದು ತೋರುವುದರಿಂದ ಒಂದು ಉದಾಹರಣೆಯನ್ನು ನೋಡಿ ಮುಂದುವರಿಯುತ್ತೇವೆ.

ಬಿಡಾರದಲ್ಲಿನ ವೀರನೊಬ್ಬನು ಉತ್ಸಾಹದಿಂದ ಈ ರೀತಿ ವೀರಾಲಾಪ ಮಾಡುತ್ತಾನೆ :

ಸುರಲೋಕಂ ದೊರೆಕೊಳ್ವುದೊಂದು ಪರಮಶ್ರೀ ಲಕ್ಷ್ಮಿಯುಂ ಬರ್ಪುದಾ
ದರದಿಂ ದೇವನಿಕಾಯದೊಳ್ ನೆರವುದೊಂದುತ್ಸಾಹಮುಂ ತನ್ನವೊ
ಯ್ಸಿರಿ ಭಾಗ್ಯಂ ನೆರೆವಪ್ಪುದೊಂದೆ ರಣದೊಳ್ ಗೆಲ್ದಾಜಿಯಂ ತಳ್ತು ಸಂ
ಗರದೊಳ್ ಜೋಳದಪಾಟಿಯಂ ನೆರಪಿದವಂ ಗಂಡಂ ಪೆಱಂ ಗಂಡನೇ[೧೦]

ಪಂಪನು ಚಿತ್ರಿಸಿರುವ ಈ ವೀರ ಅಥವಾ ವೀರರ ಆಲಾಪ ಸಮಕಾಲೀನ ಸಮಾಜದಲ್ಲಿ ಅವನು ಕಂಡ ವಾಸ್ತವ ಚಿತ್ರಣವಾಗಿದೆ ಎಂಬ ಅಂಶ, ವೀರಗಲ್ಲುಗಳ ಪಾಠವನ್ನು ಮತ್ತು ಅವುಗಳ ಸಂಖ್ಯೆಯನ್ನು ಗಮನಿಸಿದಾಗ ಸುವ್ಯಕ್ತವಾಗುತ್ತದೆ.

ಪಂಪನ ವರ್ಣನೆಯಿಂದ ಪ್ರಭಾವಿತನಾಗಿಯೋ ಅಥವಾ ತನ್ನ ಕಾಲದ ವೀರರ ಪಂಥ ಮಾತುಗಳನ್ನು ಗಮನಿಸಿಯೋ, ನಂಜುಂಡಕವಿ ತನ್ನ "ರಾಮನಾಥ ಚರಿತೆ"ಯ ಮೂರನೆಯ ಆಶ್ವಾಸದ ಮೂರನೆಯ ಸಂಧಿಯಲ್ಲಿ ವೀರರ ಪಂಥವಾತುಗಳ ಸುದೀರ್ಘವಾದ ವರ್ಣನೆಯನ್ನು ತಂದಿದ್ದಾನೆ.[೧೧]

---

೯ N. Subramani : The Sangam Polity.ಪು. ೧೪೫

೧೦ ಪಂಪ : ವಿಕ್ರಮಾರ್ಜುನ ವಿಜಯ. ೧೦–೪೩

೧೧ ನಂಜುಂಡ : ರಾಮನಾಥ ಚರಿತೆ ಭಾ– ೩–೩–೩.

ಇದೇ ರೀತಿಯ ಪಂಥ ಪಾಡುಗಳು ಜಾನಪದ ವೀರಗೀತೆಗಳಲ್ಲಿಯೂ ದೊರೆಯುತ್ತವೆ. ಶತ್ರುಗಳಿಗೆ ತನ್ನ ಮೂರು ಆನೆಗಳು ನಾಲ್ಕು ಫಿರಂಗಿಗಳು ವಶವಾಗಿ ಆ ಹೋರಾಟದಲ್ಲಿ ತನ್ನ ಕಡೆಯ ಐವತ್ತಕ್ಕೂ ಮಿಗಿಲಾದ ಕಾಲಾಳುಗಳು, ಅಷ್ಟೇ ಅಲ್ಲ ತನ್ನ ಮಗನೂ ಮತ್ತೆ ಕೆಲವರು ಆಪ್ತರು ಮಡಿದ ಸುದ್ದಿಯನ್ನು ಕೇಳಿದ ಮದಕರಿಯು ಕೋಪಗೊಂಡು ""ಕಳೆದು ಹೋದ ಫಿರಂಗಿಯನು ತರಿಸದಿರ್ದೊಡೆ ಬೆಳೆದ ಈ ಮಿಸೆಯನು ತುರುಚಿ ಹುಲ್ಲೆಂದು ಕರಿಸೆ ಉಚ್ಚಂತಿ" ಎಂದು ಉತ್ಸಾಂಬೆಯ ಸಾನಿಧ್ಯದಲ್ಲಿ ಶಪಥ ಮಾಡುತ್ತಾನೆ. ಈ ಶಪಥದಂತೆ ಅವನು ಅವುಗಳನ್ನು ಹಿಂತಿರುಗಿ ಪಡೆಯುತಾನೆ.[೧೨]

ಈ ಅಂಶ ಕರ್ನಾಟಕದ ವೀರಗಲ್ಲುಗಳಲ್ಲಿ ವಿರಳವಾಗಿ ವ್ಯಕ್ತವಾಗಿದೆ. ಕ್ರಿ.ಶ. ೯೪೦ರ ಶ್ರಾಬೆಳಗೊಳದ ವೀರಗಲ್ಲೊಂದರಿಂದ ಗಂಗರ ಅರಸನೊಬ್ಬನ ಲೆಂಕನಾದ ಬೊಯಿಗನೆಂಬುವನು ಯುದ್ಧಕ್ಕೆ ಹೊರಡುವ ಮುನ್ನವೇ ತನ್ನ ಸಾವನ್ನು ನಿಶ್ಚಯಿಸಿ ಯುದ್ಧಕ್ಕೆ ಹೊರಡುತ್ತಾನೆ, ಎಂಬ ವಿಷಯ ತಿಳಿಯುತ್ತದೆ.[೧೩] ಕ್ರಿ.ಶ. ೧೨೧೭ರ ಒಂದು ವೀರಗಲ್ಲಿನಿಂದ ಎರಡೂ ಕಡೆಯ ನಾಯಕರೂ ಯಾವ ರೀತಿ ಪಂಥಗಳನ್ನು ತೊಟ್ಟು ಯುದ್ಧ ನಿರತರಾಗುತ್ತಿದ್ದರೆಂಬ ಅಂಶ ತಿಳಿಯುತ್ತದೆ.[೧೪] ಸೇವುಣರ ಕಡೆಯ ವೀರನೊಬ್ಬನು ""ಹೊಸ ಬಿರುದರ ಗಂಡ ಲಂಕೆಯನಾಯ್ಕ ದ್ವಾರಸಮುದ್ರಮಂ ನಿಮಿಷಮಾತ್ರದಿಂ ಕೊಂಡಪೆನೆಂದು" ಬಂದು ದ್ವಾರಸಮುದ್ರವನ್ನು ಮುತ್ತಿದಾಗ ಹೊಯ್ಸಳರ ಕಡೆಯ ""ಚಮೂಧರ ಚಿಕ್ಕಕೇತಣಂ ವೈರಿಯ ನಾಗೆಲ್ಲನೆನಲಂಕನು ತಾಂ ನುಡಿದಂ ಸಮಗ್ರದಿಂ" ಪಂಥತೊಟ್ಟು ಯುದ್ಧಕ್ಕೆ ಹೊರಡುತ್ತಾನೆ. ವೀರರ ಪಂಥಗಳನ್ನು ತರುವ ಬದಲು ಶಾಸನಕಾರ ""ಜಿತೇನ ಲಭ್ಯತೇ ಲಕ್ಷ್ಮೀ"[೧೫] ಎಂಬ ಅಥವಾ ""ದ್ವಾವಿಮೌಪುರುಶೌ ಲೋಕೇ" ಎಂಬ ಶ್ಲೋಕಗಳನ್ನೇ ಅನೇಕ ಕಡೆ ಬಳಸಿ ಅದರ ಮುಂದೆ ""ಎಂಬ ನ್ಯಾಯವಂ ಕೈಕೊಂಡು" ಎಂಬ ವಾಕ್ಯವನ್ನಿಟ್ಟಿರುವುದನ್ನು ಇದಕ್ಕೆ ನಿದರ್ಶನಗಲಾಗಿ ನೋಡಬಹುದು.

ಯುದ್ಧದ ಸಮಯದಲ್ಲಿ ವೀರರಾದವರು ತಮ್ಮ 'ಬಿರುದು ಬಾವಲಿ'ಗಳನ್ನು ಹೇಳಿಕೊಂಡು 'ಅದರಂತೆ ಹೋರಾಡುತ್ತೇವೆ. ಆ ಬಿರುದುಗಳನ್ನು ಸಾರ್ಥಕಪಡಿಸಕೊಳ್ಳುತ್ತೇವೆ' ಎಂಬಂಥ ವೀರೋಚಿತವಾದ ಮಾತುಗಳನ್ನು ಆಡುವುದು ಅಂದಿನ ಕಾಲದಲ್ಲಿ ಸಹಜವಾಗಿತ್ತೆಂದು ಕಾಣುತ್ತದೆ.

---

೧೨ ಹಲ್ಲೂರು ಶ್ರೀನಿವಾಸ ಜೋಯಿಸ್ 'ಪಾಳೆಯಗಾರರ ಜನಪದ ಗೀತೆಗಳು' (ಹಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಪು. ೧೪೪)

೧೩ E. C. II. Sb. 138, 940 "ರಕ್ಕಸಮಣಿ ಕೋಣೆಯ ಗಂಗನ ಕಾಳೆಗದೊಳ್ತನ್ನ ಸಾವಂ ನಿಶ್ಚಯಿಸಿ ಕಿಡೆ".

೧೪ E. C. V. BI. 165, 1217]

೧೫ E. C. VII. Sk. 307, 308, 1016

ಕ್ರಿ.ಶ. ೧೨೨೮ರ ಒಂದು ವೀರಗಲ್ಲಿನ ಪಾಠದಿಂದ ಈ ರೀತಿಯ ಒಂದು ಉದಾಹರಣೆ ದೊರೆಯುತ್ತದೆ. ಬೇಡರು ಮಾಡುವ ಉಪಟಳವನ್ನು ಸಹಿಸದೆ ಅವರನ್ನು ಶಿಕ್ಷಿಸಬೇಕೆಮದು ಅರಸನು ವೀರಂಣ ಒಡೆಯರನ್ನು ಕಳುಹಿಸಿದಾಗ ತಿರುಕವ್ರುಡನು ""ನಾವು ಆಡಿದ ಭಾಷೆಗೆ ತಪ್ಪುವರಲ್ಲ. ಶ್ರೀ ವೀರಪ್ರತಾಪ ಹರಿಹರ ಮಹಾರಾಜರು, ಶ್ರೀ ಮನ್ಮಹಾಪ್ರಧಾನ ಗುಂಡಪ ದಂಣಾಯಕರು ಮೂವರರಾಯರಗಂಡನೆಂಬ ಬಿರುದನ್ನು ಕೊಟ್ಟು ಯಿದಾರು ನಂದು ಬಿರಿದುಪಾಡು ಎಹಗೆಯಿದ್ದಿತು ಆ ಉಪಾಧಿಯಲಿ ಬೇಡರ ದಳವಂ ಮುಱೆಯಲಿಕ್ಕುವೆನು ಎಂದಪಚಾರಿಸಿ." ಬೇಡರಮೇಲೆ ತಾನೇ ಹೋಗುತ್ತಾನೆ.[೧೬] ಈ ಶಾಸನಕ್ಕಿಂತಲೂ ವಿವರವಾಗಿ ಬಿರುದುಬಾವಲಿಗಳ ವಿಷಯ ತಿಳಿಯುವುದು ಕ್ರಿ.ಶ. ೧೫೨೨ ರ ಕಾಯ್ಕಿಣಿಯ ವೀರಗಲ್ಲಿನಿಂದ ; ನಗಿರಿರಾಜ್ಯ ಹೈವ, ತುಳು ಕೊಂಕಣಗಳನ್ನು ಆಳುತ್ತಿದ್ದ ದೇವರಾಯ ಒಡೆಯರಿಗೂ, ಗೋವೆಯ [ಪೆ] ರಂಗದ ಕಪಿತನಿಗೂ ನಡೆದ ಯುದ್ಧದಲ್ಲಿ ""ವೀರನಾಯಕ ಹೊಲೆಯ ಬಳಿಯ ಬಿರುದಿನ ಅಂಗಯಿರುನಾಯ್ಕ ತನ್ನ ಅನ್ವಯದ ಬಿರುದಿನ ಮೂಱುಕಂಕಣ ಗೂಳಿಯ ಹರಿಗೆ ಚಿಂನದಕಕ್ಕಡೆ ಹಿಡಿದು ಭಾಷೆನುಡಿದು ತಾನು ತಂನವ್ರೋಲೆಯೆಕಾಱರನು ಕೂಡಿಕೊಂಡು ತಂನಹದ ಹೆಗ್ಗಡೆ ಸಹವಾಗಿ" ಯುದ್ಧಕ್ಕೆ ಹೊರಡುತ್ತಾನೆ.[೧೭]

ರಣವೀಳ್ಯ

ಭಾರತೀಯ ಸಂಸ್ಕೃತಿಯಲ್ಲಿ "ತಾಂಬೂಲ"ಕ್ಕೆ ವಿಶೇಷ ಗೌರವಿರುವುದನ್ನು ನಾವು ಇಂದಿಗೂ ಗಮನಿಸಬಹುದು.[೧೮] ಶುಭಸಂದರ್ಭಗಳಲ್ಲಿ ಇದನ್ನು ಜನರಿಗೆ ಕೊಡುವುದು ಒಂದು ಗೌರವದ ಸಂಕೇತ. ಯುದ್ಧಕ್ಕೆ ಹೊರಡುವ ಮುನ್ನ ವೀರನಾದವನಿಗೆ ತಾಂಬೂಲವನ್ನು ಕೊಟ್ಟು ಅರಸರು ಕಳುಹಿಸುತ್ತಿದ್ದರೆಂಬ ಅಂಶ ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ. ಕ್ರಿ.ಶ. ೧೨೭೫ರ ವೀರಗಲ್ಲೊಂದರಿಂದ, ಶತ್ರುಗಳು ಬಂದು ಧಾಳಿಮಾಡಿ ಆಳುಕುದುರೆಗಳನ್ನು ನಾಶಮಾಡಿದಾಗ "ಸಿರಿಗ"ನೆಂಬುವನು ""ವೀಳೆಯವಂ ಕಳೆದುಕೊಂಡು ಜವಾದಿ ಸಿರಿಗಂಧ"ಗಳನ್ನು ಲೇಪನ ಮಾಡಿಕೊಂಡು ಯುದ್ಧಕ್ಕೆ ಹೊರಡುತ್ತಾನೆ[೧೯] ಎಂಬ ವಿಷಯವು ತಿಳಿಯುತ್ತದೆ. ಶತ್ರುಗಳು

---

೧೬ E. C. VIII. Nr. 29, 1228

೧೭ KI. I. 69, 1522

೧೮ ಡಾ॥ ಕೆ. ಶ್ರೀಕಂಠಯ್ಯ : 'ಕನ್ನಡ ಕಾವ್ಯಗಳಲ್ಲಿ ತಾಂಬೂಲ ಚರ್ವಣ'. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ. ಸಂ. ೬೬. ಸಂ. ೧, ಪು. ೨೬–೩೪

೧೯ E. C. VIII. TI. 26, 1275

ಬಂದು ಹೊಸಗುಂದವನ್ನು ಮುತ್ತಿಗೆ ಹಾಕಿದಾಗ ಅರಸನು ವೀರನೊಬ್ಬನನ್ನು ""ಕರೆದು ವೀಳೆಯಮಂ ಕೊಟ್ಟು ಕಾಳಗಕ್ಕೆ ನಡೆಯೆಂಬುದುಂ", ಆ ವೀರನು ಯುದ್ಧಕ್ಕೆ ಹೋಗಿ ಹೋರಾಡಿ ಸಾಯುತ್ತಾನೆ ಎಂಬ ವಿಷಯ ಸಾಗರ ತಾಲ್ಲೂಕಿನ ವೀರಗಲ್ಲಿನಿಂದ ತಿಳಿಯುತ್ತದೆ.[೨೦] ಮತ್ತೊಂದು ವೀರಗಲ್ಲು ಅರಸನು ವೀರನೊಬ್ಬನಿಗೆ ""ವೀಳೆಯಮಂ ಮನಿಸಿ ಕಾದಿ ಕಾಳೆಗಕನುವಾಗುಯೆಂದು ಬೆಸನಂ ಕೊಡಲು", ಆ ವೀರನು ""ವೀಳೆಯಮಂ ಕಳೆದುಕೊಂಡಾಳ್ದನ ಕಯ್ಯೊಳು" – ಎಂಬ ತನ್ನ ಯಜಮಾನನ ಕೈಯಿಂದ ವೀಳೆಯವನ್ನು ತೆಗೆದುಕೊಂಡು ಯುದ್ಧಕ್ಕೆ ಹೋಗಿ ಸಾಯುತ್ತಾನೆ ಎಂದು ಹೇಳುತ್ತದೆ.[೨೧] ಕ್ರಿ.ಶ. ೧೨೯೨ರ ಮತ್ತೊಂದು ವೀರಗಲ್ಲಿನ ಪಾಠದಿಂದ ವೀರನನ್ನು ""ಕರೆದು ವೀಳೆಯಮಂ ಕೊಟ್ಟು" ಸಮಸ್ತ ಬಲವನ್ನು ಕೂಡಿಕೊಂಡು ನಡೆ ಎಂದು ಅರಸನು ಆಜ್ಞಾಪಿಸುತ್ತಾನೆ ಎಂದು ತಿಳಿಯುತ್ತದೆ.[೨೨] ಕ್ರಿ.ಶ. ೧೩೧೦ರ ಮತ್ತೊಂದು ವೀರಗಲ್ಲಿನಿಂದ ವೀರಬಲ್ಲಾಳನು ಸಂಗಮನೆಂಬುವ ವೀರನನ್ನು ಯುದ್ಧಕ್ಕೆ ವೀಳೆಯವನ್ನು ಕೊಟ್ಟು ಕಳುಹಿಸಿದನೆಂದು ತಿಳಿದುಬರುತ್ತದೆ.[೨೩]

ಯುದ್ಧದ ನಿಯಮಗಳು

ಭಾರತೀಯ ಸಾಹಿತ್ಯ ಕೃತಿಗಳಿಂದ ಪ್ರಾಚೀನ ಭಾರತದಲ್ಲಿ ಯುದ್ಧಭೂಮಿಯಲ್ಲಿ ಕೆಲವಾರು ನಿಯಮಗಳನ್ನು ಅನುಸರಿಸುತ್ತಿದ್ದಂತೆ ತಿಳಿದುಬರುತ್ತದೆ. ಈ ನಿಯಮಗಳು, ವೀರನಾದವನು ಯಾರೋಂದಿಗೆ ಯುದ್ಧ ಮಾಡಬೇಕು, ಯಾರೊಂದಿಗೆ ಮಾಡಬಾರದು, ಯಾವಾಗ ಮಾಡಬಾರದು, ಯಾರನ್ನು ರಕ್ಷಿಸಬೇಕು ಮುಂತಾದ ವಿಷಯಗಳಿಗೆ ಸಂಬಂಧಿಸಿದವು.

ತಮ್ಮ ಮರೆಹೊಕ್ಕವರನ್ನು ಕಾಯುವುದು, ಅವರಿಗೆ ಜೀವದಾನ ನೀಡುವುದು ವೀರನ ಪರಾಕ್ರಮಕ್ಕೆ ಮೆರುಗು ನೀಡುವಂತಹುದು ಎಂಬುದಾಗಿ ಅಂದಿನ ವೀರರು, ಅರಸರು ಭಾವಿಸಿದ್ದರು. ಬಹುಶಃ ಈ ಕಾರಣದಿಂದಲೇ ಕರ್ನಾಟಕದ ಅರಸರ ಬಿರುದಗಳಲ್ಲಿ 'ಶರಣಾಗತ ವಜ್ರಪಂಜರ', 'ಮೊರೆವೊಕ್ಕರ ಕಾವ' ಮುಂತಾದ ಬಿರುದುಗಳೂ ಸಹ ಸೇರಿರುವುದು ಎಂಬುದಾಗಿ ತೋರುತ್ತದೆ. ಕರ್ನಾಟಕದ ಶಾಸನಗಳಿಂದ ""ರಣರಂಗದಲ್ಲಿ ಹುಲ್ಲುಕಚ್ಚಿದರನ್ನು, ಭೀತರನ್ನು, ನೀರನ್ನು ಹೊಕ್ಕವರನ್ನು,

---

೨೦ E. C. VIII. Sa. 85, 1282

೨೧ ಅದೇ, ೮೬, ೧೨೮೨

೨೨ ಅದೇ, ೧೦೨, ೧೨೯೨

೨೩ M. A. R.1937. 31, 1310 "ವೀರ ಬಲ್ಲಾಳದೇವರು ಬೆಸಸಿ ಕೊಟ್ಟಡೆ ಸಂಕಮದೇವನೊಡ್ಡುಂ ಮಗುಳ್ಚಿ".

ಶಿವಲಿಂಗವನ್ನಪ್ಪಿದವರನ್ನು, ಹುತ್ತವೇರಿದವರನ್ನು ಕೊಲ್ಲಕೂಡದೆಂಬ ಯುದ್ಧನೀತಿಯಿದ್ದಿತು," ಎಂಬುದಾಗಿ ತಿಳಿಯುತ್ತದೆ.[೨೪] ಕ್ರಿ.ಶ. ೧೧೪೬ರ ಒಂದು ವೀರಗಲ್ಲಿನ ಪಾಠದಿಂದ ವೀರನು ಯುದ್ಧವನ್ನು ಮಾಡುತ್ತಾ, ಯುದ್ಧರಂಗದಲ್ಲಿ ತಾನು ಕಂಡ ಹುತ್ತವೇರಿದವರನ್ನೂ ಹುಲ್ಲು ಕಚ್ಚಿದವರನ್ನೂ ಕೊಲ್ಲದೆ ಅವರನ್ನು ಕಾಯ್ದು ಕಳುಹಿ, ತಾನು ಮುಂದುವರಿದು ಯುದ್ಧಮಾಡುತ್ತಾ ವೀರಸ್ವರ್ಗವನ್ನು ಪಡೆದ ಸಂಗತಿಯು ತಿಳಿಯುತ್ತದೆ.[೨೫]

ಮೇಲೆ ಹೇಳಿದ ಪ್ರಾಣರಕ್ಷಣೆಯ ಶರಣಾಗತ ಸಂಕೇತಗಳಂತೇ ಸಂಜ್ಞೆಗಳಂತೆಯೇ ತಲೆಯನ್ನು ಕೆದರಿಕೊಳ್ಳುವುದೂ ಸಹ ಶರಣಾಗತನಾಗುವ ಒಂದು ಸಂಕೇತವೇ. ಈ ರೀತಿಯ ಒಂದು ಚಿತ್ರ ವೀರಗಲ್ಲೊಂದರ ಶಿಲ್ಪದಲ್ಲಿ ಸಿಗುತ್ತದೆ. ವೀರನೊಂದಿಗೆ ಹೋರಾಡಿ ಮಡಿದ ವೀರರ ತಲೆಗಳನ್ನು ಗಮನಿಸಿದಾಗ ಅವರೆಲ್ಲರೂ ಮುಡಿಯನ್ನು ಕಟ್ಟಿರುವಂತೆ ಚಿತ್ರಿಸಲಾಗಿದೆ. ಆದರೆ ಈ ವೀರಗಲ್ಲಿನಲ್ಲಿ ವ್ಯಕ್ತಿಯೊಬ್ಬನು ತನ್ನ ಕೂದಲುಗಳನ್ನು ಕೆದರಿಕೊಂಡು ವೀರನ ಪಾದಗಳ ಮೇಲೆ ಬಿದ್ದು ತಾನು ಶರಣಾರ್ಥಿ ಎಂಬುದಾಗಿ ಪ್ರಾರ್ಥಿಸುತ್ತಿರುವಂತೆ ಇದೆ. ಇನ್ನೂ ಹಲವಾರು ವೀರಗಲ್ಲುಗಳ ಶಿಲ್ಪದಲ್ಲಿ ವೀರನ ಪಾದಗಳ ಮೇಲೆ ಬಿದ್ದಿರುವ ವೀರರನ್ನು ಗುರುತಿಸಬಹುದು (ಚಿತ್ರ ೫೪) ""ಪ್ರಾಚೀನ ಕರ್ನಾಟಕದಲ್ಲಿ ಈ ನೀತಿಯನ್ನು ಎಷ್ಟರ ಮಟ್ಟಿಗೆ ಅನುಸರಿಸುತ್ತಿದ್ದರೋ ತಿಳಿಯದು" ಎಂಬ ಸಂಶಯವನ್ನು ಡಾ. ಎಂ. ಚಿದಾನಂದಮೂರ್ತಿಯವರು ತಾಳುತ್ತಾರೆ.[೨೬] ವೀರಗಲ್ಲುಗಳ ಪಾಠ ಮತ್ತು ಶಿಲ್ಪದ ದೃಷ್ಟಿಯಿಂದ ಈ ನಿಯಮವನ್ನು ಅನುಸರಿಸುತ್ತಿದ್ದರೆಂದು ಹೇಳಬಹುದು.

ಯುದ್ಧ ವಾದ್ಯಗಳು'

ಯುದ್ಧಕ್ಕೆ ಹೊರಡುವಾಗ, ಪ್ರಯಾಣದ ದಾರಿಯಲ್ಲಿ ಮತ್ತು ಯುದ್ಧರಂಗದಲ್ಲಿ ಅನೇಕ ರೀತಿಯ ವಾದ್ಯಗಳನ್ನು ಮೊಳಗಿಸುತ್ತಿದ್ದರು – ಎಂಬ ಅಂಶ ಭಾರತೀಯ ಸಾಹಿತ್ಯಕೃತಿಗಳಲ್ಲಿ ಬರುವ ಯುದ್ಧವರ್ಣನೆಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ತಮಿಳಿನ ಸಂಗಮ್ ಸಾಹಿತ್ಯದಿಂದ ತಮಿಳರಲ್ಲಿ 'ವೀರ ಮೊರಸು' 'ಕಾಲಿ ಮೊರಸು' ಎಂಬ ಪ್ರಸಿದ್ಧವಾದ ಯುದ್ಧವಾದ್ಯಗಳಿದ್ದುವೆಂದು ತಿಳಿದುಬರುತ್ತದೆ.[೨೭] (ಈ ಕಾಲಿಮೊರಸು ಎಂಬ ಯುದ್ಧವಾದ್ಯವನ್ನು ಹುಲಿಯನ್ನು ಹೋರಾಟದಲ್ಲಿ ಕೊಂದ ಗೂಳಿಯ ಚರ್ಮದಿಂದ ಮಾಡುತ್ತಿದ್ದರು)

---

೨೪ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೦

೨೫ M. A. R.1930.69, ಸು. ೧೧೪೬

೨೬ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೦

೨೭ N. Subramani : Sangam Polity. ಪು. ೭೫–೭೬

ಪಂಪ ವಿಕ್ರಮಾರ್ಜುನ ವಿಜಯದಿಂದ ನಮಗೆ ಶಂಕ, ಕಹಳೆ, ಭೇರಿ, ಪಣವ, ಝಲ್ಲರಿ, ಮೃದಂಗ ಮುಂತಾದವುಗಳನ್ನು ಯುದ್ಧಸಮಯದಲ್ಲಿ ಮೊಳಗಿಸುತ್ತಿದ್ದರೆಂದು ತಿಳಿಯುತ್ತದೆ.[೨೮] ಕುಮಾರರಾಮನ ಸಾಂಗತ್ಯದಿಂದ ಈ ಪಟ್ಟಿಯು ಇನ್ನೂ ವಿಸ್ತೃತ ರೂಪದಲ್ಲಿ ದೊರೆಯುತ್ತದೆ. ಡಮರುಗ, ಡೋಲು, ಕಹಳೆ, ತಿತ್ತಿರಿ, ಢಕ್ಕೆ, ಜರ್ಝರ, ಚಕ್ರವಾದ್ಯ, ಜಿನಗಹಳೆ (ಚಿನ್ನಕಹಳೆ = ಚಿಕ್ಕ ಕಹಳೆ), ಗಗ್ಗಿಐವಜೆ; ಹೆಗ್ಗಾಳ, ಬರುಗು, ಮದ್ದರೆ, ನಾಗಸ್ವರ ಮುಂತಾದವುಗಳನ್ನು ನಂಜುಂಡ ಹೆಸರಿಸುತ್ತಾನೆ.[೨೯]

ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಯುದ್ಧ ವರ್ಣನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಯುದ್ಧಾರಂಭವನ್ನು ಸೂಚಿಸಲು ಒಂದು ವಾದ್ಯ ವಿಶೇಷವನ್ನು ಮತ್ತು ಅಂದಿನ ದಿನದ ಯುದ್ಧಾಂತ್ಯವನ್ನು ಸೂಚಿಸಲು ಮತ್ತೊಂದು ವಾದ್ಯ ವಿಶೇಷವನ್ನು ಬಲಸುತ್ತಿದ್ದುದಾಗಿ ತಿಳಿದು ಬರುತ್ತದೆ.[೩೦]

ಯುದ್ಧ ವಾದ್ಯಗಳ ಬಗ್ಗೆ ಪ್ರಸ್ತಾಪ ಮಾಡುವಾಗಲೇ ಮೇಲೆ ಹೇಳಿದ ಎರಡು ವಿಧವಾದ ವಾದ್ಯಗಳಿಗಿಂತ ವಿಭಿನ್ನವಾದ ವಾದ್ಯವಿಶೇಷಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವೆಂದು ತೋರುತ್ತದೆ.

""ಧರ್ಮ ಕಹಳೆ ಎಂದು ಒಂದು ಬಗೆಯ ಕೊಂಬನ್ನು ಊದಿಸಿದರೆ, ಅದು ಯುದ್ಧ ನಿಲ್ಲುವುದಕ್ಕೆ ಸೂಚನೆ. "ಕೂಚು ನಗಾರಿ' ಎಂಬ ಒಂದು ಬಗೆಯ ನಗಾರಿಯನ್ನು ಬಾರಿಸಿದರೆ ಮುಂದಕ್ಕೆ ಹೊರಡಬೇಕೆಂದು ಸೂಚನೆ." ಹೀಗೆ ಹಲವಾರು ಸೂಚನೆಗಳಿಗಾಗಿ ಯುದ್ಧ ವಾದ್ಯಗಲು ಪಾಳೆಯಗಾರರ ಕಾಲದಲಿದ್ದುವೆಂದು ಶ್ರೀ ಎಂ. ಎಸ್. ಪುಟ್ಟಣ್ಣನವರು ತಿಳಿಸುತ್ತಾರೆ.[೩೧] ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಈ "ಧರ್ಮ ಕಹಳೆ' ಯ ಪ್ರಸ್ತಾಪ ಶಾಸನಗಳಲ್ಲಿ ಎಲ್ಲಿಯೂ ಬರುವುದಿಲ್ಲ ಎನ್ನುವುದು.

---

೨೮ ಪಂಪ : ವಿಕ್ರಮಾರ್ಜುನ ವಿಜಯಂ. ೧೧–೩೩ ನಂತರದ ವಚನ.

೨೯ ನಂಜುಂಡ : ರಾಮನಾಥ ಚರಿತೆ. ಭಾ. ೩, ಆ ೧೧.

೩೦ ಪಂಪ : ವಿಕ್ರಮಾರ್ಜುನ ವಿಜಯಂ. ೧೧–೩೩ ನಂತರದ ವಚನ. – "ಆಗಳ್ ಕುರುಧ್ವಜಿನಿಯುಮನೇಕ ಶಂಖ ಕಾಹಳ ಭೇರಿ ಪಣವ ಝಲ್ಲರೀ ಮೃದಂಗ, ತೂರ್ಯಂಗಳಿತಕಾ ಳಾಂತಕ ವಿಕಟಾಟ್ಟಹಾಂಸಗಳೆಂಬಂತೆ ಮೊಳಗೆ ಮಲೆದು ಬಂದೊಡ್ಡಿ ನಿಂದಾಗಳ್". ೧೧–೨೪ರ ನಂತರ "ಆಗಳೆರಡುಂ ಪಡೆಗಳಪಹಾರ ತೂರ್ಯಂಗಳ ಬಾಜಿಸಿ". ಅದೇ ೬೧ನೇ ಪದ್ಯದ ನಂತರದ ಗದ್ಯ – "ಪಡೆಗಳ ಪಹಾರ ತೂರ್ಯಂಗಳಂ ಬಾಜಿಸಿದಾಗಳ್".

೩೧ ಎಂ. ಎಸ್. ಪುಟ್ಟಣ್ಣ : ಪಾಳೆಗಾರರು ಐದು ಉಪನ್ಯಾಸಗಳು. ಪು. ೪೯

ಯುದ್ಧ ವಾದ್ಯಗಳ ಬಗ್ಗೆ ವೀರಗಲ್ಲುಗಳಿಂದ ದೊರೆಯುವ ಮಾಹಿತಿ ಬಹಳ ಕಡಿಮೆ. ಆದರೆ ಕೆಲವು ವೀರಗಲ್ಲುಗಳ ಪಾಠ ಮತ್ತು ಶಿಲ್ಪ ಈ ಮಾಹಿತಿಯ ಸಂಗ್ರಹದಲ್ಲಿ ಸಹಾಯ ಮಾಡುತ್ತದೆ. ಕ್ರಿ.ಶ. ೧೨೩೨ರ ಒಂದು ವೀರಗಲ್ಲಿನ ಪಾಠದಿಂದ, ಶತ್ರು ಪಕ್ಷದವರನ್ನು ಆಕ್ರಮಣ ಮಾಡಲು ""ಮುನಿಸಿಂದಂ ಹೊಂನಬಮ್ಮಂ ನಿಜ ತುರುಗದಳಂಗೂಡಿ ಸೇನಾಸಮೂಹಂ ಘನಘೋಷಂಗೊಂಡು" ಬಂದನೆಂದು ತಿಳಿಯುತ್ತದೆ.[೩೨] ಕ್ರಿ.ಶ. ೧೨೧೭ರ ಮತ್ತೊಂದು ವೀರಗಲ್ಲಿನಲ್ಲಿ ಇದೇ ರೀತಿಯ ವರ್ಣನೆಯಿದೆ[೩೩]. ಇಲ್ಲಿ ವಾದ್ಯಗಲ ವಿವರ ದೊರೆಯುವುದಿಲ್ಲ. ಈ ಬಗ್ಗೆ ವೀರಗಲ್ಲುಗಳ ಶಿಲ್ಪದ ಕಡೆಗೆ ಗಮನವನ್ನು ಹರಿಸಬೇಕು. ವೀರಗಲ್ಲುಗಳ ಶಿಲ್ಪದಲ್ಲಿ ಮೂಡಿ ಬಂದಿರುವ ಯುದ್ಧ ವಾದ್ಯಗಳಲ್ಲಿ ಕೆಲವನ್ನು ಡಾ. ಎಂ. ಚಿದಾನಂದಮೂರ್ತಿಯವರು ಗಮನಿಸಿದ್ದಾರೆ. ""ಯುದ್ಧರಂಗದಲ್ಲಿ ಕಹಳೆ, ಜಾಗಟೆ ಮೃದಂಗಗಳನ್ನು ಬಾರಿಸುತ್ತಿರುವ ಚಿತ್ರವೊಂದು ವೀರಗಲ್ಲಿನ ಮೇಲಿದೆ. ಪಜೆ ಕಹಳೆಗಳು ಇನ್ನೊಂದು ವೀರಗಲ್ಲಿನ ಮೇಲೆ ಚಿತ್ರಿತವಾಗಿದೆ. ವಾದ್ಯಕಾರರೆಲ್ಲರೂ ನಿರಾಯುಧರಾಗಿರುವಂತೆ ಯುದ್ಧರಂಗದ ಮಧ್ಯೆ ಅಥವಾ ಅಂಚಿನಲ್ಲಿ ನಿಂತಿರುವಂತೆ ಚಿತ್ರಿತವಾಗಿರುವುದರಿಂದ ಬಹುಶಃ ಇವರನು ಯುದ್ಧದಲ್ಲಿ ಕೊಲ್ಲುತ್ತಿರಲಿಲ್ಲ."[೩೪] ಯುದ್ಧ ಭೂಮಿಯಲ್ಲಿ ನಗಾರಿ, ತಮಟೆ, ಕೊಂಬು ಮುಂತಾದ ವಾದ್ಯಗಲನ್ನು ಬಾರಿಸುತ್ತಿರುವುದನ್ನು ವೀರಗಲ್ಲುಗಳ ಶಿಲ್ಪಗಳಲ್ಲಿ ಗುರುತಿಸಬಹುದು. (ಚಿತ್ರ ೫೭ ರಿಂದ ೬೩)

ಪರಿವಾರ

ಯುದ್ಧ ಭೂಮಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಹೊರುವ ಒಂದು ಪಡೆಯೂ ಇದ್ದಂತೆ ತೋರುತ್ತದೆ. ಈ ಬಗ್ಗೆ ಕಾಯ್ಕಿಣಿಯ ವೀರಗಲ್ಲು ಸ್ವಾರಸ್ಯ ಪೂರ್ಣವಾದ ಮಾಹಿತಿಯನ್ನು ಒದಗಿಸುತ್ತದೆ. ಯುದ್ಧಕ್ಕೆ ಹೊರಟ ಸಮಯದಲ್ಲಿ ಮುಂದುಗಡೆ ರಣವಾದ್ಯಗಳನ್ನು ಬಾರಿಸುತಾ ಕೆಲವರು ನಡೆದಿದ್ದಾರೆ. ಅನಂತರ ಯುದ್ಧ ಭೂಮಿಗೆ ವೀರ ಪಲ್ಲಕ್ಕಿಯಲ್ಲಿ ಕುಳಿತು ಹೊರಟಿದ್ದಾನೆ. ಅವನ ಹಿಂದೆ ಇಬ್ಬರು ಸಾಮಗ್ರಿಗಳನ್ನು ಹೊತ್ತು ನಡೆದಿದ್ದಾರೆ. ಮೊದಲನೆಯವನು ಹಸಿಬೆ ಚೀಲವನ್ನು (ಚಿತ್ರ ೬೭) ಹೊತ್ತಿದ್ದರೆ, ಎರಡನೆಯವನು ಕಾವಡಿಯಲ್ಲಿ ಸಾಮಾನುಗಳನ್ನು ಸಾಗಿಸುತ್ತಿದ್ದಾನೆ. (ಚಿತ್ರ ೬೮) ಯುದ್ಧ ರಂಗದಲ್ಲಿ ಹೋರಾಡುತ್ತಿರುವ ವೀರನಿಗೆ ಬಾಣಗಳನ್ನು

೩೨ E. C. VII. HI. 43, 1232

೩೩ E. C. V. BI. 165, 1217

೩೪ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೮ – ೭೯

ಹೊತ್ತು ತಂದು ನೀಡುತ್ತಿರುವ ಚಿತ್ರಣ ಚಿಕ್ಕಮಗಳೂರು ಬಳಿ ಇರುವ ಉಪ್ಪರವಳ್ಳಿ ವೀರಗಲ್ಲು ಶಿಲ್ಪ, ಮಾವಳಿ ವೀರಗಲ್ಲಿನ ಶಿಲ್ಪ, ಮತ್ತು ಶಿವಮೊಗ್ಗಾ ಮ್ಯೂಸಿಯಂನಲ್ಲಿರುವ ವೀರಗಲ್ಲು ಶಿಲ್ಪಗಳಲ್ಲಿವೆ. (ಚಿತ್ರ ೬೫, ೬೪, ೨೧೧). ಯುದ್ಧಭೂಮಿಗೆ ನೀರು ಸರಬರಾಜು ಮಾಡುತ್ತಿರುವ ಶಿಲ್ಪದ ವಿವರ ದೊಡ್ಡ ಮಳೂರಿನ ವೀರಗಲ್ಲಿನ ಶಿಲ್ಪದಲ್ಲಿ ಬಿಡಿಸಲಾಗಿದೆ. (ಚಿತ್ರ ೬೬).

ಆಯುಧಗಳು

ಖಡ್ಗ

ಆಕ್ರಮಣಕಾರಿ ಆಯುಧಗಳಲ್ಲಿ ಪ್ರಧಾನವಾದ ಪಾತ್ರವಹಿಸಿದ ಆಯುಧವೆಂದರೆ ಖಡ್ಗ. ಈ ಕಾರಣದಿಂದಲೇ ಖಡ್ಗಗಳು ವೀರನಾದವನಿಗೆ ದೈವದತ್ತವಾದದ್ದು ಎಂಬ ಹಲವಾರು ಐತಿಹ್ಯಗಳು ಸೃಷ್ಟಿಯಾಗಿರುವುದನ್ನು ಗಮನಿಸಬಹುದಾಗಿದೆ. ಆಯುಧದ ಹೆಸರು ಒಂದೇ ಆದರೂ ಇವು ವಿವಿಧ ಆಕಾರಗಳಲ್ಲಿರುವುದನ್ನು ಗಮನಿಸಬಹುದಾಗಿದೆ. ವೀರಗಲ್ಲುಗಳಲ್ಲಿ ಖಡ್ಗವನ್ನು ಕಡಿತಲೆ, ಖಡ್ಗ, ಕರವಾಳ್, ಬಾಳ್ (ವಾಳ್), ಖಂಡೆಯ ಮುಂತಾದ ಹೆಸರುಗಳಿಂದ ಕರೆಯಲಾಗಿದೆ.೩೫ ಈ ರೀತಿಯ ಪರ್ಯಾಯ ಪದಗಲೂ ಹುಟ್ಟಲು ಬಹುಶಃ ಅವುಗಳಲ್ಲಿನ ಆಕಾರ ವ್ಯತ್ಯಾಸವೇ ಕಾರಣವಿರಬಹುದು. ಕತ್ತಿಯ ಆಕಾರವು ವೀರಗಲ್ಲುಗಳ ಶಿಲ್ಪದಲ್ಲಿ ಹಲವು ರೀತಿಯಲ್ಲಿ ಬಂದಿರುವುದನ್ನು ಗಮನಿಸಬಹುದು. (ಚಿತ್ರ ೬೯ ರಿಂದ ೮೧)

ಕಠಾರಿ – ಕಟಾರಿ

ಇದು ಕತ್ತಿಗಿಂತಲೂ ಚಿಕ್ಕದಾದ್ದು, (ಚಿತ್ರ ೮೬ ರಿಂದ ೯೫) ಇದನ್ನು ಇರಿಯುವುದಕ್ಕಾಗಿ ಉಪಯೋಗಿಸುತ್ತಿದ್ದರು. ಗಂಗರ ಕಾಲದ ವೀರಗಲ್ಲುಗಳಲ್ಲಿ ಅದರಲ್ಲಿಯೂ ಕೋಲಾರ ಜಿಲ್ಲೆಯ ವೀರಗಲ್ಲುಗಳಲ್ಲಿ ಇವುಗಳನ್ನು ವಿಶೇಷವಾಗಿ ಗಮನಿಸಬಹುದು. ಹೆಗ್ಗಡದೇವನಕೋಟೆ ತಾಲ್ಲೂಕ್

---

೩೫ (ಅ) E. C. VIII. Sb. 134, 1393
(ಆ) ಅದೇ, ೧೩೮, ೧೧೪೫
(ಇ) ಅದೇ, ೧೪೧, ೧೧೨೭
(ಈ) E. C. XI. 87, 1090
(ಉ) S.I.I. IX pt I 392 ಅದೇ, ೩೭, ೧೨೧೫
(ಊ) ಸು. ೮ನೇ ಶತ.
(ಋ) ಅದೇ, ೧೩೮, ೧೧೪೫
(ೠ) E. C. X. Kl. 200, 890

ಮಗ್ಗ ಗ್ರಾಮದ ವೀರಗಲ್ಲಿನಲ್ಲಿ ಕಟಾರಿಗಾಳಗದ ಪ್ರಸ್ತಾಪ ಬರುತ್ತದೆ.೩೬ ಸಿರಾದಿಂದ ಬೆಂಗಳೂರಿಗೆ ಹೋಗುವ ರಸ್ತೆಯಲ್ಲಿ ಬಲಗಡೆಗೆ "ಕಠಾರಿ ವೀರನಹಳ್ಳಿ" ಎಂಬ ಗ್ರಾಮವಿದೆ.

ಭರ್ಜಿ

ಕತ್ತಿಯನ್ನು ಬಿಟ್ಟರೆ ಪ್ರಯೋಗದಲ್ಲಿದ್ದ ಮತ್ತೊಂದು ಪ್ರಮುಖ ಆಯುಧವೆಂದರೆ ಭರ್ಜಿ. ಇದರ ಮೊನೆಯ ಭಾಗದ ಆಕಾರವನ್ನು ಅನುಸರಿಸಿ ಎಲೆಭರ್ಜಿ, ಸೂಜಿಭರ್ಜಿ ಎಂಬುದಾಗಿ ಗುರುತಿಸುತಾರೆ. ಇದು ಯಾವುದೇ ವಾಹನದ ಮೇಲೆ ಕುಳಿತು ಪ್ರಯೋಗಿಸುವುದಕ್ಕೆ ಅನುಕೂಲವಾಗುವುದರಿಂದ, ಶತ್ರುವು ತನ್ನ ಮೇಲೆರಗಿ ಬಂದು ಅಪಾಯ ಮಾಡುವ ಮೊದಲೇ, ದೂರದಿಂದಲೇ ಶತ್ರುಸಂಹಾರ ಮಾಡಬಹುದಾದ ಮಾರಕಾಸ್ತ್ರವಾಗಿತ್ತು. ಕುದುರೆಯ ಮೇಲೆ ಕುಳಿತು ಭರ್ಜಿಗಳಿಂದ ಯುದ್ಧಮಾಡುತ್ತಿರುವ ದೃಶ್ಯವನ್ನು ನಾವು ಕಾಣಬಹುದು. (ಚಿತ್ರ ೧೫೯, ೧೬೦)

ಬಾಕು

ಕತ್ತಿಯ ಆಕಾರವನ್ನೇ ಹೋಲುವ ಈ ಗೇಣುದ್ದದ ಆಯುಧವು ಆರಂಭದ ವೀರಗಲ್ಲುಗಳಿಂದ ಹಿಡಿದು ವಿಜಯನಗರದವರೆಗಿನ ವೀರಗಲ್ಲುಗಳು ಶಿಲ್ಪದಲ್ಲಿ ನಿರೂಪಿತವಾಗಿದೆ. ಇದನ್ನು ವೀರರು ಸೊಂಟಕ್ಕೆ ಕಟ್ಟಿಕೊಳ್ಳುತ್ತಿದ್ದರು. ಇರಿಯಲು ಇದನ್ನು ಉಪಯೋಗಿಸುತ್ತಿದ್ದರು. (ಚಿತ್ರ ೮೨ ರಿಂದ ೮೫)

ಸಬಳ

ಇದು ಈಟಿಯಂತಹುದೇ ಆಯುಧ (ಆದರೆ ಈಟಿಯ ಮೊನೆಯಭಾಗದಲ್ಲಿ ಅಡ್ಡಲಾಗಿ ಇನ್ನೊಂದು ಮೊನೆಯಾದಭಾಗವನ್ನು ಸಿಕ್ಕಿಸುತ್ತಿದ್ದರು) ಇದು ವಿಶೇಷವಾಗಿ ಕೋಟೆಕಾಳಗದಲ್ಲಿ ಉಪಯೋಗವಾಗುತ್ತಿದ್ದಂತೆ ಕಾಣುತ್ತದೆ.೩೭ ವಿಶೇಷವಾಗಿ ಕೋಟೆಕಾಳಗದ ಶಿಲ್ಪವಿರುವ ಲಕ್ಷ್ಮೇಶ್ವರ, ಎಲೇಬೇತೂರು, ಹಾನುಗಲ್ಲುಗಳಲ್ಲಿನ ವೀರಗಲ್ಲುಗಳಲ್ಲಿ ಇದರ ಚಿತ್ರವನ್ನು ಗಮನಿಸಬಹುದಾಗಿದೆ. ಇದು ಮನುಷ್ಯನ ಸಾಮಾನ್ಯ ಎತ್ತರಕ್ಕಿಂತ ಉದ್ದವಿದ್ದು ಕೋಟೆಯ ಮೇಲಿನ ವ್ಯಕ್ತಿಗಳನ್ನು ತಿವಿಯಲು ಅನುಕೂಲವಾಗಿತ್ತು ಎಂದು ತೋರುತ್ತದೆ. (ಚಿತ್ರ ೧೯೯, ೨೦೨)

---

೩೬ E. C. IV. Hg. 77, 1090

೩೭ E. C. VIII. Sb. 19, 1441

ಕೊನ್ತ

ಇದು ಕತ್ತಿಯಂತಹುದೇ ಒಂದು ಆಯುಧವಿರಬೇಕು. ವೀರನು ಒಂದು ಕೈಯಲ್ಲಿ ಗುರಾಣಿಯನ್ನು ಮತ್ತೊಂದು ಕೈಯಲ್ಲಿ ಕೊಂತವನ್ನು ಹಿಡಿದು ಹೋರಾಡಿದ ವರ್ಣನೆ ಬರುತ್ತದೆ.೩೮ (ಚಿತ್ರ ೨೦೫, ೨೦೬)

ಬಿಲ್ಲು – ಬಾಣಗಳು (ಚಿತ್ರ ೯೬ ರಿಂದ ೧೦೮)

ಇವುಗಳನ್ನು ಪ್ರಾಚೀನ ಕರ್ನಾಟಕದಲ್ಲಿ ಪದಾತಿಗಳು ಬಹಳವಾಗಿ ಉಪಯೋಗಿಸುತ್ತಿದ್ದರು. ಇವುಗಳ ಹೆಸರು ಮತ್ತು ಯುದ್ಧದಲ್ಲಿ ಇವುಗಳ ಉಪಯೋಗದ ಬಗ್ಗೆ ಸಾಕಷ್ಟು ಮಾಹಿತಿ ಶಾಸನಗಳಿಂದ ಮತ್ತು ಕಾವ್ಯಗಳಿಂದ ತಿಳಿದುಬರುತ್ತದೆ. ಇವುಗಳನ್ನು ಯುದ್ಧದಲ್ಲಿ ಮಾತ್ರವಲ್ಲದೆ ಬೇಟೆಯಲ್ಲಿಯೂ ಸಹ ಉಪಯೋಗಿಸುತ್ತಿದ್ದರು. (ಚಿತ್ರ ೪೯)

ಬಾಣವು ಆದಷ್ಟು ಬಿರುಸಾಗಿ ಹೋಗಿ ಶತ್ರುವನ್ನು ತಾಗಲಿ ಎಂಬ ಉದ್ದೇಶದಿಂದ ಬಿಲ್ಲನ್ನು ವಿವಿಧ ರೀತಿಗಳಲ್ಲಿ ಬಾಗಿಸಿ ಕಟ್ಟುತ್ತಿದ್ದರು. ಬಾಣವು ಶತ್ರುವಿನ ದೇಹವನ್ನು ನಾಟುವುದೆಂದು ವಿವಿಧ ರೀತಿಯ ಮೊನಚಾದ ಭಾಗಗಳನ್ನು ಮಾಡುತ್ತಿದ್ದರು. ಅವುಗಳನ್ನು ಹಿಡಿದು ಬಿಲ್ಲಿಗೆ ಹೂಡುವುದಕ್ಕೆ ಅನುಕೂಲವಾಗಿ ಅವುಗಳ ವೇಗ ಹೆಚ್ಚಲೆಂದು ಬಾನಗಳ ಹಿಂಭಾಗದಲ್ಲಿ ಗರಿಗಲನ್ನು ಕಟ್ಟುತ್ತಿದ್ದರು. ಬಾಣಗಳನ್ನು ಇಟ್ಟುಕೊಳ್ಳಲು ಬೆನ್ನಿಗೆ ಬತ್ತಳಿಕೆಯನ್ನು ಕಟ್ಟಿಕೊಳ್ಳುತ್ತಿದ್ದರು. ಕೆಲವೊಮ್ಮೆ ಬಾಣಗಳನ್ನು ಬೇರೆಯವರು ಒದಗಿಸಿಕೊಡುತ್ತಿರುವಂತೆಯೂ ವೀರಗಲ್ಲಿನ ಶಿಲ್ಪವೊಂದರಲ್ಲಿ ಬಿಡಿಸಲಾಗಿದೆ. (ಚಿತ್ರ೬೫) ಇವುಗಳ ಬಳಕೆ ಆರಂಭದ ಕಾಲದಿಂದ ಹಿಡಿದು ವಿಜಯನಗರದ ಕಾಲದವರೆಗೆ ಇತ್ತೆಂದು ವೀರಗಲ್ಲುಗಳ ಶಿಲ್ಪದ ಆಧಾರದ ಮೇಲೆ ಹೇಳಬಹುದು.

ಕರ್ಕಡೆ – ಕಕ್ಕಡೆ

ಇದು ""ಕೈಯಿಂದ ಎಸೆಯುವ ಶೂಲದಂತಹ ಆಯುಧ" ಎಂಬುದಾಗಿ ಡಾ. ಎಂ. ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.೩೯ ಅವರ ಅಭಿಪ್ರಾಯವನ್ನು ಸಮರ್ಥಿಸುವ ಅಂಶ ಶಾಸನವೊಂದರಿಂದ ದೊರೆಯುತ್ತದೆ. ಅಂತಪಾಲನೆಂಬ ದಂಡಾಧೀಶನ ನಾಲ್ವರು ತಮ್ಮಂದಿರನ್ನು ಹೊಗಳುತ್ತಾ ಶಾಸನಕಾರ ಅವರು, ""ಅರ್ದ್ಧಾಂತೂರ್ಪ್ಪಿಡುವ ಕಕ್ಕಡೆಯೆಂಬ

೩೮ E. C. VII. Sk. 245, 1183 "ಅಡ್ಡಣ ಕೊನ್ತವಂ ಕೊಂಡು ಪಲರಂ ತಳ್ತಿಱಿದು".
೩೯ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೬

ಪೋಲಿರ್ದಪರ್" ಎಂಬುದಾಗಿ ವರ್ಣಿಸುತ್ತಾನೆ.[೪೦] ಕಾಯ್ಕಿಣಿಯ ಮೂರು ವೀರಗಲ್ಲುಗಳ ಪಾಠದಿಂದ ವೀರರು, "ಚಿನ್ನದಿಂದ ಮಾಡಿದ ಕಕ್ಕಡೆ' ಎಂಬ ಆಯುಧವನ್ನು ಹಿಡಿದು ಯುದ್ಧಕ್ಕೆ ಹೊರಟ ವಿಷಯ ತಿಳಿಯುತ್ತದೆ.[೪೧] ಕಾಯ್ಕಿಣಿಯ ವೀರಗಲ್ಲುಗಳ ಶಿಲ್ಪವನ್ನು ಅವಲಂಬಿಸಿ ಕಕ್ಕಡೆಯ ಬಗ್ಗೆ ಹೇಳುವುದಾದರೆ, ಇದು ಅರ್ಧಭಾಗ ಕತ್ತಿಯ ಆಕಾರವನ್ನೂ, ಉಳಿದ ಅರ್ಧಭಾಗ ಈಟಿಯನ್ನು ಹೋಲುತ್ತದೆ. ನಡುಭಾಗದಲ್ಲಿ ಹಿಡಿದುಕೊಳ್ಳಲು ಬರುವಂತಿದೆ. ಇದರಿಂದ ಇರಿಯಲು ಮತ್ತು ಎಸೆಯಲು ಸಹ ಬರುವಂತೆ ತೋರುತ್ತದೆ. (ಚಿತ್ರ ೨೬೭)

ಸುರಿಗೆ

ಇದನ್ನು ಯುದ್ಧದಲ್ಲಿ ಮತ್ತು ಬೇಟೆಯಲ್ಲಿ ಉಪಯೋಗಿಸುತ್ತಿದ್ದರು. ಇದು ಕಬ್ಬಿಣದ ಸಲಾಕೆಯ ಹಾಗೆ ಉದ್ದವಾಗಿದ್ದು ತಳಭಾಗದಲ್ಲಿ ಹಿಡಿಯಿರುತ್ತದೆ. ಇದರ ಮೊನಚಾದ ಭಾಗಕ್ಕೆ ವಿಷವನ್ನು ಸವರಿರುತ್ತಾರೆಂಬ ನಂಬಿಕೆ ಇದೆ. ಈ ಆಯುಧ ಚಿತ್ರದುರ್ಗದ ವಸ್ತು ಸಂಗ್ರಹಾಲಯದಲ್ಲಿದೆ.[೪೨]

ಗುರಾಣಿ

ಶತ್ರುಗಳ ಅಸ್ತ್ರಗಳಿಂದ ಆಗುವ ಪೆಟ್ಟನ್ನು ತಪ್ಪಿಸಿಕೊಳ್ಳುವ ಸಲುವಾಗಿ ಉಪಯೋಗಿಸುತ್ತಿದ್ದ ರಕ್ಷಣಾಯುಧವೇ "ಗುರಾಣಿ'. ""ಕನ್ನಡದಲ್ಲಿ ಗುರಾಣಿಯನ್ನು ಪಲಗೆ ಎಂದು ಕರೆಯುತ್ತಾರೆ"[೪೩] ಇದನ್ನು ವೀರಗಲ್ಲುಗಳಲ್ಲಿ "ಹರಿಗೆ', "ಅಡ್ಡಣ', "ಅಡಣ' ಎಂಬುದಾಗಿ ಹೆಸರಿಸಲಾಗಿದೆ.[೪೪]

ವೀರಗಲ್ಲುಗಳ ಶಿಲ್ಪವನ್ನು ಗಮನಿಸಿದಾಗ ವಿವಿಧ ರೀತಿಯ ಗುರಾಣಿಗಳು ಕಾಣಬರುತ್ತವೆ. ಗಂಗ, ರಾಷ್ಟ್ರಕೂಟರ ಕಾಲದ ವೀರಗಲ್ಲುಗಳಲ್ಲಿ ವಿಶೇಷವಾಗಿ ಆಯತಾಕಾರದ ಗುರಾಣಿಗಳು

---

೪೦ S. I. I. IX. Pt I. 220, 1130

೪೧ K.I. 69, 1522

೪೨ ಈ ವಿಷಯ ನನಗೆ ತಿಳಿಸಿದವರು ಚಿತ್ರದುರ್ಗ ಪ್ರಾಚ್ಯವಸ್ತು ಸಂಗ್ರಹಾಲಯದ ಕ್ಯುರೇಟರ್ ಶ್ರೀ ಪಾಂಡುರಂಗ ಜೋಯಿಸ್ ಅವರು.

೪೩ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೭

೪೪ E. C. VIII. HI. 98, 1166 "ಹರಿಗೆ ಕಕ್ಕಡೆಯಂ ಕೊಂಡು".
K.I. 69, 1522 "ಗೂಳಿಯ ಹರಿಗೆ ಚಿಂನದ ಕಕ್ಕಡೆ ಹಿಡಿದು".
E. C. VIII. Sk. 224, 1203 "ಅಡಣಮಂ ಕೊಂಡು".
ಅದೇ. ೨೨೫, ೧೧೮೩ "ಬೆಸಸಲ್ ಅಡ್ಡಣ ಕೊಸ್ತಮಂ ಕೊಣ್ಡು".

ಕಂಡು ಬರುತ್ತವೆ. ಇದರ ಮೇಲ್ಭಾಗದಲ್ಲಿ ಅಲಂಕಾರಗಳನ್ನೂ ಎಡದಕೈಗೆ ಅದನ್ನು ಸಿಕ್ಕಿಸಿಕೊಳ್ಳಲು ಪಟ್ಟಿಗಳನ್ನು ಮಾಡಿರುತ್ತಿದ್ದರು. ಕಲ್ಯಾಣದ ಚಾಲುಕ್ಯ ಮತ್ತು ಹೊಯ್ಸಳರ ಕಾಲದ ವೀರಗಲ್ಲುಗಳಲ್ಲಿ ಕೆಲವು ಕಡೆ ಆಯತಾಕಾರದ ಮತ್ತು ತಳಭಾಗದಲ್ಲಿ ಸ್ವಲ್ಪ ಉದ್ದವಿರುವ ಗುರಾಣಿಗಳನ್ನು ಗಮನಿಸಬಹುದು. (ಚಿತ್ರ ೧೦೯ ರಿಂದ ೧೨೧)

ಗುರಾಣಿಯನ್ನು ಕತ್ತಿ, ಈಟಿಗಳ ಜೊತೆಯಲ್ಲಿ ಉಪಯೋಗಿಸುತ್ತಿದ್ದರು. ಕತ್ತಿಯಿಂದ ಆಗುವ ಏಟನ್ನು ಮಾತ್ರವಲ್ಲದೆ ಶತ್ರುಗಳ ಕಡೆಯಿಂದ ಬಂದ ಬಾಣಗಳನ್ನು ತಡೆಯುವುದಕ್ಕೂ ಇದನ್ನು ಉಪಯೋಗಿಸುತ್ತಿದ್ದರು. ಈ ಅಂಶ ಕಾಯ್ಕಿಣಿಯ ವೀರಗಲ್ಲಿನಿಂದ ಸ್ಪಷ್ಟವಾಗುತ್ತದೆ. ಗುರಾಣಿಗೆ ಹಲವಾರು ಬಾಣಗಳು ನಾಟಿರುವುದನ್ನು ಗಮನಿಸಬಹುದು. (ಚಿತ್ರ ೨೧೮)

ದುಂಡನೆಯ ಆಕಾರದ ಗುರಾಣಿಗಳು ಕರ್ನಾಟಕದಲ್ಲಿ ಆರಂಭ ಕಾಲದಿಂದ ಹಿಡಿದು ವಿಜಯನಗರ ಕಾಲದವರೆಗೆ ವಿಶೇಷವಾಗಿ ಬಳಕೆಯಲ್ಲಿದ್ದುವು. ಈ ರೀತಿಯ ಗುರಾಣಿಗಳ ಮೇಲೆ ಕೆಲವೊಮ್ಮೆ ಅಲಂಕರಣಗಳನ್ನೂ, ರಾಜ ಚಿಹ್ನೆಗಳನ್ನೂ ಬಿಡಿಸುತ್ತಿದ್ದರೆಂದು ಬಳ್ಳಿಗಾವೆಯ ವೀರಗಲ್ಲೊಂದರ ಶಿಲ್ಪದಿಂದ ತಿಳಿಯುತ್ತದೆ. ಶಿವಮೊಗ್ಗಾ ಕೋಟೆ ಪೋಲಿಸ್ ಸ್ಟೇಷನ್‌ನಲ್ಲಿರುವ ವೀರಗಲ್ಲಿನಲ್ಲಿ ರಾಕ್ಷಸಮುಖದ ಗುರಾಣಿಯೊಂದನ್ನು ವೀರನು ಹಿಡಿದಿರುವಂತೆ ಬಿಡಿಸಲಾಗಿದೆ. (ಚಿತ್ರ ೧೩೨) ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದ ನಲವತ್ತೆರಡನೆಯ ಸಂಧಿಯಲ್ಲಿ ಬರುವ ಕೋಟೆ ಕಾಳಗ ವರ್ಣನೆಯಲ್ಲಿ ಈ ರೀತಿ ಮರುಳಕೈಗಳ ಪ್ರಸ್ತಾಪ ಬರುತ್ತದೆ. (ನೋಡು. ಸಂ. ೪೨. ಪದ್ಯ. ೨೧. ಕ.ಸಾ.ಪ. ೧೯೭೯). ಇದೇ ವೀರಗಲ್ಲಿನ ಮತ್ತೊಂದು ಹಂತದಲ್ಲಿ ಯೋಧನೊಬ್ಬನು ಸಿಂಹದ ಲಾಂಛನವಿರುವ ಗುರಾಣಿಯೊಂದನ್ನು ಹೊಂದಿರುವ ಶಿಲ್ಪವೂ ಇದೆ. ವಿವಿಧ ರೀತಿಯ ಅಲಂಕರಣಗಳಿರುವ ಗುರಾಣಿಗಳನ್ನು ನಾವು ವೀರಗಲ್ಲುಗಳ ಶಿಲ್ಪದಲ್ಲಿ ಗುರುತಿಸಬಹುದು. (ಚಿತ್ರ ೧೨೨ ರಿಂದ ೧೩೩)

ಸಿಡಿಮದ್ದು

"ಪ್ರಾಚೀನ ಕನ್ನಡಿಗರಿಗೆ ಸಿಡಿಮದ್ದಿನ ಬಲಕೆಯು ತಿಳಿದಿರಲಿಲ್ಲವೆಂದು ಖಚಿತವಾಗಿ ಹೇಳಬಹುದು. ಫಿರಂಗಿ, ಗುಂಡುಗೋವಿ, ಶತಘ್ನಿ ಮುಂತಾದ ಸಿಡಿಮದ್ದಿನ ಆಯುಧಗಳು ಹದಿನಾರನೆಯ ಶತಮಾನದಿಮದ ಈಚಿನ ಕಾವ್ಯಗಳಲ್ಲಿ ಯಥೇಚ್ಛವಾಗಿ ಕಾಣಿಸಿಕೊಳ್ಳುತ್ತದೆ."[೬೫]

---

೬೫ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೯ – ೮೦

ಎಂಬ ಡಾ. ಎಂ. ಚಿದಾನಂದಮೂರ್ತಿಗಳ ಅಭಿಪ್ರಾಯವನ್ನು ವೀರಗಲ್ಲುಗಳ ಶಿಲ್ಪಗಳು ಸಮರ್ಥಿಸುತ್ತವೆ. ಹದಿನಾರನೆಯ ಶತಮಾನದ ನಂತರದ ವೀರಗಲ್ಲುಗಳ ಶಿಲ್ಪದಲ್ಲಿ ಕೋವಿ ಹಿಡಿದಿರುವ ಚಿತ್ರಣಗಳು ದೊರೆಯುತ್ತವೆ. ಈ ತೆರನ ಚಿತ್ರಣವನ್ನು ಹೊಂದಿರುವ ವೀರಗಲ್ಲುಗಳು ರಾಯಚೂರು ಮತ್ತು ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮದಲ್ಲಿಯೂ ಇವೆ.

ರಾಯಚೂರಿನ ಪ್ರಾಚ್ಯವಸ್ತುಸಂಗ್ರಹಾಲಯ, ಜಿಲ್ಲಾ ಅಗ್ನಿಶಾಮಕದಳದ ಕಛೇರಿ ಮತ್ತು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟ್ ಅವರ ಕಛೇರಿ – ಆವರಣಗಳಲ್ಲಿ ಸುಮಾರು ಐವತ್ತಕ್ಕೂ ಮಿಗಿಲಾಗಿ ಬಂದೂಕನ್ನು ಹಿಡಿದು ನಿಂತಿರುವ, ಹೋರಾಡುತ್ತಿರುವ ವೀರರ ವೀರಗಲ್ಲುಗಳು ಇವೆ. ಇವುಗಳ ಮೇಲೆ ಶಾಸನವು ಇಲ್ಲ. ಆದರೆ ಶಿಲ್ಪದ ಆಧಾರದ ಮೇಲೆ ಅವು ವಿಜಯನಗರದ ಮತ್ತು ಅನಂತರದ ಕಾಲದ ವೀರಗಲ್ಲುಗಳು ಎಂದು ಊಹಿಸಬಹುದಾಗಿದೆ. ರಾಯಚೂರು ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಈ ವೀರಗಲ್ಲುಗಳನ್ನು ತಂದು ಇಲ್ಲಿ ಸಂಗ್ರಹಿಸಿಡಲಾಗಿದೆ. ಈ ಕಾಲದಲ್ಲಿ, ಈ ಪ್ರದೇಶದಲ್ಲಿ ಮುಸಲ್ಮಾನ ಅರಸರ ಪ್ರಭಾವದಿಂದಾಗಿ ಬಂದೂಕುಗಳ ಬಳಕೆ ವಿಶೇಷವಾಗಿದ್ದಂತೆ ತೋರುತ್ತವೆ. (ಚಿತ್ರ ೧೩೪, ೧೩೫, ೧೩೬, ೧೩೭)

ಧ್ವಜಗಳು

ಧ್ವಜವನ್ನು ಅಸ್ತಿತ್ವದ ಮತ್ತು ಪ್ರಾಬಲ್ಯದ ಸಂಕೇತವನ್ನಾಗಿ ಆರಂಭಕಾಲದಿಂದಲೂ ಪ್ರಪಂಚದ ಎಲ್ಲಾ ದೇಶದ ನಾಗರಿಕತೆಗಳು ಬೆಳೆಸಿಕೊಂಡು ಬಂದಿವೆ. ಒಂದು ಪ್ರದೇಶದಲ್ಲಿ ಒಬ್ಬ ವ್ಯಕ್ತಿಯ ಪ್ರಬಲವಾದ ಆಡಳಿತ ವ್ಯವಸ್ಥೆಯನ್ನು ಗುರುತಿಸಲು ಧ್ವಜಗಳನ್ನು ಸಂಕೇತವಾಗಿ ಬಳಸುತ್ತಿದ್ದರು. ನೆಲೆಯೂರಿದ್ದ ಒಂದು ಆಡಳಿತವನ್ನು ಕಿತ್ತೊಗೆದು ಬೇರೆಯ ಆಡಳಿತ ಆ ಸ್ಥಾನವನ್ನು, ಆ ಪ್ರದೇಶವನ್ನು ಆಕ್ರಮಿಸಿದಾಗ ಸಹಜವಾಗಿ ಹಿಂದೆ ಇದ್ದ ಧ್ವಜದ ಸ್ಥಾನವನ್ನು ಗೆದ್ದ ಪಕ್ಷದ ಸಂಕೇತವಾದ ಧ್ವಜ ಆಕ್ರಮಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಯುದ್ಧರಂಗದಲ್ಲಿ ಧ್ವಜಗಳ ಪಾತ್ರವನ್ನು ವಿಶ್ಲೇಷಿಸಿ ನಿರ್ಣಯಿಸಬೇಕಾಗುತ್ತದೆ. ಯುದ್ಧರಂಗದಲ್ಲಿ ಧ್ವಜಗಳ ಪಾತ್ರ ಎರಡು ರೀತಿಯದ್ದಾಗಿರುತ್ತಿತ್ತು ಎಂದು ತೋರುತ್ತದೆ. ಮೊದಲನೆಯದಾಗಿ ಧ್ವಜದ ಸಂಕೇತಗಳು ಗುರುತಿಸುವುದರ ಮೂಲಕ ಯುದ್ಧರಂಗದಲ್ಲಿನ ಯೋಧರಿಗೆ ತಮ್ಮ ಪಡೆಗಳನ್ನು ಗುರುತಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತಿತ್ತು. ಎರಡನೆಯದಾಗಿ ಸೋತ ಅಥವಾ ಸೋಲನ್ನೇ ಅನುಭವಿಸುತ್ತಿರುವ ಪಕ್ಷದವರ ಧ್ವಜಗಳನ್ನು ಕಸಿದುಕೊಂಡು, ಗೆದ್ದ, ಗೆಲ್ಲುತ್ತಿರುವ ಪಕ್ಷದವರು ತಮ್ಮ ಧ್ವಜಗಳನ್ನು ಎಲ್ಲಾ ಕಡೆಗಳಲ್ಲಿಯೂ

ಮೆರೆಯಿಸಿ, ತಮ್ಮ ಪಕ್ಷದ ಸೈನಿಕರಿಗೆ ಹುರಿದುಂಬಿಸುವ ಮತ್ತು ಶತ್ರು ಪಕ್ಷದ ಸೈನಿಕರನ್ನು ನಿರುತ್ಸಾಹಗೊಳಿಸುವ ಒಂದು ಸಾಧನವಾಗಿ ಉಪಯೋಗಿಸುವುದು. ಈ ದೃಷ್ಟಿಯಿಂದ ಗಮನಿಸಿದಾಗ ಯುದ್ಧರಂಗದಲ್ಲಿ ಧ್ವಜಗಳ ಸ್ಥಾನ ಮಹತ್ವದ್ದಾಗಿರಬೇಕೆಮದು ತೋರುತ್ತದೆ.

ಧ್ವಜಗಳನ್ನು ಒಂದು ಉದ್ದನೆಯ ಸ್ಥಂಭಕ್ಕೆ ಸಿಗಿಸುತ್ತಿದ್ದರು. ಇವುಗಳನ್ನು ಸೈನಿಕರು ಹಿಡಿದಿರುತ್ತಿದ್ದರು. ಕೆಲವೊಮ್ಮೆ ಅಂಬಾರಿಗಲಿಗೆ ಧ್ವಜಗಳನ್ನು ಕಟ್ಟುತ್ತಿದ್ದರೆಮದು ತೋರುತ್ತದೆ. ಯುದ್ಧರಂಗದಲ್ಲಿ ಧ್ವಜಗಳನ್ನು ಹಿಡಿದು ನಿಂತಿರುವ ಚಿತ್ರನವನ್ನು ಕೋಲಾರ (ಚಿತ್ರ ೧೭೫), ಬೇಗೂರು (ಚಿತ್ರ ೨೫೪) ಮತ್ತು ಹಾನುಗಲ್ಲುಗಳಲ್ಲಿರುವ ವೀರಗಲ್ಲುಗಳಲ್ಲಿ ಗುರುತಿಸಬಹುದಾಗಿದೆ. ಅಂಬಾರಿಗೆ ಧ್ವಜವನ್ನು ಕಟ್ಟಿರುವುದನ್ನು ಶ್ರವಣಗುಡಿಯ ವೀರಗಲ್ಲಿನ ಶಿಲ್ಪದಲ್ಲಿ ಗುರುತಿಸಬಹುದು (ಚಿತ್ರ ೧೭೪). ವೀರಗಲ್ಲುಗಳ ಶಿಲ್ಪ ಸ್ಪಷ್ಟವಾಗಿಲ್ಲದಿರುವುದರಿಂದ ಧ್ವಜಗಳ ಮೇಲೆ ಯಾವುದಾದರೂ ಚಿಹ್ನೆಗಳನ್ನು ಬಿಡಿಸಿರುತ್ತಿದ್ದರು ಎಂಬುದನ್ನು ಹೇಳುವುದು ಕಷ್ಟದ ಮಾತಾಗುತ್ತದೆ. ಎಲ್ಲಾ ವೀರಗಲ್ಲುಗಳಲ್ಲಿಯೂ ಧ್ವಜದ ಆಕಾರ ಒಂದೇ ರೀತಿಯಲ್ಲಿಲ್ಲದೆ ಬೇರೆ ಬೇರೆ ಆಕಾರಗಳಲ್ಲಿರುವುದು ಮುಖ್ಯವಾಗಿ ಗಮನಿಸಬೇಕಾದ ಅಂಶ.

ರಾಜ ಛತ್ರಿ (ಚಿತ್ರ ೧೩೭ ರಿಂದ ೧೫೩)

ಧ್ವಜವು ಹೇಗೆ ಒಂದು ಆಡಳಿತ ವ್ಯವಸ್ಥೆಯ ಸಂಕೇತವಾಗಿತ್ತೋ ಹಾಗೆಯೇ ರಾಜಛತ್ರಿಯೂ ಆಡಳಿತ ವ್ಯವಸ್ಥೆಯ ಮತ್ತೊಂದು ಸಂಕೇತ. ಛತ್ರಿ ನೆರಳನ್ನು ಸಂಕೇತಿಸುತ್ತದೆ. ರಾಜಛತ್ರಿಯು ಒಂದು ಆಳ್ವಿಕೆಯ ಅಧೀನಲದಲಿರುವ ಪ್ರಾಂತ್ಯದ ಜನರ ಸಂರಕ್ಷಣೆಯ ಸಂಕೇತವಾಗಿ ಪರಿಗಣಿಸಲ್ಪಟ್ಟಿದೆ. ರಾಜಧ್ವಜಕ್ಕೆ ಇದ್ದ ಗೌರವವೇ ಇದಕ್ಕೂ ಇತ್ತು. ಯಾವುದೇ ಅರಸನು ಯುದ್ಧದಲ್ಲಿ ಬೇರೆಯ ಪ್ರಾಂತ್ಯಗಳನ್ನು ಗೆದ್ದು ತನ್ನ ವಶಕ್ಕೆ ತೆಗೆದುಕೊಮಡರೆ ಆಗ ರಾಜನಾಳ್ವಿಕೆಗೊಳಪಟ್ಟ ಜನ ಆ ಪ್ರದೇಶವೂ ತಮ್ಮ ರಾಜಛತ್ರಿಯ ಅಂದರೆ ಅಧಿಕಾರ ವ್ಯಾಪ್ತಿಯೊಳಗೆ ಬಂದಿತೆಂದು ಭಾವಿಸುತ್ತಿದ್ದರು. ಈ ರೀತಿಯ ಭಾವನೆಗಳನ್ನು ಅರಸರನ್ನು ಹೊಗಳುತ್ತಾ ಹೇಳುವ ""ಏಕಚ್ಛತ್ರಚ್ಛಾಯೆಯಿನಾಳುತ್ತಮಿರೆ" ಎಂಬ ಪದವೃಂದದಿಂದ ತಿಳಿಯಬಹುದಾಗಿದೆ.

ವೀರಗಲ್ಲುಗಳನ್ನು ಗಮನಿಸಿದಾಗ ರಾಜಛತ್ರಿಯ ವಿವರಗಳು ಅನೇಕ ವೀರಗಲ್ಲುಗಳ ಶಿಲ್ಪದಲ್ಲಿ ಮೂಡಿಬಂದಿರುವುದನ್ನು ಗಮನಿಸಬಹುದು. ಆರಂಭಕಾಲದ ವೀರಗಲ್ಲುಗಳಿಂದ ಹಿಡಿದು ವಿಜಯನಗರದ ಅರಸರ ಕಾಲದವರೆಗಿನ ವೀರಗಲ್ಲುಗಳ ಶಿಲ್ಪದಲ್ಲಿ ಇವು ದೊರೆಯುತ್ತವೆ. ಈ ರೀತಿಯ ರಾಜಛತ್ರಿಗಳನ್ನು ಅರಸರಿಗೆ ಮಾತ್ರವಲ್ಲದೆ, ಪ್ರಮುಖ ಪ್ರತಿಷ್ಠಿತರಾದ ವೀರರಿಗೆ ಅವರ

ಸೇವರಕು ಯುದ್ಧರಂಗದಲ್ಲಿ ಹಿಡಿಯುತ್ತಿದ್ದರೆಂದು ಹೇಳಬಹುದು. ಯುದ್ಧರಂಗಕ್ಕೆ ಹೊರಡುವಾಗ ಗೌರವಸೂಚಕವಾದ ಈ ಛತ್ರಿಯನ್ನು ಹಿಡಿಸಿಕೊಂಡು ಹೋಗುತ್ತಿದ್ದಿರಬೇಕು. ಯುದ್ಧರಂಗದಲ್ಲಿ ಛತ್ರಿಯನ್ನು ಹಿಡಿಯುವರಿಗೆ ಸ್ಥಾನವಿಲ್ಲದಿರುವುದರಿಂದ ಅವರು ಒಂದೆಡೆ ನಿಂತಿರುತ್ತಿದ್ದರೆಂದು ತೋರುತ್ತದೆ. ವೀರಗಲ್ಲಿನ, ಅದು ರಾಜಪ್ರಮುಖನಾಗಿದ್ದರೆ, ಸಾಮಾನ್ಯವಾಗಿ ಅವನಿಗೆ ಛತ್ರಿ ಹಿಡಿದಿರುವ ಶಿಲ್ಪದ ವಿವರಗಳನ್ನು ಬಿಡಿಸಲಾಗಿರುತ್ತದೆ. ರಾಜಛತ್ರಿಯನ್ನು ವ್ಯಕ್ತಿಗೆ ಹಿಡಿದಿರುವಂತೆ ಚಿತ್ರಿಸುವುದರ ಮೂಲಕ ಸತ್ತವ್ಯಕ್ತಿ ರಾಜಪ್ರಮುಖ ಎಂಬುದನ್ನು ಸೂಚ್ಯವಾಗಿ ತಿಳಿಸಲು ಈ ವಿವರಗಳನ್ನು ಶಿಲ್ಪದಲ್ಲಿ ತಂದಿರಬಹುದು.

ಪಲ್ಲಕ್ಕಿ (ಚಿತ್ರ ೧೫೪ ರಿಂದ ೧೫೮)

ಕರ್ನಾಟಕದಲ್ಲಿ ರಥಗಳು ಬಳಕೆಯಲ್ಲಿದ್ದಂತೆ, ಯಾವುದೇ ವೀರಗಲ್ಲಿನ ಶಿಲ್ಪದಿಂದಾಗಲೀ, ಪಾಠದಿಂದಾಗಲೀ, ತಿಳಿದುಬರುವುದಿಲ್ಲ. ಆದರೆ ಆ ರಥದ ಸ್ಥಳವನ್ನು ಪಲ್ಲಕ್ಕಿಗಳು ಸ್ವಲ್ಪಮಟ್ಟಿಗೆ ತುಂಬುತ್ತಿದ್ದವೆಮದು ತೋರುತ್ತದೆ. ಯುದ್ಧರಂಗದಲ್ಲಿ, ಯುದ್ಧಮಾಡುವಾಗ ಇದನ್ನು ಯಾವ ರೀತಿಯಲ್ಲಿ ಬಳಸುವುದೂ ಅಸಾಧ್ಯದ ಮಾತೇ ಆದರೂ, ಯುದ್ಧರಂಗಕ್ಕೆ ಹೊರಡುವಾಗ ಅರಸನೋ, ನಾಯಕನೋ, ದಂಡಾಧಿಪತಿಯೋ ಪಲ್ಲಕ್ಕಿಯಲ್ಲಿ ಕುಳಿತು ಹೋಗುತ್ತಿದ್ದನು. ಇದನ್ನು ಮೂರು ನಾಲ್ಕು ಜನ ಹೊತ್ತು ಹೋಗುತ್ತಿದ್ದರು. ಈ ರೀತಿ ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುತ್ತಿರುವ ಚಿತ್ರ ವೀರಗಲ್ಲುಗಳಲ್ಲಿ ದೊರೆಯುತ್ತದೆ. ಕಾಯ್ಕಿಣಿಯ ಮತ್ತು ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆ ಬಳಿ ಇರುವ ವೀರಗಲ್ಲುಗಳ ಶಿಲ್ಪದಲ್ಲಿ ವೀರನು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಹೋಗುತ್ತಿರುವ ವಿವರಗಳನ್ನು ಗಮನಿಸಬಹುದು. (ಚಿತ್ರ ೨೧೦) ಈ ರೀತಿ ಯುದ್ಧರಂಗಕ್ಕೆ ಅರಸರು ಮೇನೆ ಅಥವಾ ಪಲ್ಲಕ್ಕಿಯಲ್ಲಿ ಕುಳಿತುಹೋಗುತ್ತಿದ್ದರೆಂಬುದಕ್ಕೆ ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣದ ಗಾಂಜಾಂನಲ್ಲಿರುವ ದರಿಯಾದೌಲತ್ ಚಿತ್ರಗಳು ಉದಾಹರಣೆಯಾಗಬಲ್ಲವು. ಟೀಪುಸುಲ್ತಾನನು ಮಾಡಿದ ಯುದ್ಧವನ್ನು ಚಿತ್ರಿಸುವ ಭಿತ್ತಿ ಚಿತ್ರದಲ್ಲಿ ಟೀಪು ಮೇನೆಯಲ್ಲಿ ಕುಳಿತು ಯುದ್ಧರಂಗಕ್ಕೆ ಹೋಗುತ್ತಿರುವಂತೆ ತೋರಿಸಲಾಗಿದೆ.[೪೬]

---

೪೬ ಚಿತ್ರ ನೋಡಿ. M. A. R.1935.

ಕುದುರೆಯ ದಳ

ಹೊಯ್ಸಳರ ಕಾಲದ ಅನೇಕ ವೀರಗಲ್ಲುಗಳಲ್ಲಿ 'ಕುದುರೆಯ ದಳ' ಮತ್ತು 'ತುರಗ ಸಾಧನ' ಎಂಬ ಒಂದೇ ಅರ್ಥದ ಪರ್ಯಾಯ ಪದಗಲನ್ನು, ಯುದ್ಧರಂಗದಲ್ಲಿನ ಕುದುರೆಗಳ ಪಡೆಯನ್ನು ಸೂಚಿಸುವುದಕ್ಕಾಗಿ ಪ್ರಯೋಗಿಸಿರುವುದನ್ನು ಗಮನಿಸಬಹುದು.[೪೭] ಬಹುಪಾಲು ವೀರಗಲ್ಲುಗಳಲ್ಲಿ ಇವುಗಳ ಪ್ರಸ್ತಾಪ ಬರುವುದನ್ನು ಗಮನಿಸಿದರೆ, ಇವರ ಕಾಲದಲ್ಲಿ, ಯುದ್ಧವನ್ನು ಮಾಡುವಲ್ಲಿ ಹೆಚ್ಚಿನ ಸಂಖ್ಯೆಯ ಕುದುರೆಗಳನ್ನು ಬಳಸುತ್ತಿದ್ದರೆಂದು ತೋರುತ್ತದೆ. ಅಂದರೆ ಇವರಿಗಿಂತ ಹಿಂದಿನ ಅರಸುಮನೆತನಗಳವರಿಗೆ ಕುದುರೆಯ ಉಪಯೋಗವೇ ತಿಳಿಯದು ಎಂಬುದು ನಮ್ಮ ಅಭಿಪ್ರಾಯವಲ್ಲ. '"ಪ್ರಾಚೀನ ಕರ್ನಾಟಕದ ಸೇನೆಯಲ್ಲಿ ಕುದುರೆಗಿಂತ ಆನೆಯೇ ಹೆಚ್ಚು ಪ್ರಮುಖ ಸ್ಥಾನವನ್ನು ಪಡೆದಿತ್ತು."[೪೮] ಪ್ರಾಚೀನ ಕಾಲದಲ್ಲಿದ್ದ ಆನೆಯ ಸ್ಥಾನವನು ಹೊಯ್ಸಳರ ಕಾಲದಲ್ಲಿ ಕುದುರೆಗಳು ಪಡೆದಿದ್ದವು ಎಂಬುದು ನಮ್ಮ ಅಭಿಪ್ರಾಯ.

ಹೊಯ್ಸಳರ ಆಡಳಿತಾವಧಿಯಲ್ಲಿ ಯುದ್ಧದಲ್ಲಿ ಉಪಯೋಗಿಸುವುದಕ್ಕೆಂದೇ ಅಶ್ವಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದರು. ಹೀಗೆ ತರಿಸಿಕೊಂಡ ಕುದುರೆಗಳನ್ನು ಸವಾರಿ ಮಾಡಲು ಯೋಧರಿಗೆ ವಿಶೇಷ ಶಿಕ್ಷಣವನ್ನು ನೀಡಲಾಗುತ್ತಿತ್ತು. ವಿಷ್ಣುವರ್ಧನನ ರಾಣಿಯಾದ ಬೊಮ್ಮಲದೇವಿಯ ನೇತೃತ್ವದಲ್ಲಿ ಕುದುರೆ ಸವಾರಿಯ ಶಿಕ್ಷಣವನ್ನು ನೀಡುವ ಶಾಲೆಯೊಂದನ್ನು ಸ್ಥಾಪಿಸಲಾಗಿತ್ತು. ಇಲ್ಲಿ 'ಅನ್ತಪಾಲ ಸಾಹಣಿ' ಎಂಬುವನು ಉಳಿದ ಯೋಧರಿಗೆ ತರಬೇತಿಯನ್ನು ಕೊಡುವ ಮುಖ್ಯಸ್ಥನಾಗಿದ್ದ.[೪೯]

---

೪೭ E. C. VII. Sa. 58 ಸು. ೧೨ನೇ ಶತ, "ಎತ್ತಿದ ಕುದುರೆಯ ದಳಮಂ ಸಲುತ್ತಿ ಕಾಲಾಳನಂ".
M. A. R.1932. 30, 32, 1125 "ಕುದುರೆಯ ದಳ".
E. C. V. BI. 178, "ತನಗಿದಿರಾನ್ತ ಮಾರ್ವ್ವಲದ ಕುದುರೆಯ ದಳದ ಮೇಲೆ ಪಾಯಿಸಿ".
E. C. VIII. Sb. 139, 1173. "ಕುದುರೆಯ ದಳದ ಮೇಲಿಕ್ಕಿ ಕೊಂದು".
M. A. R.1937. 23, 1276 "ಸಾಸಿರ್ಕ್ಕುದುರೆದಳಮಂ ದುಮ್ಮಿ ಮುಟ್ಟಿಟ್ಟಿ ಕೊಂದಂ".
E. C. VII. HI. 43, 1232 "ನಿಜತುರಂಗದಳಂಗೂಡಿ ಸೇನಾ ಸಮೂಹಂ ಘನ ಘೋಷಂಗೊಂಡು".
M. A. R.1924. 64, 1162. "ತುರಗ ಸಾಧನಮಂ ಅನ್ತು ಇಱಿವಲ್ಲಿ".

೪೮ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೫

೪೯ William Coeldho : The Hoysala Vamsa - ಪು. ೨೫೯–೫೪

ಯುದ್ಧ ಮಾಡುವ ಎರಡೂ ಪಕ್ಷದವರಲ್ಲಿ ಕುದುರೆಗಳು ಇರುತ್ತಿದ್ದುದರಿಂದ ಕುದರೆಯ ಮೇಲಿದ್ದ ಯೋಧರು ಕುದುರೆಗಳ ಮೇಲಿದ್ದ ತಮ್ಮ ವೈರಿಗಳೊಂದಿಗೆ ಯುದ್ದ ಮಾಡುತ್ತಿದ್ದರೆಂದು ತೋರುತ್ತದೆ. (ಚಿತ್ರ ೧೬೦) ಇಂಥ ಯುದ್ಧಗಳನ್ನೇ ಬಹುಶಃ ವೀರಗಲ್ಲುಗಳ ಪಾಠದಲ್ಲಿ "ಕುದುರೆ ಕಾಳಗ' ಎಂದು ಕರೆದಿರಬಹುದೆಂದು ತೋರುತ್ತದೆ.[೫೦] ಕುದರೆಗಳನ್ನು ಸೇನೆಯ ಒಂದು ಅಂಗವಾಗಿ ಪರಿಗಣಿಸಲಾಗಿತ್ತು. ಇದಕ್ಕೆ ಮುಖ್ಯ ಕಾರಣವೆಂದರೆ, ಇದನ್ನು ಹತ್ತಿ ಯುದ್ಧ ಮಾಡಬಹುದು ಮತ್ತು ಶತ್ರುವನ್ನು ಹಿಡಿಯುವಲ್ಲಿ ಅಥವಾ ಅವನಿಂದ ತಪ್ಪಿಸಿಕೊಳ್ಳುವಲ್ಲಿ ಇದರ ಓಟದ ಸಹಾಯವನ್ನು ಪಡೆಯಬಹುದಾಗಿತ್ತು ಎನ್ನುವುದು. ಸುಮಾರು ಹನ್ನೆರಡನೆಯ ಶತಮಾನದ ವೇಳೆಗೆ, ಕರ್ನಾಟಕದ ಯುದ್ಧ ತಂತ್ರಗಳಲ್ಲಿ ಕುದುರೆಗಳು ಬಹುಮುಖ್ಯವಾದ ಪಾತ್ರವನ್ನು ವಹಿಸಿದುವು. ಯುದ್ದ ಮಾಡುವಲ್ಲಿ, ಯುದ್ಧವನ್ನು ಗೆಲ್ಲುವಲ್ಲಿ ಕುದುರೆ ಅತ್ಯಂತ ಅವಶ್ಯಕವದ ಸಾಧನವೆಂದು ಪರಿಗಣಿತವಾಯಿತು. ಆದ್ದರಿಂದ ಯುದ್ಧಭೂಮಿಯಲ್ಲಿ ಶತ್ರುಗಳ ಶಕ್ತಿಯನ್ನು ಕುಂದಿಸಲು ಕೆಲವೊಮ್ಮೆ ಕುದುರೆಗಳನ್ನು ಬಂಧಿಸಿ, ಅವುಗಳ ಮೇಲಾಳನ್ನು ಕೊಲ್ಲುತ್ತಿದ್ದರೆಂದು ತೋರುತ್ತದೆ.[೫೧] ಕೆಲವು ಸಮಯಗಳಲ್ಲಿ ಕುದುರೆಯನ್ನೂ ಕೊಲ್ಲುತ್ತಿದ್ದರು.[೫೨] ಕುದುರೆಯ ಮೇಲಿರುವ ಯೋಧರೊಂದಿಗೆ ಕುದುರೆಯ ಯೋಧರೇ ಹೋರಾಡಬೇಕೆಂಬ ನಿಯಮವಿದ್ದಂತೆ ತೋರುವುದಿಲ್ಲ. ಕಾಲಾಳುಗಳಿಗೂ ಕುದುರೆಯ ಮೇಲಿನ ಸವಾರರಿಗೂ ಸಹ ಹೋರಾಟ ನಡೆಯುತ್ತಿದ್ದಂತೆ ವೀರಗಲ್ಲುಗಳ ಶಿಲ್ಪದಿಂದ ತಿಳಿದು ಬರುತ್ತದೆ. (ಚಿತ್ರ ೧೭೦, ೧೭೧)

ಕಾಲಾಳುಗಳ ಮೇಲೆ ಯುದ್ಧ ಮಾಡುವುದಕ್ಕಾಗಿ ಕುದುರೆಗಲನ್ನು ಬಳಸುತ್ತಿದ್ದಂತೆಯೇ ಆನೆಗಳ ಮೇಲಿನ ಯೋಧರೊಡನೆ ಯುದ್ಧವನ್ನು ಮಾಡುವುದಕ್ಕು ಅವುಗಳನ್ನು ಬಳಸುತ್ತಿದ್ದರು. ಈ ಪ್ರಾಣಿಗೆ ಇದ್ದ ಸಹಜವಾದ ನೆಗೆಯುವಂತಹ ಗುಣವನ್ನು ಇಂತಹ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುತ್ತಿದ್ದರು. ಕುದುರೆಯ ಮೇಲಿನ ಸವಾರ, ಕುದುರೆಯ ಲಗಾಮನ್ನು ಹಿಡಿದೆಳೆದು ಕುದುರೆಯನ್ನು ಪುಟಿಯುವಂತೆ ಮಾಡಿದಾಗ ಅದು ತನ್ನ ಎರಡು ಹಿಂಗಾಲುಗಳ ಮೇಲೆ ನಿಂತು, ತನ್ನ ಎರಡು ಮುಂಗಾಲುಗಳನ್ನೂ ಮೇಲಕ್ಕೆತ್ತಿ, ಆನೆಯ ಕುಂಭಸ್ಥಳಕ್ಕೆ ಒದೆಯುತ್ತಿತ್ತು. (ಚಿತ್ರ ೨೪೫ ಮತ್ತು ೨೪೬) ಇದೇ ಸಂದರ್ಭವನ್ನು ಕುದುರೆಯ ಮೇಲಿನ ರಾಹುತ

---

೫೦ E. C. XV. Ag. 109, 1286 "ಮಾಚೆಯನಾಯಕನು ಕುದುರೆಯ ಕಾಳೆಗ ಬಿದ್ದಲ್ಲಿ"

೫೧ M. A. R.1928.31, 1056 ಮತ್ತು E.C.V. BI. 13, ಸು. ೧೩ನೇ ಶತ. E. C. VIII. Sb. 559, 1448

೫೨ E. C. V. Ak. 6, ಸು. ೧೧ನೇ ಶತ. "ನೊಳಂಬಕೆಱೆಯ ಕಾಳೆಗದೊಳು ಮೇಲಾಳು ಕುದುರೆಯ ನಿಱಿದು ವೀರಸ್ವರ್ಗಕ್ಕೆ ಸುಂದ".
S.I.I. IX. Pt. I 284, 1149. "ಒಂದು ಕುದುರೆಯಂ ರಾಹುತನಂ ಕೊಂದು".

ಉಪಯೋಗಿಸಿಕೊಂಡು ಈಟಿಯಿಂದಲೊ, ಕತ್ತಿಯಿಂದಲೊ ಆನೆಯ ಮೇಲಿನ ಅಂಬಾರಿಯೊಳಗೆ ಕುಳಿತಿದ್ದ ಯೋಧರನ್ನು ಸಂಹರಿಸಲು ಪ್ರಯತ್ನಿಸುತ್ತಿದ್ದ. ಈ ತಂತ್ರವನ್ನು ಬಳಸಿ ಪೆರ್ಗ್ಗಡೆ ಎಂಬುವವನು ತನ್ನ ಕುದುರೆಯನ್ನು ಆನೆ ಕುಂಭಸ್ಥಳಕ್ಕೆ ಹಾರಿಸಿದ ವಿಷಯ ವೀರಗಲ್ಲೊಂದರ ಪಾಠದಿಂದ ತಿಳಿಯುತ್ತದೆ.[೫೩] ಹತ್ತನೆಯ ಶತಮಾನದ ಎರಡು ವೀರಗಲ್ಲುಗಳ ಶಿಲ್ಪದಿಂದ ಕುದುರೆ ತನ್ನ ಎರಡು ಹಿಂಗಾಲುಗಳ ಮೇಲೆ ನಿಂತು ದೇಹದ ಮುಂಭಾಗವನನು ಮೇಲತ್ತಿ, ತನ್ನ ಎರಡೂ ಮುಂಗಾಲುಗಳಿಂದ ಆನೆಯ ಕುಂಭಸ್ಥಳಕ್ಕೆ ಒದೆಯುತ್ತಿರುವಂತೆ, ಆನೆಯನ್ನು ತುಳಿಯುತ್ತಿರುವಂತೆ, ತಮ್ಮ ಪಕ್ಷದ ಆನೆಗೆ ಒದಗಿದ ಈ ಸ್ಥಿತಿಯನ್ನು ಕಂಡು ಹೆದರಿದ ಮತ್ತೊಂದು ಆನೆಯ ಮೇಲಿನ ಯೋಧರು ಭಯದಿಂದ ಹಿಮ್ಮಟ್ಟಿ ಓಡುತ್ತಿರುವಂತೆ, ಇರುವ ವಿವರಗಳು ದೊರೆಯುತ್ತವೆ. (ಚಿತ್ರ ೨೪೬)

ತಮ್ಮ ಪರಾಕ್ರಮದಿಂದ ಪ್ರಸಿದ್ಧಿ ಹೊಂದಿದ ವೀರರು ಒಂದು ಸೈನ್ಯದಲ್ಲಿದ್ದಂತೆಯೇ ಕುರುಹಿನ ಕುದುರೆಗಳೂ ಸೈನದಲ್ಲಿರುತ್ತಿದ್ದುವೆಂದು ತೋರುತ್ತದೆ. ಕ್ರಿಶ. ೧೨೪೭ ರ ವೀರಗಲ್ಲಿನ ಪಾಠವೊಂದರಿಂದ ವೀರನೊಬ್ಬನು, ""ಕುಱುಹಿನ ಕುದುರೆ" ಗಳನ್ನೂ ಮತ್ತು ""ಸಂದಱಿಕೆಯ ನಾಯಕರನಿಱಿದು" ತನ್ನ ಪರಾಕ್ರಮವನ್ನು ಯುದ್ಧರಂಗದಲ್ಲಿ ಮೆರೆದ ವಿಷಯ ತಿಳಿಯುತ್ತದೆ.[೫೪]

ವೀರಗಲ್ಲುಗಳ ಶಿಲ್ಪವನ್ನು ಆಧರಿಸಿ ಕುದುರೆಯ ಮೇಲೆ ಕುಳಿತ ಯೋಧನು ತನ್ನ ಎಡಕೈಯಲ್ಲಿ ಲಗಾಮನ್ನು ಹಿಡಿದು ಬಲಗೈಯಲ್ಲಿ ಕತ್ತಿ ಮುಂತಾದ ಆಯುಧಗಳನ್ನು ಹಿಡಿದು ಪ್ರತಿಪಕ್ಷದವರೊಡನೆ ಯುದ್ಧ ಮಾಡುತ್ತಿದ್ದನೆಂದು ಹೇಳಬಹುದು. ಕುದುರೆಯ ಮೇಲೆ ಕುಳಿತು ಬಿಲ್ಲು ಬಾಣಗಳನ್ನು ಪ್ರಯೋಗ ಮಾಡುತ್ತಿರುವ ಯೋಧರ ಶಿಲ್ಪ ವೀರಗಲ್ಲುಗಳಲ್ಲಿ ಎಲ್ಲಿಯೂ ದೊರೆಯುವುದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಕುದುರೆಯ ಮೇಲೆ ಕುಳಿತು ಬಾಣಪ್ರಯೋಗ ಮಾಡುವುದು ಅಸಾಧ್ಯದ ಮಾತೇ ಆಗುತ್ತದೆ. ಕತ್ತಿ, ಈಟಿ ಮುಂತಾದ ಆಯುಧಗಳಾದರೆ ಎಡಗೈಯಲ್ಲಿ ಲಗಾಮು ಮತ್ತು ಗುರಾಣಿ ಎರಡನ್ನೂ ಹಿಡಿದು ಬಲಗೈಯಲ್ಲಿ ಈ ಆಯುಧವನ್ನು ಝಳಪಿಸುತ್ತ ಶತ್ರು ಪಕ್ಷದವರನ್ನು ಸಂಹರಿಸುವುದು ಸುಲಭವಾಗುತ್ತದೆ. ಅಂದ ಮಾತ್ರಕ್ಕೆ ಕುದುರೆಯ ಮೇಲಿನ ಯೋಧರು ಬಿಲ್ಲುಬಾಣಗಳನ್ನು ಕೊಂಡೊಯ್ಯುತ್ತಿರಲಿಲ್ಲವೆಂದು ಹೇಳಬರುವುದಿಲ್ಲ. ವೀರನೊಬ್ಬನು ಕುದುರೆಯ ಮೇಲೆ ಕುಳಿತು ಬಿಲ್ಲು ಬಾಣಗಳನ್ನು ಹಿಡಿದು ಹೋಗುತ್ತಿರುವಂತೆ

---

೫೩ E. C. XII. Mi. 71, ಸು. ೯೨೦

೫೪ E. C. VII. Hl. 55, 1247

ಶಿಲ್ಪದ ವಿವರಗಳಿರುವ ವೀರಗಲ್ಲನ್ನು ಬೆಂಗಳೂರಿನ ಸರಕಾರಿ ವಸ್ತುಸಂಗ್ರಹಾಲಯದಲ್ಲಿ ನೋಡಬಹುದಾಗಿದೆ. ಯುದ್ಧವೆಂಬುದು ಅನಿಶ್ಚಿತ ಮತ್ತು ನಿಯಮ ರಹಿತವಾದ ಸಮಯಸ್ಫೂರ್ತಿಯಿಂದ ಹೋರಾಡಿ ಗೆಲ್ಲಬಹುದಾದ ಹೋರಾಟವಾದ ಕಾರಣ, ಕುದುರೆಯ ಸವಾರರು ಅನುಕೂಲವನ್ನೂ ಮತ್ತು ಸಂದರ್ಭವನ್ನೂ ಗಮನಿಸಿ ಯುದ್ಧ ಮಾಡುತ್ತಿದ್ದರು. ಕುದುರೆಯ ಮೇಲೆ ಕುಳಿತು ಯುದ್ಧ ಮಾಡುವುದು ಸಾಧ್ಯವಿಲ್ಲ ಎಂದು ಅನ್ನಿಸಿದಾಗ ಕುದುರೆಯಿಂದ ಇಳಿದು ರಣರಂಗವನ್ನು ಪ್ರವೇಶಿಸುತ್ತಿದ್ದರು. ಈ ಅಂಶ ಕ್ರಿಶ. ಸು. ೭೮೦ ಒಂದು ಶಾಸನದಿಂದ ತಿಳಿಯುತ್ತದೆ. ತನ್ನ ಪ್ರಭುವಿನ ಆಜ್ಞೆಯಂತೆ ಯುದ್ಧಕ್ಕೆ ಹೊರಟ ಕುದುರೆಯ ಮೇಲಿನ ಯೋಧನು ರಣರಂಗದಲ್ಲಿ ಕುದುರೆಯ ಮೇಲೆ ಕುಳಿತು ಯುದ್ಧ ಮಾಡಲು ಕಷ್ಟವಾಗುತ್ತದೆಂದು (ಕುದುರೆಗೆ ಪಾಕಿಗಿಲ್ಲ ಆಗೆ) ತಿಳಿದು ಕುದುರೆಯಿಂದ ಇಳಿದು ಶತ್ರುಗಳ ಮೇಲೆ ಹೋರಾಡಿ ಸಾಯುತ್ತಾನೆ.[೫೫] ಈ ಅಂಶವನ್ನು ಕೆಲಮಟ್ಟಿಗೆ ವೀರಗಲ್ಲುಗಳ ಶಿಲ್ಪದಿಂದಲೂ ಸಮರ್ಥಿಸಬಹುದೆಂದು ತೋರುತ್ತದೆ. ಕೋಲಾರ, ಹಿರೇಬಿದನೂರು, ಎಲೇಬೇತೂರು, ಬೇಗೂರು ಮುಂತಾದ ಗ್ರಾಮಗಳ ವೀರಗಲ್ಲುಗಳ ಶಿಲ್ಪದಲ್ಲಿ ವೀರನ ಕುದುರೆ ಒತ್ತಟ್ಟಿಗೆ ನಿಂತಿರುವಂತೆ ಬಿಡಿಸಲಾಗಿದೆ. ವೀರ ಅದರಿಂದ ಇಳಿದು ನಡೆಯುತ್ತಾ ರಣರಂದಲ್ಲಿ ಹೋರಾಡಲು ನಡೆಯುತ್ತಿದ್ದಾನೇನೋ ಎನ್ನುವಂತೆ, ಗುರಾಣಿ ಮತ್ತು ಕತ್ತಿಯನ್ನು ಹಿಡಿದು ಹೋಗುತ್ತಿರುವ ಚಿತ್ರವಿದೆ.

ಕುದುರೆಯ ಮೇಲಿನ ಉಡುಪುಗಳು

ಈ ಬಗ್ಗೆ ಬರೆಯುವಾಗ ಮುಖ್ಯವಾಗಿ ಅವಲಂಬಿಸಿರುವ ಮೂಲಸಾಮಗ್ರಿ ಎಂದರೆ ವೀರಗಲ್ಲುಗಳ ಶಿಲ್ಪ. ಆರಂಭಕಾಲದ ವೀರಗಲ್ಲುಗಳಿಂದ ವಿಜಯನಗರದ ಕಾಲದವರೆಗಿನ ವೀರಗಲ್ಲುಗಲ ಶಿಲ್ಪವನ್ನು ಗಮನಿಸಿದಾಗ ಕುದುರೆಯ ಮೇಲೆ ಸವಾರನು ಕುಳಿತುಕೊಳ್ಳಲು ಅನುಕೂಲವಾಗುವಂತೆ ಜೀನನ್ನು ಹಾಕುತ್ತಿದ್ದರೆಂದು ತಿಳಿಯುತ್ತದೆ. ಇಲ್ಲಿ ಕುದುರೆಯ ಹೊಟ್ಟೆಯ ಭಾಗವನ್ನು ಸಂಪೂರ್ಣವಾಗಿ ಮುಚ್ಚುತ್ತಿತ್ತು. ಜೀನಿನ ಮೇಲೆ ಕುಳಿತ ವ್ಯಕ್ತಿಗೆ ಅನುಕೂಲವಾಗುವಂತೆ ಕುದುರೆಯ ಬೆನ್ನಿನ ಮೇಲ್ಭಾಗದ ಜೀನನ್ನು ಉಬ್ಬು ತಗ್ಗು ಇರುವಂತೆ ಮಾಡಿರುತ್ತಿದ್ದರು. ಹಾಗೆಯೇ ಜೀನಿಗೆ ಸೇರಿರುವಂತೆ ಯೋಧನು ತನ್ನ ಕಾಲುಗಳನ್ನು ಇಟ್ಟುಕೊಳ್ಳಲೂ ಅನುಕೂಲ ಮಾಡಿರುತ್ತಿದ್ದರು. ಈ ಜೀನು ಅಲುಗಾಡದಂತಿರಲು ಒಂದು ಭಾಗದಿಂದ ಕುದುರೆಯ ಬಾಲದ ಕೆಳಗೆ ಹಾದು ಬಂದ ಪಟ್ಟಿಯೊಂದು ಬಂಧಿಸುತ್ತಿತ್ತು. ಇದೇ ರೀತಿಯಲ್ಲಿ ಕುದುರೆಯ ಕತ್ತಿ ಕೆಳಗಿನಿಂದ ಮತ್ತೊಂದು

---

೫೫ E. C. X. Sp. 5, ಸು. ೭೮೦

ಪಟ್ಟಿಯನ್ನು ಕಟ್ಟುತ್ತಿದ್ದರು. ಈ ಪಟ್ಟಿಗಳನ್ನು ಕುದುರೆಗೆ ಅಲಂಕರಣ ಸಾಮಗ್ರಿಗಳನ್ನು ಕಟ್ಟಲೂ ಉಪಯೋಗಿಸುತ್ತಿದ್ದರು. (ಚಿತ್ರ ೧೭೦, ೧೭೧, ೨೫೪)

ಲಗಾಮನ್ನು, ಹಲವಾರು ಪಟ್ಟಿಗಳ ಮೂಲಕ ಕಟ್ಟಿ ಸಿದ್ಧ ಮಾಡುತ್ತಿದ್ದರು. ಈ ಬಗ್ಗೆ ನಿಯಾಸ್ಕರನೆಂಬ ಗ್ರೀಕ್ ಪ್ರವಾಸಿಯ ಮಾತುಗಳು ಗಮನಾರ್ಹವಾಗಿವೆ. "ಕುದುರೆಯ ಬಾಯೊಳಗೆ ಕಬ್ಬಿಣದ ಕವಲುಗೋಲು ಇರುತ್ತದೆ. ಇದಕ್ಕೆ ಲಗಾಮು ತಗುಲಿಸಿರುತ್ತಾರೆ. ಸವಾರನು ಲಗಾಮನ್ನು ಹಿಡಿದು ಎಳೆದಾಗ ಕವಲುಗೋಲು ಕುದುರೆಯನ್ನು ಹತೋಟಿಗೆ ತರುತ್ತದೆ. ಏಕೆಂದರೆ ಕವಲುಗೋಲಿಗೆ ತಗುಲಿಸಿರುವ ಮುಳ್ಳುಗಳು ಬಾಯನ್ನು ಚುಚ್ಚುತ್ತದೆ."[೫೬] ಇದೇ ರೀತಿಯ ತಂತ್ರವನ್ನು ಪ್ರಾಚೀನ ಕರ್ನಾಟಕದ ಯೋಧರು ಅನುಸರಿಸಿರುವಂತೆ ವೀರಗಲ್ಲುಗಳ ಶಿಲ್ಪದಿಂದ ತಿಳಿದುಬರುತ್ತದೆ. ಯಾವ ಕುದುರೆಗೂ ಕಣ್ಣಿನ ಪಟ್ಟಿಯನ್ನು ಕಟ್ಟಿದಂತೆ ತೋರುವುದಿಲ್ಲ. ಎಲ್ಲಾ ಕಾಲದ ಎಲ್ಲಾ ವೀರಗಲ್ಲುಗಳ ಶಿಲ್ಪದಲ್ಲಿಯೂ ಕುದುರೆಗಳ ಕಣ್ಣುಗಳನ್ನು ಬಹಳ ಸ್ಪಷ್ಟವಾಗಿ ಬಿಡಿಸಲಾಗಿದೆ ಎಂಬುದನ್ನು ಗಮನಿಸಬೇಕು.

""ಯುದ್ಧಕ್ಕೆ ಸನ್ನದ್ಧವಾದ ಕುದುರೆಗೆ ಜೀನುಗಳನ್ನು ತೊಡಿಸುತ್ತಿದ್ದುದು ಮಾತ್ರವಲ್ಲದೆ ಅದರ ಮೇಲೆ ಸವಾರನ ಉಪಯೋಗಕ್ಕಾಗಿ ಬಿಲ್ಲು, ಪರಶು, ಸೂಲಿಗೆ, ತೀರಿಕೆ, ಬಿಂಢಿವಾಳ, ಕರವಾಳ, ಕರ್ಕಡೆ, ಚಕ್ರ ಮುಂತಾದ ಆಯುಧಗಳನ್ನು ಸಿದ್ಧಗೊಳಿಸುತ್ತಿದ್ದರು."[೫೭] ಈ ದೃಷ್ಟಿಯಿಂದ ಶ್ರವಣಗುಡಿಯ ವೀರಗಲ್ಲಿನ ಶಿಲ್ಪ ಗಮನಾರ್ಹವಾಗಿದೆ. (ಚಿತ್ರ ೧೫೫) ಕುದುರೆಯ ಮೇಲೆ ಕುಳಿತ ಯೋಧನೊಬ್ಬನು ತನ್ನ ಎದುರಾಳಿಗೆ ಈಟಿಯನ್ನು ಎಸೆದು, ಅದು ಅವನ ಕತ್ತಿನ ಮೂಲಕ ಹೋಗಿ ಬೆನ್ನಿನಲ್ಲಿ ಹೊರಬರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈಟಿಯನ್ನು ಹಿಡಿದಿದ್ದಾನೆ. ಈ ರೀತಿಯ ಚಿತ್ರಣವು ಒಬ್ಬ ವೀರನು ಮತ್ತೊಬ್ಬ ವೀರನಿಂದ ಹೇಗೆ ಹತನಾದ ಎಂಬುದನ್ನು ಕ್ರಿಯೆಯ ಮೂಲಕ ಶಿಲ್ಪದಲ್ಲಿ ನಿರೂಪಿಸುವ ಧ್ವನಿ ವಿಧಾನವೋ, ತಾನು ಎಸೆದ ಈಟಿಯಿಂದಾದ ಗಾಯವನ್ನೂ ಲೆಕ್ಕಿಸದೆ ಎದುರಾಳಿಯಾದ ವೀರನು ಹೋರಾಡುತ್ತಿರಬೇಕಾದರೆ ಅವನನ್ನು ಎದುರಿಸುವ ಸಲುವಾಗಿ ಈ ವೀರನು ತನ್ನ ಕುದುರೆಯ ಮೇಲಿದ್ದ ಮತ್ತೊಂದು ಈಟಿಯನ್ನು ಸಹಜವಗಿ ತೆಗೆದುಕೊಂಡು ಯುದ್ಧ ಮಾಡುವುದುನ್ನು ಶಿಲ್ಪಿ ಬಿಡಿಸಿದ್ದಾನೆಯೋ ಖಚಿತವಾಗಿ ಹೇಳುವುದು ಕಷ್ಟ

---

೫೬ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ ಭಾಗ–೧. ಪು. ೪೦

೫೭ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೭

ಇನ್ನು ಕುದುರೆಗಳಿಗೆ ಮಾಡುತ್ತಿದ್ದ ಅಲಂಕಾರ, ಹಾಕುತ್ತಿದ್ದ ಅಲಂಕರಣ ಸಾಮಗ್ರಿಗಳ ವಿಚಾರ, ಇದು ವೀರಗಲ್ಲನ್ನು ಮಾಡಿಸ ಶಿಲ್ಪಿಯ ಕುಸುರಿಗಾರಿಕೆಯ ಕಲಾನೈಪುಣ್ಯವನ್ನೂ ಮತ್ತು ಆ ಕಾಲದ ವೀರರ ಅಭಿರುಚಿಯನ್ನೂ ಅನುಸರಿಸಿ ವೀರಗಲ್ಲುಗಳ ಶಿಲ್ಪದಲ್ಲಿ ಮೂಡಿ ಬಂದಿರುವುದನ್ನು ಗಮನಿಸಬಹುದಾಗಿದೆ. (ಚಿತ್ರ ೧೫೯ ರಿಂದ ೧೭೧)

ಗಜ ಸೇನೆ

ಆನೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಪಳಗಿಸಿಕೊಂಡು, ಅದನ್ನು ಯುದ್ಧದಲ್ಲಿ ತಮ್ಮ ಬಲದ ಪ್ರಧಾನ ಅಂಶವನ್ನಾಗಿ ಮಾಡಿಕೊಂಡಿದ್ದುದು ಪ್ರಾಚೀನ ಭಾರತದ ಯುದ್ಧ ತಂತ್ರ ವೈಶಿಷ್ಟ್ಯ.[೫೮] ಅವುಗಳ ಬಲ, ಗಾತ್ರ, ಬಾಣಗಲ ಹೊಡೆತಕ್ಕೆ ಸಾಮಾನ್ಯವಾಗಿ ಜಗ್ಗದಂತಹ ಮಂದತೆ, ಕತ್ತಿ ಮುಂತಾದ ಆಯುಧಗಳ ಏಟಿಗೆ ಮೀರಿದ ಗಾತ್ರ ಮುಂತಾದ ಅಂಶಗಳು ಆನೆಗಳನ್ನು ಶತ್ರುಗಳ ಮೇಲೆ ಹೂಡಿಬಿಡುವುದಕ್ಕೆ ಮುಖ್ಯ ಕಾರಣವಾಯಿತೆನ್ನಬಹುದು. ಸೈನ್ಯದ ಮುಂಚೂಣಿಯಲ್ಲಿ ಆನೆಗಳನ್ನು ನಿಲ್ಲಿಸುತ್ತಿದ್ದುದರಿಂದ, ಶತ್ರುಪಕ್ಷದವರ ಮೇಲೆ ಬೀಳಲೂ, ಅವರ ಬಾಣಗಳಿಂದ ಸುರಕ್ಷಿತವಾಗಿರಲೂ ಅನುಕೂಲವಾಗುತ್ತಿತ್ತು. ಅಲ್ಲದೆ ಶತ್ರುಗಳನ್ನು ಅನತಿದೂರದಿಂದ ಎದುರಿಸಲು, ಶತ್ರುಗಳ ಅಭೇದ್ಯವಧ ದುರ್ಗಗಲನ್ನು ಭೇದಿಸಲು, ನದಿಗಳನ್ನು ದಾಟಲು ಆನೆಗಳು ಸಹಾಯ ಮಾಡುತ್ತಿದ್ದುವು.[೫೯] ಈ ಬಗ್ಗೆ ಕ್ರಿಶ. ೧೧೩೬ ತಂಬೂರಿನ ಶಾಸನವೊಂದು ಮಹತ್ವದ ಅಂಶವನ್ನು ನಮಗೆ ತಿಳಿಸುತ್ತದೆ. ಕೇತನಾಯಕನೆಂಬುವನು ಬಿಜ್ಜಳನ ಕಡೆಯ ಸೈನ್ಯವನ್ನು ಒತ್ತಿ ಬಂದು ಕುದುರೆಯ ದಳವನ್ನು ಕೊಲ್ಲಲು ಮುನ್ನುಗ್ಗಿದನು. ಇದನ್ನು ಗಮನಿಸಿದ ಬಿಜ್ಜಳ ಇವನನ್ನು ನಾನಲ್ಲದೆ ಬೇರೆ ಯವರು ಎದುರಿಸಲು ಸಾಧ್ಯವಿಲ್ಲ ಎಂದು ಯೋಚಿಸಿ ತನ್ನ ಆನೆಯೊಂದಿಗೆ ಕೇತನಾಯಕನ ಮೇಲೆ ಎರಗುತ್ತಾನೆ. ಆ ಹೋರಾಟದಲ್ಲಿ ಕೇತನಾಯಕನು ಮಡಿಯುತ್ತಾನೆ. (""ಕೇತನಾಯಕಂ [ಪರದಳ]ದ ಒಡ್ಡು ನೂಂಕಿದಲ್ಲಿ ಪೆಣಮಯಂ ಆಗೆ ಕುದುರೆಯ ದಳಮಂ ತಳ್ತು ಇರಿಯಲ್ ಇಂತಿವನ್ ಎನಗಲ್ಲದೆ ಸಾಧ್ಯವಲ್ಲ ಎಂದು ಬಿಜ್ಜಳಂ – ಕರಿಘಟಿಯಂನೂಕಲ್ ಆ ಕರಿಘಟಿಯಲುತಾಗಿಯಾನೆಯಂ ಮರಳ್ಚಿ ತನ್ನ ಬೀರಮಂಮೆರೆದು ಸುರಲೋಕ ಪ್ರಾಪ್ತನಾದಂ")[೬೦] (ಚಿತ್ರ ೧೭೬)

---

೫೮ B.P. Sinha : The Art of Warefare in Ancient India S.I.H.C. ಪು. ೧೨೮

೫೯ William Coelho : The Hoysala Vamsa.ಪು. ೨೫೪ ಮತ್ತು ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೩

೬೦ J.K.U.S.S Vol. II. ಪು. ೪೯

ಆನೆಯೊಡನೆ ಯುದ್ಧದಲ್ಲಿ ಹೋರಾಡಿ ಮಡಿದ ವೀರರ ವೀರಗಲ್ಲುಗಳು ದೊರೆಯುತ್ತವೆ. ವೀರಗಲ್ಲುಗಳು ಪಾಠ ಮತ್ತು ಶಿಲ್ಪ ಇವುಗಳನ್ನು ಆಧರಿಸಿ ಆನೆಯು ಯುದ್ಧಭೂಮಿಯಲ್ಲಿ ಯಾವ ಸ್ಥಾನವನ್ನು ಪಡೆದಿತ್ತು ಎಂಬುದನ್ನು ಪರಿಶೀಲಿಸಬೇಕು. ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ಅಶ್ವದಳದ ಹಾಗೆಯೇ ಆನೆ ದಳವೂ ಪ್ರಾಚೀನ ಕರ್ನಾಟಕದಲ್ಲಿತ್ತೆಂದು ತಿಳಿದು ಬರುತ್ತದೆ.

ಆನೆಯನ್ನು ಕುದುರೆಯ ಹಾಗೆ ವೀರನೇ ನಡೆಯಿಸಿಕೊಂಡು ಯುದ್ಧ ಮಾಡುವುದು ಅಸಾಧ್ಯದ ಮಾತು. ಆದ್ದರಿಂದ ಆನೆಯನ್ನು ಪಳಗಿಸಿ, ಅದನ್ನು ಯುದ್ಧರಂಗದಲ್ಲಿ ಅನುಕೂಲಕ್ಕೆ ತಕ್ಕಂತೆ ನಡೆಯಿಸುವ ಮಾವುತನ ಅವಶ್ಯಕತೆ ಇತ್ತು. ಈ ದೃಷ್ಟಿಯಿಂದ ಆನೆಯ ಮೇಲೆ ಕುಳಿತು ಯುದ್ಧ ಮಾಡುವ ವೀರನಷ್ಟೇ ಜವಾಬ್ದಾರಿ, ಎದೆಗಾರಿಕೆ, ಬುದ್ಧಿ ಕೌಶಲ ಮಾವುತನಿಗೂ ಇರಬೇಕಾಗಿತ್ತು. ಆನೆಯ ಮೇಲಿರುವ ಯೋಧನನ್ನು ಕೊಲ್ಲುವಲ್ಲಿ, ಎದುರಾಳಿಗಳು ಮೊದಲಿಗೆ ಮಾವುತನನ್ನು ಕೊಂದು, ವೀರನು ಆನೆಯನ್ನು ತನಗೆ ಬೇಕಾದ ಹಾಗೆ ನಡೆಯಿಸಲು ಅಶಕ್ತನಾಗುವಂತೆ ಮಾಡಿ, ಅವನನ್ನು ಎದುರಿಸುತ್ತಿದ್ದರು. ಯುದ್ಧದಲ್ಲಿ ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುವಲ್ಲಿ ಮಡಿದ ಮಾವುತರ ಬಗ್ಗೆಯೂ ಶಾಸನಗಳಿಂದ ವಿವರಗಳು ದೊರೆಯುತ್ತವೆ.

ನೊಳಂಬರಿಗೂ ಮತ್ತು ಗಂಗರಿಗೂ ನಡೆದ ಯುದ್ಧವೊಂದರಲ್ಲಿ ನೊಳಂಬರ ಪರವಾಗಿ ಮಾವುತನಾಗಿ ತನ್ನ ಕಾರ್ಯವನ್ನು ನಿರ್ವಹಿಸಿದ ಉತ್ತಿಗನಂದಯ್ಯ ಎಂಬುವವನು "ಉನ್ಮತ್ತಾ ಮತ್ತೇಭವನ್ನು ಏಜೆ' ತನ್ನ ಪರಾಕ್ರಮುವನ್ನು ಮೆರೆದು ಸತ್ತನೆಂದು ವೀರಗಲ್ಲೊಂದರಿಂದ ತಿಳಿದು ಬರುತ್ತದೆ.[೬೧] ಇದೇ ವಿಷಯ ಮತ್ತೊಂದು ಶಾಸನದಿಂದಲೂ ತಿಳಿದು ಬರುತ್ತದೆ. ಅರಸೀಕೆರೆ ತಾಲ್ಲೂಕಿನ ಒಂದು ಶಾಸನದಲ್ಲಿ ಮಾವುತರ ಮನೆತನದ ವಿವರನೆ ದೊರೆಯುತ್ತದೆ.[೬೨] ಇದರಲ್ಲಿ ಮಾವುತನೊಬ್ಬನ ಸೌಂದರ್ಯ, ಪರಾಕ್ರಮ, ಔದಾರ್ಯ ಗುಣಗಳನ್ನು ವರ್ಣಿಸಲಾಗಿದೆ.[೬೩] ಕ್ರಿಶ. ೧೨೩೧ರ ಒಂದು ಶಾಸನದಿಂದ ಮಾವುತನೊಬ್ಬ ಪರಾಕ್ರಮದ ಉತ್ಪ್ರೇಕ್ಷೆಯ ವರ್ಣನೆಯನ್ನು ಕಾಣಬಹುದು. ರಾಮಯಮಾವಂತ ಎಂಬುವವನು ಆನೆಯೊಂದನ್ನು ತಹಬಂದಿಗೆ ತರುವಲ್ಲಿ ಹೋರಾಡಿ ಸಾಯುತ್ತಾನೆ. ಆತನ ಈ ಪರಾಕ್ರಮದ "ಬಲುಹಿಂಗೆ ಯಿಂದ್ರಾದಿ ದೇವರ್ಕ್ಕಳು ಮೆಚ್ಚಿತಂದು ಐರಾವತಕೆ ಮಾವಂತನಾಗಬೇಕೆಂದು" ಆತನನ್ನು "ದೇವೇಂದ್ರ ಮೊದಲಾದ ದೇವರ್ಕ್ಕಳು ಐರಾವರ್ತವನೇಱಿಸಿ ಕೊಂಡು ಹೋದರು" ಎಂದು ಆ ಶಾಸನಕಾರ ವರ್ಣಿಸುತ್ತಾನೆ.[೬೪]

೬೧ M. A. R.1932-30, 32, 1125
೬೨ S.I.I. VI- 563
೬೩ E. C. XII. Si. 26
೬೪ E. C. V. Ak. 5, ಸು. ೧೨ನೇ ಶತ.

ಈ ಮಾವುತರು ಆನೆಯನ್ನು ನಡೆಯಿಸುವುದು ಮಾತ್ರವಲ್ಲದೆ ಕೆಲವೊಮ್ಮೆ ಆಯುಧ್ಗಲನ್ನು ಹಿಡಿದು ಯುದ್ಧವನ್ನು ಮಾಡುತ್ತಿದ್ದರೆಮದು ವೀರಗಲ್ಲುಗಳ ಶಿಲ್ಪದಿಂದ ಗಮನಿಸಬಹುದಾಗಿದೆ. ಇದು ಬಹುಶಃ ಸ್ವರ್ಕ್ಷಣೆಗಾಗಿಯೇ ಎಂದು ತೋರುತ್ತದೆ.[೬೫] ತಪಿಸಿ ಎಂಬಲ್ಲಿ ನಡೆದ ಯುದ್ಧವೊಂದರಲ್ಲಿ ನೀರ್ಗುಂದದ ಗಾವುಂಡನು ಆನೆಯೊಡನೆ ಹೋರಾಡಿ ಮಡಿದ ವಿಷಯವನ್ನು ವೀರಗಲ್ಲೊಂದು ತಿಳಿಸುತ್ತದೆ.[೬೬]

ಇನ್ನು ಆನೆಯ ಮೇಲಿಂದ ಯುದ್ಧ ಮಾಡುವವರ ಬಗ್ಗೆ ಹೇಳುವುದಾದರೆ, ಮೆಗಾಸ್ತನೀಸನ ಪ್ರಕಾರ ಆನೆಯು ತನ್ನ ಮೇಲೆ ಮೂರು ಜನ ಬಿಲ್ಲುಗಾರರನ್ನು ಮತ್ತು ಅಂಕುಶವನ್ನು ಹಿಡಿದ ಮಾವುತನನ್ನೂ ಹೊರುತ್ತಿತ್ತು. ಅಗ್ನಿ ಪುರಾಣದ ಪ್ರಕಾರ ಆರು ಜನ ಯೋಧರು ಆನೆಯ ಮೇಲೆ ಇರುತ್ತಿದ್ದರು. ಇವರಲ್ಲಿ ಇಬ್ಬರು ಈಟಿಯನ್ನು, ಇಬ್ಬರು ಬಿಲ್ಲು– ಬಾಣಗಳನ್ನು, ಮತ್ತಿಬ್ಬರು ಕತ್ತಿಗಳನ್ನು ಹಿಡಿದಿರುತ್ತಿದ್ದರೆಂದು ತಿಳಿದು ಬರುತ್ತದೆ. ಆದರೆ ಸಾಂಚಿಯ ಶಿಲ್ಪ ಮತ್ತು ಅಜಂತದ ಚಿತ್ರಗಳಲ್ಲಿ ಆನೆಯ ಮೇಲೆ ಮೂವರು ಯೋಧರನ್ನು ಮಾತ್ರ ಗುರುತಿಸಬಹುದು.[೬೭] ವೀರಗಲ್ಲುಗಳ ಶಿಲ್ಪದ ಆಧಾರದ ಮೇಲೆ ಹೇಳುವುದಾದರೆ, ಒಬ್ಬ ಅಥವಾ ಸಾಮಾನ್ಯವಾಗಿ ಇಬ್ಬರು ಯೋಧರು ಇರುತ್ತಿದ್ದರು. ಕೆಲವೊಮ್ಮೆ ಅಪರೂಪವಾಗಿ ಮಾವುತನಲ್ಲದೆ ಬೇರೆ ಮೂರು ಜನ ಯೋಧರು ಇರುತ್ತಿದ್ದರು ಎನ್ನಬಹುದು. (ಚಿತ್ರ ೧೭೩)

ಮಾವುತನು ಆನೆಯ ಮಸ್ತಕದ ಬಳಿ ಕುಳಿತುಕೊಳ್ಳುತ್ತಿದ್ದ. ಆನೆಯ ಬೆನ್ನಿಗೆ ಅಂಬಾರಿಯನ್ನು ಕಟ್ಟುತ್ತಿದ್ದರು. ಇದರಲ್ಲಿ ನಿಂತೋ, ಕುಳಿತೋ ಯೋಧರು ತಮ್ಮ ಶಸ್ತ್ರಾಸ್ತ್ರಗಳನ್ನು ಪ್ರಯೋಗ ಮಾಡುತ್ತಿದ್ದರೆಂದು ತೋರುತ್ತದೆ. ಅಂಬಾರಿಗಳು ದೋಣಿಯ ಆಕಾರದಲ್ಲಿ ಇರುತ್ತಿದ್ದುವು. ಇವುಗಳನ್ನು ಅಲುಗಾಡದ ಹಾಗೆ, ಕುದುರೆಗಳಿಗೆ ಜೀನುಗಳನ್ನು ಕಟ್ಟುತ್ತಿದ್ದ ರೀತಿಯಲ್ಲಿಯೇ ಕಟ್ಟುತ್ತಿದ್ದರು.

ಆನೆಯ ಮೇಲೆ ಕುಳಿತ ವೀರರ ಆಯುಧಗಳು ಮತ್ತು ಯುದ್ಧದ ರೀತಿಯ ಬಗ್ಗೆ ಹೇಳುವುದಾದರೆ ಶತ್ರುಪಕ್ಷದವರ ಸೈನ್ಯ ದೂರದಲ್ಲಿದ್ದಾಗ ಬಿಲ್ಲುಬಾಣಗಳ್ನನು ಉಪಯೋಗಿಸುತ್ತಿದ್ದರು. ಯುದ್ಧರಂಗದಲ್ಲಿ ಆನೆಗಳ ಮೇಲೆ ಏರಿಬುರುತ್ತಿದ್ದವರನ್ನು ಈಟಿಗಳಿಂದ ತಿವಿದು ಕೊಲ್ಲುತ್ತಿದ್ದರೆಂದು ತೋರುತ್ತದೆ. (ಚಿತ್ರ ೧೭೫. ೨೫೪)

೬೫ M. A. R.1925-6. 113

೬೬ B.P. Sinha : The Art of Warfare in Ancient India. S.I.H.C. ಪು. ೧೩೧

ಆನೆಯ ಮೇಲಿನ ಆವರಣಗಳು

ಈ ಬಗ್ಗೆ ಮೊದಲಿಗೆ ಭಾರತಕ್ಕೆ ಬಂದ ಪ್ರವಾಸಿಗಳು ನೀಡುವ ಮಾಹಿತಿಯನ್ನು ಗಮನಿಸಿವುದು ಮುಖ್ಯ. ಅಥನೇಷಿಯಸ್ ಎಂಬ ಪ್ರವಾಸಿ ತಾನು ಕಂಡ ಯುದ್ಧಕ್ಕೆ ಸಿದ್ಧವಾದ ಆನೆಗಳನ್ನು ಈ ರೀತಿ ವರ್ಣಿಸುತ್ತಾನೆ. "ಆನೆಗಳಿಗೆ ಅಲಂಕರಿಸಿದ ಉಕ್ಕಿನ ತಗಡುಗಳನ್ನು ಹೊದ್ದಿಸಿ ಅವುಗಳ ಸೊಂಡಿಲಿಗೆ ಮತ್ತು ಕೋರೆಗಳಿಗೆ ದೊಡ್ಡ ಕೋಲ್ಗತ್ತಿಗಳನ್ನು ಸಿಕ್ಕಿಸಿರುತ್ತಾರೆ."[೬೮] ಪಾಯೇಸ್ ಎಂಬ ಮತ್ತೊಬ್ಬ ಪ್ರವಾಸಿ "ಆನೆಗಳಿಗೂ ಮಕಮಲ್ಲು ಮುಂತಾದ ಬೆಲೆಬಾಳುವ ಬಟ್ಟೆಗಳನ್ನು ಹೊದ್ದಿಸಿ ಗಂಟೆಗಳ ಸರಗಳನ್ನು ಕಟ್ಟಿದ್ದರು. ಈ ಗಂಟೆಗಳ ನಾದಕ್ಕೆ ಭೂಮಿ ಪ್ರತಿಧ್ವನಿ ಕೊಡುತ್ತಿತ್ತು. ಅವುಗಳ ಮುಖದ ಮೇಲೆ ನಾನಾ ತೆರೆದ ಚಿತ್ರಗಳನ್ನು ಚಿತ್ರಿಸಿ ಅಲಂಕಾರ ಮಾಡಿದ್ದರು. ಅಂಬಾರಿಯಲ್ಲಿ ಭಲ್ಲೆ – ಭರ್ಜಿಗಳಿಂದ ಸಜ್ಜಿತರಾದ ಯೋಧರು ಧಾಳಿಗಾಗಿ ಹೊರಟಂತಿದ್ದರು" ಎಂಬುದಾಗಿ ತಿಳಿಸುತ್ತಾನೆ.[೬೯]

ಪ್ರವಾಸಿಗಳ ಈ ವರ್ಣನೆಯು, ವೀರಗಲ್ಲುಗಳ ಶಿಲ್ಪದಲ್ಲಿನ ಆನೆಗಳನ್ನು ವಿವರಿಸುವಲ್ಲಿ ನೆರವಾಗುತ್ತದೆ. ಆನೆಯ ಕುಂಭಸ್ಥಳಕ್ಕೆ ಶತ್ರುಗಳು ಬಿಟ್ಟ ಬಾಣಗಳು ನಾಟದಂತೆ ಒಂದು ಕವಚವನ್ನು ಹಾಕುತ್ತಿದ್ದರೆಂಬುದು. ನೇರ್ಲಿಗೆ ವೀರಗಲ್ಲು, ವಿಜಯನಗರದ ಕಾಮಲಾಪುರದ ವಸ್ತು ಸಂಗ್ರಹಾಲಯಲದಲಿರುವ ವೀರಗಲ್ಲು, ಮಹಾನವಮಿ ದಿಬ್ಬದ ಮೇಲಿನ ಆನೆಯ ಚಿತ್ರಣ ಮುಂತಾದವುಗಳನ್ನು ಗಮನಿಸಿದಾಗ ವ್ಯಕ್ತವಾಗುತ್ತದೆ. ಬೇಗೂರಿನ ವೀರಗಲ್ಲಿನ ಶಿಲ್ಪದಲ್ಲಿ ನಾಗತ್ತರನ ಕಡೆಯವರು ಬಿಟ್ಟ ಬಾಣಗಳು ಶತ್ರುಪಕ್ಷದವರ ಆನೆಯ ಮುಖಭಾಗದಲ್ಲಿ ನಾಟಿವೆ. (ಚಿತ್ರ ೨೫೪) ಆದರೆ ಕುಂಭಸ್ಥಳದ ಭಾಗದಲ್ಲಿ ನಾಟಿಲ್ಲ. ಆನೆಯ ಹೊಟ್ಟೆಯ ಭಾಗವನ್ನು ಎರಡು ಕಡೆಯಲ್ಲಿ ಮುಚ್ಚುವಂತೆ 'ಲೋಹವಕ್ಕರೆ'ಗಳನ್ನು ಕಟ್ಟುತ್ತಿದ್ದರು. ಈಗ ಕೋಪನ್‌ಹೆಗ್ ವಸ್ತು ಸಂಗ್ರಹಾಲಯದಲ್ಲಿರುವ ಹೊಯ್ಸಳರ ಕಾಲದ ವೀರಗಲ್ಲಿನ ಶಿಲ್ಪದಲ್ಲಿ ಬಹಳ ಸ್ಪಷ್ಟವಾಗಿ 'ಲೋಹವಕ್ಕರೆ' ಗಳನ್ನು ಬಿಡಿಸಿರುವುದನ್ನು ಗಮನಿಸಬಹುದಾಗಿದೆ. ಆನೆಗಳಿಗೆ ಗಂಟೆಗಳನ್ನು ಕಟ್ಟುತ್ತಿದ್ದ ಉದ್ದೇಶವನ್ನು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಆರಂಭಕಾಲದ ವೀರಗಲ್ಲುಗಳಿಂದ ಹಿಡಿದು ವಿಜಯನಗರದ ಕಾಲದವರೆಗಿನ ವೀರಗಲ್ಲುಗಳ ಶಿಲ್ಪವನ್ನು ಗಮನಿಸಿದಾಗ, ಆನೆಗಳಿಗೆ ಗಮಟೆಗಲನ್ನು ಕಟ್ಟುತ್ತಿದ್ದರೆಂದು ತಿಳಿಯುತ್ತದೆ. ಬೇಗೂರಿನ ವೀರಗಲ್ಲಿನಲ್ಲಂತೂ, ಆನೆಗೆ ಗಂಟೆಗಳ ಸರಮಾಲೆಯೇ ಇದೆ. ಶ್ರವಣಗುಡಿ (ಚಿತ್ರ ೧೭೪) ಮತ್ತು ಕಾಮಲಾಪುರದ ವಸ್ತುಸಂಗ್ರಹಾಲಯದಲ್ಲಿರುವ ವೀರಗಲ್ಲುಗಳಲ್ಲಿ ಆನೆಗೆ ಒಂದು ದೊಡ್ಡ ಗಂಟೆಯನ್ನು ಕಟ್ಟಿರುವಂತೆ ಶಿಲ್ಪವನ್ನು ಬಿಡಿಸಲಾಗಿದೆ.

---

೬೮ ಹೆಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ : ಭಾ. ೨ ಪು. ೨೬೩–೬೪

೬೯ ಅದೇ. ಪು. ೩೭೯

ಆನೆಯ ಮೇಲೆ ಇದ್ದು ಹೋರಾಟ ಮಾಡುತ್ತಿದ್ದ ಯೋಧರೊಂದಿಗೆ ಎದುರು ಪಕ್ಷದ ಯೋಧರೂ ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದರು. ಈ ಅಂಶ ನೇರ್ಲಿಗೆಯ ವೀರಗಲ್ಲಿನ ಶಿಲ್ಪದಿಂದ ತಿಳಿಯುತ್ತದೆ. ಆದರೆ ಆನೆಯ ಮೇಲಿನ ಯೋಧರನ್ನು ಆನೆಯ ಮೇಲಿರುವ ಎದುರಾಳಿಗಳೇ ಎದುರಿಸಬೇಕೆಂಬ ನಿಯಮವನ್ನೇನೂ ಅನುಸರಿಸಿದಂತೆ ತೋರುವುದಿಲ್ಲ. ಕಾಲಾಳುಗಳು, ರಾಹುತರೂ ಸಹ ಆನೆಯ ಮೇಲಿನ ಯೋಧರನ್ನು ಎದುರಿಸುತ್ತಿದ್ದಂತೆ ವೀರಗಲ್ಲುಗಳ ಶಿಲ್ಪದಿಂದ ತಿಳಿಯುತ್ತದೆ. (ಚಿತ್ರ ೧೭೫, ೧೭೬)

ತನ್ನ ಎದುರಾಳಿಗಳ ಮುಖ್ಯ ಬಲವಾದ ಆನೆಗಳನ್ನು ಮೊದಲು ಸಂಹಾರ ಮಾಡಿ ಅವರ ಶಕ್ತಿಯನ್ನು ಕುಂದಿಸುವ ಪ್ರಯತ್ನವನ್ನು ಮಾಡುತ್ತಿದ್ದರು. ಆನೆಯನ್ನು ಕೊಂದು ಮಾಡಿದ ವೀರರ ವೀರಗಲ್ಲುಗಳು ವಿರಳವಾಗಿ ದೊರೆಯುತ್ತವೆ. ಕ್ರಿ.ಶ. ೧೧೭೯ರ ಒಂದು ವೀರಗಲ್ಲು 'ಬಮ್ಮಣ' ಎಂಬುವನು 'ಆನೆಯ ಮಸ್ತಕವನಿಱಿದು' ಸತ್ತ ವಿಷಯವನ್ನು ತಿಳಿಸುತ್ತದೆ.[೭೦] ಕ್ರಿ.ಶ. ೧೨೫೩ ರ ಮತ್ತೊಂದು ವೀರಗಲ್ಲಿನಿಂದ ವೀರನೊಬ್ಬನು ಆನೆಯನ್ನು ಇರಿದು ತಾನು ಸತ್ತ ವಿಷಯ ತಿಳಿಯುತ್ತದೆ.[೭೧] ವಿಜಯನಗರದ ಕಾಲಕ್ಕೆ ಸೇರಿದ ವೀರಗಲ್ಲಿನ ಶಿಲ್ಪವೊಂದರಲ್ಲಿ ವೀರನು ಆನೆಯನ್ನು ಕೊಲ್ಲುತ್ತಿರುವ ದೃಶ್ಯವನ್ನು ನೋಡಬಹುದು. ಸತತವಾಗಿ ಬಾಣಗಳನ್ನು ಬಿಟ್ಟು ಆನೆಯ ಕೊಲ್ಲುವ ಪ್ರಯತ್ನವನ್ನು ಬೇಗೂರಿನ ವೀರಗಲ್ಲಿನ ಶಿಲ್ಪದಿಂದ ತಿಳಿಯಬಹುದಾಗಿದೆ. ಯುದ್ಧಭೂಮಿಯಲ್ಲಿ ಆನೆಯನ್ನು ಕೆಡುದು ಬೀಳುವಂತೆ ಮಾಡಿ, ಅದನ್ನು ತುಳಿಯುತ್ತಿರುವ ಕುದುರೆಯನ್ನು ದೊಡ್ಡ ಉಳ್ಳರ್ತಿಯ ವೀರಗಲ್ಲಿನ ಶಿಲ್ಪದಲ್ಲಿ ಕಾಣಬಹುದು. (ಚಿತ್ರ ೨೪೬)

ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿರುವ ತಮ್ಮ ಎದುರಾಳಿಗಳನ್ನು ಪ್ರತಿಪಕ್ಷದ ವೀರರು ಆನೆಯ ಮೇಲೆಯೇ ಕೊಂದುಹಾಕುತ್ತಿದ್ದರು. ಅಸ್ತ್ರಪ್ರಯೋಗ ಮಾಡಿ ದೂರದಿಂದಲೇ ಗಾಯಗೊಳಿಸುವುದು ಒಂದು ವಿಧಾನವಾದರೆ, ತಮ್ಮ ಎದುರಾಳಿಯ ಆನೆಯ ಮೇಲೇರಿ ಹೋಗಿ ಅಲ್ಲಿಯೇ ಯುದ್ಧಮಾಡುವುದು ಮತ್ತೊಂದು ಬಗೆ. ಬೇಗೂರಿನ ವೀರಗಲ್ಲಿನ ನಾಯಕನಾದ ನಾಗತ್ತರನು ತನ್ನ ಶತ್ರುವನ್ನು 'ಆನೆಯೊಳಾನ್ತಿಱಿದು' ಸತ್ತ ವಿಷಯ ತಿಳಿಯುತ್ತದೆ.[೭೩] ಮತ್ತೆ ಎರಡು ವೀರಗಲ್ಲುಗಳು[೭೪] ಆನೆಯ ಮೇಲಿನ ಯೋಧರನ್ನು ಅವರಿದ್ದ ಅಂಬಾರಿಯ ಮೇಲೆಯೇ

---

೭೦ E. C. VI. Mg. 33, 1179

೭೧ E. C. VI. Kd. 33, 1179

೭೨ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೩ – ೬೪

೭೩ E. C. IX. Bn. 83, 890

೭೪ E. C. III. Md. 41, 950 ಮತ್ತು E. C. XV. Ak. 237, 941

ಕೊಂದ ವೀರರ ಪರಾಕ್ರಮವನ್ನು "ಅವರಿಗೆ ಅಂಬಾರಿಯೇ ಯುದ್ಧರಂಗವಾಯಿತು." ['ಬಿಸುಗೆಯ ಕಳನಾಗಿ'] ಎಂಬುದಾಗಿ ವರ್ಣಿಸುತ್ತವೆ.[೭೫] ಇಂಥ ವರ್ಣನೆಗಳು ಶಿಲ್ಪದಲ್ಲಿಯೂ ಮೂಡಿ ಬಂದಿರುವದನ್ನು ಗಮನಿಸಬಹುದು. ನೇರ್ಲಿಗೆ ಶಾಸನದಲ್ಲಿ 'ಬಿಸುಗೆಯ ಕಳನಾಗಿ' ಎಂಬ ಪ್ರಯೋಗ ಬಂದಿದೆ. ಆ ವೀರಗಲ್ಲಿನ ಶಿಲ್ಪ ಈ ಪದವನ್ನು ವಿವರಿಸುವಲ್ಲಿ ನೆರವಾಗುತ್ತದೆ. (ಚಿತ್ರ ೧೭೨)

ಈ ವೀರಗಲ್ಲಿನ ಶಿಲ್ಪದ ಬಗ್ಗೆ ಈಗಾಗಲೇ ವ್ಯಾಖ್ಯಾನ ಮಾಡಿರುವ ಡಾ. ಎಂ. ಚಿದಾನಂದ ಮೂರ್ತಿಯವರ ಅಭಿಪ್ರಾಯವನ್ನು ಇಲ್ಲಿ ಪರಿಶೀಲಿಸುವುದು ಉಚಿತ : "ಈ ಶಾಸನವಿರುವ ವೀರಗಲ್ಲಿನ ಮೇಲೆ ಎರಡು ಆನೆಗಳು ಪರಸ್ಪರ ಅಭಿಮುಖವಾಗಿ ಸೊಂಡಿಲುಗಳನ್ನು ಹೆಣೆದುಕೊಂಡು ನಿಂತಿವೆ. ಎರಡು ಆನೆಗಳ ಮೇಲೂ ಇಬ್ಬಿಬ್ಬರು ಇದ್ದಾರೆ. ಬಲಗಡೆಯ ಆನೆಯ ಮೇಲಿರುವವರು ಹಿಮ್ಮೆಟ್ಟುವ ಸ್ಥಿತಿಯಲ್ಲಿದ್ದಾರೆ. ಆ ಆನೆಯ ಮೇಲಿಂದ ಎಡ ಆನೆಯ ಮೇಲಕ್ಕೆ ಒಬ್ಬನು ಹಾರುತ್ತಿದ್ದಾನೆ. ಅವನೇ ಈ ಶಾಸನದ ನಾಯಕ."[೭೬]

ಕರ್ನಾಟಕದ ಯಾವುದೇ ವೀರಗಲ್ಲಿನ ಶಿಲ್ಪವನ್ನು ಗಮನಿಸಿದರೂ, ಆ ವೀರಗಲ್ಲು ಸ್ಮಾರಕವಾಗಿರುವ ವೀರನನ್ನು ವೀರಗಲ್ಲಿನ ಬಲಭಾಗಕ್ಕೂ, ಶತ್ರುವನ್ನು ವೀರಗಲ್ಲಿನ ಎಡಭಾಗಕ್ಕೂ ಇರುವಂತೆ ಶಿಲ್ಪದಲ್ಲಿ ಬಿಡಿಸಿರುತ್ತಾರೆ. ಇದು ಒಂದು ಸಾಮಾನ್ಯ ನಿಯಮ. ಈ ವೀರಗಲ್ಲಿನ ಶಿಲ್ಪವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಬಲಭಾಗದಲ್ಲಿ ಕುಳಿತ ಇಬ್ಬರು ವೀರರಲ್ಲಿ ಒಬ್ಬನು ತನ್ನ ಈಟಿಯಿಂದ ಶತ್ರುವೊಬ್ಬನನ್ನು ತಿವಿದು ಎಸೆಯುತ್ತಿರುವಂತಿದೆ. ಅವನು ಇನ್ನೊಂದು ಆನೆಯ ಮೇಲಕ್ಕೆ ಹಾರುವಂತಿಲ್ಲ. ಎಡಭಾಗದ ಆನೆಯಮೇಲೆ ಅಂಬಾರಿಯನ್ನೂ, ಈ ಅಂಬಾರಿಯ ಮೇಲೆ ಇಬ್ಬರು ವೀರರನ್ನೂ ಚಿತ್ರಿಸಲಾಗಿದೆ. ಅವರಲ್ಲಿ ಒಬ್ಬನನ್ನು ಮತ್ತೊಬ್ಬ ವೀರ ತನ್ನ ಕೈಗತ್ತಿಯಿಮದ ಇರಿಯುತ್ತಿರುವ ಮತ್ತೊಬ್ಬ ವೀರನ ಒಂದು ಕಾಲನ್ನು ಅಂಬಾರಿಯ ಒಳಗೂ, ಮತ್ತೊಂದು ಕಾಲನ್ನು ಹೊರಗೂ ಇರುವಂತೆ ಚಿತ್ರಿಸಲಾಗಿದೆ. ಈ ಅಂಶವನ್ನು ಗಮನಿಸಿದರೆ 'ಬಿಸುಗೆ' ಹೇಗೆ ಯುದ್ಧರಂಗವಾಯಿತು ಎಂಬುದು ಸ್ಪಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ, ಈ ವೀರಗಲ್ಲಿನ ಶಿಲ್ಪವನ್ನು ಹೀಗೆ ವ್ಯಾಖ್ಯಾನಿಸಬಹುದೆಂದು ತೋರುತ್ತದೆ: ಈ ವೀರಗಲ್ಲಿನ ನಾಯಕನಾದ ಅಣ್ಣವಸಯ್ಯ ಎಂಬುವನು ವೀರಗಲ್ಲಿನ ಬಲಗಡೆಯಿಂದ ಶತ್ರುಪಕ್ಷದವರನ್ನು ಎದುರಿಸಲು ಮುನ್ನುಗ್ಗುತ್ತಿದ್ದಾನೆ. ಅವನು ಮೊದಲಿಗೆ ಶತ್ರುಪಕ್ಷದ

---

೭೫ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೬೪

೭೬ ಅದೇ. ಪು. ೨೬೪. ಈ ಬಗ್ಗೆ ವಿವರವಾಗಿ 'ವೀರಗಲ್ಲುಗಳ ಶಿಲ್ಪ' ಎಂಬ ಅಧ್ಯಾಯದಲ್ಲಿ ಪರಿಶೀಲಿಸುತ್ತೇವೆ.

ಆನೆಯ ಮಾವುತನನ್ನು ತನ್ನ ಈಟಿಯ ಮೂಲಕ ತಿವಿದು, ದಾರಿಯನ್ನು ಸುಗಮ ಮಾಡಿಕೊಳ್ಳುತ್ತಿದ್ದಾನೆ. ಆನಂತರ ತನ್ನ ಎದುರಾಳಿಯ ಆನೆಯ ಮೇಲಕ್ಕೆ ಹೋಗಿ ಅಂಬಾರಿಯಲ್ಲಿರವು ತನ್ನ ಎದುರಾಲಿಯನ್ನು ತಿವಿಯುತ್ತಿದ್ದಾನೆ.

ವೀರಗಲ್ಲುಗಳ ಶಿಲ್ಪದಲ್ಲಿ, ಶಿಲ್ಪಿಯು ಕ್ರಿಯೆಯನ್ನು ಚಿತ್ರದಲ್ಲಿ ಬಿಡಿಸಿ ತೋರಿಸುವುದರಲ್ಲಿ ಆಸಕ್ತ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಅವನಿಗೆ ಪ್ರತಿಯೊಂದು ಕ್ರಿಯೆಯನ್ನು ವಿವರ ವಿವರವಾಗಿ ತೋರಿಸುವ ಅವಕಾಶ ಇರುವುದಿಲ್ಲ. ಆದ್ದರಿಂದ ಅವನು ತನ್ನವೇ ಆದ ಕೆಲವಾರು ಸೂತ್ರಗಳನ್ನು ಶಿಲ್ಪದಲ್ಲಿ ಅಳವಡಿಸಿಕೊಳ್ಳುತ್ತಾನೆ.

ಒಂಟೆಗಳು

೯ ಹೊಯ್ಸಳ ವೀರಬಲ್ಲಾಳನ ಕಾಲದ ಒಂದು ವೀರಗಲ್ಲು ಒಂಟೆಯ ಪಡೆಯ ಪ್ರಮುಖನೊಬ್ಬನು ಸತ್ತ ವಿಷಯವನ್ನು ತಿಳಿಸುತ್ತದೆ. ಸೇವುಣ ರಾಜ ಸಂಕಮನ ಸೇನೆಗೂ ಹೊಯ್ಸಳರ ಸೇನೆಗೂ ಮಡವಳ್ಳಿ ಎಮಬಲ್ಲಿ ಮಹಾಕಾಳಗವಾಯಿತು. ಆ ಯುದ್ಧದಲ್ಲಿ 'ಒಂಟೆಯ ಪಡೆಯೊಡೆಯ ಅಚ್ಚಸಾಹಣಿ, ಸಂಕಮ'ನನ್ನು ಸೋಲಿಸಿ ಮಡಿದನು. ಪ್ರಭುವಾದ ಹೊಯ್ಸಳ ಮುಮ್ಮಡಿ ವೀರಬಲ್ಲಾಳನೇ ಬಂದು ತನ್ನ ಸೇವಕನ ಬೆನ್ನಮುಟ್ಟಿ ಅವನ ಸ್ವಾಮಿನಿಷ್ಠೆಯನ್ನು ಮೆಚ್ಚಿದನೆಂದು ಆ ವೀರಗಲ್ಲಿನ ಪಾಠವು ತಿಳಿಸುತ್ತದೆ.[೭೭] ಹೊಯ್ಸಳ ಎರಡನೆಯ ನರಸಿಂಹನು ತನ್ನ ಶತ್ರುಪಕ್ಷದವರ ಒಂಟೆಗಳನ್ನು ಮತ್ತು ಆನೆಗಳನ್ನು ನಾಶಪಡಿಸಿದನೆಂದು ತಿಳಿದುಬರುತ್ತದೆ. ಇವು ಬಹುಶಃ ದೇವಗಿರಿಯ ಯಾದವರಿಂದ ದಕ್ಷಿಣಕ್ಕೆ ಪ್ರವೇಶ ಮಾಡಿರಬಹುದೆಂದು ತೋರುತ್ತದೆ.[೭೮] ಶಿವಮೊಗ್ಗಾ ಕೋಟೆಯ ಪೋಲಿಸ್ ಸ್ಟೇಷನ್ನಲ್ಲಿರುವ ಕ್ರಿ.ಶ. ೧೨೪೫ರ ವೀರಗಲ್ಲಿನ ಶಿಲ್ಪದಲ್ಲಿ ಒಂಟೆಯನ್ನು ಕಾಣಬಹುದು. (ಚಿತ್ರ ೧೬೬)

ಬೆಂಗಳೂರಿಗೆ ಗೋಖಲೆ ಸಾರ್ವಜನಿಕ ಸಂಸ್ಥೆಯ ಬಳಿ ಇರುವ, ಗೇರುಸೊಪ್ಪೆಯಿಂದ ತಂದಿರುವ ವೀರಗಲ್ಲಿನಲ್ಲಿ ವೀರನೊಬ್ಬನು ಯುದ್ಧರಂಗದಲ್ಲಿ ಒಂಟೆಯ ಮೇಲೆ ಕುಳಿತು ಯುದ್ಧ ಮಾಡುತ್ತಿರುವಂತೆ ಶಿಲ್ಪವಿದೆ. ವಿಜಯನಗರದ ಮಹಾನವಮಿ ದಿಬ್ಬದಲ್ಲಿರುವ ಆನೆ ಕುದುರೆಯ ದಳಗಳೊಂದಿಗೆ ಸೈನಿಕರು ಒಂಟೆಗಳನ್ನು ಹಿಡಿದುಕೊಂಡು ಹೋಗುತ್ತಿರುವಂತೆ ಬಿಡಿಸಲಾಗಿರುವ

---

೭೭ M. A. R.1937. 31

೭೮ William Coelldho : The Hoysala Vamsa. ಪು. ೨೫೪.

ಶಿಲ್ಪದ ವಿವರಗಳು ದೊರೆಯುತ್ತವೆ. ಕರ್ನಾಟಕದ ಪಾಳೆಯಗಾರರಲ್ಲಿ ಮುಖ್ಯವಾಗಿ ಚಿತ್ರದುರ್ಗದ ಪಾಳೆಯಗಾರರ ಯುದ್ಧಬಲದಲ್ಲಿ ಒಂಟೆಗಳನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ.[೭೯]

ಕಾಲಾಳುಗಳು

ಕ್ರಿಸ್ತ ಪೂರ್ವ ಆರನೆಯ ಶತಮಾನದ ಸುಮಾರಿಗೇ ಭಾರತದಲ್ಲಿ ಕಾಲಾಳುಗಳ ದಳ ಬಹುಪ್ರಮುಖವಾದ ಸೈನ್ಯದ ಅಂಗವೆಂದು ಪರಿಗಣಿತವಾಗಿದ್ದಿತು. ಅರಸರು ತಮ್ಮ ಸೈನ್ಯದಲ್ಲಿ ಬಹುಪಾಲು ಕಾಲಾಳುಗಳನ್ನು ನೇಮಿಸಿಕೊಳ್ಳುತ್ತಿದ್ದರು.[೮೦]

ಕರ್ನಾಟಕದ ವೀರಗಲ್ಲುಗಳ ಪಾಠದಿಂದ ಪದಾತಿಯ ಬಗ್ಗೆ ದೊರೆಯುವ ಮಾಹಿತಿ ಕಡಿಮೆ. ಒಂದು ಸೈನ್ಯದಲ್ಲಿ ಎಷ್ಟು ಮಂದಿ ಪದಾತಿಗಳಿರುತ್ತಿದ್ದರು, ಅವರುಗಳನ್ನು ಹೇಗೆ ವಿಂಗಡಿಸುತ್ತಿದ್ದರು, ಮತ್ತು ಅವರು ಯುದ್ಧಭೂಮಿಯಲ್ಲಿ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು, ಅವರುಗಳ ನಾಯಕ ಯಾರು, ಅವನು ಯಾವ ರೀತಿ ಈ ಪದಾತಿಗಳನ್ನು ಯುದ್ಧಮಾಡಲು ನಿಯಮಿಸುತ್ತಿದ್ದ ಮುಂತಾದ ವಿವರಗಳ ಬಗ್ಗೆ ವೀರಗಲ್ಲುಗಳ ಮೌನವಾಗಿವೆ.

ಕರ್ನಾಟಕದ ಸೈನ್ಯದಲ್ಲಿ ತಮ್ಮ ಪರಾಕ್ರಮದಿಂದ ವಿಶೇಷವಾದ ಹೆಸರು ಪಡೆದಿದ್ದ ವೀರರು, ನಾಯಕರು ಇದ್ದರೆಂಬುದಾಗಿ ಹೊಯ್ಸಳರ ಕಾಲದ ವೀರಗಲ್ಲೊಂದರಿಂದ ತಿಳಿದುಬರುತ್ತದೆ. ಹೊಯ್ಸಳ ವೀರನಾರಸಿಂಹನ ಆಜ್ಞೆಯಂತೆ ಕಾಮೆಯನಾಕನೆಂಬುವನು ತಮ್ಮ ಮೇಲೆ "ಮೂಡನಾಡ ಹನೆರಡು ಮನೆಯವಟ್ಟದ ನಾಯಕನೂ ಕೂಡಿ ಬಂದು ಮುತ್ತಿ ಕಾದಿದಲ್ಲಿ" "ಪಲಂಬರು ನಾಯಕರೊಡನೆಯೇಕಾಂಗ ವೀರನಾಗಿ ಸಾಲೇಜಿ ತಳ್ತಿಜಿದು ಹೆಸರೊಳು ವಿಶೇಷವಾಗಿರ್ದ್ದ ನಾಯಕರುಂ ಪಲಂಬರುಂ ಕೊಂದು ಸಾಲಕಮಯ್ಯನೆಂಬೀ ಪೆಸರುಂ ಪಡೆದು" ಸತ್ತ ವಿಷಯ ತಿಳಿಯುತ್ತದೆ.[೮೧] ನಂಜುಂಡನ ರಾಮನಾಥಚರಿತದಿಂದ ರಾವುತರಲ್ಲಿ, ಹೆಸರಾಗಿದ್ದ ರಾವುತರು ಇದ್ದರೆಂಬ ವಿಷಯವನ್ನು ಇದೇ ಸಂದರ್ಭದಲ್ಲಿ ನೆನೆಯಬಹುದು.[೮೨]

---

೭೯ ಎಂ. ಎಸ್. ಪುಟ್ಟಣ್ಣ : ಪಾಳೆಯಗಾರರು ಐದು ಉಪನ್ಯಾಸಗಳು. ಪು. ೪೫.

೮೦ B.P.Sinha:The Art of Welfare in Ancient india.S.I.H.C. ಪು.೧೩೨

೮೧ E. C. XII. Tp. 63

೮೨ ನಂಜುಂಡ : ರಾಮನಾಥ ಚರಿತೆ – ಭಾ. ೩. ಆ. ೩. ಸಂ. ೩. ಪ –೧೫

"ಹೆಸರುಳ್ಳ ರಾವುತರೆಯ್ತಂದು ತಮ್ತಮ್ಮ
ಹೆಸರ ಹೇಳುತ ಬಂದು ತಡೆಯೆ
ಬಸಿಯೆ ನೆತ್ತರು ಮೊಗದೊಳು ತಿವಿದರವರನು
ಹಸಗೆಡಿಸಿದನು ಬೇಗದೊಳು"

ಪದಾತಿಗಳ ಉಡುಪು, ಆಯುಧಗಳು ಮುಂತಾದವುಗಳನ್ನು ಗುರುತಿಸಿ ವಿವರಿಸುವಲ್ಲಿ, ನಾವು ಮುಖ್ಯವಾಗಿ ವೀರಗಲ್ಲುಗಳ ಶಿಲ್ಪವನ್ನೂ ಇದಕ್ಕೆ ಪೋಷಕವಾಗುವಂತೆ ಸಾಹಿತ್ಯಿಕ ವರ್ಣನೆಗಳನ್ನೂ ಬಳಸಿಕೊಂಡಿದ್ದೇವೆ.

ಆರಂಭಕಾಲದ ವೀರಗಲ್ಲುಗಳಿಂದ ಹಿಡಿದು ವಿಜಯನಗರದ ಕಾಲದವರೆಗಿನ ಎಲ್ಲಾ ವೀರಗಲ್ಲುಗಳ ಶಿಲ್ಪವನ್ನು ಗಮನಿಸಿದಾಗ ಎದ್ದು ಕಾಣವು ಒಂದು ಪ್ರಮುಖ ಅಂಶವೆಮದರೆ ವೀರರ ಮುಡಿ. (ಚಿತ್ರ ೧೭೮ರಿಂದ ೧೯೪) ಅವನು ಪದಾತಿಯಾಗಿರಲಿ, ರಾವುತನಾಗಿರಲಿ, ಮಾವುತನಾಗಿರಲಿ ತನ್ನ ನೀಳವಾದ ಕೂದಲನ್ನು ಗಂಟು ಹಾಕಿರುತ್ತಾನೆ. ತಮಿಳಿನ ಸಂಗಮ್ ಸಾಹಿತ್ಯದಿಂದ ಮತ್ತು ಸೋಮದೇವನ ಯಶಸ್ತಿಲಕಚಂಪೂವಿನಿಂದ ದ್ರಾವಿಡಯೋಧರು ತಮ್ಮ ನೀಳವಾದ ಕೂದಲುಗಳನ್ನು ಬಿಗಿಯಾಗಿ ಉಂಡೆಯಾಕಾರದಲ್ಲಿ ಕಟ್ಟಿಕೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ.[೮೩] ಚಾಜು –ಕುಆ ಎಂಬ ವಿದೇಸಿ ಪ್ರವಾಸಿ ತನ್ನ ಪ್ರವಾಸ ಕಥನದಲ್ಲಿ ತಾನು ಕಂಡ ದ್ರಾವಿಡ ಯೋಧರ ಬಗ್ಗೆ ಹೇಳುತ್ತಾ "ಇವರು ಯುದ್ಧ ಮಾಡುವಾಗ ಕೂದಲನ್ನು ರೇಷ್ಮೆ ರುಮಾಲಿನಿಂದ ಸುತ್ತಿಕೊಳ್ಳುತ್ತಾರೆ" ಎಂಬುದಾಗಿ ತಿಳಿಸುತ್ತಾವನ.[೮೪] ಗೋವಿಂದ ವೈದ್ಯನ 'ಕಂಠೀರವನರಸರಾಜ ವಿಜಯಂ' ಎಂಬ ಕಾವ್ಯದಿಂದ ವೀರರಾದವರು ಈ ರೀತಿ ಕಟ್ಟಿಕೊಂಡ ತಮ್ಮ ಮುಡಿಯನ್ನು ಕೆದರಿಕೊಳ್ಳುವುದು ತಮಗಿಂತ ಪರಾಕ್ರಮಶಾಲಿಯಾದ ವೀರನಿಗೆ ಶರಣಾಗತರಾದೆವೆಂದು ತಿಳಿಸುವ ಸಂಕೇತ ಎಂಬುದಾಗಿ ತಿಳಿದು ಬರುತ್ತದೆ.[೮೫] ಅಂದರೆ ಈ ರೀತಿ ಮುಡಿಯನ್ನು ಕಟ್ಟಿಕೊಳ್ಳುವುದು ವೀರನ ಲಕ್ಷಣ ಎಂಬುದಾಗಿ ನಮ್ಮವರು ಭಾವಿಸಿದ್ದಿರಬೇಕು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಮಡು ವೀರಗಲ್ಲುಗಳ ವೀರರ ಮುಡಿಗಳನ್ನು ಪರಿಶೀಲಿಸುವುದು ಉಚಿತವೆಂದು ತೋರುತ್ತದೆ.

ಮುಡಿಗಳನ್ನು ವೀರರು ಹಲವಾರು ವಿಧಾನಗಳಲ್ಲಿ ಕಟ್ಟಿಕೊಳ್ಳುತ್ತಿದ್ದರೆಂದು ತೋರುತ್ತದೆ. ಇವುಗಳನ್ನು ಮೂರು ರೀತಿಗಳಲ್ಲಿ ಗುರುತಿಸಬಹುದು. ಮೊದಲನೆಯದಾಗಿ ಕೂದಲನ್ನು ನೆತ್ತಿಯಮೇಲೆ ಉಂಡೆಯಂತೆ, ಕೆಲವೊಮ್ಮೆ ಗೋಪುರದಂತೆ ನೋಡಲು ಸುಂದರವಾಗಿ ಕಾಣುವಂತೆ ಕಟ್ಟಿಕೊಳ್ಳುತ್ತಿದ್ದರು. ಎರಡನೆಯದಾಗಿ ತಲೆಯಮೇಲಿನ 'ಶಿಖಿ' ಪ್ರದೇಶದಲ್ಲಿ ಕೂದಲನ್ನು ಉಂಡೆಯ ಆಕಾರದಲ್ಲಿ ಸುತ್ತಿಕೊಳ್ಳುತ್ತಿದ್ದರು. ಮೂರನೆಯದಾಗಿ ಕೂದಲನ್ನು ತಲೆಯ ಹಿಂಭಾಗದಲ್ಲಿ ಕುತ್ತಿಗೆಯ

---

೮೩ N. Subramani : Sangam Polity . ಪು. ೧೪೮, ೩೧೨.

೮೪ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ. ಭಾ. ೧. ಪು. ೪೦೦

೮೫ ಗೋವಿಂದ ವೈದ್ಯ : ಕಂಠೀರವ ನರಸರಾಜ ವಿಜಯಂ. ೧೫–೯೫.

ಮೇಲ್ಭಾಗದಲ್ಲಿ ಗಂಟು ಹಾಕಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ವೀರನ ಮುಡಿಯನ್ನು ಶಿಲ್ಪಿ ತನ್ನ ಅನುಕೂಲಕ್ಕೆ ತಕ್ಕಂತೆ, ವೀರನ ಮುಖದ ಎಡಗಡೆಗೋ ಅಥವಾ ಬಲಗಡೆಗೋ ಚಿತ್ರಿಸುತ್ತಿದ್ದ.

ವೀರರು ತಮ್ಮ ಕೂದಲು ಕೆದರದಂತೆ ಮತ್ತು ಸುಂದರವಾಗಿ ಕಾಣುವಂತೆ ಮುಡಿಯನ್ನು ಬಟ್ಟೆಯಿಂದ ಕಟ್ಟಿಕೊಳ್ಳುತ್ತಿದ್ದರೆಂದು ವೀರಗಲ್ಲುಗಳ ಶಿಲ್ಪದಿಂದ ತಿಳಿದುಬರುತ್ತದೆ. ಶ್ರವಣಗುಡಿ, ನಗರಗೆರೆ, ಎಲ್ಲೂದ್ದರು, ಬೆಟಗೇರಿಯ ವೀರಗಲ್ಲುಗಳಲ್ಲಿ, ವೀರನ ಮುಡಿಯ ಪಕ್ಕದಲ್ಲಿ ತಲೆಗೆ ಕಟ್ಟಿರುವ ಬಟ್ಟೆಯ ಅಂಚುಗಳನ್ನು ಕುಚ್ಚುಗಳ ರೀತಿಯಲ್ಲಿ ಬಿಟ್ಟಿರುವುದನ್ನು ಗಮನಿಸಬಹುದು. ಬೆಟಗೇರಿ, ಬೇಗೂರು, ದೊಡ್ಡಹುಲ್ಲೂರಿನ ವೀರಗಲ್ಲುಗಳಿಂದ ವೀರರು ತಮ್ಮ ಮುಡಿಯ ಅಲಂಕಾರಕ್ಕಾಗಿ ವಿವಿಧ ರೀತಿಯ ಅಲಂಕರಣ ಸಾಮಗ್ರಿಗಳನ್ನು ಬಳಸುತ್ತಿದ್ದರೆಂಬುದು ಗೋಚರಿಸುತ್ತದೆ.

ಕ್ರಿ.ಶ. ಸುಮಾರು ೫೦೦ ರ ತಮಟುಕಲ್ಲಿನ ವೀರಗಲ್ಲಿನ ಶಿಲ್ಪದಲ್ಲಿ ಮೇಲೆ ಗಮನಿಸಿದ ಮುಡಿಯು ವೀರರಿಗೆ ಇಲ್ಲದಿರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಅಲ್ಲಿ ವೀರರು ತಮಮ್ ಕೂದಲುಗಳನ್ನು ನೀಳವಾಗಿ ಬಿಟ್ಟಿದ್ದಾರೆ. ಈ ದೃಷ್ಟಿಯಿಂದ ಕಾಯ್ಗಿಣಿಯ ವೀರಗಲ್ಲುಗಳ ಶಿಲ್ಪವೂ ಗಮನಾರ್ಹವಾಗಿದೆ. ಇಲ್ಲಿಯೂ ಮುಡಿಗಳನ್ನು ಗುರುತಿಸುವುದು ಕಷ್ಟ ಬದಲಾಗಿ ವೀರರು ತಮ್ಮ ಕೂದಲುಗಳನ್ನು ನೀಳವಾಗಿ ಕತ್ತಿನವರೆಗೆ ಬಿಟ್ಟುಕೊಂಡಿರುವಂತೆಯೋ ಅಥವಾ ತಲೆಗೆ ಟೋಪಿಯನ್ನೋ ಅಥವಾ ಶಿರಸ್ತ್ರಾಣವನ್ನೋ ಹಾಕಿಕೊಂಡಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಕರ್ನಾಟಕದ ಇತರೆ ಕಡೆಗಳಲ್ಲಿ ದೊರೆಯುವ ವೀರಗಲ್ಲುಗಳಲ್ಲಿ ವಿರಳವಾಗಿ ವೀರನು ರುಮಾಲನ್ನು ಸುತ್ತಿಕೊಂಡಂತೆ, ಟೋಪಿಯನ್ನು ಹಾಕಿಕೊಮಡಂತೆ ಶಿಲ್ಪದ ವಿವರಗಳು ದೊರೆಯುತ್ತವೆ. ರಟ್ಟಹಳ್ಳಿಯ ವೀರಗಲ್ಲಿನ ಶಿಲ್ಪದಲ್ಲಿ ವೀರನು ನೀಳವಾದ ಜೆಡೆಯನ್ನು ಸುಂದರವಾಗಿ ಹಾಕಿಕೊಂಡಂತೆ ವಿವರವಿದೆ. (ಚಿತ್ರ ೨೬೪)

ಮುಡಿಯ ರೀತಿಯಲ್ಲಿಯೇ ಎದ್ದುಕಾಣುವ ಮತ್ತೊಂದ ಅಂಶವೆಂದರೆ ವೀರರ ಕಿವಿಯ ಆಭರಣಗಳು. ಈ ವಿಷಯವನ್ನು ಸೋಮದೇವನು ತನ್ನ ಯಶಸ್ತಿಲಕಚಂಪೂವಿನಲ್ಲಿ ತಿಳಿಸುತ್ತಾನೆ.[೮೬] ಬನವಾಸಿಯ ಮೇಲೆ ಮಾಡಿದ ಹೋರಾಟವೊಂದರಲ್ಲಿ ಬಿಜ್ಜಳನು ಬನವಾಸಿ ಪ್ಷದುವರ ಕಿವಿಯ ಆಭರಣಗಳನ್ನು ಅಪಹರಿಸಿದಂತೆ ಶಾಸನವೊಂದರಿಂದ ತಿಳಿದುಬರುತ್ತದೆ.[೮೭] ಇವು ದಂಡನೆಯ ಆಕಾರದಲ್ಲಿ ಸಾಕಷ್ಟು ಅಗಲವಾಗಿತ್ತೆಂದು ತೋರುತ್ತದೆ.

---

೮೬ N. Subramani : Sangam Polity . ಪು. ೧೪೮, ೩೧೨.

೮೭ Moreas : Kadamba kula. ಪು. ೨೫೭–೭೬

ವೀರರು ತಮ್ಮ ಕೊರಳಿಗೆ ಕಂಠಾಭರಣಗಳನ್ನು ತೊಡುತ್ತಿದ್ದರೆಂಬುದು ವೀರಗಲ್ಲುಗಳ ಶಿಲ್ಪದಿಂದ ತಿಳಿದುಬರುತ್ತದೆ. ಇವರು ಒಂದೋ ಎರಡೋ ಆಭರಣಗಳನ್ನು ಮಾತ್ರ ಧರಿಸುತ್ತಿದ್ದರು. ಬಳ್ಳಾರಿ ಜಿಲ್ಲೆಯ ಜಬ್ಬಲಗುಡ್ಡ ಎಂಬ ಗ್ರಾಮದ ಹುಟ್ಟುಗುಂಡಿನ ಮೇಲಿರುವ ವೀರಗಲ್ಲೊಂದರಲ್ಲಿ ವೀರನು ತನ್ನ ಕೊರಳಿಗೆ ಶಿವಲಿಂಗವನ್ನು ಧರಿಸಿರುವಂತೆ ಬಿಡಿಸಲಾಗಿದೆ. (ಚಿತ್ರ ೨೭೩)

ಇವುಗಳಲ್ಲದೆ ತೋಳಬಂದಿ, ಕೈಕಡಗ, ಕಾಲಂದಿಗೆ ಮುಂತಾದ ಆಭರಣಗಳನ್ನೂ ಹಾಕುತ್ತಿದ್ದರೆಂದು ತೋರುತ್ತದೆ. ಕೆಲವು ವೀರಗಲ್ಲುಗಳ ಶಿಲ್ಪದಲ್ಲಿ ವೀರನ ಎಡ ಅಥವಾ ಬಲಗಾಲಿನಲ್ಲಿ ಮಾತ್ರ ಅಂದಿಗೆಯನ್ನೋ, ಕಡಗವನ್ನೋ ಹಾಕಿಕೊಂಡಿರುವಂತೆ ಬಿಡಿಸಿರುವುದನ್ನು ಗಮನಿಸಬಹುದು. ಇವು ಬಹುಶಃ ಗರುಡರು ಧರಿಸುತ್ತಿದ್ದ ಗಂಡಪೆಂಡೇರಗಳಿರಬಹುದೇ ಎಂಬ ಅನುಮಾನ ಬರುತ್ತದೆ. ಹೊಯ್ಸಳರ ಕಾಲದ ಅಮೃತಾಪುರದ ಅಮೃತೇಶ್ವರ ದೇವಾಲಯದ ಉತ್ತರದ ಕಡೆಗೆ ಇರುವ ಶಿಲ್ಪದ ವೀರನು ಬಹುಶಃ ಗರುಡನಿರಬೇಕೆಂದು ತೋರುತ್ತದೆ. ಇದೇ ರೀತಿ ತಮ್ಮ ಒಂದು ಕಾಲಿನಲ್ಲಿ ಮಾತ್ರ ಈ ರೀತಿಯ ಆಭರಣಗಳನ್ನು ಧರಿಸಿರುವಂತೆ ವೀರರನ್ನು ಚಿತ್ರಿಸಿರುವ ವಿಜಯನಗರ ಕಾಲದ ವೀರಗಲ್ಲುಗಳು ನಮಗೆ ಸಮಸ್ಯೆಯಾಗುತ್ತವೆ. ಹುಲಿಯ ಬೇಟೆಯಲ್ಲಿ ನಿರತನಾಗಿರುವ ವೀರನ ಎಡಗಾಲಿಗೆ ಅಂದಿಗೆ ಇರುವುದನ್ನು ಗಮನಿಸಬಹುದು – ಈ ಯಾವುದೇ ಆಧಾರಗಳಿಂದ ಖಚಿತವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗದೇ ಇರುವುದರಿಂದ ಈ ಅಂಶವನ್ನು ಪ್ರಸ್ತಾಪ ಮಾಡಿ ಮುಂದುವರೆಯುತ್ತೇವೆ. ಗರುಡರ ಬಗ್ಗೆ ಸಂಶೋಧನೆ ಮಾಡುವವರು ಈ ಬಗ್ಗೆ ತಮ್ಮ ಗಮನಹರಿಸಬೇಕೆಂಬುದೇ ನಮ್ಮ ಉದ್ದೇಶ.

ಯುದ್ಧ ಮಾಡುವ ಸಮಯದಲ್ಲಿ ಪದಾತಿಗಳು, ಸಾಮಾನ್ಯವಗಿ ಮೊಳಕಾಲಿನಿಂದ ಮೇಲಕ್ಕೆ ಇರುವಂತೆ ವೀರಗಚ್ಚೆಯನ್ನುಡುತ್ತಿದ್ದರು. ಮೊಳಕಾಲಿನಿಂದ ಕೆಳಗಿರುವ ವೀರಗಚ್ಚೆಯನ್ನು ಎಲ್ಲಿಯೂ ಬಿಡಿಸಿಲ್ಲ. ಈ ವೀರಗಚ್ಚೆಗೆ ಕೆಲವೊಮ್ಮೆ ನಿರಿಗೆಗಳು ಇರುವಂತೆ ಬಿಡಿಸಲಾಗಿದೆ. ಈ ಕಚ್ಚೆ ಬಿಗಿಯಾಗಿರುವಂತೆ ಒಂದು ರೀತಿಯ ಪಟ್ಟಿಯನ್ನು ಹೊಟ್ಟೆಗೆ ಕಟ್ಟಿಕೊಳ್ಳುತ್ತಿದ್ದರೆಂದು ತೋರುತ್ತದೆ. ಈ ನಡುಪಟ್ಟಿಗೆ ಸಾಮಾನ್ಯವಾಗಿ ಒಂದು ಕಿರುಗತ್ತಿಯನ್ನೋ, ಬಾಕುನ್ನೋ ಅಥವಾ ಉದ್ದನೆಯ ಕತ್ತಿಯನ್ನೋ ಒರೆಯ ಸಮೇತ ಕಟ್ಟಿಕೊಳ್ಳುತ್ತಿದ್ದರು.

ಸಾಮಾನ್ಯವಾಗಿ ಎಲ್ಲ ವೀರರ ಎದೆಯ ಭಾಗವು ನಗ್ನವಾಗಿರುವಂತೆ ಕಂಡುಬಂದರೂ, ಅವರು ಉತ್ತರೀಯವನ್ನು ಹೊದ್ದುಕೊಂಡಿರುವಂತೆ ಕೆಲವು ವೀರಗಲ್ಲುಗಳ ಶಿಲ್ಪದಲ್ಲಿ ಬಿಡಿಸಲಾಗಿದೆ. ವೀರರು ಕವಚಗಳನ್ನಾಗಲೀ, ಶಿರಸ್ತ್ರಾಣಗಳನ್ನಾಗಲೀ ಧರಿಸುತ್ತಿದ್ದರೆಂಬುದಕ್ಕೆ ಸ್ಪಷ್ಟವಾದ ಆಧಾರಗಳು ವೀರಗಲ್ಲುಗಳ ಶಿಲ್ಪದಿಂದಾಗಲೀ ಪಾಠದಿಂದಾಗಲೀ ದೊರೆಯುವುದಿಲ್ಲ. ಪ್ರಸ್ತುತದಲ್ಲಿ ನ್ಯೂನಿಜ್ ಎಂಬ ಪ್ರವಾಸಿಯ ಕಥನವನ್ನು ಗಮನಿಸುವುದು ಸೂಕ್ತವೆಂದು ತೋರುತ್ತದೆ. ವಿಜಯನಗರದ

ಸೈನಿಕರನ್ನು ವರ್ಣಿಸುತ್ತಾ, "ರಾಜನು ತನ್ನ ರಕ್ಷಾದಳದ ಒಳ್ಳೊಳ್ಳೆಯ ಆರು ಸಾವಿರ ಕುದುರೆಗಳನ್ನು ಚುನಾಯಿಸಿದನು. ಈ ದಳದವರು ಬಿಲ್ಲು – ಬಾಣಗಳಿಂದ, ಭಲ್ಲೆ ಗುರಾಣಿಗಳಿಂದ ಸಜ್ಜಿತರಾಗಿದ್ದರು. ಎಲ್ಲಾ ಯೋಧರೂ ಸುಸಜ್ಜಿತರಾಗಿದ್ದರು. ಗುರಾಣಿಗಳನ್ನು ಹಿಡಿದವರು ಸೊಂಟಕ್ಕೆ ಕತ್ತಿಯನ್ನೂ ಈಟಿಯನ್ನೂ ಸಿಕ್ಕಿಸಿದ್ದರು. ಗುರಾಣಿ ಶರೀರವನ್ನೆಲ್ಲಾ ರಕ್ಷಣೆ ಮಾಡುವಷ್ಟು ದೊಡ್ಡದಾಗಿದ್ದುದರಿಂದ ರಕ್ಷಾಕವಚ ಅವಶ್ಯಕತೆ ಇರಲಿಲ್ಲ" ಎಂಬುದಾಗಿ ತಿಳಿಸುತ್ತಾನೆ.[೮೮] ನ್ಯೂನಿಜನ ಈ ಅಭಿಪ್ರಾಯ ಸರಿಯಾದುದೆಂದೇ ತೋರುತ್ತದೆ. ಎಂದರೆ ಶಿರಸ್ತ್ರಾಣಗಳನ್ನಾಗಲೀ, ಕವಚಗಳನ್ನಾಗಲೀ ಧರಿಸುತ್ತಿರಲಿಲ್ಲ ಎಂಬುದು ನಮ್ಮ ಅಭಿಪ್ರಾಯವಲ್ಲ. ಶಿರಸ್ತ್ರಾನ ಮತ್ತು ಕವಚಗಳನ್ನು ಧರಿಸಿರುವ ಪದಾತಿಗಳನ್ನು ಶಿಲ್ಪಗಳಲ್ಲಿ ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ.[೮೯]

ಕೋಟೆ ಕಾಳಗ

ಸ್ವರಕ್ಷಣೆಯ ದೃಷ್ಟಿಯಿಂದ ಯುದ್ಧತಂತ್ರಗಳಲ್ಲಿ ಒಂದಾಗಿ ಬೆಳೆದು ಬಂದ ಕೋಟೆ ಅಥವಾ ದುರ್ಗ, ಆಕ್ರಮಣಕಾರನಿಗೆ ಆಕ್ರಮಣ ವಿಧಾನಗಳನ್ನೂ ಹೇಳಿಕೊಟ್ಟಿತು. ಆದ್ದರಿಂದ ಯುದ್ಧಕಲೆಯ ಬಗ್ಗೆ ವಿಚಾರ ಮಾಡುವಾಗ ಕೋಟೆಕಾಳಗದ ಬಗ್ಗೆ ವಿಚಾರ ಮಾಡುವುದು ಸೂಕ್ತವೆಂದು ತೋರುತ್ತದೆ. ಕೋಟೆಯನ್ನು ಆಕ್ರಮಣ ಮಾಡುವಲ್ಲಿ, ಕೋಟೆಯನ್ನು ಉಳಿಸಿಕೊಳ್ಳುವಲ್ಲಿ ಹೋರಾಡಿ ಮಡಿದ ವೀರರ ವೀರಗಲ್ಲುಗಳು ದೊರೆಯುತ್ತವೆ. ಕೋಟೆಯ ಕಾಳಗದ ಬಗ್ಗೆ ವೀರಗಲ್ಲುಗಳ ಪಾಠದಿಂದಲೂ ಮತ್ತು ಶಿಲ್ಪದಿಂದಲೂ ದೊರೆಯುವ ಅನೇಕ ಮಾಹಿತಿಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ. ಈಗಾಗಲೇ ಶ್ರೀ ಬೆಟಗೇರಿ ಕೃಷ್ಣಶರ್ಮರು ಮತ್ತು ಡಾ. ಎಂ. ಚಿದಾನಂದಮೂರ್ತಿ ಅವರು ಕರ್ನಾಟಕದ ಕೋಟೆಯಕಾಳಗದ ಬಗ್ಗೆ ಸಾಹಿತ್ಯ ಮತ್ತು ಶಾಸನಗಳ ಆಧಾರದ ಮೇಲೆ ಸಮರ್ಥವಾದ ವಿವರಣೆಯನ್ನು ನೀಡಿದ್ದಾರೆ.[೯೦] ಆದ್ದರಿಂದ ನಾವು ಅವರು ಪ್ರಸ್ತಾಪಿಸಿರುವ ವಿಷಯಗಳನ್ನು ಇಲ್ಲಿ ಪುನರುಕ್ತಿ ಮಾಡುವುದಕ್ಕೆ ಹೋಗದೆ, ವೀರಗಲ್ಲುಗಳ ಶಿಲ್ಪದಿಂದ ಮತ್ತು ಪಾಠಗಳಿಂದ ದೊರೆಯುವ ಮಾಹಿತಿಗಳನ್ನಷ್ಟೇ ಪ್ರಸ್ತಾಪ ಮಾಡುತ್ತೇವೆ. ಪ್ರಾಸ್ತಾವಿಕವಾಗಿ ಇತರ ಶಾಸನಗಳು ಮತ್ತು ಸಾಹಿತ್ಯಕೃತಿಗಳಿಂದ ದೊರೆಯುವ ಸಾಹಿತ್ಯಿಕ ಆಧಾರಗಳನ್ನು ಚರ್ಚಿಸುತ್ತೇವೆ.

---

೮೮ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ. ಭಾ. ೧. ಪು.೩೯೭

೮೯ William Coelldho : The Hoysala Vamsa. ಪು. ೨೫೪–೫೬ ಮತ್ತು ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೭೮ (ಅಡಿ ಟಿಪ್ಪಣಿಗಳು. ೨೮೯–೨೯೧).

೯೦ ಬೆಟಗೇರಿ ಕೃಷ್ಣಶರ್ಮ : 'ಕನ್ನಡಿಗರ ಕೋಟೆಕಾಳಗ' ಕರ್ನಾಟಕ ಜನಜೀವನ ; ಮತ್ತು ಎಂ. ಚಿದಾನಂದಮೂರ್ತಿ : 'ಯುದ್ಧಕಲೆ' ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.

ಕೋಟೆ ಎಂಬುದು ಅಂದಿನ ರಾಜಕೀಯ ವ್ಯವಸ್ಥೆಯ ಮತ್ತು ಜನರ ರಕ್ಷಣೆಯ ಭಾರವನ್ನು ಹೊತ್ತಿತ್ತು. ಕೋಟೆಯ ಬಲದ ಮೇಲೆ ಆಡಳಿತ ವ್ಯವಸ್ಥೆಯ ಉಳಿವು – ಅಳಿವು ಕೆಲವೊಮ್ಮೆ ಅವಲಂಭಿಸುತ್ತಿತ್ತು. ದೇವಗಿರಿಯ ಮೇಲೆ ಅಲ್ಲಾವುದ್ದೀನನು ಧಾಳಿ ಮಾಡಿದಾಗ, ದೇವಗಿರಿಯ ಮುಖ್ಯ ಸೇನಾಭಾಗವು ದೂರದಲ್ಲಿದ್ದುದರಿಂದ ಮತ್ತು ಶತ್ರುಗಳನ್ನು ಎದುರಿಸುವಷ್ಟು ಸೈನ್ಯ ತನ್ನಲ್ಲಿ ಇಲ್ಲದ ಕಾರಣ. ಅರಸನಾದ ರಾಮಚಂದ್ರನು ತನ್ನ ಮುಖ್ಯಸೇನೆ ಬರುವವರೆಗೆ ತನ್ನ ಕೋಟೆಯಲ್ಲಿಯೇ ಇದ್ದು ಕಾಲಹರಣ ಮಾಡುವ ಪ್ರಯತ್ನ ಮಾಡುತ್ತಾನೆ. ಆದರೆ ಮುಸಲ್ಮಾನ ಧಾಳಿಕಾರರ ಆಕ್ರಮಣ ಪ್ರಬಲವಾಗಿ ಅವನ ಪ್ರಯತ್ನ ವಿಫಲವಾಗಿ ಕೋಟೆಯೇ ಮುಸಲ್ಮಾನರ ವಶವಾಗುತ್ತದೆ.[೯೧] ಈ ರೀತಿ ಅರಸರು ತಮ್ಮ ಕೋಟೆಯ ಸುಭದ್ರತೆಯನ್ನು ನೆಚ್ಚಿಕೊಂಡು, ಕಾಲಹರಣ ಮಾಡಿ ಶತ್ರುವಿನ ಬಲ ಕುಂದುವವರೆಗೂ ಅಥವಾ ತಮಗೆ ಬೇರೆ ಕಡೆಯಿಂದ ನೆರವು ಬರುವವರೆಗೂ ಕಾಲಹರಣ ಮಾಡಿ ಯಶಸ್ವಿಯಾಗುತ್ತಿದ್ದುದೂ ಉಂಟು ; ವಿಫಲವಾಗುತ್ತಿದ್ದುದೂ ಉಂಟು.

ಕ್ರಿ.ಶ. ೧೧೭೬ರ ಒಂದು ಶಾಸನದಲ್ಲಿ, ತುಂಗಭದ್ರಾನದಿಯ ದಕ್ಷಿಣದಲ್ಲಿದ್ದ ಬಲ್ಲಕುಂದೆ ನಾಡಿನ ಕುಱುಗೋಡು ಎಂಬ ಊರಿನ ಕೋಟೆಯ ವರ್ಣನೆ ಬರುತ್ತದೆ. ಈ ಶಾಸನವು ಕೋಟೆಗಳು ಯುದ್ಧದಲ್ಲಿ ಯಾವ ರೀತಿಯಲ್ಲಿ ರಕ್ಷಣೆ ನೀಡುತ್ತಿದ್ದುವು ಎಂಬ ಅಂಶವನ್ನು ಬಹಳ ಸೊಗಸಾದ ರೀತಿಯಲ್ಲಿ ವರ್ಣಿಸುತ್ತದೆ.

> ಚೋಳನನಾಳುಮಾಡುವುದು ಗೂರ್ಜ್ಜರರಂ ಸಲೆ ತರ್ದ್ದಿಕುಂ ಕರ
> ಲಾಳನ ಸಾಳಿಮಾಡುವುದು ಪಾಂಡ್ಯನನಂಡಲೆಗುಂ ತೆಲುಮಗಭೂ
> ಪಾಲನನೊಳಿದಿಕ್ಕೆಯನೆ ಮಾಡುವುದೀ ಕುಱುಗೋಡೆ ಕೋಟೆ ತಾಂ
> ಕಾಳಗಮೆಂದಡೇಳುಮಡಿ ಪೆರ್ಚ್ಚುವುದಚ್ಚುರಿ ಯಾರೋಕಾದುವರ್.[೯೨]

ಕಾಳಗವೆಂದರೆ ತಾನು ಇದ್ದುದಕ್ಕಿಂತ ಏಳುಪಟ್ಟು ಹೆಚ್ಚುತ್ತಿತ್ತಂತೆ ಈ ಕೋಟೆ. ಇದು ಕವಿಯ ಉತ್ಪ್ರೇಕ್ಷೆಯಾದರೂ ಕೋಟೆ ಹೇಗೆ ಸಂರಕ್ಷಣೆಯ ಸಾಧನವಾಗಿತ್ತು ಎಂಬ ಅಂಶ ಸುಸ್ಪಷ್ಟವಾಗುತ್ತದೆ. ವೀರರು ಕೋಟೆಯಂತಯೇ ನೀಡುತ್ತಿದ್ದ ರಕ್ಷಣೆಯನ್ನು ಕವಿಗಳು ಗಮನಿಸಿ ಅವರನ್ನು 'ನಡೆಗೋಂಟೆ' ಎಂಬುದಾಗಿ ಕರೆದಿದ್ದಾರೆ. ಕ್ರಿ.ಶ. ೧೨೬೬ರ ವೀರಗಲ್ಲೊಂದು ದೇಸುನಾಯಕನನ್ನೂ 'ಲೋಕವೇ ನಡೆಗೋಂಟೆಯೆಂದು ನುಡಿಯೆ' ಯಶಸ್ಸನ್ನು ಪಡೆದನೆಂದು ವರ್ಣಿಸುತ್ತದೆ.

---

೯೧ A.V. Narasimha Murthy : The Sevunas of Devangiri.

೯೨ ಶಾಸನ ಸಾಹಿತ್ಯ ಸಂಚಯ (ಸಂ: ಎ.ಎಂ. ಅಣ್ಣಿಗೇರಿ ಮೇವುಂಡಿ ಮಲ್ಲಾರಿ) :ಪು. ೨೫೪.

೯೩ E.C. VIII. Sa. 140, 1265

ಕೋಟೆಯನ್ನು ಆಕ್ರಮಣ ಮಾಡಬಯಸುವವರು ಕೋಟೆಗೆ ಮೂರು ಕಡೆಗಳಿಂದ ಲಗ್ಗೆ ಹಾಕುತ್ತಿದ್ದರೆಂದು ತೋರುತ್ತದೆ. ಕಾವದೇವನ ಪ್ರಧಾನಿಯಾದ ಕಲ್ಲವೆಗ್ಗಡೆ ಎಂಬುವನು ತನ್ನ ಸೈನ್ಯದೊಂದಿಗೆ "ಕೊಡಕಣಿಯ ದುರ್ಗವಂ ಮೂಱುಸುತ್ತಾಗಿ" ಮುತ್ತುತ್ತಾನೆ.[೯೪] ಕ್ರಿ.ಶ. ೧೧೭೭ರ ಮತ್ತೊಂದು ವೀರಗಲ್ಲಿನಿಂದ ಆಕ್ರಮಣಕಾರರು ಗ್ರಾಮವೊಂದನ್ನು "ಮೂವಳಸಾಗಿ ಮುತ್ತಿದೆ"ದ ವಿಷಯ ತಿಳಿಯುತ್ತದೆ.[೯೫] ಇಲ್ಲಿ 'ಮೂರುಸುತ್ತಾಗಿ' ಎಂಬುದನ್ನು ಮೂರು ಕಡೆಯಿಂದ ಸುತ್ತಿ ಎಂಬುದಾಗಿ ಅರ್ಥೈಯಿಸಬೇಕೆಂದು ತೋರುತ್ತದೆ. ಕೋಟೆಗಳು ಸಾಮಾನ್ಯವಾಗಿ ದುಂಡಗೆ ವರ್ತುಲ ಆಕಾರದಲ್ಲಿರುತ್ತವೆ. ಇದನ್ನು ಮೂರು ಕಡೆಯಿಂದ ಆಕ್ರಮಣಕಾರರು ಮುತ್ತಿದ್ದರೆ ಒಳಗಡೆಯ ಶತ್ರುಗಳು ಹೊರಗೆ ಬರುವುದಕ್ಕೂ ಅವರಿಗೆ ನೆರವು ನೀಡುವ ಸೈನ್ಯ ಒಳಗೆ ಹೋಗುವುದಕ್ಕೂ ಸಾಧ್ಯವಿಲ್ಲ ಮತ್ತು ಕೋಟೆಯನ್ನು ಎಲ್ಲಾ ಕಡೆಯಿಂದ ಆಕ್ರಮಣ ಮಾಡಿ ಧಾಳಿ ಮಾಡುವುದರಿಮದ ಕೋಟೆಯ ಒಳಗಿನವರು ಮೂರು ಕಡೆಯ ಸೈನ್ಯಗಳ ಮೇಲೆ ಒಂದೇ ರೀತಿ ಯುದ್ಧ ಮಾಡುವುದೂ ಸಾಧ್ಯವಿಲ್ಲ. ಹಾಗೂ ಅವಕಾಶ ದೊರೆತಾಗ, ಶತ್ರುವಿನ ಬಲ ಕುಂದಿದಾಗ ಕೋಟೆಯನ್ನು ಪ್ರವೇಶಿಸಲು ಅವಕಾಶವಾಗುತ್ತಿತ್ತು.

ಕೋಟೆಯ ವರ್ಣನೆ ಬರುವ ಕನ್ನಡ ಕಾವ್ಯಗಳಾದ ಜನ್ನನ ಅನಂತನಾಥ ಪುರಾಣ ಮತ್ತು ನಂಜುಂಡನ ರಾಮನಾಥ ಚರಿತೆಯಲ್ಲಿಯೂ ಸಹ ಕೋಟೆಯ ಆಕ್ರಮಣದ ವಿಧಾನವನ್ನು ವರ್ಣಿಸುವುದನ್ನು ಗಮನಿಸಿದರೆ, ಕೋಟೆಯನ್ನು ಲಗ್ಗೆ ಮಾಡುವ ಮೊದಲ ದಿನ ಮೂವಳಸಾಗಿ ಬೀಡು ಬಿಟ್ಟಿದ್ದು, ಮಾರನೆಯ ದಿನ ಲಗ್ಗೆಯನ್ನು ಹತ್ತುತ್ತಿದ್ದರೆಂದು ತಿಳಿದುಬರುತ್ತದೆ.[೯೬]

ಕೋಟೆಯನ್ನು ಮುತ್ತಿ ತಮ್ಮ ಸೈನಿಕರಿಗೆ ಮುನ್ನಗ್ಗುವಂತೆ ಕೈಬೀಸಿ ಸಂಜ್ಞೆ ಮಾಡುತ್ತಾ ಅವರನ್ನು ಹುರಿದುಂಬಿಸುತ್ತಿದ್ದರು ಮತ್ತು ಶತ್ರುಪಕ್ಷದವರಿಗೆ ಅವಮಾನವಾಗುವಂತಹ ಅಥವಾ ಅವರ ಪರಾಕ್ರಮಕ್ಕೆ ಸವಾಲು ಎಸೆಯುವಂತಹ ಕೃತ್ಯಗಳಲ್ಲಿ ತೊಡಗುತ್ತಿದ್ದರು.[೯೭]

ಈ ರೀತಿ ಕೋಟೆಯನ್ನು ಲಗ್ಗೆ ಹತ್ತಿಸುವಾಗ ಅರಸರೂ ಸಕ್ರಿಯವಾಗಿ ಭಾಗವಹಿಸಿ ಸೈನಿಕರನ್ನು ಹುರಿದುಂಬಿಸುತ್ತಿದ್ದರೆಂದು ವೀರಗಲ್ಲುಗಳಿಂದ ತಿಳಿಯುತ್ತದೆ. ಹಾನುಗಲ್ಲಿನ ಕೋಟೆಯ ಮೇಲೆ ಲಗ್ಗೆ ಹತ್ತಿದಾಗ ಸ್ವತಃ ವಿಷ್ಣುವರ್ಧನನೇ ತನ್ನ ಕೈಕೆಳಗಿನವರಿಗೆ ಯುದ್ಧ ಮಾಡುವ ವಿಧಾನವನ್ನು ಸೂಚಿಸುತ್ತಿದ್ದನೆಂಬುದಾಗಿ ವೀರಗಲ್ಲಿನಿಂದ ತಿಳಿದುಬರುತ್ತದೆ.[೯೮] ಕ್ರಿ.ಶ. ೧೧೩೦ರ ಮತ್ತೊಂದು

೯೫ ಅದೇ. ೨೫೧, ೧೧೭೭

೯೬ ಜನ್ನ : ಅನಂತನಾಥ ಪುರಾಣ, ೧೧–೮೭, ನಂತರದ ವಚನ.
ನಂಜುಂಡ : ರಾಮನಾಥ ಚರಿತೆ. ಭಾ.೨, ಆ.೩, ಸಂ. ೧–೩೭, ಮತ್ತು ಅದೇ : ಭಾ.೩, ಆ. ೧೦. ಸಂ. ೩–೧೫

೯೭ E. C. VIII. Sb. 141, 1127

೯೮ M. A. R.1932. 30. 1125

ವೀರಗಲ್ಲಿನ ಪಾಠದಿಂದ ಕಾಳಗಾವುಣ್ಡನ ತಮ್ಮನಾದ ಲೆಂಕರಾಯನು ಹಾನುಗಲ್ಲ ಕೋಟೆಯಲ್ಲಿ ಶತ್ರುಪಕ್ಷದವರ ಆನೆ, ಕುದುರೆಗಳನ್ನು ಸಂಹಾರ ಮಾಡುತ್ತಿರುವುದು ವಿಷ್ಣುವರ್ಧನನು ಆನೆಯೇರಿ ನೋಡುತ್ತಿದ್ದನೆಂಬುದಾಗಿ ತಿಳಿಯುತ್ತದೆ.[೯೯] ತಂಬೂರಿನ ವೀರಗಲ್ಲಿನ ಶಿಲ್ಪದಲ್ಲಿ ಬಿಜ್ಜಳನು ಆನೆಯ ಮೇಲೆ ಕುಳಿತು ಸ್ವತಃ ಯುದ್ಧ ಮಾಡುತ್ತಿರುವ ವಿವರವಿದೆ.[೧೦೦]

ಆಕ್ರಮಣಕಾರರ ಉದ್ದೇಶ ಮುಖ್ಯವಾಗಿ ಕೋಟೆಯನ್ನು ಆಕ್ರಮಿಸುವುದು. ಕರ್ನಾಟಕದಲ್ಲಿ ಮೂರು ವಿಧದ ಕೋಟೆಗಳಿದ್ದುವು : ಜಲದುರ್ಗ, ವನದುರ್ಗ, ಗಿರಿದುರ್ಗ, ಗಿರಿದುರ್ಗಕ್ಕೆ ಉದಾಹರಣೆಯಾಗಿ ಉಚ್ಚಂಗಿ ಕೋಟೆಯನ್ನು ನೀಡಬಹುದು. ಈ ಕೋಟೆಯನ್ನು ಮುತ್ತುವುದು ಅಸಾಧ್ಯದ ಮಾತೇ ಆಗಿತ್ತು. ಇದನ್ನು ಆಕ್ರಮಣ ಮಾಡಲು ಬಹಳ ಎಚ್ಚರಿಕೆಯೂ ಬೇಕಿತ್ತು. ಈ ಉಚ್ಚಂಗಿದುರ್ಗವನ್ನು ಆಕ್ರಮಿಸಲು ಸಾಧ್ಯವಾಗದೆ ಬೆಂಕಿಯಿಟ್ಟು ಅವರನ್ನು ತನ್ನ ಮೇಲೆ ಯುದ್ಧಕ್ಕೆ ಬರುವಂತೆ ಮಾಡುತ್ತಾನೆ ವಿಷ್ಣುವರ್ಧನ[೧೦೧]. ಈ ತಂತ್ರಕ್ಕೆ ಕೋಟೆಯವರು ಮಣಿಯಲೇ ಬೇಕಿತ್ತು. ಈ ಒಂದು ತಂತ್ರವನ್ನು ಉಪಯೋಗಿಸಿ ಹೋರಾಡಿ ಮಡಿದ ವೀರರ ಶಾಸನಗಳು ದೊರೆಯುತ್ತವೆ. ಭೀಮಗಾವುಂಡ ಎಂಬುವನು ನೀಲಗಿರಿಯ ಶಿಖರದ ಮೇಲಿನ ಕೂಳ್ಕಲ್ಲ ಕೋಟೆಗೆ ಮುತ್ತಿಗೆ ಹಾಕಿ, ಆ ಕೋಟೆಯನ್ನು "ಸುಟ್ಟು ಕೋಟೆಯ ನಾಯಕನ ಮಗನನ್ನು ಕೊಂದು" ಅಲ್ಲಿ ತನಗೆ "ಇದಿರಾಂತ ಬಲಮಂ" ಎದುರಿಸಿ ತಾನು ರಣಶೌರ್ಯದಿಂದ ಮಡಿದನೆಂಬುದಾಗಿ ವೀರಗಲ್ಲೊಂದರಿಂದ ತಿಳಿಯುತ್ತದೆ.[೧೦೨]

ಈ ತಂತ್ರದಿಂದ ಉಪಯೋಗವಾದ ಸ್ಥಳ ಹಾಗೂ ಜಲದುರ್ಗಗಳಲ್ಲಿ, ಅರಸನಾದವನು ಶತ್ರುಪಕ್ಷದವರ ಕೋಟೆಯನ್ನು ಕೆಡಹುವಂತೆ ಅಪ್ಪಣೆ ಮಾಡುತ್ತಿದ್ದನು. ಈ ಅಂಶವು ನ್ಯೂನಿಜ್ ಪ್ರವಾಸಕಥನದಿಂದ ತಿಳಿಯುತ್ತದೆ. "ರಾಚೂರ್ ಕೋಟೆಯೊಳಗೆ ಮುತ್ತಿಗೆಯನ್ನು ಎದುರಿಸಲು ಸಿದ್ಧರಾಗಿದ್ದ ಯೋಧರು, ಫಿರಂಗಿ ಗುಂಡುಗಳನ್ನು ಹಾರಿಸಿ, ಕೋವಿಗಳಿಂದ ಮದ್ದು ಹೊಡೆದು, ಬಿಲ್ಲುಗಳಿಂದ ಬಾಣಗಳನ್ನೆಸೆದು ಕೃಷ್ಣರಾಯನ ಸೈನ್ಯದ ಅನೇಕ ಜನರನ್ನು ಆಹುತಿ ತೆಗೆದುಕೊಂಡರು. ಅಧೈರ್ಯದಿಂದ ರಾಯನ ಸೈನ್ಯ ಹಿಮ್ಮೆಟ್ಟಲಾರಂಭಿಸಿತು. ಆಗ ಒಂದು ಉಪಾಯ ಮಾಡಿದರು. ಕೋಟೆಯ ಕಲ್ಲು ಕಿತ್ತು ತಂದವರಿಗೆ ಕಲ್ಲಿನ ಮೇಲೆ ಹತ್ತರಿಂದ ಇಪ್ಪತ್ತು ಪನಂಗಳಷ್ಟು ಹಣ ಕೊಟ್ಟು ಪ್ರೋತ್ಸಾಹಿಸಿದರು. ಇದರಿಂದ ಹುರುಪುಗೊಂಡ ಸೈನಿಕರು ದಿನೇ ದಿನೇ ಕೋಟೆಯ ಕಲ್ಲುಗಳನ್ನು ಕಿತ್ತು ಸಡಿಲ ಮಾಡಲಾರಂಭಿಸಿದರು. ಕೋಟೆಯ ಬುಡದಲ್ಲಿ ಸತ್ತವರನ್ನು

೯೯ E. C. V. BI. 202, 1138

೧೦೦ J.K.U.S.S Vol. II. ಪು. ೪೯

೧೦೧ William Coelldho : The Hoysala Vamsa. ಪು. ೨೫೮.

೧೦೨ E. C. V. Cn. 20, 1142

ಎಳೆದುಕೊಮಡು ಬರಲು ಬಹುಮಾನ ಕೊಟ್ಟರು." ಎಂಬುದಾಗಿ ಅವನು ತಿಳಿಸುತ್ತಾನೆ.[೧೦೩] ಇದಕ್ಕೆ ಪೋಷಕವಾಗಿ ಕುಮಾರರಾಮನಸಾಂಗತ್ಯದಿಂದಲೂ ಕೋಟೆಯ ಕಾಳಗದಲ್ಲಿ ಕೋಟೆಯನ್ನು ಲಗ್ಗೆ ಹಾಕುವವರು, ಕೋಟೆಯ ತೆನೆಗಳನ್ನು ಮುರಿದು, ಕೋಟೆಯ ಕಲ್ಲುಗಳನ್ನು ಕಿತ್ತು ಹಾಕುತ್ತಿದ್ದಂತೆ ವರ್ಣನೆ ಬರುತ್ತದೆ.[೧೦೪] ಈ ರೀತಿ ಕೋಟೆಯನ್ನು ಸುಲಭವಾಗಿ ಪ್ರವೇಶಿಸಲು ಅನುಕೂಲ ಮಾಡಿಕೊಳ್ಳುತ್ತಿದ್ದರೆಂದು ತೋರುತ್ತದೆ.

ಕೋಟೆಯ ಗೋಡೆಗಳನ್ನು ಹತ್ತಿ ಕೋಟೆಯನ್ನು ಪ್ರವೇಶ ಮಾಡುವುದು ಕೋಟೆ ಕಾಳಗದ ಒಂದು ವಿಧಾನ. ಹೀಗೆ ಲಗ್ಗೆ ಹತ್ತಿ ಕೋಟೆಯನ್ನು ಪ್ರವೇಶಿಸುವುದು ಸುಲಭಸಾಧ್ಯವಾಧ ಕೆಲಸವಾಗಿರಲಿಲ್ಲ. ಈ ರೀತಿ ಕೋಟೆಯನ್ನು ಹತ್ತುತ್ತಿದ್ದುದು ಅನ್ಯಮಾರ್ಗವಿಲ್ಲದಾಗ ಮಾತ್ರ ತಾನು ಶತ್ರುಗಳನ್ನು ಎದುರಿಸಿ ಗೆಲ್ಲಬಹುದೆಂಬ ಯಾವುದೇ ಭರವಸೆಯೂ ಇಲ್ಲದಿರುವ ವಾಸ್ತವ ಸ್ಥಿತಿಯನ್ನು ಒಪ್ಪಿಕೊಂಡು ವೀರರಾದವರು ಮೊದಲೇ ತಮ್ಮ ಸಾವನ್ನು ನಿಶ್ಚಯಿಸಿ ತಮ್ಮ ಪ್ರಯತ್ನದ ಬಗ್ಗೆ ಮಾತ್ರ ಭರವಸೆ ಇಟ್ಟುಕೊಂಡು ಮುನ್ನುಗ್ಗುತ್ತಿದ್ದರು. ಈ ರೀತಿಯ ಸಾಹಸಕ್ಕೆ ತಕ್ಕವನನ್ನು ಪ್ರಧಾನನೋ, ಪಡೆವಳನೋ ಆಗಿ ಆಯ್ಕೆ ಮಾಡಿ ಅವನಿಗೆ ವೀಳೆಯವನಿತ್ತು ಕಳುಹಿಸುತ್ತಿದ್ದರು.[೧೦೫]

ತಗರೆಯ ಕೋಟೆಯನ್ನು ಸೋಯಿದೇವನ ಹತ್ತಿ ಕಾದುತ್ತಿದ್ದಾಗ, ಅವನ ನೇತೃತ್ವದಲ್ಲಿಯೇ ಅವನ ಪರವಾಗಿ ಹೋರಾಡುತ್ತಿದ್ದ ರಾಮಯ್ಯ ಎಂಬುವನು ಹಲವರೊಂದಿಗೆ ಹೋರಾಡಿ ಸಾಯುತ್ತಾನೆ.[೧೦೬] ಕ್ರಿ.ಶ. ೧೨೦೩ ರ ಒಂದು ವೀರಗಲ್ಲಿನಿಂದ ವೀರಬಲ್ಲಾಳನು ಉದಿರೆಯನ್ನು ಮುತ್ತಬೇಕೆಂದು ಮಹಾಪ್ರಧಾನ ಮಲ್ಲೆಯ ದಂಣ್ನಾಯಕನಿಗೆ ತಿಳಿಸಿದಾಗ, ಇವನ ಆಜ್ಞೆಯಂತೆ ಹರಿಯಣ ಎಂಬುವವನು ಉದಿರೆಯ ಕೋಟೆಯನ್ನು ಮುತ್ತಿ ಗುರಾಣಿ ಹಿಡಿದು ಕೋಟೆಯನ್ನೇರಿ, ಅಲ್ಲಿ ಹಲವರನ್ನು ಕೊಂದು ತಾನೂ ಮಡಿದ ವಿಷಯ ತಿಳಿಯುತ್ತದೆ.[೧೦೭] ಮಹಾಂಡಳೇಶ್ವರ

೧೦೩ ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ. ಭಾ. ೨. ಪು. ೩೯೯

೧೦೪ (ಅ) ನಂಜುಂಡ : ರಾಮನಾಥ ಚರಿತೆ. ಭಾ. ೩, ಆ. ೧೧, ೬.

ಕೆಡಹಿದರಂದು ಕೋಟೆಯ ಕಲ್ಲುಗಳನಾರ್ದು ।
ಮಡುಹಿದರಮದು ಸುಭಟರ ।
ತಡಹುಬಿಟ್ಟಂತೆ ಕೋಟೆಯ ತೆನೆಗಳ ಮೇಲೆ ।
ಕಡಿದಾಡಿದರು ವೀರಭಟರು ॥

(ಆ)ಅದೇ. ಪು.೪೩, "ಹೊರಕೋಟೆಯ ತೆನೆಗಳ ಕಡಿಪಿದವ। ರುಜುಬಿಹತ್ತಿದರು"

೧೦೫ E. C. VII. Sa. 84, 85, ಮತ್ತು
William Coelldho : The Hoysala Vamsa. ಪು. ೨೫೮

೧೦೬ M. A. R.1926. 15, ?

೧೦೭ E. C. VII. Sk. 244, 1203

ಸೋವಿದೇವರಸನ ಆಳ್ವಿಕೆಯ ಹತ್ತನೆಯ ವರ್ಷದ ವೀರಗಲ್ಲಿನ ಪಾಠದಿಂದ ಕೋಟೆ ಕಾಳಗದಲ್ಲಿ ಹೋರಾಡಿ ಪರಾಕ್ರಮವನ್ನು ಮೆರೆದ ವೀರನೊಬ್ಬನ ಚಿತ್ರಣ ದೊರೆಯುತ್ತದೆ. ಸೋವಿದೇವರಸ ಮತ್ತು ಎಕ್ಕಲದೇವರಸರೂ ಸಾಲಿಯೂರ ಕೋಟೆಯನ್ನು ಮುತ್ತಿದಾಗ ಜಟ್ಟಿಗನಾದ ಬಿಟ್ಟಿಗ ಎನ್ನುವವನು ಅವರ ಪರವಾಗಿ ಕೋಟೆಯನ್ನು ಹತ್ತಿ ಶತ್ರುಗಳನ್ನು ಸಂಹರಿಸುವಾಗ ತಾನೂ ಸಾಯುತ್ತಾನೆ. ಶಾಸನದ ಕವಿ ಜಟ್ಟಿಗನಾದ ಬಿಟ್ಟಿಗನಿಗೆ ಈ ಕೋಟೆಯ ಎತ್ತರ ಯಾವ ಮಹಾ ಎತ್ತರ ! ಎಂಬುದಾಗಿ ಉದ್ಗಾರವೆಳೆಯುತ್ತಾನೆ.[೧೦೮]

ಇಂತಹ ಬಲಪ್ರಯೋಗವಿಲ್ಲದೆ, ಕೆಲವೊಮ್ಮೆ ಉಪಾಯದಿಂದ ಕೋಟೆಯೊಳಗಿನ ಶತ್ರು ತನ್ನ ಸ್ಥಳ ಬಿಡುವಂತೆ ಮಾಡುತ್ತಿದ್ದರು. ಈ ಅಂಶವು ಒಂದೇ ಯುದ್ಧಕ್ಕೆ ಸಂಬಂಧಿಸಿದ ಎರಡು ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ.[೧೦೯] ಹೊಯ್ಸಳ ಮಾಮಡಳಿಕನು ಗಿಣ್ಣಾಲಗುಂಡಿಯ ಕೋಟೆಯಲ್ಲಿದ್ದಾಗ, ಗುತ್ತಿಮಂಡಲದ ಮಾಂಡಳಿಕರಾದ ಬಮ್ಮರಸನು, ವೀರರಸನೂ ಗಿಣ್ಣಾಲಗುಂಡಿಯ ಕೋಟೆಗೆ ಲಗ್ಗೆ ಹಾಕುತ್ತಾರೆ. ಕೋಟೆಯಲ್ಲಿ ಹೊಯ್ಸಳ ಮಾಂಡಳಿಕನು ಇವರ ಪರಾಕ್ರಮಕ್ಕೆ ಜಗ್ಗದೇ ಹೋದಾಗ ಅವನನ್ನು ಉಪಾಯದಿಂದ ಹೊರಗೆ ಹಾಕಲು ಪ್ರಯತ್ನಿಸುತ್ತಾರೆ. ಅವರ ಆ ಪ್ರಯತ್ನ ಯಶಸ್ವಿಯಾಗುತ್ತದೆ. ಆ ಪ್ರಯತ್ನದಲ್ಲಿ ಕೇತಮಲ್ಲಿಸೆಟ್ಟಿ ಮತ್ತು ಅವನ ಮಗನಾದ ಮಾಸಣ ಇಬ್ಬರೂ ಅವರಿಗೆ ಸಹಾಯ ಮಾಡಿ ಸಾಯುತ್ತಾರೆ. ಕೇತಮಲ್ಲಿಸೆಟ್ಟಿಯ ವೀರಗಲ್ಲು ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಹಿರೇಚವುಟಿಯಲ್ಲಿದೆ. ಮಸಣನ ವೀರಗಲ್ಲು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಎಮ್ಮಿಗನೂರು ಗ್ರಾಮದಲ್ಲಿದೆ. ಈ ಎರಡು ಶಾಸನಗಳ ಪಾಠವೂ ಒಂದೇ ರೀತಿ ಇದೆ. ಆದರೆ ಎರಡೂ ಶಾಸನಗಳಲ್ಲಿ ಯಾವ ಉಪಾಯದಿಂದ ಕೋಟೆಯಲ್ಲಿದ್ದವರನ್ನು ಹೊರಗೆ ಹಾಕಿದರು ಎಂಬುದು ತಿಳಿಯುವುದಿಲ್ಲ.

ಕೋಟೆಯ ಸಂರಕ್ಷಣೆ

ಮುಗಿಲಟ್ಟಣೆಗಳ ಮೇಲೆ ಇದ್ದು ದುರ್ಗದ ಮೇಲೆ ಲಗ್ಗೆ ಹತ್ತಲು ಬರುವ ಶತ್ರುಗಳ ಮುನ್ಸೂಚನೆಯನ್ನು ದುರ್ಗದೊಳಗಿರುವವರಿಗೆ ತಿಳಿಸಿ ಶತ್ರುಗಳನ್ನು ಎದುರಿಸಲು ಯೋಧರು

---

೧೦೮ K. I. VI.24, "ಬಿಟ್ಟೆಯಂ ಕಟ್ಟೆಯದಿಂ ಮಾಡಿದಾಳ್ತನೆಯತೆಂದಡೆ
ಒಟ್ಟಜೆಯಿಂ ಬಲ್ಕಣಿ ನಡೆನಿಟ್ಟಲು ಮ (ಮು) ವಂನ
ಮೆಟ್ಟಿ ತಿವಿಯುತ್ತಂ ಕೇಳ್ನಟ್ಟನೆ ಕೋಟೆಯನಡ್ಡರ್ದಂ
ಜಟ್ಟಿಗೆ ಬಿಟ್ಟೆ (ಯ) ಗೆ ಯುಪ್ಪರಡ್ಡಂ ಪಿರಿದೆ.

೧೦೯ M. A. R.1928.81, 1166

ಸಿದ್ಧರಾಗಲು ಸೂಚನೆಯನ್ನು ಕೊಡುವುದರ ಸಲುವಾಗಿಯೇ ಕಾವಲುಗಾರರನ್ನು ನಿಯಮಿಸುತ್ತಿದ್ದರು. ಅವರು ತಮ್ಮ ಕರ್ತವ್ಯದಲ್ಲಿ ತಪ್ಪಿದರೆ ಅವರಿಗೆ ಕಠಿಣ ಶಿಕ್ಷೆಯಾಗುತ್ತಿತ್ತು. ಅಂಥವರಿಗೆ ಕೊಡುತ್ತಿದ್ದ ಶಿಕ್ಷೆಯ ಬಗ್ಗೆ ಮೊಳಕಾಲ್ಮೂರು ಬೆಟ್ಟದ ಮೇಲಿರುವ ಶಾಸನವೊಂದರಿಂದ ತಿಳಿಯುತ್ತದೆ. ಕೋಟೆಯನ್ನು ಕಾಯುವವರಿಗೆ "ಯೇನು ಅಯಬು ಬಂದ..... ಕಾದುಯಿಂದಂತಾವರ ಹೊಟ್ಟೆ ಬಗಸಿ ತಲೆ ಹೊಸಿ ಸೂಲಕ್ಕೆ ಹಾಕಿಸುತ್ತದೆ" ಎಂದು ಈ ಶಾಸನ ಹೇಳುತ್ತದೆ.[೧೧೦]

ಕೋಟೆಯ ಮುಖ್ಯವಾದ ಬಾಗಿಲಿನಿಂದ ಪ್ರವೇಶ ಅಥವಾ ನಿರ್ಗಮನ ಸಾಧ್ಯ ಆದ್ದರಿಂದ ಶತ್ರುಗಳ ಕೋಟೆಯನ್ನು ಆಕ್ರಮಿಸುವವರು ಈ ಬಾಗಿಲಿನ ಬಳಿ ಲಗ್ಗೆ ಹಾಕುತ್ತಿದ್ದಿರಬೇಕು. ಆದ್ದರಿಂದ ಕೋಟೆಯ ಸಂರಕ್ಷಣ ಮಾಡುವವರು ಶತ್ರುಗಳು ಈ ಬಾಗಿಲಿನಿಂದ ಪ್ರವೇಶಿಸಲು ಅವಕಾಶವೀಯದಂತೆ ಹೆಬ್ಬಾಗಿಲಿನಲ್ಲಿ ಅಡ್ಡ ನಿಂತು ಹೋರಾಡುತ್ತಿದ್ದರೆಮದು ತಿಳಿಯುತ್ತದೆ.[೧೧೧]

ಕೋಟೆಯ ಗೋಡೆಯ ಮೇಲೆ ನಿಂತು. ತೆನೆಗಳ ಮರೆಯಾದ ಕೋಟೆಯ ಸಂರಕ್ಷಕರು ಬಾಣ ಪ್ರಯೋಗ ಮಾಡುತ್ತಿದ್ದರೆಂದು ತೋರುತ್ತದೆ. ವಿಷ್ಣುವರ್ಧನನು ಹಾನುಗಲ್ಲ ಕೋಟೆಗೆ ಲಗ್ಗೆ ಹಾಕಿದಾಗ ಅವನ ಪರವಾಗಿ ಲೆಂಕರಾಯ ಎಂಬುವನು ಹೋರಾಡುತ್ತಾನೆ. ಶಾಸನ ಕವಿ ಲೆಂಕರಾಯನು ತೋರಿದ ಪರಾಕ್ರಮವನ್ನು ಈ ರೀತಿ ವರ್ಣಿಸಿದ್ದಾನೆ.[೧೧೨]

ಸುರಿವ ಸರಲ್ಗೆ ಪಾಯ್ವ ಚತುರಂಗದಳಕ್ಕಣಿದಾರ್ದ್ದು ನೂಂಕುವಾ
ಸುರತರಮಪ್ಪ ಸಿಂಧುರ ಘಟಾವಳಿಗಳ್ಕದೆ ಕಾದಿ ಬೀರಮು
ಚ್ಚರಿವಡೆ ಮಾಚಗಾವುಮಡನ ಮಗಂ ಕಲಿರಾಯನೆ ಕೀರ್ತಿಯಂ ವಸುಂ
ಧರೆ ಪೊಗಳ್ವನ್ನೆಗಂ ಪಡೆದನಾಹವರಂಗದೊಳು ರಣರಂಗಶೂದ್ರಕಂ

ಕವಿಯ ಈ ವರ್ಣನೆಯಿಂದ ಕೋಟೆಯ ಸಂರಕ್ಷಕರ ಬಾಣಗಳನ್ನಲ್ಲದೆ ಅವರು ತಮ್ಮ ಮೇಲೆ ಬಿಡುತ್ತಿದ್ದ ಉನ್ಮತ್ತ ಆನೆಗಳನ್ನು ಎದುರಾಳಿಗಳು ಎದುರಿಸಬೇಕಾಗಿತ್ತು ಎಂಬ ಅಂಶ ವ್ಯಕ್ತವಾಗುತ್ತದೆ.

ಶತ್ರುಗಳು ಕೋಟೆಯನ್ನು ಪ್ರವೇಶ ಮಾಡುವವರೆಗೂ, ಅವರು ಒಳಗೆ ಬರದಂತೆ ಅದರ ರಕ್ಷಕರು ಹಲವಾರು ರೀತಿಗಳಿಂದ ಹೋರಾಡುತ್ತಿದ್ದರು. ತಮ್ಮ ಪ್ರಯತ್ನ ಸಂಪೂರ್ಣ ವಿಫಲವಾಯಿತೆಂಬುದಾಗಿ ಮನವರಿಕೆಯಾದಾಗ, ಎಂದಿನ ಯುದ್ಧದಂತೆ ವ್ಯಕ್ತಿಗಳು ಮುಖಾಮುಖಿ

---

೧೧೦ E. C. XI. Mk. 38, 1620
೧೧೧ E. C. VIII. Sb. 176, 1056 ಮತ್ತು S.I.I. Vol. XX. 250
೧೧೨ E. C. V. BI. 202, 1138

ಹೋರಾಟಕ್ಕೆ ನಿಲ್ಲುತ್ತಿದ್ದರು. ಸಾಂತರ ಕೋಟೆಯನ್ನು ಶತ್ರುಗಳು ಲಗ್ಗೆ ಹತ್ತಿ, ಪ್ರವೇಶಿಸಲು ಪ್ರಯತ್ನಿಸಿದಾಗ ಬಮ್ಮಸಾಂತ ಎಂಬುವನು ಕಡಿತಲೆ ಮತ್ತು ಪಲಗೆಯನ್ನು ತೆಗೆದುಕೊಂಡು ಯುದ್ಧರಂಗಕ್ಕೆ ಇಳಿಯುತ್ತಾನೆ.[೧೧೩] ಕಲ್ಲಹೆಗ್ಗಡೆ ಎಂಬುವವನು ಕೊಡಕಣಿಯ ದುರ್ಗವನ್ನು ಮುತ್ತಿದಾಗ ಕೇತಗವುಡ ಎಂಬುವನು ತನ್ನ ಬಿರುದಾದ 'ಗಡಿಯಂಕ ಸಿಂಹ' ಎಂಬುದನ್ನು ಬಿತ್ತರಿಸಲೆಂದು ವೀರಾವೇಶದಿಂದ ಹೊರಟು ಕೋಟೆಯನ್ನು ಹೊರಗಿನಿಂದ ಆಕ್ರಮಿಸಿ ಸಬಳವೆಂಬ ಆಯುಧವನ್ನು ಹಿಡಿದು ಹೋರಾಡುತ್ತ ಕೋಟೆಯನ್ನು ಪ್ರವೇಶಿಸಲು ಪ್ರಯತ್ನಿಸುತ್ತಿದ್ದ ವೀರರ ಸಾಹಸವನ್ನು ಅಡಗಿಸುವ ಪ್ರಯತ್ನದಲ್ಲಿ ಸಾಯುತ್ತಾನೆ.[೧೧೪]

ಕೋಟೆಕಾಳಗದ ಶಿಲ್ಪವಿರುವ ವೀರಗಲ್ಲುಗಳು ಹಾನುಗಲ್ಲು, ಎಲೇಬೇತೂರು, ಲಕ್ಷ್ಮೇಶ್ವರ, ಮಹಾರಾಷ್ಟ್ರದ ಕಿಕ್ಕಲಿ ಮತ್ತು ಬೆಂಗಳೂರು (ಗೋಖಲೆ ಸಾರ್ವಜನಿಕ ಸಂಸ್ಥೆಯ ಮುಂದೆ ಇರುವುದು) ಮಾವಳಿ, ಶಿವಮೊಗ್ಗಾ (ಕೋಟೆ ಪೋಲಿಸ್ ಠಾಣೆ ಮುಂದೆ ಇರುವುದು) ಮುಂತಾದ ಕಡೆಗಳಲ್ಲಿ ದೊರೆಯುತ್ತವೆ. ಈ ವೀರಗಲ್ಲುಗಳ ಶಿಲ್ಪದ ವಿವರಗಳನ್ನು ವಿವರಿಸುವುದರಿಂದ ಮತ್ತು ಇಲ್ಲಿ ದೊರೆಯುವ ಎಲ್ಲಾ ವೀರಗಲ್ಲುಗಳ ಶಿಲ್ಪದ ಸಾಮಾನ್ಯ ಅಂಶಗಳನ್ನು ಗುರುತಿಸುವುದರ ಮೂಲಕ ಕೋಟೆಯ ಕಾಳಗದ ಬಗ್ಗೆ ಒಂದು ಸ್ಪಷ್ಟ ಚಿತ್ರ ದೊರಕಬಹುದೆಂದು ತೋರುತ್ತದೆ.

ವೀರಗಲ್ಲುಗಳ ಶಿಲ್ಪದಲ್ಲಿ ಕೋಟೆಯನ್ನು ಎರಡು ರೀತಿಯಲ್ಲಿ ಚಿತ್ರಿಸಿರುವುದನ್ನು ನಾವು ಗಮನಿಸಬಹುದು.

(೧) ಕೋಟೆಯ ಮೇಲ್ನೋಟ (ಹಕ್ಕಿ ನೋಟ). ಅಂದರೆ ಅಂತರಕ್ಷದಿಂದ ಕೆಳಗೆ ನೋಡಿದಾಗ ಕಾಣುವ ಕೋಟೆಯ ದೃಶ್ಯವನ್ನು ಬಿಡಿಸಿರುವುದು. ಈ ರೀತಿಯ ಕೋಟೆಯ ಚಿತ್ರವನ್ನು ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಬಳಿ ಇರುವ ವೀರಗಲ್ಲು, ಮಾವಳಿಯ ಕುಲಮುದ್ದನ ವೀರಗಲ್ಲು, ಎಲೇ ಬೇತೂರಿನ ಎರಡು ವೀರಗಲ್ಲುಗಳು, ಮಹಾರತಾಷ್ಟ್ರದ ಕಿಕ್ಕಲಿ ಎಂಬಲ್ಲಿನ ಕನ್ನಡ ಭಾಷೆಯ ವೀರಗಲ್ಲುಗಳು, ಮತ್ತು ಶಿವಮೊಗ್ಗಾ ಕೋಟೆ ಪೋಲೀಸ್ ಸ್ಟೇಷನ್ ನಲ್ಲಿರುವ ವೀರಗಲ್ಲಿನಲ್ಲಿ ಗಮನಿಸಬಹುದಾಗಿದೆ. ಕೋಟೆಯೊಳಗೆ ವೀರರು ನಿಂತಿರುವಂತೆಯೂ ಸುತ್ತಲೂ ವೀರರು ಹೋರಾಡುತ್ತಿರುವಂತೆಯೂ ಬಿಡಿಸಿರುವ ಚಿತ್ರಗಳನ್ನು ಇಲ್ಲಿ ಗಮನಿಸಬಹುದು. (ಚಿತ್ರ ೧೯೫, ೧೯೬, ೨೦೦, ೨೦೨, ೨೦೩)

---

೧೧೩ E. C. VIII. Sb. 141, 1127

೧೧೪ E. C. VIII. Sb. 19, 1441

(೨) ಕೋಟೆಯ ಪಾರ್ಶ್ವ ನೋಟ (ಚಿತ್ರ ೧೯೭, ೧೯೮, ೧೯೯, ೨೦೧) ಕೋಟೆಯ ಒಂದು ಗೋಡೆಯನ್ನು ಬಿಡಿಸಿ ಅದನ್ನು ವೀರನು ಹೇಗೆ ಆಕ್ರಮಿಸುತ್ತಿದ್ದ ಎಂಬುದನ್ನು ಆ ಮೂಲಕ ಚಿತ್ರಿಸುವುದು. ಈ ರೀತಿಯ ಶಿಲ್ಪಗಳನ್ನು ಎಲೇಬೇತೂರು, ಹಾನುಗಲ್ಲು, ಲಕ್ಷ್ಮೇಶ್ವರದಲ್ಲಿನ ವೀರಗಲ್ಲುಗಳಲ್ಲಿ ಗಮನಿಸಬಹುದು. ಅಬ್ಬಲೂರಿನ ವೀರಗಲ್ಲೊಂದರಲ್ಲಿ ಕೋಟೆಯ ಬಾಗಿಲನ್ನು ಬಿಡಿಸಿದ್ದಾರೆ. (ಚಿತ್ರ ೩೫)

ಎಲೇಬೇತೂರು ಮತ್ತು ಲಕ್ಷ್ಮೇಶ್ವರ ವೀರಗಲ್ಲುಗಳಲ್ಲಿ ಕೋಟೆಯನ್ನು ಶತ್ರು ಪಕ್ಷದವರು ಯಾವ ರೀತಿಯಲ್ಲಿ ಆಕ್ರಮಣ ಮಾಡುತ್ತಿದ್ದರು ಎಂಬ ಚಿತ್ರವನ್ನು ಬಿಡಿಸಲಾಗಿದೆ. ಕೋಟೆಯನ್ನು ಆಕ್ರಮಣ ಮಾಡಲು ಉದ್ಯುಕ್ತರಾಗಿರುವ ಎದುರಾಳಿಗಳು ಕೋಟೆಯ ಮೇಲಿನವರನ್ನು ಕೊಲ್ಲುವ ಸಲುವಾಗಿ ಅಥವಾ ತೆನೆಗಳನ್ನು ಬೀಳಿಸುವ ಸಲುವಾಗಿ ಉದ್ದನೆಯ ಸಬಳಗಳನ್ನು ಹಿಡಿದು ಕೋಟೆಯ ಮೇಲ್ಭಾಗಕ್ಕೆ ತಿವಿಯುತ್ತಿದ್ದಾರೆ. ಲಕ್ಷ್ಮೇಶ್ವರದ ವೀರಗಲ್ಲಿನಲ್ಲಿ ವೀರನೊಬ್ಬನು ಗುರಾಣಿಯನ್ನು ಅಡ್ಡಲಾಗಿ ಹಿಡಿದು ಕೋಟೆಯ ಕೆಳಗೆ ಸತ್ತು ಬಿದ್ದಿರುವ ಯೋಧನೊಬ್ಬನನ್ನು ಕಾಲು ಹಿಡಿದು ಎಳೆಯುತ್ತಿದ್ದಾನೆ. ವೀರರ ಆಕ್ರಮಣದಿಂದಾಗಿ, ಕೋಟೆಯ ತೆನೆ ಬೀಳುತ್ತಿರುವಂತೆಯೂ ಬಿಡಿಸಲಾಗಿದೆ. (ಚಿತ್ರ ೧೯೮)

ಹಾನುಗಲ್ಲಿನ ಎರಡು ವೀರಗಲ್ಲುಗಳ ಮತ್ತು ಬೆಂಗಳೂರಿನ ವೀರಗಲ್ಲಿನ ಶಿಲ್ಪಗಳು ಕೋಟೆಯನ್ನು ಕಳೆದುಕೊಂಡವರ ಹೋರಾಟವನ್ನು ನಿರೂಪಿಸುತ್ತವೆ. ಹಾನುಗಲ್ಲಿನ ವೀರಗಲ್ಲಿನ ಶಿಲ್ಪದಲ್ಲಿ ಕೋಟೆಯ ಮೇಲೆ ಆಕ್ರಮಣ ಮಾಡುತ್ತಿದ್ದ ಶತ್ರುಗಳನ್ನು ಸಮರ್ಥವಾಗಿ ಎದುರಿಸಲಾಗದೆ ಅನ್ಯಥಾ ಮಾರ್ಗವಿಲ್ಲದೆ ಕದಂಬರ ಕಡೆಯ ವೀರರು ಕೋಟೆಯಿಂದ ಹೊರ ಬಂದು ಯುದ್ಧ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಅಲ್ಲಿನ ಯುದ್ಧ ಬಹಳ ಗಲಿಬಿಲಿಯಿಂದ ಆಗುತ್ತಿರುವಂತೆಯೂ ಎರಡೂ ಕಡೆಯ ವೀರರು ಮುಖಾಮುಖಿ ಹೊರಾಡುತ್ತಿರುವಂತೆಯೂ ಬಿಡಿಸಲಕಾಗಿದೆ.[೧೧೫]

ಹಾನುಗಲ್ಲಿನ ವೀರಗಲ್ಲೊಂದರಲ್ಲಿ, ಎಲೇಬೇತೂರಿನ ವೀರಗಲ್ಲಿನಲ್ಲಿ ಮತ್ತು ಲಕ್ಷ್ಮೇಶ್ವರದ ವೀರಗಲ್ಲಿನಲ್ಲಿ ಕೋಟೆಯ ಸಂರಕ್ಷಕರು ಕೋಟೆಯ ತೆನೆಗಳ ನಡುವೆ ನಿಂತು ಯುದ್ಧ ಮಾಡುತ್ತಿರುವ ದೃಶ್ಯವನ್ನು ಬಿಡಿಸಲಾಗಿದೆ. ಈ ದೃಷ್ಟಿಯಿಂದ ಲಕ್ಷ್ಮೇಶ್ವರದ ವೀರಗಲ್ಲಿನ ಶಿಲ್ಪ ಗಮನಾರ್ಹವಾಗಿದೆ. (ಚಿತ್ರ ೧೯೮) ಇಲ್ಲಿ ಕೋಟೆಯ ಮೇಲೆ ನಿಂತು ಎದುರಾಳಿಗಳನ್ನು ಎದುರಿಸುತ್ತಿರುವ ಇಬ್ಬರು ವೀರರನ್ನು ಬಿಡಿಸಲಾಗಿದೆ. ವೀರಗಲ್ಲಿನ ಎಡಭಾಗದಲ್ಲಿನ ವ್ಯಕ್ತಿ ತನ್ನ ಎರಡೂ ಕೈಗಳಿಂದ ಬಹುಶಃ ಕಲ್ಲುಗುಂಡನ್ನು ಎತ್ತಿ ಕೆಳಗಿನವರ ಮೇಲೆ ಎಸೆಯುತ್ತಿರುವಂತೆ ಚಿತ್ರಿಸಲಾಗಿದೆ. (ಕ್ರಿ.ಶ. ೧೧೨೭ರ

---

೧೧೫ William Coelldho : The Hoysala Vamsa. ಪು. ೨೫೮.

ವೀರಗಲ್ಲೊಂದು ಸಾನ್ತರ ಕೋಟೆಯನ್ನು ಸಂರಕ್ಷಿಸುವಾಗ ಬಮ್ಮ ಸಾನ್ತರನೆಂಬುವನು ಕಲ್ಲಿನಿಂದಾದ, ಕೊಂತಗಳಿಂದಾದ ಗಾಯಗಳಿಂದ ಮಡಿದನೆಂದು ತಿಳಿಸುತ್ತದೆ.[೧೧೬] ಗೋವಿಂದ ವೈದ್ಯನ ಕಂಠೀರವ ನರಸರಾಜವಿಜಯದಿಂದಲೂ ಕೋಟೆಯ ಸಂರಕ್ಷಕರು ಆಕ್ರಮಣಕಾರರ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರೆಂದು ತಿಳಿಯುತ್ತದೆ.)[೧೧೭]

ಇವನ ಬಲಗಡೆಗೆ ಇರುವ ವೀರನು ತನ್ನ ಎಡಗಡೆಯಲ್ಲಿ ಬಿಲ್ಲಿನಾಕಾರದ ಒಂದು ಆಯುಧವನ್ನು ಹಿಡಿದಿರುವಂತಿದೆ – ಮತ್ತು ಇದಕ್ಕೆ ಬಾಣಗಳು ನಾಟಿಕೊಂಡಂತೆ ಚಿತ್ರಿಸಲಾಗಿದೆ. ಇದು ಶತ್ರುಗಳ ಅಸ್ತ್ರಗಳನ್ನು ತಡೆ ಹಿಡಿಯುವ ಆಯುಧವಿರಬೇಕೆಂದು ತೋರುತ್ತದೆ. ಕೋಟೆಯ ಕಾಳಗದಲ್ಲಿ ಉಪಯೋಗಿಸುತ್ತಿದ್ದ ಆಯುಧಗಳ ಬಗ್ಗೆ ಬರೆಯುತ್ತಾ 'ಬದ್ದರ' ಎಂಬ ಆಯುಧದ ಬಗ್ಗೆ ಬೆಟಗೇರಿ ಕೃಷ್ಣಶರ್ಮರು ಹೀಗೆ ವಿವರಣೆ ನೀಡುತ್ತಾರೆ.[೧೧೮] "ಕೋಟೆಯ ಮೇಲಿನಿಂದ ಬೀಳುವ ಬೇರೆ ಬೇರೆ ಆಯುಧಗಳ ಆಘಾತಗಳನ್ನು ತಡೆಯುವುದಕ್ಕೆ ವ್ಯಕ್ತಿಗೆ ತಲೆವರಿಗೆ (ತಲೆಯ ಹರಿಗೆ = ಢಾಲು) ಇದ್ದಂತೆ ಸಮೂಹಕ್ಕೆ 'ಬದ್ದರ' ಸಂರಕ್ಷಣೆಯ ಸಾಧನವಾಗಿದ್ದಿತು. ಇದರ ಮರೆಯಲ್ಲಿ ನಿಂತು ಕೋಟೆಯನ್ನು ಅಗೆದು ಕೆಡಹುವ ಕೆಲಸವನ್ನು ಶತ್ರುಗಳು ಮಾಡುತ್ತಿದ್ದರು. ಮೇಲಿನವರ ಸಾಧನಗಳನ್ನು ತೀರಿಸುವುದಕ್ಕಾಗಿ ಆಗಾಗ ಹೊರಕ್ಕೆ ಬಂದಂತೆ ತೋರಿಸಿ ಮತ್ತೆ ಮತ್ತೆ ಬದ್ದರದ ಮರೆಗಳಲ್ಲಿ ಅಡಗಿಕೊಳ್ಳುತ್ತಿದ್ದರು. ಬೆಟಗೇರಿ ಕೃಷ್ಣಶರ್ಮರು ಹೇಳುವ 'ಬದ್ದರ'ವೇ ಈ ವೀರಗಲ್ಲಿನಲ್ಲಿ ಬಿಡಿಸಲಾಗಿರುವ ಬಿಲ್ಲಿನಾಕಾರದ ಆಯುಧವಾಗಿರಬೇಕೆಂದು ತೋರುತ್ತದೆ. ಬೆಟಗೇರಿಯವರು ತಿಳಿಸುವ ವಿವರ ಶಿವಮೊಗ್ಗಾ ಕೋಟೆ ಪೋಲೀಸ್ ಸ್ಟೇಷನ್ನಲ್ಲಿರುವ ವೀರಗಲ್ಲಿನ ಶಿಲ್ಪದಲ್ಲಿ ಮೂಡಿ ಬಂದಿರುವುದನ್ನು ಗಮನಿಸಬಹುದು. (ಚಿತ್ರ ೧೯೫) ಕೋಟೆಯನ್ನು ಆಕ್ರಮಣ ಮಾಡುವವರು ಮಾತ್ರವಲ್ಲದೆ ಕೋಟೆಯ ಸಂರಕ್ಷರೂ ಸಹ ಈ ಬದ್ಧರವನ್ನು ಇದೇ ಕಾರಣಕ್ಕಾಗಿ ಉಪಯೋಗಿಸುತ್ತಿದ್ದರೆಂದು ನಂಜುಂಡನ ಕುಮಾರಾಮನ ಸಾಂಗತ್ಯದಿಂದ ತಿಳಿದು ಬರುತ್ತದೆ.[೧೧೯] ಕೋಟೆಯ ಮೇಲೆ ಆಕ್ರಮಣಕಾರರು ಬರುವುದನ್ನು ತಿಳಿದು, ಅವರನ್ನು ಎದುರಿಸಲು ಕೋಟೆಯೊಳಗಿನವರು ಯಾವ ಯಾವ ಆಯುಧಗಳನ್ನು ಸಂಗ್ರಹಿಸಿಕೊಂಡರೆಂಬ ಆಯುಧಗಳ

---

೧೧೬ E. C. VIII. Sb. 114, 1127

೧೧೭ ಗೋವಿಂದ ವೈದ್ಯ : ಕಂಠೀರವ ನರಸರಾಜ ವಿಜಯಂ. ಸಂ. ೧೪. ಪ. ೬೨.

೧೧೮ ಬೆಟಗೇರಿ ಕೃಷ್ಣಶರ್ಮ : ಕರ್ನಾಟಕ ಜನಜೀವನ. ಪು. ೬೧

೧೧೯ ನಂಜುಂಡ : ರಮನಾಥ ಚರಿತೆ. ಭಾ.೩, ಆ. ೧೧, ಸಂ. ೨, ಪ. ೩೭

"ತೊಲೆ ತಳಿವರ ನೂಲಹರಿಗೆ ಬಧುರ ಬಂಡಿ
ಬಲೆ ಹಗ್ಗ ಮರುಳಕ್ಕೆ ಕವಣೆ
ಹಲಗೆ ಸಬಳದಸಿ ಹಾವಿನಹೇಳಿಗೆ
ಸಲೆ ಮೆಱೆದವು ದುರ್ಗದೊಳಗೆ

ಪಟ್ಟಿಯಲ್ಲಿ ನಂಜುಂಡ ಈ ಬದ್ದರವರನ್ನು ಸೇರಿಸುತ್ತಾನೆ. ಲಕ್ಷ್ಮೇಶ್ವರದ ವೀರಗಲ್ಲಿನ ಶಿಲ್ಪವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಕೋಟೆಯ ಕೆಳಗಿನವರು ಕೋಟೆಯ ಮೇಲಿನವರಿಗೆ ಎಸೆದ ಬಾಣಗಳಿಂದ ತಪ್ಪಿಸಿಕೊಳ್ಳಲು ಇದನ್ನು ಬಲಸುತ್ತಿದ್ದಂತೆ ತೋರುತ್ತದೆ. ಶತ್ರುಗಳ ಬಿಟ್ಟ ಬಾಣಗಳು ಸಂರಕ್ಷಣೆಗೆ ತಗುಲದೆ, ಈ ಆಯುಧಕ್ಕೆ ಅಂಟಿಕೊಂಡಿರುವುದನ್ನು ಗಮನಿಸಬಹುದು. ಈ ಎಲ್ಲ ಕಾರಣಗಳಿಂದ ಇದು 'ಬದ್ದರ'ವಿರಬಹುದೇ ಎಂಬ ಸಂಶಯ ಬರುತ್ತದೆ.

ಎಲೇಬೇತೂರಿನ ವೀರಗಲ್ಲಿನ ಶಿಲ್ಪದಲ್ಲಿ, ಕೋಟೆಯ ಗೋಡೆಯ ತೆನೆಗಳ ನಡುವೆ ಸೈನಿಕರು ನಿಂತಿರುವಂತೆಯೂ ಎಡಗಡೆಯಿಂದ ಮೊದಲನೆ ವ್ಯಕ್ತಿ ಉದ್ದನೆಯ ಆಯುಧವನ್ನು ಹಿಡಿದು ನಿಂತಿರುವಂತೆಯೂ ಅವನ ಪಕ್ಕದವನು ಈಟಿಯನ್ನು, ಮೂರನೆಯವರನು ಗುರಾಣಿಯನ್ನು ಹಿಡಿದಿರುವಂತೆಯೂ ಬಿಡಿಸಲಾಗಿದೆ. ಹಾನುಗಲ್ಲಿನ ವೀರಗಲ್ಲೊಂದರಲ್ಲಿಯೂ ಇದೇ ರೀತಿ ತೆನೆಗಳ ನಡುವೆ ನಿಂತು ವೀರರು ಯುದ್ಧಸನ್ನದ್ಧರಾದಂತೆ ಬಿಡಿಸಲಾಗಿದೆ. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ ಕೋಟೆಯ ತೆನೆಗಳು, ಶತ್ರುಗಳ ಕಡೆಯಿಂದ ಅಸ್ತ್ರಗಳನ್ನು ತಪ್ಪಿಸಿಕೊಳ್ಳಲು ಮತ್ತು ಅವಕಾಶ ನೋಡಿ ಶತ್ರುಗಳ ಮೇಲೆ ಅಸ್ತ್ರಗಳನ್ನು ಪ್ರಯೋಗ ಮಾಡಲು ನಿರ್ಮಿಸುತ್ತಿದ್ದ ಯುದ್ಧದ ತಂತ್ರವೆಂದು ತೋರುತ್ತದೆ.

ಯುದ್ಧಾನಂತರ

ಯುದ್ಧದ ನಂತರದಲ್ಲಿ ಗೆದ್ದ ಅರಸರು ಸೋತವರ ರಾಜ್ಯವನ್ನು ಕೊಳ್ಳೆ ಹೊಡೆಯುತ್ತಿದ್ದರೆಂಬ ಅಂಶವನ್ನು ಹಿಂದೆಯೇ ಗಮನಿಸಿದ್ದೇವೆ. ಯುದ್ಧದ ಪರಿಣಾಮ ಯಾರ ಯಾರ ಮೇಲೆ ಯಾವ ಯಾವ ರೀತಿಯಲ್ಲಿ ಆಗುತ್ತಿತ್ತು ಎಂಬುದನ್ನು ಊಹಿಸುವುದೂ ಕಷ್ಟ. ಯುದ್ಧಪರಿಣಾಮವನ್ನು ಗಮನಿಸಿ, ತೀವ್ರವಾಗಿ ಅನುಭವಸಿ, ಪ್ರಾಮಾಣಿಕತೆಯಿಂದ ಅದನ್ನು ವ್ಯಕ್ತಪಡಿಸಿದವನೆಂದರೆ ಅಶೋಕನೊಬ್ಬನೆ. ತನ್ನಿಂದಾದ ಈ ಅಪರಾಧವನ್ನು ತನ್ನ ಮುಮದಿನ ಸಂತತಿಯವರು ಮಾಡದಿರಲೆಂದು, ಜನತೆ ಸುಖ ಸಂತೋಷ ಸೌಹಾರ್ದಗಳಿಂದ ಬದುಕಬೇಕೆಂದು. ಧರ್ಮಘೋಷ ಭಾರತಾದ್ಯಂತ ಸದಾಕಾಲ ಮೊಳಗುತ್ತಿರಬೇಕೆಮದು ಅಪೇಕ್ಷಿಪಟ್ಟ ಏಕೈಕ ವ್ಯಕ್ತಿ ಅಶೋಕ. ಈ ಅಂಶ ಭಾರತಾದ್ಯಂತ ಅವನು ಹಾಕಿಸಿರುವ ಧರ್ಮಲಿಪಿಗಳಿಂದ ಸುವ್ಯಕ್ತವಾಗುತ್ತದೆ.

ಕರ್ನಾಟಕದ ಶಾಸನಗಳಿಂದ ಮತ್ತು ಕೆಲವು ಕಾವ್ಯಗಳಿಂದ ಯುದ್ಧವೆಂಬುದು ಜನತೆಯ ಮೇಲೆ ಯಾವ ರೀತಿಯಲ್ಲಿ ಪರಿಣಾಮವನ್ನು ಬೀರುತ್ತಿತ್ತು ಎಂಬುದನ್ನು ತಿಳಿಯಬಹುದಾಗಿದೆ. ವೀರನಾದವನು ತನ್ನ ಅರಸನ ಪರವಾಗಿ ಹೋರಾಡಿ ತನ್ನ ಅನ್ನದ ಋಣವನ್ನು ತೀರಿಸಿ, ತನ್ನ

ಪರಾಕ್ರಮವನ್ನು ಅಮೋಘ ರೀತಿಯಲ್ಲಿ ತೋರಿಸಿದನೆಂದು ಇಡೀ ಸಮಾಜವೇ ಅವನನ್ನು ಹಾಡಿ ಹೊಗಳುತ್ತದೆ. ಅವನ ಮುಂದಿನ ಸಂತತಿಯವರ ಜೀವನ ನಿರ್ವಹಣೆಗೆ ಅನುಕೂಲವಾಗುವಂತೆ 'ದತ್ತಿ' 'ಮಾನ್ಯ' 'ಕೊಡುಗೆ'ಗಳನ್ನು ನೀಡಬಹುದು. ಆದರೆ ವೀರನ ಸಾವು ಅವನ ಕುಟುಂಬದವರಿಗೆ ನಿಜವಾಗಿಯೂ ನೋವನ್ನುಂಟುಮಾಡುತ್ತಿತ್ತು ಎಂಬುದನ್ನು ಮರೆಯಬಾರದು. ಅವನ ಸಾವಿನಿಂದ ವೃದ್ಧ ತಂದೆ ತಾಯಿ ಹೆಂಡತಿ ಮಕ್ಕಳಿಗೆ ಆಗುತ್ತಿದ್ದ ನೋವು ಕಡಿಮೆಯೇನಲ್ಲ. "ಕೆಲವು ಕಡೆ ಮಕ್ಕಳ ಸಾವನ್ನು ಕೇಳಿ ಶೋಕಾರ್ತರಾಗಿ ಪ್ರಾಣವನ್ನು ತ್ಯಜಿಸಿದ ತಾಯಂದಿರ, ಅಕ್ಕಂದಿರ ವಿಷಯವನ್ನು ಶಾಸನಗಳು ಹೇಳುತ್ತವೆ."[೧೨೦] ಯುದ್ಧರಂಗದಲ್ಲಿ ಮಡಿದ ತಮ್ಮ ಪತಿಯ ವಿಯೋಗವನ್ನು ಭರಿಸದೆ ಅಪ್ರಾಪ್ತವಯಸ್ಸಿನಲ್ಲೇ ಸಹಗಮನ ಮಾಡಿದ ಅನೇಕ ಸ್ತ್ರೀಯರ ನೋವು ಎಂಥದಿತ್ತೋ ಊಹಿಸುವುದೂ ಕಷ್ಟ. ವೀರಗಲ್ಲುಗಳು ಮತ್ತು ಮಹಾಸತಿಕಲ್ಲುಗಳು ಈ ವಿಷಯವನ್ನು ವೈಭವೀಕರಿಸಿ ಹೇಳುತ್ತವೆ. ಆಕೆಯ ಪಾತಿವ್ರತ್ಯ ಗುಣವನ್ನು, ಬೆಂಕಿಗೂ ಹೆದರದೆ ಮಡಿದ ಆಕೆಯ ವೀರತ್ವವನ್ನು ಅವು ಹೊಗಳಿವೆ. ಆದರೆ ಈ ಎಲ್ಲ ಆದರ್ಶಗಳಿಗೂ ವಿಯೋಗದ ನೋವೇ ಮೂಲವಾಗಿದೆ ಎಂಬುದನ್ನು ಮರೆಯಬಾರದು.

ಗೆದ್ದ ಅರಸನು ಸೋತ ರಾಜ್ಯದ ಮೇಲೆ ಅನೇಕ ರೀತಿಗಳಲ್ಲಿ ಅಮಾನುಷವಾದ ಧಾಳಿಯನ್ನು ಮಾಡುತ್ತಿದ್ದ. ಈ ಮಾತಿಗೆ ಪೂರಕವಾಗಿ ಗೆದ್ದ ಅರಸರ ಶಾಸನಗಳು ಅವರು ಮಾಡಿದ ಇಂಥ ಕೆಲಸಗಳನ್ನು ಪರಾಕ್ರಮದ ಸಂಕೇತವೆಂಬ ರೀತಿಯಲ್ಲಿ ಹೊಗಳಿರುವುದನ್ನು ಗಮನಿಸಬಹುದು. ಹೊಯ್ಸಳರ ವೀರಬಲ್ಲಾಳನು ಉಚ್ಚಂಗಿಯ ಕೋಟೆಯನ್ನು ವಶಪಡಿಸಿಕೊಂಡನಂತರ ಭಂಡಾರವನ್ನೂ, ಸ್ತ್ರೀಯರನ್ನೂ, ತುರುಗದಳವನ್ನೂ ಅಪಹರಿಸಿದುದನ್ನು ಈ ರೀತಿ ಹೊಗಳುತ್ತದೆ :

> ಚಿರಕಾಲಂ ರಿಪುಗಳ್ಗ ಸಾಧ್ಯಮೆನಿಸಿರ್ದುಚ್ಚಂಗಿಯಂ ಮುತ್ತಿ ದು
> ರ್ದ್ಧರ ತೇಜೋನಿಧಿ ಧೂಳಿಗೋಂಟೆಯನೆ ಕೊಣ್ಡಾ ಕಾವದೇವಾನನೀ
> ಶ್ವರನಂ ಸನ್ದೊಡೆಯಕ್ಷಿತೀಶ್ವರನನಾ ಭಣ್ಡಾರಮಂಸ್ತ್ರೀಯರಂ
> ತುರುಗವ್ರಾತಮುಮಂ ಸಮನ್ತುಪಿಡಿದಂ ಬಲ್ಲಾಳ ಭೂಪಾಲಕಂ[೧೨೧]

– ಈ ಶಾಸನ, ಗೆದ್ದ ಅರಸನ ಪರಾಕ್ರಮದ ವರ್ಣನೆಯಾಗಿದೆ. ಅಪಹರಣವಾದ ಸ್ತ್ರೀಯರ, ಭಂಡಾರವನ್ನು ಕಳೆದುಕೊಂಡ ಜನರ ನೋವು ಯಾವ ರೀತಿಯದಿತ್ತು ಎಂಬ ಬಗ್ಗೆ ಶಾಸನ ಮೌನವಾಗಿದೆ.

---

೧೨೦ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.ಪು. ೨೫೦
೧೨೧ ಎ.ಎಂ. ಅಣ್ಣಿಗೇರಿ, ಮೇವುಂಡಿ ಮಲ್ಲಾರಿ : ಶಾಸನ ಸಾಹಿತ್ಯ ಸಂಚಯ. ಪು. ೧೩೧

ಯುದ್ಧ ಜನಸಾಮಾನ್ಯರ ಮೇಲೆ ತನ್ನ ಪರಿಣಾಮವನ್ನು ಯಾವ ರೀತಿಯಲ್ಲುಂಟು ಮಾಡುತ್ತಿತ್ತು ಎಂಬ ಅಂಶ ಗೋವಿಂದವೈದ್ಯನ 'ಕಂಠೀರವ ನರಸರಾಜ ವಿಜಯ'ದಿಂದ ಮತ್ತು 'ಪಿರಿಯಾಪಟ್ಟಣದ ಕಾಳಗ'ವೆಂಬ ಜನಪದಕಾವ್ಯದಲ್ಲಿ ಸ್ವಲ್ಪಮಟ್ಟಿಗೆ ದೊರೆಯುತ್ತದೆ. ಆದರೂ ಈ ಎರಡೂ ಕಾವ್ಯಗಳಿಂದ ದೊರೆಯುವ ಮಾಹಿತಿ ಮಾತ್ರ ಅತ್ಯಪೂರ್ವವಾದುದ್ದು. ಇತರೇ ಯಾವುದೇ ಕನ್ನಡ ಸಾಹಿತ್ಯ ಕೃತಿಗಳಲ್ಲಿ ದೊರೆಯಲಾರದ್ದು.

ಈ ಬಗ್ಗೆ ಶಾಸನಗಳಿಂದ ದೊರೆಯುವ ಮಾಹಿತಿಯನ್ನು ಗಮನಿಸಿ, ಈ ಸಾಹಿತ್ಯ ಕೃತಿಗಳಿಂದ ತಿಳಿದು ಬರುವ ಮಾಹಿತಿಯನ್ನು ಪರಿಶೀಲಿಸೋಣ. "ಸೋತವರಲ್ಲಿ ಹಲವಾರು ಯಾಚಕರಾಗುತ್ತಿದ್ದರು. ಅನೇಕರು ಬೆಟ್ಟಗುಡ್ಡಗಳನ್ನು ಸೇರುತ್ತಿದ್ದರು. ಬಿರುಗಾಳಿಯಂತೆ ಬೀಸಿದ ಯುದ್ಧದ ಫಲವಾಗಿ ದೇಶದ ಹಲವು ಪ್ರದೇಶಗಳು ಉಳುವವರಿಲ್ಲದೆ ಹೋಗುತ್ತಿದ್ದವು. ದೇಶದ ಬೆನ್ನೆಲುಬಾದ ವ್ಯವಸಾಯಕ್ಕೂ ಭಂಗ ಬರುತ್ತಿದ್ದ ಸೂಚನೆ ಶಾಸನಗಳ್ಲಿದೆ."[೧೨೨]

ಪಿರಿಯಾಪಟ್ಟಣದ ಕಾಳಗದಿಂದ ತಿಳಿದುಬರುವ ಮಾಹಿತಿಯನ್ನು ಈಗಾಗಲೇ 'ಧರ್ಮಕಹಳೆ' ಎಂಬ ಭಾಗದಲ್ಲಿ ಗಮನಿಸಿದ್ದೇವೆ. ಆದ್ದರಿಂದ ಪುನರುಕ್ತಿಸುವುದು ಸೂಕ್ತವಲ್ಲ.

ಗೆದ್ದ ಪಕ್ಷದವರು ಸೋತ ಪಕ್ಷದವರ ಹಳ್ಳಿಗಳ ಮೇಲೆ ಧಾಳಿ ಮಾಡಿದಾಗ ಪ್ರಾಣವನ್ನುಳಿಸಿ ಕೊಳ್ಳುವ ಸಲುವಾಗಿ ಕೆಲವೊಮ್ಮೆ ಜನರು ಊರನ್ನೇ ಬಿಡುತ್ತಿದ್ದರು. ಈ ರೀತಿ ಊರನ್ನು ಬಿಡುವಾಗ ತಾಯಿ ಒಂದು ಕಡೆ, ಮಗು ಒಂದು ಕಡೆ, ದಾರಿಗೆ ದಾರಿಯಾಗಿ ಭೀತಿಯಿಂದ ಓಡುತ್ತಿದ್ದರು. ಹೀಗೆ ಓಡುವಾಗ ಜನರಿಗೆ ತಮ್ಮ ಹಗೇವುಗಳಲ್ಲಿಟ್ಟಿರುವ, ಕಣಜ, ಪೆಟ್ಟಿಗೆಗಳಲ್ಲಿಟ್ಟಿರುವ ಧನಧಾನ್ಯಗಳ ಬಗ್ಗೆಯಾಗಲೀ, ಒಡವೆ ವಸ್ತ್ರಗಳ ಬಗ್ಗೆಯಾಗಲೀ ನೆನಪು ಸಹ ಬರುತ್ತಿರಲಿಲ್ಲ. ಹೊಲ ತೋಟಗಳಲ್ಲಿನ ಬೆಳೆಗಳೇ ಆಗಲೀ ಯಾವುದೂ ಅವರನ್ನು ನಿಲ್ಲುವಂತೆ ಮಾಡುತ್ತಿರಲಿಲ್ಲ. ತಮ್ಮ ಮನೆಗಳ ದನಕರುಗಳ ಹಿಂಡುಗಳಿಗೆ ಏನೇ ಆದರೂ ಬೇಕಿಲ್ಲ, ಬದುಕಿದರೆ ಸಾಕೆಮದು ಪ್ರಾನದಾಸೆಯಿಂದ ಅವರು ಓಡುತ್ತಿದ್ದರು. ಶತ್ರುಗಳ ಕುದುರೆಗಳು ತಮ್ಮನ್ನು ಅಟ್ಟಿಸಿಕೊಂಡು ಬಂದಾವೆಂಬ ಭ್ರಾಂತಿಯಿಂದ ಓಡುತ್ತಿದ್ದರು. ಈ ರೀತಿ ಓಡುವಾಗ ತಮ್ಮ ಸಂಸಾರದ ಇತರ ವ್ಯಕ್ತಿಗಳನ್ನೂ ಗಮನಿಸುತ್ತಿರಲಿಲ್ಲ. ಓಡಲಾರದ ಗರ್ಭಿಣಿ ಸ್ತ್ರೀಯರು ಪ್ರಾನಭಯದಿಂದ ಗಿಡಗಂಟೆಗಳಲಿ ಅವಿತುಕೊಳ್ಳುತ್ತಿದ್ದರು ಎಂಬ ಸುದೀರ್ಘವಾದ ವಿವರನೆಯು ಗೋವಿಂದವೈದ್ಯನ 'ಕಂಠೀರವ ನರಸರಾಜ ವಿಜಯ'ದಲ್ಲಿ ಬರುತ್ತೆ.[೧೨೩] ಅಬ್ಬಲೂರಿನ ಎರಡು ವೀರಗಲ್ಲುಗಳ ಮತ್ತು ದೊಡ್ಡುಳರ್ತ್ತಿಯ ವೀರಗಲ್ಲೊಂದರ ಶಿಲ್ಪಗಳು ಹೋರಾಟದ ಸಮಯದಲ್ಲಿ ಹೇಗೆ ಆಕ್ರಮಣಕಾರರು ಸ್ತ್ರೀಯರ ಮೇಲೆ ಎರಗುತ್ತಿದ್ದರು ಎಂಬ ಅಂಶವನ್ನು ತಿಳಿಸುತ್ತವೆ. (ಚಿತ್ರ ೩೪, ೩೫, ೩೬)

---

೧೨೨ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೫

೧೨೩ ಗೋವಿಂದ ವೈದ್ಯ : ಕಂಠೀರವ ನರಸರಾಜ ವಿಜಯಂ. ಸಂ. ೧೧, ಪ ೪೫ ರಿಂದ೫೩.

ಹೋರಾಟಗಳಲ್ಲಿ ಮಡಿದ ವೀರರಿಗೆ ಕೊಡುತ್ತಿದ್ದ ದತ್ತಿ

ಸ್ವಪ್ರೇರಣೆಯಿಂದ, ತನ್ನ ಎದುರಿಗೆ ಆಗುತ್ತಿದ್ದ ಅನ್ಯಾಯವನ್ನು ಸಹಿಸದೆ ಹೋರಾಡಿ ಮಡಿದ ವೃತ್ತಿಯಿಂದ ಯೋಧನಾಗಿದ್ದು, ಕರ್ತವ್ಯನಿರತನಾಗಿ ಮಡಿದ ವೀರನಿಗೆ ಅವನ ಆಶ್ರಯದಾತರೋ ಅಥವಾ ಊರಿನವರೋ ದತ್ತಿಯನ್ನು ನೀಡುತ್ತಿದ್ದರು. ಈ ರೀತಿ ದತ್ತಿಯನ್ನು ನೀಡುತ್ತಿದ್ದುದರ ಮುಕ್ಯ ಉದ್ದೇಶವೆಂದರೆ ಮಡಿದ' ವೀರನ ಮನೆಯವರಿಗೆ ವೀರನ ಸಾವಿನಿಂದಾದ ನಷ್ಟವನ್ನು ತುಂಬಬೇಕೆನ್ನುವುದು ಮತ್ತು ಅವನ ಸೇವೆಯನ್ನು ಅರಸನೋ, ಸಮಾಜವೋ ಗುರುತಿಸಿದೆ ಎಂಬುದನ್ನು ವ್ಯಕ್ತಪಡಿಸುವುದು. ಹೋರಾಟಗಳಲ್ಲಿ ಮಡಿದ ವೀರರಿಗೆ ದತ್ತಿಯನ್ನು ಬಿಡುತ್ತಿದ್ದವರನ್ನು ಎರಡು ಮುಖ್ಯ ಭಾಗಗಳನ್ನಾಗಿ ಗುರುತಿಸುವುದು ಸೂಕ್ತವೆಂದು ತೋರುತ್ತದೆ.

(೧) ಗ್ರಾಮದ ಮುಖ್ಯಸ್ಥರು ಗ್ರಾಮದ ಪರವಾಗಿ ಮತ್ತು ಇತರರು ವೈಯಕ್ತಿಕವಾಗಿ ವೀರರಿಗೆ ಬಿಟ್ಟ ದತ್ತಿಗಳು.

(೨) ಅರಸರೋ, ಆಶ್ರಯದಾತರೋ ವೀರರಾದವರಿಗೆ ಬಿಟ್ಟ ದತ್ತಿಗಳು.

ಗ್ರಾಮದ ಮುಖ್ಯಸ್ಥರು ಗ್ರಾಮದ ಪರವಾಗಿ ಬಿಟ್ಟ ದತ್ತಿಗಳು

ಒಂದು ಊರಿನ ಹಿತರಕ್ಷಣೆಗಾಗಿ ತನ್ನ ಪ್ರಾಣವನ್ನೂ ಲೆಕ್ಕಿಸದೆ ಹೋರಾಡಿ ಮಡಿದ ವೀರರಿಗೆ ಊರಿನ ಮುಖ್ಯಸ್ಥರು ಅಂದರೆ ಹಿರಿಯರು, ಮಹಾಜನರು, ಗೌಡರು, ಸಾಸಿರ್ವ್ವರು ದತ್ತಿಯನ್ನು ಬಿಟ್ಟ ವಿವರಗಳು ವೀರಗಲ್ಲುಗಳಿಂದ ದೊರೆಯುತ್ತವೆ. ಈ ವೀರರು ಸೀಮಾಸಂಬಂಧದ ಕಾಳಗದಲ್ಲಿ ಮಡಿದಿರಬಹುದು ; ಕಳ್ಳರೊಡನೆ ಹೋರಾಡಿ ಮಡಿದಿರಬಹುದು ; ದುಷ್ಟಮೃಗಗಳೊಡನೆ ಹೋರಾಡಿ ಮಡಿದರಿಬಹುದು ; ಊರಳಿವಿನಲ್ಲಿ ಮಡಿದಿರಬಹುದು ; ಇಲ್ಲಿ ದತ್ತಿ ಬಿಟ್ಟವರು ಪರಿಗಣಿಸಿರುವ ಒಂದು ಮುಖ್ಯ ಅಂಶವೆಂದರೆ ವೀರನಾದವನು ತಮ್ಮ ಗ್ರಾಮದ ಗೌರವವನ್ನು, ಸಂಪತ್ತನ್ನು, ನಾಲ್ಕು ಜನರ ಪ್ರಾಣವನ್ನು ಮತ್ತು ಮಾನವನ್ನು ಉಳಿಸಲು ಹೋರಾಡಿ ಸತ್ತಿದ್ದಾನೆ ಎಂಬುದಷ್ಟೇ.

ಸೀಮಾಸಂಬಂಧದ ವ್ಯಾಜ್ಯಗಳು ಒಂದು ಊರಿಗೂ ಮತ್ತೊಂದು ಊರಿಗೂ ನಡೆಯುತ್ತಿದ್ದ ಹೋರಾಟ. ಇಂತಹ ಹೋರಾಟಗಳು ಕೆಲವೊಮ್ಮೆ ಗ್ರಾಮದ ಗೌರವದ ಪ್ರಶ್ನೆಯಾಗುತ್ತಿತ್ತೆಂದು ತೋರುತ್ತದೆ. ಆಗುತ್ತಿದ್ದ ಅನ್ಯಾಯವನ್ನು ಎದುರಿಸಲೆಂದು ಮೇಲೆ ಬಿದ್ದಾಗ ಅಥವಾ ತಮ್ಮ ಮೇಲೆ ವಿನಾಕಾರಣ ಜಗಳ ಮಾಡುತ್ತಿದ್ದವರ ಮೇಲೆ ಕೈಮಾಡಿದಾಗ ಸಾವುಗಳು

ಸಂಭವಿಸುತ್ತಿತ್ತು. ಇಂತಹ ಹೋರಾಟಗಳಲ್ಲಿ ಮಡಿದ ವೀರರಿಗೆ ಊರಿನವರು ದತ್ತಿಯನ್ನು ಬಿಟ್ಟಿದ್ದಾರೆ. ಹೊಸವೂರಿನವರಿಗೂ ಮತ್ತು ಜಂಬೂರಿನವರಿಗೂ ನಡೆದ ಸೀಮಾ ಸಂಬಂಧದ ಕಾಳಗದಲ್ಲಿ, ಈಸೂರು ಎಂಬ ಮತ್ತೊಂದು ಗ್ರಾಮದ ಒಬ್ಬ ವ್ಯಕ್ತಿ ಹೊಸ ವೂರಿನವರ ಪರವಾಗಿ ಹೋರಾಡಿ ಸಾಯುತ್ತಾನೆ. ಆಗ ಆತನಿಗೆ, "ಪೊಸವೂರ ಸಾಸಿರ್ವರುಂ ಕಾರುಣ್ಯಂಗೆಯ್ದು ಚಂದ್ರಾರ್ಕತಾರಂಬರ ನಡೆವಂತಾಗೆ," ಜಮೀನನ್ನು ಕೊಡುತ್ತಾರೆ.[೧೨೪] ಇಂದಾವರದ ಸೀಮಾಸಂಬಂಧದ ಕಾಳಗದಲ್ಲಿ ಮಡಿದವರಿಗೆ 'ಹೊನ್ನು ಕೊಟ್ಟ' ವಿಷಯ ವೀರಗಲ್ಲೊಂದರಿಂದ ತಿಳಿದುಬರುತ್ತದೆ.[೧೨೫] ತಮ್ಮ ಗ್ರಾಮದ ಸಲುವಾಗಿ 'ಚಂಪಗವುಡ' ನೆಂಬುವನು ಹೋರಾಡಿ ಮಡಿದಾಗ ಅವನಿಗೆ 'ಮಾನ್ಯದ ಹೊಲ' ಮತ್ತು 'ಆಯಿದು ಕೊಳಗ' ಗದ್ದೆಯನ್ನು ನೆತ್ತರುಕೊಡಿಗೆಮಾನ್ಯವಾಗಿ ಬಿಟ್ಟ ವಿಷಯ ಮತ್ತೊಮದು ವೀರಗಲ್ಲಿನಿಂದ ತಿಳಿದು ಬರುತ್ತದೆ.[೧೨೬] ಬಾಗಡೆ ಕಿತ್ತನಕೆರೆಯ ಸೀಮಾಸಂಬಂಧದಲ್ಲಿ, ಜಕ್ಕಯ್ಯ ಎಂಬುವನು ಹೋರಾಡಿ ಮಡಿದಾಗ "ಆತಂಗೆ ಶ್ರೀವಿಜಯನರಸಿಂಹಪುರವಾದ ಬಾಗಡೆಯ ಮಹಾಜನರು" ಅವನ ಪರಾಕ್ರಮವನ್ನು "ಮೆಚ್ಚಿಕೊಟ್ಟ ಉಂಬಳಿ"ಯ ವಿಷಯ ವೀರಗಲ್ಲೊಂದರಿಂದ ತಿಳಿಯುತ್ತದೆ.[೧೨೭]

ಗ್ರಾಮಗಳಿಗೆ ನುಗ್ಗಿ ದರೋಡೆಯನ್ನು ಮಾಡಿಕೊಂಡು ಹೋಗುತ್ತಿದ್ದ ಕಳ್ಳರ ಮೇಲೆ ಬಿದ್ದು, ಅವರೊಂದಿಗೆ ಹೋರಾಡಿ ಮಡಿದ ವೀರರ ಮನೆಯವರಿಗೂ ದತ್ತಿಯನ್ನು ಬಿಟ್ಟಿದ್ದಾರೆ. ಶಾಸನದ ಪಾಠ ಅಸ್ಪಷ್ಟವಿದ್ದರೂ ಕಳ್ಳರ ಮೇಲೆ ಬಿದ್ದು ಅವರೊಡನೆ ಹೋರಾಡಿ ಮಡಿದ ವೀರನಿಗೆ ಗದ್ದೆಯನ್ನು ನೀಡಿದ ವಿಷಯವನ್ನು ವೀರಗಲ್ಲೊಂದರಿಂದ ತಿಳಿಯಬಹುದಾಗಿದೆ.[೧೨೮] ಈ ಬಗ್ಗೆ ಮತ್ತೊಂದು ಶಾಸನ ಸುದೀರ್ಘವಾದ ವಿವರಣೆಯನ್ನು ನೀಡುತ್ತದೆ. "ಪಯಿಂಗಳ ಸಂವತ್ಸರದಲ್ಲಿ ಆಲುಹಳ್ಳಿಯ ಬೇಡರು ಮಾರಂಡಹಳ್ಳಿ ಲೂಟಿ ಮಾಡಿಕೊಂಡು ಹೋಗುವಾಗ ನಡೆದ ಜಗಳದಲ್ಲಿ ಹನುಮ" ನೆಂಬುವನು ಹೋರಾಡಿ ಸಾಯುತ್ತಾನೆ. ಅದಕ್ಕಾಗಿ ಹನುಮನ ಅಣ್ಣನಿಗೆ "ಅಕ್ಷಯ ಸಂವತ್ಸರದ ವೈಶಾಖ ಶು ೧೦ ರಲ್ಲು ವಕ್ಕಲೇರಿ ಚಂನಂಣನಮ ಊರಕೊಡಿಗೆ"ಯನ್ನು ಕೊಡುತ್ತಾರೆ.[೧೨೯]

---

೧೨೪ E. C. VII. Sk. 298, 1089

೧೨೫ M. A. R.1932.12 ಮತ್ತು E. C. VI. Cm. 30, 1190

೧೨೬ M. A. R.1926. 65, ?

೧೨೭ E. C. V. Ak. 184

೧೨೮ E. C. XVII. Bp. 93

೧೨೯ M. A. R.1941. 15, 1746

ಊರಿನೊಳಗೆ ನುಗ್ಗಿ ಜನರಿಗೆ ಹಿಂಸೆಯನ್ನು ಮಾಡುತ್ತಿದ್ದ ದುಷ್ಟಪ್ರಾಣಿಗಳನ್ನು ಕೊಲ್ಲುವಾಗ ಹೋರಾಡಿ ಮಡಿದ ವೀರರಿಗೆ ಗ್ರಾಮಸ್ಥರು ದತ್ತಿಯನ್ನು ನೀಡಿದ್ದಾರೆ. ಕ್ರಿ.ಶ. ೯೪೬ರ ಒಂದು ವೀರಗಲ್ಲಿನಿಂದ ವೀರನೊಬ್ಬನು ಹುಲಿಯನ್ನು ಇರಿದು ತಾನೂ ಸತ್ತುದಕ್ಕಾಗಿ ಅವನಿಗೆ ದತ್ತಿಯನ್ನು ಬಿಟ್ಟ ವಿಷಯ ತಿಳಿಯುತ್ತದೆ.[೧೩೦] ಹೊಯ್ಸಳರ ಕಾಲದ ಯಳಂದೂರಿನ ತಮಿಳು ಶಾಸನವೊಂದರಿಂದ ಕೇತ್ಯೈ ಎಂಬ ನಾಯಿಂದನು ಹುಲಿಯೊಂದನ್ನು ಕೊಂದುದಕ್ಕಾಗಿ ಅವನಿಗೆ ಆ ಊರಿನ ಗಾವುಮಡರು, ಸ್ಥಾನೀಕರು ಮತ್ತು ವ್ಯಾಪಾರಿಗಳು ಭೂಮಿಯನ್ನು ನೆತ್ತರು ಕೊಡುಗೆಯಾಗಿ (ನೇತ್ತಲ್ ಕುಡುಜ್ಜೈ) ನೀಡಿದ ವಿಷಯ ತಿಳಿಯುತ್ತದೆ.[೧೩೧] ಕ್ರಿ.ಶ. ೧೪೦೭ರ ಒಂದು ಶಾಸನ ಈ ದೃಷ್ಟಿಯಿಂದ ಮಹತ್ವದ್ದಾಗಿ ಕಂಡು ಬರುತ್ತದೆ. ಚೀಲಗೊಂಡರಸ ಎಂಬುವನ ಮೇಲೆ ಆನೆಯು ಬಂದಾಗ ಬೊಂಮಣ್ಣನೆಂಬುವನು, ಆನೆಯಿಂದಾಗುವ ಅಪಾಯವನ್ನು ತಪ್ಪಿಸುತ್ತಾನೆ. ಬೊಂಮಣ್ಣನಿಂದಾದ ಈ ಸಹಾಯವನ್ನು ನೆನೆದು ಗೊಂಡರಸನು ಬೊಂಮಣ್ಣನಿಗೆ ಉಮ್ಬಳಿಯನ್ನು ನೀಡುತ್ತಾನೆ.[೧೩೨]

ಊರಿನ ಹಸುಗಳನ್ನು ಯಾರಾದರೂ ಹಿಡಿದುಕೊಂಡು ಹೋದಾಗ ಅವುಗಳನ್ನು ಹಿಂತಿರುಗಿಸುವಲ್ಲಿ ಹೋರಾಡಿ ಸತ್ತವೀರರ ಮನೆಯವರಿಗೆ ದತ್ತಿಯನ್ನು ನೀಡಿರುವ ನಿದರ್ಶನಗಳು ವೀರಗಲ್ಲುಗಳಿಂದ ದೊರೆಯುತ್ತವೆ. ಬಲ್ಲದ ತುರುಗಳನ್ನು 'ಕರುಪುರನ್' ಎಂಬುವನು ಸೆರೆಹಿಡಿದಾಗ ತುರುಗಳನ್ನು ಹಿಂತಿರುಗಿಸುವಲ್ಲಿ ವೀರನೊಬ್ಬನು ಹೋರಾಡಿ ಸಾಯುತ್ತಾನೆ. ಅದಕ್ಕಾಗಿ ಅವನಿಗೆ ದತ್ತಿಯನ್ನು ನೀಡುತ್ತಾರೆ.[೧೩೩] ತುರುಗಾಳಗ ಒಂದರಲ್ಲಿ ಸತ್ತ ವೀರನಿಗೆ ಅವನ ಊರಿನ "ಎಟ್ಟಿತ್ತ ನಾನಾಲ್ಲರು" 'ಅಯ್ದು ಕೊಳಗ' ಪ್ರಮಾಣದ ದತ್ತಿಯನ್ನು ಬಿಡುತ್ತಾರೆ.[೧೩೪] ಇದೇ ರೀತಿ ತುರುಗಾಳೆಗವೊಂದರಲ್ಲಿ ಸತ್ತ ವೀರನಿಗೆ ಆ ಊರಿನ 'ಮಹಾಜನ' ಜಮೀನನ್ನು ಕೊಟ್ಟ ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ.[೧೩೫] ಕಂಕೆರೆಯ ಮಹಾಜನಗಳ ಹಸುಗಳನ್ನು ಕಳ್ಳರು ಕೊಂಡು ಹೋಗುವಾಗ ಆದ ಗಲಭೆಯನ್ನು ಕೇಳಿ, ಹೋಗಿ ಕಳ್ಳರೊಡನೆ ಹೋರಾಡಿದ ಮಾದಿಗೌಡ ಮತ್ತು ಮರಿಯ ಎಂಬುವರು ಸಾಯುತ್ತಾರೆ. ಆಗ ಆ ಇಬ್ಬರು ವೀರರಿಗೆ ವೀರಗಲ್ಲುಗಳನ್ನು ನೆಟ್ಟು, "ಮಹಾಜನಂಗಳು ಮೆಚ್ಚಿ, ಕೊಡೆ ಕುದುರೆ ತಂಬಟ ಸಹಿತ ವೀರಕೊಡಗಿ"ಯನ್ನು

---

೧೩೦ E. C. XI. Cd. 26, 946

೧೩೧ E. C. IV. Yl. 9, 1260

೧೩೨ M. A. R.1928. 60, 1407

೧೩೩ E. C. X. Mb. 92, 780

೧೩೪ E. C. X. Sd. 32, 870

೧೩೫ E. C. IX. Ht. 9, 870

ನೀಡುತ್ತಾರೆ.[೧೩೬] ಆಲೂರಿನ ದನಗಳನ್ನು "ಕಲಿದೇವ ಠಕ್ಕನವರು ಕೊಂಡು ಹೋಗುತ್ತಿದ್ದಾಗ ಲೋಕನಾಯಕನ ಮಗನು" ಅವುಗಳನ್ನು ಹಿಂತಿರುಗಿಸಿ ಸಾಯುತ್ತಾನೆ.[೧೩೭] ಅವನ ಈ ಪರಾಕ್ರಮಕ್ಕೆ ಮೆಚ್ಚಿ "ಶ್ರೀಮನಾಳ್ವಭು ಭರತಗಾವುಂಡನುಂ ಸಮಸ್ತ ಪ್ರಜೆಗಳುಂ ಹಿಟ್ಟುಕಾಜಿರುಂ" ಸೇರಿ ಗದ್ದೆಯನ್ನು ಕೊಡುತ್ತಾರೆ. ಸುಮಾರು ಹದಿನೈದು ದಿನಗಳ ಅಂತರದಲ್ಲಿ ನಡೆದ ಎರಡು ಗೋಗ್ರಹಣಗಳಲ್ಲಿ ಮಡಿದ ವೀರರಿಗೆ ಸಾಸಿರ್ವ್ವರು ಉಂಬಳಿಯನ್ನು ಕೊಟ್ಟ ವಿಷಯ ಎರಡು ವೀರಗಲ್ಲುಗಳಿಂದ ತಿಳಿದು ಬರುತ್ತದೆ. ಈ ಶಾಸನಗಳಲ್ಲಿ ವೀರರನ್ನು "ಬಂಟ ಸಾಸಿರ್ವ್ವಬಂಟ"ರೆಂಬುದಾಗಿ ಕರೆದಿರುವುದರಿಂದ ಇವರು ನಿಯಮಿತರಾದ ವೀರರಿರಬೇಕೆಂದು ತೋರುತ್ತದೆ.[೧೩೮] ಮುತ್ತೂರ ದನಗಳನ್ನು ದಂಡನಾಯಕನಾದ ಕೇಸಿಮಯ್ಯ ಎಂಬುವವನು ಅಪಹರಿಸಿದಾಗ ಮುತ್ತೂರಿನ ಮುತ್ತೂರಿನ ಅಗಸರ ಜಾತಿಯ ಕಾಳೆಯ ಎಂಬುವನು ಹೋರಾಟ ಮಾಸಿ ಮೇಲಾಳನ್ನು ತಿವಿದು, ತುರುಗಳನ್ನು ಹಿಂತಿರುಗಿಸಿ ಸಾಯುತ್ತಾನೆ. ಅವನ ಈ ಪರಾಕ್ರಮಕ್ಕೆ ಮೆಚ್ಚಿದ ಸಮಸ್ತ ಪ್ರಜೆಗಳು ನೆರೆದು ಕೆರೆಯ ಕೆಳಗೆ ಗದ್ದೆಯನ್ನು ಕೊಡುತ್ತಾರೆ.[೧೩೯]

ಊರಿನ ಮೇಲೆ ಆಕಸ್ಮಿಕವಾಗಿ ಬೇರೆಯ ಅರಸರೋ ಅಥವಾ ವಿನಾಕಾರಣವಾಗಿ ಪೀಡಿಸುವ ಅಧಿಕಾರಿಗಳೋ ಬಂದು ಊರಿನಲ್ಲಿ ಗಲಭೆಯನ್ನು ಮಾಡಿದಾಗ ಅವರೊಡನೆ ಹೋರಾಟ ಮಾಡಿ ಮಡಿದ ವೀರರ ಪರಾಕ್ರಮವನ್ನು ಪುರಸ್ಕರಿಸಿ ದತ್ತಿಯನ್ನು ನೀಡಿರುವ ನಿದರ್ಶನಗಳು ಹಲವಾರುಂಟು. ಮುತ್ತೂರನ್ನು ಕಮ್ಮನವಳ್ಳಿಯ ಜಕ್ಕಸೆಟ್ಟಿ ಎಂಬುವನು ಆಕ್ರಮಿಸಿ "ಊರನ್ನೇ ಹಾಳುಮಾಡಿ ಹೆಂಗಸರ ಮಾನಭಂಗವನ್ನು ಮಾಡುತ್ತಿದ್ದಾಗ ಕಮ್ಮಾರ ಜಾತಿಗೆ ಸೇರಿದ ಮಾಚ ಎಂಬುವನು ಹೋರಾಡಿ ಮಡಿಯುತ್ತಾನೆ. ಆಗ ಜಕ್ಕಗಾವುಂಡ ಮತ್ತು ಕಂಕ ಗಾವುಂಡ ಎಂಬುವರು ಮಾಚನ ಅಣ್ಣನಾದ 'ಹಳಿಗ' ನೆಂಬುವನಿಗೆ ಸಮಸ್ತ ಪ್ರಜೆಗಳೊಂದಿಗೆ ಕೂಡಿಕೊಂಡು ದತ್ತಿಯನ್ನು ನೀಡುತ್ತಾರೆ.[೧೪೦] ಕುಪ್ಪಟೂರನ್ನು ಹಿತಗವುಡನೆಂಬುವನು ಮುತ್ತಿ ಊರಿನ ಗೋವುಗಳನ್ನೂ ಹೆಣ್ಣು ಮಕ್ಕಳನ್ನೂ ಅವಮಾನ ಮಾಡಲು ಪ್ರಯತ್ನಿಸುತ್ತಿರುತ್ತಾನೆ. ಆಗ ಆ ಊರಿನ ಅಶೇಷ ಮಹಾಜನಗಳ ಅಪ್ಪಣೆಯ ಮೇರೆಗೆ ವೀರನೊಬ್ಬನು ಹೋರಾಡಿ "ಸೆಜೆಯುಂ

---

೧೩೬ E. C. VI. Kd. 157, 158, 1195

೧೩೭ E. C. VIII. Sb. 47

೧೩೮ K. I. II. 17 ೧೫ನೇ ಜೂನ್ ೧೧೨೬, ಮತ್ತು
K. I. V. 22 ೧ನೇ ಜೂನ್ ೧೧೨೬

೧೩೯ ಅದೇ. VI. 36, 1122

೧೪೦ ಅದೇ. 26, 1138

ಜೀವಧನಮುಮಂ ಮಗುಳ್ಚಿ ಸುರಲೋಕಪ್ರಾಪ್ತ"ನಾಗುತ್ತಾನೆ. ಆಗ ಆ ಊರಿನ ಅಶೇಷಮಹಾಜನರು ಅವನ ಈ ಪರಾಕ್ರಮವನ್ನು ಮೆಚ್ಚಿ ಆತನ ಮಗನಿಗೆ ಸ್ವಲ್ಪ ಭೂಮಿಯನ್ನು ಮತ್ತು ಮನೆಯನ್ನು ಸರ್ವಬಾಧಾಪರಿಹಾರವಾಗಿ ನೀಡುತ್ತಾರೆ.[೧೪೧] ಹಾಲುತೊರೆಯ ಗ್ರಾಮದ ಮೇಲೆ ಒಬ್ಬನು ಬಂದು "ಧಾಳಿಯಂ ತಂದು ಊರೆಲ್ಲಮಂ ಸೂಱೆಗೊಂಡು ಉಡೆಯುಚ್ಚೆ ಹೆಣ್ನು ಸೆಱೆಯುಱು ಸೆಱೆಯುಂ" ಹಿಡಿಯಲು, ಹಾಲುತೊರೆಯ ಗೌಡನೊಬ್ಬನು ಶತ್ರುವನ್ನು ಎದುರಿಸಿ ಹೋರಾಡಿ ಸಾಯುತ್ತಾನೆ. ಆಗ ಅವನ ಪರಾಕ್ರಮವನ್ನು ಮೆಚ್ಚಿ "ಮಹಾಜನಂಗಳು ಆ ನಾಡ ಮಹಾ ಪ್ರಜೆಗೌಡಗಳುಂ" ಸೇರಿ ದತ್ತಿಯನ್ನು ನೀಡುತ್ತಾರೆ.[೧೪೨] ಕುಂಸಿಯ ಊರಳಿವಿನಲ್ಲಿ ಕಮ್ಮಾರರ ಮಲ್ಲೋಜನೆಂಬುವನು ಹೋರಾಡಿ ಸತ್ತಾಗ ಅಲ್ಲಿನ "ಸಾಸಿರ್ವ್ವರುಂ ಆತನ ಬಂಟಿಂಗೆ ಮೆಚ್ಚಿ" ಜಮೀನನ್ನು ದತ್ತಿ ಬಿಡುತ್ತಾರೆ.[೧೪೩] ನಿಡಿತ, ಮೆಣಸ ಮೊದಲಾಗಿ ನಾಡುಗಳೆಲ್ಲಾ ಒಂದಾಗಿ ನೆರೆದು ಬಂದು ಮಳ್ಳೂರ ಕೋಟೆಯನ್ನು ಮುತ್ತಿದಾಗ 'ಬೊಪ್ಪಗೌಡಿಯ ಮಲ್ಲೆಯ' ಮಳ್ಳೂರ ಕೋಟೆಯ ಕಾದು ಹೋರಾಡಿ ಸಾಯುತ್ತಾನೆ. ಆಗ ಆತನಿಗೆ "ವೀರ ಸೇಸೆಯಾಗಿ ಮಾಸಾವಿ ಮುಖ್ಯವಾಗಿ ಊರ ಮುನೂಱಾಳೂ ನೆರೆದಿರ್ದ್ದು" ದತ್ತಿಯನ್ನು ಬಿಡುತ್ತಾರೆ.[೧೪೪]

ಯುದ್ಧದಲ್ಲಿ ಸತ್ತ ವೀರರಿಗೆ ಅವನ ಆಶ್ರಯದಾತ ಕೊಡುತ್ತಿದ್ದ ದತ್ತಿ

ತನ್ನ ಪರವಾಗಿ ಹೋರಾಡಿ ಸತ್ತ ವೀರನ ಮನೆಯವರ ಮುಂದಿನ ಜೀವನ ನಿರ್ವಹಣೆಗಾಗಿ ಅರಸನು ಹಣವನ್ನೋ ಸ್ಥಿರವಾದ ಆಸ್ತಿಯನ್ನೋ ಕೊಡುತ್ತಿದ್ದನು. ಇದು ರಾಜನ ಆದ್ಯಕರ್ತವ್ಯವೇ ಆಗಿತ್ತು. ಏಕೆಂದರೆ, ತನ್ನ ಹಿತದೃಷ್ಟಿಗಾಗಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಮಡಿದ ವೀರರ ಮನೆಯವರನ್ನು ಸಾಕುವುದು, ಅವರ ಜೀವನ ನಿರ್ವಹಣೆಗೆ ಸಹಾಯ ಮಾಡುವುದು ಒಂದು ರೀತಿಯ ಮಾನವೀಯಧರ್ಮ. ರಾಜನ ಪರವಾಗಿ ಹೋರಾಡಿ ಸಾಯುವುದರಿಂದ ತನ್ನ ಸಂಸಾರದವರಿಗೆ ಯಾವ ರೀತಿಯ ತೊಮದರೆಯೂ ಆಗುವುದಿಲ್ಲ ; ತಾನು ನಂಬಿದ ಸವಾಮಿ ತನ್ನ ಮನೆಯವರನ್ನು ತಾನು ಸತ್ತ ಮೇಲೆಯೂ ಸಾಕಿ ಸಲಹುತ್ತಾನೆ ಎಂಬ ಭರವಸೆಯನ್ನು ಯೋಧರಲ್ಲಿ ತುಂಬುವ ಒಂದು ತಂತ್ರವೂ ಇರಬಹುದು. ಈ ರೀತಿ ಯುದ್ಧದಲ್ಲಿ ಹೋರಾಡಿದ

೧೪೧ E. C. VIII. Sb. 251, 1177
೧೪೨ M. A. R.1936. 19, 1230
೧೪೩ E. C. VIII. Sb. 86, 1150
೧೪೪ E. C. I. Cg. 80, 1296

ವೀರರ ಪರಾಕ್ರಮವನ್ನು ಅರಸನು ಬಹಿರಂಗವಾಗಿ ಪುರಸ್ಕರಿಸಿದರೆ ಅದರಿಂದ ಉಳಿದ ಯೋಧರು ಉತ್ಸಾಹ ಹೊಂದಿ, ತಮ್ಮ ಅರಸನಿಗೆ ತಮ್ಮ ಜೀವನವನ್ನೇ ಮುಡುಪಿಡಲು ಸಿದ್ಧರಿರುತ್ತಿದ್ದರು. ಈ ರೀತಿ ಯುದ್ಧದಲ್ಲಿ ಸತ್ತ ವೀರರಿಗೆ ದತ್ತಿಯನ್ನು ಬಿಡುವುದು, ಯುದ್ಧದಲ್ಲಿ ಹೋರಾಡಿ ಉಳಿದು ಬಂದ ವೀರರಿಗೆ ಕೊಡುವ ದತ್ತಿ ಅಥವಾ ಇತರ ಮಾನ್ಯಗಳನ್ನು ಬಿಡುವುದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾದುದು. ಮಡಿದ ವೀರರ ಬಗ್ಗೆ, ಯುದ್ಧಾನಂತರದಲ್ಲಿ ಜನತೆಗೆ ವಿಶೇಷವಾದ ಅನುಕಂಪ ಮತ್ತು ಅಭಿಮಾನ ಇರುತ್ತದೆ ಎಂಬುದು ಇದಕ್ಕೆ ಸ್ಪಷ್ಟ ಕಾರಣ.

ಗಂಗರ ದುಗ್ಗಮಾರ ಎರೆಯಪ್ಪನು ತನ್ನ ಯುದ್ಧವೊಂದರಲ್ಲಿ ಭಾಗವಹಿಸಿ ಮಡಿದ ವೀರನೊಬ್ಬನಿಗೆ ಒಂದು ಗ್ರಾಮವನ್ನು ಮತ್ತು ಮತ್ತೊಂದು ಊರಿನ ಗದ್ದೆಯ ಸ್ವಲ್ಪ ಭಾಗವೊಂದನ್ನೂ, ಮನೆಯೊಂದನ್ನೂ ಪ್ರಸಾದಿಸುತ್ತಾನೆ.[೧೫೫] 'ನಾಗುಟ್ಟರಸ' ಎಂಬ ವೀರನು ಮಹಾವಲಿ ಬಾಣರಸನ ಪರವಾಗಿ ಯುದ್ಧವೊಂದರಲ್ಲಿ ಹೋರಾಡಿ ಮಡಿಯುತ್ತಾನೆ. ಆಗ ಅವನಿಗೆ ಸರ್ವಬಾಧಾ ಪರಿಹಾರವಾಗಿ ಬಾಣರಸನು ದತ್ತಿಯನ್ನು ಬಿಡುತ್ತಾನೆ.[೧೫೬] ಗಂಗರ ಕಾಲದ ಅಂದರೆ ಒಂಬತ್ತು ಮತ್ತು ಹತ್ತನೆಯ ಶತಮಾನದ ವೀರಗಲ್ಲುಗಳನ್ನು ಗಮನಿಸಿದರೆ ಯುದ್ಧದಲ್ಲಿ ಸತ್ತ ವೀರನ ಅರ್ಹತೆಯನ್ನು ಅನುಸರಿಸಿ ಅವನಿಗೆ ದತ್ತಿಯನ್ನು ಬಿಟ್ಟಿರುವುದು ಕಂಡು ಬರುತ್ತದೆ. ನಾಗರತ್ತನು ತುಂಬೆಪಾದಿಯಲ್ಲಿ ಕಾದಿ ಸತ್ತಾಗ ಎಱೆಯಪ್ಪನು ಅವನ ಮಗನಾದ ಇರುಗನಿಗೆ ಬೆಂಪೂರುಪನ್ನೆರಡನ್ನು ನಾಗತ್ತರಪಟ್ಟವಾಗಿ ಕಟ್ಟಿಕೊಡುತ್ತಾನೆ.[೧೫೭] ಅಯ್ಯಪದೇವನ ಮಗನಾದ ಬೀರನೊಳಂಬನು ಸಾನ್ತರ ಮೇಲೆ ಮಾಡಿದ ಯುದ್ಧದಲ್ಲಿ, ಬೀರನೊಳಂಬನ ಪರವಾಗಿ ಗಂಗ ಎನ್ನುವ ವೀರನೊಬ್ಬನು ಹೋರಾಡಿ ಮಡಿಯುತ್ತಾನೆ. ಆಗ ವೀರನೊಳಂಬನು ಅವನ ಪರಾಕ್ರಮವನ್ನು ಮೆಚ್ಚಿ ಹಿರಿಯ ಬಿದಿರೂರನ್ನು ಗಂಗನ ಮಕ್ಕಳಿಗೆ ಕೊಡುತ್ತಾನೆ.[೧೫೮]

ಭೂಮಿಯು ಸ್ಥಿರವಾದ ಉತ್ಪನ್ನವನ್ನು ನೀಡುವ ಆಸ್ತಿ. ಹೋರಾಡಿ ಮಡಿದ ವೀರರು ವ್ಯವಸಾಯವನ್ನು ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದವರು. ಆದ್ದರಿಂದ ಭೂಮಿಯನ್ನು ಅರಸನಿಂದ ಪಡೆಯುವುದು ಶ್ರೇಷ್ಠವೆಂದು ಜನ ಭಾವಿಸಿದ್ದಿರಬೇಕು. ಅರಸನಿಗೂ ಇದು ಸುಲಭವಾದ ವಿಚಾರವಾಗಿ ಕಂಡಿರಬೇಕು. ಆದ್ದರಿಂದಲೇ ಇದೇ ಸಂಪ್ರದಾಯವು ಬ್ರಿಟಿಷರು ಆಳುತ್ತಿದ್ದ ಕಾಲದವರೆಗೂ ಮುಂದುವರಿದುಕೊಂಡು ಬಂದಿತು.

---

೧೫೫ E. C. X. Mb. 255, 750

೧೫೬ E. C. X. KI. 200, 890

೧೫೭ E. C. IX. Bn. 83, 890

೧೫೮ E. C. X. Gd. 4, ಸು. 920

ಈ ರೀತಿ ತಮ್ಮ ಪರವಾಗಿ ಹೋರಾಡಿ ಸತ್ತ ವೀರರಿಗೆ ಮಾತ್ರವಲ್ಲದೆ, ತಮ್ಮ ತಪ್ಪಿನಿಂದ ವ್ಯಕ್ತಿಯೊಬ್ಬನು ಸತ್ತನೆಂದು ಅರಿತಾಗಲೋ, ಅನ್ಯಾಯದಿಂದ ವ್ಯಕ್ತಿಯು ಮರಣ ಹೊಂದಿದನೆಂದೋ ಅವನ ಮಕ್ಕಳಿಗೆ ಅರಸರು ದತ್ತಿಯನ್ನು ಬಿಟ್ಟ ವಿಚಾರವೂ ಶಾಸನಗಳಿಂದ ತಿಳಿಯುತ್ತದೆ. ಕೆಂಬಾಳನ್ನು ಚೋಳ ಮಹಾದೇವಿ ಎಂಬುವವಳು ಆಳುತ್ತಿದ್ದಳು. ಆಕೆ ಒಮ್ಮೆ ದುಷ್ಟ–ಕಷ್ಟರ ಮಾತನ್ನು ಕೇಳಿ ಬೇವೂರು ಎಂಬ ಗ್ರಾಮವನ್ನು ಮುತ್ತಿಗೆ ಹಾಕುತ್ತಾಳೆ. ಈ ಅನ್ಯಾಯವನ್ನು ಸಹಿಸದ ಕೇತಮಲ್ಲನು ಚೋಳಮಹಾದೇವಿಯವರು ಕಳುಹಿಸಿದ ಧಾಳಿಯ ಮೇಲೆ ಬಿದ್ದು ಹೋರಾಡಿ ಸಾಯುತ್ತಾನೆ. ವಾಸ್ತವಸ್ಥಿತಿಯ ಅರಿವು ಆಕೆಗೆ ಅನಂತರ ಆಗುತ್ತದೆ. ಆಗ ಆಕೆ ತನ್ನ "ಭಂಡಾರಿ ರಾಯಣ್ಣ ನಾಚಣ್ಣ ಹೆಗ್ಗಡೆಗಳಂ ಕರೆದು ಯೆಮ್ಮ ಮಕ್ಕಳ ನಾವು ನೋಯಿಸಿದೆವು" ಎಂದು ಪಶ್ಚಾತ್ತಾಪಪಟ್ಟು ಅವರಿಗೆ "ನೀವು ಹೋಗೆ ಯೆಮ್ಮ ಶ್ರೀವಚನದಲಭಯವಂ ಕೊಟ್ಟು" ಅನಂತರ ಹೋರಾಟದಲ್ಲಿ ಸತ್ತ ಕೇತಮಲ್ಲ ನಾಯಕನಿಗೆ ದತ್ತಿಯನ್ನು ನೀಡಬೇಕೆಂದು ತಿಳಿಸುತ್ತಾಳೆ. ಆ ಮೇರೆಗೆ ಅವರು ಸತ್ತ ವೀರನಿಗೆ ದತ್ತಿಯನ್ನು ಬಿಡುತ್ತಾರೆ. ಈ ಪ್ರಸಂಗದಿಂದ ಅನ್ಯಾಯವನ್ನು ಯಾರೇ ಮಾಡಿರಲಿ ಜನ ಅದನ್ನು ಧೈರ್ಯವಾಗಿ ಎದುರಿಸುತ್ತಿದ್ದರು ಮತ್ತು ಕೆಲವರಾದರೂ ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡು ತಮ್ಮ ತಪ್ಪಿನಿಂದಾದ ನೋವನ್ನು, ಕಷ್ಟವನ್ನು ಪರಿಹರಿಸುವ ಸಲುವಾಗಿ ಮಡಿದವರಿಗೆ ದತ್ತಿಯನ್ನು ಬಿಡುತ್ತಿದ್ದರೆಂದು ತಿಳಿಯುತ್ತದೆ.[೧೪೯] ಕ್ರಿ.ಶ. ೧೫೬೪ರ ಮತ್ತೊಂದು ಶಾಸನದಲ್ಲಿ ದೇವಪ್ಪಗೌಡ ಎಂಬುವನನ್ನು ಸಂಜರಕಾನನವರು ಅನ್ಯಾಯದಲ್ಲಿ ಕೊಂದ ವಿಷಯವನ್ನು ಮತ್ತು ಅದೇ ಕಾರಣಕ್ಕಾಗಿ ಅರಸರು ದೇವಪ್ಪನ ಮಗನಾದ 'ಚಾಮರಸ ಒಡೆಯ' ಎಂಬುವನಿಗೆ ಗಣಿಗನೂರನ್ನು ರಕ್ತಕೊಡಿಗೆಯಾಗಿ ಕೊಡುತ್ತಾರೆ.[೧೫೦]

ಹೀಗೆಯೇ ತಮ್ಮ ಪರವಾಗಿ ಹೋರಾಡದಿದ್ದರೂ, ತಮ್ಮ ರಾಜ್ಯದಲ್ಲಿ ಸುಖ–ಶಾಂತಿಯ ಸ್ಥಾಪನೆಗಾಗಿ ಹೋರಾಡಿ ಮಡಿದ ವೀರರಿಗೂ ದತ್ತಿಯನ್ನು ಬಿಡುತ್ತಿದ್ದರು. ಈ ಹಿಂದೆ ಗಮನಿಸಿರುವಂತೆ, ಇಲ್ಲಿಯೂ ವ್ಯಕ್ತಿಯ ಸಾವಿನ ಹಿಂದೆ ಇರುವ ಉದ್ದೇಶವನ್ನು ಗಮನಿಸುತ್ತಿದ್ದರೆಂದು ತೋರುತ್ತದೆ. ತಮ್ಮಗಾವುಂಡ ಎಂಬುವನು ಹುಲಿಯೊಂದನ್ನು ಇರಿದು ಅದರೊಡನೆ ತಾನೂ ಸಾಯುತ್ತಾನೆ.[೧೫೧] ಅವನ ಈ ವೀರಕೃತ್ಯವನ್ನು ಕಂಡ, 'ಗಙ್ಗಪೆರ್ಮಾಡಿ' ಮೆಚ್ಚಿ "ಐಯ್ದುಗಳ ಕಟಿನಿ"ಯಷ್ಟು ಪ್ರಮಾಣದ ಭೂಮಿಯನ್ನು ಕೊಡುತ್ತಾನೆ. ಅರಸನೊಡನೆ

೧೪೯ E. C. V. Cn. 205, 1120

೧೫೦ E. C. IV. YI. 29, 1564

೧೫೧ M. A. R.1927. 44, 855

ವೇಳೆವಾಳಿಯಾಗಿಯೋ, ಕೀಟ್ಟುಗ್ಗಣ್ಣೆಯಾಗಿಯೋ ಸತ್ತವರಿಗೂ ದತ್ತಿಯನ್ನು ಬಿಡುತ್ತಿದ್ದರು. ನೀತಿಮಾರ್ಗ ಪೆರ್ಮಾನಡಿಗೆ ಕೀಟ್ಟುಗ್ಗಣ್ಣೆಯಾಗಿ ಸತ್ತ ಪೆರ್ಮಾಡಿಗಳ ಮನೆಮಗ ಅಗರಯ್ಯ ಎಂಬುವನಿಗೆ, ಸತ್ಯವಾಕ್ಯಪೆರ್ಮಾನಡಿ ಕಪ್ಪಳ್ಳಿಯನ್ನು ದತ್ತಿಯನ್ನಾಗಿ ಬಿಡುತ್ತಾನೆ.[೧೫೨] ಮಹಾಮಂಡಳೇಶ್ವರನಾದ ತೈಲಪದೇವನು ಸತ್ತಾಗ ಬೊಪ್ಪಣ ಎಂಬುವನು ವೇಳೆವಾಳಿತನವನ್ನು ಮೆರೆದು ತೈಲಪನೊಡನೆ ಸ್ವರ್ಗಸ್ಥನಾದಾಗ "ಮಂಡಳೇಶ್ವರ ಮಯವರ್ಮದೇವರುಂ ಮಂಡಲಿಕ ಮಸಣಯ್ಯ ಶ್ರೀಕರಸಹಿತ ಸಮಸ್ತ ಪರಿಗ್ರಹಮಿಟ್ಟು ಬೊಪ್ಪಣ"ನಿಗೆ ಜಮೀನನ್ನು ದತ್ತಿಯಾಗಿ ಬಿಡುತ್ತಾರೆ.[೧೫೩] ಚೆಲ್ವಗಣ್ಡ ಎಂಬುವನು ತಲೆಯನ್ನು ಕಡಿಯಿಸಿ ಕೊಂಡು ಸತ್ತಾಗ, ಅವನಿಗೆ ಕಣ್ಡುಗ ಭೂಮಿಯನ್ನು ದತ್ತಿಯನ್ನಾಗಿ ಬಿಡುತ್ತಾರೆ.[೧೫೪]

ಕೆಲವೊಮ್ಮೆ ಅರಸರು ಮತ್ತು ಪ್ರಜೆಗಳು ಇಬ್ಬರೂ ಕೂಡಿ ದತ್ತಿಯನ್ನು ಬಿಡುತ್ತಿದ್ದುದಾಗಿ ವೀರಗಲ್ಲುಗಳ ಪಾಠದಿಂದ ತಿಳಿದುಬರುತ್ತದೆ. ಬಿಂಣ್ಣಗೌಡ ಎಂಬುವನು ಹೋರಾಟವೊಂದರಲ್ಲಿ ಸತ್ತಾಗ 'ತಳಿಗೆನಾಡನಾಯಕ ಭೂಮಿಯ ವೊಂಭತ್ತು ಮಂದೆಯ ಪ್ರಭು ಗಾವುಂಡಗಳು, ಹೊಯ್ಸಳ ನಾರಸಿಂಹದೇವಣೂ ಸೇರಿ ಸತ್ತ ಬಿಂಣ್ಣಗೌಡನಿಗೆ ದತ್ತಿಯನ್ನು ಬಿಡುತ್ತಾರೆ.[೧೫೫] ಹೋರಾಟವೊಂದರಲ್ಲಿ ಸತ್ತ ಮಾಚಗಾವುಮಡ ಎಂಬುವನಿಗೆ 'ಬಲ್ಲಾಳದೇವನುಂ ಕೂಸೆಜೆಯುಂಣನುಂ ಇಂಗುಳದ ಅಶೇಷಮಹಾಜನಂಗಳುಂ ತಳಿಗೆನಾಡ ಸಾಯಿರಭೂಮಿ"ಯನ್ನು ವೀರದತ್ತಿಯಾಗಿ ಬಿಟ್ಟ ವಿವರಣೆ ವೀರಗಲ್ಲಿನ ಪಾಠವೊಂದರಿಂದ ತಿಳಿದು ಬರುತ್ತದೆ.[೧೫೬] ಕೆಲವೊಮ್ಮೆ ವೀರನು ಅರಸರ ಪರವಾಗಿ ಹೋರಾಡಿ ಮಡಿದಿದ್ದರೂ ಊರಿನ ಜನ ಅವನಿಗೆ ದತ್ತಿಯನ್ನು ಬಿಡುತ್ತಿದ್ದುದುಂಟು ಅರಸನ ಪರವಾಗಿ ಹೋರಾಡಿ ಮಡಿದ ವೀರನೊಬ್ಬನಿಗೆ ಒಂದು ಊರಿನ "ಊರೊಕ್ಕಲು ಮೂಜನಮುಂ" ದತ್ತಿಯನ್ನು ಬಿಟ್ಟ ವಿಚಾರ ಶಾಸನವೊಂದರಲ್ಲಿದೆ.[೧೫೭]

ಯುದ್ಧದಲ್ಲಿ ಹೋರಾಡಿ ಮಡಿದ ವೀರರಿಗೆ ಯಾವ ಯಾವ ಸಂದರ್ಭಗಳಲ್ಲಿ ದತ್ತಿ, ಬಹುಮಾನ ಮುಂತಾದುವುಗಳನ್ನು ನೀಡುವುದರ ಮೂಲಕ ಉತ್ತೇಜನ ನೀಡುತ್ತಿದ್ದರು ಎಂಬುದನ್ನು ಇಲ್ಲಿಯೇ ಗಮನಿಸುವುದು ಸೂಕ್ತವೆಂದು ತೋರುತ್ತದೆ. ಏಕೆಂದರೆ, ಯುದ್ಧವೆಂಬುದು ಸಾವಿನೊಂದಿಗೆ ಮಾಡುವ ಹೋರಾಟ. ಈ ಹೋರಾಟದಲ್ಲಿ ವೀರನ ಸಾವು, ಬದುಕು, ಯಾವುದೂ

---

೧೫೨ E. C. III. Tn. 91, 921

೧೫೩ E. C. VII. HI. 47, 1130

೧೫೪ E. C. X. Ct. 31, 1051

೧೫೫ E. C. VI. Cm. 96, 1141

೧೫೬ M. A. R.1927. 23, ಸು. ೧೨ನೇ ಶತ.

೧೫೭ M. A. R.1925. 86, ಸು. ೧೦ನೇ ಶತ.

ನಿಶ್ಚಿತವಲ್ಲ. ಇಂತಹ ಸಂದರ್ಭಗಳಲ್ಲಿ, ಯೋಧರು ತಮ್ಮ ಸಂಸಾರದ ಬಗ್ಗೆ ಯೋಚಿಸುವಂತಾಗ ಬಾರದೆಂದು ಅವರ ಸಂಸಾರದ ನಿರ್ವಹಣೆಯ ಭಾರವನ್ನು ಹೊತ್ತು ಕೊಳ್ಳುವುದರ ಜೊತೆಗೆ ವಿಶೇಷವಾದ ಉಡುಗೊರೆಗಳನ್ನು ಘೋಷಿಸುತ್ತಿದ್ದರು. ಯುದ್ಧರಂಗದಲ್ಲಿ ತಮ್ಮ ಸಂಸಾರದ ನೆನಪು ಬಂದು, ತಾವು ಯುದ್ಧದಲ್ಲಿ ಸಂಪಾದಿಸಿದ ಒಡವೆ, ವಸ್ತುಗಳನ್ನು ತಮ್ಮ ಹೆಂಡತಿಯರ ಕೈಗೆ ಕೊಟ್ಟು 'ಸಲಹುಮಕ್ಕಳನೆಂದು' ತಿಳಿಸಿದ ವೀರರ ಚಿತ್ರಣ ನಂಜುಂಡನ ಕುಮಾರರಾಮನ ಸಾಂಗತ್ಯದಿಂದ ದೊರೆಯುತ್ತದೆ.[೧೫೮]

ಯುದ್ಧದಲ್ಲಿ ಹೋರಾಡುತ್ತಿದ್ದ ವೀರರಿಗೆ ದತ್ತಿ, ಬಹುಮಾನಗಳನ್ನು ಸಾಮಾನ್ಯವಾಗಿ ಮೂರು ನೀಡುತ್ತಿದ್ದರು.

ಯುದ್ಧ ಪೂರ್ವದಲ್ಲಿ.
ಯುದ್ಧ ಸಮಯದಲ್ಲಿ.
ಯುದ್ಧಾನಂತರದಲ್ಲಿ.

ಈ ಮೂರೂ ಸಂದರ್ಭಗಳಲ್ಲಿ ಅರಸರು, ತಮ್ಮ ಆಶ್ರಿತರಿಗೆ, ಅವರ ಸೇವೆಯನ್ನು ಮನ್ನಿಸಿ ದತ್ತಿ, ಬಹುಮಾನಗಳನ್ನು ಕೊಡುವುದು ಪ್ರತ್ಯುಪಕಾರವೇ ಆದರೂ, ಅವುಗಳನ್ನು ಕೊಡವು ಸಂದರ್ಭವನ್ನು ಅನುಸರಿಸಿ ಉದ್ದೇಶಗಳು ಭಿನ್ನವಾಗಿರುತ್ತಿದ್ದವು. ಯುದ್ಧ ಪೂರ್ವದಲ್ಲಿ ಈ ರೀತಿಯ ಮನ್ನಣೆಗಳನ್ನು ನೀಡುವುದರ ಮೂಲಕ ಅರಸನು ತನ್ನ ಸೈನ್ಯದ ಬಲವನ್ನು ಹೆಚ್ಚಿಸಿ ಕೊಳ್ಳುತ್ತಾನೆ, ಯುದ್ಧ ಸಮಯದಲ್ಲಿ ನೀಡುವುದರಿಂದ ಸೈನಿಕರಿಗೆ ತಮ್ಮ ಜೀವನದ ಹಂಗುತೊರೆದು ಹೋರಾಡುವ ಹುರುಪು ದೊರೆತು ಅರಸನಿಗೆ ಜಯ ಲಭಿಸುವ ಅವಕಾಶ ದೊರೆಯುತ್ತಿತ್ತು. ಯುದ್ಧಾನಂತರ ಬದುಕಿ ಬಂದ ಅಥವಾ ಸತ್ತವೀರನ ಪರಾಕ್ರಮಗಳನ್ನು ಅರಸನೇ ಪುರಸ್ಕರಿಸದಿರೆ ಅದು ಅವನ ಬಗ್ಗೆ ಹೆಚ್ಚಿನ ಗೌರವವನ್ನು ತಂದುಕೊಡುತ್ತಿತ್ತು. ಇದರಿಂದ ಉಳಿದ ಯೋಧರಿಗೆ ಆ ಅರಸನ ಬಗ್ಗೆ ವಿಶ್ವಾಸ ಮೂಡುತ್ತಿತ್ತು.

ಈ ಬಗ್ಗೆ ನಂಜುಂಡನ ಕುಮಾರರಾಮ ಸಾಂಗತ್ಯದಿಂದ ಉಪಯುಕ್ತ ಮಾಹಿತಿಗಳು ದೊರೆಯುತ್ತವೆ. ವೀರರಾದವರು ಯಾರ ಆಶ್ರಯದಲ್ಲಿಯೇ ಇರಲಿ, ಅವರ ಪರಾಕ್ರಮವನ್ನು ಗುರುತಿಸಿ, ಅಂತಹ ವೀರನು ತನ್ನ ಬಳಿ ಇರಬೇಕೆಂಬ ಆಸೆಯಿಂದ ಅರಸನಾದವನು ಅವರಿರುವ ಕಡೆಗೇ ಅವರು ಅಪೇಕ್ಷಿಸಿದ ವಸ್ತುಗಳನ್ನು ಕಳುಹಿ ತನ್ನ ಬಳಿಗೆ ಕರಸಿಕೊಳ್ಳುತ್ತಿದ್ದನು.[೧೫೯] ಜೀವನದ

---

೧೫೮ ನಂಜುಂಡ : ರಾಮನಾಥಚರಿತೆ, ಭಾ. ೩, ಆ. ೧೦, ಸಂ. ೨, ಪ. ೧೨೪

೧೫೯ ಅದೇ : ಭಾಗ ೨, ಆ. ೧, ಸಂ. ೫, ಪ, ೩೫ "ಎಲ್ಲಿ ಸುಭಟರುಂಟೆಲ್ಲಿ ಕಲಿಗಳುಂಟೆಲ್ಲಿಮಹಾವೀರರುಂಟು । ಅಲ್ಲಿಗಲ್ಲಿಗೆ ಬೇಡಿದವಸ್ತುಗಳನಟ್ಟಿ ನಿಲ್ಲದವರುಬರಿಸುವನು"

ನಿರ್ವಹಣೆಗಾಗಿ ಅರಸರನ್ನು ಆಶ್ರಯಿಸುತ್ತಿದ ವೀರರೂ ತಮಗೆ ಕೈತುಂಬಾ ಹಣ ನೀಡುವ ಆಶ್ರಯದಾತನನ್ನೇ ಬಯಸುತ್ತಿದ್ದರು. ಆಶ್ರಯದಾತನು ಹಣವನ್ನು ನೀಡುತ್ತಾನೆಂಬ ಒಂದು ಕಾರಣಕ್ಕಾಗಿಯೇ ವೀರರು ಅರನ್ನು ಆಶ್ರಯಿಸುತ್ತಿರಲಿಲ್ಲ. ಅವನು ಪರಾಕ್ರಮಿಯೇ, ಸಚ್ಚರಿತನೇ ಎಂಬುದನ್ನೂ ಪರಿಶೀಲಿಸುತ್ತಿದ್ದರೆಂದು ತೋರುತ್ತದೆ.[೬೦] ಈ ರೀತಿ ತಮ್ಮ ಆಶ್ರಯದಾತನ ವೈಯಕ್ತಿಕ ಗುಣಗಳನ್ನು ವೀರರು ಏಕೆ ಪರಿಶೀಲಿಸುತ್ತಿದ್ದರೆಂಬುದಕ್ಕೆ ಕಾರಣಗಳೂ ದೊರೆಯುತ್ತವೆ. ಅರಸರು ಯುದ್ಧದಲ್ಲಿ ತಾವೇ ಹೆದರಿ ಹಿಂದಕ್ಕೆ ಓಡಿಬಂದು ತಮ್ಮ ಸೈನಿಕರಿಗೆ ಇಲ್ಲದ ತೊಮದರೆಗಳನ್ನು ಕೊಡುವವರಾಗಿದ್ದರು. ಕೆಲವೊಮ್ಮೆ ಯುದ್ಧದಲ್ಲಿ ಜಯಗಳಿಸಿ ಅಪಾರವಾದ ಸಂಪತ್ತನ್ನು ಗಳಿಸಿದ್ದರೂ, ಹೋರಾಡಿದ ವೀರರಿಗೆ ಕಿಂಚಿತ್ತೂ ಸಹಾಯಮಾಡದವರೂ ಇರುತ್ತಿದ್ದರು. ಸೈನ್ಯಕ್ಕೆ ಸೇರಿಸಿಕೊಳ್ಳುವಾಗ ಸಿಹಿಮಾತುಗಳನ್ನಾಡಿ ಆನಂತರ ಹೋರಾಡಿದ ವೀರರಿಗೆ ಬರಿಕೈಗಳನ್ನು ತೋರಿಸುತ್ತಿದ್ದ ಅರಸರೇನು ಕಡಿಮೆ ಸಂಖ್ಯೆಯಲ್ಲಿರಲಿಲ್ಲ.[೬೧]

---

೬೦ ಅದೇ. : ಆ ೩, ಸಂ. ೪, ಪ. ೭–೯
"ಪೊನ್ನೀವಗಡ ತಪ್ಪೆ ಸಏರಿಪಗಡ ನೆರೆ ।
ಮನ್ನಿ ಪಗಡ ಕಾಳಗದೊಳು ।
ಬೆನ್ನೀಯಗಡ ರಾಮನೆಂದು ವೀರರು ಬಂದು ।
ಚೆನ್ನರಾಮನ ಪೊರ್ದಿರು ॥

ಪರವಸ್ತುಗಳಿಗಾಟಿಸಗಡಪರವೆಣ್ಣ ।
ನಿರವನಿಟ್ಟಿಸಿನೋಡಗಡ ।
ಕರೆದೀವಗಡ ಕಲಿಗಳೆಂದು ಬಂಟರು ।
ಬರದೊಳವನ ಸೇರಿದರು ॥

ಪಂತವಜಿದು ಪಾಡಜಿದು ಬಂಟರಿಗೆ ಮಿಗೆ ।
ಸಂತೈಪಗಡ ಸಮರದೊಳು ।
ಪಿಂತಿಹನಲ್ಲಗಡನೆಂದು ಕುವರ ಗಂದ ।
ನಂತ ಭಟರು ಸೇರಿದರು ॥

೬೧ ಅದೇ : ಆ. ೩, ಸಂ. ೪, ಪ. ೧೧–೧೩
"ತೆಱನಱಿಯದೆ ಪೊಕ್ಕು ಬೆದಱಿ ಸಂಗ್ರಾಮದಿಂ ।
ಮುಱಿದೋಡಿ ಬಂದು ಭಟರಿಗೆ ।
ಕೊಱತೆಯಿಕ್ಕುವ ಕೊಲ್ಲಟಿಗದೊರೆಗಳ ಬಿಟ್ಟು ।
ನೆಱೆಗಲಿಗಳು ಸೇರಿತವಗೆ ॥

ಇಱಿದ ಬಂಟರಗೀಯಲಾಱದವರ ಮೇಲೆ ।
ಕೊಱತೆಯಿನಿಕ್ಕುವ ಖೂಳನೃಪರ ।
ಜಱಿದೊಯ್ಯನೆ ಪೊರ್ದಿದರು ಜಾತಿವೀರರು ।
ನೆಱಗಲಿ ವೀರ ರಾಮನಾಥನನು ॥

ಕ್ರಿ.ಶ. ೧೮೧೭ ರ ಒಂದು ಶಾಸನದಿಂದ ಸೇನೆಯಲ್ಲಿ ದುಡಿದಿದ್ದ ಯೋಧನೊಬ್ಬನು ತನ್ನ ಆಶ್ರಯ ದಾತನನ್ನು 'ಉಂಬಳಿ' ದಯಪಾಲಿಸಬೇಕೆಂದು ಕೇಳಿಕೊಮಡ ವಿಷಯವೂ, ಆಶ್ರಯದಾತನು ಅವನಕೋರಿಕೆಯನ್ನು ಮನ್ನಿಸಿ ತನ್ನ ಕೈಕೆಳಗಿನವರ ಮೂಲಕ ಆ ವ್ಯಕ್ತಿಗೆ ಉಂಬಳಿಯನ್ನು ನೀಡಿದ ವಿವರಗಳು ದೊರೆಯುತ್ತವೆ.[೧೨] ಆಶ್ರಯದಾತನು ನೀಡುವ ಹಣದ ಆಸೆಗಾಗಿ ವೀರರು ಹೋಗುತ್ತಿದ್ದರೆಮದು ಹೇಳಲು ಬರುವುದಿಲ್ಲ. ತಾವು ಆಶ್ರಯದಾತನಿಂದ ಪಡೆದ ಸಹಾಯವನ್ನು ತಮ್ಮ ಶಕ್ತಿಮೀರಿ ತೀರಿಸುತ್ತಿದ್ದರು –ಎಂಬುದಕ್ಕೆ ಅನೇಕ ವೀರಗಲ್ಲುಗಳಿಂದ ನಿದರ್ಶನಗಳನ್ನು ನೀಡಬಹುದು. ಸ್ವಾಭಿಮಾನಿಗಳಾದ ವೀರರು ತಮಗೆ ಸಲ್ಲಬೇಕಾಗಿರುವ ಮನ್ನಣೆಯನ್ನಲ್ಲದೆ ಇತರೆ ಮನ್ನಣೆಗಳಿಗೆ ಕೈಚಾಚುವ ಆಶೆಬುರಕರಾಗಿರಲಿಲ್ಲವೆಂಬ ಅಂಶ ಚಿತ್ರದುರ್ಗದ ಬಖೈರಿನಿಂದ ಸುವ್ಯಕ್ತವಾಗುತ್ತದೆ. ಆ ಭಾಗವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ತೋರುತ್ತದೆ.

"ಶಿವಪ್ರಸಾದ, ಧನಶಿಂಗ್, ರಾಮಶಿಂಗ್, ಲಕ್ಷ್ಮಣಶಿಂಗ್ ಈ ನಾಲ್ಕು ಸರದಾರರಿಗೆ ಮಹಾರಾಜಾ ಸಾಹೇಬರು ಕರೇ ಕಳುಹಿಸಿ ಇವರು ಮಾಡಿದ ಮೆಹನತ್ತು ನೋಡಿ ಬಹಳ ಸಂತೋಷವಾಗಿ ನಾಲ್ಕು ಮಂದಿಗೂ ಕಡೆ, ತೋಡು, ಮುತ್ತಿನಹಾರ ವಗೈರಿ ತೊಡೆ, ವಸ್ತ್ರ ಪಾತ್ರ ಕೊಡುವಲ್ಲಿ ನಾಲ್ಕು ಮಂದಿ ಎದ್ದು ಕಸಲೀಂ ಮಾಡಿ ಅರ್ಜುಮಾಡಿದ್ದು. ಮಹಾರಾಜ ಸಲಾಮು ನಾವು ಈ ಶೀಮೆಯವರಲ್ಲಾ ಹಿಂದೂಸ್ತಾನದಿಂದ ಬಂದ ಜನಾ. ನಮಗೆ ನಜುರವಾನು ಬಜ್ಜೆ ಮಹಾರಾಜಾ ಸಾಹೇಬರು ನಮಗೆ ಮನಃ ಪೂರ್ವಕವಾಗಿ ಧರಮ ಮಾಡಿ ಲಡಾಯ ಮಾಡಬೇಕೆಂದು ಇಟ್ಟು ಇರುವಲ್ಲಿ ನಾವು ಲಡಾಯದಲ್ಲಿ ಸೇವೆ ಮಾಡಬೇಕೆಂದು ಚಾಕರಿ ನಿಂತೆವು. ಇದಕ್ಕೆ ಲಡಾಯ ಮಾಡಿದೆವು. ಜಯವಾದರೆ ತಮ್ಮ ಪುಣ್ಯಪ್ರತಾಪದಿಂದ ಆಯಿತು. ಪರಂತು ನಮ್ಮ ಕಡೆಯಿಂದಲೇನು ಆಗಲಿಲ್ಲ. ಇನಾಮು, ಏಕನಾಮು ತೆಗೆದುಕೊಳ್ಳಬೇಕಾದರೆ ನಮ್ಮ ದೇಶದಲ್ಲಿ ಶಿಪಾಯಿ ಜನಗಳಿಗೂ ತೆಗೆದುಕೊಳ್ಳುವ ದಂಡಕವಿಲ್ಲ. ಮಹಾರಾಜಾ ಸಲಾಮು ಭಾಟ ಭಟಂಗಿ ಮತ್ತು ತಾಫೇದಾರರಿಗೆ ಇನಾಮು ಹೊರತು ಶಿಪಾಯಿಗಳಿಗೆ ಇನಾಮು ಜೂರಿಲ್ಲಾ.

ಬೇಡಿದುದನು ಕೊಟ್ಟೆಪೆವೆಂದು ಸೇವೆಯ
ಮಾಡಿಸಿ ಕೊಂಡು ಭಟರನು ।
ಖೋಡಿಗೆಳೆವ ಕೋಮಟಿಗ ದೊರೆಗಳ ಬಿಟ್ಟು
ಕೂಡಿತು ವೀರ ರಮನಿಗೆ ॥"

೧೨ M. A. R.1929. 71, 1817

ಮಹಾರಾಜಾ ಸಾಹೇಬರು ಬಹಳ ಖುಷಿ ಆಗಿ ಅಂದದ್ದು. ನಿಮಗೇನು ಇನಾಮು ಏಕನಾಮು ಕೊಡುವುದಿಲ್ಲಾ. ನೀವು ಜನಗಳು ನಮ್ಮ ಪುತ್ರಪಕ್ಷಕ್ಕೆ ಹೆಚ್ಚೆಂದು ತಿಳಿದು ನೀವು ನಮ್ಮ ಮುಂದೆ ಕಡೆ ತೋಡೆಯಿಂದ ಅಲಂಕಾರವಾಗಿರಬೇಕೆಮದು ನಮ್ಮ ಪುತ್ರರಿಗೆ ಕೊಡುತ್ತೇವಲ್ಲಾ ಹಾಗೆಯೇ ಕೊಡುತ್ತೇನೆ. ಇದನ್ನು ತೆಗೆದುಕೊಂಡರೆ ನಮಗೆಖುಷಿ. ಇಲ್ಲದಿದ್ದರೆ ಖುಷಿಯಿಲ್ಲಾವೆಂದು ಹುಕುಂ ಆಗೋದು. ಮಹಾರಾಜ ಸಲಾಮ್ ತಮ್ಮ ಹುಕುಮಿಗೆ ಇತರ ನುಡಿಯುವುದಿಲ್ಲ. ಪರಂತು ನಮ್ಮ ಮನೋಗತ ಈ ವ್ಯಾಳ್ಯ ಅಂಬಾರಿ ಮುಂದೆ ತಮಗೆ ಜಯ ಸಂಪಾದಿಸಿಕೊಟ್ಟು ವೀರಸ್ವರ್ಗ ಮಾಡೋದು ಇದೆ. ಪರಂತು ಎರಡನೇಯ ಅರ್ಥವಿಲ್ಲವೆಂದು ಹೇಳಿದರು. ಮಹಾರಾಜಾ ರಾಜಾಸಾಹೇಬರು ಸಂತೋಷವಾಗಿ ಕಡೆ ತೋಡಾ ಶಹಲ್ ಜೋಡಿ ವಗೈರೆ ಕೊಟ್ಟು ಹುಕುಂ ಆದ್ದರಿಂದ ಯಥಾಪ್ರಕಾರ ತಮ್ಮ ಚಾಕ್ರಿಗೆ ಹೊರಟು ಹೋದರು."[೧೬೩]

ಬೀರವಣ

ಇದು ಬಹುಶಃ ವೀರರಾದವರಿಗೆ ನಿಯತಕಾಲಿಕವಾಗಿ ಮನ್ನಣೆಯ ರೂಪದಲ್ಲಿ ಸಲ್ಲುತ್ತಿದ್ದ ಹಣವೆಂದು ತೋರುತ್ತದೆ. ಈ ಬಗ್ಗೆ ಡಾ. ಎಂ. ಚಿದಾನಮದ ಮೂರ್ತಿಯವರು ಬರೆಯುತ್ತಾ "ಇದು 'ವೀರಪಣ'ವೇ ಅಥವಾ 'ವೀರವಣಿಕ್' ಎಂಬುದಕ್ಕೆ ಸಂಬಂಧಿಸಿದುದೇ ಹೇಳುವುದು ಕಷ್ಟ". ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.[೧೬೪] ಈ 'ಬೀರವಣ' ಮತ್ತು 'ವೀರವಣಿಕ್'ಗೂ ಪದಸಾಮ್ಯವಿದ್ದರೂ ಅರ್ಥಸಂಬಂಧ ಇರುವಂತೆ ಕಾಣುವುದಿಲ್ಲ. ಇದು ಬಹುಶಃ ಪ್ರತಿಷ್ಠಿತನಾದ ವೀರನಿಗೆ ಅರಸನೋ ಜನರೋ ನೀಡುತ್ತಿದ್ದ ಗೌರವಧನವಿದ್ದಿರಬೇಕೆಂದು ತೋರುತ್ತದೆ. ಕ್ರಿ.ಶ. ೧೧೪೭ರ ಒಂದು ಶಾಸದಲ್ಲಿ ಶೌರ್ಯಕ್ಕೆ, ಪರಾಕ್ರಮಕ್ಕೆ ಹೆಸರಾದ ನಾಚಿಸೆಟ್ಟಿ ಎಂಬುವನು ತನಗೆ ನಾಗವಾಡದವರು ಕೊಡುವ 'ಬೀರವಣ'ವನ್ನು ದೇವರಿಗೆ ದತ್ತಿಯನ್ನಾಗಿ ಬಿಟ್ಟ ವಿಷಯವಿದೆ.[೧೬೫] ಕ್ರಿ.ಶ. ೧೧೪೨ರ ಶಾಸನವೊಂದು ದೇವಧರ ದಂಡನಾಯಕ ಎಂಬುವನು ಮುಳುಗುಂದದ ಶ್ರೀ ಸ್ವಯಂಭು ಸೋಮೇಶ್ವರ ದೇವರ ನಂದಾದಿವಿಗೆಗೆ "ಮುಳುಗುಂದದ ತಳಒಕ್ಕಲೊಳಗೊಂದು ಮೂವಟೆಯ ಸಂನ್ನಾಯದಸುಂಕ"ವನ್ನೂ ಮತ್ತು "ಬೀರವಣ"ವನ್ನು ಕೊಟ್ಟನೆಂದು ತಿಳಿಸುತ್ತದೆ.[೧೬೬]

---

೧೬೩ ಹುಲ್ಲೂರು ಶ್ರೀನಿವಾಸ ಜೋಯಿಸ್ : ಚಿತ್ರದುರ್ಗದ ಬಖೈರು. ಪು. ೮೧–೮೩

೧೬೪ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೪೦೧

೧೬೫ Inscription in Northern Karnataka. (Ed. K.G. Kundankar) No. 8

೧೬೬ K. I. VI. 27, 1142

ಆದ್ದರಿಂದ ಇದು ವೀರನಾದವನಿಗೆ ನಿಯತಕಾಲಿಕವಾಗಿ ಬರುವ ಉತ್ಪನ್ನವಾದುದರಿಂದ ಇದರ ಮೇಲೆಯೂ ಸುಂಕವನ್ನು ವಿಧಿಸುತ್ತಿದ್ದರೆಂದು ಶಾಸನವೊಂದರಿಂದ ತಿಳಿಯುತ್ತದೆ. ಕ್ರಿ.ಶ. ೧೨೦೭ರ ಶಾಸನದಲ್ಲಿ ದೇವಧರನೆಂಬುವನು ಬಿಟ್ಟದತ್ತಿಯ ವಿವರಗಳನ್ನು ತಿಳಿಸುತ್ತಾ 'ಬೀರವಣ'ದಿಂದ ಬರುವ ಸುಂಕವೂ ದೇವಾಲಯಕ್ಕೆ ಸೇರಬೇಕು ಎಂಬುದಾಗಿ ತಿಳಿಸುತ್ತನೆ.[೧೬೭]

ಸತ್ತಿಗೆ ಮಾನ್ಯ

ಎರಡು ಮೂರು ಶಾಸನಗಳಲ್ಲಿ 'ಸತ್ತಿಗೆ ಕೊಡಿಗೆ' ಎಂಬ ಪಾರಿಭಾಷಿಕಪದಗಳು ದೊರೆಯುತ್ತವೆ. 'ಸತ್ತಿಗೆ' ಎಂಬ ಪಾರಿಭಾಷಿಕಪದಕ್ಕೆ 'ಛತ್ರಿ' ಎಂಬ ಅರ್ಥವುಂಟು. ವೀರರಾದವರಿಗೆ ದತ್ತಿಗಳನ್ನು ಮಾತ್ರವಲ್ಲದಲೆ ಕೆಲವೊಮ್ಮೆ ಕೆಲವಾರು ಗೌರವಗಳನ್ನು, ಬಿರುದಾವಳಿಗಳನ್ನು ಅರಸರು ನೀಡುತ್ತಿದ್ದರು. ಕ್ರಿ.ಶ. ೧೬೭೧ ರ ಒಂದು ಶಾಸನದಿಂದ, ಬೇಲೂರು ವೆಂಕಟಾದ್ರಿನಾಯಕರು 'ಲಿಂಗೆಗೌಡ' ಎಂಬುವನ "ಧೀರಶೂರತ್ವಕ್ಕೆ ಮೆಚ್ಚಿ ಛತ್ರಿಸೂರಿಪನಾ ಅಂದಲಾಹಿವೆ ಕುದುರೆವಂಟಿಕ ಬಹಳ ತಂಬಟಿಕಂ ಚಿನಮುರ್ಪ್ಪುಂ ಕಂಬಳಿಚ್ಚುಗೆ ನೆಲ್ಲಲ್ಲು ಸರ್ವಿಗಗ್ಗರಾ ಕರೀದಂಡೆಯಿಂದಾ ಬಿರ್ದಾವಳಿಗಳಂನ್ನು ಕೊಟ್ಟ" ವಿಷಯ ತಿಳಿಯುತ್ತದೆ.[೧೬೮] ಈ ಶಾಸನದಿಂದ ವೀರಕೃತ್ಯಗಳನ್ನು ಮಾಡಿದ ವೀರರಿಗೆ ಛತ್ರಿಯನ್ನು ಹಿಡಿದು ಹೋಗುವ ಗೌರವವನ್ನು ಅದನ್ನು ಪಾಲಿಸಿಕೊಂಡು ಬರುವ ಅವಕಾಶವನ್ನೂ ಅರಸರು ನೀಡುತ್ತಿದ್ದರೆಂದು ತಿಳಿಯುತ್ತದೆ. ಈ ರೀತಿ ಬಿರುದಾವಳಿಯೊಡನೆ ನೀಡಿದ ದತ್ತಿ ಅಥವಾ ಉಂಬಳಿಗೆ ಆ ಬಿರುದಿನ ಹೆಸರೂ ಬಂದಿರಬೇಕೆಂದು ತೋರುತ್ತದೆ. ಈ ಬಗ್ಗೆ ಎರಡು ಶಾಸನಗಳು ವಿಶೇಷವಾದ ಮಾಹಿತಿಯನ್ನು ನೀಡುತ್ತವೆ.

ಚವುಟಿ ಎಂಬ ಗ್ರಾಮವನ್ನು ಗೆಲ್ಲುವಲ್ಲಿ ಚವುಟಿ ಗ್ರಾಮದ ಬಸಪ್ಪ ಎಂಬುವನು ಅವನ "ಮಕ್ಕಳು ಮರಿಯಾಗಿ ಕಾದುಕಟ್ಟಿಕೊಂಡಿದ್ದ ಕಾರಣ" ದೇಸಾಯಿ ಗುತ್ತಲ ಲಚ್ಚಪಗೌಡರು ಬಸಪ್ಪನ "ಮೇಲಣ ದಯದಿಂದ ಚಿಕ್ಕಚವುಟಿಯಲಿ ಸತ್ತಿಗೆಮಾನ್ಯ ಅಯಿದುವರಹಾನ ಹೊಲ ಪಾಲಿಸಿಕೊಟ್ಟು ಅದನ್ನು ಬಸಪ್ಪನ ಮಕ್ಕಳ ಪಾರಂಪಾರಿಯಾಗಿ" ಅನುಭವಿಸಿಕೊಂಡು ಬರಬೇಕೆಂದು ಕೋರುತ್ತಾನೆ. ಈ ವಿಷಯ ಸೊರಬತಾಲ್ಲೂಕಿನ ಒಂದು ಶಾಸನದಿಂದ ತಿಳಿದುಬರುತ್ತದೆ[೧೬೯] ಇದೇ ರೀತಿ

---

೧೬೭ K. I. V. 31, 1207
೧೬೮ E. C. V. Mj. 10, 1671
೧೬೯ M. A. R.1928. 89

ಚೆನ್ನರಾಯಪಟ್ಟಣ ತಾಲ್ಲೂಕಿನ ಒಂದು ಶಾಸನದಿಮದ "ಶ್ರೀಮತು ಅಣತಿ ತಿರುಮಲನಾಯಕರು ಸುರುನಕಗಟ್ಟದ ಮಾಡಿಯಗಂಡ ಮಲ್ಲೋಡೇರಿಗೆ ಬಿಸಲಹಳ್ಳಿಯ ಗದ್ದೆ ಬೆದ್ದಲನು ಸತ್ತಿಗೆಕೊಡಗಿ"ಯಾಗಿ ದಯಪಾಲಿಸಿದ ವಿಷಯ ತಿಳಿದುಬರುತ್ತದೆ.[೧೭೦]

ಯುದ್ಧ ಸಮಯದಲ್ಲಿ ವೀರರಿಗೆ ನೀಡುತ್ತಿದದ ದತ್ತಿ, ಬಹುಮಾನ ಉಡುಗೊರೆಗಳು

ಯುದ್ಧಸಮಯದಲ್ಲಿ ಯೋಧರಿಗೆ ಹೋರಾಡಲು ಹುರುಪು ದೊರೆಯುವಂತೆ ಹಲವು ರೀತಿಯ ಮನ್ನಣೆಗಲನ್ನು ನೀಡುತ್ತಿದ್ದರೆಂದು ಪ್ರವಾಸಿಗಳ ಪ್ರವಾಸಕಥನಗಳಿಂದಲೂ, ಬಖೈರುಗಳಿಂದಲೂ, ಕುಮಾರ ರಾಮನಸಾಂಗತ್ಯದಿಂದಲೂ ತಿಳಿದು ಬರುತ್ತದೆ. ಅವುಗಳನ್ನು ಸ್ಥೂಲವಾಗಿ ಪರಿಚಯಮಾಡಿಕೊಂಡು ವೀರಗಲ್ಲುಗಳ ಪಾಠದಿಂದ ಈ ಬಗ್ಗೆ ದೊರೆಯುವ ಮಾಹಿತಿಗಳನ್ನು ಪರಿಶೀಲಿಸೋಣ.

ನ್ಯೂನಿಜ್ ತನ್ನ ಪ್ರವಾಸಕಾಲದಲ್ಲಿ ತಾನು ಕಂಡ ಯುದ್ಧವನ್ನು ವರ್ಣಿಸುತ್ತಾ "ರಾಚೋಲ್‌ಕೋಟೆಯೊಳಗೆ ಈ ಮುತ್ತಿಗೆಯನ್ನು ಎದುರಿಸಲು ಸಿದ್ಧರಾಗಿದ್ದ ಯೋಧರು ಫಿರಂಗಿ ಗುಂಡುಗಳನ್ನು ಹಾರಿಸಿ, ಕೋವಿಗಳಿಂದ ಮದ್ದುಹೊಡೆದು ಬಾಣಗಳನ್ನು ಬಿಲ್ಲುಗಳಿಂದ ಎಸೆದು, ಕೃಷ್ಣರಾಯನ ಸೈನ್ಯದ ಅನೇಕ ಜನರನ್ನು ಆಹುತಿ ತೆಗೆದುಕೊಂಡರು. ಅಧೈರ್ಯದಿಂದ ರಾಯನ ಸೈನ್ಯ ಹಿಮ್ಮೆಟ್ಟಲಾರಂಭಿಸಿತು. ಆಗ ಒಂದು ಉಪಾಯ ಮಾಡಿದರು. ಕೋಟೆಯ ಕಲ್ಲು ಕಿತ್ತು ತಂದವರಿಗೆ ಕಲ್ಲಿನ ಮೇಲೆ ಹತ್ತರಿಂದ ಇಪ್ಪತ್ತು ಪನಂಗಳಷ್ಟು ಹಣಕೊಟ್ಟು ಪ್ರೋತ್ಸಾಹಿಸಿದರು. ಇದರಿಂದ ಹುರುಪುಗೊಂಡ ಸೈನಿಕರು ದಿನೇ ದಿನೇ ಕೋಟೆಯ ಕಲ್ಲುಗಳನ್ನು ಕಿತ್ತು ಸಡಿಲಮಾಡಲಾರಂಭಿಸಿದರು. ಕೋಟೆಯ ಬುಡದಲ್ಲಿ ಸತ್ತವರನ್ನು ಎಳೆದುಕೊಂಡು ಬರಲು ಬಹುಮಾನ ಕೊಟ್ಟರು" ಎಂಬುದಾಗಿ ತಿಳಿಸುತ್ತಾನೆ.[೧೭೧] ಕಂಪಿಲನು ಯುದ್ಧರಂಗದಲ್ಲಿ ಸೈನಿಕರನ್ನು ಪ್ರಚೋದಿಸುವ ಸಲುವಾಗಿ, ಅವರಿಗೆ ಬಂಗಾರದ ಪಟ್ಟಿಗಳನ್ನು ನೀಡುವುದಾಗಿಯೂ, ಜೀವಿತವನ್ನು ಹೆಚ್ಚಿಸುವುದಾಗಿಯೂ ತಿಳಿಸುತ್ತಾನೆ.[೧೭೨] "ಯುದ್ಧಕಾಲದಲ್ಲಿ ಭಟರಿಗೂ ಸೇನಾನಾಯಕರಿಗೂ

೧೭೦ E. C. V. Cn. 225,

೧೭೧ ಎಚ್. ಎಲ್. ನಾಗೇಗೌಡ : ಪ್ರವಾಸಿಕಂಡ ಇಂಡಿಯಾ, ಭಾ.೩, ಪು.೩೩೪

೧೭೨ ನಂಜುಂಡ : ರಾಮನಾಥ ಚರಿತೆ. ಭಾ.೩, ಆ.೧೦, ಸಂ.೩, ಪು.೯೭
"ಕೊಡುವೆ ಬಂಗಾರಪಟ್ಟಿಗಳ ಜೀವಿತವನು
ಚಡಿತವ ಹೆಚ್ಚಿಪೆನೆಂದು ।

ಚಿತ್ರದುರ್ಗದವರು ಇನಾಮು ಕೊಡುತ್ತಾ ಇದ್ದರು. ಇನಾಮು ಜನರಿಗೆ ಹೆಚ್ಚಾದ ಧೈರ್ಯವನ್ನು, ಮುಂದುವರಿದೇನೆಂಬ ಮನಸ್ಸನ್ನು ಹುಟ್ಟಿಸುತ್ತಲಿತ್ತು. ಇಂಥಾ ಉತ್ತೇಜನಕ್ಕೆ ಆಶೆ ಬಿದ್ದು ಸ್ವದೇಶದ ವಿಶಿಷ್ಟ ಬೇಡರೂ ಅಲ್ಲದೆ ದೇಶಾಂತರದಿಂದ ಮರಾಟೆಯವರು, ರಜಪೂತರು, ರೋಹಿಲೆಯವರು, ತುರುಕರು, ಪೊಂಭಯ್ಯ ಜನರು ಬಂದು ಬಂದು ದುರ್ಗದ ಸೇನೆಗೆ ಸೇರಿಕೊಳ್ಳುತ್ತಿದ್ದರು".[೧೭೩] ಅವರು ಯಾವ ರೀತಿ ಯುದ್ಧ ಭೂಮಿಯಲ್ಲಿ ಸೈನಿಕರನ್ನು ಪ್ರಚೋದಿಸುತ್ತಿದ್ದರು ಎಂಬ ಅಂಶ ಚಿತ್ರದುರ್ಗ ಬಖೈರಿನಿಂದ ಸ್ಪಷ್ಟವಾಗುತ್ತದೆ.

ಒಂದು ಯುದ್ಧದ ಪ್ರಾರಂಭದಲ್ಲಿ. "ರಾಜಾ ಸಾಹೇಬರು ಖುಷಿಯಾಗಿ ಸರ್ವರಿಗೂ ಯೋಗ್ಯ ತಾನು ಸಾರ ಕಡೆ, ತೋಡೆ, ವಸ್ತ್ರ ವಗ್ಗೆರೆ ಇನಾಂ, ಏಕನಾಂ ಕೊಟ್ಟು ಅವರಿಗೆ ಹುಕುಂ ಆದದ್ದು. ಲಡಾಯದಲ್ಲಿ ಸ್ವರ್ಗಸ್ಥರಾದಂಥವರ ಹೆಂಡಿರುಮಕ್ಕಳಿಗೆ ಧರ್ಮಮಾಡಿ ಯಿಡುತ್ತೇವೆ. ಕುದುರೆ ಬಿದ್ದರೆ ಕುದುರೆ ಕೊಡುತ್ತೇವೆ. ಶಿವಾಯಿ ಶತ್ರು ಜನರ ತಲೆಯನ್ನು ಕುಯಿದು ತಂದವರಿಗೆ ದುರ್ಗಿ ಐದುವರಹ ಕೊಡುತ್ತೇವೆ. ಲಡಾಯದಲ್ಲಿ ಗೋಲಿಯಿಂದ ಹೊಡೆದವರಿಗೆ ಐದು ರೂಪಾಯಿ, ಖಿಲ್ಲೇದ ಮೇಲಿಂದ ಗೋಲಿ ಹೊಡೆದವರಿಗೆ ಒಂದು ರೂಪಾಯಿ, ಭಾಲೆಯಿಂದ, ಭರ್ಜಿಯಿಂದ, ಕತ್ತಿಯಿಂದ ಹೊಡೆದವರಿಗೆ ಕಾಲುಗಗ್ಗರ, ತೋಡ, ಜೋಮಾಲೆ ವಗ್ಗೆರೆ ಕೊಡುತ್ತೇವೆ. ಈ ಮೇರೆಗೆ ಪೌಜಿನ ಖಾತರ ತಸಲೀ ಮಾಡಿ ಖುಷಿ ಮಾಡಿದರು." ಎಂಬ ವಿವರಣೆ ಬಖೈರಿನಿಂದ ದೊರೆಯುತ್ತದೆ.[೧೭೪]

ನುಡಿದು ಮೊಗವನೋಡಿ ಹರಿಯಬಿಟ್ಟನು ಮಂತ್ರಿ
ಕಡುಗಲಿಗಳನು ಕಗ್ಗೊಲೆಗೆ
ಇಚೆದ ಭಂಟರಿಗೆ ಬಂಗಾರದಟ್ಟಿಯನುಡು ।
ಗೊಜೆಗೊಟ್ಟು ವೀಳೆಯವೆರಸು
ನೆಜೆ ಸನ್ಮಾನಿಸಿ ಕಳುಸಿದನಲಾ ನೆಲ
ದೆಜೆಯ ಸಂತಸ ಕೈಮಿಗಲು ॥ ೧೨೮ ॥
ಅದೇ : ಆ. ೧೧. ಸಂ. ೩ ಪ. ೮
ಇಚೆದ ಭಂಟರಿಗೆ ಕೊಡೆಂದು ಭಂಗಾರದ
ಹೊಜೆಗಳನಾ ಕಂಪಿಲನು ।
ತಜೆಸಿ ಕೊಟ್ಟನು ಮಗನಿಗೆ ಮನದಕ್ಕಜು
ಪೊಜಿ ಸೂಸುತಿರೆ ಕಣ್ಗಳೊಳಗೆ

೧೭೩ ಎಂ.ಎಸ್. ಪುಟ್ಟಣ್ಣ : ಪಾಳೆಯಗಾರರು ಐದು ಉಪನ್ಯಾಸಗಳು. ಪು. ೫೦

೧೭೪ ಹಲ್ಲೂರು ಶ್ರೀನಿವಾಸ ಜೋಯಿಸ್ : ಚಿತ್ರದುರ್ಗದ ಬಖೈರು. ಪು. ೭೧

ಮೇಲೆ ಗಮನಿಸಿರುವಷ್ಟು ಸ್ಪಷ್ಟವಾದ ಉದಾಹರಣೆಗಳು ಶಾಸನಗಳಿಂದ ದೊರೆಯುವುದು ಕಡಿಮೆ ಕ್ರಿ.ಶ. ೧೧೧೬ ರ ಒಂದು ಶಾಸನದಿಂದ "ಮಾಚಣ ಎಂಬ ಲೆಂಕನ್ನು ತನ್ನ ಸಾವಿನ ನಂತರ ತನ್ನ ಮನೆಯ ಇಬ್ಬರ ಜೀವನೋಪಾಯಕ್ಕೆ ಪಡೆವಳನಿಂದ ಮಾತು ತೆಗೆದುಕೊಂಡು ಹೋರಾಡಿ ಮಡಿಯುತ್ತಾನೆ" ಎಂಬ ವಿಷಯ ತಿಳಿಯುತ್ತದೆ.[೧೭೫] ಕ್ರಿ.ಶ. ೧೧೭೧ ರ ಮತ್ತೊಂದು ವೀರಗಲ್ಲಿನಿಂದ ಕೊಂಗಾಳ್ವನ ಮೇಲೆ ಹೊಯ್ಸಳ ಅರಸು. ಬಂದು ಮುತ್ತಿದಾಗ 'ಕೊಂಗಾಳ್ವ ದೇವನ ಬೆಸದಿಂ' ಯುದ್ಧದಲ್ಲಿ ತಮ್ಮಡಿಯ ರುದ್ರ ಎಂಬುವನು ಹೋರಾಡುತ್ತಾನೆ. ಅವನಿಗೆ ಬಿಟ್ಟದತ್ತಿಯ ವಿಷಯವನ್ನು ಆ ಶಾಸನ ಹೀಗೆ ತಿಳಿಸುತ್ತದೆ.[೧೭೬] "ರುದ್ರೆಯೆನು..... ಕೊಂಗಾಳ್ವ ದೇವನ ಬೆಸದಿಂ ಪರಮಮಡಳವನಿಱುದು ಮೆಚ್ಚಿಸಿ ಶ್ರೀ ಕಾಮರದತ್ತಿಯ ಕೋಟೆಹಾಳಂ ಧಾರಾಪೂರ್ವಕಂ ಮಾಡಿಸಿಕೊಂಡು ತಲೆಗೊಟ್ಟು ಹಡೆದ ಭೂಮಿ" – ಈ ಪಾಠವನ್ನು ಗಮನಿಸಿದರೆ ಈ ದತ್ತಿಯನ್ನು ಯುದ್ಧದ ಸಮಯದಲ್ಲಿ ಸ್ವತಃ ರುದ್ರ ತಾನೇ ಕೊಂಗಾಳ್ವನಿಂದ ಪಡೆದಿರಬೇಕೆಂದು ತೋರುತ್ತದೆ.[೧೭೭]

ಯುದ್ಧದ ನಂತರದಲ್ಲಿ ಕೊಡುತ್ತಿದ್ದ ದತ್ತಿ

ಯುದ್ಧದಲ್ಲಿ ವಿಜಯವನ್ನು ಸಂಪಾದಿಸುತ್ತಿದ್ದ ರಾಜನು, ತನ್ನ ವಿಜಯಕ್ಕೆ ಕಾರಣರಾದ ವೀರರನ್ನು ಪುರಸ್ಕರಿಸುತ್ತಿದ್ದನು. ಈ ರೀತಿಯ ಪುರಸ್ಕಾರ, ಮನ್ನಣೆಯನ್ನು ನೀಡುವುದರ ಮೂಲಕ ವೀರರಾದವರಿಗೆ ಅರಸನಲ್ಲಿ ಭರವಸೆ ಮೂಡುತ್ತದೆ. ಅರಸರು ಯುದ್ಧದಲ್ಲಿ ಸಂಪಾದಿಸಿದ ಸಂಪತ್ತನ್ನು ವೀರರ ಯೋಗ್ಯತಾನುಸಾರ ಅವರಿಗೆ ಹಂಚುತ್ತಿದ್ದರು. ಯುದ್ಧದಲ್ಲಿ ಗೆದ್ದ ಶತ್ರುರಾಜನ ಪಟ್ಟದ ಕುದುರೆ, ಆನೆ ಮುಂತಾದವುಗಳನ್ನು ಯಾವ ಸೈನಿಕನೇ ವಶಪಡಿಸಿಕೊಂಡಿದ್ದರೂ ಅವುಗಳನ್ನು ಅರಸನಿಗೆ ಒಪ್ಪಿಸಬೇಕೆಮಬ ನಿಯಮವನ್ನು ಭಾರತೀಯ ಧರ್ಮ ಶಾಸ್ತ್ರಗಳು ಹಾಕಿರುವುದನ್ನು ಗಮನಿಸಬಹುದು.[೧೭೮]

ಕನ್ನಡದಲ್ಲಿ ಉಪಲಬ್ಧವಿರುವ ಅತ್ಯಂತ ಪ್ರಾಚೀನ ಶಾಸನದ ಹಲ್ಮಿಡಿ ಶಾಸನದಿಂದಲೂ ಹೋರಾಟದಲ್ಲಿ ಗೆದ್ದ ವೀರನ್ನು ಅರಸರು ಹೇಗೆ ಸತ್ಕರಿಸುತ್ತಿದ್ದರು ಎಂಬ ವಿಷಯ ತಿಳಿಯುತ್ತದೆ.[೧೭೯]

---

೧೭೫ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೯

೧೭೬ E. C. XV. HI. 90

೧೭೭ ಅದೇ.

೧೭೮ P.V. Kane : History of Dharmasastras. Vol III. ಪು. ೨೧೨

೧೭೯ M. A. R.1936. 16, 450

ಪ್ರಾಚೀನ ಕರ್ನಾಟಕದಲ್ಲಿ, ಗೆದ್ದ ಅರಸರು ತಮಗೆ ನೆರವು ನೀಡಿದ ವೀರರಿಗೆ ದತ್ತಿಯನ್ನು ಕೊಡುತ್ತಿದ್ದ ವಿಷಯ ಶಾಸನಗಳಿಂದ ಅಲ್ಲದ ಇತರ ಆಧಾರಗಳಿಂದಲೂ ತಿಳಿಯುತ್ತದೆ. ಲಿಂಗಣ್ಣಕವಿಯ ಕೆಳದಿನೃಪ ವಿಜಯದಿಂದ ಯುದ್ಧದಲ್ಲಿ ಜಯವನ್ನು ಸಂಪಾದಿಸಿದ ವೀರರಿಗೆ ಅರಸರು ನೀಡುತ್ತಿದ್ದ ಗೌರವದ ಸಂದರ್ಭಗಳ ವರ್ಣನೆ ದೊರೆಯುತ್ತದೆ. ತನ್ನ ಪರವಾಗಿ ಹೋರಾಡಿದ ಕೆಳದಿಯ ಚೌಡಪ್ಪನನ್ನು ಕಂಡ ವಿಜಯನಗರದ ಅರಸು ಕೃಷ್ಣದೇವರಾಯನು "ಅತ್ಯಂತ ಪ್ರಮುದಿತ ಮಾನಸನಾಗಿ ಚೌಡಪ ಭದ್ರಪರನಾಲಿಂಗನಂ ಗೈದು ಮನ್ನಿಸಿ ಹತ್ತೆ ಕುಳ್ಳಿರಿಸಿಕೊಂಡು ಸಂಗ್ರಾಮ ವೃತ್ತಾಂತಮಂ ಮರಳ್ದು ಮರಳ್ದು ಕೇಳ್ದು ಪೆಂಪುಳಿಯ ಪಟತರ ಪರಾಕ್ರಮ ಶಾಲಿಗಳಪ್ಪಿನವರನಿನ್ನು ಪೆರ್ಚಿಸಿ ತುಷ್ಟರ್ಗಲ ಗಣಸಾಗಿ ನಿಲಿಸಲ್ವೇಳ್ಕೆಂದು ಮನದಂದು ತದುಚಿತ ಮಾದ ತೊಡವುಡುಗೊರೆ ತಾಂಬೂಲಂಗಳುಮನಿತ್ತಾದರಿಸಿ ಚಾಮಿಾಕರಿಸಿ ಲಾಂಛನ ಲಾಂಛಿತಮಾದ ನೆಗಳ್ವಾಯಿಗಳಂ ವಿರಾಜಿಸುತ್ತಿರ್ಪ ಪೊಸಪಲ್ಲಕ್ಕಿಯಿಕ್ಕಿ ನಿಜ ನಿವಾಸಕ್ಕೆ ಕಳುಪಿ" ಮುಂತಾದ ವರ್ಣನೆ ಈ ಕಾವ್ಯದಲ್ಲಿ ಬರುತ್ತದೆ. ತಾನು ರಣರಂಗದಲ್ಲಿಲ್ಲದಿದ್ದರೂ ತನ್ನ ಮೇಲಿನ ಭಕ್ತಿಯಿಂದ ಅಭಿಮಾನದಿಂದ ಹೋರಾಡಿದ ವೀರನನ್ನು ಅರಸನಾದವನು ತನ್ನ ಹತ್ತಿರದಲ್ಲಿ ಕುಳ್ಳಿರಿಸಿಕೊಂಡು, ಅವನ ಪರಾಕ್ರಮವನ್ನು ಮತ್ತೆ ಮತ್ತೆ ಕೇಳುತ್ತಾನೆ, ಎಂದರೆ ಅದು ವೀರನಾದವನಿಗೆ ಹೆಮ್ಮೆಯ ವಿಷಯ ಮತ್ತು ಅದು ತನ್ನ ಪರಾಕ್ರಮವನ್ನು ಅರಸನು ಗುರುತಿಸಿ ಪುರಸ್ಕರಿಸುವ ಗೌರವದ ವಿಷಯವೆಂದು ಭಾವಿಸುತ್ತಾನೆ.[೧೮೦]

ಇದೇ ರೀತಿ ಸಂಕಣ್ಣನಾಯಕನನ್ನು ವಿಜಯನಗರದ ಅರಸನು ಗೌರವಿಸಿದ ಪ್ರಸಂಗವನ್ನು ಲಿಂಗಣ್ಣನು ಈ ರೀತಿ ನೀಡುತ್ತಾನೆ. "ಇಂತು ಗೋವೆಯ ಗಡಮಂ ಕೊಂಡು ಮರಳ್ದೊಡನಾ ಸಂಕಣನಾಯಕಂ ರಾಯರಂ ಕಾಣಲತ್ಯಂತ ಪ್ರಮುದಿತ ಮಾನಸರಾಗಿ ಮಾಳೇನಹಳ್ಳಿ ಹೋಬಳಿಯನುಚಿತಮಾಗಿತ್ತುಷ್ಯರತ್ನಾಭರಣಾಂ ಬರ ತಾಂಬೂಲಮಂ ಭುಜಕೀರ್ತಿ ಮುಂತಾದ ಬಿರುದುಗಳುಮಂ ತತ್ಪುತ್ತರ್ಗುಚಿತಮಾದುಡುಗೊರೆ ವೀಳ್ಯಂಗಳುಮನಿತ್ತಾದರಿಸಿ ಬೀಳ್ಕೊಡಲಪ್ಪಣೆ ಗೊಂಡತ್ಯಂತ ಹರ್ಷ"ದಿಂದ ಇಕ್ಕೇರಿಗೆ ಬರುತ್ತಾನೆ.[೧೮೧]

ಮೇಲೆ ಗಮನಿಸಿದ ಪ್ರಸಂಗಗಳು. ಕರ್ನಾಟಕದ ಬಹು ದೊಡ್ಡ ಸಾಮ್ರಾಜ್ಯವಾಗಿದ್ದ ವಿಜಯನಗರದ ಅರಸರು ತಮ್ಮ ಪರವಾಗಿ ಹೋರಾಡಿದ ಪ್ರತಿಷ್ಠಿತ ವೀರನಾಯಕರಿಗೆ ಮಾಡಿದ ಸತ್ಕಾರ, ಮನ್ನಣೆಗಳ ನಿದರ್ಶನಗಳಾಗಿವೆ. ಇದೇ ರೀತಿ ಯುದ್ಧದಲ್ಲಿ ಹೋರಾಡಿ ಮಡಿದ ಎಲ್ಲಾ ವೀರರಿಗೂ ಸತ್ಕಾರ ಮಾಡುತ್ತಿದ್ದರೆಮದು ಭಾವಿಸಲಾಗದು. ಸೈನ್ಯದ ಸಂಖ್ಯೆ ಎಷ್ಟೆಂಬುದನ್ನು

---

೧೮೦ ಲಿಂಗಣ್ಣ ಕವಿ : ಕೆಳದಿ ನೃಪವಿಜಯ ಪ್ರಥಮಾಶ್ವಾಸ.

೧೮೧ ಅದೇ. ಆ. ೩. ಪು. ೪೬

ಊಹಿಸಿಕೊಂಡಾಗ ಅದು ದುಸ್ಸಾಧ್ಯವಾದ ಕೆಲಸವೆಂದು ತೋರುತ್ತದೆ. ಅವರವರ ಸ್ಥಾನವನ್ನು ಗಮನಿಸಿ, ಅವರ ಮೇಲಿನವರು ತಮ್ಮ ಕೆಳಗಿನವರಿಗೆ ಸತ್ಕಾರ ಮಾಡುತ್ತಿದ್ದರು. ಇದು ಆಡಳಿತದ ಸೂತ್ರವು ಆಗಿತ್ತೆಂದು ತೋರುತ್ತದೆ. ಚಿತ್ರದುರ್ಗದ ಬಖೈರಿನಲ್ಲಿ, ಚಿತ್ರದುರ್ಗದ ಪಾಳೆಯಗಾರರು ವೀರರಾದವರಿಗೆ ಸತ್ಕಾರ ಮಾಡುತ್ತಿದ್ದ ವಿವರಣೆ ಬರುತ್ತದೆ.[೧೮೨] ಹಲವಾರು ದೃಷ್ಟಿಗಳಿಂದ ಅದು ಗಮನಾರ್ಹವೂ ಆಗಿದೆ. ಯುದ್ಧಾನಂತರದಲ್ಲಿ "ರಾಜಾ ಸಾಹೇಬರು ಸಭಾ ಪ್ರವೇಶ ಮಾಡಿ ಸಿಂಹಾಸನಾರೂಢರಾದರು. ಆಗ ದರೋಬಸ್ತು ಅಹಲೇಕಾರರು ಮಾನ ಸುಭೇದಾರರು, ವಾಣಿ ವರ್ತಕರು ತಂದಿ ನಜರ್ ಕಬೂಲ ಮಾಡಿ ಬ್ರಾಹ್ಮಣರಿಗೆ ಹತ್ತು ಸಾವಿರ ರೂಪಾಯಿ ಧರ್ಮ ಮಾಡಿದರು. ಬ್ರಾಹ್ಮಣರ ಆಶೀರ್ವಾದ ಮಂತ್ರಾಕ್ಷತಾ ಶಿರಸಾವಹಿಸಿ ತೆಗೆದುಕೊಮಡರು. ಲಡಾಯದಲ್ಲಿ ಮೆಹನತ್ತು ಮಾಡಿದ ಜನಗಳಿಗೆ ಇನಾಮು, ಎಕನಾಮು, ಬಡೆ ತೋಡೆ, ಜೋಮಾಲೆ ಸರ, ಕುರಾ ಕಾಲುಗಗ್ಗರ, ವಸ್ತ್ರ ಪಾತ್ರೆ ವಗೈರೆ ಸರುಫರಾಜು ಮಾಡಿಕೊಟ್ಟರು. ಜಖಮೀ ಜನಗಳಿಗೆ ಜಖಂ ಪಟ್ಟಿಗೆ ಹುಕುಂ ಮಾಡಿದರು. ಲಡಾಯದಲ್ಲಿ ಸ್ವರ್ಗಸ್ಥರಾದ ಜನಗಳಿಗೆ ಹೆಂಗಸರು ಮಕ್ಕಳು ಇದ್ದವರಿಗೆ ವಿಚಾರಣೆ ಮಾಡಿ ಅವರವರ ಯೋಗ್ಯತಾನುಸಾರ ಬತರಾಂ ಮೊಕರೂರ ಮಾಡಿಕೊಟ್ಟರು. ಈ ಪ್ರಕಾರ ದರೋಬಸ್ತು ಪೌಜಿಗೂ ಸಂತೋಷ ಮಾಡಿ ರಾಜಾ ಸಾಹೇಬರು ಮಹಲಿಗೆ ಹೊರಟರು." ಈ ವಿವರಣೆಯಿಂದ ಯುದ್ಧದಲ್ಲಿ ಹೋರಾಡಿದ ವೀರರಿಗೆ ಅವರವರ ಯೋಗ್ಯತಾನುಸಾರ ಅಂದರೆ ಅವರಿಗೆ ದೈಹಿಕವಾಗಿ ಆಗಿರುವ ಅಂಗವಿಕಲತೆ ಸಾವು ಮುಂತಾದವುಗಳನ್ನು ಅನುಸರಿಸಿ ಗೌರವಿಸುತ್ತಿದ್ದರು ಎನ್ನುವ ವಿಚಾರ ತಿಳಿಯುತ್ತದೆ.

"ಯುದ್ಧದಲ್ಲಿ ಗೆದ್ದು ಬಂದು ಅನೇಕ ವೀರರಿಗೆ ಬಿರುದುಗಳನ್ನು ಕೊಟ್ಟು ಸನ್ಮಾನಿಸುತ್ತಿದ್ದರು. ಉದಾಹರಣೆಗೆ ಪಂಚಮ ಮಾರಾಯ ಎಂಬಾತನು ಹನಸೋಗೆಯ ಯುದ್ಧದಲ್ಲಿ ಅನೇಕರನ್ನು ಕೊಂದು ಹಾಕಿದ್ದಕ್ಕೆ ಚೋಳ ರಾಜನು ಬಹುವಾಗಿ ಮೆಚ್ಚಿ ಅವನಿಗೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂದು ಪಟ್ಟವನ್ನು ಕಟ್ಟಿ ಮಲಂಬಿ ಎಂಬ ಊರನ್ನು ದತ್ತಿಯಾಗಿ ಬಿಟ್ಟು ಕೊಟ್ಟ ವಿಷಯವು ಶಾಸನವೊಂದರಲ್ಲಿದೆ."[೧೮೩]

ಕ್ರಿ.ಶ. ೧೨೩೩ ರ ಒಂದು ಶಾಸನದಿಂದ "ಕಾಡವರಾಯನ ಕಿಡಿಸಿ ಚೋಳನ ಬಿಡಿಸಿ" ಬಲ್ಲೆಯ ನಾಯಕನೆಂಬುವನು ತಂದು ಒಪ್ಪಿಸಿದಾಗ, ಈ ವಿಷಯವನ್ನು ಅಪ್ಪಯ್ಯದಂಡ ನಾಯಕ ಮತ್ತು ಗೋಪಯ್ಯ ದಣ್ಣಾಯಕರು ಹೊಯ್ಸಳ ವೀರನಾರಸಿಂಹ ದೇವನಿಗೆ ಬಿನ್ನಹ ಮಾಡಲು ಬಲ್ಲೆಯನ ಈ ಪರಾಕ್ರಮವನ್ನು ಕೇಳಿ ಮೆಚ್ಚಿ "ದಂಡಿನ ಸಿರಿವರ ಅರಕೆಜ಼ ವಿತ್ತಿಯಂ ಕೊಡಗೆ

೧೮೨ ಹುಲ್ಲೂರು ಶ್ರೀನಿವಾಸ ಜೋಯಿಸ್ : ಚಿತ್ರದುರ್ಗದ ಬಖೈರು. ಪು. ೩೧
೧೮೩ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೩

ಯಾಗಿ" ಕರುಣಿಸುತ್ತಾನೆ. ಆ ಶಾಸನ ಮುಂದುವರಿದು ಬಲ್ಲೆಯ ನಾಯಕನನ್ನು ಹೊಗಳುತ್ತಾ "ಕೊಡಗಿ ಕುಲವ್ರಿತ್ತಿಯೆಂದುಳ್ದೊಡವೆಯ ತೆತ್ತಿಂತು ಪಡೆವ ನಾಯಕರ್ಣೆಯೇ ನಡೆಗಿಡಿಸಿ ಚೋಳನ ಪಾಂಡ್ಯನ ಪಡೆಯಂ ಗೆಲ್ದ ಬಲ್ಲಾಳಗಾಂಪ ಗಂಡರುಮೊಳರೇ ॥ ವಚನ ॥ ಅಂತು ಕೊಡಗಿ ಮಾನ್ಯಮಗಳಂ ವೀರ ವೃತ್ತಿಯಿಂ ಪಲವಂ ಪಡೆದು ವೀರ ಮುಷ್ಟಿಯಿಂ ಕೊಂಡಂತೆ ಕೊಂಡು" ಎಂಬುದಾಗಿ ತಿಳಿಸುತ್ತದೆ.[೧೮೪] ಈ ಶಾಸನದಿಂದ ತನ್ನ ಪರವಾಗಿ ಹೋರಾಡಿದ ವೀರರಿಗೆ ಹೊಸ ದತ್ತಿಗಳನ್ನು ಕೊಡುವುದರ ಬದಲು ಕೆಲವೊಮ್ಮೆ, ವೀರನಾದನು ಈ ಹಿಂದೆಯೇ ಪಡೆದಿದ್ದ ದತ್ತಿಗೆ ಕೆಲವಾರು ರೀತಿಯ ವಿಶೇಷ ರಿಯಾಯಿತಿಗಳನ್ನು ನೀಡುವುದರ ಮೂಲಕವೂ ಅವನ ಸೇವೆಯನ್ನು ಮನ್ನಿಸುತ್ತಿದ್ದಿರಬಹುದೆಂದು ತೋರುತ್ತದೆ. ಅಂದರೆ ದಂಡಿನ ಸಿವರ ಅರಕೆಜೆಯನ್ನು ಕುಲವ್ರಿತ್ತಿಯಾಗಿ ಪಡೆದಿದ್ದ ಕಾರಣ ಇದೇ ವ್ರಿತ್ತಿಯನ್ನು ಹೊಯ್ಸಳ ನಾರಸಿಂಹನು ಕೊಡುಗೆಯಾಗಿ ಕೊಡುತ್ತಾನೆ. ಇಲ್ಲಿ ನಾವು 'ವ್ರಿತ್ತಿ'ಗೂ 'ಕೊಡಿಗೆ'ಗೂ ಇರುವ, ಇದ್ದ ವ್ಯತ್ಯಾಸವನ್ನು ಬಹುಶಃ ಹೀಗೆ ಗುರುತಿಸಬಹುದೆಂದು ತೋರುತ್ತದೆ : 'ವ್ರಿತ್ತಿ' ಎಂದರೆ ಅರಸನ ಕೈ ಕೆಳೆ ಅವನ ಅಧೀನದಲ್ಲಿ ಕೆಳಗಿನವರು ಆಳುವ ಪ್ರದೇಶವಷ್ಟೆ. ಇದರ ಮೇಲೆ ಅರಸನದೇ ಪೂರ್ಣಾಧಿಕಾರ. 'ಕೊಡಿಗಿ' ಎಂದರೆ ಅರಸನಾದವನು ವೀರನಾದವನ ಪರಾಕ್ರಮವನ್ನು ಮೆಚ್ಚಿ ಕೊಟ್ಟದ್ದು. ಆದ್ದರಿಂದ, ಇದು ವೀರನ ಸ್ವಂತ ಆಸ್ತಿಯೇ ಆಗುತ್ತದೆ.

ಆಯುಧ ಜೀವಿಗಳ ಸಂಘ

'ಬಂಟ ಸಾಸಿರ್ವರು' – ಎಂಬ ಪಾರಿಭಾಷಿಕ ಪದವನ್ನು ಡಾ. ಆರ್. ಎನ್. ಗುರುವ ಅವರು ಆಯುಧ ಜೀವಿಗಳ ಸಂಘವೆಂದು ವ್ಯಾಖ್ಯಾನಿಸುತ್ತಾರೆ. ಇದೇ ತೆರನ ಮತ್ತೆರಡು ಆಯುಧ ಜೀವಿಗಳ ಸಂಘಗಳನ್ನು ಅವರು ಗುರುತಿಸುತ್ತಾರೆ. (ಲೆಂಕಸಾರ್ಸಿವರು ಮತ್ತು ಬಿಲ್ಲಮುನ್ನೂರ್ವರು). ಈ ಸಂಘ (ಬಂಟ ಸಾರ್ಸಿವರು)ದವರು "ತಾವು ನೆಲಸಿದ್ದ ಗ್ರಾಮದ ಮೇಲೆ ಧಾಳಿ ನಡೆದಾಗ ಶತ್ರುಗಳನ್ನು ಎದುರಿಸಿ ಅವರನ್ನು ಹಿಮ್ಮೆಟ್ಟಿಸಿ, ಗ್ರಾಮದಲ್ಲಿಯ ಸ್ತ್ರೀ, ಧನ ಮತ್ತು ಗೋವುಗಳನ್ನು ರಕ್ಷಿಸುವುದು ಇವರ ಕರ್ತವ್ಯವಾಗಿತ್ತು. ವೃತ್ತಿ ವ್ಯವಸಾಯ ಮತ್ತು ಸಂಘದ ವೆಚ್ಚಕ್ಕಾಗಿ ಗ್ರಾಮ ನಿವಾಸಿಗಳಿಂದ ಗ್ರಾಮಾಧಿಕಾರಿಗಳು ಬಂಟಸಾಸಿರ್ವರ ಸಲುವಾಗಿ ಎತ್ತಿದ ವಂತಿಗೆಗೆ ಬಂಟವಣವೆಂದು ಹೆಸರು. ತಮ್ಮ ಸಂಘದಲ್ಲಿಯ ಎಲ್ಲ ಸದಸ್ಯರಿಗೆ ಅವರವರ ಯೋಗ್ಯತೆಯ

೧೮೪ E. C. XIII. Gb. 45, 1233

ಪ್ರಕಾರ ಹಣವನ್ನು ಮುಟ್ಟಿಸುವುದು, ಧಾಳಿಯಲ್ಲಿ ಮೃತಪಟ್ಟವರ ವಾರಸುದಾರರಿಗೆ ಜೀವಿತಕ್ಕಾಗಿ ಸಂಘದ ಹಣದಿಂದ ಭೂಮಿಯನ್ನು ಕೊಂಡು ಕೊಡುವುದು ಈ ಸಂಘದ ಕಾರ್ಯಗಳಲ್ಲಿ ಕೆಲವು ಆಗಿದ್ದುವು."[೧೮೫]

ಯುದ್ಧದಲ್ಲಿ ಅಥವಾ ಇತರ ಯಾವುದೇ ಹೋರಾಟದಲ್ಲಿ ವೀರರಿಗೆ ಬಿಡುತ್ತಿದ್ದ ದತ್ತಿಗಳ ಪಾರಿಭಾಷಿಕ ಪದಗಳು

ಯುದ್ಧದಲ್ಲಿ ಅಥವಾ ಇನ್ನಿತರ ಹೋರಾಟದಲ್ಲಿ ಮಡಿದ ವೀರರಿಗೆ ಬಿಟ್ಟ ದತ್ತಿಗಳನ್ನು ವೀರಗಲ್ಲುಗಳಲ್ಲಿ ಹಲವಾರು ಹೆಸರುಗಳಿಂದ ಕರೆಯಲಾಗಿದೆ. ಈ ಪದಗಳ ಪ್ರಯೋಗದ ಹಿಂದೆ ಇರುವ ಅರ್ಥವನ್ನು ಗ್ರಹಿಸುವುದು ಉಚಿತವೆಂದು ತೋರುತ್ತದೆ.

ನೆತ್ತರ್ ಪಟ್ಟಿ

ಯುದ್ಧದಲ್ಲಿ ಅಥವಾ ಇನ್ನಿತರ ಹೋರಾಟದಲ್ಲಿ ಹೋರಾಡಿದ ವೀರರಿಗೆ ಬಿಡುತ್ತಿದ್ದ ದತ್ತಿಯನ್ನು ವೀರಗಲ್ಲುಗಳಲ್ಲೂ ಮತ್ತು ಇತರ ಕೆಲವು ಶಾಸನಗಳಲ್ಲೂ 'ನೆತ್ತು ಕೊಡುಗೆ' ಎಂಬುದಾಗಿ ಕರೆದಿದೆ. ಕೆಲವಾರು ವೀರಗಲ್ಲುಗಳಲ್ಲಿ ಇದೇ ಅರ್ಥ ಬರುವ 'ನೆತ್ತರ್ಪಟ್ಟ', 'ರಕ್ತಕೊಡಗಿ', 'ನೆತ್ತರುಪಡಿಮಾನ್ಯ' ಎಂಬ ಪ್ರಯೋಗಗಳೂ ದೊರೆಯುತ್ತೆ. 'ನೆತ್ತರ್ ಪಟ್ಟ' ಎಂಬ ಪ್ರಯೋಗ ನೆತ್ತರುಕೊಡುಗೆ ಮುಂತಾದ ಇತರ ಪ್ರಯೋಗಗಳಿಗಿಂತಲು ಪ್ರಾಚೀನವೆಂದು ತೋರುತ್ತದೆ. ಕ್ರಿ.ಶ. ಸುಮಾರು ಏಳನೆಯ ಶತಮಾನದ ಒಂದು ಶಾಸನದಿಂದ 'ಪೆರಾಣ್ಕೊವನ್' ಎಂಬುವನು ಸತ್ತಾಗ ಅರಸನೊಬ್ಬನು ಅವನಿಗೆ ಜಮೀನನ್ನು 'ನೆತ್ತರ್ ಪಟ್ಟ'ವಾಗಿ ಕೊಡುತ್ತಾನೆ ಎಂಬ ವಿಷಯ ತಿಳಿಯುತ್ತದೆ.[೧೮೬] ಇದೇ ಪ್ರಯೋಗ ಕ್ರಿ.ಶ. ೧೧೮೦ರ ಮತ್ತೊಂದು ಶಾಸನದಲ್ಲಿಯೂ ದೊರೆಯುತ್ತದೆ. "ಶ್ರೀಮನ್ಮಹಾಪ್ರಧಾನಂ ಶ್ರೀಕರಣದ ಹೆಗ್ಗಡೆಯಜಿಯಣ್ಣನುಂ ದಂಡನಾಯಕ ಬಲ ಗೋಯಿಂದರಸರುಂ" ಯುದ್ಧಕ್ಕೆ ಹೋಗುತ್ತಿದ್ದಾಗ 'ಪೊಲಚ' ಎಂಬುವನು ತಲೆಯನ್ನು ಕತ್ತರಿಸಿಕೊಳ್ಳುತ್ತಾನೆ. ಇದಕ್ಕಾಗಿ ಅವನಿಗೆ 'ನೆತ್ತಪಟ್ಟ'ನ್ನು ನೀಡುತ್ತಾರೆ.[೧೮೭] ಶ್ರೀನಿವಾಸಪುರ ತಾಲ್ಲೂಕಿನ

---

೧೮೫ ಆರ್. ಎನ್. ಗುರವ : 'ಆಯುಧ ಜೀವಿಗಳ ಸಂಘ', ಕರ್ನಾಟಕ ಭಾರತಿ, ಸಂ ೧೦. ಸಂ. ೧ (೧೯೭೭)

೧೮೬ E. C. XVII. Sp. 116, ಸು. ೭ನೇ ಶತ

೧೮೭ E. C. X. Gd. 41, ಸು. ೧೧೮೦

ತೇದಿಯ ವಿವರಗಳನ್ನೊಳಗೊಳ್ಳದ ಶಾಸನವೊಂದರಲ್ಲಿ 'ಶ್ರೀ ರಾಮಗಿರಿಯಪ್ಪನಾಡು' ಎಂಬುವನು 'ಪೆಮ್ಮನ' ಎಂಬುವನಿಗೆ 'ನೆತ್ರಪಟ್ಟ'ನ್ನು ನೀಡಿದನೆಂಬ ವಿಷಯ ತಿಳಿಯುತ್ತದೆ. ಈ ಶಾಸನ ತೆಲುಗು ಭಾಷೆಯಲ್ಲಿದೆ.[೧೮೮] ಈ ಪದ ಪ್ರಯೋಗ ಕರ್ನಾಟಕದ ಕೋಲಾರ ಜಿಲ್ಲೆಗೆ ಮಾತ್ರ ಸೀಮಿತವಾಗಿರುವಂತೆ ತೋರುತ್ತದೆ. ಯಾವುದೇ ಹೋರಾಟದಲ್ಲಿ ತನ್ನ ರಕ್ತವನ್ನು ಸುರಿಸಿದ ಕಾರಣಕ್ಕಾಗಿ ಅರಸನಿಂದಲೋ ಇತರರಿಂದಲೋ ಪಡೆದ ದತ್ತಿಯನ್ನು **'ನೆತ್ತರ್‌ಪಟ್ಟಿ'** ಎಂಬುದಾಗಿ ಕರೆಯಲಾಗಿದೆ.

ನೆತ್ತರುಕೊಡುಗೆ

ಈ ಪ್ರಯೋಗವು ಕರ್ನಾಟಕದಲ್ಲಿ ವ್ಯಾಪಕವಾಗಿ ಪ್ರಯೋಗದಲ್ಲಿದೆ. ನಮ್ಮ ಅಧ್ಯಯನದ ಸೀಮಿತ ಅನುಭವದಿಂದ ಹೇಳುವುದಾದರೆ, ಈಗ ದೊರೆತಿರುವ ಮತ್ತು ಪ್ರಕಟವಾದ ಶಾಸನಗಳಲ್ಲಿ, ಸುಮಾರು ಹನ್ನೊಂದನೆಯ ಶತಮಾನದ ನಂತರದ ಕಾಲದಲ್ಲಿ ಈ ಪದದ ಬಳಕೆ ಹೆಚ್ಚಾಗಿದೆ. ಈ ಪದದ ಪ್ರಯೊಗ ಸುಮಾರು ಹದಿನೆಂಟನೆಯ ಶತಮಾನದವರೆಗೆ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಕ್ರಿ.ಶ. ೧೧೦೦ ರ ಒಂದು ವೀರಗಲ್ಲಿನಿಂದ ನಾಗೆನಾಯಕನೆಂಬುವನು ಯುದ್ಧದಲ್ಲಿ ಹೋರಾಡಿ ಸತ್ತಾಗ, ಆತನ ತಮ್ಮ 'ಬಂಕ ಕೆಜೆಯ' ಎಂಬಾತನು ಜಮೀನನ್ನು 'ರಕ್ತಕೊಡುಗೆ'ಯಾಗಿ ಪಡೆದಂತೆ ತಿಳಿಯುತ್ತದೆ.[೧೮೯] ಕ್ರಿ.ಶ. ೧೭೪೬ರ ಒಂದು ಶಾಸನದಿಂದ ಮಾರಾಂಡಹಳ್ಳಿಯನ್ನು ಕಳ್ಳರು ಲೂಟಿ ಮಾಡುವಾಗ ಹನುಮನು ಸತ್ತುದಕ್ಕಾಗಿ 'ಶ್ರೀಮತು ವಕ್ಕಲೇರಿ ಚಂನಣ್ಣನವರು' ಹನುಮನ ಮನೆಯವರಿಗೆ 'ನೆತ್ತರಕೊಡಗಿ'ಯನ್ನು ನೀಡುತ್ತಾರೆ.[೧೯೦]

ರಕ್ತ ಕೊಡಗಿ

ಈ ಪ್ರಯೋಗ ತುಂಬಾ ಅಪರೂಪವಾಗಿ ದೊರೆಯುತ್ತದೆ. ಇದು 'ನೆತ್ತರುಕೊಡಗಿ' ಎಂಬ ರೂಪದ ಆಧಾರದ ಮೇಲೆಯೇ ಪ್ರಯೋಗವಾಗಿರುವ ಪಾರಿಭಾಷಿಕ ಪದ. ಈ ಪದದ ಪ್ರಯೋಗ ಕ್ರಿ.ಶ. ೧೬ನೇ ಶತಮಾನದ ಮಧ್ಯಭಾಗದಿಂದ ಸುಮಾರು ೧೮ನೆಯ ಶತಮಾನದವರೆಗೆ ದೊರೆಯುತ್ತದೆ.[೧೯೧]

---

೧೮೮ E. C. X. Sp. 91, ?

೧೮೯ E. C. VII. CI. 65, ಸು. ೧೧೦೦

೧೯೦ M. A. R.1941. 15, 1746

೧೯೧ E. C.IV. YI. 29, 1564 ; M. A. R.1939. 25, ಸು. ೧೭ನೇ ಶತ
E. C.XI. Hr. 1705 ; M. A. R.1926. 110, 1763

ನೆತ್ತರುಪಡಿ ಮಾನ್ಯ

ಕೋಲಾರ ಜಿಲ್ಲೆಯ ಎರಡು ತೆಲುಗು ಶಾಸನಗಳು ಈ ಪ್ರಯೋಗವನ್ನು ಹೊಂದಿವೆ. ಇದು ಕನ್ನಡದ 'ನೆತ್ತರುಕೊಡುಗೆ' ಎಂಬ ಪದದ ಆಧಾರದ ಮೇಲೆಯೇ ರೂಪಿತವಾದ ಪದ ಎಂಬುದು ಸ್ಪಷ್ಟ[೯೨]

ಕೆಲವು ಶಾಸನಗಳ ಪಾಠವನ್ನು ಗಮನಿಸಿದಾಗ ಸತ್ತ ವೀರನಿಗೆ ಬಿಟ್ಟ ದತ್ತಿಯನ್ನು ಮಾತ್ರ 'ನೆತ್ತರು ಕೊಡುಗೆ' ಎಂದು ಗುರುತಿಸುತ್ತಿರಲಿಲ್ಲ. ಯುದ್ಧದಲ್ಲಿ ಅಥವಾ ಯಾವುದೇ ಹೋರಾಟದಲ್ಲಿ ಹೋರಾಡಿ ಗೆದ್ದು ಬಂದ ವೀರರಿಗೆ ಬಿಡುತ್ತಿದ್ದ ದತ್ತಿಯನ್ನು ಕೂಡ 'ನೆತ್ತರು ಕೊಡಿಗೆ' ಎಂಬುದಾಗಿ ಕರೆಯುತ್ತಿದ್ದರು. ಶಾಸನದ ಪಾಠದಲ್ಲಿ ದತ್ತಿಯನ್ನು ಹೇಳುವ ಸಂದರ್ಭದಲ್ಲಿ, ದತ್ತಿಯನ್ನು ಪಡೆದವರ ಹೆಸರನ್ನು ಉಲ್ಲೇಖಿಸಿರುತ್ತಾರೆ. ಅಂದರೆ ವೀರನ ಸಂಬಂಧಿಕರ ಹೆಸರುಗಳು ಮತ್ತು ಅವರಿಗೆ ಯಾವ ಕಾರಣಕ್ಕಾಗಿ ಕೊಟ್ಟರು ಎಂಬುದರ ಪ್ರಸ್ತಾಪ ಇರುತ್ತದೆ. ಆದ್ದರಿಂದ ವೀರನು ಮಡಿದನೆಂಬುದು ಖಚಿತವಾಗಿ ತಿಳಿಯುತ್ತದೆ. ಆದರೆ ಕೆಲವು ಶಾಸನಗಳಲ್ಲಿ ವೀರನು ಮಡಿದ ಪ್ರಸ್ತಾಪವೇ ಬರದೆ, ವೀರನಿಗೆ ಕೊಟ್ಟ ದತ್ತಿ ಎಂಬುದಾಗಿ ಅರ್ಥಬರುವ ಶಾಸನಗಳ ಪಾಠವಿರುವುದರಿಂದ, ಸಾಹಸವನ್ನು ತೋರಿ ಬದುಕುಳಿದ ವೀರನಿಗೆ ಕೊಟ್ಟ ದತ್ತಿಯನ್ನೂ 'ನೆತ್ತರು ಕೊಡಿಗೆ' ಎಂದೇ ಕರೆಯುತ್ತಿದ್ದರು ಎಂಬ ನಮ್ಮ ಸಂಶಯ ಬಲಗೊಳ್ಳುತ್ತದೆ. ಈ ಕೆಳಗಿನ ಶಾಸನಗಳನ್ನು ಪರಿಶೀಲಿಸಿದರೆ ನಮ್ಮ ಅಭಿಪ್ರಾಯ ಇನ್ನಷ್ಟು ಸ್ಪಷ್ಟವಾಗುತ್ತದೆ.

"ಸುಗುಟೂರು ಇಂಮಡಿಚಿಕ್ಕರಾಯ ತಂಮೇಗೌಡರ ಅಯನವರು ಕಾಡಜಕ್ಕನಹಳ್ಳಿಯನು ಆ ತಿಂಮನಿಗೆ ನೆತ್ತರ ಕೊಡಿಗೆ ಅಕಿ ಕೊಟ್ಟ ಮಾನ್ಯ". ಈ ಶಾಸನ ಕಾಡಜಕ್ಕನ ಹಳ್ಳಿಯ ಹಟ್ಟುಗುಂಡಿನ ಮೇಲಿದೆ.[೯೩] "ಕಾಳಾಯುಕ್ತ ಸಂವತ್ಸರದಲ್ಲಿ ಮುದುಡಿ ತಿಂಮಯಗುಡರು ಯಲಪನಹಳ್ಳಿ ಗಬಿಗೆ ನೆತ್ತುರುಕೊಡಿಗೆ". ಇದು ಒಂದು ಕಲ್ಲಿನ ಮೇಲೆ ಇದೆ.[೯೪] "ಜಯಿತಾಬಾಯಿ ಅಂಮ್ಮನ ಅಪ್ಪಣೆಯ ಮೇರೆಗೆ ಸುಗುಟೂರು ಹೋಬಳಿ ಹವಾಲುದಾರ ವಿಠಲಪಂಡಿತನೂ ಮತ್ತು ಅಗ್ರಹಾರದ ಮಹಾಜನಂಗಳು ಸೇರಿ ಅಂಣೇನಹಳ್ಳಿ ಶಂಖರಯಗೆ ಕೊಡಗಿಹೊಲವನ್ನು ಸರ್ವಮಾನ್ಯವಾಗಿ ಅನುಭವಿಸಿಕೊಂಡು ಸುಖದಲ್ಲಿರುವುದಕ್ಕಾಗಿ" ಕೊಡುತ್ತಾರೆ.[೯೫]

---

೯೨ M. A. R.1923. 103,? E.C.X. Sp. 113, ?
೯೩ E. C. IX. An. 71, 1600
೯೪ E. C. IX. Ht. 150, 1618
೯೫ E. C. X. Ct. 155, 1616

ಇಂಥ ಶಾಸನಗಳು ವೀರಗಲ್ಲಿನ ಮೇಲೆ ಇಲ್ಲ ಎಂಬುದನ್ನು ಗಮನಿಸಬೇಕು. ಇವೇ ಶಾಸನಗಳು ವೀರಗಲ್ಲುಗಳ ಮೇಲೆ ಇದ್ದಿದರೆ ಈ ಮಾನ್ಯಗಳು, ವೀರಗಲ್ಲು ಯಾವ ವೀರನ ಸ್ಮಾರಕವಾಗಿರುತ್ತದೆಯೋ ಆ ವೀರನ ವೀರತ್ವವನ್ನು ಪುರಸ್ಕರಿಸಿ ಅವನ ಮರಣಾನಂತರ ಕೊಟ್ಟಿರಬಹುದಾದ 'ದತ್ತಿ' ಯಾಗಿದ್ದಿರಬೇಕು ಎಂದು ಊಹಿಸಬಹುದಾಗಿತ್ತು. ಆದರೆ ಇವು ಆ ರೀತಿ ವೀರಗಲ್ಲಿನ ಮೇಲಿರದೆ ಹುಟ್ಟು ಗುಂಡಿನ ಮೇಲೆ ಇವೆ. ಇವು ವೀರನು ಹೋರಾಟದಲ್ಲಿ ಗೆದ್ದು ಬಂದಿರುವುದನ್ನು ಸೂಚಿಸುತ್ತವೆಯೆ ? ಚಿಂತಾಮಣಿ ತಾಲ್ಲೂಕಿನ ಶಾಸನದಲ್ಲಿ 'ಶಂಕರಯ್ಯ' ಎಂಬುವನಿಗೆ ಅನುಭವಿಸಿಕೊಂಡು ಸುಖದಲ್ಲಿರುವುದಕ್ಕಾಗಿ 'ನೆತ್ತರು ಕೊಡಗಿ' ಹೊಲವನ್ನು ನೀಡಿದ್ದಾರೆ. ಇದನ್ನು ಗಮನಿಸಿದರೆ ಇಲ್ಲಿ ವೀರನು ಬದುಕಿರಬೇಕು ಎಂಬುದು ಇನ್ನಷ್ಟು ಖಚಿತವಾಗುತ್ತದೆ. ಮೇಲಿನ ಯಾವುದೇ ಶಾಸನಗಳಲ್ಲಿಯೂ ವೀರನಾದವನು ಮಡಿದ ಎಂಬುದರ ಸೂಚನೆಯೂ ಇಲ್ಲ. ಬದಲಾಗಿ 'ವೀರನಿಗೆ' ಕೊಟ್ಟ ದತ್ತಿ ಎಂಬುದಾಗಿ ಅರ್ಥ ಬರುವ ಶಾಸನ ಪಾಠವಿದೆ.

ವೀರವೃತ್ತಿ – ಡಿಂಗರಿಗವೃತ್ತಿ

ಸತ್ತ ವೀರನ ಮನೆಯವರಿಗೆ ಕೊಟ್ಟ ದತ್ತಿಯನ್ನು ವೀರಗಲ್ಲುಗಳಲ್ಲಿ ಡಿಂಗರಿಗವೃತ್ತಿ ಎಂಬುದಾಗಿಯೂ ಕರೆದಿರುವುದನ್ನು ಗಮನಿಸಬಹುದು. "ಕೊಲ್ಲೂರಿನ ಸಮಸ್ತ ಮುಂಮುರಿದಂಡಿಗಳು, ಎಂಟುಹಿಟ್ಟು, ಪಂಚಮಠ, ಮಹಾಮಂಡಳೇಸ್ವರ ವೀರಹೆಮ್ಮಾಡಿದೇವ ಮುಖ್ಯವಾಗಿ" ನಾಗೈಯನ ಮಗ ರಾಮೈಯನಿಗೆ ಮನೆಯನ್ನು ವೀರವೃತ್ತಿಯನ್ನಾಗಿ ಬಿಟ್ಟ ವಿಷಯ ವೀರಗಲ್ಲೊಂದರಿಂದ ತಿಳಿದುಬರುತ್ತದೆ.[೧೯೬] ಬೆಳಗುತ್ತಿಯ ತುರುಗಳನ್ನು ಬೇಡರು ಕದ್ದುಕೊಮಡು ಹೋದಾಗ ಬೆಳಗುತ್ತಿಯ ಅರಸನಾದ 'ಈಶ್ವರಭೂತ'ನೆಂಬುವನ 'ಡಿಂಗರಿಗ'ನೂ ಸ್ವಾಮಿಕಾರ್ಯ 'ಹಿತರತಜೀವ'ನೂ ಆದ ಚಿಣ್ಣ ತುರುಗಳನ್ನು ಹಿಂತಿರುಗಿಸುವಲ್ಲಿ ಹೋರಾಡಿ ಸಾಯುತ್ತಾನೆ. ಆಗ ಅವನಿಗೆ 'ಡಿಂಗರಿಗ ವೃತ್ತಿ'ಯಾಗಿ ಗದ್ದೆಯನ್ನು ಕೊಡುತ್ತಾರೆ.[೧೯೭] ಕ್ರಿ.ಶ. ೧೨೩೩ರ ಒಂದು ಶಾಸನ ವೀರನನ್ನು ಹೊಗಳುತ್ತಾ ಆ ವೀರನಿಗೆ 'ಕೊಡಗಿಗಳನ್ನು ಕುಲವ್ರಿತ್ತಿ' ಎಂದು ಪಡೆಯುವ ನಾಯಕರು ಸಮಾನರಲ್ಲ – ಇವನು ಚೋಳ ಪಾಂಡ್ಯನ ಪಡೆಗಳನ್ನು ಗೆದ್ದು "ಕೊಡಗಿಮಾನ್ಯಂಗಳಂ

---

೧೯೬ S. I. I. XV. 595, ?

೧೯೭ E. C. XII. Hn. 48, 1216

ವೀರ ವೃತ್ತಿಯಿಂ ಪಡೆದು ವೀರಮುಷ್ಟಿಯಿಂ"ದ ಪಡೆದವನಾಗಿದ್ದಾನೆ[೯೮] ಎಂಬುದಾಗಿ ತಿಳಿಸುತ್ತದೆ. ಅಂದರೆ ಕೊಡಗಿಯನ್ನು ತನ್ನ ಪರಾಕ್ರಮದಿಂದ ಪಡೆದನೇ ಹೊರತು ವಂಶಪಾರಂಪರ್ಯವಾಗಿ ಬಂದದನ್ನು ಪಡೆದವನಲ್ಲ.

ಮೇಲಿನ ಶಾಸನಗಳಲ್ಲಿನ 'ಪ್ರಿತ್ತಿ, ವೃತ್ತಿ' ಎಂಬ ಪದಗಳ ಸಾಮ್ಯವಿರುವ 'ಕುಮಾರವೃತ್ತಿ', 'ಬೀಟಿವೃತ್ತಿ' ಮುಂತಾದ ಪಾರಿಭಾಷಿಕ ಪದಗಳ ಬಗ್ಗೆ ಡಾ. ಎಂ. ಚಿದಾನಂದಮೂರ್ತಿಯವರು ಸುದೀರ್ಘವಾಗಿ ಬರೆದಿದ್ದಾರೆ.[೯೯]

ನಾವು ಗಮನಿಸಿದ ಶಾಸನಗಳಲ್ಲಿ 'ವೃತ್ತಿ' ಎಂಬ ಪದವು 'ಕೊಡಗಿ', 'ದತ್ತಿ' ಎಂಬ ಅರ್ಥದಲ್ಲಿ ಪ್ರಯೋಗವಾಗಿರುವುದನ್ನು ಗಮನಿಸಬಹುದು. ಈ ಆಧಾರದ ಮೇಲೆ ಡಾ. ಎಂ. ಚಿದಾನಂದಮೂರ್ತಿಯವರು ತಿಳಿಸುವ ಅನೇಕ 'ವೃತ್ತಿ'ಗಳ ಅರ್ಥವನ್ನು ವಿವರಿಸಬಹುದೆಂದು ತೋರುತ್ತದೆ. ಅವರು ಭಾವಿಸುವಂತೆ 'ವೃತ್ತಿ' ಎಂಬ ಪದವನ್ನು ಹೊಂದಿರುವ ಸಮಸ್ತ ಪದದಲ್ಲಿ 'ವೃತ್ತಿ' ಎಂಬ ಪದವನ್ನು ಹೊಂದಿರುವ ಸಮಸ್ತ ಪದದಲ್ಲಿ 'ವೃತ್ತಿ' ಎಂಬುದು, ಸಾಮಂತರಿಗೂ ಮಂಡಳೇಶ್ವರರಿಗೂ ಮತ್ತು ಅವರ ಅರಸರಿಗೂ ಇದ್ದ ರಾಜಕೀಯ ಸಂಬಂಧವನ್ನು ಸೂಚಿಸುವುದಿಲ್ಲ. ಆದರೆ ಈ ಸಮಸ್ತ ಪದಗಳಲ್ಲಿನ ಪೂರ್ವಪದ 'ಬೀಟು', 'ಕುಮಾರ', 'ಅಣುಗ', 'ಡಿಂಗರಿಗ', 'ವೀರ' ಎಂಬುವು ಅವರಿಗೆ ಆ ವೃತ್ತಿ (ದತ್ತಿ, ಕೊಡಿಗೆ) ಏಕೆ ನೀಡಲಾಯಿತೆಂಬುದರ ಕಾರಣವನ್ನು ವಿವರಿಸುತ್ತವೆ. ಇಡೀ ಸಮಸ್ತಪದ ಅರಸನಿಗೂ ಮತ್ತು ವೃತ್ತಿಯನ್ನು ಪಡೆದಿರುವ ವ್ಯಕ್ತಿಗೂ ಇದ್ದ ಸಂಬಂಧವನ್ನು ಸೂಚಿಸುವ ಪದವಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ವೃತಿ ಎಂಬುದು ಅರಸನಾದವನು ತನ್ನ ಕುಮಾರ, ಲೆಂಕ, ಡಿಂಗರಿಗ (ಸೇವಕರು), ವೀರರಿಗೆ (ಯೋಧರಿಗೆ) ಅವರ ಪರಾಕ್ರಮವನ್ನು ಗುರುತಿಸಿ ಪುರಸ್ಕರಿಸಿಕೊಟ್ಟ ಮಾನ್ಯಗಳಾಗಿವೆ ಎಂದು ತೋರುತ್ತದೆ.

ವೀರಕೊಡಗಿ–ವೀರದತ್ತಿ–ವೀರಸೇಸೆ

ಕೆಲವು ಶಾಸನಗಳಲ್ಲಿ ಮುಖ್ಯವಾಗಿ ವೀರಗಲ್ಲುಗಳಲ್ಲಿ, ಯುದ್ಧದಲ್ಲಿ ಮಡಿದ ವೀರನಿಗೆ ಕೊಟ್ಟ ದತ್ತಿಯನ್ನು 'ವೀರಕೊಡಗಿ', 'ವೀರದತ್ತಿ' ಎಂಬುದಾಗಿ ಕರೆದಿರುವುದನ್ನು ಕಾಣಬಹುದು. ಕೆಂಕೆರೆಯ ತುರುಗಳನ್ನು ಕಳ್ಳರು ಬಂದು ಅಪಹರಿಸಿದಾಗ ಜಕಗೌಡನೆಂಬುವನು ಕಳ್ಳರೊಂದಿಗೆ

---

೯೮ E. C. XII. Gb. 45, 1233

೯೯ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೪೦ – ೪೧

ಹೋರಾಡಿ ಮಡಿಯುತ್ತಾನೆ. ಆಗ ಅವನ ತಮ್ಮನಾದ ಮರಿಯನಿಗೆ ಜಕಗೌಡನ ಹೆಸರಿನಲ್ಲಿ "ಕೊಡೆ, ಕುದುರೆ, ತಂಬಟ ಸಹಿತವಾಗಿ ವೀರ ಕೊಡಗಿಯನ್ನು ಆ ಪೂರಿನ ಮಹಾಜನಗಳು" ಕೊಡುತ್ತಾರೆ.[೨೦೦] ಮಾಚಗೌಡನೆಂಬುವನು ಹೋರಾಟವೊಂದರಲ್ಲಿ ಕಾದು ಸತ್ತಾಗ, ಹೊಯ್ಸಳ ಬಲ್ಲಾಳನೂ ಅವನ ಮಗನಾದ ಎಱೆಯಂಣನೂ, ಇಂಗುಳದ ಅಶೇಷ ಮಹಾಜನರೂ ಸೇರಿ ಮಾಚಗೌಡನ ಮನೆಯವರಿಗೆ 'ವೀರದತ್ತಿ'ಯನ್ನು ಬಿಡುತ್ತಾರೆ.[೨೦೧] ಈ ರೀತಿಯ ಪ್ರಯೋಗಗಳು ಕಡಿಮೆಯೆಂದೇ ಹೇಳಬೇಕು. ಕ್ರಿ.ಶ. ೧೨೯೬ರ ವೀರಗಲ್ಲೊಂದರಲ್ಲಿ ವೀರನಿಗೆ ಬಿಟ್ಟ ದತ್ತಿಯನ್ನು 'ವೀರಸೇಸೆ' ಎಂಬುದಾಗಿ ಕರೆದಿರುವುದನ್ನು ಗಮನಿಸಬಹುದು. ಮಳೂರಿನ ಕೋಟೆಯನ್ನು ಶತ್ರುಗಳು ಬಂದು ಆಕ್ರಮಿಸಿಸಲು ಪ್ರಯತ್ನಿಸಿದಾಗ ಮಲ್ಲೆಯ ಎಂಬುವನು "ಮಳೂರ ಕೋಟೆಯ ಕಾದು ವಂಕಧಾರೆಯೊಳಗೆ ಬಿದ್ದು" ಸತ್ತಾಗ ಅವನ ಮನೆಯವರಿಗೆ ಮಾಸಾವಿ ಮುಖ್ಯವಾಗಿ ಊರಿನ ಮುನ್ನೂರು ಜನರು ನೆರೆದು 'ವೀರಸೇಸೆ'ಯಾಗಿ ಮಳೂರ ಗದ್ದೆಗಳಲ್ಲಿ ಸ್ವಲ್ಪ ಭೂಮಿಯನ್ನು ಕೊಡುತ್ತಾರೆ.[೨೦೨] 'ಸೇಸೆ' ಎಂಬುದಕ್ಕೆ 'ಅಕ್ಷತೆ' ಎಂಬ ಅರ್ಥವಿದೆ. ಆದ್ದರಿಂದ ಈ ಪದದ ಅರ್ಥವನ್ನು ಹೀಗೆ ವಿವರಿಸಬಹುದೆಮದು ತೋರುತ್ತದೆ : ವೀರನಾದವನು ಹೋರಾಟದಲ್ಲಿ ಮಡಿದಾಗ, ಅವನ ಮನೆಯವರಿಗೆ ದತ್ತಿಯನ್ನು ಬಿಟ್ಟು, ವೀರನು ಸಂತೃಪ್ತಿಯಿಂದ ಸ್ವರ್ಗದಲ್ಲಿರುವುದಕ್ಕೆ ಜನ ಹರಸಿಕೊಟ್ಟ ಭೂಮಿ.

ಉಂಬಳಿ, ಕೊಡಗಿ, ಇನಾಮು

ಸುಮಾರು ೧೫ನೆಯ ಶತಮಾನದ ನಂತರದ ವೀರಗಲ್ಲುಗಳ ಪಾಠದಿಂದ ಈ ಉಂಬಳಿ ಎಂಬ ಪಾರಿಭಾಷಿಕಪದ ದೊರೆಯುತ್ತದೆ. ತಿಳ್ಳವಳ್ಳಿಯ ಸಾಸಿರ್ವರಬಂಟನಾದ ಮೊಸಳೆಯ ಎಂಬುವನು ತುರುಗಾಳಗದಲ್ಲಿ ಸತ್ತಾಗ ಅವನ ಮಕ್ಕಳಿಗೆ ಸಾಸಿರ್ವರು ಗದ್ದೆಯೊಂದನ್ನು 'ಉಂಗಳಿ'ಯಾಗಿ ನೀಡುತ್ತಾರೆ.[೨೦೩] ಬಾಗಡೆ, ಕಿತ್ತನ ಕೆಱೆಯ ಸೀಮಾ ಸಂಬಂಧದ ಕಾಳಗದಲ್ಲಿ ಹೋರಾಡಿ ಮಡಿದ ವೀರನ ಪರಾಕ್ರಮವನ್ನು ಮೆಚ್ಚಿ, ಅವನ ಮನೆಯವರಿಗೆ ಬಾಗಡೆಯ ಅಶೇಷಮಹಾಜನರು 'ಉಂಬಳಿ'ಯನ್ನು ನೀಡುತ್ತಾರೆ.[೨೦೪]

---

೨೦೦ E. C. VI. Cm. 157, 1195

೨೦೧ M. A. R.1927. 23, ಸು. ೧೨ನೇ ಶತ

೨೦೨ E. C. I. Cg. 80, 1296

೨೦೩ K. I. II. 17, ?

೨೦೪ E. C. V. Ak. 184, ?

ನೆತ್ತರು, ವೀರ, ರಕ್ತ ಮುಂತಾದ ರೀತಿಯ ವಿಶೇಷಣಗಳನ್ನು ಹೊಂದಿರದೆ ಕೇವಲ 'ಕೊಡಗಿ' ಎಂಬ ವಿಶೇಷ ಪದವಷ್ಟೆ ನಮಗೆ ವೀರಗಲ್ಲುಗಳಿಂದ ಕೆಲವೊಮ್ಮೆ ದೊರೆಯುವುದುಂಟು. ಇಲ್ಲಿ ಎಲ್ಲಾ ಕಡೆಗಳಲ್ಲಿಯೂ ಈ ಹಿಂದೆ ಗಮನಿಸಿದ 'ರಕ್ತಕೊಡಗಿ' 'ನೆತ್ತರುಕೊಡಗಿ' ಎಂಬ ಅರ್ಥವನ್ನೇ ಹೊಂದಿದೆ. ಇವು ಅವುಗಳಿಗಿಂತ ಬೇರೆ ಯಾವುದೇ ರೀತಿಯ ವಿಶೇಷಾರ್ಥವನ್ನು ಹೊಂದಿಲ್ಲ.[೨೦೫]

ಈ ರೀತಿಯ ಪ್ರಯೋಗಗಳು ಮುಸಲ್ಮಾನರ ಪ್ರಭಾವದಿಂದಾಗಿ ಕಡಿಮೆಯಾಗಿ, ಅವುಗಳಿಗೆ ಬದಲಾಗಿ 'ಇನಾಮು' ಎಂಬ ಪದದ ಬಳಕೆ ಪ್ರಯೋಗದಲ್ಲಿ ಬಂದಂತೆ ಕಾಣುತ್ತದೆ. ದಳವಾಯಿಕೆರೆಗೆ ಬಂದು ತಪ್ಪಿಸಿಕೊಂಡು ಹೋದ ಆನೆಯನ್ನು ಹಿಡಿದು ತಂದು ಒಪ್ಪಿಸಿದ ವೀರನೊಬ್ಬನಿಗೆ ವೀರರಾಜೇಂದ್ರನು ಸ್ವಲ್ಪ ಭೂಮಿಯನ್ನು 'ಇನಾಮು' ಆಗಿ ಬಿಡುತ್ತಾನೆ.

ಈ ಎಲ್ಲ ಪದಗಳ ಹಿಂದೆ ಇರುವ ಅರ್ಥವೆಂದರೆ, ಹೋರಾಟದಲ್ಲಿ ತನ್ನ ಪರಾಕ್ರಮವನ್ನು ತೋರಿಸಿ ಮಡಿದ ವೀರನ ತ್ಯಾಗಗುಣವನ್ನು ಪುರಸ್ಕರಿಸಿ, ಅವನ ಮನೆಯವರಿಗೆ ಅವನ ಸಾವಿನಿಂದಾದ ನಷ್ಟವನ್ನು ತುಂಬಲು ಕೊಡುತ್ತಿದ್ದ ದತ್ತಿ ಎಂಬುದು. ಹೋರಾಟದಲ್ಲಿ ಸತ್ತರೆ ಮಾತ್ರ ಈ ರೀತಿ ದತ್ತಿಯನ್ನು ನೀಡಿ ಈ ಹೆಸರಿನಿಂದ ಕರೆಯುತ್ತಿದ್ದರೆಂದು ಹೇಳಲಾಗುವುದಿಲ್ಲ. ವೀರನಾದವನು ಹೋರಾಟದಲ್ಲಿ ಗೆದ್ದುಬಂದಿರಲಿ ಅಥವಾ ಮಡಿದಿರಲಿ, ಜನರಿಗಾಗಿಯೋ ಅರಸನಿಗಾಗಿಯೋ ಅವನು ರಕ್ತವನ್ನು, ಜೀವನವನ್ನು ಪಣವಿಟ್ಟು ಹೋರಾಡಿರುತ್ತಾನೆ. ಇದು, ಅವರು ಪಣವಿಟ್ಟ ಈ 'ರಕ್ತಕ್ಕೆ, 'ಜೀವಿತಕ್ಕೆ ಇವರು ಕೃತಜ್ಞತೆಯಿಂದ ಸಲ್ಲಿಸಿರುವ ತಮ್ಮ ಕಾಣಿಕೆಯಷ್ಟೆ ಈ ಎಲ್ಲಾ ಪದಗಳು ಪ್ರಾದೇಶಿಕವಾದ ಹಿನ್ನೆಲೆಯಲ್ಲಿ, ಶಾಸನಕಾರರ ಶಬ್ದಪ್ರಯೋಗದಿಂದ ಮೂಡಿಬಂದ ಪರ್ಯಾಯ ಪದಗಳಾಗಿವೆಯೇ ಹೊರತು ಮೂಲಭೂತವಾದ ಯಾವುದೇ ರೀತಿಯ ಅರ್ಥವ್ಯತ್ಯಾಸವನ್ನು ಹೊಂದಿಲ್ಲ ಎಂಬುದು ಮುಖ್ಯ.

ಬಾಳ್ಗಚ್ಚು

'ಬಾಳ್ಗಚ್ಚು' ಎಂಬ ಪಾರಿಭಾಷಿಕಪದದ ಅರ್ಥ, ಯುದ್ಧದಲ್ಲಿ ಹೋರಾಡಿದ ವೀರರಿಗೆ ಕೊಡುವ ದತ್ತಿ ಎಂಬುದಾಗಿ ಭಾವಿಸಿ, ಈ ಬಗ್ಗೆ ಈಗಾಗಲೇ ವ್ಯಾಖ್ಯಾನ ಮಾಡಿರುವ ಇಬ್ಬರು ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸಿ ಮುಂದುವರಿಯುವುದು ಉಚಿತ.

---

೨೦೫ E. C. IV. Hs. 11, 1020 ; E.C.VI. Cm. 47, 1195 ಮತ್ತು M. A. R.1936

"ಬಾಳ್ಗಟ್ಟು ಎಂಬ ದತ್ತಿಯನ್ನು ವಿಶಿಷ್ಟವಾದುದು. ಇದನ್ನು ಯುದ್ಧದಲ್ಲಿ ಹೋರಾಡಿ ಗೆದ್ದು ಬಂದವರಿಗೆ ಪ್ರಶಸ್ತಿ ರೂಪವಾಗಿ ಕೊಡುತ್ತಿದ್ದರು. ಆ ಪದದ ರೂಪವನ್ನು ನೋಡಿದರೆ ಯುದ್ಧದಲ್ಲಿ ಹೋರಾಡಿದ ವೀರನ ಕತ್ತಿಯನ್ನು ತೊಳಯುವ ಸಮಾರಂಭವನ್ನು ಅದು ಸೂಚಿಸುತ್ತದೆ. (ಬಾಳ್ + ಕಱ್ಚು, ಕಱ್ಚು = ತೊಳೆ. ಇದನ್ನೇ ಖಡ್ಗಧಾರಾಂಭಸ್ ಎಂದು ಸಂಸ್ಕೃತಕ್ಕೆ ತಿರುಗಿಸಿದ್ದಾರೆ)

ಯುದ್ಧದಲ್ಲಿ ಸತ್ತ ವೀರನ ಮನೆಯವರೆಗೆ ಕೊಟ್ಟದಾನವನ್ನು 'ಬಾಳ್ಗಟ್ಟು' ಎಮದೂ ಕೆಲವೆಡೆ ಕರೆದಿದೆ. ಇಲ್ಲಿಯೂ ಸತ್ತವೀರನ ಕತ್ತಿಯನ್ನು ಸಕಲ ಗೌರವಗಳೊಡನೆ ತೊಳೆದು ದಾನವನ್ನು ಮಾಡುತ್ತಿದರೆಮದು ಊಹಿಸಬಹುದು" ಎಂಬುದಾಗಿ ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.[೨೦೬]

ಡಾ. ಕೆ.ವಿ. ರಮೇಶ್ ಅವರು 'ಹಲ್ಮಿಡಿ ಶಾಸನದ ಸಟ್ಟಿಜ್ಗದರ್ ಮತ್ತು ಬಾಳ್ಗಟ್ಟು' ಎಂಬ ಲೇಖನದಲ್ಲಿ ಬಾಳ್ಗಟ್ಟು ಬಗ್ಗೆ ಈ ರೀತಿ ಬರೆಯುತ್ತಾರೆ.[೨೦೭]

"ಬಾೞ್ + ಗುಟ್ಟು > ಬಾಳ್ + ಗಟ್ಟು = ಬಾಳನ್ನು ಗಳಿಸುವುದು. ಕನ್ನಡದ 'ಬಾೞ್' ಅಥವಾ 'ಬಾಳ್' ಮತ್ತು ತಮಿಳಿನ 'ವಾೞ್' ಒಂದೇ ದ್ರಾವಿಡ ಧಾತುವಿನ ಎರಡು ರೂಪಗಳು. ಇದರ ಧಾತ್ವರ್ಥವು ಜೀವನ ಎಂದಿದ್ದು ಕನ್ನಡದ ನೂರಾರು ಶಾಸನಗಳಲ್ಲಿ 'ಬಾೞ್' ಅಥವಾ 'ಬಾಳ್' ಎಂಬ ಪದವು ಜೀವನದ ಮುಖ್ಯ ಸಾಧನವಾದ ಹೊಲವೆಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ. ರಣರಮಗದಲ್ಲಿ ಯಾವುದೇ ಒಂದು ಪಕ್ಷದ ಮುಂಬಲವಾಗಿ ನಿಂತು ಧೈರ್ಯ ಸಾಹಸಗಳೊಂದಿಗೆ ಹೋರಾಡಿ, ಜಯಗಳಿಸಿ ಕೊಟ್ಟ ಭಟರಿಗೆ ಅವರ ದೊರೆಗಳು ತಮ್ಮ ಮೆಚ್ಚುಗೆಯ ಪ್ರತಿರೂಪವಾಗಿ ವೀರಗಲ್ಲುಗಳನ್ನು ಸ್ಥಾಪಿಸುತ್ತಿದ್ದರಷ್ಟೇ ಅಲ್ಲದೆ ಕೆಲವೊಮ್ಮೆ ಅಂತಹ ಭಟರಿಗೆ ಸನ್ಮಾನವಾಗಿ ಅಥವಾ ಭಟನು ರಣರಂಗದಲ್ಲೇ ಮೃತನಾದ ಪಕ್ಷದಲ್ಲಿ ಅವನ ಕುಟುಂಬದವರಿಗೆ ಬಂದೊದಗಿದ ಕಷ್ಟನಷ್ಟಗಳಿಗೆ ಪರಿಹಾರವಾಗಿ ನಿರ್ದಿಷ್ಟ ಸೀಮೆಯ ಹೊಲವನ್ನು ದಾನವಾಗಿ ಕೊಡುತ್ತಿದ್ದರು. ಹೀಗೆ ಪರಾಕ್ರಮಿಗಳು ತಮ್ಮ ಧೈರ್ಯ ಸಾಹಸಗಳ ಪ್ರದರ್ಶನದಿಂದ ಭೂಮಿಯ ಸ್ವತ್ತನ್ನು ಗಳಿಸಿಕೊಳ್ಳುವುದೇ 'ಬಾಳ್ಗಟ್ಟು' ಎಂಬ ಪ್ರಯೋಗವು ಸೂಚಿಸುತ್ತದೆ".

"ರಣರಂಗದಿಂದ ಜೀವಂತ ಹಿಂದಿರುಗಿದ ವೀರಶಿರೋಮಣಿಗಳಿಗಷ್ಟೇ ಅಲ್ಲದೆ ಕಾಳಗದಲ್ಲಿ ಧೈರ್ಯ ಸಾಹಸಗಳನ್ನು ತೋರಿ ವಿರೋಧಿಗಳನ್ನು ಸದೆಬಡಿದು ವೀರಮರಣವನ್ನಪಿ

---

೨೦೬ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೩

೨೦೭ ಕೆ.ವಿ. ರಮೇಶ್ : "ಹಲ್ಮಿಡಿ ಶಾಸನದ 'ಸ ಟ್ಟಿ ಜ್ಗದರ್ ' ಮತ್ತು ಬಾಳ್ಗಟ್ಟು' (ಪ್ರಬುದ್ಧ ಕರ್ನಾಟಕ" ೫೧–೩) ಪು ೨೭

ದವರಿಗೂ 'ಬಾಳ್ಗಟ್ಚು'ನ್ನು ಕೊಡುವುದು ವಾಡಿಕೆಯಲ್ಲಿತ್ತು". ಅವರು ತಮ್ಮ ಮೇಲಿನ ವಾದಸಮರ್ಥನೆಗೆ ಒಂದು ಉದಾಹರಣೆ ನೀಡಿ ವಿವರಿಸುತ್ತಾರೆ. ಕ್ರಿಶ. ೮ನೆಯ ಶತಮಾನದ ಸೂಡಿ (ಧಾರವಾಡ ಜಿಲ್ಲೆ) ಯಲ್ಲಿಯ ಶಾಸನವೊಂದರಲ್ಲಿ ದೊರೆಯುವ ವೀರಗಲ್ಲಿನ ಶಾಸನ ಪಾಠದಲ್ಲಿ "ಆಚಾರ್ಯನ್ ತುರುಗಾ, ನೀನೀ ಯೆಡೆಯೊಳಿಟ್ಟು ಕೂಟಿಂಗೆಲ್ ಎಂದೊಡೆ" ಅಂದರೆ, "ಓ ತುರುಗಾ, ನೀನು ಈ ಸ್ಥಾನದಲ್ಲಿ ನಿಂತು ಕಾದಾಡಿಗೆದ್ದು ನಿನ್ನ ಜೀವಿತ (ಕೂಟು)ವನ್ನು ಗಳಿಸಿಕೊ ಎಂದು ಆಚಾರ್ಯನು ಹೇಳಿದೊಡೆ' ಎಂಬ ವಾಕ್ಯವು ಕಂಡುಬರುತ್ತದೆ. ಇಲ್ಲಿಯ 'ಕೂಟ್' – 'ಬಾಳ್' ಎಂಬ ಪದಕ್ಕೆ ಸಮಾನವಾಚಕ, 'ಗೆಲ್' ಎಂಬುದು 'ಗಟ್ಚು' ಗಳಿಸು ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಹೀಗಾಗಿ 'ಬಾಳ್ಗಟ್ಚು' ಎಂಬ ಸಮಸ್ತ ಪದಕ್ಕೆ ಬಾಳನ್ನು (ಅಂದರೆ ಭೂಮಿಯನ್ನು) ಗಳಿಸಿಕೊಳ್ಳುವುದು ಎಂದು ಅರ್ಥ ಹೇಳಬೇಕು."

"ಕ್ರಿಶ. ೮೭೩ರಲ್ಲಿ ಹುಟ್ಟಿದ ಮತ್ತೊಂದು ಶಾಸನದಲ್ಲಿ ಜೊಳ್ಳೆಯನೂರೆಂಬ ಗ್ರಾಮದ ಕೆಲವು ನಿವಾಸಿಗಳು ಮತ್ತು ಕೆಲವು ಕಳ್ಳರ ನಡುವೆ ನಡೆದ ಕಾದಾಟದಲ್ಲಿ ಪಾಲ್ಗೊಂಡು ಮಡಿದ ಅಬ್ಬಾಚಾರಿ ಎಂಬಾತನಿಗೆ ಆ ಊರಿನವರು 'ಬಾಟಿ' (ಅಂದರೆ ಹೊಲವೊಂದರ) ದಾನ ಮಾಡಿದ ವಿಷಯವಿದೆ. ಮಡಿದ ವೀರನನ್ನು ಆಚಾರಿ ಎಂದು ಕರೆದಿರುವುದರಿಂದ ಅವನು ಅಕ್ಕಸಾಲಿಗನಿದ್ದನೆಂದು ಊಹಿಸಬಹುದಾಗಿದೆ. ಶಾಸನದ ಪಾಠದಲ್ಲಿ ಆ ವೀರಗಲ್ಲನ್ನು 'ಅಕ್ಕಸಾಲದ ಬಾಟಿ ಶಾಸನದ ಕಲ್ಲು' ಎಂದು ವರ್ಣಿಸಿರುವುದೂ ನಾನು ಮೇಲೆ ನೀಡಿರುವ ವಿವರಣೆಯನ್ನು ಸಮರ್ಥಿಸುತ್ತದೆ."

ಡಾ. ಕೆವಿ. ರಮೇಶ್ ಅವರು ಮುಂದುವರಿದು ಡಾ. ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯವನ್ನು ಹೀಗೆ ಟೀಕಿಸುತ್ತಾರೆ. "ಬಾಳ್ಗಟ್ಚು ಎಂಬ ಪ್ರಯೋಗಕ್ಕೆ ಲೇಖಕರು ಕೊಟ್ಟಿರುವ ಮೇಲಿನ ವಿವರಣೆಯು ಎಲ್ಲರ ಮನದಲ್ಲಿಯೂ ಮೊಟ್ಟಮೊದಲು ಹೊಳೆಯಬಹುದಾದಂತಹುದೇನೋ ಹೌದು. ಆದರೆ ವಿವರಣೆಗೆ ಶಾಸನಗಳಲ್ಲಿ ಸಮರ್ಥನೆ ದೊರೆಯುತ್ತಿಲ್ಲ. ಇನ್ನು ಸಾಹಿತ್ಯ ದೊರೆಯುತ್ತದೆಯಾದರೆ ಲೇಖಕರು ಆ ಬಗ್ಗೆ ಸೂಚನೆಗಳನ್ನು ಇತ್ತಿಲ್ಲ".

ಈ ಇಬ್ಬರು ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸುವುದು ಉಚಿತ. ಚಿದಾನಂದಮೂರ್ತಿಯವರು ಭಾವಿಸಿರುವಂತೆ, "ಇದನ್ನು ಯುದ್ಧದಲ್ಲಿ ಹೋರಾಡಿ ಗೆದ್ದು ಬಂದವರಿಗೆ ಪ್ರಶಸ್ತಿರೂಪವಾಗಿ ಕೊಡುತ್ತಿದ್ದರು. "ಯುದ್ಧದಲ್ಲಿ ಸತ್ತ ವೀರನ ಮನೆಯವರಿಗೆ ಕೊಟ್ಟ ದಾನವನ್ನು ಬಾಳ್ಗಟ್ಚು ಎಂದು ಕೆಲವೆಡೆ ಕರೆದಿದೆ." ಎಂಬ ಅಭಿಪ್ರಾಯ ಸರಿಯಾದುದು. ಯುದ್ಧದಲ್ಲಿ ಹೋರಾಡಿ ಗೆದ್ದು ಬಂದಿರಲಿ ಅಥವಾ ಮಡಿದಿರಲಿ ಅವನಿಗೆ ದತ್ತಿಯನ್ನಾಗಿ ಕೊಟ್ಟ ಭೂಮಿಯನ್ನು ಕೊಡುವ ಸಂದರ್ಭದಲ್ಲಿ 'ಬಾಳ್ಗಟ್ಚು' ಪದ ಪ್ರಯೋಗ ಆಗಿದೆ. ಯುದ್ಧದಲ್ಲಿ

ಹೋರಾಡಿ ಸತ್ತವೀರರ ಸುಮಾರು ಹನ್ನೆರಡು ವೀರಗಲ್ಲುಗಳಲ್ಲಿ ಈ ರೀತಿ ದತ್ತಿಯನ್ನು ಬಾಳ್ಗಚ್ಚು ಎಂಬುದಾಗಿ ಕರೆದಿರುವ ನಿದರ್ಶನಗಳು ದೊರೆಯುತ್ತವೆ.

ಬಾಳ್ಗಚ್ಚು ಎಂಬ ಪದದ ವಿಶ್ಲೇಷಣೆಯನ್ನು ಡಾ. ಎಂ. ಚಿದಾನಂದಮೂರ್ತಿಯವರು ಸಮರ್ಥವಾಗಿ ಮಾಡಿದ್ದಾರೆ, ಆದರೆ "ಯುದ್ಧದಲ್ಲಿ ಹೋರಾಡಿದ ವೀರನ ಕತ್ತಿಯನ್ನು ತೊಳೆಯುವ ಸಮಾರಂಭವನ್ನು ಅದು ಸೂಚಿಸುತ್ತದೆ" ಎಂಬ ಅವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪಲಾಗುವುದಿಲ್ಲ. ಅಡಿಟಿಪ್ಪಣಿ ೪೧೨ರಲ್ಲಿ ಅವರು ಹೇಳುವ "ಆತಕೂರು ಶಾಸನದಲ್ಲಿ ಬಾಳ್ಗಚ್ಚು ಎಂಬರ್ಥದಲ್ಲಿ 'ಬಾಳ್ಗೆ ಮೆಚ್ಚಿ' ಗೊಟ್ಟ ಎಮಬ ಉಕ್ತಿ ಬಂದಿದೆ" ಎಂಬ ಅವರ ವಿವರಣೆಯಂತೂ ಸ್ವೀಕಾರಾರ್ಹವಾದುದಲ್ಲ. ಏಕೆಂದರೆ 'ಬಾಳ್ಗೆ ಮೆಚ್ಚಿಗೊಟ್ಟಂ' ಎಂದರೆ ಮನಾಲರನ ಪರಾಕ್ರಮವನ್ನು ಮೆಚ್ಚಿ ಅವನಿಗೆ 'ಆತಕೂರ್ಪನ್ನೆರಡುಂ ಬೆಳ್ವೊಲದ ಕೋಟೆಯೂರುಮಂ" ಕೊಟ್ಟನೆಂದು ವ್ಯಾಖ್ಯಾನಿಸುವುದು ಸಾಧುವಾದುದು. ಅರಸರು ತಮ್ಮ ವೀರರ ಪರಾಕ್ರಮವನ್ನು ಮೆಚ್ಚಿ ಕೊಟ್ಟ ದತ್ತಿಗಳ ವಿವರವಾದ ಉಲ್ಲೇಖಗಳನ್ನು ಈ ಹಿಂದೆ ಗಮನಿಸಿದ್ದೇವೆ. ಇಲ್ಲಿ 'ಬಾಳ್ಗೆ ಮೆಚ್ಚು ಕೊಟ್ಟ' ಎಂಬುದೂ ಅಂತಹ ಒಂದು ನುಡಿಕಟ್ಟೇ ಆಗಿದೆ. ಖಡ್ಗ ವೀರನಾದವನ ಪರಾಕ್ರಮದ ಸಂಕೇತ ಎಮಬುದು ಸರ್ವವಿದಿತ. ಅವನ ಕತ್ತಿಗೆ ಮೆಚ್ಚಿಕೊಟ್ಟ ಎಂದರೆ ಅವನ ಪರಾಕ್ರಮವನ್ನು ಪುರುಸ್ಕರಿಸಿ ಮೆಚ್ಚಿಕೊಟ್ಟನೆಂಬ ಅರ್ಥವನ್ನಲ್ಲದೆ ಬೇರೆ ಏನನ್ನೂ ಹೇಳುವುದು ಸಾಧುವಲ್ಲವೆಮದು ತೋರುತ್ತದೆ.

ಡಾ. ಕೆ.ವಿ. ರಮೇಶ್ ಅವರ ವಾದವನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಒಪ್ಪುವುದು ಅಸಾಧ್ಯದ ಮಾತೇ ಆಗುತ್ತದೆ. ಬಾಳ್ಗಚ್ಚು ಎಂಬ ಪದ ಇದೀಗ ದೊರೆತಿರುವ ಎಲ್ಲ ಕನ್ನಡ ಶಾಸನಗಳಿಗಿಂತ ಪ್ರಾಚೀನವಾದುದೆಂದು ಭಾವಿಸಲಾಗಿರುವ ಹಲ್ಮಿಡಿ ಶಾಸನ ಅಂದರೆ ಸುಮಾರು ಐದನೆಯ ಶತಮಾನದ ಮಧ್ಯಭಾಗದಿಂದ ಹಿಡಿದು ಸುಮಾರು ಹನ್ನೊಂದನೆಯ ಶತಮಾನದ ಅಂತ್ಯ ಭಾಗದವರೆಗೆ ಪ್ರಚಲಿತವಿರುವುದನ್ನು ಗಮನಿಸಬಹುದು. ಕನ್ನಡದಲ್ಲಿ ೞ, ಳಗಳಲ್ಲಿ ಉಚ್ಚಾರಣಾ ರೀತಿಯ ಸಾಮ್ಯವಿದ್ದರೂ ಅವುಗಳ ಪ್ರಯೋಗದಲ್ಲಿ ಸಾಕಷ್ಟು ವ್ಯತ್ಯಾಸವನ್ನು ಅಂದಿನ ಜನ ಗುರುತಿಸಬಲ್ಲವರಾಗಿದ್ದರು.

'ವಾೞ್' ಮತ್ತು ವಾಳ್ ಈ ಎರಡೂ ಪದಗಳು ಪೂರ್ವದ್ರಾವಿಡದಲ್ಲಿ ಉಚ್ಚಾರನೆ ಮತ್ತು ಅರ್ಥ ವ್ಯತ್ಯಾಸಗಳೆರಡನ್ನೂ ಹೊಂದಿತ್ತು. ಈ ಪ್ರಯೋಗಗಳು ತಮ್ಮ ಮೂಲಾರ್ಥ ಮತ್ತು ಅರ್ಥ ವ್ಯತ್ಯಾಸವನ್ನು ಳಿಸಿಕೊಂಡು ತಮಿಳಿನಲ್ಲಿ ಇಂದಿಗೂ ಪ್ರಯೋಗದಲ್ಲಿವೆ. ಆದರೆ ಕನ್ನಡಲದಲಿ ಸುಮಾರು ೧೨ನೆಯ ಶತಮಾನದವರೆಗೆ ಈ ಎರಡೂ ಅಕ್ಷರಗಳು (ೞ ಮತ್ತು ಳ) ಔಚಿತ್ಯವನ್ನರಿತೇ ಪ್ರಯೋಗಗೊಂಡು ಅರ್ಥ ವ್ಯತ್ಯಾಸವನ್ನುಂಟು ಮಾಡುವ ಶಕ್ತಿಯನ್ನು ಪಡೆದಿದ್ದುವು. ಹರಿಹರನ ಕಾಲಕ್ಕೆ ಈ ಅಕ್ಷರಗಳ ಪ್ರಯೋಗದ ಬಗ್ಗೆ ಸ್ವಲ್ಪ ಮಟ್ಟಿಗೆ ಸಂದಿಗ್ಧತೆ ತಲೆದೋರಿತ್ತು.

ಕನ್ನಡದಲ್ಲಿ ಬಾಲ್ ಮತ್ತು ಬಾಟ್, ವಾಳ್ ಮತ್ತು ವಾಟ್ ಎಂಬ ಪ್ರಯೋಗಗಳು ದೊರೆಯುತ್ತವೆ. ಇವುಗಳಲ್ಲಿನ ಪ್ರಾಚೀನ ಪ್ರಯೋಗಗಳು ಎಂದರೆ 'ವಾಳ್' ಮತ್ತು 'ವಾಟ್' ಎಂಬುವು. ಕಾಲಾನಂತರದಲ್ಲಿ 'ವ' ಕಾರವು 'ಬ' ಕಾರವಾಗಿ ಕೆಲವು ಪದಗಳಲ್ಲಿ ಬದಲಾವಣೆಯನ್ನು ಹೊಂದಿತು. ಆದರೆ ಎರಡನೆಯ ಅಕ್ಷರವಾದ 'ಳ್' ಮತ್ತು 'ಟ್' ಹಾಗೆಯೇ ಉಳಿದುಕೊಂಡವು ಇವುಗಳು ಕ್ರಮವಾಗಿ 'ಬಾಳ್' ಎಂದರೆ ಕತ್ತಿ, ಬಾಟ್ ಎಂದರೆ ಜೀವನ ಎಂಬ ಅರ್ಥವನ್ನು ಹೊಂದಿದ್ದುವು.

'ಬಾಳ್ಗಟ್ಟು' ಎಂಬ ಪ್ರಯೋಗ ದೊರೆಯುವ ಸುಮಾರು ಹದಿನೈದು ಶಾಸನಗಳಲ್ಲಿಯೂ 'ಬಾಳ್ಗಟ್ಟು' ಎಂದು ಪ್ರಯೋಗವಾಗಿದೆಯೇ ಹೊರತು, 'ಬಾಳ್ಗಟ್ಟು' ಎಂಬುದಾಗಿ ಪ್ರಯೋಗವಾಗಿರುವುದನ್ನು ಕಾಣುವುದು ಸಾಧ್ಯವಿಲ್ಲ.

'ಬಾಳ್ಗಟ್ಟು' ಎಂಬ ಪದ ಪ್ರಯೋಗವಿರುವ ವೀರಗಲ್ಲಿನಲ್ಲಿಯೇ 'ಬಾಳ್' ಎಂಬ ಪದ ಬಾಟ್ ಎಂಬುದಕ್ಕಿಂತ ಭಿನ್ನವಾದ, ಕತ್ತಿ ಎಂಬ ಅರ್ಥದಲ್ಲಿ ಬೇರೊಂದೆಡೆಯಲ್ಲಿ ಪ್ರಯೋಗವಾಗಿರುವುದನ್ನು ನಾವು ಗಮನಿಸಬಹುದು. ನಾಗಗುಟ್ಟರಸ ಎಂಬುವನು ಶತ್ರುಗಳನ್ನು ಅಟ್ಟಿಸಿಕೊಂಡು "ಅಟ್ಟಿಬಾಳಂ ಕಿಟ್ಟು ನಡೆದು ಪಲರನಿಜಿದು ಸತ್ತೊಡೆ" ಅವನಿಗೆ 'ಬಾಳ್ಗಟ್ಟು' ಆಗಿ ದತ್ತಿಯನ್ನು ಕೊಟ್ಟ ವಿಷಯವನ್ನು ವೀರಗಲ್ಲಿನ ಪಾಠವೊಂದರಿಂದ ತಿಳಿಯಬಹುದಾಗಿದೆ.[೨೦೮]

ಈ ಮೇಲಿನ ವಿವರಣೆಯಿಂದ ಡಾ. ಕೆ.ವಿ. ರಮೇಶ್ ಅವರ ಅಭಿಪ್ರಾಯ ಮೂಲಭೂತವಾಗಿಯೇ ಎಡವಿದೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಅವರು ಉದ್ಧರಿಸಿರುವ ಶಾಸನಗಳ ಪಾಠಗಳಲ್ಲಿನ ವಿಷಯಕ್ಕೂ ಬಾಳ್ಗಟ್ಟಿಗೂ ಸಂಬಂಧವೇ ಇಲ್ಲ.

ಈ 'ಬಾಳ್ಗಟ್ಟು' ಎಂಬ ಪದದ ಪ್ರಯೋಗ ಯುದ್ಧದಲ್ಲಿ ಗೆದ್ದುಬಂದ ಅಥವಾ ಹೋರಾಡಿ ಪ್ರಾಣವನ್ನು ನೀಗಿದ ವೀರನಿಗೆ ಅಥವಾ ಅವನ ಮನೆಯವರಿಗೆ ಕೊಟ್ಟ ದತ್ತಿಯನ್ನು ತಿಳಿಸುವ ಸಂದರ್ಭದಲ್ಲಿ ಮಾತ್ರ ದೊರೆಯುತ್ತದೆ. ಈ ಪದದ ಪ್ರಯೋಗವನ್ನು ಶಾಸನಕಾರ ಮರೆತೂ, ಬೇಟೆ, ತುರುಗಾಳಗ, ಊರಳಿವು ಮುಂತಾದ ಹೋರಾಟಗಳಲ್ಲಿ ಮಡಿದ ವೀರರಿಗೆ ಬಿಡುವ ದತ್ತಿಯನ್ನು ಉಲ್ಲೇಖಿಸುವಾಗ ಮಾಡಿಲ್ಲ ಎಮಬುದು ಗಮನಿಸಬೇಕಾದ ಅಂಶ. ಈ ಪದ ಪ್ರಯೊಗವಾಗಿರುವ ಶಾಸನಗಳೆಲ್ಲವೂ ಯುದ್ಧದಲ್ಲಿ ಮಾತ್ರ ಹೋರಾಡಿ ಮಡಿದ ವೀರರಿಗೆ ಅಥವಾ ಗೆದ್ದ ವೀರರಿಗೆ ಅರಸರೋ ಅಥವಾ ಇನ್ನಿತರ ಪ್ರತಿಷ್ಠಿತ ವ್ಯಕ್ತಿಗಳೋ ಸ್ವಯಂ ನೀಡಿದ ದತ್ತಿಗಳೇ ಆಗಿವೆ

---

೨೦೮ E. C. X. KI. 200, 890

ಯುದ್ಧದ ಮುನ್ನ ಹೇಗೆ ಆಯುಧಗಳನ್ನು ಪೂಜಿಸುತ್ತಿದ್ದರೋ ಹಾಗೆಯೇ ಯುದ್ಧದಲ್ಲಿ ಜಯವನ್ನು ಪಡೆದು ಹಿಂದಿರುಗಿ ಬಂದನಂತರವೂ, ಆಯುಧಗಳನ್ನು ಪೂಜಿಸುತ್ತಿದ್ದರು. ಅರಸನಾದವನ ಕತ್ತಿಯನ್ನು, (ಅವನು ಹಿಡಿದು ಹೋರಾಡಿ ಜಯವನ್ನು ಸಂಪಾದಿಸಿದ ಕತ್ತಿಯನ್ನು) ಒಂದು ಶುಭ ಮುಹೂರ್ತದಲ್ಲಿ ತೊಳೆದು ಪೂಜೆ ಮಾಡುತ್ತಿದ್ದರು. ಇಂತಹ ಸಮಾರಂಭವನ್ನು 'ವಾಳ್ ಮಂಗಲಂ' ಎಂಬುದಾಗಿ ಕರೆದಿರುವುದನ್ನು ತಮಿಳು ಕಾವ್ಯಗಳಿಂದ ತಿಳಿಯಬಹುದು.[೨೯೯]

ಇದೇ ಸಂದರ್ಭದಲ್ಲಿ ಕಾವೇರಿ ನದಿ ಹರಿಯುವ ತಮಿಳುನಾಡಿನ ಕೆಲವು ಕಡೆ ನಡೆಯುವ ಒಂದು ಆಚರಣೆಯ ಗಮನಾರ್ಹವಾಗಿದೆ. ತಮಿಳು ಆಷಾಡವಾದ ಆಡಿತಿಂಗಲ ಹದಿನೆಂಟನೇ ದಿನ ಹೊಗೇನಕಲ್‌ನಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಈ ಜಾತ್ರೆಯನ್ನು 'ಆಡಿಪರುಕ್ಕು' (ಆಡಿ ಮಾಸದ ಉಕ್ಕಿಬರುವ ಪ್ರವಾಹ) ಎಂದೂ 'ಪದಿನೆಂಟ್ಟಾಂ ಪರುಕ್ಕು' (ಆಡಿ ಮಾಸದ ಹದಿನೆಂಟನೆಯ ದಿನ ಉಕ್ಕಿಬರುವ ಪ್ರವಾಹ) ಎಂದೂ ಕರೆಯುತ್ತಾರೆ. ಮಹಾಭಾರತ ಯುದ್ಧಾನಂತರ ಆ ಯುದ್ಧದಲ್ಲಿ ಭಾಗವಹಿಸಿದ ವೀರರು ತಮ್ಮ ಆಯುಧಗಳನ್ನು ಕಾವೇರಿ ನದಿಯಲ್ಲಿ ತೊಳೆದರಂತೆ. ಆದಕಾರಣ ಅಂದು ಕಾವೇರಿ ನದಿಯಲ್ಲಿ ನೀರು ಕೆಂಪಾಗಿ ಬರುತ್ತದೆ ಎಂದು ಜನ ನಂಬುತ್ತಾರೆ.[೩೦೦] ನದೀ ತೀರದಲ್ಲಿ ಹಳ್ಳಿಯ ಜನ ಅಂದು ದೇವರ ವಿಗ್ರಹಗಳನ್ನೂ, ಆ ದೇವರ ಆಯುಧಗಳನ್ನೂ ತೊಳೆಯುತ್ತಾರೆ ಈ ರೀತಿ ತೊಳೆದ ನೀರಲ್ಲಿ ಮಿಯುವುದೂ ಒಂದು ಪುಣ್ಯವೆಂದು ಭಾವಿಸಿದ ಅನೇಕರು ಅಂದು ಅಲ್ಲಿ ಸ್ನಾನ ಮಾಡುತ್ತಾರೆ. ಈ ಒಂದು

---

೨೯೯ N. Subramani : Sangam Polity. ಪು. ೧೬೭ ಮತ್ತು ತಮಿಳು ಸಂಗಮ್ ಸಾಹಿತ್ಯದ 'ಪುಱಪ್ಪೊರುಳ್ ವೆಣ್ಬಾಉರೈ (೬) ೨೭ ಹಾಡಿನಿಂದ ; ಅರಸನು ಯುದ್ಧದಲ್ಲಿ ಬಳಸಿ ಜಯಪಡೆದ ಕತ್ತಿಯನ್ನು, ಸಕಲ ಮರ್ಯಾದೆಗಳೊಡನೆ ದೇವರತೀರ್ಥದಿಂದ ಸ್ನಾನಮಾಡಿಸಿದ ವಿಷಯ ತಿಳಿಯುತ್ತದೆ. ರಾಜನು ತನ್ನ ಕೀರ್ತಿ ಪರಾಕ್ರಮವನ್ನು ಇನ್ನೂ ಹೆಚ್ಚಲಿಕ್ಕಾಗಿ ಈ 'ವಾಳ್ ಮಂಗಲ'ವನ್ನು ನಡೆಯಿಸಿದನೆಂದು ತಿಳಿಯುತ್ತದೆ.

(ಅ) ಪುಣ್ಣಿಯ ನೀರಿಱ್ ಪುರೈಯೋರ್ ಏತ್ತ
ಮಣ್ಣಿಯ ವಾಳನ್ ಮಱಂ ಕಿಳಂದನ್ನು

(ಆ) ತೀರ್ಥನೀರ್ ಪೂವೊಡು ಪಯ್ದು ತಿಸೈವಿಳಂಗ
ಕೂರ್ತ್ತವಾಳ್ ಮಣ್ಣಿ ಕ್ಕೊಡಿತ್ತೇರಾನ್ – ಪೇರ್ತ್ತುಂ

(ಇ) ಇಡಿಯಿನ್ ಪಣಿತುಪ್ಪೈಪ್ಪ ಇಮ್ಮದಿಲುಳ್ ವೇಟ್ಟಾನ್
ಪುಡೈಯರ್ ಅಜ್ಞೈಯಪ್ಪುಗೞ್

(ಈ ಬಗ್ಗೆ ನನಗಾಗಿ ಶ್ರಮವಹಿಸಿ ತಮಿಳು ಮೂಲ ಮತ್ತು ಅನುವಾದವನ್ನು ಒದಗಿಸಿದವರು ತಮಿಳು ವಿದ್ವಾನ್ ಶ್ರೀ ಗೋವಿಂದರಾಜು ಅವರು)

೩೦೦ ಈ ಬಗ್ಗೆ ತಿಳಿಸಿದವರು ಶ್ರೀ ಗೋವಿಂದರಾಜು ಅವರು.

ಆಚರಣೆ ತಮಿಳು ಕಾವ್ಯಗಳಲ್ಲಿ ಕಾಣುವ 'ವಾಳ್‌ಮಂಗಲ'ದ ಅನುಕರಣೆ ಅಥವಾ ಪಳೆಯುಳಿಕೆಯಂತೆ ಕಾಣುತ್ತದೆ.

ಯುದ್ಧಾನಂತರ ಆಯುಧವನ್ನು ಪೂಜಿಸುವ ಒಂದು ಸಂಪ್ರದಾಯ ಕರ್ನಾಟಕದಲ್ಲಿಯೂ ಪ್ರಚಲಿತವಾಗಿದ್ದಿರಬೇಕೆಂಬ ಸೂಚನೆ ರನ್ನನ ಗದಾಯುದ್ಧದಿಂದ ತಿಳಿದು ಬರುತ್ತದೆ. ಈ ಅಂಶವನ್ನು ಡಾ. ಎಂ. ಚಿದಾನಂದಮೂರ್ತಿಯವರು ತಮ್ಮ ಬರವಣಿಗೆಯ ೪೧೧ನೇ ಅಡಟಿಪ್ಪಣಿಯಲ್ಲಿ ಗುರುತಿಸಿದ್ದಾರೆ.[೨೧೧] "ಭೀಮನು ದುರ್ಯೋಧನನ್ನು ಕೊಂದ ಮೇಲೆ ಅವನ ತೋಳನ್ನು ಕೃಷ್ಣ ಮುಂತಾದವರು ತೀರ್ಥಜಲದಿಂದ ತೊಳೆದು ಪೂಜಿಸಿದರೆಂದೂ, ಭೀಮನೇ ತನ್ನ ಗದೆಯನ್ನು ಪೂಜಿಸಿ ನಮಸ್ಕರಿಸಿದನೆಂದೂ ರನ್ನಕವಿ ಬಣ್ಣಿಸುತ್ತಾನೆ. (ಗದಾಯುದ್ಧ ೮–೬೫–೬೬) ಭೀಮನಿಗೆ ಅವನ ತೋಳೂ ಒಂದು ಆಯುಧವೇ. ರನ್ನನ ನಿರೂಪಣೆಯ ಸಮಕಾಲೀನ 'ಬಾಳ್ಗಟ್ಟು' ಪದ್ಧತಿಯನ್ನು ನೆನಪಿಗೆ ತರುತ್ತದೆ" ಎಂಬ ಅವರ ಅಭಿಪ್ರಾಯ ತುಂಬಾ ಸಮಂಜಸವಾದುದು. ಭೀಮನು ವಿಶೇಷವಾಗಿ ಗದಾಯುದ್ಧದಲ್ಲಿ ಪರಿಣತಿ ಹೊಂದಿದವನು. ಆದ್ದರಿಂದ ತನ್ನ ಪ್ರಿಯವಾದ ಆಯುಧವನ್ನು ಅವನು ಪೂಜಿಸಿದ. ತಮಿಳಿನ 'ತೇಲ್ ಪುರುಲ್' ಎಂಬ ಕಾವ್ಯದಲ್ಲಿ, ಈಟಿಯನ್ನು ತನ್ನ ವಿಶೇಷವಾದ ಆಯುಧವೆಂದು ಪರಿಗಣಿಸಿದ್ದ ಅರಸನು, ಯುದ್ಧಾನಂತರ, ತನ್ನ ವಿಶೇಷ ಆಯುಧವಾದ ಈಟಿಯನ್ನು ತೊಳೆದು ಪೂಜಿಸಿದ ವರ್ಣನೆ ದೊರೆಯುತ್ತದೆ.[೨೧೨] ಭಾರತೀಯ ಆಯುಧಗಳ ಇತಿಹಾಸವನ್ನು ಗಮನಿಸಿದಲ್ಲಿ, ಐತಿಹಾಸಿಕಯುಗದಲ್ಲಿ ಇತರ ಆಯುಧಗಳಿಗಿಂತ ಮಿಗಿಲಾದ ಕತ್ತಿಯ ಉಪಯೋಗ ಮತ್ತು ಅದರ ಬಗ್ಗೆ ವಿಶೇಷವಾದ ಗೌರವ ಇದ್ದುದರಿಂದ ಬಹುಮಟ್ಟಿಗೆ ಕತ್ತಿಯನ್ನೇ ಆರಾಧಿಸುತ್ತಿದ್ದರೆಂದು ತೋರುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ 'ಬಾಳ್ಗಟ್ಟು' ಎಂಬುದನ್ನು ಗಮನಿಸಿದಾಗ ಇದು 'ದತ್ತಿ' ಎಂಬರ್ಥವನ್ನು ಹೊಂದಿರದೆ ಮೇಲೆ ಗಮನಿಸಿದಂತಹ 'ವಾಳ್‌ಮಂಗಲಂ'ನಂತಹ ಸಮಾರಂಭವಾಗಿರಬಹುದೇ ಎಂಬ ಸಂಶಯ ಉಂಟಾಗುತ್ತದೆ. ಶಾಸನಗಳ ಪಾಠವನ್ನು ಗಮನಿಸುತ್ತಾ ಹೋದಂತೆ ಈ ಸಂಶಯ ಪ್ರಬಲವಾಗುತ್ತಾ ಹೋಗುತ್ತದೆ.

ಡಾ. ಎಂ. ಚಿದಾನಂದಮೂರ್ತಿಯವರು ಭಾವಿಸಿರುವಂತೆ 'ಬಾಳ್ಗಟ್ಟು' ಎಂಬುದು ವೀರನ ಕತ್ತಿಯನ್ನು ತೊಳೆಯುವ ಸಮಾರಂಭವಲ್ಲ. ಅರಸನಾದವನ ಕತ್ತಿಯನ್ನು ತೊಳೆದು, ಅದನ್ನು

---

೨೧೧ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೯೩ ಮತ್ತು ಅಡಿ ಟಿಪ್ಪಣಿ. ೪೧೧

೨೧೨ N. Subramani : Sangam Polity. ಪು. ೧೬೭

ಪೂಜಿಸುವ ಸಮಾರಂಭವನ್ನು ಅದು ಸೂಚಿಸುತ್ತದೆ ಎಂಬುದು ನಮ್ಮ ಅಭಿಪ್ರಾಯ. ಇಂತಹ ಸಮಾರಂಭಗಳಲ್ಲಿ ಗೆದ್ದ ಅರಸನು ಯುದ್ಧದಲ್ಲಿ ತನಗೆ ಸಹಕಾರ ನೀಡಿದ ವೀರರಿಗೆ ದತ್ತಿಯನ್ನು ನೀಡುತ್ತಿದ್ದಿರಬೇಕು. ಆದ್ದರಿಂದ ಈ ಸಮಯದಲ್ಲಿ ಕೊಟ್ಟ ದತ್ತಿಗೆ 'ಬಾಳ್ಗೞ್ಚು' ಎಂಭ ಹೆಸರು ಬಂದಿರಬೇಕು. ಕತ್ತಿಯನ್ನು ತೊಳೆಯುವ ಸಮಾರಂಭದಲ್ಲಿ ದತ್ತಿಯನ್ನು ಪಡೆಯುವುದು ವಿಶೇಷವಾದ ಗೌರವವಾಗಿತ್ತೆಂದು ತೋರುತ್ತದೆ. ಕ್ರಿ.ಶ. ೮೮೬ ರ ಒಂದು ಶಾಸನದ ಪಾಠ ತುಂಬಾ ಅಸ್ಪಷ್ಟವಾಗಿದೆ. ಆದರೆ ಶಾಸನದ ಕೊನೆಯಲ್ಲಿ 'ಬಾಳ್ಗೞ್ಚು ಮರಿಯಾದಿಯೊಳೆ ಸಲ್ವುದು' ಎಂಬ ವಾಕ್ಯವಿದ್ದು, ಅನಂತರ ಶಾಪಾಶಯ ಎನ್ನಬಹುದಾದ ಮಾತುಗಳಿವೆ.[೨೧೩] ಇದರಿಂದ ಮೇಲಿನ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತದೆಂದು ತೋರುತ್ತದೆ.

ಡಾ. ಎಂ. ಚಿದಾನಂದಮೂರ್ತಿಯವರು ಭಾವಿಸುವಂತೆ 'ಬಾಳ್ಗೞ್ಚು' ಎಂಬುದು ವಿಶಿಷ್ಟವಾದ ದತ್ತಿ. ಇದು ಸಾಮಾನ್ಯವಾಗಿ ಯುದ್ಧದಲ್ಲಿ ಅಸಾಧಾರಣವಾದ ಪರಾಕ್ರಮವನ್ನು ತೋರಿಸಿದ ಮತ್ತು ಪ್ರತಿಷ್ಠಿತರಾದ ವೀರರಿಗೆ ಮಾತ್ರ ಕೊಡುತ್ತಿದ್ದ ದತ್ತಿಯೆಂದು ತೋರುತ್ತದೆ. ಏಕೆಂದರೆ ಉಳಿದ 'ಕೊಡುಗೆ' 'ದತ್ತಿ'ಗಳ ಹಾಗೆ ಇವುಗಳು ಇಂತಿಷ್ಟು ಭೂಮಿಯನ್ನೊ ಆದಾಯವನ್ನೋ ಹೊಂದಿರದೆ ಇಡೀ ಒಂದು ಊರಿನ ಆದಾಯವನ್ನೇ ಹೊಂದಿರುತ್ತಿತ್ತು. ಹಲ್ಮಿಡಿ ಶಾಸನದಿಂದ ವಿಜರಸ ಎಂಬುವನಿಗೆ, ಅವನು ಕೇಕಯ ಪಲ್ಲವರೊಡನೆ ಹೋರಾಡಿ ಗೆದ್ದು ಬಂದದ್ದಕ್ಕಾಗಿ ಪಲ್ಮಿಡಿಯನ್ನು, ಮೂಟಿವಳ್ಳಿಯನ್ನೂ 'ಬಾಳ್ಗೞ್ಚು' ಕೊಡುತ್ತಾರೆ. ದುಗ್ಗಮಾರ ಎಱೆಯಪ್ಪನು 'ಪಾಣಪ್ಪೆ' ಎಂಬುವನಿಗೆ 'ಸಾನ್ತನೂರ'ನ್ನು ಮತ್ತು ಎರಡಿಯೂರಿನ ಜಮೀನಿನಲ್ಲಿ ಒಂದು ಕಪಿನಿತೂಮ್ಬು ಮತ್ತು ಮನೆಯನ್ನು ಬಾಳ್ಗೞ್ಚಾಗಿ ನೀಡುತ್ತಾನೆ.[೨೧೪] ಯುದ್ಧವೊಂದರಲ್ಲಿ ಮಡಿದ ವೀರನಿಗೆ 'ಇಕುನ್ದ' ಎಂಬ ಗ್ರಾಮವನ್ನು ಕೊಟ್ಟ ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ. ಯುದ್ಧವೊಂದರಲ್ಲಿ ತನ್ನ ಪ್ರಭುವಿನ ಆಜ್ಞೆಯ ಮೇರೆಗೆ ಹೋರಾಡಿ ಸತ್ತ ವೀರನಿಗೆ 'ಕುಳನಲ್ಲೂರ'ನ್ನು 'ಸರ್ವಬಾಧಾ ಪರಿಹಾರ'ವಾಗಿ ಬಾಳ್ಗೞ್ಚು ಗೊಟ್ಟುದು ಮಿನಿಕಿ" ಎಂಬ ವಿಷಯ ಸುಮಾರು ಎಂಟು – ಒಂಬತ್ತನೆ ಶತಮಾನದ ವೀರಗಲ್ಲಿನಿಂದ ತಿಳಿಯುತ್ತದೆ.[೨೧೫] ಬಾಣರಸರೊಡನೆ ಮಾಡಿದ ಯುದ್ಧವೊಂದರಲ್ಲಿ ಮಡಿದ ವೀರನ ಮನೆಯವರಿಗೆ "ನೀತಿಮಾರ್ಗ ಪೆರ್ಮ್ಮಾನಡಿಗಳು ನೊಱಮ್ಬಧಿ ರಾಜರು" ಇಬ್ಬರೂ ಸೇರಿ "ಸೂಜೂರು ಬಾಳ್ಗೞ್ಚು" ಕೊಡುತ್ತಾರೆ.[೨೧೬]

---

೨೧೩ M. A. R.1931. 49, ಸು. ೮೮೬
೨೧೪ E. C. X. Mb. 255, 750
೨೧೫ S. I.I. IX. Pt. I. ಸು. ೮–೯ನೇ ಶತ
೨೧೬ E. C. X. Kl. 79, 890

ಒಟ್ಟಿನ ಮೇಲೆ ಹೇಳುವುದಾದರೆ ಡಾ. ಕೆ.ವಿ. ರಮೇಶ್ ಅವರು ಅಭಿಪ್ರಾಯಪಡುವಂತೆ ಬಾಳ್ಗಚ್ಚು ಎಂಬುದು ಜೀವನದ ನಿರ್ವಹಣೆಗಾಗಿ ಕೊಡುವ ಹೊಲ ಎಂಬ ಅರ್ಥದಲ್ಲಿ ಪ್ರಯೋಗವಾಗಿಲ್ಲ. ಡಾ. ಎಂ. ಚಿದಾನಂದಮೂರ್ತಿ ಅವರು ಭಾವಿಸಿದಂತೆ ಹೋರಾಡಿ ಮಡಿದ ವೀರರ ಕತ್ತಿಯನ್ನು ತೊಳೆದು ಗೌರವಿಸುವ ಸಮಾರಂಭವನ್ನೂ ಸೂಚಿಸುವುದಿಲ್ಲ. ಯುದ್ಧದ ಅನಂತರದಲ್ಲಿ ವಿಜಯವನ್ನು ಪಡೆದ ಅರಸನು ತನ್ನ ಪರಾಕ್ರಮದ ಸಂಕೇತವಾದ ಕತ್ತಿಯನ್ನು ತೊಳೆದು ಪೂಜಿಸುವ ಸಮಾರಂಭವನ್ನು ಸೂಚಿಸುತ್ತದೆ. ಈ ಸಮಾರಂಭದಲ್ಲಿ ಯುದ್ಧದಲ್ಲಿ ತನಗೆ ಸಹಾಯ ಮಾಡಿದ ವೀರರನ್ನು ಗೌರವಿಸಿ ಅವರ ಸೇವೆಗೆ ತಕ್ಕ ಪ್ರತಿಫಲವನ್ನು ಕೊಟ್ಟು ಗೌರವಿಸುತ್ತಿದ್ದರಿಂದ, ಈ ಸಂದರ್ಭದಲ್ಲಿ ಕೊಟ್ಟ ದತ್ತಿಗೆ ಈ ಹೆಸರು ಬಂದಿರಬೇಕು ಎಂದು ತೋರುತ್ತದೆ.

೬. ವೀರಗಲ್ಲುಗಳ ಪಾಠ

ವೀರಗಲ್ಲುಗಳ ಪಾಠವನ್ನು ತಯಾರು ಮಾಡಿದ ವ್ಯಕ್ತಿಯ ಹೆಸರುಗಳು ಮತ್ತು ಅವರಿಗೆ ಸಂಬಂಧಪಟ್ಟ ವಿವರಗಳು ದೊರೆಯುವುದು ತೀರಾ ವಿರಳವೆಂದೇ ಹೇಳಬೇಕಾಗುತ್ತದೆ. ಕೆಲವಾರು ವೀರಗಲ್ಲುಗಳ ಪಾಠವನ್ನು ತಯಾರು ಮಾಡಿದ ವ್ಯಕ್ತಿಯ ಹೆಸರುಗಳು ದೊರೆಯುತ್ತವೆ. ಹೀಗೆ ಕೆಲವು ಕಡೆ ದೊರೆಯುವ ನಿದರ್ಶನಗಳನ್ನು ಶಾಸನದ ಪಾಠವನ್ನು ತಯಾರು ಮಾಡಿದನೆಂದು ಸ್ವೀಕರಿಸಬೇಕೋ ಸಂದಿಗ್ಧವಾಗುತ್ತದೆ. ಕ್ರಿ.ಶ. ೮೭೩ರ ವೀರಗಲ್ಲಿನ ಪಾಠದ ಕೊನೆಯಲ್ಲಿ "ಇದ ಬರೆದಂ ಗವಟಿ ಸೆಟ್ಟಿಯ ಮಗ ಧರಂ" ಎಂಬುದಾಗಿದೆ.[೧] ಮತ್ತೆರಡು ಮೂರು ಶಾಸನಗಳಲ್ಲಿ "ಇದಂ ಬರೆದೊಂ ಪರಸುರಾನಮಯ್ಯ"[೨], "ಚಮ್ಮಟಂಬರೆದೊಂ",[೩] "ಯಿಲ್ಲಿ ಬರೆದಾತ ಗೊರಗೋಡ ಬಲಯ ಸೇನಬೋವನ ಮಗಂ ಬೊಂಮಣಂ"[೪] ಎಂಬುದಾಗಿ ದೊರೆಯುತ್ತದೆ.

ಮತ್ತೆ ಕೆಲವು ವೀರಗಲ್ಲುಗಳ ಪಾಠದಲ್ಲಿನ ಹೆಸರುಗಳು ಅವುಗಳನ್ನು ರಚಿಸಿದವರನ್ನೇ ಖಚಿತವಾಗಿ ನಿರ್ದೇಶಿಸುತ್ತವೆ. ಕ್ರಿ.ಶ. ೧೦೭೧ರ ಒಂದು ವೀರಗಲ್ಲಿನ ಪಾಠದಿಂದ, ಆ ಪಾಠವನ್ನು ಸಿದ್ಧ ಪಡಿಸಿದವನು "ಸಂಧಿವಿಗ್ರಹಿ ರಾಧಿಮಯ್ಯ" ಎಂಬುದಾಗಿ ತಿಳಿದು ಬರುತ್ತದೆ.[೫] ತನ್ನ ತಮ್ಮನು ಸತ್ತಾಗ ಜೂಜರಸ ಎಂಬುವನು 'ಪರೋಕ್ಷ ವಿನಯ' ಮಾಡಿ ವೀರಶಾಸನವನ್ನು "ಸಂಧಿವಿಗ್ರಹಿ ಸೇನಬೋವ ರಾಜೀವಯ್ಯನ ಮಗನಾದ ಬಮ್ಮದೇವ" ನೆಂಬುವನಿಂದ ಬರೆಯಿಸಿದನೆಂದು ವೀರಗಲ್ಲೊಂದರಿಂದ ತಿಳಿಯುತ್ತದೆ.[೬] ಬಾಚಿ ನೃಪನು ಸತ್ತಾಗ, ಅಂತ್ಯಕ್ರಿಯೆ ವಿಧಾನಗಳನ್ನು ಮಾಡಿ, ಅವನ ಕೀರ್ತಿಯು ಚಿರಕಾಲ ನಿಲ್ಲಲೆಂದು 'ಶಿಲಾ ಶಾಸನವನ್ನು ಸುಪ್ರತಿಷ್ಠೆ

---

೧ E. C. IV. Ch. 134

೨ E. C. V. Ag. 5

೩ ಅದೇ. ೨೭

೪ M. A. R.1931. 71, 1296

೫ K. I. V. 7, 1071

೬ E. C. I. Cg. 62, 1095

ಮಾಡಿದ ವಿಷಯಗಳ ವಿವರಗಳನ್ನು ಒಂದು ವೀರಗಲ್ಲಿನ ಪಾಠ ನೀಡುತ್ತದೆ. ಬಾಚಿರಾಜನ ಗುಣಗಳನ್ನು ಹೊಗಳುವ ಈ ಶಾಸನವನ್ನು 'ನಿರವದ್ಯ'ನೂ 'ಸುಕವೀಂದ್ರ'ನೂ ಆದ ನೃಸಿಂಹನೆಂಬುವನು ರಚಿಸಿದನೆಂಬುದಾಗಿ ತಿಳಿದು ಬರುತ್ತದೆ. ಆ ಶಾಸನದಲ್ಲಿ ತನ್ನನ್ನು ಕವಿ "ಮಣಿಮಯಮುಕುರಂ ಮಾದ್ಯತ್ ಕಂಠೀರವನುದ್ಯುತ್ತುಹಿನಾಂಶುಕಿರಣ ಕೀರ್ತ್ತಿನೃಸಿಂಹಂ" ಎಂಬುದಾಗಿ ಹೊಗಳಿಕೊಂಡಿದ್ದಾನೆ.[೭] ಕಿತ್ತಗೌಡನು ಕೋಟೆ ಕಾಳಗದಲ್ಲಿ ಮಡಿದ ವಿಷಯವನ್ನು ನಿರೂಪಿಸುವ ಕೊಡಕಣಿಯ ಶಾಸನವನ್ನು 'ಸತ್ಕವೀಂದ್ರ ಶಂಕರ ವಿಬುಧ' ನೆಂಬುವನು ಬರೆದನೆಂದು ತಿಳಿಯುತ್ತದೆ.[೮]

ವೀರಗಲ್ಲುಗಳ ಶಿಲ್ಪ ತನ್ನ ಸಮಕಾಲೀನ ಶಿಲ್ಪದೊಡನೆ ಬೆಳೆದು ಉನ್ನತ ಸ್ಥಿತಿಯನ್ನು ಮುಟ್ಟಿ, ಮತ್ತೊಂದು ಕಾಲಕ್ಕೆ ಕೇವಲ ಪಡಿಯಚ್ಚಾಗಿ, ಅನಂತರ ಅವನತಿಯನ್ನು ಪಡೆದಂತೆಯೇ ವೀರಗಲ್ಲುಗಳ ಪಾಠವೂ ತನ್ನ ಸಮಕಾಲೀನ ಸಾಹಿತ್ಯದ ಪ್ರಭಾವವನ್ನು ಪಡೆದು ಬೆಳೆಯಿತು. ಕೆಲವಾರು ಕಡೆಗಳಲ್ಲಿ ಅವು ಉತ್ತಮ ಸಾಹಿತ್ಯವಾಗಿರುವುದನ್ನೂ ಗಮನಿಸಬಹುದು. ಮತ್ತೆ ಕೆಲವು ಕಡೆ ಕೇವಲ ಪಡಿಯಚ್ಚುಗಳಾಗಿ, ಏಕತಾನತೆಯ ದೋಷದಿಂದ ನರಳುತ್ತವೆ. ವೀರಗಲ್ಲುಗಳ ಶಿಲ್ಪದಲ್ಲಿ ಅಲ್ಲಲ್ಲಿ ಶಿಲ್ಪಿಯ ಪ್ರತಿಭೆಯನ್ನು ಗುರುತಿಸಲು ಬರುವಂತೆಯೇ ಇಲ್ಲಿಯೂ ಶಾಸನಕಾರನ ಪ್ರತಿಭೆಯನ್ನು ಅಲ್ಲಲ್ಲಿ ಗಮನಿಸಬಹುದು.

ವೀರಗಲ್ಲುಗಳ ಪಾಠವನ್ನು ಇತರ ದಾನಶಾಸನಗಳೊಂದಿಗೆ ಹೋಲಿಸಿ ನೋಡಿದಾಗ ಮುಖ್ಯವಾಗಿ ಎದ್ದು ಕಾಣುವ ವ್ಯತ್ಯಾಸವೆಂದರೆ, ವೀರಗಲ್ಲುಗಳ 'ವಸ್ತು' ಮತ್ತು 'ನಿರೂಪಣಾ ವಿಧಾನ'ಗಳು. ವೀರಗಲ್ಲುಗಳು ಮುಖ್ಯವಾಗಿ ಮಡಿದ ವೀರರ ಪರಾಕ್ರಮಗಳನ್ನು ಕೀರ್ತಿಸುವ ಸ್ಮಾರಕ ಶಿಲೆಗಳು. ಆದ್ದರಿಂದ ಪಾಠದ ಬಹುಭಾಗ ವೀರನ ಹೊಗಳಿಕೆಗಾಗಿ ಮೀಸಲಾಗಿರುತ್ತದೆ. ನಂತರ ಇದಕ್ಕೆ ಹೊಂದಿಕೊಂಡಂತೆ ಅರಸನ, ದತ್ತಿಯೇ ವಿವರಗಳ ಪ್ರಸ್ತಾಪ ಸಂಗ್ರಹವಾಗಿಯಾದರೂ ಸಮರ್ಪಕವಾಗಿ ಬರುತ್ತವೆ. ಇಲ್ಲಿ ದಾನವನ್ನೋ ದತ್ತಿಯನ್ನೋ ಬಿಟ್ಟ ಅರಸನ ಅಥವಾ ಒಡೆಯನ ಹೊಗಳಿಕೆಗೆ ಅಷ್ಟು ಪ್ರಾಶಸ್ತ್ಯವಿಲ್ಲ. ಗತಿಸಿದ ವೀರನ ಕೀರ್ತಿ, ಪ್ರತಾಪಗಳಿಗೆ ಪ್ರಾಶಸ್ತ್ಯ ನೀಡಲಾಗಿರುತ್ತದೆ. ಈ ದೃಷ್ಟಿಯಿಂದ ದಾನಶಾಸನಗಳ ಪಾಠದಿಂದ ವೀರಗಲ್ಲುಗಳ ಪಾಠ ಭಿನ್ನವಾಗಿದೆ.

ದಾನಶಾಸನಗಳಲ್ಲಿನ ಹಾಗೆ ಕೆಲವು ವೀರಗಲ್ಲುಗಳ ಪಾಠದಲ್ಲಿಯೂ ದೇಶ, ಅರಸ, ಅವನ ವಂಶ ಮುಂತಾದವುಗಳು ವರ್ಣನೆಗಳು ಬರುತ್ತವೆ. ಇಲ್ಲಿ ಅವೆಲ್ಲವೂ ಮಿತವಾಗಿಯೇ ಬಂದಿರುತ್ತವೆ ಎಂಬುದನ್ನು ಮರೆಯಬಾರದು. ಇಂತಹ ವೀರಗಲ್ಲುಗಳಲ್ಲಿ ವೀರನು ಮಾಡಿದ

---

೭ E. C. III. MI. 21, 1382

೮ E. C. VIII. Sb. 19, 1441

ಹೋರಾಟ, ಅದರ ಸ್ವರೂಪ. ಅದಕ್ಕೆ ಕಾರಣಗಳು, ಆ ಹೋರಾಟದಲ್ಲಿ ವೀರನ ಪಾತ್ರ ಮುಂತಾದ ವಿಷಯಗಳು ವಿವರವಾಗಿ ಬರುತ್ತವೆ ಎಂಬುದು ಮುಖ್ಯ.

ವೀರಗಲ್ಲುಗಳ ವಿಷಯ ನಿರೂಪಣಾ ಅನುಕ್ರಮಣಿಕೆ ಸಾಮಾನ್ಯವಾಗಿ ಇತರ ದಾನಶಾಸನಗಳಂತೆಯೇ ಪ್ರಾರ್ಥನಾ ಶ್ಲೋಕ, ಶಾಪಾಶಯ, ಶಾಸನಕಾರ, ವೀರಗಲ್ಲಿನ ಶಿಲ್ಪಿ ಮತ್ತು ರೂವಾರಿ ಇತ್ಯಾದಿಯನ್ನೊಳಗೊಂಡು ಕ್ರಮವಾಗಿ ಬಂದಿರುತ್ತವೆ. ಈ ನಡುವೆ ವೀರನ ಪರಾಕ್ರಮದ ಪ್ರಸ್ತಾಪ ಬರುತ್ತದೆ. ಎಲ್ಲಾ ವೀರಗಲ್ಲುಗಳೂ ಮಡಿದ ವೀರನಿಗೆ ದತ್ತಿ ಬಿಟ್ಟ ವಿಷಯವನ್ನು ತಿಳಿಸುವುದಿಲ್ಲ. ಕೆಲವು ವೀರಗಲ್ಲುಗಳು ಕೇವಲ ವೀರನ ಪರಾಕ್ರಮವನ್ನು ಕೀರ್ತಿಸುವ ಸಲುವಾಗಿಯೇ ನಿರ್ಮಿತವಾಗಿರುವ ನಿದರ್ಶನಗಳೂ ಉಂಟು.

ಕರ್ನಾಟಕದ ಮೊಟ್ಟಮೊದಲನೆಯ ವೀರಗಲ್ಲು ಸುಮಾರು ಕ್ರಿ.ಶ. ೫೦೦ರ ತಮಟಕಲ್ಲಿನ 'ಗುಣಮಧುರ'ನ ವೀರಗಲ್ಲು. ಈ ವೀರನ ಬಗ್ಗೆ ಇರುವ ಶಾಸನ ಸಂಸ್ಕೃತ ಭಾಷೆಯದು. ಇದೇ ವೀರಗಲ್ಲಿನ ಪಕ್ಕದಲ್ಲಿಯೇ ಇದೇ ವೀರನನ್ನು ಹೊಗಳುವ, ಕನ್ನಡ ಭಾಷೆಯ ವೃತ್ತ ಛಂದಸ್ಸಿನ ಒಂದು ಪದ್ಯವಿದೆ. ಇದು ಕನ್ನಡದ ಪ್ರಾಚೀನವಾದ ವೃತ್ತವೆಮದು ಈಗಾಗಲೇ ಪ್ರಸಿದ್ಧವಾಗಿದೆ.[೯] ಅನಂತರ ದೊರೆಯುವ ಎಲ್ಲಾ ವೀರಗಲ್ಲುಗಳೂ ಕನ್ನಡ ಭಾಷೆಯಲ್ಲಿವೆ. ಅಪವಾದವೆಂಬಂತೆ ಎಲ್ಲೋ ಒಂದೆರಡು ವೀರಗಲ್ಲುಗಳ ಪಾಠಗಳು ಸಂಸ್ಕೃತ ಭಾಷೆಯಲ್ಲಿವೆ. ಆದರೆ ಇಲ್ಲಿಯೂ ಸಂಸ್ಕೃತ ಭಾಷೆಯ ನಂತರ ಕನ್ನಡ ಭಾಷೆಯಲ್ಲಿಯೂ ವಿವರಗಳು ಇವೆ. ಈ ದೃಷ್ಟಿಯಿಂದ ನೋಡಿದಾಗ ತಮಟ ಕಲ್ಲಿನಲ್ಲಿ ವೀರಗಲ್ಲಿನ ಮೇಲಿರುವ ಸಂಸ್ಕೃತದ ಪಾಠ ಮತ್ತು ಪಕ್ಕದಲ್ಲಿಯೇ ಇರುವ, ಅದೇ ವೀರನನ್ನು ಹೊಗಳುವ ಕನ್ನಡ ಭಾಷೆಯ ವೃತ್ತ ಕುತೂಹಲಕಾರಿಯಾಗುತ್ತವೆ. ತಮಟಕಲ್ಲಿನ ವೀರಗಲ್ಲಿನ ಪಕ್ಕದಲ್ಲಿರುವ ಈ ಶಾಸನವನ್ನು ವೀರಗಲ್ಲಿನ ಪಾಠದ ಒಂದು ಭಾಗ ವೆಂದೇ ಸ್ವೀಕರಿಸಬಹುದೆಂದು ತೋರುತ್ತದೆ. ಆದ್ದರಿಂದ ಸುಮಾರು ಕ್ರಿ.ಶ. ೫೦೦ ರಿಂದ ಹಿಡಿದು ವಿಜಯನಗರದ ಕಾಲದವರೆಗಿನ ವೀರಗಲ್ಲುಗಳ ಪಾಠವನ್ನು ಗಮನಿಸಿದರೆ, ಒಂದು ರೀತಿಯ ಕ್ರಮಬದ್ಧವಾದ ಬೆಲವಣಿಗೆಯನ್ನು ಗುರುತಿಸಬಹುದು. ಈ ಬೆಳವಣಿಗೆ ಆರಂಭ ಕಾಲದಲ್ಲಿ ಪ್ರಯೋಗ ಶೀಲತೆಯಿಂದ ವೈವಿಧ್ಯ ಪೂರ್ಣವಾಗಿ ಬೆಳೆದು, ಹೊಯ್ಸಳರ ಕಾಲದಲ್ಲಿ ಪಡಿಯಚ್ಚಿನ ಮಾರ್ಗವನ್ನು ಹಿಡಿಯಿತು, ವಿಜಯನಗರ ಕಾಲದಿಂದ ಹಿಡಿದು ಶತಮಾನದಿಂದ ಶತಮಾನಕ್ಕೆ ಭಾಷೆ, ಶೈಲಿ ಮುಂತಾದ ದೃಷ್ಟಿಯಿಂದ ಅವನತಿಯನ್ನು ಹೊಂದುತ್ತಾ ಬಂದಿತು.

ಆರಂಭಕಾಲದ ವೀರಗಲ್ಲುಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದು ಬಾಣ, ಗಂಗ, ನೊಳಂಬರ ಆಳ್ವಿಕೆಗೆ ಒಳ ಪಟ್ಟಿದ್ದ ಪ್ರದೇಶಗಳಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳ ಸಂಖ್ಯೆ

---

೯ E. C. XI. Cd. 42, 43, ಸು. ೫೦೦

ಮೇಲಿನ ಸಂಖ್ಯೆಯೊಡನೆ ಹೋಲಿಸಿ ನೋಡಿದಾಗ ಬಹಳ ಕಡಿಮೆ ಎನ್ನಿಸುತ್ತದೆ. ಬಾಣ, ಗಂಗ, ನೊಳಂಬರ ಎಲ್ಲಾ ವೀರಗಲ್ಲುಗಳು ಸಾಮಾನ್ಯವಾಗಿ ಗದ್ಯದಲ್ಲಿಯೇ ಇವೆ. ಪದ್ಯ ರೂಪದಲ್ಲಿರುವ ವೀರಗಲ್ಲುಗಳು ದೊರೆಯುವುದು ಅತಿ ವಿರಳ. ಶಾಸನದ ಪಾಠವೂ ಅಷ್ಟೇನೂ ದೊಡ್ಡದಾಗಿರುವುದಿಲ್ಲ. ಶಾಸನದ ಪಾಟ ಒಂದು ಸಾಲಿನಿಂದ ಗರಿಷ್ಟ ಎಂದರೆ ಹತ್ತು ಸಾಲಿಗಳಿರಬಹುದು. ಇದಕ್ಕೆ ಕಾರಣ ವೀರಗಲ್ಲಿನ ಶಿಲ್ಪದ ಹರವು. ಅಂದರೆ ವೀರಗಲ್ಲಿನಲ್ಲಿ ವೀರನ ಶಿಲ್ಪಕ್ಕೆ ಪ್ರಾಧಾನ್ಯ ನೀಡುತ್ತಿದ್ದರು. ಇವರು ಆಯ್ದುಕೊಮಡ ಕಲ್ಲು ಮತ್ತು ಶಿಲ್ಪವನ್ನು ಬಿಡಿಸುತ್ತಿದ್ದ ವಿಧಾನ ಇವು ಸುದೀರ್ಘವಾದ ಪಾಠದ ಕೆತ್ತನೆಗೆ ಅವಕಾಶ ವೀಯುತ್ತಿರಲಿಲ್ಲ. ಇದಕ್ಕೆ ಮತ್ತೊಂದು ಕಾರಣವನ್ನು ಈ ರೀತಿ ಊಹಿಸಿಬಹುದೆಂದು ತೋರುತ್ತದೆ. ಇವರ ವೀರಗಲ್ಲುಗಳು ದೊರೆಯುವ ಪ್ರದೇಶ ತಿರುಳುಗನ್ನಡ ಸೀಮೆಯಾಗಿರದೆ, ತೆಲುಗು, ತಮಿಳು ಭಾಷೆಯ ಪ್ರಭಾವವಿರುವ ಪ್ರದೇಶವಾಗಿತ್ತು. ಆದ್ದರಿಂದ ಸಹಜವಾಗಿಯೇ, ಕನ್ನಡ ಭಾಷೆಗೆ ಅಷ್ಟಾಗಿ ಪ್ರೋತ್ಸಾಹವಿರಲಿಲ್ಲ ಅಥವಾ ಇಂತಹ ಸಣ್ಣ ವೀರಗಲ್ಲುಗಳ ರಚನೆಯ ಬಗ್ಗೆ ಅಷ್ಟಾಗಿ ಆಸಕ್ತಿ ಇರುತ್ತಿರಲಿಲ್ಲ. ಉದಾಹರಣೆಗೆ ಕೋಲಾರ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ, ಮೈಸೂರು ಜಿಲ್ಲೆಯ ಗುಂಡ್ಲುಪೇಟೆ, ಪಿರಿಯಾಪಟ್ಟಣ ಮುಂತಾದ ತಾಲ್ಲೂಕುಗಳಲ್ಲಿ ದೊರೆಯುವ ಆರಂಭ ಕಾಲದ ವೀರಗಲ್ಲುಗಳ ಪಾಠ ಬಹಳಷ್ಟು ಗದ್ಯದಲ್ಲಿಯೇ ಇದೆ. ಮತ್ತು ಇವುಗಳ ಮೇಲೆ ಸಾಕಷ್ಟು ತಮಿಳು, ತೆಲುಗು ಭಾಷೆಗಳ ಪ್ರಭಾವ ಆಗಿರುವುದನ್ನು ಗಮನಿಸಬಹುದು. ಆದರೆ ಶ್ರವಣಬೆಳಗೊಳ ಮುಂತಾದ ಕಡೆಗಳಲ್ಲಿ ದೊರೆಯುವ ಇವರ ಕೆಲವು ವೀರಗಲ್ಲುಗಳ ಪಾಠ ಕಾವ್ಯಾತ್ಮಕವಾಗಿರುವುದನ್ನು ಗಮನಿಸಬಹುದಾಗಿದೆ.

ಬಾಣ, ಗಂಗ ಮತ್ತು ನೊಳಂಬರ ಕಾಲದ ವೀರಗಲ್ಲುಗಳ ಪಾಠದ ವಿಷಯ, ನಿರೂಪಣಾಕ್ರಮವನ್ನು ಹೀಗೆ ಗುರುತಿಸಬಹುದೆಂದು ತೋರುತ್ತದೆ. ಆರಂಭದಲ್ಲಿ ಶುಭಸೂಚಕ ಪದ ಇರುತ್ತದೆ. ಅನಂತರ ಶಕ ಸಂವತ್ಸರದ ವಿವರ, ಅರಸನ ವಿವರ, ಯಾರು ಯಾರಿಗೆ ನಡೆದ ಹೋರಾಟ, ಆ ಹೋರಾಟದಲ್ಲಿ ಸತ್ತ ವ್ಯಕ್ತಿಯ ಹೆಸರು, ಅವನ ಮನೆಯವರಿಗೆ ದತ್ತಿಯನ್ನು ಕೊಟ್ಟವರ ಮತ್ತು ದತ್ತಿಯ ವಿವರ ; ಆ ನಂತರ ಶಾಪಾಶಯದ ಭಾಗ. ಇವರ ವೀರಗಲ್ಲುಗಳ ಪಾಠವನ್ನು ಇಲ್ಲಿ ಸ್ಥೂಲವಾಗಿ ಪರಿಚಯ ಮಾಡಿಕೊಳ್ಳುವುದು ಉಚಿತ. ಸುಮಾರು ೭ನೆಯ ಶತಮಾನದ ವೀರಗಲ್ಲೊಂದರ ಪಾಠ ಈ ರೀತಿ ಇದೆ :

"ಸ್ವಸ್ತಿ ಶ್ರೀ ವಿಕ್ರಮ ಮಹಾರಾಜನ್ ಪೃಥಿವೀ ರಾಜ್ಯಂಕೆಯ ಪಟ್ಟು (?) ರಕ್ಕಸನೂರು ಕೊಳ್ವಲ್ಲಿ ಪಾರ್ವ್ವರೊದೊಳ್ ಸತ್ತಾನ್ ಪೆರಾಣ್ಣೊವನ್ ಕಣ್ಬುಕದಾವೆದೆಕಟುನಿ ನೆತ್ತರ್ಪಟ್ಟಲದಕ್ಕ ಟಿವೊನ್ವಣ್ಣು ಮಹಾಪಾತಕನಕ್ಕುಮ್."[೧೦]

---

೧೦ E. C. XVII. Sp. 116, ಸು. ೭ನೇ ಶತ.

ಎಂಟನೆಯ ಶತಮಾನದ ಮತ್ತೊಂದು ವೀರಗಲ್ಲಿನ ಪಾಠ ಈ ರಿತಿ ಇದೆ : "ಸ್ವಸ್ತಿ ಶ್ರೀ ಸೞ್ಬೆಣ್ಣಾಡ ಮೂಜನ ಮುವತ್ತಾೞ್ಚರ ಆಳ್ತೊಡುಗೆಯನ್ ಕೇಸರಿ ತೊಱುವಾಳ್ಗಾಮಗನ್ ಆಲನ ತೊಱುಇಕ್ಕಿಸಿ ಬಿಟ್ಟಾನ್ ಮೊಹಜ್ಜನಮೊಸೆದು ಕೊಟ್ಟ ಕೞನಿ ಅಯ್ಯೊಗ್ಳ."[೧೧]

ಇದು ಇವರ ಕಾಲದ ಒಂದು ಸಾಮಾನ್ಯ ಸ್ವರೂಪ. ಇದಕ್ಕಿಂತ ಹೆಚ್ಚಿನ ವಿವರಗಳು ಇರುವ ಶಾಸನಗಳು ದೊರೆಯುವುದು ವಿರಳ. ಕೆಲವೊಮ್ಮೆ ವಿವರಗಳು ದೊರೆಯುವುದು ಎಂದರೆ ದತ್ತಿಯ ವಿವರಗಳನ್ನು ನೀಡುವಲ್ಲಿಯಷ್ಟೆ ಇದಕ್ಕಿಂತಲೂ ಚಿಕ್ಕದಾಗಿರುವ ವೀರಗಲ್ಲುಗಳ ಪಾಠಗಳು ದೊರೆಯುವುದುಂಟು. ಆ ತೆರನ ಕೆಲವು ನಿದರ್ಶನಗಳನ್ನು ಗಮನಿಸಬಹುದು.

"ಸ್ವಸ್ತಿ ಶ್ರೀ ಚೋಟಿಮಹಾರಾನಜಯ್ಯಯ್ಯಣ."[೧೨]

"ಸಕಕಾಲಂ ಎಣ್ಬುನುರತ್ತೊಂಬತ್ತನಾಲ್ಕನೆಯ ಪ್ರಜಾಪತಿ ಸಂವತ್ಸರಂ ಪ್ರವರ್ತಿಸೆ ಭೃಂಗಗಾವಣ್ಡನ ಮರ್ಮ್ಮ ಗಾವುಣ್ಡಯ್ಯನ ಕಲ್ಲು."[೧೩]

"ಮುದೆಯ್ಯ ತುಱುಗೊಳೊಳ್ ಮುಕ್ತಿಗೆಸನ್ದಂ"[೧೪]

ಇದೇ ರೀತಿಯ ಹಲವಾರು ನಿದರ್ಶನಗಳನ್ನು ಗಮನಿಸಬಹುದು.

ಗಂಗ, ನೊಳಂಬ ಬಾಣರ ಕಾಲದ ವೀರಗಲ್ಲುಗಳ ಪಾಠ ತುಂಬಾ ಚಿಕ್ಕದಾಗಿರುವುದರಿಂದ ಕೆಲವೊಮ್ಮೆ ಶಾಸನಗಳ ಅರ್ಥ ಅಸ್ಪಷ್ಟವಾಗುತ್ತದೆ. ಕೆಲವೊಮ್ಮೆ ವೀರನು ಸತ್ತ ಘಟನೆಯ ಸಂಪೂರ್ಣ ವಿವರಗಳು ದೊರೆಯುತ್ತದೆ, ಕೆಲವೊಮ್ಮೆ ದೊರೆಯುವುದಿಲ್ಲ. ಪದ್ಯರೂಪದಲ್ಲಿರುವ ವೀರಗಲ್ಲುಗಳ ಪಾಠ ದೊರೆಯುವುದು ಅತಿ ಅಪರೂಪದ ಸಂಗತಿ. ಕೆಲವೊಮ್ಮೆ ದೊರೆತರೂ ಉತ್ತಮ ಕಾವ್ಯಾಂಶವನ್ನು ಹೊಂದಿರದೆ ಇರುವ ಸಂಭವವೂ ಉಂಟು. ಆತಕೂರಿನ ಒಂದು ವೀರಗಲ್ಲು ಮತ್ತು ಶ್ರವಣಬೆಳಗೊಳದ ಎರಡು ವೀರಗಲ್ಲುಗಳ ಪಾಠ ಕಾವ್ಯಾತ್ಮಕವಾಗಿದೆ ಎಂಬುದು ಗಮನಿಸಬೇಕಾದ ಅಂಶ.[೧೫]

ಗಂಗ, ನೊಳಂಬ, ಬಾಣರ ಕಾಲದ ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ಶಾಸನಕಾರರು, ವೀರನು ಹೋರಾಟದಲ್ಲಿ ಮಡಿದ ಎಂಬುದನ್ನು ತಿಳಿಸಲು 'ಸ್ವರ್ಗ'ಯಾದ, 'ಸುರಲೋಕಂ ಪೊಕ್ಕಂ' ಎಂಬ ವಾಕ್ಯಗಳನ್ನಷ್ಟೆ ಪದೇ ಪದೇ ಪ್ರಯೋಗಮಾಡಿರುವುದು ಕಂಡು

೧೧ E. C. XVII. Mr. 156, ಸು. ೮ನೇ ಶತ.
೧೨ E. C. X. Gd. 72, ಸು. ೯೦೦
೧೩ E. C. XI. Hr. 31, 971
೧೪ E. C. XI. Hk. 87, 975
೧೫ E. C. II. Sb. 138, 139, 940

ಬರುತ್ತದೆ. ಮುಂದಿನ ಶತಮಾನಗಳ ವೀರಗಲ್ಲುಗಳಲ್ಲಿ ದೊರೆಯುವಂತೆ ವೀರನು ಸ್ವರ್ಗವಾಸಿಯಾದ ಬಗ್ಗೆ ಸುದೀರ್ಘವಾದ ವಿವರನೆ ದೊರೆಯುವುದಿಲ್ಲ. ಈ ಪ್ರದೇಶದಲ್ಲಿ ದೊರೆಯುವ ಇವರ ಅವಧಿಯ ಯಾವುದೇ ವೀರಗಲ್ಲಿನ ಪಾಠದಲ್ಲಿಯೂ, ಮುಂದಿನ ಶತಮಾನಗಳಲ್ಲಿ ದೊರೆಯುವ "ಜಿತೇನ ಲಭ್ಯತೇ ಲಕ್ಷ್ಮೀ" ಎಂದು ಆರಂಭವಾಗುವ ಶ್ಲೋಕ ದೊರೆಯುವುದೂ ಅಪರೂಪ. ಈ ಶ್ಲೋಕವು ಕ್ರಿ. ಶ. ೯೭೦ ರ ನಂತರದ ವೀರಗಲ್ಲುಗಳ ಪಾಠದಲ್ಲಿ ದೊರೆಯಲಾರಂಭಿಸುತ್ತದೆ.[೧೬]

ಈ ಕಾಲದ ಇವರ ವೀರಗಲ್ಲುಗಳು ಕೆಲವಾರು ದೋಷಗಳನ್ನು ಹೊಂದಿದ್ದರೂ ತಮ್ಮ ಎಲ್ಲಾ ಸೀಮಿತಮಿತಿಯಲ್ಲಿ ಯುದ್ಧಕ್ಕೆ ಸಂಬಂಧಿಸಿದಂತೆ ಅನೇಕ ಉಪಯುಕ್ತ ಅಂಶಗಳನ್ನು ತಿಳಿಸುತ್ತವೆ ಎಂಬುದು ಮುಖ್ಯ.

ತಿರುಳುಗನ್ನಡ ಪ್ರದೇಶಗಳಲ್ಲಿ ದೊರೆಯುವ ರಾಷ್ಟ್ರಕೂಟರ ವೀರಗಲ್ಲುಗಳ ಪಾಠ ಗದ್ಯ–ಪದ್ಯಗಳೆರಡರಲ್ಲಿಯೂ ದೊರೆಯುತ್ತದೆ. ಈ ಗದ್ಯ ಪದ್ಯಗಳೆರಡೂ ಬಹು ಸಮರ್ಥವಾಗಿ ಮೂಡಿಬಂದಿವೆ. ಗಂಗ, ಬಾಣ, ನೊಳಂಬರ ವೀರಗಲ್ಲುಗಳ ಪಾಠಕ್ಕಿಂತಲೂ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳ ಪಾಠವು ಕಾವ್ಯಾತ್ಮಕವಾಗಿದ್ದು ಗಮನಾರ್ಹವಾಗಿವೆ. ಇದಕ್ಕೆ ನಿದರ್ಶನವನ್ನಾಗಿ ಉತ್ತಮ ಗದ್ಯವನ್ನು ಹೊಂದಿರುವ ಮಾವಳಿ[೧೭] ರೋಣ, ಯಲಿಸಿರೂರು, ಹೂಲಿ ಮುಂತಾದ ಕಡೆಗಳಲ್ಲಿನ ವೀರಗಲ್ಲುಗಳ ಪಾಠವನ್ನು ಕೊಡಬಹುದು.[೧೮]

ಹನ್ನೊಮದನೆಯ ಶತಮಾನದ ನಂತರದ ವೀರಗಲ್ಲುಗಳ ಭಾಷೆ ಗದ್ಯ ಮತ್ತು ಪದ್ಯಗಳೆರಡರಲ್ಲಿಯೂ ನಿರೂಪತವಾಗತೊಡಗಿದವು. ಇದೇ ಶತಮಾನದಿಂದ ಶಾಸನಕಾರರು, ವೀರತನವನ್ನು, ವೀರತನದ ಮೌಲ್ಯವನ್ನು ಎತ್ತಿಹಿಡಿಯುವ ಸಂಸ್ಕೃತ ಶ್ಲೋಕಗಳನ್ನು ವೀರಗಲ್ಲುಗಳ ಪಾಠದಲ್ಲಿ ತರುವ ಪ್ರಯತ್ನ ಮಾಡಿದರು. ಅಂದರೆ ವೀರಗಲ್ಲುಗಳ ಪಾಠದ ಆರಂಭದಲ್ಲಿಯೋ, ನಡುವೆಯೋ, ಕೊನೆಯಲ್ಲಿಯೋ "ಜಿತೇನ ಲಭ್ಯತೇ ಲಕ್ಷ್ಮೀ" ಎಂದು ಆರಂಭವಾಗುವ ಅಥವಾ "ದ್ವಾ ಇಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ"[೧೯] ಎಂದು ಆರಂಭವಾಗುವ ಅಥವಾ "ಸರ್ವರೀ ದೀಪಕೋ ಚನ್ದ್ರ ಪ್ರಭಾತೇ ರವಿದೀಪಕಃ ತ್ರೈಲೋಕ್ಯ ದೀಪಕೋ ಧರ್ಮ ಸುಪುತ್ರಃ ಕುಲದೀಪಕಃ"[೨೦] ಎಂಬ ಶ್ಲೋಕವನ್ನು ವ್ಯಾಪಕವಾಗಿ ಪ್ರಚುರಪಡಿಸಿದರು.

೧೬ E. C. VII. Sh. 24, 970
೧೭ E. C. VIII. Sb. 10, 800
೧೮ S. I. I. XI. Pt I. 36, 942
ಅದೇ. ೫೧, ೧೦೦೬ ಮತ್ತು E. I. XVIII ಪು. ೧೭೧–೭೨, ಸು. ೯೮೫
೧೯ E. C. VII. Sk. 307, 1016
೨೦ E. C. VII. Sb. 16, 1015

ವೀರಗಲ್ಲುಗಳ ಪಾಠಕ್ಕೆ ಸಂಬಂಧಿಸಿದಂತೆ ಹತ್ತನೆಯ ಶತಮಾನದಿಂದ ಆದ ಒಂದು ವಿಶೇಷ ಬದಲಾವಣೆ ಎಂದರೆ ವೀರಸ್ವರ್ಗದ ವರ್ಣನೆ ವಿವರವಾಗಿ ಬರಲಾರಂಭಿಸಿದುದು ಮತ್ತು ಈ ವರ್ಣನೆ ತುಂಬ ವೈಭವಪೂರ್ಣವಾಗಲಾರಂಭಿಸಿತು ಎನ್ನುವುದು.

ಹನ್ನೊಂದನೆಯ ಶತಮಾನದ ಆರಂಭದ ವೇಳೆಗೆ ವೀರಗಲ್ಲುಗಳ ಪಾಠ ಒಂದು ಖಚಿತವಾದ ರೂಪವನ್ನು ಪಡೆಯಲು ಆರಂಭಿಸಿತು. ಈ ರೂಪದ ವೀರಗಲ್ಲಿನ ಪಾಠದ ವಿಷಯಾನುಕ್ರಮಣಿಕೆಯನ್ನು ಈ ರೀತಿ ಗುರುತಿಸಬಹುದು. ಪಾಠದ ಆರಂಭದಲ್ಲಿ ಶುಭವಾದಕ ಪದಗಳಾದ 'ಸ್ವಸ್ತಿ', 'ಸ್ವಸ್ತಿಶ್ರೀ', 'ಶ್ರೀ' ಮುಂತಾದುವುಗಳಿರುತ್ತವೆ. ಅನಂತರ ಇತರ ದಾನಶಾಸನಗಳಂತೆ ಆಯಾ ಧರ್ಮದ ಪ್ರಾರ್ಥನಾ ಶ್ಲೋಕದಿಂದ ಆರಂಭವಾಗುತ್ತದೆ. ಇದಾದ ಮೇಲೆ ಆಳುತ್ತಿರುವ ರಾಜನ ಹೆಸರು, ಯಾವ ಕಾರಣಕ್ಕಾಗಿ ಯಾರು ಯಾರಿಗೆ ಯುದ್ಧವಾಯಿತು (ಹೋರಾಟ ಬೇರೆ ರೀತಿಯದಾದರೆ ಅದರ ವಿವರ ಇರುತ್ತದೆ), ವೀರನು ಹೇಗೆ ಪರಾಕ್ರಮದಿಮದ ಹೋರಾಡಿ ಮಡಿದ ಎಂಬ ವಿವರಗಳನ್ನು ಸಾಮಾನ್ಯವಾಗಿ ಗದ್ಯದಲ್ಲಿ ವಿವರಿಸಿರುತ್ತಾರೆ. ಆ ನಂತರ ವೀರನ ಪರಾಕ್ರಮವನ್ನು ವರ್ಣಿಸುವ ಒಂದೆರಡು ಪದ್ಯಗಳು ಇರುತ್ತವೆ. ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ದ ವರ್ಣನೆಯೂ ಇಲ್ಲೇ ಬರುತ್ತದೆ. ಆ ನಂತರ ದತ್ತಿಯ ವಿವರಗಳು ಇರುತ್ತವೆ. ಯಾರು ವೀರಗಲ್ಲನ್ನು ನಿಲ್ಲಿಸಿದರು, (ಕೆಲವೊಮ್ಮೆ) ವೀರಗಲ್ಲನ್ನು ಎಲ್ಲಿ ನಿಲ್ಲಿಸಿದರು, ಶಾಸನದ ಪಾಠವನ್ನು ರಚಿಸಿದವನು ಯಾರು, ಯಾರು ಕೆತ್ತಿದ ಶಿಲ್ಪಿ ಮುಂತಾದ ವಿವರಗಳು ಬರುತ್ತವೆ. ಇಷ್ಟು ವಿಷಯವನ್ನು ಅಚ್ಚುಕಟ್ಟಾಗಿ ನಿರೂಪಿಸಲು ಚಂಪೂ ಶೈಲಿಯನ್ನು ಇವರು ಅಳವಡಿಸಿಕೊಂಡರು.

ಇದೇ ಒಂದು ವಿಧಾನ ಮುಂದಿನ ಶತಮಾನಗಳಲ್ಲಿಯೂ ಮುಂದುವರಿಯಿತು. ಹೀಗಾಗಿ ವೀರಗಲ್ಲುಗಳ ಪಾಠ ಪಡಿಯಚ್ಚುಗಳಾಗಿ ಪರಿಣಮಿಸಿದುವು. ಆದರೂ ಕೆಲವಾರು ಶಾಸನಕಾರರ ಪ್ರತಿಭೆಯಿಂದಾಗಿ ಉತ್ತಮ ಪಾಠವಿರುವ ನಿದರ್ಶನಗಳೂ ಇಲ್ಲದಿಲ್ಲ.

ಹದಿನಾಲ್ಕನೆಯ ಶತಮಾನದಿಂದ ವೀರಗಲ್ಲುಗಳ ಭಾಷೆ ಮತ್ತೆ ಗದ್ಯದ ಕಡೆಗೆ ಒಲಿಯಿತು. ಚಂಪೂ ಶೈಲಿ ಹಿಂದುಳಿಯಿತು. ಹದಿನೈದು, ಹದಿನಾರನೇ ಶತಮಾನಗಳ ವೀರಗಲ್ಲುಗಳ ಪಾಠವಂತೂ ಸಂಪೂರ್ಣ ಗದ್ಯದಲ್ಲಿಯೇ ಇದೆ. ಈ ಗದ್ಯವೂ ಕೆಲವೊಮ್ಮೆ ಗ್ರಾಮ್ಯ ಮಾತುಗಳಿಂದಲೇ ತುಂಬಿದೆ. ಶಾಸನ ಪಾಠದಲ್ಲಿ ಅಕ್ಷರ ಸ್ಖಾಲಿತ್ಯಗಳು ಬಹಳವಾಗಿ ಕಾಣಿಸಿಕೊಂಡಿವೆ. ಅಲ್ಲದೆ ಗಂಗರ ಕಾಲದ ವೀರಗಲ್ಲುಗಳಲ್ಲಿನಂತೆ ಪಾಠಗಳು ತುಂಬಾ ಮೊಟಕಾಗತೊಡಗಿದವು.

ಇಲ್ಲಿ ಕೆಲವು ವೀರಗಲ್ಲುಗಳ ಪಾಠವನ್ನು ಗಮನಿಸುವುದು ಸೂಕ್ತವೆಂದು ತೋರುತ್ತದೆ.

"ಚೆಂನಪ್ಪನು ತಂನವೊಡೆಯನ ಮುಂದೆ ನಾಗಾರ್ಜುನ ಕೋಟೆಯಲಿ ಸಮರಂಗದಲಿ ಕಾದಿ ಮೆರೆದು ದೇವಲೋಕದಲ್ಲಿ ದೇವರ ಪಾದಕ್ಕೆ ಸಂದನೆಂದು ಚಂದ್ರಬೋವನ ತಮ್ಮ ನಾಯಕನು ತನ್ನ ಮಗ ಚೆಂನಪ್ಪನ ಹೆಸರಿನಲಿ ವೀರಸ್ತಂಭವ ಪ್ರತಿಷ್ಠೆಯ ನಿಲಿಸಿ ಕಂಬವ ಮಾಡಿದ ಬೋಗೋಜಂಗೆ ಪುಲುಮಾಮಿಡಿಯ ಕೆಜೆಯು.[೨೧]

"ಬೀರಗುಡನು ಹಾಯ್ದು ಹೊಯಿಸಿಕೊಂಡು ಬಿದ್ದಲ್ಲಿ ಆತನ ಮದವಳಿಗೆ ಗೌರಾಯಿ ಸಹಗಮನವ ಮಾಡಿ ವೀರಸ್ವರ್ಗ ಪಡೆದರು ಯಿ ಸಾಸನವ ಬರೆದಂ ಕರಊರದ ವಿರಜ್ಜನು ಕಲ ಮಾಡಿದಾತ ಹರಿಕೊಪ್ಪದ ದುಗೋಜ."[೨೨]

"ವೋಟೂರದಾನ ಮೂಲಿ ಬಿಸಗಉಡನ ಮಗ ಬೊಂಮರಸಗವುಡನೂ ಸೊರಬಕೆ ಹೋಗಿ ಬಹಾಗ ಕಳ್ಳರ ಕೂಡ ಕಾದಿ ದೇವರ ಪಾದಕ್ಕೆ ಸಂದನು."[೨೩]

"ಬೂದಿ ಕುಪ್ಪೆಯ ಗಉಡ ಚೂಸಪ್ಪನ ಮಗ ದೇವಪ್ಪನ ಹುಲಿಕಚ್ಚಿ ಸತ್ತುದಕ್ಕೆ ಹೊಯಿದ ವೀರಗಲ್ಲು ಪಾಳಿಯದ ನಾಗೋಜಿ ತಿದ್ದಿದ."[೨೪]

ಮತ್ತೆ ಕೆಲವು ಕಡೆ ವೀರಗಲ್ಲು ಯಾವ ವ್ಯಕ್ತಿಯ ಸ್ಮಾರಕವಾಗಿರುತ್ತದೆಯೋ ಆ ವ್ಯಕ್ತಿಯ ಹೆಸರು ಮಾತ್ರ ಇರುತ್ತದೆ.

"ಮರಾರಿ ಮಲಣ ನಾಯಕರು."[೨೫]

"ಶ್ರೀ ಮದ್ವೀರ ಚಂಗಳುವರಸರು ಪಿರಿರಾಜು."[೨೬]

"ಎಲ್ಲೆಯ ನಾಯಕನು ಹೊಂಮಾಡಿಯಲಿ ಸತನು ಅಂತು ಆತನ ಹೆಸರು."[೨೭]

ಇದು ಸಾಮಾನ್ಯವಾಗಿ ಈ ಅವಧಿಯಲ್ಲಿ ದೊರೆಯುವ ವೀರಗಲ್ಲುಗಳ ಪಾಠಲಕ್ಷಣ ಅಥವಾ ಸ್ವರೂಪ. ಇವುಗಳಿಂದ ಆ ಕಾಲದ ವೀರರ ಬಗ್ಗೆಯಾಗಲೀ, ಯುದ್ಧದ ಬಗ್ಗೆಯಾಗಲೀ, ಖಚಿತವಾಗಿ, ಸ್ಪಷ್ಟವಾಗಿ ಹೆಚ್ಚಿನ ವಿಷಯಗಳೇನೂ ತಿಳಿದು ಬರುವುದಿಲ್ಲ.

---

೨೧ E. C. XI. CI. 42, 1403
೨೨ E. C. VIII. Sa. 74, 1420
೨೩ E. C. VIII. Sb. 79, 1457
೨೪ E. C. IX. Kn. 96, 1653
೨೫ M. A. R.1935.7, ಸು. ೧೬ನೇ ಶತ.
೨೬ E. C. IV. Hs. 35,ಸು, ೧೬ನೇ ಶತ.
೨೭ S. I. I. XX. 421, ಈಚಿನ ಬರಹ,

ಒಂದೇ ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳ ಪಾಠ ಕೆಲವೊಮ್ಮೆ ಒಂದೇ ರೀತಿಯಲ್ಲಿರುತ್ತವೆ. ವ್ಯಕ್ತಿಯ ಹೆಸರನ್ನು ಬಿಟ್ಟರೆ ಉಳಿದಂತೆ ದೊರೆಯುವ ಎಲ್ಲಾ ವಿವರಗಳು ಒಂದೇ ಆಗಿರುತ್ತವೆ. ಕ್ರಿ.ಶ. ೯೭೨ ರ ಬಳ್ಳಾರಿ ಜಿಲ್ಲೆ, ಹರಪನಹಳ್ಳಿ ತಾಲ್ಲೂಕಿನ ಕಡಬಗೆರೆಯ ಎರಡು ವೀರಗಲ್ಲುಗಳ ಪಾಠ ಕೆಲವಾರು ವ್ಯತ್ಯಾಸಗಳನ್ನು ಬಿಟ್ಟರೆ, ಉಳಿದೆಲ್ಲ ವಿವರಗಳಲ್ಲಿ ಒಂದೇ ಆಗಿವೆ.[೨೮] ಶಿವಮೊಗ್ಗ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಸೊರಟೂರು ಎಂಬ ಗ್ರಾಮದಲ್ಲಿ ಕ್ರಿ.ಶ. ೯೩೪ ರ ಮುರು ವೀರಗಲ್ಲುಗಳ ಪಾಠದಲ್ಲಿ ಸತ್ತವ್ಯಕ್ತಿಗಳ ಹೆಸರುಗಳನ್ನು ಬಿಟ್ಟರೆ ಉಳಿದ ಎಲ್ಲಾ ವಿವರಗಳೂ ಒಂದೇ ಆಗಿವೆ.[೨೯] ಕ್ರಿ.ಶ. ೯೦೦ ರಿಂದ ೯೫೦ರ ಅವಧಿಗೆ ಸೇರಿದ ನೊಳಂಬರ ಒಂಭತ್ತು ವೀರಗಲ್ಲುಗಳಿವೆ. ಇವುಗಳ ಪಾಠ, ಶೈಲಿ, ವಿವರಣೆಗಳು ಒಂದೇ ಇದ್ದು ಒಂದೇ ಯುದ್ಧದಲ್ಲಿ ಮಡಿದ ವೀರರ ಬಗ್ಗೆ ಮಾಹಿತಿ ದೊರೆಯುತ್ತದೆ.[೩೦] ಹಾಗೆಯೇ ಶಿವಮೊಗ್ಗ ಜಿಲ್ಲೆಯ ಮಡಿವಾಳ ಎಂಬ ಗ್ರಾಮದಲ್ಲಿನ ಐದು ವೀರಗಲ್ಲುಗಳ ಪಾಠ ಒಂದೇ ಆಗಿದೆ.[೩೧] ಹೀಗೆ ಒಂದೇ ಯುದ್ಧದಲ್ಲಿ ಮಡಿದ ವೀರರ ಅನೇಕ ವೀರಗಲ್ಲುಗಳಲ್ಲಿ ಪಾಠ ಸಾಮಾನ್ಯವಾಗಿ ಒಂದೇ ರೀತಿ ಇರುವ ನಿದರ್ಶನಗಳನ್ನು ಗಮನಿಸಬಹುದು.[೩೨]

ಕೆಲವು ವೇಳೆ ಪಾಠ ಒಂದೇ ಆಗಿದ್ದರೂ ವಾಕ್ಯಗಳು ಹಿಂದು ಮುಂದಾಗಿರುವುದುಂಟು. ಮತ್ತೆ ಕೆಲವೊಮ್ಮೆ ಕೆಲವಾರು ವಿವರಣೆಗಳು ಬಿಟ್ಟು ಹೋಗಿರುವುದೂ ಉಂಟು. ಅಂತಹ ಒಂದು ನಿದರ್ಶನವನ್ನು ಇಲ್ಲಿ ಗಮನಿಸಬಹುದು.

“೧೨೦೫ ತಾರಣ ಸಂವತ್ಸರದ ಪುಸ್ಯ ಸು ೧ ಬ್ರಿ ಕದಿರು ಮಿದ್ದೆಯ ವಸುಧಾರೆಯವರು ಬಂದು ಕಾದಿದಲ್ಲಿ ಮಿಂಡಗಉಡನ ಮಗ ಮಿಂಡನು ಎತ್ತಿದ ಹರಿಗೆ ಮುತ್ತಿದ ಆಳನು ಆ ಪರಿವಾರ ಮೆಚ್ಚಲು ಹೊಯಿದು ಸುರಲೋಕ ಪ್ರಾಪ್ತನಾದನು..........”[೩೩]

ಅಲ್ಲಿನದೇ ಮತ್ತೊಂದು ಶಾಸನದ ಪಾಠ ಈ ರೀತಿ ಇದೆ.

---

೨೮ S. I. I. IX. 57, 58, 972
೨೯ E. C. VIII. HI. 21, 22, 23, 934
೩೦ E. C. X. Bp. 40, ಸು, ೯೦೦
ಅದೇ. ೪೯, ಸು. ೫೦೦
೩೧ E. C. VIII. Sb. 60, 61, 62, 63, 64, 1032
೩೨ S. I. I. XX. 113, 114, 1146
ಅದೇ. ೩೧೬, ೩೧೭, ಸು. ೧೨–೧೩ನೇ ಶತ.
E. C. VI. Tk. 48, 49, 1287
ಅದೇ. ೪೯, ೪೭, ೧೨೧೪
೩೩ E. C. VI. Cm. 1, 2,1446

"ಕದಿರು ಮಿದೆಯ ಬಂದು ವಾಸುಧಾರೆಯವರು ಬಂದು ಮುತ್ತಿ ಕಾದಿದಲಿ ಮಂಕದಲಿ ಬಿದ್ದ ಹಿರಿಯ ಮಾದಿಗಉಂಡನ ಬಿಂಮಯನು ಮ ಬಯಿರಣ ಸ ೧೨೦೫ ತಾರಣ ಸಂವತ್ಸರದ ಭಾದ್ರಪದ ಬ. ೧೦ ಸೋ ಸುರಲೋಕ ಪ್ರಾಪ್ತನಾದ."[೩೪]

ಈ ಒಂದು ನಿದರ್ಶನದಿಂದ ಪಾಠ ಒಂದೇ ರೀತಿ ಇದ್ದರೂ ಒಂದೇ ಹೋರಾಟಕ್ಕೆ ಸಂಬಂಧಿಸಿದುದಲ್ಲವೆಂಬುದು ಪಾಠದಿಂದಲೇ ಸ್ಪಷ್ಟವಾಗುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದು ವೀರಗಲ್ಲಿನ ಪಾಠವನ್ನು ಸಿದ್ಧಪಡಿಸುವವರು ತಮ್ಮ ಹಿಂದಿನ ಶಾಸನ ರಚನಕಾರರ ರೀತಿ ಮತ್ತು ಶೈಲಿಯನ್ನು ಅನುಸರಿಸುತ್ತಿದ್ದುದು ಎನ್ನುವುದು ಈ ಒಂದು ನಿದರ್ಶನದಿಂದ ಒಂದೇ ರೀತಿಯ ಪಾಠವಿರುವ ಒಂದೇ ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳ ಪಾಠದ ಬಗ್ಗೆ ಒಂದು ಅಭಿಪ್ರಾಯಕ್ಕೋ ಬರಲು ಅವಕಾಶ ದೊರೆತಂತೆ ತೋರುತ್ತದೆ. ಸಾಮಾನ್ಯ ಯೋಧರು ಯುದ್ಧದಲ್ಲಿ ಮಡಿದಾಗ ಅವರೆಲ್ಲರ ಬಗ್ಗೆಯೂ ಪ್ರತ್ಯೇಕವಾದ ಶಾಸನ ಪಾಠವನ್ನು ತಯಾರು ಮಾಡುವುದಕ್ಕೆ ಆರ್ಥಿಕವಾಗಿ ಶಕ್ತರಲ್ಲದ ಜನ ಒಟ್ಟಿಗೆ ವೀರಗಲ್ಲುಗಳನ್ನು ನಿಲ್ಲಿಸಿ, ಅವುಗಳ ಪಾಠವನ್ನು ವ್ಯಕ್ತಿಗಳ ಹೆಸರುಗಳ ಬದಲಾವಣೆಯೊಂದಿಗೆ ವೀರಗಲ್ಲುಗಳ ಮೇಲೆ ಕೆತ್ತಿಸುತ್ತಿದ್ದಿರಬಹುದೆಂದು ಹೇಳಬಹುದು.

ಈ ರೀತಿ ವೀರಗಲ್ಲುಗಳಲ್ಲಿ ಪಾಠ ಇರುವುದರಿಂದ ಕೆಲವೊಮ್ಮೆ ಇದರಿಂದ ಅನುಕೂಲ ವಾಗುವುದೂ ಉಂಟು. ಅಂದರೆ ಒಂದು ವೀರಗಲ್ಲಿನ ಪಾಠ ಅಸ್ಪಷ್ಟವಾಗಿದ್ದರೆ ಅಥವಾ ತ್ರುಟಿತವಾಗಿದ್ದರೆ, ಮತ್ತೊಂದು ವೀರಗಲ್ಲಿನ ಪಾಠದ ಸಹಾಯದಿಂದ ಮೊದಲಿನ ವೀರಗಲ್ಲಿನ ಪಾಠವನ್ನು ಅರ್ಥೈಸುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿಯ ಪ್ರಯತ್ನವನ್ನು ಶ್ರೀ ಎ. ಎಂ. ಅಣ್ಣಿಗೇರಿ ಮತ್ತು ಶ್ರೀ ಮೇವುಂಡಿ ಮಲ್ಲಾರಿಯವರು ತಮ್ಮ 'ಶಾಸನ ಸಾಹಿತ್ಯ ಸಂಚಯ'ದಲ್ಲಿ ಮಾಡಿರುವುದನ್ನು ಗಮನಿಸಬಹುದು[೩೫] ಕೈಕಿಣಿ ವೀರಗಲ್ಲಿನ ಪಾಠದ ಅಡಿಟಿಪ್ಪಣಿಯಲ್ಲಿ ಅವರು ಈ ರೀತಿ ತಿಳಿಸುತ್ತಾರೆ. "ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ ಇದೇ ವಿಷಯವನ್ನು ನಿರೂಪಿಸುವ ಇನ್ನೊಂದು ವೀರಶಾಸನ ಇದೇ ಊರಿನಲ್ಲಿದೆ. ಈ ಆಯ್ದ ಶಾಸನವು ಹೆಚ್ಚು ವಿವರಗಳನ್ನು, ಕೊನೆಯಲ್ಲೆರಡು ಪದ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಅರ್ಥ ಸಂದಿಗ್ಧವಾಗಿರುವೆಡೆಯಲ್ಲಿ ವಾಚಕರಿಗೆ ನೆರವಾಗುವ ದೃಷ್ಟಿಯಿಂದ ಇನ್ನೊಂದು ಪಾಠಾಂತರವನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದೆ" ಎಂಬುದಾಗಿ ತಿಳಿಸಿ, ಎರಡೂ ಶಾಸನಗಳ ಪಾಠಗಳ ಆಧಾರದ ಮೇಲೆ ಆ ವೀರಗಲ್ಲಿನ ಅರ್ಥವನ್ನು

---

೩೪ ಅದೇ. ೧೧೯, ೧೨೮೪

೩೫ ಎ. ಎಂ. ಅಣ್ಣಿಗೇರಿ, ಮೇವುಂಡಿ ಮಲ್ಲಾರಿ (ಸಂ.) : ಶಾಸನಸಾಹಿತ್ಯ ಸಂಚಯ. ಪು. ೧೫೯–೬೦

ಹೀಗೆ ನಿರ್ಣಯಿಸುತ್ತಾರೆ. "ಎರಡು ಶಾಸನಗಳನ್ನು ಅಳವಡಿಸಿಕೊಂಡು ಅರ್ಥ ಮಾಡಿದಾಗ ಜಕ್ಕಣನ ತಮ್ಮ ಮತ್ತು ಮಗ ಇಬ್ಬರ ಹೆಸರೂ ತಮ್ಮ ನಾಯಕ ಎಂದಿದ್ದಿತೆಂದೂ, ತಂದೆ ಮಕ್ಕಳಿಬ್ಬರೂ ಕಾಳಗದಲ್ಲಿ ಮಡಿದರೆಂದೂ ತೋರುತ್ತದೆ." ವೀರಗಲ್ಲುಗಳ ಪಾಠವನ್ನು ವಿವರಗಳನ್ನು ತಿಳಿಯವಲ್ಲಿ ಈ ರೀತಿಯ ಪ್ರಯತ್ನಗಳು ನಡೆಯಬೇಕಾಗಿದೆ.

ಈ ರೀತಿಯ ವೀರಗಲ್ಲುಗಳ ಪಾಠದಿಂದ ಒಂದು ಯುದ್ಧದ ಸಂಪೂರ್ಣ ಚಿತ್ರವನ್ನು ಪುನರ್ರಚಿಸಿ, ಹೋರಾಟದ ಸಂಪೂರ್ಣ ಚಿತ್ರವನ್ನು ಗ್ರಹಿಸುವುದು ಸಾಧ್ಯವಾಗುತ್ತದೆ. ಕ್ರಿಶ. ೧೪೪೬ರ ಶಿಕಾರಿಪುರದ ಎರಡು ವೀರಗಲ್ಲುಗಳ ಪಾಠ ಒಂದೇ ಆಗಿದ್ದು ಮೇಲೆ ತಿಳಿಸಿದಂತೆ ಒಂದು ಹೋರಾಟದ ಚಿತ್ರವನ್ನು ಪುನರ್ರಚಿಸಲು ಸಹಾಯವಾಗುತ್ತದೆ. (ಇವುಗಳ ಶಿಲ್ಪದಲ್ಲಿಯೂ ಸಾಮ್ಯತೆ ಇದೆ. ಚಿತ್ರ ೨೧೩, ೨೧೪)

"ಶ್ರೀ ಮಲ್ಲಿಕಾರ್ಜುನ ದೇವರು ಶ್ರೀ ಕ್ರೋಧನ ಸಉರ್ಚ್ಛರ ಮಾಘ ಸು. ೧೫ ಸೋಮವಾರ ಶ್ರೀಮತು ತಾಜೆಗವುಡನ ನಾಗಗಉಡನ ಮಗ ಮಾದಿಗಉಡ ಪಲಿನವರ ಕೂಡೆ ಕಾದಿ ದೇವಲೋಕಕ್ಕೆ ಹೋದ ಸಂದ ಆತನ ತಂಮಾ ತಾಜೆಗಉಡನ ಮಗ ಚಂನಪ್ಪನು ತಂಮ ಅಣ್ಣ ಮಾದಿಗುಡನು ದೇವಲೋಕ್ಕಕ ಸಂದನೆಂದು ನಿಲ್ಸಿದ ಬೀರಕಲ್ಲು ೧ ಕಂ ॥ ಮಂಗಳ ಮಹಾಶ್ರೀ॥[೩೬] ಎಂಬುದಾಗಿ ಒಂದು ಶಾಸನದ ಪಾಠವಿದ್ದರೆ, ಇದೇ ಹೋರಾಟದಲ್ಲಿ ಮುಂದುವರಿದು ಹೋರಾಡಿ ಮಡಿದ ಹರಿಯಕ್ಕನೆಂಬುವಳ ವೀರಗಲ್ಲು ಈ ತೆರನ ಪಾಠವನ್ನು ಹೊಂದಿದೆ.

"ಶ್ರೀ ಕ್ರೋಧನ ಸಉವಚ್ಛರದ ಮಾಘ ಸು. ೧೫ ಸೋಮವಾರ ತಾಜೆಗವುಡನ ಮಗ ಮಾದಿಗವುಡನು ಪಲಿವಮನವರ ಕೊಡೆಕಾದಿ ಸ್ವರ್ಗಸ್ತನಹ ಕಾಲದಲು ತಂದೆಯ ಕೊಡೆ ಕಾದುವರ ಕೂಡೆ ಹೊ........ಡಾದಾಡಿ ಹರಿಯಕ್ಕ ದೇವಲೋಕಕ್ಕೆ ಹೋದಡೆ ತಂಮ ಚಿಕ್ಕತಂದೆ ಚೆಂನನು ನಿಲ್ಸಿದ ಬೀರಗಲು ೧ ಕಂ । ಮಂಗಳ ಮಹಾಶ್ರೀ".[೩೭]

ಅಂದರೆ ಮಾದಿಗವುಡನ ಮಗಳಾದ ಹರಿಯಕ್ಕನೆಂಬುವಳು ತನ್ನ ತಂದೆಯ ಸಾವನ್ನು ಭರಿಸಲಾರದೆ, ತಂದೆಯು ಹೋರಾಡಿದವರೊಡನೆ ತಾನೂ ಹೋರಾಡಿ ಮಡಿಯುತ್ತಾಳೆ. ಮಾದಿಗೌಡನ ತಮ್ಮನೂ ಹರಿಯಕ್ಕನ ಚಿಕ್ಕತಂದೆಯೂ ಆದ ಚೆಂನನು ಅವರಿಬ್ಬರಿಗೂ ಪ್ರತ್ಯೇಕವಾಗಿ ವೀರಗಲ್ಲುಗಳನ್ನು ನಿಲ್ಲಿಸುತ್ತಾನೆ. ಇಲ್ಲಿ ಮೊದಲಿನ ವೀರಗಲ್ಲಿನ ವಿಷಯ, ನಂತರದ ವೀರಗಲ್ಲಿನಲ್ಲಿ ಮುಂದುವರಿದು ಹೋರಾಟದ ಸ್ವರೂಪವನ್ನರಿಯಲು ಸಹಾಯವಾಗಿದೆ.

---

೩೬ E. C. VII. Sk. 1, 1446

೩೭ ಅದೇ. : ೨, ೧೪೪೬

ವೀರಗಲ್ಲುಗಳ ಏಕತಾನತೆ ಬೇಸರ ತರಿಸುತ್ತದೆ ಎಂಬ ಅಭಿಪ್ರಾಯ ಸಾಹಿತ್ಯಮೌಲ್ಯದ ದೃಷ್ಟಿಯಿಂದ ನಿಜವೆನಿಸಿದರೂ ಈ ತೆರನ ದೃಷ್ಟಿಯಿಂದ ಹಲವಾರು ರೀತಿಯ ಉಪಯೋಗವಿದೆ ಎಂಬುದನ್ನು ಮರೆಯಬಾರದು.

ವೀರಗಲ್ಲುಗಳ ಪಾಠವನ್ನು ಸಾಹಿತ್ಯದ ದೃಷ್ಟಿಯಿಂದ ಗಮನಿಸುವುದಕ್ಕಿಂತಲೂ ಮೊದಲು ಶಾಸನ ಸಾಹಿತ್ಯಕ್ಕಿರುವ ಇತಿ–ಮಿತಿಗಳನ್ನು ಗುರುತಿಸಬೇಕು.[೩೮] ಈ ಹಿನ್ನೆಲೆಯಲ್ಲಿ ವೀರಗಲ್ಲುಗಳ ಪಾಠ ಎಷ್ಟರಮಟ್ಟಿಗೆ ಸಾಹಿತ್ಯವೆಂದು ಅನ್ನಿಸಿಕೊಳ್ಳಲು ಯೋಗ್ಯವಾಗಿದೆ ಎಂಬುದನ್ನು ಪರಿಶೀಲಿಸುವುದು ಉಚಿತ.

ಇತರ ಶಾಸನ ಫಲಕಗಳನ್ನು ಗಮನಿಸಿದಾಗ, ವೀರಗಲ್ಲುಗಳನ್ನು ಬರೆದ ಶಾಸನಕಾರರಿಗಿಂತಲೂ ಹೆಚ್ಚಿನ ಅವಕಾಶ ಸಹಜವಾಗಿ ಇತರೇ ಶಾಸನ ಕವಿಗಳಿಗಿದ್ದಂತೆ ತೋರುತ್ತದೆ. ವೀರಗಲ್ಲಿನ ಪಾಠವನ್ನು ವೀರಗಲ್ಲಿನ ಮೇಲೆ ಶಿಲ್ಪದ ನಡುವೆ ಇರುವ ಪಟ್ಟಿಕೆಗಳಲ್ಲಿ ಕೆತ್ತಲಾಗುತ್ತಿತ್ತು. ಕೆಲವೊಮ್ಮೆ ಸ್ಥಳಾವಕಾಶ ಇರುವೆಡೆಗಳಲ್ಲಿ ಕೆತ್ತಿರುವ ನಿದರ್ಶನಗಳುಂಟು. ಈ ಸ್ಥಳಾವಕಾಶಕ್ಕೆ ತಕ್ಕಂತೆ ಶಾಸನಕಾರ ಪಾಠವನ್ನು ಸಿದ್ಧಮಾಡಬೇಕಿತ್ತು. ಬಹುಶಃ ಈ ಕಾರಣದಿಂದಾಗಿ ವೀರಗಲ್ಲುಗಳ ಪಾಠ ಸಹಜವಾಗಿ ಇತರ ಶಾಸನಗಳ ಪಾಠಕ್ಕಿಂತಲೂ ಕಿರಿದಾಯಿತೆಂದು ತೋರುತ್ತದೆ. ಹೊಯ್ಸಳರ ಕಾಲದಲ್ಲಿ ಅಕ್ಷರಗಳನ್ನು ಚಿಕ್ಕದಾಗಿ ಕೊರೆಯುವ ಪರಿಪಾಠ ಆರಂಭವಾದುದರಿಂದ ಆ ಕಾಲದ ವೀರಗಲ್ಲುಗಳು ತುಸು ದೀರ್ಘವಾಗಿರುತ್ತವೆ. ಸುಮಾರು ಹನ್ನೊಂದು, ಹನ್ನೆರಡು ಮತ್ತು ಹದಿಮೂರನೆಯ ಶತಮಾನದ ಮಧ್ಯಭಾಗದವರೆಗೆ ದೊರೆಯುವ ವೀರಗಲ್ಲುಗಳ ಪಾಠವನ್ನು ಬೇರೆಯ ಕಾಲದಲಿ ದೊರೆಯುವ ವೀರಗಲ್ಲುಗಳ ಪಾಠದೊಂದಿಗೆ ಹೋಲಿಸಿ ನೋಡಿದಾಗ ಇವು ತುಸು ದೀರ್ಘವಾಗಿದೆಯೆಂದೇ ಹೇಳಬೇಕಾಗುತ್ತದೆ.

ವೀರಗಲ್ಲು ಮುಖ್ಯವಾಗಿ ವೀರನ ಪರಾಕ್ರಮವನ್ನು ಎತ್ತಿಸಾರುವ ಸ್ಮಾರಕ. ಆದುದರಿಂದ ಇಲ್ಲಿ ವೀರನಿಗೆ ಪ್ರಾಮುಖ್ಯ. ಇತರ ದಾನಶಾಸನಗಳಲ್ಲಿ ಸಾಮಾನ್ಯವಾಗಿ ದೊರೆಯುವ ಅರಸನ ವಂಶಾವಳಿ, ನಾಡು, ದೇಶ ಮುಂತಾದವುಗಳ ಅನವಶ್ಯಕ ವರ್ಣನೆ ಇಲ್ಲಿ ಕಂಡುಬರುವುದಿಲ್ಲ. ವೀರಗಲ್ಲುಗಳು, ವೀರನು ಯಾವ ಯುದ್ಧದಲ್ಲಿ ಯಾರ ಪರವಾಗಿ, ಹೇಗೆ ಹೋರಾಡಿ ಮಡಿದ ಎಂಬ ಅಂಶವನ್ನು ಮಾತ್ರ ಕಾವ್ಯಮಯವಾಗಿ ತಿಳಿಸುತ್ತವೆ. ಆ ನಂತರ ವೀರನ ಮನೆಯವರಿಗೆ ಬಿಟ್ಟ ದತ್ತಿಯ ಪ್ರಸ್ತಾಪ ಬರುತ್ತದೆ. ಇದಾದನಂತರ ಇತರ ದಾನಶಾಸನಗಳಂತೆ ಇಲ್ಲಿಯೂ ಶಾಪಾಶಯಗಳು ಇರುತ್ತವೆಯಾದರೂ ಅಲ್ಲಿನ ಹಾಗೆ ಸುದೀರ್ಘವಾಗಿ ಬರುವುದಿಲ್ಲ. ಒಂದೋ,

---

೩೮ ನೋಡಿ : ಈ ಬಗ್ಗೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೩, ಪು. ೬೪೦–೪೭ ರಲ್ಲಿ ವಿವರವಾಗಿ ಚರ್ಚಿಸಿದ್ದೇನೆ.

ಎರಡೋ ವಾಕ್ಯಗಳಲ್ಲಿ ಅಥವಾ ಒಂದು ಶ್ಲೋಕದ ಉಲ್ಲೇಖದಲ್ಲಿ ಈ ಭಾಗವು ಪೂರ್ಣವಾಗುತ್ತದೆ. ಅನಂತರ ಬಹು ವಿರಳವಾಗಿ ಶಾಸನಕಾರ, ಶಿಲ್ಪಿಯ ಹೆಸರುಗಳು ಇರುತ್ತವೆ.

ವಿರಗಲ್ಲುಗಳ ಶಿಲ್ಪಿಗಳು ವಿಷಯ ನಿರೂಪಣೆಗೆ ಮೂರು ಹಂತಗಳ ಒಂದು ಸೂತ್ರವನ್ನು ಅನುಸರಿಸಿದಂತೆಯೇ ವಿರಗಲ್ಲುಗಳ ಶಾಸನಕಾರರೂ ಎರಡು ವಿಭಾಗಗಳನ್ನು ಮಾಡಿಕೊಂಡರು. ಮೊದಲ ಭಾಗದಲ್ಲಿ ವೀರನು ಯಾವ ಯುದ್ಧದಲ್ಲಿ, ಏಕೆ, ಯಾರ ಪರ, ಹೇಗೆ ಹೋರಾಡಿ ಮಡಿದ ಎಂಬುದನ್ನೂ, ಪರಾಕ್ರಮದಿಂದ ಹೋರಾಡಿ ಮಡಿದ ವೀರನನ್ನು ಅಪ್ಸರೆಯರು ಹೇಗೆ ಸ್ವರ್ಗಕ್ಕೆ ಕೊಂಡೊಯ್ದರು ಎಂಬ ನಿರೂಪಣೆ ಇರುತ್ತದೆ. ಎರಡನೆಯ ಭಾಗದಲ್ಲಿ ವೀರನಿಗೆ ಬಿಟ್ಟ ದತ್ತಿಯ ವಿಷಯ, ವೀರಗಲ್ಲನ್ನು ನಿಲ್ಲಿಸಿದವರ ಪ್ರಸ್ತಾಪ ಇರುತ್ತದೆ.

ಮೊದಲನೆಯ ಭಾಗದಲ್ಲಿ ಮಾತ್ರ ವೀರಗಲ್ಲಿನ ಶಾಸನಕಾರನಿಗೆ ತನ್ನ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶ. ಆದ್ದರಿಂದ ಈ ಭಾಗ ಸಾಮಾನ್ಯವಾಗಿ ಪದ್ಯಮಯವಾಗಿರುತ್ತದೆ. ನಮ್ಮ ಈ ಅಭಿಪ್ರಾಯವನ್ನು ಚಂಪೂಶೈಲಿಯಲ್ಲಿರುವ ವೀರಗಲ್ಲುಗಳ ಪಾಠವನ್ನು ಉದ್ದೇಶಿಸಿ ಹೇಳುತ್ತಿದ್ದೇವೆ. ಎಲ್ಲಕಾಲದ ಎಲ್ಲಾ ವೀರಗಲ್ಲುಗಳ ಪಾಠಗಳನ್ನು ನಿರ್ದೇಶಿಸಿದಾಗ ಈ ಅಭಿಪ್ರಾಯ ಸಮಂಜಸವಲ್ಲ ಎಂಬ ಅಂಶವನ್ನು ಮರೆಯಬಾರದು.

ಹತ್ತನೆಯ ಶತಮಾನದ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಚಂಪೂಶೈಲಿಯ ಕಾವ್ಯಗಳು ಬಂದಿದ್ದು, ಆ ಶೈಲಿಗೆ ಭದ್ರವಾದ ಬುನಾದಿಯನ್ನು ಹಾಕಿದ್ದುವು. ಇದರಿಂದ ಪ್ರಭಾವಿತರಾದ ಶಾಸನಕವಿಗಳು ಈ ಶೈಲಿಯನ್ನು, ತಮ್ಮ ಶಾಸನ ಶೈಲಿಗೂ ಸಮರ್ಥವಾಗಿ ಹೊಮದುತ್ತದೆಯೆಂದು ಭಾವಿಸಿ ಅಳವಡಿಸಿಕೊಂಡರು. ಈ ಚಂಪೂ ಶೈಲಿಯನ್ನು ಸಮರ್ಥವಾಗಿ ಬಳಸಿಕೊಂಡಿರುವ ವೀರಗಲ್ಲುಗಳ ಪಾಠ ಸುಮಾರು ಕ್ರಿಶ. ೯೮೫ ರಿಂದಲೇ ದೊರೆಯುತ್ತವೆ. ಇಲ್ಲಿ ಅವರು ಗದ್ಯ – ಪದ್ಯಗಳ ಪ್ರಯೋಗಗಳನ್ನು ಬಹಳ ಎಚ್ಚರಿಕೆಯಿಂದ ಮತ್ತು ಔಚಿತ್ಯ ಪೂರ್ಣವಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ಚಂಪೂ ಶೈಲಿಯ ಎಲ್ಲಾ ವೀರಗಲ್ಲುಗಳ ಪಾಠಗಳನ್ನೂ ಗಮನಿಸಿದಾಗ, ಆ ಶಾಸನಕಾರ ಖಚಿತವಾದದ್ದನ್ನು, ಸಂಗ್ರಹವಾಗಿ ಹೇಳಬೇಕಾದನ್ನು ಮತ್ತು ಎರಡು ಪದ್ಯಗಳಿಗೆ ಸಂಬಂಧವನ್ನು ಕಲ್ಪಸುವಂತಹ ಮಾತುಗಳನ್ನು ಹೇಳುವಲ್ಲಿ ಮಾತ್ರ ಗದ್ಯವನ್ನು ಬಳಸಿರುವುದನ್ನು ಕಾಣಬಹುದು. ಕ್ರಿಶ. ಸು. ೯೮೫ ರ ಹೂಲಿಯ ವೀರಗಲ್ಲಿನ ಪಾಠ ಈ ರೀತಿ ಇದೆ[೩೯]

"ಸ್ವಸ್ತಿ ಸಕನೃಪ ಕಾಳಾತೀತ ಸಂವತ್ಸರಂಗ ೯೦೭ ಪಾರ್ಥಿವ ಸಂವತ್ಸರದ ಚೈತ್ರ ಪುಣ್ಣಿಮೆ ಬುಧವಾರದಂದು ಶೋಭನಯ್ಯನ ಪೆರ್ಗ್ಗಡೆ ದದ್ದಪಯ್ಯಂ ಪೂಲಿಯ ಪೊಲದ ಬಂಡಿಯೆಟ್ಟಿಂ

೩೯ E. C. XVIII. ಪು. ೧೭೧–೭೨

ಕೆಮ್ಮನಕಾರಣಂ ಕೊಂಡು ಪೋಗೆ ಕೆಮದರಕೇತನುಂ ಎಱೆಬಿಟ್ಟನುಂ ತಂಬದಂ ಕೇತನುಂ ಪರಿಚ್ಛೇದಂಗೆಯ್ದು ಮೂವರುಂ ಮೇಲಾಳುಂ ಕುದುರೆಯುಮಂ ಕೊಂದು ಮೋಕ್ಷಕ್ಕೆ ಸಂದರ್."

–ಎಂಬುದಾಗಿ ಗದ್ಯವಿದ್ದು, ಮುಂದೆ ಎರಡು ವೃತ್ತಗಳಲ್ಲಿ ಕೇತನ ಪರಾಕ್ರಮವನ್ನು ಹೊಗಳಲಾಗಿದೆ.

ಕ್ರಿ.ಶ. ೧೧೯೫ ರ ಕೊರಗೋಡು ವೀರಗಲ್ಲಿನ ಪಾಠದಲ್ಲಿ ಈ ಶೈಲಿಯ ಸಮರ್ಥ ಪ್ರಯೋಗವನ್ನು ಗುರುತಿಸಬಹುದು. ಈ ಶಾಸನದ ಪಾಠವನ್ನು ಶ್ರೀ. ಎ. ಎಂ. ಅಣ್ಣಿಗೇರಿ ಮತ್ತು ಶ್ರೀ ಮೇವುಂಡಿ ಮಲ್ಲಾರಿಯವರು ತಮ್ಮ 'ಶಾಸನ ಸಾಹಿತ್ಯ ಸಂಚಯ'ದಲ್ಲಿ ವಿವರವಾಗಿ ಗದ್ಯಪದ್ಯಗಳೆರಡನ್ನೂ ಬೇರ್ಪಡಿಸಿ ಉತ್ತಮ ಟಿಪ್ಪಣಿಗಳೊಂದಿಗೆ ಪ್ರಕಟಿಸಿದ್ದಾರೆ.[೪೦] ಈ ಶಾಸನಕಾರನ ಹಾಗೆ ಗದ್ಯ–ಪದ್ಯಗಳೆರಡರ ಲಯಗಾರಿಕೆಯನ್ನು ಮಿತಿಯನ್ನು ಬಳಕೆಯ ಪರಿಣಾಮವನ್ನು ಅರಿತ ಶಾಸನಕಾರರು ದೊರೆಯುವುದು ಅತಿವಿರಳವೆಂದರೆ ಉತ್ಪ್ರೇಕ್ಷೆಯಾಗಲಾರದು.

ಪದ್ಯದ ನಂತರ ಗದ್ಯವನ್ನು ತರುವ ಮುನ್ನ "ವ॥" ಎಂಬ ಸಂಕೇತವನ್ನು ಬಿಡಿಸುವುದರ ಮೂಲಕ ಅದನ್ನು ವಚನ ಎಂಬುದಾಗಿ ಶಾಸನಗಳ ಪಾಠದಲ್ಲಿ ಸಾಮಾನ್ಯವಾಗಿ ನಿರ್ದೇಶಿಸಿರುತ್ತಾರೆ. ಹಾಗೆಯೇ ವೃತ್ತ ಅಥವಾ ಕಂದಗಳನ್ನು ಪ್ರಯೋಗ ಮಾಡಿದಾಗ "ವೃ". "ಕಂ" ಎಂಬುದಾಗಿ ಬಿಡಿಸಿರುತ್ತಾರೆ.

ಈ ರೀತಿಯ ನಿರ್ದೇಶವಿಲ್ಲದ ಕಡೆ ವಿಶಿಷ್ಟ ಶೈಲಿಯನ್ನು ಪ್ರಯೋಗ ಮಾಡುವುದರ ಮೂಲಕ ಗದ್ಯ – ಪದ್ಯಗಳನ್ನು ಪ್ರತ್ಯೇಕಿಸುತ್ತಾರೆ. ಕ್ರಿ.ಶ. ೧೧೬೫ರ ಒಂದು ವೀರಗಲ್ಲಿನಲ್ಲಿ ಮಹಾಮಂಡಳೇಶ್ವರನನ್ನು ವರ್ಣಿಸಿ, ಆತನು ರಾಜ್ಯಭಾರ ಮಾಡುವಾಗ "ಅನ್ತು ಸ್ವಜಾತಿ ಕಾರಣದಿಂ ದಾಳಿಕ್ರಮದಿಂದ ದಶರಥದಣ್ಡನಾಥನುಂ ಕಾಳರಸನು ಹೊಸವಳ್ಳಿಯ ತುಱುವಂ ಕೊಣ್ಡು ಹೋಹಲ್ಲಿ"– ಎಂಬುದಾಗಿ ಗದ್ಯದಲ್ಲಿ ಯುದ್ಧದ ವಿಷಯ ತಿಳಿಸಿ, ಆ ಯುದ್ಧದಲಲಿ ವೀರನು ಹೇಗೆ ಹೋರಾಟ ಮಾಡಿದ ಎಂಬುದನ್ನು ಪದ್ಯದಲ್ಲಿ ತಿಳಿಸುತ್ತಾನೆ. ಆಗ ಕವಿಯ ಮಾತಿನ ಗತ್ತೇ ಬೇರೆಯಾಗುತ್ತದೆ.[೪೧] ಮತ್ತೆ ಕೆಲವು ಕಡೆಗಳಲ್ಲಿ ಗದ್ಯವನ್ನು ಪ್ರಶ್ನಾರ್ಥಕ ಶೈಲಿಯಲ್ಲಿ ಪ್ರಯೋಗಿಸಿ ಮುಂದೆ ಪದ್ಯವನ್ನು ತರುವುದುಂಟು. ಈ ಪದ್ಯ ಹಿಂದಿನ ಗದ್ಯದ ಪ್ರಶ್ನೆಗೆ ಉತ್ತರ ರೂಪದಲ್ಲಿರುತ್ತದೆ. ಒಂದು ವೀರಗಲ್ಲಿನ ಪಾಠದಲ್ಲಿ "ಬಿಟ್ಟೆಯಂ ಕಟ್ಟೆಯದಿಂ ಮಾಡಿದಾಳ್ತನಮೆಂತೆಂದಡೆ" ಎಂಬುದಾಗಿ ಕೇಳಿ ಅನಂತರ ಬಿಟ್ಟೆಯನ ಪರಾಕ್ರಮವನ್ನು ಮುಂದೆರಡು ಪದ್ಯಗಳಲ್ಲಿ ವರ್ಣಿಸುತ್ತಾನೆ

೪೦ ಎ. ಎಂ. ಅಣ್ಣಿಗೇರಿ, ಮೇವುಂಡಿ ಮಲ್ಲಾರಿ (ಸಂ.) : ಶಾಸನಸಾಹಿತ್ಯ ಸಂಚಯ. ಪು. ೭೧–೭೨

೪೧ E. C. VIII. Sb.6

ಶಾಸನಕಾರ.[೪೨] ಈ ಶೈಲಿಯು ವೀರಗಲ್ಲುಗಳ ಶಾಸನಕಾರರಿಗೆ ಬಹಳ ಪ್ರಿಯವಾಗಿತ್ತೆಂದು ತೋರುತ್ತದೆ.[೪೩]

ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ಮುಖ್ಯವಾಗಿ ಕಂಡುಬರುವ ಅಂಶವೆಮದರೆ ವೀರರ ಸ್ವಾಮಿನಿಷ್ಠೆ ಅಥವಾ ವೀರರ ಪರೋಪಕಾರ ಮನೋಧರ್ಮ. ಈ ಒಂದು ಅಂಶಕ್ಕೆ ಪೂರಕವಾಗಿ ವೀರನ ಪರಾಕ್ರಮದ ವರ್ಣನೆ ಬರುತ್ತದೆ. ವೀರನ ಪರಾಕ್ರಮವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಅಭಿವ್ಯಕ್ತ ಮಾಡುವುದರ ಸಲುವಗಿ ಶಾಸನಕಾರರು ಹಲವಾರು ತಂತ್ರಗಳನ್ನು ಬಳಸಿರುವುದುಂಟು. ವೀರನು ಮಾಡಿದ ಹೋರಾಟದ ನೇರವಾದ ಚಿತ್ರಣ ವೀರನು ಮಾಡಿದ ಹೋರಾಟದ ಫಲವಾಗಿ ಯುದ್ಧರಂಗದಲ್ಲಿನ ದಾರುಣ ಸ್ಥಿತಿಯ ಚಿತ್ರಣ, ಶತ್ರುಪಕ್ಷದವರ ಅಸಹಾಯಕ ಸ್ಥಿತಿಯ ಚಿತ್ರಣ, ಇತ್ಯಾದಿಗಳ ಮೂಲಕ ವೀರನ ಪರಾಕ್ರಮವನ್ನು ಪರಿಣಾಮಕಾರಿಯಾದ ಚಿತ್ರವನ್ನು ನೀಡಿರುತ್ತಾರೆ. ಇದು ಒಂದು ರೀತಿಯ ತಂತ್ರವಾದರೆ ಮತ್ತೊಂದು ರೀತಿಯ ತಂತ್ರ ವೀರನ ಪರಾಕ್ರಮವನ್ನು ಸಾರುವ ಆತನ ಬಿರುದಾವಳಿಗಳ ಸರವನ್ನೇ ಪೋಣಿಸುವುದು. ಸಿಂಹಾವಲೋಕನ ಕ್ರಮದಲ್ಲಿ ಮಡಿದವೀರನು ಹಿಂದಿನ ಹೋರಾಟಗಳಲ್ಲಿ ತೋರಿದ ಪರಾಕ್ರಮವನ್ನು ವರ್ಣಿಸುವುದು. ವೀರತ್ವ ಸ್ವಾಭಿಮಾನಗಳನ್ನು ಎತ್ತಿಹಿಡಿಯುವ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿ, ಅವು ಮಡಿದ ವೀರನ ಆದರ್ಶವಾಗಿತ್ತು ಎಂಬಂತೆ ವರ್ಣಿಸುವುದು. ಈ ಮೂಲಕ ವೀರನ ವೀರತ್ವಕ್ಕೆ ಆದರ್ಶದ ಮೆರುಗನ್ನೀಯುವ ಪ್ರಯತ್ನವನ್ನೂ ಕವಿಗಳು ಮಾಡಿದ್ದಾರೆ.

ಸ್ವಾಮಿ ನಿಷ್ಠೆ ಪ್ರಾಚೀನ ಕರ್ನಾಟಕದ ಜನರ ಜೀವನದ ಮೌಲ್ಯಗಳಲ್ಲಿ ಒಂದಾಗಿತ್ತು. ಯಾವುದೇ ದೇಶದ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಯಲ್ಲಿ ಸ್ವಾಮಿನಿಷ್ಠೆ ಜೀವನದ ಒಂದು ಮೌಲ್ಯವಾಗಿ ಪರಿಗಣಿತವಾಗುವುದು ಸಾಮಾನ್ಯ ಅಂಶ. ಪ್ರಾಚೀನ ಕರ್ನಾಟಕದ ವೀರರ ಸ್ವಾಮಿನಿಷ್ಠೆಯನ್ನು ಪಂಪನು ತನ್ನ ವಿಕ್ರಮಾರ್ಜುನವಿಜಯದಲ್ಲಿ ಬಹು ಸಮರ್ಥವಾಗಿ ನಿರೂಪಿಸಿದ್ದಾನೆ. ಅದು ಮಹಾಭಾರತದ ಕಥೆಯ ಅಂಶವಾಗಿ ಅಲ್ಲಿ ವರ್ಣಿತವಾಗಿದ್ದರೂ ಅದು ವಾಸ್ತವವಾಗಿ ಕರ್ನಾಟಕದ ಯೋಧರ ಒಂದು ಚಿತ್ರನವೇ ಆಗಿದೆ ಎಂಬ ಅಂಶ ವೀರಗಲ್ಲುಗಳ ಪಾಠವನ್ನು ಗಮನಿಸಿದಾಗ ವೇದ್ಯವಾಗುತ್ತದೆ.[೪೪] ತಮ್ಮನ್ನು ಸಾಕಿಸಲಹಿದ ಅರಸರಿಗೆ ತಮ್ಮ

೪೨ K. I. IV. 24, 1164

೪೩ E. C. VII. HI. 54, 1245 ; E.C, VIII.Sa, 32, 1307 ಮತ್ತು ಅದೇ, ೧೦೧, ೧೩೦೩

೪೪ ಪಂಪ : ವಿಕ್ರಮಾರ್ಜುನ ವಿಜಯಂ, ೧೦–೪೦, ೪೧, ೪೨, ೪೩

ಒದವಿದ ನಿನ್ನದೊಂದು ದಯೆ ಮೇಣ್ ಪಿರಿದೋ ನೆಗಟ್ದೆನ್ನ ಗಂಡು ಮಾ।
ದದಟುಮಳುರ್ಕೆಯುಂ ಪಿರಿದೊ ಸಂದೆಯಮಾದಪುದಿಂತಿದಿಲ್ಲಿ ತೂ।

ಜೀವನವನ್ನೇ ಮುಡುಪಾಗಿಟ್ಟು ಮಡಿದ ವೀರರ ವಾಸ್ತವಚಿತ್ರಣ ವೀರಗಲ್ಲುಗಳಿಂದ ಅಸಂಖ್ಯಾತವಾಗಿ ದೊರೆಯುತ್ತವೆ. ವೀರಗಲ್ಲಿನ ಪಾಠ ಎಷ್ಟೇ ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಗದ್ಯಮಯವಾಗಿರಲಿ, ಪದ್ಯಮಯವಾಗಿರಲಿ ಈ ಅಂಶವನ್ನು ಹೇಳದೆ ಬಿಟ್ಟಿರುವುದು ಅಪರೂಪದ ಸಂಗತಿ.

ತನ್ನ ಅರಸನ ಆಜ್ಞೆಯಂತೆ ವೀರನೊಬ್ಬನು ಹೋರಾಡಿ ಮಡಿಯುತ್ತಾನೆ. ಆಗ ಅರಸನು ತನ್ನ ವೀರನ "ಅರಸಾಳು ತನಕೆ ಮೆಚ್ಚೆ" ವೀರಗಲ್ಲನ್ನು ನಿಲ್ಲಿಸಿದ ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ.[೪೫] ಕ್ರಿ.ಶ. ೧೧೮೩ರ ಒಂದು ವೀರಗಲ್ಲಿನಿಂದ ವೀರನೊಬ್ಬನು ತನ್ನ ಅರಸನು ಮೆಚ್ಚಿಕೊಳ್ಳುವ ರೀತಿಯಲ್ಲಿ ಹೋರಾಟ ಮಾಡಿದ ವಿಷಯ ತಿಳಿಯುತ್ತದೆ. ವೀರನ ಸ್ವಾಮಿನಿಷ್ಠೆಯು ಲೋಕಕ್ಕೆ ತಿಳಿಯುವ ಸಲುವಾಗಿಯೇ ಆ ಶಾಸನವನ್ನು ಹಾಕಲಾಗಿದೆ ಎಂಬುದಾಗಿ ಅಲ್ಲಿ ಹೇಳಿದೆ. ಅದರ ಪಾಠ ಈ ರೀತಿ ಇದೆ : "ತನಗಿದಿರಾಂತ ವೈರಿಗಳನುಗ್ರ ಪರಾಕ್ರಮದಿಂದ ಕೊನ್ದು ಭೂವನಿತೆಗಧೀಶನಪ್ಪ ಚಲದಮಕನ ಮೆಚ್ಚಿಸಿ ಱಟ್ಟಹಳ್ಳಿಯೊಳು ಕನಕವಿಮಾನ ಮೇಱಿ ಸುರಲೋಕಮನೆಯ್ದಿದ ಮಾರ್ಗಮಂ ಜಗಜ್ಜನಮಱಿಯಲ್ಲ ಮಾಡಿದುದು ಬಮ್ಮನ ಸಾಸರನ ವೀರಸಾಸನ".[೪೬] ಇದೇ ಊರಿನ ಕ್ರಿ.ಶ. ೧೧೮೫ ರ ಮತ್ತೊಂದು ವೀರಗಲ್ಲಿನ ಪಾಠ, ವೀರನು ತನ್ನ ಅರಸನನ್ನು ಮೆಚ್ಚಿಸಿ, ಹೋರಾಡಿ ಮಡಿದುದು, ತನ್ನ ಯೋಧನ ಪರಾಕ್ರಮವನ್ನು ಕಣ್ಣಾರೆ ಕಂಡಂತಹ ಅರಸನು ಅವನಿಗೆ ವೀರಗಲ್ಲನ್ನು ನಿಲ್ಲಿಸಿದ ವಿಷಯವನ್ನು ಈ ರೀತಿ ತಿಳಿಸುತ್ತದೆ.

ಗಿದೊಡಱಿಯಲ್ಕೆಬಾರದದು ಕಾರಣದಿಂ ರಿಪು ಭೂಪ ದಂತಿದಂ
ತದ ತೊಲೆಯಳ್ ಪರಾಕ್ರಮದಿನೆನ್ನನೆ ಭೂಪತಿ ತೂಗಿ ತೋಱೆಸೇ ॥

ಕುದುರೆಯ ನೇಱಿದಂಬೆರಸು ಸೌಳನೆ ವೋಗಿರೆ ಪೊಯ್ದುಮೆಯ್ದೆ ಕ ।
ಟ್ಟದಿರೊಳೆ ನೂಂಕಿದಾನೆಗಳ ಕೋಡುಗಳಂ ಬಳಪೋಗೆ ಪೊಯ್ದಮಾಂ ॥
ತದಟರನೊಂದೆ ವೊಯ್ದುಮೆರಡುಂ ಬಲಮೆನ್ನನೆ ನೊಡೆ ತಕ್ಕನೆ ।
ನ್ನದಟುಮನ್ನೆನ ವೀರಮುಮನಾಜಿಯೊಳೆನ್ನರಸಂಗೆ ತೋಱುವೆಂ ।

ಸಿಡಿಲೊಳೆ ತಳ್ತು ಪೋರ್ವ ಸಿಡಿಲಂತಿರೆ ಬಾಳೊಳೆ ಬಾಳ್ ಪಳಂಚಿ ಮಾ ।
ರ್ಕಿಡಿವಿಡೆ ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗೆ ತೋಳ ತೀನ್ ॥
ಕಿಡೆ ನಲಿದೊಂದೆರಟ್ಟು ಕುದುರೆಯುಟ್ಟೆಯು ಮೊಂದೆರಡಾನೆಯಟ್ಟೆಯುಂ ॥
ತೊಡರ್ದೊಡನಾಡ ತಳ್ತಿಱಿಯದಿರ್ದೊಡೆ ಜೋಳಮನೆಂತು ನೀಗುವೆಂ ॥

ಸುರಲೋಕಂ ದೊರೆಕೊಳ್ವುದೊಂದು ಪರಶ್ರೀ ಲಕ್ಷ್ಮಿಯುಂ ಬರ್ಪುದಾ ।
ದರದಿಂ ದೇವನಿಕಾಯದೊಳ್ ನೆರವುದೊಮದತ್ಸಾಹಮುಂ ತನ್ನ ಮೆ ॥
ಯ್ಸಿರಿ ಭಾಗ್ಯಂ ನೆರಮಪ್ಪುದೊಂದೆರಣದೊಳ್ ಗೆಲ್ದಾಜಿಯಂ ತಳ್ತು ಸಂ ।
ಗರದೊಳ್ ಜೋಳದ ಪಾಟಿಯಂ ನೆರಪಿದಂಗಂಡಂ ಪೆಱಂಗಂಡನೇ ॥

೪೫ E. C. VII. Sk. 245, 1183

೪೬ S. I. I. XX. 169, 1183

"ಪರಬಳಮನಿಱಿದು ಗೆಲುದುಂ
ಪೊರದಾಳ್ದಂ ಮೆಚ್ಚೆ ಕಾದಿರಣದೊಳು ಮಡಿದಂ
ಸುರವನಿತೆಯರೊಳು ನೆರೆದಂ
ಧರೆಯೊಳು ಬೊಪ್ಪಣನೆ ವೀರದಾಗರಮಾದಂ

ಅನ್ತಾತನ ಕಾಳೆಯ ಬಿರುದೆನ್ತೆಂದಡೆ ಆಳಿಂ ಮುನ್ನಿಱಿವಂ ಸಿತಗರಗಂಡಂ ತೆಗೆ ಬೀಯಚಲದಂಕರಾಮನ ಗಂಧವಾರಣಂ ಮಲೆವರಮಾರಿ ಕೊಂಡೆಯರಗಂಡನೆನಿಸಿ ಸ್ವಾಮಿ ಸಂತೋಷಂಬಡೆದು ನಿಱಿಸಿದ ವೀರಸಾಸನ".[೪೭]

ಇಷ್ಟು ಸುದೀರ್ಘವಾದ ವಿವರಣೆ ಇಲ್ಲದಿದ್ದರೂ ಕೆಲವು ವೀರಗಲ್ಲುಗಳಲ್ಲಿ "ಜೋಳವಾಳಿಯ ಮೆಱಿದ",[೪೮] "ಜೋಳದ ಪಾಳಿಯ ರಿಣಮಂ ಕಳೆಯಲು"[೪೯] ವೀರನು ಹೋರಾಡಿದ ಎಂಬ ವಿವರಣೆ ಗದ್ಯದಲ್ಲಿ ಇರುತ್ತದೆ.

ಕ್ರಿ.ಶ. ೧೨೧೪ರ ಒಂದು ವೀರಗಲ್ಲು ವೀರನೊಬ್ಬನ ಸ್ವಾಮಿಭಕ್ತಿಯನ್ನು ಹೊಗಳಿರುವುದನ್ನು ಗಮನಿಸಬಹುದು. ಯುದ್ಧರಂಗದಲ್ಲಿ ತನ್ನ ಅರಸನನ್ನು ಕಂಡು, ತನ್ನೆಲ್ಲ ಸ್ವಾಮಿ ಭಕ್ತಿಯನ್ನು ಪ್ರದರ್ಶಿಸಿ ತೋರಬೇಕೆಂಬ ಉತ್ಸಾಹದಿಂದ ಹೋರಾಡಿ ಮಡಿದ ವೀರನ ಪ್ರಶಸ್ತಿ ಅಲ್ಲಿ ದೊರೆಯುತ್ತದೆ. "ಬಂದಣಿಕೆಯ ಬಮ್ಮದೇವರಸರು ವುದ್ದರೆಯ ಮುತ್ತಿದಲ್ಲಿ ಪಿಡಿತಂದನೆ ಬಾಳುತಪ್ಪೆ ತಲೆಯಂ ಮೂದಲ್ಸಿ ಮುತ್ತಿಕೊಂಡು ತನ್ನೊಡೆಯಂ ನೋಡಿ ಭಟರ್ಕ್ಕಳಂ ಖಡ್ಗದಿಂ ದರ್ಬಿ ಬೊಬಿಱಿಯುತಂ ಕಡಿಖಂಡಂಗಳೂಳಿಂಡೆಯಾಡಿದಟಂ ಮತ್ತೋರ್ವ ನಿಲ್ಲೆಂಬವ್ರೋಲ್ ನಡೆದಂ ಪೆರ್ಗ್ಗಡೆ ಮಾಚನಿಂದದಟರಾರು ಸಂಗ್ರಾಮರಂಗೋದ್ಧತರು.

ಸ್ತುತಿಗೆಯ್ಯಲನ್ಯಸೈನ್ಯಂ ಪೊಗಳೆ ನಿಜಬಲಂ ಪಾಡ ಗಂಧರ್ವ್ವ ವೃತ್ತಂ
ಕ್ಷಿತಿಯೊಳು ಕೀರ್ತ್ತಿ ಪ್ರಾತಾನಂ ಪಸರಿಸೆ ಸಮರೋತ್ಸಾಹ ಕಾದಿಜಿತಂ ।
ಧ್ರುತಿಯಿಂದ ಪ್ರಾಪ್ತನಾದಂ ಸುರಯುವತಿ ಕುಚಾಭೋಗ ಸೌಖ್ಯಕ್ಕೆ ನಿಚ್ಚಂ
ಮತಿಯಿಂದಂ ಸ್ವಾಮಿಭಕ್ತಿಬ್ರತದೊಳು ನಿರತಂ ಮಾಚನವ್ರಾಂನತ್ಯ ಸೂಚನು ॥

ತಳಱಿಂ ಪೆರ್ಗ್ಗಡೆ ತಾನೆನಿಪ್ಪ ಬಗೆಯಂ ಕಾಯುವ ನಿಜ ಸ್ವಾಮಿಯಂ
ತುಳಿಲಾಳು ಪೆರ್ಮೆಯನಾಗಳಂತೆ ಮಱೆವಂ ಕಟ್ಟಾಳು ತಾಂ ಸೊರ್ಪ್ಪಿನಂ

---

೪೭ ಅದೇ. ೧೨೫, ೧೧೮೫

೪೮ E. C. XV. BI. 329, 1162

೪೯ E. C. VIII. Sa. 116, 1170

ಪಳಿಯಂ ಪಾಪಮನಗ್ನಿಯಂತೆ ತುಳಿವಂ ವಿಶ್ವಾಸಿ ತಂನಾಳ್ದನೊಳು
ತಳೆದಂ ಹೆರ್ಗ್ಗಡೆ ಸೋಮನಾತ್ಮತನೆಯಂ ಮಾಚಂ ಮಹಾಸ್ವರ್ಗ್ಗ ಮಂ॥"[೫೦]

ಬಹಳ ಎಚ್ಚರಿಕೆಯಿಂದ, ಮಡಿದ ವೀರನ ಸ್ವಾಮಿಭಕ್ತಿಯನ್ನು ಮತ್ತೆ ಮತ್ತೆ ಶಾಸನಕಾರರು ಹೊಗಳಿರುವುದು ಇಲ್ಲಿ ಗಮನಾರ್ಹ.

ಇದಕ್ಕಿಂತಲೂ ಪರಿಣಾಮಕಾರಿಯಾದ ಚಿತ್ರಣ ಕ್ರಿ.ಶ. ೧೨೧೬ ರ ವೀರಗಲ್ಲಿನಿಂದ ದೊರೆಯುತ್ತದೆ. ಸಿಂದರಾಜನಾದ ಈಶ್ವರದೇವರಸನು ತನ್ನ ಪಟ್ಟಸಾಹಣಿಯಾದ ಚಿಣ್ಣನಿಗೆ ಬೇಡರು ತುರುಗಳನ್ನು ಅಪಹರಿಸಿಕೊಂಡು ಹೋದರೆಂದು ತಿಳಿಸಿದಾಗ, ಅವನು ಕೋಪದಿಂದ ಯಮನಂತಾಗುತ್ತಾನೆ.

"ಮಾದನಬಾಗಂ ಬೇಡರ್
ಭೇದಿಸಿ ಪಾಯ್ದಱಿದು ತುಱುಗಳಂ ಕಯ್ಕೊಂಡಿಂ
ಪೋದರೆನೆ ಮುಳಿದ ಜವನಂ
ತಾದಂ ಬೆನ್ನಟ್ಟಿ ಪಟ್ಟಸಾಹಣಿ ಚಿಣ್ಣಂ"

ಇದು ಅಂದಿನ ವೀರರ ಸ್ವಾಭಿಮಾನದ ಅಸ್ಫೋಟನೆಯ ಪರಿಣಾಮಕಾರಿ ಚಿತ್ರಣವಾಗಿದೆ. ಶಾಸನಕಾರ ಮುಂದುವರಿದು ಕೋಪಗೊಂಡ ಈ ಯಮನ ಹೋರಾಟವನ್ನು ಇನ್ನೊಂದು ವೃತ್ತದಲ್ಲಿ ಈ ರೀತಿ ನಿರೂಪಿಸುತ್ತಾನೆ :

"ಭರದಿಂದಂ ಪರಿದೆಯ್ದಿ ಬೇಡವಡೆಯಿಂ ಕಂಡಾರ್ದು ಬೆಂಕೊಂಡು ತ
ತ್ತುರಗಂ ವಾಯುಜವಾಧಿಕಂ ಪರಿಯಿಸುತ್ತುಂ ಕುತ್ತಿ ಕೊಂದಿಕ್ಕಿ ತ
ಚ್ಚಿರಮಂ ತಾಂ ಪೊಡೆಸೆಂಡನಾಡೆ ಪದಪಿಂದಾಳಂ ಕರಂ ಮೆಚ್ಚಲು
ಚ್ಚರಿಯಾಗಲ್ತುಱುವಂ ಮಗುಟ್ಚಿ ಪಗೆಯಂ ಪರ್ದಿಂಗೆ ಬಿರ್ದಿಕ್ಕಿದಂ"

ಇಲ್ಲಿ ಪಂಪನ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು ದೃಷ್ಟಿಯಿಂದ ಹೇಳುವುದಾದರೆ ವೀರಗಲ್ಲುಗಳ ಪಾಠದ ಮೇಲೆ ರನ್ನ ಮತ್ತು ಪಂಪರ ಪ್ರಭಾವ ಗಾಢವಾಗಿ ಆಗಿರುವುದು ವಾಸ್ತವ ಸಂಗತಿ. ಮುಂದುವರಿದು ಶಾಸನಕಾರ ಚಿಣ್ಣಯನ ಸ್ವಾಮಿಭಕ್ತಿಯನ್ನೂ, ಪರಾಕ್ರಮವನ್ನೂ ಇನ್ನೊಂದು ಕಂದಪದ್ಯದಲ್ಲಿ ನಿರೂಪಿಸಿದ್ದಾನೆ.

"ಸಂಗರ ರಂಗದೊಳತಿ ಧೀ
ರಂ ಗುಣಿಜನ ಸೇವ್ಯನಿವನೊಳಾರ್ಸ್ಸರಿ ಚಿಣ್ಣ

೫೦ E. C. VII. Sk. 243, 1214

ಯ್ಯಂಗೆನಲೀಶ್ವರ ಭೂಪನ
ಡಿಂಗರಿಗಂ ಸ್ವಾಮಿಕಾರ್ಯ ಹಿತರತ ಜೀವಂ
–ಅನ್ತು ಸ್ವಾಮಿಕಾರ್ಯದಿಂ ಚೆಣ್ಣಯ್ಯಂ ಸ್ವರ್ಗಸ್ಥನಾಗೆ –”[೫೧]

ಎಲ್ಲಾ ವೀರಗಲ್ಲುಗಳನ್ನೂ, ಮೇಲೆ ಗಮನಿಸಿದ ಸ್ವಾಮಿನಿಷ್ಠೆಯನ್ನಷ್ಟೇ ತಿಳಿಸುವುದಿಲ್ಲ. ವೀರರಾಗಿದ್ದವರ ಪರೋಪಕಾರ ಮನೋಧರ್ಮವನ್ನು ಸಹ ತಿಳಿಸುತ್ತವೆ. ತಮ್ಮ ಊರಿನ ತುರುಗಳನ್ನು ಅಪಹರಿಸಿದಾಗ, ಅದು ತಮಗೆ ಆದ ನಷ್ಟವೆಂದೂ, ಅವಮಾನವೆಂದೂ ಭಾವಿಸಿ ಹೋರಾಡಿದ ವೀರರ ಚಿತ್ರಣವನ್ನು ನೀಡುತ್ತವೆ.

ಚೀಲಗೌಡನೆಂಬುವನು, “ಕಲ್ಲ ಕೆಱೆಯ ಬೇಡರಿಱಿದು ಹೋಹಲ್ಲಿ ಹುಯ್ಯಲ ಹರಿದ ಆ ಬೇಡರಾನ್ ತಾಗಿ ತುಱುವಂ ಮಗುಟ್ಚಿಯತುಳಬಳ ಪರಾಕ್ರಮವಾಗಿ ತಂನ ಸಾಹಸದಿಂ ಖರ್ಗ್ಗಖೇತಕದೊಱು ಕಿರತ ಪಡೆಯಂ ಕೊಂದು ಆ ಗ್ರಾಮ ಸಂತೋಷಂ ಮಾಡಿ ಬಂದು ಜನ ಪೂಜಿತನುಮಪ್ಪ ಚೀಲಗಉಡನು ಬೀರಶ್ರೀಯಂ ತಾಟ್ದಿ ॥ ಕಲ್ಲಕೆಱೆಯಲ್ಲಿ ತುಱುವಂ ಬಲ್ಲಣಿ ಕಲಿ ಛಲಿನೆಚರರ್ಪ್ಪರಿಯಿಸೆ ತಟ್ವಿಲ್ಲದಿಡೆ ಪುಯ್ಯಲಂ ಕೇಟ್ವಲಲಿಯ ಪೊಱಮಟ್ಟು ಕೋಳ ಕೆಱೆಯಧಿನಾಥಂ ॥ ತುಱುಗೊಳೊಱು ಪೆಣ್ಬುಯ್ಯಲೊಳೆಱೆವೆಸದೊಳು ನೆಂಟರೆಡೆಱೋಱಣದಣ್ಮಿ ತಱು ಚೀಲಗಉಡಂ ನೆಱೆಗಲಿ ತಱಿಸಂದು ತಾಗಿದಂ ವನಭುರತಂ”–

ಎಂಬುದಾಗಿ ವೀರನ ಪರೋಪಕಾರ ಮನೋಧರ್ಮವನ್ನು ಕೀರ್ತಿಸುವ ವಿಷಯ ವೀರಗಲ್ಲೊಂದರಿಂದ ತಿಳಿದು ಬರುತ್ತದೆ.[೫೨] ಕ್ರಿ.ಶ. ೧೧೮೭ರ ಮತ್ತೊಂದು ವೀರಗಲ್ಲಿನಲ್ಲಿ ಈ ಅಂಶ ಇನ್ನೂ ಸ್ಪಷ್ಟವಾಗಿ ಮೂಡಿ ಬಂದಿದೆ.

“ಕಾಮಗಾವುಂಡಂ ಪರೋಪಕಾರಾರ್ತ್ಥಮಿದಂಶರೀರಮೆಂಬ ವಾಕ್ಯಾರ್ಥಮಂ ನೆನೆದು ಮಱೆವಾಳಿಯಂ ನೆಱಪುವೆನೆಂದು ತೆಂಕಣ ಸಮಸ್ತ ನಾಯಿಕರುಂ ತಾವರೆಹಳ್ಳಿಯ ಸೋವಿಸೆಟ್ಟಿಯುಂ ತುಱುವಂ ಕೊಂಡು ಪೋಪಲ್ಲಿ ಕಳಂ ಪಱೆದೆಯ್ದಿ ತಾಗಿ ತಳ್ತಿಱುದು.

ಆಲಬಳ್ಳಿ ಪರ್ವಿದ ವೋಲಾಗಿ ಬಿಂನಣಮಂ ನಿರ್ಮಿಚ್ಚತುಂ ಚು
ಚಲದಿರೆ ದೇಹ ಕಿಕ್ಕಿಱಿದು ಬೊಬ್ಬಿಱಿದಾರ್ದ್ದೆಲೆ ಪೋಗು ಪೋಗೆನು
ತ್ತ ಲಘುಭುಜಪ್ರತಾಪಱೆದೀಸೊರಂಬದ ಕಾಮಗಉಡನಾ
ಕಲಹದೊಳನ್ಯ ಕೌರವರೊಳರ್ಜ್ಜುನನಂತಿರೆ ಪೊಣ್ದಕಾದಿದಂ
–ಎಂಬುದಾಗಿ ಕಾಮಗೌಡನನ್ನು ಅರ್ಜುನನಿಗೆ ಹೋಲಿಸಿ ಹೊಗಳಲಾಗಿದೆ.[೫೩]

೫೧ E. C. VII. HI. 48, 1216
೫೨ E. C. VI. Tk. 84, 1209
೫೩ E. C. VIII. Sb. 47, 1187

ಕ್ರಿಶ. ೧೫೦೨ರ ವೀರಗಲ್ಲಿನ ಪಾಠದಿಂದ ವೀರನು ಪರೋಪಕಾರ ಮನೋಧರ್ಮದಿಂದ ಯುದ್ಧವನ್ನು ಮಾಡುತ್ತಿರುವಾಗ, ಇದನ್ನು ಕಂಡ ಸುರಗಣಿಕೆಯರು ಹೂವಿನ ಮಳೆಯನ್ನು ಕರೆಯುವ ವರ್ಣನೆ ಬರುತ್ತದೆ.

“ವೀರದ ಅತಿ ಸುಗಂಧು ಮಾರಾಂತರಿಭಟರ್ಕಳೊಡನೆ ಹಱಬೆಯ ಹೊಯ್ದಾ ಕಂಬಗೂಳಿ ಕುದುರೆ ಗುಱುಕಮಳೆರೆ ಬೊಂಮನು ರಣದೊಳು ಪಲಬರಂ ಕೊಂದು ಕುದುರೆಯಂ ಕುತ್ತಿ..... ಡೆಯಂ ದುಱಿಸಿದ್ರ್ದು ಕೂಕಿಱಿದಾರ್ದು ನೋಡೆನುತ ವಸುಧಾಂಗನೆಯರು ಪೂಮಳೆಯಗಱೆದು ಪಾಡಲು ಪರೋಪಕಾರದಿಂದಿಱಿದು ಮೆಱೆದು ಸುರಲೋಕ ಪ್ರಾಪ್ತನಾದ.”[೫೪]

ಈ ವರ್ಣನೆಯಲ್ಲಿ ಉತ್ತಮೋತ್ತಮ ಕಾವ್ಯಾಂಶವಡಗಿದೆ ಎಂಬುದು ನಮ್ಮ ನಿಲುವಲ್ಲ. ವೀರತನವನ್ನು ಶಾಸನಕಾರ ತನ್ನ ಮಿತಿಗಳಲ್ಲಿ ಎಷ್ಟು ಚೆನ್ನಾಗಿ ವ್ಯಕ್ತಪಡಿಸಿದ್ದಾನೆ ಎಂಬುದು ಗಮನಾರ್ಹ.

ವೀರನ ಪರಾಕ್ರಮವನ್ನು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದಂತೆ ನಿಲ್ಲುವಂತೆ ಮಾಡಲು, ವೀರನ ಸಾವಿನಲ್ಲಿ ಒಂದು ಅರ್ಥವನ್ನು ಕಾಣುವುದಕ್ಕೆ ಸಹಾಯವಾಗಲು, ಕೆಲವಾರು ವೀರಗಲ್ಲುಗಳ ಶಾಸನಕಾರರು ವೀರರ ಜೀವನವನ್ನು ಸೊಗಸಾದ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅಂದಿನ ವೀರರ ಸಾವಿಗೆ ಅರ್ಥವಂತಿಕೆಯನ್ನು ಕೊಡುತ್ತಿದ್ದ ಒಂದು ರೀತಿ ಹೀಗಿದೆ. “ಧರೆಯೊಳು ಮಾಱಾಂತದಟರಯಿರುಳಹಗಲಱಿಸಿ ತೊಳಲ್ದು ಕಾಣದೆ ಸೋಯಂ ಸುರಲೋಕದೊಳಗೆ ಕಲಿಗಳನಱಸುವ ತೆಱದಿಂದ ಯಿಂದ್ರಪುರಮಂ ಪೊಕ್ಕಂ.”[೫೫] ಈ ರೀತಿಯ ವರ್ಣನೆಯನ್ನು ಕಾವ್ಯಗಳಲ್ಲಿಯೂ ಗಮನಿಸಬಹುದು. ಈ ಶಾಸನಕಾರರು ಕಾವ್ಯಗಳ ಪ್ರಭಾವದಿಂದಲೇ ಇವುಗಳನ್ನು ರಚಿಸಿದ್ದಾರೆಂಬುದು ನಿಜ. ಆದರೆ ಅನುಕರಣೆ ತುಂಬಾ ಸ್ವಾರಸ್ಯ ಪೂರ್ಣವೂ, ಔಚಿತ್ಯಪೂರ್ಣವೂ ಆಗಿದೆ ಎಂಬುದು ಮುಖ್ಯ. ಕ್ರಿಶ. ೧೧೫೭ರ ಮತ್ತೊಂದು ವೀರಗಲ್ಲಿನ ಪಾಠ ಕನ್ನೆಯ ಎಂಬುವನು ತುರುಗೋಳಿನಲ್ಲಿ ಸತ್ತನೆಂಬ ಅಂಶವನ್ನು

“ರಣದೊಲ್ ತಾಗಿದ ಸುಭಟರ
ಪೆಣಮಯಮಂ ಮಾಡಿದಾಗಳರಿಬಲಮೆಲ್ಲಂ
ಕಣೆಯ ಮಯವಾಗಿ ಕಱೆದೊಡೆ
ಕಣೆಹಂಜರದೊಳು ಕನ್ನಗೋ........ ಮಱೆದೊಱಗಿಱ್ದ”

ಎಂಬುದಾಗಿ ಬಹಳ ಸೂಚ್ಯವಾಗಿ ತಿಳಿಸುತ್ತದೆ.[೫೬] ಕ್ರಿಶ. ೧೧೬೮ರ ಮತ್ತೊಂದು ವೀರಗಲ್ಲು

---

೫೪ ಅದೇ E. C. III. MI. 21, 1382
೫೫ ಅದೇ
೫೬ ಅದೇ

"ಪರಹಿತ ಚರಿತಂ ಚಲಿತ ಪರೋಪಕಾರಾರ್ಥ ಮಾಶ್ವರ ಪದಾಂಬುರುಹೈಕಭೃಂಗನೆನಲಾರ್ದ್ದೊರೆ ಯಾದರ್ ಕೇತಮಲ್ಲ ಸೆಟ್ಟಿಯ ಗುಣದೊಳ್" ಎಂದು ಉದ್ಗಾರವೆಳೆದಿರುವುದನ್ನು ಗಮನಿಸಬಹುದು.[೫೭]

ವೀರನು ತಾನು ನ್ಯಾಯವೆಂದು ಬಗೆದುದನ್ನು ಸಮರ್ಥಿಸಲು ಹೋರಾಡಿದ ಹೋರಾಟದಲ್ಲಿ ತನ್ನ ಕೊನೆಯುಸಿರು ಇರುವವರೆಗೆ ಹಿಂದೆಗೆದವನಲ್ಲ. ಈ ರೀತಿಯ ಒಂದು ಹೋರಾಟದ ಚಿತ್ರಣ ಪರಿಣಾಮಯಾದ ರೀತಿಯಲ್ಲಿ ಮೂಡಿ ಬಂದಿರುವುದನ್ನು ಕ್ರಿಶ. ೧೦೧೮ರ ವೀರಗಲ್ಲೊಂದರ ಪಾಠದಲ್ಲಿ ಗುರುತಿಸಬಹುದು.

"ಒಟ್ಟಜೆಯನಿದಿರನದಿರದೆ
ಕುಟ್ಟಾಳುಗಳನಿಱಿದು ಬೀಳೆ ತುಱುಗಳು ಪೆಣನಂ
ಮೆಟ್ಟಿಪರಿದುವು ವಿಮಾನ ದೊ
ಳಿಟ್ಟು ಸುರಾಂಗನೆಯರೆಮಗೆತಮಗೆನುತುಯ್ದರ್"[೫೮]

–ಹೋರಾಟದಲ್ಲಿ ಜಿದ್ದಾಜಿದ್ದಿನಿಂದ, ಹೋರಡಿ ಮಡಿದ ವೀರರ ಆ ವೀರಾವೇಶ, ವೀರತ್ವದ ಬಗ್ಗೆ ಇದ್ದ ಒಂದು ಗೌರವಭಾವ, ತಮಗೆ ಹಾಕಿದ ಸವಾಲಿಗೆ ಎಂಥ ಬೆಲೆಯನ್ನಾದರೂ ತೆರಬಲ್ಲ ಅವರ ಆವೇಶಗಳ ಹತ್ತು ಹಲವಾರು ಮುಖಗಳು ನಮಗೆ ಇಲ್ಲಿ ಪರಿಚಯವಾಗುತ್ತದೆ.

ವೀರನ ಪರಾಕ್ರಮವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಹೇಳಲು ಬಳಸುತ್ತಿದ್ದುದು ಉತ್ಪ್ರೇಕ್ಷಾಲಂಕಾರ, ಇಲ್ಲಿ ಸಾಮಾನ್ಯವಾಗಿ ಒಂದೇ ರೀತಿಯ ವರ್ಣನೆಗಳನ್ನು ಗಮನಿಸಬಹುದು. ಅವುಗಳೆಂದರೆ : ವೀರನ ಪರಾಕ್ರಮವನ್ನು ಉಭಯ ಬಲಗಳು ಮೆಚ್ಚಿತು ; ಅಪ್ಸರೆಯರು ಹೂವಿನ ಮಳೆಗರೆದರು ; ಗಂಧರ್ವರು ಗಾನ ಮಾಡಿದರು ; ದೇವತೆಗಳು ಆಕಾಶದಲ್ಲಿನೆರೆದು ಇವನ ಪರಾಕ್ರಮವನ್ನು ನೋಡಿದರು ; ಇತ್ಯಾದಿ. ಈ ರೀತಿಯ ವರ್ಣನೆಯನ್ನು ಹೊಂದಿರುವ ವೀರಗಲ್ಲೊಂದರ ಪಾಠ ಈ ರೀತಿ ಇದೆ. ವೀರನ ಹೋರಾಟವನ್ನು ನೋಡಲು ""ಸುರರಾಜಂ ಬೆರೆಶಷ್ಟದಿಕ್ಪತಿಳುಂ ಮೂವತ್ತಮೂದೇವರುಂ ಪರಮಬ್ರಹ್ಮನ ಮಷ್ಟನಾಗಕುಳರುಂ ಚಂದ್ರಾರ್ಕರುಂ ಪಾರ್ವತೀಶನುಂ ಷಣ್ಮುಖನುಂ ಗಜೇಂದ್ರಮುಖನುಂ ವಿದ್ಯಾಧರಾಧಿ ಶರುಂ ನೆರೆದಿದಿಱ್ದಿ ನ್ನರ್ಭದೊಳ್" ಎಂಬುದಾಗಿ ವೀರನ ಸಾಹಸವನ್ನು ಈಕ್ಷಿಸಲು ನೆರೆದಿದ್ದ ದೇವತೆಗಳ ಪಟ್ಟಿಯನ್ನೇ ನೀಡುತ್ತದೆ.[೫೯]

---

೫೭ M. A. R.1928. 60, 1407

೫೮

೫೯

ಮಾವುತನೊಬ್ಬನ ಪರಾಕ್ರಮವನ್ನು ವರ್ಣಿಸುತ್ತಾ ಶಾಸನವೊಂದು, ಆ ಮಾವುತನ ಚಾಕಚಕ್ಯತೆಯನ್ನು ಗಮನಿಸಿದ ಇಂದ್ರನು ಅವನನ್ನು ಐರಾವತಕ್ಕೆ ಮಾವಂತನಾಗಬೇಕೆಂದು ಆ ವೈರಿಘರಟ್ಟ ರಾಮೆಮಾವಂತನ ಕಳುಹಬೇಕೆಂದಡೆ ಆ ರಾಮೆಯ ಮಾವಂತನನು ವೈರಿಘರಟ್ಟ ನೆಱೆಗೆ ಕೊಂದುದು. ಆತನನು ದೇವೇಂದ್ರ ಮೊದಲಾದ ದೇವರ್ಕ್ಕಳು ಐರಾವತವನೇಱಿಸಿ ಕೊಂಡು ಹೋಗಿ ಸರ್ಬ್ಬೇಶ್ವರನಹ ಮಹಾದೇವನ ಸಮೀಪದಲು ಯಿರ್‍ಸಿದರು. ಆ ರಾಮೆಯ ಮಾವಂತನು ದೇವನ ಸಾಯುಜ್ಯ ಪದವನೆಯ್ದಿ ಸುಖದಲು ಇದ್ದನು"' ಎಂದು ಸುದೀರ್ಘವಾಗಿ ಶಾಸನಕಾರ ಹೇಳುತ್ತಾನೆ.[೬೦]

ಕ್ರಿ.ಶ. ೧೨೮೦ರ ಮತ್ತೊಂದು ವೀರಗಲ್ಲಿನಿಂದ ವೀರನ ಪರಾಕ್ರಮವನ್ನು ಕಂಡ ಶಿವನು ಸ್ವತಃ ಆ ವೀರನನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನೆಂದು ಈ ರೀತಿ ಕೀರ್ತಿಸಲಾಗಿದೆ.

"'...............ಕೊಂದು ಶಿವಲೊಕ ಪ್ರಾಪ್ತನಾದನದೆಂತೆಂದಡೆ ; ಭೂತಳದಲ್ಲಿಯೆ ಭೋಗಂತೀರ್ದುದುಯಿ ತಂಗೆ ಮತ್ತಣದಲ್ಲಿರಬಾರದು ಬೇಗಂ ತಂನಿರೆ ಎಂದು ಚಳೇಶ್ವರನಂ ದೊಪ್ಪಗೌಡ ಚಾವುಂನುಮಂ ॥ ಯಿತಂಗೆ ತಕ್ಕುದಲ್ಲಿಂದಾರುಂ ಎನ್ನಬೇಡ ಮುಂನ ಲಿಖಿತಾಕ್ಷರಮಂ ಬರೆದಿಟ್ಟದಾಶಕ್ಯಂ ಮರು..........ಟ್ಟ ವಿಧಾತ್ರಕೇಳಿ ಮಾನವರೆಲ್ಲಂ ಮಱಿದಿರ್ದ್ದನಂದು ಮರ್ತ್ತ್ಯದ ಬಳಕೆಯ ನೆಱೆಯಱಿದನಲ್ಲ ಮೋಕ್ಷಲಕ್ಷ್ಮಿಯ ಸದುಗುರು ಲಕ್ಷ್ಮೀನಾಥಂ ಯಿದಿರ್ಗ್ಗೊಂಡಂ ಚಿಟ್ಟನಣುಗ ಚಾಮುಂಡನುಂ"[೬೧]

ಹಲವಾರು ಗದ್ಯ ಶಾಸನಗಳಲ್ಲಿ ಮತ್ತು ಕೆಲವಾರು ಚಂಪೂ ಶೈಲಿಯ ವೀರಗಲ್ಲುಗಳ ಪಾಠದಲ್ಲಿ ಮಡಿದ ವೀರರ ಬಿರುದುಗಳನ್ನು ನೀಡುವುದರ ಮೂಲಕ ವೀರನ ಪರಾಕ್ರಮದ ಒಂದು ಮುಖವನ್ನು ಖಚಿತವಾಗಿ ನಿರೂಪಿಸುವ ಪ್ರಯತ್ನ ಮಾಡಿರುವುದನ್ನು ಗಮನಿಸಬಹುದು. ಬಿರುದಾವಳಿಗಳ ಬಗ್ಗೆ ವೀರರಿಗೆ ಮತ್ತು ಜನತೆಗೆ ಇದ್ದ ಗೌರವ ಭಾವವನ್ನು ಈ ಹಿಂದೆಯೇ ಪರಿಶೀಲಿಸಿರುವುದರಿಂದ ಆ ಬಗ್ಗೆ ಇಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ವೀರರ ಅರಸರ ಬಿರುದಾವಳಿಗಳು ಪುಂಖಾನುಪುಂಖವಾಗಿ ಬಂದಿರುವುದನ್ನು ದಾನಶಾಸನಗಳು ಮತ್ತು ಇತರ ಶಾಸನಗಳಲ್ಲಿ ಗಮನಿಸಬಹುದು. ಬಿರುದುಗಳು ಅಲ್ಲಿ ವೀರಗಲ್ಲುಗಳ ಹಾಗೆ ಪರಿಣಾಮಕಾರಿಯಾದ ರೀತಿಯಲ್ಲಿರದೆ ಬರೀ ಹೊಗಳಿಕೆಯ ಮಾತುಗಳಾಗಿರುತ್ತವೆ. ಬಿರುದಾವಳಿಗಳ ಪ್ರಯೋಗ ವೀರಗಲ್ಲುಗಳ ಪಾಠಕ್ಕೆ ಒಂದು ರೀತಿಯ ಗತ್ತನ್ನು ತಂದು ಕೊಡುತ್ತದೆ. ಅವು ವೀರನ ಪರಾಕ್ರಮವನ್ನು ಧ್ವನಿಸುವ ರೂಪಕಗಳಾಗುತ್ತವೆ. ತಿಳ್ಳವಳ್ಳಿಯ ತುರುಗಳನ್ನು ಅಪಹರಿಸಿದಾಗ ಆ ಗ್ರಾಮದ "ಸಾಸಿರ್ವ್ವರ

೬೦. E.C.XV. BI. 339, 1321

೬೧. E.C. VII. CI. 24, 1280

ಬೆಸದಿ"" ""ಪಡೆಮುಚ್ಚೆ ಗಂಡ" ""ಮಾರ್ಕೊಳ್ವರ ಗಂಡ" ""ಬಂಟಸಾಸಿರ್ವ್ವರ ಬಣ್ಟ"ನಾದ ಮೊಸಳೆಯನು ಹೋರಾಡಿ ಗೆದ್ದು ತುರುಗಳನ್ನು ಹಿಂತಿರುಗಿಸಿ ಸತ್ತನೆಂದು ವೀರಗಲ್ಲಿನ ಪಾಠ ತಿಳಿಸುತ್ತದೆ.[೬೨] ಕ್ರಿ.ಶ. ೧೧೮೩ರ ವೀರಗಲ್ಲೊಂದು ವೀರನೊಬ್ಬನ ಬಿರುದಾವಳಿಗಳನ್ನು ಈ ರೀತಿ ಕೊಡುತ್ತದೆ. ""ಬಿರುದರ ನೆರ್ವ್ವಟ್ಟೆ ಬಡಿವಂ ಸವಗಡದ ನಾಯಕರ ತಲೆಯಂ ಕಾವರ ಬಿರುದರ ಗೋವಾರಿಗೆ ತಪ್ಪು ವಲೆಂಕರುಗಂಡ ಶಿವಪಾದಶೇಖರಂ ಮಹಾ ಮಾಹೇಶ್ವರಂ" ಈ ಬಿರುದುಗಳು ವೀರನ ಪರಾಕ್ರಮವನ್ನಷ್ಟೇ ಅಲ್ಲದೆ ಅವನ ಭಕ್ತಿ ಭಾವವನ್ನು ನಿರೂಪಿಸುವ ಸಾಧನಗಳಾಗಿವೆ.[೬೩]

ಕ್ರಿ.ಶ. ೧೧೮೯ರ ಒಂದು ವೀರಗಲ್ಲಂತೂ ವೀರನ ಬಿರುದಾವಳಿಗಳಿಂದಲೇ ತುಂಬಿದೆ. ""ಸ್ವಸ್ತಿಶ್ರೀ ಮುತವಾರುವಸಾಹಣದೆ ರಾಜಪುತ್ರ ಸಾಹಣಿಗಳಧಿಪಾಲಕ ಕಟಕದ ಗೋವ ತುರೆಯರೇವಂತ ಸಬಳ ಪಂಚಾನನ ಅಧಿವರಾರೂಢ ರೇವನ್ತ ಮಚ್ಚುರಿಪ ಸಾಹಣಿಗಳಿಗೆದೆಯ ಗೂಂಟ ಮಚ್ಚುರಿಪರಾಯ ಸಾಹಣಿಗಳ ಮೊಗದ ಬಿರುದರಾಯ ಸಾಹಣಿಗಳ ಬೆಂನಚಂಮಟಿಗೆ ಬಿರುದಮಣಿಕಳಿಕೆ ಕಲಿಗಳಂಕುಸಂ ತ್ಯಾಗದಲು ಖರ್ಣ್ನಂ ಭೋಗದಲುಂ ಇಂದ್ರಂ ಸತ್ಯದಲು ಹರಿಶ್ಚಂದ್ರ ಸಾಹಸದಲು ಸಹಸ್ರಾರ್ಜುನಂ ಗೀತ ನೃತ್ಯವಾದ್ಯಾ ಪರಿಣತ ವಿನೋದಂ ಗೋತ್ರಪವಿತ್ರಂ ಸಾಮನಿಧಾನಂ ಅರ್ತ್ಥಿಜನಚಿಂತಾಮಣಿ ಅರ್ತ್ಥಿಜನಕಲ್ಪಧ್ರುವಂ ಭಯ ಲೋಭ ದುರ್ಲ್ಲಭಂ ಸುಜನೆಯ್ಕ ಮೇರು ಆಳಂ ಕಂಡು ಕೀಳಂ ಹೊದಿವರಾಯಸಾಹಣಿಗಳ ಹೆಂಡತಿ ಗಂಡ, ಯೊಡ್ಡಂ ಕಂಡು ಸುತ್ತಂಬಳಸುವ ಜಂಗುಳಿ ಸಾಹಣಿ ಹೆಂಡತಿಗಂಡ ಗಂಡಪೆಂಡಾರ ಬಳ್ಳೇಶ್ವರ ದೇವರ ದಿಬ್ಯ ಶ್ರೀ ಪಾದಾರಾಧಕಂ."[೬೪] ಈ ಶಾಸನದ ಸಂಪೂರ್ಣ ಪಾಠ ಉಪಲಬ್ಧವಿಲ್ಲ. ಕೇವಲ ಬಿರುದಾವಳಿಗಳನ್ನು ನಿರೂಪಿಸುವುದರ ಮೂಲಕ ಶಾಸನಕಾರ – ವೀರನ ಸ್ವಭಾವ, ಪರಾಕ್ರಮಗಳ ಒಂದು ಸಂಪೂರ್ಣ ಚಿತ್ರಣವನ್ನು ನೀಡಲು ಪ್ರಯತ್ನಿಸಿದ್ದಾನೆ. ಅವನ ಈ ಪ್ರಯತ್ನ ಬಹುಮಟ್ಟಿಗೆ ಯಶಸ್ವಿಯಾಗಿದೆಯೆಂದೇ ಹೇಳಬಹುದು. ಈ ರೀತಿಯ ಪ್ರಯತ್ನಗಳು ಕಾಣುವುದು ತೀರಾ ಅಪರೂಪವೆಂದೇ ಹೇಳಬೇಕು.

ಕ್ರಿ.ಶ. ೧೦೩೩ ರ ಒಂದು ವೀರಗಲ್ಲು ಆ ವೀರನು ತನ್ನ ಬಿರುದಾದ 'ನೃಪರಿಂ ಮುನ್ನಿಱಿವಂ' ಎಂಬುದನ್ನು ಹೇಗೆ ಪಡೆದನೆಂಬುದನ್ನು ಈ ರೀತಿ ತಿಳಿಸುತ್ತದೆ.

> ""ರಿಪುಸೈನ್ಯಮೊತ್ತೆ ಧರದೊಳ್
> ನೃಪರಿಂ ಮುನ್ನಿಱಿದು ಪಲವು ಕಾಳೆಗದೊಳ್ ಭೂ

---

೬೨. K.I.II. 17, 11

೬೩. E.C.VII. Sk. 144, 1181

೬೪. M.A.R. 1941. BI. 339, 1189

ಮಿಪ ಚೂಡಾಮಣಿಸಿಂಗಂ
ನೃಪರಿಂ ಮುನ್ನಿಱಿವನೆಂಬ ಪೆಸರಂ ಪಡೆದಂ"[೬೫]

ಸ್ವಾಮಿನಿಷ್ಠೆಯ ಪರಾಕಾಷ್ಠತೆಯಿಂದ, ತನ್ನ ಪ್ರಭುವಿನ ಮೇಲೆ ಬಿದ್ದ ವೈರಿಗಳನ್ನು ತನ್ನ ಪ್ರಭುವಿಗಿಂತಲೂ ಮುಂದೆ ಹೋಗಿ ಇರಿದು 'ನೃಪರಿಂಮುನ್ನಿಱಿವ' ಎಂಬ ಹೆಸರನ್ನು ಪಡೆದನಂತೆ.

ವೀರರನ್ನು ಪುರಾಣ ಮತ್ತು ಮಹಾಕಾವ್ಯಗಳ ವೀರರಾದ ಕಾಲ ಭೈರವ, ಯಮ, ಭೀಮ, ಅರ್ಜುನ, ಭೀಷ್ಮ, ಅಭಿಮನ್ಯು ಮುಂತಾದವರೊಂದಿಗೆ ಹೋಲಿಸಿರುವ ಅನೇಕ ನಿದರ್ಶನಗಳನ್ನು ಗಮನಿಸಬಹುದು.[೬೬]

ಕ್ರಿ.ಶ. ೧೧೭೧ರ ವೀರಗಲ್ಲು ತಮ್ಮಡಿರುದ್ರನನ್ನು ಹೀಗೆ ಹೊಗಳುತ್ತದೆ

""ಕ್ಷುದ್ರತೆಯಿಲ್ಲದೆ ರಣದೊಳು
ಭದ್ರಗಜಂ ಹರಿದು ತಾಗನ್ತರಿಬಳಮಂ
ರೌದ್ರಾಕಾರದೆ ಕೊಲ್ಗುಂ
ರುದ್ರಂ ಕಾಳಾಗ್ನಿರುದ್ರನನ್ದಿದಿನಾಗಳ್ ॥
ಎರವರ್ಥಿ ಜನಕೆ ಸುರತರು
ನಿರುತಂ ಕಾಮಿನಿಯರಲ್ಲಿಗಭಿನವಕಾಮಂ
ಪರಬಳಕೆ ಭೀಮಸೇನಂ
ಹರಪದಯುಗಬ್ರಿಂಗನೆನಿಪ ತಮ್ಮಡಿರುದ್ರಂ"[೬೭]

ಮೊದಲ ಕಂದ ಪದ್ಯದಲ್ಲಿ 'ರುದ್ರ' ಎಂಬ ಹೆಸರಿನ ಮೇಲೆ ಆಟವಾಡಿದ ಕವಿ ನಂತರದ ಪದ್ಯದಲ್ಲಿ ಅವನ ಇತರ ಗುಣಗಳನ್ನು ಸುರತರು, ಕಾಮ, ಭೀಮಸೇನರಿಗೆ ಹೋಲಿಸಿದ್ದಾನೆ.

ಕ್ರಿ.ಶ. ೧೧೭೯ರ ವೀರಗಲ್ಲಿನಲ್ಲಿ ವೀರನು ""ಚಕ್ರವ್ಯೂಹದ ಹೊಕ್ಕಿರ್ದ್ದುಕ್ಕಾಳಭಿಮನ್ಯುನಂತೆ" ಇದ್ದನೆಂದು ತಿಳಿಸುತ್ತದೆ.[೬೮] ಕ್ರಿ.ಶ. ೧೧೮೭ರ ವೀರಗಲ್ಲು ವೀರನು ""ಕೌರವರೋಳರ್ಜ್ಜುನನಂತಿರೆ ಪೊಣ್ದು ಕಾದಿದ"ನೆಂದು ತಿಳಿಸುತ್ತದೆ.[೬೯] ಹನ್ನೆರಡನೆಯ ಶತಮಾನದ ಒಂದು ವೀರಗಲ್ಲಿನ ಪಾಠ ಸಂಸ್ಕೃತ ಮತ್ತು ಕನ್ನಡ ಭಾಷೆ ಎರಡರಲ್ಲಿಯೂ ಇದೆ. ಕೇತಮಲ್ಲನನ್ನು ಹೊಗಳುವ ಒಂದು ಸಂಸ್ಕೃತ ಶ್ಲೋಕ ಈ ರೀತಿ ಇದೆ.

೬೬. ವಿವರಗಳಿಗೆ ನೋಡಿ : ಎಂ. ಚಿದಾನಂದಮೂರ್ತಿ : ಸಂಶೋಧನ ತರಂಗ, ಪು. ೧–೬೭.
E.C.XV. HN. 90, 1171
೬೮. E.C.VIII. Sb 20, 1179
೬೯. ಅದೇ. 47, 1187

""ಜಿತ್ವಾ ಬಹುಭಟಾನ್ಯುದ್ದೇ ಭೀಮಾರ್ಜುನ ಪರಾಕ್ರಮೀ
ವೀರಶ್ರೀ ರಮಣೋ ಭೂತ್ವಾ ಕೇತಮಲ್ಲೋ ದಿವಂಗತಃ"[೨೦]
ಇಲ್ಲಿ ಭೀಮಾರ್ಜುನರಿಬ್ಬರನ್ನೂ ಶಾಸನಕಾರ ಬಳಸಿಕೊಂಡಿದ್ದಾನೆ.
ಕ್ರಿ.ಶ. ೧೨೧೮ ರ ಒಂದು ವೀರಗಲ್ಲು ವೀರನನ್ನು ಗರುಡನಿಗೆ ಹೋಲಿಸಿದೆ.[೨೧]
ತಾಗಿದೊಡೆ ಮುಳಿದು ಕಳ್ಳರ್
ಪೋಗದೆ ನಿಲು ನಿಲ್ಲೆನುತ್ತೆ ಕವಿತರ್ ಬಿನವಂ
ರಾಗಿಸಿ ಬೊಬ್ಬಿದಱಿದಳುಕದೆ
ನಾಗಂಗಳಂ ಕಂಡ ಗರುಡನಂತಾಂತಿಱಿವಂ"

ಈ ಕಂದ ಪದ್ಯದಲ್ಲಿ ಕವಿ ಬಹಳ ಸುಂದರವಾಗಿ ತುರುಗಾಳಗದ ಚಿತ್ರಣವನ್ನು ನೀಡಿದ್ದಾನೆ. ತುರುಗಳನ್ನು ಅಪಹರಿಸಬೇಕೆಂಬ ಕಳ್ಳರ ವ್ಯರ್ಥ ಪ್ರಯತ್ನ ; ಅವರ ಪ್ರಯತ್ನವನ್ನು ಹತ್ತಿಕ್ಕುವ ಇವನ ಛಲ ಇವುಗಳೂ ನಾಗ – ಗರುಡಗಳ ಹೋಲಿಕೆಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ಒಮ್ಮೆಲೆ ಶತ್ರುಪಕ್ಷದವರು ಮೇಲೆ ಬಿದ್ದಾಗ ವೀರನು ಅವರ ಮೇಲೆ ತಿರುಗಿ ಬಿದ್ದ ಈ ಚಿತ್ರಣವನ್ನು ಗಮನಿಸಿ :

""ತೊಟ್ಟನೆ ಕಂಡರಾತಿಭಟಸಂಕುಳವೆಣ್ದೆಸೆಗೆಯ್ದೆವಂದು ಕ
ಟ್ಟಿಟ್ಟಳವಾಗಿ ಮುತ್ತೆ ಕಡೆಗಾಲದ ಭೈರವನಂತಿರೆ ಕಯ್ದು ಗೊಂ
ಡೊಟ್ಟೆ ಜೀಕಾಱಿರಟ್ಟೆಗಳನಾಡಿಸಿದಂ ಕಿಡಿಕೆಯ್ದು ವೀರರಂ
ದೊಟ್ಟಿ ಸಿಗುಳ್ದು ಕೊಂದು ಮೆಱೆದಂ ಭುಜಶೌರ್ಯ್ಯಮನಾಜಿರಂಗದೊಳ್"[೨೨]

ಶತ್ರು ಪಕ್ಷದವರನ್ನು ಓಡಿಸುವಲ್ಲಿ ವೀರನು ಕಾಲಭೈರವನಂತಾದ, ತನ್ನನ್ನು 'ಕಡಿಕೆಯ್ದು' ವೀರರನ್ನು 'ಸಿಗುಳ್ದು ಕೊಂದ' ಎಂಬ ಈ ವರ್ಣನೆ ಯುದ್ಧರಂಗದ ವೀರಾವೇಶದ ಚಿತ್ರಣವನ್ನು ನಮ್ಮ ಕಣ್ಣ ಮುಂದೆ ತರುತ್ತದೆ.

ವೀರನ ಔನ್ನತ್ಯವನ್ನೂ, ಅವನ ಆದರ್ಶ ಗುಣಗಳನ್ನೂ ಖಚಿತವಾಗಿ ನಿರೂಪಿಸುವಲ್ಲಿ ವೀರಗಲ್ಲುಗಳ ಶಾಸನಕಾರರು, ವೀರತ್ವದ ಮೌಲ್ಯಗಳನ್ನು ಪ್ರತಿಪಾದಿಸುವ ಸಂಸ್ಕೃತ ಶ್ಲೋಕವೊಂದನ್ನು ಶಾಸನದ ಆರಂಭದಲ್ಲಿಯೋ, ನಡುವೆಯೋ, ಅಥವಾ ಕೊನೆಯಲ್ಲಿಯೋ ತರುತ್ತಾರೆ. ಅನೇಕ

---

೨೦. E.C.VIII. Nr. 70

೨೧. E.C.VIII. Sb. 224, 1218

೨೨. ಅದೇ Sb. 206

ವಿರಗಲ್ಲುಗಳಲ್ಲಿ '""ಜಿತೇನ ಲಭ್ಯತೇಲಕ್ಷ್ಮಿ ಮೃತೇನಾಪಿ ಸುರಾಂಗನಾ । ಕ್ಷಣವಿಧ್ವಂಸಿನಿಕಾಯೇ ಕಾ ಚಿಮತಾ ಮರಣೇರಣೇ" ಎಂಬ ಶ್ಲೋಕ ಸಾಮಾನ್ಯವಾಗಿ ಕಂಡು ಬರುತ್ತದೆ. ಇದಲ್ಲದೆ ಅಪರೂಪಕ್ಕೆ ಕೆಲವರು ವೀರನ ಚಿತ್ರವನ್ನು ನೀಡುವಲ್ಲಿ ಬೇರೆಯ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿರುವ ನಿದರ್ಶನಗಳೂ ಉಂಟು. ಇವು ಶಾಸನದ ಸಾವಯವ ಶಿಲ್ಪದಿಂದ ಹೊರಗುಳಿಯದೇ, ವೀರನ ಚಿತ್ರವನ್ನು ಅನ ವೀರತ್ವದ ಆದರ್ಶವನ್ನು ಚಿತ್ರಿಸುವಲ್ಲಿ ಅನೇಕ ಕಡೆ ಸಹಾಯಕಾರಿಯಾಗಿವೆ ಎಂದು ಹೇಳಬಹುದು.

ಕ್ರಿ.ಶ. ೫೦೦ರ ತಮಟುಕಲ್ಲು ಶಾಸನ ಇದೀಗ ಪ್ರಕಟವಾಗಿರುವಮತೆ ನಾಲ್ಕು ಸಾಲುಗಳು ಸ್ವತಂತ್ರವಾದ ಶಾಸನವಲ್ಲ. ಆದರೆ ಪಕ್ಕಲದಲಿರುವ ವೀರಗಲ್ಲಿನ ವಿಷಯವನ್ನು ಮುಂದುವರೆದು ತಿಳಿಸುವ ಬರಹವಾಗಿದೆ. ಆ ವೀರಗಲ್ಲಿನ ಶಿಲ್ಪದ ಬಗ್ಗೆ ಬೇರೊಂದು ಕಡೆ ಹೇಳುರುವುದರಿಂದ ಇಲ್ಲಿ ಅದರ ಪ್ರಸ್ತಾಪ ಮಾಡುವುದಿಲ್ಲ. ವೀರಗಲ್ಲಿನ ಮೇಲೆ ಇರುವ ಬರಹವು ಸಂಸ್ಕೃತ ಭಾಷೆಯಲ್ಲಿದ್ದು ಗುಣಮಧುರನ ವಂಶದವಿವರವನ್ನು ತಿಳಿಸುತ್ತದೆ. ಅದರ ಪಕ್ಕದಲ್ಲಿರುವ ಕಲ್ಲಿನ ಮೇಲಿನ ಬರಹ ಗುಣಮಧುರನ ಜೀವನಕ್ಕೆ ಬರೆದ ಭಾಷ್ಯದಂತಿದೆ.

ಫಣಮಣಿ ಅನ್ತು ಭೋಗಿ ಫಣದುಳ್ಮಣಿ ವಿಲ್ಮನದೋನ್
ರಣಮುಖದುಳ್ಕೆಾಲನರಿಯರ್ಕ್ಕುಮನಿನ್ದ್ಯಗುಣನ್
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್
ಗುಣಮಧುರಾನ್ಯ ದಿವ್ಯ ಪುರುಷನ್ ಪುರುಷಪ್ರವರನ್[೨೭a]

ಈ ಗುಣಮುಧುರನು ಭೋಗಿಯೋ ಹೌದು. ಅಷ್ಟೇ ಹೃದಯವಂತನೂ ಹೌದು. ಯುದ್ಧಭೂಮಿಯಲ್ಲಿ ಯಮನಂತೆ ಇರುವ ಇವನ ಗುಣವನ್ನುಯ ಶತ್ರುಗಳೂ ನಿಂದಿಸುವುದಿಲ್ಲ. ಅಸಿತೋತ್ಫಲವರ್ಣವಾಗಿದ್ದ ಇವನು ಪ್ರಣಯಿ ಜನಕ್ಕೆ ಕಾಮನಂತೆ ಇದ್ದ. ಈ ಎಲ್ಲ ಗುಣಗಳಿಂದ ಕೂಡಿದ್ದ ಇವನು ಪುರುಷಪ್ರವರನಲ್ಲದೆ ಮತ್ತೇನು ? ಯುದ್ಧಭೂಮಿಯಲ್ಲಿ ಯಮಸ್ವರೂಪಿ ಯಾಗಿದ್ದರೂ, ಶತ್ರುಗಳು ಇವನ್ನು ನಿಂದಿಸುತ್ತಿರಲಿಲ್ಲವೆಂದರೆ ಇವನ 'ಶೌಚಗುಣ' ಎಂಥದ್ದಿರಬೇಕು.

ಕ್ರಿ.ಶ. ಸು. ೫೫೦ ರ ಬಾದಾಮಿಯ ಕಪ್ಪೆಅರಭಟ್ಟನ ಶಾಸನವನ್ನು ವೀರಗಲ್ಲು ಎಂಬುದಾಗಿ ಕರೆಯಲಾಗದಿದ್ದರೂ, ಅದು ವೀರನ ಚಿತ್ರವನ್ನು ನೀಡುವುದರಿಂದ ಅದನ್ನು ಇಲ್ಲಿ ಸ್ವಲ್ಪಮಟ್ಟಿಗೆ ವಿಚಾರಮಾಡುವುದು ಸೂಕ್ತ. ಇಲ್ಲ ನಮಗೆ ಮುಖ್ಯವಾಗಿ ಬೇಕಾದ ಅಂಶವೆಂದರೆ, ವೀರನ ಸಂಪೂರ್ಣ ಚಿತ್ರವನ್ನು ನೀಡುವಲ್ಲಿ ಅಲ್ಲಿನ ಸಂಸ್ಕೃತ ಶ್ಲೋಕ ಹೇಗೆ ಪೋಷಕವಾಗಿದೆ ಎಂಬುದು.

೨೭a ದೇವರಕೊಂಡಾರೆಡ್ಡಿ ಮತ್ತು ಡಾ. ಆರ್. ಶೇಷಶಾಸ್ತ್ರಿ : 'ತಮಟುಕಲ್ಲಿನ ಗುಣಮಧುರನ ಶಾಸನಗಳು –ಪುನರ್ ಪರಿಶೀಲನೆ', ಸಾಧನೆ. ಸಂಪುಟ ೧೦, ಸಂ.೩, ೧೯೮೧ ಪು. ೨೦–೨೨

ಶಾಸನಕಾರ ಶಾಸನದ ಮೊದಲೆರಡು ಸಾಲುಗಳಲ್ಲಿ ಕಪ್ಪೆ ಅರಭಟ್ಟನ ಪರಿಚಯವನ್ನು ಹೀಗೆ ಮಾಡಿಕೊಳ್ಳುತ್ತಾನೆ ;

"'ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟಜನವರ್ಜಿತನ್ ಕಲಿಯುಗವಿಪರೀತನ್"

ಎಂದು ಅವನ ಸ್ವಭಾವವನ್ನು ತಿಳಿಸಿ, ಅವನ ಆದರ್ಶಕ್ಕೆ ವ್ಯಾಖ್ಯಾನವನ್ನು ಈ ರೀತಿ ನೀಡುತ್ತಾನೆ :

"'ವರನ್ತೇಜಸ್ವಿನೋ ಮೃತ್ಯುರ್ನತು ಮಾನಾವಖಣ್ಡನಮ್
ಮೃತ್ಯುಸ್ತತ್ಕ್ಷಣಿಕೋ ದುಃಖಮ್ಮಾನ ಭಂಗನ್ದಿನೇದಿನೇ"

ಈ ಶ್ಲೋಕದ ನಂತರ ಈಗಾಗಲೇ ಪ್ರಸಿದ್ಧವಾಗಿರುವ ಮೂರು ತ್ರಿಪದಿಗಳು ಬರುತ್ತವೆ. ಆ ಮೂರು ತ್ರಿಪದಿಗಳಲ್ಲಿ ವಿಶದವಾಗಿ, ಸುಂದರವಾಗಿ ಹೇಳಿರುವ ವಿಷಯವೇ, ಈ ಶ್ಲೋಕದಲ್ಲಿ ಸೂಚ್ಯವಾಗಿ, ಗಂಭೀರವಾಗಿ, ಸಿದ್ಧಾಂತದ ರೂಪದಲ್ಲಿ ಮೂಡಿಬಂದಿದೆ. ಕಪ್ಪೆಅರಭಟ್ಟನಿಗೆ ಜೀವಿಸಿರುವುದು ಮುಖ್ಯವಲ್ಲ. ಆದರೆ ಆ ಜೀವನ ಎಂಥದ್ದಾಗಿರಬೇಕೆಂಬುದು ಮುಖ್ಯ. ಪ್ರಾಣವನ್ನು ತೃಣಕ್ಕೆ ಸಮಾನವಾಗಿ ಬಗೆದಾನು ; ಆದರೆ ಮಾನವನ್ನಲ್ಲ. ಸಾಧುಜನರಿಗೆ ಹೇಗೆ ಸಾಧುವೋ ಹಾಗೆಯೇ ಇವನನ್ನು ಕೆಣಕಿದವರ ಪಾಲಿಗೆ ಇವನು 'ಕಲಿಯುಗ ವಿಪರೀತ' ಬಂಧನದಿಂದ ವಿಮುಕ್ತವಾದ 'ಕೆರಳಿದ ಸಿಂಹ'.

ಇಷ್ಟು ಅರ್ಥಪೂರ್ಣವಾದ ಪ್ರಯೋಗಗಳು ಇತರ ಕಡೆಗಳಲ್ಲಿ ದೊರೆಯುವುದು ಅಪರೂಪದ ಸಂಗತಿಯಾದರೂ ಅಲ್ಲಲ್ಲಿ ದೊರೆಯುತ್ತವೆ. ಕ್ರಿ.ಶ. ೧೧೪೦ರ ಒಂದು ಶಾಸನವು 'ದುದ್ದೆಯ'ನೆಂಬುವನ ಮರಣವನ್ನು ಮತ್ತು ಅವನು ಮಾಡಿದ ದಾನವನ್ನು ತಿಳಿಸುತ್ತದೆ. ಈ ಶಾಸನದ ಆರಂಭದಲ್ಲಿ ಶೈವಧರ್ಮ ಪರವಾದ "'ನಮಸ್ತುಂಗ.........." ಎಂಬ ಶ್ಲೋಕವಿದೆ. ನಂತರ 'ಜಿತೇನ ಲಭ್ಯತೇ ಲಕ್ಷ್ಮೀ.........' ಎಂದು ಆರಂಭವಾಗುವ ಶ್ಲೋಕವೂ ಇದೆ. ವೀರನ ಪರಿಚಯವನ್ನು ಮಾಡಿಕೊಡುತ್ತಾ ಆ ಶಾಸನ, "'ಅನಿತ್ಯಮಧ್ರುವಂ ಪ್ರಾಣಂ ಮಾನಮಾ ಚಂದ್ರತಾರಕಂ ಪ್ರಾಣಮೇವಪರಿತ್ಯಾಗೇ ಮಾನಮೇವ ಸುರಕ್ಷಿತಃ" ಎಂಬ ಶ್ಲೋಕವನ್ನು ಉದ್ಧರಿಸುತ್ತದೆ. ಇಲ್ಲಿಯೂ ಸಹ ಈ ಶ್ಲೋಕ ಬಾದಾಮಿಶಾಸನದ ಹಾಗೆಯೇ ವೀರನ ಚಿತ್ರವನ್ನು ನೀಡುವಲ್ಲಿ ನೆರವಾಗಿದೆ.[೨೩]

೨೩. E.C.VI. Cm. 122, 1140

ಅನೇಕ ವೀರಗಲ್ಲುಗಳ ಪಾಠಗಳಲ್ಲಿ ""ಜಿತೇನ ಲಭ್ಯತೇ..........." ಎಂದು ಆರಂಭವಾಗುವ ಶ್ಲೋಕವೂ ""ದ್ವಾ ಇಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ । ಪರಿವ್ರಾಡ್ಯೋಗ ಯುಕ್ತಾಶ್ಚ ರಣೇ ಚ ಅಭಿಮುಖೇಹತಃ" ಎಂಬ ಶ್ಲೋಕವೂ ದೊರೆಯುತ್ತದೆ. ಇವುಗಳನ್ನು ಪರಿಣಾಮಕಾರಿಯಾಗಿ ಬಳಸಿಲ್ಲ. ಬದಲಾಗಿ ಇವುಗಲನ್ನು ಉದ್ಧರಿಸುವುದು ಒಂದು ಸಂಪ್ರದಾಯವೇನೋ ಎಂಬ ರೀತಿಯಲ್ಲಿ ಬಳಸಿದ್ದಾರೆ. ಆದರೂ ಅಲ್ಲಲ್ಲಿ ಕೆಲವರಾದರೂ ಇದರ ಉಪಯೋಗವನ್ನು ಮಾಡಿಕೊಂಡಿರುವುದನ್ನು ಗಮನಿಸಬಹುದು.

ವೀರನು ಮಾಡಿದ ಹೋರಾಟವನ್ನು ವರ್ಣಿಸುತ್ತಾ ಕ್ರಿ.ಶ. ೧೧೬೬ರ ಒಂದು ವೀರಗಲ್ಲು ಈ ರೀತಿ ತಿಳಿಸುತ್ತದೆ.[೭೪] ""ಅನ್ತು ತಂನೊಡನುಂಡೆ ಹೊಯ್ಸಣ ಮಂಡಳಿಕಂಗಳಿವಾದಡಾತನಿಂ ಮುನ್ತೆನದೆದು, ತಮಗೆ ಮಾಱೂನ್ತು ಕಯ್ದು ಕೆಯ್ದರಂ ಕಡಿಖಂಡಮಾಗೆ ಸುರಿಗಿಱಿದು ಹಲರಂ ಕೊನ್ದು ತಾಂ ವೀರಭಟನಪ್ಪುದಱಿಂ ॥ ಶ್ಲೋ ॥ ದ್ವಾವೇವ ಪುರುಷೌ ಲೋಕೇ ಸೂರ್ಯ್ಯಮಂಡಳ ಭೇದಿನೌಪರಿಬ್ರಾಡ್ಯೋಗ ಯುಕ್ತಾತ್ಮಾರಣೇ ಚಾಭಿ ಮುಖೋ ಯಥಾ । ಯಂಬೀ ವಾಕ್ಯಾರ್ಥಮೇ ಸ್ವಾರ್ಥಮಾಗೆ ಸುರಲೋಕ ಪ್ರಾಪ್ತನಾದ." ಈ ರೀತಿಯ ಶ್ಲೋಕಗಳನ್ನು ಪಾಠದ ನಡುವೆ ತರುವಾಗ ಶಾಸನಕಾರರು ಶ್ಲೋಕವನ್ನು ಉದ್ಧರಿಸಿ, ""ಎಂಬ ವ್ಯಾಖ್ಯಾನವನ್ನು ಬರೆಯುವುದುಂಟು. ಈ ರೀತಿಯ ತಂತ್ರ ಕೆಲವು ಕಡೆಗಳಲ್ಲಿ ಮಾತ್ರ ಯಶಸ್ವಿಯಾಗಿವೆಯಷ್ಟೆ

ಈ ರೀತಿ ಸಂಸ್ಕೃತ ಶ್ಲೋಕಗಳನ್ನು ಅದರಲ್ಲಿಯೂ ""ಜಿತೇನ ಲಭ್ಯತೇ ಲಕ್ಷ್ಮೀ" ಎಂದು ಆರಂಭವಾಗುವ ಶ್ಲೋಕವನ್ನು ಉದ್ದರಿಸುವ ಸಂಪ್ರದಾಯ ಹತ್ತನೆಯ ಶತಮಾನದಿಂದ ಈಚೆಗೆ ಕಂಡುಬರುತ್ತದೆ. ಈ ಶ್ಲೋಕವನ್ನು ಗಂಗ, ನೊಳಂಬ, ಬಾಣರ ವೀರಗಲ್ಲುಗಳಲ್ಲಿ ಕಾಣಲಾಗುವುದಿಲ್ಲ.

ವೀರಗಲ್ಲುಗಳ ಶಿಲ್ಪದಲ್ಲಿ ವೀರನ ಚಿತ್ರಣಕ್ಕೆ ಪ್ರಾಮುಖ್ಯ ದೊರತಿರುವಂತೆಯೇ, ವೀರಗಲ್ಲುಗಳ ಪಾಠದಲ್ಲಿಯೂ ಅವನ ಪರಾಕ್ರಮವನ್ನು ಸಾರುವ ಪದ್ಯಗಳಲ್ಲಿ ಕ್ರಿಯೆಗೆ ಪ್ರಾಮುಖ್ಯ ದೊರೆತಿರುವುದನ್ನು ಗಮನಿಸಬಹುದು. ಕೆಲವೊಮ್ಮೆ ಈ ಬಗೆಯ ವರ್ಣನೆಗಳು ಮಾರ್ಗಕಾವ್ಯಗಳ ಅನುಕರಣೆಗಳೆಂದೇ ಅನ್ನಿಸುತ್ತದೆ. ಆದರೂ, ಹಲವಾರು ಶಾಸನಕಾರರ ಪ್ರತಿಭೆಯನ್ನು ಗುರುತಿಸಬಹುದು. ಇಂಥವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪರಿಶೀಲಿಸುತ್ತೇವೆ.

ವೀರರ ಪರಾಕ್ರಮವನ್ನು ಸಮರ್ಥವಾಗಿ ಹೇಳುವಲ್ಲಿ ಹಲವಾರು ಗದ್ಯಶಾಸನಗಳೂ ಸಮರ್ಥವಾಗಿವೆ. ಅವರು ವಿಷಯವನ್ನು ನಿರೂಪಿಸಿರುವ ಕ್ರಮ ಮತ್ತು ಅವರು ಪ್ರಯೋಗ ಮಾಡಿರುವ ಭಾಷೆಯಲ್ಲಿನ ಆಡುಮಾತಿನ ಸೊಗಸು – ಅವುಗಳನ್ನು ಪರಿಣಾಮಕಾರಿಯನ್ನಾಗಿ ಮಾಡಿವೆ.

---

೭೪. K.I. IV. 17, 1166

ಒಂದು ಊರಿನ ತುರುಗಳನ್ನು ಶತ್ರುಗಳು ಅಪಹರಿಸಿದಾಗ ಆ ವೀರನು ಅವರನ್ನು ಅಟ್ಟಿಸಿಕೊಂಡು ಹೋಗಿ, "'ಮೊದಲಿಸಿ ಮುನ್ದಣ ಪಯಿಲಪಿನ್ದಿಕ್ಕಿ ಮುನ್ದಾಗಿ ಸಿರಿವುರದ ಪಳಮೆಗೆ ತುಱುವನಿಕ್ಕಿಸಿ ಮಗುಟ್ದು ಬರುತಿಱೊಡೆ ಕದ್ದೆಱಿಯ್ಯನ ಮಗಂ ಗುಜ್ಜನಂದಿ. ದ ಕಳ್ಕೊರ್ವ್ವರ್ನಿನ್ದನೆದ್ದು ಕಾದಿದನ್"'[೭೭] ಇಲ್ಲಿಯ ಭಾಷೆಯಲ್ಲಿ ಸ್ವಲ್ಪ ಮಟ್ಟಿಗೆ ಗೊಂದಲವಾಗಿರ ಬಹುದು, ಆದರೆ ತಾನು ಹೇಳುವ ವಿಷಯವನ್ನು ಕೇಳುಗರ ಮುಂದೆ ಕಣ್ಣಿಗೆ ಕಟ್ಟುವಂತೆ ಹೇಳಬೇಕು ಎಂಬ ಶಾಸನಕಾರನ ಪ್ರಯತ್ನ ಗಮನಾರ್ಹವಾದುದು.

ಈ ದೃಷ್ಟಿಯಿಂದ ಕ್ರಿ.ಶ. ೧೦೯೫ರ ಕೊರಗೋಡಿನ ವೀರಗಲ್ಲು ತುಂಬಾ ಮಹತ್ವದ್ದಾಗಿದೆ[೭೮] ಶಾಸನಕಾರ ಕೇವಲ ಗದ್ಯದಲ್ಲಿ ಮಾಲೋಪಮೆಗಳನ್ನು ಸೃಷ್ಟಿಸಿ, ವೀರರ ಪರಾಕ್ರಮವನ್ನು ಚಿತ್ರಮತ್ತಾಗಿಟ್ಟಿದ್ದಾನೆ. ಈ ವೀರಗಲ್ಲಿನ ಪಾಠವನ್ನು ಇಲ್ಲಿ ವಿವರವಾಗಿ ಪರಿಶೀಲಿಸುವುದು ಸೂಕ್ತವೆಂದು ತೋರುತ್ತದೆ.

"'ಶ್ರೀ ಮನ್ಮಹಾಮಂಡಳೇಶ್ವರಂ ಜಗದೇವರಸರ ಬೆಸದಿಂ ಮದಸಾಲೆಯ ಕಾಳರಸಂ ಸಮಸ್ತ ಸಾಮತ್ತಿಯಂ ಬೆರಡು ಬಂದು ಶ್ರೀಮದನಾಂದಿಯಗ್ರಹಾರಂ ಕುಪ್ಪಗಡೆಯಹಳ್ಳಿ ಕೊರಕೋಡನಿಱಿದು ತುಱುವಂ ಕೊಂಡುಡೆಯುಚ್ಚಿ ಹೋಹಾಗಳಲ್ಲಿ ಹುಟ್ಟಿದ ಬಾವಗಾವುಂಡನ ಮಗಂದಿರು ದೇವಗಾವುಂಡನುಂ ಮಲ್ಲ ಗಾವುಂಡನುಂ ಬಿಲ್ಲಮಂಬುವಂ ಕೊಂಡೀರ್ವರುಂ ಹೆಬ್ಬಾಗಿಲೊಳಡ್ಡಂ ನಿಂದು ಗುಹೆಯಬಾಗಿಲೊಳು ಸಿಂಹ ನಿಪ್ಪಂತೆ ತಾಗಿ ತಳ್ದೆಸೆವಾಗಳು ಕಾರಮುಳೆ ಕಱೆದಂತೆಯುಂ ಕಡಂದುಱು ಹುಟ್ಟಿಯ ಕೆಣಕಿದಂತೆಯುಂ, ಕವಿದ ಕಾಲಬಾಯೊಳಂಜವ ನೊಕ್ಕಿಲಿಕ್ಕಿದಂತೆಯುಂ ತೊತ್ತಳದುಳಿದವ್ರೋಲುತುಂ ಕಯ್ಯನರೆದುಂ ಬಿಲ್ಲತಿರುಮಂ ಪಱೆವನ್ನುಮೆಚ್ಚು ನೆಱೆಯದೆ ಕಟ್ಟಿದಲಗಂ ಕಿತ್ತು [ಪರಿಯ] ಲ್ಕುಱೆಯಹಿಂಡಂ ತೋಳಪೊಕ್ಕಂತೆಯುಂ ಕಬ್ಬುದೋಂಟವನಾನೆ ಪೊಕ್ಕಂತೆಯುಂ ನಿಕ್ಕುರಳಿಲು ಪೊಕ್ಕುದೋಳಹಿಂಡು ಕುತ್ತಿ ನೂಂಕುತ್ತ ಬಪ್ಪಾಗಳು....."

ಇಲ್ಲಿಗೆ ಗದ್ಯಭಾಗ ಮುಗಿದು ಶಾಸನಕಾರ ಮುಂದೆ ಒಂದು ವೃತ್ತವನ್ನು ತಂದಿದ್ದಾನೆ. ಆ ವೃತ್ತ ಗದ್ಯದಷ್ಟು ತೀವ್ರವಾಗಿಲ್ಲ. ಆದರೂ ಒಟ್ಟು ಶಾಸನದ ಬಂಧಕ್ಕೆ ಒಂದು ರೀತಿಯ ಸೊಗಸನ್ನು ತರುವಲ್ಲಿ ನೆರವಾಗಿದೆ.

---

೭೫. E.C.VII. Sk. 307, 308, 1016

೭೬. K.I.V. 54, 1148

೭೭. E.C.XII. Tp. 10, ಸು. ೮–೯ನೇ ಶತ.

೭೮. E.C.VIII. Sb. 175, 1095

"'ಮಲೆದಿದಿರಾಂತ ಮಾರ್ವ್ವಲವನಕ್ಕಜೆಠಾಗಿ ಭುಜಪ್ರತಾಪದಿಂ
ದಲಗನೆ ಕಿರ್ತ್ತು ಪೊಯ್ಯೆ ನಿರತಂ ಕಣಕಾಲ್ಮೊಳಕಾಲ್ಮುಖಂ ಭುಜಂ
ತಲೆ ಬಳೆಯಾಗೆ ಸಂಬಳಿತ ಯೋಪಿನದೊಂದರಡಟ್ಟಿ ಯೋಡಲು
ತೊಲಗದೆ ನಿಂದು ತಳ್ತಿಜಿದರಿರ್ಬ್ಬರುಮಾಹವರಂಗಭೂಮಿಯೊಳ್"

–ಮೇಲಿನ ಗದ್ಯಭಾಗದ ವರ್ಣನೆಯನ್ನು ಓದಿ, ಈ ಪದ್ಯವನ್ನು ಓದಿದಾಗ ಇದು ಗದ್ಯದಷ್ಟು ಹಿತವಾಗಿಲ್ಲ ಎಂದೆನ್ನಿಸದಿರದು.

ಈ ಹಿಂದೆ ಗಮನಿಸಿದ ವೀರರಸ ಪ್ರವಾಹದಷ್ಟೇ ಪರಿಣಾಮಕಾರಿಯಾದ ಕರುಣರಸದ ಪ್ರವಾಹವು ಹರಿದು ಮನವನ್ನು ಕಲಕುವ ಭಾಗವನ್ನು ಇದೇ ಶಾಸನದಲ್ಲಿ ಮುಂದೆ ಗಮನಿಸಬಹುದು.

॥ ವ ॥ ಅಂತವರಿಬ್ಬರುಂ ಪೋಗದೆ ನಿಂದುದಂ ಕಂಡು ಪೊರಿದಾಳು ಕುದುರೆಯ ಮೊರ್ಬ್ಬಂತಾಗಿಯೆ ಸಲ್ವಿಜೆಯಲುಂ ಕೋಲ್ಕೊಂತಗಳೂಡಾಗಿ ಬಿರ್ದ್ದು ಸುರಲೋಕ ಪ್ರಾಪ್ತರಾದ ರವರಿರ್ಬ್ಬರ ಪೆಣನಂ ಮೆಟ್ಟಿ ತುಱು ಪರಿಯಲವರಿರ್ಬ್ಬರಿಂ ಕಿಱಿಯ ಬೊಪ್ಪಗಾವುಂಡ ತಮ್ಮಣ್ಣಂದಿರಿಬ್ಬರ ಕಳೇಬರಮಂ ಕಂಡು ಸೈರಿಸಲಾಱದೆ 'ನಿಮ್ಮಾದುದನಪ್ಪೆನಲ್ಲದೊಡೇಂ ತುಱುವಂ ಮಗುಳ್ಚಿ ಬಪ್ಪನೆ'ಂದೊಂದೆ ಮೆಯ್ಯೊಳು ಹಿಂದ ಹತ್ತಲಾತಂಗೆ ಪಡಿ ಬಲದಾಗಿ ಮಂಡಳಿಕಂ ವೃದ್ದರೆಯಕ್ಕಲರಸನಾಳ್ಕದರೆ ಹೇಳಲಾನೆಱುವಂ ಕೂಡಿಕೊಂಡು ಹಾಲ್ಗಟ್ಟದ ಬಯಲಲೊಡ್ಡನೊಡ್ಡಿದರಿ ಬಲವಂ ಬೊಪ್ಪಗವುಂಡ ಕೊಂದು ತುಱುವಂ ಮಗುಳ್ಚಿಕೊಂಡು ಬಂದಣ್ಣಂದಿರಂ ಸಂಸ್ಕಾರಿಸಿ ಜಳದಾನಕ್ರಿಯೆಯುಮಂ ಪರೋಕ್ಷವಿನಯಮುಮಂ ಮಾಡಿಯಿರ್ಬ್ಬಗ್ಗಂ ಕಲ್ಲ ನಿಱಿಸಿದಲ್ಲಿ ಮಂಗಳ ಮಹಾಶ್ರೀ" – ಇಲ್ಲಿಗೆ ಪಾಠ ಮುಗಿಯುತ್ತದೆ.

ಶಾಸನಕಾರ ಈ ಭಾಗದಲ್ಲಿ ಹಿಂದಿನಂತೆ ಅಲಂಕಾರಿಕವಾದ ಗದ್ಯ ಪ್ರಯೋಗ ಮಾಡದೆ, ಸರಳವಾಗಿ, ನೇರವಾಗಿ ಆತ್ಮೀಯವಾಗಿ ಹೇಳುತ್ತಾನೆ, ಕರುಣರಸವನ್ನು ಉಕ್ಕಿಸುವಲ್ಲಿ ಅವನು ನೀಡುವ ಹಲವಾರು ವಿವರಗಳನ್ನು ಗಮನಿಸಬೇಕು ; ವೀರರನ್ನು ಶತ್ರು ಪಕ್ಷದವರು ಕೊಂದ ಬಗೆ ಸತ್ತು ಬಿಲ್ಲು ಬಾಣಗಳನ್ನೇ ನೆಮ್ಮಿ ಬಿದ್ದ ಅವರ ಅವಸಾನ, ಈ ರೀತಿ ಬಿದ್ದ ವೀರರ ಹೆಣಗಳನ್ನೇ ತುಳಿಸಿಕೊಂಡು ತುರುಗಳನ್ನು ಹೊಡೆದುಕೊಂಡು ಹೋದ ಶತ್ರುಗಳ ಅಮಾನುಷ ಕೃತ್ಯ. ತನ್ನ ಅಣ್ಣಂದಿರಿಗೆ ಒದಗಿದ ಸ್ಥಿತಿಯನ್ನು ಕಂಡ ತಮ್ಮನ ಅಳಲು, ಈ ಅಳಲಿನಲ್ಲೂ ತನ್ನ ಅಣ್ಣಂದಿರು ಯಾವ ಉದ್ದೇಶಕ್ಕಾಗಿ ಹೋರಾಡಿ ಮಡಿದರೋ ಆ ಉದ್ದೇಶವನ್ನು ಈಡೇರಿಸಬೇಕೆಂಬ ಅವನ ಛಲ, ಕ್ಷಾತ್ರ ತೇಜ, ಹೋರಾಟದಲ್ಲಿ ಜಯಶೀಲನಾಗಿ ಬಂದು ತನ್ನ ಸೋದರರ ಶವಗಳನ್ನು ಸಂಸ್ಕರಿಸಿ, ಅವರಿಗೆ ಜಳದಾನಕ್ರಿಯೆಗಳನ್ನು ಮಾಡಿ, ವೀರಗಲ್ಲನ್ನು ನಿಲ್ಲಿಸುವ ಸೋದರ ವಾತ್ಸಲ್ಯ, 'ಪರೋಕ್ಷ ವಿನಯ' – ಒಂದೊಂದು ಕರುಳನ್ನು ಮಿಡಿಯುತ್ತವೆ.

ಇಷ್ಟು ಸಮರ್ಥವಾಗಿ ಒಂದು ಘಟನೆಯ ಚಿತ್ರಣವನ್ನು ನೀಡುವ ವೀರಗಲ್ಲುಗಳ ಪಾಠ ತುಂಬಾ ಅಪರೂಪ. ವೀರನು ಪರಾಕ್ರಮದಿಂದ ಹೋರಾಡಿದ ಎಂಬ ವಿಷಯವನ್ನು ತಿಳಿಸಲು ಶಾಸನಕಾರರು ಸಾಮಾನ್ಯವಾಗಿ ಈ ರೀತಿಯ ಪದ ಪುಂಜಗಳನ್ನು ಪ್ರಯೋಗಿಸುತ್ತಾರೆ '"ಜಗವಿದಿತನಾಗಿ ಕಾದಿ ಸುರಲೋಕ ಪ್ರಾಪ್ತನಾದ"[೭೯] "ಕಲಿತನಂ ಬೆರೆಸಿಂ ತಳ್ತಿಱಿದು ಸುರಲೋಕ ಪ್ರಾಪ್ತನಾದ"[೮೦], '"ವೀರ ಕಾಳೆಗಂ ಕಾದಿದ,"[೮೧] '"ರಣ ಕಂಡಿತವಾಗಿ ಸೂಱೆಗೊಂಡ"[೮೨], '"ಯಿಱಿದು ಯಿಱಿಸಿಕೊಂಡು ರಣ ಕಂಡಿತವಾಗಿ ಸ್ರೋಣಿತದಿಂ ತನ ವೋಕುಳಿಯಾಡಿ"[೮೩] ಇಂಥ ನಿರ್ದಿಷ್ಟ ಪದ ಪುಂಜಗಳ ಬಳಕೆಯನ್ನು ವೀರಗಲ್ಲುಗಳ ಪಾಠದಲ್ಲಿ ಯಥೇಚ್ಛವಾಗಿ ಕಾಣಬಹುದು. ಮತ್ತೆ ಕೆಲವು ಶಾಸನಕಾರರು ಇದೇ ಪದ ಪೂಜಗಳನ್ನು ಕೆಲಮಟ್ಟಿಗೆ ಹಿಗ್ಗಿಸಿ ಹೇಳಲು ಪ್ರಯತ್ನಿಸಿರುವುದುಂಟು '"ತಾಗಿ ತಾಳ್ತಿಱಿದು ಜವನೊಕ್ಕಲಿಕ್ಕಿದಂನ್ತೆ ಪಲಬರಂ ಕೊಂದು ಬಿಲ್ಲ ದಂಡೆಗೊಂಡು ಫೇಣ ಕಿತ್ತು ಕುದುರೆಯ ತಿವಿದು ಸುರಲೋಕ ಪ್ರಾಪ್ತನಾದ"[೮೪] '"ಸುಪುತ್ರ ಕುಲದೀಪಕಂ ಬಲ್ಲುಮಂ ತನಗಿದಿರಾನ್ತ ಮಾರ್ವ್ವಲದ ಕುದುರೆಯ ದಳಮಂ ದಿಶಾಪಟ್ಟಂ ಮಾಡಿ ದಳದ ಮೇಲೆ ಪಾಯ್ಸಿ ಮೇಲಾಳುನಂ ಕುದುರೆಯು ನುಂತಾಗಿ ತಳ್ತಿಱಿದು ತಂನಿದಿರೊಳಾಂತ ಚೆಂಗಾಳ್ವನಾನೆಗೆ ಪಯಿಸಿ ತನ್ನ ಭುಜಬಳಾವಷ್ಟಂಭದಿಂ ಜವನೇಱೆ ಪ್ಪುಬಿಸಿದಂತೆ ಜೀರಿಗೆಯೊಕ್ಕಲಂತಾಗಿ ಪರಬಲಮಂ ಪೇಸೇಳೆಕೊಂದು ತಾನುಂ ಕೀರ್ತಿಶ್ರೀಯುಂ ಬೀರಶ್ರೀಯುಮಂ ಕೂರಿಸಿಕೊಂಡು ಸುರಲೋಕ ಪ್ರಾಪ್ತನಾದ"[೮೫] ಇಂತಹ ಕಡೆ ಕೆಲವು ನಿರ್ದಿಷ್ಟ ಪದಪುಂಜಗಳ ನಡುವಿನ ಯುದ್ಧದ ವಿವರಗಳನ್ನು ತೆಗೆದು ಹಾಕಿದರೆ ಆ ಜಾಗದಲ್ಲಿ ಯಾವ ವೀರನ ವಿವರಗಳನ್ನಾದರೂ ಸೇರಿಸಬಹುದು. ಇಂತ ಕಡೆ ನಿರ್ದಿಷ್ಟ ವಿವರಗಳಷ್ಟೇ ಬೇರೆಯಾಗಿ, ಉಳಿದ ವಿವರಗಳು ಇದ್ದೇ ಇದ್ದು. ಈ ವಾಕ್ಯವೃಂದಗಳು ಮತ್ತೆ ಮತ್ತೆ ಪ್ರಯೋಗವಾಗಿರುವುದನ್ನು ಗಮನಿಸಬಹುದು. ಮೊದಲಿಗೆ ಒಂದೆರಡನ್ನು ಓದಿದಾಗ ಸ್ವಾರಸ್ಯ ಎನ್ನಿಸುತ್ತದೆ. ಆದರೆ ಇದೇ ರೀತಿಯ ವರ್ಣನೆಗಳು ವೀರಗಲ್ಲುಗಳಲ್ಲಿ ವಿಪುಲವಾಗಿ ಪ್ರಯೋಗವಾಗಿದ್ದು, ವೀರಗಲ್ಲುಗಳ ಪಾಠಕ್ಕೆ ಒಂದು ರೀತಿಯ ಕುಂದನ್ನು ತಂದಿದೆ ಎನ್ನಬಹುದು.

ವೀರನ ಪರಾಕ್ರಮವನ್ನು ನಿರೂಪಿಸುವಲ್ಲಿ ಶಾಸನಕಾರರು ಎರಡು ವಿಧಾನಗಳನ್ನು

---

೭೯. SII. XX. 113, 1146

೮೦. E.C.VIII. Sk. 159, 1183

೮೧. M.A.R. 1926. Hn. 40, 1195

೮೨. K.I.I. 44, 1422

೮೩. K.I.III. Pt.I. 8, 1530

೮೪. E.C.VII. HI. 28, 1197

೮೫. E.C.V. BI. 42, 178

ಅನುಸರಿಸಿದ್ದಾರೆ. ಮೊದಲನೆಯದಾಗಿ ವೀರನ ಪರಾಕ್ರಮದ ಬಗ್ಗೆ ಶಾಸನಕಾರನೇ ಉದ್ಗಾರ ಎಳೆಯುವುದು ; ಎರಡನೆಯದಾಗಿ ಯುದ್ಧ, ಹೋರಾಟದ ಸನ್ನಿವೇಶವನ್ನು ನಾಟಕೀಯವಾಗಿ ನಿರೂಪಿಸುವುದು.

ಕ್ರಿ. ಶ. ೯೬೬ರ ವೀರಗಲ್ಲಿನಿಂದ ಮೊಳೆಯರಸನಿಗೂ, ನೊಳಂಬರ ಇಱಿವನೊಳಂಬನ ಮಗನಾದ ಅಯ್ಯಪದೇವನಿಗೂ ನಡೆದ ಯುದ್ಧದಲ್ಲಿ ಎಱೆಯಮ್ಮ ಎಂಬ ವೀರನು ಹೋರಾಡಿ ಮಡಿದ ವಿಷಯ ತಿಳಿದು ಬರುತ್ತದೆ. ಎಱೆಯಮ್ಮನನ್ನು ಹೊಗಳುತ್ತಾ ಆ ಶಾಸನ, ""ಧಾರಿಣಿಯೊಳಗೆಲ್ಲ ಪೋರನ್ತೆ ಪೊಗೞ್ವರಳವಲ್ಲ ಗಣ್ಡಿನೊಳಾರುಮ್ ದೊರೆಯ ಭುವನವ ಳಿಯದೊಳ್ ಗಣ್ಡಾತಿನ ಪೆಂಪಂ ಕಣ್ಡು ಕೇಳ್ದಿಲ್ಲರುಮ್ಮಣ್ಡಲದೊಳಗೆ ಪೊಗೞ್ದಿಪರ್"[೮೬] ಎಂಬುದಾಗಿ ಉದ್ಗಾರ ವೆಳೆದು ಕೊನೆಯಲ್ಲಿ, "ವೀರನ ಸಾವು ಕತೆಯಾಗಿ ಪರೆದುದು ಮೂಱು ವೀಲೋಕ ದೊಳಗೆಲ್ಲಾ" ಎಂಬುದಾಗಿ ತಿಳಿಸುತ್ತದೆ.

ಕ್ರಿ. ಶ. ೧೦೧೫ರ ಒಂದು ವೀರಗಲ್ಲು ವೀರನ ಬಗ್ಗೆ –

""ನಡಪಿದನನುವರದೊಳ್ ಕೈ
ಮಡಗದೆ ತಳ್ತಿಱಿದು ಪೋಗ ಕೊತ್ತಟಿ ದಿವ್ಯಂ
ಬಡಿದು ಕಟಿವನ್ತೆ ಕಟಿದನ
ಪಡೆದಯಶಂ ಗೆಲ್ದಿನ್ತುಮಗ್ಗಳವಲ್ತೇ........"

ಎಂಬುದಾಗಿ ಉದ್ಗಾರ ವೆಳೆದು, ""ಸರ್ವರೀ ದೀಪಕೋಚನ್ದ್ರ ಪ್ರಭಾತೇ ರವಿ ದೀಪಕ ತ್ರೈಲೋಕ್ಯ ದೀಪಕೋ ಧರ್ಮ್ಮ ಸುಪುತ್ರಃ ಕುಲದೀಪಕ" ಎಂಬ ಶ್ಲೋಕವನ್ನು ಉದ್ಧರಿಸುತ್ತದೆ[೮೭] ವೀರರಾದ ಮಕ್ಕಳನ್ನು ಪಡೆಯುವ ಭಾಗ್ಯವನ್ನು ಎಲ್ಲ ತಂದೆ –ತಾಯಿಯರೂ ಅಪೇಕ್ಷಿಸುತ್ತಾರೆ. 'ವೀರನಾದ ಮಗನು ಒಬ್ಬನೇ ಆದರೂ ಸಾಕು. ಅವನು ಕುಲದೀಪಕನಾಗುತ್ತಾನೆ. ಅವನಿಂದ ತಮ್ಮ ವಂಶಕ್ಕೆ ಕೀರ್ತಿ ಬರುತ್ತದೆ' ಎಂಬುದು ಅಂದಿನ ಜನರ ಅಭಿಪ್ರಾಯವಾಗಿತ್ತು. ಈ ಅಭಿಪ್ರಾಯ ಸುಪ್ರಸಿದ್ಧವಾಗಿರುವ ಸಿರಸಿಂಗಿ ಶಾಸನದಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗಿದೆ. ಹಬ್ಬೆಯ ನಾಯಕನನ್ನು ಹೊಗಳುತ್ತಾ ಆ ಶಾಸನ

ಪಡೆವಡೆ ಗುಣಿ ಹಬ್ಬಯ್ಯನ । ಪಡಿಯೆನಿಸುವ ಸುತನನೊಸೆದು ಬಲ್ಲವ್ವೆಯವೋಲ್
ಪಡೆವುದು ಕೋಟಿಗೆ ವಕ್ಕಳು । ಪಡೆಯದೊಡೇಂ ಬಂಜೆಯಂ ನೃಪರ್ದ್ದಂಡಿಪರೇ[೮೭a]

---

೮೬. S.I.I. IX. Pt. I.31

೮೭. E.C.VIII. Sb. 16, 1೮೦. E.C.VIII. Sk. 159, 1015

೮೭a ಎ. ಎಂ. ಅಣ್ಣಿಗೇರಿ ; ಮೇವುಂಡಿ ಮಲ್ಲಾರಿ (ಸಂ) ಶಾಸನ ಸಾಹಿತ್ಯ ಸಂಚಯ ಪು.೧೩೩

ಎಂಬುದಾಗಿ ಉದ್ಗಾರವೆಳೆಯುತ್ತದೆ. ಈ ಹಿನ್ನೆಲೆಯಲ್ಲಿ ಯೋಚಿಸಿದಾಗ ಮೇಲಿನ ಶ್ಲೋಕವನ್ನು ಉದ್ಧರಿಸಿರುವುದು ಔಚಿತ್ಯ ಪೂರ್ಣವಾಗಿದ್ದು ವೀರನ ಪರಾಕ್ರಮದ ಚಿತ್ರ ಯಶಸ್ವಿಯಾಗಿ ಮೂಡಿ ನಮ್ಮನ್ನು ಆಕರ್ಷಿಸುತ್ತದೆ.

ಕೋಟೆಕಾಳಗದಲ್ಲಿ ಮಡಿದ ಬಿಟ್ಟೆಯನೆಂಬ ವೀರನ್ನು ಹೊಗಳುವ ಒಂದು ವೀರಗಲ್ಲಿನ ಪಾಠದಲ್ಲಿ ತನ್ನ ಶತ್ರು ಪಕ್ಷದವರ ಕೋಟೆಯನ್ನು ದಾಟುವುದು ಬಿಟ್ಟೆಯನ ಪರಾಕ್ರಮಕ್ಕೆ ಯಾವ ರೀತಿಯಲ್ಲಿಯೂ ತಡೆ ಆಗಲಿಲ್ಲ ಎಂಬ ಉದ್ಗಾರವಿದೆ.

"'ಒಟ್ಟೆಚೆಯಿ [೦] ಬಿಲ್ಕಣಿ (ಣೆ) ನಡೆ
ನಿಟ್ಟೆಲುಮು (ಮುಂ) ವಂನ ಮೆಟ್ಟಿ ತಿವಿಯುತ್ತ [೦] ಕೇ
ಳ್ಪೆಟ್ಟನೆ ಕೋಟೆಯನಡರ್ದ್ದಂ
ಜಟ್ಟಿಗ ಬಿಟ್ಟಿ [ಯ]ಗೆ ಯುಪ್ಪರಡ್ಡಂ ಪಿರಿದೇ"[೮೮]

ಶತ್ರು ಪಕ್ಷದ ವೀರರನ್ನು ಹತ್ತಿಕ್ಕುತ್ತಲೇ ಬಿಟ್ಟೆಯ ಎತ್ತರವಾದ ಕೋಟೆಯನ್ನು ಮೇಲೇರಿದನಂತೆ

ಕ್ರಿ. ಶ. ೧೩೦೭ರ ಒಂದು ವೀರಗಲ್ಲಿನ ಪಾಠದಿಂದ ಯುದ್ಧರಂಗದಲ್ಲಿ ಶತ್ರು ಪಕ್ಷದವರೂ ಸಹ ವೀರನನ್ನು ಹೊಗಳುತ್ತಿದ್ದ ವರ್ಣನೆ ಬಂದಿದೆ.

"'ಜಯರೆ ಮಝೆಯಬಾಪರರೆ ಭಾಗತೋರಾಉತೊದು ರಾಉತರ ಕರಕಮವದ್ಯ ಮಂಡರಿಕರೆಲ್ಲಾ ಆಯತಿಗೆಟ್ಟು ಭುಟತನದಿ ಪೊಗಳುವೇಯಪ್ಪರೆಂದು ಲೋಕವೆಲ್ಲಾ 'ಆ' ಎನ್ನಿತಿಕ್ಕೆ ಮಂಡಳಿಕಂ ಬಸಿಂಗ ಬೊಳೆಯ ನಾಯಕಂ" –[೮೯] ಶತ್ರುಪಕ್ಷದ ವೀರನ ಸಾಹಸವನ್ನು ಹೊಗಳಬೇಕಾದರೆ ಅವನ ಪರಾಕ್ರಮ ಎಂಥದ್ದಿರಬೇಕು ಎಂದು ಲೋಕ ಆಶ್ಚರ್ಯಗೊಂಡಿತಂತೆ.

ಕ್ರಿ. ಶ. ೧೧೨೭ರ ವೀರಗಲ್ಲು ಯುದ್ಧದ ಅಪೂರ್ವವಾದ ಚಿತ್ರವನ್ನು ಹೀಗೆ ನೀಡುತ್ತದೆ.[೯೦] ಶತ್ರುಪಕ್ಷದವರು "ಕೋಟೆಯಂ ಪರಿಮುತ್ತ ಮುತ್ತಿ ಕೈವಿಸುವಾಗಳೆ ಸಾಸಿರ್ವ್ವಗ್ಗಳಿವಾಗೆಯುಂ ಪೆಂಡಿರುಡೆ ಉರ್ಚ್ಚುವಾಗಳು ಕಂಡದಂ ಕಳಿಪಲಾಗದೆಂದು" ವೀರನು ಯುದ್ಧರಂಗಕ್ಕೆ ಇಳಿದ.

"ಕಡುಮುಳಿದು ಬಮ್ಮಸಾಂತಂ
ಕಡಿತಲೆ ಪಲಗೆಯುಮಂಕೊಂಡು ಸಾನ್ತರನಾಳಂ

೮೮. K.I.IV. 24, 1164
೮೯. E.C.VIII. Sa. 32, 1037
೯೦. E.C.VIII. Sb. 141, 1127

ಕಡಿಖಂಡಮಾಡಿ ಪೊಯ್ದೊಡೆ
ಕೆಡೆದುದು ಧಾರಿಣಿಯ ಮೇಲೆ ವೈರಿಸಮೂಹಂ"
ಹೀಗೆ ಆ ವೀರನು ಹೋರಾಡಿದುದರಿಂದ ಆ ರಣರಂಗವು ಹೆಣಮಯವಾಯಿತು.
"'ರಣರಂಗ ಸೂದ್ರಕಂ ಬ
ಲ್ಕಣಿ ಸುಭಟಂ ಸೆಣಸುವರಿಬಳಂಗಳ ಸಿರಮಂ
ಖಣಿಲನೆ ಪೊಯ್ದಾರ್ದ್ದಾಗಳೆ
ಪೆಣಮಯ ಮಾಯ್ತನಿತು ನೂಕಿದರಿಬಲಮುನಿತುಂ"–

ಕ್ರಿ. ಶ. ೧೧೩೮ರ ಒಂದು ವೀರಗಲ್ಲಿನಲ್ಲಿ ಮತ್ತೊಂದು ರೀತಿಯ ವರ್ಣನೆ ಇದೆ. ಯುದ್ಧರಂಗದಲ್ಲಿ ವೀರನೊಬ್ಬನೇ ವೀರನಲ್ಲ. ಶತ್ರುಪಕ್ಷದವರಲ್ಲಿಯೂ ವೀರರು ಇರುತ್ತಾರೆ. ಅವರು ಇವನನ್ನು ಸಮರ್ಥವಾದ ರೀತಿಯಲ್ಲಿ ಎದುರಿಸುತ್ತಾರೆ. ಶತ್ರುಪಕ್ಷದವರ ಸ್ವರಕ್ಷಣೆಯ ಪರಾಕ್ರಮವನ್ನು ವರ್ಣಿಸಿ, ಅಂಥ ರಕ್ಷಾಕ್ರಮವನ್ನು ಮುರಿದು ಅವರೊಂದಿಗೆ ವೀರ ಹೇಗೆ ಹೋರಾಡಿದ ಎಂಬ ನಿವಾರಣೆ ಈ ವೀರಗಲ್ಲಿನಿಂದ ದೊರೆಯುತ್ತದೆ.[೬೧]

"ಸುರಿವ ಸರಲ್ಗೆ ಪಾಯ್ವ ಚತುರಂಗದಳಕ್ಕಣೆದಾರ್ದ್ದು ನೂಂಕುವಾ
ಸುರತರಮಪ್ಪ ಸಿಂಧುರ ಘಟಾವಳಿಗಳ್ಕದೆ ಕಾದಿ ಬೀರರ
ಚ್ಚರಿವಡೆ ಮಾಚಗಾವುಣ್ಡನ ಮಗಂ ಕಲಿರಾಯನೆ ಕೀರ್ತ್ತಿಯಂ ವ [ಸುಂ]
ಧರೆ ಪೊಗಳ್ವನ್ನೆಗಂ ಪಡೆದನಾಹವದೊಳು ರಣರಂಗಶೂದ್ರಕಂ"

ವೀರನು, ಶತ್ರುಪಕ್ಷದವರ ಬಾಣಗಳಿಗೆ, ಆನೆಳಿಗೆ ಅಳುಕದೆ ಇಡೀ ವೀರರ ಸಮೂಹವೇ ಆಶ್ಚರ್ಯಪಡುವ ರೀತಿಯಲ್ಲಿ ಹೋರಾಡಿದನಂತೆ.

ಹೋರಾಟದ ಆವೇಶದಲ್ಲಿ, ವೀರತ್ವದ ಆವೇಗದಲ್ಲಿ ಹೋರಾಡುತ್ತಿದ್ದ ಹೋರಾಟದ ರೀತಿಯನ್ನು ಕ್ರಿ. ಶ. ೧೧೮೭ರ ಒಂದು ವೀರಗಲ್ಲು ಹೀಗೆ ವರ್ಣಿಸುತ್ತದೆ.[೬೨]

"'ಕಂಡದೊಳಿಂಡಿಯಾಡಿ ಬಿಸುನೆತ್ತರಳೋಕುಳಿಯಾಡಿ ಪೆರ್ಚ್ಚಿಮಾ
ರ್ಕ್ಕೊಂಡೊಡನೆಚ್ಚ ಪೂಣಿಗರ ಪಂದಲೆಯಂ ಪೊಡೆಸೆಂಡನಾಡಿದೊ
ಳ್ಗಂಡನಿವಮದಲೆಂದೇಂ ಪೊಸಮುತ್ತಿನ ಸೇಸೆಯನಿಕ್ಕಿ ಕೂಡೆ ಕೈ
ಕೊಂಡೊಡನೊಯ್ದರಚ್ಚರಸಿಯರ್ ಕಲಿಚಟ್ಟನನಾಜಿರಂಗದೊಳು"

೬೧. E.C.V. BI. 202, 1138
೬೨. E.C.VII. HI. 35, 1187.

ವೀರನಿಗೆ, ಯುದ್ಧ ಮಾಡುವುದು ಓಕುಳಿಯಾಡಿದಂತೆ, ಚೆಂಡನಾಡಿದಂತೆ ಒಂದು ಕ್ರೀಡೆ. ಇಂತಹ ವೀರತ್ವ ಪ್ರಧಾನವಾದ ಕ್ರೀಡೆಯನ್ನಾಡಿದ ಆ ವೀರನನ್ನು ಅಪ್ಸರ ಸ್ತ್ರೀಯರು 'ಪೊಸಮುತ್ತಿನ ಸೇಸೆಯನಿಟ್ಟು' ಕೈಹಿಡಿದು ಸ್ವರ್ಗಕ್ಕೆ ಒಯ್ದರಂತೆ.

ಸಿಂದರಾಜನಾದ ಬೀರದೇವರಸನಿಗೆ ಭಾಷೆಯನ್ನು ಕೊಟ್ಟ ಪ್ರಕಾರ ಏಚಣನು ಶತ್ರುಗಳೊಡನೆ ಹೋರಾಡಿದ ಚಿತ್ರಣವನ್ನು ನೀಡುವ ಪಾಠ ಈ ರೀತಿ ಇದೆ.[೯೩]

""ಬೀರರಸಂಗೆ ಕೊಟ್ಟ ಹೊಸದೇಸಿಯ ಭಾಷೆಯನೇನನೆಂಬೆನಾ
ವೆಲೆಯ ಮೋಹರಂ ಪ್ರಳಯ ವಾರಿಧಿಯಂತೆ ಲಯಾಗ್ನಿಯಂತೆ ಕಾ
ಮಾರಿಯ ಮೂರಿಯಂತಿರಜೆಯುದ್ದಿದೊಡೇಚಣನಿಂದು ವಐರಿ ಸಂ
ಹಾರಮನಿ ಕಟಾರದೊಳೆ ಮಾಡುವೆನೆಂದನದಂತೆ ಮಾಡಿದಂ"

ಯುದ್ಧರಂಗದಲ್ಲಿ, ಏಚಣನು ತಾನು ಬೀರರಸನಿಗೆ ಯುದ್ಧಕ್ಕೆ ಬರುವ ಮುನ್ನ ಕೊಟ್ಟ ಭಾಷೆಯನ್ನು ಸಾರ್ಥಕ ಪಡಿಸಿದ ಎಂಬ ವಿವರಣೆ ಇನ್ನೂ ಮುಂದುವರಿದು,

""ಪಲರಂ ಕುಜಿದಜಿದಜೆದಂ
ಪಲರಂ ಸೀಳ್ದೊಟ್ಟಿ ಕಡಿದು ದೆಸೆವಲಿಗೆಯ್ದಂ
ಪಲರಂ ಬಾಳ್ದಲೆ ವಿಡಿದಂ
ಕಲಿಚಲದೆ ಕಟಾರದೇಚಿಗಂ ರಣಧೀರಂ
ಕುಜುಹಿನ ಕುದುರೆಗಳಂ ಸಂ
ದಜಿಕೆಯ ನಾಯಕರ ನಿಜಿದು ಬಲಮಂ ಮೆಜೆದಂ
ನೆಜೆಗಲಿ ಕಟಾರದೇಚಂ
ಕಜೆವಲರ್ವಜೆ ಮೇಲೆ ಸುರಿಯೆ ಸಗ್ಗಕೆ ಸಂದಂ"

ವೀರನ ಹೋರಾಟವನ್ನು ಸಾಮಾನ್ಯರೀತಿಯಲ್ಲಿ, ಉತ್ಪ್ರೇಕ್ಷೆಯಿಂದ ಆಲಂಕಾರಿಕವಾಗಿ ವರ್ಣಿಸುವುದರಲ್ಲಿ ಕವಿಗೆ ತೃಪ್ತಿಯಿಲ್ಲ. ವೀರನು 'ಕುಜುಹಿನ ಕುದುರೆ'ಗಳನ್ನು 'ಸಂದಜಿಕೆಯ ನಾಯಕ'ರನ್ನು ಇರಿದನೆಂದು ಹೇಳುವುದರಲ್ಲಿ ಅವನಿಗೆ ಆಸಕ್ತಿ.

ಕ್ರಿ. ಶ. ೧೨೭೬ರ ಒಂದು ವೀರಗಲ್ಲಿನಲ್ಲಿ ಮತ್ತೊಂದು ಅಪೂರ್ವ ಚಿತ್ರನ ದೊರೆಯುತ್ತದೆ.[೯೪] ವೀರನನ್ನು ಹುರಿದುಂಬಿಸಿ ಶತ್ರುಪಕ್ಷದವರನ್ನು ಮೂದಲಿಸಿ ರಣರಂಗಕ್ಕೆ ಅವನನ್ನು ವೀರೋತ್ಸಾಹದಿಂದ ಕಳುಹಿಸಿದಾಗ –

೯೩. ಅದೇ. 55, 1247
೯೪. M.A.R. 1937. BI. 23, 1276

""ಧೊರೆಧೊರೆಯೆಂದು ಮೊದಲಿಸಿ ಬಿಟ್ಟಡೆ ಖಂಡೆಯರಾಯರಾಣೆಯಂ
ಧುರಗಲಿ ಪೊಯ್ದಡಾಹವದೊಳಟ್ಟೆಗಳಾಡಿದವೆಯ್ದೆ ಬಲ್ಪೊಂ
ಮೊರೆದವು ನೆತ್ತರೆಂಟುದೆಸೆಗಂ ಕಳಲಾದುದು ಕಂಡೆದಿಂಡೆಗ
ಳ್ಪರಿದುವು ಕಾಳಿಜಂ ಕರುಳಮಾಲೆಗಳುರ್ವ್ವಿದವೆತ್ತನೋಳ್ಪಡಂ"

ಎತ್ತ ನೋಡಿದರೂ ಹೆಣಗಳೇ ; ರುಂಡವನ್ನು ಕಳೆದುಕೊಂಡ ಮುಂಡಗಳು ಒದ್ದಾಡುತ್ತಿವೆ. ರಕ್ತ ದಶದಿಕ್ಕುಗಳಿಗೂ ಹರಿಯುತ್ತಿದೆ. ಮಾನವರ ಕರುಳಮಾಲೆಗಳು, ಮಾಂಸದ ಉಂಡೆಗಳು ಚಲ್ಲಾಪಿಲ್ಲಿಯಾಗಿವೆ. ಇದೆಲ್ಲ ಆ ವೀರನ ಪರಾಕ್ರಮವನ್ನು ಕೈಚಳಕದ ಫಲ.

'ಮರುಳ್ಮಸಗಿದ ಜವನಂತೆ'[೬೫] ಹೋರಾಟ ಮಾಡಿದ ವೀರನನ್ನು ಕುರಿತ ಒಂದು ವೀರಗಲ್ಲಿನ ಪಾಠ ""ಎನ್ನ ದೇಹಮಿದು, ಎನ್ನದುಮನೆ, ಎನ್ನಯಮಕ್ಕಳ್ ಎನ್ನದೆ ರಣದೊಳ್ ತನ್ನಂಬಿಗು.....ರ ಕಲಿಗಳ್ ನಿನ್ನಿಂದಗ್ಗಳರುಮೊಳರೆ ಬಿಮ್ಮದಳಾಟಾ" ಎಂದು ವೀರನ ನಿಸ್ವಾರ್ಥ ಸ್ವಾಮಿಭಕ್ತಿಯನ್ನು ಎತ್ತಿ ಹಿಡಿಯುತ್ತದೆ.

ಯುದ್ಧರಂಗದಲ್ಲಿ ಮಡಿದ ವೀರರ ರಕ್ತಮಾಂಸಗಳನ್ನು ಶಾಕಿನ ಡಾಕಿನಿಯರು ಮತ್ತು ಇತರ ಪಿಶಾಚಿಗಳು ಸೇವಿಸುತ್ತವೆ ಎಂಬ ನಂಬಿಕೆ ಮೂಲವಾದ ವರ್ಣನೆಗಳು ಸಂಸ್ಕೃತ ಮತ್ತು ಕನ್ನಡ ಕಾವ್ಯಗಳಲ್ಲಿ ಬಂದಿರುವ ಅಂಶ ಸುಸ್ಪಷ್ಟವಾಗಿಯೇ ಇದೆ. ಈ ರೀತಿಯ ವರ್ಣನೆ ರನ್ನನ ಸಾಹಸಭೀಮವಿಷಯದಲ್ಲಿ ಬಹು ಸಮರ್ಥವಾಗಿ ಮೂಡಿ ಬಂದಿದೆ. ರನ್ನ ಪಂಪರ ಪ್ರಭಾವದಿಂದಲೋ, ನಂಬಿಕೆಯೇ ಅಷ್ಟು ಪ್ರಬಲವಾಗಿದ್ದ ಕಾರಣವೊ ಅಂತೂ ಈ ಅಂಶ ವೀರಗಲ್ಲುಗಳ ಪಾಠದಲ್ಲಿ ಮಹತ್ವದಸ್ಥಾನವನ್ನು ಪಡೆದಿದೆ.

ಒಂದನ್ನುಳಿದು ಬೇರೆ ಯಾವ ವೀರಗಲ್ಲಿನ ಶಿಲ್ಪದಲ್ಲಿಯೂ ಈ ಮರುಳುಗಳನ್ನು ಬಿಡಿಸಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಬೇಗೂರು ವೀರಗಲ್ಲೊಂದರಲ್ಲಿ ಮಾತ್ರ ಈ ಮರುಳುಗಳನ್ನು ಬಿಡಿಸಲಾಗಿದೆ ವೀರನ ಪರಾಕ್ರಮವನ್ನು ಎತ್ತಿ ಹೇಳುವಲ್ಲಿ, ರಣರಂಗದ ಚಿತ್ರಣವನ್ನು ನೀಡುವುದರಲ್ಲಿ ಈ ಅಂಶವನ್ನು ಎಲ್ಲ ಶಾಸನಕಾರರಲ್ಲದಿದ್ದರೂ, ಕೆಲವರಾದರೂ ಸಮರ್ಥವಾಗಿ ಉಪಯೋಗಿಸಿಕೊಂಡಿರುವುದನ್ನು ಗಮನಿಸಬಹುದು.

ಕ್ರಿ. ಶ. ೧೧೫೭ರ ಒಂದು ವೀರಗಲ್ಲು ವೀರನ ಪರಾಕ್ರಮವನ್ನು ಹೀಗೆ ಸಾರುತ್ತದೆ.[೬೬]

""ಎತ್ತಿದ ಮಾರ್ವಲಕ್ಕಿದಿರನಕ್ಕದೆ ತಾಗಿದ ವೀರರೆಲ್ಲರುಂ
ಮುತ್ತಿದನೊತ್ತಿದಂ ಪೆಣನನಂಬರ ಕೆತ್ತಲ್ಭೂತಕೋಟಿ ಪಾ

೬೫. E.C.VII. Sk. 60, 1115
೬೬. E.C.VII. Sb. 369, 1157

ಡುತ್ತಿರೆ ಮಂಗಳಂ ಜಯಜಯಧ್ವನಿ ಘೂರ್ಣಿಸೆ ವೀರಲಕ್ಷ್ಮಿ ಮೆ
ಯ್ವೆತ್ತಿದ ಸಾಹಸಂಬಡೆದ ಕನ್ನಯನೀಗಳಿದೇಂಕೃತಾರ್ಥನೋ"

ವೀರನ ಪರಾಕ್ರಮವಾಗಿ ಲಭಿಸಿದ ಆಹಾರಕ್ಕೆ ಸಂತೋಷ ಹೊಂದಿ ಭೂತಕೋಟಿ ಮಂಗಳವನ್ನು ಹಾಡುತ್ತಿತ್ತಮತೆ.

ಮತ್ತೊಂದು ವೀರಗಲ್ಲಿನಲ್ಲಿ ಈ ಚಿತ್ರಣ ಇನ್ನೂ ಪರಿಣಾಮಕಾರಿಯಾಗಿ ಬಂದಿದೆ[೯೭] ""ಅರಿಬಿರುದಗಂಡಗತ್ತರಿ ಧುರದಲುಮಾರ್ಮ್ಕಲೆದ ವೈರಿನಾಯಕರ ಸಿರಂಗಳನೂಜಿ ನೆತ್ತರಂ ಮರುಳುಗಳಿಗೆಜೆದಡೆ ಕುಣಿದು ಹಾಡಿದರು ಬಾಳೆಯರ್". ವೀರನು ಭೂತಕೋಟಿಗಳಿಗೆ ಶತ್ರುಗಳ ಕಡೆಯವರ ಶಿರಗಳನ್ನು ಕತ್ತರಿಸಿ ಅರೆದು ಉಣ ಬಡಿಸುತ್ತಿದ್ದರೆ, ಇದರಿಂದ ಹಿಗ್ಗಿದ ಅಪ್ಸರೆಯರು ಹಾಡಿ ನಲಿದರು.

ವೀರನೊಬ್ಬನ ಪರಾಕ್ರಮದಿಂದಾಗಿ ಭೂರಿಭೋಜನವನ್ನು ಪಡೆದು ತೃಪ್ತಿ ಪಡೆದ ಮರುಳುಗಳು.[೯೮]–

"ಮರುಳುಗಳು ಕರುಳ ಮಾಲೆಯ
ಕೊರಳೊಳು ಸರವಿಟ್ಟು ರುಧಿರತಿಳಕಮನಿಟ್ಟುಂ
ಹರಸುತಿದರೀ ಕೂರುಕ
ನುರವಣಿಯೊಳು ತನಕೆ ಮೆಚ್ಚಿ ಸಮರಾಂಗಣದೊಳು"

ತಿಂದು ತೇಗಿದ ಮರುಳುಗಳುಕರುಳ ಮಾಲೆಯನ್ನು ಧರಿಸಿ, ರಕ್ತದ ಬೊಟ್ಟನ್ನಿಟ್ಟುಕೊಂಡು ಹರಸಿದರಂತೆ

–ಈ ವಿಷಯವನ್ನು ಕ್ರಿ.ಶ. ೧೩೦೨ರ ವೀರಗಲ್ಲು ತಿಳಿಸುತ್ತದೆ.

ಯುದ್ಧದಲ್ಲಿ ಮಡಿದ ವೀರರ ಹೆಂಡತಿಯರು ವೀರರೊಂದಿಗೆ ಸಹಗಮನ ಮಾಡಿದ ಹಲವಾರು ನಿದರ್ಶನಗಳು ವೀರಗಲ್ಲುಗಲ ಶಿಲ್ಪದಿಂದ ದೊರೆಯುತ್ತವೆ. ಆದರೆ ವೀರಗಲ್ಲುಗಳ ಪಾಠದಿಂದ ಅವರ ಬಗ್ಗೆ ಮತ್ತು 'ಸಹಗಮನ' ಪದ್ಧತಿಯ ಬಗ್ಗೆ ದೊರೆಯುವ ಮಾಹಿತಿಗಳು ಅತ್ಯಲ್ಪ. ವೀರನ ಹೆಂಡತಿಯು ಅವನೊಡನೆ ಮಡಿದಳು – ಎಂಬಷ್ಟೇ ವಿವರಗಳು ದೊರೆಯುತ್ತವೆ. ಎಲ್ಲೋ ಕೆಲವು ಕಡೆ ಹೆಚ್ಚೆಂದರೆ, ""ಆತನ ಸತಿ ಶ್ರೀವನಿತಿಗೆ ಧರಣಿಗೆ ವಾಗ್ದೇವಿಗೆ ರುಗ್ಮಿಣಿಗೆ ರತಿ

---

೯೭. E.C.VIII. Sa. 4, 1193
೯೮. E.C.VIII. Nr. 19, 1302

ರಂಭೆಗೆ ಸೀತಾದೇವಿಗೆ ಕೊನ್ತಿಗೆ" ಸಮಾನಳಾದವಳೆಂದೋ[೯೯] ""ಸಿವಪಾದಸೇಖರೆ ಶಿವಕಥಾಳಾಪೆ ಶಿವಪಾದೋಕ"[೧೦೦] ಎಂದೋ ವಿವರವಿರುತ್ತದೆ.

ಕ್ರಿ. ಶ. ಸು. ೯೫೦ರ ವೀರಗಲ್ಲಿನ ಪಾಠ ಮತ್ತು ಗಮನಾರ್ಹವಾದುದಾಗಿದೆ,[೧೦೧] ಈ ಶಾಸನ ಮುಖ್ಯವಾಗಿ 'ಸಾವಿಯಬ್ಬೆ' ಎಂಬುವಳನ್ನು ಕೀರ್ತಿಸುತ್ತದೆ. ಆಕೆಯ ಮಾವ, ಗಂಡ, ತಂದೆ, ತಾಯಿ, ಸೋದರರನ್ನು ಸಹ ಈ ಶಾಸನ ಕೀರ್ತಿಸಿ ಆ ನಂತರ,

""ಶ್ರಾವಕಧರ್ಮ್ಮದೊಳ್ ದೊರೆಯನಲ್ ಪೆಱರಿಲ್ಲೆನೆ ಸನ್ದರೇವತಿ
ಶ್ರಾವಕಿ ತಾನೆ ಸಜ್ಜನಿಕೆಯಾಳ್ ಜನಕಾತ್ಮಜೆ ತಾನೆ ರೂಪಿನೊಳ್
ದೇವಕಿ ತಾನೆ ಪೆಂಪಿನೊಳರುಂಧತಿ ತಾನೆ ಜಿನೇನ್ದ್ರ ಭಕ್ತಿಸ
ದ್ಭಾವದೆ ಸಾವಿಯಬ್ಬೆ ಜಿನಶಾಸನದೇವತೆ ತಾನೆ ಕಾಣಿರೇ"

ಎಂಬುದಾಗಿ ಅವಳನ್ನು ಕೀರ್ತಿಸಿ, ಅನಂತರ ಆಕೆಯು ಸತ್ತ ವಿಷಯವನ್ನು ತಿಳಿಸುತ್ತದೆ. ಆದರೆ ಆ ಭಾಗದ ಶಾಸನ ಪಾಠ ತ್ರುಟಿತವಾಗಿರುವುದರಿಂದ ಅರ್ಥ ಸ್ಪಷ್ಟವಾಗುವುದಿಲ್ಲ.

ಆ ವೀರಗಲ್ಲಿನ ಶಿಲ್ಪವನ್ನು ನೋಡಿದರೆ ಆಕೆ ಬಹುಶಃ ಹೋರಾಟವೊಂದರಲ್ಲಿ ಮಡಿದಿರುವಂತೆ ತೋರುತ್ತದೆ (ಚಿತ್ರ ೨೫೩) ಇದು ಅಸಂಭವವೇನೂ ಅಲ್ಲ. ಕರ್ನಾಟಕದ ಎರಡು ಕಡೆ, ಮಹಿಳೆಯರು ಹೋರಾಟ ಮಾಡಿದ ವೀರಗಲ್ಲುಗಳ ನಿದರ್ಶನಗಳು ಇವೆ. ಅವುಗಳನ್ನು ಈ ಹಿಂದೆ ಪರಿಶೀಲಿಸಲಾಗಿದೆ.

ಸ್ವರ್ಗದ ಕಲ್ಪನೆ – ವರ್ಣನೆ

ಈ ಹಿಂದೆ ಸ್ವರ್ಗದ ಕಲ್ಪನೆ ಹೇಗೆ 'ವೀರತ್ವ'ದ ಕಲ್ಪನೆಯ ಮೇಲೆ ತನ್ನ ಪ್ರಭಾವವನ್ನು ಬೀರಿದೆ ಎಂಬುದನ್ನು ಗಮನಿಸಿದ್ದೇವೆ. ಈ ಪ್ರಭಾವ ವೀರಗಲ್ಲುಗಳ ಪಾಠದಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಇಲ್ಲಿಯೇ ಸ್ವಲ್ಪಮಟ್ಟಿಗೆ ವಿಚಾರಮಾಡುವುದು ಸೂಕ್ತ ಈ ಸ್ವರ್ಗದ ವರ್ಣನಾಭಾಗ, ವೀರಗಲ್ಲುಗಳ ಪಾಠದಲ್ಲಿ ಸಾಮಾನ್ಯವಾಗಿ ಕೊನೆಯ ಭಾಗವಾಗಿ ಬರುತ್ತದೆ. ಇದು ವೀರನ 'ವೀರತ್ವಕ್ಕೆ' ಇಂಬುಕೊಡುವ ವರ್ಣನೆಯಾಗಿ ವೀರಗಲ್ಲುಗಳಲ್ಲಿ ಬಂದಿದೆ.

ವೀರನು ಹೋರಾಟದಲ್ಲಿ ಮಡಿದ ಎಂಬ ವಿಷಯವನ್ನು ನೇರವಾಗಿ, ಸ್ಪಷ್ಟವಾಗಿ ತಿಳಿಸದೆ ವೀರಸ್ವರ್ಗಕ್ಕೆ ಹೋದ ಎಂಬುದಾಗಿ ಹೇಳುವ ಒಂದು ಪದ್ಧತಿ ವೀರಗಲ್ಲುಗಳ ಪಾಠಕ್ರಮದಲ್ಲಿ

೯೯. M.A.R. 1934 Mg. 12, 1117
೧೦೦. E.C.IV. Ng. 57, 1181
೧೦೧. E.C.II. Sb. 172, (139)

ಬೆಳೆದಿದೆ. ಆರಂಭದ ವೀರಗಲ್ಲುಗಳಲ್ಲಿ ಈ ಬಗ್ಗೆ ಸಾಮಾನ್ಯವಾಗಿ ದೊರೆಯುವ ವರ್ಣನೆ ಎಂದರೆ, "ಸತ್ತು ಸಗ್ಗಿಯಾದಂ"[೧೦೨] "ತುಱುವ ನಿಕ್ಕಿಸಿ ಸತ್ತು ಸ್ವರ್ಗಕ್ಕೆ ಸನ್ದಂ"[೧೦೩] "ಕಾದಿ ಸತ್ತು ಸ್ವರ್ಗದಲ್ಲಿರ್ದ್ದಿ"[೧೦೪] ಎಂಬ ನೇರ ವಿವರಗಳು ಮಾತ್ರ ಆದರೆ ಅಪರೂಪಕ್ಕೆ ಈ ವಿವರಗಳು ವಿವರವಾಗಿ ಕಾವ್ಯಾತ್ಮಕವಾಗಿ, ತಮ್ಮದೇ ಆದ ಕಲ್ಪನೆಯನ್ನು ತುಂಬಿಕೊಂಡು ಬಂದಿವೆ. ಸು. ಕ್ರಿ. ಶ. ೮೦೦ರ ರಾಷ್ಟ್ರಕೂಟರ ಕಾಲದ ವೀರಗಲ್ಲಿನ ಪಾಠದಲ್ಲಿ ಕುಲಮುದ್ಧನೆಂಬುವನು ""ಕಣೆಪಂಜರದೊಳೆಟಿಗಿ ಭೀಸ್ಮನ್ವಿಲ್ದನ್ತೆ ನೆಲಮುಟ್ಟದೆ" ಬಿದ್ದಾಗ ಅವನನ್ನು "ದೇವಗಣಿಕ್ಕೆಯರಾರ್ಘ್ಯಮ್ಬಿಡಿದು ಬನ್ದಿದಿರ್ಗೊಣ್ಡು" ಕರೆದುಕೊಂಡು ಹೋಗಲು "ಬೀರಲೋಕಕ್ಕೆ ಸನ್ದಾನ್"[೧೦೫] ಎಂಬ ಸುಂದರವಾದ ಚಿತ್ರಣ ದೊರೆಯುತ್ತದೆ. ಮುಂದಿನ ಶತಮಾನಗಳಲ್ಲಿ ಈ ಭಾಗವನ್ನು ವೀರಗಲ್ಲುಗಳ ಶಾಸನ ರಚನಾಕಾರರು ವಿವರವಾಗಿ ತಂದಿರುವ ಪ್ರಯತ್ನಗಳನ್ನು ಗಮನಿಸಬಹುದು.

ಈ ವರ್ಣನೆಗಳಲ್ಲಿ ಎರಡು ರೀತಿಗಳನ್ನು ಗುರುತಿಸಬಹುದು. ಮೊದಲನೆಯದಾಗಿ, ವೀರನೇ ತನ್ನ ಪರಾಕ್ರಮದಿಂದ ಸ್ವರ್ಗಲೋಕದ ಸುರಕನ್ನಿಕೆಯರನ್ನು ಒಲಿಸಿಕೊಂಡು ಸ್ವರ್ಗವನ್ನು ಪ್ರವೇಶಿಸಿದ ಎಂಬುದಾಗಿ ವರ್ಣಿಸಿರುವುದು ಎರಡನೆಯದಾಗಿ, ವೀರನನ್ನು ಅಪ್ಸರೆಯರು ಹೇಗೆ ವೈಭವದಿಂದ ವೀರಸ್ವರ್ಗಕ್ಕೆ ಕೊಂಡೊಯ್ದರೆಂಬುದರ ನೇರವಾದ ವಿವರಣೆಯನ್ನು ನೀಡುವುದು.

ಕ್ರಿ. ಶ. ೧೧೭೧ರ ವೀರಗಲ್ಲಿನ ಪಾಠದಲ್ಲಿ ತಂಮಡಿಯ ರುದ್ರನೆಂಬುವನು ಯುದ್ಧರಂಗದಲ್ಲಿ, ""ಪರಬಳವನಿಱಿದು ತಱಿದಡೆ ಸುರಕಾನ್ತೆಯರುಯ್ದರವನನತಿ ಮುದದಿಂ" –ಎಂಬ ವರ್ಣನೆ ಬರುತ್ತದೆ.[೧೦೬] ಶತ್ರುಗಳು ಬಂದು ತನ್ನ ಊರಿನ ಜೀವಧನಗಳನ್ನು (ಹಸುಗಳನ್ನು) ಅಪಹರಿಸಿದಾಗ ಚಟ್ಟಿಯನಾಯಕನೆಂಬುವನು ಶತ್ರುಗಳ ಬೆನ್ನಟ್ಟಿ "ತೆರ್ಳ್ಚಿ ತಳ್ತಿಱಿದು ಪೆರ್ವ್ವಡೆಯಂ ತುಱು ಮಗುಳ್ಚೆ ತಾಂ ಚಟ್ಟಿಯನಾಯಕಂ ಪಡೆದು ಮೆಚ್ಚಿಸಿದ ಸುರಕನ್ನೆಯರ್ಕ್ಕಳಂ" ಎಂಬ ವರ್ಣನೆ ಕ್ರಿ. ಶ. ೧೧೮೭ರ ಒಂದು ವೀರಗಲ್ಲಿನ ಪಾಠದಿಂದ ತಿಳಿದು ಬರುತ್ತದೆ.[೧೦೭] ಮೈಲನಾಯಕ ಎಂಬುವನು ತನ್ನ ""ಆತ್ಮಖಡ್ಗದಿಂದ ಕಡುಗಲಿ ಪೊಯ್ದು ಪೊಯ್ದಿರದೆ ಮೆಚ್ಚಿಸಿದಂ ಸುರಕನ್ನೆಯಕ್ಕಳಂ" ಎಂಬ ವರ್ಣನೆ ಕ್ರಿ. ಶ. ೧೧೯೬ರ ಒಂದು ವೀರಗಲ್ಲಿನಿಂದ ದೊರೆಯುತ್ತದೆ.[೧೦೮]

---

೧೦೨. E.C.XVII. Mr. 187, ಸು. ೯೦೦

೧೦೩. E.C.XII. Db. 10, ಸು. ೯೨೦

೧೦೪. E.C.XII. Mi. 71, ಸು. ೯೫೦

೧೦೫. E.C.VIII. Sb. 10, 800

೧೦೬. E.C.XV. Hk. 90, 1171

೧೦೭. E.C.VII. Hl. 35, 1187

೧೦೮. ಅದೇ. ೩೮, ೧೧೯೬

ತಮ್ಮ ಪರಾಕ್ರಮದಿಂದ ಸುರಕನ್ನೆಯರನ್ನು ಮೆಚ್ಚಿಚಿದ ವೀರರನ್ನು ಆ ಅಪ್ಸರೆಯರು ಹೇಗೆ ಸ್ವರ್ಗಕ್ಕೆ ಕೊಂಡೊಯ್ದರು ಎಂಬುದನ್ನು ವಿವರವಾಗಿ ಹಾಗೂ ವೈಭವಪೂರ್ಣವಾಗಿ ವರ್ಣಿಸಿರುವುದನ್ನು ಮುಂದೆ ಗಮನಿಸೋಣ. ಈ ಸಂಪ್ರದಾಯವನ್ನು ನಿರ್ಮಿಸಿದವರು ಶಾಸನಕವಿಗಳು ಎಂದು ಹೇಳಲಾಗುವುದಿಲ್ಲ. ಪಂಪ ರನ್ನರ ಕಾವ್ಯಗಳಲ್ಲಿ ಈ ವರ್ಣನೆಗಳು ಅಲ್ಲಲ್ಲಿ ಬಂದಿರುವುದನ್ನು ಗಮನಿಸಬಹುದು. ಈ ಹಿರಿಯ ಕವಿಗಳ ಮಾದರಿಯನ್ನು ಗಮನದಲ್ಲಿಟ್ಟು ಕೊಂಡು, ಅಂದಿನ ಜನಕ್ಕೆ ವೀರಸ್ವರ್ಗದ ಬಗ್ಗೆ ಇದ್ದ ಹಲವಾರು ಕಲ್ಪನೆಗಳೊಂದಿಗೆ ಈ ಶಾಸನಕವಿಗಳು ತಮ್ಮ ಪ್ರತಿಭೆಯ ಕಲ್ಪನೆಯನ್ನು ಸೇರಿಸಿ, ತಮ್ಮದೇ ಆದ ಒಂದು ಮಾರ್ಗವನ್ನು ಕಂಡುಕೊಂಡಿದ್ದಾರೆ ಮತ್ತು ತಮ್ಮದೇ ಆದ ಒಂದು ವರ್ಣನಾ ರೀತಿಯ ಮಾರ್ಗವನ್ನು ನಿರ್ಮಿಸಿದ್ದಾರೆ ಎನ್ನಬಹುದು.

ಕ್ರಿ. ಶ. ೧೦೧೮ರ ವೀರಗಲ್ಲೊಂದರ ಪಾಠದಲ್ಲಿ ಬರುವ ವರ್ಣನೆ ಈ ರೀತಿ ಇದೆ. ಸತ್ತವೀರನನ್ನು ""ವಿಮಾನದೊಳಿಟ್ಟು ಸುರಾಂಗನೆಯರೆಮಗೆ ತಮಗೆನುತುಯ್ದರು."[೧೦೯] ಮತ್ತೆ ಕ್ರಿ. ಶ. ೧೧೫೪ರ ವೀರಗಲ್ಲಿನಲ್ಲಿ ಇದೇ ರೀತಿಯ ವರ್ಣನೆ ಬರುತ್ತದೆ. ""ವಿಮಾನದೊಳಿಟ್ಟು ಸುರಾಂಗನೆಯರೆಮಗೆ ತಮಗೆನುತುಯಿದರು."[೧೧೦] ಈ ರೀತಿಯ ವರ್ಣನೆಗಳು ಈ ಅವಧಿಯಲ್ಲಿ ಸಾಮಾನ್ಯ. ಈಗಾಗಲೇ ಹೇಳಿರುವಂತೆ ಪಂಪನ ಪ್ರಭಾವ ಅನೇಕ ವೀರಗಲ್ಲುಗಳ ಪಾಠದ ಮೇಲೆ ಆಗಿದೆ. ಪಂಪನ ಮಾತುಗಳ ಮಾರ್ದನಿ ಇಲ್ಲಿ ಕೇಳಿಬರುತ್ತಿದೆಯೇನೋ ಎಂದನ್ನಿಸುತ್ತದೆ.

ಪಂಪನು ಅಭಿಮನ್ಯು ಮಡಿದನಂತರ ಅವರ ವೀರಸ್ವರ್ಗಾರೋಹಣವನ್ನು ವರ್ಣಿಸುತ್ತಾ,

""ಅನಿತರ್ಕೆಸತ್ತ ನರನಂ
ದನಂಗೆ ಕಣ್ಸೋಲ್ತು ಬಗೆಯದಮರೇಂದ್ರನನಿ
ನ್ನೆನಗೆ ತನಗೆಂಬ ದೇವಾಂ
ಗನೆಯರ ಕಳಕಳಮೆ ಪಿರಿದುಮಾಯಬರದೊಳ್"[೧೧೧]

–ಎಂದು ಉದ್ಗಾರವೆಳೆಯುತ್ತಾನೆ. ಈ ಮಾತುಗಳು ಮತ್ತೊಂದು ರೂಪವನ್ನು ಪಡೆದು ಶಾಸನಗಳಲ್ಲಿ ಬಂದಿವೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ತುರುಗಾಳಗದಲ್ಲಿ ಮಡಿದ 'ಕಾಳಿಗ'ನೆಂಬ ವೀರನನ್ನು ಅಪ್ಸರೆಯರು ಪುಷ್ಪಕ ವಿಮಾನದೊಳಗೆ ಕುಳ್ಳಿರಿಸಿಕೊಂಡು, "ಬೆಳುಗೊಡೆ, ಕನ್ನಡಿ, ತೋರಣ, ಸುರದುಂದುಭಿ, ಚಾಮರ" ಮುಂತಾದ ವೈಭೋಗಗಳೊಡನೆ ಇಂದ್ರಲೋಕದ ಸುಖವನ್ನು ಅವನಿಗೆ ನೀಡಲು ಕೊಂಡೊಯ್ದುದರ ವಿವರಣೆ ಈ ರೀತಿ ಇದೆ :

೧೦೯. E.C.VIII. Sb. 46, 1018
೧೧೦. ಅದೇ. ೫೪, ೧೧೫೪
೧೧೧. ಪಂಪ : ವಿಕ್ರಮಾರ್ಜುನ ವಿಜಯಂ ೧೧–೧೦೫

"'ತ್ರಿಪುಷ್ಪ ವಿಮಾನಮುಂ ಬೆಳುಗೊಡೆ ಕಳಸಕನ್ನಡಿ ತೋರಣಂ
ಸುರದುಂದುಭಿ ಚಾಮರಂ ಬೆರಸು ಕನ್ನೆಯರು ಚೋರನ ಪರಿತನ್ದು ಕಾಳಗ
ಸುಭಟಂಗಿಂದ್ರಲೋಕ ಸುಖಮಂ ತೋಱಿಲ್ಕೆಯಮರಾವತಿ ಪುರಮಂ ಪೊಕ್ಕರು"[೧೧೨]

ಕ್ರಿ. ಶ. ೧೧೮೩ರ ವೀರಗಲ್ಲೊಂದರಲ್ಲಿ ಬಮ್ಮಯನೆಂಬುವನು 'ಕನಕ ವಿಮಾನವನ್ನೇಱಿ ಸುರಲೋಕಮನೆಯ್ದಿದ' ವರ್ಣನೆ ದೊರೆಯುತ್ತದೆ.[೧೧೩] ಮತ್ತೆ ಕ್ರಿಶ. ೧೧೮೫ರ ಒಂದು ವೀರಗಲ್ಲಿನಲ್ಲಿ ವೀರನನ್ನು ಅಪ್ಸರೆಯರು 'ಸುರದುಂದುಭಿ ಎಸೆಯಲ್ಕೆ' ಸ್ವರ್ಗಕ್ಕೆ ಕೊಂಡೊಯ್ದ ವರ್ಣನೆ ಬರುತ್ತದೆ.[೧೧೪] ಕ್ರಿ. ಶ. ೧೨೧೩ರ ವೀರಗಲ್ಲೊಂದರಲ್ಲಿ ಹೂವಿನ ವಿಮಾನದಲ್ಲಿ ವೀರನನ್ನು ಕುಳ್ಳಿರಿಸಿಕೊಂಡು, ವೀರಜವ್ವನೆಯರು ಹಾಡುತ್ತಾ ಕೊಂಡೊಯ್ಯುತಿರಲು ಸುರದುಂದುಭಿಯು ಮೊಳಗಿದ, ಹೂವಿನ ಮಳೆಯಾದ ವರ್ಣನೆ ಈ ರೀತಿ ಇದೆ :

"'ಹೂವಿನ ವಿಮಾನವೇಱಿ ಸಿಲೆ ವೀರಜಾವನೆಯರೆಸವಲೆತಿ ಬೆಂನೆಯರುಂ
ದೇವಾಂಗನೆಯರ್ಪಲರುಂ ಭಾವಿಸೆ ಸುರಲೋಕೆಸೆಯ ಜಕ್ಕನಾಯ್ಕರು
ಸುರವನಿತೆಯರುಯ್ಯಲೊಡಂ ಸುರದುಂದುಭಿ ಪೊಯ್ಕೆ ಸುರಗಿಯ ಪೂವಿನ
ಮಱಿಯ ಸುರಲೋಕದಲ್ಲಿ ಜಕ್ಕನಿರ್ದ್ದಿಯೆ ತಾ ವೀರರಸವ ಪಾಡಿದರಾಗಳು"[೧೧೫]

ಇದೇ ರೀತಿ ಅಪ್ಸರೆಯರು ಹೂವಿನ ಮಳೆಯನ್ನು ಸುರಿಸಿ ಹಾಡಿಕೊಂಡು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ದ ವರ್ಣನೆ ಕ್ರಿ. ಶ. ೧೫೦೨ರ ಮತ್ತೊಂದು ವೀರಗಲ್ಲಿನಲ್ಲಿ ದೊರೆಯುತ್ತದೆ.[೧೧೬]

ಸ್ವರ್ಗಕ್ಕೆ ಅಪ್ಸರೆಯರು ವೀರನನ್ನು ಕೊಂಡೊಯ್ಯುವ ವರ್ಣನೆ ವೀರಗಲ್ಲುಗಳಲ್ಲಿ ಮಾತ್ರವಲ್ಲದೆ ನಿಷಿಧಿ ಕಲ್ಲುಗಳಲ್ಲಿಯೂ ಕೆಲವೊಮ್ಮೆ ಬಂದಿರುವುದುಂಟು. ಸಮಾಧಿ ವಿಧಿಯಿಂದ ಮುಡುಪಿ ಮಡಿದವರನ್ನು ಸ್ವರ್ಗಕ್ಕೆ ಕೊಂಡೊಯ್ಯುವುದರ ವರ್ಣನೆ ಅಲ್ಲಲ್ಲಿ ಬರುವುದುಂಟು. ಈ ನಿಷಿಧಿಕಲ್ಲುಗಳಲ್ಲಿ ಮಹಾಸತಿ ಹರ್ಯ್ಯಲೆ ಎಂಬುವಳ ನಿಷಧಿಕಲ್ಲಿನ ಶಾಸನ ಗಮನಾರ್ಹವಾಗಿದೆ. ಆಕೆ ಸಮಾಧಿವಿಧಿಯಿಂದ ಮುಡುಪಿದಾಗ ಆಕೆಯನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ದುದರ, ಅಲ್ಲಿ ಮಹಾಸತಿ ಹರ್ಯ್ಯಲೆಗೆ ದೊರೆತ ಸ್ವಾಗತದ ವಿವರವಾದ ವರ್ಣನೆ ನಮಗೆ ದೊರೆಯುತ್ತದೆ.[೧೧೭]

---

೧೧೨. E.C.VIII. Sb. 6, 1165
೧೧೩. S.C.I.I. XX. 169, 1183
೧೧೪. ಅದೇ. ೧೨೪, ೧೮೫
೧೧೫. E.C.V. Hn. 105, 1213
೧೧೬. E.C.VIII. Sb. 502, 1502
೧೧೭. E.C.XV. Tp. 93

ಮಡಿದ ವೀರನ ಧಾರ್ಮಿಕ ನಂಬಿಕೆಯು ಅವನು ಸತ್ತ ಮೇಲೆ ಇಂಥ ಲೋಕವನ್ನು ಸೇರುತ್ತಾನೆ ಎಂಬುದನ್ನು ತೋರುವ ವೀರಗಲ್ಲಿನ ಶಿಲ್ಪಗಳಂತೆಯೇ ಶಾಸನ ಪಾಠದಲ್ಲಿಯೂ ವೀರನು ಆ ಲೋಕವನ್ನು ಪಡೆದ ನೆಂಬುದರ ವರ್ಣನೆಯಿರುತ್ತದೆ.

ಈ ಹಿಂದೆ ಪ್ರಸ್ತಾಪ ಮಾಡಿರುವಂತೆ, 'ಯೋಗಿ' ಮತ್ತು 'ವೀರ' ಇಬ್ಬರೇ ಸೂರ್ಯ ಮಂಡಲವನ್ನು ಭೇದಿಸಿ ಸತ್ಯಲೋಕವನ್ನು ಸೇರುವವರು ಎಂಬ ಕಲ್ಪನೆ, ನಂಬಿಕೆ ಇತ್ತು ಎನ್ನುವುದು ಸುಮಾರು ಕ್ರಿ. ಶ. ೧೧೦೭ರ ಹೂಲಿಯ ವೀರಗಲ್ಲಿನ ಪಾಠದಿಂದ ಸ್ಪಷ್ಟವಾಗುತ್ತದೆ.[೧೧೮] ತುರುಗಾಳಗದಲ್ಲಿ ಮಡಿದ ಬೋಸಿಗ ಮಲ್ಲಿಗರೆಂಬುವರ ಪರಾಕ್ರಮವನ್ನೂ ಸ್ನೇಹವನ್ನೂ ವರ್ಣಿಸುತ್ತಾ ಆಶಾಸನಕಾರ, "ತುಱುವಿಗಡ್ಡಂ ಬಂದು ಮೇಲಾಳುಕುದುರೆ ಯಮನಿಱಿದು ಪಲರಂ ಕೊಂದು ಸೂರ್ಯಮಂಡಲಮಂ ಭೇಧಿಸಿದರ್" ಎಂಬುದಾಗಿ ತಿಳಿಸುತ್ತಾನೆ. ಶಾಸನಕಾರನ ಈ ಉದ್ಗಾರ ಅಥವಾ ವರ್ಣನೆ ಕರ್ನಾಟಕದ ಶಾಸನಗಳಲ್ಲಿ ವಿರಳವಾಗಿ ದೊರೆಯುವ, "ದ್ವಾ ಇಮೌ ಪುರುಷೌಲೋಕೇ ಸೂರ್ಯಮಂಡಲ ಭೇದಿನೌ ಪರಿವ್ರಾಡ್ಯೋಗ ಯುಕ್ತಾಶ್ಚ ರಣೇಚ ಅಭಿಮುಖೇ ಹತಃ[೧೧೯] ಎಂಬ ಶ್ಲೋಕಾರ್ಥದ ಮಾರ್ದನಿಯೆಂದು ಬೇರೆಯಾಗಿ ಹೇಳಬೇಕಾಗಿಲ್ಲ.

ಮತ್ತೆ ಕೆಲವು ಕಡೆಗಳಲ್ಲಿ ವೀರನು 'ದೇವಲೋಕಕ್ಕೆ ಸಂದ'ನೆಂಬ ವರ್ಣನೆ ಬರುತ್ತದೆ.[೧೨೦] ಈ ರೀತಿಯ ವರ್ಣನೆಯನ್ನು, ನಂಬಿಕೆಯನ್ನು ಪಂಪನ ವಿಕ್ರಮಾರ್ಜುನ ವಿಜಯದಲ್ಲಿಯೂ ಗಮನಿಸಬಹುದು.[೧೨೧]

ಅನೇಕ ವೀರಗಲ್ಲುಗಳ ಶಿಲ್ಪದಲ್ಲಿ ವೀರನು ಕೈಲಾಸದಲ್ಲಿ ಶಿವನ ಬಳಿ ಇರುವಂತೆ ಶಿಲ್ಪದ ವಿವರಗಳನ್ನು ಬಿಡಿಸಿರುವಂತೆಯೇ, ವೀರಗಲ್ಲಿನ ಪಾಠದಲ್ಲಿಯೂ ಸಹ ವೀರನು ಕೈಲಾಸವನ್ನು ಸೇರಿದ ವರ್ಣನೆ ಬರುತ್ತದೆ. ಕ್ರಿ. ಶ. ೯೭೫ರ ವೀರಗಲ್ಲಿನಿಂದ ವೀರನು, ""ಸ್ವರ್ಗಗಾಮಿಯಾಗಿ ಸಿವಲೋಕ ಪ್ರಾಪ್ತನಾದ"ನೆಂಬ ವರ್ಣನೆ ದೊರೆಯುತ್ತದೆ.[೧೨೨] ಬಂಮ್ಮಸೆಟ್ಟಿ ಎಂಬುವನು ಮಡಿದ ವಿಷಯವನ್ನು ಹೇಳುವ ಕ್ರಿ. ಶ. ೧೨೨೬ರ ಒಂದು ವೀರಗಲ್ಲು, ಮಡಿದ ಆ ಬಂಮ್ಮಸೆಟ್ಟಿಯನ್ನು ""ಅಮರದೇವಕಂನೆಯರು ಪುಸ್ಪಕ ವಿಮಾನವನೇಱಿಸಿ ಉತ್ತಮ ಸ್ವರ್ಗ ಕೈಳಾಸಪುರ ಪದವಂ ಮಹೇಶ್ವರನ ಶ್ರೀಪಾದವಂ ಕಾಣಿಸಿ ವೀರ ಆಸನದಲಿರಿಸಿರು" ಎಂಬುದಾಗಿ ತಿಳಿಸುತ್ತದೆ.[೧೨೩]

---

೧೧೮. E.I.XVI. ಪು. ೨೦೦

೧೧೯. E.C.VII. Sk. 307, 1016

೧೨೦. E.C.VIII. Nr. 79, 1068

೧೨೧. ಪಂಪ : ವಿಕ್ರಮಾರ್ಜುನ ವಿಜಯಂ. ೧೧–೧೧೬

೧೨೨. E.C.VIII. Sb. 445, 975

೧೨೩. E.C.XI. Hk. 130, 1226

ಇದೇ ರೀತಿ ವೀರನು ಶಿವಲೋಕ ಪ್ರಾಪ್ತನಾದ ವರ್ಣನೆಯಿರುವ ಇನ್ನೆರಡು ವೀರಗಲ್ಲಿನಲ್ಲಿನ ಮಾತುಗಳು ಈ ರೀತಿ ಇವೆ : ""ಕಾದಿ ಹಲವಾಳು ಕುದುರೆಯು ಕೊಂದು ಶಿವಲೋಕ ಪ್ರಾಪ್ತನಾದ".[೧೨೪] ""ರಣಭೂತವ ಕರೆದುಣಲಿಕ್ಕಿತಲೀ ಶಿವಸಂನಿಧಿಗೈದಿದ".[೧೨೫]

ವೀರರು ಮಡಿದಮೇಲೆ ಅವರಿಗೆ ಶಿವಲೋಕ ಪ್ರಾಪ್ತವಾಗುತ್ತದೆಂಬ ವರ್ಣನೆ ಕಾವ್ಯಗಳಲ್ಲಿಯೂ ಜಾನಪದ ಗೀತೆಗಳಲ್ಲಿಯೂ ದೊರೆಯುತ್ತದೆ. ಅವುಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಳ್ಳುವುದು ಸೂಕ್ತವೆಂದು ತೋರುತ್ತದೆ. ನಂಜುಂಡನ ರಾಮನಾಥ ಚರಿತೆ – ಕುಮಾರರಾಮನನ್ನು ಕುರಿತ ಕಾವ್ಯ. ಇದರಲ್ಲಿ ಕುಮಾರ ರಾಮನಿಗೆ ಸಂಬಂಧಪಟ್ಟ ಹಲವಾರು ವಿವರಗಳನ್ನು ಕವಿ ಮನತುಂಬಿ ವರ್ಣಿಸಿದ್ದಾನೆ. ಕುಮಾರ ರಾಮನು ಯುದ್ಧರಂಗದಲ್ಲಿ ಮಡಿದನಂತರ ಅವನನ್ನು ಕೈಲಾಸಕ್ಕೆ ಬರಮಾಡಿಕೊಳ್ಳಲು ಪುಷ್ಪಕ ವಿಮಾನವನ್ನು ಶಿವನೇ ಕೊಟ್ಟು ಕಳುಹಿಸುತ್ತಾನೆ. ಈ ಸಂದರ್ಭವನ್ನು ಕವಿ ನಾಲ್ಕಾರು ಸಾಂಗತ್ಯಗಳಲ್ಲಿ ವರ್ಣಿಸಿದ್ದಾನೆ. ಅವನ ಈ ವರ್ಣನೆಗೆ ಪ್ರೇರಣೆ ನೀಡಿರುವುದು, ವೀರಗಲ್ಲುಗಳಲ್ಲಿನ ವರ್ಣನೆಗೆ ಪ್ರೇರಣೆ ನೀಡಿರುವ ಮನೋಧರ್ಮವೇ ಕಾರಣ ಎಂದರೆ ಅದು ತಪ್ಪಾಗಲಾರದು.[೧೨೬] ಇದೇ ನಂಬಿಕೆ ಕರ್ನಾಟಕ ಜಾನಪದ ಗೀತೆಗಳಲ್ಲಿಯೂ ವ್ಯಕ್ತವಾಗಿರುವುದು ತಿಳಿದುಬರುತ್ತದೆ. ಹೋರಾಟದಲ್ಲಿ ಮಡಿದ ವೀರನ ತಾಯಿ ಪುತ್ರಶೋಕದಿಂದ ಆಲಾಪಿಸುತ್ತಿದ್ದಾಗ ಆಕೆಯನ್ನು ಮತ್ತೊಬ್ಬ ಹೆಂಗಸು,

""ತಂಗಿಯಳದೀರೆ ತಂಗ್ಯಮ್ಮ ಅಳದೀರೆ
ತಂಗಿ ಸಿಂಪಮ್ಮ ಅಳದೀರೆ। ನಿಮ್ಮಗುನು
ಲಿಂಗಯಿಕಾನಾಗವನೆ ಸಿವನಲ್ಲಿ"[೧೨೭]

–ಎಂದು ಸಂತೈಸುತ್ತಾಳೆ. ಈ ಎಲ್ಲಾ ವರ್ಣನೆಗಳನ್ನು ಗಮನಿಸಿ, ಬಹುಶಃ ಈ ರೀತಿ ಅಭಿಪ್ರಾಯವನ್ನು ತಳೆಯಬಹುದೆಂದು ತೋರುತ್ತದೆ : ಆರಂಭದಲ್ಲಿ ವೀರನು ಸ್ವರ್ಗವನ್ನು ಪಡೆಯುತ್ತಾನೆ ಎಂಬ ನಂಬಿಕೆ, ಕಲ್ಪನೆ ಜನರಲ್ಲಿತ್ತು ; ಶೈವಧರ್ಮದ ಪ್ರಭಾವದ ನಂತರ ಸ್ವರ್ಗವನ್ನು ಮೀರಿ ಶಿವನಲ್ಲಿ ಐಕ್ಯವಾಗುವುದೇ ಮುಕ್ತಿಪದ ಎಂದರಿತ, ನಂಬಿದ ಜನತೆ ವೀರನು ಹೋರಾಡಿ ಮಡಿಯುವುದರಿಂದ ಸ್ವರ್ಗಸುಖವನ್ನು ಪಡೆದು ಅನಂತರ ಶಾಶ್ವತವಾದ ಮುಕ್ತಿಯನ್ನು ಪಡೆದು ಶಿವನ ಬಳಿ ಇರುತ್ತಾನೆಂಬ ನಂಬಿಕೆಯನ್ನು ಬೆಳೆಸಿಕೊಂಡು ಬಂದಿರಬೇಕು.

---

೧೨೪. E.C.VII. Ci. 24, 1280

೧೨೫. E.C.VIII. Sb. 259, 1475

೧೨೬. ನಂಜುಂಡ : ರಾಮನಾಥ ಚರಿತೆ, ಭಾ–೩. ಆ. ೧೧, ಸಂ. ೬. ಪ. ೪೮–೫೧

೧೨೭. ಶ್ರೀ ಎ. ಕೃಷ್ಣಮೂರ್ತಿ ಅವರ ಅಪ್ರಕಟಿತ ಸಂಗ್ರಹದಿಂದ

ವೀರನು ವೈಕುಂಠಕ್ಕೆ ಹೋದ, ಜಿನರಲ್ಲಿ ಸೇರಿದ ಎಂಬ ವರ್ಣನೆಗಳೂ ಅಪರೂಪವಾಗಿ ಬಂದಿರುವುದನ್ನು ಗಮನಿಸಬಹುದು. ಕ್ರಿ. ಶ. ೧೩೪೫ರ ವೀರಗಲ್ಲಿನ ಪಾಠದಲ್ಲಿ 'ಚೆಂನಯನಾಯಕ' ಎಂಬುವನು "ಸ್ವಾಮಿಕಾರ್ಯ್ಯಕೆ ದೇಹವನೊಪ್ಪಿಸಿ ಕೊಟ್ಟು ಶ್ರೀ ವಯಿಕುಂಟವನು ವಯಿದಿದರು" ಎಂಬ ವರ್ಣನೆ ಬರುತ್ತದೆ.[೧೨೮] ಚನ್ನಗಿರಿ ತಾಲ್ಲೂಕು ಹಿರೇಕೋಗಲೂರಿನ ಗ್ರಾಮದಲ್ಲಿನ ವೀರಗಲ್ಲಿನ ಪಾಠದಲ್ಲಿ ವೀರನೊಬ್ಬನು "ಗೋಹರಿಸಾಹಯಿಯಾಗಿರೆ ಕಾದಿದ ಮೂಲೋಕ ವಜಿಯೆ ಜಿನರೋಳು ಸಂದ"ನೆಂಬ ವರ್ಣನೆ ದೊರೆಯುತ್ತದೆ.[೧೨೯] ಮತ್ತೆ ಕೆಲವು ಶಾಸನಗಳಿಂದ ವೀರನು, ""ಕೈಲಾಸ ಪುರಮನೆಯ್ದಿದ್ದಂ"[೧೩೦] ""ಬ್ರಹ್ಮಲೋಕಕ್ಕೆ ಸಂದ",[೧೩೧] ""ಸತ್ತಲೋಕ ಪ್ರಾಪ್ತನಾದ"[೧೩೨] ""ದ್ರುವಲೋಕ ಪ್ರಾಪ್ತರಾದ"[೧೩೩] ರೆಂದೂ ತಿಳಿಯುತ್ತದೆ. ವೀರಗಲ್ಲುಗಳಲ್ಲಿ ಮಾತ್ರವಲ್ಲ, ಕೆಲವು ದಾನಶಾಸನ ಗಳಲ್ಲಿಯೂ, ""ಧರೆಯೊಳು ಮಾಱಾಂಪದಟರ ಯಿರುಳು ಹಗಲಱಿಸಿ ತೊಳಲ್ದು ಕಾಣದೆ ಸೋಯ್ಯಂ ಸುರಲೋಕದೊಳಗೆ ಕಲಿಗಳನಱಸುವ ತೆಱದಿಂದೆಯಿಂದ್ರ ಪುರಮಂ ಪೊಕ್ಕಂ" ಎಂಬ ವರ್ಣನೆಗಳು ಬಂದಿರುವುದನ್ನು ಗಮನಿಸಬಹುದು.[೧೩೪]

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಮಡಿದ ವೀರನ ಪರಲೋಕದ ಜೀವನದ ಬಗ್ಗೆ ಹೇಗೆ ಆಯಾ ಧರ್ಮಗಳು ತಮ್ಮದೇ ಆದ ಕಲ್ಪನೆಗಳನ್ನು ನಿರೂಪಿಸಿದುವು ಎಂಬ ಅಂಶ ಸುವ್ಯಕ್ತವಾಗುತ್ತದೆ.

ವೀರಗಲ್ಲುಗಳ ಪಾಠ ಇಂಥ ವ್ಯಕ್ತಿ, ಇಂಥ ಯುದ್ಧದಲ್ಲಿ ಮಡಿದ ಎಂಬ ಮಾಹಿತಿಯನ್ನು ಹೊಂದಿರುವ ದಾಖಲೆ ಮಾತ್ರವಲ್ಲ ಅಥವಾ ವೀರನನ್ನು ಉತ್ಪ್ರೇಕ್ಷೆಯಿಂದ ಹೊಗಳಿರುವ 'ಪ್ರಶಸ್ತಿ'ಗಳೂ ಅಲ್ಲ. ಇವುಗಳನ್ನು ಮೀರಿದ ಮಾನವೀಯ ಭಾವನೆಗಳನ್ನು ಹಿಡಿದಿಟ್ಟಿರುವ ಅಪೂರ್ವ ದಾಖಲೆಗಳು. ಪ್ರತಿಯೊಂದು ವೀರಗಲ್ಲಿನ ಹಿಂದೆಯೂ, ವೀರರ ಜೀವನದ ಅರ್ಥವಂತಿಕೆ ಇದೆ. ಆ ವೀರನ ಸಂಬಂಧಿಗಳ ಹೆಮ್ಮೆ, ದುಃಖಗಳು ಕೂಡಿವೆ. ವ್ಯಕ್ತಿಗಳ ನಡುವಿನ ಸಂಬಂಧ ಎಂಥ ಮಹತ್ವದ್ದು ಎಂಬುದನ್ನು ಅವು ಸಾರುತ್ತವೆ. ಸಾಮಾಜಿಕ ಕರ್ತವ್ಯಗಳನ್ನು ಅವು ಎತ್ತಿ ಹೇಳುತ್ತವೆ. ಈ ಕಾರಣದಿಂದಲೇ ಅವು ಮುಖ್ಯವಾಗಿ ನಮ್ಮ ಗಮನವನ್ನು ಸೆಳೆಯುವುದು. ನಮ್ಮ ಹೃದಯವನ್ನು ಕಲಕುವುದು. ಒಂದು ರೀತಿಯ ನೈತಿಕ ಬಲದ ಹುಮಸ್ಸನ್ನು ನಮ್ಮಲ್ಲಿ ತುಂಬುವುದು.

---

೧೨೮. E.C.XII. Tp. 44, 1345

೧೨೯. M.A.R. 1935, 89

೧೩೦. E.C.V. Ak.65

೧೩೧ E.C.V. Ak. 1197

೧೩೨. E.C.V. Hn. 158

೧೩೩. E.C.VIII. Nr. 29, 1228

೧೩೪. E.C.VIII. Sb. 270, 271, 1249

ಹಲವಾರು ವೀರಗಲ್ಲುಗಳ ಪಾಠ ವೀರಕಾವ್ಯಗಳೇ ಆಗಿವೆ. ತಮ್ಮ ಮಿತಿಯಲ್ಲಿ ಅಣ್ಣ–ತಮ್ಮಂದಿರುಗಳ ಅವ್ಯಾಜ ಪ್ರೇಮ. ಗೆಳೆಯರ ಅನುಪಮ ವಿಶ್ವಾಸ, ಅನ್ಯಾಯ ಮಾಡಿದವನು ತಮ್ಮ ಪ್ರಭುವೇ ಆದರೂ ಸಿಡಿದೇಳುವ ಸ್ವಾಭಿಮಾನ, ಅಧಿಕಾರ ಮದದಿಂದ ವರ್ತನೆಯನ್ನು ಕಂಡು ಸಿಡಿದೆದ್ದ ವೀರರ ನ್ಯಾಯನೀತಿ, ತಮ್ಮ ವಸ್ತುಗಳಲ್ಲದಿದ್ದರೂ ಕಳ್ಳತನಕ್ಕೆ ಅವಕಾಶ ಕೊಡದ ಧೈರ್ಯ, ಅಬಲೆಯರ ಮೇಲೆ ಅಮಾನುಷವರ್ತನೆ ಮಾಡಿದಾಗ, ಅಂಥ ಸಮಾಜ ಘಾತುಕರ ಮೇಲೆ ಬಿದ್ದ ವೀರರ, ಸಮಾಜ ಸೇವಕರ ಶೌಚಗಳು, ನಂಬಿದವರಿಂದಲೇ ಹತರಾದ ವೀರರ ಕರುಣಾಜನಕ ಕಥೆ – ಇತ್ಯಾದಿಗಳನ್ನು ಹೇಳುತ್ತವೆ. ಈ ಎಲ್ಲ ಬಗೆಯ ನಿದರ್ಶನಗಳನ್ನು ಈ ಪ್ರಬಂಧದ ಹಲವಾರು ಕಡೆ ಪ್ರಸ್ತಾಪಿಸಿರುವುದರಿಂದ ಆ ಬಗ್ಗೆ ವಿವರವಾದ ಪರಿಶೀಲನೆಗೆ ಹೋಗದೆ ಮುಖ್ಯವೆನಿಸಿದ ಹಲವಾರು ನಿದರ್ಶನಗಳನ್ನು ಮಾತ್ರ ಇಲ್ಲಿ ಪರಿಶೀಲಿಸಿದ್ದೇವೆ.

ಕ್ರಿ. ಶ. ೧೧೦೭ ರ ಹೂಲಿಯ ವೀರಗಲ್ಲು , ಬೋಸಿಗ ಮತ್ತು ಮಲ್ಲಿಗರ ಅನುಪಮವಾದ ಸ್ನೇಹವನ್ನು ಬಣ್ಣಿಸಿದೆ. ಹೂಲಿಯ ತುರುಗಳನ್ನು ಬೂತಾರ್ಯ್ಯ ಎಂಬುವನು ಹಿಡಿದಾಗ, ಹೂಲಿಯ ತಳಾರ ನಾಯಕನಾದ ಬೋಸಿಗ ಮತ್ತು ಆತನ ಒಡನುಂಡ ಕೆಳೆಯನಾದ ಮಲ್ಲಿಗ ಬೂತಾರ್ಯ್ಯನನ್ನು ಎದುರಿಸಿ ಹೋರಾಡಿ ಮಡಿಯುತ್ತಾರೆ. ಶಾಸನಕಾರ ಪಾಠದ ಆರಂಭದಲ್ಲಿಯೇ ಅವರಿಬ್ಬರ ಗೆಳೆತನವನ್ನು ಬಹಳ ಔಚಿತ್ಯಪೂರ್ಣವಾಗಿ ಸೂಚಿಸಿದ್ದಾನೆ. ಹೋರಾಟದಲ್ಲಿ ಮೊದಲು ಬೋಸಿಗನು ಸಾಯುತ್ತಾನೆ. ಅದನ್ನು ಕಂಡು 'ಅವನೊಡನುಂಡ ಕೆಳೆಯ'ನಾದ ಮಲ್ಲಿಗನು.

"ಒಡನುಂಡ ಕೆಳೆಯನಂ ಸಂ
ಗಡದಾಳಂ ಮೇಳದಾಳನನುವರದಡೆಯೊಳ್
ಬಿಡಲಾಗದೆಂದು ಬೋಸಿಗ
ನೊಡನಣೆದಂ ಮಲ್ಲಿಗಂ ಪ್ರತಾಪೋನ್ನತಿಯಿಂ –"[೧೩೫]

ಈ ಶಾಸನದ ಪಾಠವನ್ನು ತಯಾರು ಮಾಡಿದ ಕವಿ ಯಾರೇ ಇರಲಿ, ಜೀವನವನ್ನು ನಿಜವಾದ ಅರ್ಥದಲ್ಲಿ ಗಮನಿಸಿ ಅನುಭವಿಸಿದವನು. ಅವನು ಬೋಸಿಗ ಮತ್ತು ಮಲ್ಲಿಗರ ಗೆಳೆತನವನ್ನು ಮೊದಲಿನಿಂದಲೂ ಗಮನಿಸಿ, ಅನುಭವಿಸಿದವನು. ಅವನು ಬೋಸಿಗ ಮತ್ತು ಮಲ್ಲಿಗರ ಗೆಳೆತನವನ್ನು ಮೊದಲಿನಿಂದಲೂ ಗಮನಿಸಿ. ಈ ಮಾತನ್ನು ಬರೆದನೋ, ತನ್ನ ಪ್ರತಿಭೆಯಿಂದ ಅವರಿಬ್ಬರ ಮರಣಕ್ಕೆ ಈ ಭಾಷ್ಯವನ್ನು ಬರೆದನೋ ಎಂಬುದು ಇಲ್ಲಿ ಅಪ್ರಸ್ತುತ. ಈ ಒಂದು ಪುಟ್ಟಕಂದ ಪದ್ಯದ ಸಹಾಯದಿಂದ ಈ ಶಾಸನ. ಗೆಳೆತನದ ಗಾಢವಾದ ಸಂಬಂಧ ಎಂಥದ್ದಾಗಿರಬೇಕು ಎಂಬುದನ್ನು ತಿಳಿಸುತ್ತದೆ ಎಂಬುದು ಮುಖ್ಯ.

೧೩೫. E.I.XVII. ಪು. ೨೦೦

ಇಷ್ಟೇ ಪರಿಣಾಮಕಾರಿಯಾದ ರೀತಿಯಲ್ಲಿ ಅಣ್ಣ– ತಮ್ಮಂದಿರ ನಿರ್ವ್ಯಾಜ ಸಂಬಂಧವನ್ನು ಹೇಳುವ ಕುರುಗೋಡು ಶಾಸನವನ್ನು ಇಲ್ಲಿ ನೆನೆಯಬಹುದು.[೧೩೬] ಇದೇ ರೀತಿ ತುರುಗಾಳಗದಲ್ಲಿ ಹೋರಾಡಿ ಮಡಿದ ಮಾಚ, ಗೋಮ ಎಂಬ ಸೋದರರನ್ನು ಕೊಂಡಾಡುವ ವೀರಗಲ್ಲು ಅಬ್ಬಲೂರಿನಲ್ಲಿ ದೊರೆಯುತ್ತದೆ.[೧೩೭] ಕುರುಗೋಡು ವಿರಗಲ್ಲಿನ ಪಕ್ಕದಲ್ಲಿರುವ ಅದೇ ಹೋರಾಟಕ್ಕೆ ಸಂಬಂಧಪಟ್ಟ ಮತ್ತೊಂದು ವೀರಗಲ್ಲು ವೀರಗಾವುಂಡ, ಮಲ್ಲಗಾವುಂಡ ಮತ್ತು ಜೋದಗಾವುಂಡ ಎಂಬುವರ ಸೋದರ ವಾತ್ಸಲ್ಯವನ್ನು ತಿಳಿಸುತ್ತದೆ. ವೀರಗಾವುಂಡ ಮತ್ತು ಮಲ್ಲಿಗಾವುಂಡರು ಹೋರಾಟದಲ್ಲಿ ಮಡಿಯುತ್ತಾರೆ. ಅವರಿಬ್ಬರಿಗಿಂತ ಕಿರಿಯವನಾದ ಜೋದಗಾವುಂಡನೆಂಬುವನು ತನ್ನ ಅಣ್ಣಂದಿರ ಕಳೇಬರಗಳನ್ನು ಕದ್ದಿಟ್ಟುಕೊಂಡಿದ್ದವರನ್ನು ಕೊಂದು ತುರುಗಳನ್ನು ಹಿಂದಿರುಗಿಸಿ, ತನ್ನ ಅಣ್ಣಂದಿರ ಕಳೇಬರಗಳನ್ನು ಹಿಂದಕ್ಕೆ ತಂದು, ಮುಂದಿನ ಸಂಸ್ಕಾರ ವಿಧಿಗಳನ್ನು ಮಾಡುತ್ತಾನೆ.[೧೩೮]

ಕ್ರಿ. ಶ. ೯೪೨ರ ರೋಣದಲ್ಲಿನ ಒಂದು ವೀರಗಲ್ಲು ಬೂತಾರ್ಯ್ಯ (ಬೂತ ೧೧) ಎಂಬುವವನ ವಿರುದ್ಧ ಸಿಡಿದೆದ್ದ ಪಂಪಯ್ಯನ ವಿಷಯವನ್ನು ತಿಳಿಸುತ್ತದೆ.[೧೩೯] ಬೂತಾರ್ಯ್ಯನು ಬಂದು ರೋಣವನ್ನು 'ಕಿಡಿಸಿ' ""ಭಿತ್ತಾಯಮನೀಯ ವೇೞ್ಕುಂ" ಎಂಬುದಾಗಿ ದರ್ಪ ಮಾಡಿದಾಗ, ಅದೇ ಊರಿನ ಪಂಪಯ್ಯನೆಂಬುವನು ಬೂತಾರ್ಯ್ಯನು ಮಾಂಡಳಿಕನೆಂಬುದನ್ನೂ ಗಮನಿಸದೆ ಅಷ್ಟೇ ದರ್ಪದಿಂದ ""ನಾನೊಂದುಕ್ಷತೆಯನಪ್ಪಂದ ಮೀಯೆನ್" ಎಂದು ಪ್ರತಿಭಟಿಸುತ್ತಾನೆ, ಅಷ್ಟೇ ಅಲ್ಲದೆ ಅವನೊಡನೆ ಹೋರಾಡಿ ಸಾಯುತ್ತಾನೆ. ತಮ್ಮೆಲ್ಲರ ಪರವಾಗಿ ಹೋರಾಡಿ ಸತ್ತ ಪಂಪಯ್ಯನ ಬಗ್ಗೆ ರೋಣದ ಜನರಿಗಿದ್ದ ವಿಶ್ವಾಸ ಶಾಸನದ ಪಾಠದಲ್ಲಿ ಈ ರೀತಿ ವ್ಯಕ್ತವಾಗಿದೆ :

""ಧರೆಯೆಲ್ಲಂ ಪೊಗೞ್ವನ್ನೆರೆ
[ಪುರಿ]ಗೆಱೆಯೊಳಗುರ್ತು ರೋಣಂಂ ಕಾದಮರೇ
ಶ್ವರ ಪುರಮನೆಯ್ದಿದೋಂ [ಪೆ]

೧೩೬ E.C.VIII. Sb. 175, 1095

೧೩೭ E.I.V.P. 261

೧೩೮. E.C.VIII. Sb. 176, 1095 "ಸುರಲೋಕ ಪ್ರಾಪ್ತರಾದರಿರ್ವ್ವರಿಂ ಕಱಿಯ ಜೋದಗಾವಂಡಂತ..... ಕಳೇವರಮಂ ಕರ್ದ್ದುಯಿಕ್ಕಿ ಕೊಮಡವರಂಕೊಂದು ತುಱುವಂ ಮಗುಳ್ಚಿ". ಇಲ್ಲಿ ಒಂದು ಸಂಶಯ ಬರುತ್ತದೆ. ಆದೆಂದರೆ –'ತನ್ನ ಅಣ್ಣಂದಿರ ಕಳೇಬರಗಳನ್ನು ಕದ್ದು ಇಟ್ಟುಕೊಂಡಿದ್ದವರನ್ನು ಕೊಂದು ಕಳೇಬರಗಳನ್ನು ತನ್ನ ವಶಮಾಡಿಕೊಂಡು ಅನಂತರ ಹಸುಕರುಗಳನ್ನು ಹಿಂತಿರುಗಿಸಿದ' ಎಂಬುದಾಗಿ ಅರ್ಥೈಸಬೇಕೋ ಅಥವಾ 'ತನ್ನ ಅಣ್ಣಂದಿರ ಕಳೇಬರಗಳನ್ನು ಕಂಡು ಸೈರಿಸಲಾರದೆ ತುರುಗಳನ್ನು ಕದ್ದು ಇಟ್ಟುಕೊಂಡಿದ್ದವರನ್ನು ಕೊಂದು ತುರುಗಳನ್ನು ಹಿಂತಿರುಗಿಸಿದ' ಎಂದು ಅರ್ಥೈಸಬೇಕೋ ಎಂಬುದು. ಹೆಣಗಳನ್ನು ಕದ್ದು ಇಟ್ಟುಕೊಳ್ಳುವ ನಿರ್ದೇಶನ ಬೇರೆ ಎಲ್ಲೂ ಸಿಗುವುದಿಲ್ಲ.

೧೩೯. S.I.I. Pt.I. 36, 942

ಸರಿಂ] ಶ್ರೀ ಪತಾಕನನಭಿನುತಂ ಪಂಪಯ್ಯಂ
ಇನ್ತು ರೋಣ ಕಾದು ಸ [ತ್ತುರೆ] ಸುರಲೋಕಂ ಪ್ರಾಪ್ತನಾದೊನ್"

ಬೂತಾರ್ಯ್ಯನ ಕುಪಿ ಮುಷ್ಠಿಯಿಂದ ತಮ್ಮ ಗ್ರಾಮವಾದ ರೋಣವನ್ನು ಬಿಡಿಸಿದುದರಿಂದ ಪಂಪಯ್ಯನ ಬಗ್ಗೆ ಅವರಿಗೆ ಹೆಮ್ಮೆ ಇದ್ದುದು ಇಲ್ಲಿ ವ್ಯಕ್ತವಾಗುತ್ತದೆ.

ಕ್ರಿ. ಶ. ೧೨೦೦ ರ ವೀರಗಲ್ಲೊಂದರ ಪಾಠ ಅತ್ಯಪೂರ್ವವಾದ ಸಂಗತಿಯನ್ನು ತಿಳಿಸುತ್ತದೆ.[೯೪೦] ಚೋಳ ಮಹಾದೇವಿ ದುಷ್ಟ ಕಷ್ಟರ ಮಾತನ್ನು ಕೇಳಿ ಬೇವೂರನ್ನು ಧಾಳಿ ಮಾಡಿಸಿ ತುರುಗಳನ್ನು ಸೆರೆ ಹಿಡಿಯಿಸುತ್ತಾಳೆ. ಅರಸಿಯ ಈ ಧಾಳಿಯನ್ನು ಕೇತಮಲ್ಲನಾಯಕ ನೆಂಬುವನು ದಿಟ್ಟವಾಗಿ ಎದುರಿಸಿ ಸಾಯುತ್ತಾನೆ. ನಂತರ ವಾಸ್ತವ ಸಂಗತಿ ತಿಳಿದ ಚೋಳಮಹಾ ದೇವಿ ತನ್ನಿಂದಾದ ತಪ್ಪನ್ನು ಒಪ್ಪಿಕೊಂಡು, "'ಯೆಮ್ಮ ಮಕ್ಕಳ ನಾವ್ರ ನೋಯಿಸಿದೆವ್ರ" ಎಂಬುದಾಗಿ ಪಶ್ಚಾತ್ತಾಪ ಪಟ್ಟು ಸತ್ತ ವೀರನ ಮನೆಯವರಿಗೆ ಪರಿಹಾರ ನೀಡುತ್ತಾಳೆ. ಇಲ್ಲಿ ಕೇತಮಲ್ಲನ ದಿಟ್ಟತನಕ್ಕಿಂತಲೂ ಚೋಳಮಹಾದೇವಿಯ ಹಿರಿತನ ನಮ್ಮ ಮನ ಸೆಳೆಯುತ್ತದೆ. ಮಡಿದವನು ಸಾಮಾನ್ಯನೇ ಆದರೂ ತಾನು ದುಷ್ಟಕಷ್ಟರ ಮಾತನ್ನು ಕೇಳಿ ಅವಿವೇಕ ಮಾಡಿದ ಕಾರಣ ಅವನಿಗೆ ಸಾವಾಯಿತು ಎಂದು ಒಪ್ಪಿಕೊಳ್ಳುವ ಔದಾರ್ಯ ಅನುಪಮವಾದುದು.

ಕ್ರಿ.ಶ. ೧೧೯೦ರ ಒಂದು ವೀರಗಲ್ಲು ಗಡಿಕಾಳಗಕ್ಕೆ ಸಂಬಂಧಿಸಿದ ಹಾಗೆ ವಿವರಣೆಯನ್ನು ನೀಡುತ್ತದೆ.[೯೪೧] ಯಿಂದವ್ರರದವರಿಗೂ ಉಪ್ಪರವಳ್ಳಿಯವರಿಗೂ ನಡೆದ ಸೀಮಾ ಸಂಬಂಧದ ಯುದ್ಧದಲ್ಲಿ ಎರಡೂ ಕಡೆಯ ಜನ ಸಾಯುತ್ತಾರೆ. ಆಗ ಅನೇಕ ಹಿರಿಯರು ಸೇರಿ ಎರಡೂ ಕಡೆಯವರಲ್ಲಿ ಯಾರೂ ವಿನಾಕಾರಣ ಸಾಯಬಾರದೆಂದು ಮೇರೆಗಳನ್ನು ನಿರ್ಣಯಿಸುತ್ತಾರೆ. ಇಲ್ಲ ತಮ್ಮ ಊರಿನ ಸೀಮೆಗಾಗಿ ಅಭಿಮಾನದಿಂದ ಹೋರಾಡಿ ಮಡಿದ ವೀರರ ವೀರಾವೇಶಕ್ಕಿಂತಲೂ, ಅವಿವೇಕದಿಂದ, ಒದಗಿದ ಸೀಮಾ ಸಮಬಂಧದ ಸಮಸ್ಯೆಯನ್ನು, ಸಾವ್ರ –ನೋವ್ರಗಳಿಂದ ದೂರ ಮಾಡಿ ಇನ್ನೂ ಸಂಭವಿಸಬಹುದಾಗಿದ್ದ ವಿನಾಕಾರಣ ಮರಣಗಳನ್ನು ತಪ್ಪಿಸಿದ ಹಿರಿಯರ ಬಗ್ಗೆ ಗೌರವ ಭಾವ ಮೂಡುತ್ತದೆ.

ಕ್ರಿ.ಶ. ೧೧೭೩ರ ಒಂದು ವೀರಗಲ್ಲು ನಂಬಿಕಸ್ಥರು ಮಾಡಿದ ಮೋಸಕ್ಕೆ ಒಳಗಾಗಿ ಮಡಿದ ವಿಷಯವನ್ನು ತಿಳಿಸುತ್ತದೆ.[೯೪೨] ಈ ಶಾಸನ ಪಾಠ ಗ್ರಾಮ್ಯವೂ, ದೋಷಪೂರ್ಣವೂ ಆಗಿರುವ್ರದರಿಂದ ಅರ್ಥೈಸುವ್ರದು ಸ್ವಲ್ಪ ಕಷ್ಟ ಕದುಮಬರ ಸಾಮಂತನಾಗಿದ್ದ ಕುಪ್ಪ ಎಂಬುವನನ್ನು ಹಲವು ಜನ ನಂಬಿಸಿ ಕೊಲ್ಲುತ್ತಾರೆ. ಆಗ ಆತನ ಹೆಂಡತಿ ಅವನಿಗೆ ವೀರಗಲ್ಲನ್ನು ಎತ್ತಿಸಿ

೯೪೦. E.C.V. Cn.205, 1200
೯೪೧. M.A.R. 1932, Cm. 12, 1190
೯೪೨. E.C.VIII. Sa. 71, 1173

ಬೀರಗೂಳನ್ನು ಹಾಕುತ್ತಾಳೆ. ಆ ಶಾಸನದ ಕೊನೆಯಲ್ಲಿ ಪಾಠ ಈ ರೀತಿ ಇದೆ ; "ನಂಬಿದಾರ್ದ್ಧನಾ ಕಯಾಲು ಶೆತ್ತು ಕ್ರಿತಾರ್ತ್ತನಾದೆನೆನ್ದು ಸಾಮಾನ್ತಹುಪ್ಪಂ ಪದಾವಳನಪ್ಪಿಗಲಂ ಮಡಿ ಸುರಲ್ಲೋಖ ಪಾಪ್ತಾಗಲೂ....". "ನಂಬಿದಾರ್ದ್ಧನಾ ಕಯಾಲು ಶೆತ್ತು ಕ್ರಿತಾರ್ತ್ತನಾದೆ" ಎಂಬ ಮಾತಿನ ಹಿಂದೆ ಇರುವ ವ್ಯಂಗ್ಯವನ್ನು ಗಮನಿಸಿದರೆ, ಸತ್ತ ವ್ಯಕ್ತಿಗೆ ಆದ ನೋವು ಅರ್ಥವಾದೀತು.

ಕ್ರಿ.ಶ. ೯೫೦ರ ವೀರಗಲ್ಲೊಮದರ ಪಾಠ ಗಮನಾರ್ಹವಾದುದು.[೧೪೩] ಈ ವೀರಗಲ್ಲಿನ ಮುಖ್ಯ ಉದ್ದೇಶ, ಮನಾಲರನು ತನ್ನ ಪ್ರೀತಿಯ ನಾಯಿಯಾದ 'ಕಾಳಿ'ಯ ಹೆಸರಿನಲ್ಲಿ ವೀರಗಲ್ಲೊಂದನ್ನು ನೆಟ್ಟು ಅದಕ್ಕೆ ದತ್ತಿಯನ್ನು ಬಿಟ್ಟ ವಿಷಯವನ್ನು ತಿಳಿಸುವುದು. ಈ ಮುಖ್ಯ ವಿಷಯಕ್ಕೆ ಹೊಂದಿಕೊಂಡಂತೆ ಶಾಸನದ ಪಾಠವನ್ನು ರಚಿಸಿದ ಕವಿ ಉಳಿದ ಸಂಗತಿಗಳನ್ನೂ ತಿಳಿಸುತ್ತಾನೆ. ಅವೆಲ್ಲವೂ ಈ ಮೂಲ ಉದ್ದೇಶಕ್ಕೆ ಒಂದಲ್ಲ ಒಂದು ರೀತಿಯಿಂದ ಮೆರಗನ್ನು ನೀಡುತ್ತವೆ. ಚೋಳರಾಜಾದಿತ್ಯನನ್ನು ಸೋಲಿಸುವಲ್ಲಿ ರಾಷ್ಟ್ರಕೂಟರ ಕಚ್ಚೆಗ ಕನ್ನರ ದೇವನಿಗೆ ಸಹಾಯ ಮಾಡಿದ ಬೂತುಗನೊಂದಿಗೆ ಮನಾಲರನೂ ಹೋರಾಡುತ್ತಾನೆ. ಆ ಯುದ್ಧದಲ್ಲಿ ಕನ್ನರದೇವನ ಪಕ್ಷಕ್ಕೆ ವಿಜಯ ದೊರೆಯುತ್ತದೆ. ವಿಜಯ ಶಾಲಿಗಳಾಗಿ ಹಿಂದಿರುಗುವ ಸಂದರ್ಭದಲ್ಲಿ, ತನ್ನೊಂದಿಗೆ ನೆರವಿಗೆ ಬಂದ ಮನಾಲರನ್ನು ಕುರಿತು ಬೂತುಗ – "ನಿನಗೇನು ಬೇಕು ಕೇಳಿಕೋ' ಎಂದಾಗ ಅವನು ಬೂತುಗನ ಬಳಿಯಿದ್ದ 'ಕಾಳಿ' ಎಂಬ ಹೆಸರಿನ ನಾಯಿಯನ್ನು ಬೇಡುತ್ತಾನೆ. ಇಂತಹ ವಿಜಯೋತ್ಸವದ ಸಂದರ್ಭದಲ್ಲಿ ಪಡೆದ ಈ ನಾಯಿಯನ್ನು ಬೇಟೆಗಾಗಿ ಕೊಂಡೊಯ್ದಾಗ ಹಂದಿಯೊಡನೆ ಹೋರಾಡುವಾಗ ಅದು ಸಾಯುತ್ತದೆ. ಆಗ ಮನಾಲರನು ಆ ನಾಯಿಯ ಹೆಸರಿನಲ್ಲಿ ವೀರಗಲ್ಲನ್ನು ನೆಡುತ್ತಾನೆ. ಇಷ್ಟೆಲ್ಲ ವಿವರಗಳನ್ನು ಕೊಡುವುದರ ಬದಲು 'ನಾಯಿ ಸತ್ತಿತ್ತು. ಅದರ ನೆನಪಿಗಾಗಿ ನೆಟ್ಟಕಲ್ಲು' ಎಂಬ ವಿವರಣೆಯನ್ನು ಕೊಡಬಹುದಿತ್ತು. ಆದರೆ ಆ ನಾಯಿಗೂ ಮನಾಲರನಿಗೂ ಇದ್ದ ಬಾಂಧವ್ಯ ಎಂಥದ್ದು ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ಈ ವಿವರಣೆಯನ್ನು ಶಾಸನಕಾರ ನೀಡಿದ್ದಾನೆ ಎಂಬುದನ್ನು ಗಮನಿಸಬೇಕು. ವಿಜಯೋತ್ಸವದ ಸಂದರ್ಭದಲ್ಲಿ ಮನಾಲರನು ತನಗೆ ಬೇಕಾದದ್ದನ್ನು ಕೇಳಬಹುದಿತ್ತು. ಹಾಗೆ ಕೇಳಲು ಅವನಿಗೆ ಅವಕಾಶ ಅರ್ಹತೆಗಳೆರಡೂ ಇದ್ದಾಗಲೂ ಕಾಳಿಯೆಂಬ ನಾಯಿಯನ್ನೇ ಬಯಸುತ್ತಾನೆ. ಇದರಿಂದ ಮನಾಲರನಿಗೂ ಆ ನಾಯಿಗೂ ಇದ್ದ ಆತ್ಮೀಯ ಸಂಬಮಧದ ಪರಿಚಯವಾಗಿ, ಅದರ ಬಗ್ಗೆ ನಿಲ್ಲಿಸಿರುವ ವೀರಗಲ್ಲಿನಿಂದ ಆ ಪರಿಚಯದ ತೀಕ್ಷ್ಣತೆಯ ಬಗ್ಗೆ ಆಶ್ಚರ್ಯವಾಗುತ್ತದೆ.

---

೧೪೩. E.C.III. Md. 41, 950

ವೀರಗಲ್ಲುಗಳ ನಿರೂಪಣಾ ತಂತ್ರ

ಆರಂಭದ ವೀರಗಲ್ಲುಗಳಿಂದ ಹಿಡಿದು ವಿಜಯನಗರದ ಅರಸರ ಕಾಲದವರೆಗಿನ ವೀರಗಲ್ಲುಗಳ ಪಾಠಗಳ ನಿರೂಪಣಾ ವಿಧಾನವನ್ನು ಗಮನಿಸಿದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅವು ಬಹುಪಾಲು ನೇರವಾಗಿ ವೀರನು ಮಡಿದ ತೇದಿ, ಯುದ್ಧ ಅವನಿಗೆ ಅರಸರೋ ಇನ್ನಿತರರೋ ಬಿಟ್ಟ ದತ್ತಿಯ ವಿವರ, ನಡುವೆ ವೀರರ ಪರಾಕ್ರಮಗಳನ್ನು, ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ದ ವರ್ಣನೆಯನ್ನು ನಿರೂಪಿಸಿವೆ. ಈ ತಂತ್ರವನ್ನೇ ಯಶಸ್ವಿಯಾಗಿ ಕೆಲವಾರು ಶಾಸನ ಕವಿಗಲು ಬಳಸಿರುವದನ್ನು ಗಮನಿಸಬಹುದು. ಈ ದೃಷ್ಟಿಯಿಂದ ಮಾವಲೀಯ ವೀರಗಲ್ಲಿನ ಪಾಠ ಗಮನಾರ್ಹವಾಗಿದೆ. ಈ ವೀರಗಲ್ಲು ರಾಜಾದಿತ್ಯ ಮತ್ತು ಕಾಕರಸರು ಚಿತ್ರವಾಹನನ ವಿರುದ್ಧ ಮಾಡಿದ ಯುದ್ಧದಲ್ಲಿ ಚಿತ್ರವಾಹನನ ಪರವಾಗಿ ಪೆರ್ಗುಂಜಿಯ ಕೋಟೆಯಲ್ಲಿ ಹೋರಾಡಿ ಮಡಿದ ಕುಲಮುದ್ದನ ವಿಷಯವನ್ನು ತಿಳಿಸುತ್ತದೆ.

"'ಸ್ವಸ್ತಿ ಪ್ರಭೂತವರ್ಷ ಶ್ರೀ ಪೃಥಿವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಾ ಭಟ್ಟಾರಕ ಶ್ರೀ ಗೋಇನ್ದರಸರ್ಚ್ಚತುಸ್ಸಮುದ್ರಾನ್ತ ವಸುಧೆಯಾ ಧವಳೈಕಛತ್ರಛಾಯೆ ಇನ್ದಾಳೆ ಬನವಾಸಿಮಣ್ಡಲಮಾನಾ ಸಮುದ್ರಾನ್ತ ರಾಜಾದಿತ್ಯರಾಸರ್ ಆಲೆ ಆಳುವಖೇಡಮಱುಸಾಸಿ ರನುಮಾನ್ ಚಿತ್ರವಾಹನನಾಳುತ್ತುಂ ಬಾಯ್ಕೇಳದಿರೆ ಮುನಿದು ಕೊಲ್ಲಿ ಪಲ್ಲವ ನೊಳಮ್ಬರಾದಿತ್ಯ ನನ್ವೆಸಲಾ ಕಾಕರಾಸರುಮೇಟ್ಟು ಪೊಱಮಟ್ಟು ಬಿಲ್ವಲ್ಲಳ್ಕದುರೆ ಕುದುರೆಯೊಳ್ಕಿಟ್ಟಿ ಅತಿತುಮುಲ ಕಾಳೆಗಪೆಟ್ಟಿ ಬಲದಕಯ್ಯಂ ಚಿತ್ರವಾಹನನೊತ್ತಿ ಪುಗುತ್ತನ್ದು ಕಾದಿಸೆಕಣ್ಡು ಕುಲಮುದ್ದ ನೀನೀಕಯ್ಯ ಪೊಕ್ಕು ಕಾದೆನ್ದು ಬೆಸೆಸೆ ಪ್ರಸಾದಮೆನ್ದುಯ್ದಿ ಕಿಟ್ಟಿಕಾದಿ ಮಱುವಕ್ಕದುವರ ಮೆಯ್ಮೆಯ್ಯಮ್ಬಾಗೆ ಎಚ್ಚೋಡಿಸಿ ಆ ಕಯ್ಯಂ ಗೆಲ್ದು ತಾನುಂ ಪಲವುಂ ಎಸುವೆತ್ತು ಎಯ್ದೊದೊದಪ್ಪಿದ ಪ್ಪೊಲ್ಕಣೆ ಪಂಜರದೊಳೆಟಿಗಿ ಭೀಷ್ಮನ್ವಿಟ್ದನ್ತೆ ನೆಲಮುಟ್ಟದೆ ಬಿಟೆರ್ದ್ದೋನಾನ್ದೇವಗಣಿಕ್ಕೆಯರಾರ್ಗ್ಘ್ಯಮ್ಬಿಡಿದು ಬನ್ದಿದಿರ್ಗ್ಗೊಣ್ಡುಯೆ ವೀರಲೋಕಕ್ಕೆ ಸನ್ದೋನ್."[೧೪೪] ಇನ್ನು ಮುಂದೆ ದತ್ತಿಯನ್ನು ನೀಡಿದ ವಿಷಯ ಬರುತ್ತದೆ. ಈ ಭಾಗದ ಅರ್ಥ ಸ್ಪಷ್ಟವಾಗುವುದಿಲ್ಲ. ಈ ಭಾಗ ಯಾವ ರೀತಿಯಲ್ಲೂ ಮೊದಲ ಭಾಗಕಕ್ಕೆ ಇಂಬುಕೊಂಡುವಂತಿಲ್ಲದರ ಕಾರಣ ಅದನ್ನು ಇಲ್ಲಿ ಕೈಬಿಟ್ಟಿದ್ದೇವೆ.

ಈ ಶಾಸನಪಾಠದ ನಿರೂಪಣಾ ವಿಧಾನ ಮತ್ತು ಭಾಷೆ ತುಂಬಾ ಸರಳವಾಗಿದೆ. ಈ ಸರಳತನದಲ್ಲಿಯೇ ಕನ್ನಡ ಗದ್ಯದ ಎಲ್ಲಾ ಸಾಧ್ಯತೆಗಳನ್ನೂ ಯಶಸ್ವಿಯಾಗಿ ಉಪಯೋಗಿಸಿಕೊಂಡು ಯುದ್ಧದ ಸಂಪೂರ್ಣ ಚಿತ್ರವನ್ನು, ಕುಲಮುದ್ದನ ಪರಾಕ್ರಮವನ್ನು, ಸ್ವಾಮಿನಿಷ್ಠೆಯನ್ನು ತಿಳಿಸುವಲ್ಲಿ ಯಶಸ್ವಿಯಾಗಿದೆ. ""ಪೆರ್ಗ್ಗುಂಜಿಯ ಕೋಟೆಯಾನ್‌ರೋಹಿಸಿ ಬಿಟ್ಟು", ಎಂಬ ವಾಕ್ಯ

೧೪೪. E.C.VIII. Sb. 10, 800

ಕೋಟೆಯನ್ನು ಆಕ್ರಮಣ ಮಾಡುವ ವೀರರ ಹುರುಪನ್ನು ಸಮರ್ಥವಾಗಿ ತಿಳಿಸಿಕೊಡುತ್ತದೆ. ""ಎರಡುಮ್ಬಲದ ವೀರಭಟರ್ಕ್ಕಳೊಟ್ಟಿ ಪೊಱಮಟ್ಟು ಬಿಲ್ವಲ್ಲಳ್ಕುದುರೆ ಕುದುರೆಯೊಳ್ಕಿಟಿ ಅತಿ ತುಮುಲ ಕಾಗಳಪೆಟ್ಟಿ" ಎಂಬ ವಾಕ್ಯಗಳು ಯುದ್ಧದ ಒಂದು ಚಿತ್ರವನ್ನು ನಮ್ಮ ಮುಂದೆ ತಂದಿಡುತ್ತದೆ. ""ಕುಲಮುದ್ಧ ನೀನೀಕಯ್ಯಪೊಕ್ಕು ಕಾದು" ಎಂಬ ಮಾತು ಯುದ್ಧರಂಗಲದಲಿ ಹೇಗೆ ಶತ್ರುಗಳನ್ನು ಎದುರಿಸಲು ಪ್ರಯತ್ನಿಸುತ್ತಿದ್ದರು ಎಂಬ ಅಂಶವನ್ನು ತಿಳಿಸುತ್ತದೆ. ""ಮಱುವಕ್ಕದವರ ಮೆಯ್ಮೆಯ್ಯೆಮ್ಬಾಗೆ" ಶರಣಾಗತರಾಗದವರ ಮೈಯನ್ನು ಬಾಣಗಳಿಂದ ಗಾಯಪಡಿಸಿದ ಎಂಬೀ ಮಾತು ಶರಣಾಗತರಾದವರನ್ನು ಕಾಪಾಡಿದ ಎಂಬ ಅರ್ಥವನ್ನು ಧ್ವನಿಸುವುದರ ಮೂಲಕ ಯುದ್ಧದ ನಿಯಮವನ್ನು ತಿಳಿಸುತ್ತದೆ. ಶಾಸನದ ಕೊನೆಯಲ್ಲಿ ಬರುವ "ಕಣೆಪಂಜರದೊಳೆಱಗಿ ಭೀಷ್ಮನ್ತಿದ್ದನ್ತೆ" ಎಂಬ ಮಾತು ಕುಲಮುದ್ದನ ಬಗ್ಗೆ ಗೌರವವನ್ನು ಹೆಚ್ಚಿಸುತ್ತದೆ.

ಹೀಗೆ ನೇರವಾಗಿ ಹೇಳಿಯೂ ವೀರನ ಚಿತ್ರವನ್ನು ಸಾರ್ಥಕವಾಗಿ ನೀಡುವ ವೀರಗಲ್ಲುಗಳ ಪಾಠ ತೀರಾ ವಿರಳವೆಂದೇ ಹೇಳಬೇಕು. ಈ ಏಕತಾನತೆಯಿಂದ ಬಿಡಿಸಿಕೊಂಡು, ವಿಷಯ ನಿರೂಪಣಾ ತಂತ್ರವನ್ನೇ ಬದಲಾಯಿಸಿ, ವೀರನ ಚಿತ್ರವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ನೀಡಲು ಪ್ರಯತ್ನಪಟ್ಟು ಯಶಸ್ವಿಯಾಗಿರುವ ಶಾಸನಕವಿಗಳನ್ನು ಗಮನಿಸಬಹುದು. ಈ ರೀತಿಯ ಪ್ರಯತ್ನಗಳ ವೈವಿಧ್ಯವನ್ನು ಸ್ವಲ್ಪಮಟ್ಟಿಗೆ ಪರಿಚಯ ಮಾಡಿಕೊಳ್ಳೋಣ.

ಕ್ರಿ.ಶ. ೯೪೦ರ ವೀರಗಲ್ಲೊಂದರಲ್ಲಿ ಶಾಸನದ ಆರಂಭದಿಂದಲೇ ವೀರನನ್ನು ಹೊಗಳುವ ಕೀರ್ತಿಸುವ ಪ್ರಯತ್ನ ಮಾಡಿರುವುದನ್ನು ಗಮನಿಸಬಹುದು. ಅನಂತರ ಆ ಶಾಸನ – ವೀರನು ಹೇಗೆ ತನ್ನ ಒಡೆಯನ ಪರವಾಗಿ ಹೋರಾಡುವ ಯುದ್ಧದಲ್ಲಿ ಮೊದಲೇ ತನ್ನ 'ಸಾವನ್ನು ನಿಶ್ಚಯಿಸಿ' ಎರಡೂ ಕಡೆಯ ಸೈನಿಕರು ಹೊಗಳುವಂತೆ ಹೋರಾಡಿ ಮಡಿದ ಎಂಬ ವಿಷಯವನ್ನು ನಿರೂಪಿಸುತ್ತದೆ.[೧೪೫] ಕ್ರಿ.ಶ. ೯೫೦ರ ಮತ್ತೊಂದು ವೀರಗಲ್ಲು, ವೀರನು ಯಾವ ಯುದ್ಧದಲ್ಲಿ, ಏಕೆ ಮಡಿದ ಎಂಬ ವಿವರಣೆಯನ್ನು ನೀಡದೆ ವೀರನು ಮಾಡಿದ ಹೋರಾಟವನ್ನು, ಅದರಲ್ಲಿ ಅವನು ತೋರಿಸಿದ ಪರಾಕ್ರಮವನ್ನೂ ನಿರೂಪಿಸುತ್ತದೆ.[೧೪೬]

ಕೆಲವು ವೀರಗಲ್ಲುಗಳ ಪಾಠಗಳು ಆರಂಭದಿಂದಲೇ ವೀರನ ಪರಾಕ್ರಮವನ್ನು ಹೊಗಳುವುದರ, ಆ ಸಂದರ್ಭವನ್ನು ನಾಟಕೀಯವಾಗಿ ಆರಂಬಿಸುವುದರೊಂದಿಗೆ ಮೊದಲಿಟ್ಟು, ಆನಂತರ ವೀರನು ಮಾಡಿದ ಯುದ್ಧದ ವಿವರಗಳನ್ನು ತಿಳಿಸುತ್ತವೆ.

ಕ್ರಿ.ಶ. ೧೧೧೭ರ ಒಂದು ವೀರಗಲ್ಲಿನ ಪಾಠ ಹೀಗಿದೆ.[೧೪೭]

---

೧೪೫. E.C.II. Sb.138, 940

೧೪೬ ಅದೇ. ೧೩೯, ೯೫೦

೧೪೭. M.A.R. 1934, 12, 1117

""ಬಿಟ್ಟಿದೇವನ ತಳಕಾರ ಹರಿಯಿಟ್ಟಡೆ ಆದಿಯಮನಿದಿರಾನ್ತು ಕಾದಿ ಆನೆಯನೊತ್ತಿ ಕಾದುತ್ತಿಹಲ್ಲಿ ಬಿಟ್ಟಿದೇವ ಹೊಯ್ಸಳಸಾಹಣಿ ಬಾಸಯನ ಕರೆದೊರೆಯೆ ಆನೆಯಂ ಮಗುಚ್ಚೆ... ಹರಿಯಿಸಿ ಕಾದಿ ಮೇಲಾಳಿರ್ಪ್ಪರ ಕೊಂದು ಕಾಲಾಳಿರ್ಪ್ಪರ ನಿಱಿದು ಜೋಳವಾಳಿಯನೆಱೆದ ಬಾಸಿ ಸಖ ವರ್ಷ ೧೦೩೯ನೆಯ ಹೇಮಳಂಬಿ ಸಂವತ್ಸರ ಮಾರ್ಗಶಿರ ಮಾಸ ಕ್ರಿಷ್ಣತ್ರಯೋದಿಸಿ ಸುಕ್ರವಾರದಂದು ತಂನ ಜೀವಿತಮಂ ಮು?ಣ್ಡ ಜೀವಿತನಾಗಿ ನಿಲಿಸಿದ". ಎಂಬುದಾಗಿ ಮುಂದುವರೆಯುತ್ತದೆ.

ಇದೇ ತಂತ್ರವನ್ನು ಇದಕ್ಕಿಂತಲೂ ಪರಿಣಾಮಕಾರಿಯಾದ ರೀತಿಯಲ್ಲಿ ಕ್ರಿಶ. ೧೨೨೧ರ ವೀರಗಲ್ಲಿನ ಶಾಸನದ ಕವಿ ಬಳಸಿರುವುದನ್ನು ಗಮನಿಸಬಹುದು.[೧೪೮] ಆ ಶಾಸನದ ಆರಂಭವೇ ಹೀಗಾಗುತ್ತದೆ.

""ಶ್ರೀ............ತೊಲತೊಲಗೆಂದು ಮಾರ್ಮ್ಮಲೆ ವಜ್ಜನ ಸೇನೆಯೆ ನೊಕ್ಕಲಿಕ್ಕಿ ತಾಂ
ತೊಲಗದೆ ನಿಂದು ವಐರಿ ಭಟರಂ ತವೆ ಕೊಂದು ರಣಾಜಿರಂಗದೊಳ್
ಮಲೆದಿದಿರಾಂತರಂತಱಿದು ಕಂಣ್ಬಸವೊತ್ತು ವಿನೊಂದು ತಳ್ಗಿನಿಂ
ಕಲಿತನಮಂ ನ್ರಿಸಿಂಹ ನರನಾಥನ ನಾಯಕ ಬೊಂಮನುರ್ವ್ವಿಯೊಳ್

ಬಱಸಿಡಿಲೆಱಗುವ ತೆಱದಿಂ
ದುಱದಾಂತರ ನಿಕ್ಕಿ ಪೊಕ್ಕು ಸಂಗರ ಧರೆಯೊಳು
ಕುಱಿದಱಿದಂ ಪಲಬ (ರ)
ನುಱೆಗಲಿ ನಿಟ್ಟೂರ ಮಾಚಗೌಂಡನ ಬಮ್ಮಂ

ಯಿದುಱಿದು ವಿರ್ದ್ದ ಬಮ್ಮವನಕಾಸುರಕಾನ್ನೆಯಿಕ್ಕನೆಮಗೆಮಗೆಂಬಾತಿಱನಿರವಮ್ಮುಣ್ಮಿತಿರೆ ಸಂತೋಷದಿಂದಿರ್ಗೊಂಡರಂದು ಸುರಲೋಕ ದಳಂ" – ಹೀಗೆ ತಿಳಿಸಿ. ಆ ನಂತರ ಅವನು ಯಾವ ಯುದ್ಧದಲ್ಲಿ ಮಡಿದ ಮುಂತಾದ ವಿವರಗಳನ್ನು ನೀಡುತ್ತದೆ. ಶಾಸನವನ್ನು ಓದಲು ಆರಂಭಿಸಿದ ಕೂಡಲೇ ಯುದ್ಧರಂಗದ ಮೂದಲಿಕೆಗಳ ಕಟಕಿ, ಆ ಮೂದಲಿಕೆಗಳನ್ನು ಲೆಕ್ಕಿಸದೆ ಹೋರಾಡಲು ಸಿದ್ಧರಿರುವ ವೀರರ ವೀರತ್ವ, ""ಬಱಸಿಡಿ ಲಂತೆರಗುವ" ಯೋಧರ ಉತ್ಸಾಹ ನಮಗೆ ಅನುಭವ ವೇದ್ಯವಾಗುತ್ತದೆ.

ಕ್ರಿಶ. ೧೨೪೫ರ ಒಂದು ವೀರಗಲ್ಲಿನ ಶಾಸನದ ಕವಿ, ವೀರನ ಪರಾಕ್ರಮವನ್ನು ಅವನ ಅರಸನಿಗೆ ನಿವೇಧನೆ ಮಾಡುವ ತಂತ್ರದಲ್ಲಿ ನಿರೂಪಿಸಿದ್ದಾನೆ.[೧೪೯] "ವೀರನ್ರಿಪಾಳ ಕೇಳು' ಎಂಬ ಸಂಬೋಧನೆಯಿಂದಲೇ ಆರಂಭವಾಗುವ ಆ ಶಾಸನದ ಪಾಠ.

೧೪೮. E.C.V. Hn.105, 1221
೧೪೯. E.C.VII. HI.54, 1245

"'ವೀರನ್ರಿಪಾಳ ಕೇಳು ಕಲಿಗಳಂಕುಸ ನಿಂನಯ ರಾಯರಾಉತರ್ಬ್ಬೋರನೆಲೆ............ ಮಾಮಲೆ ದಿದಿರ್ಚ್ಚಿದ ವೀರ ವಿರೋಧಿ ಸೈನ್ಯಮಂ ಭೈರವನಂ.......... ಬಪನಂ...........ನೆಂದು ಪೊಣ್ದುನಂ ವೀರದ ಸೇತುವಿನ ಬಂಮ್ಮಯನಂ ನೆಗಳ್ದಂ ಜಗತ್ರಯಂ" –ಎಂಬುದಾಗಿ ತಿಳಿಸಿ ಅನಂತರ ವೀರನು ಮಾಡಿದ ಯುದ್ಧದ ವಿವರಗಳನ್ನು ನೀಡುತ್ತದೆ.

ಸುಮಾರು ಹನ್ನೆರಡನೆಯ ಶತಮಾನಕ್ಕೆ ಸೇರಿದ ವೀರಗಲ್ಲಿನ ಪಾಠ ಈ ರೀತಿ ಇದೆ.[೧೫೦]

"'[ದಿ]ಲ್ಲಿಯ [ಕೇ]ಳಿದಡೆ ಕಂಣಿಕ [ಸಿ ಹೇಸಱ] ಬಿತ್ತುದೆಮದು ಮಿಕ್ಕೆಲ್ಲ ನ್ರುಪಾ [ಲ] ರೆ (೦)ಮ್ಮ ನೊರ್ಪ್ಪನು ಸತ್ತುದೆಂ [ದರಾ] ಬಲ್ಲಿ ಕಂಪಿಲ ಸಿಡಿಲ ಬೊಮ್ಮನು ಸತ್ತಡೆ ಅಕ್ಕಟೆಂದ ಯಿಂತೆಲ್ಲರು ಚಿಂತಿಸುತ್ತಿಹುದು ಯೇನರಿದೋ ಧವಳಂಕ ರಾಮನಾ'"

ಉಳಿದ ಯಾವ ವಿವರಗಳನ್ನೂ ನೀಡುವ ಗೋಜಿಗೆ ಹೋಗದೆ ಶಾಸನಕಾರನು ಆ ವೀರನ ಬಗ್ಗೆ, ಜನರಿಗೆ ಇದ್ದ ಗೌರವವನ್ನೂ "'ಅಕ್ಕಟೆಂದು ಯಿಂತೆಲ್ಲರು ಚಿಂತಿಸುತ್ತಿಹುದು" ಎಂಬ ಒಂದು ಮಾತಿನಲ್ಲಿ ಅವನನ್ನು ಕಳೆದುಕೊಮಡು ದಿಕ್ಕುಗೆಟ್ಟ ಜನತೆಯ ದುಃಖವನ್ನೂ ಬಹಳ ಸೂಚ್ಯವಾಗಿ ನಿರೂಪಿಸಿದ್ದಾನೆ. ಉಳಿದ ವೀರಗಲ್ಲುಗಳ ಪಾಠ ವೀರನ ಪರಾಕ್ರಮವನ್ನು ಸಾರುವ ವೀರಪ್ರಶಸ್ತಿಗಳಾದರೆ, ಇದು ವೀರನ ಬಗ್ಗೆ ಬರೆದ ಶೋಕ ವಾಕ್ಯವಾಗಿದೆ.

---

೧೫೦. S.I.I. XX.294, ಸು. ೧೨ನೇ ಶತ.

೭. ವೀರಗಲ್ಲುಗಳ ಶಿಲ್ಪ

ಭಾರತೀಯ ಮೂರ್ತಿ ಶಿಲ್ಪದಲ್ಲಿ ಕರ್ನಾಟಕದ ಮೂರ್ತಿ ಶಿಲ್ಪಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಈ ಒಂದು ವಿಶಿಷ್ಟಸ್ಥಾನವನ್ನು ಕಲ್ಪಿಸಿಕೊಡುವಲ್ಲಿ ವೀರಗಲ್ಲುಗಳ ಶಿಲ್ಪಿಗಳ ಕೊಡುಗೆಯು ಕಡಿಮೆಯೇನಲ್ಲ. ಭಾರತದ ಇತರ ಪ್ರದೇಶಗಳಲ್ಲಿ ದೊರೆಯುವ ಸ್ಮಾರಕ ಶಿಲೆಗಳಿಗಿಂತ ಪ್ರಬುದ್ಧ ನಿರೂಪಣಾ ಶೈಲಿಯನ್ನೂ, ಜೀವಂತ ಭಾವಾಭಿವ್ಯಕ್ತಿಯನ್ನು ನಾವು ಕರ್ನಾಟಕದ ಸ್ಮಾರಕಶಿಲೆಗಳ ಶಿಲ್ಪದಲ್ಲಿ, ಶಿಲ್ಪವಿನ್ಯಾಸಕ್ರಮದಲ್ಲಿ ಗುರುತಿಸಬಹುದು.

ಉತ್ತರಭಾರತದ ಹಲವಾರು ಗುಡ್ಡಗಾಡು ಜನಾಂಗಗಳವರು ಇಂದಿಗೂ ಸ್ಮಾರಕ ಶಿಲೆಗಳನ್ನು ನೆಡುವ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ.* ಆ ಸ್ಮಾರಕ ಶಿಲೆಗಳ ಶಿಲ್ಪಗಳೊಡನೆ ಕರ್ನಾಟಕದ ಸ್ಮಾರಕ ಶಿಲೆಗಳ ಶಿಲ್ಪ ಮತ್ತು ಉದ್ದೇಶಗಳನ್ನು ಹೋಲಿಸಿ ವಿಶ್ಲೇಷಿಸಿದಾಗ ಕರ್ನಾಟಕ ಸ್ಮಾರಕ ಶಿಲೆಗಳ ಮಹತ್ವ ನಮಗೆ ಹೆಚ್ಚು ಸ್ಪಷ್ಟವಾಗುತ್ತದೆ. ಉತ್ತರಭಾರತದ ಕೊರಕು, ಮಾರಿಯಾ, ಭಿಲ್ಲ ಜನಾಂಗಗಳವರು ಮಡಿದ ವ್ಯಕ್ತಿಯ ಸ್ಮಾರಕವನ್ನು ಶಿಲ್ಪದೊಡನೆ ಶಿಲೆಯಲ್ಲಿಯೋ, ಮರದಲ್ಲಿಯೋ ಮಾಡಿ ನಿಲ್ಲಿಸುತ್ತಾರೆ. ಈ ಶಿಲ್ಪದ ವಿವರಗಳು ಮಡಿದ ವೀರನ ಜೀವನವನ್ನು ವೈಭವೀಕರಿಸಿರುವಂಥದ್ದಾಗಿರುತ್ತದೆ. ಅಂದರೆ ; ಸತ್ತ ವ್ಯಕ್ತಿ ತನ್ನ ಜೀವನದಲ್ಲಿ ಬಂದೂಕಿನ ಹೆಸರನ್ನು ಕೇಳದೇ ಇದ್ದರೂ ಅವನು ಬಂದೂಕು ಹಿಡಿದು ಹೊಡೆಯುತ್ತಿರುವಂತೆಯೂ, ಹುಲಿಯನ್ನು ಕಾಣದೇ ಸತ್ತವನು ಹುಲಿಯೊಡನೆ ಹೋರಾಡುತ್ತಿರುವಂತೆಯೂ, ತನ್ನ ಜೀವನದಲ್ಲಿ ಬಸ್ಸನ್ನು, ಹೋಗಲಿ ಎತ್ತಿನ ಚಕ್ಕಡಿಯನ್ನು ಹತ್ತದವನು ಸುಂದರವಾದ ಕಾರಿನಲ್ಲಿ ಕುಳಿತು ಹೋಗುತ್ತಿರುವಂತೆ ಬಿಡಿಸಿರುತ್ತಾರೆ. ಈ ತೆರನ ಅನೇಕ ನಿದರ್ಶನಗಳನ್ನು ನೀಡುತ್ತಾ ಹೋಗಬಹುದು.

---

* ಈ ಬಗ್ಗೆ ಮಧ್ಯಪ್ರದೇಶದ ಗುಡ್ಡಗಾಡು ಜನಾಂಗಗಳನ್ನು ಎರಡು ವರ್ಷಗಳ ಕಾಲ ಅಧ್ಯಯನ ಮಾಡಿರುವ ಡಾ. ಕೃಷ್ಣಾನಂದ ಕಾಮತರು ಮಾಹಿತಿ ನೀಡಿದ್ದಾರೆ. ಅವರ ಬಳಿ ಈ ತೆರನ ಸ್ಮಾರಕ ಶಿಲೆಗಳ. ಕೊರಡುಗಳ ಅನೇಕ ಛಾಯಾ ಚಿತ್ರಗಳು ಇವೆ.

ಇಲ್ಲಿ ಆ ಸ್ಮಾರಕ ಶಿಲೆಯನ್ನು ಮಾಡಿದ ವ್ಯಕ್ತಿಯ ಬುದ್ಧಿವಂತಿಕೆ ಮತ್ತು ಮಡಿದವನ ಆತ್ಮ ಸುಖ ಸಂತೋಷಗಳಲ್ಲಿರಲಿ ಎಂಬ ಅವನ ಸಂಬಂಧಿಗಳ ಆಶಯ ಮಹತ್ತರವಾದ ಪಾತ್ರವನ್ನು ವಹಿಸಿವೆ. ಆದರೆ ಕರ್ನಾಟಕದ ಸ್ಮಾರಕ ಶಿಲೆಗಳು ಆ ರೀತಿಯಲ್ಲ. ವಾಸ್ತವ ಸಂಗತಿಯನ್ನೆ ನಿರೂಪಿಸುವಂಥ ಅಧಿಕೃತ ದಾಖಲೆಗಳಾಗಿವೆ. ವ್ಯಕ್ತಿ ಯಾವ ಒಂದು ಜೀವನ ಮೌಲ್ಯಕ್ಕಾಗಿ ತನ್ನ ಪ್ರಾಣವನ್ನು ತ್ಯಾಗಮಾಡಿದನೋ ಅದೇ ಘಟನೆ, ಮೌಲ್ಯ ಅವರ ಸ್ಮಾರಕ ಶಿಲೆಗಳಲ್ಲಿ ನಿರೂಪಿತವಾಗಿರುತ್ತವೆ. ಆದ್ದರಿಂದ ಆ ವ್ಯಕ್ತಿಯ ಬದುಕಿಗೂ ಶಿಲ್ಪಕ್ಕೂ ತೀರಾ ಹತ್ತಿರ ಸಂಬಂಧವಿರುತ್ತದೆ. ನಮ್ಮ ಈ ಅಭಿಪ್ರಾಯ ಕರ್ನಾಟಕದಲ್ಲಿ ದೊರೆಯುವ ನಿಷಿಧಿ ಕಲ್ಲು, ಮಾಸ್ತಿಗಲ್ಲು ಆತ್ಮಬಲಿದಾದನ ಮಾಡಿಕೊಂಡವರ ಸ್ಮಾರಕಗಳು. ಹೋರಾಟದಲ್ಲಿ ಮಡಿದವರ ವೀರಗಲ್ಲುಗಳ ಶಿಲ್ಪವನ್ನು ಪರಿಶೀಲಿಸಿದರೆ ಇನ್ನೂ ಖಚಿತವಾಗುತ್ತದೆ. ಉತ್ಪ್ರೇಕ್ಷೆ ಎಂಬುದು ಇಲ್ಲವೇ ಇಲ್ಲ ಎಂಬುದು ನಮ್ಮ ಅಭಿಪ್ರಾಯವಲ್ಲ. ಈ ಉತ್ಪ್ರೇಕ್ಷೆಯೂ ಸಹ ಸಮಕಾಲೀನ ಬದುಕಿನೊಡನೆ ತೀರಾ ಹತ್ತಿರದ ಸಂಬಂಧವನ್ನು ಹೊಂದಿರುತ್ತವೆ.

ಕರ್ನಾಟಕದ ವೀರಗಲ್ಲುಗಳ ಶಿಲ್ಪವನ್ನು ನೋಡಿದ ಕೂಡಲೇ ನಮ್ಮ ಮನಸೆಳೆಯುವ ಒಂದು ವಿಶಿಷ್ಟವಾದ ಅಂಶವೆಂದರೆ : ಶಿಲ್ಪಿಯು ಒಂದು ಘಟನೆಯನ್ನು ಒಂದು ಚೌಕಟ್ಟಿನಲ್ಲಿ ತಂದು ಜೋಡಿಸಿರುವ ಸಂಯೋಜನೆ. ಇದು ಆಯಾ ಶಿಲ್ಪಿಗಳ ವೈಯಕ್ತಿಕ ಪ್ರತಿಭೆಯನ್ನು ಅನುಸರಿಸಿ ಅನೇಕ ಕಡೆ ಯಶಸ್ವಿಯಾಗಿದೆ. ಶಿಲ್ಪಿಗಳು ತಮಗಿರುವ ಸೀಮಿತ ಚೌಕಟ್ಟಿನಲ್ಲಿ ಯುದ್ಧದ ಪರಿಣಾಮಕಾರಿ ಚಿತ್ರವನ್ನು ನೀಡಬೇಕು. ಇಲ್ಲಿ ಅವನಿಗೆ ಎದುರಾಗುವ ಸಮಸ್ಯೆಗಳು ಹಲವಾರು. ಇಡೀ ಯುದ್ಧದ ಚಿತ್ರಣವನ್ನು ಬಿಡಿಸುವುದೆಂದರೆ ಅಸಾಧ್ಯದ ಮಾತು. ಹಾಗೆ ಬಿಡಿಸಿದರೂ ಅದು ಲಕಸುಮೇಲೋಗರವಾಗುತ್ತದೆ. ಆಗ ಯಾವುದೂ ಸ್ಪಷ್ಟವಾಗುವುದಿಲ್ಲ. ವೀರನು ತನ್ನ ಶತ್ರುವಿನೊಡನೆ ಹೋರಾಡುತ್ತಿರುವಂತೆ ಶಿಲ್ಪವನ್ನು ಬಿಡಿಸಿದರೆ ಇಡೀ ಚೌಕಟ್ಟು ಬಣಗುಟ್ಟುತ್ತದೆ ಮತ್ತು ವೀರನ ವೀರತನವನ್ನು ಅದು ಅಷ್ಟು ಪರಿಣಾಮಕಾರಿಯಾಗಿ ಅಭಿವ್ಯಕ್ತ ಗೊಳಿಸುವುದಿಲ್ಲ. ಈ ಎರಡೂ ದೋಷಗಳನ್ನು ನಾವು ವೀರಗಲ್ಲುಗಳ ಶಿಲ್ಪದಲ್ಲಿ ಗುರುತಿಸಬಹುದು. ಹಾಗೆಯೇ ಶಿಲ್ಪಿಗಳು ಈ ದೋಷಗಳನ್ನು ಗಮನಿಸಿ ಅವುಗಳಿಂದ ವಿಮುಕ್ತರಾಗುವ ಪ್ರಯತ್ನಗಳನ್ನು ನಡೆಸಿರುವುದನ್ನು ನಾವು ಗಮನಿಸಬಹುದು. ಈ ದೋಷವನ್ನು ಪರಿಹರಿಸಿಕೊಳ್ಳಲು ಕರ್ನಾಟಕದ ಶಿಲ್ಪಿಗಳು ಮಾಡಿದ ಅಥವಾ ಅನುಸರಿಸಿದ ಒಂದು ನಿರೂಪಣಾ ವಿಧಾನ ಅಥವಾ ತಂತ್ರವೆಂದರೆ ವೀರ ಮತ್ತು ಪ್ರತಿವೀರರನ್ನು ಚೌಕಟ್ಟಿನಲ್ಲಿ ದೊಡ್ಡದಾಗಿ ಬಿಡಿಸಿ ಅವರ ಹಿನ್ನೆಲೆಯಲ್ಲಿ ಈ ವೀರರ ಶಿಲ್ಪಗಲ ಅಳತೆಗಿಂತಲೂ ಚಿಕ್ಕದಾಗಿ ಆದರೂ ಪ್ರಮಾಣ ಬದ್ಧವಾಗಿ ಇತರ ವೀರರ ಹೋರಾಟವನ್ನು ನೀರೂಪಿಸುವ ವಿಧಾನ. ಈ ರೀತಿಯ ಒಂದು ತಂತ್ರ ಯುದ್ಧರಂಗದ ಒಂದು ಭಾಗವನ್ನು ನಮ್ಮ ಮುಂದಿಟ್ಟಂತೆಯೂ ಅದರಲ್ಲಿ ವೀರ ಮತ್ತು ಪ್ರತಿವೀರನ ಹೋರಾಟವನ್ನು ನಾವು

ಗಮನಿಸುತ್ತಿರುವಂತೆಯೂ ಆ ಹೋರಾಟದ ಹಿನ್ನೆಲೆಯಲ್ಲಿ ಇತರರ ಹೋರಾಟ ಅಥವಾ ವೀರನಿಂದ ಹತರಾದವರ, ವೀರನ ಮೇಲೆ ಎರಗುತ್ತಿರುವವರ ಚಿತ್ರ ಕಾಣುತ್ತಿರುವಮತೆಯೂ ನಿರೂಪಿಸಲಾಗಿರುತ್ತದೆ. ಇವುಗಳು ನಮಗೆ ಒಂದು ವಿಶೇಷವದ ಅನುಭವವನ್ನೇ ಕೊಡುತ್ತವೆ. ಈ ನಿರೂಪಣಾ ವಿಧಾನದಲ್ಲಿ ಯಶಸ್ವಿಯಾಗಿರುವ ಹಲವಾರು ವೀರಗಲ್ಲುಗಳು ನಮಗೆ ದೊರೆಯುತ್ತವೆ.

ವೀರಗಲ್ಲುಗಳು ಶಿಲ್ಪಿಗಳು ಶಿಲೆಯಲ್ಲಿ ಭಾವಾಭಿವ್ಯಕ್ತಿ ಮೂಡಲು ನಡೆಸಿರುವ ಪ್ರಯತ್ನಗಳಂತೂ ಕುತೂಹಲಕರವೂ, ಸ್ವಾರಸ್ಯಮಯವೂ ಆದ ಸಂಗತಿಯಾಗಿದ್ದು ಕರ್ನಾಟಕದ ಶಿಲ್ಪದ ಬೆಳವಣಿಗೆಯಲ್ಲಿ ಮಹತ್ತ್ವದ ಅಂಶವಾಗಿದೆ. ಕಲ್ಲಿನಂತಹ ಮಾಧ್ಯಮದಲ್ಲಿ ಯಾವುದೇ ಭಾವವನ್ನು ವ್ಯಕ್ತಪಡಿಸುವುದು ಸುಲಭದ ಕಾರ್ಯವೇನೂ ಅಲ್ಲ. ಇದು ಶಿಲ್ಪಿಗೆ ನಿಜವಾಗಿಯೂ ಒಂದು ಸವಾಲೆ. ಒಂದೇ ಒಂದು ಮೂರ್ತಿಯಾದರೆ ಶಿಲ್ಪಿ ಅದನ್ನು ಹೇಗಾದರೂ ನಿರ್ವಹಿಸಿ ಬಹುದು. ಆದರೆ ಅದೂ ಅಸಾಧ್ಯದ ಕೆಲಸವೇ. ವೀರಗಲ್ಲಿನಂತಹ ಒಂದು ಚೌಕಟ್ಟಿನ ವಿನ್ಯಾಸದ ಶಿಲ್ಪದಲ್ಲಿ ಇದು ಮತ್ತೂ ಕಷ್ಟಸಾಧ್ಯದ ಕೆಲಸವಾಗುತ್ತದೆ. ಮೊದಲ ಹಂತದಲ್ಲಿ ವೀರರಸದ ಅಭಿವ್ಯಕ್ತಿಯಿದ್ದರೆ, ಎರಡನೆಯ ಹಂತದಲ್ಲಿ ಶೃಂಗಾರಕ್ಕೆ ಪ್ರಾಧಾನ್ಯ. ಮೂರನೆಯ ಹಂತದಲ್ಲಿ ಶಾಂತರಸವೇ ಪ್ರಮುಖವಾಗಿ ನಿರೂಪಿತವಾಗಿರುತ್ತದೆ.

ಭಾವಾಭಿವ್ಯಕ್ತಿಗಾಗಿ ವೀರಗಲ್ಲುಗಳ ಶಿಲ್ಪಿಗಳು ಅನುಸರಿಸಿರುವ ಒಂದು ತಂತ್ರವೆಂದರೆ ಅದಷ್ಟು ಪರಸ್ಪರ ವಿರುದ್ಧವಾದ ಚಿತ್ರಗಳನ್ನು ಒಂದು ಚೌಕಟ್ಟಿನಲ್ಲಿ ತಂದಿರುವುದು. ಇಲ್ಲಿ ವಿವರಗಳಿಗಿಂತ ಸಾಂಕೇತಿಕತೆಗೆ ಹೆಚ್ಚು ಮಹತ್ವ ದೊರೆತಿದೆ. ಮುಂದೆ ಅವುಗಲನ್ನು ವಿವರವಾಗಿ ಪರಿಶೀಲಿಸುವೆವಾದರೂ ಒಂದೆರಡು ನಿದರ್ಶನಗಳನ್ನು ಇಲ್ಲಿ ನೀಡುವುದು ಅಗತ್ಯವೆನ್ನಿಸುತ್ತದೆ. ಬಾಗಳಿಯ ವೀರಗಲ್ಲೊಂದರಲ್ಲಿ ಹುಲಿಯ ಬೇಟೆಯ ಚಿತ್ರಣವನ್ನು ಶಿಲ್ಪಿ ಬಿಡಿಸಿದ್ದಾನೆ. ಈ ವೀರಗಲ್ಲಿನ ವೀರ ಹುಲಿಯೊಡನೆ ಹೋರಾಡುವಾಗ ಮಡಿದವನು. ಅವನ ಪರಾಕ್ರಮವನ್ನು, ಧೀಮಂತಿಕೆಯನ್ನು ನಿರೂಪಿಸುವ ಸಲುವಾಗಿ ಶಿಲ್ಪಿ ಅನುಸರಿಸುವ ವಿಧಾನ ಅಪೂರ್ವವಾದುದು. ಹುಲಿಯನ್ನು ವೀರನು ಮುಖಾಮುಖಿಯಾಗಿ ಎದುರಿಸುತ್ತಿದ್ದಾನೆ. ಅವನ ಹಿಂದೆ ವ್ಯಕ್ತಿಯೊಬ್ಬನು ಮರವನ್ನು ಏರಿ ಅಲ್ಲಿಂದ ಹುಲಿಯತ್ತ ಬಾಣಪ್ರಯೋಗ ಮಾಡುವ ಸಾಹಸದಲ್ಲಿದ್ದಾನೆ. ವೀರನೊಡನೆ ಬಂದ ಮತ್ತೆ ಕೆಲವಾರು ಆಯುಧಗಳನ್ನು ಹಿಡಿದಿದ್ದರೂ ಹುಲಿಯಿಂದ ದೂರವೇ ನಿಂತಿದ್ದಾರೆ. (ಚಿತ್ರ ೪೯) ಇದೇ ರೀತಿ ಬಳ್ಳಿಗಾವೆಯಲ್ಲಿರುವ ಹಂದಿಯ ಬೇಟೆಯ ವೀರಗಲ್ಲು ಮಹತ್ತ್ವದ್ದಾಗಿದೆ. ಅಲ್ಲಿ ವೀರನು ದೊಡ್ಡ ಹಂದಿಯನ್ನು ವೀರಾವೇಶದಿಂದ ಎದುರಿಸುತ್ತಿದ್ದಾನೆ. ಆ ಹಂದಿಯಾದರೋ ತನ್ನ ಹಿಂಗಾಲುಗಳ ಮೇಲೆ ನಿಂತು ವೀರನನ್ನು ಎದುರಿಸುತ್ತಿದೆ. ವೀರ ಈ ತೆರನ ಹಂದಿಯೊಡನೆ ಮಾಡುವ ಹೋರಾಟದಲ್ಲಿ ಭಾಗವಹಿಸುವುದಿರಲಿ, ನೋಡುವುದಕ್ಕೂ ಧೈರ್ಯಸಾಲದ, ಅವನ

ಜೊತೆಯಲ್ಲಿ ಬಹುಶಃ ತುಂಬಾ ಉತ್ಸಾಹದಿಂದ ಬೇಟೆಗೆ ಬಂದ ಕೆಲವರು ವೀರನ ಹಿಂಬದಿಯಲ್ಲಿ ನಿಂತು ಹೋರಾಟಕ್ಕೆ ಬೆನ್ನು ತಿರುಗಿಸಿ ಎರಡೂಕೈಗಳಿಂದ ತಮ್ಮ ಮುಖಗಳನ್ನು ಬಿಗಿಯಾಗಿ ಮುಚ್ಚಿಕೊಂಡಿದ್ದಾರೆ. (ಚಿತ್ರ ೩೯) ಈ ಎರಡೂ ನಿದರ್ಶನಗಳಲ್ಲಿ ಆಯಾ ವೀರಗಲ್ಲುಗಳ ಶಿಲ್ಪಿಗಳು ಮಡಿದ ವೀರನ ವೀರತನವನ್ನೂ, ಧೈರ್ಯವನ್ನೂ, ವೀರನು ಎದುರಿಸಿದ ಸಂದರ್ಭದಲ್ಲಿ ಇತರರು ಹೇಗೆ ನಡೆದುಕೊಂಡರು ಎಂಬುದನ್ನು ಶಿಲ್ಪದಲ್ಲಿ ಬಿಡಿಸಿ, ಹೋಲಿಕೆ ನೀಡಿ, ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಪಟ್ಟದಕಲ್ಲಿನಲ್ಲಿರುವ ಚಾಲುಕ್ಯರ ಕಾಲದ ವೀರಗಲ್ಲಿನ ಶಿಲ್ಪವಂತೂ ಅತ್ಯಪೂರ್ವವಾದುದಾಗಿದೆ. ವೀರ ಬಹುಶಃ ಪೆಣ್ಬುಯ್ಯಲಲ್ಲಿ ಹೋರಾಡಿ ಮಡಿದಿರಬಹುದೆಂದು ತೋರುತ್ತದೆ. ಶತ್ರುಗಳಿಂದ ಪೀಡಿತರಾದ ಮಹಿಳೆಯರನ್ನು ಬಹಳ ಸುಲಭವಾಗಿ ಬಿಡಿಸಿ ಅವರನ್ನು ತನ್ನ ಹಿಂದೆ ನಿಲ್ಲಿಸಿಕೊಂಡು ರಕ್ಷಿಯಿತ್ತಿದ್ದಾಏನ. ಶತ್ರುಗಳಾದರೂ ತಮ್ಮ ಬಿಲ್ಲುಗಲನ್ನು ಬಾಗಿಸಿ ಎಳೆದು ಬಿರುಸಾಗಿ ಬಾಣಪ್ರಯೋಗ ಮಾಡುತ್ತಿದ್ದಾರೆ. ಅವರ ಈ ಹೋರಾಟವನ್ನು ವೀರ ಬಹಳ ಹಗುರವಾಗಿ ತೆಗೆದುಕೊಂಡಂತಿದೆ. ಅವರು ತನಗೆ ಯಾವ ಲೆಕ್ಕ ಎಂಬಂತೆ ತನ್ನ ಒರೆಯ ಮೇಲೆ ಕೈಇಟ್ಟು ಅವರತ್ತ ಮಂದಸ್ಮಿತನಾಗಿ ನೋಡುತ್ತಿದ್ದಾನೆ. ತನ್ನನ್ನು ಕೆಣಕಬೇಡಿ ಎಂದು ಅವನು ಸಾಮೋಪಾಯವನ್ನು ಹೇಳುತ್ತಿರುವಂತಿದೆ (ಚಿತ್ರ ೨೩೬).

ಬಳ್ಳಿಗಾವೆಯ ವೀರಗಲ್ಲೊಂದರಲ್ಲಿ ವೀರನು ಶತ್ರುಪಕ್ಷದವರನ್ನು ನಿಶಸ್ತ್ರರನ್ನಾಗಿಯೂ, ವಿವಸ್ತ್ರರನ್ನಾಗಿಯೂ ಮಾಡಿ ಗಾಯಗೊಳಿಸಿರುವಂತೆ ಶಿಲ್ಪಿ ಬಿಡಿಸಿದ್ದಾನೆ (ಚಿತ್ರ ೧೭೦) ಹಾಗೆಯೇ ಅಲ್ಲಿನ ಮತ್ತೊಂದು ವೀರಗಲ್ಲಿನಲ್ಲಿ ವೀರನ ಪರಾಕ್ರಮವನ್ನು ಎದುರಿಸಲಾರದೆ ಶತ್ರುಪಕ್ಷದವರು ತಮ್ಮ ತಲೆಯನ್ನು ಕೆದರಿಕೊಂಡು ವೀರನಿಗೆ ಶರಣಾಗತರಾಗಿರುವಂತೆ ಶಿಲ್ಪದ ವಿವರವನ್ನು ಬಿಡಿಸಲಾಗಿದೆ (ಚಿತ್ರ ೧೭೧) ಈ ರೀತಿಯ ಚಿತ್ರಣ ವಿರಗಲ್ಲುಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ಅಂಶ.

ರಟ್ಟಹಳ್ಳಿಯಲ್ಲಿರುವ ಕಲ್ಯಾಣದ ಚಾಲುಕ್ಯರ ಕಾಲದ ವೀರಗಲ್ಲೊಂದರಲ್ಲಿ ತಮ್ಮ ಗಂಡನೊಂದಿಗೆ ಸಹಗಮನ ಮಾಡುತ್ತಿರುವ ಆ ಕ್ಷಣವನ್ನು ಶಿಲ್ಪಿ ಹಿಡಿದಿಟ್ಟಿದ್ದಾನೆ. (ಚಿತ್ರ ೨೭೮) ತಮ್ಮ ಪತಿಯನ್ನಗಲಿ ಜೀವಿಸುವುದಕ್ಕಿಂತ ಸಹಗಮನವೇ ಉತ್ತಮವೆಂದು ಭಾವಿಸಿದ ಆ ವೀರನ ಹೆಂಡತಿಯರು, ತನ್ನ ಕೆನ್ನಾಲಿಗೆಗಳಿಂದ ಮುಗಿಲನ್ನು ಮುತ್ತಿಡುತ್ತಿರುವ ಬೆಂಕಿಗೆ ಹೆದರದೆ, ಬದಲಾಗಿ ಅದು ತಮ್ಮನ್ನು ತಮ್ಮ ಪತಿಯೊಡನೆ ಸೇರಿಸುವ 'ವಾಹಕ' ವೆಂಬುವಂತೆ ಭಾವಿಸಿ, ಕೊನೆಯ ಬಾರಿಗೆ ತಮ್ಮ ಬಂಧುಬಾಂಧವರಿಗೆ ನಮಸ್ಕರಿಸಿ ಬೆಂಕಿಗೆ ಹಾರಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಬಳ್ಳಿಗಾವೆಯ ವೀರಗಲ್ಲಿನಲ್ಲಿ ಶಿಲ್ಪಿಯೂ ಇದರ ಮುಂದಿನ ಗಳಿಗೆಯನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾನೆ. ಸಹಗಮನ ಮಾಡುವಾಗ ತೆಗೆದ ಒಂದು ಛಾಯಾಚಿತ್ರವೋ

ಎನ್ನುವಷ್ಟರಮಟ್ಟಿಗೆ ಇಲ್ಲಿ ಶಿಲ್ಪಿ ವಿವರಗಳನ್ನು ಬಿಡಿಸಿದ್ದಾನೆ. ಮಡಿದ ತನ್ನ ಗಂಡನನ್ನು ಕೂಡಿಕೊಳ್ಳಲು ಮಹಿಳೆ ಬೆಂಕಿಗೆ ಹಾರಿಬಿದ್ದಿದ್ದಾಳೆ. ಅವಳನ್ನು, ಅವಳ ಪತಿಯನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಹವ್ಯವಾಹಕನಾದ ಅಗ್ನಿ ಧಗಧಗನೆ ಉರಿದೇಳುತ್ತಿದ್ದಾನೆ. ಸಹಗಮನ ಮಾಡಿದ ವೀರಮಹಿಳೆಯನ್ನು ಸುಮಂಗಲಿಯರು ಅಗ್ನಿಯ ಎರಡು ಬದಿಗೆ ನಿಂತು ಅಕ್ಷತೆಯನ್ನು ಹಾಕುತ್ತಾ ಹರಸುತ್ತಿದ್ದಾರೆ. ಸಹಗಮನ ಮಡಿದ ಆ ಮಹಾಸತಿಯಿಂದ ಸುಮಂಗಲಿಯರು ಪಡೆದ ಬಾಗಿನದ ಮೊರಗಳನ್ನು ಶಿಲ್ಪಿ ಬಿಡಿಸಲು ಮರೆತಿಲ್ಲ. (ಚಿತ್ರ೨೭೭).

ಯಾವ ವೀರಗಲ್ಲಿನ ಶಿಲ್ಪಿಯೂ ವೀರನು ಮಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಿಲ್ಲ. ಆದರೆ ಬನವಾಸಿಯ ವೀರಗಲ್ಲೊಂದರ ಶಿಲ್ಪಿ ಈ ನಿಯಮವನ್ನು ಮೀರಿ ಭಾವಾಭಿವ್ಯಕ್ತಿಯಲ್ಲಿ ಅಪಾರವಾದ ಯಶಸ್ಸನ್ನು ಸಾಧಿಸಿದ್ದಾನೆ. ವೀರ ಹೋರಾಟದಲ್ಲಿ ತನ್ನ ಕೊನೆಯ ಉಸಿರು ಇರುವವರೆಗೂ ಹೋರಾಡಿ ಮಡಿದಿದ್ದಾನೆ. ಅವನ ಹೆಣವನ್ನು ತುಳಿದುಕೊಂಡು ದನಗಳು ಹೋಗುತ್ತಿವೆ. ಈ ವೀರಗಲ್ಲಿನ ಶಿಲ್ಪದಲ್ಲಿ ಶತ್ರುಗಳನ್ನು ಬಿಡಿಸಿಲ್ಲ ಎಂಬುದು ಗಮನಿಸಬೇಕಾದ ಅಂಶ. ವೀರರು ಹೇಗೆ ತಮ್ಮ ಜೀವದ ಹಂಗು ತೊರೆದು ಹೋರಾಡಿ ಮಡಿಯುತ್ತಿದ್ದರು ಎಂಬ ಅಂಶವನ್ನು ಧ್ವನಿಸುವ ಅಪೂರ್ವ ಕಲಾಕೃತಿ ಇದಾಗಿದೆ. (ಚಿತ್ರ ೫೨)

ಕಾಮಲಾಪುರದ ಮ್ಯೂಸಿಯಂನಲ್ಲಿರುವ ವೀರಗಲ್ಲು ತೀರಾ ಅಸಾಧಾರಣವಾದ ಶಿಲ್ಪವನ್ನು ಹೊಂದಿದೆ. (ಚಿತ್ರ. ೨೯೫) ವೀರನು ಪೀಠವೊಂದರ ಮೇಲೆ ಕುಳಿತು, ಒರಗು ದಿಂಬಿಗೆ ಆನಿಕೊಂಡು ಕೈಮೇಲೆ ತಲೆ ಹೊತ್ತಿದ್ದಾನೆ. ಮತ್ತೊಂದು ಕೈಯಿಂದ ತನ್ನ ಬದಿಯಲ್ಲಿ ನಿಂತಿರುವ ತನ್ನ ಹೆಂಡತಿಎ ಹೇಳುತ್ತಿದ್ದಾನೆ. ಈ ಶಿಲ್ಪದ ಭಾವ ಈ ರೀತಿಯೇ ಇರಬೇಕು ಎಂಬುದಾಗಿ ವ್ಯಾಖ್ಯಾನಿಸುವುದು ಕಷ್ಟ ಆದರೂ ಶಿಲ್ಪಿ ಈ ಮೂಲಕ ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದಾನೆ ಎಂಬುದು ವೇದ್ಯವಾಗುತ್ತದೆ.

ಹೋರಾಟದಲ್ಲಿ ನಡೆಯುತ್ತಿದ್ದ ಅಮಾನುಷ ಕೃತ್ಯಗಳನ್ನು ಬಿಡುಸುವಲ್ಲಿ ವೀರಗಲ್ಲುಗಳ ಶಿಲ್ಪಿಗಳು ಹಿಂದೆ ಬಿದ್ದಿಲ್ಲ. ಅಬ್ಬಲೂರಿನ ಎರಡು ವೀರಗಲ್ಲುಗಳು ದೊಡ್ಡ ಉಳ್ಳರ್ತ್ತಿಯ ವೀರಗಲ್ಲೊಂದರ ಶಿಲ್ಪವನ್ನು ಇಲ್ಲಿ ನಾವು ನೆನೆಯಬಹುದು. (ಚಿತ್ರ ೩೫, ೩೬) ಅಬ್ಬಲೂರಿನ ವೀರಗಲ್ಲಿನ ಶಿಲ್ಪಿ ಒಬ್ಬನೇ ಇರಬೇಕೆಂದು ತೋರುತ್ತದೆ. ಅನಿರೀಕ್ಷಿತವಾಗಿ ತಮ್ಮ ಮೇಲೆ ಎರಗಿದವರಿಂದ ತಪ್ಪಿಸಿಕೊಳ್ಳಲಾರದೆ ಬಲಾತ್ಕಾರಕ್ಕೆ ಒಳಗಾಗಿ ಬೆದರಿದ ಹೆಣ್ಣುಮಕ್ಕಳು ವಈರನು ತಮ್ಮನ್ನು ಬಂದು ಬಿಡಿಸಿ ಶತ್ರುಗಳನ್ನು ಓಡಿಸುತ್ತಿರುವುದನ್ನು ನೋಡಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಿರುವಂತೆ ಇದೆ. ಈ ಪ್ರಸಂಗದಿಂದ ಲಜ್ಜಿತರಾದ ಹೆಣ್ಣು ಮಕ್ಕಳು ಕೆಲವರು ತಮ್ಮ ಮರ್ಮಾಂಗಗಳನ್ನು ಮುಚ್ಚಿಕೊಂಡಿದ್ದರೆ, ಬೆದರಿದ, ಅಳುತ್ತಿರುವ ತಮ್ಮ ಮಕ್ಕಳನ್ನು ತಮ್ಮ ಆ

ದುಃಸ್ಥಿತಿಯನ್ನು ಮರೆತು, ಸಂತೈಸುತ್ತಿರುವ ತಾಯಂದಿರನ್ನು ನಾವು ಅಲ್ಲಿ ಕಾಣಬಹುದು. ದೊಡ್ಡ ಉಳ್ಳೂರ್ತಿಯ ವೀರಗಲ್ಲಿನಲ್ಲಿ ಮನುಷ್ಯನು ಅಸಹಾಯಕರು ಸಿಕ್ಕಾಗ ಎಷ್ಟು ರಾಕ್ಷಸಪ್ರವೃತ್ತಿಯವನಾಗುತ್ತಾನೆ ಎಂಬ ಅಂಶವನ್ನು ಹೊಂದಿದೆ. ಅಬಲೆಯೊಬ್ಬಳ ಮೇಲೆ ವ್ಯಕ್ತಿಯೊಬ್ಬ ಬಲಾತ್ಕಾರ ನಡೆಸುವ ಪ್ರಯತ್ನ ಮಾಡುತ್ತಿದ್ದಾನೆ. ಆ ಗಳಿಗೆಗೆ ಸರಿಯಾಗಿ ವೀರ ಬಂದು ಹೆಣ್ಣು ಮಕ್ಕಳ ಮಾನವನ್ನು ಕಾಪಾಡುತ್ತಿರುವಂತೆ ಶಿಲ್ಪವನ್ನು ಶಿಲ್ಪಿ ಬಿಡಿಸಿದ್ದಾನೆ. (ಚಿತ್ರ ೩೪)

ತಮ್ಮ ಜೀವನದ ಕಾಣ್ಕೆಯನ್ನು ಹಿಡಿದಿಡುವಲ್ಲಿ ವೀರಗಲ್ಲುಗಳ ಶಿಲ್ಪಿಗಳು ನಡೆಯಿಸಿರುವ ಪ್ರಯತ್ನಗಳು ಕೆಲವೇ ಆದರೂ ಅವು ಅತ್ಯಪೂರ್ವವೂ, ಪರಿಣಾಮಕಾರಿ ಶಿಲ್ಪಕಲಾಕೃತಿಗಳಾಗಿವೆ. ಬೇಗೂರಿನ ವೀರಗಲ್ಲಿನ ಶಿಲ್ಪಿ ಯುದ್ಧರಂಗದಲ್ಲಿ ಗಾಯಗೊಂಡವರನ್ನೋ ಅಥವಾ ಮಡಿದ ತಮ್ಮ ಬಂಧುಗಳನ್ನು ಸಂಸ್ಕರಿಸುವ ಸಲುವಾಗಿಯೇ ಎತ್ತಿಕೊಂಡು ಹೋಗುತ್ತಿರುವಂತೆ ಯುದ್ಧ ಭೂಮಿಯಲ್ಲಿ ಮಡಿದ ವೀರರ ಕಣ್ಣುಗಳನ್ನು ಕಾಗೆಗಳು ಕುಕ್ಕಿ ತಿನ್ನುತ್ತಿರುವಂತೆ ಬಿಡಿಸಿದ್ದಾನೆ. ಯೋಧರು ಶಸ್ತ್ರಾಘಾತರಾಗಿ ಬೀಳುತ್ತಿರುವಂತೆ, ಅವರ ದೇಹಗಳಿಂದ ಚಿಮ್ಮುವ ರಕ್ತವನ್ನು ಕುಡಿಯಲು ಕಾದಿರುವ ಶಾಕಿನ ಡಾಕಿನಿಯರನ್ನೂ ಶಿಲ್ಪಿ ಬಿಡಿಸುವನದನ್ನು ಮರೆತಿಲ್ಲ. ಕೋಲಾರದ ವೀರಗಲ್ಲಿನಲ್ಲಿ ಶಿಲ್ಪಿ ರಣಹದ್ದು ಮತ್ತು ನರಿಗಳು ಮಡಿದವರ ದೇಹಗಳನ್ನು ಕಿತ್ತು ತಿನ್ನುತ್ತಿರುವಂತೆ ವಿವರಗಳನ್ನು ಬಿಡಿಸಿದ್ದಾನೆ. (ಚಿತ್ರ ೩೪)

ತಮ್ಮ ಜೀವನದ ಕಾಣ್ಕೆಯನ್ನು ಹಿಡಿದಿಡುವಲ್ಲಿ ವೀರಗಲ್ಲುಗಳ ಶಿಲ್ಪಿಗಳು ನಡೆಯಿಸಿರುವ ಪ್ರಯತ್ನಗಳು ಕೆಲವೇ ಆದರೂ ಅವು ಅತ್ಯಪೂರ್ವವೂ, ಪರಿಣಾಮಕಾರಿ ಶಿಲ್ಪಕಲಾಕೃತಿಗಳಾಗಿವೆ. ಬೇಗೂರಿನ ವೀರಗಲ್ಲಿನ ಶಿಲ್ಪಿ ಯುದ್ಧರಂಗದಲ್ಲಿ ಗಾಯಗೊಂಡವರನ್ನೋ ಅಥವಾ ಮಡಿದ ತಮ್ಮ ಬಂಧುಗಳನ್ನು ಸಂಸ್ಕರಿಸುವ ಸಲುವಾಗಿಯೇ ಎತ್ತಿಕೊಂಡು ಹೋಗುತ್ತಿರುವಂತೆ ಯುದ್ಧ ಬೂಮಿಯಲ್ಲಿ ಮಡಿದ ವೀರರ ಕಣ್ಣುಗಳನ್ನು ಕಾಗೆಗಳು ಕುಕ್ಕಿ ತಿನ್ನುತ್ತಿರುವಂತೆ ಬಿಡಿಸಿದ್ದಾನೆ. ಯೋಧರು ಶಸ್ತ್ರಾಘಾತರಾಗಿ ಬೀಳುತ್ತಿರುವಂತೆ, ಅವರ ದೇಹಗಳಿಂದ ಚಿಮ್ಮುವ ರಕ್ತವನ್ನು ಕುಡಿಯಲು ಕಾದಿರುವ ಶಾಕಿನಿ ಡಾಕಿನಿಯರನ್ನೂ ಶಿಲ್ಪಿ ಬಿಡಿಸುವುದನ್ನು ಮರೆತಿಲ್ಲ. ಕೋಲಾರದ ವೀರಗಲ್ಲಿನಲ್ಲಿ ಶಿಲ್ಪಿ ರಣಹದ್ದು ಮತ್ತು ನರಿಗಳು ಮಡಿದವರ ದೇಹಗಳನ್ನು ಕಿತ್ತು ತಿನ್ನುತ್ತಿರುವಂತೆ ವಿವರಗಳನ್ನು ಬಿಡಿಸಿದ್ದಾನೆ. ಈ ಎಲ್ಲಾ ಅಂಶಗಳೂ ಕಲಾವಿದನಾದವನಿಗೆ ಅಪೂರ್ವವಾದ ಜೀವನಾನುಭವವಿದ್ದರೆ ಅದು ಹೇಗೆ ಅವನ ಕಲಾಕೃತಿಯನ್ನು ಪರಿಣಾಮಕಾರಿಯಾಗಿ ಮಾಡುವಲ್ಲಿ ನೆರವಾಗುತ್ತದೆ ಎಂಬುದನ್ನು ತಿಳಿಸುತ್ತವೆ.

ಶೃಂಗಾರರಸವನ್ನು ತಮ್ಮ ಪರಿಮಿತಿಯಲ್ಲಿ ವೀರಗಲ್ಲಿನ ಶಿಲ್ಪಿಗಳು ಔಚಿತ್ಯವರಿತು ತಂದಿರುವುದಂತೂ ಮೆಚ್ಚಲೇಬೇಕಾದ ಅಂಶ. ಮಡಿದ ವೀರನು ಸ್ವರ್ಗದಲ್ಲಿ ಅಪ್ಸರೆಯರನ್ನು ಸೇವಿಸುತ್ತಿರುವಂತೆಯೋ, ಅಥವಾ ಅಪ್ಸರೆಯರ ಭುಜದ ಮೇಲೆ ತನ್ನ ಕೈಗಳನ್ನು ಹಾಕಿಕೊಂಡ

ಸ್ವರ್ಗದತ್ತ ಹೋಗುತ್ತಿರುವಂತೆಯೋ ಬಿಡಿಸಿರುತ್ತಾರೆ. ವೀರನ ಈ ಶೃಂಗಾರಕ್ಕೆ ಮೆರಗು ಕೆಲವೊಮ್ಮೆ ಅವನು ಸಂಗೀತ, ನೃತ್ಯಗಳ ಸಮೇತ ಸ್ವರ್ಗಕ್ಕೆ ಹೋಗುತ್ತಿರುವಂತೆ, ಅಪ್ಸರೆಯರ ಸೇವೆಯನ್ನು ಪಡೆಯುತ್ತಿರುವಂತೆ ಶಿಲ್ಪದ ವಿವರಗಲನ್ನು ಬಿಡಿಸಿರುತ್ತಾರೆ.

ಧರ್ಮ ತನ್ನ ಪ್ರಭಾವವನ್ನು 'ವೀರತ್ವದ' ಮೇಲೆ ಬೀರಿದಾಗ ಸಹಜವಾಗಿ ಅದು ವೀರಗಲ್ಲುಗಳ ಪಾಠ ಮತ್ತು ಶಿಲ್ಪದಲ್ಲಿಯೂ ವ್ಯಕ್ತಾಯಿತು. ಇದರಿಂದಾಗಿ ವೀರಗಲ್ಲುಗಳ ಶಿಲ್ಪದಲ್ಲಿ ಶಾಂತರಸ ಮೂಡಿಬಂತು. ವೀರನು ಹೋರಾಟದಲ್ಲಿ ವೀರಾವೇಶದಿಂದ ಹೋರಾಡಿ ಆ ಮೂಲಕ ಅಪ್ಸರೆಯರು ಸುಖವನ್ನು ಅನುಭವಿಸಿದ. ಆದರೆ ಅದೇ ಜೀವನದ ಪರಮಧ್ಯೇಯವಲ್ಲ. ಶಾಶ್ವತವಾದ ಸುಖಶಾಂತಿಗಳು ಮಾನವನಿಗೆ ಬೇಕು. ಇದು ದೇವನ ಸಾನಿಧ್ಯದಲ್ಲಿ ಮಾತ್ರ ದೊರೆಯುವಂತಹುದು. ಈ ಒಂದು ನಂಬಿಕೆ ಮೂಲವಾಗಿ ಹಲವಾರು ತೆರನ ಶಿಲ್ಪದ ವಿವರಗಳು ವೀರಗಲ್ಲುಗಳ ಮೇಲ್ಭಾಗದಲ್ಲಿ ಮೂಡಿ ಬಂದುವು.

ಕರ್ನಾಟಕದ ವೀರಗಲ್ಲುಗಳ ಶಿಲ್ಪದ ಒಂದು ವಿಶೇಷತೆ ಎಂದರೆ – ಅವು ತಮ್ಮ ಶಿಲ್ಪವಿನ್ಯಾಸ ಕ್ರಮದಲ್ಲಿ ಹೊಂದಿರುವ ಚಲನಶೀಲತೆ. ಶಿಲ್ಪಿ ತಾನು ವಿರಗಲ್ಲಿನ ಶಿಲ್ಪದ ಚೌಕಟ್ಟನ್ನು ವಿನ್ಯಾಸ ಮಾಡುವಾಗಲೇ ಬಿಡಿಸುವ ಒಂದೊಂದು ವಿವರವೂ ಚಲನಶೀಲತೆ ಹೊಂದಿರುವಂತೆ ನೋಡಿಕೊಳ್ಳುತ್ತಾನೆ. ಈ ಒಂದು ವಿಶೇಷತೆಯನ್ನು ಅವು ಹೊಂದಿರುವುದರಿಂದಲೇ ಅವನು ಬಿಡಿಸುವ ಒಂದೊಂದು ವಿವರವೂ ಸಹ ಅವನ ಮುಖ್ಯ ಗುರಿಗೆ ಪೋಷಕವಾಗಿದೆ. ಎಲ್ಲಿಯೂ ಈ ಅಂಶಗಳು ಅನವಶ್ಯಕ ಎಂದು ನಮಗೆ ಅನ್ನಿಸುವುದೇ ಇಲ್ಲ. ಅಥವಾ ಅನವಶ್ಯಕ ವಿವರಗಳನ್ನು ಬಿಡಿಸುವ ಗೋಜಿಗೆ ಶಿಲ್ಪಿ ಹೋಗುವುದಿಲ್ಲ.

ಇನ್ನು ಮುಂದೆ ನಾವು ವೀರಗಲ್ಲುಗಳ ಶಿಲ್ಪಗಳನ್ನೂ, ಅವು ಕಾಲಾನುಕ್ರಮದಲ್ಲಿ ಬೆಳೆದ ವಿಧಾನವನ್ನೂ ನೋಡೋಣ.

ವೀರಗಲ್ಲುಗಳ ಶಿಲ್ಪಿಗಳು

ಮಡಿದ ವೀರನು ಪರಾಕ್ರಮವನ್ನು ಲೋಕಕ್ಕೆ ತಿಳಿಯಪಡಿಸುವಲ್ಲಿ ವೀರಗಲ್ಲಿನ ಪಾಠವನ್ನು ತಯಾರಿಸಿದ ಶಾಸನಕಾರನ ಪ್ರತಿಭೆಯಷ್ಟೇ ಮುಖ್ಯ ಪಾತ್ರ ವೀರಗಲ್ಲಿನ ಶಿಲ್ಪಿಯ ಪ್ರತಿಭೆಯದು. ಕೆಲವು ಕಡೆ ವೀರಗಲ್ಲಿನ ಶಾಸನಕಾರನಿಗಿಂತಲೂ ಮಹತ್ತರವಾದ ಪಾತ್ರವನ್ನು ಶಿಲ್ಪಿ ವಹಿಸಿದ್ದಾನೆ. ಆದ್ದರಿಂದ ವೀರಗಲ್ಲಿನ ನಿರ್ಮಾಣದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ ಶಿಲ್ಪಿಗಳ ಪರಿಚಯವನ್ನು ಮಾಡಿಕೊಳ್ಳುವುದು ಸೂಕ್ತ

ಭಾರತೀಯ ಶಿಲ್ಪಿಗಳು ಸಾಮಾನ್ಯವಾಗಿ ತಮ್ಮ ಹೆಸರು ಇತ್ಯಾದಿ ವಿವರಗಳನ್ನು ಎಲ್ಲಿಯೂ ನೀಡಿಲ್ಲ. ತಮ್ಮ ಕಲಾಕೃತಿಯು ತಮ್ಮ ಶ್ರದ್ಧೆ ಮತ್ತು ಕಲಾತಪಸ್ಸಿನ ಫಲ ಎಂಬುದಾಗಿ ಅವರು ಭಾವಿಸಿದ್ದರು. ತಮ್ಮ ಕಲಾಕೃತಿಯ ಸೃಷ್ಟಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದರು. ಆ ಕಲಾಕೃತಿಯೇ ತಮ್ಮನ್ನು ಚಿರಂಜೀವಿಗಳನ್ನಗಿ ಮಾಡುತ್ತದೆಯಾದ್ದರಿಂದ ತಮ್ಮ ವೈಯಕ್ತಿಕ ವಿವರಗಳನ್ನು ನೀಡುವುದು ಅಹಂಕಾರದ ಪ್ರದರ್ಶನವಾಗುತ್ತದೆ ಎಂಬುದಾಗಿ ಭಾವಿಸಿದ್ದರು. ಈ ಕಾರಣಕ್ಕಾಗಿಯೇ ಇರಬೇಕು ಅವರ ಬಗ್ಗೆ ವಿವರಗಳು ದೊರೆಯುವುದು ವಿರಳ. ಅಂದಮಾತ್ರಕ್ಕೆ ಯಾವ ಶಿಲ್ಪಿಯ ಬಗ್ಗೆಯೂ ವಿವರ ದೊರೆಯುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಲ್ಲ. ಕೆಲವಾರು ಶಿಲ್ಪಿಗಲು ತಾವು ಮಾಡಿದ ಕಲಾಕೃತಿಗಳಡಿಯಲ್ಲಿ ತಮ್ಮ ಹೆಸರುಗಳನ್ನು ಕೆತ್ತಿರುವ ನಿದರ್ಶನಗಳು ದೂರೆಯುತ್ತವೆ.[೧] ಕರ್ನಾಟಕದಲ್ಲಿ ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು ಮುಂತಾದ ಕಡೆಗಳಲ್ಲಿ ಅಲ್ಲಿನ ಕಲಾಕೃತಿಯ ಶಿಲ್ಪಿಗಳ, ವಾಸ್ತುಶಿಲ್ಪಿಗಳ ಹೆಸರುಗಳು, ವಿವರಗಳು ದೊರೆಯುತ್ತವೆ.[೨]

ವೀರಗಲ್ಲುಗಳ ಶಿಲ್ಪಿಗಳ ಬಗ್ಗೆ ಹೇಳುವುದಾದರೆ ವೀರಗಲ್ಲುಗಳನ್ನು ಮಾಡಿಸ ಶಿಲ್ಪಿಯ ಹೆಸರು ಮಾತ್ರ ದೊರೆಯುತ್ತದೆ. ಉಳಿದ ವಿವರಗಳು ಅಂದರೆ ಶಿಲ್ಪಿಯ ಬಿರುದು ಮುಂತಾದ ಕೆಲವು ಅಂಶಗಳು ತಿಳಿಯುತ್ತವೆಯೇ ವಿನಾ ಅವನ ವೈಯಕ್ತಿಕ ವಿವರಗಳು ದೊರೆಯುವುದಿಲ್ಲ.

ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕ್ ಅಟ್ಟೂರು ಎಂಬ ಗ್ರಾಮದಲ್ಲಿರುವ ವೀರಗಲ್ಲನ್ನು 'ಪೊನ್ನಾಚಾರಿ' ಎಂಬುವನು ಮಾಡಿದನೆಂದು ತಿಳಿಯುತ್ತದೆ. ಇದು ಬಹುಶಃ ಶಿಲ್ಪಿಗಳ ವಿವರವನ್ನು ನೀಡುವಂಥ, ದೊರೆತಿರುವ ವೀರಗಲ್ಲುಗಳಲ್ಲಿ ಅತ್ಯಂತ ಪ್ರಾಚೀನವಾದ ವೀರಗಲ್ಲು ಎಂದು ಹೇಳಬಹುದು.[೩] ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕ್ ತಾವರೆಕೆರೆ ಎಂಬ ಗ್ರಾಮದಲ್ಲಿನ ಮೂರು ವೀರಗಲ್ಲುಗಳನ್ನೂ ಎಲ್ದೂರಿನ ಒಂದು ವೀರಗಲ್ಲನ್ನೂ[೪] ಮತ್ತು ಇದೇ ಜಿಲ್ಲೆಯ ಕೋಲಾರ ತಾಲ್ಲೂಕಿನ ಹರಕುಂಟೆಯಲ್ಲಿರುವ ವೀರಗಲ್ಲನ್ನು[೫] ಮಾಡಿದವನು 'ವಿಕ್ರಮಾದಿತ್ಯ ಬಹುಗುಣತೇಜ' ಎಂಬುದಾಗಿ ಆ ವೀರಗಲ್ಲುಗಳಿಂದ ತಿಳಿದು ಬರುತ್ತದೆ. ಕ್ರಿ.ಶ.

---

೧. ವಿವರಣೆಗಳಿಗೆ ನೋಡಿ– K. Sivarama Murthy : Indian Sculpture. ಪು. ೧–೬

೨. ವಿವರಣೆಗಳಿಗೆ ನೋಡಿ – ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೪೬೦–೬೫

೩. E.C.IX. Ht.87, 750

೪. E.C.X. Mb. 161,162,163 ಮತ್ತು 108, ಸು. 950

೫. E.C.X. Kl. 245, 945

೬ E.C.XV. Ak.237, 971

೯೭೧ರ ನೇರ್ಲಿಗೆಯ ವೀರಗಲ್ಲನ್ನು 'ವಿಭೋಗ' ಎಂಬುವನು ಮಾಡಿದಂತೆ ತಿಳಿದುಬರುತ್ತದೆ.[೬] ಕ್ರಿಶ. ೧೦೧೬ರ ಎರಡು ವೀರಗಲ್ಲುಗಳನ್ನು 'ಕುಟಕರ್ಜ್ಜ'ನೆಂಬುವನು ಮಾಡಿದಂತೆ ತಿಳಿದುಬರುತ್ತದೆ.[೭] ಸುಮಾರು ಕ್ರಿ.ಶ. ೧೨೮೬ರಿಂದ ೧೩೦೨ರ ಅವಧಿಯಲ್ಲಿ 'ಸಿಂಗೋಜನ ಮಗ ಬೀರೋಜ' ನೆಂಬುವನು ಒಂಭತ್ತು ವೀರಗಲ್ಲುಗಳನ್ನು ಕಡೆದಿರುವಂತೆ ತಿಳಿದುಬರುತ್ತದೆ.[೮] ಇವುಗಳಲ್ಲದೆ ವೀರಗಲ್ಲುಗಲನ್ನು ಮಾಡಿದ ಹಲವಾರು ಶಿಲ್ಪಿಗಳ ಹೆಸರುಗಳು ದೊರೆಯುತ್ತವೆ.

""..................ವ್ರೋಜಂ ಮಾಡಿದ."[೯] ""ನತೋಜನ ಮಗ ಕಡೋಜನು,"[೧೦] ""ಹೋಯೋಜಂ ಬೆಸಂಗಯ್ದ"[೧೧] ""ಮಸಣೋಜಂ ಮಾಡಿದ ಕಲ್ಲು,"[೧೨] ""ಕೇತಳಿಯ ಪುತ್ರ ಸುರಸತಿ ಗಣಂಗಳ..............ಸಿ ಮಚ್ಚುಪ ಪ್ರಸಾದಿತರಿಗೆ ಮಸ್ತಕಶೂಲ ಅರಿಬಿರುದ ಪ್ರಸಾದಿಗಳಗಂಡ ತರಿತೊಡರ್ದರ ಅಂಕುಸ ಬಸದಿಯ ಮಾಲೋಜ ಮಾಡಿದ ಕಲ್ಲಾ,"[೧೩] ""ಮಲ್ಲೋಜ"[೧೪] ""ಸರಸ್ವತಿ ವರಪುತ್ರ ಕಲುಕುಟಿಗ ಹಾಲೋಜ,"[೧೫] ""ಹಲ್ಲೋಜ,"[೧೬] ""ಕಲುಕುಟಿಗ ಸಿಗ್ಗೋಜ,"[೧೭] ""ಸೋಮೋಜ ಬಮ್ಮೋಜನ ಕೆಲಸಂ,"[೧೮] ""ಕಲಿಸೆಯ ರಾಮೋಜನ ಮಗ ಮುದುಕ."[೧೯] ""ವಿಭೋಜನ ಮಗ ಸಿದ್ದೋಜ,"[೨೦] ""ವೀರೋಜನ ಮಗ ಕಾವೋಜ,"[೨೧] ""ಪೊಂಬಚ ಕಲೋಲಯಿತ ಪುರದ ಸಾವಿಬಜನ ಮಗ ಸಾತ,"[೨೨] ""ಶ್ರೀ ಶ್ರೀ ಮಂಗಲರಾನೆ ಮಜೆಯೊಕ್ಕರೆ ಕಾವ ರೊದ್ದದ ಗಂಗೋಜನ ಮಗ ಬೋಗೋಜ,"[೨೩] ""ಕಂದವ್ರೋಜ,"[೨೪] ""ಪುರದಾಚಾರಿಯ

---

೭. E.C.VII. Sk. 307, ಮತ್ತು 308, 1016

೮. ಈ ಬೀರೋಜನ ಬಗ್ಗೆ ವಿವರಗಳಿಗೆ ನೋಡಿ– ಡಾ. ಎಂ.ಎಂ. ಕಲಬುರ್ಗಿ: ಶಾಸನ ವ್ಯಾಸಂಗ ಸಂ. ಪು. ೪೧–೪೨

೯. E.C.VII. Sk. 62, 1070

೧೦. ಅದೇ. ೨೯೮, ೧೦೮೯

೧೧. ಅದೇ. ೭೦

೧೨. M.A.R. 1934, Mg. 12, 1117

೧೩. E.C.XII. Tp. 32, 46, 11ನೇ ಶತಮಾನ

೧೪. E.C.V. Bl.206, 136

೧೫. ಆರ್. ಎನ್. ಗುರವ : ಕಾರಾವಾರ ಜಿಲ್ಲೆಯ ಶಾಸನಗಳು. ಪು.೬೦

೧೬. E.C.VIII. Sb. 519, 1138

೧೭. ಅದೇ. ೫೨೫, ೧೧೫೨

೧೮. E.C.VII. Sk. 150, 1171

೧೯. E.C.VIII. Nr. 8, 1221

೨೦. E.C.XVI. Tp. 160, 1277

೨೧. E.C.IV. Ch.350 ೧೩ನೇ ಶತಮಾನ

೨೨. E.C.VIII. Tl. 177, 1225

೨೩. E.C.V. Cn.261, ೧೩ನೇ ಶತಮಾನ

೨೪. E.C.IX. Kn. 28, 1292

ಮಗ ಮಂಡಳಿಕೆ.................ಕಾಚಾರಿ,"[೨೫] ""ಬರಲಿಶಯ ಮಧುಕೋಜ,"[೨೬] ""ಕಲಿಸೆಯ ರಾಮೋಜನ ಮಗ ಮಧುಕೋಜ,"[೨೭] ""ಬೀರಗಲ್ಲ ಮಾಡಿದ ಆಚಾರಿ............."[೨೮] ""ಮಾಚೋಜ,"[೨೯] ""ಬಾಣಲ್ಲಿ ಮಾಲಿಂಗರೋಜ ಮಾಡಿದ ಕೈಲಾಸ,"[೩೦] ""ಬೆಳತೂರ ಮಾಲಿಯೋಜ,"[೩೧] ""ಬೋಗೋಜ",[೩೨] ""ಹಿರಿಯ ಕೊಪ್ಪದ ದುಗ್ಗೋಜ",[೩೩] ""ತಮ್ಮೋಜನ ಮಗ ಕಲಿಕೋಜ",[೩೪] ""ಕೋಟಿಯೋಜ ನಾಗೋಜ",[೩೫] ""ಕಲಿಸಿಯ ವಿರೋಜ",[೩೬] ""ಬೀರಗಲ್ಲ ಮಾಡಿದ ಹೋಜನು ಮಾಲೋಜ ಮುಳೋಜ",[೩೭] ಇವಿಷ್ಟೂ, ವೀರಗಲ್ಲುಗಳ ಪಾಠದಿಂದ ತಿಳಿದುಬರುವ ವೀರಗಲ್ಲುಗಳ ಶಿಲ್ಪಿಗಳ ಹೆಸರುಗಳು ಮತ್ತು ಅವರ ಬಗ್ಗೆ ವಿವರಗಳು.

ವೀರಗಲ್ಲುಗಳ ಪಾಠದಿಂದಲೇ ತಿಳಿದುಬರುವ ಆ ಶಿಲ್ಪಿಗಳ ಬಿರುದುಗಳನ್ನು ಗಮನಿಸಿದಾಗ, ಪರಿಣತರಾದ ಶಿಲ್ಪಿಗಳೂ ವೀರಗಲ್ಲಿನ ಶಿಲ್ಪಕಾರ್ಯದಲ್ಲಿ ತೊಡಗುತ್ತಿದ್ದರೆಂದು ವ್ಯಕ್ತವಾಗುತ್ತದೆ. ಇದಕ್ಕೆ ಪೋಷಕವಾಗಿ ಕೊಯತೂರಿನ ಕಾಸಿಗ'ನಾದ ವಿಕ್ರಮಾದಿತ್ಯ ತನ್ನನ್ನು 'ಬಹುಗುಣ ತೇಜನ್' ಎಂದು ಕರೆದುಕೊಂಡಿರುವುದನ್ನು ಗಮನಿಸಬಹುದು.[೩೮] ಕಾರವಾರ ಜಿಲ್ಲೆಯ ನಂದಿಗಟ್ಟಾ ಗ್ರಾಮದ ವೀರಗಲ್ಲನ್ನು ಮಾಡಿದ 'ಹಾಲೋಜ'ನ ಹೆಸರನ್ನು ತಿಳಿಸುತ್ತಾ, ಆ ವೀರಗಲ್ಲಿನ ಪಾಠ ಅವನನ್ನು 'ಸರಸ್ವತಿ ವರಪುತ್ರ' ಎಂಬುದಾಗಿ ಕರೆದಿದೆ.[೩೯] ತಿಪಟೂರು ತಆಲ್ಲೂಕಿನ ತಂಡಗ ಮತ್ತು ಕರಗಲ್ಲು ಎಂಬ ಗ್ರಾಮಗಳಲ್ಲಿನ ವೀರಗಲ್ಲುಗಳೆರಡನ್ನು ಮಾಡಿದ 'ಮಲ್ಲೋಜ'ನನ್ನು ಆ ವೀರಗಲ್ಲುಗಲ ಪಾಠ, ""ಕೇತಳಿಯ ಪುತ್ರ ಸುಸರತಿಗಣಂಗಳ..........ಸಿ ಮಚ್ಚರಿಪ ಪ್ರಸಾದಿತರಿಗೆ ಮಸ್ತಕಶೂಲ ಅರಿಬಿರುದ ಪ್ರಸಾದಿಗಳ ಗಂಡ ತರಿತೊಡೆರ್ದ್ಗ ರ ಅಂಕುಸ ಬಸದಿಯ ಮಲ್ಲೋಜ,' ಎಂಬುದಾಗಿ ಶಿಲ್ಪಕಲೆಯಲ್ಲಿ ಆತನಿಗಿದ್ದ ಪರಿಣತಿಯನ್ನು ಎತ್ತಿ ಹಿಡಿದಿದೆ.[೪೦] ಕ್ರಿ.ಶ. ೧೩೦೨ರ ಒಂದು

೨೫. M.A.R. 1947-56.Md. 25, ೧೩ನೇ ಶತಮಾನ
೨೬. E.C.VIII. Sa. 96, 1269
೨೭. ಅದೇ. ೪೫, ೧೩೦೦
೨೮. E.C.XI. Hk. 106, 1303
೨೯. M.A.R. 1923. No. 62
೩೦. ಅದೇ. ೧೨೦, ೧೩೭೯
೩೧. E.C.III. MI. 18, 1381
೩೨. E.C.XI. CI. 42, 1403
೩೩. E.C.VIII. Sa. 74, 1420
೩೪. E.C.VII. Sk. 40, 1430
೩೫. ಅದೇ. ೩೦೬, ೧೪೦೨
೩೬. E.C.VIII. Sa. 47 ?
೩೭. E.X. V. Hn. 29 ?
೩೮. E.C.X. Mb. 161, 162, 950
೩೯. ಆರ್. ಎನ್. ಗುರವ : ಕಾರವಾರ ಜಿಲ್ಲೆಯ ಶಾಸನಗಳು. ಪು. ೬೦
೪೦. E.C.CII. Tp. 32, 46, 1146

ವೀರಗಲ್ಲಿನಿಂದ ಸಿಂಗೋಜನ ಮಗ ಬೀರೋಜನೆಂಬುವನು, ತಾವೇ ಮಹಾಶಿಲ್ಪಿಗಳು ಎಂದು ಮೆರೆಯುವ '"ಮಂರಣಿಸುವರ ಗಂಟಜಿಗಾಳ ಮತ್ಸರಿಪುವರ ಮಂಠಸೂಳ'[೪೧] ನಾಗಿದ್ದನೆಂದು ತಿಳಿಯುತ್ತದೆ. ಈ ಎಲ್ಲ ಬಿರುದುಗಳೂ ವೀರಗಲ್ಲುಗಳನ್ನು ಮಾಡುತ್ತಿದ್ದ ಶಿಲ್ಪಿಗಳು ಶಿಲ್ಪ ಮತ್ತು ವಾಸ್ತುಕಲೆಯಲ್ಲಿ ಪರಿಶ್ರಮ ಹೊಂದಿದ್ದವರೇ ಆಗಿದ್ದರೆಂಬುದನ್ನು ದೃಢಪಡಿಸುತ್ತವೆ ಮತ್ತು ಮುಖ್ಯವಾಗಿ ತನ್ನ ಸಮಕಾಲೀನ ಶಿಲ್ಪಕಲೆಯ ಒಂದು ಅಂಗವಾಗಿಯೇ ಈ ವೀರಗಲ್ಲುಗಳ ಶಿಲ್ಪವೂ ಬೆಳೆಯಿತೆಂಬುದನ್ನು ಖಚಿತಪಡಿಸುತ್ತವೆ. ತಮ್ಮ ಹೆಸರುಗಳನ್ನು ಅಥವಾ ಬಿರುದುಗಳನ್ನು ವೀರಗಲ್ಲಿನ ಪಾಠದ ಮೇಲೆ ಉಲ್ಲೇಖಿಸದಿರುವ ಶಿಲ್ಪಿಗಳು ಸಾಮಾನ್ಯ ಶಿಲ್ಪಿಗಳು ಎಂದು ಭಾವಿಸಬಾರದು. ಉತ್ಕೃಷ್ಟವಾದ ವೀರಗಲ್ಲುಗಳನ್ನು ಮಾಡಿರುವ ಅನೇಕ ಶಿಲ್ಪಿಗಳ ಹೆಸರೇ ದೊರೆಯುವುದಿಲ್ಲ. ಕೆಲವೊಮ್ಮೆ ದೊರೆತರೂ ಅವರು ತಮ್ಮನ್ನು 'ಕಲುಕುಟಿಕ', ''ಆಚಾರಿ', ಎಂಬಷ್ಟೇ ವಿಶೇಷಣ ಅಥವಾ ವೃತ್ತಿ ಸೂಚಕ ಪದಗಳಿಂದ ಕರೆದು ಕೊಂಡಿರುವುದು ಅವರ ವಿನಯಗುಣವನ್ನು ತಿಳಿಸತುತದೆ ಎಂಬುದಾಗಿ ಭಾವಿಸಬೇಕು.

ಶಾಸನಗಳ ಪಾಠದಲ್ಲಿರುವ ಆ ವೀರಗಲ್ಲುಗಳನ್ನು ಮಾಡಿದ ಶಿಲ್ಪಿಗಳ ಹೆಸರುಗಳನ್ನು ಗಮನಿಸುತ್ತಾ ಹೋದಂತೆ, ಒಬ್ಬನೇ ಶಿಲ್ಪಿ ಹಲವಾರು ವೀರಗಲ್ಲುಗಳನ್ನು ಮಾಡಿರುವ ನಿದರ್ಶನಗಳು ದೊರೆಯುತ್ತವೆ. ಕ್ರಿಶ. ೯೫೦ರ ಸುಮಾರಿನ ಒಂಭತ್ತು ವೀರಗಲ್ಲುಗಳನ್ನು ವಿಕ್ರಮಾದಿತ್ಯ ಎಂಬುವನು ಮಾಡಿದಂತೆ ತಿಳಿಯುತ್ತದೆ. ಕ್ರಿಶ. ೧೨೮೬ ರಿಂದ ೧೩೦೨ರ ಅವಧಿಯಲ್ಲಿ 'ಸಿಂಗೋಜನ ಮಗ ಬೀರೋಜ'ನೆಂಬುವನು ಸುಮಾರು ಒಂಭತ್ತು ವೀರಗಲ್ಲುಗಳನ್ನೂ ಮಾಡಿರುವಂತೆ ತಿಳಿಯುತ್ತದೆ. ಹಾಗೆಯೇ 'ಕಟ್ಟ ಕರ್ಜುನ', 'ಕಲಿಸೆಯ ರಾಮೋಜನ ಮಗ ಮಧುಕೋಜ' ಮುಂತಾದ ಶಿಲ್ಪಿಗಳು ಒಂದಕ್ಕಿಂತ ಹೆಚ್ಚಿನ ವೀರಗಲ್ಲುಗಳನ್ನು ಮಾಡಿರುವ ನಿದರ್ಶನಗಳಿವೆ. ಕೆಲವೊಮ್ಮೆ ಶಿಲ್ಪಿ ತಾನು ಮಾಡಿರುವ ಎಲ್ಲಾ ವೀರಗಲ್ಲುಗಳ ಮೇಲೆಯೂ ತನ್ನ ಹೆಸರನ್ನು ನಮೂದಿಸದೆ ಇರುವ ಸಾಧ್ಯತೆ ಇರುತ್ತದೆ. ಇದರಿಂದ ವ್ಯಕ್ತವಾಗುವ ಅಂಶವೆಮದರೆ, ಶಿಲ್ಪಿ ತನಗೆ ಜನ ಮಾಡಲು ಹೇಳಿದ ವೀರಗಲ್ಲನ್ನು ತನ್ನ ಪ್ರತಿಭೆಯಿಂದ, ಸುಂದರವಾಗಿ ಮಾಡದಿವನಾದರೆ ಅವನಿಗೆ ಹಲವಾರು ವೀರಗಲ್ಲುಗಳನ್ನು ಮಾಡಲು ಬೇಡಿಕೆ ಇರುತ್ತಿತ್ತು ಎನ್ನುವುದು.

ಕೆಲವೊಮ್ಮೆ ಇಬ್ಬರು ಶಿಲ್ಪಿಗಳು ಸೇರಿ ಒಂದು ವೀರಗಲ್ಲುನ್ನು ಮಾಡುತ್ತಿದ್ದ ನಿದರ್ಶನಗಳೂ ದೊರೆಯುತ್ತವೆ. ಶಿಕಾರಿಪುರ ತಾಲ್ಲೂಕಿನ ಸಂಡ ಎಂಬ ಗ್ರಾಮದ ಕ್ರಿಶ. ೧೪೦೨ರ ವೀರಗಲ್ಲನ್ನು 'ಕೋಟಿಯೋಜ' ಮತ್ತು 'ನಾಗೋಜ' ಎಂಬುವರು ಮಾಡಿದಂತೆ ತೋರುತ್ತದೆ.[೪೨] ಈ ನಿದರ್ಶನದಿಂದ ಈ ರೀತಿಯ ಅಭಿಪ್ರಾಯಕ್ಕೆ ಬರಬಹುದು. ಪರಿಣತನಾದ ಶಿಲ್ಪಿ ತನ್ನ ವಿದ್ಯೆಯನ್ನು

೪೧. E.C.VII. Sk. 306, 1402

೪೨. E.C.VII. Sk. 306, 1402

ಶಿಷ್ಯನಿಗೆ ಕಲಿಸುವಲ್ಲಿ ಅವನಿಂದ ನೆರವನ್ನು ಪಡೆದು, ತನ್ನ ಶಿಷ್ಯನ ಹೆಸರನ್ನು ಉಲ್ಲೇಖಿಸಿರಬೇಕು, ಅಥವಾ ಇಬ್ಬರು ನುರಿತ ಶಿಲ್ಪಿಗಲು ಸೇರಿ ಈ ವೀರಗಲ್ಲಿನ ಶಿಲ್ಪವನ್ನು ಕಡೆದಿರಬಹುದು.

ಕೆಲವೊಮ್ಮೆ ವೀರಗಲ್ಲುಗಳ ಪಾಠವನ್ನು ವೀರಗಲ್ಲಿನ ಮೇಲೆ ಬರೆಯುತ್ತಿದ್ದವನು ಶಿಲ್ಪಿಯಲ್ಲದೆ, ಬೇರೆಯುವರು ಎಂಬ ವಿಷಯ ಕೆಲವು ವೀರಗಲ್ಲುಗಳ ಪಾಠದಿಂದ ತಿಳಿಯುತ್ತದೆ. ಇಂಥ ಕಡೆಗಳಲ್ಲಿ ಶಿಲ್ಪಿ ತಾನು ವೀರಗಲ್ಲಿನ ಶಿಲ್ಪವನ್ನಷ್ಟೇ ಬಿಡಿಸುತ್ತಿದ್ದನೆಂದು ತೋರುತ್ತದೆ. ಕ್ರಿಶ. ೧೧೧೭ರ ಒಂದು ವೀರಗಲ್ಲಿನ ಶಿಲ್ಪವನ್ನು 'ಮಸಣೋಜ' ಎಂಬುವನು ಕಡೆದುದಾಗಿಯೂ, ಅದರ ಮೇಲೆ ಶಾಸನವನ್ನು 'ಮಾದೆಯೋಜ' ಎಂಬುವನು ಬರೆದುದಾಗಿಯೂ ತಿಳಿದು ಬರುತ್ತದೆ.[೪೩] ಕ್ರಿಶ. ೧೨೯೨ರ ಮತ್ತೊಂದು ವೀರಗಲ್ಲಿನ ಪಾಠದಿಂದ ವೀರಗಲ್ಲಿನ 'ಶಿಲಾಕ್ಷರ'ಗಳನ್ನು ಬರೆದಾತನು 'ಗಾವಣದ......ಸೇನ ಬೋವ'ನೆಂದೂ ವೀರಗಲ್ಲನ್ನು ಮಾಡಿದ ಶಿಲ್ಪಿ 'ಬೀರೋಜ'ನೆಂದೂ ತಿಳಿದುಬರುತ್ತದೆ.[೪೪] ಬೇಲೂರು ತಾಲ್ಲೂಕಿನ ಅಗ್ಗಡಲು ಗ್ರಾಮದ ವೀರಗಲ್ಲನ್ನು 'ಮಾಲೋಜ' ಎಂಬುವನು ಮಾಡಿದ್ದರೆ, ಅದರ ಮೇಲಿನ ಶಾಸನದ ಪಾಠವನ್ನು 'ಕುಂದೂರ ರಾಯಣ್ಣನು' ಬರೆದನೆಂದು ತಿಳಿಯುತ್ತದೆ.[೪೫] ಕ್ರಿಶ. ೧೩೦೦ರ ವೀರಗಲ್ಲನ್ನು ಮಾಡಿದ ಶಿಲ್ಪಿ 'ಮಧುಕೋಜ' ನಾದರೆ, ಆ ವೀರಗಲ್ಲಿನ ಪಾಠವನ್ನು ಬರೆದವನು 'ಬರದವಳ್ಳಿಯ ಬೆಳಜೀಯನ ಮಗ ಮಚಿಜೀಯ'ನೆಂದು ತಿಳಿದುಬರುತ್ತದೆ.[೪೬] ಹಾಗೆಯೇ ಕ್ರಿಶ. ೧೩೮೧ರ ವೀರಗಲ್ಲಿನ ಶಿಲ್ಪವನ್ನು 'ಬೆಳತೂರ ಮಾಲಿಯೋಜ'ನು ಮಾಡಿದ್ದರೆ, ಅದಕ್ಕೆ ಬರಹವನ್ನು 'ಬಯಿರೋಜ' ಎಂಬುವನು ನೀಡಿದ್ದಾನೆ.[೪೭] ಕೆಲವು ಕಡೆ ಈ ಹೆಸರುಗಳು, ಶಾಸನದ ಪಾಠವನ್ನು ತಯಾರು ಮಾಡಿದವರದೋ ಅಥವಾ ಕಲ್ಲಿನ ಮೇಲೆ ಶಿಲ್ಪವನ್ನು ಕಡೆದವರದೋ ಸ್ಪಷ್ಟವಾಗುವುದಿಲ್ಲ.

ವೀರಗಲ್ಲುಗಳನ್ನು ಮಾಡಿದ್ದಕ್ಕೆ ಶಿಲ್ಪಿಗಳಿಗೆ ದೊರೆಯುತ್ತಿದ್ದ ಪ್ರತಿಫಲ

ವೀರಗಲ್ಲುಗಳನ್ನು ಮಾಡುತ್ತಿದ್ದ ಶಿಲ್ಪಿಗಳಿಗೆ ಎಷ್ಟು ಸಂಭಾವನೆಯನ್ನು ಯಾವ ರೀತಿಯಲ್ಲಿ ಕೊಡುತ್ತಿದ್ದರು ಎಂಬುದರ ಬಗ್ಗೆ ಎಲ್ಲಾ ವೀರಗಲ್ಲುಗಳ ಪಾಠದಿಂದ ಮಾಹಿತಿ ದೊರೆಯುವುದಿಲ್ಲ ವಾದರೂ ಕೆಲವು ಕಡೆ ಈ ಬಗ್ಗೆ ಮಾಹಿತಿ ದೊರೆಯುತ್ತದೆ. ಕ್ರಿಶ. ೯೭೧ರ ನೇರ್ಲಿಗೆಯ ವೀರಗಲ್ಲನ್ನು ಮಾಡಿದ ಶಿಲ್ಪಿಗೆ ಹತ್ತು ಕೊಳಗ ಪ್ರಮಾಣದ ಭೂಮಿಯನ್ನು ಕೊಟ್ಟರೆಂದು ಆ ವೀರಗಲ್ಲಿನ

---

೪೩. "ಮಸಣೋಜಂ ಮಾಸಿಸಿದಂ ಕಲ್ಲಾ ಮಾದೆಯೋಜಾ ಬರೆದ ಸಾಸನಾ".
M.A.R. 1934. Mg. 12, 1117

೪೪. E.C.VIII. Sa. 97, 1292

೪೫. E.C.V. Bl. 206, 1365

೪೬. ಅದೇ. ೪೫, ೧೩೦೦

೪೭. E.C.III. Ml. 18, 1381

ಪಾಠದಿಂದಲೇ ತಿಳಿದುಬರುತ್ತದೆ.[೪೮] ಕ್ರಿ.ಶ. ೧೧೩೮ರ ಮತ್ತೊಂದು ವೀರಗಲ್ಲಿನಿಂದ, ಬೊಪ್ಪನ ತಂಗಿಯಾದ 'ಮಾಯಕ್ಕ' ಎಂಬುವಳು ಸರಸ್ವತಿಯವರ ಪುತ್ರನಾದ ಕಲುಕುಟಿಗ ಹಾಲೋಜ ಎಂಬುವನಿಗೆ 'ಎರಡು ಹೊನ್ನು'ಗಳನ್ನು ಕೊಟ್ಟು ವೀರಗಲ್ಲನ್ನು ಮಾಡಿಸಿದ ವಿಷಯ ತಿಳಿದು ಬರುತ್ತದೆ.[೪೯] ತನ್ನ ಮಗನ 'ವೀರಸ್ತಂಬ'ವನ್ನು, ಮಾಡಿದ 'ಬೋಗೋಜ' ಎಂಬುವನಿಗೆ ಆತನ ತಂದೆ ಕೆರೆಯ ಕೆಳಗೆ ದತ್ತಿಯಾಗಿ ಸ್ವಲ್ಪ ಭೂಮಿಯನ್ನು ಕೊಟ್ಟ ವಿಷಯ ಕ್ರಿ.ಶ. ೧೪೦೩ರ ವೀರಗಲ್ಲಿನ ಪಾಠದಿಂದ ತಿಳಿಯುತ್ತದೆ.[೫೦] ಮತ್ತೊಂದು ಶಾಸನ (ಇದು ವೀರಗಲ್ಲು ಅಲ್ಲ)ದಿಂದ 'ದೇವಪ್ಪ' ಎಂಬುವನ ವೀರಗಲ್ಲನ್ನು ಮಾಡುವುದಕ್ಕೆ 'ಮಾರೋಜ' ನೆಂಬ ಶಿಲ್ಪಿಗೆ "ದೊಡ್ಡಪ್ಪ ಮಾಯಣ್ಣ ಕರಿಯಣ್ಣಂ ಮಸಣ್ಣನವರು ಕೊಡಿಗೆಯಾಗಿ ಜಮೀನನ್ನು ಬಿಟ್ಟ ವಿಷಯ ತಿಳಿಯುತ್ತದೆ.[೫೧]

ಶಿಲ್ಪಿಯ ಗುಣಮಟ್ಟವನ್ನರಿತು ಅವನ ಕೆಲಸಕ್ಕೆ ತಕ್ಕ ಪ್ರತಿಫಲವನ್ನು ವೀರಗಲ್ಲನ್ನು ಮಾಡಿಸುತ್ತಿದ್ದವರು ಕೊಡುತ್ತಿದ್ದರು. ಈ ಕಾರಣದಿಂದಲೇ ಶಿಲ್ಪಿಗಳು ಶಿಲ್ಪಕಲೆಯನ್ನು ಬದುಕಿನ ನಿರ್ವಹಣೆಯ ಒಂದು ಕಸುಬನ್ನಾಗಿ ಮಾಡಿಕೊಂಡಿದ್ದರೆಂದು ಹೇಳಬಹುದು. ಅವರ ಶಿಲ್ಪದ ಗುಣಮಟ್ಟ ಏರಿದಂತೆ ಪ್ರತಿಫಲವೂ ಏರುತ್ತಿತ್ತು.

ವೀರಗಲ್ಲುಗಳ ಶಿಲ್ಪ

ಮೊದಲಿಗೆ ವೀರಗಲ್ಲುಗಳನನ್ನು ಮಾಡುವ ಶಿಲ್ಪಿಗಳಿಗೆ ಇರುವ ಅವಕಾಶ ಮತ್ತು ಪರಿಮಿತಿಗಳನ್ನು ಗಮನಿಸುವುದು ಸೂಕ್ತ ಈ ದೃಷ್ಟಿಯಿಂದ ವೀರಗಲ್ಲುಗಳ ಶಿಲ್ಪವನ್ನು ಗಮನಿಸಿದಾಗ, ವೀರಗಲ್ಲುಗಳನ್ನು ಮಾಡುವ ಕೆಲವಾರು ಸಂಪ್ರದಾಯಗಳು ಪೂರ್ವಸಂಪ್ರದಾಯದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಿರುವ ವಿಷಯವನ್ನು ಇನ್ನು ಮುಂದೆ ಪರಿಶೀಲಿಸಬಹುದು.

ವೀರಗಲ್ಲುಗಳ ಶಿಲ್ಪಿಗಳು ವೀರಗಲ್ಲಿನಲ್ಲಿ ಯಾವುದೋ ಒಂದು ಘಟನೆಯನ್ನು – ಮುಖ್ಯವಾಗಿ ತುರು ಕಾಳಗ, ಯುದ್ಧದ ಸನ್ನಿವೇಶಗಳು, ಇತರ ಹೋರಾಟಗಳು, ಬೇಟೆ ಮುಂತಾದವುಗಳನ್ನು –ನಿರೂಪಿಸಬೇಕು ಆದ್ದರಿಂದ ವೀರಗಲ್ಲಿನ ಶಿಲ್ಪಿಯು ತಾನು ತನ್ನ ಸಮಕಾಲೀನದಲ್ಲಿ ಕಣ್ಣಾರೆ ಕಂಡ ನೈಜ ಘಟನೆಗಳ ಹಿನ್ನೆಲೆಯಲ್ಲಿ, ಶಿಲ್ಪ ಸಂಪ್ರದಾಯದ ನಿಯಮಗಳಿಗನುಸಾರವಾಗಿ ಶಿಲ್ಪವನ್ನು ಕಲ್ಲಿನ ಮೇಲೆ ಮೂಡಿಸಬೇಕಾಗುತ್ತದೆ. ಆರಂಭದಲ್ಲಿ ವೀರಗಲ್ಲುಗಳನ್ನು ಮಾಡುವ ಶಿಲ್ಪಿಗಳು, ಹೇಗೆ ಅಭಿವ್ಯಕ್ತಿಗೊಳಿಸಬೇಕು ಎಂಬ ಸಮಸ್ಯೆಯನ್ನು

---

೪೮. E.C.XV. Ak. 237, 971. "ಕಲ್ಲ ಬೆಸಗೆಯ್ದ ವಿಭೋಗಂಗೆ ಕೊಟ್ಟ ಪತ್ತು ಕೊಳಗ ಮಣ್ಣಂ"
೪೯. ಆರ್. ಎನ್. ಗುರವ : ಕಾರವಾರ ಜಿಲ್ಲೆಯ ಶಾಸನಗಳು. ಪು. ೬೦
೫೦. E.C.XI. CI, 42, 1403

ಎದುರಿಸಿರಬೇಕು. ಏಕೆಂದರೆ ಇತರ ಶಿಲ್ಪಕೃತಿಗಳನ್ನು ನಿರ್ಮಿಸುತ್ತಿದ್ದ ಶಿಲ್ಪಿಗಳಿಗೆ ಇದ್ದಂತಹ ಶಾಸ್ತ್ರ –ಪ್ರಮಾಣ ಗ್ರಂಥಗಳ ಆಧಾರ ಈ ವೀರಗಲ್ಲುಗಳ ಶಿಲ್ಪಿಗಳಿಗೆ ಇರಲಿಲ್ಲ. ಮುಂದೆ ಗಮನಿಸುವ ವೀರಗಲ್ಲುಗಳ ರಚನಾ ಸಂಪ್ರದಾಯವನ್ನು ವೀರಗಲ್ಲುಗಳ ಶಿಲ್ಪಿಗಳೇ ಹಾಕಿಕೊಂಡಿರಬೇಕು. ಕಾಲಾನುಕ್ರಮದಲ್ಲಿ ತಮ್ಮ ಹಿಂದಿನ ಶಿಲ್ಪಗಳ ಪ್ರಯೋಗಗಳಲ್ಲಿನ ಸರಿ ತಪ್ಪುಗಳನ್ನು ಗಮನಿಸಿ ತಮ್ಮ ಪ್ರಯೋಗಗಳನ್ನು ಮುಂದುವರಿಸಿರಬೇಕು. ಈ ಪ್ರಯತ್ನ ಒಂದು ಹಂತದಲ್ಲಿ ವೀರಗಲ್ಲುಗಳನ್ನು ಮಾಡುವ ಶಿಲ್ಪಿಗಳಿಗೆ ತೃಪ್ತಿಯನ್ನು ನೀಡಿರಬೇಕು. ಆ ನಂತರ ಅದೇ ಒಂದು ಸಂಪ್ರದಾಯ ವಾಗಿರಬೇಕು.

ಆರಂಭಕಾಲದ ವೀರಗಲ್ಲುಗಳಲ್ಲಿ, ಸಾಮಾನ್ಯವಾಗಿ ಶಿಲ್ಪಿ, ವೀರಗಲ್ಲಿನ ರಚನೆಗೆ ಯಾವ ಕಲ್ಲನ್ನು ಆಯ್ಕೆ ಮಾಡಿರುತ್ತಾನೆಯೋ, ಅದನ್ನು ಅನುಸರಿಸಿ ಶಿಲ್ಪವನ್ನು ಬಿಡಿಸಿರುತ್ತಾನೆ. ಇಡೀ ವೀರಗಲ್ಲಿಗೇ ಒಂದು ಆಕಾರವನ್ನು ಕೊಡುವ ಪ್ರಯತ್ನವನ್ನು ಮಾಡಿಲ್ಲ. ಆದರೆ ಮುಂದೆ ವೀರಗಲ್ಲುಗಳ ಶಿಲ್ಪಿಗಳು ವೀರಗಲ್ಲಿಗೆ ಒಟ್ಟಿನ ಮೇಲೆ ಒಂದು ಆಕಾರ ಬರುವ ಹಾಗೆ ಅದನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ.

ಬಾಣರ, ಗಂಗರ, ನೊಳಂಬರ ಬಾದಾಮಿ ಚಾಲುಕ್ಯರ ಮತ್ತು ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ಸಾಮಾನ್ಯವಾಗಿ ಮೂಲಶಿಲೆಯ ಆಕಾರವನ್ನೇ ಹೊಂದಿರುವುದನ್ನು ಗಮನಿಸಬಹುದು. (ಚಿತ್ರ ೨೩೪ ರಿಂದ ೨೫೭)

ಶಿಲ್ಪದ ವಿವರಗಳನ್ನು ಹೇಗೆ ಬಿಡಿಸಬೇಕು ಎಂಬುದನ್ನು ಅರಿಯದ ಅಥವಾ ಘಟನಾವಳಿಗಳನ್ನು ಕಲ್ಲಿನ ಮೇಲೆ ಶಿಲ್ಪದಲ್ಲಿ ಹೇಗೆ ಅಭಿವ್ಯಕ್ತಿಗೊಳಿಸಬೇಕು ಎಂಬ ಕ್ರಮ ಸಿದ್ಧಿಸದ ಮುನ್ನ, ವೀರಗಲ್ಲುಗಳ ಶಿಲ್ಪಿಗಳು ಶಿಲ್ಪದ ವಿವರಗಳನ್ನು ಕಲ್ಲಿನ ಮೇಲೆ ಅಸ್ತವ್ಯಸ್ತವಾಗಿ ಬಿಡಿಸಿರುವುದನ್ನು ಗಮನಿಸಬಹುದು. ಆದರೆ, ವಿವರಗಳನ್ನು ಕ್ರಮವಾಗಿ ಬಿಡಿಸಬೇಕು ಎಂಬ ಉದ್ದೇಶಪೂರ್ವಕ ಪ್ರಯತ್ನವನ್ನು ಗಂಗ, ನೊಳಂಬರ ಕಾಲದ ಆರಂಭದ ವೀರಗಲ್ಲುಗಳ ಶಿಲ್ಪದಲ್ಲಿ ಗಮನಿಸಬಹುದು (ಚಿತ್ರ ೨೪೮, ೨೪೯, ೨೫೧) ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ ಕಾಲದ ವೀರಗಲ್ಲುಗಳನ್ನು ಮಾಡಿದ ಶಿಲ್ಪಿಗಳಿಗಿಂತ ತಮ್ಮ ಈ ಪ್ರಯತ್ನದಲ್ಲಿ ಮುಂದುವರಿದಿರುವಂತೆ ತೋರುತ್ತದೆ, ಇವರು ಘಟನೆಗಳನ್ನು ಹೇಗೆ ಹಂತ ಹಂತಗಳಲ್ಲಿ ಬಿಡಿಸಬಹುದು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡಿದರು. ಇವರ ಈ ಪ್ರಯತ್ನವನ್ನು ಬೆಟಗೇರಿಯ ವೀರಗಲ್ಲುಗಳಲ್ಲಿ ಗಮನಿಸಬಹುದು. (ಚಿತ್ರ. ೨೪೦, ೨೪೧, ೨೪೨) ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ದೇವರನ್ನು ವೀರಗಲ್ಲಿನ ಮೇಲ್ಭಾಗದಲ್ಲಿ ಬಿಡಿಸುವುದು ಪದ್ಧತಿ. ಆದರೆ ಬೆಟಗೇರಿಯ ವೀರಗಲ್ಲೊಂದರಲ್ಲಿ ವೀರಗಲ್ಲಿನ

೫೧. E.C.IX. Cp. 60, ?

ಕೆಳಭಾಗದಲ್ಲಿ ವಿಷ್ಣುವನ್ನು ಅವನ ದ್ವಾರಪಾಲಕರೊಂದಿಗೆ ಬಿಡಿಸಿರುವುದನ್ನೂ ಆ ನಂತರದ ಹಂತಗಳಲ್ಲಿ ಉಳಿದ ವಿವರಗಳನ್ನು ಬಿಡಿಸಿದ್ದಾರೆ ಆದರೆ ಇಲ್ಲೇ ಇರುವ ಇತರ ವೀರಗಲ್ಲುಗಳಲ್ಲಿಯೂ ದೇವರನ್ನು ಬಿಡಿಸಿರುವುದುಂಟು. ಆದರೆ ದೇವರ ಶಿಲ್ಪವಿರುವುದು ಮೇಲ್ಭಾಗದಲ್ಲಿ ಎಂಬುದನ್ನು ಗಮನಿಸಬೇಕು. ಈ ವೀರಗಲ್ಲನ್ನು ಮಾಡಿದ ಶಿಲ್ಪಿಗೆ ದೇವರನ್ನು ಬಿಡಿಸಬೇಕು ಎಂಬ ಕಲ್ಪನೆ ಮೂಡಿ ಬಂತು. ಆದರೆ ಎಲ್ಲಿ ಬಿಡಿಸಬೇಕು, ಮತ್ತು ಹಾಗೆ ಒಂದು ಕಡೆ ಬಿಡಿಸುವುದರಿಂದ ಇಡೀ ಶಿಲ್ಪಕ್ಕೆ ದೊರೆಯುವ ಔಚಿತ್ಯ ಪೂರ್ಣವಾದ ಅರ್ಥವಂತಿಕೆ ಏನು ಎಂಬುದು ತೋರಿದಂತಿಲ್ಲ. ಈ ಸಮಸ್ಯೆಯನ್ನು ಗಮನಿಸಿದ ಮುಂದಿನ ವೀರಗಲ್ಲುಗಳ ಶಿಲ್ಪಿಗಳು ತಪ್ಪನ್ನು ಪರಿಹರಿಸಿಕೊಂಡಂತೆ ತೋರುತ್ತದೆ.

ಕರ್ನಾಟಕದಲ್ಲಿ ದೊರೆತಿರುವ ಅತ್ಯಂತ ಪ್ರಾಚೀನ ವೀರಗಲ್ಲು ಚಿತ್ರದುರ್ಗ ಜಿಲ್ಲೆಯ ತಮಟುಕಲ್ಲು ಎಂಬ ಗ್ರಾಮದಲ್ಲಿದೆ.[೫೨] ಈ ವೀರಗಲ್ಲಿನ ಮೇಲೆ ಮಡಿದ ವೀರನ ಬಗ್ಗೆ, ಸಂಸ್ಕೃತ ಭಾಷೆಯಲ್ಲಿ ಕನ್ನಡ ಲಿಪಿಯ ಶಾಸನವಿದೆ. ಇದೇ ವೀರನನ್ನು ಹೊಗಳುವ ಕನ್ನಡ ಲಿಪಿಯಲ್ಲೇ ಇರುವ ಕನ್ನಡ ಭಾಷೆಯ ಮತ್ತೊಂದು ಶಾಸನ ಈ ವೀರಗಲ್ಲಿನ ಪಕ್ಕದಲ್ಲಿಯೇ ಇದೆ. ಈ ವೀರಗಲ್ಲಿನ ಶಿಲ್ಪದಲ್ಲಿ ಮೂರು ಜನ ವೀರರು ಬಿಲ್ಲು ಬಾಣಗಳನ್ನು ಹಿಡಿದು ವೀರಗಲ್ಲಿನ ಎಡಭಾಗಕ್ಕೆ ಬಲಭಾಗದಿಂದ ಮುಂದುವರಿಯುತ್ತಿರುವಂತೆ ಬಿಡಿಸಲಾಗಿದೆ. ಶತ್ರುಪಕ್ಷದವರು ಬಿಟ್ಟ ಬಾಣಗಳು ವೀರನೊಬ್ಬನ ಕಾಲಿಗೆ ತಗುಲಿದಂತೆ ಬಿಡಿಸಲಾಗಿದೆ. ವೀರರ ಮುಡಿಗಳು, ಮುಂದಿನ ಶತಮಾನಗಳ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ದೊರೆಯುವಂತೆ ಅಂದರೆ ಮುಡಿಯನ್ನು ಮೇಲಕ್ಕೆ ಕಟ್ಟಿದಂತೆ ಇಲ್ಲಿ ಬಿಡಿಸಿಲ್ಲ. ಕೂದಲನ್ನು ಇಳಿಬಿಟ್ಟು ಕಟ್ಟಿದಂತೆ ಬಿಡಿಸಲಾಗಿದೆ. (ಚಿತ್ರ ೨೦೪) ಮುಂದಿನ ಶತಮಾನಗಳ ಎಲ್ಲ ವೀರಗಲ್ಲುಗಳಲ್ಲಿಯೂ ಒಂದಲ್ಲ ಒಂದು ರೀತಿಯಿಂದ ಧ್ವನಿತವಾಗುವ ಸ್ವರ್ಗದ ಕಲ್ಪನೆ ಈ ವೀರಗಲ್ಲಿನ ಶಿಲ್ಪದಲ್ಲಿ ಕಂಡುಬರುವುದಿಲ್ಲ. ಈ ವೀರಗಲ್ಲಿನ ಪಕ್ಕದಲ್ಲಿರುವ ಶಾಸನವೂ ಸಹ ಈ ವೀರಗಲ್ಲಿನ ಪಕ್ಕದಲ್ಲಿಯೇ ಇರುವುದು ಕುತೂಹಲದ ಸಂಗತಿಯಾಗಿದೆ. ಅದೇ ವೀರಗಲ್ಲಿನಲ್ಲಿ ಪದ್ಯವನ್ನು ಶಿಲ್ಪಿ ಏಕೆ ಬಿಡಿಸಲಿಲ್ಲ ಎಂಬುದು ಸಮಸ್ಯೆಯಾಗಿದೆ.

---

೫೨. E.C.XI. Cd. 42, ಸು. ೫೦೦
ಡಾ. ಕೆ.ವಿ. ರಮೇಶ್ ಅವರು ಕ್ರಿ.ಶ. ಮೂರನೇ ಶತಮಾನದ ಸ್ಮಾರಕದ ಬಗ್ಗೆ ಈ ರೀತಿ ಅಭಿಪ್ರಾಯಪಡುತ್ತಾರೆ.
"ಸನ್ನತಿಯ ಬಳಿಯ ಬೆಳ್ವಾಡಿಗಿ ಎಂಬಲ್ಲಿ ದೊರೆತಿರುವ ಒಂದು ಬ್ರಾಹ್ಮಿ ಲಿಪಿಯ ಪ್ರಾಕೃತ ಶಾಸನವು ಆ ಕಲ್ಲಿನ ಮೇಲೆ ಕೆತ್ತಿರುವ ಚಿತ್ರವು ಕಲಕಿ ಎಂಬಾತನ ಛಾಯಪಡಿಮೆ ಅಂದರೆ ಛಾಯಾಪ್ರತಿಮೆ ಎನ್ನುತ್ತದೆ. ಒಂದು ಸಾಲಿನ ಬರಹದ ಕೆಳಗೆ ಎರಡೆತ್ತಿನ ಗಾಡಿಯ ಚಿತ್ರಣವಿದ್ದು ಒಂದೆತ್ತಿನ ಮೇಲೆ ನೊಗ ಹೊರೆಸಲಾಗಿದೆ ಮತ್ತು ಇನ್ನೊಂದೆತ್ತು ಬದಿಯಲ್ಲಿ ನಿಂತಿದೆ. ಒಂದು ದೃಷ್ಟಿಯಿಂದ ಈ ಚಿತ್ರಣವು ಪ್ರವಾಸದ ಮೇಲಿದ್ದ ಕಲಕನು ದಾರಿಯಲ್ಲಿ ಸಾವಿಗೀಡಾದನೆಂಬುದನ್ನು ಸೂಚಿಸುತ್ತದೆ ಎಂದುಕೊಳ್ಳಬಹುದು. ಮತ್ತೊಂದು ದೃಷ್ಟಿಯಿಂದ ಕ್ರಿ.ಶ. ೩ನೇ ಶತಮಾನದ್ದಾಗಿರುವ ಈ ಶಾಸನವು ಕರ್ನಾಟಕದ ಮಟ್ಟಿಗೆ ಪ್ರಾಚೀನತಮ ವಾಗಿರುತ್ತದೆ" –ಕರ್ನಾಟಕ ಶಾಸನ ಸಮೀಕ್ಷೆ. ಪು. ೩೮

ವೀರಗಲ್ಲುಗಳ ಶಿಲ್ಪವಿನ್ಯಾಸ ಕ್ರಮ

ವೀರಗಲ್ಲುಗಳ ಶಿಲ್ಪವನ್ನುಗಮನಿಸಿದರೆ, ಶಿಲಪಿಗಳು ಶಿಲ್ಪವಿನ್ಯಾಸವನ್ನು ಒಂದು ಕ್ರಮದಲ್ಲಿ ಅನುಸರಿಸಿಕೊಮಡು ಬಂದಿರುವುದನ್ನು ಗಮನಿಸಬಹುದು. ಈ ಹಿಂದಿನ ಅಧ್ಯಾಯಗಳಲ್ಲಿ ವಿಚಾರ ಮಾಡಿರುವಂತೆ ಸ್ವರ್ಗಪ್ರಾಪ್ತಿಯ ವೀರರಿಗೆ ಇದ್ದ ಒಂದು ಆದರ್ಶವಾಗಿತ್ತು. ಆದ್ದರಿಂದ ತಗಾವು ಪ್ರಚುರಪಡಿಸಬೇಕದ ವೀರನು ಮಾಡಿದ ಹೋರಾಟವನ್ನು ಮೂಡಿಸಬೇಕದ್ದು ಶಿಲ್ಪಿಗಳ ಕಾರ್ಯವದರೂ,ಲ ವೀರನು ಪಡೆದ ಸ್ವರ್ಗವೂ ಶಿಲ್ಪದ ಒಂದು ಭಾಗದಲ್ಲಿ ಸ್ಥಾನವನ್ನು ಪಡೆಯಿತು. ಆ ನಂತರದ ಕಾಲದಲ್ಲಿ ವೀರರಿಗೆ ಸ್ವರ್ಗಪ್ರಾಪ್ತಿಯಾದ ರೀತಿಯ ವಿವರಗಳನ್ನು ಬಿಡಿಸುವುದು ತನ್ನ ಉದ್ದೇಶ ಎಂಬುದಾಗಿ ಶಿಲ್ಪಿಯು ಭಾವಿಸಿದ. ಇದರಲ್ಲಿ ವೀರರಿಗೆ ಪ್ರೋತ್ಸಾಹ ನೀಡುವ ಉದ್ದೇಶವಿತ್ತೆಮದು ತೋರುತ್ತದೆ. ಆದ್ದರಿಂದ ಜನತೆ ಮತ್ತು ಅರಸರಿಂದಲೂ ಈ ರೀತಿಯ ಶಿಲ್ಪವಿನ್ಯಾಸ ಮಾಡುವ ಶಿಲ್ಪಿಗೆ ಬೆಂಬಲ ದೊರೆತಿರಬೇಕು.

ಶಿಲ್ಪಿಗಳು ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವೀರಗಲ್ಲುಗಳ ಶಿಲ್ಪವಿನ್ಯಾಸದ ಕ್ರಮವನ್ನು ಮೂರು ಹಂತಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಆ ಮೂರು ಹಂತಗಳು ಈ ರೀತಿ ಇವೆ :

(ಅ) ವೀರಗಲ್ಲಿನ ಮುಖ್ಯ ವಿಷಯವಾದ ವೀರನ ಹೋರಾಟ.

(ಆ) ಹೋರಾಟದಲ್ಲಿ ಮಡಿದ ವೀರರನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದು.

(ಇ) ವೀರನು ಸ್ವರ್ಗದಲ್ಲಿರುವುದು.

ಇವು ಕ್ರಮವಾಗಿ ವೀರಗಲ್ಲಿನಲ್ಲಿ ತಳಭಾಗದಿಂದ ಮೇಲಕ್ಕೆ ಒಂದರ ಮೇಲೆ ಒಂದರಂತೆ ಬಿಡಿಸಲಾಗಿರುತ್ತದೆ. ಕಾಲಾನುಕ್ರಮದಲ್ಲಿ ಈ ವಿಭಾಗಕ್ರಮದಲ್ಲಿ ಹಲವಾರು ಬದಲಾವಣೆಗಳು ಆಗಿರುವುದನ್ನು ಗಮನಿಸಬಹುದು. ಆದರೆ ಈ ಬದಲಾವಣೆಗಳೆಲ್ಲವೂ ಮೇಲೆ ಹೇಳದಿ ಮೂಲಭುತಸೂತ್ರವನ್ನೇ ಆಧರಿಸಿ, ವಿಸ್ತೃತಗೊಂಡ ಶಿಲ್ಪದ ವಿವರಗಳೇ ಎಂಬುದು ಮುಖ್ಯ. ಈ ರೀತಿಯ ವಿಭಾಗ ಕ್ರಮವನ್ನು ಶಿಲ್ಪಿಗಳು ಮಾಡಿಕೊಂಡಿರುವುದನ್ನು ರಾಷ್ಟ್ರಕೂಟರ, ಬಾದಾಮಿ ಚಾಲುಕ್ಯರ ಕಾಲದ ವೀರಗಲ್ಲುಗಳಲ್ಲಿ ಗಮನಿಸಬಹುದು. ಈ ಸೂತ್ರ ಗಂಗರ, ನೊಳಂಬರ ವೀರಗಲ್ಲುಗಳಲ್ಲಿ ಅಲ್ಲಲ್ಲಿ ಗಮನಕ್ಕೆ ಬರುತ್ತದೆ. ಆದರೆ ಈ ಕಾಲದ ಬಹುಪಾಲು ವೀರಗಲ್ಲುಗಬಳ ಶಿಲ್ಪ ಅಸ್ಪಷ್ಟವಾಗಿಯೇ ಬಿಡಿಸಲ್ಪಟ್ಟಿವೆ. ಈ ಸೂತ್ರವನ್ನು ಸಮರ್ಥವಾಗಿ ಬಳಸಿಕೊಂಡ ಸುಂದರವಾದ ವೀರಗಲ್ಲುಗಳು ಸುಮಾರು ಒಂಭತ್ತನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ಅವಧಿಯಲ್ಲಿ ದೊರೆಯುತ್ತವೆ. ವಿಜಯನಗರದ ಅವಧಿಯ ವೀರಗಲ್ಲುಗಳಲ್ಲಿ ಈ ಸೂತ್ರವನ್ನು ಬಹಳಮಟ್ಟಿಗೆ ಕೈಬಿಡಲಾಗಿದೆ.

ಮೊದಲ ಹಂತ (ಚಿತ್ರ ೨೦೫ರಿಂದ ೨೧೯ವರೆಗೆ)

ಈ ಹಿಂದೆ ಗಮನಿಸಿರುವಂತೆ ಎಲ್ಲಾ ವೀರಗಲ್ಲುಗಳ ಶಿಲ್ಪದ ವಿವರಗಳೂ ವೀರಗಲ್ಲಿನ ತಳಭಾಗದಲ್ಲಿ ಆರಂಭವಾಗಿ ಮೇಲಕ್ಕೆ ಹೋಗುತ್ತವೆ. ಆದರೆ ಯಾವ ವೀರಗಲ್ಲುಗಳಲ್ಲಿಯೂ ಘಟನೆ ಮೇಲಿಂದ ಆರಂಭವಾಗಿ ಕೆಳಕ್ಕೆ ನಿರೂಪಣೆಯಾಗಿರುವುದು ಕಂಡುಬಂದಿಲ್ಲ. ಭೂಲೋಕದಲ್ಲಿ ಯುದ್ಧ ನಡೆಯುವುದು ; ಈ ಭೂಲೋಕದ ಮೇಲೆ ಸ್ವರ್ಗ ಇರುವುದು ; ಆದ್ದರಿಂದ ಭೂಲೋಕದಿಂದ ಮೇಲಿರುವ ಸ್ವರ್ಗಕ್ಕೆ ವೀರನು ಹೋಗುತ್ತಾನೆ ಎಂಬ ನಂಬಿಕೆಯನ್ನು ಶಿಲ್ಪದಲ್ಲಿಯೂ ಪರಿಣಾಮಕಾರಿಯಾಗಿ ಚಿತ್ರಿಸುವ ಸಲುವಾಗಿ ಈ ವಿಧಾನವನ್ನು ಅಳವಡಿಸಲು ಕಾರಣವೆಂದು ತೋರುತ್ತದೆ.

ಸಾಮಾನ್ಯವಾಗಿ ಆರಂಭದ ವೀರಗಲ್ಲುಗಳಿಂದ ಹಿಡಿದು ವಿಜಯನಗರದ ಕಾಲದವರೆಗಿನ ಹಂತಗಳ ಸೂತ್ರದಲ್ಲಿ ಬಿಡಿಸಲಾಗಿರುವ ಶಿಲ್ಪದಲ್ಲಿ, ಮೊದಲನೆಯ ಹಂತದಲ್ಲಿ ವೀರನು ಶತ್ರುಪಕ್ಷದವರೊಡನೆ ಹೋರಾಟ ಮಾಡುತ್ತಿರುವ ಚಿತ್ರಣ ದೊರೆಯುತ್ತದೆ. ಇದೇ ಹಂತಗಳ ಸೂತ್ರವನ್ನು ವಿಸ್ತೃತಮಾಡಿಕೊಂಡಿರುವ ವೀರಗಲ್ಲುಗಳಲ್ಲಿ, ವೀರನು ಹೋರಾಟಕ್ಕೆ ಸನ್ನದ್ಧನಾಗಿ ಹೋಗುತ್ತಿರುವಂತೆಯೂ, ಆ ನಂತರ ವೀರನು ಶತ್ರುಪಕ್ಷದವರೊಡನೆ ಹೋರಾಟ ಮಾಡುತ್ತಿರುವಂತೆಯೂ ಚಿತ್ರಿಸಲಾಗಿರುತ್ತದೆ. (ಚಿತ್ರ ೧೯೫, ೨೧೦) ಇವುಗಳನ್ನು ಎರಡು ಭಾಗಗಳಲ್ಲಿ ಮೇಲೆ ಹೇಳಿದ ಕ್ರಮದಲ್ಲಿ ಬಿಡಿಸಲಾಗಿರುತ್ತದೆ. ಕೆಲವು ವೀರಗಲ್ಲುಗಳಲ್ಲಿ ವೀರನು ಹೋರಾಟ ಮಾಡುತ್ತಿರುವ ದೃಶ್ಯವನ್ನೇ ಎರಡು ಭಾಗಗಳಲ್ಲಿ ಬಿಡಿಸಲಾಗಿದೆ. (ಚಿತ್ರ ೨೬೪) ಮತ್ತೆ ಕೆಲವು ವೀರಗಲ್ಲುಗಳಲ್ಲಿ ಶತ್ರುಪಕ್ಷದವರು ವೀರನ ಮೇಲೆ ಆಕ್ರಮಣ ಮಾಡುತ್ತಿರುವಂತೆ ಮೊದಲನೆಯ ಭಾಗದಲ್ಲಿಯೂ ಎರಡನೆಯ ಭಾಗದಲ್ಲಿ ವೀರನು ಶತ್ರುಗಳನ್ನು ಸಮರ್ಥವಾಗಿ ಎದುರಿಸುತ್ತಿರುವಂತೆಯೂ ಬಿಡಿಸಲಾಗಿರುತ್ತದೆ. ಸಾಮಾನ್ಯವಾಗಿ ಬಹುಪಾಲು ವೀರಗಲ್ಲುಗಳಲ್ಲಿ ಈ ಯುದ್ಧದ ದೃಶ್ಯವನ್ನಾಗಲೀ ಯಾವುದೇ ಹೋರಾಟವನ್ನಾಗಲೀ ಒಂದೇ ಹಂತದಲ್ಲಿ ಬಿಡಿಸಿರುವುದು ಗಮನಕ್ಕೆ ಬರುವ ವಿಷಯ. ಇಲ್ಲಿ ವಿವರಣೆಗಿಂತಲು ಧ್ವನಿಗೇ ಹೆಚ್ಚು ಪ್ರಾಧಾನ್ಯ. ಬನವಾಸಿಯಲ್ಲಿರುವ ವೀರಗಲ್ಲೊಂದರ ಶಿಲ್ಪದ ವಿವರ ಈ ರೀತಿ ಇದೆ : ಮೊದಲನೆಯ ಹಂತದಲ್ಲಿ ವೀರನ ಹೆಣವನ್ನು ದನಗಳು ಮೆಟ್ಟಿಕೊಂಡು ಹೋಗುತ್ತಿವೆ.[೫೩] ಮುಂದಿನ ಹಂತಗಳಲ್ಲಿ ವಿರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಈ ವೀರಗಲ್ಲಿನ ಶಿಲ್ಪಿ ವೀರನು ತುರುಗಾಳಗದಲ್ಲಿ ಹೋರಾಡಿ ಮಡಿದಿದ್ದಾನೆ ಎಂಬುದನ್ನು ಧ್ವನಿಸಿದ್ದಾನೆ. (ಚಿತ್ರ ೫೨). ಶ್ರವಣಗುಡಿಯಲ್ಲಿರುವ ವೀರಗಲ್ಲೊಂದು ಇ ದೃಷ್ಟಿಯಿಂದ ಗಮನಾರ್ಹವಾಗಿದೆ ಒಂದು ಹಸುವಿನ ಮೇಲೆ ಹುಲಿಯೊಂದು

೫೩ ಇದೇ ರೀತಿಯ ಶಿಲ್ಪದ ವಿವರ ಇರುವ ವೀರಗಲ್ಲುಗಳು ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷೆಯ ವೀರಗಲ್ಲುಗಳಲ್ಲಿಯೂ ದೊರೆಯುತ್ತವೆ.

ಆಕ್ರಮಣ ಮಾಡುತ್ತಿರುವಂತೆ ವೀರಗಲ್ಲಿನ ಮೇಲೆ ಬಿಡಿಸಲಾಗಿದೆ. (ಚಿತ್ರ ೪೮). ಈ ಶಿಲ್ಪದ ವಿವರಗಳ ಮೂಲಕ ಶಿಲ್ಪಿ, ಹಸುವೊಂದರ ಮೇಲೆ ಆಕ್ರಮಣ ಮಾಡಿ ಅದನ್ನು ಆಹುತಿ ತೆಗೆದುಕೊಂಡ ಹುಲಿಯೊಡನೆ ಹೋರಾಡಿ, ಹುಲಿಯನ್ನು ಕೊಂದು, ಆ ಹೋರಾಟದಲ್ಲಿ ವೀರನು ಮಡಿದ ಎಂಬ ಅಂಶವನ್ನು ತಿಳಿಸುತ್ತಾನೆ. ಈ ವೀರಗಲ್ಲಿನ ಮೇಲೆ ಶಾಸನವಿಲ್ಲ. ಬಳ್ಳಿಗಾವೆಯ ವೀರಗಲ್ಲೊಂದರಿಂದ ಕೇದಾರೇಶ್ವರ ದೇವಾಲಯದ ವಾಮಶಕ್ತಿಪಂಡಿತರನ್ನು ಬಂಧಿಯಾಗಿ ಹಿಡಿದ ವಿಷಯ ತಿಳಿಯುತ್ತದೆ. ಈ ರೀತಿ ವಾಮಶಕ್ತಿಪಂಡಿತರನ್ನು ಬಂಧಿಸಿದಾಗ ತೋಣವತ್ತಿಯ ಮೇರೆಗಾರ ಬಾಬೆಯನಾಯಕ ಎಂಬುವನು ಪಂಡಿತರನ್ನು ಬಿಡಿಸುವಲ್ಲಿ ಹೋರಾಡಿ ಸಾಯುತ್ತಾನೆ. ಈ ವೀರಗಲ್ಲಿನ ಶಿಲ್ಪದ ವಿವರ ಈ ರೀತಿ ಇದೆ : ಹೋರಾಟ ಒಂದು ಕಡೆ ನಡೆಯುತ್ತಿದ್ದರೆ, ಹೋರಾಟದಿಂದ ಸ್ವಲ್ಪ ದೂರದಲ್ಲಿ ನಿಳವಾದ ಕೂದಲನ್ನು ಬಿಟ್ಟುಕೊಂಡು ಅಂಗಾಲಿನವರೆಗೆ ಕಚ್ಚೆಹಾಕಿ ಪಂಚೆ ಉಟ್ಟಿರುವ ವಾಮಶಕ್ತಿಪಂಡಿತರನ್ನು ಒಬ್ಬ ವ್ಯಕ್ತಿ ಹಿಡಿದಿರುವಂತೆ ಬಿಡಿಸಲಾಗಿದೆ. (ಚಿತ್ರ ೨೧೯). ಯುದ್ಧ ಮಾಡುತ್ತಿರುವ ವೀರರ ಮುಡಿಯ ಗಂಟುಗಳಿಗೂ, ವಾಮಶಕ್ತಿ ಪಂಡಿತರ ನೀಳವಾಗಿ ಬಿಟ್ಟಿರುವ ಕೂದಲಿಗೂ ಮತ್ತು ವೀರರ ವೀರಗಾಸೆಗೂ, ವಾಮಶಕ್ತಿ ದೇವರ ಕಚ್ಚೆಗೂ ಸ್ಪಷ್ಟವಾದ ವ್ಯತ್ಯಾಸವನ್ನು ಗುರುತಿಸಬಹುದು. ಈ ರೀತಿಯ ಸೂಕ್ಷ್ಮ ವಿವರಗಳನ್ನು ಬಿಡಿಸುವುದರ ಮೂಲಕ ಶಿಲ್ಪಿ, ಹಲವಾರು ಸಂಗತಿಗಳನ್ನು ಧ್ವನಿಸುವುದರಲ್ಲಿ ಶಾಸನಕಾರನಿಗೆ ನೆರವಾಗುತ್ತಾನೆ ಎಂಬ ಅಂಶ ಮುಖ್ಯವಾದುದು.

ಮೊದಲ ಹಂತದ ವಿನ್ಯಾಸದಲ್ಲಿ ವೀರಗಲ್ಲು ಪ್ರತಿನಿಧಿಸುವ ವೀರನ ಹೋರಾಟದ ಚಿತ್ರಕ್ಕೆ ಮಹತ್ವದ ಸ್ಥಾನವನ್ನು ನೀಡಲಾಗಿರುತ್ತದೆ. ಗಂಗ, ನೊಳಂಬ, ಬಾಣರ ಕಾಲದ ತುಮಕೂರು, ಬೆಂಗಳೂರು, ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿನ ವೀರಗಲ್ಲುಗಳ ಶಿಲ್ಪದಲ್ಲಿ ವೀರನ ಚಿತ್ರಕ್ಕೆ ಪ್ರಮುಖ ಸ್ಥಾನವನ್ನು ನೀಡಲಾಗಿದೆ. (ಚಿತ್ರ ೨೪೭, ೨೪೮, ೨೪೯, ೨೫೦, ೨೫೧, ೨೫೪). ಈ ವಿರಗಲ್ಲುಗಳ ಶಿಲ್ಪದಲ್ಲಿ ವೀರನು ವೀರಗಲ್ಲಿನ ಬಲ ಭಾಗದಿಂದಲೂ, ಶತ್ರು ಪಕ್ಷದವರು ಎಡ ಭಾಗದಿಂದಲೂ ಬಂದು ಹೋರಾಟುತ್ತಿರುವಂತೆ ಬಿಡಿಸಲಾಗಿರುತ್ತದೆ. ಇದು ಎಲ್ಲಾ ವೀರಗಲ್ಲುಗಲಲ್ಲಿ ಆರಂಭ ಕಾಲದಿಂದಲೂ ಗಮನಿಸಬಹುದಾದ ಒಂದು ಸಂಪ್ರದಾಯ. ಈ ಒಂದು ನಿಯಮವನ್ನು ಕೇವಲ ವೀರರ ಸ್ಮಾರಕಶಿಲೆಗಳಲ್ಲಿ ಮಾತ್ರವಲ್ಲ, ನಾಯಿಗಳಿಗೆ ಹಾಕಿರುವ ಸ್ಮಾರಕ ಶಿಲೆಗಳಲ್ಲಿಯೂ ಅನುಸರಿಸಲಾಗಿದೆ. ಇದಕ್ಕೆ ಪೋಷಕವಾಗಿ ಮೇಲಾಗಾಣಿ, ಆತಕೂರು ಮತ್ತು ಯಲಹಂಕದಲ್ಲಿರುವ ನಾಯಿಗಳ ಸ್ಮಾರಕಶಿಲೆಗಳ ಶಿಲ್ಪವನ್ನು ಇಲ್ಲಿ ನೆನೆಯಬಹುದು. ಮೇಲೆ ಹೇಳಿರುವ ಶ್ರವಣಗುಡಿಯ ವೀರಗಲ್ಲಿನಲ್ಲಿಯೂ ಹಸುವನ್ನು ಬಲಭಾಗಕ್ಕೂ ಹುಲಿಯನ್ನು ಎಡ ಭಾಗಕ್ಕೂ ಬಿಡಿಸಲಾಗಿದೆ. ಇಲ್ಲಿ ಹುಲಿ ಶತ್ರು ಪಕ್ಷ ಅಥವಾ ಆಕ್ರಮಣಕಾರಿ ಎಂಬುದನ್ನು ಧ್ವನಿಸುತ್ತದೆ. ಮುಳುಬಾಗಿಲು ತಾಲ್ಲೂಕು ತಾವರೆಕೆರೆಯ ಕಮ್ಮಳದಾನನ ಶಾಸನದಲ್ಲಿ ಹುಲಿಯನ್ನು

ಎಡಭಾಗಕ್ಕೂ ಹುಲಿಯನ್ನು ಆಕ್ರಮಣ ಮಾಡುತ್ತಿರುವ ನಾಯಿಗಳನ್ನು ಬಲಭಾಗಕ್ಕೂ ಬಿಡಿಸಲಾಗಿದೆ (ಚಿತ್ರ ೪೭). ಇದೇ ಅವಧಿಯಲ್ಲಿ ದೊರೆಯುವ ಇತರ, ಬೇಟೆಯ ವೀರಗಲ್ಲುಗಳ ಶಿಲ್ಪದಲ್ಲಿ, ವೀರನು ಹೋರಾಡಿ ಮಡಿದ ಪ್ರಾಣಿಯ ಶಿಲ್ಪವನ್ನು ವೀರಗಲ್ಲಿನ ಎಡ ಭಾಗಕ್ಕೂ ವೀರನನ್ನು ಬಲ ಭಾಗಕ್ಕೂ ಬಿಡಿಸಲಾಗಿದೆ. ಈ ರೀತಿ ಬಿಡಿಸುವುದು ಒಂದು ನಿಯಮ. ಈ ನಿಯಮವನ್ನು ಇಂಥದೇ ಕಾರಣಕ್ಕಾಗಿ ಅನುಸರಿಸಿದರು ಎಂಬುದಾಗಿ ಹೇಳುವುದು ಕಷ್ಟ

ತಾನು ಮಾಡಬೇಕಾದ ಸ್ಮಾರಕದ ವೀರನ ಶಿಲ್ಪವನ್ನು ಬಿಡಿಸುವಲ್ಲಿ ಶಿಲ್ಪಿ ವಿಶೇಷವಾದ ಶ್ರದ್ಧೆಯನ್ನು ವಹಿಸಿರುತ್ತಾನೆ ಎಂಬ ಅಂಶ ಕರ್ನಾಟಕದ ಯಾವುದೇ ವೀರಗಲ್ಲನ್ನು ಗಮನಿಸಿದಾಗ ವೇದ್ಯವಾಗುತ್ತದೆ. ವೀರನ ಉಡುಪು. ಆಭರಣ, ಆಯುಧಗಳು, ಅಂಗ ಸೌಷ್ಠವ ಮುಂತಾದವು ಗಳನ್ನು ಬಿಡಿಸಿರುವಲ್ಲಿ ಈ ಶ್ರದ್ಧೆಯನ್ನು ಗಮನಿಸಬಹುದು.

ಶಿಲ್ಪಿಯ ನಿಜವಾದ ಪ್ರತಿಭೆಯನ್ನು ಗಮನಿಸಬೇಕಾದರೆ ಈ ಹಂತವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ. ವೀರಗಲ್ಲು ವೀರನ ಪರಾಕ್ರಮವನ್ನು ಕೀರ್ತಿಸುವ ಉದ್ದೇಶದಿಂದಲೇ ಹಾಕಿಸಿದಂಥದ್ದು. ಇಲ್ಲಿ ವೀರನ ಪರಾಕ್ರಮವನ್ನು ತಿಳಿಸುವ ಸಾಧನಗಳು, ಶಾಸನ ಮತ್ತು ಶಿಲ್ಪ. ಆದ್ದರಿಂದ ಶಿಲ್ಪಿ, ಮಡಿದ ವೀರನ ಪರಾಕ್ರಮವನ್ನು ವೀರಗಲ್ಲಿನ ಮೇಲೆ ನಿರೂಪಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ವೀರಗಲ್ಲಿನ ಶಿಲ್ಪದಲ್ಲಿಯೂ ವೀರನು ಹಿಂದೆಗೆಯುತ್ತಿರುವಂತೆಯಾಗಲೀ, ಮಡಿಯುತ್ತಿರುವಂತೆಯಾಗಲೀ ಬಿಡಿಸಿರುವುದಿಲ್ಲ. ಬದಲಾಗಿ ಧೈರ್ಯದಿಂದ ಶತ್ರು ಪಕ್ಷದವರ ಬಾಣಗಳು, ಇತರ ಆಯುಧಗಳು ಅವನ ದೇಹವನ್ನು ನಾಟಿದ್ದರೂ, ಅವುಗಳನ್ನು ಲೆಕ್ಕಿಸದೆ ತನ್ನ ಹೋರಾಟವನ್ನು ಮುಂದುವರಿಸುತ್ತಿರುವಂತೆ ವೀರನ ಚಿತ್ರವನ್ನು ಬಿಡಿಸಲಾಗಿರುತ್ತದೆ. ಶತ್ರುಪಕ್ಷದವರು ಹತರಾಗಿ ಬಿದ್ದಿರುವಂತೆಯೂ ಹಿಂಜರಿಯುತ್ತಿರುವಂತೆಯೂ ಕೆಲವೊಮ್ಮೆ ವೀರನ ಪಾದಲಗಳಿಗೆ ಸಾಷ್ಟಾಂಗವೆರಗಿ ಪ್ರಾಣಭಿಕ್ಷೆ ಕೇಳುತ್ತಿರುವಂತೆಯೂ ಬಿಡಿಸಲಾಗಿರುತ್ತದೆ. (ಚಿತ್ರ ೧೫೯, ೧೭೦, ೧೭೧, ೨೬೨)

ಯುದ್ಧದ ಚಿತ್ರಣವನ್ನು ನೀಡುವಲ್ಲಿ ಹಲವು ಶಿಲ್ಪಿಗಳು ತಮ್ಮ ಅಸಾಧಾರಣವಾದ ಪ್ರತಿಭೆಯನ್ನು ತೋರಿದ್ದಾರೆ. ಶಿಲ್ಪದಲ್ಲಿ ಚಲನೆ (movement) ಮತ್ತು ಕ್ರಿಯೆ (action) ಯನ್ನು ಬಹಳ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಈ ದಿಸೆಯಲ್ಲಿ ಬೇಗೂರು, ನೇರ್ಲಿಗೆ, ಕೋಲಾರ, ರೋಣ, ಶಿವಮೊಗ್ಗಾ ಕೋಟೆ ಪೋಲೀಸ್ ಸ್ಟೇಷನ್ ಮುಂತಾದ ಕಡೆ ಇರುವ ವೀರಗಲ್ಲುಗಳ ನಿಜವಾಗಿಯೂ ಅಸಾಧಾರಣವಾದುವು.

ಶ್ರವಣ ಗುಡಿಯಲ್ಲಿರುವ ಗಂಗರ ಕಾಲದ ವೀರಗಲ್ಲೊಂದರ ಶಿಲ್ಪದಲ್ಲಿ, ಕುದುರೆ ಕಾಳಗವೊಂದನ್ನು ಗಮನಿಸಬಹುದು. ಚಿತ್ರ ೧೫೯) ವೀರನು ಕುದುರೆಯ ಮೇಲೆ ಕುಳಿತು

ಯುದ್ಧರಂಗಕ್ಕೆ ಮುನ್ನುಗ್ಗುತ್ತಿದ್ದಾನೆ. ಅವನ ಕುದುರೆಯ ಕಾಲ್ತುಳಿತಕ್ಕೆ ಸಿಕ್ಕಿ ಶತ್ರು ಪಕ್ಷದವನೊಬ್ಬನು ಕಂಗಾಲಾಗಿದ್ದಾನೆ. ಶತ್ರು ಪಕ್ಷದವರು ಎಸೆದಿರುವ ಈಟಿಯು ವೀರನ ಕುತ್ತಿಗೆಯ ಮೂಲಕ ಹೋಗಿ ಬೆನ್ನಿನಲ್ಲಿ ಈಚೆ ಬರುತ್ತಿದೆ. ಇಷ್ಟಾದರೂ ವೀರನು ಹೋರಾಡುತ್ತಿದ್ದಾನೆ. ವೀರನು ತನ್ನ ಕುದುರೆಯ ಕಡಿವಾನವನ್ನು ಎಡಗೈಯಲ್ಲಿ ಹಿಡಿದು, ಬಲಗೈಯಲ್ಲಿ ಈಟಿಯನ್ನು ಎಸೆಯುತ್ತಿರುವಂತೆಯೂ ಅವನ ಕುದುರೆ ತನ್ನ ಹಿಂಗಾಲುಗಳನ್ನು ಆಧರಿಸಿ ನಿಂತು ಮುಂಗಾಲು ಗಳನ್ನು ಮೇಲಕ್ಕೆತ್ತಿ ಮಡಿಸಿಕೊಂಡು ತನಗೆ ಎದುರಾದ ಕುದುರೆಯನ್ನು ಎದುರಿಸುತ್ತಿರುವಂತೆಯೂ ಬಿಡಿಸಲಾಗಿದೆ. ಇಲ್ಲಿ ವೀರಗಲ್ಲಿನ ಶಿಲ್ಪಿ ಸೂಕ್ಷ್ಮವಾದ ವಿವರಗಳನ್ನು ಪರಾಕ್ರಮವನ್ನು ಅಭಿವ್ಯಕ್ತಗೊಳಿಸಿದ್ದಾನೆ.

ಈ ದಿಸೆಯಲ್ಲಿ ಶಿಲ್ಪಿಗಳ ನಿಜವಾದ ಪ್ರತಿಭೆಯನ್ನು ಅವರ ಜೀವನಾನುಭವದ ಅಭಿವ್ಯಕ್ತಿಯನ್ನು ಕಲ್ಯಾಣಿ ಚಾಲುಕ್ಯರ, ಹೊಯ್ಸಳರ ಕಾಲದವೀರಗಲ್ಲುಗಳಲ್ಲಿ ಗಮನಿಸಬಹುದು. ಈ ದೃಷ್ಟಿಯಿಂದ ಬಳ್ಳಿಗಾವೆಯ ಎರಡು ವಈರಗಲ್ಲುಗಳ ಶಿಲ್ಪದ ವಿವರಗಳನ್ನು ಇಲ್ಲಿ ಪರಿಚಯ ಮಾಡಿಕೊಡುವುದು ಸೂಕ್ತವೆಂದು ತೋರುತ್ತದೆದ. ಶತ್ರು ಪಕ್ಷದವರನ್ನು ಎದುರಿಸಲು ವೀರನು ತನ್ನ ಕುದುರೆಯ ಮೇಲೆ ಕುಳಿತು ಓಡಿಸಿಕೊಂಡು ಬಂದು ಅವರ ಮೇಲೆ ಎರಗಿದಂತೆಯೂ ಕುದುರೆಯು ತನ್ನ ಹಿಂಗಾಲುಗಳ ಮೇಲೆ ನಿಂತು ಮುಂಗಾಲುಗಳಿಂದ ಶತ್ರುಪಕ್ಷದ ವೀರನನ್ನು ತುಳಿಯಲು ಪ್ರಯತ್ನಿಸುತ್ತಿರುವಂತೆಯೂ, ಕುದುರೆ ಈ ರೀತಿ ಎಗರಿದಾಗ ಸಹಜವಾಗಿ ಅದರ ಮೇಲೆ ಕುಳಿತುರುವ ವೀರನು ಹಿಂದಕ್ಕೆ ವಾಲಿದಂತೆಯೂ, ಅದೇ ಒಂದು ಸ್ಥಿತಿಯಲ್ಲಿ ಕೈಗೆಟುಕುವ ವೀರರನ್ನು ತನ್ನ ಕತ್ತಿಯ ಸಹಾಯದಿಂದ ಎದುರಿಸುತ್ತಿರುವಂತೆಯೂ ಮುನ್ನಗ್ಗುತ್ತಿರುವಂತೆಯೂ ಬಿಡಿಸಲಾಗಿದೆ (ಚಿತ್ರ ೧೭೦, ೧೭೧) ಬಳ್ಳಿಗಾವೆಯ ತ್ರಿಪುರಾಂತಕ ದೇವಾಲಯದ ಬಳಿ ಇರುವ ವೀರಗಲ್ಲಿನ ಶಿಲ್ಪದಲ್ಲಿ ವೀರನು ಶತ್ರುಪಕ್ಷದ ವೀರನೊಬ್ಬನ ಮುಂಗೂದಲನ್ನು ತನ್ನ ಎಡಗೈಯಲ್ಲಿ ಹಿಡಿದು, ತನ್ನ ಬಲಗೈಯಲ್ಲಿರುವ ಕತ್ತಿಯಿಂದ ಶಿರಚ್ಛೇದ ಮಾಡುತ್ತಿರುವಂತೆ ಬಿಡಿಸಲಾಗಿದೆ. (ಚಿತ್ರ ೨೬೨)

ಹಾನುಗಲ್ಲಿನ ತಾರಕೇಶ್ವರ್ ದೇವಾಲಯದಲ್ಲಿರುವ ಎರಡು ವೀರಗಲ್ಲುಗಳು ಯುದ್ಧದ ಸಂಪೂರ್ಣ ಚಿತ್ರವನ್ನು ಬಹು ಸಮರ್ಥವಾಗಿ ನೀಡುತ್ತವೆ. ಅಸ್ತವ್ಯಸ್ತವಾಗಿರುವ ರಣರಂಗ, ಎಲ್ಲೆಲ್ಲಿಯೂ ಬಾಣಗಳ ಹಾರಾಟ, ಬಿಲ್ಲು ಲ ಕತ್ತಿಗಳನ್ನು ಹಿಡಿದು ಹೋರಾಡುತ್ತಿರುವ ವೀರರು, ಬೆದರಿದ ಆನೆಗಳು, ಮುನ್ನುಗ್ಗುತ್ತಿರುವ ಕುದುರೆಗಳು, ಕೋಟೆಯ ತೆನೆಗಳ ನಡುವೆ ಶತ್ರುಗಳನ್ನು ಎದುರಿಸಲು ಕಾದು ನಿಂತಿರುವ ಸುಸಜ್ಜಿತ ಯೋಧರು, ಯುದ್ಧರಂಗದಲ್ಲಿ ಧ್ವಜವನ್ನು ಹಿಡಿದವರು, ರಾಜ ಛತ್ರಿಯನ್ನು ಹಿಡಿದಿರುವವರು ಮುಂತಾದ ವಿವರಗಳನ್ನು ಅಲ್ಲಿ ನೋಡಬಹುದು. ಈ ಚಿತ್ರಣ ವೀರಗಲ್ಲುಗಳ ಪಾಠದಲ್ಲಿ ಕಾವ್ಯಗಳಲ್ಲಿ ದೊರೆಯುವ ಯುದ್ಧ ವರ್ಣನೆಯನ್ನು ಹೋಲುತ್ತದೆ.

ತಮ್ಮ ಕಾಲದ ಕೋಟೆಗಳನ್ನೂ ಕೋಟೆ ಕಾಳಗಗಳನ್ನೂ ಗಮನಿಸಿದ್ದ ಶಿಲ್ಪಿಗಳು ಕೋಟೆಕಾಳಗದ ದೃಶ್ಯವನ್ನು ಬಹು ಸಮರ್ಥವಾಗಿ ವೀರಗಲ್ಲುಗಳ ಶಿಲ್ಪದಲ್ಲಿ ಬಿಡಿಸಿದ್ದಾರೆ. ಹಾನುಗಲ್ಲಿನ ಎರಡು ವೀರಗಲ್ಲುಗಳಲ್ಲಿರುವ ಕೋಟೆಕಾಳಗದ ಸಮರ್ಥ ನಿರೂಪಣೆ ಇದೆ. ಕೋಟೆಯನ್ನು ಆಕ್ರಮಿಸುತ್ತಿರುವ ವೀರರನ್ನೂ ಕೋಟೆಯ ಬಾಗಿಲನ್ನು ಕಿತ್ತು ಮುನ್ನುಗ್ಗಿ ಕೋಟೆಯ ಒಳಗೂ ಯುದ್ಧವಾಗುತ್ತಿರುವುದನ್ನೂ ಹತಾಶರಾದ ವೀರರನ್ನೂ ಇಲ್ಲಿ ಗಮನಿಸಬಹುದು. ಲಕ್ಷ್ಮೇಶ್ವರ ಮತ್ತು ಎಲೇ ಬೇತೂರಿನ ವೀರಗಲ್ಲುಗಳಲ್ಲಿ ಕೋಟೆಯನ್ನು ಆಕ್ರಮಿಸಲು ಬರುತ್ತಿರುವ ಶತ್ರು ಪಕ್ಷದವರನ್ನು ಕೋಟೆಯ ಮೇಲಿಂದಲೇ ಎದುರಿಸಿ ತಮ್ಮ ಕೋಟೆಯನ್ನು ರಕ್ಷಿಸಿಕೊಳ್ಳಲು ಹೋಗುತ್ತಿರುವ ವೀರರನ್ನು ಗಮನಿಸಬಹುದು. (ಚಿತ್ರ ೧೯೭, ೧೯೮)

ಶಿವಮೊಗ್ಗಾದ ಕೋಟೆ ಪೋಲಿಸ್ ಠಾಣೆ ಆವರಣದಲ್ಲಿರುವ ವೀರಗಲ್ಲಿನ ಕೋಟೆಕಾಳಗದ ದೃಶ್ಯವನ್ನು ಶಿಲ್ಪಿ ಸಮರ್ಥವಾಗಿ ಕಂಡರಿಸಿದ್ದಾನೆ. ಕೋಟೆಯ ಆಕ್ರಮಣಕಾರರು ಕೋಟೆಯನ್ನು ಹತ್ತಿ ಲಗ್ಗೆ ಹಾಕಲು ಗುರಾಣಿಗಳನ್ನು ಹಿಡಿದು ಮುನ್ನುಗ್ಗುತ್ತಿದ್ದಾರೆ ಕೋಟೆಯ ಮೇಲಿನಿಂದ ಬೀಳಬಹುದಾದ ಅಸ್ತ್ರಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅವರು ಬದ್ಧರದ ಮರೆಯಲ್ಲಿ, ಕೋಟೆ ಗೋಡೆಗೆ ಅನಿಕೊಂಡಂತೆ ಬಗ್ಗಿ ನಡೆಯುತ್ತಿದ್ದಾರೆ. ಮತ್ತೆ ಕೆಲವರು ಕೋಟೆಯ ಗೋಡೆಯ ಮೇಲೆ ಹತ್ತಿ ಕೋಟೆಯನ್ನು ಪ್ರವೇಶಿಸುತ್ತಿದ್ದಾರೆ. ಆಕ್ರಮಣಕಾರರನ್ನು ಎದುರಿಸಲು ಕೋಟೆಯೊಳಗಿನವರು ಹೊರ ಬರುತ್ತಿದ್ದಾರೆ. ಈ ದೃಶ್ಯವನ್ನು ವಿವರವಾಗಿ ಬಿಡಿಸಲು ಶಿಲ್ಪಿ ಎರಡು ಭಾಗಗಳನ್ನು ಮಾಡಿಕೊಂಡಿದ್ದಾನೆ. (ಚಿತ್ರ ೧೯೫) ಅಬ್ಬಲೂರಿನ ವೀರಗಲ್ಲಿನ ಶಿಲ್ಪಿಯು ಕೋಟೆ ದ್ವಾರವನ್ನು ಬಿಡಿಸಿದ್ದಾನೆ. (ಚಿತ್ರ ೩೫)

ಈ ಕೋಟೆಗಳನ್ನು ಬಿಡಿಸುವಲ್ಲಿ ಶಿಲ್ಪಿಗಳು ಅನುಸರಿಸಿರುವ ವಿಧಾನವನ್ನು ಇಲ್ಲಿ ಸ್ವಲ್ಪಮಟ್ಟಿಗೆ ಪರಿ ಶೀಲಿಸುವುದು ಸೂಕ್ತ ಮೇಲೆ ಹೇಳಿದ ವೀರಗಲ್ಲುಗಳಲ್ಲಿ ಕೋಟೆಯ ಒಂದು ಪಾರ್ಶ್ವವನ್ನು ಮಾತ್ರ ಬಿಡಿಸಲಾಗಿದೆ. ಈ ಚಿತ್ರಣ ನೈಜ ಕೋಟೆಗಳನ್ನೇ ಹೋಲುತ್ತದೆ. ಇಡೀ ಕೋಟೆಯನ್ನು ಉಬ್ಬು ಶಿಲ್ಪದಲ್ಲಿ ಬಿಡಿಸುವುದು ಅಸಾಧ್ಯ ಆದ್ದರಿಂದ ಈ ರೀತಿಯ ವಿಧಾನಗಳನ್ನು ಅನುಸರಿಸಿದ್ದಾರೆ. ಮತ್ತೆ ಕೆಲವು ವೀರಗಲ್ಲುಗಳ ಶಿಲ್ಪಿಗಳು ಬೇರೆ ವಿಧಾನಗಳನ್ನು ಅನುಸರಿಸಿರುವುದೂ ಉಂಟು. ಮಾವಳಿ ಮತ್ತು ಎಲೆಬೇತೂರಿನ ವೀರಗಲ್ಲುಗಳಲ್ಲಿ ಮೊದಲ ಹಂತದ ಸುತ್ತಲೂ ಪಕ್ಕದಲ್ಲಿ ಕೋಟೆಯ ತೆನೆಗಳನ್ನುಬಿಡಿಸಿದ್ದಾರೆ. (ಚಿತ್ರ ೨೦೩) ಈ ರೀತಿ ಬಿಡಿಸಿರುವುದರಿಂದ, ಮೇಲಿಂದ ನೋಡಿದಾಗ ಕಾಣುವ ಕೋಟೆಯ ಯುದ್ಧದ ಚಿತ್ರದಂತಿದೆ. ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಬಳಿ ಇರುವ ಜೋಗ್‌ನಿಂದ ತಂದಿರುವ ವೀರಗಲ್ಲಿನಲ್ಲಿ ಕೋಟೆಯನ್ನು ಬಿಡಿಸಿರುವ ವಿಧಾನವಂತೂ ಅನಾದೃಶ್ಯವಾಗಿದೆ. ಆಕಾಶದ ಮೇಲಿಂದ ಕೆಳಗೆ ನೋಡಿದಾಗ, ಕೋಟೆ ಗುಂಡಗೆ ಕಾಣುವಂತೆ

ಅದರ ಮೇಲಿನ ತೆನೆಗಳು ಉಬ್ಬಿಕೊಂಡಂತೆ ಬಿಡಿಸಲಾಗಿದೆ. ಈ ಕೋಟೆಯೊಳಗೆ ಆಯುಧ ಪಾಣಿಗಳಾದ ಮೂರುಜನ ವೀರರನ್ನು ಚಿಕ್ಕದಾಗಿ ಬಿಡಿಸಲಾಗಿದೆ. (ಚಿತ್ರ ೨೦೦)

ತುರುಗಾಳಗಗಳಲ್ಲಿ ಹೋರಾಡಿ ಮಡಿದ ವೀರರ ವೀರಗಲ್ಲುಗಳಲ್ಲಿ ವೀರನ ಚಿತ್ರದೊಂದಿಗೆ ತುರುಗಳನ್ನೂ ಬಿಡಿಸಲಾಗಿರುತ್ತದೆ. ಅಪಹರಿಸಿಕೊಂಡು ಹೋಗುತ್ತಿರುವ ದನಗಳನ್ನು ವೀರನು ರಕ್ಷಿಸುತ್ತಿದ್ದಾನೆ ಎಂಬುದನ್ನು ಸೂಚಿಸುವುದಕ್ಕಾಗಿ ವೀರಗಲ್ಲಿನ ಶಿಲ್ಪಿ ದನಗಳನ್ನು ವೀರನ ಹಿಂದೆ, ಅವು ಹಿಂದಿರುಗಿ ಹೋಗುತ್ತಿರುವಂತೆಯೂ ಶತ್ರುಗಳು ದನಗಳ ಮೇಲೆ ಬೀಳದಂತೆ ಅವುಗಳಿಗೆ ಅಡ್ಡನಿಂತು ವೀರನು ಹೋರಾಡುತ್ತಿರುವಂತಗೆಯೂ ಬಿಡಿಸಿರುತ್ತಾನೆ. ತುರುಗಾಳಗವನ್ನು ಸಮರ್ಥವಾದ ರೀತಿಯಲ್ಲಿ ಬಿಡಿಸಲಾಗಿರುವ ಎರಡು ವೀರಗಲ್ಲುಗಳ ಶಿಲ್ಪವನ್ನು ಇಲ್ಲಿ ಪರಿಶೀಲಿಸುವುದು ಸೂಕ್ತ. ಸು. ಕ್ರಿ. ಶ. ೯೮೫ರ ಹೂಲಿಯ ವೀರಗಲ್ಲಿನ ಶಿಲ್ಪದಲ್ಲಿ ದನಗಳನ್ನು ಸಮರ್ಥವಾಗಿ ರಕ್ಷಿಸುತ್ತಿರುವ ವೀರನನ್ನೂ, ದನಗಳನ್ನೂ ಅಪಹರಿಸಲು ಶತಪ್ರಯತ್ನ ಮಾಡುತ್ತಿರುವ ಶತ್ರು ಪಕ್ಷದವರನ್ನೂ, ಈ ಹೋರಾಟದಿಂದ ಚೆಲ್ಲಾಪಿಲ್ಲಿಯಾಗಿ ಚೆದುರಿ ತಮ್ಮ ಬಾಲಗಳನ್ನು ಮೇಲೆತ್ತಿಕೊಂಡು ಓಟ ಕಿತ್ತಿರುವ ದನಗಳನ್ನೂ ಗಮನಿಸಬಹುದು (ಚಿತ್ರ ೫೫) ಬನವಾಸಿಯಲ್ಲಿರುವ ವೀರಗಲ್ಲೊಂದರಲ್ಲಿ ದನಗಳನ್ನು ರಕ್ಷಿಸಲು ಹೋಗಿ ಮಡಿದ ವೀರನ ಚಿತ್ರಣವಿದೆ. ಇಲ್ಲಿ ಸತ್ತಿರುವ ವೀರನ ಚಿತ್ರಣ ಅವನ ವೀರತನದ ಪ್ರಕಟಣೆಗೆ ಇಂಬುಗೊಟ್ಟಿದೆ. ದನಗಳು ವೀರನ ಹೆಣವನ್ನು ತುಳಿದುಕೊಂಡು ತಮ್ಮ ಊರಿಗೆ ಹಿಂತಿರುಗುತ್ತಿರುವಂತೆ ಬಿಡಿಸಲಾಗಿದೆ. (ಚಿತ್ರ ೫೨) ಈ ರೀತಿಯ ಚಿತ್ರಣ ಕರ್ನಾಟಕದ ವೀರಗಲ್ಲುಗಳ ಶಿಲ್ಪದಲ್ಲಿ ವಿರಳವೆಂದೇ ಹೇಳಬೇಕು. ಆದರೆ ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕಿಕ್ಕಿಲಿ ಎಂಬ ಗ್ರಾಮದಲ್ಲಿನ ಕೆಲವಾರು ವೀರಗಲ್ಲುಗಳಲ್ಲಿ ಈ ರೀತಿಯ ಚಿತ್ರಣ ದೊರೆಯುತ್ತದೆ. ಈ ಎರಡೂ ವೀರಗಲ್ಲುಗಳ ಬಗ್ಗೆ ಹಿಂದೆಯೇ 'ತುರುಗಾಳಗ' ಎಂಬ ಶೀರ್ಷಿಕೆಯ ಅಡಿಯಲ್ಲಿ ಚರ್ಚಿಸಿದ್ದೇವೆ.

ಬೇಟೆಯಲ್ಲಿ ಮಡಿದ ವೀರರ ವೀರಗಲ್ಲುಗಳು ಈ ದೃಷ್ಟಿಯಿಂದ ಗಮನಾರ್ಹವಾದ ಮತ್ತು ಕುತೂಹಲಕಾರಿಯಾದ ವಿಷಯಗಳನ್ನು ತಿಳಿಸುತ್ತವೆ. ಹೋರಾಟದಲ್ಲಿ ಮಡಿದ ವೀರರ ಸ್ಮಾರಕಗಳಾಗಿರುವ ವೀರಗಲ್ಲುಗಳ ಶಿಲ್ಪದ ಹಾಗೆ ಇವು ವಿವರಣೆಯನ್ನುಹೊಂದಿರದ್ದರೂ ತುಂಬಾ ಅರ್ಥಪೂರ್ಣವಾಗಿವೆ. ಈ ವೀರಗಲ್ಲುಗಳ ಶಿಲ್ಪದಲ್ಲಿ, ಮೇಲಿನ ಎರಡು ಹಂತಗಳು ಉಳಿದ ವೀರಗಲ್ಲುಗಳ ಹಾಗೆಯೇ ವಿವರಣೆಯನ್ನು ಪಡೆದಿರುತ್ತವೆ ಮೊದಲನೆಯ ಹಂತದಲ್ಲಿ ವೀರನ ದುಷ್ಟಮೃಗದೊಡನೆ ಹೋರಾಡುತ್ತಿರುವಂತೆ ಬಿಡಿಸಲಾಗಿರುತ್ತದೆ. ಶಿಲ್ಪಿಯು ತಾನು ಕಂಡ ಬೇಟೆಯ ಚಿತ್ರವನ್ನು ಎಷ್ಟುಮಟ್ಟಿಗೆ ಸಹಜವಾಗಿ ನಿರೂಪಿಸಿದ್ದಾನೆ ಎಂಬುದು ಸೂಕ್ಷ್ಮವಾಗಿ ಪರಿಶೀಲಿಸಿದಾಗ ವೇದ್ಯವಾಗುತ್ತದೆ.

ಶ್ರವಣಗುಡಿಯ ವೀರಗಲ್ಲಿನಲ್ಲಿ ತನಗೆ ಆಹಾರವಾಗಿ ದೊರೆತ ದನವೊಂದರ ಮೇಲೆ ಹಾರಿ ಅದರ ಗೋಪುರದ ಭಾಗವನ್ನು ಹುಲಿ ಕಚ್ಚುತ್ತಿದೆ. ತನ್ನ ಮುಂಗಾಲುಗಳಿಂದ ದನದ ಕುತ್ತಿಗೆಯನ್ನು ಹಿಡಿದಿದೆ. ಬೆದರಿದ ದನ ತಟಸ್ಥವಾಗಿ ನಿಂತುಬಿಟ್ಟಿದೆ.ವೀರನು ಹುಲಿಯೊಡನೆ ಹೋರಾಡುತ್ತಿರುವ ಚಿತ್ರವನ್ನು ಬಿಡಿಸಿಲ್ಲ ಆದರೆ ಮೇಲಿನ ಭಾಗದಲ್ಲಿ ಅಪ್ಸರೆಯರು ವೀರನನ್ನು ವೀರಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆ ಬಿಡಿಸಲಾಗಿದೆ. ಇಲ್ಲಿ ವಿವರಗಳಿಗೆ ಕೈ ಹಾಕದೆ ಶಿಲ್ಪಿ ಘಟನೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ (ಚಿತ್ರ ೪೮)

ಮುಳುಬಾಗಿಲು ತಾಲ್ಲೂಕ್ ತಾವರೇಕೆರೆ ಎಂಬ ಗ್ರಾಮದಲ್ಲಿರುವ, "ವಿಕ್ರಮಾದಿತ್ಯ ಬಹುಗುಣ ತೇಜನ್' ಎಂಬ ಶಿಲ್ಪಿ ಮಾಡಿರುವ ವೀರಗಲ್ಲಿನ ಶಿಲ್ಪವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವೆಂದು ತೋರುತ್ತದೆ. (ಚಿತ್ರ. ೪೭) ಅದರ ಬಗ್ಗೆ ಹಿಂದೆ ಹಲವಾರು ಕಡೆ ಪ್ರಸ್ತಾಪಿಸಿದ್ದೇವೆ ಆ ಎಲ್ಲ ವಿವರಣೆಗಳ ಹಿನ್ನೆಲೆಯಲ್ಲಿ ಈ ವೀರಗಲ್ಲಿನ ಶಿಲ್ಪವನ್ನು ಪರಿಶೀಲಿಸಿದಾಗ ತುಂಬಾ ಅರ್ಥಪೂರ್ಣವಾಗಿ ಕಂಡುಬರುತ್ತದೆ. ಹುಲಿಯನ್ನು ಕೊಲ್ಲುವುದರಲ್ಲಿ ಪ್ರಮುಖ ಪಾತ್ರ ವಿರನದೇ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ವೀರನಿಗೆ ಬೇಟೆಯಲ್ಲಿ ಸಹಾಯಮಾಡಿದ ನಾಯಿಗಳ ಪಾತ್ರವೇನೂ ಗೌಣವಾದುದಲ್ಲ. ಈ ವೀರಗಲ್ಲಿನ ಶಿಲ್ಪದಲ್ಲಿ ವೀರನ ಚಿತ್ರವಿಲ್ಲ. ವೀರನು ಮಡಿದಿದ್ದಾನೆ ಎಂಬುದರ ಸೂಚನೆಯು ಇದರ ಶಿಲ್ಪದ ಮೂಲಕವಾಗಲೀ ಶಾಸನದ ಪಾಠದ ಮೂಲಕವಾಲೀ ಧ್ವನಿತವಾಗಿಲ್ಲ. ಆದ್ದರಿಂದ ಬೇಟೆಯಲ್ಲಿ ಯಶಸ್ವಿಯಾಗಿ ವೀರನು ಬದುಕಿರಬೇಕು ; ಆದರೆ ಅವನಿಗೆ ಬೇಟೆಯಲ್ಲಿ ಸಹಾಯಮಡಿದ ನಾಯಿಗಳು ಮಡಿದಿರಬೇಕು. ಆದಕಾರಣವೀರನು ತನ್ನ ಪ್ರತಿಜ್ಞೆನಡೆಸಿಕೊಟ್ಟುದನ್ನು ಲೋಕಕ್ಕೆ ಸಾರಲು ಮತ್ತು ತನ್ನ ಪ್ರೀತಿಯ ನಾಯಿಗಳ ಪರಾಕ್ರಮವನ್ನು ಕೀರ್ತಿಸಲು ಈ ವೀರಗಲ್ಲನ್ನು ಹಾಕಿಸಿರಬೇಕು. ವಿಕ್ರಮಾದಿತ್ಯನು ತನ್ನ ಈ ಶಿಲ್ಪದಲ್ಲಿ, ಬಲಿಷ್ಟವೂ, ಕ್ರೂರವೂ ಆದ ಹುಲಿಯು, ಅದಕ್ಕಿಂತ ಕಡಿಮೆ ಶಕ್ತಿಯ ಆದರೂ ಚುರುಕು ಬುದ್ದಿಯ ನಾಯಿಗಳ ಆಕ್ರಮಣ ವಿಧಾನವನ್ನು ಸಮರ್ಥವಾಗಿ ಎದುರಿಸಲಾರದೆ ಹಿಮ್ಮೆಟ್ಟುತ್ತಿರುವುದನ್ನು ಕಂಡರಿಸಿದ್ದಾನೆ. ನಾಯಿಗಳು ಹುಲಿಯನ್ನು ಹಿಂದೆ ಮುಂದೆ ಚಲಿಸಲು ಸಾಧ್ಯವಾಗದಂತೆ ಅಡ್ಡಗಟ್ಟಿವೆ. ಕೋಪಗೊಂಡ ನಾಯಿಗಳು ತಮ್ಮ ಕಿವಿ, ಬಾಲಗಳನ್ನು ನಿಗುರಿಸಿಕೊಂಡು ಹುಲಿಯನ್ನು ಎದುರಿಸಲು ಬೊಗಳುತ್ತಿರುವಂತೆ ಬಿಡಿಸಲಾಗಿದೆ.

ಈ ದಿಸೆಯಲ್ಲಿ ಬಳ್ಳಾರಿ ಜಿಲ್ಲೆ ಬಾಗಳಿಯಲ್ಲಿರುವ ಕಲ್ಯಾಣಿ ಚಾಲುಕ್ಯರ ಕಾಲದ ಹುಲಿಬೇಟೆಯೊಂದನ್ನು ಚಿತ್ರಿಸುವ ವೀರಗಲ್ಲಿನ ಶಿಲ್ಪ ತುಂಬಾ ಮಹತ್ವದ್ದಾಗಿದೆ. (ಚಿತ್ರ. ೪೯) ವೀರನೊಬ್ಬನು ಹುಲಿಯನ್ನು ನೇರವಾಗಿ ಎದುರಿಸುತ್ತಿದ್ದಾನೆ. ಅವನ ಹಿಂದೆ ಅನೇಕ ಜನ ಕತ್ತಿ, ಈಟಿ, ಗುರಾಣಿಯಂತಹ ಆಯುಧಗಳನ್ನು ಹಿಡಿದು ವೀರನೊಂದಿಗೆ ಇದ್ದಾರೆ. ಮತ್ತೊಬ್ಬವ್ಯಕ್ತಿ ವೀರನ ಹಿಂದೆ ಮರದ ಮೇಲಿನಿಂದ ಹುಲಿಯುತ್ತ ಬಾಣ ಪ್ರಯೋಗ ಮಾಡುವುದರ ಮೂಲಕ

ಅದನ್ನು ಕೊಲ್ಲುವ ಪ್ರಯತ್ನ ಮಾಡುತ್ತಿದ್ದಾನೆ. ಇಡೀ ಚಿತ್ರ ಹುಲಿಯಬೇಟೆಯನ್ನು ಪ್ರಾಚೀನ ಕರ್ನಾಟಕದಲ್ಲಿ ಹೇಗೆ ಆಡುತ್ತಿದ್ದರು ಎಂಬ ಅಂಶವನ್ನು ತಿಳಿಸುತ್ತದೆ. ಮರದ ಮೇಲಿನಿಂದ ಬಾಣ ಪ್ರಯೋಗ ಮಾಡುತ್ತಿರುವ ವಿವರವನ್ನು ಬಿಡಿಸಿರುವ ಶಿಲ್ಪಿಗಿದ್ದ ಸೂಕ್ಷ್ಮಜ್ಞಾನ ಮತ್ತು ಬೇಟೆಯ ಪದ್ಧತಿಯ ಬಗೆಗಿನ ಅರಿವು ವ್ಯಕ್ತವಾಗುತ್ತದೆ. ಈ ಮೇಲೆ ಗಮನಿಸಿದ ತಾವರೆಕೆರೆಯ ವೀರಗಲ್ಲು ತಿಳಿಸುವ ಕಪ್ಪುಳದಾನನು ಬಹುಶಃ ಹುಲಿಯನ್ನು ದೂರದಿಂದಲೇ ಕೊಂದು ತಾನು ಉಳಿದಿರಬಹುದೆಂದು ತೋರುತ್ತದೆ.

ಈ ಶತಮಾನದ ಆರಂಭದಲ್ಲಿ ಹಾಕಲಾದ ಮೊಳಕಾಲ್ಮುರು ತಾಲ್ಲೂಕ್ ಕೋನಸಾಗರದ ಎರಮಂಚಯ್ಯನ ವೀರಗಲ್ಲಿನ ಶಿಲ್ಪ ತೀರಾ ಸಾಧಾರಣವೇ ಆಗಿದ್ದರೂ, ಬೇಟೆಯನ್ನು ತುಂಬ ಸಹಜವಾಗಿ ಶಿಲ್ಪಿ ಬಿಡಿಸಿದ್ದಾನೆ (ಚಿತ್ರ ೨೮) ಎರಮಂಚಯ್ಯನ ಮೇಲೆ ಎರಗಿದ ಚಿರತೆ, ಅದನ್ನು ಧೈರ್ಯದಿಂದ ಎದುರಿಸುತ್ತಿರುವ ಎರಮಂಚಯ್ಯ, ಅವನಿಗೆ ಸಹಾಯಮಾಡಲು ಚಿರತೆಯ ಮೇಲೆ ಆಕ್ರಮಣ ಮಾಡಲು ನೆಗೆಯುತ್ತಿರುವ ನಾಯಿಗಳ ಚಿತ್ರ ಪರಿಣಾಮಕಾರಿಯಾದ ರೀತಿಯಲ್ಲಿ ಮೂಡಿಬಂದಿದೆ.

ಹಂದಿ ಬೇಟೆಯನ್ನು ಚಿತ್ರಿಸಿರುವ ವೀರಗಲ್ಲುಗಳನ್ನು ಎರಡು ವಿಭಾಗಗಳಲ್ಲಿ ಗಮನಿಸಬಹುದು. (೧) ಹಂದಿ ಮತ್ತು ನಾಯಿಗಳ ಹೋರಾಟವನ್ನು ನಿರೂಪಿಸುವ ವೀರಗಲ್ಲುಗಳು ಮತ್ತು (೨) ವೀರನು ಹಂದಿಯೊಡನೆ ಮಾಡುತ್ತಿರುವ ಹೋರಾಟವನ್ನು ನಿರೂಪಿಸುವ ವೀರಗಲ್ಲುಗಳು.

ಮೊದಲ ರೀತಿಯ ಶಿಲ್ಪವನ್ನು ಮೇಲಾಗಾಣಿ, ಕೋಡಿಹಳ್ಳಿ, ಆತಕೂರು ಮತ್ತು ಯಲಹಂಕದ ವೀರಗಲ್ಲುಗಳಲ್ಲಿ ಗುರುತಿಸಬಹುದು. ಈ ವೀರಗಲ್ಲುಗಳು ಒಂದೇ ಅವಧಿಯ ಶಾಸನಗಳಾಗಿವೆ. ಶಿಲ್ಪದಲ್ಲಿಯೂ ಹೋಲಿಕೆಯನ್ನು ಹೊಂದಿವೆ. (ಚಿತ್ರ ೮, ೯, ೧೦, ೪೨)

ಎಪ್ಪತ್ತೈದು ಹಂದಿಗಳನ್ನ ಕೊಂದ "ಧಳಗ", ಇಪ್ಪತ್ತಾರು ಹಂದಿಗಳನ್ನು ಕೊಮದ "ಲೋಗ" ಎಂಬ ಎರಡು ನಾಯಿಗಲು ಹಂದಿಯ ಬೇಟೆಯಲ್ಲಿ ಮಡಿದ ವಿಷಯವನ್ನು ತಿಳಿಸುವ ಶಾಸನವೊಂದು ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕ್ ಮೇಲಾಗಾಣಿ ಎಂಬ ಗ್ರಾಮದಲ್ಲಿದೆ. ಈ ಶಾಸನದ ಮೇಲಿನ ಶಿಲ್ಪವು ಗಮನಾರ್ಹವಾಗಿದೆ. ಶಿಲ್ಪಿ ನಾಯಿಗಳೆಡರ ಪರಾಕ್ರಮವನ್ನು ಪ್ರತ್ಯೇಕವಾಗಿ ತಿಳಿಸುವ ಸಲುವಾಗಿ ಎರಡು ಹಂತಗಳಲ್ಲಿ ಹಂದಿಯೊಡನೆ ನಾಯಿ ಹೋರಾಡುತ್ತಿರುವ ಚಿತ್ರವನ್ನು ಬಿಡಿಸಿದ್ದಾನೆ. ಮೇಲಿನ ಹಂತದಲ್ಲಿ ಹೋರಾಡುತ್ತಿರುವ ನಾಯಿ ಧಳಗನಾದರೆ ಕೆಳಗಿನ ಹಂತದಲ್ಲಿ ಹೋರಾಡುತ್ತಿರುವ ನಾಯಿ ಲೋಗ. ಹಂದಿಗಳ ಬಹು ಸೂಕ್ಷ್ಮ ಭಾಗವಾದ ಅದರ ಮುಸುಡಿಯನ್ನು ಎರಡು ನಾಯಿಗಳು ಕಚ್ಚುತ್ತಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ.

ಬೇರೆ ಯಾವ ವೀರಗಲ್ಲುಗಳಲ್ಲಿಯೂ ಈ ತೆರನ ಚಿತ್ರಣವಿಲ್ಲ. ಈ ತಂತ್ರದಿಂದಲೇ ಈ ಎರಡು ನಾಯಿಗಳು ಅಷ್ಟು ಸಂಖ್ಯೆಯ ಹಂದಿಗಳನ್ನು ಕೊಂದಿರಬೇಕು. ಈ ವೀರಗಲ್ಲು ಒಡೆದು ಹೋಗಿರುವುದು ದುರದೃಷ್ಟದ ಸಂಗತಿ.

ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕ್ ಕೋಡಿಹಳ್ಳಿಯಲ್ಲಿರುವ ಹಂದಿಬೇಟೆಯ ವೀರಗಲ್ಲು ನಾಯಿಗಳು ಹಂದಿಯೊಡನೆ ಹೋರಾಡಲು ತಮ್ಮದೇ ಆದ ತಂತ್ರವನ್ನು ಹೇಗೆ ಬಳಸುತ್ತಿದ್ದವು ಎಂಬುದರ ಸ್ಪಷ್ಟ ಚಿತ್ರವನ್ನು ನೀಡುತ್ತದೆ. ಈ ವೀರಗಲ್ಲಿನ ಶಿಲ್ಪ ತುಂಬಾ ಸೂಕ್ಷ್ಮವಾಗಿದ್ದರೂ ಪರಿಣಾಮಕಾರಿಯಾಗಿದೆ. ನಾಲ್ಕು ನಾಯಿಗಳು ಹಂದಿಯನ್ನು ಸುತ್ತುವರಿದು ಹಂದಿಯು ಅಲುಗಾಡದಂತೆ ಬಂಧಿಸಿವೆ. ಇವುಗಳ ಆಕ್ರಮಣದಿಂದ ಹಂದಿ ಹೆದರಿದಂತಿದೆ. ಒಂದು ನಾಯಿ ಹಂದಿಯ ಮೂತಿಯನ್ನು ಕಚ್ಚುತ್ತಿದೆ. ಮತ್ತೊಂದು ನಾಯಿ ಹಿಂದುಗಡೆಯಿಂದ ಹಂದಿಯ ವೃಷಣಗಳನ್ನು ಕಚ್ಚುತ್ತಿದೆ. ಒಂದು ನಾಯಿ ಹಂದಿಯ ಮೇಲೆ ಹತ್ತಿ ಅದರ ಚರ್ಮವನ್ನು ಕೀಳುತ್ತಿವೆ. ಆಯ ತಪ್ಪಿದ ನಾಯಿಯೊಂದು ಹಂದಿಯ ಮುಂದುಗಡೆ ಅಂಗಾತ ಬಿದ್ದು ಮತ್ತೆ ಹೋರಾಡಲು ಏಳುತ್ತಿರುವಂತೆ ಚಿತ್ರಿಸಲಾಗಿದೆ. (ಚಿತ್ರ ೪೨)

ಇನ್ನು ಎರಡನೆಯ ಗುಂಪಿಗೆ ಸೇರಿದ ವೀರಗಲ್ಲುಗಳ ಶಿಲ್ಪದ ಕಡೆಗೆ ಗಮನಹರಿಸಬಹುದು. ಹೊಸಕೋಟೆ ತಾಲ್ಲೂಕ್ ನೆಲವಾಗಿಲು ಗ್ರಾಮದಲ್ಲಿ ನೊಳಂಬರ ಕಾಲಕ್ಕೆ ಸೇರುವ ಶಾಸನರಹಿತವಾದ ವೀರಗಲ್ಲೊಂದಿದೆ. ತನ್ನ ಮೇಲೆ ನುಗ್ಗುತ್ತಿರುವ ಹೋದ ನಾಯಿಗಳು ಹಂದಿಯ ಮೇಲೆ ಆಕ್ರಮಣ ಮಾಡುತ್ತಿವೆ. ಒಂದು ನಾಯಿ ಹಂದಿಯ ಬೆನ್ನ ಮೇಲೆ ಹಾರಿ ನಿಂತು ಅದರ ಚರ್ಮವನ್ನು ಕಚ್ಚಿ ಎಳೆಯುತ್ತಿದೆ. ಶಕ್ತಿಗುಂದಿದ ಹಂದಿ ವಿಚಲಿತವಾಗಿ ತನ್ನ ಮೂತಿಯನ್ನು ಕೆಳಗೆ ಮಾಡಿ ನಿಂತು ಬಿಟ್ಟಿದೆ. ಹಂದಿ ಹೆದರಿದೆ ಎಂಬುದನ್ನು ಸೂಚಿಸುವ ಸಲುವಾಗಿ ಅದು ತನ್ನ ಬಾಲವನ್ನು ಮುದುರಿಕೊಂಡಂತೆ ಬಿಡಿಸಲಾಗಿದೆ. ಕೆರಳದಿ ನಾಯಿಯ ಬಾಲವನ್ನು ಮೇಲಕ್ಕೆ ಎತ್ತಿಕೊಮಡಂತೆ ಬಿಡಿಸಲಾಗಿದೆ. ಇದಕ್ಕಿಂತಲೂ ಪರಿಣಾಮಕಾರಿಯಾದ ಹಂದಿಯ ಬೇಟೆ ಚಿತ್ರಣ ಬಳ್ಳಿಗಾವೆಯ ವೀರಗಲ್ಲಿನಲ್ಲಿ ದೊರೆಯುತ್ತದೆ. ಆ ಶಾಸನದ ಪಾಠದಿಂದ ವೀರನೊಬ್ಬನು ಪೆರ್ವಂದಿಯ ಬೇಟೆಯಲ್ಲಿ ಸತ್ತನೆಂಬುದಾಗಿ ತಿಳಿದುಬರುತ್ತದೆ. ಹಂದಿ ಹಿಂಗಾಲುಗಳನ್ನು ಊರಿ ಮುಂಗಾಲುಗಳನ್ನು ಮೇಲೆತ್ತಿ ವೀರನ ಮೇಲೆ ಎರಗಿದೆ. ವೀರನು ತನ್ನ ಬಲಗೈಯ ಈಟಿಯಿಂದ ಹಂದಿಯ ಗಂಟಲಿನ ಭಾಗಕ್ಕೆ ತಿವಿಯುತ್ತಿದ್ದಾನೆ. ಹಿಂದುಗಡೆಯಿಂದ ಮೂರು ನಾಯಿಗಳು ಒಂದ ಮೇಲೊಂದರಂತೆ ಹಂದಿಯನ್ನು ಆಕ್ರಮಿಸುತ್ತಿವೆ. ಇಷ್ಟಾದರೂ ಹೆದರದ ಹಂದಿ ಹೋರಾಟ ಮಾಡುತ್ತಲೇ ಇದೆ. (ಚಿತ್ರ ೩೯) ಮೇಲೆ ಮೇಲೆ ಗಮನಿಸಿದ ಇತರ ವೀರಗಲ್ಲುಗಳ ಶಿಲ್ಪದಲ್ಲಿನ ಹಂದಿಯ ಪ್ರಮಾಣ ಮನುಷ್ಯನಿಗಿಂತಲೂ ಚಿಕ್ಕದಾಗಿ ಕಂಡುಬರುತ್ತದೆ. ಆದರೆ ಇಲ್ಲಿ "ಪೆರ್ವಂದಿ' ಎಂಬುದನ್ನು ಸೂಚಿಸುವ ಸಲುವಾಗಿ ಶಿಲ್ಪಿ ಹಂದಿಯ ಪ್ರಮಾಣವನ್ನು ಮನುಷ್ಯ ಪ್ರಮಾನದಲ್ಲೇ ಬಿಡಿಸಿದ್ದಾನೆ.

ಈ ರೀತಿಯ ದೊಡ್ಡ ಹಂದಿಯನ್ನು ಎದುರಿಸುವ ಧೈರ್ಯ ಸಾಲದ ಇಬ್ಬರು ವ್ಯಕ್ತಿಗಳು ಹೋರಾಟದಿಂದ ವಿಮುಖರಾಗಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ಶಿಲ್ಪವು ಆ ದೊಡ್ಡ ಹಂದಿಯೊಡನೆ ಹೋರಾಡಿದ ವೀರನ ಅಸಾಧಾರಣ ಧೈರ್ಯವನ್ನು ಧ್ವನಿಸುವ ಒಂದು ಯಶಸ್ವೀ ಚಿತ್ರಣವಾಗಿದೆ ಎಂದು ಹೇಳಬಹುದು.

ಇದೇ ಹಂತಕ್ಕೆ ಸಂಬಂಧಿಸಿಯೂ ಹೋರಾಟದ ಚಿತ್ರಣವನ್ನೇ ಅಲ್ಲದೆ ಉಳಿದ ವಿವರಗಳನ್ನೂ ಅಂದರೆ ವೀರನ ದಹನಕ್ರಿಯೆಯನ್ನೂ ತೋರಿಸುವ ಅಪರೂಪದ ವೀರಗಲ್ಲುಗಳೂ ದೊರೆಯುತ್ತವೆ. ಇವು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಮತ್ತು ಚಿತ್ರದುರ್ಗ ಜಿಲ್ಲೆಯ ಎಲೇಬೆತೂರು ಗ್ರಾಮಗಳಲ್ಲಿವೆ. ವೀರನೊಬ್ಬನು ಯುದ್ಧದಲ್ಲಿ ಮಡಿದಾಗ ಆತನ ಹೆಂಡತಿಯು ಆತನೊಡನೆ ಸಹಗಮನ ಮಾಡಿ ಸಾಯುವ ವಿಷಯವನ್ನು ಬಳ್ಳಿಗಾವೆಯ ವೀರಗಲ್ಲು ತಿಳಿಸುತ್ತದೆ. ವೀರನಿಗೆ ಸಂಬಂಧಪಟ್ಟ ವಿಷಯವನ್ನು ಎರಡು ವಿಭಾಗಗಳಲ್ಲಿ ಬಿಡಿಸಲಾಗಿದೆ. ಒಂದು ವೀರನ ಹೋರಾಟ ಮತ್ತೊಂದು, ವೀರನ ದಹನಕ್ರಿಯೆ ಮತ್ತು ಆತನ ಹೆಂಡತಿಯ ಸಹಗಮನದ ಚಿತ್ರಣ. ವೀರನನ್ನು ದಹನ ಮಾಡುವ ಸಲುವಾಗಿ ಎತ್ತರವಾದ ವೇದಿಕೆಯನ್ನು ನಿರ್ಮಿಸಲಾಗಿದೆ. ಸಹಗಮನ ಮಾಡಿದ ಮಹಿಳೆಯ ಎರಡೂ ಕಡೆಗಳಲ್ಲಿ ಸಿಂಗಾರ ಮಾಡಿಕೊಂಡು ನಿಂತ ಮಹಿಳೆಯರು, ತಮ್ಮ ಎಡಗೈಯಲ್ಲಿ ಬಟ್ಟಲೊಮದನ್ನು ಹಿಡಿದು, ಬಲಗೈಯಿಂದ ಅಕ್ಷತೆ ಹಾಕಿ ಹರಸುತ್ತಿರುವಂತೆ ಬಿಡಿಸಲಾಗಿದೆ. ವೇದಿಕೆಯ ಪಕ್ಕದಲ್ಲಿ ಸಹಗಮನ ಮಾಡಿದ ಮಹಿಳೆಯ ಎರಡೂ ಕಡೆಗಳಲ್ಲಿ ಸಿಂಗಾರ ಮಾಡಿಕೊಂಡು ನಿಂತ ಮಹಿಳೆಯರು, ತಮ್ಮ ಎಡಗೈಯಲ್ಲಿ ಬಟ್ಟಲೊಂದನ್ನು ಹಿಡಿದು, ಬಲಗೈಯಿಂದ ಅಕ್ಷತೆ ಹಾಕಿ ಹರಸುತ್ತಿರುವಂತೆ ಬಿಡಿಸಲಾಗಿದೆ. ವೇದಿಕೆಯ ಪಕ್ಕದಲ್ಲಿ ಸಹಗಮನ ಮಾಡಿದ ಮಹಿಳೆ ಸುಮಂಗಲಿಯರಿಗೆ ನೀಡಿದ ಬಾಗಿನದ ಮೊರಗಲನ್ನೂ ಸೂಕ್ಷ್ಮವಾಗಿ ಬಿಡಿಸಲಾಗಿದೆ. ಬೆಂಕಿಯು ತನ್ನ ಭಯಂಕರವಾದ ನಾಲಿಗೆಗಳನ್ನು ಗಗನಕ್ಕೆ ಚಾಚಿ ಉರಿಯುತ್ತಿರುವುದನ್ನು ಅಷ್ಟೇ ಭಯಂಕರವಾಗಿ ಕಾಣವು ಹಾಗೆ ಬಡಿಸಲಾಗಿದೆ (ಚಿತ್ರ. ೨೭೭) ಒಟ್ಟಿನ ಮೇಲೆ ಹೇಳುವುದಾದರೆ, ಈ ವೀರಗಲ್ಲಿನ ಶಿಲ್ಪಿ, ತನ್ನ ಕಾಲದಲಿ ಕಂಡ ವೀರನ ದಹನ ಕ್ರಿಯೆಯೊಂದಿಗೆ ನಡೆಯುವ ಆತನ ಹೆಂಡತಿಯ ಸಹಗಮನದ ವಿವರಗಳನ್ನು ತನ್ನ ಪರಿಮಿತಿಯಲ್ಲಿ ಯಶಸ್ವಿಯಾಗಿ ಇಲ್ಲಿ ಹಿಡಿದಿಟ್ಟಿದ್ದನೆ. ಈ ರೀತಿಯ ವಿವರಣಾತ್ಮಕವಾದ ಸಹಗಮನದ ಚಿತ್ರವನ್ನು ನೀಡುವ ವೀರಗಲ್ಲಾಗಲೀ ಮಾಸ್ತಿಗಲ್ಲಾಗಲೀ ಬೇರೆ ಇಲ್ಲ.

ಕಾಳ್ಗಿಣಿಗೆಗಳು ವೀರಗಲ್ಲೊಂದರಲ್ಲಿ ವೀರನ ಹೆಂಡತಿಯು ಸಹಗಮನ ಮಾಡುತ್ತಿರುವ ವಿವರವನ್ನು ಬಿಡಿಸಲಾಗಿದೆ. ಜ್ವಾಲೆಗಳು ಹೊತ್ತಿ ಉರಿಯುತ್ತಿರುವ ಅಗ್ನಿಕುಂಡದ ಮುಂದೆ ಸಹಗಮನ ಮಾಡಲು ಸಿದ್ಧಳಾಗಿ ಅವಳು ನಿಂತಿದ್ದಾಳೆ. ಬೆಂಕಿಗೆ ಹಾರುವ ಮುನ್ನ ಆಕೆ ನೆರೆದ ಜನಸಮೂಹಕ್ಕೆ

ನಮಸ್ಕರಿಸಿ ಇನ್ನೇನು ಹಾರುವುದರಲ್ಲಿದ್ದಾಳೆಯೋ ಏನೋ ಎಂಬಂತೆ ಶಿಲ್ಪದಲ್ಲಿ ಬಿಡಿಸಲಾಗಿದೆ. ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕ್ ರಟ್ಟಿಯಳ್ಳಿಯಲ್ಲಿರುವ ಸೇವುಣ ರಾಮಚಂದ್ರದೇವನ ಕಾಲದ ವೀರಗಲ್ಲಿನ ಶಿಲ್ಪ ಈ ದೃಷ್ಟಿಯಿಂದ ಮಹತ್ವದ್ದಾಗಿದೆ. ಸೇವುಣರಿಗೂ ಮತ್ತು ಹೊಯ್ಸಳರಿಗೂ ನಡೆದ ಹೋರಾಟದಲ್ಲಿ ಸೇವುಣರ ಕಡೆಯ ವೀರನೊಬ್ಬ ಸಾಯುತ್ತಾನೆ. ಶಾಸನದ ಪಾಠ ತ್ರುಟಿತವಾಗಿರುವ ಕಾರಣ ಅರ್ಥ ಸ್ಪಷ್ಟವಾಗುವುದಿಲ್ಲ. ಶಿಲ್ಪದ ವಿವರಗಳನ್ನು ಗಮನಿಸಿದರೆ ಶಿಲ್ಪಿಯು ವೀರನೊಂದಿಗೆ ಸಹಗಮನ ಮಾಡಿದ ಏಳು ಜನ ಮಹಿಳೆಯರನ್ನು ಬಿಡಿಸಿದ್ದಾನೆ. ಸಹಗಮನ ಮಾಡಲು ನಿರ್ಮಿಸಿದ ಅಗ್ನಿಕುಂಡಗಳನ್ನೂ, ಆ ಕುಂಡಗಳಿಂದ ಏಳುತ್ತಿರುವ ಜ್ವಾಲೆಗಳನ್ನೂ ಶಿಲ್ಪಿ ಸಮರ್ಥವಾಗಿ ಚಿತ್ರಿಸಿದ್ದಾನೆ. ಕುಂಡದೊಳಗೆ ಬೀಳಲು ಅಟ್ಟಣೆಯ ಸಹಾಯದಿಂದ ವೇದಿಕೆಯನ್ನು ಏರಿದ ಮಹಿಳೆಯರು ತಮ್ಮ ಎರಡೂ ಕೈಗಳನ್ನೆತ್ತಿ ನೆರೆದ ಜನಸ್ತೋಮಕ್ಕೆ ಕೊನೆಯ ಬಾರಿಗೆ ಕೈ ಮುಗಿದು ಹಾರಲು ಸಿದ್ಧವಾಗಿರುವಂತೆಯೂ, ಮೊದಲೇ ಬೆಂಕಿಗೆ ಹಾರಿದ ಮಹಿಳೆಯೊಬ್ಬಳು ತನ್ನೆರಡೂ ಕೈಗಳನ್ನು ಜೋಡಿಸಿ ಕುಳಿತಿರುವಂತೆಯೂ ಬಿಡಿಸಲಾಗಿದೆ. (ಚಿತ್ರ ೨೭೮, ೨೭೯).

ಎರಡನೆಯ ಹಂತದಲ್ಲಿ ಸಹಗಮನ ಮಾಡಿದ ಮಹಿಳೆಯರು ಪುಷ್ಪಕ ವಿಮಾನದಲ್ಲಿಕುಳಿತು ಸ್ವರ್ಗಕ್ಕೆ ಹೋಗುತ್ತಿರುವಂತೆಯೂ ಬಿಡಿಸಲಾಗಿದೆ. ಕೆಳಗಿನ ಹಂತದಲ್ಲಿ ಏಳು ಜನ ಮಹಿಳೆಯರು ಸಹಗಮನ ಮಾಡಿದಂತೆ ತೋರಿಸಿದ ಶಿಲ್ಪಿಯು ಇಲ್ಲಿ ವೀರನ ಪಕ್ಕದಲ್ಲಿ ನಾಲ್ವರನ್ನು ಮಾತ್ರ ತೋರಿಸಿ ಉಳಿದ ಮೂವರನ್ನು ಈ ನಾಲ್ವರ ಪಾದತಲ್ಲದಲ್ಲಿ ಬಿಡಿಸಿದ್ದಾನೆ. ಇದೇ ರೀತಿಯಲ್ಲಿ ಮೂರನೆಯ ಹಂತದಲ್ಲಿಯೂ ಬಿಡಿಸಿದ್ದಾನೆ. ಈ ಮೂವರು ದಾಸಿಯ ರೆಂಬುದನ್ನು ಸೂಚಿಸಲು ಈ ರೀತಿ ಪಾದತಲದಲ್ಲಿ ಬಿಡಿಸಿದ್ದಾನೆಂದು ತೋರುತ್ತದೆ.

ಎಲೇಬೇತೂರಿನ ವೀರಗಲ್ಲಿನ ಮೇಲೆ ಶಾಸನ ಇಲ್ಲ. ಸಹಗಮನದ ಯಾವುದೇ ಸೂಚನೆಗಳೂ ಇಲ್ಲ. ಆದ್ದರಿಂದ ಇದು ವೀರನ ದಹನಕ್ರಿಯೆಯನ್ನು ಸೂಚಿಸುತ್ತದೆ ಎಂದು ತೋರುತ್ತದೆ. ಮೊದಲ ಹಂತವನ್ನು ಈ ವೀರಗಲ್ಲಿನ ಶಿಲ್ಪಿ ಎರಡು ವಿಭಾಗಗಳನ್ನಾಗಿ ವಿಂಗಡಿಸಿದ್ದಾನೆ. ಮೊದಲ ಭಾಗದಲ್ಲಿ ವೀರನು ಕುದುರೆಯ ಮೇಲೆ ಕುಳಿತು, ಕುದುರೆಯ ಮೇಲೆ ಕುಳಿತ ಮತ್ತೊಬ್ಬ ವೀರನೊಂದಿಗೆ ಹೋರಾಡುತ್ತಿರುವಂತೆ ಬಿಡಿಸಲಾಗಿದೆ. ಎರಡನೆಯ ಭಾಗದಲ್ಲಿ ಅಗ್ನಿಕುಂಡದಲ್ಲಿ ಬೆಂಕಿ ಉರಿಯುತ್ತಿರುವಂತೆ ಬಿಡಿಸಲಾಗಿದೆ. ಅಗ್ನಿಕುಂಡದ ಬಲಗಡೆ ಇಬ್ಬರು ವಾದ್ಯಗಾರರು ತಮಟೆ ಮತ್ತು ಮೃದಂಗಗಳನ್ನು ಬಾರಿಸುತ್ತಿದ್ದಾರೆ. ಎಡಗಡೆ ಒಬ್ಬ ವ್ಯಕ್ತಿ ಕೊಡದಿಂದ ಏನನ್ನೋ ಬೆಂಕಿಯ ಮೇಲೆ ಸುರಿಯುತ್ತಿದ್ದಾನೆ. ಮೇಲಿನ ಹಂತದಲ್ಲಿ ಅಪ್ಸರೆಯರು ಅವನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಬೆಂಕಿಯು ಮೃತಾತ್ಮನನ್ನು ಸ್ವರ್ಗಲೋಕಕ್ಕೆ ಕೊಂಡೊಯ್ಯುವ ಒಂದು ಸಾಧನ ಎಂಬ ನಂಬಿಕೆ ಭಾರತದಲ್ಲಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿ ಶಿಲ್ಪಿಯ ಕಲ್ಪನಾವಿಲಾಸದ ವಿನ್ಯಾಸವನ್ನು ವಿಶ್ಲೇಷಿಸಿ ನೋಡಿದಾಗ ಅವನ ಶ್ರಮ ಸಾರ್ಥಕವಾಗುತ್ತದೆ.

ಇವಿಷ್ಟು ವಿವರಣೆಗಳು ಸಾಮಾನ್ಯವಾಗಿ ಆರಂಭದ ಕಾಲದಿಂದ ಹಿಡಿದು ವಿಜಯನಗರದ ಕಾಲದ ವರೆಗಿನ ವೀರಗಲ್ಲುಗಳ ಮೊದಲ ಹಂತದಲ್ಲಿ ಕಂಡು ಬರುವ ಸಾಮಾನ್ಯ ಅಂಶಗಳು ಮತ್ತು ವಿಶೇಷಗಳು.

ಎರಡನೆಯ ಹಂತ (ಚಿತ್ರ ೨೨೦ ರಿಂದ ೨೩೧)

ವೀರಗಲ್ಲುಗಳ ಶಿಲ್ಪವಿನ್ಯಾಸದಲ್ಲಿ ಇನ್ನು ಪರಿಶೀಲಿಸಬೇಕಾಗಿರುವುದನ್ನು ಶಿಲ್ಪದ ಎರಡನೆಯ ಹಂತ. ಈ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ದೃಶ್ಯವನ್ನು ಗಮನಿಸಬಹುದು. ಈ ಹಿಂದೆ ಮೊದಲ ಹಂತದ ವಿಶ್ಲೇಷಣೆಯಲ್ಲಿ ಗಮನಿಸಿದ ಹಾಗೆ, ವೀರಗಲ್ಲನ್ನು ವಿಸ್ತೃತ ರೂಪದಲ್ಲಿ ಬಿಡಿಸಲು ಪ್ರಯತ್ನಿಸಿದ ಶಿಲ್ಪಿಗಳು ಈ ಹಂತವನ್ನೂ ಹಲವು ವಿಭಾಗಗಳನ್ನಾಗಿ ಮಾಡಿಕೊಂಡು ಚಿತ್ರಣ ಮಾಡಿರುವುದುಂಟು. ಆ ಬಗ್ಗೆ ಮುಂದೆ ಪರಿಶೀಲಿಸಲಾಗುತ್ತದೆ. ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ವಿಧಾನವನ್ನು ಶಿಲ್ಪಿಗಳು ಎರಡು ರೀತಿಗಳಲ್ಲಿ ಬಿಡಿಸಿರುತ್ತಾರೆ. ಮೊದಲನೆಯದಾಗಿ, ಅಪ್ಸರೆಯರು ವೀರನ ಕೈಗಳನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು, ತಮ್ಮ ಕೈಗಳನ್ನು ಅವನ ಹೆಗಲಮೇಲೆ ಹಾಕಿಕೊಂಡು ಹಾರುತ್ತಿರುವುದು ; ಎರಡನೆಯದಾಗಿ, ವೀರನನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದು ; ಈ ಎರಡೂ ರೀತಿಯ ಚಿತ್ರಣಗಳು ಕರ್ನಾಟಕದಲ್ಲಿ ಪ್ರಚಲಿತವಿದೆ.

ವೀರನನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರುವ ದೃಶ್ಯವನ್ನು ಗಂಗರ ಮತ್ತು ನೊಳಂಬರ ಕಾಲದ ವೀರಗಲ್ಲುಗಳ ಒಂದು ಭಾಗದಲ್ಲಿ ಚಿಕ್ಕದಾಗಿ ಬಿಡಿಸಲಾಗಿರುತ್ತದೆ. (ಚಿತ್ರ ೨೪೭, ೨೩೧) ಕಲ್ಯಾಣಿ ಚಾಲುಕ್ಯರ, ಹೊಯ್ಸಳರ ಕಾಲದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಈ ರೀತಿಯ ಚಿತ್ರಣ ದೊರೆಯುತ್ತದೆ ; ವೀರನು ಪುಷ್ಪಕವಿಮಾನದಲ್ಲಿ ಕೈ ಮುಗಿದು ಪದ್ಮಾಸನದಲ್ಲಿ ಕುಳಿತಿರುವಂತೆಯೂ, ಅದನ್ನು ಹೊತ್ತು ಅಪ್ಸರೆಯರು ಹಾರುತ್ತಿರುವಂತೆಯೂ ಬಿಡಿಸಲಾಗಿರುತ್ತದೆ. ಒಂದೇ ವೀರಗಲ್ಲುಇಬ್ಬರು ವೀರರ ಸ್ಮಾರಕವಾಗಿದ್ದರೆ ಮೊದಲ ಹಂತದಲ್ಲಿ ವೀರರಿಬ್ಬರಿಗೂ ಪ್ರಾಶಸ್ತ್ಯ ದೊರೆತಿರುತ್ತದೆ. ಹಾಗೆಯೇ ವೀರರಿಬ್ಬರನ್ನೂ ಒಂದೇ ಪುಷ್ಪಕ ವಿಮಾನದಲ್ಲಿ, ಕೆಲವೊಮ್ಮೆ ಇಬ್ಬರನ್ನೂ ಬೇರೆ ಬೇರೆ ಪುಷ್ಪಕ ವಿಮಾನಗಳಲ್ಲಿ ಕೊಂಡೊಯ್ಯುತ್ತಿರುವಂತೆ ಬಿಡಿಸಲಾಗಿರುತ್ತದೆ. ಯುದ್ಧದಲ್ಲಿ ಹೋರಾಡಿ ಮಡಿದ ವೀರನೊಂದಿಗೆ ಆತನ ಹೆಂಡತಿಯು ಸಹಗಮನ ಮಾಡಿದ್ದರೆ, ಅಂತಹ ಘಟನೆಯನ್ನು ನಿರೂಪಿಸುವ ವೀರಗಲ್ಲುಗಳ ಶಿಲ್ಪದಲ್ಲಿ ಅಪ್ಸರೆಯರು ವೀರನೊಂದಿಗೆ ಆತನ ಹೆಂಡತಿಯನ್ನೂ ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿರುವಂತೆ ಬಿಡಿಸಲಾಗಿರುತ್ತದೆ.

ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ ಕಾಲದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಅಪ್ಸರೆಯರು ವೀರನ ಕೈಗಳನ್ನು ತಮ್ಮ ಹೆಗಲಿನ ಮೇಲೆ ಹಾಕಿಕೊಂಡು

ಹಾರುತ್ತಿರುವಂತೆ ಬಿಡಿಸಿರುತ್ತಾರೆ. ಕೆಲವೊಮ್ಮೆ ಇಬ್ಬರು ಅಪ್ಸರೆಯರು ವೀರನಿಗೆ ಚಾಮರಸೇವೆ ಮಾಡುತ್ತಾ ಹಾರುತ್ತಿರುವುದನ್ನು ಗಮನಿಸಬಹುದು. ಮತ್ತೆ ಕೆಲವೊಮ್ಮೆ ವೀರನನ್ನು ಅನೇಕ ಅಪ್ಸರೆಯರು ಕೂಡಿಕೊಂಡು ಕೊಂಡೊಯ್ಯುತ್ತಿರುವಂತೆ ಬಿಡಿಸಲಾಗಿರುತ್ತದೆ.

ಮಾವಳಿ ಮತ್ತು ಬೆಟಗೇರಿಯ ರಾಷ್ಟ್ರಕೂಟರ ವೀರಗಲ್ಲುಗಳಲ್ಲಿ, ಸ್ವರ್ಗಕ್ಕೆ ವೀರನನ್ನು ಅಪ್ಸರೆಯರು ಮೋಡಗಳ ನಡುವೆ ಕೊಂಡೊಯ್ಯುತ್ತಿರುವ ಚಿತ್ರವನ್ನು ಗಮನಿಸಬಹುದು. (ಚಿತ್ರ ೨೨೨, ೨೩೮, ೨೩೯) ಭವ್ಯ ವಾದ ಆಕಾರದ ಆ ವೀರಗಲ್ಲುಗಳ ಶಿಲ್ಪದ ವೀರನನ್ನು ಅಪ್ಸರೆಯರು ಮೋಡಗಳ ನಡುವೆ ಕೊಂಡೊಯ್ಯುತಿದ್ದಾರೇನೋ ಎಂಬ ಭ್ರಮೆಯನ್ನುಂಟು ಮಾಡುವಷ್ಟರಮಟ್ಟಿಗೆ ಶಿಲ್ಪಿಗಳು ತಮ್ಮ ಚಾತುರ್ಯವನ್ನು ಮೆರೆದಿದ್ದಾರೆ. ಮೋಡಗಳಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆ ಬಿಡಿಸಲಾಗಿರುವ ಶಿಲ್ಪ ನಮ್ಮ ಗಮನಕ್ಕೆ ಬಂದಿರುವುದು ಇಲ್ಲಿ ಮಾತ್ರವೇ ಎಂದು ಹೇಳಬೇಕು. ಆರಂಭಕಾಲದ ವೀರಗಲ್ಲುಗಳಲ್ಲಿ ಅಪ್ಸರೆಯರು ತಮ್ಮ ಹೆಗಲಮೇಲೆ ವೀರನ ಕೈ ಹಾಕಿಕೊಮಡು ಸ್ವರ್ಗಕ್ಕೆ ಕೊಂಡೊಯ್ಯುವ ಚಿತ್ರ ಒಂದು ರೀತಿಯಲ್ಲಿ ಮುಂದೆ ಪಡಿಯಚ್ಚಿನಂತೆ ಎಲ್ಲಾ ವೀರಗಲ್ಲುಗಳಲ್ಲಿಯೂ ಕಾಣಿಸಿಕೊಂಡಿದೆ. ಆದರೆ ಕೆಲವು ಶಿಲ್ಪಿಗಳು ತಮ್ಮ ವೈಯಕ್ತಿಕ ಪ್ರತಿಭೆಯಿಂದ ಮೆರುಗನ್ನು ತುಂಬಿರುವುದುಂಟು. ಇಲ್ಲಿ ಲಘುವಾದ, ಕ್ರಮಬದ್ಧವಾದ, ಲಯ ಪೂರ್ಣವಾದ ಹಾರುವಿಕೆಯ ಚಿತ್ರಣ ದೊರೆಯುತ್ತದೆ.

ವೀರನನ್ನು ಸುರಸುಂದರಿಯರು ಎತ್ತಿಕೊಂಡು, ಯಕ್ಷ, ಗಂಧರ್ವ, ಕಿನ್ನರರ ವಾದ್ಯವೃಂದಗಳೊಡನೆ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದನ್ನು ಈ ಹಂತದಲ್ಲಿ ನೋಡಬಹುದು. ಇದರ ವೈಭವಪೂರ್ಣವಾದ ಚಿತ್ರಣವನ್ನು, ಕಲ್ಯಾಣಿ ಚಾಲುಕ್ಯರ ಕಾಲದಿಂದ ಆರಂಭವಾಗಿ ವಿಜಯನಗರದ ಕಾಲದವರೆಗಿನ ವೀರಗಲ್ಲುಗಳಲ್ಲಿ ಗಮನಿಸಬಹುದು. ಕೆಲವು ವೀರಗಲ್ಲುಗಳಲ್ಲಿ, ವೀರನು ಸ್ವರ್ಗದಲ್ಲಿ ಯಕ್ಷ, ಗಂಧರ್ವ, ಕಿನ್ನರ ಕಿಂಪುಪುರಷ, ಅಪ್ಸರ ಸ್ತ್ರೀಯರೊಡನೆ ಸಕಲ ವೈಭವದೊಡನೆ ಇರುವ ದೃಶ್ಯಗಳನ್ನು ಅತ್ಯದ್ಭುತವಾಗಿ ಬಿಡಿಸಲಾಗಿರುತ್ತದೆ. ಕಲ್ಯಾಣಿ ಚಾಲುಕ್ಯರ ಕಾಲದ ಬಳ್ಳಿಗಾವೆಯ ಒಂದು ವೀರಗಲ್ಲಿನಲ್ಲಿ, ವೀರನನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು, ಅದನ್ನು ನಾಲ್ವರು ಅಪ್ಸರಸ್ತ್ರೀಯರು ಹೊತ್ತು ಕೊಂಡುಹೋಗುತ್ತಿರುವಂತೆ, ಗಂಧರ್ವರು ವೀರನನ್ನು ತಮ್ಮ ವಾದ್ಯಗಳೊಂದಿಗೆ ಸೇವಿಸುತ್ತಿರುವಂತೆ ಬಿಡಿಸಲಾಗಿದೆ.

ಇದೇ ವಿವರ ಹಾನುಗಲ್ಲಿನ ಕದಂಬರ ಮತ್ತು ವಿಜಯನಗರಕಾಲದ ಕಾಯ್ಕಿಣಿ ಮತ್ತು ಬೇಡಕಣಿಗಳ ವೀರಗಲ್ಲುಗಳ ಶಿಲ್ಪದಲ್ಲಿ ಇನ್ನೂ ಹೆಚ್ಚಿನ ವಿಸ್ತಾರವನ್ನು ಹೊಂದಿದೆ. ಈ ವೀರಗಲ್ಲುಗಳಲ್ಲಿ ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಭಾಗವನ್ನು ಸಾಮಾನ್ಯವಾಗಿ ಎರಡು ಭಾಗಗಳಲ್ಲಿ ಬಿಡಿಸಲಾಗಿರುತ್ತದೆ. ಮೊದಲ ಭಾಗದಲ್ಲಿ ಅಪ್ಸರೆಯರು ವೀರನ ಹೆಗಲ ಮೇಲೆ ಕೈ ಹಾಕಿಕೊಂಡೋ

ಅಥವಾ ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡೋ ಕೊಂಡೊಯ್ಯುತ್ತಿರುತ್ತಾರೆ. ಹಾಗೆ ಕೊಂಡೊಯ್ಯುವಾಗ ಅಪ್ಸರೆಯರು ತಮ್ಮ ಕೈಯಲ್ಲಿ ಚೌರಿಯನ್ನೋ ಅಥವಾ ಹೂವಿನ ಮಾಲೆಯನ್ನೋ ಹಿಡಿದಿರುತ್ತಾರೆ. ಅದರ ಮೇಲಿನ ಭಾಗದಲ್ಲಿ ಗಂಧರ್ವರು ತಮ್ಮ ಮೃದಂಗ, ಕಿನ್ನರಿ ತಾಳ, ಮೇಳ, ಕೊಳಲುಗಳಿಂದ ಕೂಡಿ, ಅಪ್ಸರೆಯರಿಂದ ನರ್ತನ ವೀರನನ್ನು ಕರೆದೊಯ್ಯುತ್ತಿರುವ ವಿವರಗಳನ್ನು ಬಿಡಿಸಲಾಗಿರುತ್ತದೆ.

ಈ ದೃಷ್ಟಿಯಿಂದ ಹಾನುಗಲ್ಲು ಕದಂಬರ ಕಾಲಕ್ಕೆ ಸೇರಿದ ಬೇಡಕಣಿಯ ಒಂದು ವೀರಗಲ್ಲು ಮಹತ್ವದ್ದೆನಿಸುತ್ತದೆ. ಇಲ್ಲಿ ಸ್ವರ್ಗಕ್ಕೆ ವೀರನನ್ನು ಕೊಂಡೊಯ್ಯುವ ದೃಶ್ಯವನ್ನು ಮೂರು ಭಾಗಗಳಲ್ಲಿ ಬಿಡಿಸಲಾಗಿದೆ. ಮೊದಲನೆಯ ಭಾಗಲದಲಿ ಅಪ್ಸರಸ್ತ್ರೀಯರ ನರ್ತನ ಮತ್ತು ಗಂಧರ್ವರ ವಾದ್ಯವೃಂದವಿದೆ. ನಡುವಿನ ಭಾಗದಲ್ಲಿ ವೀರನನ್ನು ಪುಷ್ಪಕ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಕರೆದೊಯ್ಯುತ್ತಿದ್ದಾರೆ. ಆ ನಂತರದ ಭಾಗದಲ್ಲಿ ಮೊದಲ ಭಾಗಕ್ಕಿಂತಲೂ ವಿಭಿನ್ನವಾದ ವಾದ್ಯಗಳನ್ನು ನುಡಿಸುತ್ತಾ ಕರೆದೊಯ್ಯುತ್ತಿದ್ದಾರೆ.

ಈ ಎಲ್ಲ ವಿವರಗಳೂ ಅಂದಿನ ಜನಸಾಮಾನ್ಯರಿಗೆ ಸ್ವರ್ಗದ ಬಗ್ಗೆ ಇದ್ದ ನಂಬಿಕೆಯ ಪ್ರಬಲವಾದ ಬೇರುಗಳನ್ನು ಗುರುತಿಸಲು ಸಹಾಯ ಮಾಡುತ್ತವೆ. ಈ ರೀತಿಯ ಚಿತ್ರಣ ತನ್ನ ಪ್ರಭಾವದಿಂದ ವೀರರನ್ನು ಹೇಗೆ ಯುದ್ಧನಿರತರನ್ನಾಗಿ ಮಾಡುತ್ತಿತ್ತು ಎಂಬ ಅಂಶವೂ ಗಮನಿಸಬೇಕಾದ್ದದಾಗಿದೆ.

ಮೂರನೆಯ ಹಂತ

ಈ ಹಂತದಲ್ಲಿ, ವೀರನು ಸ್ವರ್ಗದಲ್ಲಿ ಇರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿರುತ್ತದೆ. ಈ ರೀತಿಯ ಚಿತ್ರಣಗಳು ಸುಮಾರು ಎಂಟನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗಿನ ವೀರಗಲ್ಲುಗಳಲ್ಲಿ ದೊರೆಯುತ್ತವೆ. ಇಲ್ಲಿ ವೀರನು ಪದ್ಮಾಸನದಲ್ಲಿಯೋ ಅಥವಾ ಸುಖಾಸನ ದಲ್ಲಿಯೋ ಕುಳಿತಿರುತ್ತಾನೆ. ಅಪ್ಸರೆಯರು ಇವನ ಎರಡು ಕಡೆಯಲ್ಲಿ ನಿಂತು ಚೌರಿಯನ್ನು ಬೀಸುತ್ತಾ ಗಾಳಿಯನ್ನು ಹಾಕುತ್ತಿರುತ್ತಾರೆ. ಬೆಟಗೇರಿಯ ಎಲ್ಲಾ ವೀರಗಲ್ಲುಗಳಲ್ಲಿಯೂ ವೀರನು ತನ್ನ ಬಲಗೈಯಲ್ಲಿ ಕಮಲವೊಂದನ್ನು ಹಿಡಿದಿರುವಂತೆ ಚಿತ್ರ ಬಿಡಿಸಲಾಗಿದೆ. ಮಾವಳಿಯ ವೀರಗಲ್ಲು ಸ್ವರ್ಗದ ವಿವರವಾದ ವೈಭವಪೂರ್ಣವಾದ ದೃಶ್ಯವನ್ನು ಹೊಂದಿದ್ದು, ಎರಡೂ ಬದಿಯಲ್ಲಿ ಸ್ವರ್ಗದ ದ್ವಾರಪಾಲಕರನ್ನೂ ಹೊಂದಿದೆ. ರೋಣದ ವೀರಗಲ್ಲಿನ ಮೇಲ್ಭಾಗದಲ್ಲಿ ಮಹಿಷಾಸುರ ಮರ್ಧಿನಿ, ನಟರಾಜ ಮತ್ತು ಪುರುಷದೇವತೆಯನ್ನು, ನಡುವಿನ ಹಂತದಲ್ಲಿ ಬ್ರಹ್ಮ ಮತ್ತು ವಿಷ್ಣುವಿನ ಚಿತ್ರಗಳನ್ನು ಬಿಡಿಸಲಾಗಿದೆ. (ಚಿತ್ರ ೨೩೮, ೨೩೯, ೨೪೪)

ಇದೇ ಅವಧಿಯ ವೀರಗಲ್ಲುಗಳ ಶಿಲ್ಪದಲ್ಲಿ, ವೀರನು ದೇವರ ಸಾಮೀಪ್ಯ ಪದವಿಯನ್ನು ಹೊಂದಿರುವಂತೆ ಬಿಡಿಸಲಾಗಿರುವುದನ್ನು ಗಮನಿಸಬಹುದು. ವೀರನು ಸೇರಿದ ಮತದ ದೇವರ ಸಾನಿಧ್ಯದಲ್ಲಿ ಅವನಿರುವಂತೆ ಶಿಲ್ಪವನ್ನು ಬಿಡಿಸಲಾಗಿರುತ್ತದೆ. ಈ ರೀತಿಯ ಶಿಲ್ಪದ ವಿವರಗಳನ್ನು ಬಿಡಿಸಲು ಪ್ರಯತ್ನಿಸಿದ ಶಿಲ್ಪಿಗಳ ಮೊದಲ ಪ್ರಯತ್ನಗಳನ್ನು ನಾವು ಬೆಟಗೇರಿಯ ವೀರಗಲ್ಲುಗಳಲ್ಲಿ ಗಮನಿಸಬಹುದು, ವೀರಗಲ್ಲುಗಳ ಮೇಲ್ಭಾಗದಲ್ಲಿ ಗಣೇಶ, (ಚಿತ್ರ ೨೪೨) ಉಗ್ರನರಸಿಂಹ, ಶಿವಲಿಂಗವನ್ನೂ ಒಂದೇ ಒಂದು ವೀರಗಲ್ಲಿನಲ್ಲಿ ವಿಷ್ಣುವನ್ನೂ ವೀರಗಲ್ಲಿನ ತಳಭಾಗದಲ್ಲಿ ಬಿಡಿಸಲಾಗಿದೆ. ಇದರ ಮುಂದಿನ ಹಂತವನ್ನು ಹೂಲಿಯ ಕ್ರಿಶ. ೧೦೫೫ರ ವೀರಗಲ್ಲುಗಳ ಶಿಲ್ಪದಲ್ಲಿ ಗಮನಿಸಬಹುದು. ಇಲ್ಲಿ ಗಣೇಶ, ದುರ್ಗಿ, ಬ್ರಹ್ಮ ಮಹೇಶ್ವರರನ್ನು ಕಾಣಬಹುದು. (ಚಿತ್ರ ೨೫೯, ೨೬೦) ಇಲ್ಲಿ ಈ ಹಂತವನ್ನೇ ಎರಡು ಮಜಲುಗಳಾಗಿ ವಿಂಗಡಿಸಲಾಗಿದೆ ; ಮೊದಲ ಭಾಗದಲ್ಲಿ ವೀರನು ಅಪ್ಸರೆಯರೊಂದಿಗೆ ಸ್ವರ್ಗದಲ್ಲಿ ಸುಖದಿಂದ ಇರುವುದನ್ನು ಬಿಡಿಸಲಾಗಿದೆ ; ಅದರ ಮೇಲಿನ ಭಾಗದಲ್ಲಿ ವೀರನು ಸ್ವರ್ಗವನ್ನೂ ಮೀರಿದ ಶಾಶ್ವತವಾದ ಪದವಿಯನ್ನು ಪಡೆದನು ಎಂಬುದನ್ನು ಸೂಚಿಸುವ ಸಲುವಾಗಿ ಕೈಲಾಸದಲ್ಲಿರುವಂತೆ ಬಿಡಿಸಲಾಗಿದೆ. ವ್ಯಕ್ತಿಗೆ ಸ್ವರ್ಗ ಪ್ರಾಪ್ತಿಯೇ ಅಂತಿಮ ಮುಕ್ತಿಯಲ್ಲ, ಅದನ್ನೂ ಮೀರಿ ತಾನು ನಂಬಿದ ದೈವದ ಸಾನ್ನಿಧ್ಯ, ಸಾಮೀಪ್ಯ ಪಡೆಯುವುದು ಎಂಬ ಧಾರ್ಮಿಕ ನಂಬಿಕೆಯೇ ಈ ರೀತಿಯ ಶಿಲ್ಪದ ವಿವರಗಳು ವೀರಗಲ್ಲುಗಳಲ್ಲಿ ಮೂಡಿ ಬರಲು ಕಾರಣವೆಂದು ತೋರುತ್ತದೆ. ಶೈವಧರ್ಮದ ಮಟ್ಟಿಗೆ ಹೇಳುವುದಾದರೆ, ಶೈವಧರ್ಮ ಕರ್ನಾಟಕದಲ್ಲಿ ಪ್ರಬಲವಾದ ಹಗೆ ವೀರಗಲ್ಲುಗಳ ಶಿಲ್ಪದಲ್ಲಿ ಈ ರೀತಿಯ ವಿವರಣಾತ್ಮಕವಾದ ಶಿಲ್ಪಕ್ಕೆ ಕಾರಣವಾಯಿತೆಂದು ಹೇಳಬಹುದು. ಈ ರೀತಿಯ ಶಿಲ್ಪವಿವರ ಕಲ್ಯಾಣಿ ಚಾಲುಕ್ಯರ ಕಾಲದಿಂದ ಹಿಡಿದು ವಿಜಯನಗರ ಸಾಮ್ರಾಜ್ಯದ ಕೊನೆಯವರೆಗೆ ದೊರೆಯುವ ಬಹುಪಾಲು ಎಲ್ಲ ವೀರಗಲ್ಲುಗಳಲ್ಲಿಯೂ ಇರುತ್ತದೆ. ಈ ವೀರಗಲ್ಲುಗಳಲ್ಲಿಯೂ ನಮಗೆ ಸಾಮಾನ್ಯವಾಗಿ ದೊರೆಯುವ ಒಂದು ಅಂಶ ಎಂದರೆ, ಶಿವಲಿಂಗ ಮಧ್ಯೆ ಇದ್ದು, ಜಟಾಧಾರಿಯಾದ ಒಬ್ಬ ವ್ಯಕ್ತಿ ಪಕ್ಕದಲ್ಲಿರುತ್ತಾನೆ. ಇವನು ತನ್ನ ಜಡೆಯನ್ನು ನೀಳವಾಗಿ ಬಿಟ್ಟಿರುವಂತೆ ಅಥವಾ ಜುಟ್ಟನ್ನು ದುಂಡಗೆ ಮೇಲಕ್ಕೆ ಸುತ್ತಿ ಕಟ್ಟಿರುವಂತೆ ಬಿಡಿಸಲಾಗಿರುತ್ತದೆ. ಶಿವಲಿಂಗಕ್ಕೆ ಕೆಲವೊಮ್ಮೆ ರುದ್ರಾಕ್ಷಿಯನ್ನು ಸುತ್ತಿರುವಂತೆ ವಿವರಗಳು ಅಲ್ಲಲ್ಲಿ ದೊರೆಯುತ್ತವೆ. ಎಡಗೈಯಲ್ಲಿ ಗಂಟೆಯನ್ನು ಹಿಡಿದು ಬಲಗೈಯಲ್ಲಿ ಮಂಗಳಾರತಿ ಎತ್ತುತ್ತಿರುವಂತೆ ಬಿಡಿಸಲಾಗಿರುತ್ತದೆ. ಲಿಂಗದ ಮೇಲೆ ಅಭಿಷೇಕ ಮಾಡುವುದಕ್ಕೆ ನೆರವಾಗುವ ಧಾರಾಪಾತ್ರೆಯೂ ಇರುತ್ತದೆ. ಈ ಎಲ್ಲಾ ವಿವರಗಳನ್ನು ದೇವಾಲಯದಲ್ಲಿರುವಂತೆಯೇ ಬಿಡಿಸಿರುತ್ತಾರೆ. ಈ ಬಗ್ಗೆ ಮುಂದೆ ವಿವರವಾಗಿ ಪರಿಶೀಲಿಸಲಾಗುತ್ತದೆ ವೀರಲಗಲ್ಲಿನ ಎಡಭಾಗಕ್ಕೆ ಅಂದರೆ ಶಿವಲಿಂಗದ ಮುಂದಿರುವಂತೆ ಬಸವನನ್ನು ಬಿಡಿಸಲಾಗಿರುತ್ತದೆ. ಈ ಬಸವ ಲಿಂಗದ ಕಡೆಗೆ ತನ್ನ ಮುಖ ಹಾಕಿರುತ್ತದೆ. ವೀರಗಲ್ಲಿನ ಬಲಬದಿಗೆ ವೀರನು ಪದ್ಮಾಸನದಲ್ಲಿ ಕುಳಿತು ಭಕ್ತಿಯಿಂದ ತನ್ನ ಎರಡೂ ಕೈಗಳಿಂದ ಮುಗಿಯುತ್ತಿರುತ್ತಾನೆ. ವೀರನೊಂದಿಗೆ ವೀರನ ಹೆಂಡತಿ

ಸಹಗಮನ ಮಾಡಿದ್ದ ಪಕ್ಷದಲ್ಲಿ ಆಕೆಯು ವೀರನ ಎಡಬದಿಗೆ ಕುಳಿತಿರುತ್ತಾಳೆ. ಈ ರೀತಿಯ ಚಿತ್ರಣ ಕಲ್ಯಾಣದ ಚಾಲುಕ್ಯರ, ಹೊಯ್ಸಳರ ಕಾಲದ ವೀರಗಲ್ಲುಗಳಲ್ಲಿ ವಿಶೇಷವಾಗಿಯೂ, ವಿಜಯನಗರದ ಕಾಲದ ವೀರಗಲ್ಲುಗಳಲ್ಲಿ ವಿರಳವಾಗಿಯೂ ಕಂಡು ಬರುತ್ತವೆ. ವಿಜಯನಗರಕಾಲದ ಕೆಲವು ವೀರಗಲ್ಲುಗಳಲ್ಲಿ ಮೇಲೆ ಹೇಳಿದ ಕಲ್ಪನೆಯನ್ನು ಧ್ವನಿಸುವ ಸಲುವಾಗಿ, ವೀರಗಲ್ಲಿನ ಮೇಲಿನ ಹಂತದಲ್ಲಿ, ಶಿವಲಿಂಗವನ್ನೂ ಬಸವನನ್ನೂ ಸರಳ ಶಿಲ್ಪದಲ್ಲಿ ಬಿಡಿಸಿರುವುದು ಸಾಮಾನ್ಯ ಅಂಶ.

ಮೂರನೇ ಹಂತದಲ್ಲಿ ಸಾಮಾನ್ಯವಾಗಿ ಎಲ್ಲ ವೀರಗಲ್ಲುಗಳಲ್ಲಿಯೂ ಇರುವ ಅಂಶವೆಂದರೆ ವೀರಗಲ್ಲಿನ ಮೇಲ್ಭಾಗದಲ್ಲಿ ಎರಡೂ ಕಡೆಗಳಲ್ಲಿ ಸೂರ್ಯ ಚಂದ್ರರನ್ನು ಬಿಡಿಸಿರುವುದು. ಈ ರೀತಿಯ ಶಿಲ್ಪ ವಿವರಗಳು ವೀರಗಲ್ಲುಗಳಿಗೇ ಸೀಮಿತಿವಾದುವಲ್ಲ, ದಾನಶಾಸನಗಳ ಮೇಲೆಯೂ ಇವು ಸಾಮಾನ್ಯವಾಗಿ ಕಂಡು ಬರುತ್ತವೆ.

ಈ ದಿಶೆಯಲ್ಲಿ ಪ್ರಾತಿನಿಧಿಕ ಎನ್ನಿಸುವಂತಹ ಬರ್ದವಳ್ಳಿಯ ವೀರಗಲ್ಲು ಮತ್ತು ಕೋರಮಂಗಲದ ವೀರಗಲ್ಲುಗಳ ಶಿಲ್ಪವನ್ನು ಇಲ್ಲಿ ಪರಿಚಯ ಮಾಡಿಕೊಳ್ಳುವುದು ಸೂಕ್ತವೆಂದು ತೋರುತ್ತದೆ. ಬರ್ದವಳ್ಳಿಯ ವೀರಗಲ್ಲಿನ ಈ ಭಾಗದ ಶಿಲ್ಪದ ಮಹತ್ವ ಎಂದರೆ, ಅದರಲ್ಲಿ ಮೂಡಿ ಬಂದಿರುವ ಶಿವದೇವಾಲಯದ ಚಿತ್ರಣ ಇಂದಿಗೂ ಕರ್ನಾಟಕದ ಹಲವೆಡೆಗಳಲ್ಲಿ ಕಂಡು ಬರುವ ಶಿವದೇವಲಯಗಳಂತೆಯೇ ನೈಜವಾಗಿರುವುದು. ಇಲ್ಲಿ ದೊರೆಯುವ ಎಲ್ಲಾ ವಿವರಗಳು ಕರ್ನಾಟಕದ ದೇವಾಲಯಗಳಲ್ಲಿ ದೊರೆಯುವ ವಿವರಗಳಿಗೆ ಹೊಂದುವುದಾದರೂ, ಒಂದು ಅಂಶ ಮಾತ್ರ ತನ್ನ ಪ್ರಾದೇಶಿಕ ವೈಲಕ್ಷಣ್ಯವನ್ನು ಪಡೆದಿದೆ. ವೀರಗಲ್ಲಿನ ಎಡಭಾಗಕ್ಕೆ ಅಂದರೆ ಬಸವನ ಪಕ್ಕದಲ್ಲಿ ನಿಂತ ಒಬ್ಬ ವ್ಯಕ್ತಿ, ಮೇಲೆ ನೇತು ಹಾಕಿದ ಒಂದು ದೊಡ್ಡ ಡಮರುಗವನ್ನು ಬಾರಿಸುತ್ತಿದ್ದಾನೆ. ಈ ರೀತಿ ದೊಡ್ಡ ಡಮುರುಗವನ್ನು ದೇವಾಲಯದ ನವರಂಗದಲ್ಲೋ ಪಡಸಾಲೆಯಲ್ಲೋ ನೇತು ಹಾಕಿರುವುದನ್ನು ಉತ್ತರಕರ್ನಾಟಕದ ಹಲವಾರು ದೇವಾಲಯಗಳಲ್ಲಿ ಕಾಣಬಹುದು. ದೇವಾಲಯದ ಅಧಿಕಾರಿಗಳು ಇದನ್ನು ಬಾರಿಸುವುದಕ್ಕಾಗಿಯೇ ಒಬ್ಬ ವ್ಯಕ್ತಿಯನ್ನು ನೇಮಿಸಿರುತ್ತಾರೆ. ಆತನು ಇದನ್ನು ದೇವರಿಗೆ ಮಂಗಳಾರತಿ ಮಾಡುವ ತ್ರಿಕಾಲಗಳಲ್ಲಿಯೂ ಬಾರಿಸಬೇಕು.

ಕೋರಮಂಗಲದ ವೀರಗಲ್ಲು ಇಬ್ಬರು ವೀರರ ಸ್ಮಾರಕವಾಗಿದೆ. ಈ ವೀರರಿಬ್ಬರೂ ಶಿವಲಿಂಗದ ಬಳಿ ಕುಳಿತಿರುವಂತೆ, ಜುಟ್ಟನ್ನು ಮೇಲಕ್ಕೆ ಎತ್ತಿ ಕಟ್ಟಿರುವ ಇಬ್ಬರು ಅರ್ಚಕರು ದೇವರಿಗೆ ಪೂಜೆ ಮಾಡುತ್ತಿರುವಂತೆ, ಎಡಬದಿಗೆ ಮುರುಜನವಾದ್ಯಗಾರರು ಮೃದಂಗ, ತಾಳ–ಮೇಳಗಳಿಂದ ದೇವರನ್ನು ಸೇವಿಸುತ್ತಿರುವಂತೆ ವಿವರಗಳನ್ನು ಬಿಡಿಸಲಾಗಿದೆ. ಈ ಚಿತ್ರಣ ಪ್ರಾಚೀನ

ಕರ್ನಾಟಕದ ದೇವಾಲಯಗಳಲ್ಲಿ ದೇವರಿಗೆ ನಡೆಯುತ್ತಿದ್ದ ಅಂಗಭೋಗ, ರಂಗಭೋಗದ ಆಚರಣೆಗಳನ್ನು ನೆನಪಿಗೆ ತರುತ್ತದೆ. ಮೇಲೆ ಹೇಳಿದ ವಿವರಗಳನ್ನು ಬಿಡಿಸಲಾಗಿರುವ ಹಂತದ ಮೇಲ್ಭಾಗದಲ್ಲಿ ಉಮಾಮಹೇಶ್ವರರನ್ನು ಕಂಡರಿಸಿರುವುದು ಈ ವೀರಗಲ್ಲಿನ ಮತ್ತೊಂದು ವಿಶೇಷವಾಗಿದೆ.

ಚತುರ್ಭುಜದ ಮಹೇಶ್ವರ ತನ್ನ ಬಲಗೈಯೊಂದರಲ್ಲಿ ತ್ರಿಶೂಲವನ್ನೂ ಮತ್ತೊಂದು ಕೈಯಲ್ಲಿ ಅಭಯಮುದ್ರೆಯನ್ನೂ ಹಿಡಿದಿದ್ದಾನೆ. ತನ್ನ ಎಡತೊಡೆಯ ಮೇಲೆ ಕುಳಿತಿರುವ ಉಮೆಯನ್ನು ತನ್ನ ಎಡಗೈಯಿಂದ ಅಲಂಗಿಸಿದ್ದಾನೆ. ಮತ್ತೊಂದು ಕೈಲಿ ತನ್ನ ವಾದ್ಯವಾದ ಡಮರುಗಳನ್ನು ಹಿಡಿದಿದ್ದಾನೆ. ಸುಖಾಸನದಲ್ಲಿ ಕುಳಿತಿರುವ ಮಹೇಶ್ವರನ ಬಲಗಾಲು ಕಮಲದ ಮೇಲಿದೆ. ಕೊರಳಲ್ಲಿ ಹಾರವನ್ನೂ, ಶಿರದಲ್ಲಿ ಕಿರೀಟವನ್ನೂ ಧರಿಸಿದ್ದಾನೆ ಶಿವ. ಆತನ ಎಡ ಬಲಕ್ಕೆ ಇಬ್ಬರು ಗಣಗಳಿದ್ದಾರೆ. ಎಡಬದಿಯಲ್ಲಿ ಕುಳಿತ ನಂದಿ ತನ್ನ ಮುಖವನ್ನು ಮೇಲೆ ಮಾಡಿ ಕಿವಿಗಳನ್ನು ನಿಮಿರಿಸಿಕೊಂಡಿದೆ. ಬಲಬದಿಯಲ್ಲಿ ಇಬ್ಬರು ವೀರರು ಮಂಡಿಗಾಲು ಹಾಕಿ ಕುಳಿತು ಕೈ ಜೋಡಿಸಿದ್ದಾರೆ. ತನಗಿರುವ ಅಲ್ಪ ಅವಕಾಶದಲ್ಲಿ ಶಿಲ್ಪಿ ತನ್ನ ಚಾಕಚಕ್ಯತೆಯನ್ನು ತೋರಿದ್ದಾನೆ. ವೀರಗಲ್ಲುಗಳಲ್ಲಿ ಈ ರೀತಿಯ ಶಿಲ್ಪವನ್ನು ಹೊಂದಿರುವ ವೀರಗಲ್ಲು ಅಪರೂಪವೆಂದೇ ಹೇಳಬೇಕು. (ಇದೇ ರೀತಿ ಉಮಾಮಹೇಶ್ವರ ಶಿಲ್ಪವನ್ನು ಹೊಂದಿರುವ ಶಾಸನ ಫಲಕ ಶಿವಮೊಗ್ಗಾ ಜಿಲ್ಲಾ ವಸ್ತು ಸಂಗ್ರಹಾಲದಲ್ಲಿದೆ.)

ವೀರಗಲ್ಲುಗಳಲ್ಲಿ ಶೈವಧರ್ಮ ತನ್ನ ಪ್ರಭಾವವನ್ನು ಬೀರಿ ತನ್ನ ನಂಬಿಕೆಯ ಪ್ರದರ್ಶನವನ್ನು ಪಡೆದಂತೆಯೇ, ಕರ್ನಾಟಕದಲ್ಲಿ ಪ್ರಚಲಿತವಿದ್ದ ವೈಷ್ಣವ ಮತ್ತು ಜೈನಧರ್ಮಗಳೂ ವೀರಗಲ್ಲುಗಳ ಶಿಲ್ಪದ ಮೇಲೆ ತಮ್ಮ ಪ್ರಭಾವ ಬೀರಿರುವುದನ್ನು ಗಮನಿಸಬಹುದು.

ರಾಷ್ಟ್ರಕೂಟರ ಬೆಟಗೇರಿಯ ವೀರಗಲ್ಲುಗಳಲ್ಲಿ ಉಗ್ರನರಸಿಂಹ ಮತ್ತು ವಿಷ್ಣುವನ್ನು ಕೆತ್ತಲಾಗಿರುವ ಅಂಶವನ್ನು ಈಗಾಗಲೇ ಗಮನಿಸಿದ್ದೇವೆ. ಕೇರಳದ ವೈನಾಡಿನಲ್ಲಿ ದೊರೆಯುವ ವೀರಗಲ್ಲುಗಳ ಶಿಲ್ಪ ವೈಷ್ಣವ ಲಾಂಛನಗಳನ್ನು ಹೊಂದಿರುತ್ತವೆಯಂತೆ.[೫೪] ಈ ರೀತಿಯ ವೈಷ್ಣವಲಾಂಛನಗಳ ವಿವರ ವೀರಗಲ್ಲುಗಳ ಶಿಲ್ಪದಲ್ಲಿ ಕ್ವಚಿತ್ತಾಗಿ ಕಂಡು ಬರುತ್ತದೆ. ವಿಜಯನಗರ ಕಾಲದ ವೀರಗಲ್ಲೊಂದರಲ್ಲಿ ವೈಷ್ಣವ ಲಾಂಛನಗಳಾದ ಶಂಕ, ಚಕ್ರ, ಪದ್ಮಗಳನ್ನು ಬಿಡಿಸಲಾಗಿದೆ. ಈ ವೀರಗಲ್ಲು ಹಂಪೆಯಲ್ಲಿ ತುಲಾಭಾರ ಸ್ತಂಭದ ಬಳಿ ಇದೆ. ಇದರ ಶಿಲ್ಪ ತೀರಾ ಸರಳವಾಗಿದ್ದು ಇಡೀ ವೀರಗಲ್ಲಿನ ಶಿಲ್ಪವನ್ನು ಎರಡು ಹಂತಗಳಲ್ಲಿ ಬಿಡಿಸಲಾಗಿದೆ. ಮೊದಲ ಹಂತದಲ್ಲಿ ವೀರನ

೫೪. ಈ ವಿಷಯವನ್ನು ನನಗೆ ತಿಳಿಸಿದವರು ಕಲ್ಲಿಕೋಟೆಯ ವಿಶ್ವವಿದ್ಯಾಲಯದಲ್ಲಿ ಮಲೆಯಾಳಂ ಪ್ರೊಫೆಸರ್ ಆಗಿರುವ ಶ್ರೀ ಕೆ. ಎನ್. ಕುರುಪ್ ಅವರು

ಬಲ ಬದಿಗೆ ಆನೆ ಇದೆ. ಈ ಆನೆಯ ಒಂದು ಬದಿಗೆ ಬೇರೊಬ್ಬ ವ್ಯಕ್ತಿಯು ಕೈ ಜೋಡಿಸಿ ನಿಂತಿದ್ದಾನೆ. ಆನೆಯ ಬಲಬದಿಗೆ ವೀರನು ಕೈ ಜೋಡಿಸಿ ನಿಂತಿದ್ದಾನೆ. ಇವನ ಪಕ್ಕದಲ್ಲಿ ಸಹಗಮನ ಮಾಡಿದ ಆತನ ಇಬ್ಬರು ಹೆಂಡತಿಯರು ತಮ್ಮ ಬಲ ಕೈಗಳನ್ನು ಮೇಲೆತ್ತಿದ್ದಾರೆ. ಎರಡನೆಯ ಹಂತದಲ್ಲಿ ವೀರ ಮತ್ತು ಆತನ ಇಬ್ಬರು ಹೆಂಡತಿಯರು ಕೈ ಜೋಡಿಸಿ ವೈಷ್ಣವ ಲಾಂಛನಗಳಾದ ಶಂಕ, ಚಕ್ರ, ಪದ್ಮ ಮತ್ತು ತ್ರಿನಾಮಗಳಿಗೆ ನಮಸ್ಕರಿಸುತ್ತಿದ್ದಾರೆ.

ಜೈನಧರ್ಮದ ವೀರರ ಸ್ಮಾರಕಗಳಾದ ವೀರಗಲ್ಲುಗಳಲ್ಲಿ ಮೇಲಿನ ಹಂತದಲ್ಲಿ, ಬಲಗಡೆಯಲ್ಲಿ ಅಧ್ಯಯನ ಶೀಲನಾದ ಸವಣನನ್ನು ನಡುವೆ ತೀರ್ಥಂಕರನನ್ನು, ಎಡಬದಿಗೆ ವೀರನು ಪದ್ಮಾಸನದಲ್ಲಿ ಕುಳಿತು ಕೈ ಜೋಡಿಸಿರುವುದನ್ನೂ ಬಿಡಿಸಲಾಗಿರುತ್ತದೆ. ಈ ರೀತಿಯ ಶಿಲ್ಪದ ವಿವರಗಳು ಇರುವ ವೀರಗಲ್ಲುಗಳ ಸಂಖ್ಯೆ ಅಪರೂಪವದರೂ ಅಲ್ಲಲ್ಲಿ ದೊರೆಯುತ್ತವೆ. ಜೈನ ಧರ್ಮದ ಪ್ರಭಾವವನ್ನು ಹೊಂದಿರುವ ಮೊದಲ ವೀರಗಲ್ಲಿನ ಶಿಲ್ಪ ಶ್ರವಣ ಬೆಳಗೊಳದ ಚಿಕ್ಕಬೆಟ್ಟದ ಮೇಲಿರುವ ಸುಮಾರು ಒಂಭತ್ತನೆಯ ಶತಮಾನದ ವೀರಗಲ್ಲುಗಳಲ್ಲಿ ದೊರೆಯುತ್ತೆ (ಚಿತ್ರ ೨೫೩, ೨೫೫) ಮತ್ತೆ ವಿಜಯನಗರದ ಕಾಲದ ವೀರಗಲ್ಲುಗಳಲ್ಲಿಯೂ ದೊರೆಯುತ್ತವೆ. ಈ ವೀರಗಲ್ಲುಗಳು ಉತ್ತರ ಕನ್ನಡದ ಕಾಯ್ಕಿಣಿಯಲ್ಲಿವೆ. (ಚಿತ್ರ ೨೩೨, ೨೩೩)

ದೇವತಾ ವಿಗ್ರಹಗಳನ್ನು ಕೆಲವರು ಶಿಲ್ಪಿಗಳು ಆ ದೇವತಾಮೂರ್ತಿಗಳು ದೇವಾಲಯ ಗಳಲ್ಲಿರುವಂತೆಯೇ ಬಿಡಿಸಿದ್ದಾರೆ. ಹೀಗೆ ಅವರು ಕಂಡರಿಸಿರುವ ದೇವಾಲಯಗಳು ತಮ್ಮ ಕಾಲದ ದೇವಾಲಯಗಳ ಪ್ರತಿಕೃತಿಗಳಾಗಿವೆ. ಗರ್ಭಗೃಹ, ಅದರೊಳಗಿನ ಕಂಭಗಳು, ಅದರ ಮೇಲಿನ ವಿಮಾನಗಳ ಪಾರ್ಶ್ವನೋಟವನ್ನು ಶಿಲ್ಪಿಗಳು ಕಂಡರಿಸಿದ್ದಾರೆ. ಈ ರೀತಿ ದೇವಾಲಯಗಳ ಪಾರ್ಶ್ವನೋಟವನ್ನು ಕಂಡರಿಸುವ ಒಂದು ಪದ್ಧತಿಯನ್ನು ರಾಷ್ಟ್ರಕೂಟರಕಾಲದ ಶಿಲ್ಪಿಗಳು ಆರಂಭಿಸಿದಂತೆ ತೋರುತ್ತದೆ. ಇದನ್ನು ರೋಣ, ಬಳ್ಳಿಗಾವೆ, ಬಂದಳಿಕೆಗಳಲ್ಲಿರುವ ವೀರಗಲ್ಲುಗಳಲ್ಲಿ ಗಮನಿಸಬಹುದು. ಆ ನಂತರ ಹಾನುಗಲ್ಲು ಕದಂಬರ ಅವಧಿಯ ಎರಡು ವೀರಗಲ್ಲುಗಳಲ್ಲಿ ಗಮನಿಸಬಹುದು. ಹಾನುಗಲ್ಲಿನ ತಾರಕೇಶ್ವರ ದೇವಾಲಯದ ಆವರಣದೊಳಗೆ ಇರುವ ವೀರಗಲ್ಲಿನ ಶಿಲ್ಪದಲ್ಲಿ ಮೂಡಿ ಬಂದಿರುವ ದೇವಾಲಯದ ಶಿಲ್ಪ, ತಾರಕೇಶ್ವರ ದೇವಾಲಯದ ಪ್ರತಿಕೃತಿಯಂತಿದೆ. ಕಾಯ್ಕಿಣಿಯ ವೀರಗಲ್ಲೊಂದರಲ್ಲಿ ಹೊಯ್ಸಳಶೈಲಿಯ ತ್ರಿಕೂಟಾಚಲವನ್ನು ಗುರುತಿಸಬಹುದು. ವಿಜಯನಗರಕಾಲಕ್ಕೆ ಸೇರಿದ ಕಾಯ್ಕಿಣಿಯಲ್ಲಿರುವ ವೀರಗಲ್ಲುಗಳ ಶಿಲ್ಪದಲ್ಲಿ, ದಕ್ಷಿಣ ಕರಾವಳಿಯಲ್ಲಿ ಇಂದಿಗೂ ಕಾಣಬಹುದಾದ ಹೆಂಚಿನ ಮಾಡು ಇರುವ ದೇವಾಲಯಗಳನ್ನು ಗಮನಿಸಬಹುದು. ಈ ಬೆಳಕಿನಲ್ಲಿ ಕರ್ನಾಟಕದ ದೇವಾಲಯಗಳ ವಾಸ್ತುಶಿಲ್ಪವನ್ನು ಅಧ್ಯಯನ ಮಾಡಿದರೆ ವಿಶೇಷವಾದ ಹೊಸ ಸಂಗತಿಗಳು ಹೊರಬಹುದೆಂದು ತೋರುತ್ತದೆ. ಈ ಬಗ್ಗೆ ಸ್ಥೂಲವಾಗಿ ವಿವರಸುವುದಷ್ಟೇ ನಮ್ಮ ಪರಿಮಿತಿಯೆಂದು ಭಾವಿಸಿ ಆ ಬಗ್ಗೆ ಕೈಬಿಟ್ಟಿದ್ದೇವೆ.

ಆರಂಭಕಾಲದ ಯಾವುದೇ ವೀರಗಲ್ಲಿನ ಶಿಲ್ಪದಲ್ಲಿಯೂ ಮತ-ಧರ್ಮಗಳ ಪ್ರಭಾವವನ್ನು ಕಾಣಲಾಗುವುದಿಲ್ಲ. ಆದರೆ ಕರ್ನಾಟಕದಲ್ಲಿ ಶೈವ, ಜೈನ ಮತ್ತು ವೈಷ್ಣವ ಧರ್ಮಗಳು ಪ್ರಬಲವಾಗಿ ಜನ ಸಾಮಾನ್ಯರ ಪ್ರೀತ್ಯಾದರಗಳಿಗೆ ಪಾತ್ರವಾದ ಹಾಗೆ, ಆಯಾ ಧರ್ಮದ ಪ್ರಭಾವ ಆಯಾ ಧರ್ಮದ ವೀರರ ವೀರಗಲ್ಲುಗಳ ಶಿಲ್ಪದ ಮೇಲೆ ಆಯಿತೆಂದು ತೋರುತ್ತದೆ. ಸ್ವರ್ಗಪ್ರಾಪ್ತಿಯ ಆಮಿಷದ ಜೊತೆಗೆ ಶಾಶ್ವತವಾದ ಮುಕ್ತಿಯೂ, ತಮ್ಮ ಇಷ್ಟ ದೈವದ ಸಾನ್ನಿಧ್ಯವೂ ಲಭ್ಯವಾಗುವುದೆಂದು ಪ್ರಚೋದಿಸಿ, ಸಾಕಷ್ಟು ಮಂದಿಯನ್ನು ಯುದ್ಧ ಪ್ರವೃತ್ತರನ್ನಾಗಿ ಮಾಡುವ ಆಳುವವರ ಪ್ರಯತ್ನವೇನೋ ಇದು ಎಂಬ ಸಂಶಯ ಬರುತ್ತದೆ. ಉಳಿದ ಧರ್ಮಗಳೊಡನೆ ಹೋಲಿಸಿ ನೋಡಿದಾಗ ವೀರಗಲ್ಲುಗಳಲ್ಲಿ ಬಹುಪಾಲು ಶೈವಧರ್ಮದ ಶಿಲ್ಪದ ವಿವರಗಳೇ ಹೆಚ್ಚಾಗಿ ದೊರೆಯುವುದರಿಂದ ಶೈವಧರ್ಮ ಮಧ್ಯಯುಗದಲ್ಲಿ ಪ್ರಬಲವಾಗಿತ್ತೆಂದು ತೋರುತ್ತದೆ ಅಥವಾ ಮೂಲಭೂತವಾಗಿ ಶೈವಧರ್ಮವು ವೀರಧರ್ಮ (Martial religion) ಎಂದು ಹೇಳಿದರೆ ತಪ್ಪಾಗಲಾರದು.

ಆರಂಭದ ವೀರಗಲ್ಲುಗಳ ಶಿಲ್ಪಿಗಳು ವೀರಗಲ್ಲನ್ನು ಒಂದು ರೂಪಕ್ಕೆ ತಿದ್ದುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ವೀರಗಲ್ಲುಗಳ ಸಂಪ್ರದಾಯ ಬೆಳೆದಂತೆ ಮತ್ತು ನುರಿತ ಶಿಲ್ಪಿಗಳು ಈ ಕ್ಷೇತ್ರವನ್ನು ಪ್ರವೇಶಿಸಿದಂತೆ ಈ ಬಗ್ಗೆ ಹೆಚ್ಚು ಗಮನಹರಿಯಿತು. ಇಡೀ ವೀರಗಲ್ಲನ್ನು ಒಂದು ಆಕಾರಕ್ಕೆ ತಂದು ಸುಂದರವಾಗಿ ಕಾಣುವ ಹಾಗೆ ಮಾಡುವ ಪ್ರಯತ್ನ ನಡೆಯಿತು. ಹೀಗೆ ಪೂರ್ಣತೆಯ್ನನು ತುರವ ಪ್ರಯತ್ನವನ್ನು ರಾಷ್ಟ್ರಕೂಟರ ಕಾಲದ ಶಿಲ್ಪಿಗಳು ಆರಂಭ ಮಾಡಿದಂತೆ ತೋರುತ್ತದೆ. ಅವರ ಈ ಪ್ರಯತ್ನವನ್ನು ಬೆಟಗೇರಿಯ ಕೆಲವು ವೀರಗಲ್ಲುಗಳಲ್ಲಿಯೂ ಮಾವಳಿಯ ವೀರಗಲ್ಲುಗಳಲ್ಲಿಯೂ ಗಮನಿಸಬಹುದು.

ಬೆಟಗೇರಿ ಮತ್ತು ಮಾವಳಿಯ ವೀರಗಲ್ಲುಗಳ ಮೇಲ್ಭಾಗದಲ್ಲಿ ಶಿಲ್ಪಿಗಳು ಗೋಪುರಗಳಾಕೃತಿಯಲ್ಲಿ ಬಿಡಿಸಿದ್ದಾರೆ. ಇಡೀ ವೀರಗಲ್ಲನ್ನು ಗಮನಿಸಿದಾಗ, ದೇವಾಲಯದ ಮುಂಭಾಗದ ಗೋಪುರದ ದೃಶ್ಯ ಕಾಣುವಂತೆ ಬಿಡಿಸಿರುವುದು ಗೊತ್ತಾಗುತ್ತದೆ. ಮೇಲ್ಭಾಗದ ನಡುಮಧ್ಯೆ ಕುಂಭ ಅಥವಾ ಕಲಶವನ್ನು ಮತ್ತು ಅದರ ಎರಡೂ ಬದಿಗೆ ಕೆಲವೊಮ್ಮೆ ಎರಡು ಸುಂದರವಾದ ಕೋಡುಗಳನ್ನೋ ಅಥವಾ ಮತ್ತಿತರ ಅಲಂಕರಣ ವಿನ್ಯಾಸವನ್ನೋ ಬಿಡಿಸಿರುತ್ತಾರೆ. ವೀರಗಲ್ಲುಗಳನ್ನು ಕಲಾಕೃತಿಗಳನ್ನಾಗಿ ಮಾಡುವಲ್ಲಿ, ಬೇರೆಯ ಕಡೆಯಿಂದ ಅಲಂಕರಣ ವಿನ್ಯಾಸವನ್ನು ಎರವಲು ಪಡೆದಿದ್ದಾರೆ. ಈ ಮಾತಿಗೆ ಪೂರಕವಾಗಿ ಯಾಳಿಗಳನ್ನೂ, ಸಿಂಹಲಲಾಟ, ಕೀರ್ತಿ ಮುಖಗಳನ್ನು ವೀರಗಲ್ಲಿನ ಶಿಲ್ಪದಲ್ಲಿ ಅಳವಡಿಸಿರುವುದನ್ನು ಗಮನಿಸಬಹುದು. ಇವು ರಾಷ್ಟ್ರಕೂಟರ ಕಾಲದ ವೀರಗಲ್ಲುಗಳ ಶಿಲ್ಪದಲ್ಲಿ ಅಳವಡಿಸಿರುವುದನ್ನು ಗಮನಿಸಬಹುದು. ಇವು ರಾಷ್ಟ್ರಕೂಟರ

ಕಾಲದ ವೀರಗಲ್ಲುಗಳ ಒಂದು ವೈಶಿಷ್ಟ್ಯ. ವಿಷ್ಣುವನ್ನು ಬಿಡಿಸಲಾಗಿರುವ ಬೆಟಗೇರಿಯ ವೀರಗಲ್ಲಿನ ಮೇಲ್ಭಾಗದಲ್ಲಿ ವಿಷ್ಣುವಿನ ವಾಹನವಾದ ಗರುಡನನ್ನು ಕಂಡರಿಸಲಾಗಿದೆ. ಇದಕ್ಕಿಂತಲೂ ಧ್ವನಿ ಪೂರ್ಣವಾದ ಚಿತ್ರಣವೆಂದರೆ ಮಾವಳಿಯ ವೀರಗಲ್ಲಿನದು. ಮೇಲೆ ಹೇಳಿದ ಎಲ್ಲಾ ವಿವರಗಳನ್ನೂ ಈ ವೀರಗಲ್ಲಿನಲ್ಲಿ ಬಿಡಿಸಲಾಗಿದೆ. ಈ ವಿವರಗಳ ಮೇಲೆ ವೀರಗಲ್ಲಿನ ಶಿರೋಭಾಗದಲ್ಲಿ ಆನೆಯೊಂದನ್ನು ಬಿಡಿಸಲಾಗಿದೆ. (ಚಿತ್ರ. ೨೩೮, ೨೩೯) ಹಿರಿಯ ವಿದ್ವಾಂಸರ ಪ್ರಕಾರ ಇದು ಇಂದ್ರನ ಐರಾವತ. ಇದು ಸ್ವರ್ಗದ ಬಾಗಿಲಿನಲ್ಲಿ ನಿಂತು "ಇದು ಸುರಲೋಕ ಅಮರತ್ವ ಇಲ್ಲಿ ಪ್ರಾಪ್ತಿಯಾಗುತ್ತದೆ. ಇದು ಸಾಮಾನ್ಯ ಮಾನವನಿಗೆ ಎಟುಕದ್ದು", ಎಂಬುದಾಗಿ ಲೋಕಕ್ಕೆ ಸಾರುತ್ತದೆ.[೫೫] ಈ ಸಣ್ಣದ ವಿವರ ವೀರತನದ ಮಹತ್ವವನ್ನು ಎಷ್ಟು ಧ್ವನಿಪೂರ್ಣವಾಗಿ ಸಾರುತ್ತದೆ ಎಂಬುದನ್ನು ನೆನೆದಾಗ ಶಿಲ್ಪಿಯ ಪ್ರತಿಭೆಯ ಬಗ್ಗೆ ಮೆಚ್ಚುಗೆಯುಂಟಾಗುತ್ತದೆ.

ರಾಷ್ಟ್ರಕೂಟರ ಕಾಲದನಂತರ ಬಂದ ವೀರಗಲ್ಲುಗಳ ಶಿಲ್ಪಿಗಳು ಇಂಥ ಪ್ರಯತ್ನಗಳನ್ನು ಮಾಡಿರುವುದು ಅಪರೂಪ. ಈ ವೇಳೆಗಾಗಲೇ ವೀರಗಲ್ಲಿಗೆ ಒಂದು ನಿರ್ದಿಷ್ಟವಾದ ರೂಪ ದೊರೆತಿದ್ದುದರಿಂದ ವೀರಗಲ್ಲುಗಳ ಶಿಲ್ಪಿಗಳು, ಸೂಕ್ಷ್ಮ ಕುಸುರಿಗೆಲಸವನ್ನೂ, ಅಲಂಕರಿಸುವ ಅಲಂಕಾರ ವಿನ್ಯಾಸಗಳನ್ನೂ ಬಳಕೆಗೆ ತಂದರು. ವೀರಗಲ್ಲಿಗೆ ಒಂದು ಗಂಭೀರತೆ ಬರುತ್ತದೆ ಎಂಬ ಕಾರಣದಿಂದ ಕೀರ್ತಿ ಮುಖವಾದ ಸಿಂಹಲಲಾಟ ಬಿಡಿಸುವುದು ಒಂದು ಸೂತ್ರವಾಗಿ ಬಿಟ್ಟಂತೆ ತೋರುತ್ತದೆ. ಈ ಪ್ರಯತ್ನವನ್ನು ವಿಜಯನಗರ ಕಾಲದವರೆಗಿನ ವೀರಗಲ್ಲುಗಳ ಶಿಲ್ಪದಲ್ಲಿ ಗಮನಿಸಬಹುದು.

ಘಟನೆಯನ್ನು ಸುಸಂಗತವಾಗಿ ನಿರೂಪಿಸುವ ಸಲುವಾಗಿ ಶಿಲ್ಪಿಗಳು ಮಾಡಿಕೊಂಡ ಒಂದು ತಂತ್ರವೇ ಈ ಹಂತಗಳಿಗೆ ಕಾರಣವಾಯಿತು. ಈ ಒಂದು ಸೂತ್ರವನ್ನು ಬಾಣರ, ಗಂಗರ, ನೊಳಂಬರ ಕಾಲದ ಶಿಲ್ಪಿಗಳು ಅನುಸರಿಸಿಲ್ಲ. (ಚಿತ್ರ ೨೪೫ ರಿಂದ ೨೫೭) ಇಡೀ ವೀರಗಲ್ಲನ್ನು ಚಿತ್ರವೇ ಆಕ್ರಮಿಸಿರುವುದೇ ಇದಕ್ಕೆ ಕಾರಣವಿರಬಹುದು. ಜೊತೆಗೆ, ಎಲ್ಲ ವಿವರಗಳನ್ನೂ ಅಸ್ತವ್ಯಸ್ತವಾಗಿ ಬಿಡಿಸಿರುತ್ತಾರೆ. ಈ ಕಾಲದ ವೀರಗಲ್ಲುಗಳನ್ನುಳಿದಂತೆ, ಕರ್ನಾಟಕದಲ್ಲಿ ದೊರೆಯುವ ಎಲ್ಲಾ ವೀರಗಲ್ಲುಗಳಲ್ಲಿಯೂ ಈ ಒಂದು ಸೂತ್ರವನ್ನು ಗಮನಿಸಬಹುದು. ವೀರಗಲ್ಲಿನ ಶಿಲ್ಪವನ್ನು ಬಿಡಿಸಲು ವಿಷಯವನ್ನು ಮೂರು ಹಂತಗಳಾಗಿ ತನ್ನ ಅನುಕೂಲತೆಗೆ ತಕ್ಕಂತೆ ಶಿಲ್ಪಿ ಬಿಡಿಸಿಕೊಂಡು ; ಮುಖ್ಯವಾಗಿ ವೀರನ ಹೋರಾಟ, ವೀರನ ಸ್ವರ್ಗಯಾನ ಮತ್ತು ವೀರನು ಸ್ವರ್ಗದಲ್ಲಿರುವುದು. ಈ ಅಂಶ ಸುವ್ಯಕ್ತವಾಗುವಂತೆ ಅವನು ಶಿಲ್ಪದ ವಿವರಗಳನ್ನು ಬಿಡಿಸತೊಡಗಿದ. ಮೇಲೆ ಹೇಳಿದ ಮೂರು ಅಂಶಗಳನ್ನು ಮೂರು ಹಂತಗಳಲ್ಲಿ ಶಿಲ್ಪಿ ಬಿಡಿಸಿದ.

---

೫೫. ಈ ಬಗ್ಗೆ ವಿವರಣಾತ್ಮಕ ವ್ಯಾಖ್ಯಾನಕ್ಕೆ ನೋಡಿ : Mysore Gazetteer. Vol. II. Pt. 1. ಪು. ೧೫೫

ಕರ್ನಾಟಕದ ವೀರಗಲ್ಲುಗಳ ಶಿಲ್ಪಿಗಳು ತಮ್ಮ ಶಿಲ್ಪವನ್ನು ಮೂರುಹಂತಗಳಲ್ಲಿ ಬಿಡಿಸಿರುವುದು ಸರ್ವ ಸಾಮಾನ್ಯ. ಮುಂದಿನವರು ಈ ಸೂತ್ರವನ್ನು ಮೂಲಭೂತವಾಗಿ ಗ್ರಹಿಸಿ ಈ ಹಂತಗಳನ್ನೇ ಇನ್ನೂ ಅನೇಕ ವಿಭಾಗಗಳನ್ನು ಮಾಡಿಕೊಂಡು ವಿಸ್ತೃತಗೊಳಿಸಿದರು. ವಿಸ್ತೃತರೀತಿಯಲ್ಲೂ ಒಂದು ರೀತಿಯ ಕ್ರಮವನ್ನು ಗಮನಿಸಬಹುದು. ಈ ಬಗ್ಗೆ ಸ್ವಲ್ಪಮಟ್ಟಿಗೆ ವಿವರಣೆ ನೀಡುವುದು ಸೂಕ್ತ ಎಂದು ತೋರುತ್ತದೆ.

ಕೆಲವು ವೀರಗಲ್ಲುಗಳಲ್ಲಿ ಶಿಲ್ಪದ ವಿವರಗಳನ್ನು ಎರಡೇ ಹಂತಗಳಿಗೆ ಮೊಟಕು ಮಾಡಿರುವುದುಂಟು. ಇಲ್ಲಿ ವೀರನ ಹೋರಾಟದ ದೃಶ್ಯ ಮತ್ತು ವೀರನು ಸ್ವರ್ಗದಲ್ಲಿಯೋ ಅಥವಾ ದೇವರ ಸಾನ್ನಿಧ್ಯದಲ್ಲಿಯೋ ಇರುವಂತೆ ಬಿಡಿಸಲಾಗಿರುತ್ತದೆ. ನಡುವಿನ ಹಂತವಾದ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ದೃಶ್ಯದ ಚಿತ್ರಣವನ್ನು ಕೈಬಿಡಲಾಗಿರುತ್ತದೆ. (ಚಿತ್ರ ೨೬೮, ೨೬೯, ೨೮೨, ೨೮೫)

ಮತ್ತೆ ಕೆಲವು ವೀರಗಲ್ಲುಗಳಲ್ಲಿ ಶಿಲ್ಪವನ್ನು ನಾಲ್ಕರಿಂದ ಹಿಡಿದು ಏಳು, ಎಂಟು ವಿಭಾಗಗಳಲ್ಲಿ ಬಿಡಿಸಿರುವುದನ್ನು ಗಮನಿಸಬಹುದು. ಇಲ್ಲಿ ಮೂಲಭೂತ ಬದಲಾವಣೆ ಏನೂ ಆಗಿರುವುದಿಲ್ಲ. ಹೊಸದಾದ ಯಾವ ಅಂಶವನ್ನೂ ಸೇರಿಸಿರುವುದಿಲ್ಲ. ಬದಲಾಗಿ ಮೂರು ಹಂತಗಳನ್ನು ಒಂದು ಕ್ರಮದಲ್ಲಿ ವಿಭಾಗಿಸಿ ವಿವರ ವಿವರವಾಗಿ ಚಿತ್ರಿಸಲಾಗಿರುತ್ತದೆ. ಅಂದರೆ ಕೆಲವು ವೀರಗಲ್ಲುಗಳಲ್ಲಿ ಯುದ್ಧದ ದೃಶ್ಯವನ್ನು ಎರಡು ಭಾಗಗಳಲ್ಲಿ ಬಿಡಿಸಲಾಗಿರುತ್ತದೆ. ಮತ್ತೆ ಕೆಲವು ವೀರಗಲ್ಲುಗಳಲ್ಲಿ ಮೂರು ಹಂತಗಳಲ್ಲಿ ಬಿಡಿಸಲಾಗಿರುತ್ತದೆ. ಈ ವಿಭಾಗಗಳಿಗೆ ಸರಿಹೊಂದುವಂತೆ ಮುಂದಿನ ಹಂತಗಳನ್ನು ವಿಸ್ತರಿಸಿರುತ್ತಾರೆ. (ಚಿತ್ರ ೨೫೮, ೨೭೨, ೨೧೭)

ವೀರಗಲ್ಲುಗಳ ಮೇಲೆ ಶಾಸನದ ಉತ್ಕೀರ್ಣತೆ

ಶಾಸನವಿಲ್ಲದಿರುವ ವೀರಗಲ್ಲುಗಳು ಕರ್ನಾಟಕದಲ್ಲಿ ಅಸಂಖ್ಯಾತವಾಗಿ ದೊರೆಯುತ್ತವೆ ಎಂಬ ಅಂಶವನ್ನು ಈಗಾಗಲೇ ಗಮನಿಸಿದ್ದೇವೆ. ಶಾಸನವಿರುವ ವೀರಗಲ್ಲುಗಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಸಾಮಾನ್ಯವಾಗಿ ವೀರಗಲ್ಲುಗಳ ಪಾಠವನ್ನು ವೀರಗಲ್ಲಿನ ಯಾವ ಭಾಗದಲ್ಲಿ ಬರೆಯುತ್ತಿದ್ದರು ಎಂಬುದನ್ನು ಇನ್ನು ಮುಂದೆ ಗಮನಿಸಬಹುದು.

ಗಂಗರ, ನೊಳಂಬರ ವೀರಗಲ್ಲುಗಳ ಶಿಲ್ಪಿಗಳು ವೀರಗಲ್ಲಿನ ಪಾಠವನ್ನು ಇಂಥಲ್ಲಿಯೇ ಬರೆಯಬೇಕೆಂಬ ನಿಯಮವನ್ನು ಅನುಸರಿಸಿಲ್ಲ. ಸ್ಥಳವಿದ್ದ ಕಡೆಯಲ್ಲೆಲ್ಲಾ, ಕೆಲವೊಮ್ಮೆ ಶಿಲ್ಪದ ಭಾಗದಲ್ಲಿಯೂ ಬರೆದಿರುವ ನಿದರ್ಶನವಿದೆ. (ಚಿತ್ರ ೪೭, ೨೫೧,) ಇದಕ್ಕೆ ಕಾರಣ, ವೀರಗಲ್ಲಿನ ಒಂದು ಸ್ಪಷ್ಟ ಕಲ್ಪನೆ, ರೂಪ ಅವರಿಗಿಲ್ಲದ್ದು ಎಂದು ಹೇಳಬೇಕಾಗುತ್ತದೆ. ರಾಷ್ಟ್ರಕೂಟರ ಮತ್ತು

(ಕೆಲವು) ನೊಳಂಬರ ಕಾಲದ ವೀರಗಲ್ಲುಗಳಲ್ಲಿ ಹಂತ ಹಂತಗಳಿಗೂ ನಡುವೆ ಇರುವ ಸ್ಥಳದಲ್ಲಿ (ಪಟ್ಟಿಕೆಗಳು) ಶಾಸನವನ್ನು ಉತ್ಕೀರ್ಣಿಸುವ ಪದ್ಧತಿಯನ್ನು ಅನುಸರಿಸಿದಂತೆ ಕಂಡುಬರುತ್ತದೆ. ಮೇಲಿನ ಪಟ್ಟಿಕೆಯಿಂದ ಶಾಸನ ಆರಂಭವಾಗಿ, ದೀರ್ಘವಾಗಿದ್ದರೆ ಕೆಳಗಿನ ಪಟ್ಟಿಕೆಗಳಲ್ಲಿ ಮುಂದುವರಿಯುತ್ತದೆ. ಈ ರೀತಿ ಪಟ್ಟಿಕೆಗಳಲ್ಲಿ ಬರೆಯುವುದರಿಂದ ವೀರಗಲ್ಲಿಗೆ ಒಂದು ರೀತಿಯ ಸೌಂದರ್ಯ ದೊರೆಯುತ್ತಿತ್ತು. ಇದಕ್ಕಿಂತಲೂ ಹೆಚ್ಚಾಗಿ ಶಾಸನದ ಪಾಠ ತುಸು ದೀರ್ಘವಿದ್ದರೂ ಅದನ್ನು ಉತ್ಕೀರ್ಣಿಸುವುದಕ್ಕೆ ಶಿಲ್ಪಿಗೆ ಅವಕಾಶ ದೊರೆಯಿತು. ಈ ಅವಕಾಶವಿದೆಯೆಂದು ಭಾವಿಸಿದ ಮುಂದಿನ ವೀರಗಲ್ಲುಗಳ ಶಾಸನಕಾರರು ಪಾಠವನ್ನು ತುಸು ದೀರ್ಘ ಮಾಡಿಕೊಂಡರೆಂದು ಹೇಳಬಹುದು.

ಶೈಲಿಯ ದೃಷ್ಟಿಯಿಂದ ವೀರಗಲ್ಲುಗಳ ವಿಂಗಡಣೆ

ಇದುವರೆಗೆ ಕಾಲಾನುಕ್ರಮದಲ್ಲಿ ರೂಪುಗೊಂಡ ವೀರಗಲ್ಲುಗಳ ಶಿಲ್ಪದ ಸಾಮಾನ್ಯ ಅಂಶಗಳನ್ನು ಪರಿಚಯ ಮಾಡಿಕೊಂಡೆವು. ವೀರಗಲ್ಲುಗಳ ಶಿಲ್ಪ ಕೆಲವು ಮನೆತನಗಳ ಕಾಲದಲ್ಲಿ ಹಲವಾರು ಪ್ರಭಾವಗಳನ್ನೊಳಗೊಂಡು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳು ಬೆಳೆದಂತೆ, ಬದಲಾವಣೆ ಹೊಂದಿದಂತೆ, ಅವನತಿ ಹೊಂದಿದಂತೆ, ಪ್ರತಿ ಘಟ್ಟದಲ್ಲಿ ತನ್ನ ವೈಶಿಷ್ಟ್ಯವನ್ನು ತೋರಿದೆ. ಹಾಗೆಯೇ ವೀರಗಲ್ಲುಗಳ ಶಿಲ್ಪವೂ ಬೆಳೆದಿದೆ. ಮಾರ್ಪಾಡು ಹೊಂದಿದೆ, ಅವನತಿಯನ್ನೂ ಹೊಂದಿದೆ ಮತ್ತು ತನ್ನ ವೈಶಿಷ್ಟ್ಯವನ್ನೂ ಮೆರೆದಿದೆ. ಇದಕ್ಕೆ ಕಾರಣ ವೀರಗಲ್ಲುಗಳನ್ನು ಮಾಡುತ್ತಿದ್ದ ಶಿಲ್ಪಿಗಳು ತಮ್ಮ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪದ ರಚನೆಯಲ್ಲಿಯೂ ಕಾರ್ಯನಿರತರಾಗಿದ್ದುದು. ಆದ್ದರಿಂದ ವಾಸ್ತು ಮತ್ತು ಮೂರ್ತಿ ಶಿಲ್ಪದ ಜೊತೆ ಜೊತೆಯಲ್ಲಿಯೇ ಅಥವಾ ಶಿಲ್ಪ ಕಲೆಯ ಒಂದು ಅಂಗವಾಗಿಯೇ ಈ ವೀರಗಲ್ಲುಗಳ ಶಿಲ್ಪ ಬೆಳೆಯಿತೆಂದು ಹೇಳಬಹುದು. ಈ ದೃಷ್ಟಿಯಿಂದ ಕರ್ನಾಟಕದ ವೀರಗಲ್ಲುಗಳನ್ನು ವಿಶ್ಲೇಷಿಸಿದಾಗ ಅವುಗಳ ವೈಶಿಷ್ಟ್ಯವನ್ನು ಗುರುತಿಸಿ ಅವುಗಳನ್ನು ಈ ರೀತಿ ವಿಂಗಡಿಸಬಹುದೆಂದು ತೋರುತ್ತದೆ.

೧. ಆರಂಭ ಕಾಲದ ವೀರಗಲ್ಲುಗಳು.

(ಅ) ಬಾದಾಮಿ ಚಾಲುಕ್ಯರ ಕಾಲದ ವೀರಗಲ್ಲುಗಳು.

(ಆ) ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು.

(ಇ) ಗಂಗರ ಮತ್ತು ನೊಳಂಬರ ವೀರಗಲ್ಲುಗಳು.

೨. ಮಧ್ಯಯುಗದ ವೀರಗಲ್ಲುಗಳು :

(ಅ) ಕಲ್ಯಾಣಿ ಚಾಲುಕ್ಯರ ಕಾಲದ ವೀರಗಲ್ಲುಗಳು ಮತ್ತು
ಹೊಯ್ಸಳರ ಕಾಲದ ವೀರಗಲ್ಲುಗಳು,

೩. ಅನಂತರದ ವೀರಗಲ್ಲುಗಳು :

(ಅ) ವಿಜಯನಗರ ಕಾಲದ ವೀರಗಲ್ಲುಗಳು.

ಆರಂಭಕಾಲದ ವೀರಗಲ್ಲುಗಳು

ಬಾದಾಮಿ ಚಾಲುಕ್ಯರ ಕಾಲದ ವೀರಗಲ್ಲುಗಳು (ಚಿತ್ರ ೨೩೪, ೨೩೫, ೨೩೬)

ಇವರ ಕಾಲದ ವೀರಗಲ್ಲುಗಳು ದೊರೆತಿರುವುದು ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಾದ್ದರಿಂದ ಈ ಬಗ್ಗೆ ಏನನ್ನೂ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಆದರೂ ದೊರೆತಿರುವ ಕೆಲವಾರು ವೀರಗಲ್ಲುಗಳ ಸ್ವರೂಪವನ್ನು ತಿಳಿಯುವುದು ಸಾಧ್ಯವಾಗುತ್ತದೆ. ಇವರ ವೀರಗಲ್ಲುಗಳು ಐಹೊಳೆ, ಪಟ್ಟದಕಲ್ಲುಗಳಲ್ಲಿ ದೊರೆಯುತ್ತವೆ. ಇವರು ಸಾಮಾನ್ಯವಾಗಿ ವೀರಗಲ್ಲನ್ನು ಮಾಡಲು ಬಿಳಿಯ ಕಲ್ಲನ್ನು ಆಯ್ಕೆಮಾಡಿದ್ದಾರೆ. ಎರಡು ಅಥವಾ ಮೂರು ಹಂತಗಳಲ್ಲಿ ವೀರಗಲ್ಲಿನ ಶಿಲ್ಪವನ್ನು ಬಿಡಿಸಿದ್ದಾರೆ. ವೀರನು ಅಪ್ಸರೆಯರ ಭುಜದ ಮೇಲೆ ತನ್ನ ಕೈಯನ್ನು ಹಾಕಿ ಹಾರುತ್ತಿರುವ ದೃಶ್ಯವನ್ನು ಬಿಡಿಸುವ ಬಿಡಿಸುವ ಸಂಪ್ರದಾಯ ಇವರ ಕಾಲದಲ್ಲಿ ಆರಂಭವಾದಂತೆ ತೋರುತ್ತದೆ. ಕೆಲವೊಮ್ಮೆ ವೀರಗಲ್ಲಿಗೆ ಪೂರ್ಣರೂಪವನ್ನು ಕೊಟ್ಟು ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಬಾದಾಮಿಯ ಮ್ಯೂಸಿಯಂನಲ್ಲಿರುವ ವೀರಗಲ್ಲಿನ ಮೇಲ್ಭಾಗದಲ್ಲಿ ವಿಮಾನವನ್ನು ಬಿಡಿಸಿದ್ದಾರೆ. ಈ ವಿಮಾನ ಐಹೊಳೆಯಲ್ಲಿರುವ ಮಲ್ಲಿಕಾರ್ಜುನಗುಡಿಯ ವಿಮಾನವನ್ನು ಹೋಲುತ್ತದೆ.

ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು (ಚಿತ್ರ ೨೩೭ ರಿಂದ ೨೪೪)

ಇವರು ಸಾಮಾನ್ಯವಾಗಿ ಕರಿಯ ಕಲ್ಲನ್ನೇ ಬಳಸಿದ್ದಾರೆ. ಇವರ ಕಾಲದ ಬಹುಪಾಲು ವೀರಗಲ್ಲುಗಳು ತಮ್ಮ ಬೃಹದಾಕಾರದಿಂದ ಒಂದು ರೀತಿಯ ಗಾಂಭೀರ್ಯವನ್ನು ಪಡೆದಿವೆ. ನಾಲ್ಕು ಅಡಿ ಅಗಲ, ಸುಮಾರು ಹದಿಮೂರು –ಹದಿನಾಲ್ಕು ಅಡಿ ಎತ್ತರದ ವೀರಗಲ್ಲುಗಳನ್ನು ಬೆಟಗೇರಿಯಲ್ಲಿ ನೋಡಬಹುದು. ಇವರ ವೀರಗಲ್ಲುಗಳ ಮುಖ್ಯ ಲಕ್ಷಣವೆಂದರೆ ತಮ್ಮ ರಾಜ ಚಿಹ್ನೆಯಾದ ನೇಗಿಲನ್ನು ಸಾಮಾನ್ಯವಾಗಿ ವೀರಗಲ್ಲುಗಳ ತಳ ಭಾಗದಲ್ಲಿ ಕಂಡರಿಸಲಾಗಿರುವುದು (ಚಿತ್ರ ೨೩೮) ವೀರಗಲ್ಲುಗಳ ಮೇಲ್ಭಾಗವನ್ನು ಒಂದು ಆಕಾರಕ್ಕೆ ತರಲು ಪ್ರಯತ್ನಿಸಿದ ಬಾದಾಮಿ ಚಾಲುಕ್ಯರ

ಕಾಲದ ಶಿಲ್ಪಿಗಳ ಪ್ರಯತ್ನ ಇವರ ವೀರಗಲ್ಲುಗಳಲ್ಲಿ ಒಂದು ರೀತಿಯ ಸಿದ್ಧಿಯನ್ನು ಪಡೆದಿದೆ. ಶಿಲ್ಪದ ಬಗ್ಗೆ ಹೇಳುವುದಾದರೆ, ಇವರ ಕಾಲದ ವೀರಗಲ್ಲುಗಳಲ್ಲಿ ಕುಸುರಿ ಕೆಲಸ ಕಂಡು ಬರುವುದಿಲ್ಲ. ಆದರೂ ತಾವು ತಮ್ಮ ದಿಟ್ಟವಾದ ಶಿಲ್ಪದಿಂದ ಗಂಭೀರ ಭಾವವನ್ನು ಹೊಂದಿವೆ. ಯುದ್ಧದ ಚಿತ್ರಣದಲ್ಲಿ ಹೋರಾಡುವ ವೀರರಿಗೆ ಪ್ರಾಶಸ್ತ್ಯ ದೊರೆತಿದೆ. ಇವರ ಕಾಲದ ಮತ್ತೊಂದು ವೈಶಿಷ್ಟ್ಯವೆಂದರೆ ವೀರರನ್ನು ಚಿತ್ರಿಸುವಾಗ ಚಲನೆ ಮತ್ತು ಕ್ರಿಯೆಗಳಿಗೆ ಗಮನಕೊಟ್ಟಿರುವುದು. ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ವಿವರಗಳನ್ನು ಬಿಡಿಸುವಲ್ಲಿ ಆಕಾಶದ ಪರಿಣಾಮಕಾರಿ ಚಿತ್ರಣವನ್ನು ಶಿಲ್ಪದಲ್ಲಿ ಮಾಡಿದ್ದಾರೆ. ಮೋಡಗಳನ್ನು ಸಂಕೇತದ ಮೂಲಕ ತೋರಿಸುತ್ತಾರೆ. (ಚಿತ್ರ ೨೨೨. ೨೩೭, ೨೩೮) ವೀರನನ್ನು ಕೊಂಡೊಯ್ಯುವಲ್ಲಿ ಅಪ್ಸರೆಯರು, ಗಂಧರ್ವರು ವಾದ್ಯಗಳನ್ನು ನುಡಿಸುತ್ತಾ ಪುಷ್ಪವೃಷ್ಟಿಯನ್ನು ಮಾಡುತ್ತಿರುವಂತೆ ವಿವರಗಳನ್ನು ಬಿಡಿಸುವ ಒಂದು ಪ್ರಯತ್ನವನ್ನೇ ಈ ಕಾಲದ ಶಿಲ್ಪಿಗಳು ಆರಂಭಿಸಿದಂತೆ ತೋರುತ್ತದೆ. ಇವರ ಬಹುಪಾಲು ವೀರಗಲ್ಲುಗಳಲ್ಲಿನ ಶಿಲ್ಪದಲ್ಲಿ, ವೀರನನ್ನು ಸ್ವರ್ಗದಲ್ಲಿ ಸುಖಾಸನದಲ್ಲಿರುವಂತೆ ಸಾಮಾನ್ಯವಾಗಿ ಬಿಡಿಸಲಾಗಿದ್ದರೂ ಒಂದು ವೀರಗಲ್ಲಿನಲ್ಲಿ ಮಾತ್ರ ವೀರನು ಶಿವಲಿಂಗದ ಬಳಿ ಕುಳಿತಿರುವಂತೆ ಬಿಡಿಸಲಾಗಿದೆ. ಆದರೆ ಇಲ್ಲಿ ಮುಂದಿನ ಶತಮಾನಗಳ ವೀರಗಲ್ಲುಗಳಲ್ಲಿ ದೊರೆಯುವ ವಿವರಗಳು ದೊರೆಯುವುದಿಲ್ಲ. ಇವರ ಕಾಲದ ಎರಡು ವೀರಗಲ್ಲುಗಳ ಮೇಲೆ ಬಿಡಿಸಲಾಗಿರುವ ದೇವಾಲಯದ ಚಿತ್ರಣ ರಾಷ್ಟ್ರಕೂಟರೇ ನಿರ್ಮಿಸಿದ ಕೈಲಾಸ ದೇವಾಲಯವನ್ನು ಹೋಲುತ್ತದೆ ಎಂದು ಹಿರಿಯ ವಿದ್ವಾಂಸರ ಅಭಿಪ್ರಾಯ.[೫೬] ಈ ಅವಧಿಯಲ್ಲಿ ವೀರಗಲ್ಲುಗಳನ್ನು ಮಾಡಲು ಶಿಲ್ಪಿಗಳು ವಿಶೇಷ ಶ್ರದ್ಧೆಯನ್ನು ವಹಿಸುತ್ತಿದ್ದರೆಂದು ತೋರುತ್ತದೆ.

ಧಾರವಾಡ ಜಿಲ್ಲೆಯ ರೋಣದಲ್ಲಿರುವ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನಕಾಲದ ವೀರಗಲ್ಲಿನ ಶಿಲ್ಪ ಹಲವಾರು ದೃಷ್ಟಿಗಳಿಂದ ಮಹತ್ವದ್ದಾಗಿದೆ. ಈ ವೀರಗಲ್ಲು ಬೂತಾರ್ಯ (ಬೂತುಗ ೨) ಎಂಬುವನು ರೋಣದ ಮೇಲೆ ಆಕ್ರಮಣ ಮಾಡಿ ಹೆಚ್ಚಿನ ಸುಂಕವನ್ನು ಕೇಳಿದಾಗ ಅದೇ ಅಗ್ರಹಾರದ ಪಂಪಯ್ಯನು ತಾನು ಕೊಡಬೇಕದ ಸುಂಕಕ್ಕಿಂತಲೂ ಒಂದು ಅಕ್ಷತೆಯಷ್ಟೂ ಹೆಚ್ಚಾಗಿ ಕೊಡುವುದಿಲ್ಲವವೆಂದು ಆ ಬೂತುಗನೊಡನೆ ಹೋರಾಡಿ ಸಾಯುತ್ತಾನೆ. ಆ ಪಂಪಯ್ಯನ ಸ್ಮಾರಕವೇ ಈ ವೀರಗಲ್ಲು. ಇದು ಈಗ ಒಡೆದು ಹೋಗಿದೆಯಾದರೂ ಕಲಾತ್ಮಕ ದೃಷ್ಟಿಯಿಂದ ಮಹತ್ವದ್ದೇ ಆಗಿದೆ. ಈ ಕಲ್ಲು ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ಭಾಗಕ್ಕೆ ಸರಿಯಾಗಿ ಮುರಿದು ಎರಡು ತುಂಡಾಗಿದೆ.

ಹೋರಾಟದ ಶಿಲ್ಪವಿರುವ ಹಂತದಲ್ಲಿ ಬೂತುಗ ಕುದುರೆಯ ಮೇಲೆ ಕುಳಿತು (ರೋಣವನ್ನು) ಆಕ್ರಮಣ ಮಾಡುತ್ತಿರುವಂತೆಯೂ, ಪಂಪಯ್ಯನು ದಿಟ್ಟತನದಿಂದ ಬೂತುಗನಿಗೆ ಎದುರು ನಿಂತಿರುವಂತೆಯೂ ಬಿಡಿಸಲಾಗಿದೆ. ಇಲ್ಲಿ ಬೂತುಗನಿಗಿಂತಲೂ ಪಂಪಯ್ಯನ ಶಿಲ್ಪಕ್ಕೆ

ಆದ್ಯತೆಯನ್ನು ನೀಡಲಾಗಿದೆ. ಅಗ್ರಹಾರದ ಬ್ರಾಹ್ಮಣರೆಲ್ಲ ಸುಮ್ಮನಿದ್ದಾಗ ಪಂಪಯ್ಯ ಹೇಗೆ ದಿಟ್ಟತನದಿಂದ ಆಕ್ರಮಣಕಾರರನ್ನು ಎದುರಿಸಿದ ಎಂಬುದನ್ನು ಸೂಚಿಸುವ ಸಲುವಾಗಿಯೋ ಅಥವಾ ಬ್ರಾಹ್ಮಣರ ಪರವಾಗಿ ಹೋರಾಡಿದ ಎಂಬುದನ್ನು ಸೂಚಿಸುವ ಸಲುವಾಗಿಯೋ ಪಂಪಯ್ಯನ ಹಿಂಬದಿಯಲ್ಲಿ ಪದ್ಮಾಸನದಲ್ಲಿ ಕುಳಿತ ಬ್ರಾಹ್ಮಣರನ್ನು ಶಿಲ್ಪಿ ಕಡೆದಿದ್ದಾನೆ. ಬೂತುಗನ ಶಕ್ತಿ ಪರಾಕ್ರಮಗಳನ್ನು ಸೂಚಿಸುವ ಸಲುವಾಗಿ ಬೂತುಗನು ತನ್ನ ಆನೆ ಕಾಲಾಳುಗಳ ಸಮೇತ ರೋಣವನ್ನು ಆಕ್ರಮಣ ಮಾಡುತ್ತಿರುವಂತೆ ಶಿಲ್ಪಿ ಬಿಡಿಸಿದ್ದಾನೆ. (ಚಿತ್ರ ೨೪೩, ೨೪೪)

ಈ ಮೊದಲೇ ತಿಳಿಸಿದಂತೆ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಭಾಗ ಮಾತ್ರ ನಾಶವಾಗಿದೆ. ಮುರಿದ ಇದೇ ವೀರಗಲ್ಲಿನ ಮತ್ತೊಂದು ಭಾಗದಲ್ಲಿ ಶಿಲ್ಪಿಯು ವೀರನಾದ ಪಂಪಯ್ಯನು ಸ್ವರ್ಗದಲ್ಲಿ ಅಲಂಕೃತವಾದ ವೇದಿಕೆಯ ಮೇಲೆ ಇರುವಂತೆ ಬಿಡಿಸಿದ್ದಾನೆ. ಈ ಭಾಗವನ್ನು ಇಡಿಯಾಗಿ ನೋಡಿದಾಗ ಇದನ್ನು ಮಾಡಿದ ಶಿಲ್ಪಿಯು ತನ್ನ ಕಾಲದ ದೇವಾಲಯವೊಂದರ ಮುನ್ನೋಟವನ್ನು ಕಡೆದಿಡುವ ಪ್ರಯತ್ನವನ್ನು ಮಾಡಿದಂತೆ ತೋರುತ್ತದೆ. ಈ ಪ್ರಯತ್ನದಲ್ಲಿ ಅವನು ಯಶಸ್ವಿಯೂ ಆಗಿದ್ದಾನೆಂದು ಹೇಳಬಹುದು.

ಸ್ವರ್ಗಾಸೀನ ಹಂತದಿಂದ ಪ್ರಾರಂಭವಾಗುವ ದೇವಾಲಯದ ಅಧಿಷ್ಠಾನ ಅದರ ಮೇಲೆ ಕಂಭಗಳು, ಅದರ ಮೇಲಿನ ಬೋದಿಗೆ, ಬೋದಿಗೆಯ ಮೇಲಿನ ಮೇಲ್ಚಾವಣಿಯಿಂದ ಸ್ವಲ್ಪಮುಂದಕ್ಕೆ ಚಾಚಿದಂತಿರುವ ಸಜ್ಜೆ, ಸಜ್ಜೆಯ ಮೇಲ್ಭಾಗದಲ್ಲಿ ವ್ಯಾಳಿ ಇತ್ಯಾದಿ ಪ್ರಾಣಿಗಳ ಒಂದು ಪಟ್ಟಿಕೆ – ಮುಂತಾದ ವಿವರಗಳನ್ನು ಬಿಡಿಸಲಾಗಿದೆ. ಕಂಭಗಳನ್ನು ಬಿಡಿಸುವಲ್ಲಿ ಶಿಲ್ಪಿಯು, ಹೊರ ಮತ್ತು ಒಳಕಂಭಗಳ ವ್ಯತ್ಯಾಸವನ್ನು ತೋರಿಸಿದ್ದಾನೆ. ಶಿಖರಸ್ತೂಪದ ತಳಭಾಗ ಮತ್ತು ವ್ಯಾಳಿಪಟ್ಟಿಯ ಮೇಲ್ಭಾಗದ ನಡುವೆ ನೃತ್ಯಭಂಗಿಯಲ್ಲಿರುವ ನಟರಾಜನನ್ನು ಸುಂದರವಾಗಿ ಬಿಡಿಸಿದ್ದಾನೆ. ನಟರಾಜನ ಬಲಬದಿಗೆ ಮಹಿಷಾಸುರಮರ್ಧಿನಿಯನ್ನೂ, ಎಡಭಾಗದಲ್ಲಿ ಪುರುಷದೇವತೆಯೊಂದನ್ನು ಕಡೆದಿದ್ದಾನೆ. ಈ ಮೂರು ವಿಗ್ರಹಗಳನ್ನು ಬೇರ್ಪಡಿಸುವಂತೆ ಮತ್ತು ಪ್ರತಿ ವಿಗ್ರಹಕ್ಕೂ ಒಂದು ಚೌಕಟ್ಟು ದೊರೆಯುವಂತೆ ನಾಲ್ಕು ಕಂಭಗಳನ್ನು ಕಡೆದಿದ್ದಾನೆ. ಈ ಕಂಭಗಳು ಹಿಂದೆ ವಿವರಿಸಿರುವ ಕಂಭಗಳಿಗಿಂತಲೂ ಭಿನ್ನವಾಗಿದೆ. ಸ್ತೂಪದ ಮೇಲ್ಭಾಗದಲ್ಲಿ ಶಿಲ್ಪಿಯು ಬಳ್ಳಿಗಳಿಂದ ಅಲಂಕಾರವನ್ನು ಮಾಡಿದ್ದಾನೆ. ಇದು ಅಜಂತಾದ ಕಮಾನನ್ನು ಹೋಲುತ್ತದೆ.

ಈ ವಿವರಗಳಿರುವ ಶಿಲ್ಪದ ತಳಭಾಗದಲ್ಲಿ ಹೋರಾಟ ಮಾಡಿ ಮಡಿದ ಪಂಪಯ್ಯನು ಸ್ವರ್ಗದಲ್ಲಿ ಅಲಂಕೃತವಾದ ವೇದಿಕೆಯ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಅವನ ಎಡಭಾಗಗಳಲ್ಲಿ ಚಾಮರಧಾರಿಗಳಾಗಿ ನಿಂತು ಅಪ್ಸರೆಯರು ಸೇವಿಸುತ್ತಿದ್ದಾರೆ. ಮೇಲುಗಡೆಯಿಂದ ಮತ್ತಿಬ್ಬರು

೫೬ Mysore Gazetteer. Vol. II. Pt. 1. ಪು. ೧೫೫

ಪಂಪಯ್ಯನ ಮೇಲೆ ಪುಷ್ಪವೃಷ್ಟಿಗರೆಯುತ್ತಿದ್ದಾರೆ. ಈ ವಿವರದ ಬಲಭಾಗಕ್ಕೆ ಬ್ರಹ್ಮನು ನಿಂತಿರುವ ವಿವರ ಶಿಲ್ಪವಿದೆ. ಎಡಬದಿಗೆ ವಿಷ್ಣು ನಿಂತಿರುವ ಶಿಲ್ಪವಿದೆ. ಬ್ರಹ್ಮನ ಮೂರು ಮುಖಗಳು ಚಿಕ್ಕದಾಗಿ ಕಡೆಯಲಾಗಿದ್ದರೂ ಸುಂದರವಾಗಿ ಮೂಡಿಬಂದಿದೆ. ಇದು ಎಲಿಫೆಂಟಾ ಮತ್ತು ಬಳ್ಳಿಗಾವೆಯ ತ್ರಿಮೂರ್ತಿ ಶಿಲ್ಪವನ್ನು ನೆನಪಿಗೆ ತರುವಂತಿದೆ. ನಾಲ್ಕು ಕಂಭಗಳನ್ನು ಕಂಡರಿಸುವುದರ ಮೂಲಕ ಶಿಲ್ಪಿ ಈ ಮೂರು ಶಿಲ್ಪದ ವಿವರಗಳಿಗೆ ಒಂದು ಚೌಕಟ್ಟನ್ನು ಮಾಡಿ ಪ್ರತ್ಯೇಕಗೊಳಿಸಿದ್ದಾನೆ. (ಚಿತ್ರ ೨೪೪)

ಗಂಗರ, ನೊಳಂಬರ ಕಾಲದ ವೀರಗಲ್ಲುಗಳು (ಚಿತ್ರ. ೨೪೭ ರಿಂದ ೨೫೮)

ಈ ಕಾಲದ ಶಿಲ್ಪಿಗಳು ವೀರಗಲ್ಲುಗಳನ್ನು ಮಾಡುವುದಕ್ಕೆ ಬಿಳಿಯ ಹಸಿಕಲ್ಲನ್ನು ಮತ್ತು ಕೆಲವೊಮ್ಮೆ ಸುಟ್ಟ ಕಲ್ಲು ಚಪ್ಪಡಿಯನ್ನೂ ಆಯ್ಕೆ ಮಾಡಿದ್ದಾರೆ. ಇವರು ವೀರಗಲ್ಲುಗಳಿಗೆ ಒಂದು ಆಕಾರವನ್ನು ಕೊಡುವುದರ ಬದಲು ಕಲ್ಲಿನ ಮೂಲ ಆಕಾರಕ್ಕೆ ಹೊಂದುವ ಹಾಗೆ ಶಿಲ್ಪವನ್ನು ಬಿಡಿಸುವ ಪ್ರಯತ್ನ ಮಾಡಿದ್ದಾರೆ. ಈ ಕಾಲದಲ್ಲಿ ರಚಿತವಾದ ವೀರಗಲ್ಲುಗಳು, ಸಾಮಾನ್ಯವಾಗಿ ಒಂದೆಡೆಯಲ್ಲೇ ಐದು ಆರು ಸಂಖ್ಯೆಯಲ್ಲಿರುತ್ತವೆ. ಇವು ಸಾಮಾನ್ಯವಾಗಿ ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳ ಹಳ್ಳಿಗಳಲ್ಲಿ 'ಬೂದಿನೆತ್ತು' ಎಂದು ಕರೆಯಲ್ಪಡುವ ಹೊಲಗಳಲ್ಲಿರುತ್ತವೆ. ಸಾಮಾನ್ಯವಾಗಿ ಇವು ಪೂರ್ವಾಭಿಮುಖವಾಗಿರುತ್ತವೆ.

ಇವರ ಕಾಲದ ವೀರಗಲ್ಲುಗಳ ಶಿಲ್ಪವನ್ನು ಮೂರು ವಿಭಾಗಗಳಾಗಿ ಗುರುತಿಸುವುದು ಸೂಕ್ತವೆಂದು ತೋರುತ್ತದೆ.

(೧) ಇಡೀ ವೀರಗಲ್ಲಿನಲ್ಲಿನ ವೀರನೊಬ್ಬನನ್ನೇ ಆಯುಧಪಾಣಿಯಾಗಿರುವಂತೆ ಬಿಡಿಸಲಾಗಿರುತ್ತದೆ. ಮತ್ತೆ ಕೆಲವೊಮ್ಮೆ ಅವನ ಆಕಾರದಷ್ಟೇ ಪ್ರಮಾಣದಲ್ಲಿ ಅವನ ಎದುರಾಳಿಯ ಶಿಲ್ಪವನ್ನೂ ಬಿಡಿಸಲಾಗಿರುತ್ತದೆ. ವೀರನೊಬ್ಬನನ್ನೇ ಬಿಡಿಸಿರುವ ಶಿಲ್ಪದಲ್ಲಿ ವೀರನು ಆಯುಧ ಪಾಣಿಯಾಗಿ ಶತ್ರುಪಕ್ಷದವರ ಮೇಲೆ ಆಕ್ರಮಣ ಮಾಡುತ್ತಿರುವಂತೆ, ಶತ್ರುಪಕ್ಷದವರ ಆಯುಧಗಳು ವೀರನ ದೇಹವನ್ನು ಪ್ರವೇಶಿಸಿರುವಂತೆ ಬಿಡಿಸಲಗಿರುತ್ತದೆ. ಆದರೆ ಎದುರಾಳಿಗಳನ್ನು ಬಿಡಿಸಿರುವುದಿಲ್ಲ. ಆಯ್ಕೆ ಮಾಡಿದ ಕಲ್ಲಿನ ಮುಕ್ಕಾಲು ಭಾಗದಲ್ಲಿ ವೀರನ ಶಿಲ್ಪಕ್ಕೆ ಪ್ರಾಧಾನ್ಯ ದೊರೆತಿರುತ್ತದೆ. ಇವನು 'ಆಲೀಢಾಸನ'ದಲ್ಲಿ ನಿಂತು ಬಲಗೈಯಲ್ಲಿ ಕಠಾರಿ ಅಥವಾ ಬಾಣಗಳನ್ನು ಎಡಗೈಯಲ್ಲಿ ಖಡ್ಗ ಅಥವಾ ಬಿಲ್ಲನ್ನು ಹಿಡಿದಿರುತ್ತಾನೆ. ಬಿಳಿಯ ಕಲ್ಲಿನ ಸ್ವಭಾವದಿಂದಾಗಿ ವೀರನ ಅಂಗಸೌಷ್ಠವ ಚೆನ್ನಾಗಿ ಮೂಡಿಬಂದಿರುತ್ತದೆ.

(೨) ಅಪರೂಪಕ್ಕೆ ವೀರಗಲ್ಲುಗಳ ಶಿಲ್ಪವನ್ನು ಹಂತಹಂತದಲ್ಲಿ ಬಿಡಿಸಿರುವ ನಿದರ್ಶನಗಳೂ

ದೊರೆಯುತ್ತವೆ. ಈ ತಂತ್ರ ರಾಷ್ಟ್ರಕೂಟರ ಪ್ರಭಾವದಿಂದ ಬಂದದ್ದೋ, ಶಿಲ್ಪಿಗಳೇ ಹೊಳೆದ ತಂತ್ರವೋ ಹೇಳಲಾಗುವುದಿಲ್ಲ. ನಗರಗೆರೆ ಮತ್ತು ನೆಲವಾಗಿಲುಗಳಲ್ಲಿ ದೊರೆಯುವ ವೀರಗಲ್ಲುಗಳಲ್ಲಿ ಈ ತಂತ್ರವನ್ನು ಗಮನಿಸಬಹುದು. ಹೇಮಾವತಿ ಮತ್ತು ಚಿತ್ರದುರ್ಗ ಜಿಲ್ಲೆಯ ದೊಡ್ಡ ಉಳ್ಳರ್ತ್ತಿ ಎಂಬಲ್ಲಿನ ವೀರಗಲ್ಲುಗಳನ್ನು ಗಮನಿಸಿದಾಗ ಹಂತ ಹಂತಗಳಲ್ಲಿ ಶಿಲ್ಪವನ್ನು ಬಿಡಿಸುವ ಒಂದು ಪದ್ಧತಿ ಪರಿಸರದ ಪ್ರಭಾವದಿಂದಾಗಿ ಬಂದದ್ದೆಂದು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ದೊಡ್ಡ ಉಳ್ಳರ್ತ್ತಿಯ ಮೂರು ವೀರಗಲ್ಲುಗಳನ್ನು ಪರಿಶೀಲಿಸಬಹುದು. ಈ ಮೂರೂ ವೀರಗಲ್ಲುಗಳು ಕೆರೆಯ ಕಟ್ಟೆಯ ಬಳಿಯೇ ಇದ್ದು ಪೂರ್ವಾಭಿಮುಖವಾಗಿವೆ. ಇವುಗಳಲ್ಲಿ ಎರಡು ವೀರಗಲ್ಲುಗಳು, ಶಿಲ್ಪದ ಬೆಳವಣಿಗೆಯ ದೃಷ್ಟಿಯಿಂದ ಗಮನಾರ್ಹವಾಗಿವೆ. ಇವುಗಳನ್ನು ಮಾಡಿದ ವೀರಗಲ್ಲುಗಳ ಶಿಲ್ಪಿಗಳು, ಹಂತ ಹಂತಗಳಲ್ಲಿ ಶಿಲ್ಪವನ್ನು ಬಿಡಿಸಲು ಮಾಡಿರುವ ಪ್ರಯತ್ನವನ್ನು ಇಲ್ಲಿ ಗುರುತಿಸಬಹುದು. (ಚಿತ್ರ ೨೫೨) ಆದರೆ ಹಂತ ಹಂತಗಳಲ್ಲಿ ವೀರಗಲ್ಲಿನ ಶಿಲ್ಪವನ್ನು ಬಿಡಿಸಿ, ಅದಕ್ಕೆ ಒಂದು ಸುಂದರವಾದ ಪೂರ್ಣತೆಯನ್ನು ನೀಡುವ ಕಲೆ ಇವರಿಗೆ ಸಿದ್ಧಿಯಾಗಿರಲಿಲ್ಲವೆಂದು ಹೇಳಬೇಕಾಗುತ್ತದೆ. ಇದೇ ವೀರಗಲ್ಲುಗಳ ಪಕ್ಕದಲ್ಲಿರುವ ಮೂರನೆಯ ವೀರಗಲ್ಲು ಈ ಎರಡೂ ವೀರಗಲ್ಲುಗಳಿಗಿಂತ ಭಿನ್ನವಾಗಿದೆ. ಶಾಸನದ ಪಾಠದಿಂದಲೇ ಈ ವೀರಗಲ್ಲು ಆ ಎರಡು ವೀರಗಲ್ಲುಗಳಿಗಿಂತ ನಂತರದ ಕಾಲದ್ದೆಂದು ತಿಳಿದುಬರುತ್ತದೆ. ಈ ವೀರಗಲ್ಲಿನ ಮೂಲಶಿಲೆ ಉಳಿದ ಎರಡು ವೀರಗಲಲುಗಳ ಹಾಗೆ ಬಿಳಿಯ ಕಲ್ಲಾಗಿರದೆ ಕರಿಯ ನುಣುಪಾದ ಕಲ್ಲಾಗಿದೆ. ಶಿಲ್ಪವನ್ನು ಮೂರು ಹಂತಗಳಲ್ಲಿ ಸ್ಪಷ್ಟವಾಗಿ ವಿವರ ವಿವರವಾಗಿ ಬಿಡಿಸಲಾಗಿದೆ. (ಚಿತ್ರ ೨೪೫, ೨೪೬) ಇಡೀ ವೀರಗಲ್ಲಿಗೇ ಒಂದು ಆಕಾರವನ್ನು ಕೊಡಲು ಶಿಲ್ಪಿ ಪ್ರಯುತ್ನಿಸಿರುವುದು ಕಂಡುಬರುತ್ತದೆ. ಈ ಎಲ್ಲಾ ದೃಷ್ಟಿಗಳಿಂದ ಈ ವೀರಗಲ್ಲನ್ನು ಅಭ್ಯಾಸ ಮಾಡಿದಾಗ ಇಲ್ಲಿನ ಶಿಲ್ಪದ ಮೇಲೆ ರಾಷ್ಟ್ರಕೂಟರ ವೀರಲಗಲ್ಲುಗಳ ಪ್ರಭಾವ ಆಗಿರುವುದು ಸ್ಪಷ್ಟವಾಗಿದೆ.

(೩) ಪ್ರತಿಷ್ಠಿತ ವ್ಯಕ್ತಿಗಳಿಗಾಗಿ ಹಾಕಿರುವ ವೀರಗಲ್ಲುಗಳು ಮತ್ತು ಅಸ್ತವ್ಯಸ್ತವಾದ ಶಿಲ್ಪವನ್ನು ಹೊಂದಿರುವ ವೀರಗಲ್ಲುಗಳು. ಇವುಗಳನ್ನು ಪರಿಶೀಲಿಸುವುದಕ್ಕೆ ಮುನ್ನ ಕೆಲವಾರು ವಿಷಯಗಳನ್ನು ಸ್ಪಷ್ಟಪಡಿಸಿ ಮುಂದುವರಿಯುವುದು ಸೂಕ್ತ

'ವೀರ ಸ್ವರ್ಗ ಕಲ್ಪನೆ' ಇವರ ಕಾಲದ ವೀರಗಲ್ಲುಗಳನ್ನು ಮಾಡಿದ ಶಿಲ್ಪಿಗಳಿಗೆ ಇರಲಿಲ್ಲವೆಂದು ಹೇಳಲು ಬರುವುದಿಲ್ಲ. ಆದರೆ ಅವುಗಳನ್ನು ಶಿಲ್ಪದಲ್ಲಿ ಅಭಿವ್ಯಕ್ತಿಸುವ ಒಂದು ಕಲೆ ಅವರಿಗೆ ಸಿದ್ದಿಸಿರಲಿಲ್ಲ. ಆ ಕಲ್ಪನೆಗಳನ್ನು ಮೂಡಿಸಬೇಕೆಂಬ ಆಕಾಂಕ್ಷೆಯಿಂದ ಕೆಲವಾರು ಶಿಲ್ಪಿಗಳು ಈ ಕಲ್ಪನೆಯ ವಿವರಗಳನ್ನು ಅಸ್ತವ್ಯಸ್ತವಾಗಿ ಬಿಡಿಸಿದ್ದಾರೆ. ಇವರ ಶಿಲ್ಪ ಅಸ್ತವ್ಯಸ್ತತೆಯಿಂದ ಕೂಡಿದ್ದರೂ, ಯುದ್ಧದ ಹೋರಾಟದ ಸೂಕ್ಷ್ಮ ವಿವರಗಳನ್ನು ಹೊಂದಿದೆ ಎಂಬುದನ್ನು ಗುರುತಿಸಬೇಕಾಗುತ್ತದೆ.

ಈ ದೃಷ್ಟಿಯಿಂದ ಕೋಲಾರ ಜಿಲ್ಲೆಯ ಎಲ್ದೂರು ಮತ್ತು ಅಮರಾವತಿ ಎಂಬ ಗ್ರಾಮದಲ್ಲಿನ ಎರಡು ವೀರಗಲ್ಲುಗಳನ್ನು ವಿಶ್ಲೇಷಿಸಬಹುದು. ಈ ಎರಡೂ ವೀರಗಲ್ಲುಗಳೂ ತುರುಗಾಳಗದಲ್ಲಿ ಮಡಿದ ವೀರರ ಸ್ಮಾರಕಗಳಾಗಿವೆ. ವೀರಗಲ್ಲಿನ ಫಲಕದ ಮುಖ್ಯ ಭಾಗದಲ್ಲಿ ವೀರನು ಆಯುಧವನ್ನು ಹಿಡಿದು ಆಲೀಢಾಸನದಲ್ಲಿ ನಿಂತಿರುವಂತೆ ಬಿಡಿಸಲಾಗಿದೆ. (ಚಿತ್ರ. ೧೭೫) ವೀರನು ತುರುಗಾಳಗದಲ್ಲಿ ಹೋರಾಡಿದವನು ಎಂಬುದನ್ನು ಸೂಚಿಸುವ ಸಲುವಾಗಿ, ವೀರಗಲ್ಲಿನ ಫಲಕದ ಮೇಲೆ ಅಸ್ತವ್ಯಸ್ತವಾಗಿ ತುರುಗಳನ್ನು ಬಿಡಿಸಲಾಗಿದೆ. ಎಲ್ದೂರಿನ ವೀರಗಲ್ಲಿನ ಎಡಭಾಗದಲ್ಲಿ ವೀರನನ್ನು ಅಪ್ಸರೆಯರು ಕೈಹಿಡಿದು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ ಬಲಕ್ಕೆ ದ್ರಾವಿಡ ಶೈಲಿಯ ಮಂಟಪದಲ್ಲಿ ವೀರನು ಅಪ್ಸರೆಯರೊಂದಿಗೆ ಇರುವಂತೆಯೂ ಬಿಡಿಸಲಾಗಿದೆ. ಈ ವಿವರಣೆ ಸ್ವರ್ಗವನ್ನು ಸಂಕೇತಿಸುತ್ತದೆ. (ಚಿತ್ರ ೨೫೧) ಅಮರಾವತಿಯ ವೀರಗಲ್ಲಿನ ಬಲಭಾಗದ ಮೇಲುಗಡೆ ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯಲು ಇಬ್ಬರು ಅಪ್ಸರೆಯರು ನಿಂತಿರುವಂತೆ ಬಿಡಿಸಲಾಗಿದೆ.

ರಾಜಕೀಯ ದೃಷ್ಟಿಯಿಂದ ಪ್ರತಿಷ್ಠಿತರಾದ ವೀರರಿಗೆ ಹಾಕಲಾಗಿರುವ ವೀರಗಲ್ಲುಗಳು, ಇವರ ಕಾಲದ ಉಳಿದ ವೀರಗಲ್ಲುಗಳಿಗಿಂತಲು ಹೆಚ್ಚಿನ ಶಿಲ್ಪದ ವಿವರಗಳನ್ನು ಹೊಂದಿವೆ ಮತ್ತು ಭಿನ್ನ ರೀತಿಯಲ್ಲಿವೆ. ಬಹುಶಃ ಪ್ರತಿಷ್ಠಿತರ ವೀರಗಲ್ಲುಗಳನ್ನು ಸಾಮಾನ್ಯವಾಗಿ ನುರಿತ ಶಿಲ್ಪಿಗಳಿಂದ ಮಾಡಿಸುತ್ತಿದ್ದುದು ಇದಕ್ಕೆ ಕಾರಣವಿರಬೇಕು. ಈ ದೃಷ್ಟಿಯಿಂದ ಬೇಗೂರಿನ ಮತ್ತು ಹಿರೇಬಿದನೂರಿನ ವೀರಗಲ್ಲುಗಳು ಗಮನಾರ್ಹವಾಗಿವೆ. ಇವುಗಳ ಮೇಲೆ ಶಾಸನಗಳೂ ದೊರೆಯುವುದರಿಂದ ಮೇಲಿನ ತೀರ್ಮಾನಕ್ಕೆ ಬರಲು ಸಹಾಯವಾಗಿವೆ. ಈ ಎರಡು ವೀರಗಲ್ಲುಗಳ ಶಿಲ್ಪವನ್ನು ಹಲವಾರು ರೀತಿಯಲ್ಲಿ ಹೋಲುವ ವೀರಗಲ್ಲುಗಳು ಹೊಸಕೋಟೆ ತಾಲ್ಲೂಕ್ ದೊಡ್ಡಹುಲ್ಲೂರು, ಕೋಲಾರ, ಮುಳುಬಾಗಿಲು ತಾಲ್ಲೂಕ್ ಬಲ್ಲ, ಗೌರಿಬಿದನೂರು ತಾಲ್ಲೂಕ್ ನಗರಗೆರೆ ಎಂಬ ಗ್ರಾಮಗಳಲ್ಲಿ ದೊರೆಯುತ್ತವೆ. ಮೇಲೆ ಹೇಳಿದ ಎರಡು ವೀರಗಲ್ಲುಗಳ ಶಿಲ್ಪದೊಡನೆ ಈ ವೀರಗಲ್ಲುಗಳನ್ನು ಹೋಲಿಸಿ ಅಧ್ಯಯನ ಮಾಡಿ ಸಾಮಾನ್ಯ ಅಂಶಗಳನ್ನು ಗುರುತಿಸಬಹುದು. ಈ ಅಂಶಗಳನ್ನು ಪರಿಶೀಲಿಸಿದಾಗ ಇವರ ಕಾಲದಲ್ಲಿ ಪ್ರತಿಷ್ಠಿತರ ವೀರಗಲ್ಲುಗಳನ್ನು ಮಾಡುವಲ್ಲಿ ಶಿಲ್ಪಿಗಳು ಕೆಲವಾರು ವಿವರಗಳನ್ನು ಬಿಡಿಸಬೇಕು ಎಂಬ ನಿಯಮವನ್ನು ಹಾಕಿಕೊಂಡಿದ್ದಂತೆ ತೋರುತ್ತದೆ. ಆ ಅಂಶಗಳನ್ನು ಹೀಗೆ ಗುರುತಿಸಬಹುದು:

ಕಲ್ಲನ್ನು ಆಯ್ಕೆ ಮಾಡುವಾಗಲೇ ಶಿಲ್ಪಿಯು ಅಗಲವಾದ ಕಲ್ಲನ್ನು ಆಯ್ಕೆ ಮಾಡಿರುತ್ತಾನೆ. ಇವು ಇವರ ಕಾಲದ ಉಳಿದ ವೀರಗಲ್ಲುಗಳಿಗಿಂತ ಸಾಮಾನ್ಯವಾಗಿ ವಿಶಾಲವಾಗಿರುತ್ತವೆ. ಇಲ್ಲಿಯೂ ವೀರನ ಶಿಲ್ಪಕ್ಕೇ ಪ್ರಾಮುಖ್ಯ. ವೀರಗಲ್ಲಿನ ಮಧ್ಯಭಾಗವೆಲ್ಲಾ ವೀರನ ಶಿಲ್ಪದಿಂದಲೇ ಆವರಿಸುತ್ತದೆ ಎಂದು ಹೇಳಿದರೂ ತಪ್ಪಾಗಲಾರದು. ಸಾಮಾನ್ಯವಾಗಿ ವೀರನು ಆಲೀಢಾಸನದಲ್ಲಿ ನಿಂತು ಎಡಗೈಯಲ್ಲಿ ಗುರಾಣಿಯನ್ನೂ, ಮೇಲಕ್ಕೆತ್ತಿದ ಬಲಗೈಯಲ್ಲಿ ಪಟ್ಟದ ಕತ್ತಿಯನ್ನೂ ಹಿಡಿದಿರುತ್ತಾನೆ. ವೀರನು ರಾಜಮಾನ್ಯ ಎಂಬುದನ್ನು ಸೂಚಿಸುವ ಸಲುವಾಗಿ ಸೇವಕನೊಬ್ಬನು ವೀರನಿಗೆ

ರಾಜಛತ್ರಿಯನ್ನು ಹಿಡಿದಿರುವಂತೆ ಬಿಡಿಸಲಾಗಿರುತ್ತದೆ. ರಾಜಛತ್ರಿಯಲ್ಲದಲ್ಲಿ ವೀರನ ಪಟ್ಟದಕುದುರೆಯನ್ನು ಕಲ್ಲಿನ ಒಂದು ಕಡೆ ನಿಂತಿರುವಂತೆ ಬಿಡಿಸಲಾಗಿರುತ್ತದೆ. ಯುದ್ಧರಂಗವು ಅಸ್ತವ್ಯಸ್ತವಾಗಿರುವಂತೆ, ಶಿಲ್ಪವನ್ನೂ ಅಸ್ತವ್ಯಸ್ತವಾಗಿಯೇ ಬಿಡಿಸಲಾಗಿರುತ್ತದೆ. ಇಲ್ಲಿ ಶಿಲ್ಪದ ಅಸ್ತವ್ಯಸ್ತತೆ ಒಂದು ದೋಷವಾಗಿ ಕಾಣುವುದರ ಬದಲು ಪರಿಣಾಮಕಾರಿಯಾಗಿಯೇ ತೋರುತ್ತದೆ. ದೊಡ್ಡಹುಲ್ಲೂರಿನ ವೀರಗಲ್ಲಿನಲ್ಲಿ ಯುದ್ಧಕ್ಕೆ ಮಾಡುವ ಪ್ರಯಾಣವನ್ನೂ ಯುದ್ಧ ವಾದ್ಯಗಳನ್ನೂ ಬಿಡಿಸಲಾಗಿದೆ. ಬೇಗೂರಿನ ವೀರಗಲ್ಲಿನ ಶಿಲ್ಪಿ ತನ್ನ ವೈಯಕ್ತಿಕ ಜೀವನಾನುಭವವನ್ನು ಆ ವೀರಗಲ್ಲಿನಲ್ಲಿ ಹಿಡಿದಿಟ್ಟಿದ್ದಾನೆ. (ಚಿತ್ರ ೨೫೪) ಅವನು ಯುದ್ಧರಂಗದ ಭಯದ ವಾತಾವರಣವನ್ನು ಸಮರ್ಥವಾಗಿ ಹಿಡಿದಿಟ್ಟಿದ್ದಾನೆ. ಒಂದು ಆನೆ ತನ್ನ ಸೊಂಡಿಲಿನಿಂದ ಒಬ್ಬ ವ್ಯಕ್ತಿಯನ್ನು ಎಸೆಯುತ್ತಿದೆ. ರುಂಡ ಕಳೆದ ಮುಂಡಗಳೂ ಹೋರಾಡುತ್ತಿವೆ. ನಿಮಿಷದ ಹಿಂದೆ ವೀರನಾಗಿ ಮಡಿದ ವೀರನೊಬ್ಬನ ಕಣ್ಣುಗಳನ್ನು ಕಾಗೆಯೊಂದು ಕುಕ್ಕುತ್ತಿದೆ ; ಗಾಯಗೊಂಡು ಅಸಹಾಯಕರಾದ ವೀರರನ್ನು ಪರಿಚಾರಕರು ಹೊತ್ತು ಸಾಗಿಸುತ್ತಿದ್ದಾರೆ. ಇದೇ ತಮಗೆ ಸುಸಮಯವೆಂದು ಭಾವಿಸಿದ ಪಿಶಾಚಿಗಳು ಮಡಿದ ವೀರರ ರಕ್ತವನ್ನು ಕುಡಿಯುತ್ತಿವೆ. ಈ ಕಲ್ಲಿನಲ್ಲಿ ಶಿಲ್ಪಿ ನಾಗತ್ತರನ ಪರಾಕ್ರಮವನ್ನು ಸಮರ್ಥವಾಗಿ ನಿರೂಪಿಸಿದ್ದಾನೆ. ಮೇಲೆ ಗಮನಿಸಿದ ವಿವರಗಳನ್ನು ಉದ್ದೇಶಪೂರ್ವಕವಾಗಿ ನೀಡಿರುವುದರಿಂದ ಶಿಲ್ಪಿ ಏನನ್ನೋ ಹೇಳಬಯಸಿರುವುದು ಸ್ಪಷ್ಟ. ಯುದ್ಧದ ಪರಿಣಾಮಗಳನ್ನು ತೀವ್ರವಾಗಿ ಅನುಭವಿಸಿದ ಶಿಲ್ಪಿ ಅದರ ಘೋರ ರೂಪವನ್ನು ಎತ್ತಿ ಹೇಳುತ್ತಿರುವಂತಿದೆ. ಈ ವೀರಗಲ್ಲನ್ನು ಮಾಡಿದ ಶಿಲ್ಪಿ ಯಾರು ಎಂಬುದು ತಿಳಿಯದು. ಅವನು ಯಾರೇ ಆಗಿರಲಿ ಜೀವನವನ್ನು ತೀವ್ರವಾಗಿ ಅನುಭವಿಸಿ ಅದಕ್ಕೆ ಮಿಡಿದಿದ್ದಾನೆ. ತನ್ನ ಹೃದಯದ ಸಂವೇದನೆಯನ್ನು ತನಗೆ ದೊರೆತ ಅವಕಾಶದಲ್ಲಿ ಸಮರ್ಥವಾಗಿ ಅಭಿವ್ಯಕ್ತಗೊಳಿಸಿರುವ ಶ್ರೇಷ್ಠ ಕಲಾವಿದ ಎಂಬುದರಲ್ಲಿ ಸಂಶಯವಿಲ್ಲ. ಕರ್ನಾಟಕದ ಇತರ ವೀರಗಲ್ಲುಗಳು ವೀರರಸದ ಅನುಭವನ್ನುಂಟುಮಾಡಿದರೆ, ಇದು ಒಂದು ರೀತಿಯಲ್ಲಿ ಭಯವನ್ನು ಹುಟ್ಟಿಸಿ ನಮ್ಮನ್ನು ತಲ್ಲಣಗೊಳಿಸುತ್ತದೆ. ಯುದ್ಧದ ಬಗ್ಗೆ, ಯುದ್ಧದ ಪರಿಣಾಮಗಳ ಬಗ್ಗೆ ನಮ್ಮನ್ನು ಎಚ್ಚರಿಸುವುದು ಈ ಶಿಲ್ಪಿಯ ಉದ್ದೇಶವಿರಬಹುದು.

ಇದೇ ಸಂದರ್ಭದಲ್ಲಿ ಮೇಲಿನ ಶಿಲ್ಪದ ವಿವರದಂತೆಯೇ ಶಿಲ್ಪವನ್ನು ಹೊಂದಿರುವ ಮತ್ತೆರಡು ವೀರಗಲ್ಲುಗಳ ಶಿಲ್ಪವನ್ನು ಇಲ್ಲಿ ವಿವರಿಸುವುದು ಸೂಕ್ತ. ಕೋಲಾರದ ಕೋಲಾರಮ್ಮನ ದೇವಾಲಯದಲ್ಲಿರುವ ವೀರಗಲ್ಲು (ಚಿತ್ರ ೧೭೫) ಯುದ್ಧಭೂಮಿಯಲ್ಲಿ ಹದ್ದು (ರಣಹದ್ದು) ಹೆಣಗಳನ್ನು ಕುಕ್ಕಿ ತಿನ್ನುತ್ತಿರುವಂತೆಯೂ ನರಿಯು ಮಡಿದ ವೀರರ ಕರುಳುಗಳನ್ನು ಕಚ್ಚಿ ತೆಗೆಯುತ್ತಿರುವಂತೆಯೂ ಶಿಲ್ಪದ ವಿವರಗಳನ್ನು ಹೊಂದಿದೆ.[೫೭a] ಬೆಂಗಳೂರಿನ ಗೋಖಲೆ

೫೭a ಈ ಬಗ್ಗೆ ನನ್ನ ಗಮನಸೆಳೆದವರು ಮಿತ್ರರಾದ ಶ್ರೀ ವೇ. ಬು. ಸೋಮಶೇಖರ್

ಸಾರ್ವಜನಿಕ ಸಂಸ್ಥೆಯ ಮುಂಭಾಗದಲ್ಲಿರುವ ವೀರಗಲ್ಲು ನರಿಯೊಂದು ತನ್ನ ಹಿಂಗಾಲುಗಳ ಮೇಲೆ ನಿಂತು ಮುಂಗಾಲುಗಳನ್ನು ಹೆಣದ ಮೇಲೆ ಇಟ್ಟು ಮಾಂಸವನ್ನು ತಿನ್ನುತ್ತಿರುವಂತೆ ಶಿಲ್ಪದ ವಿವರವನ್ನು ಹೊಂದಿದೆ. (ಚಿತ್ರ ೨೭೨)

ಇವರ ಕಾಲದ ವೀರಗಲ್ಲುಗಳ ಮತ್ತೊಂದು ಗಮನಾರ್ಹ ಅಂಶವೆಂದರೆ ಬೇಟೆಯ ವೀರಗಲ್ಲುಗಳೂ ಉತ್ತಮ ವಿವರಣಾತ್ಮಕ ಶಿಲ್ಪವನ್ನು ಹೊಂದಿರುವುದು. ಹಂದಿಯ ಬೇಟೆಯ ಶಿಲ್ಪದ ವಿವರಗಳಿರುವ ಹತ್ತಾರು ವೀರಗಲ್ಲುಗಳು ದೊರೆಯುತ್ತವೆ. ಆತಕೂರಿನ ವೀರಗಲ್ಲು, ಯಲಹಂಕದ ವೀರಗಲ್ಲು, ನೆಲವಾಗಿಲು ಮತ್ತು ವಣಕನಹಳ್ಳಿಯ ವೀರಗಲ್ಲುಗಳು, ಮಡಕಶಿರಾ ತಾಲ್ಲೂಕಿನ ವೀರಗಲ್ಲುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ. ಹುಲಿಯ ಬೇಟೆಯ ವೀರಗಲ್ಲುಗಳು ತಾವರೆಕೆರೆ, ಶ್ರವಣಗುಡಿ ಮುಂತಾದ ಕಡೆಗಳಲ್ಲಿ ದೊರೆಯುತ್ತವೆ.

ಇವರ ಕಾಲದ ಬಹುಪಾಲು ವೀರಗಲ್ಲುಗಳ ಮೇಲೆ ಶಾಸನವಿರುವುದಿಲ್ಲ. ಆದರೂ ಅವುಗಳಿರುವ ಸ್ಥಳ, ಅವುಗಳ ಶಿಲ್ಪದ ಸಹಾಯದಿಂದ ವಿವರಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ಮಧ್ಯಯುಗದ ವೀರಗಲ್ಲುಗಳು (ಚಿತ್ರ. ೨೫೮ರಿಂದ ೨೬೬)

ಈ ಮಧ್ಯಯುಗದಲ್ಲಿ ಬಂದ ಎಲ್ಲ ಅರಸುಮನೆತನದ ವೀರಗಲ್ಲುಗಳೂ ಒಂದೇ ರೀತಿ ಇರುತ್ತವೆ. ಒಂದೊಂದನ್ನೂ ಪ್ರತ್ಯೇಕವಾಗಿ ವಿಂಗಡಿಸಿ ಗುರುತಿಸುವ ಯಾವ ಅಂಶವೂ ದೊರೆಯುವುದಿಲ್ಲ. ಆದ್ದರಿಂದ ಅವುಗಳೆಲ್ಲವನ್ನೂ ಒಟ್ಟಿಗೇ ಪರಿಶೀಲಿಸಬಹುದು.

ಕಲ್ಯಾಣಿ ಚಾಲುಕ್ಯರ ಆರಂಭಕಾಲದಲ್ಲಿ, ಶಿಲ್ಪಿಗಳು ವೀರಗಲ್ಲುಗಳನ್ನು ಮಾಡಲು ಬಿಳಿಯ ಕಲ್ಲನ್ನು ಉಪಯೋಗಿಸುತ್ತಿದ್ದರು. ಆದರೆ ದೇವಾಲಯಗಳ ನಿರ್ಮಾಣಕ್ಕೆ ಕರಿಯ ಕಲ್ಲಿನ ಬಳಕೆ ಹೆಚ್ಚಾದಂತೆ, ಅವುಗಳನ್ನು ವೀರಗಲ್ಲುಗಳಿಗಾಗಿ ಉಪಯೋಗಿಸುವ ಪರಿಪಾಠವೂ ಬೆಳೆದಂತೆ ತೋರುತ್ತದೆ. ಆದಕಾರಣ ಇವರ ಕಾಲದಲ್ಲಿ ಮೂಡಿ ಬಂದ ಬಹುಪಾಲು ವೀರಗಲ್ಲುಗಳು, ನಿಷಿಧಿಗಲ್ಲುಗಳು, ಮಹಾಸತಿಕಲ್ಲುಗಳು ಕರಿಯ ಕಲ್ಲಿನಿಂದ ಮಾಡಲ್ಪಟ್ಟಿವೆ. ಇವುಗಳೊಂದಿಗೆ ಬಿಳಿಯ ಕಲ್ಲಿನ ಬಳಕೆಯನ್ನು ಹೋಲಿಸಿ ನೋಡಿದಾಗ ಅವುಗಳ ಬಳಕೆ ಕಡಿಮೆಯೆಂದೇ ಹೇಳಬೇಕು.

ಕರಿಯ ಕಲ್ಲು (ಬಳಪದ ಕಲ್ಲು) ಸೂಕ್ಷ್ಮವಾದ ವಿವರಗಳನ್ನು ಬಿಡಿಸುವುದಕ್ಕೆ ಸಹಾಯಕವಾಗಿರುವುದರಿಂದ, ಶಿಲ್ಪಿಗಳು ತಮ್ಮ ಕುಸುರಿ ಕಲೆಯ ಪ್ರದರ್ಶನಕ್ಕಾಗಿ ಇದನ್ನು ಬಳಸಲು ಆರಂಭಿಸಿದರೆಂದು ತೋರುತ್ತದೆ. ವೀರನ ಹೋರಾಟದ ಚಿತ್ರಣವನ್ನು ನಿರೂಪಿಸುವಲ್ಲಿ, ಚಲನೆ ಮತ್ತು ಕ್ರಿಯೆಯನ್ನು ಸಮರ್ಥವಾಗಿ ನಿರೂಪಿಸುವಲ್ಲಿ ಈ ಕಲ್ಲು ನೆರವಾಗಿದೆ.

ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಶೈವಧರ್ಮ ಪ್ರಬಲವಾಗಿದ್ದುದರಿಂದ ವೀರಗಲ್ಲಿನ, ಮೇಲಿನ ಹಂತದಲ್ಲಿ ಶೈವ ಧರ್ಮದ ಸಂಕೇತಗಳ ವಿವರ ಇರುತ್ತದೆ.

ಗಂಗರ ಅಥವಾ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳಲ್ಲಿ ಶೌರ್ಯದ ಗಾಂಭೀರ್ಯ ವ್ಯಕ್ತವಾಗಿದ್ದರೆ, ಇವರ ವೀರಗಲ್ಲುಗಳ ಶಿಲ್ಪದಲ್ಲಿ ಲಾಲಿತ್ಯ, ಮಾಧುರ್ಯ ಗುಣಗಳು ವ್ಯಕ್ತವಾಗಿವೆ. ರಾಷ್ಟ್ರಕೂಟರ ಗಂಗರ ಕಾಲದ ಶಿಲ್ಪಿಗಳು, ಬಹುಶಃ ತಾವು ತರಬೇಕಾಗಿದ್ದ ಯುದ್ಧದ ಪರಿಣಾಮಕಾರೀ ಚಿತ್ರಕ್ಕೆ ಕರಿಯಕಲ್ಲಿನ ಆಯ್ಕೆ ಸರಿಯಲ್ಲವೆಂದು ಬಿಟ್ಟಿರಬೇಕು. ಎರಡೂ ಬಗೆಯ ಕಲ್ಲಿನಲ್ಲಿ ಮೂಡಿ ಬಂದಿರುವ ಪರಿಣಾಮವನ್ನೂ, ಅದರ ಹಿಂದಿರುವ ಉದ್ದೇಶವನ್ನೂ ಗಮನಿಸಿದಾಗ ಈ ಅಭಿಪ್ರಾಯ ಸ್ಪಷ್ಟವಾಗುತ್ತದೆ.

ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ಹಂತ, ವೀರನು ಸ್ವರ್ಗದಲ್ಲಿಯೋ ಅಥವಾ ತನ್ನ ಇಷ್ಟ ದೈವದ ಸಾನ್ನಿಧ್ಯದಲ್ಲಿಯೋ ಇರುವ ಹಂತಗಳು ಸುಂದರವಾಗಿದ್ದು ತಮ್ಮ ಪ್ರಶಾಂತ ವಾತಾವರಣವನ್ನು ಕಲ್ಯಾಣದ ಚಾಲುಕ್ಯರ ಕಾಲದ ವೀರಗಲ್ಲುಗಳು ತೋರುತ್ತವೆ. ಇವರ ಅವಧಿಯ ಎಲ್ಲಾ ವೀರಗಲ್ಲುಗಳಿಗೂ ಪೂರ್ಣ ಆಕೃತಿಯನ್ನು ನೀಡುವ ಪ್ರಯತ್ನವನ್ನು ಶಿಲ್ಪಿಗಳು ಮಾಡಿದ್ದಾರೆ.

ಆದರೆ, ಈ ಕಾಲದ ಬಹುಪಾಲು ವೀರಗಲ್ಲುಗಳು ಏಕತಾನತೆಯ ದೋಷವನ್ನು ಹೊಂದಿವೆ ಒಂದೇ ಊರಿನಲ್ಲಿರುವ ವೀರಗಲ್ಲುಗಳು, ಕೆಲವೊಮ್ಮೆ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಒಂದೇ ರೀತಿಯಲ್ಲಿರುತ್ತವೆ, ಇಲ್ಲವೆ ಒಂದರ ಪಡಿಯಚ್ಚು ಇನ್ನೊಂದಾಗಿರುತ್ತದೆ. ಘಟ್ಟಘಟ್ಟಗಳಲ್ಲಿ ಬೆಳೆದು ಬಂದ ವೀರಗಲ್ಲುಗಳ ಶಿಲ್ಪ, ಒಂದು ಸಂಪ್ರದಾಯದ ನಿಯಮಗಳನ್ನು ಹಾಕಿಕೊಂಡು ಅವುಗಳ ಅಂಧಾನುಕರಣೆಗೆ ಆರಂಭಿಸಿತು. ಈ ಮಾತು ಸಾಹಿತ್ಯ, ವಾಸ್ತುಶಿಲ್ಪ, ಮೂರ್ತಿ ಶಿಲ್ಪಗಳಿಗೂ ಅನ್ವಯವಾಗುತ್ತದೆ.

ಆನಂತರದ ವೀರಗಲ್ಲುಗಳು

ವಿಜಯನಗರದ ಕಾಲದ ವೀರಗಲ್ಲುಗಳು (ಚಿತ್ರ. ೨೬೭ ರಿಂದ ೨೭೬)

ಈ ಅವಧಿಯಲ್ಲಿ ವಾಸ್ತು ಮತ್ತು ಮೂರ್ತಿಶಿಲ್ಪಗಳಲ್ಲಿ ಕಾಣುವ ಹಠಾತ್ತನೆಯ ಬದಲಾವಣೆಯನ್ನು ವೀರಗಲ್ಲುಗಳಲ್ಲಿಯೂ ಕಾಣಬಹುದಾಗಿದೆ. ಎಲ್ಲೋ ಕೆಲವೆಡೆಗಳಲ್ಲಿ ಮಾತ್ರ ಹಿಂದಿನ ಸಂಪ್ರದಾಯ ಮುಂದುವರಿದಿರುವುದನ್ನು ಗಮನಿಸಬಹುದು. ಕಲ್ಯಾಣದ ಚಾಲುಕ್ಯರ ಕಾಲದ ವೀರಗಲ್ಲುಗಳ ಸಂಪ್ರದಾಯವನ್ನು ಹೋಲುವ ವೀರಗಲ್ಲುಗಳು ಕಾಯ್ಕಿಣಿ ಮುಂತಾದ ಉತ್ತರಕನ್ನಡ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಮಾತ್ರ ಕಾಣ ಸಿಗುತ್ತವೆ. (ಚಿತ್ರ. ೨೬೭)

ವಿಜಯನಗರದ ಕಾಲದ ವೀರಗಲ್ಲುಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುವುದು, ಒರಟಾದ ಬಿಳಿಯ ಕಲ್ಲಿನ ಉಪಯೋಗ ಮತ್ತು ಒರಟಾದ ಶಿಲ್ಪ. ಈ ರೀತಿಯ ವ್ಯತ್ಯಾಸಕ್ಕೆ ಕಾರಣ, ಕರಿಯಕಲ್ಲು ದೊರೆಯದಿದ್ದುದೋ ಅಥವಾ ಶಿಲ್ಪಿಗಳು ಉದ್ದೇಶ ಪೂರ್ವಕವಾಗಿ ಹೀಗೆ ಮಾಡಿದರೋ ಹೇಳುವುದು ಕಷ್ಟ. ಶಿಲೆಯ ಅಭಾವ ಇಂಥ ಬದಲಾವಣೆಗೆ ಕಾರಣ ಎಂಬ ತೀರ್ಮಾನಕ್ಕೆ ಬರುವುದು ಸಮಂಜಸವಲ್ಲವೆಂದು ತೋರುತ್ತದೆ. ಈ ಹಿಂದೆ ಗಮನಿಸಿದಂತೆ, ವೀರಗಲ್ಲುಗಳ ಶಿಲ್ಪದ ಎಲ್ಲ ರೀತಿಯ ಬೆಳವಣಿಗೆಯೂ ತನ್ನ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪದ ಬೆಳವಣಿಗೆಯನ್ನೇ ಅವಲಂಬಿಸಿತ್ತು, ಮತ್ತು ಈ ವೀರಗಲ್ಲುಗಳು ಆ ಕಲಾ ಪ್ರಕಾರದ ಒಂದು ಅಂಗವಾಗಿ ಹೇಗೆ ಬೆಳೆಯಿತು ಎಂಬುದು ಈಗಾಗಲೇ ಸ್ಪಷ್ಟವಾಗಿದೆ. ಆದ್ದರಿಂದ ಇದಕ್ಕೆ ಕಾರಣ, ಶಿಲೆಯ ಅಭಾವವೆಂದಾಗಲೀ, ಪ್ರಾದೇಶಿಕ ಲಕ್ಷಣವೆಂದಾಗಲೀ ಹೇಳುವುದು ಸೂಕ್ತವಲ್ಲ. ವೀರಗಲ್ಲುಗಳೂ ತಮ್ಮ ಸಮಕಾಲೀನ ವಾಸ್ತು ಮತ್ತು ಮೂರ್ತಿ ಶಿಲ್ಪದ ರೀತಿಯನ್ನೇ ಅನುಸರಿಸಿದವೆಂದು ಹೇಳಬೇಕು.

ಏಕೆಂದರೆ, ಇಂಥ ಬದಲಾವಣೆಯನ್ನು ಶಿಲೆಯ ಆಯ್ಕೆಯಲ್ಲಿ ಮಾತ್ರವಲ್ಲದೆ, ಶಿಲ್ಪದ ವಿವರಗಳಲ್ಲಿಯೂ ಗಮನಿಸಬಹುದು. ಹಿಂದಿನ ಸಂಪ್ರದಾಯದಂತೆ ಘಟನೆಗಳನ್ನು ಹಂತಹಂತಗಳಲ್ಲಿ ನಿರೂಪಿಸುವ ತಂತ್ರವನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸಿಲ್ಲ. ಗಂಗರ ಕಾಲದ ಕೆಲವು ವೀರಗಲ್ಲುಗಳ ಹಾಗೆ, ಯುದ್ಧ ಸನ್ನದ್ಧನಾಗಿರುವಂತೆ ವೀರನೊಬ್ಬನ ಚಿತ್ರವನ್ನು ಮಾತ್ರ ಬಿಡಿಸಲಾಗಿರುತ್ತದೆ ಮತ್ತು ಅಲ್ಲಿನ ಹಾಗೆಯೇ ವೀರನ ಚಿತ್ರಕ್ಕೇ ಪ್ರಾಮುಖ್ಯವನ್ನು ನೀಡಲಾಗಿರುತ್ತದೆ. ಈ ಕಾಲದ ಒಂದೇ ವೀರಗಲ್ಲು ಇಬ್ಬರು ಅಥವಾ ಮೂವರ ಸ್ಮಾರಕವಾಗಿರುವುದುಂಟು. ವೀರನ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಶಿವಲಿಂಗ, ಬಸವನನ್ನು ಸಾಮಾನ್ಯವಾಗಿ ಬಿಡಿಸಿರುತ್ತಾರೆ. ವೀರನೊಂದಿಗೆ ಆತನ ಹೆಂಡತಿಯು ಸಹಗಮನ ಮಾಡಿದ್ದರೆ, ಆ ವಿವರಗಳೂ ಅದೇ ವೀರಗಲ್ಲುಗಳಲ್ಲಿ ದೊರೆಯುತ್ತವೆ. ವೀರನ ಎಡಭಾಗಕ್ಕೆ , ತನ್ನ ಕೈಯೆತ್ತಿ ಮಹಿಳೆ ನಿಂತಿರುತ್ತಾಳೆ. ಕೆಲವು ವೀರಗಲ್ಲುಗಳಲ್ಲಿ ವೀರನೂ ಆತನ ಹೆಂಡತಿಯೂ ಕೈ ಜೋಡಿಸಿ ನಿಂತಿರುತ್ತಾರೆ. ಇದರ ಪಕ್ಕದಲ್ಲೇ ಒಕ್ಕೈ ಮಾಸ್ತಿಕಲ್ಲನ್ನು ಬಿಡಿಸಿರುತ್ತಾರೆ, ಕೆಲವು ವೀರಗಲ್ಲುಗಳು ಬಿಳಿಯ ಕಲ್ಲಿನವೇ ಆಗಿದ್ದರೂ, ಹಿಂದಿನ ಹಂತ ಹಂತಗಳಲ್ಲಿ ಶಿಲ್ಪ ಬಿಡಿಸುವ ಸಂಪ್ರದಾಯವನ್ನು ಅನುಸರಿಸಿರುವುದುಂಟು. ಇಂಥ ಕಡೆಗಳಲ್ಲಿ ಹಂತಗಳ ಸೂತ್ರವನ್ನು ಅನುಸರಿಸಿಯೂ ಕೆಲವಾರು ವಿವರಗಳನ್ನು ಹೊಸದಾಗಿ ತರಲು ಮಾಡಿರುವ ಪ್ರಯತ್ನವನ್ನು ಗಮನಿಸಬಹುದು. ಕೆಳಗಿನ ಹಂತದಲ್ಲಿ, ಯುದ್ಧದಲ್ಲಿ ಭಾಗವಹಿಸಿದಂತೆಯೋ, ಯುದ್ಧಸನ್ನದ್ಧನಾಗಿರುವಂತೆಯೋ ವೀರನ ಶಿಲ್ಪವನ್ನು ಬಿಡಿಸಲಾಗಿರುತ್ತದೆ. ಎರಡನೆಯ ಹಂತದಲ್ಲಿ, ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ವಿವರಗಳನ್ನು ಹೊಂದಿರಬೇಕಾದ ಹಂತದಲ್ಲಿ ವೀರ ಮತ್ತು ಆತನ ಹೆಂಡತಿ ಕೈಮುಗಿದು ಪದ್ಮಾಸನದಲ್ಲಿ ಕುಳಿತಿರುತ್ತಾರೆ ಅಥವಾ ಕೆಲವೊಮ್ಮೆ

ಕೈ ಮುಗಿದು ನಿಂತಿರುತ್ತಾರೆ. ವಿಜಯನಗರ ಕಾಲದ ಬಹುಪಾಲು ವೀರಗಲ್ಲುಗಳ ಮೇಲೆ ಅಂದರೆ ಶಿಲ್ಪದ ನಡುವೆ ಎರಡೂ ಕಡೆ ಎರಡು ರಂಧ್ರಗಳನ್ನು ಸುಮಾರು ಒಂದು ಇಂಚು ಅಗಲ ಮತ್ತು ಆಳದಷ್ಟು ಮಾಡಿರುತ್ತಾರೆ. ಇವುಗಳನ್ನು ಶಿಲ್ಪಿಗಳು ಉದ್ದೇಶಪೂರ್ವಕವಾಗಿಯೇ ಮಾಡಿರುವರೆಂಬ ಬಗ್ಗೆ ಸಂಶಯವಿಲ್ಲ. ಆದರೆ ಯಾವ ಕಾರಣಕ್ಕಾಗಿ ಈ ರಂಧ್ರಗಳನ್ನು ಮಾಡಿದ್ದಾರೆಯೋ ಹೇಳಲಾಗುವುದಿಲ್ಲ. (ಚಿತ್ರ ೨೬೮,೨೬೯, ೨೭೦)

ಈ ಕಾಲದ ಬಹುಪಾಲು ವೀರಗಲ್ಲುಗಳ ಮೇಲೆ ಶಾಸನ ಇರುವುದಿಲ್ಲ. ಕಲ್ಲು ಮತ್ತು ಶಿಲ್ಪದ ಆಧಾರದ ಮೇಲೆಯೇ ಇವುಗಳನ್ನು ಗುರುತಿಸಬೇಕಾಗುತ್ತದೆ. ವಿಜಯನಗರ ಕಾಲದ ಮತ್ತು ಗಂಗರ ಕಾಲದ ವೀರಗಲ್ಲುಗಳು ಮೇಲುನೋಟಕ್ಕೆ ಒಂದೇ ರೀತಿ ಕಂಡು ಬರುತ್ತವೆ. ಇವುಗಳಿಗಿರುವ ಮುಖ್ಯ ವ್ಯತ್ಯಾಸವೆಂದರೆ, ವಿಜಯನಗರ ಕಾಲದ ಕಲ್ಲುಗಳಲ್ಲಿ ವೀರನನ್ನು ಆಲೀಢಾಸನದಲ್ಲಿ ಬಿಡಿಸಲಾಗಿರುವುದಿಲ್ಲ ; ವೀರಗಲ್ಲುಗಳು ಗಿಡ್ಡಾಗಿರುತ್ತವೆ ಮತ್ತು ಮೇಲ್ಭಾಗದಲ್ಲಿ ಸಾಮಾನ್ಯವಾಗಿ ಧಾರ್ಮಿಕ ಸಂಕೇತಗಳಾದ ಸೂರ್ಯ, ಚಂದ್ರ, ಶಿವಲಿಂಗ, ಬಸವ, ಶಂಖ, ಚಕ್ರ ಪದ್ಮಗಳನ್ನು ಹೊಂದಿರುತ್ತವೆ. ಮತ್ತೊಂದು ಸೂಕ್ಷ್ಮವಾದ ವ್ಯತ್ಯಾಸವಿರುವುದು ವೀರನ ಉಡುಪುಗಳಲ್ಲಿ. ಗಂಗರ ಕಾಲದ ವೀರಗಲ್ಲುಗಳಲ್ಲಿ ಸರ್ವಸಾಮಾನ್ಯವಾಗಿ ಕಂಡು ಬರುವ ಬಾಕು ಈ ವೀರಗಲ್ಲುಗಳ ಶಿಲ್ಪದಲ್ಲಿ ಕಂಡು ಬರುವುದಿಲ್ಲ; ಬದಲಾಗಿ ವೀರನ ಸೊಂಟದಲ್ಲಿ ಕಿರುಗತ್ತಿ ಇರುತ್ತದೆ.

ವಿಕ್ರಮಾದಿತ್ಯನ ಬಹುಗುಣತೇಜನ ವೀರಗಲ್ಲುಗಳು

ಸಾಮಾನ್ಯವಾಗಿ, ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಸಂಪ್ರದಾಯಕ್ಕನುಗುಣವಾಗಿಯೇ ಶಿಲ್ಪಿಗಳು ವೀರಗಲ್ಲುಗಳ ಶಿಲ್ಪವನ್ನು ಬಿಡಿಸುತ್ತಿದ್ದರು. ಹೀಗೆ ಸಂಪ್ರದಾಯವನ್ನು ಅನುಸರಿಸಿಯೂ, ಕೆಲವಾರು ಶಿಲ್ಪಿಗಳು ತಮ್ಮ ವೈಯಕ್ತಿಕತೆಯನ್ನು ತೋರಿರುವುದುಂಟು. ಈ ಅಂಶವನ್ನು ಹಲವಾರು ವೀರಗಲ್ಲುಗಳ ಶಿಲ್ಪವನ್ನು ಗಮನಿಸಿದಾಗ ತಿಳಿಯಬಹುದು. ಉದಾಹರಣೆಗೆಂದು ಬೇಗೂರಿನ ವೀರಗಲ್ಲು, ಮಾವಳಿಯ ವೀರಗಲ್ಲು, ಶ್ರವಣಗುಡಿಯ ವೀರಗಲ್ಲು, ಬನವಾಸಿಯ ವೀರಗಲ್ಲು, ಲಕ್ಷ್ಮೇಶ್ವರದ ವೀರಗಲ್ಲು ಮುಂತಾದ ವೀರಗಲ್ಲುಗಳನ್ನು ನೀಡಬಹುದು.

ಈ ಹಿಂದೆ ಗಮನಿಸಿದಂತೆ ವೀರಗಲ್ಲುಗಳ ಪಾಠದಿಂದ ವೀರಗಲ್ಲುಗಳನ್ನು ಮಾಡಿದ ಶಿಲ್ಪಿಗಳ ಹೆಸರುಗಳು ತಿಳಿದು ಬರುತ್ತವೆ. ಎಲ್ಲಾ ವೀರಗಲ್ಲುಗಳಲ್ಲಿಯೂ ಶಿಲ್ಪಿಯ ಹೆಸರು ದೊರೆಯುತ್ತದೆ ಎಂದು ಹೇಳಲಾಗದು. ಒಬ್ಬನೇ ಹಲವಾರು ವೀರಗಲ್ಲುಗಳನ್ನು ಮಾಡಿದ್ದರೂ ಅವನು ತಾನು ಮಾಡಿದ ಎಲ್ಲಾ ವೀರಗಲ್ಲುಗಳ ಮೇಲೂ ತನ್ನ ಹೆಸರನ್ನು ಬರೆದಿರುವ ಸಾಧ್ಯತೆ ಇರುವುದಿಲ್ಲ. ಒಬ್ಬನೇ ಮಾಡಿದ ಎರಡು ವೀರಗಲ್ಲುಗಳ ನಿದರ್ಶನಗಳು ಕಡಿಮೆ ಸಂಖ್ಯೆಯಲ್ಲಾದರೂ

ಸಿಗುತ್ತವೆ. ಆದರೆ ಎರಡೇ ವೀರಗಲ್ಲುಗಳ ಶಿಲ್ಪದ ಆಧಾರದ ಮೇಲೆ ಅವನ ವೈಶಿಷ್ಟ್ಯವನ್ನು ಗುರುತಿಸುವುದು ಅಸಾಧ್ಯದ ಪ್ರಯತ್ನವಾಗುತ್ತದೆ. ಕೋಲಾರ ಜಿಲ್ಲೆಯ ಕೋಲಾರ ಮತ್ತು ಮುಳುಬಾಗಿಲು ತಾಲ್ಲೂಕುಗಳಲ್ಲಿ ನಾಲ್ಕಾರು ವೀರಗಲ್ಲುಗಳನ್ನು ಮಾಡಿದ 'ವಿಕ್ರಮಾದಿತ್ಯ ಬಹುಗುಣ ತೇಜನ್' ಎಂಬ ಶಿಲ್ಪಿಯ ನಿದರ್ಶನ ದೊರೆಯುತ್ತದೆ. ಅವನ ಹೆಸರಿರುವ ವೀರಗಲ್ಲುಗಳು ನಾಲ್ಕು ದೊರೆಯುತ್ತವೆ ಮತ್ತು ಆ ವೀರಗಲ್ಲುಗಳ ಪಕ್ಕದಲ್ಲಿಯೇ ಅವನು ಮಾಡಿದುದೆಂದೇ ಹೇಳಬಹುದಾದ, ಆದರೆ ಶಾಸನ ಪಾಠವಿಲ್ಲದ ಎರಡು ಮೂರು ವೀರಗಲ್ಲುಗಳೂ ದೊರೆಯುತ್ತವೆ. ಇದೇ ವಿಕ್ರಮಾದಿತ್ಯ ಬಹುಗುಣ ತೇಜನು ಈಗಿನ ಆಂಧ್ರಪ್ರದೇಶದ ಪುಂಗನೂರು ತಾಲ್ಲೂಕಿನ ಕೃಷ್ಣಲೆ ಎಂಬ ಗ್ರಾಮದಲ್ಲಿ ಐದು ವೀರಗಲ್ಲುಗಳನ್ನು ಮಾಡಿರುವನೆಂದು ತಿಳಿದು ಬರುತ್ತದೆ. ಅವನ ಹೆಸರು ಉತ್ಕೀರ್ಣವಾಗಿರುವ ವೀರಗಲ್ಲುಗಳ ಆಧಾರದ ಮೇಲೆ ಅವುಗಳ ಶಿಲ್ಪವನ್ನು ಅಧ್ಯಯನ ಮಾಡಿ ಅವನ ಶಿಲ್ಪವನ್ನು ಅಧ್ಯಯನ ಮಾಡಿ ಅವನ ಕಲೆಯ ಕೆಲವಾರು ವಿಶಿಷ್ಟ ಗುಣಗಳನ್ನು ಈ ರೀತಿಯಲ್ಲಿ ಗುರುತಿಸಬಹುದು:

ಕೋಲಾರ ಜಿಲ್ಲೆಯಲ್ಲಿನ ಗಂಗರ, ನೊಳಂಬರ ವೀರಗಲ್ಲುಗಳು ಸಾಮಾನ್ಯವಾಗಿ ಹಸಿ ಬಿಳಿಯ ಕಲ್ಲಿನಿಂದ ಮಾಡಲ್ಪಟ್ಟಿರುತ್ತವೆ. ಆದರೆ ಇವನು ಹಸಿ ಮತ್ತು ಸುಟ್ಟು ತೆಗೆದ ಬಿಳಿಯ ಕಲ್ಲೆರಡನ್ನೂ ವೀರಗಲ್ಲುಗಳ ರಚನೆಯಲ್ಲಿ ಉಪಯೋಗಿಸಿದ್ದಾನೆ. ಎಲ್ದೂರಿನ ವೀರಗಲ್ಲನ್ನು ಮಾಡಲು ಹಸಿಯ ಕಲ್ಲನ್ನು ಉಪಯೋಗಿಸಿದ್ದರೆ, ತಾವರೆಕೆರೆಯಲ್ಲಿರುವ ವೀರಗಲ್ಲುಗಳನ್ನು ಮಾಡಲು ಸುಟ್ಟಕಲ್ಲಿನ ಚಪ್ಪಡಿಗಳನ್ನು ಉಪಯೋಗಿಸಿದ್ದಾನೆ.

ಮೂಲಭೂತವಾಗಿ ತನ್ನ ಕಾಲದಲ್ಲಿ ಪ್ರಚಲಿತವಾದ ಸಂಪ್ರದಾಯಕ್ಕನುಗುಣವಾಗಿಯೇ ಇವನೂ ವೀರಗಲ್ಲಿನ ಶಿಲ್ಪವನ್ನು ಬಿಡಿಸಿದ್ದಾನೆ. ಆದರೆ ಇವನು ನೀಡಿರುವ ವಿವರಗಳು ಇವನ ವೈಶಿಷ್ಟ್ಯವನ್ನು ಎತ್ತಿ ಹೇಳುತ್ತವೆ. ವೀರನು ಹೋರಾಟ ಮಾಡುತ್ತಿರುವಂತೆ ಚಿತ್ರಿಸದಿದ್ದರೂ, (ಅಂದರೆ, ಎದುರಾಳಿಯನ್ನು ಕಂಡರಿಸದಿದ್ದರೂ) ವೀರನು ಮಾಡಿದ ಹೋರಾಟದ ಸ್ವರೂಪವನ್ನು ಕೆಲವಾರು ಸಂಕೇತಗಳ ಮೂಲಕ ತಿಳಿಸುತ್ತಾನೆ. ಮತ್ತೊಂದು ಗಮನಾರ್ಹವಾದ ಅಂಶವೆಂದರೆ ಇವನು ತಾನು ಮಾಡಿರುವ ಎಲ್ಲಾ ವೀರಗಲ್ಲುಗಳಲ್ಲಿಯೂ, ಬಲಭಾಗಕ್ಕೆ ಕಳಶ (ಪೂರ್ಣಕುಂಭ)ವನ್ನು ಬಿಡಿಸಿರುತ್ತಾನೆ. ವೀರಗಲ್ಲಿನ ಮೇಲೆ ಕಳಶವನ್ನು ಬಿಡಿಸುವುದು ಕರ್ನಾಟಕದಲ್ಲಿ ವಿರಳವಾಗಿ ಪ್ರಚಲಿತವಿತ್ತು. ನಗರಗೆರೆಯ ವೀರಗಲ್ಲು, ಮತ್ತೂರಿನ ವೀರಗಲ್ಲು[೫೮] ಮತ್ತು ಚನ್ನಗಿರಿ ತಾಲ್ಲೂಕಿನ ಮಹಾಸತಿಕಲ್ಲೊಂದರಲ್ಲಿಯೂ ಇದನ್ನು ಗಮನಿಸಬಹುದು.[೫೯] ಈ ಹಿಂದೆ ಗಮನಿಸಿರುವಂತೆ,

೫೮ Cousens : The Chalukyan Architecture. ಚಿತ್ರ. CLIV

೫೯ ಎಂ. ಚಿದಾನಂದಮೂರ್ತಿ : ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು.

"ವೀರನು ದೇವಲೋಕವನ್ನು ಸೇರಿದ ಪುರುಷನಾದುದರಿಂದ ಅವನ ವೀರಗಲ್ಲಿಗೆ ಕಳಶ, ಕನ್ನಡಿ, ಹೂವು, ತಾಂಬೂಲ, ಛತ್ರಿಯ ಮರ್ಯಾದೆಗಳನ್ನೂ ಊರಿನ ಜನ ಸಲ್ಲಿಸುತ್ತಿದ್ದರು" ಎಂಬ ಅಂಶವನ್ನು ಇಲ್ಲಿ ನೆನೆಯಬಹುದು.[೬೦]

ಪೂರ್ಣಕುಂಭಕ್ಕೆ ಭಾರತೀಯ ಶಿಲ್ಪದಲ್ಲಿ ಮತ್ತು ಪುರಾಣಗಳಲ್ಲಿ ಮಹತ್ವದ ಸ್ಥಾನ ದೊರೆತಿದ್ದು, ಅದು ಶುಭದ ಸಂಕೇತ ಎಂಬ ಗೌರವವನ್ನು ಪಡೆದಿದೆ.[೬೧] ಶಿಲ್ಪ ಮತ್ತು ಪುರಾಣಗಳಲ್ಲಿ ಮಹತ್ವದ ಸ್ಥಾನ ಪಡೆದಿರುವ "ಪೂರ್ಣಕಳಶ"ದ ವಿವರವನ್ನು ಉದ್ದೇಶಪೂರ್ವಕವಾಗಿಯೇ ಈ ಶಿಲ್ಪಿ ಕಂಡರಿಸಿರುವುದನ್ನು ಗಮನಿಸಿದರೆ ಇವನ ಔಚಿತ್ಯ ಪ್ರಜ್ಞೆ ಮನವರಿಕೆಯಾಗುತ್ತದೆ.

ಇವನು ಕಡೆದಿರುವ ವೀರಗಲ್ಲುಗಳ ಎಡಭಾಗದಲ್ಲಿ ವೀರನನ್ನು ಪುಷ್ಪಕ ವಿಮಾನದಲ್ಲಿ ಅಪ್ಸರೆಯರು ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಹೋಗುತ್ತಿರುವಂತೆ ಬಿಡಿಸಲಾಗಿರುತ್ತದೆ.

ಇವನ ನಿಜವಾದ ಕಲೆಯ ಪರಿಚಯವಾಗುವುದು ತಾವರೆಕೆರೆಯ ವೀರಗಲ್ಲಿನಲ್ಲಿ (ಚಿತ್ರ ೪೭). ಇಲ್ಲಿನ ವೀರನು ಎಮ್ಮೆಯ ಕರುವನ್ನು ಕೊಂದು ಹೋದ ಹೆಬ್ಬುಲಿಯನ್ನು ಜಾಮದೊಳಗೆ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿ ಅದನ್ನು ಕೊಲ್ಲುತ್ತಾನೆ. ಈ ವಿಷಯ ವೀರಗಲ್ಲಿನ ಪಾಠದಿಂದ ತಿಳಿಯುತ್ತದೆ. ಆದರೆ ವೀರನು ಮಡಿದನೆಂಬ ಅಂಶ ತಿಳಿದುಬರುವುದಿಲ್ಲ. ವೀರನು ಹುಲಿಯೊಂದಿಗೆ ಹೋರಾಡುತ್ತಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಿದರೆ, ವೀರನೂ ಅದರೊಂದಿಗೆ ಮಡಿದಿರಬಹುದು ಎಂಬ ಸಂಶಯ ಬರಬಹುದೆಂಬ ಕಾರಣದಿಂದಾಗಿ ವಿಕ್ರಮಾದಿತ್ಯನು ವೀರನ ಚಿತ್ರವನ್ನು ಕಂಡರಿಸಿಲ್ಲ. ವೀರನು ಮಡಿದಿರಬಹುದಾದ ಅಂಶವನ್ನು ತಿಳಿಸುವ ಯಾವ ವಿವರಗಳನ್ನೂ ಅವನು ಬಿಡಿಸಿಲ್ಲ. ಬದಲಾಗಿ ಎರಡು ನಾಯಿಗಳು ಹುಲಿಯೊಡನೆ ಹೋರಾಡುತ್ತಿರುವಂತೆ ಚಿತ್ರಿಸಿದ್ದಾನೆ. ಈ ರೀತಿಯ ಚಿತ್ರಣವನ್ನು ನೀಡುವುದರ ಮೂಲಕ ಶಿಲ್ಪಿ ವೀರಗಲ್ಲನ್ನು ವೀರನ ಪ್ರತಿಜ್ಞೆಯನ್ನು ಸಾರುವ ಕೀರ್ತಿಶಿಲೆಯನ್ನಾಗಿಯೂ ಮತ್ತು ವೀರನಿಗೆ ಹೋರಾಟದಲ್ಲಿ ಸಹಾಯಮಾಡಿ ಮಡಿದಿರಬಹುದಾದ ನಾಯಿಗಳಿಗೆ ಸ್ಮಾರಕವನ್ನಾಗಿಯೂ ಮಾಡಿದ್ದಾನೆ.

ವೀರಗಲ್ಲುಗಳಲ್ಲಿ ಒಂದೊಂದು ರೀತಿಯಲ್ಲಿ ಒಂದೊಂದು ಏಕತಾನತೆ ಇರುವುದನ್ನು ಗಮನಿಸಬಹುದು. ಆದರೆ ಪ್ರತಿಭಾವಂತ ಶಿಲ್ಪಿಗಳು ತಮ್ಮ ಸಮಕಾಲೀನ ಸಂಪ್ರದಾಯದಂತೆ ವೀರಗಲ್ಲುಗಳನ್ನು ಕಂಡರಿಸಿದ್ದರೂ ತಮ್ಮ ಪ್ರತಿಭೆಯ ಮೆರುಗನ್ನು ಅವುಗಳಿಗೆ ನೀಡಿ

---

೬೦ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೨೫೦
೬೧ ಈ ಬಗ್ಗೆ ವಿವರಗಳಿಗೆ ನೋಡಿ : Prithivi. K. Agarawala Puranakalasa : ಪು. ೧–೨

ಪರಿಣಾಮಕಾರಿಯಾದ ಶಿಲ್ಪವನ್ನು ತಯಾರು ಮಾಡಿರುವುದು ಸ್ಪಷ್ಟವಾಗಿದೆ. ಈ ಬಗ್ಗೆ ಸುದೀರ್ಘವಾದ ಅಧ್ಯಯನ ನಡೆಸಲು ಅವಕಾಶವಿದೆ ಎಂಬುದನ್ನು ಸೂಚಿಸಬಯಸುತ್ತೇವೆ.

ವೀರಗಲ್ಲುಗಳ ಶಿಲ್ಪದ ಬಗ್ಗೆ ಇಷ್ಟು ದೀರ್ಘವಾಗಿ ಪರಿಶೀಲಿಸುವಾಗ, ಕರ್ನಾಟಕದಲ್ಲಿ ಶಿಲ್ಪದ ವಿಶಿಷ್ಟ ಪ್ರಾಕಾರವಾಗಿ ಬೆಳೆದ ಶಾಸನ ಪ್ರಭೇದ'ಗಳ ಶಿಲ್ಪದ ಬಗ್ಗೆ ಸ್ವಲ್ಪಮಟ್ಟಿಗಾದರೂ ಗಮನಹರಿಸುವುದು ಸೂಕ್ತವೆಂದು ತೋರುತ್ತದೆ. ಆದರೆ ಆರಂಭಕಾಲದಿಂದಲೂ ವೀರಗಲ್ಲುಗಳ ಜೊತೆಯಲ್ಲಿಯೇ ಬೆಳೆದುಬಂದ ನಿಷಿಧಿಕಲ್ಲು, ಮಾಸ್ತಿಗಲ್ಲು, ಸಿಡಿತಲೆಕಲ್ಲು, ಧಾರ್ಮಿಕ ಅಥವಾ ರಾಜಕೀಯ ಕಾರಣಗಳಿಗಾಗಿ ಆತ್ಮಹತ್ಯೆಯನ್ನು ತಿಳಿಸುವ ಸ್ಮಾರಕ ಶಿಲೆಗಳ ವಿಷಯ ನಿರೂಪಣೆಯಲ್ಲಿ, ಶಿಲ್ಪಿ ವೀರಗಲ್ಲುಗಳಲ್ಲಿ ಅನುಸರಿಸುವ ತಂತ್ರವನ್ನು ವಿವರಗಳನ್ನು ಹಂತ ಹಂತವಾಗಿ ಬಿಡಿಸುವುದನ್ನು– ಅನುಸರಿಸಿರುವುದನ್ನು ಗಮನಿಸಬಹುದು. ವೀರಗಲ್ಲುಗಳ ಶಿಲ್ಪದಲ್ಲಿ ಕಾಣುವ ಕೆಲವಾರು ಪ್ರಯತ್ನಗಳೂ, ಶಿಲ್ಪದ ಸಂಕೇತಗಳೂ, ತಂತ್ರಗಳೂ, ವಿವರಗಳೂ ಮೇಲೆ ಹೇಳಿದ ಸ್ಮಾರಕಶಿಲೆಗಳಲ್ಲಿಯೂ ಕಂಡುಬರುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ, ಕರ್ನಾಟಕದ ಶಿಲ್ಪಿಗಳು ಸ್ಮಾರಕಶಿಲೆಗಳನ್ನು ಮಾಡುವ ಒಂದು ಸಂಪ್ರದಾಯವನ್ನೇ ಬೆಳೆಸಿದ್ದರೆಂದು ಹೇಳಬಹುದು. ಹಾಗೆ ನೋಡಿದರೆ, ಶಾಸನಶಿಲಾಫಲಕಗಳನ್ನು ಮಾಡುವ ಒಂದು ಪ್ರತ್ಯೇಕ ಕಲೆಯನ್ನು ಕರ್ನಾಟಕದ ಶಿಲ್ಪಿಗಳು ಬೆಳೆಸಿದಂತೆ ತೋರುತ್ತದೆ. ಶಾಸನಕಾರ, ದತ್ತಿಯ ರಕ್ಷಣೆ ಮಾಡುವವರಿಗೆ ಲಭಿಸುವ ಪುಣ್ಯ, ಹಾಳುಮಾಡುವವರಿಗೆ ಒದಗುವ ಪಾಪಗಳ ಬಗ್ಗೆ ಬಾಯಿಬಿಟ್ಟು ಹೇಳಿದರೆ, ಶಿಲ್ಪಿ ಸಂಕೇತಗಳ ಮೂಲಕ ಅದೇ ಭಾವನೆಯನ್ನು ವ್ಯಕ್ತಪಡಿಸಿದ್ದಾನೆ. ದಾನಿಯ ಧಾರ್ಮಿಕ ಮನೋಧರ್ಮ, ವೀರನ ವೀರತನ, ಪತಿವ್ರತೆಯರ ಪಾತಿವ್ರತ್ಯ, ಆತ್ಮಬಲಿದಾನ ಮಾಡಿದವರ ತ್ಯಾಗ, ಸಲ್ಲೇಖನ ವ್ರತ ಸ್ವೀಕರಿಸಿ ಮರಣಹೊಂದಿದ ಸಮಣರ ದೃಢಮನೋಧರ್ಮ ಇತ್ಯಾದಿಗಳನ್ನು ನಿರೂಪಿಸುವಲ್ಲಿ ಶಿಲ್ಪಿಗಳೂ ನೆರವಾಗಿದ್ದರೆಂದು ಹೇಳಬೇಕಾಗುತ್ತದೆ. ಈ ವಿಶಿಷ್ಟ ಕಲಾಸಂಪ್ರದಾಯದ ಒಂದು ಶಾಖೆಯಾಗಿಯೇ ವೀರಗಲ್ಲುಗಳ ಶಿಲ್ಪ ಕರ್ನಾಟಕದಲ್ಲಿ ಬೆಳೆದುಬಂದಿತು.

ವೀರಗಲ್ಲುಗಳ ಮತ್ತು ಮಹಾಸತಿಕಲ್ಲುಗಳು

ಕೆಲವು ಸ್ಮಾರಕಶಿಲೆಗಳ ಪಾಠವನ್ನಾಗಲೀ ಶಿಲ್ಪವನ್ನಾಗಲೀ ಗಮನಿಸಿದಾಗ ಅವುಗಳನ್ನು ವೀರಗಲ್ಲು ಎಂಬುದಾಗಿ ಗುರುತಿಸಬೇಕೆ ಅಥವಾ ಮಹಾಸತಿಕಲ್ಲು ಎಂಬುದಾಗಿ ಗುರುತಿಸಬೇಕೆ ಅಥವಾ ವೀರನಿಗೂ ಮಹಾಸತಿಗೂ ಇಬ್ಬರಿಗೂ ಸ್ಮಾರಕವಾಗಿದೆಯೇ ಎಂಬ ಸಂಶಯ, ತೊಡಕುಗಳು ಉಂಟಾಗುತ್ತವೆ. ಇಂಥ ಕಡೆಗಳಲ್ಲಿ ಮೊದಲಿಗೆ ಆ ಸ್ಮಾರಕ ಶಿಲೆಗಳ ಪಾಠವನ್ನೇ ಮೊರೆ ಹೋಗಬೇಕಾಗುತ್ತದೆ. ಆದ್ದರಿಂದ ಶಾಸನಗಳಿಂದ ದೊರೆಯುವ ಮಾಹಿತಿಯನ್ನು ವಿಂಗಡಿಸಿಕೊಳ್ಳುವುದು ಉಚಿತವಾದುದು.

ಪತ್ನಿಯು ಸಹಗಮನ ಮಾಡಲು, ಗಂಡನು ಇಂಥದ್ದೇ ಕಾರಣಕ್ಕಾಗಿ ಮಡಿದಿರಬೇಕೆಂಬ ಯಾವುದೇ ನಿಯಮವಿದ್ದಂತೆ ಕಾಣದು. ಗಂಡನು ಯುದ್ಧದಲ್ಲಿಯೋ, ಆತ್ಮಬಲಿ ಮಾಡಿಕೊಂಡೋ ಅಥವಾ ಸಹಜವಾದ ಮರಣವನ್ನೊ ಪಡೆದಿರಬಹುದು. ಗಂಡನಾದವನು ಯಾವ ಕಾರಣಕ್ಕಾಗಿ ಸತ್ತ ಎಂಬುದೂ ಆ ಸ್ಮಾರಕ ಶಿಲೆಯ ಪ್ರಾಕಾರವನ್ನೂ ಮತ್ತು ಶಿಲ್ಪವನ್ನೂ ನಿರ್ಣಯಿಸುವಲ್ಲಿ ಬಹು ಮುಖ್ಯ ಅಂಶವಾಗುತ್ತದೆ.

ಕ್ರಿ. ಶ. ೧೧೩೪ರ ಶಿವಮೊಗ್ಗ ಜಿಲ್ಲೆಯ ಸ್ಮಾರಕ ಶಿಲೆಯೊಂದರಿಂದ ವ್ಯಕ್ತಿಯೊಬ್ಬನು, 'ದಾನ ಸ್ನಾನ ಪೂರ್ವಕಂ ಮಾಡಿ ಸೂರ್ಯಲೋಕ ಪ್ರಾಪ್ತನಾದ'ನೆಂದೂ ಆತನ ಹೆಂಡತಿ ದೇವಿಯಕ್ಕ ಎಂಬುವಳು' ಪುರುಷ ಬ್ರತಮಂ ಕೈಕೊಂಡು ಸುರಲೋಕ ಪ್ರಾಪ್ತೆಳಾದಳೆಂದೂ ತಿಳಿಯುತ್ತದೆ.[೬೨] ಕ್ರಿ.ಶ. ೧೦೮೯ರ ಮತ್ತೊಂದು ಶಾಸನದಿಂದ 'ಕನಕವ್ವೆ' ಎಂಬುವಳು ಮಡಿದಾಗ ಆಕೆಯ ವೇಳೆವಾಳಿಯಾದ ಗೊರವನಾಯಕನು ಸಾಯುತ್ತಾನೆ. ಈತನೊಂದಿಗೆ ಈತನ ಹೆಂಡತಿಯಾದ ಬಮ್ಮಕ್ಕ ಸಹಗಮನ ಮಾಡಿದ ವಿಷಯ ತಿಳಿಯುತ್ತದೆ.[೬೩] ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯಲ್ಲಿರುವ ಒಂದು ಸ್ಮಾರಕ ಶಿಲೆಯ ಶಿಲ್ಪದ ವಿವರ ಈ ರೀತಿ ಇದೆ ; ವ್ಯಕ್ತಿಯೊಬ್ಬನು ಜೈನ ಮುನಿಯಿಂದ ಉಪದೇಶವನ್ನು ಪಡೆಯುತ್ತಿದ್ದಾನೆ ; ಈತನು ಬಹುಶಃ ಸಲ್ಲೇಖನ ವ್ರತದಿಂದ ಮಡಿದಿರಬಹುದು. ಈತನ ಪಕ್ಕದಲ್ಲಿ ನಿಂತ ಈತನ ಹೆಂಡತಿಯು ತನ್ನ ಬಲಗೈಯನ್ನು ಮೇಲೆತ್ತಿ ಸಹಗಮನ ಸೂಚನೆಯನ್ನು ನೀಡುತ್ತಿರುವಂತೆ ಬಿಡಿಸಲಾಗಿದೆ ; ಎರಡನೆಯ ಹಂತದಲ್ಲಿ ಗಂಡಹೆಂಡತಿಯರು ತೀರ್ಥಂಕರರ ಪಕ್ಕದಲ್ಲಿರುವಂತೆ ಬಿಡಿಸಲಾಗಿದೆ. ಯುದ್ಧದಲ್ಲಿ ಮಡಿದ ತನ್ನ ಗಂಡನ ವೀರಗಲ್ಲನ್ನು ನಿಲ್ಲಿಸುವ ಗಳಿಗೆಗೆ ಸರಿಯಾಗಿ ಹೆಂಗಸೊಬ್ಬಳು ಸಹಗಮನ ಮಾಡಿದ ವಿಷಯ ಒಂದು ವೀರಗಲ್ಲಿನಿಂದ ತಿಳಿಯುತ್ತದೆ.[೬೪] ಕಲಿಸೆಯ ರಾಮಯ್ಯಗೌಡ ಮತ್ತು ಆತನ ಹೆಂಡತಿ ಬೊಮ್ಮರಸಿಯೂ, ದೇವರ ಪಾದವನ್ನು ಸೇರಿದ ವಿಷಯವನ್ನು ತಿಳಿಸುವ ಸ್ಮಾರಕ ಶಿಲೆಯ ಶಿಲ್ಪದ ವಿವರಗಳು ಈ ರೀತಿ ಇದೆ : ಉಳಿದ ವೀರಗಲ್ಲುಗಳ ಶಿಲ್ಪದ ಹಾಗೆಯೇ ಯುದ್ಧದ ದೃಶ್ಯವಿದೆ ; ವಿಶೇಷತೆಯೆಂದರೆ ಸ್ವರ್ಗಕ್ಕೆ ಹೋಗುವ ಹಂತದಲ್ಲಿ ಗಂಡಹೆಂಡಿರಿಬ್ಬರನ್ನೂ ಕಂಡರಿಸಲಾಗಿದೆ.[೬೫] ತಿರಿಕಗೌಡ ಎಂಬುವನು ಹೋರಾಟವೊಂದರಲ್ಲಿ ಶತ್ರುಪಕ್ಷದ ನಾಯಕರನ್ನು ಕೊಂದು ತಾನೂ ಸಾಯುತ್ತಾನೆ. ಆಗ 'ತಿರಕಗ ಉಡರ ಮದವಳಿಗೆ ಬೊಂಮಕ್ಕನು ಸಹಗಮನವನು ಮಾಡಿ ದಂಪತಿಗಳು ಸಹಿತ ಧ್ರುವಲೋಕ ಪ್ರಾಪ್ತರಾಗುತ್ತಾರೆ.[೬೬] ಬಳ್ಳಿಗಾವೆಯ ವೀರಗಲ್ಲೊಂದು,

೬೨. E.C.VII. Sh. 32, 1134
೬೩. E.C.VI. Cm.66, 1089
೬೪. E.C.VII. Sk. 38, 1191
೬೫. M.A.R. 1930. Sa. 60, ಸು. 1201
೬೬. E.C.VIII. Nr. 29, 1228

ವೀರನೊಬ್ಬನು ಮಡಿದಾಗ ಆತನ ಹೆಂಡತಿ ಬೊಂಮ್ಮಾಯಿ ಎಂಬುವಳು ತನ್ನ ಗಂಡನನ್ನು ಕೂಡಿ ಅಗ್ನಿಪ್ರವೇಶ ಮಾಡಿದ ವಿಷಯವನ್ನು ತಿಳಿಸುತ್ತದೆ.[೬೭] ಈ ವೀರಗಲ್ಲಿನ ಶಿಲ್ಪದ ಬಗ್ಗೆ ಈಗಾಗಲೇ ಸಾಕಷ್ಟು ವಿವರಗಳನ್ನು ನೀಡಿದ್ದೇವೆ. ಕ್ರಿಶ. ೧೩೮೩ರ ಮತ್ತೊಂದು ವೀರಗಲ್ಲಿನಿಂದ, ವೀರನೊಬ್ಬನು ಮಡಿದಾಗ ಆತನ ಹೆಂಡತಿ ಪಂಚನಮಸ್ಕಾರ ವಿಧಿಯಿಂದ ಸಹಗಮನ ಮಾಡಿದ ವಿಷಯ ತಿಳಿಯುತ್ತದೆ.[೬೮] ಹಿರೇಕೆರೂರು ತಾಲ್ಲೂಕಿನ ಸಿದೇನೂರು ಗ್ರಾಮದ ಮಾಸ್ತಿ ಕಲ್ಲಿನ ಶಾಸನದಿಂದ, ಅದು ವೀರನಿಗೆ ವೀರಗಲ್ಲು, ಮತ್ತು ಆತನೊಂದಿಗೆ ಸಹಗಮನ ಮಾಡಿದ ಹೆಂಡತಿಗೆ ಮಾಸ್ತಿಗಲ್ಲು ಎಂಬುದಾಗಿ ತಿಳಿಯುತ್ತದೆ.[೬೯] ರಾಮಣ್ಣ ಎಂಬ ವೀರನು ಅಯಿಸೂರ ಹುಯ್ಯಲಿನಲ್ಲಿ ಬಿದ್ದಾಗ 'ಆತನ ಮದವಳಿಗೆ ರಾಮಾಯಿ ವೀರಮಾಸ್ತಿಯಾದಲ್ಲಿ ಬೀರಗಲ್ಲು' ಎಂಬ ವಿಷಯವನ್ನು ವೀರಗಲ್ಲೊಂದು ತಿಳಿಸುತ್ತದೆ.[೭೦]

ಈ ಎಲ್ಲ ಅಂಶಗಳನ್ನು ಗಮನಿಸಿದಾಗ, ಯಾವುದೇ ಸ್ಮಾರಕಶಿಲೆಯ ಶಿಲ್ಪವನ್ನು ಆ ಸ್ಮಾರಕದ ಉಗಮಕ್ಕೆ ಕಾರಣವಾದ ಘಟನೆಯೇ ನಿರ್ಣಯಿಸುತ್ತದೆ ಎಂದು ಹೇಳಬಹುದು. ಅಂದರೆ ವೀರನು ಯುದ್ಧ, ಮತ್ತಿತರ ಹೋರಾಟದಲ್ಲಿ ಅಥವಾ ಆತ್ಮಬಲಿದಾನ ಮಾಡಿಕೊಂಡು ಅಕಾಲ ಮೃತ್ಯುವನ್ನು ಪಡೆದಾಗ ಅವನ ವೀರಗಲ್ಲಿನ ಶಿಲ್ಪದ "ನಾಯಕ' ಆಗುತ್ತಾನೆ. ಆತನೊಂದಿಗೆ ಮಾಡಿದ ಆತನ ಹೆಂಡತಿ ನಾಯಕಿಯಾಗುತ್ತಾಳೆ. ಆಗ ಸಹಜವಾಗಿ ವೀರಗಲ್ಲಿನ ಶಿಲ್ಪದಲ್ಲಿ ನಾಯಕನ ಚಿತ್ರಣಕ್ಕೆ ಪ್ರಥಮ ಸ್ಥಾನ ದೊರೆಯುತ್ತದೆ. ಇಲ್ಲಿ ನಾಯಕಿಯ ಸ್ಥಾನವನ್ನು ಗೌಣ ಎಂದು ಪರಿಗಣಿಸಲಾಗದಿದ್ದರೂ ಆಕೆಯದು ದ್ವಿತೀಯ ಸ್ಥಾನವೆಂದೇ ಹೇಳಬೇಕು. ಇಂತಹ ಸ್ಮಾರಕಶಿಲೆಗಳು, ವೀರನ ಸ್ವಾಮಿಭಕ್ತಿ ಮತ್ತು ಆತನ ಹೆಂಡತಿಯ ಪತಿಭಕ್ತಿ ಪಾತಿವ್ರತ್ಯ ಇವುಗಳೆರಡನ್ನೂ ಅಭಿವ್ಯಕ್ತಿ ಮಾಡಲು ಪ್ರಯತ್ನಿಸುತ್ತವೆ.

ಸಹಜಮರಣವನ್ನೋ, ದುರ್ಮರಣವನ್ನೋ ಪಡೆದ ವ್ಯಕ್ತಿಯ ಹೆಂಡತಿ ಸಹಗಮನ ಮಾಡಿದರೆ, ಆಗ ಆಕೆಯ ಸಹಗಮನದ ವಿಷಯವೇ ಪ್ರಧಾನವಾಗುತ್ತದೆ. ಆಗ ಆ ಸ್ಮಾರಕಶಿಲೆಯ ಶಿಲ್ಪವು, ಆಕೆಯ ಸಹಗಮನದ, ಆಕೆಯ ಪಾತಿವ್ರತ್ಯವನ್ನು ಕೀರ್ತಿಸುವ ಸಂಕೇತಗಳನ್ನು ಪಡೆಯುತ್ತದೆ. ಈ ಮಾತನ್ನು ಇವುಗಳ ಪಾಠದ ಬಗ್ಗೆಯೂ ಹೇಳಬಹುದು. ವೀರಗಲ್ಲುಗಳಲ್ಲಿ ವೀರನ ಚಿತ್ರಣಕ್ಕೆ ಪ್ರಧಾನ ಪಾತ್ರ ದೊರೆತಿದ್ದು. ಸಹಗಮನದ ನಿರೂಪಣೆಗೆ ಎರಡನೆಯ ಸ್ಥಾನ ದೊರೆಯುವಂತೆಯೇ ಮಾಸ್ತಿಗಲ್ಲುಗಳಲ್ಲಿ ಮಹಾಸತಿಯಾದವಳ ಚಿತ್ರಣಕ್ಕೆ ಪ್ರಧಾನ ಸ್ಥಾನ ಲಭಿಸಿ, ಆಕೆಯ ಗಂಡನಾದವನಿಗೆ

೬೭. E.C.VII. Sk. 141, 1286

೬೮. E.C.VIII. Sb. 112, 1383

೬೯. S.I.I. XX. No. 356. ೧೩, ೧೪ನೇ ಶತಮಾನ

೭೦. E.C.VIII. Sa. 47 ?

ಎರಡನೆಯ ಸ್ಥಾನ ದೊರೆಯುತ್ತದೆ. ಕೆಲವೊಮ್ಮೆ ಆತನ ಪ್ರಸ್ತಾಪವೇ ಶಿಲ್ಪದಲ್ಲಿ ಬರುವುದಿಲ್ಲ. ಮೇಲಿನ ಅಭಿಪ್ರಾಯ ಮಹಾಸತಿಯರ ಸ್ಮಾರಕಶಿಲೆಗಳ ಮೇಲೆ ಇರುವ ಶಾಸನ ಪಾಠವನ್ನು ಗಮನಿಸಿದಾಗ ಇನ್ನಷ್ಟು ದೃಢವಾಗುತ್ತದೆ. ಈ ದೃಷ್ಟಿಯಿಂದ ಬೆಳತೂರಿನ ದೇಕಬ್ಬೆಯ ಶಾಸನ ಗಮನಾರ್ಹವಾಗಿದೆ. ಏಚನ ದುರ್ಮರಣಕ್ಕಿಂತ ದೇಕಬ್ಬೆಯ ದೃಢವಾದ ಮನಸ್ಸು, ಅಚಲವಾದ ಪತಿಭಕ್ತಿ ಇವು ಅಂದಿನ ಜನ ಮನಸ್ಸನ್ನು ಸೂರೆಗೊಂಡವು. ಆಕೆಯ ಈ ವ್ಯಕ್ತಿತ್ವಕ್ಕೆ ಮನಸೋತ ಆ ಶಾಸನದ ಕವಿ ಆಕೆಯನ್ನು ಮನತುಂಬಿ ಹೊಗಳಿದ್ದಾನೆ.

ಈ ಒಂದು ಹಿನ್ನೆಲೆಯಲ್ಲಿ ಕರ್ನಾಟಕದ ಕೆಲವು ವೀರಗಲ್ಲು ಮತ್ತು ಮಹಾಸತಿಕಲ್ಲುಗಳ ವಿವರಗಳನ್ನು ಇನ್ನು ಮುಂದೆ ಪರಿಶೀಲಿಸಬಹುದು.

ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೦ನೆಯ ಶತಮಾನದವರೆಗೆ ಸಹಗಮನ ಪದ್ಧತಿಯು ಪ್ರಚಾರಕ್ಕೆ ಬರಲಿಲ್ಲ. ಹತ್ತನೆಯ ಶತಮಾನದ ಆರಂಭದಲ್ಲಿ ಪಶ್ಚಿಮ ಕರಾವಳಿಯಲ್ಲಿ ಪ್ರವಾಸಮಾಡಿದ ಅರಬ್ಬೀ ವರ್ತಕ ಸುಲೆಮಾನನು ಹೇಳುವಂತೆ ಎಲ್ಲೋ ವಿರಳವಾಗಿ ಮಾತ್ರ ರಾಣಿಯರು ತಮ್ಮ ಗಂಡಂದಿರ ಚಿತೆಗಳನ್ನೇರುತ್ತಿದ್ದರು. ಅಲ್ಲಿಯೂ ಬಲವಂತವಿರುತ್ತಿರಲಿಲ್ಲ. ಏರುವುದು ಬಿಡುವುದು ಅವರಿಷ್ಟವಾಗಿತ್ತು. ಸುಮಾರು ಕ್ರಿ.ಶ. ೯೦೦ರ ವರೆಗಿನ ಪಲ್ಲವ, ಚೋಳ, ಪಾಂಡ್ಯರಲ್ಲಿಯೂ ಈ ಸಂಪ್ರದಾಯದ ಚಿಹ್ನೆಗಳು ಕಂಡು ಬಂದಿವೆ."[೭೧]

ಆರನೆಯ ಶತಮಾನದಿಂದ ಹನ್ನೆರಡನೇ ಶತಮಾನದ ಮಧ್ಯ ಭಾಗದವರೆಗೆ ಸಹಗಮನದ ಸುಮಾರು ಹತ್ತು ನಿದರ್ಶನಗಳು ದೊರಕುತ್ತವೆ. ಮುಂದೆ ಇವುಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ. ಕರ್ನಾಟಕದಲ್ಲಿ ವೀರಯುಗದೊಡನೆ (೯–೧೦ ಶತಮಾನ) ಪ್ರಬಲಗೊಂಡ ಸಹಗಮನಪದ್ಧತಿಯು, ಹೊಯ್ಸಳ ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ತನ್ನ ತುದಿಯನ್ನು ಮುಟ್ಟಿತು. ಒಬ್ಬ ರಾಜನು ಮಡಿದ ತಕ್ಷಣ ಅಥವಾ ಅವನು ಮಡಿಯುವ ಸೂಚನೆಯು ದೊರಕಿದರೂ ಸಾಕು, ಸಾಯಲು ಸಿದ್ಧರಾಗುತ್ತಿದ್ದ ರಾಣಿಯರ ವಿಷಯವನ್ನು ಜನ್ನನ ಅನಂತನಾಥ ಪುರಾಣವು ವರ್ಣಿಸುತ್ತದೆ"[೭೨] ಎಂಬ ಮೇಲಿನ ಅಬಿಪ್ರಾಯಗಳಿಗೆ ವೀರಲಗಲ್ಲುಗಳ ಶಿಲ್ಪದಿಂದಲೂ ಬೆಂಬಲ ದೊರೆಯುತ್ತದೆ.

ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಗಂಗರ, ನೊಳಂಬರ ಕಾಲದ ಯಾವುದೇ ವೀರಗಲ್ಲಿನ ಶಿಲ್ಪದಲ್ಲಿಯೂ ಸಹಗಮನದ ಸೂಚನೆ ದೊರೆಯುವುದಿಲ್ಲ.

೭೧ ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೩೧೫
೭೨ ಅದೇ. ಪು. ೩೧೮

ಹೊಯ್ಸಳರ ಕಾಲದ ನಂತರದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ವೀರನ ಪಕ್ಕದಲ್ಲಿ ನಿಂತು ತನ್ನ ಬಲಗೈಯನ್ನು ಎತ್ತಿ ಹಿಡಿದಿರುವ ಹೆಂಗಸಿನ ಶಿಲ್ಪವನ್ನು ಬಿಡಿಸಲಾಗಿರುತ್ತದೆ, ಹೀಗೆ ವಿವರವನ್ನು ಬಿಡಿಸುವುದರ ಮೂಲಕ ಶಿಲ್ಪಿ, ವೀರನೊಂದಿಗೆ ಆತನ ಪತ್ನಿ ಸಹಗಮನ ಮಾಡಿರುವ ವಿಷಯವನ್ನು ವ್ಯಕ್ತಪಡಿಸುತ್ತಾನೆ. ವೀರನೊಡನೆ ಕೆಲವೊಮ್ಮೆ ಒಬ್ಬರಿಗಿಂತ ಹೆಚ್ಚು ಮಂದಿ ಮಹಿಳೆಯರು (ಆತನ ಹೆಂಡತಿಯರು) ಸಹಗಮನ ಮಾಡಿದ್ದರೆ ಅಷ್ಟು ಜನ ಸ್ತ್ರೀಯರು ತಮ್ಮ ಗಂಡನ ಎಡಬಲಗಳಿಗೆ ನಿಂತು ಬಲಗೈಯನ್ನು ಎತ್ತಿರುವಂತೆ ಕಂಡರಿಸಲಾಗಿರುತ್ತದೆ. ಸತಿಯಾದವಳ ಚಿತ್ರವನ್ನು ಬಿಡಿಸುವಲ್ಲಿ ಆಕೆ ತನ್ನ ಕೈ ಎತ್ತಿ ನಿಂತಿರುವಂತೆಯೇ ಶಿಲ್ಪವನ್ನು ಬಿಡಿಸಬೇಕು ಎಂಬ ನಿಯಮವನ್ನು ವಿಜಯನಗರ ಅರಸರ ಕಾಲದ ಶಿಲ್ಪಿಗಳು ಕಟ್ಟುನಿಟ್ಟಾಗಿ ಅನುಸರಿಸಿದಂತೆ ಕಂಡು ಬರುವುದಿಲ್ಲ. ಕೆಲವೆಡೆ ಹೆಂಗಸು ಬಲದ ಕೈಯಲ್ಲಿ ಕಮಲವನ್ನು ಹಿಡಿದಿರುವಂತೆ ಬಿಡಿಸಿರುತ್ತಾರೆ. ಕೆಲವೊಮ್ಮೆ ಎರಡೂ ಕೈ ಎತ್ತಿದಂತೆಯೂ, ಮತ್ತೆ ಕೆಲವೊಮ್ಮೆ ಬಲಗೈಯಲ್ಲಿ ಹಣ್ಣೊಂದನ್ನೂ ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿರುವಂತೆಯೂ, ಹಲವಾಗರು ಕಡೆ ಈಕೆಯೂ ವೀರನ ಹಾಗೆಯೇ ಕೈಮುಗಿದು ನಿಂತಿರುವಂತೆಯೂ ಚಿತ್ರಿಸಿರುವುದುಂಟು. ಈ ರೀತಿಯ ಕೈ ಮುಗಿದು ನಿಂತಿರುವ ಸತಿಯ ಪಕ್ಕದಲ್ಲಿ ತೋಳು ಕೈ ಕಂಬ ಅಥವಾ ವ್ಯಾಸನ ತೋಳು ಎಂದು ಕರೆಯಲ್ಪಡುವ ಮಾಸ್ತಿಕಲ್ಲಿನ ಪುಟ್ಟಚಿತ್ರವನ್ನು ಕಡೆದಿರುವುದುಂಟು.

ತನ್ನ ಪತಿಯ ಬಳಿ ಇರುವುದು ಮುಖ್ಯ ಎಂಬ ಮೂಲ ಧ್ಯೇಯವನ್ನುಳ್ಳ ಅಂದಿನ ಜನ, ತಮ್ಮ ಧಾರ್ಮಿಕ ವಿಧಿಯಾಚರಣೆಗನುಸಾರವಾಗಿ ವ್ರತವನ್ನು ಕೈಗೊಂಡು ಅದರಂತೆ ಆತ್ಮಬಲಿಯನ್ನು ಮಾಡಿಕೊಳ್ಳುವ ಅವಕಾಶ ಇರುವಾಗ ಸಲ್ಲೇಖನ ವ್ರತವನ್ನು ಅನುಸರಿಸಿದರೆಂದು ತೋರುತ್ತದೆ. ಇದಕ್ಕೆ ನಿದರ್ಶನವಾಗಿ ಕೆಲವು ವೀರಗಲ್ಲುಗಳ ಪಾಠವೂ ನೆರವಾಗುತ್ತದೆ. ಕ್ರಿ.ಶ. ೧೩೮೩ರ ಒಂದು ಶಾಸನದಿಂದ ವೀರನೊಬ್ಬನು ಮಡಿದಾಗ ಆತನ ಹೆಂಡತಿ ಪಂಚ ನಮಸ್ಕಾರ ವಿಧಿಯಂ ಸ್ವರ್ಗಸ್ಥೆ' ಯಾದ ವಿವರ ದೊರೆಯುತ್ತದೆ.[೭೩] ಈ ಶಾಸನ ಒಂದು ವೀರಗಲ್ಲಿನ ಮೇಲಿದೆ. ಇದೇ ರೀತಿಯ ಉಲ್ಲೇಖ ಹೊನ್ನಾಳಿ ತಾಲ್ಲೂಕಿನ ವೀರಗಲ್ಲೊಂದರಲ್ಲಿದೆ.[೭೪] ಮೇಲಿನ ಉಲ್ಲೇಖಗಳಲ್ಲಿನ ಹಾಗೆ ಯಾವುದೇ ವ್ರತವನ್ನು ಆಚರಿಸದೆ ತನ್ನ ಗಂಡನೊಂದಿಗೆ ಸಮಾಧಿಯನ್ನು ಹೊಕ್ಕ ಸತಿಯರ ನಿದರ್ಶನಗಳನ್ನು ಗಮನಿಸಬಹುದು. ಇಂತಹ ವಿಷಯವೊಂದನ್ನು ತಿಳಿಸುವ ಮಾಸ್ತಿಗಲ್ಲು ಸೊರಬ ತಾಲ್ಲೂಕಿನ ಗುಂಜನೂರು ಗ್ರಾಮದಲ್ಲಿದೆ.[೭೫] ಆ ಶಾಸನ, ದೊಡ್ಡಗೌಡನು

೭೩. E.C.VIII. Sb. 112, 1383

೭೪. E.C.VII. Hl. 92, 1403

೭೫. E.C.VIII. Sb. 36 ?

ಸ್ವರ್ಗಸ್ಥನಾದಾಗ, "ಆತನ ಮದವಳಿಗೆ ಚಿಕ್ಕಗಉಡಿ ಅವರ ಕೂಡೆ ಸಮಧಿಯನು ಪೊಕ್ಕು ಸ್ವರ್ಗಸ್ಥಳಾದ"ಳೆಂದು ತಿಳಿಸುತ್ತದೆ. ಇದೇ ರೀತಿಯಲ್ಲಿ, ಶಿವಮೊಗ್ಗ ಜಿಲ್ಲೆಯ ಪುರಲೆ ಗ್ರಾಮದ ಮಾಸ್ತಿಗಲ್ಲಿನ ಶಾಸನದಲ್ಲಿ ಮಹಿಳೆಯೊಬ್ಬಳು ತನ್ನ ಗಂಡನೊಡನೆ ಸಹಗಮನ ಮಾಡಿದ ಪ್ರಸ್ತಾಪ ಬರುತ್ತದೆ.[೭೬]

ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಕವಲೇದುರ್ಗದ ಕೆರೆಯ ಅಂಗಳದಲ್ಲಿ ಈ ರೀತಿ ಸಮಾಧಿ ಹೊಕ್ಕು ಮಡಿದ ವೀರ ಮಾಸ್ತಿಯರ ಸಮಾಧಿಗಳಿವೆ. ಈ ಬಗ್ಗೆ ಹಿಂದೆ ವಿವರವಾಗಿ ತಿಳಿಸಲಾಗಿದೆ. ಡಾ. ಎಂ. ಎಂ. ಕಲಬುರ್ಗಿಯವರು "ಸಮಾಧಿ –ಬಲಿದಾನ –ವೀರ –ಮರಣ ಸ್ಮಾರಕಗಳು' ಎಂಬ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರ ೯A ರ ತಳಭಾಗದಲ್ಲಿ "ಪತಿಯ ಯುದ್ಧಮರಣ ಸತಿಯ ಸಹಗಮನ. ಚಿತಯಲ್ಲಿ ಮಲಗಿದ ದಂಪತಿಗಳನ್ನು ಗಮನಿಸಿರಿ "ಎಂಬ ವಿವರಣೆಯನ್ನು ನೀಡಿದ್ದಾರೆ. ವಾಸ್ತವವಾಗಿ ಅದು ಚಿತೆ ಅಲ್ಲ. ಸಮಾಧಿ (ಚಿತ್ರ. ೩೩) ಶಿಲ್ಪಿಯ 'ಸಮಾಧಿ' ಎಂಬುದನ್ನು ಸೂಚಿಸಲು ಸುತ್ತಲೂ ಮಣ್ಣಿರುವಂತೆ ವಿವರಗಳನ್ನು ಬಿಡಿಸಿದ್ದಾನೆ. ಅವನು ಚಿತಯನ್ನು ಬಿಡಿಸಬೇಕೆಂದಿದ್ದರೆ ಖಂಡಿತವಾಗಿ ವೇದಿಕೆಯನ್ನು, ಅಗ್ನಿ ಜ್ವಾಲೆಗಳನ್ನು ಬಿಡಿಸುತ್ತಿದ್ದ. ಅದೇ ಪುಸ್ತಕದಲ್ಲಿರುವ ೧೦ನೇ ಚಿತ್ರವನ್ನು ನಮ್ಮ ಈ ವಾದವನ್ನು ಸಮರ್ಥಿಸುತ್ತದೆ.

ಈ ಎಲ್ಲ ಅಂಶಗಳ ಹಿನ್ನೆಲೆಯನ್ನು ಗಮನಿಸಿದಾಗ ಗೋಚರವಾಗುವ ವಿಚಾರವೆಂದರೆ ; ಸಹಗಮನ, ಅನುಗಮನವನ್ನು ಬೆಂಕಿಯಲ್ಲಿ ಬಿದ್ದು ಮಾಡುತ್ತಿದ್ದ ಹಾಗೆಯೇ ಕೆಲವೊಮ್ಮೆ ತಮ್ಮ ಧಾರ್ಮಿಕ ವಿಧಿಯಾಚರಣೆಗನುಸಾರವಾಗಿ ಮಾಡುತ್ತಿದ್ದರು ಎನ್ನುವುದು.

ಮಹಿಳೆಯ ಹೋರಾಟದ ವಿವರಗಳನ್ನುಳ್ಳ ವೀರಗಲ್ಲುಗಳು

ಹೋರಾಟದಲ್ಲಿ ಮಡಿದ ವೀರನಿಗೆ ವೀರಗಲ್ಲುಗಳನ್ನು ಹಾಕಿಸುತ್ತಿದ್ದಂತೆಯೇ ಹೋರಾಟದಲ್ಲಿ ಮಡಿದ ಮಹಿಳೆಯರಿಗೂ ವೀರಗಲ್ಲುಗಳನ್ನು ಹಾಕಿಸುತ್ತಿದ್ದರು. ಈ ರೀತಿಯ ಎರಡು ನಿದರ್ಶನಗಳು ನಮಗೆ ದೊರೆಯುತ್ತವೆ. ಮೊದಲನೆಯ ನಿದರ್ಶನ ಕ್ರಿ.ಶ. ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ್ದು, ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲಿರುವ ಬಾಹುಬಲಿಬಸದಿಯ ಬಳಿ ವೀರಗಲ್ಲೊಂದಿದೆ. (ಚಿತ್ರ ೨೫೩) ಆ ವೀರಗಲ್ಲಿನ ಶಾಸನದ ಪಾಠ (ಆಕೆಯ ಸಾವನ್ನು ತಿಳಿಸುವ ಭಾಗ) ತ್ರುಟಿತವಾಗಿದೆ. ಆದರೆ ಸಾವಿಯಬ್ಬೆ ಎಂಬುವಳು ಬಗಿಯುರಲ್ಲಿ ಸತ್ತಳ್' ಎಂದಿದೆ. ಯಾವ ಹೋರಾಟದಲ್ಲಿ, ಆಕೆ ಸತ್ತಳು ಎಂಬ ವಿವರವಿಲ್ಲ. ಆಕೆಯನ್ನು ಕೀರ್ತಿಸುವ ಪದ್ಯಗಳು ದೊರೆಯುತ್ತವೆ. ಆ ಶಾಸನವು ಆಕೆಯ ಜೈನ ಧರ್ಮ ಶ್ರದ್ಧೆಯನ್ನು ವಿಶೇಷವಾಗಿ ಹೀಗೆ ಕೀರ್ತಿಸುತ್ತದೆ

೭೬ E.C.VII. Sh. 67 ?

; "ಶ್ರಾವಕಧರ್ಮ್ಮದೊಳ್ ದೊರೆಯೆನಲ್ ಪೆಱರಿಲ್ಲೆನೆ ಸನ್ದ ರೇವತಿ ಶ್ರಾವಕಿ ತಾನೆ ಸಜ್ಜನಿಕೆಯೊಳಾ ಜನಕಾತ್ಮಜೆ ತಾನೆ ರೂಪಿನೊಳ್ ದೇವಕಿ ತಾನೆ ಪೆಂಪಿನೊಳರುಂಧತಿ ತಾನೆ ಜಿನೇನ್ದ್ರ ಭಕ್ತಿ ಸದ್ಭಾವದೆ ಸಾವಿಯಬ್ಬೆ ಜಿನಶಾಸನದೇವತೆ ತಾನೇ ಕಾಣಿರೇ".[೭೭] ಈ ವೀರಗಲ್ಲಿನ ಶಿಲ್ಪವೂ ಸಹ ಗಮನಾರ್ಹವಾಗಿದೆ. ಗಂಗರ ಕಾಲದ ಇತರೇ ವೀರಗಲ್ಲುಗಳಂತೆ ಈ ವೀರಗಲ್ಲನ್ನೂ ಬಿಳಿಯ ಬೆಣಚು ಕಲ್ಲಿನ ಮೇಲೆ ಕಡೆಯಲಾಗಿದೆ. ಇಲ್ಲಿ ಶಿಲ್ಪವನ್ನು ಮೂರು ಹಂತಗಳಲ್ಲಿ ಬಿಡಿಸಲಾಗಿದೆ. ಕೆಳಗಿನ ಹಂತದಲ್ಲಿ ಕುದುರೆಯ ಮೇಲೆ ಕುಳಿತ ಸಾವಿಯಬ್ಬೆ ತನ್ನೆದುರಿನ ಆನೆಯ ಮೇಲೆ ಕುಳಿತ ವೀರನೊಂದಿಗೆ ವೀರಾವೇಶದಿಂದ ಹೋರಾಡುತ್ತಿರುವಂತೆ ವಿವರವನ್ನು ಬಿಡಿಸಲಾಗಿದೆ. ಎರಡನೆಯ ಹಂತದಲ್ಲಿ ಸಾವಿಯಬ್ಬೆಯು ಪದ್ಮಾಸನದಲ್ಲಿ ಕುಳಿತು ಜಿನ ಧ್ಯಾನ ಮಾಡುತ್ತಿರುವಂತೆ ಬಿಡಿಸಲಾಗಿದೆ. ಅದರ ಮೇಲಿನ ಹಂತದಲ್ಲಿ ಸಾವಿಯಬ್ಬೆಯು ತೀರ್ಥಂಕರನ ಬಳಿ ತನ್ನ ಎರಡೂ ಕೈಗಳನ್ನು ಮುಗಿದು ಕುಳಿತಿರುವಂತೆ ಬಿಡಿಸಲಾಗಿದೆ. ಶಾಸನದ ಪಾಠ ಮತ್ತು ಶಿಲ್ಪವನ್ನು ಗಮನಿಸಿ, ಈ ರೀತಿ ಊಹಿಸಬಹುದೆಂದು ತೋರುತ್ತದೆ : ಜಿನ ಧರ್ಮಪರಳಾದ ಸಾವಿಯಬ್ಬೆಯು ಹೋರಾಟದಲ್ಲಿ ಭಾಗವಹಿಸಿ, ಯುದ್ಧರಂಗದಲ್ಲಿ ಗಾಯಗೊಂಡು ಹಿಂತಿರುಗಿದಳು. ಆ ಗಾಯದಿಂದ ತನ್ನ ಸಾವು ಖಚಿತ ಎಂಬುದನ್ನು ಅರಿತ ಆಕೆ ತನ್ನ ಧರ್ಮದ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಮಡಿದಿರಬಹುದು. ಅಥವಾ ಜಿನಧರ್ಮದವಳಾದ ಈಕೆಯ ವೀರಗಲ್ಲನ್ನು ಬಿಡಿಸಿದ ಶಿಲ್ಪಿ ಹೋರಾಟದಲ್ಲಿ ಮಡಿದ ಸಾವಿಯಬ್ಬೆ ಜಿನಲೋಕವನ್ನು ಸೇರಿದಳು ಎಂಬುದನ್ನು (ಅವಳಿಗಿದ್ದ ಜೈನಧರ್ಮ ಶ್ರದ್ಧೆಯನ್ನು ಗಮನಿಸಿ) ಈ ಮೂಲಕ ಧ್ವನಿಸಿರಬಹುದು. ಇದೇ ತೆರನ ಶಿಲ್ಪದ ವಿವರವಿರುವ ಮತ್ತೊಂದು ವೀರಗಲ್ಲು ಇದೇ ವೀರಗಲ್ಲಿನ ಪಕ್ಕದಲ್ಲಿದ್ದು ಈ ಅಂಶವನ್ನು ಮತ್ತೂ ದೃಢಪಡಿಸುತ್ತದೆ.

ಮತ್ತೊಂದು ವೀರಗಲ್ಲು ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರದಲ್ಲಿ ದೊರೆಯುತ್ತದೆ. (ಪ್ರಸ್ತುತ ಈ ವೀರಗಲ್ಲು ಶಿವಮೊಗ್ಗೆಯ ಸರಕಾರೀ ವಸ್ತು ಸಂಗ್ರಹಾಲಯದಲ್ಲಿದೆ.) ಈ ಶಾಸನದ ಕಾಲ ಕ್ರಿ.ಶ. ೧೧೪೬. ತನ್ನ ತಂದೆಯೊಡನೆ ಹೋರಾಡಿ ಆತನನ್ನು ಕೊಂದವರೊಡನೆ ಹೋರಾಡಿ ಮಡಿದ ಹರಿಯಕ್ಕನ ವೀರಗಲ್ಲು ಇದು.[೭೮] ಈ ವೀರಗಲ್ಲಿನ ಶಿಲ್ಪವೂ ಸಹ ತುಂಬಾ ಮಹತ್ವದ್ದಾಗಿದೆ. ತನ್ನ ಹಗೆಗಳನ್ನು ಹರಿಯಕ್ಕ ತುಂಬಾ ಆಕ್ರೋಶದಿಂದ ಕೊಲ್ಲುತ್ತಿರುವ, ತನ್ನ ಜುಟ್ಟು ಆಕೆಯ ಕೈಯಲ್ಲಿ ಸಿಕ್ಕು ಒದ್ದಾಡುತ್ತಿರುವ ವ್ಯಕ್ತಿಯ ಚಿತ್ರಣವು ತುಂಬಾ ಪರಿಣಾಮಕಾರಿಯಾದ ರೀತಿಯಲ್ಲಿ ಮೂಡಿ ಬಂದಿದೆ. (ಚಿತ್ರ ೨೧೩)

---

೭೭. E.C.II. 172

೭೮. E.C.VII. Sk. 1, 1446

ಈ ರೀತಿಯ ವೀರಗಲ್ಲುಗಳ ಬಗ್ಗೆ ಬರೆಯುತ್ತಾ ಡಾ. ಎಂ. ಎಂ. ಕಲಬುರ್ಗಿಯವರು "ಹಿಂದೆ ಹೇಳಿದ ಲಕ್ಷುಮ್ಮ ಗಾವುಂಡಿ, ಹರಿಯಕ್ಕಗಳ ವೀರಗಲ್ಲುಗಳಲ್ಲದೆ ಹೇರೂರು (ಚಿತ್ರ ೧೮೮) ಅರಸಿಬೀದಿ, ಗೂಡೂರುಗಳಲ್ಲಿ ಸ್ತ್ರೀಯ ಹೋರಾಟ ಮತ್ತು ವೀರಮರಣದ ಶಿಲ್ಪಗಳಿವೆ" ಎಂಬುದಾಗಿ ತಿಳಿಸುತ್ತಾರೆ.[೭೮a]

ಲಕ್ಷುಮ್ಮಗಾವುಂಡಿಯು ತುರುಗಾಳಗದಲ್ಲಿ ಮಡಿದ ವಿಷಯವನ್ನು ತಿಳಿಸುವ ಶಾಸನ ಕಲ್ಲಿನ ಮೇಲೆ ಶಿಲ್ಪವಿಲ್ಲ ಅರಸಿಬೀದಿ, ಗೂಡೂರು, ಹೆರೂರುಗಳು ಎಲ್ಲಿವೆ ? ಅಲ್ಲಿರುವ ವೀರಗಲ್ಲುಗಳ ಶಿಲ್ಪದ ವಿವರಗಳನ್ನು ಅವರು ತಿಳಿಸುವುದಿಲ್ಲ. ಅವರು ತಮ್ಮ ಪುಸ್ತಕದ ೧೮೮ ಚಿತ್ರದ ಕೆಳಗೆ ನೀಡಿರುವ ವಿವರಣೆ ಹೀಗಿದೆ : "ಸ್ತ್ರೀಯೊಬ್ಬಳ ವೀರಗಲ್ಲು (ಹೇರೂರು) ಕೊಡೆಯ ಕೆಳಗಿನದು ಸ್ತ್ರೀ ವಿಗ್ರಹ". ಕೊಡೆಯ ಕೆಳಗಿನ ಶಿಲ್ಪ ಖಂಡಿತಾ ಸ್ತ್ರೀಯಂತೂ ಅಲ್ಲ. ಅದು ಪುರುಷನದೇ ಇರಬೇಕು. (ಛಾಯಾಚಿತ್ರ ಸ್ಪಷ್ಟವಾಗಿಲ್ಲ). ಈ ಒಂದು ಭಂಗಿಯಲ್ಲಿ ಶಿಲ್ಪಿ ಸ್ತ್ರೀಯರನ್ನು ಸಾಮಾನ್ಯವಾಗಿ ಬಿಡಿಸುವುದಿಲ್ಲ. ಬಿಡಿಸಿದರೂ ಸೀರೆಯನ್ನು ಶಿಲ್ಪದಲ್ಲಿ ಬಿಡಿಸುತ್ತಾನೆ. ಇಲ್ಲಿ ಗಂಡಸು ಕಚ್ಚೆಯನ್ನು ಉಟ್ಟಿರುವಂತೆ ಕಂಡು ಬರುತ್ತದೆ. ಈ ವೀರನ ಎದುರು ಕುದುರೆಯ ಮೇಲೆ ಕುಳಿತಿರುವ ವ್ಯಕ್ತಿ ಬಹುಶಃ ಸ್ತ್ರೀ ಇದ್ದಿರಬಹುದು. ಆದರೂ ಈ ಬಗ್ಗೆ ಖಚಿತವಾಗಿ ಏನನ್ನೂ ಹೇಳುವುದು ಸಾಧ್ಯವಿಲ್ಲ.

ಅನೇಕ ವೀರಗಲ್ಲುಗಳು ತಮ್ಮ ಮೂಲಸ್ಥಾನದಲ್ಲಿ ಇಂದು ಇಲ್ಲದಿರುವುದರಿಂದ, ಕೆಲವಾರು ಭಿನ್ನವಾಗಿರುವುದರಿಂದ, ಮತ್ತೆ ಕೆಲವು ನೆಲದಲ್ಲಿ ಸಾಕಷ್ಟು ಹೂತು ಹೋಗಿರುವುದರಿಂದ ಅವುಗಳ ತಳಭಾಗ ಯಾವ ರೀತಿ ಇತ್ತು ಎಂಬುದನ್ನು ವಿವರಿಸುವುದು ಕಷ್ಟವಾಗಿದೆ. ಈ ಹಿಂದೆ 'ವೀರಗಲ್ಲು ಪ್ರತಿಷ್ಠಾಪನೆ' ಎಂಬ ತಲೆಬರಹದಡಿಯಲ್ಲಿ ಗಮನಿಸಿರುವಂತೆ, ವೀರಗಲ್ಲುಗಳನ್ನು ಇನ್ನಿತರ ಸ್ಮಾರಕಶಿಲೆಗಳ ಪ್ರತಿಷ್ಠೆಯಂತೆಯೇ ಪಾಣಿಪಟ್ಟದ ಮೇಲೆ ಇಟ್ಟಿರುವುದನ್ನು ಚನ್ನಗಿರಿ ತಾಲ್ಲೂಕು ಹಿರೇಕೋಗಲೂರಿನ ಕಲ್ಲೇಶ್ವರ ದೇವಾಲಯದ ಬಳಿಯ ವೀರಗಲ್ಲುಗಳಿಂದ ತಿಳಿಯಬಹುದು. ಇಲ್ಲಿ ವೀರಗಲ್ಲುಗಳನ್ನು ಪಾಣಿಪಟ್ಟಗಳ ಮೇಲೆ ಇಡಲಾಗಿದೆ. ವೀರಗಲ್ಲಿನ ತಳಭಾಗವನ್ನು ಪಾಣಿಪಟ್ಟದ ರಂಧ್ರದಲ್ಲಿ ಸೇರಿಸಲಾಗುವಂಥ ಗೂಟವನ್ನು ಬಿಡಿಸಲಾಗಿದೆ. ಪಾಣಿಪಟ್ಟದ ರಂಧ್ರವನ್ನೂ ಈ ಗೂಟವನ್ನೂ ಕೂಡಿಸಿದ್ದರಿಂದ ವೀರಗಲ್ಲು ಅದರ ಮೇಲೆ ನಿಂತಿದೆ. ಇದು ಅಂದಿನ ಕಾಲದಲ್ಲಿ ವೀರಗಲ್ಲನ್ನು ನಿಲ್ಲಿಸುತ್ತಿದ್ದ ಸಂಪೂರ್ಣ ಚಿತ್ರವನ್ನು ನೀಡುತ್ತದೆ.

೭೮a ಎಂ. ಎಂ. ಕಲಬುರ್ಗಿ : ಸಮಾಧಿ– ಬಲಿದಾನ–ವೀರಮರಣ ಸ್ಮಾರಕಗಳು. ಪು.೨೩.

ವೀರಗಲ್ಲುಗಳ ಸಂರಕ್ಷಣೆ

ಇಷ್ಟು ವಿವರವಾಗಿ ಮತ್ತು ಶ್ರದ್ಧೆಯಿಂದ ನಿರೂಪಿಸಿ ನಿಲ್ಲಿಸಿದ ವೀರಗಲ್ಲು ಶಾಶ್ವತವಾಗಿ ಇರಬೇಕೆಂಬ ಒಂದು ಮಹತ್ತರವಾದ ಆಸೆ ವೀರಗಲ್ಲನ್ನು ಹಾಕಿಸಿದವರಿಗೆ ಇತ್ತು ಎಂಬುದನ್ನು ಈಗಾಗಲೇ ಪರಿಶೀಲಿಸಿದ್ದೇವೆ. ಇದಲ್ಲದೆ, ಇತರ ಶಾಸನಗಳ ಕೊನೆಯ ಭಾಗವಾದ ಶಾಪಾಶಯ ಭಾಗದಲ್ಲಿನಂತೆ ಕೆಲವೊಮ್ಮೆ ತಾವು ಹಾಕಿಸಿದ ವೀರಗಲ್ಲು ಚಿರಕಾಲ ಉಳಿಯಬೇಕೆಂಬ ತಮ್ಮ ಆಸೆಯನ್ನು ಜನ ವ್ಯಕ್ತಪಡಿಸಿದ್ದಾರೆ. ಹೊಯ್ಸಳ ವೀರ ನರಸಿಂಹನ ಕಾಲದ ಒಂದು ವೀರಗಲ್ಲಿನಿಂದ. ವೀರಗಲ್ಲನ್ನು ಊನ ಮಾಡಿದವರು ವೀರನಾರಸಿಂಗದೇವಣ್ಣನ ದಂಡ ಪ್ರಾಪ್ತರು ಎಂಬ ವಿಷಯ ತಿಳಿಯುತ್ತದೆ.[೭೯] ಈ ಮಹದಾಸೆಯು, ಇದಕ್ಕಿಂತಲೂ ಸ್ಪಷ್ಟವಾಗಿ ಕ್ರಿ.ಶ. ೧೨೭೫, ೧೪೨೫ ರ ವೀರಗಲ್ಲುಗಳ ಪಾಠದಿಂದ ತಿಳಿಯುತ್ತದೆ.[೮೦] ದಾನವನ್ನು ಅಪಹರಿಸಿದ ವ್ಯಕ್ತಿಗೆ ಶಾಸನಕಾರರು ಆರೋಪಿಸುವ ಪಂಚಮಹಾಪಾತಕಗಳು ವೀರಗಲ್ಲನ್ನು ಹಾಳು ಮಾಡಿದವನಿಗೂ ಪ್ರಾಪ್ತವಾಗುತ್ತದೆ ಎಂದು ಅಲ್ಲಿ ಎಚ್ಚರಿಸಿದ್ದಾರೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ ವೀರಗಲ್ಲುಗಳ ಬಗ್ಗೆ, ಅವುಗಳ ಸಂರಕ್ಷಣೆಯ ಬಗ್ಗೆ ಅಂದಿನ ಜನತೆಗೆ ಇದ್ದ ಒಂದು ಶ್ರದ್ಧೆ ವ್ಯಕ್ತವಾಗುತ್ತದೆ.

ಕಾಲ ಸರಿದಂತೆ, ತಮ್ಮ ಮಹತ್ವವನ್ನು ಕಳೆದುಕೊಂಡ ದಾನಶಾಸನಗಳಂತೆ, ದತ್ತಿಗಳಂತೆ, ಹಾಳು ದೇವಾಲಯಗಳಂತೆ, ಕಲಾಕೃತಿಗಳಾಗಿಯೂ ಈ ವೀರಗಲ್ಲುಗಳು ಉಪೇಕ್ಷೆಗೊಳಗಾಗಿರುವುದನ್ನು ಗಮನಿಸಬಹುದು. ಈ ಮೂಕ ಸಾಕ್ಷಿಗಳು ಸಾದೃಶವಾಗಿ ಹೇಳುವ ಜೀವನಧರ್ಮವನ್ನು ಅರಿತುಕೊಂಡಲ್ಲಿ ನಮ್ಮ ಪೂರ್ವಜರ ಬಗ್ಗೆ ಹೆಮ್ಮೆ ಗೌರವಗಳೂ, ಆ ಬಗ್ಗೆ ನಮಗೆ ಇರುವ ಕರ್ತವ್ಯದ ಅರಿವೂ ಆದೀತು.

---

೭೯ "ವಾಮೆಯ ನಾಯಕನು ಸುರಲೋಕ ಪ್ರಾಪ್ತನಾದನು. ಈ ಕಲನಾವನೂನು ಮಾಡಿದವರು ಶ್ರೀ ವೀರನಾರಸಿಂಗ ದೇವಣ್ಣನ ದಂಡ ಪ್ರಾಪ್ತರು"– E.C.V. BI. 174

೮೦ (ಅ) "ಯಿ಼ಾ ಕಲ್ಲನೊಡೆದಂಗೆ ಕಿತ್ತಂಗೆ ಕೌಲೆಯಂ ಹಾರುವನಂ ಕೊಮದ ಪಾಪ ವಾರಣಾಸಿಯಲು" – E.C.VIII. TI. 26. 1275

(ಆ) "ಯಿ಼ಾ ಕಲ್ಲನೊಡೆದವಂ ಕಿತ್ತಂ ವಾರಣಾಸಿಯಲೂ ಕೌಲೆಯ ಬ್ರಾಹ್ಮಣ ಕೊಂದ ಪಾಪ" – ಅದೇ. 25, 1425

VIII. ಸಮಾರೋಪ

ಜನಸಾಮಾನ್ಯರ ಜೀವನವನ್ನು ತಮ್ಮ ಪಾಠ ಮತ್ತು ಶಿಲ್ಪದ ಮೂಲಕ ವ್ಯಕ್ತಮಾಡುವ ವೀರಗಲ್ಲುಗಳು ಇತಿಹಾಸ ನಿರ್ಮಾಣಕಾರ್ಯದಲ್ಲಿ ಅವಶ್ಯವಾದ ಮಹತ್ವದ ದಾಖಲೆಗಳಾಗಿವೆ. ಇತರ ಮೂಲಸಾಮಗ್ರಿಗಳಿಗಿಂತಲೂ ಅಧಿಕೃತವಾಗಿ, ಖಚಿತವಾಗಿ ಅವು ನಮ್ಮ ಜನ ತಾವು ನಂಬಿದ ಜೀವನ ಮೌಲ್ಯಗಳಿಗೆ ತಮ್ಮ ಜೀವನವನ್ನೂ ಪಣತೊಟ್ಟು ಹೇಗೆ ಬದ್ಧರಾಗಿದ್ದರು ಎಂಬ ಅಂಶವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಇತಿಹಾಸಕಾರನು ಆ ಕಾಲದ ಚೌಕಟ್ಟಿನೊಳಗೆ ಆ ಮೌಲ್ಯಗಳನ್ನು ಪರಿಶೀಲಿಸಿ ಆರೋಗ್ಯಕರವಾದ ತನ್ನ ಪ್ರತಿಕ್ರಿಯೆಯನ್ನು ಪ್ರಕಟಿಸಿದಾಗ ಆ ಎಲ್ಲ ಅಂಶಗಳೂ ನಮಗೆ ಮಾರ್ಗದರ್ಶಕವಾಗಬಲ್ಲವು.

ಶಾಸನಾಧ್ಯಾಯಿಗಳು ಪಾಠವಿಲ್ಲದ ವೀರಗಲ್ಲುಗಳ ಮಹತ್ತ್ವವನ್ನು ಗಮನಿಸದಿರುವುದು ಶೋಚನೀಯ. ಅವುಗಳ ಮೇಲೆ ಶಾಸನವಿಲ್ಲದಿದ್ದರೂ ಅವು ತಮ್ಮ ಶಿಲ್ಪದ ಮೂಲಕ ನೀಡುವ ಮಾಹಿತಿಗಳನ್ನು ಗಮನಿಸಬೇಕಾದುದು ಅವಶ್ಯವಾಗಿದೆ. ಇವು ಹಲವಾರು ಅಪೂರ್ವ ಸಂಗತಿಗಳನ್ನು ಕಲಾತ್ಮಕವಾಗಿ ಹೇಳುವಂಥವು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ನಿಬಂಧದಲ್ಲಿ ಹಲವಾರು ಕಡೆ ಪ್ರಸ್ತಾಪ ಮಾಡಲಾಗಿರುವ ಶ್ರವಣಗುಡಿ, ಕೋಡಿಹಳ್ಳಿ, ಕೋಲಾರ, ಬಾಗಳಿ, ನೆಲವಾಗಿಲು, ರಾಯಚೂರು, ನಗರಗೆರೆ, ಬಲ್ಲ ಮುಂತಾದ ಕಡೆಗಳಲ್ಲಿ ದೊರೆತಿರುವ ವೀರಗಲ್ಲುಗಳನ್ನು ಇಲ್ಲಿ ಸ್ಮರಿಸಬಹುದು. ವೀರಗಲ್ಲು ಶಾಸನಸಹಿತವಾಗಿರಲಿ, ಶಾಸನ ರಹಿತವಾಗಿರಲಿ ಅದು ಮಡಿದ ವೀರನ ಸ್ಮಾರಕವೇ. ಈ ಕಾರಣದಿಂದಾಗಿಯೆ ಅವು ಅಧ್ಯಯನಾರ್ಹ. ಶಾಸನರಹಿತವಾದ ವೀರಗಲ್ಲುಗಳನ್ನು ಶಾಸನಸಹಿತವಾದ ವೀರಗಲ್ಲುಗಳಂತೆ ಖಚಿತವಾಗಿ ವ್ಯಾಖ್ಯಾನಮಾಡುವುದು ಕೆಲವೊಮ್ಮೆ ಕಷ್ಟಸಾಧ್ಯವಾಗಬಹುದು. ಆದರೂ ಅವುಗಳನ್ನು ಶಾಸನಸಹಿತವಾದ ವೀರಗಲ್ಲುಗಳ ಶಿಲ್ಪದೊಡನೆ ಮತ್ತು ಪಾಠದೊಡನೆ ತುಲನೆಮಾಡಿ ಅವುಗಳ

ಶೈಲಿಯ ಆಧಾರದ ಮೇಲೆ ಅವುಗಳ ಕಾಲವನ್ನೂ, ಶಿಲ್ಪದ ವಿವರಗಳ ಮೂಲಕ ಅವುಗಳು ಹೇಳುತ್ತಿರುವ ವಿಷಯವನ್ನೂ ಗ್ರಹಿಸುವುದು ಸಾಧ್ಯವಾಗುತ್ತದೆ. ಇಲ್ಲಿ ಆ ರೀತಿಯ ಒಂದೆರಡು ನಿದರ್ಶನಗಳನ್ನು ಪರಿಚಯ ಮಾಡಿಕೊಳ್ಳಬಹುದು.

ಕುಮ್ಮಟದುರ್ಗದಲ್ಲಿ ಕುಮಾರರಾಮನ ದೇವಾಲಯದ ಮುಂದೆ ಕುದುರೆಯ ಚಿತ್ರಣವನ್ನು ಹೊಂದಿರುವ ಒಂದು ಶಿಲಾಫಲಕವಿದೆ (ಚಿತ್ರ. ೫.) ಈ ಶಿಲ್ಪ ಹೊಂದಿರುವ ಶಿಲಾಫಲಕ ಕುಮಾರರಾಮನ ದೇವಾಲಯದ ಮುಂದುಗಡೆಯೇ ಇರುವುದರಿಂದ ಕುಮಾರರಾಮನನ್ನು ಕುರಿತ ಸಾಹಿತ್ಯದಲ್ಲಿ ಪದೇ ಪದೇ ವರ್ಣಿತವಾಗುವ ಅವನ ಕುದುರೆಯಾದ ಬೊಲ್ಲನೇ ಇದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಚಿಂತಾಮಣಿ ತಾಲ್ಲೂಕ್ ತಳಗವಾರ ಗ್ರಾಮದಲ್ಲಿ ಇದೇ ರೀತಿಯ ಶಿಲ್ಪದ ವಿವರಗಳನ್ನು ಹೊಂದಿರುವ ಶಿಲಾಫಲಕವಿದೆ. ಕುದುರೆಯೊಂದನ್ನು ಸೇವಕನೊಬ್ಬನು ಹಿಡಿದು ನಿಂತಿರುವಂತೆ ಶಿಲ್ಪದ ವಿವರಗಳನ್ನು ಈ ಶಿಲೆಯ ಮೇಲೆ ಬಿಡಿಸಲಾಗಿದೆ (ಚಿತ್ರ ೭). ಇದೇ ವೀರಗಲ್ಲಿನ ಸಮೀಪದಲ್ಲಿ ವೀರನ ಮತ್ತು ಅವನ ಹೆಂಡತಿಯ ಚಿತ್ರಣವಿರುವ ವೀರಗಲ್ಲು ಇದೆ. ಈ ಪರಿಸರದ ಹಿನ್ನೆಲೆಯಲ್ಲಿ ಈ ಕುದುರೆಯು ಅಲ್ಲಿಯೇ ದೊರೆಯುವ ವೀರಗಲ್ಲಿನ ವೀರನ ಪ್ರಿಯವಾದ ಕುದುರೆ ಎಂಬುದಾಗಿ ನಾವು ಊಹಿಸಬಹುದು. ಚಿತ್ರದುರ್ಗದ ಪಾಳೆಯಗಾರರು ತಮ್ಮ ಪಟ್ಟದ ಕುದುರೆ ಮತ್ತು ಆನೆಗಳ ಪ್ರತಿಮೆಗಳನ್ನು ಮಾಡಿ ಇಡುತ್ತಿದ್ದರು ಎಂಬ ಅಂಶವನ್ನು ನೆನೆದರೆ ಮೇಲಿನ ಊಹೆಯು ಸಮಂಜಸವಾದುದೆಂದು ಅನ್ನಿಸದಿರದು. ಮನುಷ್ಯನಷ್ಟೇ ಪರಾಕ್ರಮವನ್ನು ತೋರಿದ ಕುದುರೆ, ಆನೆ, ನಾಯಿಗಳಿಗೆ ಸ್ಮಾರಕವನ್ನು ಹಾಕುವ ಸಂಪ್ರದಾಯ ಬೆಳೆದುಬಂದಿರುವ ಹಿನ್ನೆಲೆಯಲ್ಲಿ ಇಂಥ ಸ್ಮಾರಕ ಶಿಲೆಗಳನ್ನು ವ್ಯಾಖ್ಯಾನ ಮಾಡಿದಾಗ ಅವುಗಳ ಅರ್ಥವಂತಿಕೆ ನಮಗರಿವಾಗುತ್ತದೆ.

ಕೆಲವು ವೀರಗಲ್ಲುಗಳನ್ನು ಅವುಗಳನ್ನು ಕುರಿತಂತೆ ಇರುವ ಐತಿಹ್ಯಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗುತ್ತದೆ. ಐತಿಹ್ಯಗಳು ಕೆಲವೊಮ್ಮೆ ನಮ್ಮನ್ನು ದಾರಿತಪ್ಪಿಸುವ ಪ್ರಯತ್ನ ಮಾಡುತ್ತವೆ ಎಂಬುದು ನಿಜವಾದರೂ (ಈ ನಿಬಂಧದಲ್ಲಿ ಚರ್ಚಿಸಲಾಗಿರುವ ಕೋಡೀರ್ಲಪ್ಪನ ಆರಾಧನಾ ಸಂಪ್ರದಾಯದ ಅಧ್ಯಯನ ನಮ್ಮನ್ನು ಎಚ್ಚರಿಸುತ್ತದೆ.) ಐತಿಹ್ಯಗಳೆಲ್ಲವೂ ತ್ಯಾಜ್ಯವೆಂದು ಹೇಳಬರುವುದಿಲ್ಲ. ದೊರೆಯುವ ಐತಿಹ್ಯ ಮತ್ತು ವೀರಗಲ್ಲಿನ ಶಿಲ್ಪದ ಸಾಮ್ಯತೆಯ ಹಿನ್ನೆಲೆಯಲ್ಲಿ ವಿಚಾರಮಾಡಬೇಕಾಗುತ್ತದೆ. ಹಂಪೆಯಿಂದ ತುಂಗಭದ್ರಾ ನದಿಯನ್ನು ಹುಟ್ಟಿನಲ್ಲಿ ದಾಟಿ ಆನೆಗೊಂದಿಗೆ ಹೋಗಲು ಇಳಿಯುವ ದಡದಲ್ಲಿ ಅಂದರೆ, ಆನೆಗೊಂದಿ ಕೋಟೆಯ ಬಾಗಿಲ ಬಳಿ ಎರಡು ವೀರಗಲ್ಲು ಇವೆ. ಒಂದೊಂದು ವೀರಗಲ್ಲಿನ ಮೇಲೆ ಇಬ್ಬಿಬ್ಬರು ಹುಟ್ಟನ್ನು ಹಿಡಿದು ನಿಂತಿರುವಂತೆ ಶಿಲ್ಪದ ವಿವರಗಳನ್ನು ಆ ವೀರಗಲ್ಲುಗಳು ಹೊಂದಿವೆ. (ಚಿತ್ರ ೩೭, ೩೮). ಅಲ್ಲಿಯ

ಅಂಬಿಗರ ಪ್ರಕಾರ ಅವರ ವಂಶದ ಹಿರಿಯರು ಹುಟ್ಟಿನ ಮೂಲಕ ಜನರನ್ನು ಕಾಪಾಡಲು ಹೋಗಿ ಮಡಿದ ವೀರರಂತೆ. ಅವರ ಆ ವೀರ ಕೃತ್ಯಕ್ಕಾಗಿ ಈ ವೀರಗಲ್ಲುಗಳನ್ನು ಹಾಕಲಾಗಿದ್ದು ನಿರ್ದಿಷ್ಟವಾದ ಸಮಯದಲ್ಲಿ ಅವುಗಳನ್ನು ಅವರು ಆರಾಧಿಸುತ್ತಾರಂತೆ. ಇಲ್ಲಿ ವೀರಗಲ್ಲಿನ ಶಿಲ್ಪ ಮತ್ತು ಐತಿಹ್ಯದಲ್ಲಿ ಸಾಮ್ಯತೆ ಇರುವುದರಿಂದ ಅವು ನೀರಲ್ಲಿ ಮಡಿದ ವೀರರ ಸ್ಮಾರಕಗಳು ಎಂಬುದಾಗಿ ಖಚಿತವಾಗಿ ಹೇಳಿದರೆ ತಪ್ಪಾಗಲಾರದು. ಇದೇ ರೀತಿಯ ಶಿಲ್ಪ ಮತ್ತು ಐತಿಹ್ಯಗಳಲ್ಲಿ ಸಮಾನತೆಯಿರುವ ನಿದರ್ಶನಗಳು ನಮಗೆ ವಿಪುಲವಾಗಿ ದೊರೆಯುತ್ತವೆ.

ಶಿಲ್ಪದ ಶೈಲಿಯ ಆಧಾರದ ಮೇಲೆ ವಿಜಯನಗರದ ಕಾಲದ್ದೆಂದು ಖಚಿತವಾಗಿ ಊಹಿಸಬಹುದಾದ ವೀರಗಲ್ಲುಗಳು ಜಿಲ್ಲೆಯಲ್ಲಿ ವಿಪುಲವಾಗಿ ದೊರೆಯುತ್ತಿದ್ದು ಅವು ನಮ್ಮ ನಾಡಿನಲ್ಲಿ ಸಿಡಿಮದ್ದು ಬಂದೂಕು ಎಲ್ಲಿ ಯಾವಾಗ ಬಳಕೆಗೆ ಬಂತು ಎಂಬ ಅಂಶಗಳನ್ನು ಹೇಳುತ್ತವೆ.

ಎಲ್ಲಾ ಶಾಸನರಹಿತ ವೀರಗಲ್ಲುಗಳನ್ನೂ ಇದೇ ರೀತಿ ವ್ಯಾಖ್ಯಾನಿಸಲು ಬರುತ್ತದೆ ಎಂದು ಹೇಳಲು ಬರುವುದಿಲ್ಲ ಎಂಬುದು ವಾಸ್ತವಾಂಶ. ಅಂತಹ ಒಂದೆರಡು ನಿದರ್ಶನಗಳನ್ನು ಇಲ್ಲಿ ಪರಿಶೀಲಿಸುವುದು ಉಚಿತ.

ಚಿಂತಾಮಣಿ ತಾಲ್ಲೂಕ್, ತಳಗವಾರ ಗ್ರಾಮದಲ್ಲಿ ವಿಜಯನಗರ ಕಾಲದ ವೀರಗಲ್ಲೊಂದಿದೆ. ಈ ವೀರಗಲ್ಲಿನ ಮೇಲೆ ಮೂಡಿಸಲಾಗಿರುವ ಶಿಲ್ಪದ ವಿವರಗಳು ಈ ರೀತಿ ಇದೆ : ವೀರನು ಕತ್ತಿಯನ್ನು ಹಿಡಿದು ತನ್ನ ಹೆಂಡತಿಯೊಂದಿಗೆ ನಿಂತಿದ್ದಾನೆ. ವೀರನ ಬಲಬದಿಯಲ್ಲಿ ವ್ಯಕ್ತಿಯೊಬ್ಬನು ಕೈಮುಗಿದು ನಿಂತಿದ್ದಾನೆ. ವೀರನ ಹೆಂಡತಿಯ ಎಡಗಡೆ ಎತ್ತರವಾದ ವೇದಿಕೆಯ ಮೇಲೆ ಸಣ್ಣ ಹುಡುಗನೊಬ್ಬನು ನಿಂತಿದ್ದಾನೆ. ಇವನನ್ನು ವೀರನ ಹೆಂಡತಿ ತನ್ನ ಕೈಯಿಂದ ಹಿಡಿದಿದ್ದಾಳೆ. ಈ ರೀತಿಯ ಚಿತ್ರಣ ನಮ್ಮ ಗಮನಕ್ಕೆ ಕರ್ನಾಟಕದ ಬೇರಾವ ಭಾಗದಲ್ಲಿ ಕಂಡುಬಂದಿಲ್ಲ. (ಚಿತ್ರ ೨೯೬). ಈ ಬಾಲಕ ಯಾರು ? ಆ ವೀರ ದಂಪತಿಗಳ ಮಗನೇ ? ಅವನೂ ಯುದ್ಧದಲ್ಲಿ ಶತ್ರುಗಳ ಹೊಡೆತಕ್ಕೆ ಸಿಕ್ಕಿ ಮರಣ ಹೊಂದಿದನೆ ? ಅಥವಾ ತಮ್ಮ ಮಗುವನ್ನು ಅನಾಥವಾಗಿ ಬಿಡುವುದಕ್ಕಿಂತ ತಮ್ಮೊಡನೆಯೇ ಕರೆದೊಯ್ಯುವುದು ಉತ್ತಮವೆಂದು ಕರೆದೊಯ್ದರೆ ? "ಅಥವಾ ಹುಡುಗನನ್ನು ಆ ವೀರದಂಪತಿಗಳು ಆ ಇನ್ನೊಬ್ಬ ವ್ಯಕ್ತಿಗೆ ಒಪ್ಪಿಸಿ ಸತ್ತರೇ ?" *ಎಂಬ ಹಲವಾರು ಸಂಶಯಗಳು ಬರುತ್ತವೆ. ಆದರೆ ಯಾವ ಸಂಶಯಕ್ಕೂ ಉತ್ತರ ದೊರೆಯುವುದು ಕಷ್ಟ

ಕೋಲಾರ ಜಿಲ್ಲೆ ಬೌರಿಂಗ್‌ಪೇಟೆ ತಾಲ್ಲೂಕ್ ಮರಗಲ್ಲು ಗ್ರಾಮದ ಕೆರೆಯ ಹಿಂಬದಿಯಲ್ಲಿ ಐದಾರು ವೀರಗಾರರ ಗುಡಿಗಳಿವೆ. ಇಲ್ಲಿರುವ ವೀರಗಲ್ಲುಗಳ ಶಿಲ್ಪದ ವಿವರಗಳು ಹಲವಾರು ದೃಷ್ಟಿಗಳಿಂದ ಗಮನಾರ್ಹವಾಗಿವೆ. ಇವು ಯಾವುದೇ ಹೋರಾಟದಲ್ಲಿ ಮಡಿದ ವೀರರ ಸ್ಮಾರಕಗಳು

* ಈ ಸಂಶಯ ನನ್ನ ಮಾರ್ಗದರ್ಶಕರಾದ ಡಾ. ಎಂ. ಚಿದಾನಂದಮೂರ್ತಿಯವರದ್ದು

ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ. ಒಂದು ವೀರಗಲ್ಲಿನ ಶಿಲ್ಪ ಈ ರೀತಿ ಇದೆ ; ವೀರನನ್ನು ಬಿಡಿಸಿ, ಅವನ ಬದಿಗೆ ಪೇಳಿಗೆಯಲ್ಲಿ ಹೆಡೆ ಎತ್ತಿ ನಿಂತಿರುವ ಹಾವನ್ನು ಅದರ ಮುಂದುಗಡೆ ಪುಂಗಿಯನ್ನು ಬಿಡಿಸಲಾಗಿದೆ. ವೀರನು ಕತ್ತಿಯನ್ನು ಹಿಡಿದು ವೀರಾವೇಶದಿಂದ ನಿಂತಿರುವುದರಿಂದ ಇದು ವೀರನೇ ಸ್ಮಾರಕವೇ ಆಗಿರಬಹುದು ಎಂಬ ಸಂಶಯ ಬರುತ್ತದೆ. ಹಾಗಾದರೆ ಹಾವು ಮತ್ತು ಪುಂಗಿಯನ್ನು ಬಿಡಿಸಿರುವುದರ ಅರ್ಥವೇನು ? ಎಂಬ ಪ್ರಶ್ನೆ ಎದುರಾಗುತ್ತದೆ. ಇದು ಅವನು ಹಾವಾಡಿಗರವನು ಎಂಬುದನ್ನು ಸೂಚಿಸುತ್ತದೆಯೇ ಅಥವಾ ಹಾವನ್ನು ಕೊಲ್ಲುವಲ್ಲಿ ಸತ್ತನೆ ಎಂಬುದನ್ನು ಹೇಳಲು ಬರುವುದಿಲ್ಲ. (ಚಿತ್ರ ೨೯೯), ಬೆಂಗಳೂರು ಜಿಲ್ಲೆ ದೊಡ್ಡ ಹುಲ್ಲೂರು ವೀರಗಾರರ ಗುಡಿಗಳಲ್ಲಿರುವ ವೀರಗಲ್ಲೊಂದರಲ್ಲಿ ಮೇಲಿನ ವೀರಗಲ್ಲನ್ನು ಹೋಲುವ ವೀರಗಲ್ಲು ಇದೆ. ಇಲ್ಲಿ ವೀರನು ಒಂದು ಕೈಯಲ್ಲಿ ಕತ್ತಿಯನ್ನೂ ಮತ್ತೊಂದು ಕೈಯಲ್ಲಿ ಅವನಷ್ಟೇ ಉದ್ದದ ಹಾವೊಂದನ್ನೂ ಹಿಡಿದಿದ್ದಾನೆ. (ಚಿತ್ರ. ೨೯೮). ಇಲ್ಲಿ ವೀರ ಬಹುಶಃ ಹಾವನ್ನು ಕೊಲ್ಲುವಲ್ಲಿ ಮಡಿದಿದ್ದಾನೆ ಎಂದು ಊಹಿಸಬಹುದು. ಆದರೆ ಮೇಲಿನ ವೀರಗಲ್ಲಿನ ಬಗ್ಗೆ ಆ ರೀತಿ ಹೇಳಲು ಆಗುವುದಿಲ್ಲ.

ಈ ವೀರಗಲ್ಲಿನ ಪಕ್ಕದಲ್ಲಿರುವ ಮತ್ತೊಂದು ವೀರಗಲ್ಲಿನ ಶಿಲ್ಪದ ವಿವರ ಈ ರೀತಿ ಇದೆ: ವ್ಯಕ್ತಿಯೊಬ್ಬನು ಕೈಯಲ್ಲಿ ಕತ್ತಿ ಹಿಡಿದು ಬೀಸುತ್ತಾ ಎತ್ತಿನಮೇಲೆ ಕುಳಿತಿದ್ದಾನೆ. ಉಳಿದಂತೆ ಯಾವ ವಿವರಗಳೂ ಇಲ್ಲ. ಇದು ಗೊಲ್ಲರವನ ವೀರಗಲ್ಲು ಆಗಿರಬಹುದೆ ? ಮಡಿದ ವ್ಯಕ್ತಿ ಗೋಪಾಲಕ ವೃತ್ತಿಯವನು ಎಂದು ಹೇಳಲು ಶಿಲ್ಪಿ ಈ ರೀತಿ ಬಿಡಿಸಿರಬಹುದೇ ಎಂಬ ಸಂಶಯಗಳು ಬರುತ್ತವೆ. (ಚಿತ್ರ ೩೦೦)

ಈ ಎಲ್ಲಾ ನಿದರ್ಶನಗಳನ್ನೂ ಇಲ್ಲಿ ನೀಡಿರುವ ಮುಖ್ಯ ಉದ್ದೇಶವೆಂದರೆ ; ಇನ್ನು ಮುಂದೆ ಈ ಬಗ್ಗೆ ಸಂಶೋಧನೆ ಮಾಡುವ ಸಂಶೋಧಕರು ತಮ್ಮ ಕ್ಷೇತ್ರಪರಿವೀಕ್ಷಣಾ ಕಾರ್ಯದಲ್ಲಿ ಈ ರೀತಿಯ ವೀರಗಲ್ಲುಗಳನ್ನು ಗಮನಿಸಿ ವಿಶ್ಲೇಷಿಸಲಿ ಎಂಬುದೇ ಆಗಿದೆ. ವಿಶ್ವವಿದ್ಯಾಲಯದ ವರಾಗಲೀ, ಸರಕಾರದ ಶಾಸನ ಪ್ರಾಚ್ಯವಸ್ತು ಇಲಾಖೆಯವರಾಗಲೀ ಕರ್ನಾಟಕದ ಪ್ರತಿಯೊಂದು ಜಿಲ್ಲೆಯ, ತಾಲ್ಲೂಕಿನ, ಹೋಬಳಿಯ, ಗ್ರಾಮದ ಎಲ್ಲಾ ವೀರಗಲ್ಲುಗಳು ಸ್ಮಾರಕ ಶಿಲೆಗಳ ಛಾಯಾ ಚಿತ್ರಗಳನ್ನು ಪ್ರಕಟಗೊಳಿಸಿದರೆ ಅವುಗಳ ಅಧ್ಯಯನದಿಂದ ಇನ್ನಷ್ಟು ಹೊಸಸಂಗತಿಗಳು ಬೆಳಕಿಗೆ ಬರುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಈ ಬಗ್ಗೆ ಇದುವರೆಗೆ ನಡೆದಿರುವ ಕೆಲಸದ ಬಗ್ಗೆ ಅತೃಪ್ತಿ ವ್ಯಕ್ತಪಡಿಸುವುದು ಅನಿವಾರ್ಯವಾಗಿದೆ.

ಇನ್ನು ಮುಂದೆಯೂ ವೀರಗಲ್ಲುಗಳ ಬಗ್ಗೆ ವ್ಯಾಪಕವಾಗಿ ಕಾರ್ಯ ನಡೆಯುವುದಕ್ಕೆ ಅವಕಾಶವಿದೆ. ಇಂದಿಗೂ ಸಂಶೋಧಕರ ಕಣ್ಣಿಗೆ ಬೀಳದ, ಬಿದ್ದರೂ ಗಮನಬಾರದ ಅಪಾರ ಸಂಖ್ಯೆಯ ವೀರಗಲ್ಲುಗಳು ಕರ್ನಾಟಕದಲ್ಲಿವೆ ಎಂಬುದು ವಾಸ್ತವ ಸಂಗತಿ.

ವೀರಗಲ್ಲುಗಳಿಗೆ ಸಂಬಂಧಪಟ್ಟಂತೆ ನಡೆಯುವ ಅರಾಧನ ಸಂಪ್ರದಾಯಗಳ ಬಗ್ಗೆ ಇದುವರೆಗೆ ನಮ್ಮಲ್ಲಿ ಯಾರೂ ಗಮನಹರಿಸಿಲ್ಲ. ಕುರುಬ, ನಾಯಕ ಮುಂತಾದ ಜನಾಂಗಗಳವರು ಆರಾಧಿಸುವ ವೀರರ ಬಗ್ಗೆ ವ್ಯಾಪಕವಾಗಿ ಕೆಲಸ ಮಾಡಲು ಸಾಕಷ್ಟು ಮಾಹಿತಿಯು ದೊರೆಯುತ್ತದೆ. ಈ ಕಾರ್ಯ ಅಗತ್ಯವಾಗಿ ನಡೆಯಬೇಕು ಎಂಬುದು ನಮ್ಮ ಅನ್ನಿಸಿಕೆ.

ವೀರಗಲ್ಲುಗಳ ಶಿಲ್ಪದ ಎರಡನೆಯ ಹಂತ ನಮ್ಮ ನಾಡಿನ ವಾದ್ಯಗಳ ಬಗ್ಗೆ ವಿಶೇಷವಾದ ಬೆಳಕನ್ನು ಚೆಲ್ಲುತ್ತದೆ. ವೀರಗಲ್ಲಿನ ಶಿಲ್ಪಿಗಳು ವಾದ್ಯಗಳನ್ನು ವೀರಗಲ್ಲಿನಲ್ಲಿ ಬಿಡಿಸುವಾಗ ತೋರಿರುವ ಎಚ್ಚರ ಗಮನಾರ್ಹವಾದದ್ದು. ಅಂದರೆ, ಮೊದಲ ಹಂತವಾದ ಯುದ್ಧದ ಚಿತ್ರಣದಲ್ಲಿ ಬಿಡಿಸಿರುವ ವಾದ್ಯಗಳನ್ನು ಎರಡನೆಯ ಹಂತದಲ್ಲಿ ಬಿಡಿಸಿಲ್ಲ. ಮೊದಲ ಹಂತದಲ್ಲಿ ಯುದ್ಧವಾದ್ಯಗಳನ್ನು ಬಿಡಿಸಿದ್ದಾರೆ. ಈ ಯುದ್ಧ ವಾದ್ಯಗಳ ಘೋರ್ಗರಿತ ಎಲ್ಲ ಕಡೆಯೂ ಸರಿಹೊಂದುವುದಿಲ್ಲ ಎಂಬುದನ್ನು ಅರಿತಿದ್ದ ನಮ್ಮ ಜನ ಸಂಗೀತಕ್ಕೆ ಬೇರೆಯ ವಾದ್ಯಗಳನ್ನು ಸಿದ್ಧಪಡಿಸಿದ್ದರು. ಯುದ್ಧವಾದ್ಯಗಳು ತಮ್ಮ ಧ್ವನಿವಿಶೇಷತೆಯಿಂದಲೇ ಯುದ್ಧರಂಗದಲ್ಲಿ ಯೋಧರಿಗೆ ಒಂದು ರೀತಿಯ ಹುರುಪನ್ನು ತುಂಬಬಲ್ಲ ಶಕ್ತಿಯನ್ನು ಹೊಂದಿದ್ದುವು. ಆದರೆ ಸಂಗೀತ ವಾದ್ಯಗಳು ತಮ್ಮ ಮೃಧುಮಧುರವಾದ ನಾದತರಂಗಗಳಿಂದ ಮನಸ್ಸನ್ನು ಒಂದು ರೀತಿಯ ಸ್ಥಿಮಿತಕ್ಕೆ ತರಬಲ್ಲ ಶಕ್ತಿಯನ್ನು ಹೊಂದಿವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದ್ದ ವೀರಗಲ್ಲಿನ ಶಿಲ್ಪಿಗಳು ತಮ್ಮ ಸಮಕಾಲೀನ ಸಮಾಜದಲ್ಲಿ ಪ್ರಚಲಿತವಿದ್ದ ಸಂಗೀತವಾದ್ಯಗಳನ್ನು ಎರಡನೆಯ ಹಂತದಲ್ಲಿ ಬಿಡಿಸಿದ್ದಾರೆ. ಕರ್ನಾಟಕದ ಸಂಗೀತದ ಬಗ್ಗೆ ಅದರಲ್ಲಿಯೂ ವಾದ್ಯಗಳ ಬಗ್ಗೆ ಸಂಶೋಧನೆ ಮಾಡುವವರಿಗೆ ಅತ್ಯಪೂರ್ವ ಮಾಹಿತಿಗಳು ವಿರಗಲ್ಲುಗಳ ಶಿಲ್ಪದಲ್ಲಿ ದೊರೆಯುತ್ತವೆ. ಸಂಗೀತವಾದ್ಯಗಳನ್ನು ವಿಶೇಷವಾಗಿ ಬಿಡಿಸಿರುವ ವೀರಗಲ್ಲುಗಳು ಕಲ್ಯಾಣಿ ಚಾಲುಕ್ಯರ, ಹೊಯ್ಸಳ ಮತ್ತು ಕೆಲಮಟ್ಟಿಗೆ ವಿಜಯನಗರ ಕಾಲದ ವೀರಗಲ್ಲುಗಳಲ್ಲಿ ದೊರೆಯುತ್ತವೆ. ಕಾಯ್ಕಿಣಿ, ಹಾಡುವಳ್ಳಿ, ಶಿವಮೊಗ್ಗಾ, ಬೇಡ್ಕಣಿ, ಕಳ್ಳಿಹಾಳ ಮುಂತಾದ ಕಡೆಗಳಲ್ಲಿನ ವೀರಗಲ್ಲುಗಳ ಶಿಲ್ಪವನ್ನು ಇಲ್ಲಿ ಸ್ಮರಿಸಬಹುದು.

ವೀರಗಲ್ಲುಗಳ ಪಾಠದಲ್ಲಿ ಮಡಿದ ವೀರನ, ಅವನ ಸಂಬಂಧಿಗಳ, ಅವನ ಶತ್ರುಗಳ ಹೆಸರುಗಳು ವಿಪುಲವಾಗಿ ದೊರೆಯುತ್ತವೆ. ಹಾಗೆಯೇ ವೀರನ ಊರು, ಯುದ್ಧ ನಡೆದ ಸ್ಥಳ ಮುಂತಾದ ಸ್ಥಳನಾಮಗಳೂ ದೊರೆಯುತ್ತವೆ. ಆದಕಾರಣ ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಬಗ್ಗೆ ಅಧ್ಯಯನ ಮಾಡುವವರು ತಪ್ಪದೇ ವೀರಗಲ್ಲುಗಳ ಪಾಠದತ್ತ ಗಮನಹರಿಸುತ್ತಾರೆಂದು ನಂಬಿದ್ದೇವೆ.

ನಮ್ಮ ಪ್ರವಾಸಕಾಲದಲ್ಲಿ ಗಮನಿಸಿದ ವೀರಗಲ್ಲುಗಳ ಇನ್ನೊಂದು ಪ್ರಕಾರವಾದ ಆತ್ಮಬಲಿದಾನ ಮಾಡಿಕೊಂಡ ವೀರರ ಸ್ಮಾರಕ ಶಿಲೆಗಳ ಅಧ್ಯಯನ ಅವುಗಳ ಧಾರ್ಮಿಕ ಮತ್ತು

ಸಾಮಾಜಿಕ ಹಿನ್ನೆಲೆಯಲ್ಲಿ ನಡೆಯಬೇಕಾಗಿದೆ. ಶೈವಧರ್ಮದ ಶಾಕೆಯಾದ ಕಾಪಾಲಿಕರ ಕುರುಹುಗಳನ್ನು ಹೊಂದಿರುವ ಸ್ಥಳಗಳಲ್ಲಿ ಈ ರೀತಿಯ ವೀರಗಲ್ಲುಗಳು ಸಾಮಾನ್ಯವಾಗಿ ದೊರೆಯುತ್ತವೆ.

ಈ ಹಿಂದೆ ತಿಳಿಸಿದಂತೆ ಕನ್ನಡ ನಾಡಿನಲ್ಲಿ ಅಸಂಖ್ಯಾತ ವೀರಗಲ್ಲುಗಳು ದೊರೆಯುತ್ತವೆ. ಉತ್ತಮ ಕಲಾಕೃತಿಗಳೂ, ಐತಿಹಾಸಿಕ ದಾಖಲೆಗಳೂ ಆಗಿರುವ ಇವುಗಳನ್ನು ಸಾಧ್ಯವಾದಷ್ಟು ಮಟ್ಟಿಗಾದರೂ ಸಂರಕ್ಷಿಸುವುದು ನಮ್ಮ ಆದ್ಯಕರ್ತವ್ಯಗಳಲ್ಲೊಂದು. ಈ ಕೆಲಸವನ್ನು ಕೇವಲ ಸರಕಾರ, ವಿಶ್ವವಿದ್ಯಾಲಯಗಳು ಮಾಡುವುದು ಸಾಧ್ಯವಿಲ್ಲ. ಪ್ರಕೃತಿಯ ವಿಕೋಪ, ಜನರ ಅಜ್ಞಾನಗಳಿಂದಾಗಿ ಅವು ನಾಶವಾಗುತ್ತಿವೆ. ಈ ರೀತಿಯ ನಷ್ಟಕ್ಕೆ ಮಂಗಳಹಾಡಲು ಸರಕಾರ ಮತ್ತು ವಿಶ್ವವಿದ್ಯಾಲಯಗಳು ಜನರಿಗೆ ಇವುಗಳ ಬಗ್ಗೆ ತಿಳುವಳಿಕೆಯನ್ನು ನೀಡುವ ಪ್ರಯತ್ನ ಮಾಡಬೇಕು. ಅಲ್ಲಲ್ಲಿ ಹರಡಿಹೋಗಿರುವ ವೀರಗಲ್ಲುಗಳನ್ನು ಆಯಾ ಗ್ರಾಮದ ಚಾವಡಿ ಅಥವಾ ಶಾಲೆ ಅಥವಾ ದೇವಾಲಯಗಳ ಮುಂದೆ ನಿಲ್ಲಿಸುವ ಪ್ರಯತ್ನವನ್ನು ಗ್ರಾಮಾಂತರ ಯುವಕರು ಮಾಡಬೇಕು. ಹೀಗೆ ಸ್ಥಳಾಂತರ ಮಾಡುವಲ್ಲಿ ಯಾವ ಸ್ಥಳದಿಂದ ಅವುಗಳನ್ನು ರವಾನಿಸಲಾಯಿತು ಎಂಬ ಅಂಶವನ್ನು ಪಂಚಾಯಿತಿ ಆಫೀಸಿನಲ್ಲಿ ನೊಂದಾವಣಿ ಮಾಡಬೇಕು.

ಈ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಪ್ರಾಚ್ಯ ವಸ್ತು ಸಂಗ್ರಹಾಲಯವಿಭಾಗದವರು ಮಾಡಿರುವ ಸ್ತುತ್ಯ ಪ್ರಯತ್ನವನ್ನು ಇಲ್ಲಿ ಸ್ಮರಿಸಬಹುದು. ಶಿವಮೊಗ್ಗಾ, ಬೆಂಗಳೂರು, ರಾಯಚೂರು, ಚಿತ್ರದುರ್ಗ ಮುಂತಾದ ಕಡೆಗಳಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಆಯಾ ಪ್ರದೇಶಗಳಲ್ಲಿ ದೊರೆಯುವ ವಿಶಿಷ್ಟ ವೀರಗಲ್ಲುಗಳನ್ನು ತಂದು ಸಂಗ್ರಹಿಸಿ ಸಮರ್ಪಕವಾಗಿ ಪ್ರದರ್ಶಿಸಿದ್ದಾರೆ. ಹರಿಯಕ್ಕನ ವೀರಗಲ್ಲು ಈಗ್ಗೆ ಮೂರು ವರ್ಷಗಳ ಹಿಂದೆ ಷಿಕಾರಿಪುರದ ಕೆರೆಯಲ್ಲಿದ್ದು ಅದನ್ನು ನಾವು ಛಾಯಾಚಿತ್ರ ತೆಗೆಯಲು ಹೋಗಿ ಪ್ರಾಣಾಪಾಯವನ್ನು ಎದುರಿಸಬೇಕಾಯ್ತು. ಅಂತಹ ವೀರಗಲ್ಲನ್ನು ಸಾಹಸದಿಂದ ತಂದು ಇದೀಗ ಶಿವಮೊಗ್ಗಾ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಿ ನಾಡಿನ ಎಲ್ಲ ಸಂಶೋಧಕರಿಗೂ, ಆಸಕ್ತರಿಗೂ ಸುಲಭವಾಗಿ ದೊರೆಯುವಂತೆ ಮಾಡಿದ್ದಾರೆ. ಅವರ ಈ ಸ್ತುತ್ಯಕಾರ್ಯಕ್ಕಾಗಿ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ರೀತಿಯಲ್ಲಿಯೇ ಶಿಲ್ಪ ಮತ್ತು ವಿಷಯದ ದೃಷ್ಟಿಯಿಂದ ಮಹತ್ವದ್ದಾದ ವೀರಗಲ್ಲುಗಳನ್ನು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಸಂಗ್ರಹಿಸಿಡುತ್ತಾರೆಂದು ಭಾವಿಸುತ್ತೇವೆ.

ಕೇಂದ್ರ ಸರಕಾರದ ಪ್ರಾಚ್ಯ ಇಲಾಖೆಯವರೂ ಸಹ ಈ ತೆರನ ಪ್ರಯತ್ನಗಳನ್ನು ಬಳ್ಳಿಗಾವೆ, ಐಹೊಳೆ, ಪಟ್ಟದಕಲ್ಲು, ಬಾದಾಮಿ ಮುಂತಾದ ಕಡೆಗಳಲ್ಲಿ ನಡೆಸಿರುವುದನ್ನು ನೆನೆಯಬಹುದು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯವರು ಅನೇಕ ಮಹತ್ವದ ವೀರಗಲ್ಲುಗಳನ್ನೂ ಮತ್ತು ಸ್ಮಾರಕ ಶಿಲೆಗಳನ್ನೂ ಸಂಗ್ರಹಿಸಿ ನಮ್ಮೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಈ ದಿಸೆಯಲ್ಲಿ ಕರ್ನಾಟಕ ಸರಕಾರದ ಪೋಲೀಸ್ ಇಲಾಖೆಯವರು ಮಾಡಿರುವ ಸೇವೆಯಂತೂ ಪ್ರಶಂಸಾರ್ಹವಾಗಿದೆ. ಶಿವಮೊಗ್ಗಾ ಮತ್ತು ರಾಯಚೂರುಗಳಲ್ಲಿನ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರ ಕಛೇರಿಗಳ ಆವರಣದಲ್ಲಿ ಆಯಾ ಪ್ರದೇಶದಲ್ಲಿನ ಸುಂದರವಾದ ವೀರಗಲ್ಲು, ಮಾಸ್ತಿಗಲ್ಲು, ನಿಷಿಧಿ ಕಲ್ಲುಗಳನ್ನು ಸಂಗ್ರಹಿಸಿ ಜೋಪಾನಗೊಳಿಸಿದ್ದಾರೆ. ಎಲ್ಲೋ ಎಂದೋ ಹಾಳಾಗಿ ಹೋಗಬೇಕಾಗಿದ್ದ ಈ ಅಪೂರ್ವ ದಾಖಲೆಗಳನ್ನು ಮುಂದಿನ ತಲೆಮಾರಿನವರಿಗಾಗಿ ಉಳಿಸುವ ಇವರ ಈ ಪ್ರಯತ್ನವನ್ನು ಎಷ್ಟು ಕೊಂಡಾಡಿದರೂ ಸಾಲದು. ಶಿವಮೊಗ್ಗಾ ಜಿಲ್ಲೆಯ ಅನೇಕ ಪೋಲೀಸ್ ಠಾಣೆಗಳ ಮುಂದೆ ವೀರಗಲ್ಲುಗಳನ್ನು ಸಂರಕ್ಷಿಸಿಟ್ಟಿರುವುದನ್ನು ಗಮನಿಸಬಹುದು.

ನಮ್ಮ ಈ ಅಧ್ಯಯನ ಭಾರತದ ಮತ್ತು ಕರ್ನಾಟಕದ ಇತಿಹಾಸವನ್ನು ಬರೆಯುವಲ್ಲಿ ಹಲವಾರು ಮಹತ್ವದ ವಿಷಯಗಳನ್ನು ನೀಡಬಲ್ಲುದು. ಹಾಗೆಯೇ ನಮ್ಮ ಜನರ ಜೀವನಮೌಲ್ಯಗಳನ್ನು ಆದರ್ಶಗಳನ್ನೂ ತಿಳಿಯುವಲ್ಲಿ, ಅವುಗಳನ್ನು ಜನ ಎಷ್ಟರಮಟ್ಟಿಗೆ ತಮ್ಮ ಜೀವನದಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದರು ಎಂಬುದನ್ನು ತಿಳಿಯುವಲ್ಲಿ ಮಹತ್ವದ ಸಂಗತಿಗಳನ್ನು ತಿಳಿಸುತ್ತದೆ. ಒಂದು ದೇಶದ ಸಾಮಾಜಿಕ ಮೌಲ್ಯಗಳನ್ನು, ರಾಜಕೀಯ ಸ್ಥಿತಿಗಳನ್ನು ರೂಪಿಸುವಲ್ಲಿ ಜನಸಾಮಾನ್ಯರ ಪಾತ್ರವೇನಿತ್ತು ಎಂಬುದರ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ ಎಂಬುದಾಗಿ ಭಾವಿಸಿದ್ದೇವೆ.

ಭಾರತೀಯ ಮೂರ್ತಿಶಿಲ್ಪದಲ್ಲಿ ಕರ್ನಾಟಕದ ಮೂರ್ತಿಶಿಲ್ಪಕ್ಕೆ ವಿಶಿಷ್ಟವಾದ ಸ್ಥಾನವಿದೆ. ಈ ವಿಶಿಷ್ಟಸ್ಥಾನವನ್ನು ಕಲ್ಪಿಸುವಲ್ಲಿ ವೀರಗಲ್ಲುಗಳ ಶಿಲ್ಪದ್ದೂ ಗಮನಾರ್ಹ ಪಾತ್ರವಿದೆ ಎಂಬುದನ್ನು ಮರೆಯಲಾಗದು. ಭಾರತೀಯ ಸ್ಮಾರಕಗಳಲ್ಲಿ ಕರ್ನಾಟಕದ ವೀರಗಲ್ಲುಗಳು ತಮ್ಮ ಶಿಲ್ಪ ಮತ್ತು ಪಾಠಗಳಿಂದಾಗಿ ಮಹತ್ವದ್ದೆನ್ನಿಸಿವೆ. ಭಾರತೀಯ ಸ್ಮಾರಕ ಶಿಲೆಗಳ ತೌಲನಿಕ ಅಧ್ಯಯನಕ್ಕೆ ಈ ನಿಬಂಧ ಪೋಷಕವಾಗುತ್ತದೆ ಎಂದು ಆಶಿಸಿದ್ದೇವೆ.

ಅನುಬಂಧ ೧

ಸ್ವರ್ಗ – ವೀರಸ್ವರ್ಗ

ವೀರಗಲ್ಲುಗಳ ಪಾಠ ಮತ್ತು ಶಿಲ್ಪದಲ್ಲಿ 'ಸ್ವರ್ಗದ' ಪ್ರಸ್ತಾಪ ಪದೇ ಪದೇ ಬರುವುದರಿಂದ ಸ್ವರ್ಗ ಮತ್ತು ವೀರಸ್ವರ್ಗದ ಬಗ್ಗೆ ಸ್ವಲ್ಪಮಟ್ಟಿಗೆ ಪರಿಶೀಲಿಸುವುದು ಸೂಕ್ತವೆನಿಸುತ್ತದೆ. ಏಕೆಂದರೆ ಈ ಕಲ್ಪನೆಯು ಶಿಲ್ಪ ಮತ್ತು ಪಾಠದಲ್ಲಿ ಹೇಗೆ ಸ್ಥಾನವನ್ನು ಪಡೆದಿದೆ ಎಂಬುದನ್ನು ತಿಳಿಯಲು ಸಹಾಯಕವಾಗುತ್ತದೆ.

ಸಮಾಜವು ಕಂಡುಕೊಂಡಿರುವ ಜೀವನಮೌಲ್ಯಗಳನ್ನು ಅನುಸರಿಸಿ ಕಾಪಾಡಿಕೊಂಡು ಬರುವ ಮಾನವನಿಗೆ ಇಹಪರಗಳೆರಡರಲ್ಲೂ ನೆಮ್ಮದಿ ಸಿಗುತ್ತದೆ ; ಈ ನೆಮ್ಮದಿ ಇಹದಲ್ಲಿ ಕೆಲವೊಮ್ಮೆ ದೊರೆಯದೇ ಹೋದರೂ, ಪರದಲ್ಲಿ ಖಂಡಿತ ಲಭಿಸುತ್ತದೆ ಎಂಬ ನಂಬಿಕೆಯ ಮೇಲೆ ಸ್ವರ್ಗ ನರಕಗಳ ಕಲ್ಪನೆ ನಿಂತಿದೆ. ವ್ಯಕ್ತಿಯೊಬ್ಬನಿಗೆ, ಸ್ವರ್ಗ ನರಕಗಳು ಅವನು ಇಹದಲ್ಲಿ ನಡೆದುಕೊಂಡ ರೀತಿ ಮತ್ತು ಅನುಸರಿಸಿದ ಮಾರ್ಗವನ್ನು ಅವಲಂಬಿಸಿರುತ್ತದೆ. ಈ ನಿಲುವು ಎಲ್ಲಾ ದೇಶಗಳ ಸ್ವರ್ಗ ನರಕದ ಕಲ್ಪನೆಯ ಬಗ್ಗೆ ಅನ್ವಯವಾಗುತ್ತದೆ.

ಭಾರತದಲ್ಲಿ ಈಕಲ್ಪನೆ, ವೇದಕಾಲದಿಂದಲೂ ಜನಜೀವನದೊಂದು ಮೌಲ್ಯವಾಗಿ ಬೆಳೆದುಬಂದಿದೆ. ಈ ಎರಡೂ ಲೋಕಗಳ ಸುದೀರ್ಘ ವರ್ಣನೆಗಳು ವೇದ, ಸೂತ್ರ ಸ್ಮೃತಿ, ಪುರಾಣ ಮತ್ತು ಕಾವ್ಯಗಳಲ್ಲಿ ಬಂದಿವೆ. ಆ ಬಗ್ಗೆ ವಿವರವಾಗಿ ಪರಿಶೀಲಿಸುವುದು ನಮ್ಮ ಮುಖ್ಯ ಉದ್ದೇಶವಲ್ಲವಾದ್ದರಿಂದ ಅದನ್ನು ಇಲ್ಲಿ ಕೈ ಬಿಟ್ಟಿದ್ದೇವೆ.[೧]

ಭಾರತೀಯ ಪುರಾಣಗಳು ಸ್ವರ್ಗದ ಭೋಗ ಭಾಗ್ಯಗಳ ಬಗ್ಗೆ ಖಚಿತವಾದ ವಿವರಣೆಯನ್ನು ನೀಡುತ್ತವೆ. ಈ ಎಲ್ಲ ಪುರಾಣಗಳ ಅಭಿಪ್ರಾಯದಂತೆ ಸ್ವರ್ಗದಲ್ಲಿ 'ನಂದನವನ' ಇದೆ. ಅಲ್ಲಿ ಪುಷ್ಪಕ ವಿಮಾನ, ಸುವರ್ಣ ಮಂಚಗಳು, ಆಸನಗಳು, ಸುಂದರ ತರುಣಿಯರಾದ ಅಪ್ಸರೆಯರೂ ಇರುತ್ತಾರೆ. ಮನುಷ್ಯನಾದವನು ಭೂಲೋಕದಲ್ಲಿ ಯಾವ ಭೋಗ ಭಾಗ್ಯಗಳನ್ನು ಪಡೆಯಲು

---

೧ ಸ್ವರ್ಗ ಮತ್ತು ನರಕಗಳ ಕಲ್ಪನೆಯ ಬಗ್ಗೆ ವಿವರಗಳಿಗೆ ನೋಡಿ –
P.V. Kane : History of Dharma Sastras. Vol. 5

ಸಾಧ್ಯವಾಗದೋ ಆ ಎಲ್ಲ ಭೋಗಭಾಗ್ಯಗಳನ್ನು ನಿರಂತರವಾಗಿ ಅವನು ಸ್ವರ್ಗದಲ್ಲಿ ಅನುಭವಿಸಬಹುದು ಎಂಬುದಾಗಿ ಅವು ತಿಳಿಸುತ್ತವೆ.[೨]

ಸ್ವರ್ಗದ ಕಲ್ಪನೆಯ ವ್ಯಾಖ್ಯಾನದಲ್ಲಿ ಪುನಃ ಉಲ್ಲೇಖವಾಗುವವರು ಅಪ್ಸರೆಯರು. ಇವರಿಗೆ ಅನುಚರರಾಗಿ ಯಕ್ಷ, ಗಂಧರ್ವ, ಕಿನ್ನರರ ಪ್ರಸ್ತಾಪ ಬರುತ್ತದೆ. ಅಪ್ಸರೆಯರ ವಿಷಯವಾಗಿ ಋಗ್ವೇದದಲ್ಲಿ ಹೆಚ್ಚಿನ ಆಧಾರಗಳೇನೂ ದೊರೆಯುವುದಿಲ್ಲ. ಆದರೂ ಇವರು ಆಕಾಶದ ಅತ್ಯುನ್ನತವಾದ ಪ್ರದೇಶದಲ್ಲಿ ತಮ್ಮ ಪ್ರಿಯತಮರಾದ ಗಂಧರ್ವರೊಡನೆ ಇರುತ್ತಾರೆ ಎಂಬುದಾಗಿ ತಿಳಿದು ಬರುತ್ತದೆ. ಅಥರ್ವವೇದದಲ್ಲಿ ಇವರ ಬಗ್ಗೆ ಹೆಚ್ಚಿನ ವಿವರಗಳು ದೊರೆಯುತ್ತವೆ. ಇಲ್ಲಿಯೂ ಅವರನ್ನು ಗಂಧರ್ವರ ಪತ್ನಿಯರೆಂದೇ ಗುರುತಿಸಲಾಗಿದೆ. 'ಶತಪಥ ಬ್ರಾಹ್ಮಣ'ದಲ್ಲಿ ಅಪ್ಸರೆಯರು ನೃತ್ಯಗೀತ ವಾದ್ಯಗಳಲ್ಲಿ ಮಗ್ನರಾಗಿರುತ್ತಾರೆ ಎಂಬುದಾಗಿ ಹೇಳಿದೆ. "ಅಪೂರ್ವ ಸುಂದರಿಯರಾದ ಅಪ್ಸರಸ್ತ್ರೀಯರ ಪ್ರೇಮವು ಗಂಧರ್ವರಿಗೆ ಮಾತ್ರ ಮೀಸಲಾಗಿಲ್ಲ. ಆಗಾಗ ಅವರಿಂದ ಮನುಷ್ಯರಿಗೂ ಸುಖ ಉಂಟು".[೩] ಕೌಸ್ತುಕೀ ಉಪನಿಷತ್ತಿನಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ವಿವರಗಳು ದೊರೆಯುತ್ತವೆ ; ಸ್ವರ್ಗದಲ್ಲಿ ಐದುನೂರು ಜನ ಅಪ್ಸರೆಯರು ಇದ್ದಾರೆ. ಇವರು ಸ್ವರ್ಗಕ್ಕೆ ಹೋದ ವ್ಯಕ್ತಿಯನ್ನು ಬರಮಾಡಿಕೊಳ್ಳಲು ಕಾದಿರುತ್ತಾರೆ. ಇವರಲ್ಲಿ ನೂರು ನೂರು ಜನ ಹಾರ, ಸುಗಂಧ ದ್ರವ್ಯ, ಫಲ, ಪುಷ್ಪ ಒಡವೆ, ವಸ್ತ್ರ ಮುಂತಾದ ಭೋಗ ಸಾಮಗ್ರಿಗಳನ್ನು ಹಿಡಿದುಕೊಂಡು ಅವನನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ.[೪] ಅಪ್ಸರಸ್ತ್ರೀಯರು ನದಿಗಳ ಮತ್ತು ಸರೋವರಗಳ ಸಮೀಪಕ್ಕೆ ಪದೇ ಪದೇ ಬರುತ್ತಾರೆ. ಅದರಲ್ಲಿಯೂ ಗಂಗಾನದಿಗೆ ಅವರು ಬರುವುದು ಸಾಧಾರಣವಾದ ಸಂಗತಿ. ಇವರು ಅರುಣನ ಮನೆಯಲ್ಲಿರುತ್ತಾರೆ ಎಂಬುದಾಗಿ ಪುರಾಣಾದಿಗಳಿಂದ ತಿಳಿದು ಬರುತ್ತದೆ. ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿ ಇವರು ಸ್ವರ್ಗದ ಸುಂದರ ತರುಣಿಯರೆಂದೂ, ಉತ್ತಮ ಕಾರ್ಯಗಳನ್ನು ಮಾಡಿ ಸ್ವರ್ಗವಾಸಿಗಳಾದವರಿಗೆ ಸುಖವನ್ನು ನೀಡುವವರೆಂದೂ ಹೇಳಲಾಗಿದೆ. ಇದೇ ಒಂದು ಆಲೋಚನಾ ವಿಧಾನವನ್ನು ಅನುಸರಿಸಿದ ಮತ್ತು ಮುಂದುವರಿಸಿದ ಬಹುಪಾಲು ಭಾರತೀಯ ಭಾಷೆಗಳಲ್ಲಿನ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಅವುಗಳನ್ನು ರಚಿಸಿದ ಕವಿಗಳ ಕಲ್ಪನಾ ಸಾಮರ್ಥ್ಯವನ್ನು ಅನುಸರಿಸಿ ಈ ಲೋಕದ ವಿವರಣೆಗಳು ಬಂದಿವೆ. ಕಾವ್ಯಗಳಲ್ಲಿ, ಅಪ್ಸರೆಯರ ವರ್ಣನೆಗಳು ಸಾಮಾನ್ಯವಾಗಿ ವೀರರು ಸತ್ತ ಸಂದರ್ಭಗಳಲ್ಲಿ ವಿಶೇಷವಾಗಿ ಬಂದಿವೆ.

---

೨ ಅದೇ. ಪು. ೧೨೧೩

೩. ಋಗ್ವೇದ ಸಂಹಿತಾ. ಭಾಗ–೫, ಪರಿಶಿಷ್ಟ ಪು. ೬೬೨–೬೩
(ಅನುವಾದ : ಹೆಚ್. ಪಿ. ವೆಂಕಟರಾವ್)

೪. P.V. Kane : History of Dharma Sastras, Vol. 5, ಪು. ೧೨೧೩

ಈ ಹಿಂದೆ ಗಮನಿಸಿದಂತೆ, ಸ್ವರ್ಗದ ಕಲ್ಪನೆಯೊಂದಿಗೆ ಸಮಾಜವು ಸ್ವರ್ಗದಲ್ಲಿ ಇಂಥ ವ್ಯಕ್ತಿಗೆ ಇಂಥ ಸ್ಥಾನ ದೊರೆಯುತ್ತದೆ ಎಂಬುದನ್ನೂ ವಿವರಿಸುತ್ತಾ ಬಂತು. ಕಾಲಹರಿದಂತೆ, ಜೀವನ ಮೌಲ್ಯಗಳು ಬದಲಾದಂತೆ, ಸ್ವರ್ಗದಲ್ಲಿ ಸ್ಥಾನ ಪಡೆಯಲು ಅರ್ಹವೆನ್ನಿಸುವ ಮೌಲ್ಯಗಳೂ ಸಹ ಇಮ್ಮಡಿಸಿದುವು.

ಹಿಂದಿನ ವರ್ಣಾಶ್ರಮ ಧರ್ಮದ ಪ್ರಕಾರ ರಕ್ಷಣೆಯ ಕರ್ತವ್ಯ ಕ್ಷತ್ರಿಯನದು. ಈ ಕರ್ತವ್ಯ ನಿರ್ವಹಣೆಯ ಹೋರಾಟದಿಂದ ಕೂಡಿರುವುದರಿಂದ 'ಸಾವು' ಅನಿಶ್ಚಿತವಾಗಿರುತ್ತದೆ. ಹೋರಾಟದಲ್ಲಿ ಬದುಕಬಹುದು ಅಥವಾ ಸಾಯಬಹುದು. ಆದ್ದರಿಂದ ಸಾವಿನ ಬಗ್ಗೆ ಇರುವ ಭಯವನ್ನು ಹೋಗಲಾಡಿಸಲು ಆ ಮೌಲ್ಯವನ್ನು ವೈಭವೀಕರಿಸಿ ವ್ಯಕ್ತಿಯನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಲು, ವ್ಯಕ್ತಿಗೆ ಪರಲೋಕದ ಬಗ್ಗೆ, ಅಲ್ಲಿ ಅವನಿಗೆ ದೊರೆಯಬಹುದಾದ ಸುಖದ ಬಗ್ಗೆ ವಿವರಗಳನ್ನು ಒದಗಿಸಿ ಅವನಿಗೆ ಸಂಭವಿಸಬಹುದಾದ ಸಾವಿಗೆ ವೀರಸ್ವರ್ಗ ಎಂಬ ವಿಶೇಷವಾದ ಹೆಸರನ್ನಿಡುವ ಪ್ರಯತ್ನ ಮಾಡಿದರು. ಇದರದೇ ವಿಶೇಷವಾದ ವಿವರಣೆಯನ್ನು ನೀಡುತ್ತಾ ಬಂದರು. 'ವೀರಸ್ವರ್ಗ'ದ ಕಲ್ಪನೆಯು ಜನ ಸಾಮಾನ್ಯರಲ್ಲಿಯೂ ಬೇರೂರುವಂತೆ ರಾಜನೀತಿ ಶಾಸ್ತ್ರಗಳು, ಭಗವದ್ಗೀತೆ, ಅರ್ಥಶಾಸ್ತ್ರ ಮತ್ತು ಕಾವ್ಯಗಳು ಪ್ರಯತ್ನಿಸಿದುವು.

ಧರ್ಮ ಶಾಸ್ತ್ರಗಳು ಕ್ಷತ್ರಿಯನ ಮುಖ್ಯ ಕರ್ತವ್ಯವೆಂದರೆ ಹೋರಾಟ ; ಆದ್ದರಿಂದ ಅವನು ಹೆದರಬಾರದು. ಅವನಿಗೆ ಯುದ್ಧರಂಗದಲ್ಲಿ ಹೋರಾಡಿ ಸಾಯುವುದಕ್ಕಿಂತ ಉತ್ತಮವಾದ ಕರ್ತವ್ಯ ಬೇರೆ ಇಲ್ಲ ಎಂಬುದನ್ನು ಒತ್ತಿ ಹೇಳುತ್ತವೆ. ಮನು ರಾಜನಾದವನು ತನ್ನ ಪ್ರಜೆಗಳ ರಕ್ಷಣೆಗಾಗಿ, ತನ್ನ ರಾಜ್ಯದ ವಿಸ್ತಾರಕ್ಕಾಗಿ ಹೋರಾಡುವುದು ಮುಖ್ಯವೆಂದೂ, ಇಂತಹ ಹೋರಾಟಗಳಲ್ಲಿ ಅವನು ಸಾಯುವುದರಿಂದ ಸ್ವರ್ಗ ಪ್ರಾಪ್ತವಾಗುತ್ತದೆಯೆಂದು ತಿಳಿಸುತ್ತಾನೆ. ಯಾಜ್ಞವಲ್ಕ್ಯಸ್ಮೃತಿಯಲ್ಲಿ ಯುದ್ಧದಲ್ಲಿ ಹೋರಾಡಿ ಸತ್ತ ಪ್ರತಿಯೊಬ್ಬ ಯೋಧನಿಗೂ ಸ್ವರ್ಗ ಪ್ರಾಪ್ತವಾಗುತ್ತದೆ ಎಂದು ಹೇಳಿದೆ. ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ಯುದ್ಧದ ಬಗ್ಗೆ, ಕ್ಷತ್ರಿಯ ಧರ್ಮದ ಬಗ್ಗೆ, ವೀರಸ್ವರ್ಗದ ಬಗ್ಗೆ ಅನೇಕ ವಿವರಗಳನ್ನು ಅಧಿಕಾರಯುತವಾಗಿ ನೀಡಲಾಗಿದೆ.

ರಾಜನೀತಿ ಪ್ರಕಾಶ, ಪರಾಶರಸ್ಮೃತಿ, ಬೃಹತ್‌ಪರಾಶರ ಕೃತಿಗಳಲ್ಲಿ ಯಾವ ಯೋಧನು ಸಮರಾಂಗಣದಲ್ಲಿ ಎದುರಾಳಿಗಳ ದಯೆಗೆ ಪಾತ್ರನಾಗದೆ ನಿರ್ದಯವಾಗಿ ಹೋರಾಡಿ ಸಾಯುತ್ತಾನೆಯೋ ಅವನಿಗೆ ಸ್ವರ್ಗ ಪ್ರಾಪ್ತವಾಗುವುದು ; ಅವನನ್ನು ಅಲ್ಲಿ ಬರಮಾಡಿಕೊಳ್ಳಲು ಅಪ್ಸರೆಯರು ತುಂಬಾ ಕಾತುರರಾಗಿ ಇರುತ್ತಾರೆಂದು ಹೇಳಿದೆ. ಬ್ರಾಹ್ಮಣರ, ಗೋವುಗಳ, ಜನಪದದ, ತಮ್ಮ ಗೆಳೆಯರ ಆಸ್ತಿಯ ರಕ್ಷಣೆಗಾಗಿ ಹೋರಾಡುವುದಕ್ಕಿಂತ ಉತ್ತಮವಾದ ಅವಕಾಶ ಬೇರೆ

ಇಲ್ಲ. ಆದ್ದರಿಂದ ಅಂತಹ ಅವಕಾಶಗಳಲ್ಲಿ ಹಿಂಜರಿಯದೆ ಮಡಿಯುವುದು ಶ್ರೇಷ್ಠವೂ, ಶ್ರೇಯಸ್ಕರವೂ ಆದುದೆಂದು ವಿಷ್ಣುಧರ್ಮ ಸೂತ್ರವು ಹೇಳುತ್ತದೆ.[೫]

ಮೇಲೆ ಹೇಳಿದ ಎಲ್ಲಾ ಕಲ್ಪನೆಯ ಆಧಾರಗಳನ್ನೂ ಬಳಸಿಕೊಂಡಿರುವ ಪ್ರಯತ್ನ ನಮಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಂಡುಬರುತ್ತದೆ. ರಾಜನಾದವನು ಸ್ವತಃ ತಾನೂ, ತನ್ನ ಮಂತ್ರಿಯೂ, ಪುರೋಹಿತರೂ ಕೂಡಿ, ವೇದಗಳಲ್ಲಿ ಮತ್ತು ಇತರ ಧರ್ಮಗ್ರಂಥಗಳಲ್ಲಿ ಉಕ್ತವಾಗಿರುವ ಮಂತ್ರಗಳನ್ನು ಪಠಿಸುತ್ತಾ, ಯುದ್ಧದಲ್ಲಿ ಹೋರಾಡಿ, ಸತ್ತ ವೀರರಿಗೆ ಕಾದಿರುವ ಭವ್ಯವಾದ ಸ್ವರ್ಗಜೀವನದ ಚಿತ್ರಣವನ್ನು ನೀಡಬೇಕು ; ತಮ್ಮ ಸ್ವಾಮಿಯ ಹಿತರಕ್ಷಣೆಗೆ ಹೋರಾಡುವಾಗ ಉಂಟಾಗುವ ಪುಣ್ಯದಷ್ಟೇ ಪಾಪ ರಣರಂಗದಿಂದ ಓಡಿ ಹೋಗುವುದರಿಂದ ಉಂಟಾಗುತ್ತದೆ ಎಂಬುದಾಗಿ ಹೇಳಬೇಕು ; ಜ್ಯೋತಿಷ್ಯ ಶಾಸ್ತ್ರಪರಿಣತರು ಯುದ್ಧದಲ್ಲಿ ಮಡಿದವರಿಗೆ ಪ್ರಾಪ್ತವಾಗುವ ಸುಖ ಶಾಂತಿಗಳ ಬಗ್ಗೆ, ವೀರರಿಗೆ ಇರುವ ಅದೃಷ್ಟದ ಬಗ್ಗೆ ಭವಿಷ್ಯವನ್ನು ನುಡಿಯಬೇಕು ; ಯುದ್ಧದ ಹಿಂದಿನ ದಿನ ಅರಸನು ಅಥರ್ವವೇದದಲ್ಲಿ ಉಕ್ತವಾಗಿರುವ ಯಜ್ಞವನ್ನು ಮಾಡಬೇಕು; ಚಾರಣರು ವೀರರ ಕಿವಿಗಳಿಗೆ ಕೇಳುವ ಹಾಗೆ, ಮನಮುಟ್ಟುವಂತೆ ವೀರರ ಬಗ್ಗೆ, ವೀರ ಸ್ವರ್ಗದ ಬಗ್ಗೆ, ಅಲ್ಲಿನ ಅಪ್ಸರೆಯರು, ಭೋಗ ಭಾಗ್ಯಗಳ ಬಗ್ಗೆ ವೈಭವೀಕರಿಸಿ ಹಾಡಬೇಕು ; ಅದೇ ಹಾಡುಗಳ ಮೂಲಕ ಹೇಡಿಗಳ ಬಗ್ಗೆ ಸಮಾಜಕ್ಕೆ ಇರುವ ಕೀಳು ಮನೋಭಾವ, ಅವರಿಗೆ ಪ್ರಾಪ್ತವಾಗುವ ಘೋರ ದುಃಖಗಳು ಮುಂತಾದವುಗಳ ಬಗ್ಗೆ ಅವರಿಗೆ ಕೇಳಲು ಅಸಹ್ಯವಾಗುವಂತೆ ಹೇಳಬೇಕು. ಅರಸನು, ಮಂತ್ರಿಗಳು ಮುಂತಾದವರು, ಯೋಧರನ್ನು ಕುರಿತು, "ಸ್ವರ್ಗಾಪೇಕ್ಷೆಯುಳ್ಳ ಬ್ರಾಹ್ಮಣರು ತಮ್ಮ ಇಷ್ಟಾರ್ಥಗಳನ್ನೂ ಮತ್ತು ಸ್ವರ್ಗವನ್ನೂ ಅನೇಕ ಯಾಗ, ಅನುಷ್ಠಾನ, ತಪಸ್ಸು ಮತ್ತು ದಾನ ಧರ್ಮಗಳಿಂದ ಸಂಪಾದಿಸುತ್ತಾರೆ ; ಹಾಗೆಯೇ ನೀವು, ವೀರರಾದವರು, ಅವುಗಳನ್ನು ವೀರಾವೇಶದಿಂದ ಹೋರಾಡುವ ಧರ್ಮಯುದ್ಧದಲ್ಲಿ ಪ್ರಾಣತ್ಯಾಗ ಮಾಡುವುದರ ಮೂಲಕ ಪಡೆಯಿರಿ" ಎಂಬ ಅರ್ಥ ಬರುವ ಮಾತುಗಳನ್ನು ಹೇಳಬೇಕು ಎಂಬುದಾಗಿ ಕೌಟಿಲ್ಯನು ತಿಳಿಸುತ್ತಾನೆ.[೬] ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ 'ವೀರಸ್ವರ್ಗದ' ಕಲ್ಪನೆ ವೀರರಲ್ಲಿ ಹೇಗೆ ಬೇರೂರಿತ್ತು ಮತ್ತು ಅದು ಅವರನ್ನು ಹೇಗೆ ಯುದ್ಧಪ್ರವೃತ್ತರನ್ನಾಗಿ ಮಾಡುತ್ತಿತ್ತು ಎಂಬುದೂ, ವೀರರಲ್ಲಿ, ಕೆಲವೊಮ್ಮೆ ಹೇಡಿಗಳಲ್ಲಿಯೂ ಉತ್ಸಾಹ ತುಂಬಲು ಹೇಗೆ ಈ 'ವೀರಸ್ವರ್ಗದ' ಕಲ್ಪನೆಯನ್ನು ಆಳುವ ಅರಸರು ಬಳಸಿಕೊಂಡರು ಎಂಬುದೂ ವೇದ್ಯವಾಗುತ್ತದೆ.

---

೫ ಮೇಲಿನ ಸಂಗತಿಗಳನ್ನು P.V. Kane : History of Dharma Sastras, Vol. ೩ ಮತ್ತು ೫ ರಿಮದ ಸಂಗ್ರಹಿಸಲಾಗಿದೆ.

೬ ಅದೇ Vol.3. ಪು. ೨೧೨ ಮತ್ತು ಕೌಟಿಲ್ಯನ ಅರ್ಥಶಾಸ್ತ್ರ (ಅನುವಾದ : ಕೆ. ಕೃಷ್ಣಭಟ್ಟ) ಪು. ೫೪೯

ಈ ವೀರಸ್ವರ್ಗದ ಕಲ್ಪನೆ ಭಾರತೀಯ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಪ್ರಕಟವಾಗಿದೆ. ವೀರಸ್ವರ್ಗವನ್ನೈದಿದವರು ಎಂದು ಭಾವಿಸಲಾದ ವೀರರ ಸ್ಮಾರಕಗಳಾದ ವೀರಗಲ್ಲುಗಳಲ್ಲಿ ಈ ಕಲ್ಪನೆ ಗರಿಗೆದರಿಕೊಂಡು ಮೂಡಿಬಂದಿದೆ. ಈ ಕಲ್ಪನೆ ವೀರಗಲ್ಲಿನ ಶಿಲ್ಪ ಮತ್ತು ಶಾಸನಪಾಠಗಳೆರಡರಲ್ಲಿಯೂ ಒಂದರೊಡನೊಂದು ಪೈಪೋಟಿ ನಡೆಸಿ, ಸ್ವರ್ಗದ ಚಿತ್ರಣವನ್ನು ನಮಗೆ ನೀಡುತ್ತವೆ. ಕಾವ್ಯಗಳಲ್ಲಿ ಬರುವ ವೀರಸ್ವರ್ಗದ ನಿರೂಪಣೆಗೂ, ವೀರಗಲ್ಲುಗಳಲ್ಲಿನ ವರ್ಣನೆಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ; ಕಾವ್ಯಗಳಲ್ಲಿ ಈ ವರ್ಣನೆ ಕಥೆಯ ಅಂಶವಾಗಿ ಮಾತ್ರ ಬರುತ್ತದೆ. ಆದರೆ ವೀರಗಲ್ಲುಗಳಲ್ಲಿ ಇದು ವೀರನು ವೀರಸ್ವರ್ಗ ಸೇರಿದ ವಾಸ್ತವಾಂಶವಾಗಿ ಬರುತ್ತದೆ. ಈ ಅಂಶವನ್ನು ಪೋಷಿಸುವ ಅಥವಾ ಅಭಿವ್ಯಕ್ತಪಡಿಸುವ ಸಲುವಾಗಿಯೇ ವೀರಗಲ್ಲುಗಳ ಶಿಲ್ಪದಲ್ಲಿಯೂ ವೀರನು ಯುದ್ಧಮಾಡುವ ಪ್ರಸಂಗ, ಅವನ ಮರಣದ ನಂತರ ಅಪ್ಸರೆಯರು ಅವನನ್ನು ಪುಷ್ಪಕವಿಮಾನದಲ್ಲಿಯೋ, ತಮ್ಮ ಹೆಗಲಮೇಲೆ ಕೈಹಾಕಿಕೊಂಡೋ ಕರೆದುಕೊಂಡು ಹೋಗುತ್ತಿರುವಂತೆ ಶಿಲ್ಪ ಬಿಡಿಸಲಾಗಿರುತ್ತದೆ. ಈ ಭಾಗದ ಶಿಲ್ಪದಲ್ಲಿ ಬರುವ ಎಲ್ಲ ವಿವರಗಳಿಗೂ ಮೇಲೆ ಗಮನಿಸಿದ ಅಂಶಗಳೇ ಆಧಾರವೆಂದು ಹೇಳಬಹುದು.

ವೀರತನವನ್ನು ಪ್ರಚೋದಿಸುವಲ್ಲಿ, ನರಕದ ಕಲ್ಪನೆಯನ್ನೂ ನಮ್ಮವರು ಬಳಸಿಕೊಂಡಿರುವುದನ್ನು ಇತಿಹಾಸದುದ್ದಕ್ಕೂ ಗಮನಿಸಬಹುದಾಗಿದೆ. ಹೇಡಿಗಳ ಬಗ್ಗೆ ತುಚ್ಛವಾದ ಭಾವನೆ, ಅಂಥವರಿಗೆ ಒದಗುವ ಸ್ಥಿತಿಯ ಬಗ್ಗೆ ಸಾಕಷ್ಟು ವಿವರಗಳನ್ನೂ ಇತಿಹಾಸ ನೀಡಿದೆ. ಈ ಅಂಶವನ್ನು ಕೆಲವು ಮಟ್ಟಿಗೆ ವೀರಗಲ್ಲುಗಳ ಶಿಲ್ಪದಲ್ಲಿಯೂ ಗಮನಿಸಬಹುದು. ಹೋರಾಟದಿಂದ ವಿಮುಖರಾದವರನ್ನೂ, ವೀರನ ಕಾಲ್ತುಳಿತಕ್ಕೆ ಸಿಕ್ಕಿ ಅವನಿಗೆ ಶರಣಾಗತರಾಗಿ ಪ್ರಾಣಭಿಕ್ಷೆ ಬೇಡುತ್ತಿರುವ ಹೇಡಿಗಳನ್ನೂ ವೀರಗಲ್ಲುಗಳ ಪಾಠ ಮತ್ತು ಶಿಲ್ಪ ಎರಡೂ ಚಿತ್ರಿಸಿವೆ.

ಸ್ವರ್ಗ ನರಕಗಳ ಕಲ್ಪನೆಯ ಈ ಬೆಳವಣಿಗೆಯನ್ನು ಗಮನಿಸುವಾಗ ಈ ಕಲ್ಪನೆಗಳನ್ನು ವಿರೋಧಿಸಿದವರನ್ನು ಮತ್ತು ಆ ಕಾರಣಗಳ ಹಿಂದಿರುವ ತಾತ್ವಿಕ ಅಂಶವನ್ನು ಗಮನಿಸಬೇಕು.

ಶಬರ ಮತ್ತು ಕುಮಾರಿಲರು, ಚಾರ್ವಾಕರು ಸ್ವರ್ಗದ ಕಲ್ಪನೆಯನ್ನೂ, ಅದರ ದುರುಪಯೋಗವನ್ನೂ ಖಂಡಿಸಿದ್ದಾರೆ.[೭] ಯುದ್ಧ ಪ್ರವೃತ್ತಿಯನ್ನೂ ಖಂಡಿಸಿದ್ದಾರೆ. ಕರ್ನಾಟಕದಲ್ಲಿಯೂ ಈ ರೀತಿ ಯುದ್ಧವನ್ನು ವಿರೋಧಿಸುವ ಪ್ರವೃತ್ತಿಯನ್ನು ಸ್ವಲ್ಪಮಟ್ಟಿಗೆ ಬ್ರಹ್ಮಶಿವನಲ್ಲಿ ಕಾಣಬಹುದಾಗಿದೆ. ಜನಸಾಮಾನ್ಯರ ಬೆಂಬಲವನ್ನು ಕಳೆದುಕೊಂಡ ಜೈನಧರ್ಮವನ್ನು

೭ P.V. Kane : History of Dharma Sastra's, Vol. 5, ಮತ್ತು೨
ಪು. ೧೨೧೪ ಮತ್ತು ೧೫ ರಿಂದ ೧೬
ಜಿ. ಹನುಮಂತರಾವ್ : ಚಾರ್ವಾಕ ಮತ್ತು ಲೋಕಾಯುತ ಮತ್ತು ಸ್ವಭಾವವಾದ.
ಪು. ೫–೬

ಪ್ರಚಾರ ಮಾಡುವ ಕಾತರವಿದ್ದ ಬ್ರಹ್ಮಶಿವ ತನ್ನ ಕಾಲದಲ್ಲಿ ಪ್ರಚಲಿತವಿದ್ದ, ಜೈನಧರ್ಮದ ದೃಷ್ಟಿಯಿಂದ ಮೂಢನಂಬಿಕೆ ಎನ್ನಿಸುವಂಥ ಹಲವಾರು ಸಂಪ್ರದಾಯಗಳನ್ನೂ ಕಲ್ಪನೆಗಳನ್ನೂ, ನಂಬಿಕೆಗಳನ್ನೂ ವಿರೋಧಿಸಿ ಅವುಗಳನ್ನು ಲೇವಡಿ ಮಾಡಿದ್ದಾನೆ. ಆದರೆ ಬ್ರಹ್ಮಶಿವನೂ ಕೂಡ, ತನ್ನ ಧರ್ಮದ ವಿಷಯ ಬಂದಾಗ, ಸಲ್ಲೇಖನದ ವಿಷಯ ಹೇಳುವಾಗ "ಸಲ್ಲೇಖನವೆಂಬ ಧಾರ್ಮಿಕ ಮರಣದಿಂದ ಮಾತ್ರ ಮೋಕ್ಷ ಸಾಧ್ಯ" ಎಂದು ನಂಬುತ್ತಾನೆ. ಆದ್ದರಿಂದ ಬ್ರಹ್ಮಶಿವನ ಎಲ್ಲಾ ಅಭಿಪ್ರಾಯಗಳಿಗೂ ಯುದ್ಧವನ್ನು, ಹಿಂಸೆಯನ್ನು ವಸ್ತುನಿಷ್ಠವಾಗಿ ವಿರೋಧಿಸುವುದು ಧ್ಯೇಯವಾಗಿರದೆ, ತನ್ನ ಧರ್ಮಕ್ಕೆ ಅಸತ್ಯವೆಂದು ಕಂಡ, ಇತರ ಧರ್ಮಗಳ ಕೆಲವು ನಂಬಿಕೆಗಳನ್ನು ಟೀಕಿಸಲೇಬೇಕೆಂಬ ನಂಬಿಕೆಯಷ್ಟೇ ಧ್ಯೇಯವಾಗಿರುವಂತೆ ಕಾಣುತ್ತದೆ. ಆದರೂ "ಪಂಪ ರನ್ನರಂತಹ ಕವಿಗಳೂ ಸಹ ಲೌಕಿಕ ಕಾವ್ಯಗಳಲ್ಲಿ ಯುದ್ಧವನ್ನು, ವೀರಸ್ವರ್ಗದ ಕಲ್ಪನೆಯನ್ನು, ವೀರತ್ವದ ಮೌಲ್ಯವನ್ನೂ ವೈಭವೀಕರಿಸಿ ಹೇಳಿದ್ದರೂ, ಬ್ರಹ್ಮಶಿವನಂತಹವನು ಅವರಿಗೆ ವಿರುದ್ಧವಾದ ಅಭಿಪ್ರಾಯವನ್ನು ತನ್ನ ಕೃತಿಯಲ್ಲಿ ಪ್ರಕಟಿಸಿರುವುದನ್ನು ಮತ್ತು ಯಾವುದನ್ನು ಇಡೀ ಸಮಾಜವೇ ಜೀವನದ ಮೌಲ್ಯ ಎಂಬುದಾಗಿ ಭಾವಿಸಿದ್ದಿತೋ ಅಂತಹ ಭಾವನೆಗಳನ್ನು ಗೇಲಿಮಾಡುವ ಯತ್ನವನ್ನು ಗಮನಿಸದಿರುವುದು ಸೂಕ್ತವಲ್ಲ."[೮]

"ತುರುಗೋಳ್, ಪೆಣ್ಬುಯ್ಯಲ್, ಎಜೆವೆಸ, ನೆಂಟನೆಡರ್ ಪ್ರಸಂಗಗಳಲ್ಲಿ ಜೋಳವಾಳಿಯಿಲ್ಲದ ವೀರನಾಗಲೀ, ಜೋಳವಾಳಿ ವೀರನಾಗಲೀ ಪ್ರಾಣದ ಹಂಗು ತೊರೆದು ಹೋರಾಡಬೇಕು. ಈ ಹೋರಾಟದಲ್ಲಿ ಮಡಿದ ವೀರರನ್ನು ಸುರಾಂಗನೆಯರು ಸ್ವರ್ಗಕ್ಕೆ ಒಯ್ಯುವರೆಂದು ಪ್ರಾಚೀನರ ನಂಬಿಕೆ. ನಂಬಿಕೆಯನ್ನು ಪೋಷಿಸುವ ನೂರಾರು ಕಾವ್ಯಗಳೂ, ಚಿತ್ರವತ್ತಾಗಿ ವಿವರಿಸುವ ವೀರಗಲ್ಲುಗಳೂ ನಮ್ಮಲ್ಲಿವೆ. ಬ್ರಹ್ಮಶಿವನಿಗೆ ಮಾತ್ರ ಇದು ಸಮ್ಮತವಲ್ಲದ ಕಾರಣ.

ಮರಗಳ್ ಪಾಱುಗುಮಿಂದ್ರನ । ಪುರಕ್ಕೆ ಬೇರ್ವ್ವೆರಸು ಕಿತ್ತಗು ತುಱುಗೊಳೊಳ್ಸ
ತ್ತರನಾಗಳಂತೆ ಬೇಗಂ । ಸುರಗಣಿಕೆಯರೊಯ್ವರೆಂಬರಜೆವಿಲ್ಲದವರ್ ॥
ತುರುಗಳುಗುಳ್ದ ಪುಯ್ಯಲೊ । ಳೆರೆಯನ ಕಾರ್ಯದೊಳಮುಣ್ಮಿ ಸತ್ತವನಂ ಕಂ
ಡೆರಗಿ ಬಳಿಕವನ ನೆತ್ತರೊ ।ಳರಿವಿಂದೆ ಬೊಟ್ಟುನಿಟ್ಟುಕೊಳ್ಳುವರ್ಮೂಢರ್ ॥

ಎಂದು ತೆಗಳುತ್ತಾನೆ. ಅವನ ಪ್ರಕಾರ ತುರುಗೋಳ್ ಪ್ರಸಂಗದಲ್ಲಿ ಮಡಿದವನನ್ನು ದೇವತಾಸ್ತ್ರೀಯರು ಸ್ವರ್ಗಕ್ಕೆ ಒಯ್ಯುವರೆಂದು ಹೇಳುವುದು, ತುರುಗೋಳ್, ಪೆಣ್ಬುಯ್ಯಲ್ ಮತ್ತು ಎಜೆವೆಸಗಳಲ್ಲಿ ಮಡಿದವನ ಶವಕ್ಕೆ ನಮಸ್ಕರಿಸುವುದು ಮೂರ್ಖತನ".

೮ ಡಾ. ಎಂ. ಎಂ. ಕಲಬುರ್ಗಿ : 'ಆತ್ಮಬಲಿದಾನ –ಬ್ರಹ್ಮಶಿವನ ವಿಚಾರಗಳು'
(ಡಾ. ಕಲಬುರ್ಗಿಯವರು ೧೯೭೩ರಲ್ಲಿ ನನಗೆ ನೀಡಿದ ಅವರ ಅಪ್ರಕಟಿತ ಲೇಖನ)

"ಸಮರ ಭೂಮಿಯಲ್ಲಿ ಮಡಿದವರನ್ನು ದೇವಗಣಿಕೆಯರು ಒಯ್ಯುವರೆಂಬ ಹಿಂದೂ ಅಭಿಪ್ರಾಯವನ್ನು ಮೇಲಿನ ಪದ್ಯದಲ್ಲಿ ಖಂಡಿಸಿದ ಬ್ರಹ್ಮಶಿವ

ಜೀವನುಂ ತಾಂ ಗಡ ಪೋಗದು । ದೇವೇಂದ್ರಪುರಕ್ಕೆ ದೇವಗಣಿಕೆಯರೊಯ್ವ
ರ್ಜೀವಮನೆಂದಿಂತೂಳ್ವ । ರ್ಜೀವಂ ಭಾವಿಪೊಡಮೂರ್ತ್ತನೆಂತದನೊಯ್ವರ್ ॥
ಲಿಂಗಂಗಳ್ ಬೆಳೆವಡೆ ವೃ । ಕ್ಷಂ ಗಳ್ಪಾಱುವಡೆ ಕಡಿದ ಕೈ ಕೊನರ್ವಡೆ ದೇ
ಹಂಗಳ್ವೆರಸಮರೇಂದ್ರ ಪು । ರಂಗಳ್ಗೊಯ್ವಡೆ ತಾಂ ಮನುಜರಿನ್ನರಘಟಿತಮಿನಿತಂ ॥
ಎಂದು ಈ ಪದ್ಯದಲ್ಲಿ ಜೀವದ ಸ್ವರ್ಗಾರೋಹಣವನ್ನು ಪ್ರಶ್ನಿಸುತ್ತಾನೆ"[೮a]

ಕುಮಾರ ರಾಮನ ಸಾಂಗತ್ಯದಲ್ಲಿ ನಂಜುಂಡ ಕವಿ ಮಾತಂಗಿಗೂ, ಕುಮಾರ ರಾಮನಿಗೂ ನಡೆಯುವ ಸಂವಾದದಲ್ಲಿ 'ವೀರಸ್ವರ್ಗದ' ಬಗ್ಗೆ ಕೆಲವಾರು ಅಭಿಪ್ರಾಯಗಳನ್ನು ನಿರೂಪಿಸಿದ್ದಾನೆ. ಮಾತಂಗಿ ಕುಮಾರ ರಾಮನನ್ನು ಕುರಿತು 'ಮದುವೆ ಮಾಡಿಕೋ' ಎಂದು ಕೇಳಿದಾಗ ಅವನು ನಕಾರ ಹೇಳುತ್ತಾನೆ. ಈ ಕಾರಣಕ್ಕಾಗಿಯೇ ಅವಳು ಕುಮಾರ ರಾಮನ ಬಗ್ಗೆ ತನಗಿರುವ ಛಲವನ್ನು ತೋರಿಸುವಲ್ಲಿ ಹೀಗೆ ಮೂದಲಿಸುತ್ತಾಳೆ.

ಸತ್ತಮರಾಂಗನೆಯರ ಕೂಡವೆನೆಂಬ । ಹೊತ್ತು ಹೋಕಿನ ಮಾತು ಬೇಡ ॥
ವೃತ್ತ ಕುಚೆಯ ಸುರತ್ರಾನ ಸುತೆಯ ನೀ । ಚಿತ್ರಜ ಸುಖವನೆಯ್ದೇಳು ॥[೯]
ನಿಮಗೆ ಬುದ್ಧಿಯ ಪೇಳ್ವ ವಿಪ್ರರು ತಾವೇಕೆ । ಸಮರದೊಳಳಿದು ದಿವಿಜರ
ಪ್ರಮದೆಯರನು ಬಯಸರು ಧನದಾಸೆಯಿಂ । ಭ್ರಮೆಗೊಳಿಸುವರು ಲೋಕವನು ॥[೧೦]

ಇದು ಕವಿಯ ವೈಯಕ್ತಿಕ ಅಭಿಪ್ರಾಯವಲ್ಲ. ಏಕೆಂದರೆ ಮುಂದಿನ ಭಾಗಗಳಲ್ಲಿ ಅವನೇ ಈ ವೀರ ಸ್ವರ್ಗವನ್ನು ವೈಭವೀಕರಿಸಿ ಹೇಳಿದ್ದಾನೆ. ನಂಜುಂಡನ ಕೃತಿಯಲ್ಲಿ ಬಂದಿರುವ ಈ ಪ್ರಸ್ತಾಪವನ್ನು ಬಹುಶಃ ಹೀಗೆ ಪರಿಗಣಿಸಬಹುದೆಂದು ತೋರುತ್ತದೆ. ಕವಿ ತಾನು ತನ್ನ ಸಮಕಾಲೀನರಾದ ಒಂದು ಗುಂಪಿನ ಜನರ ಅಭಿಪ್ರಾಯವನ್ನು ಮಾತ್ರ ಮಂಡಿಸುತ್ತಿದ್ದಾನೆ. ಆ ವೇಳೆಗಾಗಲೇ ತಮ್ಮ ರಾಜ್ಯಭಾರವನ್ನೂ, ಧರ್ಮವನ್ನೂ ಪ್ರತಿಷ್ಠಾಪಿಸಿದ ಮುಸ್ಲಿಂ ಧರ್ಮದವರು ಹಿಂದೂ ಧರ್ಮದಲ್ಲಿನ ನಂಬಿಕೆಗಳನ್ನು ಗೇಲಿಮಾಡುತ್ತಿದ್ದ ಪ್ರವೃತ್ತಿಯ ಛಾಯೆ ಇದು.

ವೀರತನದ ಬಗ್ಗೆ ಇತರ ಧರ್ಮಗಳವರು ತಮ್ಮ ಧರ್ಮದ ದೃಷ್ಟಿಯಿಂದ ವೀರತನವನ್ನು, ವೀರ ಸ್ವರ್ಗದ ಕಲ್ಪನೆಯನ್ನು ಅಲ್ಲಗಳೆದರೂ, 'ವೀರತನ' ಎಂಬುದು ಯಾವುದೇ ಸಮಾಜ ಒಂದು ವ್ಯವಸ್ಥೆಯಲ್ಲಿರುವುದಕ್ಕೆ ತೀರಾ ಅವಶ್ಯವಾದ ಮೌಲ್ಯ– ಎಂದರಿತ ಸಮಾಜ ವೀರತನದ

೮a ಅದೇ.
೯ ನಂಜುಂಡ : ರಾಮನಾಥಚರಿತೆ. ೧೧–೩–೪೯
೧೦ ಅದೇ, ೧೧–೪–೬೩

ಬಗ್ಗೆ ಮತ್ತು ವೀರಸ್ವರ್ಗದ ಬಗ್ಗೆ ಇದ್ದ ಗೌರವವನ್ನೂ, ನಂಬಿಕೆಯನ್ನೂ ಉಳಿಸಿಕೊಂಡಿತು. ಈ ವೀರತನ ಎಂಥದ್ದಾಗಿರಬೇಕು ಎಂಬ ಬಗ್ಗೆ ಸಮಾಜ ತನ್ನ ನಾಗರೀಕತೆ ಮತ್ತು ಸಂಸ್ಕೃತಿಗಳು ಬೆಳೆದಹಾಗೆ ಹೊಸಹೊಸ ವ್ಯಾಖ್ಯಾನಗಳನ್ನು ಕೊಡುತ್ತದೆ ಎಂಬುದು ಮುಖ್ಯ.

ವೀರಸ್ವರ್ಗವನ್ನು ಅಪಹಾಸ್ಯಮಾಡುವ ಯಾವ ಧರ್ಮದ, ಕಾವ್ಯದ ಪ್ರಭಾವವೂ ವೀರಗಲ್ಲುಗಳ ಮೇಲಾಗಿಲ್ಲ. ಒಂದು ವೇಳೆ ಆ ಪ್ರಭಾವಕ್ಕೆ ವೀರಗಲ್ಲುಗಳು ಸಿಕ್ಕಿದ್ದರೆ, ಇವುಗಳ ಪರಂಪರೆಯೇ ಬೆಳೆಯುತ್ತಿರಲಿಲ್ಲವೆಂದು ತೋರುತ್ತದೆ. ಆದರೂ ವೀರಗಲ್ಲುಗಳ ಪಾಠ ಮತ್ತು ಶಿಲ್ಪ ಎರಡೂ ವೀರಸ್ವರ್ಗದ ಕಲ್ಪನೆಯನ್ನು ಒಂದು ರೀತಿಯಲ್ಲಿ ಹಿಂದಕ್ಕೆ ಸರಿಸಿರುವುದನ್ನು ಗಮನಿಸಬೇಕು. ಸುಮಾರು ಹನ್ನೊಂದನೆಯ ಶತಮಾನದ ವೇಳೆಗೆ ಬಂದ ವೀರಗಲ್ಲುಗಳ ಶಿಲ್ಪ ಮತ್ತು ಪಾಠವನ್ನು ಗಮನಿಸಿದಾಗ ಭಕ್ತಿಪಂಥಗಳ ಪ್ರಭಾವ ಇವುಗಳ ಮೇಲೆ ಅಷ್ಟು ಹೊತ್ತಿಗಾಗಲೇ ಆಗಿತ್ತು ಎನ್ನುವುದು ತಿಳಿಯುತ್ತದೆ. ಈ ಕಾರಣದಿಂದಾಗಿ ಸತ್ತ ವೀರನು ಯಾವ ಮತ ಧರ್ಮದ, ದೈವದ ಆರಾಧಕನಾಗಿರುತ್ತಾನೆಯೋ, ಆ ದೈವದ ಬಳಿ ಇರುವಂತೆ ಶಿಲ್ಪದಲ್ಲಿ ಬಿಡಿಸಲಾಗಿರುತ್ತದೆ ಹಾಗೂ ಪಾಠದಲ್ಲಿ ವೀರನು ಆ ದೈವದ ಸಾನ್ನಿಧ್ಯವನ್ನು ಸೇರಿರುವಂತೆ ವರ್ಣಿಸಲಾಗಿರುತ್ತದೆ. ಭಕ್ತಿ ಪಂಥದಿಂದ ಆದ ಪ್ರಭಾವವೆಂದರೆ, ಆರಂಭ ಕಾಲದ ವೀರಗಲ್ಲುಗಳಲ್ಲಿನಂತೆ ವೈಭವೋಪೇತ ವೀರಸ್ವರ್ಗದ ಬದಲಿಗೆ ಬಂದ ತನ್ನ ಮತ ದೈವದ ಸಾಮೀಪ್ಯ ದೊರೆಯುತ್ತದೆಂಬ ನಂಬಿಕೆ ಎಂದು ಹೇಳಬಹುದು.

ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ'ಯಲ್ಲಿ ವೀರಸ್ವರ್ಗವನ್ನು ಕುರಿತಂತೆ ವಿವರಣೆ ದೊರೆಯುತ್ತದೆ. "ವೈದ್ಯುತವೆಂಬ ನಾಲ್ಕನೆಯ ಪವನಾಧಾರದ ಮೇಘಾಶ್ರಯ ಪಟ್ಟಣದಲ್ಲಿ ಸುರಪನಾಣತಿಯ ಅಪ್ಸರೆಯರು" ಇರುತ್ತಾರಂತೆ. ಇವರು ಭೂಲೋಕದಲ್ಲಿ ಜಲ, ಅಗ್ನಿ ಮುಂತಾದವುಗಳಲ್ಲಿ ಬಿದ್ದು ಆತ್ಮಬಲಿದಾನ ಮಾಡಿಕೊಂಡವರ, ಯುದ್ಧ, ಗೋಗ್ರಹಣ ಮುಂತಾದ ಹೋರಾಟಗಳಲ್ಲಿ ವೀರಾವೇಶದಿಂದ ಹೋರಾಡಿ ಮಡಿದ ವೀರರ ಆತ್ಮಗಳನ್ನು ವಿಮಾನದಿಂದ ಕೊಂಡೊಯ್ದು ವೀರಸ್ವರ್ಗದಲ್ಲಿರಿಸಿ ಸೇವಿಸುತ್ತಾರೆ ಎಂಬುದಾಗಿ ನಿಜಗುಣ ಶಿವಯೋಗಿಗಳು ತಿಳಿಸುತ್ತಾರೆ. ಅವರ ಈ ವಿವರಣೆ ಅಂದು ಕರ್ನಾಟಕದ ಜನಮನದಲ್ಲಿ ಪ್ರಚಲಿತವಿದ್ದ ಆಶಯಗಳನ್ನು ಸ್ಪಷ್ಟಪಡಿಸುತ್ತದೆ.[೧೧]

---

೧೧ ನಿಜಗುಣ ಶಿವಯೋಗಿ : ವಿವೇಕ ಚಿಂತಾಮಣಿ ಷಷ್ಠಮ ಪರಿಚ್ಛೇದ
ಈ ಬಗ್ಗೆ ನನ್ನ ಗಮನ ಸೆಳೆದವರು ಡಾ. ಎಂ. ಎಂ. ಕಲಬುರ್ಗಿಯವರು

ಅನುಬಂಧ – ೨

ಕರ್ನಾಟಕದ ವೀರಕಾವ್ಯಗಳು ಮತ್ತು ವೀರಗಲ್ಲುಗಳ ಪಾಠ

ಮಾನವನ ಬಗ್ಗೆ ಕಾವ್ಯ ರಚನೆ ಮಾಡುವುದು ಅನುಚಿತವೆಂದು ನಮ್ಮ ಕವಿ ಪರಂಪರೆ ಭಾವಿಸಿದ್ದರೂ, ಕವಿ ತನ್ನ ಆಶ್ರಯದಾತನನ್ನು ಪುರಾಣ ಕಾಲದ ಒಬ್ಬ ವ್ಯಕ್ತಿಯೊಂದಿಗೆ ಸಮೀಕರಣ ಮಾಡಿ ಹೊಗಳುವ ಸಂಪ್ರದಾಯವು ನಮ್ಮಲ್ಲಿತ್ತೆಂದು ಕವಿಗಳು ರಚಿಸಿರುವ ಕಾವ್ಯಗಳನ್ನು ಗಮನಿಸಿದರೆ ತಿಳಿಯುತ್ತದೆ. ಇದರೊಂದಿಗೇ ರಾಜನ ಸೇವೆಯನ್ನು ಮಾಡಿ ತಮ್ಮ ಉಪ್ಪಿನ, ಜೋಳದ ಋಣವನ್ನು ತೀರಿಸುವಲ್ಲಿ, ಊರಿನ ಹಿತರಕ್ಷಣೆಗಾಗಿ ಹೋರಾಡುವಲ್ಲಿ, ಅನ್ಯಾಯದ ವಿರುದ್ಧ ಪ್ರತಿಭಟಿಸುವಲ್ಲಿ ಮಡಿದ ವೀರರ ಪರಾಕ್ರಮ ಗುಣಗಳನ್ನು ಹೊಗಳುವ, ಆತನಿಂದ ಪಡೆದ ನೆರವನ್ನು ಕೃತಜ್ಞತೆಯಿಂದ ಸ್ಮರಿಸಿ, ಅವನ ಪರೋಪಕಾರ ಬುದ್ಧಿಯನ್ನು ಮೆಚ್ಚಿ ಹೊಗಳುವ ಒಂದು ಸಂಪ್ರದಾಯವೂ ವೀರಗಲ್ಲುಗಳ ಪಾಠದಲ್ಲಿ ಬೆಳೆದು ಬಂತು. ಅಂದರೆ, ವೀರರ ತ್ಯಾಗ, ಬಲಿದಾನಗಳನ್ನು ಹೊಗಳುವ ನೀತಿಯನ್ನು ನಮ್ಮ ಕವಿಪರಂಪರೆ ಒಪ್ಪಿಕೊಂಡಿತ್ತು. ಈ ಒಂದು ಸಂಪ್ರದಾಯ ಬೆಳೆದ ಹಾಗೆ, ಕವಿಗಳಿಗೆ ವೀರರ ಬಗ್ಗೆ ಕಾವ್ಯ ರಚನೆ ಮಾಡಲು ಬೆಂಬಲ ಸಿಕ್ಕಿರಬೇಕು ಎಂದು ತೋರುತ್ತದೆ.

ಕರ್ನಾಟಕದಲ್ಲಿ ದೊರೆಯುವ ವೀರಕಾವ್ಯಗಳನ್ನು ಮೂರು ವಿಭಾಗಗಳಲ್ಲಿ ಗುರುತಿಸುವುದು ಸೂಕ್ತವೆಂದು ತೋರುತ್ತದೆ.

೧) ಹೋರಾಟದಲ್ಲಿ ಪರಾಕ್ರಮದಿಂದ ಮಡಿದ ವೀರನ ಸ್ಮಾರಕವಾಗಿ ನೆಟ್ಟ ವೀರಗಲ್ಲುಗಳ ಪಾಠದಿಂದ ದೊರೆಯುವ ಕಾವ್ಯಾತ್ಮಕವಾದ ರಚನೆ.

೨) ರಾಮನಾಥ ಚರಿತೆ, ಕಂಠೀರವನರಸರಾಜ ವಿಜಯ ಮುಂತಾದ ಕಾವ್ಯ ರೀತಿಯಲ್ಲಿ ಬಂದ ವೀರ ಕಾವ್ಯಗಳು.

೩) ಜನಪದ ಚಾರಣಕವಿಗಳು ರಚಿಸಿದಂತಹ ವೀರಕಾವ್ಯಗಳು.

ಮೇಲೆ ಹೇಳಿದ ಮೂರು ವಿಧವಾದ ವೀರಕಾವ್ಯಗಳಲ್ಲಿಯೂ ವೀರನ ಜೀವನ ಚಿತ್ರಣ; ಅವನ ಪರಾಕ್ರಮದ ವರ್ಣನೆಗಳೇ ಮುಖ್ಯವಾದ ಅಂಶವಾಗಿದ್ದರೂ ಈ ಮೂರೂ ವಿಧಗಳಲ್ಲಿನ ನಿರೂಪಣೆಯಲ್ಲಿರುವ ಕೆಲವಾರು ವಿಶಿಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದು.

ಮೊದಲಿಗೆ ಎರಡು ಮತ್ತು ಮೂರನೇ ವಿಭಾಗಗಳಲ್ಲಿನ ವೀರಕಾವ್ಯಗಳನ್ನು ಪರಿಚಯ ಮಾಡಿಕೊಂಡು, ಅನಂತರ ವೀರಗಲ್ಲುಗಳಲ್ಲಿ ದೊರೆಯುವ ವೀರಕಾವ್ಯಗಳಿಗೂ ಹಾಗೂ ಇತರ ವಿಧಗಳಿಗೂ ಇರುವ ವ್ಯತ್ಯಾಸವನ್ನು ಗಮನಿಸೋಣ.

ಸುಮಾರು ಹತ್ತನೆಯಶತಮಾನದಿಂದಲೇ ಉತ್ತಮ ಕಾವ್ಯಾಂಶವಿರುವ ವೀರಗಲ್ಲುಗಳ ಪಾಠ ದೊರೆಯುತ್ತದೆಯಾದರೂ, ಆ ಕಾಲದಲ್ಲಿ ಮಹಾಕಾವ್ಯದ ವೀರರನ್ನು ಕುರಿತ ಕಾವ್ಯಗಳಲ್ಲದೆ ಐತಿಹಾಸಿಕ ವೀರರನ್ನು ಕುರಿತ ವೀರ ಕಾವ್ಯಗಳು ದೊರೆಯುವುದಿಲ್ಲ.

ಜನ್ನನು ಅನಂತನಾಥ ಪುರಾಣದ ಆರಂಭದಲ್ಲಿ ತನ್ನ ಈ ಕಾವ್ಯ, "ಜಾರ ಚೋರ ವೀರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಟಕೆಯ್ವ ಚರ್ಚೆಯಲ್ಲ", "ಬಾಟಿ ಬಟ್ಟೆ ಪರಮಾಗಮ" ಎಂಬುದಾಗಿ ಹೇಳಿಕೊಳ್ಳುತ್ತಾನೆ.[೧]

ಈ ಕಾರಣದಿಂದಲೇ ಇರಬಹುದು. ತನ್ನ ಔಚಿತ್ಯವನ್ನು ಯಾರಾದರೂ ಪ್ರಶ್ನಿಸಿಯಾರೆಂಬ ಭಯ ವೀರ ಕಾವ್ಯವನ್ನು ಬರೆದ ನಂಜುಂಡನಿಗೂ ಇರುವಂತೆ ತೋರುತ್ತದೆ. ಆದ್ದರಿಂದಲೇ ಅವನು "ಇದು ಪುಣ್ಯ ಕಥೆಯಲ್ಲಿದು ಪೂರ್ವ ಚರಿತೆಯ । ಲ್ಲಿದು ಪುರಾಣದೊಳುಕ್ತವಲ್ಲ । ಇದನೆಂತಾಲಿಪೆನೆಂಬ ಸಜ್ಜನ । ಕೇಳಿದಕುತ್ತರವ ಪೇಳುವೆನು" ಎಂಬುದಾಗಿ ಸಜ್ಜನರ ಮನವನ್ನು ಒಲಿಸುವ ಪ್ರಯತ್ನವನ್ನು ಮಾಡುತ್ತಾನೆ.[೨]

> ಆವ ಕುಲದಲಿ ಪುಟ್ಟಲಿ ಪರವೆಣ್ಗಳ । ಭಾವಿಸನಾವನವನಿಗೆ
> ದೇವರು ಸರಿಯಲ್ಲ ನರಪಶುಗಳ ಬಲು । ದಾವಣಿಯವನೆ ಕೇಳುವನು[೩]

ಕವಿ 'ವೀರ'ನ 'ನಾಯಕ'ನ ವ್ಯಕ್ತಿತ್ವವನ್ನು ಗುರುತಿಸುತ್ತಿಲ್ಲ. ಪರನಾರೀ ಸೋದರನಾದವನು ದೇವರಿಗೂ ಮಿಕ್ಕವನು ಎಂಬುದೇ ಅವನ ಭಾವನೆ. ಆದ್ದರಿಂದಲೇ ಮನ ತುಂಬಿ ಅವನು.

> ತರು ಗಿರಿ ಸರಸಿ ಸರಿತ್ಪುರ ವನಗಳ । ನಿರದೆ ವರ್ಣಿಸುವ ಕವಿಗಳು
> ಪುರುಷರೊಳಗೆ ಶೌರ್ಯಾದಿ ಗುಣಗಳಿರೆ । ತರಹರಿಸುವರೆ ಪೊಗಳದೆ[೪]

---

೧ ಜನ್ನ : ಅನಂತನಾಥ ಪುರಾಣ. ಆ. ೧. ಪದ್ಯ ೨೬

೨ ನಂಜುಂಡ : ರಾಮನಾಥ ಚರಿತೆ, ಭಾಗ ೨, ಆ. ೧, ಸಂ. ೧, ಪದ್ಯ ೯೨

೩ ಅದೇ. ಪದ್ಯ ೯೪

೪ ಅದೇ. ಪದ್ಯ ೯೫

ಎಂಬುದಾಗಿ ಉದ್ಗಾರವೆಳೆಯುತ್ತಾನೆ.

ಈ ಎಲ್ಲಾ ಅಂಶಗಳು ಮಾರ್ಗರೀತಿಯಲ್ಲಿ ಕಾವ್ಯವನ್ನು ಬರೆಯುವುದಕ್ಕೆ ಕವಿಗಳಿಗಿದ್ದ ಅಡಚಣೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆ.

ಕುಮಾರರಾಮನು ಜನರ ಮನಸ್ಸನ್ನು ಕೇವಲ ವೀರನೆಂಬ ಕಾರಣಕ್ಕೆ ಮಾತ್ರ ಆಕರ್ಷಿಸಿದವನಲ್ಲ. ಅವನು ತಾನು ನಂಬಿದ ಮೌಲ್ಯಗಳಿಗೆ ಕಟ್ಟು ಬಿದ್ದು, ಅದರಿಂದ ಎಂಥದೇ ತೊಂದರೆ ಬಂದರೂ ಬಿಡದೆ, ಎಂಥ ಸವಾಲುಗಳನ್ನೂ ಎದುರಿಸಿ, ಉತ್ತರಿಸಿ, ದುರಂತದಲ್ಲಿ ಮಡಿದ ವೀರ. ಜನರಿಗೆ ಕುಮಾರರಾಮನ ಬಗ್ಗೆ ಈ ಕಾರಣಗಳಿಂದಾಗಿ ಇದ್ದ ಒಂದು ಅನುಕಂಪ ಪೂರ್ವಕವಾದ ಗೌರವ ಹಾಗೂ ಪರಂಪರೆಯಾಗಿ ಬಂದ ವೀರನನ್ನು ಹೊಗಳುವ ವೀರಗಲ್ಲುಗಳ ಪಾಠದ ಸಂಪ್ರದಾಯ, ನಂಜುಂಡನಿಗೆ ಪ್ರೇರಣೆಯನ್ನು ನೀಡಿರಬಹುದು. ಕುಮಾರರಾಮನಂತಹ ವೀರನ ಪರಾಕ್ರಮವನ್ನು ಸಾರುವುದಕ್ಕೆ ವೀರಗಲ್ಲಿನಂತಹ ಒಂದು ಸಣ್ಣ ಅವಕಾಶ ಏನೇನೂ ಸಾಲದು. ಒಂದು ಸುದೀರ್ಘ ಕಾವ್ಯವೇ ಅವನ ಪರಾಕ್ರಮವನ್ನು ಸಾರಲು ಬೇಕು. ಅವನ ವ್ಯಕ್ತಿತ್ವದ ಮಹತ್ವಕ್ಕೆ ಸೋತ ಹಲವಾರು ಕವಿಗಳು ಇವನ ಬಗ್ಗೆ ಕಾವ್ಯಗಳನ್ನೂ ಬರೆದಿದ್ದಾರೆ.[೫೫]

ಇಲ್ಲಿ ಒಂದು ಸಮಸ್ಯೆ ಎದುರಾಗುತ್ತದೆ ; ಅದು, ವೀರಗಲ್ಲುಗಳ ಪಾಠದಲ್ಲಿ ಮಾರ್ಗಕಾವ್ಯದ ರೀತಿಯಲ್ಲಿ ವೀರರನ್ನು ಹೊಗಳಿ ಕೀರ್ತಿಸುವ ಕಾವ್ಯಗಳು ದೊರೆಯುತ್ತವೆಯಾದರೂ, ವೀರರ ಬಗ್ಗೆಯೇ ಏಕೆ ಮಾರ್ಗ ಕಾವ್ಯಗಳು ಬರಲಿಲ್ಲ ಎಂಬುದು. ಅಂದರೆ ಶ್ರೇಷ್ಠನಾದ ಕವಿ ವೀರರ ಬಗ್ಗೆ, ಮಾನವರ ಬಗ್ಗೆ ಬರೆಯಬಾರದು, ತನ್ನ ಮರಣೋತ್ತರ ಜೀವನಕ್ಕೆ ಶ್ರೇಯಸ್ಕರವಾಗುವ ಧಾರ್ಮಿಕ ಗ್ರಂಥಗಳನ್ನು ಮಾತ್ರ ಬರೆಯಬೇಕೆಂಬುದು ಅವರ ಉದ್ದೇಶವಾಗಿತ್ತೆ ? ಹಾಗಾದರೆ ವೀರಗಲ್ಲುಗಳ ಪಾಠವನ್ನು ಎರಡನೇ ದರ್ಜೆಯ ಅಥವಾ ಆರಂಭದ ಕವಿಗಳು ಬರೆಯುತ್ತಿದ್ದರೆ ? ಎನ್ನುವುದು.

ಈ ಕಾವ್ಯಗಳ ರಚನೆಯ ಸ್ಥೂಲಪರಿಚಯವನ್ನು ಹೀಗೆ ಮಾಡಬಹುದೆಂದು ತೋರುತ್ತದೆ; ಈ ರೀತಿಯ ಕಾವ್ಯಗಳು ಸಾಮಾನ್ಯವಾಗಿ ಅರಸನನ್ನೋ ಅಥವಾ ಒಂದು ತಲೆಮಾರಿನಲ್ಲಿಯೇ ತನ್ನ ಪರಾಕ್ರಮ ಹಾಗೂ ಇನ್ನಿತರ ವಿಶಿಷ್ಟಗುಣಗಳಿಂದ ಪ್ರಸಿದ್ಧನಾದ ವ್ಯಕ್ತಿಯನ್ನೋ ನಾಯಕನನ್ನಾಗಿ ಹೊಂದಿರುತ್ತವೆ. ಇವು ಕಾವ್ಯ ಸಂಪ್ರದಾಯಕ್ಕನುಗುಣವಾಗಿ ಮತ್ತು ಜನಪದದಲ್ಲಿರುವ ಐತಿಹ್ಯ, ನಂಬಿಕೆಗಳನ್ನು ಸ್ವೀಕರಿಸಿ ಅವುಗಳಿಗೆ ಕಲ್ಪನೆಯ ಮೆರುಗನ್ನು ಕೊಟ್ಟಿರುತ್ತವೆ. ತಮ್ಮ ಕಾವ್ಯದ ನಾಯಕ ಅವತಾರಪುರುಷನೆಂಬ ಭಾವನೆಯನ್ನು ಅವು ಒತ್ತಿ ಹೇಳುತ್ತವೆ.

---

೫೫ ಜಿ. ವರದರಾಜಾ ರಾವ್ : ಕುಮಾರ ರಾಮನ ಸಾಂಗತ್ಯಗಳು. ಪು. ೬ರಿಂದ ೨೮

ಮಾರ್ಗರೀತಿಯ ವೀರ ಕಾವ್ಯಗಳಲ್ಲಿ ಪ್ರಮುಖವಾಗಿ ವೀರನ ಜನನ, ಬಾಲ್ಯ, ಯೌವನ, ಪರಾಕ್ರಮ, ಅವನು ಮಾಡಿದ ಕಾಳಗ, ಸಾಹಸಗಳ ವರ್ಣನೆ ತುಂಬಿದ್ದರೂ, ತಾವು ಮಾರ್ಗಕಾವ್ಯದ ಸಂಪ್ರದಾಯವನ್ನು ಒಪ್ಪಿಕೊಂಡಿರುವ ಕಾರಣದಿಂದ ಕೆಲವು ಕಡೆ ಇಡೀ ಕತೆಯಿಂದಲೇ ಹೊರತಾಗಿ ಉಳಿಯುವ ಕೆಲವೊಂದು ಅನವಶ್ಯಕ ವರ್ಣನೆಗಳನ್ನು ಅವು ತರಬೇಕಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆಯಾಗಿ ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯದಲ್ಲಿ ಬರುವ ವೇಶ್ಯಾವಾಟಿಕೆಯ ಪ್ರಸಂಗವನ್ನು ಕೊಡಬಹುದು. ಅಲ್ಲಿ ಈ ಪ್ರಸಂಗ ಇಡೀ ಕತೆಯಿಂದಲೇ ಹೊರಗೆ ನಿಲ್ಲುತ್ತದೆಯಲ್ಲದೆ ಯಾವುದೇ ರೀತಿಯ ಅರ್ಥವಂತಿಕೆಯನ್ನು ಹೊಂದಿಲ್ಲ.

ಕಾವ್ಯದ ಸುದೀರ್ಘತೆಯಿಂದಾಗಿ ಹಾಗೂ ಕವಿಯ ರಚನಾ ಕೌಶಲದ ಪರಿಣಾಮದಿಂದಾಗಿ ವೀರನ ಜೀವನ ವಿಸ್ತಾರವಾಗಿ, ವೈವಿಧ್ಯಮಯವಾಗಿ ಮೂಡಿ ಬರುತ್ತದೆ.

ವೀರನ ಪರಾಕ್ರಮ ಹಾಗೂ ವ್ಯಕ್ತಿತ್ವದ ವಿಶೇಷ ಗುಣಗಳಿಂದ ಆಕರ್ಷಿತರಾದ ಜನಪದ ಕವಿಗಳು ವೀರರ ಬಗ್ಗೆ ಜನಪದ ಕಾವ್ಯಗಳನ್ನು ರಚಿಸತೊಡಗಿದರು. ಕ್ರಿ.ಶ. ೯೯೬ರ ಒಂದು ವೀರಗಲ್ಲಿನ ಪಾಠದಿಂದ, ಮೊಳೆಯರಸನಿಗೂ ಮತ್ತು ನೊಳಂಬರ ಇಜಿವನೊಳಂಬನ ಮಗನಾದ ಅಯ್ಯಪ ದೇವನಿಗೂ ಆದ ಯುದ್ಧದಲ್ಲಿ ಎಜೆಯಮ್ಮ ಎಂಬ ವೀರನು ಮಡಿದ ವಿಷಯ ತಿಳಿಯುತ್ತದೆ. ಅವನ ಪರಾಕ್ರಮವನ್ನು ವರ್ಣಿಸುತ್ತಾ ಆ ಶಾಸನಕಾರ "ಪೆಂಜ್ಜಜೆಲ್ಲಂ ಪೊಗಟಿಲ್ಕೆ ವೀರನ ಸಾವು ಕತೆಯಾಗಿ ಪರೆದುದು ಮೂಜು ವೀಲೋಕದೊಳಗೆಲ್ಲಾ" ಎಂಬುದಾಗಿ ಉದ್ಗಾರವೆಳೆಯುತ್ತಾನೆ.[೬] ಅಂದರೆ ಈ ವೀರನ ಪರಾಕ್ರಮವನ್ನು ಕಂಡ ಜನತೆ ಅವನ ಬಗ್ಗೆ, ಅವನ ಪರಾಕ್ರಮದ ಬಗ್ಗೆ ಕತೆಯನ್ನು ನಿರ್ಮಿಸಿತು ಎಂಬುದು ಇಲ್ಲಿನ ಅರ್ಥ. ಶಾಸನಕಾರನ ಈ ಮಾತುಗಳು ಉತ್ಪ್ರೇಕ್ಷೆಯಿಂದ ಕೂಡಿರಬಹುದು, ಅಥವಾ ವಾಸ್ತವ ಸಂಗತಿಯೇ ಆಗಿರಬಹುದು. ಆದರೆ ಇಲ್ಲಿ ತಿಳಿಯುವು ಮುಖ್ಯ ಅಂಶವೇನೆಂದರೆ ಪ್ರಾಚೀನ ಕರ್ನಾಟಕದಲ್ಲಿಯೂ ವೀರನ ಬಗ್ಗೆ ಒಂದು ಹಂತದಲ್ಲಿ ಕಾವ್ಯ ರಚನೆ ಮಾಡುವ ಪರಿಪಾಠವಿತ್ತು ಎಂಬುದು.

ನಂಜುಂಡ ಕವಿ ತನ್ನ ಕುಮಾರರಾಮನ ಸಾಂಗತ್ಯದಲ್ಲಿ ಯುದ್ಧಕ್ಕೆ ಹೊರಟ ಯೋಧರ ಬೀಡುಗಳನ್ನು ಸುದೀರ್ಘವಾಗಿ ವರ್ಣಿಸುತ್ತಾ, ಅವರು ರಾತ್ರಿ ವೇಳೆ ತಮಗಿಂತಲೂ ಹಿಂದಿನ ವೀರರು ಮಾಡಿದ ಪರಾಕ್ರಮಗಳನ್ನು ಹಾಡುತ್ತಾ ರಾತ್ರಿಯನ್ನು ಕಳೆಯುತ್ತಿದ್ದರು ಎಂದು ಹೇಳುತ್ತಾನೆ. ನಂಜುಂಡನ ಈ ವಿವರಣೆಯಿಂದ 'ವೀರಕತೆ' ನಿರ್ಮಿತವಾಗುತ್ತಿದ್ದುದು ಮಾತ್ರವಲ್ಲ. ಅವು ವೀರರ ಸಮೂಹದಲ್ಲಿ ಹಾಡಲ್ಪಡುತ್ತಿದ್ದುವು ಮತ್ತು ವೀರರಿಗೆ ಉತ್ಸಾಹವನ್ನು ತುಂಬುವಂತಹವಾಗಿದ್ದವು ಎಂಬ ಅಂಶ ದೃಢವಾಗುತ್ತದೆ. ಇವು ಜನಪದ ವೀರ ಕಾವ್ಯಗಳೇ ಆಗಿರಬೇಕು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

೬ S.I.I. IX. Part I. No. 31. 996-97

ಇಲ್ಲಿ ಮತ್ತೊಂದು ಸಮಸ್ಯೆ ಎದುರಾಗುತ್ತದೆ ; ನಮ್ಮ ನೆರೆ ನಾಡಾದ ಆಂಧ್ರಪ್ರದೇಶದಲ್ಲಿ ಅಸಂಖ್ಯಾತವಾದ ಹಾಗೂ ಸಾಕಷ್ಟು ಪ್ರಾಚೀನವಾದ ಜನಪದ ವೀರ ಕಾವ್ಯಗಳು ದೊರೆಯುತ್ತವೆ. ಆದರೆ ಕರ್ನಾಟಕದಲ್ಲಿ ಈವರೆಗೆ ಆಗಿರುವ ಜಾನಪದ ಸಂಗ್ರಹಗಳನ್ನು ಗಮನಿಸಿದರೆ ಕುಮಾರರಾಮನ ಬಗ್ಗೆ ದೊರೆಯುವ ಜನಪದ ವೀರಕಾವ್ಯ ತುಣುಕು ಭಾಗಗಳಿಗಿಂತ ಪ್ರಾಚೀನವಾದ ವೀರಕಾವ್ಯಗಳು ಏಕೆ ದೊರೆಯುತ್ತಿಲ್ಲ ? ಹಾಗೆಯೇ ಸಮಸ್ಯೆಗೆ ಒಂದು ಪರಿಹಾರವೂ ದೊರೆಯುವಂತೆ ತೋರುತ್ತದೆ. ಕರ್ನಾಟಕದಲ್ಲಿ ದೊರೆಯುವಷ್ಟು ಅಸಂಖ್ಯಾತವಾದ ವೀರಗಲ್ಲುಗಳು –ಪ್ರಾಚೀನ ಹಾಗೂ ಕಾವ್ಯದ ದೃಷ್ಟಿಯಿಂದ ಗಮನಾರ್ಹವಾದುವು – ಆಂಧ್ರಪ್ರದೇಶದಲ್ಲಿ ದೊರೆಯುವುದಿಲ್ಲ ಎಂದು ಖಚಿತವಾಗಿ ಹೇಳಬಹುದು. ಈ ಹಿನ್ನೆಲೆಯಲ್ಲಿ ವೀರಕಾವ್ಯಗಳ ಕೊರತೆಯ ಬಗ್ಗೆ ಹೀಗೆ ಊಹಿಸಬಹುದು : ವೀರರ ಬಗ್ಗೆ ವೀರಗಲ್ಲುಗಳ ಮೇಲೆ ಕಾವ್ಯ ರಚನೆ ಮಾಡುತ್ತಿದ್ದುದರಿಂದ ಆ ಬಗ್ಗೆ ಪ್ರತ್ಯೇಕ ಕಾವ್ಯ ರಚನೆ ಮಾಡುವುದರ ಆವಶ್ಯಕತೆ ಇಲ್ಲವೆಂದು ವೀರಕಾವ್ಯ ರಚನೆಯನ್ನು ಬಿಟ್ಟಿರಬಹುದೆ ?

ಹಾಗೆಯೇ ಇಲ್ಲಿ ಒಂದು ಸಾಧ್ಯತೆಯನ್ನೂ ಊಹಿಸಬಹುದು : ಜನಪದ ಕಾವ್ಯ ಎಂಬುದು ಕಾಲ ಪ್ರವಾಹದೊಡನೆ ನಿರಂತರವಾಗಿ ಮೌಖಿಕ ಸಂಪ್ರದಾಯದಲ್ಲಿ ಮುಂದುವರಿಯುವಂತಹುದು. ಇದು ಪುರಾಕೃತವಾದ ಶಿಷ್ಟ ಸಂಪ್ರದಾಯದ ಕಾವ್ಯದ ಹಾಗೆ ಹಿಡಿದು ನಡೆಯುವಂತಹುದಲ್ಲ. ತಮ್ಮ ಕಾಲದಲ್ಲಿ ನಡೆದ ಘಟನೆಗಳಿಂದ ಪ್ರೇರಿತವಾದ ಜನಪದ ಕವಿಗಳು ಹೊಸಹೊಸದಾಗಿ ಕಾವ್ಯ ನಿರ್ಮಿಸುತ್ತಿದ್ದರು. ಹೀಗೆ ತಮ್ಮ ಕಾಲದ ವಸ್ತುವನ್ನೇ ಹೊಂದಿರುವ ಜನಪದ ಕಾವ್ಯಗಳು ಜನತೆಗೆ ಹಿಂದಿನ ಕಾವ್ಯಗಳಿಗಿಂತ ತೀರಾ ಹತ್ತಿರವಾದುದರಿಂದ ಅತಿಪ್ರಿಯವೂ ಆಗಿರಬಹುದು. ಇವುಗಳಿಂದ ಆಕರ್ಷಿತರಾದ ಜನ ಇವುಗಳಿಗೆ ಕೊಡುತ್ತಿದ್ದ ಆದ್ಯತೆಯನ್ನು ಬಹುಶಃ ಪ್ರಾಚೀನ ವೀರಕಾವ್ಯಗಳಿಗೆ ಕೊಡುವುದು ಸಾಧ್ಯವಾಗುತ್ತಿರಲಿಲ್ಲವೇನೋ. ಹೀಗೆ ಹೊಸಹೊಸದಾಗಿ ನಿರ್ಮಿತವಾದ ವೀರಕಾವ್ಯಗಳು ಜನರಲ್ಲಿ ಉಳಿದು ಹಳೆಯ ವೀರಕಾವ್ಯಗಳು ಸಂಪೂರ್ಣವಾಗಿ ಮರೆತುಹೋಗಿರಬಹುದು. ನಮ್ಮ ಅನುಭವದ ಮೇಲೆ ಹೇಳುವುದಾದರೆ ಚಿತ್ರದುರ್ಗ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಚಿತ್ರದುರ್ಗದ ಪಾಳೆಯಗಾರರ ಬಗ್ಗೆ ಇರುವ ಲಾವಣಿಗಳನ್ನು ಹಾಡಿ ಕೇಳುವುದಕ್ಕಿಂತ ಮಿಗಿಲಾಗಿ ಸುಮಾರು ಇದೇ ಶತಮಾನದಲ್ಲಿ ನಡೆದ ರಣಸಾಗರಗೌಡನ ಹತ್ಯೆಯನ್ನು ತಿಳಿಸುವ ಅಥವಾ ಹತ್ತಾರು ಹತ್ಯೆಗಳನ್ನು ಮಾಡಿ ಪೋಲೀಸರ ಕೈಗೆ ಸಿಗದೆ ಮಡಿದ 'ನಾಗ' ಎಂಬ ವ್ಯಕ್ತಿಯ ಲಾವಣಿಯನ್ನೋ ಹಾಡಲು ಅಥವಾ ಕೇಳಲು ಜನರು ಉತ್ಸಾಹದಿಂದ ಅಪೇಕ್ಷಿಸುತ್ತಾರೆ.[೭]

---

೭ ಶ್ರೀ ಎ. ಕೃಷ್ಣಮೂರ್ತಿಯವರ ಬಳಿ ಈ ತೆರನ ಹಲವಾರು ಅಪ್ರಕಟಿತ ಜಾನಪದ ವೀರಗೀತೆಗಳಿವೆ.

ಕರ್ನಾಟಕದಲ್ಲಿ ಇತ್ತೀಚಿನ ವೀರರನ್ನು ಕುರಿತ ಅನೇಕ ಜಾನಪದ ವೀರಕಾವ್ಯಗಳು ದೊರೆಯುತ್ತವೆ. ಮಾಗಡಿ ಕೆಂಪೇಗೌಡ, ಸರ್ಜಪ್ಪನಾಯಕ, ಮದಕರಿನಾಯಕ, ತರೀಕೆರೆ ರಂಗಪ್ಪನಾಯಕ, ಚೆನ್ನಿಗರಾಮ, ಪಿರಿಯಾಪಟ್ಟಣದ ಕಾಳಗ, ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾ ಸಾಹೇಬ, ಸಿಂಧೂರ ಲಕ್ಷ್ಮಣ, ವೀರಗ್ವಾಲಣ್ಣ, ಕಟ್ಟಿಯ ಚೆನ್ನಣ್ಣ, ಹಲಗಲಿಯ ಬೇಡರು, ವೀರಬಡಪ್ಪ, ಬೆಳಗಾವಿ ಪವಣಂಜ ಮುಂತಾದ ವೀರರನ್ನು ಕುರಿತ ಜನಪದ ಕಾವ್ಯಗಳು ದೊರೆಯುತ್ತವೆ.

ಈ ಎಲ್ಲಾ ವೀರಕಾವ್ಯಗಳ ನಾಯಕರೂ ಐತಿಹಾಸಿಕ ಪುರುಷರು. ಇವರು ತಮ್ಮ ಪರಾಕ್ರಮದಿಂದ ಉನ್ನತ ಸ್ಥಿತಿಗೆ ಬಂದು, ತಮ್ಮಲ್ಲಿನ ಕೆಲವಾರು ದೌರ್ಬಲ್ಯಗಳಿಂದಲೋ ಅಥವಾ ವಿಧಿಯ ಕೈವಾಡದಿಂದಲೋ, ನಂಬಿದವರೇ ಮಾಡಿದ ಮೋಸ, ಕುತಂತ್ರಗಳಿಗೆ ಬಲಿಯಾಗಿ ಅಪಮೃತ್ಯುವನ್ನು ಪಡೆದವರು. ಇದಕ್ಕೆ ಅಪವಾದವೆಂದರೆ ಬೆಳಗಾವಿ ಪವಣಂಜ ಮತ್ತು ಕಟ್ಟಿ ಚೆನ್ನಣ್ಣ. ಈ ಲಾವಣಿಗಳಲ್ಲಿ ನಿರೂಪಿತವಾಗಿರುವ ವೀರರನ್ನು ಎರಡು ಭಾಗಗಳಲ್ಲಿ ಗುರುತಿಸುವುದು ಸೂಕ್ತ ಎಂದು ತೋರುತ್ತದೆ. ಒಂದು : ಸಮಾಜದ ಒಂದು ಜನಾಂಗದವರಿಂದ ಆರಾಧಿಸಲ್ಪಡುವ ವೀರರು. ಎರಡು : ತಮ್ಮ ವೀರತನ ಮತ್ತು ಇತರ ಗುಣವಿಶೇಷಗಳಿಗಾಗಿ ಇಡೀ ಸಮಾಜದಿಂದ ಗೌರವಿಸಲ್ಪಡುವ ವೀರರು.

ಮೊದಲನೆಯ ವಿಭಾಗಕ್ಕೆ ಸೇರಿದ ವೀರರ ಲಾವಣಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇನ್ನೂ ಸಂಗ್ರಹಿತವಾಗಿಲ್ಲ. ಸಮಾಜದಲ್ಲಿ ಕೆಲವು ಪಂಗಡ – ಪಂಗಡಗಳಿಗೆ ವೈಮನಸ್ಯಗಳು ತಲೆತಲಾಂತರ ಗಳಿಂದ ಬೆಳೆದು ಬಂದಿರುವುದುಂಟು. ಇದರಿಂದಾಗಿ ಪರಸ್ಪರರು ಆಗಾಗ ಜಗಳವಾಡಿ ಮಡಿದಿರುವುದೂ ಉಂಟು. ಇಂತಹ ಜಗಳಗಳನ್ನಾಡಿ ಮಡಿದ ವೀರರ ಬಗ್ಗೆ ಲಾವಣಿಗಳು ದೊರೆಯುತ್ತವೆ. ಆ ಜಗಳದಲ್ಲಿ ತಮ್ಮ ಪಕ್ಷದ ವೀರ ಹೋರಾಡಿ ಶತ್ರುಪಕ್ಷದವರನ್ನು ಹೇಗೆ ಸದೆಬಡಿದ ಎಂಬುದನ್ನೂ, ಶತ್ರುಗಳ ಕುಹಕ ತಂತ್ರದಿಂದ ವೀರನು ಹೇಗೆ ಅಕಾಲಮರಣವನ್ನು ಹೊಂದಿದ ಎಂಬುದನ್ನೂ ಈ ಲಾವಣಿಗಳು ವರ್ಣಿಸುತ್ತವೆ. ಇಂಥ ಲಾವಣಿಗಳಲ್ಲಿ ತಮ್ಮ ವೀರರನ್ನು ಉದಾತ್ತರನ್ನಾಗಿಯೂ ಶತ್ರುಗಳನ್ನು ಅನುದಾತ್ತರನ್ನಾಗಿಯೂ ಚಿತ್ರಿಸಿರುತ್ತಾರೆ. ಇದಕ್ಕೆ ಉತ್ತಮ ಉದಾಹರಣೆಯಾಗಿ 'ಈರುಬಡಪ್ಪನ ಲಾವಣಿಯನ್ನು ನೋಡಬಹುದು. ಗೊಲ್ಲ ಹಾಗೂ ನಾಯಕ ಜನಾಂಗದವರಿಗೆ ಇದ್ದ ವೈಷಮ್ಯವನ್ನೂ, ತತ್ಪರಿಣಾಮವಾಗಿ ಈರುಬಡಪ್ಪ ಅಕಾಲಮರಣ ಹೊಂದಿದ ವಿಷಯವನ್ನೂ ಈ ಲಾವಣಿ ನಿರೂಪಿಸುತ್ತದೆ.[೮]

೮ ಶ್ರೀ. ಎ. ಕೃಷ್ಣಮೂರ್ತಿಯವರ ಅಪ್ರಕಟಿತ ಸಂಗ್ರಹದ ಆಧಾರದ ಮೇಲೆ.

ಇನ್ನು ಎರಡನೆಯ ವಿಭಾಗದ ವೀರರ ಬಗ್ಗೆ ಹೇಳುವುದಾದರೆ, ಇವರು ತಮ್ಮ ಪರಾಕ್ರಮ ಗುಣಗಳಿಂದ ಮತ್ತು ಎದುರಾದ ನೈತಕಜವಾಬ್ದಾರಿಯನ್ನು ಎದುರಿಸಿದ ಸ್ವಾಭಿಮಾನ ಗುಣಗಳಿಂದ ಜನರ ಗೌರವಕ್ಕೆ ಪಾತ್ರರಾದವರು. ಇವರು ಎಲ್ಲಾ ಜನಾಂಗದ ಜನರ ಗೌರವಕ್ಕೂ ಪಾತ್ರರು. ಏಕೆಂದರೆ ಇವರು ಮಾಡಿದ ಹೋರಾಟ ಯಾವುದೇ ಒಂದು ಕೋಮಿನ ಜನರ ಪರವಾಗಿ ಅಲ್ಲ. ಇವರು ಯಾರ ಮೇಲೆಯೂ ತಾವಾಗಿ ಹೋಗಿ ಜಗಳ ತೆಗೆದು ಯುದ್ಧಮಾಡಿ ಮಡಿದವರಲ್ಲ. ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ ಸಿಡಿದು ಹೋರಾಡಿದ ಆತ್ಮಾಭಿಮಾನಿಗಳು ಇವರು.

ಇನ್ನು ಮುಂದೆ ಈ ವೀರಕಾವ್ಯಗಳ ಲಾವಣಿಗಳ ನಿರೂಪಣಾವಿಧಾನ ಹಾಗೂ ವೈಶಿಷ್ಟ್ಯಗಳನ್ನು ಗಮನಿಸೋಣ. ಈ ಲಾವಣಿಗಳ ವಿಸ್ತಾರ ವೀರಗಲ್ಲುಗಳ ಪಾಠಕ್ಕಿಂತ ಸಾಕಷ್ಟು ದೊಡ್ಡದಾಗಿಯೂ, ಮಾರ್ಗ ಕಾವ್ಯಗಳಿಗಿಂತ ಚಿಕ್ಕದಾಗಿಯೂ ಇರುತ್ತವೆ. ಹಾಗೇ 'ವೀರತನ'ದ ನಿರೂಪಣೆಯ ದೃಷ್ಟಿಯಲ್ಲಿಯೂ ಹಾಗೂ ಜೀವನವನ್ನು ನೋಡುವ ದೃಷ್ಟಿಯಿಂದಲೂ ಇವು ಇತರ ಎರಡು ಬಗೆಯ ಕಾವ್ಯಗಳಿಗಿಂತ ಭಿನ್ನವಾಗಿದ್ದು ತಮ್ಮದೇ ಆದ ಕೆಲವು ವೈಶಿಷ್ಟ್ಯಗಳನ್ನು ಪಡೆದಿವೆ.

ನಮ್ಮ ನಾಡಿನಲ್ಲಿ ಐತಿಹ್ಯ, ದಂತಕಥೆಗಳು ಹೇರಳವಾಗಿ ದೊರೆಯುತ್ತವೆ. ಗಮನಿಸುತ್ತಾ ಹೋದಂತೆ ಕೆಲವೊಂದು ಐತಿಹ್ಯಗಳು ಅನೇಕ ಕಡೆಗಳಲ್ಲಿ ಒಂದೇ ರೀತಿಯಲ್ಲಿ ಇರುವಂತೆ ಕಂಡುಬರುತ್ತವೆ. ರಾಜ್ಯಸ್ಥಾಪನೆಗೆ ಒಳ್ಳೆಯ ಸ್ಥಳ ಎಂಬುದನ್ನು ಸೂಚಿಸಲು, ಆ ಪ್ರದೇಶದಲ್ಲಿ ಮೊಲಗಳಂತಹ ಸಾಧುಪ್ರಾಣಿಗಳೂ ಬೇಟೆಯ ನಾಯಿಗಳಂತಹ ಬಲಿಷ್ಠ ಪ್ರಾಣಿಗಳನ್ನೇ ಅಟ್ಟಿಸಿಕೊಂಡು ಹೋದ ಪ್ರದೇಶ ಎಂಬುದಾಗಿ ತಿಳಿಸುವುದು ; ಒಬ್ಬ ವ್ಯಕ್ತಿ ಮುಂದೆ ಅರಸನಾಗುತ್ತಾನೆ ಎಂಬ ಶಕುನವನ್ನು ತೋರಲು ಅವನು ಎಲ್ಲಿಯೋ ಮಲಗಿದ್ದಾಗ ಏಳು ಹೆಡೆಯ ನಾಗರಹಾವು ಆತನ ತಲೆಯ ಮೇಲೆ ಹೆಡೆಯೆತ್ತಿ ಆಡಿತೆಂಬ ವರ್ಣನೆಯನ್ನು ಮಾಡುವುದು ; ವೀರನು ಹುಟ್ಟಿನಿಂದ ಬಡವನಾಗಿದ್ದು, ಅನಿರೀಕ್ಷಿತವಾಗಿ ದೊರೆತ ಏಳು ಕೊಪ್ಪರಿಗೆ ಹಣದಿಂದ ರಾಜ್ಯಸ್ಥಾಪನೆ ಮಾಡಿದ ಎಂದು ವರ್ಣಿಸುವುದು –ಮುಂತಾದ ಜಾನಪದ ಆಶಯಗಳು ಈ ವೀರಕಾವ್ಯಗಳಲ್ಲಿ ದೊರೆಯುತ್ತವೆ. ಲಾವಣಿಗಳಲ್ಲಿ ನಿರೂಪಿತವಾಗಿರುವ ಹಾಗೆ ಮಾಗಡಿ ಕೆಂಪೇಗೌಡ, ತರೀಕೆರೆ ರಂಗಪ್ಪನಾಯಕ, ಸರ್ಜಪ್ಪನಾಯಕ ಮುಂತಾದವರು ಕಡುಬಡತನದ ಬೇಗೆಯಲ್ಲಿ ನೊಂದವರು ; ಯಾರದೋ ಮನೆಯಲ್ಲಿ ಊಳಿಗದವರಾಗಿದ್ದವರು ; ಇವರು ಕೆಲಸಮಾಡಿ ದಣಿದು, ಎಲ್ಲಿಯೋ ಮಲಗಿದ್ದಾಗ ಏಳು ಹೆಡೆಯ ನಾಗರಹಾವು ತನ್ನ ಹೆಡೆಯನ್ನು ಬಿಚ್ಚಿ ಇವರಿಗೆ ನೆರಳು ಮಾಡುತ್ತದೆ ; ಇವರೆಲ್ಲರೂ ತಮಗೆ ದೊರೆತ ನಿಧಿಯಿಂದಲೇ ರಾಜ್ಯಸ್ಥಾಪನೆ ಮಾಡುವುದು.

ಈ ವೀರಕಾವ್ಯಗಳಲ್ಲಿ, ವೀರನ ಪರಾಕ್ರಮವನ್ನು ಕೇಳುವವರ ಮನಮುಟ್ಟುವಂತೆ ಮಾಡುವಲ್ಲಿ ಜನಪದ ಕವಿಗಳು ಅನುಸರಿಸುವ ಒಂದು ತಂತ್ರವೆಂದರೆ ವೀರನಿಗೆ ಶತ್ರುಪಕ್ಷದವರು ಹಾಕಿದ ಸವಾಲುಗಳನ್ನು ಮತ್ತು ಅವುಗಳಿಗೆ ವೀರನು ಹೇಗೆ ಉತ್ತರಿಸಿದ ಎಂಬುದನ್ನು ವಿವರಿಸುವುದು. ಇದು ನಾಟಕೀಯವಾದ ಸನ್ನಿವೇಶವಾಗಿರುವುದರಿಂದ ವೀರನ ಚಿತ್ರವನ್ನು ನಮ್ಮ ಮುಂದಿಡುವಲ್ಲಿ ಪರಿಣಾಮಕಾರಿಯಾಗಿರುತ್ತದೆ.

ಈ ವೀರರೆಲ್ಲರೂ ತಮ್ಮಗೊಡ್ಡಿದ ಯಾವುದೇ ಸವಾಲನ್ನು ಸ್ವೀಕರಿಸಿದವರು. ಸವಾಲನ್ನು ಸ್ವೀಕರಿಸದವರು ಹೇಡಿಗಳೆಂದೇ ಅವರ ಭಾವನೆ. ಪಿರಿಯಾಪಟ್ಟಣದ ಕಾಳಗ ಎಂಬ ವೀರಕಾವ್ಯದಲ್ಲಿ ವೀರರಾಜ ಮೈಸೂರಿನ ದಳವಾಯಿಯವರಿಗೆ ಈ ರೀತಿ ಪತ್ರ ಬರೆಯುತ್ತಾನೆ : "ಗಂಡಾದರೆ ದಂಡೆತ್ತಿ ಬನ್ನಿ, ಇಲ್ಲವಾದರೆ ಸೀರೆಯುಟ್ಟು ಬಳೆಯನ್ನು ತೊಟ್ಟು ನಿಮ್ಮ ಅರಮನೆಯಲ್ಲಿರಿ." –ಈ ಸವಾಲು ದಳವಾಯಿಯನ್ನು ಕೆಣಕುತ್ತದೆ. ಅವನು ತಾನೇ ದಂಡೆತ್ತಿಹೋಗುವಷ್ಟು ಸ್ವತಂತ್ರನಲ್ಲ. ಅರಸನಾದ ಕಂಠೀರವನ ಅಧೀನ. ತನ್ನ ಈ ಪರಿಸ್ಥಿತಿಯಲ್ಲಿ ಸವಾಲನ್ನು ಎದುರಿಸುವುದು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ತಾನೇ ಕಂಠೀರವನನ್ನು ಕುರಿತು "ನಾನು ಸತ್ತರೆ ಯುದ್ಧದಲ್ಲಿ ಸಾಯುತ್ತೇನೆ. ಉಳಿದರೆ ಪಿರಿಯಾಪಟ್ಟಣ ತರುತ್ತೇನೆ. ನೀವು ಅಪ್ಪಣೆ ಕೊಡದಿದ್ದರೆ ನಾಲಿಗೆ ಹಿಡಿದು ಪಾದದ ಮೇಲೆ ಬಿದ್ದು ಪ್ರಾಣಬಿಡುತ್ತೇನೆ" ಎಂದು ಹಠ ಹಿಡಿಯುತ್ತಾನೆ.[೯]

ಕರ್ನಾಟಕದಲ್ಲಿನ ಬೇಡ ಜನಾಂಗದವರು ಮೊದಲಿನಿಂದಲೂ ಸೈನ್ಯವೃತ್ತಿಯನ್ನೋ, ಬೇಟೆಯನ್ನೋ ತಮ್ಮ ಜೀವನಾಧಾರವಾಗಿಟ್ಟುಕೊಂಡು ಬಾಳಿದವರು. ಈ ದೇಶವನ್ನು ಆಗ ಆಳುತ್ತಿದ್ದ ಬ್ರಿಟಿಷರು ತಂದ ನಿಶ್ಶಸ್ತ್ರೀಕರಣ ಕಾನೂನು ಇವರ ಆತ್ಮಾಭಿಮಾನವನ್ನು ಕೆಣಕಿತು. ವೈಯಕ್ತಿಕವಾಗಿ ಯಾರ ಬಳಿಯಲ್ಲೂ ಆಯುಧಗಳು ಇರಬಾರದೆಂಬುದೇ ಆ ಕಾನೂನು. ಆದರೆ ಪರಂಪರಾಗತವಾಗಿ ತಮಗೆ ಬಂದಿದ್ದ ಆಯುಧಗಳನ್ನು ತಮ್ಮ ಜೀವವೆಂದೇ ಬಗೆದಿದ್ದ ಕೆಲವರಿಗೆ ಇದರಿಂದ ತಮ್ಮ ಪೌರುಷವನ್ನು ಕಳೆದುಕೊಂಡಂತಾಯಿತು. ಆದ್ದರಿಂದ ಅವರು ಈ ರೀತಿ ಹಲುಬುತ್ತಾರೆ ;

"ಹಲ್ಲಕಿತ್ತ್ ಹಂಬಿನ ಪರವಿಯು ನಮಗೆ ಆದಿತಲ್ಲಾ
ರಂಡಿ ಮುಸುಕ ಹಾಕಿ ತಿರುಗಲು ನಮ್ಮ ಮಾನ ಉಳಿಯುವುದಿಲ್ಲಾ
ಮಗ್ಗಲದಾಗಿನ ಹೇಣ್ತಿ ಕೊಟ್ಹಾಂಗ, ಕೊಜ್ಜಿ ಆದೆವು ನಾವೆಲ್ಲಾ
ಸತ್ತ ಹೆಣ ಸಿಂಗಾರ ಮಾಡಿದ ಪರಿಪಾಲಿಗೆ ಬಂತಲ್ಲಾ"[೧೦]

–ಹೀಗೆಂದು ಬಗೆದ ನಾಲ್ವರು ವೀರರು ಬ್ರಿಟಿಷರ ಸೈನ್ಯದೊಡನೆ ಹೋರಾಡಿ ಸಾಯುತ್ತಾರೆ.

---

೯ ಜೀ. ಶಂ ಪರಮಶಿವಯ್ಯ (ಸಂ) : ಪಿರಿಯಾಪಟ್ಟಣದ ಕಾಳಗ

೧೦ ಕ್ಯಾತನಹಳ್ಳಿ ರಾಮಣ್ಣ (ಸಂ) : ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಪು. ೮೯

ಈ ಕಾವ್ಯಗಳಲ್ಲಿನ ವೀರರ ಸ್ವಾಭಿಮಾನದ ಮತ್ತೊಂದು ಮುಖ ಎಂದರೆ, ನಡೆಯುವ ಯುದ್ಧದಲ್ಲಿ ತಮಗೆ ಸೋಲು ಒದಗಿದರೂ ಸಹ ಅವರು ದುಃಖಿಸುವುದಿಲ್ಲ. ಆದರೆ ಶತ್ರುಗಳ ಕೈಸೆರೆಯಾಗುವುದು, ಅವರಿಂದ ತಾವಾಗಲೀ, ತಮ್ಮ ಮನೆಯವರಾಗಲೀ ಹೀನಾಯವಾದ ರೀತಿಯಲ್ಲಿ ನಡೆಯಿಸಿಕೊಳ್ಳುವುದು ಹೇಯವಾದುದೆಂಬ ನಂಬಿಕೆ. ಈ ಒಂದು ನಂಬಿಕೆಯಿಂದಾಗಿ ಶತ್ರುಗಳ ಕೈಗೆ ಸಿಕ್ಕಿ ಸಾಯುವ ಬದಲು ಮೊದಲೇ ತಮ್ಮನ್ನು, ಮತ್ತೆ ಕೆಲವೊಮ್ಮೆ ತಮ್ಮ ಹೆಂಡತಿಯರನ್ನು ಸಹ ಕೊಂದುಬಿಡುತ್ತಿದ್ದರು. ಸರ್ಜಪ್ಪ ನಾಯಕ ತನ್ನ ಸೂಳೆಯಾದ ರಂಗಿ ಹೂಡಿದ ಸಂಚಿನಿಂದ ಪಾರಾಗಿ ಬಂದು, ಇನ್ನು ತಾನು ಚೇತರಿಸಿಕೊಳ್ಳುವುದು ಸಾಧ್ಯವೇ ಇಲ್ಲ ಎಂದು ಅನ್ನಿಸಿದಾಗ, ತನ್ನ ತಮ್ಮಂದಿರು ಎಷ್ಟೇ ಬೇಡವೆಂದರೂ ನೇಣುಹಾಕಿಕೊಳ್ಳುತ್ತಾನೆ. ಪಿರಿಯಾಪಟ್ಟಣದ ವೀರರಾಜೇಂದ್ರನಿಗೆ ತನ್ನ ಸೋಲು ಖಚಿತವೆಂದು ತಿಳಿದಾಗ ತನ್ನ ಅರಮನೆಗೆ ಧಾವಿಸುತ್ತಾನೆ. ಹೇಡಿತನದಿಂದ ಅಲ್ಲ ; ಸೋತರೆ ತನ್ನ ಹೆಂಡತಿಯರು ಶತ್ರುವಶವಾಗುತ್ತಾರೆ. ಆಗ ಶತ್ರುಗಳು ಅವರನ್ನು ಹೀನಾಯವಾಗಿ ಕಾಣುತ್ತಾರೆ ಎಂಬ ನೋವಿನಿಂದ, ಅವರಿಗೆ ಒದಗಬಹುದಾದ ಸಂಕಟ ಸ್ಥಿತಿಗೆ ಅವಕಾಶ ಕೊಡದಂತೆ ತನ್ನ ಮುದ್ದಿನ ಹೆಂಡತಿಯರನ್ನು ಸಾಯಿಸಿಬಿಡುತ್ತಾನೆ.

ಈ ಲಾವಣಿಗಳ ವೀರರೆಲ್ಲರೂ ಹೋರಾಟದಲ್ಲಿ ಮಡಿದವರೆಂದು ಹೇಳಲಾಗುವುದಿಲ್ಲ. ಹೋರಾಡುವುದಕ್ಕೆ ಅವಕಾಶವೇ ದೊರೆಯದಂತಹ ಕುತಂತ್ರಗಳಿಗೆ ಬಲಿಯಾದವರು.

ಈ ಕಾವ್ಯಗಳು ಸುದೀರ್ಘವಾಗಿರುವುದರಿಂದ ವೀರನ ಬಗ್ಗೆ ಹೆಚ್ಚಿನ ವರ್ಣನೆ ದೊರೆಯುತ್ತದೆ. ವೀರನ ಆಯುಧ, ಅದರ ಮಹತ್ವ, ವೀರನ ವಾಹನ ಮುಂತಾದ ವಿವರಗಳು ಸಹ ಬರುತ್ತವೆ. ವೀರನೊಬ್ಬನ ಕಥೆಯನ್ನು ಈ ಕಾವ್ಯಗಳು ಹೇಳಹೊರಟರೂ, ಸಾಂದರ್ಭಿಕವಾಗಿ ಅನೇಕ ವೀರರ ಬಗ್ಗೆ ಅಲ್ಲಲ್ಲಿ ಪ್ರಸ್ತಾಪ ಮಾಡಿರುವುದುಂಟು. ಏಕೆಂದರೆ ಯುದ್ಧ ಎಂಬುದು ಸಾಮೂಹಿಕ ಕ್ರಿಯೆ. ಇದರಲ್ಲಿ ನಾಯಕನ ಪಾತ್ರ ಹೆಚ್ಚಾಗಿದ್ದರೂ ಅವನ ಬೆಂಬಲವಾಗಿ ನಿಂತು ಹೋರಾಡಿದವರ ಪಾತ್ರವೂ ಅಷ್ಟೇ ಪ್ರಮುಖವಾದುದು. ಕೆಲವೊಮ್ಮೆ ಇವರ ವೀರಕಾವ್ಯಗಳ ನಾಯಕರಿಗಿಂತ ಹೆಚ್ಚಾಗಿ ನಮ್ಮ ಗಮನವನ್ನು ಸೆಳೆಯುತ್ತಾರೆ. ಪಿರಿಯಾ ಪಟ್ಟಣದ ಮೇಲೆ ಯುದ್ಧಕ್ಕೆ ಹೊರಡುವ ಮೊದಲು ದಳವಾಯಿ ತನ್ನ ಸೈನಿಕರನ್ನು ಉದ್ದೇಶಿಸಿ, "ಮದುವೆಯಾದವರು ಬೇಕಾದರೆ ಹಿಂದೆ ಉಳಿಯಿರಿ. ಹೆಂಡತಿಯಿಲ್ಲದ ನನ್ನಂತಹವರು ಮಾತ್ರ ನನ್ನನ್ನು ಹಿಂಬಾಲಿಸಿರಿ" ಎಂಬುದಾಗಿ ಹೇಳುತ್ತಾನೆ. ದಳವಾಯಿಯ ಈ ಆಹ್ವಾನಕ್ಕೆ ಯೋಧರು "ಉಪ್ಪಿನ ಋಣಕ್ಕೆ ತಪ್ಪದೆ ತಲೆ ಕೊಡುತ್ತೇವೆ. ನಮ್ಮ ಮಡದಿ ಮಕ್ಕಳನ್ನು ನೀವು ಕಾಪಾಡಿ" ಎಂದು ಸ್ವಾಮಿನಿಷ್ಠೆಯಿಂದ ಉತ್ತರಿಸುತ್ತಾರೆ. ಇದಕ್ಕೂ ಪರಿಣಾಮಕಾರಿಯಾದ ಚಿತ್ರಣ ಎಂದರೆ ಪಿರಿಯಾಪಟ್ಟಣದ ಕಾಳಗದಲ್ಲಿ ಬರುವ ಫಕೀರನ ಪ್ರಸಂಗ. ವೀರರಾಜ ಚಾಡಿಯ ಮಾತನ್ನು ಕೇಳಿ ಫಕೀರನನ್ನು ಕೆಲಸದಿಂದ ತೆಗೆದುಹಾಕಿರುತ್ತಾನೆ.

ವೀರರಾಜ ಸೋತ ಮುಖದಲ್ಲಿ ಅರಮನೆಗೆ ಹೋಗುತ್ತಿದ್ದುದನ್ನು ಗಮನಿಸಿದ ಈ ಫಕೀರ, ವೀರರಾಜನ ಆ ಸ್ಥಿತಿಯನ್ನು ಸಹಿಸಲಾರದೆ, ಅವನ ಅನ್ನದ ಋಣವನ್ನು ನೆನೆದು, "ನಾನು ಎಂದಾದರೂ ಸಾಯುವವನೆ ; ಅಂಥದರಲ್ಲಿ ನನ್ನ ಒಡೆಯನ ಉಪ್ಪಿನ ಋಣವನ್ನು ತೀರಿಸಿಯೇ ಸಾಯುತ್ತೇನೆ" ಎಂದು ನಿರ್ಧರಿಸಿ, ಯುದ್ಧಕ್ಕೆ ಹೊರಟು ತನ್ನ ಕೈಸೋಲುವವರೆಗೂ ಹೋರಾಡಿ ರಣರಂಗದಲ್ಲಿ ಕುಸಿಯುತ್ತಾನೆ. ಇದನ್ನು ಕಂಡ ವೀರರಾಜ ಓಡಿಬರುತ್ತಾನೆ. ಆಗ ಫಕೀರ ವೀರರಾಜನನ್ನು ಕುರಿತು, "ಚಾಡಿಯ ಮಾತುಗಳನ್ನು ಕೇಳಿ ನೀವು ನನಗೆ ಎರಡು ಬಗೆಯದಿರಿ. ಆದರೆ ನಾನು ಎರಡು ಬಗೆಯಲಿಲ್ಲ. ನನ್ನ ಉಪ್ಪಿನ ಋಣವನ್ನು ತೀರಿಸಿದ್ದೇನೆ" ಎಂಬುದಾಗಿ ತಿಳಿಸಿ ಸಾಯುತ್ತಾನೆ.

ಈ ಕಾವ್ಯಗಳ ನಾಯಕರೆಲ್ಲರೂ ಐತಿಹಾಸಿಕ ವೀರರೇ ಆಗಿದ್ದರೂ, ವೀರನಿಗೆ ಇಲ್ಲಿ ಸಂಬಂಧಪಟ್ಟ ಚಾರಿತ್ರಿಕ ಅಂಶಗಳೂ, ಘಟನೆಗಳೂ ಕ್ರಮವಾಗಿರುವುದಿಲ್ಲ. ಇದ್ದರೂ ಅವು ಬೇರೆ ಬೇರೆಯ ರೂಪವನ್ನು ಪಡೆದಿರುತ್ತವೆ. "For them a heroic tale has an existence with other tales of the same kind and its interest is not consciously historical broadly and simply human".[11] ಸರ್ಜಪ್ಪ ನಾಯಕನ ಲಾವಣಿಯಲ್ಲಿ ಸರ್ಜಪ್ಪನಾಯಕನನ್ನು ಹೋರಾಡಿ ಗೆಲ್ಲುವುದು ಅಸಾಧ್ಯವೆಂದು ಅರಿತ ಬ್ರಿಟನ್‌ರಾಣಿ ಅವನನ್ನು ಕುಹಕದಿಂದ ಹಿಡಿಯಲು ಯೋಚಿಸುತ್ತಾಳೆ. ಮಹಾರಾಣಿಯೊಬ್ಬಳು ಅವನ ಸೂಳೆಯ ಮನೆಗೆ ಹೋಗಿ ಸರ್ಜಪ್ಪನಾಯಕನನ್ನು ಹಿಡಿದುಕೊಂಡು ತನ್ನ ವಶಕ್ಕೆ ಒಪ್ಪಿಸಬೇಕೆಂದು ಆ ಸೂಳೆಯನ್ನು ಬೇಡುತ್ತಾಳೆ. ಹೀಗೆ ಐತಿಹಾಸಿಕ ದೃಷ್ಟಿಯಿಂದ ಅಸಂಭವ ಎಂದೆನ್ನಿಸುವ ಘಟನೆಗಳ ನಿರೂಪಣೆಗಳಿರುತ್ತವೆ. ಇದು ಸರ್ಜಪ್ಪ ನಾಯಕನ ಪರಾಕ್ರಮವನ್ನು ಹೊಗಳುವ ಸಲುವಾಗಿ ಹೇಳಲು ಅನುಸರಿಸಿರುವ ತಂತ್ರವೋ ಅಥವಾ ಐತಿಹಾಸಿಕ ಪ್ರಜ್ಞೆಯಿಲ್ಲದ ಜನಪದ ಕವಿಯ ತಪ್ಪು ಗ್ರಹಿಕೆಯೋ ಹೇಳಲಾಗುವುದಿಲ್ಲ.

ಕರ್ನಾಟಕದ ಜನಪದ ವೀರರ ಕಾವ್ಯಗಳ ಒಂದು ವಿಶಿಷ್ಟಾಂಶವೆಂದರೆ ; ಅತಿಮಾನುಷ ಶಕ್ತಿಗಳು ತಮ್ಮ ಭಕ್ತರಾದ ವೀರರ ಪರವಾಗಿ ಹೋರಾಡುವುದು. ಇದು ವೀರನ ಭಕ್ತಿಯನ್ನೂ ದೇವತೆಗಳಿಗೆ ತಮ್ಮ ಭಕ್ತರಾದ ವೀರರ ಬಗ್ಗೆ ಇರುವ ವಿಶ್ವಾಸವನ್ನೂ ಮತ್ತು ಅವು ನೀಡುವ ಅಭಯವನ್ನೂ ವ್ಯಕ್ತಪಡಿಸುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಬದುಕಿನಲ್ಲಿ ದೈವದ ಪಾತ್ರದ ಬಗ್ಗೆ ಜನರಿಗೆ ಮತ್ತು ಜನಪದ ಕವಿಗೆ ಇರುವ ನಂಬಿಕೆಯನ್ನು ಈ ಅಂಶಗಳು ಸ್ಪಷ್ಟಪಡಿಸುತ್ತವೆ.

---

೧೧. C.M Bowra : Heroic Poetry. ಪು .೨೭

ಪಿರಿಯಾಪಟ್ಟಣದ ಕಾಳಗದಲ್ಲಿ ಉರಿಮಸಣಿಯು ಪಿರಿಯಾಪಟ್ಟಣದವರ ಕಡೆ ನಿಂತು, ಚಾಮುಂಡಿ ಮೈಸೂರಿನವರ ಕಡೆ ನಿಂತು ಪರಸ್ಪರ ಹೋರಾಡುತ್ತಾರೆ. ಚಾಮುಂಡಿಯ ಕೈ ಮೇಲಾಗಿ ಉರಿಮಸಣಿಯನ್ನು ಸೆರೆಹಿಡಿಯುವ ಪ್ರಸಂಗ ಸ್ವಾರಸ್ಯವಾಗಿದೆ. ಇಂಥ ಕಥೆ ಸರ್ಜಪ್ಪನಾಯ್ಕನ ಲಾವಣಿಯಲ್ಲಿ ಇನ್ನೂ ಪರಿಣಾಮಕಾರಿಯಾಗಿದೆ. ಬ್ರಿಟನ್ ರಾಣಿಯೊಂದಿಗೆ ಸೇರಿ, ಸೂಳೆಯಾದ ರಂಗಿ ಸರ್ಜಪ್ಪನನ್ನು ಮೋಸದಿಂದ ಹಿಡಿಯುವ ಕುತಂತ್ರವನ್ನು ತಿಳಿದ ದೇವತೆಗಳು ಸರ್ಜಪ್ಪನಿಗೆ ಶಕುನಗಳ ಮೂಲಕ ಮುಂಬರುವ ಕಷ್ಟಗಳನ್ನು ಸೂಚಿಸುತ್ತಾರೆ. ಆದರೆ ಸೂಳೆ ರಂಗಿಯ ಬಗ್ಗೆ ಇದ್ದ ನಿರ್ಮಲವಾದ ಪ್ರೇಮ ಸರ್ಜಪ್ಪನನ್ನು ರಂಗಿಯ ಮನೆಗೆ ಹೋಗುವಂತೆ ಮಾಡುತ್ತದೆ. ಅವಳು ವಿಷಪೂರಿತವಾದ ಅಡುಗೆಯನ್ನು ಮಾಡಿ ಬಡಿಸಿದಾಗ ಸರ್ಜಪ್ಪನು ಊಟ ಮಾಡದ ಹಾಗೆ ದೇವತೆಗಳು ಹಲವಾರು ಶಕುನಗಳನ್ನು ತೋರಿಸುತ್ತಾರೆ. ಆದರೆ ಇವು ಯಾವುದನ್ನೂ ಗಮನಿಸದೆ ಸರ್ಜಪ್ಪ ಊಟ ಮಾಡಿಯೇ ಬಿಡುತ್ತಾನೆ. ತಮ್ಮ ಭಕ್ತ ತಮ್ಮ ಎಲ್ಲಾ ಶಕುನಗಳನ್ನೂ ಗಮನಿಸದೆ ಊಟ ಮಾಡಿದುದರಿಂದ ದೇವತೆಗಳಿಗೆ ಕೋಪ ಬರುವುದರ ಬದಲು ತಮ್ಮ ಭಕ್ತನ ಬಗ್ಗೆ ಅನುಕಂಪ ಮೂಡುತ್ತದೆ. ಊಟದ ಮೂಲಕ ಸರ್ಜಪ್ಪನ ದೇಹವನ್ನು ಸೇರಿದ ವಿಷವನ್ನು ಅವರು ಹೀರುತ್ತಾರೆ.

ಈ ರೀತಿಯ ಅಸಂಭಾವ್ಯ ಘಟನೆಗಳು, ಜನಪದ ವೀರಕಾವ್ಯಗಳಲ್ಲಿ ಬರುತ್ತವೆ. ಇದು ಐತಿಹಾಸಿಕ ದೃಷ್ಟಿಯಿಂದ ಅಸಂಭಾವ್ಯ ಎನ್ನಿಸಿದರೂ ಕಾವ್ಯದ ದೃಷ್ಟಿಯಿಂದ ಗಮನಿಸಿದಾಗ ಈ ಅಸಂಭಾವ್ಯತೆಯೇ ಒಂದು ರೀತಿಯ ಮೆರುಗನ್ನು ಈ ಲಾವಣಿಗಳಿಗೆ ನೀಡುತ್ತದೆ ಎಂಬುದು ಮುಖ್ಯ.

ಮೇಲೆ ಉಲ್ಲೇಖಿಸಿರುವ ಪಿರಿಯಾಪಟ್ಟಣದ ಕಾಳಗ– ಎಂಬ ಜನಪದ ವೀರಕಾವ್ಯದಲ್ಲಿಯ ವಸ್ತು 'ಕಂಠೀರವ ನರಸರಾಜ ವಿಜಯ' ಎಂಬ ಮಾರ್ಗಕಾವ್ಯದಲ್ಲಿಯೂ ಪ್ರಸ್ತಾಪಿತವಾಗಿದೆ. ಈ ಎರಡೂ ವೀರಕಾವ್ಯಗಳ ತುಲನಾತ್ಮಕ ಅಭ್ಯಾಸದಿಂದ ಜಾನಪದ ವೀರಲಾವಣಿ ಹೇಗೆ ತನ್ನ ವಿಶಿಷ್ಟತೆಯನ್ನು ಪಡೆದಿದೆ ಎಂಬುದನ್ನು ತಿಳಿಯಬಹುದು.

ಮೈಸೂರು ಅರಸರಿಗೂ ಮತ್ತು ಪಿರಿಯಾಪಟ್ಟಣದ ಅರಸರಿಗೂ ನಡೆದ ಯುದ್ಧವೇ 'ಪಿರಿಯಾ ಪಟ್ಟಣದ ಕಾಳಗ' ಎಂಬ ವೀರಕಾವ್ಯದ ವಸ್ತು. ಕಂಠೀರವ ನರಸರಾಜ ವಿಜಯದಲ್ಲಿ ಇದು ಒಂದು ಪ್ರಸಂಗವಾಗಿ, ನರಸರಾಜನ ಒಂದು ವಿಜಯವಾಗಿ ಬಂದಿದೆ. ಈ ಮಾರ್ಗ ವೀರಕಾವ್ಯವನ್ನು ಬರೆದ ಗೋವಿಂದವೈದ್ಯ– ಕಂಠೀರವ ನರಸರಾಜರ ಆಸ್ಥಾನಕವಿ. ಇವನ ಮುಖ್ಯ ಉದ್ದೇಶ ತನ್ನ ಅರಸನನ್ನು ಹೊಗಳುವುದು. ಆದ್ದರಿಂದ ಕಂಠೀರವ ಪರಾಕ್ರಮಗಳೇ ಇಲ್ಲಿ ಮುಖ್ಯ. ಆದರೆ ಜಾನಪದ ವೀರ ಕಾವ್ಯದ ಕವಿಯ ದೃಷ್ಟಿಯೇ ಬೇರೆ. ಅವನಿಗೆ ಯಾರ

ಸೋಲೂ–ಗೆಲುವೂ ಮುಖ್ಯವಲ್ಲ. ಈ ಪ್ರಸಂಗ ಅವನ ಮನಸ್ಸನ್ನು ಕಲಕಿದೆಯಾದ್ದರಿಂದ ಅವನ ಮನದಾಳದಿಂದ ಈ ಕಾವ್ಯ ಮೂಡಿಬಂದಿದೆ. ಅವನ ಅನುಕಂಪ ವೀರರಾಜನ ಕಡೆ ಇದೆ ಎಂಬುದು ಕಾವ್ಯದ ಉದ್ದಕ್ಕೂ ವ್ಯಕ್ತವಾಗಿದೆ. ನಮ್ಮ ಅನುಕಂಪವನ್ನೂ ವೀರರಾಜನ ಕಡೆಗೆಳೆಯಲು ಪ್ರಯತ್ನಿಸುತ್ತಾನೆ. ಇಷ್ಟೆಲ್ಲಾ ಆದರೂ ಕಂಠೀರವನ ಕಡೆಯವರ ಪರಾಕ್ರಮವನ್ನೂ ಹೃದಯ ತುಂಬಿಯೇ ವರ್ಣಿಸಿದ್ದಾನೆ.

ಕಂಠೀವನಿಗೂ ವೀರರಾಜನಿಗೂ ನಡೆದ ಯುದ್ಧಕ್ಕೆ ಕಾರಣಗಳನ್ನು ಇಬ್ಬರು ಕವಿಗಳೂ ಎರಡು ರೀತಿಯಲ್ಲಿ ನೀಡುತ್ತಾರೆ. ಗೋವಿಂದ ವೈದ್ಯನ ಪ್ರಕಾರ ವೀರರಾಜ, ಕಂಠೀರವನಿಗೆ ಕಪ್ಪಕಾಣಿಕೆಗಳನ್ನು ಕೊಡದೆ ಸೊಕ್ಕಿನಿಂದ ಮೆರೆಯುತ್ತಿರುತ್ತಾನೆ. ಆದಕಾರಣ ಕಂಠೀರವ ಯುದ್ಧಕ್ಕೆ ಹೊರಡುತ್ತಾನೆ. ಆದರೆ ಜಾನಪದ ಕವಿ ಕೊಡುವ ಕಾರಣವೇ ಬೇರೆ. ಪಿರಿಯಾಪಟ್ಟಣದ ರಾಜ ತನಗರಿಯದೇ ತನ್ನಿಂದ ದೂರವಾದ ತನ್ನ ಹೆಣ್ಣು ಮಗಳನ್ನೇ ಬಯಸುತ್ತಾನೆ. ಈ ವಿಷಯವನ್ನು ತಿಳಿದ ಅವನ ಹೆಂಡತಿ ತಂದೆ ಮಗಳ ಅನೈತಿಕ ಸಂಬಂಧವನ್ನು ಸಹಿಸದೆ ತನ್ನ ಮಗಳನ್ನು ತನ್ನ ಸೋದರನಾದ ಮೈಸೂರಿನ ದಳವಾಯಿಯವರಲ್ಲಿಗೆ ಕಳುಹಿಸುತ್ತಾಳೆ. ತಾನು ಬಯಸಿದ ವಸ್ತು ದಳವಾಯಿಯವರಲ್ಲಿ ರಕ್ಷಣೆ ಪಡೆದಿರುವುದನ್ನು ತಿಳಿದು ವೀರರಾಜ ಮೈಸೂರಿನವರ ಮೇಲೆ ಯುದ್ಧ ಹೂಡುತ್ತಾನೆ. ಇದನ್ನು ಗಮನಿಸಿದಾಗ ಗೋವಿಂದ ವೈದ್ಯ ನೀಡುವ ಕಾರಣವೇ ಸಮಂಜಸವೆನ್ನಿಸುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ, ಜನಪದ ಕವಿ ಈ ರೀತಿಯ ಕಾರಣವನ್ನು ಉದ್ದೇಶಪೂರ್ವಕವಾಗಿಯೇ ಇಟ್ಟುಕೊಂಡಿರಬಹುದೆಂದು ಅನ್ನಿಸುತ್ತದೆ. ತಂದೆ –ಮಗಳ ಅನೈತಿಕಸಂಬಂಧ ವ್ಯಕ್ತಿಯ ದುರಂತದ ಸೂಚನೆ ಎಂದು ನಂಬಿರುವ ಜನಕ್ಕೆ, ವೀರರಾಜನ ಅವನತಿಗೆ ಕಾರಣವಾದ ಹಿನ್ನೆಲೆಯನ್ನು ಕೊಡುವುದರ ಮೂಲಕ ಕವಿ ನೀತಿಯನ್ನೂ ಸಾರಿದ್ದಾನೆ. ಇದು ಒಂದು ರೀತಿಯಲ್ಲಿ ಪರಿಣಾಮಕಾರಿಯಾಗಿಯೂ ಇದೆ.

ಗೋವಿಂದ ವೈದ್ಯ ತನ್ನ ಅರಸನ ದಿಗ್ವಿಜಯಗಳನ್ನು ವರ್ಣಿಸುವುದರಲ್ಲಿ ಉದ್ಯುಕ್ತನಾಗಿದ್ದಾನೆ. ಆದರೆ ಜನಪದ ಕಾವ್ಯದ ನಿರ್ಮಾತೃ, ವಿಸ್ಮಯದಿಂದ, ಅನುಕಂಪದಿಂದ ಈ ಯುದ್ಧದೊಡನೆ ಮುಗಿದುಹೋದ ಜೀವನವನ್ನೂ, ವಿಧಿಯ ಕೈವಾಡವನ್ನೂ, ಸೋತರೂ ಸೋಲೊಪ್ಪಿಕೊಳ್ಳದ ಕ್ಷಾತ್ರತೇಜವನ್ನೂ ವರ್ಣಿಸಿದ್ದಾನೆ. ಈ ಕಾರಣದಿಂದಲೇ ಕಂಠೀರವ ನರಸರಾಜ ವಿಜಯದಲ್ಲಿ ಉಪಲಬ್ಧವಿಲ್ಲದ ಫಕೀರನ ಪ್ರಸಂಗ, ತನ್ನ ಸೋಲು ಖಚಿತವೆಂದು ವೀರರಾಜನಿಗೆ ಅನ್ನಿಸಿದಾಗ ಅವನು ಅರಮನೆಗೆ ಬಂದು ತನ್ನ ರಾಣಿಯರನ್ನು ತನ್ನ ಕೈಯಾರೆ ಕೊಲ್ಲುವ ಪ್ರಸಂಗ ಮುಂತಾದವು ಬಂದಿರುವುದು.

ಜನಪದ ವೀರಕಾವ್ಯಗಳ ಒಂದು ಮುಖ್ಯ ಲಕ್ಷಣವೆಂದರೆ ; ವೀರನನ್ನು ಕೇವಲ ವೀರತನದಿಂದ ಗುರುತಿಸುವುದರ ಬದಲು, ಅವನ ಜೀವನದಲ್ಲಿಯ ದುರಂತವನ್ನು ವೀರತನಕ್ಕಿಂತ ಮಿಗಿಲಾಗಿ ವ್ಯಕ್ತಪಡಿಸುವುದು. ಅಂದರೆ, 'ನಾಯಕ' ವೀರನೇ ಅಲ್ಲ ಎಂಬುದು ನಮ್ಮ ಅಭಿಪ್ರಾಯವಲ್ಲ. ವೀರಗಲ್ಲುಗಳಲ್ಲಿನಂತೆ ಮತ್ತು ತನ್ನ ಅರಸನನ್ನು ಹೊಗಳಿ ಬರೆದ ಕಂಠೀರವ ನರಸರಾಜ ವಿಜಯದಂತಹ ವೀರಕಾವ್ಯಗಳ ಹಾಗೆ, ವೀರನನ್ನು ಅವನು ಮಾಡಿದ ವೀರತನದ ಪ್ರಶಂಸೆಗಾಗಿಯೇ ಹೊಗಳುವ ಒಂದು ದೃಷ್ಟಿಗಿಂತ ಭಿನ್ನವಾಗಿ, ವೀರನ ಸಾವಿನಲ್ಲಿ ಜನಪದ ಕವಿಗಳು ಜೀವನದ ಒಂದು ವೈಚಿತ್ರ್ಯವನ್ನೂ ಕಾಣಬಯಸುತ್ತಾರೆ. ಆತನ ಜೀವನದಿಂದ ಒಂದು ನೀತಿಯನ್ನು ಸಾರಬಯಸುತ್ತಾರೆ. ಆದ್ದರಿಂದ ಇವು ಯಾವೊಂದು ನಿಯಮಗಳ ಬಂಧನವೂ ಇಲ್ಲದ ಸ್ವಚ್ಛಂದ ಗೀತಗಳಾಗಿವೆ. ವೀರನ ಜೀವನದ ಮೂಲಕ ತಾವು ಕಂಡ ಜಿವನದ ಕಾಣ್ಕೆಯನ್ನು, ಬದುಕಿನ ವೈಪರೀತ್ಯಗಳನ್ನೂ, ಏಳು–ಬೀಳುಗಳನ್ನೂ, ವ್ಯಕ್ತಿಯ ಅಸಾಧಾರಣವಾದ ಶಕ್ತಿಸಾಮರ್ಥ್ಯಗಳನ್ನೂ ತೀವ್ರವಾದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಿರುತ್ತಾರೆ. ಜನಪದ ಕವಿ ಯಾರ ಪಕ್ಷವನ್ನೂ ವಹಿಸುವುದಿಲ್ಲ. ಎರಡೂ ಪಕ್ಷದವರ ವೀರತನವನ್ನು ಯಾವ ಮುಚ್ಚು–ಮರೆಯಿಲ್ಲದೆ ತುಂಬು ಮನಸ್ಸಿನಿಂದ ಹೊಗಳುತ್ತಾ, ವೀರನ ದುರ್ಮರಣಕ್ಕೆ ಮರುಗುತ್ತಾನೆ. ವೀರನಿಗೆ ಮೋಸಮಾಡಿದವರನ್ನು, ತನಗೆ ಮೋಸ ಮಾಡಿದವರನ್ನು ಬೈಯುವಂತೆ ನೇರವಾಗಿ ಬಯ್ಯುತ್ತಾನೆ. ಇದಕ್ಕೆ ಮುಖ್ಯ ಕಾರಣವೆಂದರೆ ವೀರನಿಗಾದ ಅನ್ಯಾಯದ ಬಗ್ಗೆ ಕವಿಗೆ ಇರುವ ಅನುಕಂಪ.

ಯುದ್ಧದಲ್ಲಿ ಸೋತವರು ಗೆದ್ದವರ ಪಕ್ಷದಿಂದ ಅನೇಕ ರೀತಿಗಳಲ್ಲಿ ಶೋಷಿತರಾಗುತ್ತಾರೆ ಎಂಬುದು ನಿರ್ವಿವಾದ. ಈ ರೀತಿಯ ಶೋಷಣೆಯನ್ನು ನಮ್ಮ ಜನಪದ ವೀರಕಾವ್ಯಗಳು ವರ್ಣಿಸುತ್ತವೆ. ಈ ಭಾಗಗಳು ತುಂಬಾ ಪರಿಣಾಮಕಾರಿಯಾಗಿ ಬಂದಿವೆ ಕಂಠೀರವ ನರಸರಾಜ ವಿಜಯದಲ್ಲಿಯೂ ಈ ರೀತಿಯ ವರ್ಣನೆ ಬರುತ್ತದೆ ; ನಿಜ. ಆದರೆ ಅಲ್ಲಿ ಅದು ಜನಪದ ಕಾವ್ಯಗಳು ಮುಟ್ಟುವ ರೀತಿಯಲ್ಲಿ ನಮ್ಮ ಮನವನ್ನು ಮುಟ್ಟದ ಜನರಿಗೆ ಒದಗಿದ ತೊಂದರೆಗಳ, ಅವರು ಪಟ್ಟ ಪಾಡುಗಳ ಪಟ್ಟಿಯಾಗಷ್ಟೇ ಉಳಿಯುತ್ತದೆ. ವೀರಕಾವ್ಯಗಳನ್ನು ಓದುತ್ತಿದ್ದಂತೆ ನಮಗೆ, ಜನಪದ ಅಜ್ಞಾತಕವಿ ಶೋಷಣೆಯಿಂದ ನೊಂದವರಲ್ಲಿ ಒಬ್ಬನಾಗಿರಬೇಕೆಂದು ಅನ್ನಿಸುತ್ತದೆ. ಏಕೆಂದರೆ ಅವನು ತನ್ನ ಮುಂದೆ ನಡೆಯುತ್ತಿರುವ ಅನ್ಯಾಯ, ತನಗೇ ಆದ ಅನ್ಯಾಯವೆಂದು ಬಗೆದು ರೊಚ್ಚಿನಿಂದ, ನೋವಿನಿಂದ, ಜನರ ಅಸಹಾಯಕ ಸ್ಥಿತಿಯನ್ನು ಹೇಳುತ್ತಿರುತ್ತಾನೆ. ಪಿರಿಯಾಪಟ್ಟಣದ ಕಾಳಗದಲ್ಲಿ ಗೆದ್ದ ಮೈಸೂರಿನ ಸೈನಿಕರು ಪಿರಿಯಾಪಟ್ಟಣವನ್ನು ದಾಳಿಮಾಡಿ ಜನರನ್ನು ಹೇಗೆ ಚಿತ್ರಹಿಂಸೆಗೆ ಗುರಿಪಡಿಸಿದರೆಂಬುದನ್ನು ಮನ ಕಲಕುವಂತೆ ಕವಿ ವರ್ಣಿಸುತ್ತಾನೆ. ಹಲಗಲಿಯ ಬೇಡರು ಎಂಬ ಲಾವಣಿಯಲ್ಲಿ, ತಮ್ಮ ಆಜ್ಞೆಯನ್ನು ಮೀರಿದ್ದಷ್ಟೇ ಅಲ್ಲದೆ, ತಮ್ಮ ರಾಯಭಾರಿಯನ್ನು ಕೊಂದ ಹಲಗಲಿಯ ಬೇಡರ ಮೇಲೆ ಬ್ರಿಟಿಷರು ದಾಳಿ ಮಾಡಿದಾಗ,

ಬ್ರಿಟಿಷರು ಮಾಡಿದ ಅಮಾನುಷ ಕೃತ್ಯಗಳನ್ನು, ಲೂಟಿಯನ್ನು ಆ ಲಾವಣಿ ವಿವರವಾಗಿ ಚಿತ್ರಿಸುತ್ತದೆ. ಬ್ರಿಟಿಷರ ಸೈನಿಕರು ಲೂಟಿ ಮಾಡಿದ ವಸ್ತುಗಳ ಪಟ್ಟಿಯನ್ನೇ ನೀಡುತ್ತದೆ. ಕೊನೆಯಲ್ಲಿ ಆ ಅಜ್ಞಾತ ಕವಿ,

"ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ
ಸಿಕ್ಕಿದ್ದು ತಗೊಂಡು ಸರದ ನಿಂತರೂ ಊರಿಗೆ ಕೊಳ್ಳಕೊಟ್ಟಾ
ಬೂದಿಮಾಡ್ಯಾರೋ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು"[೧೨]

–ಎಂದು ನೋವಿನಿಂದ ನುಡಿಯುತ್ತಾನೆ.

ಕೆಲವು ವೀರಗಲ್ಲು, ಪ್ರಶಸ್ತಿ ಶಾಸನಗಳು, ದಾನಶಾಸನಗಳಲ್ಲಿ ಅರಸರು ಮಾಡಿದ ಈ ಊರಳಿವಿನ ಪ್ರಸ್ತಾಪ ಬರುತ್ತದೆ. ಆದರೆ ಅಲ್ಲಿ ಅದು ನೊಂದ ಜನತೆಯ ಆಳಲಾಗಿ ಬರದೆ, ಗೆದ್ದ ವೀರರ ಪರಾಕ್ರಮದ ಪ್ರಶಸ್ತಿಯಾಗಿ ಬರುತ್ತದೆ.

ವ್ಯಕ್ತಿ ತನ್ನ ಪರಾಕ್ರಮಗಳಿಂದಲೇ ಸಮಾಜದಲ್ಲಿ ವೀರನಾಗುವುದು, ಪರಾಕ್ರಮವೆಂದರೆ ಕೇವಲ ಕತ್ತಿ ಹಿಡಿದು ಹೋರಾಡಿ ಮಡಿಯುವುದಾಗಲೀ, ಇತರರ ಮೇಲೆ ಬಿದ್ದು ಅವರನ್ನು ನಾಶಗೊಳಿಸುವುದಾಗಲಿ ಅಲ್ಲ. "ಜನತೆಯ ವೀರರು, ಒಮ್ಮೊಮ್ಮೆ ತೀರಾ ಸಾಮಾನ್ಯ ವ್ಯಕ್ತಿಗಳೂ ಆಗಿರುವುದುಂಟು. ಅವರು ಹಳ್ಳಿಪಳ್ಳಿಗಳಲ್ಲಿ ಆಟಪಾಟಗಳಲ್ಲಿ ತೋರುವ ಗೆಲುವಿನಿಂದ ಗುರುತಿಸಲ್ಪಟ್ಟವರಾಗಿರಬಹುದು. ಕುಸ್ತಿ (ಮಲ್ಲಯುದ್ಧ) ಆಟದಲ್ಲಿ ಹಿರಿಯ ಜಟ್ಟಿಯನ್ನು ಸೋಲಿಸಿದ ವ್ಯಕ್ತಿಯಾಗಿರಬಹುದು. ಓಡುವ ಶರ್ಯತ್ತಿನಲ್ಲಿ ಪ್ರಥಮ ಪ್ರಶಸ್ತಿ ಪಡೆದವನಿರಬಹುದು. ಭಾರವಾದ ಗುಂಡು ಚೀಲ ಕೊಡ–ಹಾರಿಕಲ್ಲು ಮುಂತಾದವುಗಳನ್ನು ಎತ್ತುವುದರಲ್ಲಿ ವಿಕ್ರಮ ಸಾಧಿಸಿವನಿರಬಹುದು....... ಒಮ್ಮೊಮ್ಮೆ ಹೊಲ ಹರಗುವ ಕಾರ್ಯದಲ್ಲಿ, ಗಳೇ ಹೊಡೆಯುವ ಕಾಯಕದಲ್ಲಿ, ಹತ್ತಿಕಟ್ಟಿಗೆ ಕೀಳುವುದರಲ್ಲ, ಹೊಲವನ್ನು ಬಿತ್ತುವಲ್ಲಿ, ಜೋಳದ ದಂಟು ಕಿತ್ತು ಕುಡಿಹಾಕುವುದರಲ್ಲಿ ಅಸಾಮಾನ್ಯ ದಾಖಲೆಗಳನ್ನು ಸ್ಥಾಪಿಸಿದವನಿರಬಹುದು. ಅಂಥವರೆಲ್ಲರೂ ಹೊಗಳಿಕೆಗೆ ಪಾತ್ರರಾಗುತ್ತಾರೆ. ಅಂಥ ಜನತಾ ವೀರರನ್ನು ಹಳ್ಳಿಗಳಲ್ಲಿ ಮೆರೆಯಿಸುವುದೂ ಉಂಟು. ಬಹುಮಾನಗಳನ್ನಿತ್ತು ಸತ್ಕರಿಸುವುದೂ ಉಂಟು. 'ಉತ್ತೂರ ಹವಾಲದಾರನಾಂಗ ಎತ್ತ ಯಾರ ಮೇಸವರಿಲ್ಲಾ। ಸುತ್ತನಾಡಿನೊಳಗ ಆತೋ ಜಾಯೀರಾ' – ಎಂಬುವ ಒಂದು ಲವಣಿ ಇದೆ. ಎತ್ತುಗಳನ್ನು ಉತ್ತಮ ರೀತಿಯಿಂದ ಮೇಯಿಸಿ. ಅವುಗಳನ್ನು ಸ್ಪರ್ಧೆಗೆ ನಿಲ್ಲಿಸಿ, ವಿಕ್ರಮವನ್ನು

೧೨ ಕ್ಯಾತನಹಳ್ಳಿ ರಾಮಣ್ಣ (ಸಂ) : ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಪು. ೮೯

ಸಾಧಿಸುವಲ್ಲಿ ಉತ್ತೂರು (ಬೆಳಗಾವಿ ಜಿಲ್ಲೆ) ಹವಾಲದಾರನಂತೆ ಯಾರೂ ಇಲ್ಲವೆಂದು ಲಾವಣಿಕಾರ ವರ್ಣಿಸುತ್ತಾನೆ. ಹಾಗೆ ಹಳ್ಳಿಗಾಡಿನ ಇಂಥ ಅನೇಕ ವೀರರನ್ನು ಲಾವಣಿಕಾರರು ಹಾಡಿ ಹರಸಿರುವುದುಂಟು."[೧೩]

೧೯೨೦ರಲ್ಲಿ ಬೆಳಗಾವಿಯ ಪವಣಂಜ ಘಡೆಪ್ಪಾಚಾಗಲೆ ಎಂಬ ತರುಣನನ್ನು ಒಲಂಪಿಕ್ ಪಂದ್ಯದಲ್ಲಿ ಸ್ಪರ್ಧಿಸಲು ಮುಂಬಯಿಯ ಗೌರ್ನರ್ ಅವರು ಆಯ್ಕೆ ಮಾಡಿದರು. ಅಂತಿಮ ಪಂದ್ಯವನ್ನು ಮುಟ್ಟುವ ಮುನ್ನ ಅವನು ಇಂಗ್ಲೆಂಡಿನ ಒಂದು ಪಂದ್ಯವನ್ನು ಗೆಲ್ಲಬೇಕಿತ್ತು. ಅಲ್ಲಿ ಅವನು ವಿಜಯಶಾಲಿಯಾಗಿ ಒಲಂಪಿಕ್ ಸ್ಪರ್ಧೆಯನ್ನು ಪ್ರವೇಶಿಸಿದ. ಅಲ್ಲಿನ ಊಟ–ಉಪಚಾರಗಳು ಇವನಿಗೆ ಒಗ್ಗದ ಕಾರಣ ದೇಹ ಅಸ್ವಸ್ಥವಾಯಿತು. ಬರಿಗಾಲಿನಲ್ಲಿಯೇ ಓಡಿ ಅಭ್ಯಾಸವಿದ್ದ ಪವಣಂಜನಿಗೆ ಬೂಟ್ಸಗಳನ್ನು ಹಾಕಿಕೊಂಡು ಓಡುವುದು ಕಷ್ಟವಾಗುತ್ತದೆ. ಆದ್ದರಿಂದ ಇಪ್ಪತ್ತಾರು ಮೈಲಿಗಳ ಓಟವನ್ನು ಬರಿಗಾಲಿನಲ್ಲಿಯೇ ಓಡುತ್ತಾನೆ. ಅದರಿಂದಾಗಿ ಅವನ ಕಾಲ ಬೆರಳುಗಳು ಮುರಿಯುತ್ತವೆ. ಇದಾವುದನ್ನೂ ಗಮನಿಸದೆ ಅವನು ಓಡುತ್ತಾನೆ. ಕೊನೆಗೆ ಸ್ಪರ್ಧೆಯಲ್ಲಿ ಎರಡನೆಯ ಬಹುಮಾನವನ್ನೂ ಪಡೆಯುತ್ತಾನೆ. ಇಂಥ ಒಂದು ಅತ್ಯಪೂರ್ವವಾದ ವಿಜಯ ಪವಣಂಝನಿಗೆ ದೊರೆತಿದ್ದು ಜನತೆ ಮತ್ತು ಸುತ್ತಮುತ್ತಲಿನ ಅಭಿಮಾನಿಗಳಿಗೆ ಅಭಿಮಾನದ ಹಾಗೂ ಅತ್ಯಶ್ಚರ್ಯದ ಘಟನೆಯಾಗಿತ್ತು.

ವೀರಗಲ್ಲುಗಳ ಪಾಠದಲ್ಲಿ, ಜಾನಪದ ವೀರಗೀತೆಗಳಲ್ಲಿ ಮತ್ತು ವೀರಕಾವ್ಯಗಳಲ್ಲಿ ಮಾತ್ರವಲ್ಲದೆ ಕೆಲವಾರು ಇತರ ಕಾವ್ಯಗಳಲ್ಲಿಯೂ ಸಹ ನಮಗೆ ವೀರರ ಚಿತ್ರಗಳು ದೊರೆಯುತ್ತವೆ. ಯುದ್ಧದ ಸನ್ನಿವೇಶದಲ್ಲಿ ಪ್ರಾಸಂಗಿಕವಾಗಿ ಮಾತ್ರ ಈ ಚಿತ್ರಗಳು ಬರುತ್ತವೆ. ಪಂಪನ ವಿಕ್ರಮಾರ್ಜುನವಿಜಯದಲ್ಲಿ ಅನೇಕ ಕಡೆ ಪಂಪನು ವೀರರ ಬಹು ಸುಂದರವಾದ ಚಿತ್ರಗಳನ್ನು ನೀಡಿದ್ದಾನೆ. ಅವು ಅಂದಿನ ವೀರರ ವಾಸ್ತವಚಿತ್ರನ ಎಂದನ್ನಿಸುತ್ತದೆ.

ಕರ್ನಾಟಕದ ವೀರಗಲ್ಲುಗಳು ಬಹು ಮುಖ್ಯವಾಗಿ ಧ್ವನಿಸುವ ಜೀವನ ಮೌಲ್ಯವೆಂದರೆ, ವೀರರ, ಸ್ವಾಭಿಮಾನ, ಸ್ವಾಭಿಮಾನಕ್ಕೆ ಎಳ್ಳಷ್ಟು ಚ್ಯುತಿ ಬಂದರೂ ಅದನ್ನು ಅವರು ಸಹಿಸಿದವರಲ್ಲ; ಅದಕ್ಕಾಗಿ ತಮ್ಮ ಪ್ರಾಣವನ್ನು ಪಣವಾಗಿಡಲು ಹಿಂಜರಿದವರಲ್ಲ ; ತಮ್ಮ ಜೀವನದ ಅರ್ಥವಂತಿಕೆ ಇರುವುದು ತಮ್ಮ ಸ್ವಾಭಿಮಾನವನ್ನೂ 'ಗಂಡಸುತನವನ್ನೂ ಉಳಿಸಿಕೊಳ್ಳುವುದರಲ್ಲಿ ಎಂದೇ ಅವರು ಬಗೆದಿದ್ದರು. 'ವೀರನಾದವನಿಗೆ ಮೃತ್ಯು ಮೃತ್ಯುವೇ ಅಲ್ಲ ; ಅದು ಕ್ಷಣಿಕವಾದ ದುಃಖವನ್ನು ತರುವಂಥದ್ದು. ಆದರೆ ಮಾನಭಂಗವೆಂಬುದು ಪ್ರತಿ ನಿಮಿಷದಲ್ಲಿಯೂ ಮನುಷ್ಯನನ್ನು ಕೊಂದು

---

೧೩ ಬಿ. ಬಿ. ಮಹೀಶವಾಡಿ : ಜನಪದ ವೀರಕಾವ್ಯಗಳು ಪು. ೧೨–೧೩

ಕೂಗುತ್ತಿರುತ್ತಿದೆ' –ಎಂಬ ಭಾವ ವ್ಯಕ್ತಿವಾಗಿರುವ ಬಾದಾಮಿ ಕಪ್ಪೆ ಅರಭಟ್ಟರ ಶಾಸನದ ಈ ಧ್ವನಿ ಜಾನಪದ ಗೀತೆಗಳಲ್ಲಿಯೂ ಅನುರಣಿತವಾಗಿರುವುದನ್ನು ಕಾಣಬಹುದು. ಐಗೂರ ಪಾಳೆಯಗಾರರನ್ನು ಕುರಿತ ಜಾನಪದ ವೀರಗೀತೆಯೊಂದು ಈ ಜೀವನ ಮೌಲ್ಯವನ್ನು ಬಹು ಸಮರ್ಥವಾಗಿ ನಿರೂಪಿಸಿದೆ.[೧೪] ಇಪ್ಪತ್ತುನಾಲ್ಕು ವರುಷದ ತರುಣ ವೆಂಕಟಾದ್ರಿ ಐಗೂರಿನ ಪಾಳೆಯಗಾರ. ಇವನನ್ನು ಬಲಿ ಹಾಕಿ ಅವನ ಪಾಳೆಯಪಟ್ಟನ್ನು ತಮ್ಮ ವಶ ಮಾಡಿಕೊಳ್ಳಬೇಕೆಂದು ಶತ್ರುಗಳು ಅವನ ಮೇಲೆ ದಂಡೇಳುತ್ತಾರೆ. ತನ್ನ ಶತ್ರುಗಳ ಈ ಪ್ರಯತ್ನವನ್ನು ಹತ್ತಿಕ್ಕಲು ಅವನು ಪ್ರಯತ್ನಿಸುತ್ತಾನೆ. ವೆಂಕಟಾದ್ರಿ ತಾನು ಯಾರನ್ನು ಬಲಗೈಬಂಟನೆಂದು ನಂಬಿರುತ್ತಾನೆಯೋ ಅವನೇ (ಸೋಮಣ್ಣ) ಇವನಿಗೆ ಎರಡು ಬಗೆಯುತ್ತಾನೆ. ಈ ಸಂದರ್ಭವನ್ನು ಜಾನಪದ ಕವಿ ತುಂಬ ನೋವಿನಿಂದಾದರೂ, ಎಳೆಎಳೆಯಾಗಿ ಬಿಡಿಸಿ ವೆಂಕಟಾದ್ರಿಯ ದುರಂತವನ್ನೂ, ಅವನ ಬಲಗೈಬಂಟನ ಕುಟಿಲತೆಯನ್ನೂ ನಮ್ಮ ಮುಂದಿಡುತ್ತಾನೆ. ಮೋಸ ಮಾಡುವವರು ಆಡುವ ಮಾತುಗಳು ಪ್ರಾಮಾಣಿಕರ ಮಾತಿಗಿಂತಲೂ ನಯವಾಗಿ, ಜೋರಾಗಿ ಇರುತ್ತವೆ. ತನ್ನ ಸೈನ್ಯವನ್ನು ಕುರಿತು ವೆಂಕಟಾದ್ರಿ –

ಹಿಟ್ಟಿಕ್ಕ ಬೇಡಿ ಬಿಟ್ಟೈಯ ಬೇಡಿ
ಉತ್ತಗದ್ದೆಗೆ ನೀವು ಸಿದ್ಧಾಯ ತೆರಬೇಡಿ
ತಡಕೊಮಡರೆ ತಡಕೊಳ್ಳಿ ತಡಕೊಳ್ಳದಿದ್ದರೆ
ಜಾಗೇರ ಸೀಮೆಗೆ ಜಾರಿರಯ್ಯ

ಎಂದು ಅವರಿಗೆ ಸವಾಲು ನೀಡುತ್ತಾನೆ. ಆಗ ತನ್ನ ಅರಸನ ಈ ಮಾತಿಗೆ ಬಲಗೈ ಬಂಟನೆನಿಸಿಕೊಂಡ ಸೋಮಣ್ಣ –

"ಅಂದನು ದಿಕ್ಕು ದಿಕ್ಕಿನ ಕೋಟೆ ಚಕ್ರ ಊರಿದಂತೆ
ರಾಕ್ಷಾಸಿ ಕೋಟೆ ರಣಕೋಟೆ ಅರಕೇರಿ ಹೊಕ್ಕ ತಕ್ಕಂಬೋನ
ಹೆಸರೇನೋ ರಾಜ ಗಿಡ ಕೊಂದು ತಲೆಯನ್ನು ಕಟ್ಟದೆ ಹೋದರೆ
ಉಗ್ಗಳ್ಳಿ ಸೋಮಣ್ಣನ ಹೆಸರು ಕರೇ ಬೇಡೆಂದ

ಎಂಬ ವೀರ ಶಪಥವನ್ನು ತೊಡುತ್ತಾನೆ. ಇವನು ಮೋಸಗಾರ ಎಂಬುದನ್ನು ಸೂಚಿಸಲೆಂದೋ ಅಥವಾ ಈ ಸೋಮಣ್ಣನ ನಂಬಿಕೆಯ ದ್ರೋಹವನ್ನು ಮತ್ತೊ ಸ್ಪಷ್ಟಪಡಿಸಲೆಂದೋ ಕವಿ ವೆಂಕಟಾದ್ರಿ ಭೂಪನ ಬಾಯಲ್ಲಿ

---

೧೪ ಡಾ. ಚಂದ್ರಶೇಖರ ಕಂಬಾರ, ಜಿ. ಆರ್. ತಿಪ್ಪೇಸ್ವಾಮಿ : ಬಂದೀರೆ ನನ್ನ ಜಡೆಯೊಳಗೆ

ನಂಬಲಾರೆನು ನಾನು ದಿಟ್ಟ ಭಾಷೆಯ ಕೊಡಿರಯ್ಯ
ಮಲಸೀಮೆ ಜನರೆಲ್ಲ ಮೂರು ಹೊತ್ತಿನೋರು
ಮರ ಬಿದ್ದ ಕಡೆಗೆ ಓಡೋರಯ್ಯ
ನನಗೊಂದು ಭರವಸೆಯ ಕೊಡಿಸಿರೆಂದ"

– ಎಂಬ ಮಾತನ್ನು ನುಡಿಸುತ್ತಾನೆ. ಇಲ್ಲಿಂದ ಮುಂದೆ ಜಾನಪದ ಕವಿ ಸೋಮಣ್ಣನ ಕುಟಿಲತನವನ್ನು ನಮ್ಮ ಮುಂದೆ ಇಡುತ್ತಾ ಹೋಗುತ್ತಾನೆ. ತುರ್ತು ಸಂದರ್ಭದಲ್ಲಿ ತನ್ನ ಮಗನಿಗೆ ಕಾಯಿಲೆಯೆಂದು ಸುಳ್ಳು ಹೇಳಿ ಕೋಟೆಯಿಂದ ಹೊರಗೆ ಹೋಗಿ ಇಂಗ್ಲೀಷರಿಗೆ ನತನ್ ಪಾಳೆಯಗಾರರನ್ನು ಹಿಡಿದು ಕೊಡುವುದಾಗಿ ಹೇಳಿ ಬಂದು ಮತ್ತೆ ಅವನನ್ನು ಸೇರುತ್ತಾನೆ. ಹಿಂತಿರುಗಿ ಬಂದ ತನ್ನ ಬಲಗೈ ಬಂಟನ ಬಳಿ ಪಾಳೆಯಗಾರನಾದ ವೆಂಕಟಾದ್ರಿ ತನ್ನ ದುಡುಗವನ್ನು ತೋಡಿಕೊಳ್ಳದೆ, ಯುದ್ಧನ ಬಗ್ಗೆ ಮಾತಾಡದೆ "ಏನಪ್ಪ, ಮಗನೀಗೆ ಗುನವಾಯ್ತೆ" ಎಂದು ಸೋಮಣ್ಣನ ಮಗನ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. "ಇನ್ನೊಮ್ಮೆ ಹೋಗಬೇಕೆಂದು" ಮತ್ತೊಂದು ಸುಳ್ಳನ್ನು ಸೋಮಣ್ಣನು ನುಡಿದು ತನ್ನ ಹಿಂದಿನ ಸುಳ್ಳನನು ಮುಚ್ಚಿಡುತ್ತಾನೆ. ಒಂದೇ ಒಂದು ಸಾಲಿನಲ್ಲಿ ಜಾನಪದ ಕವಿ ವೆಂಕಟಾದ್ರಿಯ ಮಾನವೀಯ ಹೃದಯವನ್ನು ಸೋಮಣ್ಣನ ನೀಚತನವನ್ನು ಪಕ್ಕ ಪಕ್ಕದಲ್ಲಿಟ್ಟು ಪಾಳೆಯಗಾರನ ದುರಂತವನ್ನು ಕಲ್ಪಿಸಿಕೊಳ್ಳಲು ನಮ್ಮ ಕಲ್ಪನೆಗೆ ಬಿಡುತ್ತಾನೆ.

ಸೋಮಣ್ಣ ತನ್ನ ಪಾಳೆಯಗಾರನಿಗೆ ಸುಳ್ಳು ಹೇಳಿ ತನ್ನ ಮಾತನ್ನು ನಂಬುವಂತೆ ಮಾಡಿ ಅವನನ್ನು ಸೈನ್ಯದಿಂದ ಬೇರ್ಪಡಿಸಿ ಒಂಟಿಯಾಗಿ ಮಾಡುತ್ತಾನೆ. ಒಂಟಿಯಾಗಿದ್ದರೂ ವೆಂಕಟಾದ್ರಿಯನ್ನು ತಾನು ಎದುರಿಸುವುದು ಕಷ್ಟವೆಂಬುದನ್ನರಿತ ಸೋಮಣ್ಣ ವೆಂಕಟಾದ್ರಿಗೆ ಮತ್ತು ಬಂದು ಪ್ರಜ್ಞಾಹೀನನಾಗುವಂತೆ ಮಾಡುತ್ತಾನೆ. ಎಚ್ಚರವಿದ್ದಾಗ ವೆಂಕಟಾದ್ರಿಯ ಮೈಯನ್ನು ಮುಟ್ಟಲು ಹೆದರುವ ಸೋಮಣ್ಣ ಅವನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ ಮೊದಲಿಗೆ ವೆಂಕಟಾದ್ರಿಯ ಆಯುಧಗಳನ್ನು ಕಸಿದುಕೊಂಡು ಅವುಗಳನ್ನು ಬಚ್ಚಿಡುತ್ತಾನೆ. ಪಾಳೆಯಗಾರನ ಈ ದುಃಸ್ಥಿತಿಯನ್ನು ಕಂಡು ಜಾನಪದ ಕವಿ "ಕೇಡುಗಾಲಕೆ ನಿದ್ದೆ ಮರಣ ಗಾಲಕೆ ಬುದ್ಧಿ ಇಲ್ಲವಲ್ಲಾ" –ಎಂದು ಮರುಗುತ್ತಾನೆ. ಇಷ್ಟಾದರೂ ಜಾನಪದ ಕವಿಗೆ ತನ್ನ ವೀರನಾದ ವೆಂಕಟಾದ್ರಿಯ ಪರಾಕ್ರಮದ ಬಗ್ಗೆ ಎಳ್ಳಷ್ಟೂ ನಂಬಿಕೆ ಕಡಿಮೆಯಾಗಿಲ್ಲ. ತನ್ನನ್ನು ಬಂಧಿಸಿರುವರೆಂದು ಎಚ್ಚತ್ತು ತಿಳಿದ ವೆಂಕಟಾದ್ರಿ ತನಗೆ ಈ ಸ್ಥಿತಿ ಬಂದಿದೆ ಎಂದು ಮರುಗುವುದಿಲ್ಲ ; ಬದಲಾಗಿ ತನ್ನ ಶತ್ರುಗಳ ಮೇಲೆ ಬೀಳಲು "ಎಡ ಬಲಕೆ ಕೈ ಹಾಕಿ ನೋಡಲು ಏನೂ ಸಿಗದೆ ಹೋಯಿತಲ್ಲಾ" –ಅವನ ಕೈಗೆ ಆಯುಧಗಳು ಸಿಕ್ಕಿದರೆ ಆ ಮಾತೇ ಬೇರೆ ಇತ್ತು ಎಂಬ ಧೋರಣೆಯಲ್ಲಿ ಕವಿ ಅವನ ಪರಾಕ್ರಮಕ್ಕೆ ಇಲ್ಲಿ ಮೆರಗನ್ನು ನೀಡಿದ್ದಾನೆ.

ಈ ವರ್ಣನೆ ಕೊಡುತ್ತಿರುವಾಗಲೇ ಕವಿ ತಟ್ಟನೆ ಸ್ನೇಹದ ಮತ್ತೊಂದು ಮುಖವನು ತೋರಿಸುತ್ತಾನೆ. ಹಿರೆಮುಂದೆಯ ಚನ್ನಗೌಡ ಎಂಬುವನು ಪಾಳೆಯಗಾರನ ಮತ್ತೊಬ್ಬ ಬಂಟ. ಅವನಿಗೆ ಮದುವೆಯಾಗಿ ಆರು ತಿಂಗಳಷ್ಟೇ ಕಳೆದಿದೆ. ಹೆಂಡತಿಯ ಮುಖವನ್ನೂ ಸಹ ನೋಡಿಲ್ಲ. ಅಂಥವನು ತನ್ನ ದೊರೆಯ ರಕ್ಷಣೆಗಾಗಿ ಧಾವಿಸಿದಾಗ ಅವನನ್ನು ಚೆನ್ನಾಗಿ ಅರಿತಿದ್ದ ಪಾಳೆಯಗಾರನಾದ ವೆಂಕಟಾದ್ರಿ "ನಿನಗೆ ಮದುವೆಯಾಗಿ ಆರು ತಿಂಗಳಾಯಿತು. ಹೆಂಡತಿ ಮುಖವಿನ್ನೂ ನೋಡಲಿಲ್ಲ ಹೋಗಪ್ಪ ಬದುಕೆಂದನು "–ಎಂದು ತನಗೆ ಒದಗಿದ ಸ್ಥಿತಿ ತನ್ನ ಗೆಳೆಯನಿಗೆ ಒದಗಬಾರದೆಂದು ಹೇಳುತ್ತಾನೆ. ಆದರೆ ಚನ್ನೆಗೌಡ ಸೋಮಣ್ಣನಂತಲ್ಲ "ಈ ಲೋಕ ಸ್ಥಿರವಲ್ಲಾ ಯಮಲೋಕದೊಳಗಿಬ್ಬರು ಸೇರೋಣ" –ಎಂದು ನೇಣುಗಂಬಕ್ಕೆ ಬಿದ್ದು ಸಾಯುತ್ತಾನೆ.

ಪಾಳೆಯಗಾರನನ್ನು ಗಲ್ಲಿಗೆ ಹಾಕಲು ಎರಡು ಬಾರಿ ಪ್ರಯತ್ನಿಸಿದಾಗಲೂ ಹಗ್ಗ ಹರಿದು ಹೋಗುತ್ತದೆ. ಅಷ್ಟರಲ್ಲಿ ಮೇಲಿಂದ ವೆಂಕಟಾದ್ರಿ ಪೂರ್ಣಯ್ಯನಿಗೆ ಕೈಮುಗಿದರೆ ಜೀವದಾನ ಮಾಡುವುದಾಗಿ ಅಪ್ಪಣೆ ಬರುತ್ತದೆ. ತನ್ನನ್ನು ಮೋಸದಿಂದ ಹಿಡಿದಾಗ, ತನ್ನನ್ನು ಗಲ್ಲಿಗೆ ಹಾಕುತ್ತಿದ್ದಾಗ ಸಾಯುವುದಕ್ಕೆ ಸಿದ್ಧನಿದ್ದ ಪಾಳೆಯಗಾರ, ತನ್ನ "ಕೈಯ ಕೆಳಗೆ ಬರಕೊಂಡು ಇರುವೆಗೆ ಕಯಮುಗಿಯಬೇಕೋ" ಎಂದು ತನಗೆ ಬಂದ ಪ್ರಾಣ ಭಿಕ್ಷೆಯನ್ನು ತಿರಸ್ಕರಿಸಿ ಆ ಮಾತನ್ನು ಹೇಳಿದವನಿಗೆ ಕ್ಯಾಕರಿಸಿ ಉಗಿದು ತನ್ನ ಸ್ವಾಭಿಮಾನದ ಕೆಚ್ಚನ್ನು ಮೆರೆಯುತ್ತಾನೆ. ಜಾನಪದ ಕವಿ ವೆಂಕಟಾದ್ರಿಗೆ ಎರಡು ಸಲ ನೇಣು ಹಾಕಿದಾಗಲೂ ಹಗ್ಗ ಹರಿದು ಬಿಡುವ ಪ್ರಸಂಗದ ಮೂಲಕ ಪಾಳೆಯಗಾರನ ದೈಹಿಕ ಶಕ್ತಿಯನ್ನು, ಬದುಕಲು ಅವಕಾಶ ದೊರೆತರೂ ಅದನ್ನು ತಿರಸ್ಕರಿಸಿದ ರೀತಿಯನ್ನು ಸಮರ್ಥವಾಗಿ ಚಿತ್ರಿಸಿದ್ದಾನೆ. ಪೂರ್ಣಯ್ಯನಿಗೆ ಕೈ ಮುಗಿಯಬೇಕು ಎಂದು ಹೇಳಿದವನಿಗೆ ವೆಂಕಟಾದ್ರಿ ಹೊಡೆಯಲಿಲ್ಲ, ಬೈಯಲಿಲ್ಲ. ಉಗಿದ. ಬರೀ ಉಗಿಯಲಿಲ್ಲ, "ಕ್ಯಾಕರಿಸಿ ಉಗಿದ" –ಎಂಬ ಮಾತು ಅವನ ರಕ್ತದ ಕಣ ಕಣದಲ್ಲಿ ಕುದಿಯುತ್ತಿದ್ದ ಸ್ವಾಭಿಮಾನದ ತುಡಿತವನ್ನು ಹಿಡಿದಿಡುವಲ್ಲಿ ತುಂಬಾ ಸಮರ್ಥವಾಗಿದೆ. ಇದು ಇಡೀ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದ ಧ್ವನಿ ಎಂದರೆ ಅತಿಶಯವಾಗಲಾರದು.

ಇನ್ನು ವೀರಗಲ್ಲುಗಳ ಪಾಠದಲ್ಲಿರುವ ಕಾವ್ಯಭಾಗಕ್ಕೂ ಮತ್ತು ಇತರ ವೀರಕಾವ್ಯಗಳಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ಗಮನಿಸಬಹುದು.

ಈ ಹಿಂದೆ ಗಮನಿಸಿರುವಂತೆ ವೀರಗಲ್ಲುಗಳು ಮೂಲಭೂತವಾಗಿ ಯುದ್ಧದಲ್ಲಿ ಅಥವಾ ಇನ್ನಾವುದೋ ಹೋರಾಟದಲ್ಲಿ ಮಡಿದ ವೀರನಸ್ಮಾರಕ. ಆದುದರಿಂದ ಸತ್ತ ವೀರನ ವಿಷಯವನ್ನು, ಆತನಿಗೆ ಕೊಟ್ಟ ದತ್ತಿಯ ವಿವರಗಳನ್ನು ತಿಳಿಸುವ ಪಾಠ ಇದರಲ್ಲಿ ಇರುತ್ತದೆ. ಬರೆಯುವವನ

ಮತ್ತು ಮಡಿದ ವೀರನ ಸಾಮಾಜಿಕ ಪ್ರತಿಷ್ಠೆಯನ್ನು ಅವಲಂಬಿಸಿ ವೀರಗಲ್ಲಿನ ಪಾಠ ಕಾವ್ಯಮಯವಾಗಿರುತ್ತದೆ. ಎಲ್ಲಾ ವೀರಗಲ್ಲುಗಳ ಪಾಠವೂ ಕಾವ್ಯಾತ್ಮಕವಾಗಿಲ್ಲದಿರುವುದಕ್ಕೆ ಇದೇ ಮುಖ್ಯ ಕಾರಣವೆಂದು ನಾವು ಊಹಿಸಿದರೆ ಅದು ತಪ್ಪಾಗಲಾರದು. ಅಂದರೆ, ಯಾವನೋ ಸಾಮಾನ್ಯವ್ಯಕ್ತಿ ಹೋರಾಟದಲ್ಲಿ ಮಡಿದರೆ. ಅವನಿಗೆ ವೀರಗಲ್ಲನ್ನು ಅವನ ಸಂಬಂಧಿಗಳು ಹಾಕುತ್ತಾರೆ. ಅದು ಅವರ ಕರ್ತವ್ಯ ಹಾಗೂ ಮಡಿದ ವೀರನಿಗೆ ಸಂಬಂಧಿಗಳು ತೋರುವ 'ಪರೋಕ್ಷ ವಿನಯ' ಅರಸನೋ ಅಥವಾ ಮತ್ತೆ ಯಾರೋ ದತ್ತಿಯನ್ನು ನೀಡಿದರೆ ಅವುಗಳ ಮೇಲೆ ಅದನ್ನು ಬರೆಯುತ್ತಿದ್ದರು. ಆದರೆ ಪ್ರತಿಷ್ಠಿತ ವ್ಯಕ್ತಿಯೊಬ್ಬ ಮಡಿದಾಗ ಸಹಜವಾಗಿ ಶಾಸನದ ಪಾಠವನ್ನು ಕಾವ್ಯಮಯವಾಗಿ ಮಾಡುವ ಪ್ರಯತ್ನವನ್ನು ಅರಸನೋ ಅಥವಾ ಆತನ ಸಂಬಂಧಿಗಳೋ ಮಾಡುತ್ತಿದ್ದರು. ಆದರೆ ಈ ನಿಯಮವನ್ನು ಎಲ್ಲಾ ಪ್ರತಿಷ್ಠಿತ ವೀರರ ವೀರಗಲ್ಲುಗಳ ಪಾಠಗಳಿಗೂ ಅನ್ವಯಿಸಿ ಹೇಳಲಾಗುವುದಿಲ್ಲ. ಗಂಗರ ಕಾಲದ ಅನೇಕ ಪ್ರತಿಷ್ಠಿತ ವೀರರ ವೀರಗಲ್ಲುಗಳ ಪಾಠ ಗದ್ಯಮಯವಾಗಿ ನೀರಸವಾಗಿವೆ.

ವೀರಗಲ್ಲುಗಳ ಪಾಠದಲ್ಲಿ ವಾಸ್ತವ ಸಂಗತಿಗೆ ಮಹತ್ವವನ್ನು ನೀಡಲಾಗಿರುವುದರಿಂದ, ಜಾನಪದ ವೀರಕಾವ್ಯಗಳಲ್ಲಿ ದೊರೆಯುವ ಯಾವುದೇ ಆಶಯಗಳಿಗೂ ಇಲ್ಲಿ ಮಹತ್ವ ಬರುವುದಿಲ್ಲ. ಚಂಪೂ ಕಾವ್ಯಗಳಲ್ಲಿ ಬರುವ ಯುದ್ಧ ವರ್ಣನೆಗಳ ಹಾಗೆ, ಬಹುಪಾಲು ವೀರಗಲ್ಲುಗಳ ಪಾಠ ಇರುತ್ತದೆ. ಈ ವಿಷಯದಲ್ಲಿ ಪಂಪನೇ ಇವರಿಗೆ ಆದರ್ಶವೆಂದರೂ ಅಡ್ಡಿಯಿಲ್ಲ.

ವೀರಗಲ್ಲುಗಳನ್ನು ಹೊಂದಿರುವ ವೀರರ ಬಗ್ಗೆ ಜನಪದ ಕಾವ್ಯಗಳು ದೊರೆಯದಿರುವುದಕ್ಕೆ ಬಹುಶಃ ಕಾರಣವನ್ನು ಹೀಗೆ ಊಹಿಸಬಹುದೆಂದು ಅನ್ನಿಸುತ್ತದೆ :

ವೀರ ಕಾವ್ಯಗಳ ನಾಯಕರು, ಈ ಹಿಂದೆ ಗಮನಿಸಿರುವಂತೆ ವೀರತನದಿಂದ ಮಾತ್ರವಲ್ಲದೆ, ಜೀವನದಲ್ಲಿ ಪಡೆದ ದುರಂತತೆಯ ಕಾರಣದಿಂದಾಗಿಯೂ ಜನರ ಮನಸ್ಸಿನ ಮೇಲೆ ಅಚ್ಚು ಒತ್ತಿದ್ದವರು. ಕಾವ್ಯದ ಕರ್ತೃವಾದ ಕವಿಗೆ, ವೀರತನ ಒಂದರಲ್ಲೇ ಜೀವನದರ್ಶವನ್ನು ಕಾಣುವುದು ಕೊರತೆಯೆಂದಿನಿಸುತ್ತದೆ. ವೀರನಿಗೆ ಒದಗಿದ ದುರಂತದ ಹಿನ್ನೆಲೆಯಲ್ಲಿ ಕವಿ ಒಂದು ಜೀವನತತ್ವವನ್ನು ಕಾಣುತ್ತಾನೆ. ವೀರಗಲ್ಲುಗಳ ವೀರರು ಎಂಥ ಪ್ರತಿಷ್ಠಿತರಾಗಿದ್ದರೂ ಸಹ ತಮ್ಮ ಕರ್ತವ್ಯಕ್ಕಾಗಿ, ಅನ್ನದ ಋಣಕ್ಕಾಗಿ ಹೋರಾಡಿ ಮಡಿದವರು. ಹೋರಾಟದಲ್ಲಿ ಗೆಲ್ಲಬಹುದು ಅಥವಾ ಸೋಲಬಹುದು. ಆದರೆ ಅದನ್ನು ದುರಂತವೆಂದು ಭಾವಿಸಲಾಗುವುದಿಲ್ಲ. ಈ ರೀತಿಯಲ್ಲಿ ವೀರರು ಸಾಯುವುದು ಒಂದು ಸಾಮಾನ್ಯದ ಸಂಗತಿಯೇ ಆಗಿತ್ತು. ಸಾಮ್ರಾಜ್ಯ ಶಾಹಿ ವ್ಯವಸ್ಥೆಯ ಯಾವುದೇ ಕಾಲದಲ್ಲಿ, ಯಾವುದೇ ದೇಶದಲ್ಲಿ ಇದು ಸಾಮಾನ್ಯ ಅಂಶವೇ. ಆದ್ದರಿಂದ ಜಾನಪದ


ಕವಿಗಳಿಗೆ ಇದು ಅಸಾಮಾನ್ಯ ಎಂಬುದಾಗಿ ಅನ್ನಿಸುತ್ತಿರಲಿಲ್ಲ. ಅವರಿಗೆ ಮುಖ್ಯವಾದುದು ಸೋಲು ಗೆಲುವುಗಳಲ್ಲ. ವೀರನು ಅನುಭವಿಸಿದ ದುರಂತ ಎಂದು ತೋರುತ್ತದೆ. ಇವುಗಳಲ್ಲಿ ಅತಿ ಮುಖ್ಯವಾದುದು ವೀರನ ವೀರತ್ವ ಅವನ ವ್ಯಕ್ತಿತ್ವದ ಉಳಿದ ಮುಖಗಳು ಗೌಣವಾದುದರಿಂದ ಅವುಗಳ ಪ್ರಸ್ತಾಪ ಇಲ್ಲಿ ಬರುವುದಿಲ್ಲ ಬಂದರೂ ಕ್ವಚಿತ್ತಾಗಿ ಬರುತ್ತದೆ. ಆದುದರಿಂದಲೇ ವೀರನ ಸಾವನ್ನು ಇವು ವೈಭವೀಕರಿಸುವುದು. ಇಂಥ ಉದ್ದೇಶಕ್ಕೆ ಬಹು ಅನುಕೂಲವೆಂಬ ಕಾರಣಕ್ಕೆಂದೇ ಇರಬಹುದು –ವೀರಗಲ್ಲಿನ ವರ್ಣನೆಗಳಿಗೆ ಚಂಪೂ ಕಾವ್ಯದ ವರ್ಣನೆ ಮಾದರಿಯಾಯಿತು.

ಇಲ್ಲಿನ ಮತ್ತೊಂದು ಅಂಶವೆಂದರೆ ವೀರಕಾವ್ಯಗಳಲ್ಲಿನ ನಾಯಕರು ತಮ್ಮ ದುರಂತದಿಂದಾಗಿ ಜನರ ಅನುಕಂಪಕ್ಕೆ, ಕರುಣೆಗೆ ಪಾತ್ರರಾದವರು. ವೀರಗಲ್ಲುಗಳ ವೀರರು ತಮ್ಮ ಆಶ್ರಯದಾತರು, ತಮ್ಮ ಸಂಬಂಧಿಗಳ ಕರುಣೆಗೆ ವಿಶ್ವಾಸಕ್ಕೆ ಪಾತ್ರರಾದವರು.


ವೀರಕಾವ್ಯಗಳು ವೀರಜೀವನದಿಂದ ಸ್ಫೂರ್ತಿಗೊಂಡು ರಚಿತವಾಗಿದ್ದರೆ ವೀರಗಲ್ಲುಗಳ ಪಾಠವನ್ನು ವೀರಗಲ್ಲುಗಳ ಮೇಲೆ ಕತ್ತಿಸುವುದಕ್ಕೋಸ್ಕರವೇ ರಚಿಸಿರುತ್ತಾರೆ. ಆದ್ದರಿಂದ ವೀರಕಾವ್ಯಗಳಲ್ಲಿ ಕಂಡು ಬರುವ ತೀವ್ರತೆ ಸಾಮಾನ್ಯವಾಗಿ ವೀರಗಲ್ಲುಗಳ ಪಾಠದಲ್ಲಿ ಕಂಡುಬರುವುದಿಲ್ಲ.




೧. ಮಾರಿಯಾ ಕಲ್ಲು



೨. ಮಾರಿಯಾ ಕೊರಡು




೫. ಕುಮಾರರಾಮನ ಕುದುರೆ-ಬೊಲ್ಲ



೬. ಕುದುರೆ ಸ್ಮಾರಕ



೪. ಕೊರಕು ಜನಾಂಗದವರ ಸ್ಮಾರಕ




೫. ಭಿಲ್ಲರ ಸ್ಮಾರಕ



೧೨. ಆತ್ಮ ಬಲಿ



೯. ಯಲಹಂಕದ ನಾಯಿ ಸ್ಮಾರಕ



೭. ಕುದುರೆ ಸ್ಮಾರಕ



೮. "ಪಿರಿಯ ಪನ್ದಿಗೆ ವಿಟ್ಟೊಡೆ..." ಮನಾಲರನ ಪ್ರೀತಿಯ ನಾಯಿ ಕಾಳಿ



೯. ಯಲಹಂಕದ ನಾಯಿ ಸ್ಮಾರಕ



೧೦. ಎಪ್ಪತ್ತೈದು ಹಂದಿಗಳನ್ನು ಕೊಂದ ನಾಯಿ ಲೋಗ



೧೪. ಆತ್ಮಬಲಿ ದೇಹದ ವಿವಿಧ ಭಾಗಗಳನ್ನು ಕತ್ತರಿಸಿಕೊಡುತ್ತಿರುವುದು

೧೫. ಸಿಡಿತಲೆ






೧೬. ಆತ್ಮಬಲಿ (ಸೂರ್ಯ ಗ್ರಹಣ)



೧೩. ಆತ್ಮಬಲಿ ದೇವಿಗೆ ಕತ್ತರಿಸಿ ಕೊಡುವುದು



೧೨. ಆತ್ಮಬಲಿ




೧೫. ಸಿಡಿತಲೆ




೨೬. ಎರಮಂಚಯ್ಯನ ವೀರಗಲ್ಲು




೨೭. ಮದುವೆಯಾಗದೆ ಸತ್ತ ಕುರಬರನ ವೀರಗಲ್ಲು




೧೯. ವೀರಗಾರರ ಗುಡಿಗಳು



೨೦. ವೀರಗಾರರ ಗುಡಿಗಳು



೧೧. ಆನೆಯ ಸ್ಮಾರಕ (ಗೊಂಬಿ ಮನೆ)



೩೫. "ಮಡಿದೊಂ ಜೀವವನೆ ತೃಣ ಮಾಡಿ ಹೆಣ್ತನದ ಮಾನರಕ್ಷಣೆಗೆ ಕಾದಾಡಿ"




೨೨. ಮುಖವಾಡ




೨೩. ವೇದಿಕೆ ಮೇಲಿರುವ ವೀರಗಲ್ಲು



೨೪. ಕೋಡೀರ್ಲಪ್ಪನ ಉತ್ಸವ ವಿಗ್ರಹ



೨೧. ವೀರಗಲ್ಲುಗಳ ಗುಂಪು



೩೦. ವೀರ ಮತ್ತು ಮಾಸ್ತಿಯರ ಸಮಾಧಿಗಳು



೨೫. ವೀರನ ವಿಗ್ರಹ





೨೯ ಹತ್ತೊಂಬತ್ತನೆಯ ಶತಮಾನದ ವೀರಗಲ್ಲುಗಳು ೩೦



೩೧. ವೀರ ಮತ್ತು ಮಾಸ್ತಿಯವರ ಸಮಾಧಿಗಳು




೩೨. ವೀರ ಮತ್ತು ಮಾಸ್ತಿಯವರ ಸಮಾಧಿಗಳು




೩೯. ಪೆಣ್ಬುಯ್ಯಲ್




೪೧. ಹಂದಿ ಬೇಟೆ



೩೭. ನೀರ ವೀರರು




೨೨. ಸಮಾಧಿ- ಗಂಡನೊಂದಿಗೆ ಸಮಾಧಿಯಲ್ಲಿ ಹುಗಿಸಿಕೊಂಡಿರುವುದು




೭೭. ತುಳು ಪೆಣ್ಣಿರ ಸೆರೆಗಿಕ್ಕೆ




೩೮. ನೀರ ವೀರರು



೪೦. ಹಂದಿ ಬೇಟೆ



೪೨. ಬೇಟೆಯಲ್ಲಿ ಮಾನವನಿಗೆ ನೆರವಾದ ನಾಯಿಗಳು



೪೩. "ಸವಿದು ಮೆದ್ದರು ಯಾರು ಪೂರ್ವದಿ ಹುಲಿಯ ಹಾಲಿನ ಮೇವನು"




೪೪. ಹುಲಿ ಬೇಟೆ



೪೭. ಹುಲಿ ಬೇಟೆ

ಕೃಪೆ: ಪಿ. ಎಸ್. ಚಂದ್ರಶೇಖರ್




೬೯. ಪೆರ್ವೆಂದಿವೇಂಟೆ



೪೫. ಹುಲಿಯೊಡನೆ ನೇರ ಸೆಣಸಾಟ



೪೭. ತನ್ನ ಪ್ರತಿಜ್ಞೆಯನ್ನು ನೆರವೇರಿಸಿದ ಕಮ್ಬಳದಾಸನ ಶಾಸನ




೫೨. "ತುರು ಪಂವಾಗಳೆಮ್ಮ ಪೇಣಸಂ ಮೆಟ್ಟಿ....."

ಕೃಪೆ: [illegible]



೫೩. "ತನಗಿದಿರಾಂತ ವೈರಿಗಳನುಗ್ರಪರಾಕ್ರಮದಿಂದೆ..."



೧೦೯-೧೨೧. ಆರಂಭ ಕಾಲದ ಗುರಾಣಿಗಳು



೬೪. ಬಾಣ ಹೊತ್ತವ




೬೫. ಬಾಣಗಳನ್ನು ನೀಡುತ್ತಿರುವವ



೬೬-೬೮. ಯುದ್ಧಕ್ಕೆ ಸರಂಜಾಮುಗಳ ಸಾಗಾಣಿಕೆ

6A



ಪ್ಲ.–೧೦೮. ಬಿಲ್ಲು ಬತ್ತಳಿಕೆ, ಬಾಣಗಳು






೩೪. "ಕುರುಪಂಪಿಂತಿಕ್ಕೆ"

೩೫. "ಕುರುಪಂಪಿಂತಿಕ್ಕೆ......"







೮೨-೯೫. ಕಠಾರಿಗಳು-ಬಾಕುಗಳು




೫೭–೬೩. ಯುದ್ಧ ವಾದ್ಯಗಳು



೬೯-೮೧. ಕರ್ನಾಟಕದಲ್ಲಿ ಪ್ರಚಲಿತವಿದ್ದ ಖಡ್ಗಗಳು



೧೨೨-೧೩೩. ಅಲಂಕೃತ ನಾಣ್ಯಗಳು



ರಾಜಲಾಂಛನಗಳಾದ ರಾಜಛತ್ರಿಗಳು



೨೦೪. 'ರಣಮುಖದುಳ್ಳೆ ಕಾಲನ್ ಅರಿಯರ್ಕ್ಕಂ ಅನಿವ್ವಗುಣನ್.....'



೧೩೪. ಬಂದೂಕು ಹಿಡಿದ ವೀರ



೧೩೫. ಬಂದೂಕನ್ನು ಹಿಡಿದ ಶಾಲಾಳು



೫೭. "ಶರಣಾಗತ ಪ್ರಸಂಗ"



೧೩೬. ಬಂದೀಗ್ರಹಣ




೧೩೭. ಹಬ್ಬಗಳ್ಳ ಬಂದೀಕೃತ್ಯ ಗುಡಿಯುಳ್ಳ ವೀರರು



೨೦೫. "ಕಣೆಪಂಜರದೊಳೆರಗಿ ಭೀಷ್ಮನಿಳ್ದಂತೆ ಬಿಳ್ದನ್"



೨೦೬. ಕೊಂತದ ಯುದ್ಧ



೧೫೪–೧೫೮. ಯುದ್ಧರಂಗಕ್ಕೆ ವೀರರನ್ನು ಕರೆದೊಯ್ಯುತ್ತಿದ್ದ ಪಲ್ಲಕ್ಕಿ- ಬೋವಿಗಳು



೮೧. "ಮೇಲಾಳು ಕುದುರೆಯಂತಿವಿದು..."




೮೫. ಕುದುರೆ ಕಾಳಗ



೧೭೦. ಕುದುರೆ ಕಾಳಗ



೨೦೭. ಕೋಟೆಯ ಅಟ್ಟಣೆಯ ಮೇಲೆ ನಿಂತು ಯುದ್ಧ ಮಾಡುತ್ತಿರುವುದು




184–194



೧೬೨. "ಪೆಣಮಯಂ ಮಾಡಿ....."




163.



164.



165.




೧೬೬. 'ನಿಜತುರಗದಳಂಗೂಡಿ ಸೇನಾಸಮೂಹಂ'



167.



169.



168.




೧೭೧. "ಪರಬಲಮನೆಯಿದು ಕಳಿದದೆ....."




೧೭೦. "ಭರದಿಂದಂ ಪರಿದೆಯ್ದು ಪಗೆಯಂ ಪರ್ದಿಂಗೆ ಬಿರ್ದಿಕ್ಕಿದಂ"



೧೬.೨. “ಬಿಸುಗೆಯ ಕಳನಾಗಿ ಆನೆಯೊಳಾಂತೀವೆದು.....!”



173.




೧೭೪. "ಸುರತರಮಪ್ಪ ಸಿಂಧುರ ಘಟಾವಳಿಗಳ್ಕದೆ....."




೧೭೫. 'ಕದನೈಕಶೂದ್ರಕಂ.........'



೧೭೬. ಕೇತಮಲ್ಲ- ಬಿಜ್ಜಳ



೧೭೭. ಗಜಕಾಳಗ




೧೭೮–೧೮೩. ವೀರರ ಮುಡಿಗಳು


17




೧೯೫. "ಕೋಟೆಯಂ ಮೂವ್ವಳಿಸಾಗಿ ಮುತ್ತಿ......"



೧೯೬-೧೯೮. ಕೋಟೆ ಕೋಲಾಹಲ



201




202



203


೨೦೧. ೨೦೨. ೨೦೩. "ಕೋಟೆಯ ಅಡ್ಡಂ ಪಿರಿದೆ ?"




೨೦೦. ಕೋಟೆಯ ಪಕ್ಷಿನೋಟ



ಕೃಪೆ : ಕರ್ನಾಟಕ ಸರ್ಕಾರದ ಪುರಾತತ್ತ್ವ ಇಲಾಖೆ



೯೯. ಕೋಟೆಯ ಸಂರಕ್ಷಣೆ




೨೦೮. "ಎಮಗೆ ತಮಗೆನುತ..."



೨೧೦. "ಸೇನಾಸಮೂಹಂ ಘನಘೋಷಂಗೊಂಡು...."



೨೧೯. "ವಾಮಶಕ್ತಿ ಪಂಡಿತ ದೇವರ ಬಂಧನ"




೨೦೯. "ಸುರಾಂಗನೆಯರುಂಯ್ದರ್....."


17A



೨೧೧. “ಬರಸಿಡಿಲೆರಗುವ ತೇಜಿದಿಂ.....”



೨೧೩. ತಂದೆಯನ್ನು ಕೊಂದ ಹುಲಿಯನ್ನು ಇರಿಯುತ್ತಿರುವ ಹರಿಯಕ್ಕ



೨೧೪. ಹರಿಯಕ್ಕನ ತಂದೆ ವೀರಗಲ್ಲು



216.




೨೧೮. "ಕಾರೆಮಳೆ ಕಱೆದಂತೆಯುಂ..."



೨೧೨. ......ಸಂದಜಿಕೆಯ ನಾಯಕರ ನಿಜಿದ


215.





ಚಿತ್ರ : ಎಸ್. ಎಸ್. ಬದ್ರಿ


೨೨೨. “ಸುಭಟಂಗಿಂದ್ರಲೋಕ ಸುಖಮಂ ತೋಱಿಲ್ಕೆ.....”




೨೨೦. "ಕರಮೆಸೆವ ಸುರವಿಮಾನದೊಳುಂತ್ದುರು...."



೨೨೧. "ಸುರಕನ್ನಿಕೆಯರೊಲಿದು ಪಾಡಿ....."




೨೧೭. "ಬಿಸಿನೆತ್ತರೊಳೋಕುಳಿಯಾಡಿ...."




೨೨೩-೨೨೯. ಪುಷ್ಪಕ ವಿಮಾನಗಳು



230.



ಕೃಪೆ : ಬಸವರಾಜವಾಲಿ



233.




೨೩.೨. "ಜಿನರೊಳು ಸಂದಂ....."



234.




೨೩೫. "ನಾನೊಂದು ಅಕ್ಷತೆಯನ್ನೂ ಹೆಚ್ಚಾಗಿ ಕೊಡುವುದಿಲ್ಲ...."



241.




240.



237.




೨೩೬. "ಕಟ್ಟಿದ ಸಿಂಘಮನ್ ಬಿಟ್ಟೊಡೆಮಗೇನ್ಪು....."



೨೪೩. ಸುರಲೋಕ ಪ್ರಾಪ್ತ

ಕೃಪೆ : ಎಸ್. ಎಸ್. ಶೆಟ್ಟರ್



೨೪೪. "........ಸುರಲೋಕದೊಳಗೆ ಕಲಿಗಳನಜಿಸುವ ತೆಜದಿಂ...."




246.



245.




247.




248.



೨೫೪. 'ರಣಭೂತುಗಳಗೌತಣವಾಕ್ಕಿ......'



249.



260



೨೫೯. "ಉತ್ತಮಸ್ವರ್ಗ ಕೈಲಾಸಪುರ ಪದ ಮಹೇಶ್ವರನ ಶ್ರೀಪಾದವಂ ಕಾಣಿಸಿ"




೨೫೧. "ಇಲ್ಲಿ ದೇವರಿಗಾಗಿ ಅಲ್ಲಿ ಹದಿಬದೆಗಾಗಿ....."



256.

ಕೃಪೆ : ಪಿ. ಎಸ್. ಚಂದ್ರಶೇಖರ್



250.

18



೨೭೦. "ಆಕರ್ಣಾಂತಂ ಬರಸೆಳದು"



255.



೨೫೭. "ಹೆಣ್ತನದ ಮಾನ ರಕ್ಷಣೆಗೆ ಕಾದಾಡಿ.."



೨೫೮. "ನಮ್ಮಂದಿನಾ ಕೆಟ್ಟು....."




267.



೨೬೮. "ತೊಟ್ಟಿಲು ತೂಗುವ ಕೈಯಲ್ಲಿ ಶಸ್ತ್ರ....."



268.



೨೬೮. "ಮಚ್ಚರಿಸುವರೆಲ್ಲರಂ ಸೆಜಗುವಾಳ್ದಪರ್...."





೨೫೮. ಈ ಕಲ್ಲ ಮೊಜಿವೊಕ್ಕರ ಕೊಲಲಾಗದು.....




೨೫೯. ಕಠಾರಿ ಕಾಳಗ


266 ಕೃಪೆ: ಬಸವರಾಜಪಾಲಿ





273





೨೭೧.   "ಮಲೆದಿರಾಂತ ಮಾರ್ಬಲವನಳ್ಕುಜಿತಾಗಿ...."   ೨೭೨



೨೭೭ "ಭೂಮಿ ಪೊಂಪುಟ್ಟಿಗೆ ಪಸುಧನಮಂ ನೀಡುತ್ತಂ.....ಸಾಯಲೆನ್ನುಕೊಣ್ಡಕೆ ನಡೆದಳ್"



ಕೃಪೆ : ಬಸವರಾಜವಾಲಿ

೨೭೮. "ದೇವರ ದೇವಂಗಟ್ಟೆಯಿಂ ಕೈಮುಗಿದುರಿವುರಿಯಂ ಪೊಕ್ಕು...."

274.




293.






280. ಕೃಪೆ: ಪಿ. ಎಸ್. ಚಂದ್ರಶೇಖರ್



282.



283.




281.




289.




287.



284.




285.




295.



286.






292.



294.



296.



235.



300



೨೯೭. ಸ್ತ್ರೀಯರನ್ನು ಸೆರೆಹಿಡಿದಿರುವುದೇ ?



೨೯೮. "ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು...."



299.

ಶುಭವಾಗಲಿ

ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ, ಹಲವಾರು ಮಹತ್ವದ ಕೃತಿಗಳಲ್ಲಿ ಒಂದು **ಶಾಸನಶಾಸ್ತ್ರ** ಕ್ಷೇತ್ರದ ಅಪರೂಪದ ಪುಸ್ತಕ.

ವೀರಗಲ್ಲುಗಳ ಐತಿಹಾಸಿಕ ಮಹತ್ವ ಅರಿಯಬೇಕಾದರೆ, ಅಧಿಕೃತ ಮಾಹಿತಿ ನೀಡುವ ಈ ಗ್ರಂಥವನ್ನು ಕ್ಷೇತ್ರತಜ್ಞರು ಅಧ್ಯಯನ ಮಾಡಲೇಬೇಕಾದ ಪರಾಮರ್ಶನ ಸ್ಥಾನಗಳಿಸಿಕೊಂಡಿದೆ.

ಎಂಟು ಅಧ್ಯಾಯಗಳಲ್ಲಿ ವೀರಗಲ್ಲುಗಳನ್ನು ವಿವರವಾಗಿ ವಿಶ್ಲೇಷಿಸುವ ಈ ಕೃತಿಯನ್ನು, ಇತ್ತೀಚಿನ ವರ್ಷಗಳಲ್ಲಿ, ಇದೊಂದು ಮಾದರಿ ಪಿಎಚ್.ಡಿ., ಪ್ರಬಂಧ ಎಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮಾಹಿತಿ ಕಣಜವೆ ಇಲ್ಲಿ ಸಂಪತ್ತುಗೊಂಡಿದೆ.

ಕರ್ನಾಟಕದ ಹಿರಿಯ ವಿದ್ವಾಂಸರಾದ ಈ ಕೃತಿಕಾರರಿಗೆ ಆಂಧ್ರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ತನ್ನ ತೆಲಗು ತುಲನಾತ್ಮಕ ಸಾಹಿತ್ಯ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥನ ಸ್ಥಾನ ನೀಡಿ ಗೌರವಿಸಿದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು